# ಭಾರತದ ಸಂವಿಧಾನ

[1ನೇ ಮೇ, 2011 ರಂದು ಇದ್ದಂತೆ]

# THE CONSTITUTION OF INDIA

[As on 1st May, 2011]

ಭಾರತ ಸರ್ಕಾರ
ಕಾನೂನು ಮತ್ತು ನ್ಯಾಯ ಮಂತ್ರಾಲಯ
ವಿಧಾಯಿ ಇಲಾಖೆ

**GOVERNMENT OF INDIA**
**Ministry of Law and Justice**
**Legislative Department**

**2011**

## PREFACE

The Kannada version of the Constitution of India was first published in the year 1976 and thereafter a revised edition was published in the year 1985. The first diglot edition (English-Kannada) of the Constitution was published in the year 2001. In this revised diglot edition (English-Kannada), the text of the Constitution of India has been brought up-to-date by incorporating therein all the amendments up to and including the Constitution (Ninety-fifth Amendment) Act, 2009.

New Delhi

Date: 5th May, 2011

**V.K. BHASIN**

Secretary to the Government of India

## ಮುನ್ನುಡಿ

ಭಾರತದ ಸಂವಿಧಾನದ ಕನ್ನಡ ಆವೃತ್ತಿಯು 1976 ರಲ್ಲಿ ಪ್ರಥಮ ಬಾರಿಗೆ ಪ್ರಕಟಿತವಾಯಿತು. ತದನಂತರ 1985 ರಲ್ಲಿ ಅದರ ಪರಿಷ್ಕೃತ ಆವೃತ್ತಿಯನ್ನು ಹೊರತರಲಾಯಿತು. ಸಂವಿಧಾನದ ಪ್ರಥಮ ದ್ವಿಭಾಷಾ (Diglot) ಆವೃತ್ತಿಯು (ಇಂಗ್ಲಿಷ್ – ಕನ್ನಡ) 2001 ರಲ್ಲಿ ಪ್ರಕಟಿತವಾಯಿತು. ಈಗಿನ ಪರಿಷ್ಕೃತ ದ್ವಿಭಾಷಾ ಆವೃತ್ತಿಯನ್ನು, ಸಂವಿಧಾನದ (ತೊಂಬತ್ತೈದನೇ ತಿದ್ದುಪಡಿ) ಅಧಿನಿಯಮ, 2009 ಸೇರಿದಂತೆ ಇಲ್ಲಿಯವರೆಗೆ ಆಗಿರುವ ಎಲ್ಲಾ ತಿದ್ದುಪಡಿಗಳನ್ನು ಅಳವಡಿಸಿ ಪ್ರಕಟಿಸಲಾಗಿದೆ.

ನವದೆಹಲಿ

ದಿನಾಂಕ: 5ನೇ ಮೇ, 2011

**ವಿ.ಕೆ. ಭಸೀನ್**

ಭಾರತ ಸರ್ಕಾರದ ಕಾರ್ಯದರ್ಶಿ

# ಭಾರತದ ಸಂವಿಧಾನ

## ವಿಷಯ ಸೂಚಿ


ಪುಟಸಂಖ್ಯೆ

ಪ್ರಸ್ತಾವನೆ ........................................................................................ 1

ಭಾಗ – I

ಒಕ್ಕೂಟ ಮತ್ತು ಅದರ ರಾಜ್ಯ ಕ್ಷೇತ್ರ

ಅನುಚ್ಛೇದಗಳು

1. ಒಕ್ಕೂಟದ ಹೆಸರು ಮತ್ತು ರಾಜ್ಯಕ್ಷೇತ್ರ ........................................................ 2
2. ನೂತನ ರಾಜ್ಯಗಳ ಸೇರ್ಪಡೆ ಅಥವಾ ಸ್ಥಾಪನೆ ............................................ 2

2ಎ. *[ನಿರಸಿತ]*........................................................................................ 2

3. ನೂತನ ರಾಜ್ಯಗಳ ರಚನೆ ಮತ್ತು ಈಗಿರುವ ರಾಜ್ಯಗಳ ಪ್ರದೇಶಗಳ, ಸರಹದ್ದುಗಳ ಅಥವಾ ಹೆಸರುಗಳ ಬದಲಾವಣೆ .................................................................. 2–3
4. ಎರಡನೆಯ ಮತ್ತು ಮೂರನೆಯ ಅನುಚ್ಛೇದಗಳ ಮೇರೆಗೆ ಮಾಡಲಾದ ಕಾನೂನುಗಳು, ಮೊದಲನೆಯ ಮತ್ತು ನಾಲ್ಕನೆಯ ಅನುಸೂಚಿಗಳ ತಿದ್ದುಪಡಿಯ ಬಗ್ಗೆ ಮತ್ತು ಪೂರಕ, ಪ್ರಾಸಂಗಿಕ ಮತ್ತು ಆನುಷಂಗಿಕ ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸುವುದು ................................................................ 3

ಭಾಗ – II

ನಾಗರಿಕತ್ವ

5. ಸಂವಿಧಾನದ ಪ್ರಾರಂಭದಲ್ಲಿ ನಾಗರಿಕತ್ವ ........................................................ 4
6. ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದಿರುವ ಕೆಲವು ವ್ಯಕ್ತಿಗಳ ನಾಗರಿಕತ್ವದ ಹಕ್ಕುಗಳು.................................................................................... 4
7. ಪಾಕಿಸ್ತಾನಕ್ಕೆ ವಲಸೆ ಹೋದ ಕೆಲವು ವ್ಯಕ್ತಿಗಳ ನಾಗರಿಕತ್ವದ ಹಕ್ಕುಗಳು .............. 4
8. ಭಾರತದ ಹೊರಗೆ ವಾಸಿಸುತ್ತಿರುವ ಭಾರತೀಯ ಮೂಲದ ಕೆಲವು ವ್ಯಕ್ತಿಗಳ ನಾಗರಿಕತ್ವದ ಹಕ್ಕುಗಳು .................................................................... 5
9. ಸ್ವಯಿಚ್ಛೆಯಿಂದ ವಿದೇಶೀ ರಾಜ್ಯದ ನಾಗರಿಕತ್ವವನ್ನು ಪಡೆದವರು ಭಾರತದ ನಾಗರಿಕರಲ್ಲ.................................................................................... 5
10. ನಾಗರಿಕತ್ವದ ಹಕ್ಕುಗಳ ಮುಂದುವರಿಕೆ.......................................................... 5
11. ಸಂಸತ್ತು ನಾಗರಿಕತ್ವದ ಹಕ್ಕನ್ನು ಕಾನೂನಿನ ಮೂಲಕ ವಿನಿಯಮಿಸುವುದು ........ 5

ಭಾಗ– III

ಮೂಲಭೂತ ಹಕ್ಕುಗಳು

*ಸಾಮಾನ್ಯ*

12. ಪರಿಭಾಷೆ ........................................................................................ 6
13. ಮೂಲಭೂತ ಹಕ್ಕುಗಳಿಗೆ ಅಸಂಗತವಾದ ಅಥವಾ ಅವುಗಳನ್ನು ಅಲ್ಪೀಕರಿಸುವಂಥ ಕಾನೂನುಗಳು ................................................................................ 6

### ಸಮಾನತೆಯ ಹಕ್ಕು


14. ಕಾನೂನಿನ ಮುಂದೆ ಸಮಾನತೆ ........................................ 6

15. ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರಗಳ ಮೇಲೆ ತಾರತಮ್ಯದ ನಿಷೇಧ ........................................ 6–7

16. ಸಾರ್ವಜನಿಕ ನಿಯೋಜನೆಯ ವಿಷಯದಲ್ಲಿ ಸಮಾನಾವಕಾಶ ........................................ 7–8

17. ಅಸ್ಪೃಶ್ಯತೆಯ ನಿರ್ಮೂಲನ ........................................ 8

18. ಬಿರುದುಗಳ ರದ್ದಿಯಾತಿ ........................................ 8


### ಸ್ವಾತಂತ್ರ್ಯದ ಹಕ್ಕು


19. ವಾಕ್ ಸ್ವಾತಂತ್ರ್ಯ, ಮುಂತಾದವುಗಳ ಬಗ್ಗೆ ಕೆಲವು ಹಕ್ಕುಗಳ ಸಂರಕ್ಷಣೆ ............ 9–10

20. ಅಪರಾಧಗಳ ಬಗ್ಗೆ ಅಪರಾಧಿಯೆಂದು ನಿರ್ಣಯಿಸುವ ಸಂಬಂಧದಲ್ಲಿ ಸಂರಕ್ಷಣೆ. 10

21. ಜೀವದ ಮತ್ತು ವ್ಯಕ್ತಿಸ್ವಾತಂತ್ರ್ಯದ ಸಂರಕ್ಷಣೆ ........................................ 10

21ಎ. ಶಿಕ್ಷಣದ ಹಕ್ಕು ........................................ 10

22. ಕೆಲವು ಸಂದರ್ಭಗಳಲ್ಲಿ ದಸ್ತಗಿರಿಯಿಂದ ಮತ್ತು ಸ್ಥಾನಬದ್ಧತೆಯಿಂದ ಸಂರಕ್ಷಣೆ..... 10–12


### ಶೋಷಣೆಯ ವಿರುದ್ಧ ಹಕ್ಕು


23. ಮಾನವ ದುರ್ವ್ಯವಹಾರ ಮತ್ತು ಬಲಾತ್ಕಾರದ ದುಡಿಮೆಯ ನಿಷೇಧ ............ 13

24. ಕಾರ್ಖಾನೆಗಳು, ಮುಂತಾದವುಗಳಲ್ಲಿ ಮಕ್ಕಳ ನಿಯೋಜನೆಗೆ ನಿಷೇಧ ............ 13


### ಧರ್ಮ ಸ್ವಾತಂತ್ರ್ಯದ ಹಕ್ಕು


25. ಅಂತಃಸಾಕ್ಷಿ ಸ್ವಾತಂತ್ರ್ಯ ಮತ್ತು ಧರ್ಮದ ಅಬಾಧಿತ ಅವಲಂಬನೆ, ಆಚರಣೆ ಮತ್ತು ಪ್ರಚಾರ ........................................ 13

26. ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸಲು ಸ್ವಾತಂತ್ರ್ಯ ........................................ 13

27. ಯಾವುದೇ ನಿರ್ದಿಷ್ಟ ಧರ್ಮದ ಉನ್ನತಿಗಾಗಿ ತೆರಿಗೆಗಳ ಸಂದಾಯದ ಬಗ್ಗೆ ಸ್ವಾತಂತ್ರ್ಯ ........................................ 14

28. ಕೆಲವು ಶೈಕ್ಷಣಿಕ ಸಂಸ್ಥೆಗಳಲ್ಲಿ ನಡೆಯುವ ಧಾರ್ಮಿಕ ಶಿಕ್ಷಣದಲ್ಲಿ ಅಥವಾ ಧಾರ್ಮಿಕ ಉಪಾಸನೆಯಲ್ಲಿ ಹಾಜರಾಗುವ ಸ್ವಾತಂತ್ರ್ಯ ........................ 14


### ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು


29. ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ ........................................ 14

30. ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅವುಗಳ ಆಡಳಿತ ನಡೆಯಿಸುವುದಕ್ಕೆ ಅಲ್ಪಸಂಖ್ಯಾತರ ಹಕ್ಕು ........................................ 14–15

31. *[ನಿರಸಿತ]* ........................................ 15


### ಕೆಲವು ಕಾನೂನುಗಳನ್ನು ಉಳಿಸುವುದು


31ಎ. ಎಸ್ಟೇಟು, ಮುಂತಾದವುಗಳ ಆರ್ಜನೆಗೆ ಉಪಬಂಧಿಸುವ ಕಾನೂನುಗಳನ್ನು ಉಳಿಸುವುದು ........................................ 15–16

31ಬಿ. ಕೆಲವು ಅಧಿನಿಯಮಗಳನ್ನು ಮತ್ತು ರೆಗ್ಯುಲೇಷನ್‌ಗಳನ್ನು ಮಾನ್ಯಮಾಡುವುದು..... 16

31ಸಿ. ಕೆಲವು ನಿರ್ದೇಶಕ ತತ್ತ್ವಗಳನ್ನು ಜಾರಿಗೆ ತರುವ ಕಾನೂನುಗಳನ್ನು ಉಳಿಸುವುದು. 17

31ಡಿ. *[ನಿರಸಿತ]*........ 17

ಸಂವಿಧಾನಾತ್ಮಕ ಪರಿಹಾರೋಪಾಯಗಳ ಹಕ್ಕು

32. ಈ ಭಾಗದಿಂದ ಪ್ರದತ್ತವಾಗಿರುವ ಹಕ್ಕುಗಳ ಜಾರಿಗಾಗಿ ಪರಿಹಾರೋಪಾಯಗಳು.. 17–18

32ಎ. *[ನಿರಸಿತ]* ........ 18

33. ಈ ಭಾಗದಿಂದ ಪ್ರದತ್ತವಾದ ಹಕ್ಕುಗಳನ್ನು ಸಶಸ್ತ್ರ ಬಲಗಳು, ಮುಂತಾದವುಗಳಿಗೆ ಅನ್ವಯಿಸುವಲ್ಲಿ ಅವುಗಳನ್ನು ಮಾರ್ಪಡಿಸಲು ಸಂಸತ್ತಿಗಿರುವ ಅಧಿಕಾರ ........ 18

34. ಯಾವುದೇ ಪ್ರದೇಶದಲ್ಲಿ ಲಷ್ಕರೀ ಕಾನೂನು ಜಾರಿಯಲ್ಲಿರುವಾಗ ಈ ಭಾಗದಿಂದ ಪ್ರದತ್ತವಾದ ಹಕ್ಕುಗಳ ಮೇಲೆ ನಿರ್ಬಂಧ ........ 18

35. ಈ ಭಾಗದ ಉಪಬಂಧಗಳನ್ನು ಜಾರಿಗೆ ತರುವುದಕ್ಕಾಗಿ ಕಾನೂನು ರಚನೆ ........ 19

ಭಾಗ– IV

ರಾಜ್ಯನೀತಿಯ ನಿರ್ದೇಶಕ ತತ್ತ್ವಗಳು

36. ಪರಿಭಾಷೆ ........ 20

37. ಈ ಭಾಗದಲ್ಲಿ ಅಡಕವಾಗಿರುವ ತತ್ತ್ವಗಳ ಅನ್ವಯ ........ 20

38. ಜನತೆಯ ಕಲ್ಯಾಣೋನ್ನತಿಗಾಗಿ ರಾಜ್ಯವು ಸಾಮಾಜಿಕ ವ್ಯವಸ್ಥೆಯನ್ನು ಸುನಿಶ್ಚಿತಗೊಳಿಸುವುದು ........ 20

39. ರಾಜ್ಯವು ಅನುಸರಿಸಬೇಕಾದ ಕೆಲವು ಕಾರ್ಯನೀತಿ ತತ್ತ್ವಗಳು ........ 20–21

39ಎ. ಸಮಾನ ನ್ಯಾಯ ಮತ್ತು ಉಚಿತ ಕಾನೂನು ನೆರವು ........ 21

40. ಗ್ರಾಮಪಂಚಾಯಿತಿಗಳ ಸಂಘಟನೆ ........ 21

41. ಕೆಲವು ಸಂದರ್ಭಗಳಲ್ಲಿ ಕೆಲಸ ಮಾಡುವ, ಶಿಕ್ಷಣ ಪಡೆಯುವ ಮತ್ತು ಸರ್ಕಾರದ ಸಹಾಯ ಪಡೆಯುವ ಹಕ್ಕು ........ 21

42. ಕೆಲಸ ಮಾಡಲು ನ್ಯಾಯಯುತ ಮತ್ತು ಮಾನವೋಚಿತ ಪರಿಸ್ಥಿತಿಗಳಿರುವಂತೆ ಮತ್ತು ಪ್ರಸೂತಿ ಪ್ರಯೋಜನ ದೊರೆಯುವಂತೆ ಉಪಬಂಧಿಸುವುದು ........ 21

43. ಕೆಲಸಗಾರರಿಗೆ ಜೀವನ ನಿರ್ವಹಣಾ ಮಜೂರಿ, ಇತ್ಯಾದಿ ........ 21

43ಎ. ಕೈಗಾರಿಕೆಗಳ ಆಡಳಿತದಲ್ಲಿ ಕೆಲಸಗಾರರು ಭಾಗವಹಿಸುವುದು ........ 21

44. ನಾಗರಿಕರಿಗೆ ಏಕರೂಪದ ಸಿವಿಲ್ ಸಂಹಿತೆ ........ 21

45. ಆರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳ ಶೈಶವಾವಸ್ಥೆಯ ಪಾಲನೆ ಮತ್ತು ಅವರಿಗೆ ಶಿಕ್ಷಣ ಒದಗಿಸುವುದು ........ 22

46. ಅನುಸೂಚಿತ ಜಾತಿಗಳ, ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳ ಸಂವರ್ಧನೆ ........ 22

47. ಪೌಷ್ಠಿಕತೆಯ ಮಟ್ಟವನ್ನು ಮತ್ತು ಜೀವನ ಮಟ್ಟವನ್ನು ಹೆಚ್ಚಿಸುವುದು ಹಾಗೂ ಸಾರ್ವಜನಿಕ ಆರೋಗ್ಯವನ್ನು ಸುಧಾರಿಸುವುದು ರಾಜ್ಯದ ಕರ್ತವ್ಯ ........ 22

48. ಕೃಷಿ ಮತ್ತು ಪಶುಸಂಗೋಪನೆಯ ಸಂಘಟನೆ ........ 22

48ಎ. ಪರಿಸರ ಸಂರಕ್ಷಣೆ ಮತ್ತು ಸುಧಾರಣೆ ಮತ್ತು ಅರಣ್ಯಗಳ ಹಾಗೂ ವನ್ಯಜೀವಿಗಳ ರಕ್ಷಣೆ ........ 22

49. ರಾಷ್ಟ್ರೀಯ ಮಹತ್ವವುಳ್ಳ ಸ್ಮಾರಕಗಳ, ಸ್ಥಳಗಳ ಮತ್ತು ವಸ್ತುಗಳ ಸಂರಕ್ಷಣೆ ......... 22

50. ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವುದು ......................... 22

51. ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯ ಸಂವರ್ಧನೆ ......................... 22

## ಭಾಗ – IVಎ

## ಮೂಲಭೂತ ಕರ್ತವ್ಯಗಳು

51ಎ. ಮೂಲಭೂತ ಕರ್ತವ್ಯಗಳು ......................... 23

## ಭಾಗ – V

## ಒಕ್ಕೂಟ

### ಅಧ್ಯಾಯ I – ಕಾರ್ಯಾಂಗ

### ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ

52. ಭಾರತದ ರಾಷ್ಟ್ರಪತಿ ......................... 24

53. ಒಕ್ಕೂಟದ ಕಾರ್ಯಾಂಗ ಅಧಿಕಾರ ......................... 24

54. ರಾಷ್ಟ್ರಪತಿಯ ಚುನಾವಣೆ ......................... 24

55. ರಾಷ್ಟ್ರಪತಿಯ ಚುನಾವಣೆಯ ರೀತಿ ......................... 24–25

56. ರಾಷ್ಟ್ರಪತಿಯ ಪದಾವಧಿ ......................... 25

57. ಮರುಚುನಾವಣೆಗೆ ಅರ್ಹತೆ ......................... 25

58. ರಾಷ್ಟ್ರಪತಿಯಾಗಿ ಚುನಾಯಿತನಾಗಲು ಅರ್ಹತೆಗಳು ......................... 25–26

59. ರಾಷ್ಟ್ರಪತಿಯ ಪದದ ಷರತ್ತುಗಳು ......................... 26

60. ರಾಷ್ಟ್ರಪತಿಯಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ ......................... 26

61. ರಾಷ್ಟ್ರಪತಿಯ ಮಹಾಭಿಯೋಗದ ಬಗ್ಗೆ ಕಾರ್ಯವಿಧಾನ ......................... 26–27

62. ರಾಷ್ಟ್ರಪತಿಯ ಪದವು ಖಾಲಿಯಾದಲ್ಲಿ ಅದನ್ನು ಭರ್ತಿ ಮಾಡಲು ಚುನಾವಣೆ ನಡೆಸುವ ಕಾಲ ಮತ್ತು ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾಯಿತನಾದ ವ್ಯಕ್ತಿಯ ಪದಾವಧಿ ......................... 27

63. ಭಾರತದ ಉಪರಾಷ್ಟ್ರಪತಿ ......................... 27

64. ಉಪರಾಷ್ಟ್ರಪತಿಯು ರಾಜ್ಯಸಭೆಯ ಪದನಿಮಿತ್ತ ಸಭಾಪತಿಯಾಗಿರತಕ್ಕದ್ದು.......... 27

65. ರಾಷ್ಟ್ರಪತಿಯ ಪದವು ಆಕಸ್ಮಿಕವಾಗಿ ಖಾಲಿಯಾದಲ್ಲಿ ಅಥವಾ ರಾಷ್ಟ್ರಪತಿಯ ಗೈರುಹಾಜರಿಯಲ್ಲಿ ಉಪರಾಷ್ಟ್ರಪತಿಯು ರಾಷ್ಟ್ರಪತಿಯಾಗಿ ಕಾರ್ಯ ನಿರ್ವಹಿಸುವುದು ಅಥವಾ ಅವನ ಪ್ರಕಾರ್ಯಗಳನ್ನು ನಿರ್ವಹಿಸುವುದು ............ 27

66. ಉಪರಾಷ್ಟ್ರಪತಿಯ ಚುನಾವಣೆ ......................... 28

67. ಉಪರಾಷ್ಟ್ರಪತಿಯ ಪದಾವಧಿ ......................... 28

68. ಉಪರಾಷ್ಟ್ರಪತಿಯ ಪದವು ಖಾಲಿಯಾದಲ್ಲಿ ಅದನ್ನು ಭರ್ತಿ ಮಾಡಲು ಚುನಾವಣೆ ನಡೆಸುವ ಕಾಲ ಮತ್ತು ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿ ಮಾಡಲು ಚುನಾಯಿತನಾದ ವ್ಯಕ್ತಿಯ ಪದಾವಧಿ......................... 28–29

69. ಉಪರಾಷ್ಟ್ರಪತಿಯಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾವಚನ ..................... 29

70. ಇತರ ಆಕಸ್ಮಿಕ ಸಂದರ್ಭಗಳಲ್ಲಿ ರಾಷ್ಟ್ರಪತಿಯ ಪ್ರಕಾರ್ಯಗಳ ನಿರ್ವಹಣೆ ......... 29

71. ರಾಷ್ಟ್ರಪತಿಯ ಅಥವಾ ಉಪರಾಷ್ಟ್ರಪತಿಯ ಚುನಾವಣೆಗೆ ಸಂಬಂಧಿಸಿದ ಅಥವಾ ಸೇರಿದ ವಿಷಯಗಳು ..................... 29

72. ಕೆಲವು ಪ್ರಕರಣಗಳಲ್ಲಿ ಕ್ಷಮಾದಾನ, ಮುಂತಾದವುಗಳನ್ನು ಮಾಡಲು, ಶಿಕ್ಷೆಯನ್ನು ಅಮಾನತ್ತಿನಲ್ಲಿಡಲು, ಮಾಫಿ ಮಾಡಲು ಅಥವಾ ಪರಿವರ್ತನೆ ಮಾಡಲು ರಾಷ್ಟ್ರಪತಿಯ ಅಧಿಕಾರ ..................... 29–30

73. ಒಕ್ಕೂಟದ ಕಾರ್ಯಾಂಗ ಅಧಿಕಾರ ವ್ಯಾಪ್ತಿ ..................... 30

### ಮಂತ್ರಿಮಂಡಲ

74. ರಾಷ್ಟ್ರಪತಿಗೆ ನೆರವು ಮತ್ತು ಸಲಹೆ ನೀಡಲು ಮಂತ್ರಿಮಂಡಲ ..................... 30

75. ಮಂತ್ರಿಗಳ ಬಗ್ಗೆ ಇತರ ಉಪಬಂಧಗಳು ..................... 31

### ಭಾರತದ ಅಟಾರ್ನಿ ಜನರಲ್

76. ಭಾರತದ ಅಟಾರ್ನಿ ಜನರಲ್ ..................... 31

### ಸರ್ಕಾರಿ ವ್ಯವಹಾರ ನಿರ್ವಹಣೆ

77. ಭಾರತ ಸರ್ಕಾರದ ವ್ಯವಹಾರ ನಿರ್ವಹಣೆ ..................... 32

78. ರಾಷ್ಟ್ರಪತಿಗೆ ಮಾಹಿತಿ, ಇತ್ಯಾದಿಗಳನ್ನು ಒದಗಿಸುವ ವಿಚಾರದಲ್ಲಿ ಪ್ರಧಾನಮಂತ್ರಿಯ ಕರ್ತವ್ಯಗಳು ..................... 32

### ಅಧ್ಯಾಯ II – ಸಂಸತ್ತು

### ಸಾಮಾನ್ಯ

79. ಸಂಸತ್ತಿನ ರಚನೆ ..................... 32

80. ರಾಜ್ಯಸಭೆಯ ರಚನೆ ..................... 32–33

81. ಲೋಕಸಭೆಯ ರಚನೆ ..................... 33–34

82. ಪ್ರತಿಯೊಂದು ಜನಗಣತಿಯ ತರುವಾಯ ಮರುಹೊಂದಾಣಿಕೆ ..................... 34

83. ಸಂಸತ್ತಿನ ಸದನಗಳ ಅವಧಿ ..................... 35

84. ಸಂಸತ್ತಿನ ಸದಸ್ಯತ್ವಕ್ಕೆ ಅರ್ಹತೆ ..................... 35

85. ಸಂಸತ್ತಿನ ಅಧಿವೇಶನಗಳು, ಅಧಿವೇಶನದ ಮುಕ್ತಾಯ ಮತ್ತು ವಿಸರ್ಜನೆ .......... 35

86. ಸದನಗಳನ್ನು ಸಂಬೋಧಿಸಿ ಭಾಷಣ ಮಾಡಲು ಮತ್ತು ಸದನಗಳಿಗೆ ಸಂದೇಶಗಳನ್ನು ಕಳುಹಿಸಲು ರಾಷ್ಟ್ರಪತಿಗಿರುವ ಹಕ್ಕು ..................... 35–36

87. ರಾಷ್ಟ್ರಪತಿಯಿಂದ ವಿಶೇಷ ಭಾಷಣ ..................... 36

88. ಸದನಗಳ ಸಂಬಂಧದಲ್ಲಿ ಮಂತ್ರಿಗಳ ಮತ್ತು ಅಟಾರ್ನಿ ಜನರಲ್‌ನ ಹಕ್ಕುಗಳು .... 36

### ಸಂಸ್ಪತಿನ ಅಧಿಕಾರಿಗಳು

89. ರಾಜ್ಯಸಭೆಯ ಸಭಾಪತಿ ಮತ್ತು ಉಪಸಭಾಪತಿ ..................... 36

90. ಉಪಸಭಾಪತಿಯು ಪದವನ್ನು ಖಾಲಿ ಮಾಡುವುದು ಮತ್ತು ಪದಕ್ಕೆ ರಾಜೀನಾಮೆ ನೀಡುವುದು ಮತ್ತು ಪದದಿಂದ ಅವನನ್ನು ತೆಗೆದುಹಾಕುವುದು .......................... 36

91. ಸಭಾಪತಿಯ ಪದದ ಕರ್ತವ್ಯಗಳನ್ನು ನೆರವೇರಿಸಲು ಅಥವಾ ಸಭಾಪತಿಯಾಗಿ ಕಾರ್ಯನಿರ್ವಹಿಸಲು ಉಪಸಭಾಪತಿಯ ಅಥವಾ ಇತರ ವ್ಯಕ್ತಿಯ ಅಧಿಕಾರ ..... 36

92. ಸಭಾಪತಿಯನ್ನು ಅಥವಾ ಉಪಸಭಾಪತಿಯನ್ನು ಪದದಿಂದ ತೆಗೆದುಹಾಕುವ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಅವನು ಅಧ್ಯಕ್ಷತೆ ವಹಿಸತಕ್ಕದ್ದಲ್ಲ... 37

93. ಲೋಕಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ .......................................... 37

94. ಲೋಕಸಭೆಯ ಅಧ್ಯಕ್ಷನು ಮತ್ತು ಉಪಾಧ್ಯಕ್ಷನು ಪದಗಳನ್ನು ಖಾಲಿ ಮಾಡುವುದು, ಅವುಗಳಿಗೆ ರಾಜೀನಾಮೆ ನೀಡುವುದು ಮತ್ತು ಆ ಪದಗಳಿಂದ ಅವರನ್ನು ತೆಗೆದುಹಾಕುವುದು .......................................... 37

95. ಅಧ್ಯಕ್ಷ ಪದದ ಕರ್ತವ್ಯಗಳನ್ನು ನೆರವೇರಿಸಲು ಅಥವಾ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಲು ಉಪಾಧ್ಯಕ್ಷನ ಅಥವಾ ಇತರ ವ್ಯಕ್ತಿಯ ಅಧಿಕಾರ............. 37

96. ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು ಪದದಿಂದ ತೆಗೆದುಹಾಕುವ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಅವನು ಅಧ್ಯಕ್ಷತೆ ವಹಿಸತಕ್ಕದ್ದಲ್ಲ ................. 37–38

97. ಸಭಾಪತಿಯ ಮತ್ತು ಉಪಸಭಾಪತಿಯ ಹಾಗೂ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಸಂಬಳಗಳು ಮತ್ತು ಭತ್ಯಗಳು .......................................... 38

98. ಸಂಸತ್ತಿನ ಸಚಿವಾಲಯ .......................................... 38


### ಕಾರ್ಯಕಲಾಪ ನಿರ್ವಹಣೆ


99. ಸದಸ್ಯರಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ .......................................... 38

100. ಸದನಗಳಲ್ಲಿ ಮತದಾನ, ಖಾಲಿಸ್ಥಾನಗಳು ಏನೇ ಇದ್ದಾಗ್ಯೂ ಕಾರ್ಯನಿರ್ವಹಿಸಲು ಸದನಗಳ ಅಧಿಕಾರ ಮತ್ತು ಕೋರಂ .......................................... 38–39


### ಸದಸ್ಯರ ಅನರ್ಹತೆಗಳು


101. ಸ್ಥಾನಗಳನ್ನು ಖಾಲಿ ಮಾಡುವುದು .......................................... 39

102. ಸದಸ್ಯತ್ವಕ್ಕೆ ಅನರ್ಹತೆಗಳು .......................................... 40

103. ಸದಸ್ಯರ ಅನರ್ಹತೆಗಳನ್ನು ಕುರಿತ ಪ್ರಶ್ನೆಗಳ ತೀರ್ಮಾನ .......................................... 40

104. 99ನೆಯ ಅನುಚ್ಛೇದದ ಮೇರೆಗೆ ಪ್ರಮಾಣ ಅಥವಾ ಪ್ರತಿಜ್ಞೆ ಮಾಡುವುದಕ್ಕೆ ಮುಂಚೆ ಅಥವಾ ಅರ್ಹನಾಗಿಲ್ಲದಿರುವಾಗ ಅಥವಾ ಅನರ್ಹತೆಗೊಳಿಸಿರುವಾಗ ಸದಸ್ಯನಾಗಿ ಕುಳಿತರೆ ಮತ್ತು ಮತ ಕೊಟ್ಟರೆ ದಂಡ .......................................... 40


### ಸಂಸತ್ತಿನ ಮತ್ತು ಅದರ ಸದಸ್ಯರ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳು


105. ಸಂಸತ್ತಿನ ಸದನಗಳ ಮತ್ತು ಅವುಗಳ ಸದಸ್ಯರ ಮತ್ತು ಸಮಿತಿಗಳ ಅಧಿಕಾರಗಳು, ವಿಶೇಷಾಧಿಕಾರಗಳು, ಇತ್ಯಾದಿ .......................................... 40–41

106. ಸದಸ್ಯರ ಸಂಬಳಗಳು ಮತ್ತು ಭತ್ಯಗಳು .......................................... 41


### ವಿಧಾಯೀ ಪ್ರಕ್ರಿಯೆ


107. ವಿಧೇಯಕಗಳ ಮಂಡನೆಗೆ ಮತ್ತು ಅಂಗೀಕಾರಕ್ಕೆ ಸಂಬಂಧಿಸಿದ ಉಪಬಂಧಗಳು.. 41

**108.** ಕೆಲವು ಸಂದರ್ಭಗಳಲ್ಲಿ ಉಭಯ ಸದನಗಳ ಜಂಟಿ ಉಪವೇಶನ ............ 41–42

**109.** ಧನ ವಿಧೇಯಕಗಳಿಗೆ ಸಂಬಂಧಿಸಿದಂತೆ ವಿಶೇಷ ಪ್ರಕ್ರಿಯೆ............ 42–43

**110.** "ಧನ ವಿಧೇಯಕಗಳು" ಎಂಬುದರ ಪರಿಭಾಷೆ ............ 43

**111.** ವಿಧೇಯಕಗಳಿಗೆ ಅನುಮತಿ ............ 44

**ಹಣಕಾಸು ವಿಷಯಗಳ ಬಗ್ಗೆ ಪ್ರಕ್ರಿಯೆ**

**112.** ವಾರ್ಷಿಕ ಹಣಕಾಸು ವಿವರ ಪತ್ರ ............ 44–45

**113.** ಅಂದಾಜುಗಳಿಗೆ ಸಂಬಂಧಪಟ್ಟಂತೆ ಸಂಸತ್ತಿನಲ್ಲಿ ಪ್ರಕ್ರಿಯೆ ............ 45

**114.** ಧನ ವಿನಿಯೋಗ ವಿಧೇಯಕಗಳು ............ 45

**115.** ಪೂರಕ, ಹೆಚ್ಚುವರಿ ಅಥವಾ ಅಧಿಕ ಅನುದಾನಗಳು ............ 45–46

**116.** ಲೇಖಾನುದಾನಗಳು, ಪತ್ತಿನ ಅನುದಾನಗಳು ಮತ್ತು ಅಸಾಧಾರಣ ಅನುದಾನಗಳು 46

**117.** ಹಣಕಾಸು ವಿಧೇಯಕಗಳ ಬಗ್ಗೆ ವಿಶೇಷ ಉಪಬಂಧಗಳು ............ 46

**ಸಾಮಾನ್ಯತಃ ಪ್ರಕ್ರಿಯೆ**

**118.** ಪ್ರಕ್ರಿಯಾ ನಿಯಮಗಳು ............ 47

**119.** ಸಂಸತ್ತಿನಲ್ಲಿ ಹಣಕಾಸು ಕಾರ್ಯಕಲಾಪಗಳಿಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ಕಾನೂನಿನ ಮೂಲಕ ವಿನಿಯಮಗೊಳಿಸುವುದು ............ 47

**120.** ಸಂಸತ್ತಿನಲ್ಲಿ ಬಳಸಬೇಕಾದ ಭಾಷೆ ............ 47

**121.** ಸಂಸತ್ತಿನಲ್ಲಿ ಚರ್ಚೆಯ ಮೇಲೆ ನಿರ್ಬಂಧ ............ 47

**122.** ನ್ಯಾಯಾಲಯಗಳು ಸಂಸತ್ತಿನ ವ್ಯವಹರಣೆಗಳ ಬಗ್ಗೆ ವಿಚಾರಣೆ ನಡೆಸದಿರುವುದು.. 48

**ಅಧ್ಯಾಯ– III ರಾಷ್ಟ್ರಪತಿಯ ವಿಧಾಯೀ ಅಧಿಕಾರಗಳು**

**123.** ಸಂಸತ್ತಿನ ವಿರಾಮ ಕಾಲದಲ್ಲಿ ಅಧ್ಯಾದೇಶಗಳನ್ನು ಹೊರಡಿಸಲು ರಾಷ್ಟ್ರಪತಿಯ ಅಧಿಕಾರ ............ 48

**ಅಧ್ಯಾಯ – IV ಒಕ್ಕೂಟ ನ್ಯಾಯಾಂಗ**

**124.** ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆ ಮತ್ತು ರಚನೆ ............ 48–50

**125.** ನ್ಯಾಯಾಧೀಶರ ಸಂಬಳಗಳು, ಇತ್ಯಾದಿ ............ 50

**126.** ಕಾರ್ಯಾರ್ಥ ಮುಖ್ಯನ್ಯಾಯಮೂರ್ತಿಯ ನೇಮಕ ............ 50

**127.** ಅಡ್‌ಹಾಕ್ ನ್ಯಾಯಾಧೀಶರ ನೇಮಕ............ 50

**128.** ಸರ್ವೋಚ್ಚ ನ್ಯಾಯಾಲಯದ ಉಪವೇಶನಗಳಲ್ಲಿ ನಿವೃತ್ತ ನ್ಯಾಯಾಧೀಶರ ಹಾಜರಾತಿ ............ 51

**129.** ಸರ್ವೋಚ್ಚ ನ್ಯಾಯಾಲಯವು ಅಭಿಲೇಖ ನ್ಯಾಯಾಲಯವಾಗಿರತಕ್ಕದ್ದು ............ 51

**130.** ಸರ್ವೋಚ್ಚ ನ್ಯಾಯಾಲಯದ ಕಾರ್ಯಸ್ಥಾನ ............ 51

**131.** ಸರ್ವೋಚ್ಚ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿ ............ 51

**131ಎ.** *(ನಿರಸಿತ)* ............ 51

| | | |
|---|---|---|
| 132. | ಕೆಲವು ಮೊಕದ್ದಮೆಗಳಲ್ಲಿ ಉಚ್ಚ ನ್ಯಾಯಾಲಯಗಳಿಂದ ಬರುವ ಅಪೀಲುಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಅಪೀಲು ಅಧಿಕಾರ ವ್ಯಾಪ್ತಿ.......... | 52 |
| 133. | ಸಿವಿಲ್ ವಿಷಯಗಳ ಸಂಬಂಧದಲ್ಲಿ ಉಚ್ಚನ್ಯಾಯಾಲಯಗಳಿಂದ ಬರುವ ಅಪೀಲುಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಅಪೀಲು ಅಧಿಕಾರ ವ್ಯಾಪ್ತಿ.......... | 52 |
| 134. | ಕ್ರಿಮಿನಲ್ ವಿಷಯದ ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯದ ಅಪೀಲು ಅಧಿಕಾರ ವ್ಯಾಪ್ತಿ .......... | 53 |
| 134ಎ. | ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಪ್ರಮಾಣಪತ್ರ .......... | 53 |
| 135. | ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಫೆಡರಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು ಸರ್ವೋಚ್ಚ ನ್ಯಾಯಾಲಯವು ಚಲಾಯಿಸುವುದು .......... | 54 |
| 136. | ಅಪೀಲು ಸಲ್ಲಿಸಲು ಸರ್ವೋಚ್ಚ ನ್ಯಾಯಾಲಯದಿಂದ ವಿಶೇಷ ಅನುಮತಿ .......... | 54 |
| 137. | ಸರ್ವೋಚ್ಚ ನ್ಯಾಯಾಲಯವು ತೀರ್ಪುಗಳನ್ನು ಅಥವಾ ಆದೇಶಗಳನ್ನು ಪುನರವಲೋಕನ ಮಾಡುವುದು .......... | 54 |
| 138. | ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ವಿಸ್ತರಣೆ .......... | 54 |
| 139. | ಸರ್ವೋಚ್ಚ ನ್ಯಾಯಾಲಯಕ್ಕೆ ಕೆಲವು ರಿಟ್‌ಗಳನ್ನು ಹೊರಡಿಸುವ ಅಧಿಕಾರಗಳನ್ನು ನೀಡುವುದು .......... | 54 |
| 139ಎ. | ಕೆಲವು ಮೊಕದ್ದಮೆಗಳ ವರ್ಗಾವಣೆ .......... | 54–55 |
| 140. | ಸರ್ವೋಚ್ಚ ನ್ಯಾಯಾಲಯದ ಪೂರಕ ಅಧಿಕಾರಗಳು .......... | 55 |
| 141. | ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ಕಾನೂನಿಗೆ ಎಲ್ಲ ನ್ಯಾಯಾಲಯಗಳು ಬದ್ಧವಾಗಿರುವುದು .......... | 55 |
| 142. | ಸರ್ವೋಚ್ಚ ನ್ಯಾಯಾಲಯದ ಡಿಕ್ರಿಗಳ ಮತ್ತು ಆದೇಶಗಳ ಜಾರಿ ಮತ್ತು ಬಹಿರಂಗಪಡಿಸುವಿಕೆ, ಇತ್ಯಾದಿಗಳ ಬಗ್ಗೆ ಆದೇಶಗಳು .......... | 55 |
| 143. | ಸರ್ವೋಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಲು ರಾಷ್ಟ್ರಪತಿಯ ಅಧಿಕಾರ... | 55 |
| 144. | ಸಿವಿಲ್ ಮತ್ತು ನ್ಯಾಯಿಕ ಪ್ರಾಧಿಕಾರಿಗಳು ಸರ್ವೋಚ್ಚ ನ್ಯಾಯಾಲಯಕ್ಕೆ ಸಹಾಯಕರಾಗಿ ಕೆಲಸ ಮಾಡುವುದು .......... | 56 |
| 144ಎ. | *(ನಿರಸಿತ)* .......... | 56 |
| 145. | ನ್ಯಾಯಾಲಯದ ನಿಯಮಗಳು, ಇತ್ಯಾದಿ .......... | 56–57 |
| 146. | ಸರ್ವೋಚ್ಚ ನ್ಯಾಯಾಲಯದ ಅಧಿಕಾರಿಗಳು ಮತ್ತು ನೌಕರರು ಹಾಗೂ ವೆಚ್ಚಗಳು.. | 57–58 |
| 147. | ಅರ್ಥ ವಿವರಣೆ .......... | 58 |


## ಅಧ್ಯಾಯ – V

## ಭಾರತದ ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕ


| | | |
|---|---|---|
| 148. | ಭಾರತದ ಲೆಕ್ಕ ನಿಯಂತ್ರಕ-ಹಾಗೂ- ಮಹಾ ಲೆಕ್ಕಪರಿಶೋಧಕ .......... | 58 |
| 149. | ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕನ ಕರ್ತವ್ಯಗಳು ಮತ್ತು ಅಧಿಕಾರಗಳು .......... | 59 |
| 150. | ಒಕ್ಕೂಟದ ಮತ್ತು ರಾಜ್ಯಗಳ ಲೆಕ್ಕಗಳ ನಮೂನೆ .......... | 59 |
| 151. | ಲೆಕ್ಕ ಪರಿಶೋಧನ ವರದಿಗಳು .......... | 59 |

## ಭಾಗ – VI

## ರಾಜ್ಯಗಳು

### ಅಧ್ಯಾಯ I – ಸಾಮಾನ್ಯ


152. ಪರಿಭಾಷೆ ........ 60


### ಅಧ್ಯಾಯ II – ಕಾರ್ಯಾಂಗ

#### ರಾಜ್ಯಪಾಲ


153. ರಾಜ್ಯಗಳ ರಾಜ್ಯಪಾಲರು ........ 60

154. ರಾಜ್ಯದ ಕಾರ್ಯಾಂಗ ಅಧಿಕಾರ ........ 60

155. ರಾಜ್ಯಪಾಲನ ನೇಮಕ ........ 60

156. ರಾಜ್ಯಪಾಲನ ಪದಾವಧಿ ........ 60

157. ರಾಜ್ಯಪಾಲನಾಗಿ ನೇಮಕಗೊಳ್ಳಲು ಅರ್ಹತೆಗಳು ........ 60

158. ರಾಜ್ಯಪಾಲನ ಪದದ ಷರತ್ತುಗಳು ........ 61

159. ರಾಜ್ಯಪಾಲನಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ ........ 61

160. ಕೆಲವು ಆಕಸ್ಮಿಕ ಸಂದರ್ಭಗಳಲ್ಲಿ ರಾಜ್ಯಪಾಲನ ಪ್ರಕಾರ್ಯಗಳ ನಿರ್ವಹಣೆ ........ 61

161. ಕೆಲವು ಪ್ರಕರಣಗಳಲ್ಲಿ ಕ್ಷಮಾದಾನ, ಮುಂತಾದವುಗಳನ್ನು ಮಾಡಲು, ಶಿಕ್ಷೆಯನ್ನು ಅಮಾನತ್ತಿನಲ್ಲಿಡಲು, ಮಾಫಿ ಮಾಡಲು ಅಥವಾ ಕಡಿಮೆ ಮಾಡಲು ರಾಜ್ಯಪಾಲನ ಅಧಿಕಾರ ........ 61

162. ರಾಜ್ಯದ ಕಾರ್ಯಾಂಗ ಅಧಿಕಾರದ ವ್ಯಾಪ್ತಿ ........ 61


#### ಮಂತ್ರಿಮಂಡಲ


163. ರಾಜ್ಯಪಾಲನಿಗೆ ನೆರವು ಮತ್ತು ಸಲಹೆ ನೀಡಲು ಮಂತ್ರಿಮಂಡಲ ........ 62

164. ಮಂತ್ರಿಗಳಿಗೆ ಸಂಬಂಧಿಸಿದ ಇತರ ಉಪಬಂಧಗಳು ........ 62–63


#### ರಾಜ್ಯದ ಅಡ್ವೊಕೇಟ್ ಜನರಲ್


165. ರಾಜ್ಯದ ಅಡ್ವೊಕೇಟ್ ಜನರಲ್ ........ 63


#### ಸರ್ಕಾರದ ವ್ಯವಹಾರ ನಿರ್ವಹಣೆ


166. ರಾಜ್ಯ ಸರ್ಕಾರದ ವ್ಯವಹಾರ ನಿರ್ವಹಣೆ ........ 63

167. ರಾಜ್ಯಪಾಲನಿಗೆ ಮಾಹಿತಿ, ಇತ್ಯಾದಿಗಳನ್ನು ಒದಗಿಸುವ ವಿಚಾರದಲ್ಲಿ ಮುಖ್ಯಮಂತ್ರಿಯ ಕರ್ತವ್ಯಗಳು ........ 63–64


### ಅಧ್ಯಾಯ III – ರಾಜ್ಯ ವಿಧಾನಮಂಡಲ

#### *ಸಾಮಾನ್ಯ*


168. ರಾಜ್ಯಗಳ ವಿಧಾನಮಂಡಲಗಳ ರಚನೆ ........ 64

169. ರಾಜ್ಯಗಳಲ್ಲಿ ವಿಧಾನಪರಿಷತ್ತುಗಳನ್ನು ರದ್ದುಗೊಳಿಸುವುದು ಅಥವಾ ಸೃಜಿಸುವುದು.. 64–65

170. ವಿಧಾನಸಭೆಗಳ ಸಂರಚನೆ ........ 65–66

**171.** ವಿಧಾನಪರಿಷತ್ತುಗಳ ಸಂರಚನೆ ............ 66–67

**172.** ರಾಜ್ಯವಿಧಾನ ಮಂಡಲಗಳ ಅವಧಿ ............ 67

**173.** ರಾಜ್ಯವಿಧಾನ ಮಂಡಲದ ಸದಸ್ಯತ್ವಕ್ಕೆ ಅರ್ಹತೆ ............ 67

**174.** ರಾಜ್ಯ ವಿಧಾನಮಂಡಲದ ಅಧಿವೇಶನಗಳು, ಅಧಿವೇಶನದ ಮುಕ್ತಾಯ ಮತ್ತು ವಿಸರ್ಜನೆ ............ 68

**175.** ಸದನವನ್ನು ಅಥವಾ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಲು ಮತ್ತು ಅವುಗಳಿಗೆ ಸಂದೇಶಗಳನ್ನು ಕಳುಹಿಸಲು ರಾಜ್ಯಪಾಲನಿಗೆ ಇರುವ ಹಕ್ಕು ............ 68

**176.** ರಾಜ್ಯಪಾಲನಿಂದ ವಿಶೇಷ ಭಾಷಣ ............ 68

**177.** ಸದನಗಳ ಸಂಬಂಧದಲ್ಲಿ ಮಂತ್ರಿಗಳ ಮತ್ತು ಅಡ್ವೋಕೇಟ್ ಜನರಲ್‌ನ ಹಕ್ಕುಗಳು.. 68

**ರಾಜ್ಯ ವಿಧಾನಮಂಡಲದ ಅಧಿಕಾರಿಗಳು**

**178.** ವಿಧಾನಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ............ 69

**179.** ಅಧ್ಯಕ್ಷನು ಮತ್ತು ಉಪಾಧ್ಯಕ್ಷನು ಪದಗಳನ್ನು ಖಾಲಿ ಮಾಡುವುದು, ಅವುಗಳಿಗೆ ರಾಜೀನಾಮೆ ನೀಡುವುದು ಮತ್ತು ಆ ಪದಗಳಿಂದ ಅವರನ್ನು ತೆಗೆದುಹಾಕುವುದು.. 69

**180.** ಅಧ್ಯಕ್ಷನಾಗಿ ಕಾರ್ಯನಿರ್ವಹಿಸಲು ಅಥವಾ ಅಧ್ಯಕ್ಷ ಪದದ ಕರ್ತವ್ಯಗಳನ್ನು ನೆರವೇರಿಸಲು ಉಪಾಧ್ಯಕ್ಷನ ಅಥವಾ ಇತರ ವ್ಯಕ್ತಿಯ ಅಧಿಕಾರ ............ 69

**181.** ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು ಪದದಿಂದ ತೆಗೆದುಹಾಕುವ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಅವನು ಅಧ್ಯಕ್ಷತೆ ವಹಿಸತಕ್ಕದ್ದಲ್ಲ ............ 69

**182.** ವಿಧಾನ ಪರಿಷತ್ತಿನ ಸಭಾಪತಿ ಮತ್ತು ಉಪಸಭಾಪತಿ ............ 70

**183.** ಸಭಾಪತಿಯು ಮತ್ತು ಉಪಸಭಾಪತಿಯು ಪದಗಳನ್ನು ಖಾಲಿಮಾಡುವುದು, ಪದಗಳಿಗೆ ರಾಜೀನಾಮೆ ನೀಡುವುದು ಮತ್ತು ಪದಗಳಿಂದ ಅವರನ್ನು ತೆಗೆದುಹಾಕುವುದು ............ 70

**184.** ಸಭಾಪತಿಯಾಗಿ ಕಾರ್ಯನಿರ್ವಹಿಸಲು ಅಥವಾ ಸಭಾಪತಿಯ ಪದದ ಕರ್ತವ್ಯಗಳನ್ನು ನೆರವೇರಿಸಲು ಉಪಸಭಾಪತಿಯ ಅಥವಾ ಇತರ ವ್ಯಕ್ತಿಯ ಅಧಿಕಾರ ............ 70

**185.** ಸಭಾಪತಿಯನ್ನು ಅಥವಾ ಉಪಸಭಾಪತಿಯನ್ನು ಪದದಿಂದ ತೆಗೆದುಹಾಕುವ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಅವನು ಅಧ್ಯಕ್ಷತೆ ವಹಿಸತಕ್ಕದ್ದಲ್ಲ... 70

**186.** ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಹಾಗೂ ಸಭಾಪತಿಯ ಮತ್ತು ಉಪಸಭಾಪತಿಯ ಸಂಬಳಗಳು ಮತ್ತು ಭತ್ಯಗಳು............ 71

**187.** ರಾಜ್ಯ ವಿಧಾನಮಂಡಲದ ಸಚಿವಾಲಯ ............ 71

**ಕಾರ್ಯಕಲಾಪ ನಿರ್ವಹಣೆ**

**188.** ಸದಸ್ಯರಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ ............ 71

**189.** ಸದನಗಳಲ್ಲಿ ಮತದಾನ, ಖಾಲಿ ಸ್ಥಾನಗಳು ಏನೇ ಇದ್ದಾಗ್ಯೂ ಕಾರ್ಯನಿರ್ವಹಿಸಲು ಸದನಗಳ ಅಧಿಕಾರ ಮತ್ತು ಕೋರಂ ............ 71–72

**ಸದಸ್ಯರ ಅನರ್ಹತೆಗಳು**

**190.** ಸ್ಥಾನಗಳನ್ನು ಖಾಲಿ ಮಾಡುವುದು ............ 72–73

191. ಸದಸ್ಯತ್ವಕ್ಕೆ ಅನರ್ಹತೆಗಳು ........................................ 73

192. ಸದಸ್ಯರ ಅನರ್ಹತೆಗಳನ್ನು ಕುರಿತ ಪ್ರಶ್ನೆಗಳ ತೀರ್ಮಾನ ........................ 73–74

193. 188ನೇ ಅನುಚ್ಛೇದದ ಮೇರೆಗೆ ಪ್ರಮಾಣ ಅಥವಾ ಪ್ರತಿಜ್ಞೆ ಮಾಡುವುದಕ್ಕೆ ಮುಂಚೆ ಅಥವಾ ಅರ್ಹನಾಗಿಲ್ಲದಿರುವಾಗ ಅಥವಾ ಅನರ್ಹತೆಗೊಳಿಸಿರುವಾಗ ಸದಸ್ಯನಾಗಿ ಕುಳಿತರೆ ಮತ್ತು ಮತ ಕೊಟ್ಟರೆ ದಂಡ ........................ 74

**ರಾಜ್ಯದ ವಿಧಾನಮಂಡಲಗಳ ಮತ್ತು ಅವುಗಳ ಸದಸ್ಯರ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳು**

194. ವಿಧಾನಮಂಡಲದ ಸದನಗಳ ಮತ್ತು ಅದರ ಸದಸ್ಯರ ಮತ್ತು ಸಮಿತಿಗಳ ಅಧಿಕಾರಗಳು, ವಿಶೇಷಾಧಿಕಾರಗಳು, ಇತ್ಯಾದಿ ........................ 74

195. ಸದಸ್ಯರ ಸಂಬಳಗಳು ಮತ್ತು ಭತ್ಯೆಗಳು ........................ 74

**ವಿಧಾಯೀ ಪ್ರಕ್ರಿಯೆ**

196. ವಿಧೇಯಕಗಳ ಮಂಡನೆಗೆ ಮತ್ತು ಅಂಗೀಕಾರಕ್ಕೆ ಸಂಬಂಧಿಸಿದ ಉಪಬಂಧಗಳು.. 75

197. ಧನವಿಧೇಯಕಗಳಲ್ಲದ ಇತರ ವಿಧೇಯಕಗಳಿಗೆ ಸಂಬಂಧಪಟ್ಟಂತೆ ವಿಧಾನ ಪರಿಷತ್ತಿಗೆ ಇರುವ ಅಧಿಕಾರಗಳ ಮೇಲೆ ನಿರ್ಬಂಧ ........................ 75–76

198. ಧನವಿಧೇಯಕಗಳಿಗೆ ಸಂಬಂಧಿಸಿದಂತೆ ವಿಶೇಷ ಪ್ರಕ್ರಿಯೆ ........................ 76

199. "ಧನವಿಧೇಯಕಗಳು" ಎಂಬುದರ ಪರಿಭಾಷೆ ........................ 76–77

200. ವಿಧೇಯಕಗಳಿಗೆ ಅನುಮತಿ ........................ 77

201. ಪರ್ಯಾಲೋಚನೆಗಾಗಿ ಕಾಯ್ದಿರಿಸಿದ ವಿಧೇಯಕಗಳು ........................ 77

**ಹಣಕಾಸು ವಿಷಯಗಳ ಬಗ್ಗೆ ಪ್ರಕ್ರಿಯೆ**

202. ವಾರ್ಷಿಕ ಹಣಕಾಸು ವಿವರ ಪತ್ರ ........................ 78

203. ಅಂದಾಜುಗಳಿಗೆ ಸಂಬಂಧಪಟ್ಟಂತೆ ವಿಧಾನಮಂಡಲದಲ್ಲಿ ಪ್ರಕ್ರಿಯೆ ........................ 78

204. ಧನವಿನಿಯೋಗ ವಿಧೇಯಕಗಳು ........................ 79

205. ಪೂರಕ, ಹೆಚ್ಚುವರಿ ಅಥವಾ ಅಧಿಕ ಅನುದಾನಗಳು ........................ 79

206. ಲೇಖಾನುದಾನಗಳು, ಪತ್ತಿನ ಅನುದಾನಗಳು ಮತ್ತು ಅಸಾಧಾರಣ ಅನುದಾನಗಳು. 79–80

207. ಹಣಕಾಸು ವಿಧೇಯಕಗಳ ಬಗ್ಗೆ ವಿಶೇಷ ಉಪಬಂಧಗಳು ........................ 80

**ಸಾಮಾನ್ಯತಃ ಪ್ರಕ್ರಿಯೆ**

208. ಪ್ರಕ್ರಿಯಾ ನಿಯಮಗಳು ........................ 81

209. ರಾಜ್ಯದ ವಿಧಾನಮಂಡಲದಲ್ಲಿ ಹಣಕಾಸು ಕಾರ್ಯಕಲಾಪಗಳಿಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ಕಾನೂನಿನ ಮೂಲಕ ವಿನಿಯಮನಗೊಳಿಸುವುದು ........................ 81

210. ವಿಧಾನಮಂಡಲದಲ್ಲಿ ಬಳಸಬೇಕಾದ ಭಾಷೆ ........................ 81–82

211. ವಿಧಾನಮಂಡಲದಲ್ಲಿ ಚರ್ಚೆಯ ಮೇಲೆ ನಿರ್ಬಂಧ ........................ 82

212. ನ್ಯಾಯಾಲಯಗಳು ವಿಧಾನಮಂಡಲದ ವ್ಯವಹರಣೆಗಳ ಬಗ್ಗೆ ವಿಚಾರಣೆ ನಡೆಸದಿರುವುದು ........................ 82

## ಅಧ್ಯಾಯ– IV

## ರಾಜ್ಯಪಾಲನ ವಿಧಾಯೀ ಅಧಿಕಾರ


**213.** ವಿಧಾನಮಂಡಲದ ವಿರಾಮ ಕಾಲದಲ್ಲಿ ಅಧ್ಯಾದೇಶಗಳನ್ನು ಹೊರಡಿಸಲು ರಾಜ್ಯಪಾಲನ ಅಧಿಕಾರ ........ 82–83


## ಅಧ್ಯಾಯ– V

## ರಾಜ್ಯಗಳ ಉಚ್ಚ ನ್ಯಾಯಾಲಯಗಳು


**214.** ರಾಜ್ಯಗಳಿಗಾಗಿ ಉಚ್ಚ ನ್ಯಾಯಾಲಯಗಳು ........ 83

**215.** ಉಚ್ಚನ್ಯಾಯಾಲಯಗಳು ಅಭಿಲೇಖ ನ್ಯಾಯಾಲಯಗಳಾಗಿರತಕ್ಕದ್ದು ........ 83

**216.** ಉಚ್ಚನ್ಯಾಯಾಲಯಗಳ ರಚನೆ ........ 83

**217.** ಉಚ್ಚನ್ಯಾಯಾಲಯದ ನ್ಯಾಯಾಧೀಶನ ನೇಮಕ ಮತ್ತು ಆ ಪದದ ಷರತ್ತುಗಳು ........ 84–85

**218.** ಸರ್ವೋಚ್ಚ ನ್ಯಾಯಾಲಯಕ್ಕೆ ಸಂಬಂಧಪಟ್ಟ ಕೆಲವು ಉಪಬಂಧಗಳು ಉಚ್ಚನ್ಯಾಯಾಲಯಗಳಿಗೆ ಅನ್ವಯವಾಗುವುದು ........ 85

**219.** ಉಚ್ಚನ್ಯಾಯಾಲಯಗಳ ನ್ಯಾಯಾಧೀಶರಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾವಚನ ........ 85

**220.** ಖಾಯಂ ನ್ಯಾಯಾಧೀಶನಾಗಿದ್ದವನು ತರುವಾಯ ನ್ಯಾಯವಾದಿ ವೃತ್ತಿಯನ್ನು ನಡೆಸುವುದರ ಮೇಲೆ ನಿರ್ಬಂಧ ........ 85

**221.** ನ್ಯಾಯಾಧೀಶರ ಸಂಬಳಗಳು, ಇತ್ಯಾದಿ ........ 86

**222.** ನ್ಯಾಯಾಧೀಶನನ್ನು ಒಂದು ಉಚ್ಚನ್ಯಾಯಾಲಯದಿಂದ ಇನ್ನೊಂದು ಉಚ್ಚನ್ಯಾಯಾಲಯಕ್ಕೆ ವರ್ಗಾಯಿಸುವುದು ........ 86

**223.** ಕಾರ್ಯಾರ್ಥ ಮುಖ್ಯನ್ಯಾಯಮೂರ್ತಿಯ ನೇಮಕ ........ 86

**224.** ಹೆಚ್ಚುವರಿ ಹಾಗೂ ಕಾರ್ಯಾರ್ಥ ನ್ಯಾಯಾಧೀಶರ ನೇಮಕ........ 86–87

**224ಎ.** ಉಚ್ಚನ್ಯಾಯಾಲಯಗಳ ಉಪವೇಶನಗಳಿಗೆ ನಿವೃತ್ತ ನ್ಯಾಯಾಧೀಶರ ನೇಮಕ........ 87

**225.** ಅಸ್ತಿತ್ವದಲ್ಲಿರುವ ಉಚ್ಚನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ........ 87

**226.** ಕೆಲವು ರಿಟ್ಟುಗಳನ್ನು ಹೊರಡಿಸಲು ಉಚ್ಚನ್ಯಾಯಾಲಯಗಳ ಅಧಿಕಾರ........ 88–89

**226ಎ.** *[ನಿರಸಿತ]*........ 89

**227.** ಎಲ್ಲ ನ್ಯಾಯಾಲಯಗಳ ಮೇಲೆ ಉಚ್ಚನ್ಯಾಯಾಲಯದ ಅಧೀಕ್ಷಣಾಧಿಕಾರ ........ 89

**228.** ಉಚ್ಚನ್ಯಾಯಾಲಯಕ್ಕೆ ಕೆಲವು ಮೊಕದ್ದಮೆಗಳ ವರ್ಗಾವಣೆ........ 89–90

**228ಎ** *[ನಿರಸಿತ]* ........ 90

**229.** ಉಚ್ಚನ್ಯಾಯಾಲಯಗಳ ಅಧಿಕಾರಿಗಳು ಮತ್ತು ನೌಕರರು ಹಾಗೂ ವೆಚ್ಚಗಳು........ 90

**230.** ಉಚ್ಚನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ವಿಸ್ತರಿಸುವುದು ........ 90–91

**231.** ಎರಡು ಅಥವಾ ಹೆಚ್ಚು ರಾಜ್ಯಗಳಿಗೆ ಒಂದೇ ಉಚ್ಚನ್ಯಾಯಾಲಯವನ್ನು ಸ್ಥಾಪಿಸುವುದು........ 91

## ಅಧ್ಯಾಯ VI

## ಅಧೀನ ನ್ಯಾಯಾಲಯಗಳು


**233.** ಜಿಲ್ಲಾ ನ್ಯಾಯಾಧೀಶರ ನೇಮಕ........................................ 91

**233ಎ.** ಕೆಲವು ಜಿಲ್ಲಾ ನ್ಯಾಯಾಧೀಶರ ನೇಮಕ ಮತ್ತು ಅವರು ಕೊಟ್ಟಿರುವ ತೀರ್ಪು, ಇತ್ಯಾದಿಗಳ ಸಿಂಧುತ್ವ ........................................ 92

**234.** ನ್ಯಾಯಿಕ ಸೇವೆಗೆ ಜಿಲ್ಲಾ ನ್ಯಾಯಾಧೀಶರಲ್ಲದ ಇತರ ವ್ಯಕ್ತಿಗಳ ನೇಮಕಾತಿ.......... 92

**235.** ಅಧೀನ ನ್ಯಾಯಾಲಯಗಳ ಮೇಲೆ ನಿಯಂತ್ರಣ........................................ 92

**236.** ಅರ್ಥ ವಿವರಣೆ........................................ 93

**237.** ಕೆಲವು ದರ್ಜೆ ಅಥವಾ ದರ್ಜೆಗಳ ಮ್ಯಾಜಿಸ್ಟ್ರೇಟರುಗಳಿಗೆ ಈ ಅಧ್ಯಾಯದ ಉಪಬಂಧಗಳ ಅನ್ವಯ........................................ 93


## ಭಾಗ– VII

## ಮೊದಲನೆಯ ಅನುಸೂಚಿಯ 'ಬಿ' ಭಾಗದಲ್ಲಿರುವ ರಾಜ್ಯಗಳು


**238.** *[ನಿರಸಿತ]*........................................ 94


## ಭಾಗ– VIII

## ಒಕ್ಕೂಟ ರಾಜ್ಯಕ್ಷೇತ್ರಗಳು


**239.** ಒಕ್ಕೂಟ ರಾಜ್ಯಕ್ಷೇತ್ರಗಳ ಆಡಳಿತ........................................ 94

**239ಎ.** ಕೆಲವು ಒಕ್ಕೂಟ ರಾಜ್ಯಕ್ಷೇತ್ರಗಳಿಗಾಗಿ ಸ್ಥಳೀಯ ವಿಧಾನಮಂಡಲಗಳನ್ನು ಅಥವಾ ಮಂತ್ರಿಮಂಡಲವನ್ನು ಅಥವಾ ಎರಡನ್ನೂ ಸೃಜಿಸುವುದು........................................ 94

**239ಎಎ.** ದೆಹಲಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು........................................ 94–96

**239ಎಬಿ.** ಸಂವಿಧಾನಾತ್ಮಕ ವ್ಯವಸ್ಥೆಯು ವಿಫಲವಾದ ಸಂದರ್ಭದಲ್ಲಿ ಉಪಬಂಧ.................... 96

**239ಬಿ.** ವಿಧಾನಮಂಡಲದ ವಿರಾಮ ಕಾಲದಲ್ಲಿ ಅಧ್ಯಾದೇಶಗಳನ್ನು ಹೊರಡಿಸುವುದಕ್ಕೆ ಆಡಳಿತಗಾರನ ಅಧಿಕಾರ........................................ 97

**240.** ಕೆಲವು ಒಕ್ಕೂಟ ರಾಜ್ಯಕ್ಷೇತ್ರಗಳಿಗಾಗಿ ವಿನಿಯಮಗಳನ್ನು ರಚಿಸಲು ರಾಷ್ಟ್ರಪತಿಯ ಅಧಿಕಾರ........................................ 98–99

**241.** ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಉಚ್ಚನ್ಯಾಯಾಲಯಗಳು........................................ 99

**242.** *[ನಿರಸಿತ]*........................................ 99


## ಭಾಗ– IX

## ಪಂಚಾಯತಿಗಳು


**243.** ಪರಿಭಾಷೆಗಳು........................................ 100

**243ಎ.** ಗ್ರಾಮಸಭೆ........................................ 100

**243ಬಿ.** ಪಂಚಾಯತಿಗಳ ರಚನೆ........................................ 100

**243ಸಿ.** ಪಂಚಾಯತಿಗಳ ಸಂರಚನೆ........................................ 100–101

**243ಡಿ.** ಸ್ಥಾನಗಳ ಮೀಸಲಾತಿ........................................ 101–102

**243ಇ.** ಪಂಚಾಯತಿಗಳ ಅವಧಿ, ಇತ್ಯಾದಿ........................................ 102

**243ಎಫ್.** ಸದಸ್ಯತ್ವಕ್ಕೆ ಅನರ್ಹತೆಗಳು........ 103

**243ಜಿ.** ಪಂಚಾಯತಿಗಳ ಅಧಿಕಾರಗಳು, ಪ್ರಾಧಿಕಾರ ಮತ್ತು ಜವಾಬ್ದಾರಿಗಳು........ 103

**243ಎಚ್.** ತೆರಿಗೆಗಳನ್ನು ವಿಧಿಸಲು ಪಂಚಾಯತಿಗಳ ಅಧಿಕಾರಗಳು ಮತ್ತು ಅವುಗಳ ನಿಧಿಗಳು........ 103

**243ಐ.** ಹಣಕಾಸು ಸ್ಥಿತಿಗತಿಯನ್ನು ಪರಿಶೀಲಿಸಲು ಹಣಕಾಸು ಆಯೋಗದ ರಚನೆ........ 104

**243ಜೆ.** ಪಂಚಾಯತಿಗಳ ಲೆಕ್ಕಪತ್ರಗಳ ಪರಿಶೋಧನೆ........ 104

**243ಕೆ.** ಪಂಚಾಯತಿಗಳಿಗೆ ಚುನಾವಣೆಗಳು........ 104–105

**243ಎಲ್.** ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಅನ್ವಯ........ 105

**243ಎಂ.** ಕೆಲವು ಪ್ರದೇಶಗಳಿಗೆ ಈ ಭಾಗವು ಅನ್ವಯವಾಗದಿರುವುದು........ 105–106

**243ಎನ್.** ಜಾರಿಯಲ್ಲಿರುವ ಕಾನೂನುಗಳನ್ನು ಮತ್ತು ಅಸ್ತಿತ್ವದಲ್ಲಿರುವ ಪಂಚಾಯತಿಗಳನ್ನು ಮುಂದುವರೆಸುವುದು........ 106

**243ಓ.** ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯವು ಮಧ್ಯ ಪ್ರವೇಶಿಸುವುದರ ಪ್ರತಿಷೇಧ. 106

**ಭಾಗ– IXಎ**

**ಪೌರಸಭೆಗಳು**

**243ಪಿ.** ಪರಿಭಾಷೆಗಳು........ 107

**243ಕ್ಯೂ.** ಪೌರಸಭೆಗಳ ರಚನೆ........ 107

**243ಆರ್.** ಪೌರಸಭೆಗಳ ಸಂರಚನೆ........ 108

**243ಎಸ್.** ವಾರ್ಡ್ ಸಮಿತಿಗಳು, ಇತ್ಯಾದಿಗಳ ರಚನೆ ಮತ್ತು ಸಂರಚನೆ........ 108

**243ಟಿ.** ಸ್ಥಾನಗಳ ಮೀಸಲಾತಿ........ 109

**243ಯು.** ಪೌರಸಭೆಗಳ ಅವಧಿ, ಇತ್ಯಾದಿ........ 109–110

**243ವಿ.** ಸದಸ್ಯತ್ವಕ್ಕೆ ಅನರ್ಹತೆ........ 110

**243ಡಬ್ಲ್ಯೂ.** ಪೌರಸಭೆಗಳ ಅಧಿಕಾರಗಳು, ಪ್ರಾಧಿಕಾರ ಮತ್ತು ಜವಾಬ್ದಾರಿಗಳು, ಇತ್ಯಾದಿ........ 110

**243ಎಕ್ಸ್.** ತೆರಿಗೆಗಳನ್ನು ವಿಧಿಸಲು ಪೌರಸಭೆಗಳ ಅಧಿಕಾರಗಳು ಮತ್ತು ಅವುಗಳ ನಿಧಿಗಳು... 110–111

**243ವೈ.** ಹಣಕಾಸು ಆಯೋಗ........ 111

**243ಜಡ್.** ಪೌರಸಭೆಗಳ ಲೆಕ್ಕಪತ್ರಗಳ ಪರಿಶೋಧನೆ........ 111

**243ಜಡ್ಎ.** ಪೌರಸಭೆಗಳಿಗೆ ಚುನಾವಣೆಗಳು........ 111–112

**243ಜಡ್ಬಿ.** ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಅನ್ವಯ........ 112

**243ಜಡ್ಸಿ.** ಈ ಭಾಗವು ಕೆಲವು ಪ್ರದೇಶಗಳಿಗೆ ಅನ್ವಯವಾಗದಿರುವುದು........ 112

**243ಜಡ್ಡಿ.** ಜಿಲ್ಲಾ ಯೋಜನಾ ಸಮಿತಿ........ 112–113

**243ಜಡ್ಇ.** ಮಹಾನಗರ ಯೋಜನಾ ಸಮಿತಿ........ 113–114

**243ಜಡ್ಎಫ್.** ಜಾರಿಯಲ್ಲಿರುವ ಕಾನೂನುಗಳನ್ನು ಮತ್ತು ಅಸ್ತಿತ್ವದಲ್ಲಿರುವ ಪೌರಸಭೆಗಳನ್ನು ಮುಂದುವರೆಸುವುದು........ 114

**243ಜಡ್ಜಿ.** ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯವು ಮಧ್ಯ ಪ್ರವೇಶಿಸುವುದರ ಪ್ರತಿಷೇಧ. 114

## ಭಾಗ – X

### ಅನುಸೂಚಿತ ಮತ್ತು ಬುಡಕಟ್ಟು ಪ್ರದೇಶಗಳು


244. ಅನುಸೂಚಿತ ಪ್ರದೇಶಗಳ ಹಾಗೂ ಬುಡಕಟ್ಟು ಪ್ರದೇಶಗಳ ಆಡಳಿತ.................... 115

244ಎ. ಅಸ್ಸಾಮ್‌ನಲ್ಲಿರುವ ಕೆಲವು ಬುಡಕಟ್ಟು ಪ್ರದೇಶಗಳನ್ನೊಳಗೊಂಡ ಸ್ವಾಯತ್ತ ರಾಜ್ಯದ ರಚನೆ ಮತ್ತು ಅದಕ್ಕಾಗಿ ಸ್ಥಳೀಯ ವಿಧಾನಮಂಡಲವನ್ನು ಅಥವಾ ಮಂತ್ರಿಮಂಡಲವನ್ನು ಅಥವಾ ಅವೆರಡನ್ನು ಸೃಜಿಸುವುದು............................ 115–116


## ಭಾಗ– XI

### ಒಕ್ಕೂಟ ಮತ್ತು ರಾಜ್ಯಗಳ ನಡುವಣ ಸಂಬಂಧಗಳು

### ಅಧ್ಯಾಯ I – ವಿಧಾಯೀ ಸಂಬಂಧಗಳು

### ವಿಧಾಯೀ ಅಧಿಕಾರಗಳ ಹಂಚಿಕೆ


245. ಸಂಸತ್ತು ಮತ್ತು ರಾಜ್ಯಗಳ ವಿಧಾನಮಂಡಲಗಳು ರಚಿಸಿದ ಕಾನೂನುಗಳ ವ್ಯಾಪ್ತಿ... 117

246. ಸಂಸತ್ತು ಮತ್ತು ರಾಜ್ಯಗಳ ವಿಧಾನಮಂಡಲಗಳು ರಚಿಸಿದ ಕಾನೂನುಗಳ ವಸ್ತು ವಿಷಯ............................................................................ 117

247. ಕೆಲವು ಹೆಚ್ಚುವರಿ ನ್ಯಾಯಾಲಯಗಳ ಸ್ಥಾಪನೆಗಾಗಿ ಉಪಬಂಧಿಸಲು ಸಂಸತ್ತಿನ ಅಧಿಕಾರ.......................................................................... 117

248. ಕಾನೂನು ರಚನೆಗೆ ಸಂಬಂಧಿಸಿದಂತೆ ಉಳಿಕೆ ಅಧಿಕಾರಗಳು............................. 117

249. ರಾಜ್ಯಪಟ್ಟಿಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಹಿತದೃಷ್ಟಿಯಿಂದ ಕಾನೂನು ರಚಿಸಲು ಸಂಸತ್ತಿನ ಅಧಿಕಾರ................................................ 118

250. ತುರ್ತು ಪರಿಸ್ಥಿತಿಗೆ ಸಂಬಂಧಿಸಿದ ಉದ್ಘೋಷಣೆಯು ಜಾರಿಯಲ್ಲಿರುವಾಗ ರಾಜ್ಯಪಟ್ಟಿಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನು ರಚಿಸಲು ಸಂಸತ್ತಿನ ಅಧಿಕಾರ.......................................................... 118

251. 249 ಮತ್ತು 250ನೇ ಅನುಚ್ಛೇದಗಳ ಮೇರೆಗೆ ಸಂಸತ್ತು ರಚಿಸಿದ ಕಾನೂನುಗಳು ಮತ್ತು ರಾಜ್ಯಗಳ ವಿಧಾನಮಂಡಲಗಳು ರಚಿಸಿದ ಕಾನೂನುಗಳ ನಡುವಣ ಅಸಂಗತತೆ........................................................................ 118

252. ಎರಡು ಅಥವಾ ಹೆಚ್ಚು ರಾಜ್ಯಗಳ ಸಮ್ಮತಿಯಿಂದ ಆ ರಾಜ್ಯಗಳಿಗಾಗಿ ಕಾನೂನು ರಚಿಸಲು ಸಂಸತ್ತಿಗಿರುವ ಅಧಿಕಾರ ಮತ್ತು ಇತರ ಯಾವುದೇ ರಾಜ್ಯವು ಅಂಥ ಕಾನೂನನ್ನು ಅಂಗೀಕರಿಸುವುದು.................................................. 119

253. ಅಂತರರಾಷ್ಟ್ರೀಯ ಒಪ್ಪಂದಗಳನ್ನು ಜಾರಿಗೆ ತರಲು ಕಾನೂನು ರಚನೆ................. 119

254. ಸಂಸತ್ತು ರಚಿಸಿದ ಮತ್ತು ರಾಜ್ಯಗಳ ವಿಧಾನಮಂಡಲಗಳು ರಚಿಸಿದ ಕಾನೂನುಗಳ ನಡುವಣ ಅಸಂಗತತೆ.................................................................. 119–120

255. ಶಿಫಾರಸುಗಳಿಗೆ ಮತ್ತು ಪೂರ್ವ ಮಂಜೂರಾತಿಗಳಿಗೆ ಸಂಬಂಧಿಸಿದ ಅಗತ್ಯತೆಗಳನ್ನು ಕೇವಲ ಪ್ರಕ್ರಿಯೆಗೆ ಸಂಬಂಧಿಸಿದ ವಿಷಯಗಳೆಂಬಂತೆ ಪರಿಗಣಿಸುವುದು.......................................................................... 120


### ಅಧ್ಯಾಯ II – ಆಡಳಿತ ಸಂಬಂಧಗಳು

### ಸಾಮಾನ್ಯ


256. ರಾಜ್ಯಗಳ ಹಾಗೂ ಒಕ್ಕೂಟದ ಬಾಧ್ಯತೆ..................................................... 120

257. ಕೆಲವು ಸಂದರ್ಭಗಳಲ್ಲಿ ರಾಜ್ಯಗಳ ಮೇಲೆ ಒಕ್ಕೂಟದ ನಿಯಂತ್ರಣ....................... 120–121

257ಎ. *[ನಿರಸಿತ]*................................................................................ 121

258. ಕೆಲವು ಸಂದರ್ಭಗಳಲ್ಲಿ ರಾಜ್ಯಗಳಿಗೆ ಅಧಿಕಾರ, ಇತ್ಯಾದಿಗಳನ್ನು ಪ್ರದಾನ ಮಾಡಲು ಒಕ್ಕೂಟದ ಅಧಿಕಾರ.......... 121

258ಎ. ಒಕ್ಕೂಟಕ್ಕೆ ಪ್ರಕಾರ್ಯಗಳನ್ನು ವಹಿಸಿಕೊಡಲು ರಾಜ್ಯಗಳ ಅಧಿಕಾರ.......... 122

259. *[ನಿರಸಿತ]*.......... 122

260. ಭಾರತದ ಹೊರಗಿನ ರಾಜ್ಯಕ್ಷೇತ್ರಗಳ ಸಂಬಂಧದಲ್ಲಿ ಒಕ್ಕೂಟದ ಅಧಿಕಾರ ವ್ಯಾಪ್ತಿ.. 122

261. ಸಾರ್ವಜನಿಕ ಕಾರ್ಯಗಳು, ದಾಖಲೆಗಳು ಮತ್ತು ನ್ಯಾಯಿಕ ವ್ಯವಹರಣೆಗಳು....... 122

### ಜಲ ಸಂಬಂಧೀ ವಿವಾದಗಳು

262. ಅಂತರರಾಜ್ಯ ನದಿಗಳ ಅಥವಾ ನದಿ ಕಣಿವೆಗಳ ಜಲ ಸಂಬಂಧೀ ವಿವಾದಗಳಲ್ಲಿ ನ್ಯಾಯ ನಿರ್ಣಯ.......... 122

### ರಾಜ್ಯಗಳ ನಡುವೆ ಸಮನ್ವಯ

263. ಅಂತರರಾಜ್ಯ ಪರಿಷತ್ತಿಗೆ ಸಂಬಂಧಪಟ್ಟ ಉಪಬಂಧಗಳು.......... 123

## ಭಾಗ – XII

## ಹಣಕಾಸು, ಸ್ವತ್ತು , ಕರಾರುಗಳು ಮತ್ತು ದಾವೆಗಳು

### ಅಧ್ಯಾಯ I – ಹಣಕಾಸು

### ಸಾಮಾನ್ಯ

264. ಅರ್ಥ ವಿವರಣೆ.......... 124

265. ಕಾನೂನಿನ ಅಧಿಕಾರದ ಮೂಲಕ ಹೊರತು ತೆರಿಗೆಗಳನ್ನು ವಿಧಿಸದಿರುವುದು......... 124

266. ಭಾರತದ ಮತ್ತು ರಾಜ್ಯಗಳ ಸಂಚಿತ ನಿಧಿಗಳು ಮತ್ತು ಸರ್ಕಾರಿ ಲೆಕ್ಕಪತ್ರಗಳು...... 124

267. ಸಾದಿಲ್ವಾರು ನಿಧಿ.......... 124

### ಒಕ್ಕೂಟ ಮತ್ತು ರಾಜ್ಯಗಳ ನಡುವೆ ರಾಜಸ್ವಗಳ ಹಂಚಿಕೆ

268. ಒಕ್ಕೂಟವು ವಿಧಿಸಿದ ಆದರೆ ರಾಜ್ಯಗಳು ಸಂಗ್ರಹಿಸಿದ ಮತ್ತು ವಿನಿಯೋಗಿಸಿದ ಸುಂಕಗಳು.......... 125

268ಎ. ಒಕ್ಕೂಟವು ಸೇವಾ ತೆರಿಗೆ ವಿಧಿಸುವುದು ಮತ್ತು ಒಕ್ಕೂಟ ಮತ್ತು ರಾಜ್ಯಗಳು ಅದನ್ನು ಸಂಗ್ರಹಿಸುವುದು ಮತ್ತು ವಿನಿಯೋಗಿಸುವುದು.......... 125

269. ಒಕ್ಕೂಟವು ವಿಧಿಸಿ ಸಂಗ್ರಹಿಸಿದ ಆದರೆ ರಾಜ್ಯಗಳಿಗೆ ವಹಿಸಿದ ತೆರಿಗೆಗಳು............ 125–126

270. ಒಕ್ಕೂಟವು ವಿಧಿಸಿದ ಮತ್ತು ಒಕ್ಕೂಟದ ಮತ್ತು ರಾಜ್ಯಗಳ ನಡುವೆ ಹಂಚಿಕೆಯಾದ ತೆರಿಗೆಗಳು.......... 126

271. ಒಕ್ಕೂಟದ ಉದ್ದೇಶಗಳಿಗಾಗಿ ಕೆಲವು ಸುಂಕಗಳ ಮತ್ತು ತೆರಿಗೆಗಳ ಮೇಲೆ ಅಧಿಭಾರ.......... 126

272. *[ನಿರಸಿತ]*.......... 127

273. ಸೆಣಬು ಮತ್ತು ಸೆಣಬಿನ ಉತ್ಪನ್ನಗಳ ಮೇಲೆ ರಫ್ತುಸುಂಕಕ್ಕೆ ಬದಲಾಗಿ ಅನುದಾನಗಳು.......... 127

274. ರಾಜ್ಯಗಳು ಹಿತಾಸಕ್ತಿ ಹೊಂದಿರುವ ತೆರಿಗೆಯನ್ನು ವಿಧಿಸುವುದಕ್ಕೆ ಸಂಬಂಧಿಸಿದ ವಿಧೇಯಕಗಳಿಗೆ ರಾಷ್ಟ್ರಪತಿಯ ಪೂರ್ವ ಶಿಫಾರಸು ಅಗತ್ಯ.......... 127

275. ಒಕ್ಕೂಟದಿಂದ ಕೆಲವು ರಾಜ್ಯಗಳಿಗೆ ಅನುದಾನಗಳು.................................... 127–128

276. ವೃತ್ತಿಗಳ, ವ್ಯಾಪಾರಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆಗಳು. 128–129

277. ಉಳಿಸುವಿಕೆಗಳು.................................... 129

278. [ನಿರಸಿತ].................................... 129

279. "ನಿವ್ವಳ ಉತ್ಪತ್ತಿಗಳು", ಮುಂತಾದವುಗಳನ್ನು ಲೆಕ್ಕ ಹಾಕುವುದು.................................... 129

280. ಹಣಕಾಸು ಆಯೋಗ.................................... 129–130

281. ಹಣಕಾಸು ಆಯೋಗದ ಶಿಫಾರಸುಗಳು.................................... 130

ಸಂಕೀರ್ಣ ಹಣಕಾಸು ಉಪಬಂಧಗಳು

282. ಒಕ್ಕೂಟವು ಅಥವಾ ಒಂದು ರಾಜ್ಯವು ತನ್ನ ರಾಜಸ್ವಗಳಿಂದ ಭರಿಸಬಹುದಾದ ವೆಚ್ಚಗಳು.................................... 130

283. ಸಂಚಿತ ನಿಧಿಗಳ, ಸಾದಿಲ್ವಾರು ನಿಧಿಗಳ ಮತ್ತು ಸರ್ಕಾರಿ ಲೆಕ್ಕಗಳಿಗೆ ಜಮೆಯಾದ ಹಣಗಳ ಅಭಿರಕ್ಷೆ ಇತ್ಯಾದಿ.................................... 130–131

284. ಲೋಕನೌಕರರು ಅಥವಾ ನ್ಯಾಯಾಲಯಗಳು ಸ್ವೀಕರಿಸಿದ ದಾವೆಗಾರರ ಠೇವಣಿಗಳ ಮತ್ತು ಇತರ ಹಣದ ಅಭಿರಕ್ಷೆ.................................... 131

285. ಒಕ್ಕೂಟದ ಸ್ವತ್ತಿಗೆ ರಾಜ್ಯದ ತೆರಿಗೆಯಿಂದ ವಿನಾಯಿತಿ.................................... 131

286. ಸರಕುಗಳ ಮಾರಾಟದ ಅಥವಾ ಖರೀದಿಯ ಮೇಲೆ ತೆರಿಗೆಯನ್ನು ವಿಧಿಸುವುದರ ಮೇಲೆ ನಿರ್ಬಂಧಗಳು.................................... 131–132

287. ವಿದ್ಯುಚ್ಛಕ್ತಿಗೆ ತೆರಿಗೆಯಿಂದ ವಿನಾಯಿತಿ.................................... 132

288. ಕೆಲವು ಸಂದರ್ಭಗಳಲ್ಲಿ ನೀರಿನ ಅಥವಾ ವಿದ್ಯುಚ್ಛಕ್ತಿಯ ಬಗ್ಗೆ ರಾಜ್ಯಗಳ ತೆರಿಗೆಯಿಂದ ವಿನಾಯಿತಿ.................................... 132–133

289. ಒಕ್ಕೂಟದ ತೆರಿಗೆಯಿಂದ ಒಂದು ರಾಜ್ಯದ ಸ್ವತ್ತಿಗೆ ಮತ್ತು ವರಮಾನಕ್ಕೆ ವಿನಾಯಿತಿ.. 133

290. ಕೆಲವು ವೆಚ್ಚಗಳಿಗೆ ಮತ್ತು ನಿವೃತ್ತಿವೇತನಗಳಿಗೆ ಸಂಬಂಧಿಸಿದಂತೆ ಹೊಂದಾಣಿಕೆ..... 133

290ಎ. ಕೆಲವು ದೇವಸ್ವಂ ನಿಧಿಗಳಿಗೆ ವಾರ್ಷಿಕ ಸಂದಾಯ.................................... 134

291. [ನಿರಸಿತ].................................... 134

ಅಧ್ಯಾಯ – II

ಸಾಲ ತೆಗೆದುಕೊಳ್ಳುವುದು

292. ಭಾರತ ಸರ್ಕಾರವು ಸಾಲ ತೆಗೆದುಕೊಳ್ಳುವುದು.................................... 134

293. ರಾಜ್ಯಗಳು ಸಾಲ ತೆಗೆದುಕೊಳ್ಳುವುದು.................................... 134

ಅಧ್ಯಾಯ – III

ಸ್ವತ್ತು , ಕರಾರುಗಳು, ಹಕ್ಕುಗಳು, ಹೊಣೆಗಾರಿಕೆಗಳು, ಬಾಧ್ಯತೆಗಳು ಮತ್ತು ದಾವೆಗಳು

294. ಕೆಲವು ಸಂದರ್ಭಗಳಲ್ಲಿ ಸ್ವತ್ತು, ಆಸ್ತಿ, ಹಕ್ಕು, ಹೊಣೆಗಾರಿಕೆ ಮತ್ತು ಬಾಧ್ಯತೆಗಳಿಗೆ ಉತ್ತರಾಧಿಕಾರ.................................... 135

295. ಇತರ ಸಂದರ್ಭಗಳಲ್ಲಿ ಸ್ವತ್ತು, ಆಸ್ತಿ, ಹಕ್ಕು, ಹೊಣೆಗಾರಿಕೆ ಮತ್ತು ಬಾಧ್ಯತೆಗಳಿಗೆ ಉತ್ತರಾಧಿಕಾರ.................................... 135

296. ರಾಜಗಾಮಿತ್ವ ಅಥವಾ ರದ್ದಿಯಾತಿ ಅಥವಾ ಸ್ವಾಮಿವಿಹೀನತೆಯಿಂದ ಪ್ರಾಪ್ತವಾಗುವ ಸ್ವತ್ತು.......... 136

297. ರಾಜ್ಯಕ್ಷೇತ್ರೀಯ ಸಮುದ್ರದಲ್ಲಿನ ಅಥವಾ ಕಾಂಟಿನೆಂಟಲ್ ಶೆಲ್ಫ್‌ಗಳಲ್ಲಿನ ಬೆಲೆಬಾಳುವ ವಸ್ತುಗಳು ಮತ್ತು ಅನನ್ಯ ಆರ್ಥಿಕ ವಲಯದ ಸಂಪನ್ಮೂಲಗಳು ಒಕ್ಕೂಟದಲ್ಲಿ ನಿಹಿತವಾಗತಕ್ಕದ್ದು.......... 136

298. ವ್ಯಾಪಾರ, ಮುಂತಾದವನ್ನು ನಡೆಸಲು ಅಧಿಕಾರ.......... 136

299. ಕರಾರುಗಳು.......... 137

300. ದಾವೆಗಳು ಮತ್ತು ವ್ಯವಹರಣೆಗಳು.......... 137


**ಅಧ್ಯಾಯ- IV ಸ್ವತ್ತಿನಹಕ್ಕು**


300ಎ. ಕಾನೂನಿನ ಅಧಿಕಾರವಿಲ್ಲದೆ ವ್ಯಕ್ತಿಗಳ ಸ್ವತ್ತನ್ನು ಕಸಿದುಕೊಳ್ಳತಕ್ಕದ್ದಲ್ಲ.......... 137


## ಭಾಗ-XIII

## ಭಾರತದ ರಾಜ್ಯಕ್ಷೇತ್ರದೊಳಗೆ ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರ


301. ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರ ಸ್ವಾತಂತ್ರ್ಯ.......... 138

302. ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರದ ಮೇಲೆ ನಿರ್ಬಂಧಗಳನ್ನು ವಿಧಿಸಲು ಸಂಸತ್ತಿನ ಅಧಿಕಾರ.......... 138

303. ವ್ಯಾಪಾರ ಮತ್ತು ವಾಣಿಜ್ಯದ ಬಗ್ಗೆ ಒಕ್ಕೂಟದ ಮತ್ತು ರಾಜ್ಯಗಳ ವಿಧಾಯೀ ಅಧಿಕಾರಗಳ ಮೇಲೆ ನಿರ್ಬಂಧಗಳು.......... 138

304. ರಾಜ್ಯಗಳ ನಡುವೆ ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರಗಳ ಮೇಲೆ ನಿರ್ಬಂಧಗಳು.......... 138

305. ಅಸ್ತಿತ್ವದಲ್ಲಿರುವ ಕಾನೂನುಗಳ ಮತ್ತು ರಾಜ್ಯದ ಏಕಸ್ವಾಮ್ಯದ ಬಗ್ಗೆ ಉಪಬಂಧಿಸುವ ಕಾನೂನುಗಳ ಉಳಿಸುವಿಕೆ.......... 139

306. *[ನಿರಸಿತ]*.......... 139

307. 301 ರಿಂದ 304ರವರೆಗಿನ ಅನುಚ್ಛೇದಗಳ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಪ್ರಾಧಿಕಾರದ ನೇಮಕ.......... 139


## ಭಾಗ- XIV

## ಒಕ್ಕೂಟದ ಮತ್ತು ರಾಜ್ಯಗಳ ಅಧೀನದಲ್ಲಿನ ಸೇವೆಗಳು

**ಅಧ್ಯಾಯ- I – ಸೇವೆಗಳು**


308. ಅರ್ಥ ವಿವರಣೆ.......... 140

309. ಒಕ್ಕೂಟಕ್ಕೆ ಅಥವಾ ರಾಜ್ಯಕ್ಕೆ ಸೇವೆ ಸಲ್ಲಿಸುವ ವ್ಯಕ್ತಿಗಳ ನೇಮಕಾತಿ ಮತ್ತು ಸೇವಾ ಷರತ್ತುಗಳು.......... 140

310. ಒಕ್ಕೂಟಕ್ಕೆ ಅಥವಾ ರಾಜ್ಯಕ್ಕೆ ಸೇವೆ ಸಲ್ಲಿಸುವ ವ್ಯಕ್ತಿಗಳ ಪದಾವಧಿ.......... 140

311. ಒಕ್ಕೂಟದ ಅಥವಾ ರಾಜ್ಯದ ಅಧೀನದಲ್ಲಿ ಸಿವಿಲ್ ಸ್ಥಾನಗಳಲ್ಲಿ ನಿಯೋಜಿತರಾಗಿರುವ ವ್ಯಕ್ತಿಗಳನ್ನು ವಜಾ ಮಾಡುವುದು, ತೆಗೆದುಹಾಕುವುದು ಅಥವಾ ಅವರ ದರ್ಜೆಯನ್ನು ಇಳಿಸುವುದು.......... 141

312. ಅಖಿಲ ಭಾರತ ಸೇವೆಗಳು.......... 142

**312ಎ.** ಕೆಲವು ಸೇವೆಗಳ ಅಧಿಕಾರಿಗಳ ಸೇವಾ ಷರತ್ತುಗಳನ್ನು ವ್ಯತ್ಯಸ್ತಗೊಳಿಸಲು ಅಥವಾ ರದ್ದುಗೊಳಿಸಲು ಸಂಸತ್ತಿನ ಅಧಿಕಾರ.................... 142–143

**313.** ಸಂಕ್ರಮಣಕಾಲೀನ ಉಪಬಂಧಗಳು.................... 143

**314.** *[ನಿರಸಿತ]*.................... 143

**ಅಧ್ಯಾಯ II – ಲೋಕಸೇವಾ ಆಯೋಗಗಳು**

**315.** ಒಕ್ಕೂಟಕ್ಕೆ ಮತ್ತು ರಾಜ್ಯಗಳಿಗೆ ಲೋಕಸೇವಾ ಆಯೋಗಗಳು.................... 144

**316.** ಸದಸ್ಯರ ನೇಮಕ ಮತ್ತು ಪದಾವಧಿ.................... 144–145

**317.** ಲೋಕಸೇವಾ ಆಯೋಗದ ಸದಸ್ಯನನ್ನು ತೆಗೆದುಹಾಕುವುದು ಮತ್ತು ಅಮಾನತ್ತಿನಲ್ಲಿಡುವುದು.................... 145–146

**318.** ಆಯೋಗದ ಸದಸ್ಯರ ಮತ್ತು ಸಿಬ್ಬಂದಿಯ ಸೇವಾ ಷರತ್ತುಗಳ ಬಗ್ಗೆ ವಿನಿಯಮಗಳನ್ನು ರಚಿಸಲು ಅಧಿಕಾರ.................... 146

**319.** ಆಯೋಗದ ಸದಸ್ಯರು, ಹಾಗೆ ಸದಸ್ಯರಾಗಿರುವುದು ನಿಂತುಹೋದ ಮೇಲೆ ಪದಗಳನ್ನು ಧಾರಣ ಮಾಡುವ ಬಗ್ಗೆ ನಿಷೇಧ.................... 146

**320.** ಲೋಕಸೇವಾ ಆಯೋಗಗಳ ಪ್ರಕಾರ್ಯಗಳು.................... 146–148

**321.** ಲೋಕಸೇವಾ ಆಯೋಗಗಳ ಪ್ರಕಾರ್ಯಗಳನ್ನು ವಿಸ್ತರಿಸುವ ಅಧಿಕಾರ.................... 148

**322.** ಲೋಕಸೇವಾ ಆಯೋಗಗಳ ವೆಚ್ಚಗಳು.................... 148

**323.** ಲೋಕಸೇವಾ ಆಯೋಗಗಳ ವರದಿಗಳು.................... 148

**ಭಾಗ-XIVಎ**

**ನ್ಯಾಯಾಧಿಕರಣಗಳು**

**323ಎ.** ಆಡಳಿತ ನ್ಯಾಯಾಧಿಕರಣಗಳು.................... 149

**323ಬಿ.** ಇತರ ವಿಷಯಗಳಿಗಾಗಿ ನ್ಯಾಯಾಧಿಕರಣಗಳು.................... 150–151

**ಭಾಗ– XV**

**ಚುನಾವಣೆಗಳು**

**324.** ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಚುನಾವಣಾ ಆಯೋಗದಲ್ಲಿ ನಿಹಿತವಾಗಿರುವುದು.................... 152

**325.** ಧರ್ಮ, ಮೂಲ ವಂಶ, ಜಾತಿ ಅಥವಾ ಲಿಂಗದ ಆಧಾರಗಳ ಮೇಲೆ ಯಾರೇ ವ್ಯಕ್ತಿಯು ಮತದಾರರ ಪಟ್ಟಿಯಲ್ಲಿ ಸೇರಲು ಅನರ್ಹನಾಗದಿರುವುದು ಅಥವಾ ವಿಶೇಷ ಮತದಾರರ ಪಟ್ಟಿಯಲ್ಲಿ ಸೇರಿಸುವಂತೆ ಅವನು ಕ್ಲೇಮು ಮಾಡಲಾಗದಿರುವುದು.................... 153

**326.** ಲೋಕಸಭೆಯ ಮತ್ತು ರಾಜ್ಯಗಳ ವಿಧಾನಸಭೆಗಳ ಚುನಾವಣೆಗಳು ವಯಸ್ಕ ಮತಾಧಿಕಾರದ ಆಧಾರದ ಮೇಲೆ ನಡೆಯುವುದು.................... 153

**327.** ವಿಧಾನಮಂಡಲಗಳ ಚುನಾವಣೆಗಳ ಬಗ್ಗೆ ಉಪಬಂಧವನ್ನು ಮಾಡಲು ಸಂಸತ್ತಿನ ಅಧಿಕಾರ.................... 153

**328.** ರಾಜ್ಯದ ವಿಧಾನಮಂಡಲದ ಚುನಾವಣೆಗಳ ಬಗ್ಗೆ ಉಪಬಂಧವನ್ನು ಮಾಡಲು ಅಂಥ ವಿಧಾನಮಂಡಲದ ಅಧಿಕಾರ.................... 153

329. ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯಗಳ ಹಸ್ತಕ್ಷೇಪಕ್ಕೆ ಪ್ರತಿಷೇಧ.............. 154

329ಎ. [ನಿರಸಿತ]................................................ 154

## ಭಾಗ – XVI

## ಕೆಲವು ವರ್ಗಗಳಿಗೆ ಸಂಬಂಧಪಟ್ಟ ವಿಶೇಷ ಉಪಬಂಧಗಳು

330. ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಲೋಕಸಭೆಯಲ್ಲಿ ಸ್ಥಾನಗಳನ್ನು ಮೀಸಲಿಡುವುದು.............................. 155

331. ಲೋಕಸಭೆಯಲ್ಲಿ ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ಪ್ರಾತಿನಿಧ್ಯ.................. 156

332. ರಾಜ್ಯಗಳ ವಿಧಾನಸಭೆಗಳಲ್ಲಿ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸ್ಥಾನಗಳನ್ನು ಮೀಸಲಿಡುವುದು.................................. 156–157

333. ರಾಜ್ಯಗಳ ವಿಧಾನಸಭೆಗಳಲ್ಲಿ ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ಪ್ರಾತಿನಿಧ್ಯ... 157

334. ಸ್ಥಾನಗಳನ್ನು ಮೀಸಲಿಡುವುದು ಮತ್ತು ವಿಶೇಷ ಪ್ರಾತಿನಿಧ್ಯವು ಎಪ್ಪತ್ತು ವರ್ಷಗಳ ನಂತರ ನಿಂತುಹೋಗತಕ್ಕದ್ದು.................................... 157

335. ಸೇವೆಗಳಿಗೆ ಮತ್ತು ಹುದ್ದೆಗಳಿಗೆ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಕ್ಲೇಮುಗಳು.............................................. 158

336. ಕೆಲವು ಸೇವೆಗಳಲ್ಲಿ ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ವಿಶೇಷ ಉಪಬಂಧ.. 158

337. ಆಂಗ್ಲೋ-ಇಂಡಿಯನ್ ಸಮುದಾಯದ ಪ್ರಯೋಜನಕ್ಕಾಗಿ ಶೈಕ್ಷಣಿಕ ಅನುದಾನಗಳ ಬಗ್ಗೆ ವಿಶೇಷ ಉಪಬಂಧ.............................................. 158–159

338. ಅನುಸೂಚಿತ ಜಾತಿಗಳ ರಾಷ್ಟ್ರೀಯ ಆಯೋಗ.................................... 159–160

338ಎ. ಅನುಸೂಚಿತ ಬುಡಕಟ್ಟುಗಳ ರಾಷ್ಟ್ರೀಯ ಆಯೋಗ.............................. 161–162

339. ಅನುಸೂಚಿತ ಪ್ರದೇಶಗಳ ಆಡಳಿತದ ಮತ್ತು ಅನುಸೂಚಿತ ಬುಡಕಟ್ಟುಗಳ ಕಲ್ಯಾಣದ ಸಂಬಂಧದಲ್ಲಿ ಒಕ್ಕೂಟದ ನಿಯಂತ್ರಣ.................................. 162

340. ಹಿಂದುಳಿದ ವರ್ಗಗಳ ಸ್ಥಿತಿಗತಿಗಳ ಅನ್ವೇಷಣೆಗಾಗಿ ಆಯೋಗದ ನೇಮಕ............ 163

341. ಅನುಸೂಚಿತ ಜಾತಿಗಳು.................................................. 163–164

342. ಅನುಸೂಚಿತ ಬುಡಕಟ್ಟುಗಳು.............................................. 164

## ಭಾಗ – XVII

## ರಾಜಭಾಷೆ

### ಅಧ್ಯಾಯ I – ಒಕ್ಕೂಟದ ಭಾಷೆ

343. ಒಕ್ಕೂಟದ ರಾಜಭಾಷೆ...................................................... 165

344. ರಾಜಭಾಷೆಯ ಬಗ್ಗೆ ಆಯೋಗ ಮತ್ತು ಸಂಸತ್ ಸಮಿತಿ............................ 165–166

### ಅಧ್ಯಾಯ II – ಪ್ರಾದೇಶಿಕ ಭಾಷೆಗಳು

345. ರಾಜ್ಯದ ರಾಜಭಾಷೆ ಅಥವಾ ರಾಜಭಾಷೆಗಳು...................................... 166

346. ರಾಜ್ಯ-ರಾಜ್ಯಗಳ ಅಥವಾ ರಾಜ್ಯ-ಒಕ್ಕೂಟದ ನಡುವೆ ಸಂಪರ್ಕಕ್ಕಾಗಿ ರಾಜಭಾಷೆ... 166

347. ಒಂದು ರಾಜ್ಯದ ಜನ ಸಮುದಾಯದ ಒಂದು ವರ್ಗದವರು ಮಾತನಾಡುವ ಭಾಷೆಗೆ ಸಂಬಂಧಪಟ್ಟ ವಿಶೇಷ ಉಪಬಂಧ.................................... 166

## ಅಧ್ಯಾಯ – III

## ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯ ಮುಂತಾದವುಗಳ ಭಾಷೆ


**348.** ಸರ್ವೋಚ್ಚ ನ್ಯಾಯಾಲಯದಲ್ಲಿ ಮತ್ತು ಉಚ್ಚ ನ್ಯಾಯಾಲಯಗಳಲ್ಲಿ ಮತ್ತು ಅಧಿನಿಯಮಗಳು, ವಿಧೇಯಕಗಳು ಮುಂತಾದವುಗಳಿಗಾಗಿ ಬಳಸಬೇಕಾದ ಭಾಷೆ. 167

**349.** ಭಾಷೆಗೆ ಸಂಬಂಧಪಟ್ಟ ಕೆಲವು ಕಾನೂನುಗಳನ್ನು ಅಧಿನಿಯಮಿಸುವುದಕ್ಕಾಗಿ ವಿಶೇಷ ಕಾರ್ಯವಿಧಾನ.......... 167


## ಅಧ್ಯಾಯ – IV

## ವಿಶೇಷ ನಿರ್ದೇಶನಗಳು


**350.** ಕುಂದುಕೊರತೆಗಳ ನಿವಾರಣೆಗಾಗಿ ಕೋರಿ ಸಲ್ಲಿಸುವ ಮನವಿಗಳಲ್ಲಿ ಬಳಸಬೇಕಾದ ಭಾಷೆ.......... 168

**350ಎ.** ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಸೌಲಭ್ಯಗಳು.......... 168

**350ಬಿ.** ಭಾಷಾ ಅಲ್ಪಸಂಖ್ಯಾತರಿಗಾಗಿ ವಿಶೇಷ ಅಧಿಕಾರಿ.......... 168

**351.** ಹಿಂದಿ ಭಾಷೆಯ ಅಭಿವೃದ್ಧಿಗಾಗಿ ನಿರ್ದೇಶನ.......... 168


## ಭಾಗ – XVIII

## ತುರ್ತುಪರಿಸ್ಥಿತಿಯ ಉಪಬಂಧಗಳು


**352.** ತುರ್ತು ಪರಿಸ್ಥಿತಿಯ ಉದ್ಘೋಷಣೆ.......... 169–171

**353.** ತುರ್ತು ಪರಿಸ್ಥಿತಿಯ ಉದ್ಘೋಷಣೆಯ ಪರಿಣಾಮ.......... 171

**354.** ತುರ್ತು ಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಾಗ ರಾಜಸ್ವಗಳ ಹಂಚಿಕೆಗಳಿಗೆ ಸಂಬಂಧಿಸಿದ ಉಪಬಂಧಗಳ ಅನ್ವಯ.......... 172

**355.** ಬಾಹ್ಯ ಆಕ್ರಮಣ ಮತ್ತು ಆಂತರಿಕ ಗಲಭೆಯಿಂದ ರಾಜ್ಯಗಳನ್ನು ಸಂರಕ್ಷಿಸುವುದು ಒಕ್ಕೂಟದ ಕರ್ತವ್ಯ.......... 172

**356.** ರಾಜ್ಯಗಳಲ್ಲಿ ಸಂವಿಧಾನಾತ್ಮಕ ವ್ಯವಸ್ಥೆಯು ವಿಫಲವಾದ ಸಂದರ್ಭದಲ್ಲಿ ಉಪಬಂಧಗಳು.......... 172–174

**357.** 356ನೆಯ ಅನುಚ್ಛೇದದ ಮೇರೆಗೆ ಹೊರಡಿಸಿದ ಉದ್ಘೋಷಣೆಯ ಮೇರೆಗೆ ವಿಧಾಯೀ ಅಧಿಕಾರಗಳ ಚಲಾವಣೆ.......... 174–175

**358.** ತುರ್ತು ಪರಿಸ್ಥಿತಿಗಳಲ್ಲಿ 19ನೆಯ ಅನುಚ್ಛೇದದ ಉಪಬಂಧಗಳ ಅಮಾನತು.......... 175–176

**359.** ತುರ್ತುಪರಿಸ್ಥಿತಿಗಳಲ್ಲಿ ಭಾಗ-III ರಿಂದ ಪ್ರದತ್ತವಾದ ಹಕ್ಕುಗಳ ಜಾರಿಯ ಅಮಾನತು.......... 176–177

**359ಎ.** *[ನಿರಸಿತ]*.......... 177

**360.** ಹಣಕಾಸಿನ ತುರ್ತುಪರಿಸ್ಥಿತಿಗೆ ಸಂಬಂಧಿಸಿದ ಉಪಬಂಧಗಳು.......... 177–178


## ಭಾಗ– XIX

## ಸಂಕೀರ್ಣ


**361.** ರಾಷ್ಟ್ರಪತಿಗೆ ಮತ್ತು ರಾಜ್ಯಪಾಲರಿಗೆ ಹಾಗೂ ರಾಜಪ್ರಮುಖರಿಗೆ ಸಂರಕ್ಷಣೆ.......... 179

**361ಎ.** ಸಂಸತ್ತು ಮತ್ತು ರಾಜ್ಯ ವಿಧಾನಮಂಡಲಗಳ ವ್ಯವಹರಣೆಗಳ ಪ್ರಕಟಣೆಯ ಸಂರಕ್ಷಣೆ.......... 179–180

**361ಬಿ.** ಲಾಭಪ್ರದ ರಾಜಕೀಯ ಹುದ್ದೆಗೆ ನೇಮಕಕ್ಕೆ ಅನರ್ಹತೆ.......... 180

**362.** *[ನಿರಸಿತ]*........................................................................... 180

**363.** ಕೆಲವು ಕೌಲುಗಳು, ಒಪ್ಪಂದಗಳು, ಮುಂತಾದವುಗಳಿಂದ ಉದ್ಭವಿಸುವ ವಿವಾದಗಳಲ್ಲಿ ನ್ಯಾಯಾಲಯಗಳ ಹಸ್ತಕ್ಷೇಪಕ್ಕೆ ಪ್ರತಿಷೇಧ................................ 181

**363ಎ.** ಭಾರತೀಯ ಸಂಸ್ಥಾನಗಳ ರಾಜರಿಗೆ ಕೊಟ್ಟಿರುವ ಮನ್ನಣೆಯು ನಿಂತುಹೋಗುವುದು ಮತ್ತು ರಾಜಧನಗಳನ್ನು ರದ್ದುಗೊಳಿಸುವುದು........................ 181

**364.** ದೊಡ್ಡ ಬಂದರುಗಳ ಮತ್ತು ವಿಮಾನ ನಿಲ್ದಾಣಗಳ ಬಗ್ಗೆ ವಿಶೇಷ ಉಪಬಂಧಗಳು 181–182

**365.** ಒಕ್ಕೂಟವು ನೀಡಿದ ನಿರ್ದೇಶನಗಳನ್ನು ಪಾಲಿಸಲು ಅಥವಾ ಅವುಗಳನ್ನು ಕಾರ್ಯಗತಗೊಳಿಸಲು ತಪ್ಪಿದುದರ ಪರಿಣಾಮ........................................ 182

**366.** ಪರಿಭಾಷೆಗಳು........................................................................... 182–186

**367.** ಅರ್ಥವಿವರಣೆ........................................................................... 186


## ಭಾಗ- XX

## ಸಂವಿಧಾನದ ತಿದ್ದುಪಡಿ


**368.** ಸಂವಿಧಾನವನ್ನು ತಿದ್ದುಪಡಿ ಮಾಡಲು ಸಂಸತ್ತಿನ ಅಧಿಕಾರ ಮತ್ತು ಅದಕ್ಕಾಗಿ ಪ್ರಕ್ರಿಯೆ........................................................................... 187–188


## ಭಾಗ-XXI

## ತಾತ್ಕಾಲಿಕ, ಮಧ್ಯಕಾಲೀನ ಮತ್ತು ವಿಶೇಷ ಉಪಬಂಧಗಳು


**369.** ರಾಜ್ಯಪಟ್ಟಿಯಲ್ಲಿನ ಕೆಲವು ವಿಷಯಗಳ ಬಗ್ಗೆ, ಅವು ಸಮವರ್ತಿ ಪಟ್ಟಿಯಲ್ಲಿನ ವಿಷಯಗಳಾಗಿದ್ದರೆ ಹೇಗೋ ಹಾಗೆ ಕಾನೂನುಗಳನ್ನು ರಚಿಸಲು ಸಂಸತ್ತಿಗೆ ತಾತ್ಕಾಲಿಕ ಅಧಿಕಾರ........................................................................... 189

**370.** ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಪಟ್ಟಂತೆ ತಾತ್ಕಾಲಿಕ ಉಪಬಂಧಗಳು.... 189–190

**371.** ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಿಗೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ........................................................................... 191

**371ಎ.** ನಾಗಾಲ್ಯಾಂಡ್ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ.......................... 191–194

**371ಬಿ.** ಅಸ್ಸಾಂ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ.................................. 194

**371ಸಿ.** ಮಣಿಪುರ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ............................... 195

**371ಡಿ.** ಆಂಧ್ರಪ್ರದೇಶ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧಗಳು.................... 195–198

**371ಇ.** ಆಂಧ್ರಪ್ರದೇಶದಲ್ಲಿ ಕೇಂದ್ರ ವಿಶ್ವವಿದ್ಯಾನಿಲಯದ ಸ್ಥಾಪನೆ.................................. 198

**371ಎಫ್.** ಸಿಕ್ಕಿಂ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧಗಳು.............................. 198–200

**371ಜಿ.** ಮಿಜೋರಾಂ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ............................ 200–201

**371ಹೆಚ್.** ಅರುಣಾಚಲ ಪ್ರದೇಶ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ................ 201

**371ಐ.** ಗೋವಾ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ.................................... 201

**372.** ಅಸ್ತಿತ್ವದಲ್ಲಿರುವ ಕಾನೂನುಗಳ ಮುಂದುವರಿಕೆ ಮತ್ತು ಅವುಗಳ ಅಳವಡಿಕೆ........... 201–203

**372ಎ.** ಕಾನೂನುಗಳನ್ನು ಅಳವಡಿಸಿಕೊಳ್ಳಲು ರಾಷ್ಟ್ರಪತಿಯ ಅಧಿಕಾರ............................ 203

**373.** ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿರುವ ವ್ಯಕ್ತಿಗಳ ಬಗ್ಗೆ ಕೆಲವು ಸಂದರ್ಭಗಳಲ್ಲಿ ಆದೇಶವನ್ನು ಮಾಡಲು ರಾಷ್ಟ್ರಪತಿಯ ಅಧಿಕಾರ.......... 203

**374.** ಫೆಡರಲ್ ನ್ಯಾಯಾಲಯದ ನ್ಯಾಯಾಧೀಶರ ಬಗ್ಗೆ ಮತ್ತು ಫೆಡರಲ್ ನ್ಯಾಯಾಲಯದಲ್ಲಿ ಅಥವಾ ಸಾಮ್ರಾಟನ ಪರಿಷತ್ತಿನ ಮುಂದೆ ಇತ್ಯರ್ಥದಲ್ಲಿರುವ ವ್ಯವಹರಣೆಗಳ ಬಗ್ಗೆ ಉಪಬಂಧಗಳು.......... 203–204

**375.** ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು ನ್ಯಾಯಾಲಯಗಳು, ಪ್ರಾಧಿಕಾರಗಳು ಮತ್ತು ಅಧಿಕಾರಿಗಳು ಕಾರ್ಯನಿರ್ವಹಿಸುವುದನ್ನು ಮುಂದುವರಿಸುವುದು.......... 204

**376.** ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಬಗ್ಗೆ ಉಪಬಂಧಗಳು.......... 204–205

**377.** ಭಾರತದ ಲೆಕ್ಕ ನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನ ಬಗ್ಗೆ ಉಪಬಂಧಗಳು.......... 205

**378.** ಲೋಕಸೇವಾ ಆಯೋಗಗಳ ಬಗ್ಗೆ ಉಪಬಂಧಗಳು.......... 205

**378ಎ.** ಆಂಧ್ರಪ್ರದೇಶದ ವಿಧಾನಸಭೆಯ ಅವಧಿಯ ಬಗ್ಗೆ ವಿಶೇಷ ಉಪಬಂಧ.......... 205

**379–391.** *[ನಿರಸಿತ]*.......... 206

**392.** ತೊಂದರೆಗಳನ್ನು ನಿವಾರಿಸಲು ರಾಷ್ಟ್ರಪತಿಯ ಅಧಿಕಾರ.......... 206


## ಭಾಗ- XXII

## ಚಿಕ್ಕ ಹೆಸರು, ಪ್ರಾರಂಭ [ಹಿಂದಿಯಲ್ಲಿ ಅಧಿಕೃತ ಪಾಠ] ಮತ್ತು ನಿರಸನಗಳು


**393.** ಚಿಕ್ಕಹೆಸರು.......... 207

**394.** ಪ್ರಾರಂಭ.......... 207

**394ಎ.** ಹಿಂದಿಭಾಷೆಯಲ್ಲಿ ಅಧಿಕೃತ ಪಾಠ.......... 207

**395.** ನಿರಸನಗಳು.......... 207


## ಅನುಸೂಚಿಗಳು

**ಮೊದಲನೆಯ ಅನುಸೂಚಿ**


I. ರಾಜ್ಯಗಳು.......... 208–213

II. ಒಕ್ಕೂಟರಾಜ್ಯ ಕ್ಷೇತ್ರಗಳು.......... 213–214


**ಎರಡನೆಯ ಅನುಸೂಚಿ**


**ಭಾಗ – ಎ.** ರಾಷ್ಟ್ರಪತಿಯ ಮತ್ತು ರಾಜ್ಯಗಳ ರಾಜ್ಯಪಾಲರ ಬಗ್ಗೆ ಉಪಬಂಧಗಳು.......... 215

**ಭಾಗ – ಬಿ.** *[ನಿರಸಿತ]*.......... 215

**ಭಾಗ – ಸಿ.** ಲೋಕಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ ರಾಜ್ಯಸಭೆಯ ಸಭಾಪತಿ ಮತ್ತು ಉಪಸಭಾಪತಿ ಮತ್ತು ವಿಧಾನಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ, ಹಾಗೂ ಒಂದು ರಾಜ್ಯದ ವಿಧಾನಪರಿಷತ್ತಿನ ಸಭಾಪತಿ ಮತ್ತು ಉಪಸಭಾಪತಿ ಇವರಿಗೆ ಸಂಬಂಧಿಸಿದ ಉಪಬಂಧಗಳು.......... 216

**ಭಾಗ – ಡಿ.** ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚನ್ಯಾಯಾಲಯಗಳ ನ್ಯಾಯಾಧೀಶರ ಬಗ್ಗೆ ಉಪಬಂಧಗಳು.......... 216–219

**ಭಾಗ – ಇ.** ಭಾರತದ ಲೆಕ್ಕನಿಯಂತ್ರಕ – ಹಾಗೂ – ಮಹಾ ಲೆಕ್ಕಪರಿಶೋಧಕನ ಬಗ್ಗೆ ಉಪಬಂಧಗಳು.......... 219

सत्यमेव जयते

# ಭಾರತದ ಸಂವಿಧಾನ

## ಪ್ರಸ್ತಾವನೆ

**ಭಾರತದ ಜನಗಳಾದ ನಾವು** ಭಾರತವನ್ನು ಒಂದು [1][**ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ**] ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;

ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ **"ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ"** ಎಂಬ ಪದಗಳ ಬದಲಾಗಿ (3-1-1977ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3-1-1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

## ಭಾಗ - I

## ಒಕ್ಕೂಟ ಮತ್ತು ಅದರ ರಾಜ್ಯಕ್ಷೇತ್ರ

**1. ಒಕ್ಕೂಟದ ಹೆಸರು ಮತ್ತು ರಾಜ್ಯಕ್ಷೇತ್ರ:-** (1) ಇಂಡಿಯಾ, ಅರ್ಥಾತ್ ಭಾರತವು, ರಾಜ್ಯಗಳ ಒಂದು ಒಕ್ಕೂಟವಾಗಿರತಕ್ಕದ್ದು.

[1][(2) ಅದರ ರಾಜ್ಯಗಳು ಮತ್ತು ಅವುಗಳ ರಾಜ್ಯಕ್ಷೇತ್ರಗಳು ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂಥವುಗಳು ಆಗಿರತಕ್ಕದ್ದು.]

(3) ಭಾರತದ ರಾಜ್ಯಕ್ಷೇತ್ರವು -

(ಎ) ರಾಜ್ಯಗಳ ರಾಜ್ಯಕ್ಷೇತ್ರಗಳನ್ನು;

[2][(ಬಿ) ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಒಕ್ಕೂಟ ರಾಜ್ಯಕ್ಷೇತ್ರಗಳನ್ನು; ಮತ್ತು]

(ಸಿ) ಆರ್ಜಿಸಬಹುದಾದಂಥ ಇತರ ರಾಜ್ಯಕ್ಷೇತ್ರಗಳನ್ನು

- ಒಳಗೊಂಡಿರತಕ್ಕದ್ದು.

**2. ನೂತನ ರಾಜ್ಯಗಳ ಸೇರ್ಪಡೆ ಅಥವಾ ಸ್ಥಾಪನೆ:-** ಸಂಸತ್ತು ಕಾನೂನಿನ ಮೂಲಕ ಸೂಕ್ತವೆಂದು ತೋರುವ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ನೂತನ ರಾಜ್ಯಗಳನ್ನು ಒಕ್ಕೂಟಕ್ಕೆ ಸೇರಿಸಿಕೊಳ್ಳಬಹುದು ಅಥವಾ ನೂತನ ರಾಜ್ಯಗಳನ್ನು ಸ್ಥಾಪಿಸಬಹುದು.

[3]2ಎ. *[ಒಕ್ಕೂಟದೊಂದಿಗೆ ಸಿಕ್ಕಿಂ ಸಹಯುಕ್ತವಾಗಿರತಕ್ಕದ್ದು.] 1975ನೆಯ ಇಸವಿಯ ಸಂವಿಧಾನದ (ಮೂವತ್ತಾರನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೇರೆಗೆ (26-4-1975ರಿಂದ ಜಾರಿಗೆ ಬರುವಂತೆ) ನಿರಸಿತವಾಗಿದೆ.*

**3. ನೂತನ ರಾಜ್ಯಗಳ ರಚನೆ ಮತ್ತು ಈಗಿರುವ ರಾಜ್ಯಗಳ ಪ್ರದೇಶಗಳ, ಸರಹದ್ದುಗಳ ಅಥವಾ ಹೆಸರುಗಳ ಬದಲಾವಣೆ:-** ಸಂಸತ್ತು ಕಾನೂನಿನ ಮೂಲಕ -

(ಎ) ಯಾವುದೇ ರಾಜ್ಯದಿಂದ ಯಾವುದೇ ರಾಜ್ಯಕ್ಷೇತ್ರವನ್ನು ಪ್ರತ್ಯೇಕಿಸುವುದರಿಂದಾಗಲಿ ಅಥವಾ ಎರಡು ಅಥವಾ ಹೆಚ್ಚು ರಾಜ್ಯಗಳನ್ನು ಅಥವಾ ರಾಜ್ಯಗಳ ಭಾಗಗಳನ್ನು ಒಂದುಗೂಡಿಸುವುದರಿಂದಾಗಲಿ ಅಥವಾ ಒಂದು ರಾಜ್ಯದ ಯಾವುದಾದರೂ ಭಾಗಕ್ಕೆ ಯಾವುದಾದರೂ ಕ್ಷೇತ್ರವನ್ನು ಸೇರಿಸುವುದರಿಂದಾಗಲಿ ಒಂದು ಹೊಸ ರಾಜ್ಯವನ್ನು ರಚಿಸಬಹುದು;

(ಬಿ) ಯಾವುದೇ ರಾಜ್ಯದ ಪ್ರದೇಶವನ್ನು ಹೆಚ್ಚಿಸಬಹುದು;

(ಸಿ) ಯಾವುದೇ ರಾಜ್ಯದ ಪ್ರದೇಶವನ್ನು ಕಡಿಮೆ ಮಾಡಬಹುದು;

(ಡಿ) ಯಾವುದೇ ರಾಜ್ಯದ ಸರಹದ್ದುಗಳನ್ನು ಬದಲಾಯಿಸಬಹುದು;

(ಇ) ಯಾವುದೇ ರಾಜ್ಯದ ಹೆಸರನ್ನು ಬದಲಾಯಿಸಬಹುದು:

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಮೂಲ (2)ನೆಯ ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 2ನೆಯ ಪ್ರಕರಣದ ಮೂಲಕ ಮೂಲ (ಬಿ) ಉಪಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. 1974ನೆಯ ಇಸವಿಯ ಸಂವಿಧಾನ (ಮೂವತ್ತೈದನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಅನುಚ್ಛೇದ 2ಎಯನ್ನು (1.3.1975 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿತ್ತು.

[1][ಪರಂತು, ಈ ಉದ್ದೇಶಕ್ಕಾಗಿ ಯಾವುದೇ ವಿಧೇಯಕವನ್ನು, ರಾಷ್ಟ್ರಪತಿಯ ಶಿಫಾರಸ್ಸಿನ ಮೇಲಲ್ಲದೆ ಮತ್ತು ಆ ವಿಧೇಯಕದಲ್ಲಿ ಅಡಕವಾದ ಪ್ರಸ್ತಾವವು [2] * * * * ರಾಜ್ಯಗಳ ಪೈಕಿ ಯಾವುದೇ ರಾಜ್ಯದ ಪ್ರದೇಶದ, ಸರಹದ್ದುಗಳ ಅಥವಾ ಹೆಸರಿನ ಮೇಲೆ ಪರಿಣಾಮಬೀರುವಲ್ಲಿ, ಆ ರಾಜ್ಯದ ವಿಧಾನಮಂಡಲವು, ಉಲ್ಲೇಖದಲ್ಲಿ ನಿರ್ದಿಷ್ಟಪಡಿಸಬಹುದಾದ ಅವಧಿಯೊಳಗೆ ಅಥವಾ ರಾಷ್ಟ್ರಪತಿಯು ಕೊಡಬಹುದಾದ ಇನ್ನೂ ಹೆಚ್ಚಿನ ಅವಧಿಯೊಳಗೆ ಅದರ ಬಗ್ಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು, ರಾಷ್ಟ್ರಪತಿಯು ಆ ವಿಧೇಯಕವನ್ನು ಆ ವಿಧಾನಮಂಡಲಕ್ಕೆ ಕಳುಹಿಸಿರುವ ಹೊರತು ಮತ್ತು ಹಾಗೆ ನಿರ್ದಿಷ್ಟಪಡಿಸಿದ ಅವಧಿಯು ಅಥವಾ ಕೊಟ್ಟಿರತಕ್ಕಂಥ ಹೆಚ್ಚಿನ ಅವಧಿಯು ಮುಕ್ತಾಯವಾದ ಹೊರತು, ಸಂಸತ್ತಿನ ಯಾವುದೇ ಸದನದಲ್ಲಿ ಮಂಡಿಸತಕ್ಕದ್ದಲ್ಲ.]

[3][**ವಿವರಣೆ I.**– ಈ ಅನುಚ್ಛೇದದಲ್ಲಿ (ಎ) ಯಿಂದ (ಇ) ವರೆಗಿನ ಖಂಡಗಳಲ್ಲಿರುವ "ರಾಜ್ಯ" ಎಂಬ ಪದವು ಒಕ್ಕೂಟ ರಾಜ್ಯಕ್ಷೇತ್ರವನ್ನು ಒಳಗೊಳ್ಳುತ್ತದೆ; ಆದರೆ ಪರಂತುಕದಲ್ಲಿನ "ರಾಜ್ಯ" ಎಂಬ ಪದವು ಒಕ್ಕೂಟ ರಾಜ್ಯಕ್ಷೇತ್ರವನ್ನು ಒಳಗೊಳ್ಳುವುದಿಲ್ಲ.

**ವಿವರಣೆ II.**– (ಎ) ಖಂಡದಿಂದ ಸಂಸತ್ತಿಗೆ ಪ್ರದತ್ತವಾದ ಅಧಿಕಾರವು, ಯಾವುದೇ ರಾಜ್ಯದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಒಂದು ಭಾಗವನ್ನು ಇತರ ಯಾವುದೇ ರಾಜ್ಯಕ್ಕೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸೇರಿಸಿ ಒಂದು ನೂತನ ರಾಜ್ಯವನ್ನು ಅಥವಾ ಒಂದು ನೂತನ ಒಕ್ಕೂಟ ರಾಜ್ಯಕ್ಷೇತ್ರವನ್ನು ರಚಿಸುವಂಥ ಅಧಿಕಾರವನ್ನು ಒಳಗೊಳ್ಳುತ್ತದೆ.]

**4. ಎರಡನೆಯ ಮತ್ತು ಮೂರನೆಯ ಅನುಚ್ಛೇದಗಳ ಮೇರೆಗೆ ಮಾಡಲಾದ ಕಾನೂನುಗಳು, ಮೊದಲನೆಯ ಮತ್ತು ನಾಲ್ಕನೆಯ ಅನುಸೂಚಿಗಳ ತಿದ್ದುಪಡಿಯ ಬಗ್ಗೆ ಮತ್ತು ಪೂರಕ, ಪ್ರಾಸಂಗಿಕ ಮತ್ತು ಆನುಷಂಗಿಕ ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸುವುದು:**– (1) 2ನೆಯ ಅನುಚ್ಛೇದದಲ್ಲಿ ಅಥವಾ 3ನೆಯ ಅನುಚ್ಛೇದದಲ್ಲಿ ಉಲ್ಲೇಖಿಸಲಾದ ಯಾವುದೇ ಕಾನೂನು ಆ ಕಾನೂನಿನ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಮೊದಲನೆಯ ಮತ್ತು ನಾಲ್ಕನೆಯ ಅನುಸೂಚಿಗಳ ತಿದ್ದುಪಡಿಗೆ ಅವಶ್ಯವಾಗಬಹುದಾದಂಥ ಉಪಬಂಧಗಳನ್ನು ಒಳಗೊಂಡಿರತಕ್ಕದ್ದು ಮತ್ತು (ಅಂಥ ಕಾನೂನಿನ ಪರಿಣಾಮಕ್ಕೆ ಒಳಗಾಗಿರುವ ರಾಜ್ಯಕ್ಕೆ ಅಥವಾ ರಾಜ್ಯಗಳಿಗೆ ಸಂಸತ್ತಿನಲ್ಲಿನ ಹಾಗೂ ಅಂಥ ರಾಜ್ಯದ ವಿಧಾನಮಂಡಲದಲ್ಲಿನ ಅಥವಾ ರಾಜ್ಯಗಳ ವಿಧಾನಮಂಡಲಗಳಲ್ಲಿನ ಪ್ರಾತಿನಿಧ್ಯಕ್ಕೆ ಸಂಬಂಧಿಸಿದ ಉಪಬಂಧಗಳು ಒಳಗೊಂಡು) ಸಂಸತ್ತು ಅವಶ್ಯವೆಂದು ಭಾವಿಸಬಹುದಾದಂಥ ಪೂರಕ, ಪ್ರಾಸಂಗಿಕ ಮತ್ತು ಆನುಷಂಗಿಕ ಉಪಬಂಧಗಳು ಸಹ ಆ ಕಾನೂನಿನಲ್ಲಿ ಒಳಗೊಂಡಿರಬಹುದು.

(2) ಹಿಂದೆ ಹೇಳಿದಂಥ ಯಾವುದೇ ಕಾನೂನನ್ನು, 368ನೆಯ ಅನುಚ್ಛೇದದ ಉದ್ದೇಶಗಳಿಗಾಗಿ, ಈ ಸಂವಿಧಾನದ ಒಂದು ತಿದ್ದುಪಡಿಯೆಂದು ಭಾವಿಸತಕ್ಕದ್ದಲ್ಲ.

---

1. 1955ನೆಯ ಇಸವಿಯ ಸಂವಿಧಾನ (ಐದನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಮೂಲ ಪರಂತುಕಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಅಥವಾ (ಬಿ) ಭಾಗದಲ್ಲಿ ನಿರ್ದಿಷ್ಟಪಡಿಸಿರುವ" ಎಂಬ ಪದಗಳನ್ನು ಮತ್ತು ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.
3. 1966ನೆಯ ಇಸವಿಯ ಸಂವಿಧಾನ (ಹದಿನೆಂಟನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

## ಭಾಗ – II

## ನಾಗರಿಕತ್ವ

**5. ಸಂವಿಧಾನದ ಪ್ರಾರಂಭದಲ್ಲಿ ನಾಗರಿಕತ್ವ:–** ಈ ಸಂವಿಧಾನದ ಪ್ರಾರಂಭದಲ್ಲಿ ಭಾರತದ ರಾಜ್ಯಕ್ಷೇತ್ರದಲ್ಲಿ ಅಧಿವಾಸವುಳ್ಳ ಮತ್ತು–

(ಎ) ಭಾರತದ ರಾಜ್ಯಕ್ಷೇತ್ರದಲ್ಲಿ ಹುಟ್ಟಿರುವ; ಅಥವಾ

(ಬಿ) ತನ್ನ ತಾಯಿಯಾಗಲಿ, ತಂದೆಯಾಗಲಿ ಭಾರತದ ರಾಜ್ಯಕ್ಷೇತ್ರದಲ್ಲಿ ಹುಟ್ಟಿದ್ದ; ಅಥವಾ

(ಸಿ) ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಐದು ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಕಾಲದಿಂದ ಭಾರತದ ರಾಜ್ಯಕ್ಷೇತ್ರದಲ್ಲಿ ಸಾಮಾನ್ಯವಾಗಿ ನಿವಾಸಿಯಾಗಿರುವ

– ಪ್ರತಿಯೊಬ್ಬ ವ್ಯಕ್ತಿಯೂ ಭಾರತದ ನಾಗರಿಕನಾಗಿರತಕ್ಕದ್ದು.

**6. ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದಿರುವ ಕೆಲವು ವ್ಯಕ್ತಿಗಳ ನಾಗರಿಕತ್ವದ ಹಕ್ಕುಗಳು:–** 5ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ಈಗ ಪಾಕಿಸ್ತಾನದಲ್ಲಿ ಸೇರಿರುವ ರಾಜ್ಯಕ್ಷೇತ್ರದಿಂದ ಭಾರತ ರಾಜ್ಯಕ್ಷೇತ್ರಕ್ಕೆ ವಲಸೆ ಬಂದಿರುವ ಯಾರೇ ವ್ಯಕ್ತಿಯು –

(ಎ) ಅವನಾಗಲಿ, ಅವನ ತಾಯಿ ಅಥವಾ ತಂದೆಯಾಗಲಿ ಅಥವಾ ಅವನ ಅಜ್ಜಿ ಅಥವಾ ತಾತನಾಗಲಿ (ಮೂಲತಃ ಅಧಿನಿಯಮಿಸಿದಂತೆ) ಭಾರತ ಸರ್ಕಾರ ಅಧಿನಿಯಮ, 1935ರಲ್ಲಿ ಪರಿಭಾಷಿಸಿರುವಂತೆ ಭಾರತದಲ್ಲಿ ಹುಟ್ಟಿದ್ದರೆ; ಮತ್ತು

(ಬಿ) (i) ಅಂಥ ವ್ಯಕ್ತಿಯು 1948ನೆಯ ಇಸವಿಯ ಜುಲೈ ತಿಂಗಳ ಹತ್ತೊಂಬತ್ತನೆಯ ತಾರೀಖಿಗಿಂತ ಮುಂಚಿತವಾಗಿ ಹಾಗೆ ವಲಸೆ ಬಂದಿದ್ದ ಸಂದರ್ಭದಲ್ಲಿ, ತಾನು ವಲಸೆ ಬಂದ ತಾರೀಖಿನಿಂದ ಭಾರತದ ರಾಜ್ಯಕ್ಷೇತ್ರದಲ್ಲಿ ಸಾಮಾನ್ಯವಾಗಿ ನಿವಾಸಿಯಾಗಿದ್ದರೆ; ಅಥವಾ

(ii) ಅಂಥ ವ್ಯಕ್ತಿಯು 1948ನೆಯ ಇಸವಿ ಜುಲೈ ತಿಂಗಳ ಹತ್ತೊಂಬತ್ತನೆಯ ತಾರೀಖಿನ ದಿನ ಅಥವಾ ಆ ತರುವಾಯ, ಹಾಗೆ ವಲಸೆ ಬಂದಿದ್ದ ಸಂದರ್ಭದಲ್ಲಿ, ತನ್ನನ್ನು ಭಾರತದ ನಾಗರಿಕನೆಂದು ನೋಂದಾಯಿಸಿಕೊಳ್ಳುವಂತೆ ಆ ಕಾರ್ಯಕ್ಕಾಗಿ ಡೊಮಿನಿಯನ್ ಆಫ್ ಇಂಡಿಯಾ ಸರ್ಕಾರದಿಂದ ನೇಮಕಗೊಂಡಿರುವ ಅಧಿಕಾರಿಗೆ ಈ ಸಂವಿಧಾನದ ಪ್ರಾರಂಭಕ್ಕೆ ಮೊದಲು, ಆ ಸರ್ಕಾರವು ನಿಯಮಿಸಿರುವಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ಆ ಅಧಿಕಾರಿಯು ಅವನನ್ನು ಆ ರೀತಿಯಾಗಿ ನೋಂದಾಯಿಸಿಕೊಂಡಿದ್ದರೆ

– ಈ ಸಂವಿಧಾನವು ಪ್ರಾರಂಭವಾದಂದಿನಿಂದ, ಅವನನ್ನು ಭಾರತದ ನಾಗರಿಕನೆಂಬುದಾಗಿ ಭಾವಿಸತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು, ಅವನ ಅರ್ಜಿಯ ತಾರೀಖಿಗೆ ನಿಕಟಪೂರ್ವದಲ್ಲಿ ಕನಿಷ್ಠ ಪಕ್ಷ ಆರು ತಿಂಗಳ ಕಾಲ ಭಾರತದ ರಾಜ್ಯಕ್ಷೇತ್ರದ ನಿವಾಸಿಯಾಗಿಲ್ಲದಿದ್ದರೆ, ಅವನನ್ನು ಹಾಗೆ ನೋಂದಾಯಿಸಿಕೊಳ್ಳತಕ್ಕದ್ದಲ್ಲ.

**7. ಪಾಕಿಸ್ತಾನಕ್ಕೆ ವಲಸೆಹೋದ ಕೆಲವು ವ್ಯಕ್ತಿಗಳ ನಾಗರಿಕತ್ವದ ಹಕ್ಕುಗಳು:–** 5ನೆಯ ಮತ್ತು 6ನೆಯ ಅನುಚ್ಛೇದಗಳಲ್ಲಿ ಏನೇ ಇದ್ದಾಗ್ಯೂ, 1947ನೆಯ ಇಸವಿ ಮಾರ್ಚ್ ತಿಂಗಳ ಮೊದಲನೆಯ ತಾರೀಖಿನ ತರುವಾಯ ಭಾರತದ ರಾಜ್ಯಕ್ಷೇತ್ರದಿಂದ ಈಗ ಪಾಕಿಸ್ತಾನದಲ್ಲಿ ಸೇರಿರುವ ರಾಜ್ಯಕ್ಷೇತ್ರಕ್ಕೆ ವಲಸೆ ಹೋದ ಯಾರೇ ವ್ಯಕ್ತಿಯನ್ನು ಭಾರತದ ನಾಗರಿಕನೆಂಬುದಾಗಿ ಭಾವಿಸತಕ್ಕದ್ದಲ್ಲ:

ಪರಂತು, ಈಗ ಪಾಕಿಸ್ತಾನದಲ್ಲಿ ಸೇರಿರುವ ರಾಜ್ಯಕ್ಷೇತ್ರಕ್ಕೆ ಹಾಗೆ ವಲಸೆ ಹೋಗಿದ್ದು, ಮತ್ತೆ ನೆಲೆಸುವುದಕ್ಕಾಗಿ ಅಥವಾ ಖಾಯಂ ಆಗಿ ಹಿಂತಿರುಗುವುದಕ್ಕಾಗಿ ಯಾವುದೇ ಕಾನೂನಿನ ಪ್ರಾಧಿಕಾರದ ಮೂಲಕ ಅಥವಾ ಅದರ ಮೇರೆಗೆ ಕೊಡಲಾದ ರಹದಾರಿಯ ಪ್ರಕಾರ ಭಾರತದ ರಾಜ್ಯಕ್ಷೇತ್ರಕ್ಕೆ ವಾಪಸ್ಸು ಬಂದ ಯಾವ ವ್ಯಕ್ತಿಗೇ ಆಗಲೀ, ಈ ಅನುಚ್ಛೇದದಲ್ಲಿ ಹೇಳಿರುವುದು ಯಾವುದೂ ಅನ್ವಯಿಸತಕ್ಕದ್ದಲ್ಲ ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯನ್ನು 6ನೆಯ ಅನುಚ್ಛೇದದ (ಬಿ) ಖಂಡದ ಉದ್ದೇಶಗಳಿಗಾಗಿ 1948ನೆಯ ಇಸವಿ ಜುಲೈ ತಿಂಗಳ ಹತ್ತೊಂಬತ್ತನೆಯ ತಾರೀಖಿನ ತರುವಾಯ ಭಾರತದ ರಾಜ್ಯಕ್ಷೇತ್ರಕ್ಕೆ ವಲಸೆ ಬಂದವನೆಂದು ಭಾವಿಸತಕ್ಕದ್ದು.

**8. ಭಾರತದ ಹೊರಗೆ ವಾಸಿಸುತ್ತಿರುವ ಭಾರತೀಯ ಮೂಲದ ಕೆಲವು ವ್ಯಕ್ತಿಗಳ ನಾಗರಿಕತ್ವದ ಹಕ್ಕುಗಳು:–** 5ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ಯಾರೇ ವ್ಯಕ್ತಿಯು ತಾನಾಗಲಿ ಅಥವಾ ತನ್ನ ತಾಯಿ ಅಥವಾ ತಂದೆಯಾಗಲಿ ಅಥವಾ ತನ್ನ ಅಜ್ಜಿ ಅಥವಾ ತಾತನಾಗಲಿ (ಮೂಲತಃ ಅಧಿನಿಯಮಿಸಲಾದಂತೆ) ಭಾರತ ಸರ್ಕಾರ ಅಧಿನಿಯಮ, 1935ರಲ್ಲಿ ಪರಿಭಾಷಿತವಾಗಿರುವಂತೆ ಭಾರತದಲ್ಲಿ ಹುಟ್ಟಿದ್ದು ಭಾರತದ ಹೊರಗಿನ ದೇಶವೆಂದು ಪರಿಭಾಷಿತವಾಗಿರುವಂಥ ಯಾವುದೇ ದೇಶದಲ್ಲಿ ಸಾಮಾನ್ಯವಾಗಿ ವಾಸಿಸುತ್ತಿದ್ದರೆ, ಅಂಥ ವ್ಯಕ್ತಿಯು ಡೊಮಿನಿಯನ್ ಆಫ್ ಇಂಡಿಯಾ ಸರ್ಕಾರವು ಅಥವಾ ಭಾರತ ಸರ್ಕಾರವು ನಿಯಮಿಸಿದ ನಮೂನೆಯಲ್ಲಿ ಮತ್ತು ರೀತಿಯಲ್ಲಿ, ತಾನು ತತ್ಕಾಲದಲ್ಲಿ ವಾಸಿಸುತ್ತಿರುವ ದೇಶದಲ್ಲಿನ ಭಾರತದ ರಾಜತಾಂತ್ರಿಕ ಪ್ರತಿನಿಧಿಗೆ ಅಥವಾ ಕಾನ್ಸುಲರ್ ಪ್ರತಿನಿಧಿಗೆ, ಈ ಸಂವಿಧಾನದ ಪ್ರಾರಂಭಕ್ಕೆ ಮುಂಚಿತವಾಗಿ ಆಗಲಿ ಅಥವಾ ತರುವಾಯ ಆಗಲಿ ಅರ್ಜಿಯನ್ನು ಸಲ್ಲಿಸಿ, ಆ ಪ್ರತಿನಿಧಿಯಿಂದ ತಾನು ಭಾರತದ ನಾಗರಿಕನೆಂದು ನೋಂದಾಯಿಸಿಕೊಂಡಿದ್ದರೆ, ಅಂಥ ವ್ಯಕ್ತಿಯನ್ನು ಭಾರತದ ನಾಗರಿಕನೆಂಬುದಾಗಿ ಭಾವಿಸತಕ್ಕದ್ದು.

**9. ಸ್ವಯಿಚ್ಛೆಯಿಂದ ವಿದೇಶಿ ರಾಜ್ಯದ ನಾಗರಿಕತ್ವವನ್ನು ಪಡೆದವರು ಭಾರತದ ನಾಗರಿಕರಲ್ಲ:–** ಯಾರೇ ವ್ಯಕ್ತಿಯು ಸ್ವಯಿಚ್ಛೆಯಿಂದ ಯಾವುದೇ ವಿದೇಶಿ ರಾಜ್ಯದ ನಾಗರಿಕತ್ವವನ್ನು ಪಡೆದಿದ್ದರೆ, 5ನೆಯ ಅನುಚ್ಛೇದದ ಆಧಾರದ ಮೇಲೆ ಅವನು ಭಾರತದ ನಾಗರಿಕನಾಗತಕ್ಕದ್ದಲ್ಲ ಅಥವಾ 6ನೆಯ ಅನುಚ್ಛೇದದ ಅಥವಾ 8ನೆಯ ಅನುಚ್ಛೇದದ ಆಧಾರದ ಮೇಲೆ ಅವನನ್ನು ಭಾರತದ ನಾಗರಿಕನೆಂದು ಭಾವಿಸತಕ್ಕದ್ದಲ್ಲ.

**10. ನಾಗರಿಕತ್ವದ ಹಕ್ಕುಗಳ ಮುಂದುವರಿಕೆ:–** ಈ ಭಾಗದಲ್ಲಿ ಹಿಂದೆ ಹೇಳಿರುವ ಯಾವುದೇ ಉಪಬಂಧದ ಮೇರೆಗೆ ಭಾರತದ ನಾಗರಿಕನಾಗಿರುವ ಅಥವಾ ಭಾರತದ ನಾಗರಿಕನೆಂದು ಭಾವಿಸಲಾಗಿರುವ ಪ್ರತಿಯೊಬ್ಬ ವ್ಯಕ್ತಿಯೂ, ಸಂಸತ್ತು ಮಾಡಬಹುದಾದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ಭಾರತದ ನಾಗರಿಕನಾಗಿ ಮುಂದುವರಿಯತಕ್ಕದ್ದು.

**11. ಸಂಸತ್ತು ನಾಗರಿಕತ್ವದ ಹಕ್ಕನ್ನು ಕಾನೂನಿನ ಮೂಲಕ ವಿನಿಯಮಿಸುವುದು:–** ಈ ಭಾಗದಲ್ಲಿ ಹಿಂದೆ ಹೇಳಿರುವ ಉಪಬಂಧಗಳಲ್ಲಿ ಇರುವುದು ಯಾವುದೂ, ನಾಗರಿಕತ್ವದ ಆರ್ಜನೆಯ ಮತ್ತು ಸಮಾಪ್ತಿಯ ಬಗ್ಗೆ ಮತ್ತು ನಾಗರಿಕತ್ವಕ್ಕೆ ಸಂಬಂಧಪಟ್ಟ ಇತರ ಎಲ್ಲಾ ವಿಷಯಗಳ ಬಗ್ಗೆ ಯಾವುದೇ ಉಪಬಂಧವನ್ನು ಮಾಡಲು ಸಂಸತ್ತಿಗಿರುವ ಅಧಿಕಾರವನ್ನು ಅಲ್ಪೀಕರಿಸತಕ್ಕದ್ದಲ್ಲ.

# ಭಾಗ – III

## ಮೂಲಭೂತ ಹಕ್ಕುಗಳು

### ಸಾಮಾನ್ಯ

**12. ಪರಿಭಾಷೆ:–** ಈ ಭಾಗದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, "ರಾಜ್ಯ" ಎಂಬ ಪದವು ಭಾರತದ ಸರ್ಕಾರವನ್ನು ಮತ್ತು ಸಂಸತ್ತನ್ನು ಮತ್ತು ರಾಜ್ಯಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ರಾಜ್ಯದ ಸರ್ಕಾರವನ್ನು ಮತ್ತು ವಿಧಾನಮಂಡಲವನ್ನು ಹಾಗೂ ಭಾರತದ ರಾಜ್ಯಕ್ಷೇತ್ರದೊಳಗಿರುವ ಅಥವಾ ಭಾರತ ಸರ್ಕಾರದ ನಿಯಂತ್ರಣದಲ್ಲಿರುವ ಎಲ್ಲ ಸ್ಥಳೀಯ ಪ್ರಾಧಿಕಾರಗಳನ್ನು ಅಥವಾ ಇತರ ಪ್ರಾಧಿಕಾರಗಳನ್ನು ಒಳಗೊಳ್ಳುತ್ತದೆ.

**13. ಮೂಲಭೂತ ಹಕ್ಕುಗಳಿಗೆ ಅಸಂಗತವಾದ ಅಥವಾ ಅವುಗಳನ್ನು ಅಲ್ಪೀಕರಿಸುವಂಥ ಕಾನೂನುಗಳು:–** (1) ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಭಾರತದ ರಾಜ್ಯಕ್ಷೇತ್ರದಲ್ಲಿ ಜಾರಿಯಲ್ಲಿರುವ ಎಲ್ಲಾ ಕಾನೂನುಗಳು ಈ ಭಾಗದ ಉಪಬಂಧಗಳಿಗೆ ಅಸಂಗತವಾಗಿರುವಷ್ಟರ ಮಟ್ಟಿಗೆ ಶೂನ್ಯವಾಗತಕ್ಕದ್ದು.

(2) ಈ ಭಾಗದಿಂದ ಪ್ರದತ್ತವಾದ ಹಕ್ಕುಗಳನ್ನು ಕಸಿದುಕೊಳ್ಳುವ ಅಥವಾ ಮೊಟಕುಗೊಳಿಸುವ ಯಾವುದೇ ಕಾನೂನನ್ನು ರಾಜ್ಯವು ಮಾಡತಕ್ಕದ್ದಲ್ಲ ಮತ್ತು ಈ ಖಂಡವನ್ನು ಉಲ್ಲಂಘಿಸಿ ಮಾಡಲಾದ ಯಾವುದೇ ಕಾನೂನು, ಆ ಉಲ್ಲಂಘನೆಯಷ್ಟರ ಮಟ್ಟಿಗೆ ಶೂನ್ಯವಾಗತಕ್ಕದ್ದು.

(3) ಈ ಅನುಚ್ಛೇದದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಕಾನೂನು" ಎಂಬುದು ಯಾವುದೇ ಅಧ್ಯಾದೇಶ, ಆದೇಶ, ಉಪವಿಧಿ, ನಿಯಮ, ವಿನಿಯಮ, ಅಧಿಸೂಚನೆ ಅಥವಾ ಭಾರತದ ರಾಜ್ಯಕ್ಷೇತ್ರದಲ್ಲಿ ಕಾನೂನಿನ ಬಲವುಳ್ಳ ರೂಢಿ ಅಥವಾ ಆಚರಣೆಯನ್ನು ಒಳಗೊಳ್ಳುತ್ತದೆ;

(ಬಿ) "ಜಾರಿಯಲ್ಲಿರುವ ಕಾನೂನುಗಳು" ಎಂಬುದು ಭಾರತದ ರಾಜ್ಯಕ್ಷೇತ್ರದಲ್ಲಿನ ಯಾವುದೇ ವಿಧಾನಮಂಡಲದಿಂದ ಅಥವಾ ಇತರ ಸಕ್ಷಮ ಪ್ರಾಧಿಕಾರದಿಂದ ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಅಂಗೀಕೃತವಾಗಿದ್ದ ಅಥವಾ ಮಾಡಲಾಗಿದ್ದ ಮತ್ತು ಈ ಹಿಂದೆ ನಿರಸಿತವಾಗಿರದ ಕಾನೂನುಗಳನ್ನು, ಅಂಥ ಯಾವುದೇ ಕಾನೂನು ಅಥವಾ ಅವುಗಳ ಯಾವುದೇ ಭಾಗವು, ಆಗ ಎಲ್ಲ ಪ್ರದೇಶಗಳಲ್ಲಿ ಅಥವಾ ನಿರ್ದಿಷ್ಟ ಪ್ರದೇಶಗಳಲ್ಲಿ ಜಾರಿಯಲ್ಲಿ ಇಲ್ಲದಿದ್ದಾಗ್ಯೂ, ಒಳಗೊಳ್ಳುತ್ತದೆ.

[1][(4) ಈ ಅನುಚ್ಛೇದದಲ್ಲಿ ಇರುವುದು ಯಾವುದೂ, 368ನೆಯ ಅನುಚ್ಛೇದದ ಮೇರೆಗೆ ಮಾಡಲಾದ ಈ ಸಂವಿಧಾನದ ಯಾವುದೇ ತಿದ್ದುಪಡಿಗೆ ಅನ್ವಯವಾಗತಕ್ಕದ್ದಲ್ಲ.]

### ಸಮಾನತೆಯ ಹಕ್ಕು

**14. ಕಾನೂನಿನ ಮುಂದೆ ಸಮಾನತೆ:–** ಭಾರತದ ರಾಜ್ಯಕ್ಷೇತ್ರದಲ್ಲಿ ಯಾರೇ ವ್ಯಕ್ತಿಗೆ ಕಾನೂನಿನ ಮುಂದೆ ಸಮಾನತೆಯನ್ನು ಅಥವಾ ಕಾನೂನುಗಳಿಂದ ಸಮಾನ ಸಂರಕ್ಷಣೆಯನ್ನು ರಾಜ್ಯವು ನಿರಾಕರಿಸತಕ್ಕದ್ದಲ್ಲ.

**15. ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರಗಳ ಮೇಲೆ ತಾರತಮ್ಯದ ನಿಷೇಧ:–** (1) ರಾಜ್ಯವು ಯಾರೇ ನಾಗರಿಕನ ವಿರುದ್ಧ ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳದ ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾವುದೇ ತಾರತಮ್ಯವನ್ನು ಮಾಡತಕ್ಕದ್ದಲ್ಲ.

---

1. 1971ನೆಯ ಇಸವಿಯ ಸಂವಿಧಾನ (ಇಪ್ಪತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

(2) ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಇವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾರೇ ನಾಗರಿಕನು,-

(ಎ) ಅಂಗಡಿಗಳು, ಸಾರ್ವಜನಿಕ ಉಪಾಹಾರ ಗೃಹಗಳು, ಹೋಟೆಲುಗಳು ಮತ್ತು ಸಾರ್ವಜನಿಕ ಮನೋರಂಜನ ಸ್ಥಳಗಳಿಗೆ ಪ್ರವೇಶಿಸುವ ಸಂಬಂಧದಲ್ಲಿ; ಅಥವಾ

(ಬಿ) ಪೂರ್ಣವಾಗಿ ಅಥವಾ ಭಾಗಶಃ ರಾಜ್ಯನಿಧಿಗಳಿಂದ ಪೋಷಿತವಾದ ಅಥವಾ ಸಾರ್ವಜನಿಕರ ಉಪಯೋಗಕ್ಕಾಗಿ ಸಮರ್ಪಿತವಾದ ಬಾವಿಗಳನ್ನು, ಕೆರೆಗಳನ್ನು, ಸ್ನಾನಘಟ್ಟಗಳನ್ನು, ರಸ್ತೆಗಳನ್ನು ಮತ್ತು ಸಾರ್ವಜನಿಕರು ಸೇರುವ ಸ್ಥಳಗಳನ್ನು ಉಪಯೋಗಿಸುವ ಸಂಬಂಧದಲ್ಲಿ

- ಯಾವುದೇ ಅಸಮರ್ಥತೆಗೆ, ಹೊಣೆಗಾರಿಕೆಗೆ, ನಿರ್ಬಂಧಕ್ಕೆ ಅಥವಾ ಷರತ್ತಿಗೆ ಒಳಪಟ್ಟಿರತಕ್ಕದ್ದಲ್ಲ.

(3) ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಹೆಂಗಸರು ಮತ್ತು ಮಕ್ಕಳಿಗಾಗಿ ವಿಶೇಷ ಉಪಬಂಧವನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

[1][(4) ಈ ಅನುಚ್ಛೇದದಲ್ಲಿ ಅಥವಾ 29ನೆಯ ಅನುಚ್ಛೇದದ (2)ನೆಯ ಖಂಡದಲ್ಲಿ ಇರುವುದು ಯಾವುದೂ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ಯಾವುವೇ ವರ್ಗಗಳ ಪುರೋಭಿವೃದ್ಧಿಗಾಗಿ ಅಥವಾ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಸಲುವಾಗಿ ರಾಜ್ಯವು ಯಾವುದೇ ವಿಶೇಷ ಉಪಬಂಧವನ್ನು ಮಾಡದಂತೆ ಪ್ರತಿಬಂಧಿಸತಕ್ಕದ್ದಲ್ಲ.]

[2][(5) ಈ ಅನುಚ್ಛೇದದಲ್ಲಿ ಅಥವಾ 19ನೇ ಅನುಚ್ಛೇದದ (1)ನೇ ಖಂಡದ (ಜಿ) ಉಪಖಂಡದಲ್ಲಿರುವುದಾವುದೂ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ಯಾವುವೇ ವರ್ಗಗಳ ಪುರೋಭಿವೃದ್ಧಿಗಾಗಿ ಅಥವಾ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಸಲುವಾಗಿ ಕಾನೂನಿನ ಮೂಲಕ ಯಾವುದೇ ವಿಶೇಷ ಉಪಬಂಧಗಳನ್ನು ಮಾಡದಂತೆ, ಆ ವಿಶೇಷ ಉಪಬಂಧಗಳು 30ನೇ ಅನುಚ್ಛೇದದ (1)ನೇ ಖಂಡದಲ್ಲಿ ಹೇಳಲಾದ ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳನ್ನು ಹೊರತುಪಡಿಸಿ ರಾಜ್ಯದಿಂದ ಅನುದಾನ ಪಡೆದಿರುವ ಅಥವಾ ಅನುದಾನ ಪಡೆಯದಿರುವ ಖಾಸಗಿ ಶೈಕ್ಷಣಿಕ ಸಂಸ್ಥೆಗಳೂ ಸೇರಿದಂತೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಸಂಬಂಧಿಸಿರುವಷ್ಟರ ಮಟ್ಟಿಗೆ, ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.]

**16. ಸಾರ್ವಜನಿಕ ನಿಯೋಜನೆಯ ವಿಷಯದಲ್ಲಿ ಸಮಾನಾವಕಾಶ:-** (1) ರಾಜ್ಯದ ಅಧೀನದಲ್ಲಿರುವ ಯಾವುದೇ ಪದಕ್ಕೆ ಸಂಬಂಧಿಸಿದಂತೆ ನಿಯೋಜನೆ ಅಥವಾ ನೇಮಕದ ವಿಷಯದಲ್ಲಿ ಎಲ್ಲ ನಾಗರಿಕರಿಗೂ ಸಮಾನ ಅವಕಾಶವಿರತಕ್ಕದ್ದು.

(2) ಧರ್ಮ, ಮೂಲವಂಶ, ಜಾತಿ, ಲಿಂಗ, ಸಂತತಿ, ಜನ್ಮಸ್ಥಳ, ನಿವಾಸದ ಅಥವಾ ಇವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾರೇ ನಾಗರಿಕನು ರಾಜ್ಯದ ಅಧೀನದಲ್ಲಿರುವ ಯಾವುದೇ ನಿಯೋಜನೆಗೆ ಅಥವಾ ಪದಕ್ಕೆ ಸಂಬಂಧಿಸಿದಂತೆ ಅನರ್ಹತೆಗೆ ಒಳಗಾಗತಕ್ಕದ್ದಲ್ಲ ಅಥವಾ ಅವನ ವಿರುದ್ಧ ತಾರತಮ್ಯವನ್ನು ಮಾಡತಕ್ಕದ್ದಲ್ಲ.

(3) ಈ ಅನುಚ್ಛೇದದಲ್ಲಿ ಇರುವುದು ಯಾವುದೂ, [3][ಒಂದು ರಾಜ್ಯ ಸರ್ಕಾರದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಅಧೀನದಲ್ಲಿರುವ ಅಥವಾ ಯಾವುದೇ ರಾಜ್ಯದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದೊಳಗಿರುವ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಧೀನದಲ್ಲಿರುವ ಯಾವುದೇ ವರ್ಗದ ಅಥವಾ ವರ್ಗಗಳ ಪದಕ್ಕೆ, ನಿಯೋಜನೆಗೆ ಅಥವಾ ನೇಮಕಕ್ಕೆ ಸಂಬಂಧಿಸಿದಂತೆ ಅಂಥ ನಿಯೋಜನೆಗೆ ಅಥವಾ ನೇಮಕಕ್ಕೆ ಮುಂಚೆ ಆ ರಾಜ್ಯದಲ್ಲಿ ಅಥವಾ ಆ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ನಿವಾಸದ ಯಾವುದೇ ಅಗತ್ಯತೆಯನ್ನು] ನಿಯಮಿಸುವ ಯಾವುದೇ ಕಾನೂನನ್ನು ಮಾಡದಂತೆ ಸಂಸತ್ತನ್ನು ಪ್ರತಿಬಂಧಿಸತಕ್ಕದ್ದಲ್ಲ.

---

1. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 2005 ನೇ ಇಸವಿಯ ಸಂವಿಧಾನ (ತೊಂಬತ್ತೂರನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (20.1.2006 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯಲ್ಲಿ ಉಲ್ಲೇಖಿತವಾಗಿರುವ ಯಾವುದೊಂದು ರಾಜ್ಯದ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಧೀನದಲ್ಲಿರುವ, ಯಾವುದೇ ವರ್ಗದ ಅಥವಾ ವರ್ಗಗಳ ನೌಕರಿಗೆ ಅಥವಾ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವ ವಿಚಾರದಲ್ಲಿ ಆ ನೌಕರಿಗೆ ಅಥವಾ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವುದಕ್ಕೆ ಮುಂಚೆ ಆ ರಾಜ್ಯದಲ್ಲಿ ನಿವಾಸಿಸಿರಬೇಕಾದ ಸಂಗತಿಯ ಸಂಬಂಧವಾಗಿ" ಎಂಬ ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(4) ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಯಾವುದೇ ಹಿಂದುಳಿದ ವರ್ಗದ ನಾಗರಿಕರು ರಾಜ್ಯದ ಅಧೀನದಲ್ಲಿರುವ ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವನ್ನು ಹೊಂದಿಲ್ಲವೆಂದು ರಾಜ್ಯವು ಅಭಿಪ್ರಾಯಪಟ್ಟಲ್ಲಿ ಅಂಥವರಿಗಾಗಿ ನೇಮಕಗಳನ್ನು ಅಥವಾ ಹುದ್ದೆಗಳನ್ನು ಮೀಸಲಿಡುವುದಕ್ಕಾಗಿ ಯಾವುದೇ ಉಪಬಂಧವನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

[1][(4ಎ) ಈ ಅನುಚ್ಛೇದದಲ್ಲಿರುವುದು ಯಾವುದೂ, ರಾಜ್ಯದ ಅಧೀನದಲ್ಲಿರುವ ಸೇವೆಗಳಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳವರು ಸಾಕಷ್ಟು ಪ್ರಾತಿನಿಧ್ಯವನ್ನು ಹೊಂದಿಲ್ಲವೆಂದು ರಾಜ್ಯವು ಅಭಿಪ್ರಾಯಪಟ್ಟಲ್ಲಿ, ರಾಜ್ಯದ ಅಧೀನದ ಸೇವೆಗಳಲ್ಲಿನ [2][ಯಾವುದೇ ವರ್ಗದ ಅಥವಾ ವರ್ಗಗಳ ಹುದ್ದೆಗಳಿಗೆ, ತತ್ಪರಿಣಾಮದ ಜ್ಯೇಷ್ಠತೆಯೊಂದಿಗೆ, ಬಡ್ತಿ ವಿಷಯದಲ್ಲಿ] ಅಂಥವರಿಗಾಗಿ ಮೀಸಲಾತಿಯ ಯಾವುದೇ ಉಪಬಂಧವನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.]

[3][(4ಬಿ) ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಒಂದು ವರ್ಷದಲ್ಲಿ, (4)ನೇ ಖಂಡದ ಅಥವಾ (4ಎ) ಖಂಡದ ಮೇರೆಗೆ ಮಾಡಿದ ಯಾವುದೇ ಮೀಸಲಾತಿ ಉಪಬಂಧಕ್ಕನುಸಾರವಾಗಿ, ಆ ವರ್ಷದಲ್ಲಿ ಭರ್ತಿ ಮಾಡುವುದಕ್ಕಾಗಿ ಯಾವುವೇ ಹುದ್ದೆಗಳನ್ನು ಮೀಸಲಾಗಿಟ್ಟಿದ್ದು, ಭರ್ತಿ ಮಾಡದೆ ಇರುವ ಆ ಹುದ್ದೆಗಳನ್ನು ಯಾವುದೇ ಮುಂಬರುವ ವರ್ಷದಲ್ಲಿ ಅಥವಾ ವರ್ಷಗಳಲ್ಲಿ ಭರ್ತಿ ಮಾಡಬೇಕಾದ ಪ್ರತ್ಯೇಕ ಹುದ್ದೆಗಳ ವರ್ಗವೆಂದು ಪರಿಗಣಿಸಲು ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ ಮತ್ತು ಅಂಥ ವರ್ಗದ ಖಾಲಿ ಹುದ್ದೆಗಳನ್ನು, ಯಾವ ವರ್ಷದಲ್ಲಿ ಅವುಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತದೆಯೋ ಆ ವರ್ಷದಲ್ಲಿನ ಹುದ್ದೆಗಳೊಂದಿಗೆ, ಆ ವರ್ಷದ ಒಟ್ಟು ಸಂಖ್ಯೆಯ ಹುದ್ದೆಗಳ ಮೇಲಣ ಶೇ. 50ರ ಮೀಸಲಾತಿಯ ಪರಿಮಿತಿಯನ್ನು ನಿರ್ಧರಿಸುವಾಗ, ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.]

(5) ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಯಾವುದೇ ಧಾರ್ಮಿಕ ಅಥವಾ ಸಾಂಪ್ರದಾಯಿಕ ಸಂಸ್ಥೆಯ ವ್ಯವಹಾರಗಳಿಗೆ ಸಂಬಂಧಪಟ್ಟ ಪದಧಾರಕನು ಅಥವಾ ಆ ಸಂಸ್ಥೆಯ ಕಾರ್ಯನಿರ್ವಾಹಕ ಮಂಡಲಿಯ ಯಾರೇ ಸದಸ್ಯನು ಒಂದು ನಿರ್ದಿಷ್ಟ ಧರ್ಮವನ್ನು ಒಪ್ಪಿಕೊಂಡವನಾಗಿರತಕ್ಕದ್ದು ಅಥವಾ ಒಂದು ನಿರ್ದಿಷ್ಟ ಸಂಪ್ರದಾಯಕ್ಕೆ ಸೇರಿದವನಾಗಿರತಕ್ಕದ್ದು ಎಂಬ ಉಪಬಂಧವನ್ನು ಮಾಡುವ ಯಾವುದೇ ಕಾನೂನಿನ ಜಾರಿಗೆ ಬಾಧಕವಾಗತಕ್ಕದ್ದಲ್ಲ.

**17. ಅಸ್ಪೃಶ್ಯತೆಯ ನಿರ್ಮೂಲನ:–** "ಅಸ್ಪೃಶ್ಯತೆ"ಯನ್ನು ನಿರ್ಮೂಲನಗೊಳಿಸಲಾಗಿದೆ ಮತ್ತು ಯಾವುದೇ ರೂಪದಲ್ಲಿ ಅದರ ಆಚರಣೆಯನ್ನು ನಿಷೇಧಿಸಲಾಗಿದೆ. "ಅಸ್ಪೃಶ್ಯತೆ" ಯಿಂದ ಉದ್ಭವಿಸುವ ಯಾವುದೇ ಅಸಮರ್ಥತೆಯನ್ನು ಆಚರಣೆಗೆ ತರುವುದು ಕಾನೂನಿಗನುಸಾರವಾಗಿ ದಂಡನೀಯವಾದ ಅಪರಾಧವಾಗತಕ್ಕದ್ದು.

**18. ಬಿರುದುಗಳ ರದ್ದಿಯಾತಿ:–** (1) ರಾಜ್ಯವು ಸೇನಾ ಅಥವಾ ವಿದ್ಯಾ ಸಂಬಂಧವಾದ ಪ್ರಶಸ್ತಿಯಲ್ಲದ ಯಾವುದೇ ಬಿರುದನ್ನು ಪ್ರದಾನಮಾಡತಕ್ಕದ್ದಲ್ಲ.

(2) ಭಾರತದ ಯಾರೇ ನಾಗರಿಕನು ಯಾವುದೇ ವಿದೇಶಿ ರಾಜ್ಯದಿಂದ ಯಾವುದೇ ಬಿರುದನ್ನು ಸ್ವೀಕರಿಸತಕ್ಕದ್ದಲ್ಲ.

(3) ಭಾರತದ ನಾಗರಿಕನಲ್ಲದ ಯಾರೇ ವ್ಯಕ್ತಿಯು ರಾಜ್ಯದ ಅಧೀನದಲ್ಲಿನ ಯಾವುದೇ ಲಾಭದಾಯಕ ಅಥವಾ ನಂಬಿಕೆಯ ಪದದಲ್ಲಿರುವಾಗ ರಾಷ್ಟ್ರಪತಿಯ ಸಮ್ಮತಿಯಿಲ್ಲದೆ ಯಾವುದೇ ವಿದೇಶಿ ರಾಜ್ಯದಿಂದ ಯಾವುದೇ ಬಿರುದನ್ನು ಸ್ವೀಕರಿಸತಕ್ಕದ್ದಲ್ಲ.

(4) ರಾಜ್ಯದ ಅಧೀನದಲ್ಲಿನ ಯಾವುದೇ ಲಾಭದಾಯಕ ಅಥವಾ ನಂಬಿಕೆಯ ಪದದಲ್ಲಿರುವ ಯಾರೇ ವ್ಯಕ್ತಿಯು ರಾಷ್ಟ್ರಪತಿಯ ಸಮ್ಮತಿಯಿಲ್ಲದೆ ಯಾವುದೇ ವಿದೇಶಿ ರಾಜ್ಯದಿಂದ ಯಾವುದೇ ಪಾರಿತೋಷಕವನ್ನು, ಉಪಲಬ್ಧಿಯನ್ನು ಅಥವಾ ಯಾವುದೇ ವಿದೇಶಿ ರಾಜ್ಯದ ಅಧೀನದಲ್ಲಿನ ಯಾವುದೇ ವಿಧದ ಪದವನ್ನು ಸ್ವೀಕರಿಸತಕ್ಕದ್ದಲ್ಲ.

---

1. 1995ನೆಯ ಇಸವಿಯ ಸಂವಿಧಾನ (ಎಪ್ಪತ್ತೇಳನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 2001ನೇ ಇಸವಿಯ ಸಂವಿಧಾನ (ಎಂಬತ್ತೈದನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ (17.6.1995 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. 2000ದ ಇಸವಿಯ ಸಂವಿಧಾನ (ಎಂಬತ್ತೊಂದನೆಯ ತಿದ್ದುಪಡಿ) ಅಧಿನಿಯಮದ ಮೂಲಕ (9.6.2000 ದಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

## ಸ್ವಾತಂತ್ರ್ಯದ ಹಕ್ಕು

**19. ವಾಕ್ ಸ್ವಾತಂತ್ರ್ಯ, ಮುಂತಾದವುಗಳ ಬಗ್ಗೆ ಕೆಲವು ಹಕ್ಕುಗಳ ಸಂರಕ್ಷಣೆ:-** (1) ಸಮಸ್ತ ನಾಗರಿಕರೂ,-

(ಎ) ವಾಕ್ ಸ್ವಾತಂತ್ರ್ಯದ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ;

(ಬಿ) ಶಾಂತಿಯಿಂದ ಹಾಗೂ ನಿರಾಯುಧರಾಗಿ ಸಭೆ ಸೇರುವ;

(ಸಿ) ಸಂಸ್ಥೆಗಳನ್ನು ಅಥವಾ ಸಂಘಗಳನ್ನು ರಚಿಸುವ;

(ಡಿ) ಭಾರತದ ರಾಜ್ಯಕ್ಷೇತ್ರದಲ್ಲಿ ಅಬಾಧಿತವಾಗಿ ಸರ್ವತ್ರಸಂಚಾರ ಮಾಡುವ;

(ಇ) ಭಾರತದ ರಾಜ್ಯಕ್ಷೇತ್ರದ ಯಾವುದೇ ಭಾಗದಲ್ಲಿ ವಾಸಮಾಡುವ ಮತ್ತು ನೆಲೆಸುವ; [1][ಮತ್ತು]

[2] * * * * *

(ಜಿ) ಯಾವುದೇ ವೃತ್ತಿಯನ್ನು ನಡೆಸುವ ಅಥವಾ ಕಸುಬನ್ನು, ವ್ಯಾಪಾರವನ್ನು ಅಥವಾ ವ್ಯವಹಾರವನ್ನು ನಡೆಸುವ

– ಹಕ್ಕನ್ನು ಹೊಂದಿರತಕ್ಕದ್ದು.

[3][(2) (1)ನೆಯ ಖಂಡದ (ಎ) ಉಪಖಂಡದಲ್ಲಿ ಇರುವುದು ಯಾವುದೂ, [4][ಭಾರತದ ಸಾರ್ವಭೌಮತ್ವ ಮತ್ತು ಅಖಂಡತೆಯ,] ರಾಜ್ಯದ ಭದ್ರತೆಯ, ವಿದೇಶಿ ರಾಜ್ಯಗಳೊಡನೆ ಸ್ನೇಹಯುತ ಸಂಬಂಧಗಳ, ಸಾರ್ವಜನಿಕ ಸುವ್ಯವಸ್ಥೆಯ, ಸಭ್ಯತೆಯ ಅಥವಾ ನೈತಿಕತೆಯ ಹಿತದೃಷ್ಟಿಯಿಂದ ಅಥವಾ ನ್ಯಾಯಾಲಯದ ನಿಂದನೆಯ, ಮಾನನಷ್ಟದ ಅಥವಾ ಒಂದು ಅಪರಾಧದ ಚಿತಾವಣೆಯ ಸಂಬಂಧದಲ್ಲಿ ಅಸ್ತಿತ್ವದಲ್ಲಿರುವ ಯಾವುದೇ ಕಾನೂನು ಸದರಿ ಉಪಖಂಡದಿಂದ ಪ್ರದಾನ ಮಾಡಲಾಗಿರುವ ಹಕ್ಕನ್ನು ಚಲಾಯಿಸುವುದರ ಮೇಲೆ ಯುಕ್ತ ನಿರ್ಬಂಧಗಳನ್ನು ವಿಧಿಸುವಷ್ಟರ ಮಟ್ಟಿಗೆ ಅಂಥ ಕಾನೂನಿನ ಜಾರಿಯ ಮೇಲೆ ಪರಿಣಾಮ ಬೀರತಕ್ಕದ್ದಲ್ಲ ಅಥವಾ ಅಂಥ ಯುಕ್ತ ನಿರ್ಬಂಧಗಳನ್ನು ವಿಧಿಸುವ ಯಾವುದೇ ಕಾನೂನನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.]

(3) ಸದರಿ ಖಂಡದ (ಬಿ) ಉಪಖಂಡದಲ್ಲಿರುವುದು ಯಾವುದೂ, [4][ಭಾರತದ ಸಾರ್ವಭೌಮತ್ವ ಮತ್ತು ಅಖಂಡತೆಯ ಅಥವಾ] ಸಾರ್ವಜನಿಕ ಸುವ್ಯವಸ್ಥೆಯ ಹಿತದೃಷ್ಟಿಯಿಂದ ಸದರಿ ಉಪಖಂಡದಿಂದ ಪ್ರದಾನ ಮಾಡಲಾದ ಹಕ್ಕನ್ನು ಚಲಾಯಿಸುವುದರ ಮೇಲೆ ಅಸ್ತಿತ್ವದಲ್ಲಿರುವ ಯಾವುದೇ ಕಾನೂನು ಯುಕ್ತ ನಿರ್ಬಂಧಗಳನ್ನು ವಿಧಿಸುವಷ್ಟರ ಮಟ್ಟಿಗೆ ಅಂಥ ಕಾನೂನಿನ ಜಾರಿಯ ಮೇಲೆ ಯಾವುದೇ ಪರಿಣಾಮ ಬೀರತಕ್ಕದ್ದಲ್ಲ ಅಥವಾ ಅಂಥ ಯುಕ್ತ ನಿರ್ಬಂಧಗಳನ್ನು ವಿಧಿಸುವ ಯಾವುದೇ ಕಾನೂನನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

(4) ಸದರಿ ಖಂಡದ (ಸಿ) ಉಪಖಂಡದಲ್ಲಿರುವುದು ಯಾವುದೂ, [4][ಭಾರತದ ಸಾರ್ವಭೌಮತ್ವ ಮತ್ತು ಅಖಂಡತೆಯ ಅಥವಾ] ಸಾರ್ವಜನಿಕ ಸುವ್ಯವಸ್ಥೆಯ ಅಥವಾ ನೈತಿಕತೆಯ ಹಿತದೃಷ್ಟಿಯಿಂದ ಸದರಿ ಉಪಖಂಡದಿಂದ ಪ್ರದಾನ ಮಾಡಲಾದ ಹಕ್ಕನ್ನು ಚಲಾಯಿಸುವುದರ ಮೇಲೆ ಅಸ್ತಿತ್ವದಲ್ಲಿರುವ ಯಾವುದೇ ಕಾನೂನು ಯುಕ್ತ ನಿರ್ಬಂಧಗಳನ್ನು ವಿಧಿಸುವಷ್ಟರ ಮಟ್ಟಿಗೆ ಅಂಥ ಕಾನೂನಿನ ಜಾರಿಯ ಮೇಲೆ ಪರಿಣಾಮ ಬೀರತಕ್ಕದ್ದಲ್ಲ ಅಥವಾ ಅಂಥ ಯುಕ್ತ ನಿರ್ಬಂಧಗಳನ್ನು ವಿಧಿಸುವ ಯಾವುದೇ ಕಾನೂನನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

(5) ಸದರಿ ಖಂಡದ [5][(ಡಿ) ಮತ್ತು (ಇ) ಖಂಡಗಳಲ್ಲಿ] ಇರುವುದು ಯಾವುದೂ, ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಯಾವುದೇ ಅನುಸೂಚಿತ ಬುಡಕಟ್ಟುಗಳ ಹಿತರಕ್ಷಣೆಗಾಗಿ ಸದರಿ ಉಪಖಂಡಗಳಿಂದ ಪ್ರದಾನ ಮಾಡಲಾದ ಯಾವುವೇ ಹಕ್ಕುಗಳನ್ನು ಚಲಾಯಿಸುವುದರ ಮೇಲೆ ಅಸ್ತಿತ್ವದಲ್ಲಿರುವ ಯಾವುದೇ ಕಾನೂನು ಯುಕ್ತ ನಿರ್ಬಂಧಗಳನ್ನು ವಿಧಿಸುವಷ್ಟರ ಮಟ್ಟಿಗೆ ಅಂಥ ಕಾನೂನಿನ ಜಾರಿಯ ಮೇಲೆ ಪರಿಣಾಮ ಬೀರತಕ್ಕದ್ದಲ್ಲ ಅಥವಾ ಅಂಥ ಯುಕ್ತ ನಿರ್ಬಂಧಗಳನ್ನು ವಿಧಿಸುವ ಯಾವುದೇ ಕಾನೂನನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

---

1. 1978ನೇ ಇಸವಿಯ ಸಂವಿಧಾನ (ನಲವತ್ನಾಲ್ಕನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (20.6.1979 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 2ನೇ ಪ್ರಕರಣದ ಮೂಲಕ (20.6.1979 ರಿಂದ ಜಾರಿಗೆ ಬರುವಂತೆ) ಉಪಖಂಡ (ಎಫ್)ನ್ನು ಬಿಟ್ಟುಬಿಡಲಾಗಿದೆ.
3. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ (2)ನೆಯ ಖಂಡಕ್ಕೆ ಬದಲಾಗಿ (ಪೂರ್ವಾನ್ವಯ ಪರಿಣಾಮ ಸಹಿತವಾಗಿ) ಪ್ರತ್ಯಾಯೋಜಿಸಲಾಗಿದೆ.
4. 1963ನೆಯ ಇಸವಿಯ ಸಂವಿಧಾನ (ಹದಿನಾರನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
5. 1978ನೆಯ ಇಸವಿಯ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ದಿನಾಂಕ 20-6-1979ರಿಂದ ಜಾರಿಗೆ ಬರುವಂತೆ (ಡಿ), (ಇ) ಮತ್ತು (ಎಫ್) ಉಪಖಂಡಗಳ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(6) ಸದರಿ ಖಂಡದ (ಜಿ) ಉಪಖಂಡದಲ್ಲಿರುವುದು ಯಾವುದೂ, ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಉಪಖಂಡದಿಂದ ಪ್ರದಾನ ಮಾಡಲಾದ ಹಕ್ಕನ್ನು ಚಲಾಯಿಸುವುದರ ಮೇಲೆ ಅಸ್ತಿತ್ವದಲ್ಲಿರುವ ಯಾವುದೇ ಕಾನೂನು ಯುಕ್ತ ನಿರ್ಬಂಧಗಳನ್ನು ವಿಧಿಸುವಷ್ಟರ ಮಟ್ಟಿಗೆ ಅಂಥ ಕಾನೂನಿನ ಜಾರಿಯ ಮೇಲೆ ಪರಿಣಾಮ ಬೀರತಕ್ಕದ್ದಲ್ಲ ಅಥವಾ ಅಂಥ ಯುಕ್ತ ನಿರ್ಬಂಧಗಳನ್ನು ವಿಧಿಸುವ ಯಾವುದೇ ಕಾನೂನನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ ಮತ್ತು ವಿಶೇಷವಾಗಿ ಸದರಿ ಉಪಖಂಡದಲ್ಲಿರುವುದು ಯಾವುದೂ,-

(i) ಯಾವುದೇ ವೃತ್ತಿಯನ್ನು, ಕಸುಬನ್ನು, ವ್ಯಾಪಾರವನ್ನು ಅಥವಾ ವ್ಯವಹಾರವನ್ನು ನಡೆಸಲು ಅವಶ್ಯವಾದ ವೃತ್ತೀಯ ಅಥವಾ ತಾಂತ್ರಿಕ ಅರ್ಹತೆಗಳಿಗೆ; ಅಥವಾ

(ii) ಯಾವುದಾದರೂ ವ್ಯಾಪಾರವನ್ನು, ವ್ಯವಹಾರವನ್ನು, ಕೈಗಾರಿಕೆಯನ್ನು ಅಥವಾ ಸೇವೆಯನ್ನು, ರಾಜ್ಯವೇ ಆಗಲಿ ಅಥವಾ ರಾಜ್ಯದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನಿಗಮವೇ ಆಗಲಿ, ಪೂರ್ಣವಾಗಿ ಅಥವಾ ಭಾಗಶಃ ನಾಗರಿಕರನ್ನು ಸೇರಿಸಿಕೊಳ್ಳದೆ ಅಥವಾ ಅನ್ಯಥಾ ನಡೆಸಿಕೊಂಡು ಬರುವುದಕ್ಕೆ

- ಸಂಬಂಧಪಡುವಷ್ಟರ ಮಟ್ಟಿಗೆ ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಜಾರಿಯ ಮೇಲೆ [1][ಪರಿಣಾಮ ಬೀರತಕ್ಕದ್ದಲ್ಲ ಅಥವಾ ಅವುಗಳಿಗೆ ಸಂಬಂಧಪಟ್ಟಂತೆ ಯಾವುದೇ ಕಾನೂನನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.]

**20. ಅಪರಾಧಗಳ ಬಗ್ಗೆ ಅಪರಾಧಿಯೆಂದು ನಿರ್ಣಯಿಸುವ ಸಂಬಂಧದಲ್ಲಿ ಸಂರಕ್ಷಣೆ:-** (1) ಯಾವ ಕೃತ್ಯ ಎಸಗಿರುವುದನ್ನು ಅಪರಾಧವೆಂದು ಆರೋಪಿಸಲಾಗಿದೆಯೋ ಆ ಕೃತ್ಯವನ್ನು ಎಸಗಿದ ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಉಲ್ಲಂಘನೆ ಮಾಡಿದ ಯಾರೇ ವ್ಯಕ್ತಿಯನ್ನು ಆ ಅಪರಾಧದ ಬಗ್ಗೆ ಮಾತ್ರ ಅಪರಾಧಿಯೆಂದು ನಿರ್ಣಯಿಸತಕ್ಕದ್ದೇ ಹೊರತು ಮತ್ತಾವುದೇ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣಯಿಸತಕ್ಕದಲ್ಲ ಮತ್ತು ಆ ಅಪರಾಧವು ನಡೆದ ಕಾಲದಲ್ಲಿ ಜಾರಿಯಲ್ಲಿರತಕ್ಕ ಕಾನೂನಿನ ಮೇರೆಗೆ ವಿಧಿಸಬಹುದಾಗಿದ್ದ ದಂಡನೆಗಿಂತ ಹೆಚ್ಚಿನ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯನ್ನು ಒಂದೇ ಅಪರಾಧಕ್ಕಾಗಿ ಒಂದಕ್ಕಿಂತ ಹೆಚ್ಚು ಸಲ ಪ್ರಾಸಿಕ್ಯೂಷನ್‌ಗೆ ಗುರಿಪಡಿಸತಕ್ಕದ್ದಲ್ಲ ಹಾಗೂ ದಂಡಿಸತಕ್ಕದ್ದಲ್ಲ.

(3) ಯಾವುದೇ ಅಪರಾಧದ ಸಂಬಂಧದಲ್ಲಿ ಆರೋಪಿತನಾಗಿರುವ ಯಾರೇ ವ್ಯಕ್ತಿಯನ್ನು ತನ್ನ ವಿರುದ್ಧವಾಗಿ ತಾನೇ ಸಾಕ್ಷಿಯಾಗುವಂತೆ ಒತ್ತಾಯಿಸತಕ್ಕದ್ದಲ್ಲ.

**21. ಜೀವದ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಸಂರಕ್ಷಣೆ:-** ಕಾನೂನಿನ ಮೂಲಕ ಸ್ಥಾಪಿತವಾಗಿರುವ ಪ್ರಕ್ರಿಯೆಗೆ ಅನುಸಾರವಾಗಿ ಹೊರತು, ಯಾರೇ ವ್ಯಕ್ತಿಯ ಜೀವವನ್ನು ಅಥವಾ ವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡತಕ್ಕದ್ದಲ್ಲ.

[2][**21ಎ. ಶಿಕ್ಷಣದ ಹಕ್ಕು:-** ರಾಜ್ಯವು, ಕಾನೂನಿನ ಮೂಲಕ ತಾನು ನಿರ್ಧರಿಸಬಹುದಾದಂಥ ರೀತಿಯಲ್ಲಿ ಆರರಿಂದ ಹದಿನಾಲ್ಕು ವರ್ಷಗಳ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸತಕ್ಕದ್ದು.]

**22. ಕೆಲವು ಸಂದರ್ಭಗಳಲ್ಲಿ ದಸ್ತಗಿರಿಯಿಂದ ಮತ್ತು ಸ್ಥಾನಬದ್ಧತೆಯಿಂದ ಸಂರಕ್ಷಣೆ:-** (1) ದಸ್ತಗಿರಿಯಾದ ಯಾರೇ ವ್ಯಕ್ತಿಗೆ, ಅಂಥ ದಸ್ತಗಿರಿಯ ಕಾರಣಗಳನ್ನು ಆದಷ್ಟು ಬೇಗನೆ ತಿಳಿಸದೆ ಅವನನ್ನು ಅಭಿರಕ್ಷೆಯಲ್ಲಿ ತಡೆಹಿಡಿದಿರಿಸತಕ್ಕದ್ದಲ್ಲ ಮತ್ತು ತನಗೆ ಇಷ್ಟವಾದ ನ್ಯಾಯವಾದಿಯೊಡನೆ ಸಮಾಲೋಚಿಸುವ ಮತ್ತು ಅವನ ಮೂಲಕ ಪ್ರತಿರಕ್ಷಿಸಿಕೊಳ್ಳುವ ಹಕ್ಕನ್ನು ಆ ವ್ಯಕ್ತಿಗೆ ನಿರಾಕರಿಸತಕ್ಕದ್ದಲ್ಲ.

---

1. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 2002 ನೇ ಇಸವಿಯ ಸಂವಿಧಾನ (ಎಂಬತ್ತಾರನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (1.4.2010 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(2) ದಸ್ತಗಿರಿಯಾದ ಹಾಗೂ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಲಾದ ಪ್ರತಿಯೊಬ್ಬ ವ್ಯಕ್ತಿಯನ್ನು, ದಸ್ತಗಿರಿಯಾದ ಸ್ಥಳದಿಂದ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ಹೋಗುವುದಕ್ಕೆ ಅವಶ್ಯವಾದ ಕಾಲವನ್ನು ಹೊರತುಪಡಿಸಿ, ದಸ್ತಗಿರಿಯ ತರುವಾಯ ಇಪ್ಪತ್ತನಾಲ್ಕು ಗಂಟೆಗಳ ಅವಧಿಯೊಳಗಾಗಿ ಅತ್ಯಂತ ಸಮೀಪದ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟನಿಂದ ಅಧಿಕಾರವನ್ನು ಪಡೆಯದೆ ಅಂಥ ಯಾರೇ ವ್ಯಕ್ತಿಯನ್ನು ಸದರಿ ಅವಧಿಗಿಂತ ಹೆಚ್ಚಾಗಿ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸತಕ್ಕದ್ದಲ್ಲ.

(3) (1)ನೆಯ ಮತ್ತು (2)ನೆಯ ಖಂಡಗಳಲ್ಲಿ ಇರುವುದು ಯಾವುದೂ,-

(ಎ) ತತ್ಕಾಲದಲ್ಲಿ ಅನ್ಯದೇಶೀಯ ಶತ್ರುವಾಗಿರುವ ಯಾರೇ ವ್ಯಕ್ತಿಗೆ; ಅಥವಾ

(ಬಿ) ಪ್ರತಿಬಂಧಕ ಸ್ಥಾನಬದ್ಧತೆಗೆ ಅವಕಾಶ ಕಲ್ಪಿಸುವ ಯಾವುದೇ ಕಾನೂನಿನ ಮೇರೆಗೆ ದಸ್ತಗಿರಿಯಾದ ಅಥವಾ ತಡೆಹಿಡಿದಿರಿಸಲಾದ ಯಾರೇ ವ್ಯಕ್ತಿಗೆ

– ಅನ್ವಯಿಸತಕ್ಕದ್ದಲ್ಲ.

*(4) ಪ್ರತಿಬಂಧಕ ಸ್ಥಾನಬದ್ಧತೆಗೆ ಅವಕಾಶ ಕಲ್ಪಿಸುವ ಯಾವುದೇ ಕಾನೂನು ಯಾರೇ ವ್ಯಕ್ತಿಯನ್ನು,-

(ಎ) ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿರುವವರನ್ನು ಅಥವಾ ಆಗಿದ್ದವರನ್ನು ಅಥವಾ ಅಂಥ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಅರ್ಹತೆ ಪಡೆದಿರುವವರನ್ನು ಒಳಗೊಂಡ ಸಲಹಾ ಮಂಡಲಿಯು, ಸದರಿ ಮೂರು ತಿಂಗಳ ಅವಧಿಯು ಪೂರೈಸುವುದಕ್ಕೆ ಮುಂಚಿತವಾಗಿ, ತನ್ನ ಅಭಿಪ್ರಾಯದಲ್ಲಿ ಅಂಥ ಸ್ಥಾನಬದ್ಧತೆಗೆ ಸಾಕಷ್ಟು ಕಾರಣವಿರುವುದಾಗಿ ವರದಿ ಮಾಡಿದ ಸಂದರ್ಭದಲ್ಲಿ ಹೊರತು:

ಪರಂತು, ಈ ಉಪಖಂಡದಲ್ಲಿ ಇರುವುದು ಯಾವುದೂ, ಯಾರೇ ವ್ಯಕ್ತಿಯನ್ನು (7)ನೆಯ ಖಂಡದ (ಬಿ) ಉಪಖಂಡದ ಮೇರೆಗೆ, ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ನಿಯಮಿಸಲಾದ ಗರಿಷ್ಠ ಅವಧಿಯನ್ನು ಮೀರಿ ಸ್ಥಾನಬದ್ಧತೆಯಲ್ಲಿಡುವುದನ್ನು ಅಧಿಕೃತಗೊಳಿಸತಕ್ಕದ್ದಲ್ಲ; ಅಥವಾ

---

* 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (4)ನೇ ಖಂಡವನ್ನು ಈ ಮುಂದಿನಂತೆ ಪ್ರತ್ಯಾಯೋಜಿಸಲಾಗಿದೆ. (ಇದು ಇನ್ನೂ ಜಾರಿಗೆ ಬಂದಿರುವುದಿಲ್ಲ, ದಿನಾಂಕವನ್ನು ನಂತರ ಅಧಿಸೂಚಿಸಲಾಗುವುದು.)

"(4) ಪ್ರತಿಬಂಧಕ ಸ್ಥಾನಬದ್ಧತೆಗೆ ಅವಕಾಶ ಕಲ್ಪಿಸುವ ಯಾವುದೇ ಕಾನೂನು ಯಾರೇ ವ್ಯಕ್ತಿಯನ್ನು ಎರಡು ತಿಂಗಳುಗಳಿಗಿಂತಲೂ ಹೆಚ್ಚಿನ ಅವಧಿಯವರೆಗೆ, ಸಮುಚಿತ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯವರ ಶಿಫಾರಸುಗಳಿಗೆ ಅನುಸಾರವಾಗಿ ರಚಿತವಾದ ಸಲಹಾ ಮಂಡಲಿಯು ಸದರಿ ಎರಡು ತಿಂಗಳ ಅವಧಿಯನ್ನು ಪೂರೈಸುವುದಕ್ಕೆ ಮುಂಚಿತವಾಗಿ ತನ್ನ ಅಭಿಪ್ರಾಯದಲ್ಲಿ ಅಂಥ ಸ್ಥಾನಬದ್ಧತೆಗೆ ಸಾಕಷ್ಟು ಕಾರಣವಿರುವುದಾಗಿ ವರದಿ ಮಾಡಿರುವಾಗ ಹೊರತು ಹಾಗೆ ಸ್ಥಾನಬದ್ಧತೆಯಲ್ಲಿಡುವುದನ್ನು ಅಧಿಕೃತಗೊಳಿಸತಕ್ಕದ್ದಲ್ಲ:

ಪರಂತು, ಸಲಹಾ ಮಂಡಳಿಯು, ಅಧ್ಯಕ್ಷನನ್ನು ಮತ್ತು ಇಬ್ಬರಿಗಿಂತ ಕಡಿಮೆ ಇಲ್ಲದ ಇತರೆ ಇಬ್ಬರು ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ಅಧ್ಯಕ್ಷನು, ಸಮುಚಿತ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ಸೇವೆ ಸಲ್ಲಿಸುತ್ತಿರುವವರಾಗಿರತಕ್ಕದ್ದು ಮತ್ತು ಇತರ ಸದಸ್ಯರು ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಅಥವಾ ನಿವೃತ್ತ ನ್ಯಾಯಾಧೀಶರಾಗಿರತಕ್ಕದ್ದು:

ಮತ್ತೂ ಪರಂತು, ಈ ಖಂಡದಲ್ಲಿರುವುದು ಯಾವುದೂ, ಯಾರೇ ವ್ಯಕ್ತಿಯನ್ನು 7ನೇ ಖಂಡದ (ಎ) ಉಪಖಂಡದ ಮೇರೆಗೆ, ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ನಿಯಮಿಸಲಾದ ಗರಿಷ್ಠ ಅವಧಿಯನ್ನು ಮೀರಿ ಸ್ಥಾನಬದ್ಧತೆಯಲ್ಲಿಡುವುದನ್ನು ಅಧಿಕೃತಗೊಳಿಸತಕ್ಕದ್ದಲ್ಲ.

ವಿವರಣೆ:– ಈ ಖಂಡದಲ್ಲಿ "ಸಮುಚಿತ ಉಚ್ಚ ನ್ಯಾಯಾಲಯ" ಎಂದರೆ,–

(i) ಭಾರತ ಸರ್ಕಾರವು ಅಥವಾ ಆ ಸರ್ಕಾರಕ್ಕೆ ಅಧೀನನಾಗಿರುವ ಒಬ್ಬ ಅಧಿಕಾರಿಯು ಅಥವಾ ಪ್ರಾಧಿಕಾರವು ಮಾಡಿದ ಸ್ಥಾನಬದ್ಧತೆಯ ಆದೇಶಕ್ಕೆ ಅನುಸಾರವಾಗಿ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿ ಇಡುವ ಸಂದರ್ಭದಲ್ಲಿ, ದೆಹಲಿ ಒಕ್ಕೂಟ ರಾಜ್ಯಕ್ಷೇತ್ರದ ಉಚ್ಚ ನ್ಯಾಯಾಲಯ;

(ii) ಯಾವುದೇ ರಾಜ್ಯ ಸರ್ಕಾರವು (ಒಕ್ಕೂಟ ರಾಜ್ಯಕ್ಷೇತ್ರವಲ್ಲದ) ಮಾಡಿದ ಸ್ಥಾನಬದ್ಧತೆಯ ಒಂದು ಆದೇಶದ ಅನುಸಾರವಾಗಿ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿ ಇಡುವ ಸಂದರ್ಭದಲ್ಲಿ ಆ ರಾಜ್ಯದ ಉಚ್ಚ ನ್ಯಾಯಾಲಯ; ಮತ್ತು

(iii) ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಾಧಿಕಾರಿಯು ಅಥವಾ ಅಂಥ ಆಡಳಿತಾಧಿಕಾರಿಗೆ ಅಧೀನನಾದ ಅಧಿಕಾರಿಯು ಅಥವಾ ಪ್ರಾಧಿಕಾರಿಯು ಮಾಡಿದ ಸ್ಥಾನಬದ್ಧತೆಯ ಒಂದು ಆದೇಶದ ಅನುಸಾರವಾಗಿ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿ ಇಡುವ ಸಂದರ್ಭದಲ್ಲಿ ಈ ಬಗ್ಗೆ ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಬಹುದಾದಂಥ ಉಚ್ಚ ನ್ಯಾಯಾಲಯ.".

(ಬಿ) ಅಂಥ ವ್ಯಕ್ತಿಯನ್ನು (7)ನೆಯ ಖಂಡದ (ಎ) ಮತ್ತು (ಬಿ) ಉಪಖಂಡಗಳ ಮೇರೆಗೆ ಸಂಸತ್ತು ಮಾಡಿದ ಯಾವುದೇ ಕಾನೂನಿನ ಉಪಬಂಧಗಳಿಗನುಸಾರವಾಗಿ ಸ್ಥಾನಬದ್ಧತೆಯಲ್ಲಿ ಇಟ್ಟಿರುವ ಸಂದರ್ಭದಲ್ಲಿ ಹೊರತು

– ಮೂರು ತಿಂಗಳುಗಳಿಗಿಂತಲೂ ಹೆಚ್ಚಿನ ಅವಧಿಯವರೆಗೆ ಸ್ಥಾನಬದ್ಧತೆಯಲ್ಲಿಡುವುದನ್ನು ಅಧಿಕೃತಗೊಳಿಸತಕ್ಕದ್ದಲ್ಲ.

(5) ಪ್ರತಿಬಂಧಕ ಸ್ಥಾನಬದ್ಧತೆಗೆ ಅವಕಾಶ ಕಲ್ಪಿಸುವ ಯಾವುದೇ ಕಾನೂನಿನ ಮೇರೆಗೆ ಮಾಡಲಾದ ಆದೇಶಕ್ಕೆ ಅನುಸಾರವಾಗಿ ಯಾರೇ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಟ್ಟಿದ್ದರೆ, ಆ ಆದೇಶವನ್ನು ಮಾಡಿದ ಪ್ರಾಧಿಕಾರಿಯು ಆದಷ್ಟು ಬೇಗನೆ, ಆ ಆದೇಶವನ್ನು ಯಾವ ಆಧಾರದ ಮೇಲೆ ಮಾಡಲಾಯಿತೆಂಬುದನ್ನು ಆ ವ್ಯಕ್ತಿಗೆ ತಿಳಿಸತಕ್ಕದ್ದು ಮತ್ತು ಆ ಆದೇಶದ ವಿರುದ್ಧ ಶೀಘ್ರಾತಿಶೀಘ್ರವಾಗಿ ಮನವಿಯನ್ನು ಮಾಡಿಕೊಳ್ಳಲು ಆ ವ್ಯಕ್ತಿಗೆ ಅವಕಾಶ ಕೊಡತಕ್ಕದ್ದು.

(6) (5)ನೆಯ ಖಂಡದಲ್ಲಿ ಇರುವುದು ಯಾವುದೂ ಆ ಖಂಡದಲ್ಲಿ ಉಲ್ಲೇಖಿಸಿರುವ ಯಾವುದೇ ಆದೇಶವನ್ನು ಮಾಡುವ ಪ್ರಾಧಿಕಾರಿಯು, ಯಾವ ಸಂಗತಿಗಳನ್ನು ಬಹಿರಂಗಪಡಿಸುವುದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವೆಂದು ಅವನು ಪರ್ಯಾಲೋಚಿಸುತ್ತಾನೋ, ಆ ಸಂಗತಿಗಳನ್ನು ಬಹಿರಂಗಪಡಿಸುವಂತೆ ಅವನನ್ನು ಅಗತ್ಯಪಡಿಸತಕ್ಕದ್ದಲ್ಲ.

(7) ಸಂಸತ್ತು, ಕಾನೂನಿನ ಮೂಲಕ,–

*(ಎ) ಯಾವ ಸನ್ನಿವೇಶಗಳಲ್ಲಿ ಮತ್ತು ಯಾವ ವರ್ಗದ ಅಥವಾ ವರ್ಗಗಳ ಪ್ರಕರಣಗಳಲ್ಲಿ ಪ್ರತಿಬಂಧಕ ಸ್ಥಾನಬದ್ಧತೆಗೆ ಉಪಬಂಧ ಕಲ್ಪಿಸುವ ಯಾವುದೇ ಕಾನೂನಿನ ಮೇರೆಗೆ ಯಾರೇ ವ್ಯಕ್ತಿಯನ್ನು ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ (4)ನೆಯ ಖಂಡದ (ಎ) ಉಪಖಂಡದ ಉಪಬಂಧಗಳಿಗೆ ಅನುಸಾರವಾಗಿ ಸಲಹಾ ಮಂಡಲಿಯ ಅಭಿಪ್ರಾಯವನ್ನು ಪಡೆಯದೆ ಸ್ಥಾನಬದ್ಧತೆಯಲ್ಲಿ ಇಡಬಹುದು ಎಂಬುದನ್ನು ನಿಯಮಿಸಬಹುದು;

**(ಬಿ) ಪ್ರತಿಬಂಧಕ ಸ್ಥಾನಬದ್ಧತೆಗೆ ಉಪಬಂಧ ಕಲ್ಪಿಸುವ ಯಾವುದೇ ಕಾನೂನಿನ ಮೇರೆಗೆ ಯಾವ ವರ್ಗದ ಅಥವಾ ವರ್ಗಗಳ ಪ್ರಕರಣಗಳಲ್ಲಿ ಗರಿಷ್ಠ ಎಷ್ಟು ಅವಧಿಯವರೆಗೆ ಯಾರೇ ವ್ಯಕ್ತಿಯನ್ನು ಸ್ಥಾನಬದ್ಧತೆಯಲ್ಲಿಡಬಹುದೆಂಬುದನ್ನು ನಿಯಮಿಸಬಹುದು; ಮತ್ತು

(ಸಿ) ಸಲಹಾ ಮಂಡಲಿಯು ***[(4)ನೆಯ ಖಂಡದ (ಎ) ಉಪಖಂಡದ] ಮೇರೆಗೆ ನಡೆಸತಕ್ಕ ವಿಚಾರಣೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವನ್ನು ನಿಯಮಿಸಬಹುದು.

---

* 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ ಉಪಖಂಡ (ಎ)ಯನ್ನು ಬಿಟ್ಟುಬಿಡತಕ್ಕದ್ದು. (ಇದು ಇನ್ನೂ ಜಾರಿಗೆ ಬಂದಿರುವುದಿಲ್ಲ, ದಿನಾಂಕವನ್ನು ನಂತರ ಅಧಿಸೂಚಿಸಲಾಗುವುದು).

** 3ನೆಯ ಪ್ರಕರಣದ ಮೂಲಕ ಉಪಖಂಡ (ಬಿ)ಯನ್ನು ಉಪಖಂಡ (ಎ) ಎಂದು ಪುನರ್ ಅಕ್ಷರ ನೀಡಲಾಗಿದೆ. (ಇದು ಇನ್ನೂ ಜಾರಿಗೆ ಬಂದಿರುವುದಿಲ್ಲ, ದಿನಾಂಕವನ್ನು ನಂತರ ಅಧಿಸೂಚಿಸಲಾಗುವುದು).

*** 3ನೇ ಪ್ರಕರಣದ ಮೂಲಕ ಆವರಣದಲ್ಲಿರುವ ಪದಗಳು, ಅಕ್ಷರಗಳು ಮತ್ತು ಅಂಕಿಗಳನ್ನು "(4)ನೇ ಖಂಡದ"ಎಂದು ಪ್ರತ್ಯಾಯೋಜಿಸತಕ್ಕದ್ದು. (ಇದು ಇನ್ನೂ ಜಾರಿಗೆ ಬಂದಿರುವುದಿಲ್ಲ, ದಿನಾಂಕವನ್ನು ನಂತರ ಅಧಿಸೂಚಿಸಲಾಗುವುದು).

## ಶೋಷಣೆಯ ವಿರುದ್ಧ ಹಕ್ಕು

**23. ಮಾನವ ದುರ್ವ್ಯವಹಾರ ಮತ್ತು ಬಲಾತ್ಕಾರದ ದುಡಿಮೆಯ ನಿಷೇಧ:**- (1) ಮಾನವ ದುರ್ವ್ಯವಹಾರವನ್ನು ಮತ್ತು ಬೇಗಾರ ಮತ್ತು ಅದೇ ಸ್ವರೂಪದ ಇತರ ಬಲಾತ್ಕಾರದ ದುಡಿಮೆಗಳನ್ನು ನಿಷೇಧಿಸಲಾಗಿದೆ ಮತ್ತು ಈ ಉಪಬಂಧದ ಯಾವುದೇ ಉಲ್ಲಂಘನೆಯು ಕಾನೂನಿಗೆ ಅನುಸಾರವಾಗಿ ದಂಡನೀಯವಾದ ಅಪರಾಧವಾಗತಕ್ಕದ್ದು.

(2) ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಸಾರ್ವಜನಿಕ ಉದ್ದೇಶಗಳಿಗಾಗಿ ರಾಜ್ಯವು ಕಡ್ಡಾಯ ಸೇವೆಯನ್ನು ವಿಧಿಸುವುದನ್ನು ಪ್ರತಿಬಂಧಿಸತಕ್ಕದ್ದಲ್ಲ ಮತ್ತು ಅಂಥ ಸೇವೆಯನ್ನು ವಿಧಿಸುವಾಗ ರಾಜ್ಯವು ಧರ್ಮ, ಮೂಲವಂಶ, ಜಾತಿ ಅಥವಾ ವರ್ಗದ ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾವುದೇ ತಾರತಮ್ಯ ಮಾಡತಕ್ಕದ್ದಲ್ಲ.

**24. ಕಾರ್ಖಾನೆಗಳು, ಮುಂತಾದವುಗಳಲ್ಲಿ ಮಕ್ಕಳ ನಿಯೋಜನೆಗೆ ನಿಷೇಧ:**- ಹದಿನಾಲ್ಕು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಯಾವುದೇ ಮಗುವನ್ನು ಯಾವುದೇ ಕಾರ್ಖಾನೆಯಲ್ಲಿ ಅಥವಾ ಗಣಿಯಲ್ಲಿ ಕೆಲಸ ಮಾಡಲು ನಿಯೋಜಿಸತಕ್ಕದ್ದಲ್ಲ ಅಥವಾ ಇತರ ಯಾವುದೇ ಅಪಾಯಕರವಾದ ಉದ್ಯೋಗದಲ್ಲಿ ತೊಡಗಿಸತಕ್ಕದ್ದಲ್ಲ.

## ಧರ್ಮ ಸ್ವಾತಂತ್ರ್ಯದ ಹಕ್ಕು

**25. ಅಂತಃಸಾಕ್ಷಿ ಸ್ವಾತಂತ್ರ್ಯ ಮತ್ತು ಧರ್ಮದ ಅಬಾಧಿತ ಅವಲಂಬನೆ, ಆಚರಣೆ ಮತ್ತು ಪ್ರಚಾರ:**- (1) ಸಾರ್ವಜನಿಕ ಸುವ್ಯವಸ್ಥೆಗೆ, ನೈತಿಕತೆಗೆ ಮತ್ತು ಆರೋಗ್ಯಕ್ಕೆ ಹಾಗೂ ಈ ಭಾಗದ ಇತರ ಉಪಬಂಧಗಳಿಗೆ ಒಳಪಟ್ಟು ಎಲ್ಲಾ ವ್ಯಕ್ತಿಗಳು ಅಂತಃಸಾಕ್ಷಿ ಸ್ವಾತಂತ್ರ್ಯಕ್ಕೆ ಸಮಾನ ರೀತಿಯಲ್ಲಿ ಹಕ್ಕುಳ್ಳವರಾಗಿರುತ್ತಾರೆ ಹಾಗೂ ಅಬಾಧಿತವಾಗಿ ಧರ್ಮವನ್ನು ಅವಲಂಬಿಸುವುದಕ್ಕೆ, ಆಚರಿಸುವುದಕ್ಕೆ ಮತ್ತು ಪ್ರಚಾರ ಮಾಡುವುದಕ್ಕೆ ಹಕ್ಕುಳ್ಳವರಾಗಿರುತ್ತಾರೆ.

(2) ಈ ಅನುಚ್ಛೇದದಲ್ಲಿ ಇರುವುದು ಯಾವುದೂ,-

(ಎ) ಧಾರ್ಮಿಕ ಆಚರಣೆಯೊಂದಿಗೆ ಸಂಬಂಧ ಹೊಂದಿರಬಹುದಾದ ಯಾವುದೇ ಆರ್ಥಿಕ, ಹಣಕಾಸಿನ, ರಾಜಕೀಯ ಅಥವಾ ಇತರ ಲೌಕಿಕ ಚಟುವಟಿಕೆಯನ್ನು ನಿಯಂತ್ರಿಸುವ ಅಥವಾ ನಿರ್ಬಂಧಿಸುವ;

(ಬಿ) ಸಮಾಜ ಕಲ್ಯಾಣಕ್ಕಾಗಿ ಮತ್ತು ಸುಧಾರಣೆಗಾಗಿ ವ್ಯವಸ್ಥೆ ಮಾಡಲು ಅಥವಾ ಸಾರ್ವಜನಿಕ ಸ್ವರೂಪದ ಹಿಂದೂ ಧಾರ್ಮಿಕ ಸಂಸ್ಥೆಗಳಲ್ಲಿ ಹಿಂದೂಗಳ ಎಲ್ಲ ವರ್ಗಗಳಿಗೆ ಮತ್ತು ವಿಭಾಗಗಳಿಗೆ ಪ್ರವೇಶಾವಕಾಶ ಮಾಡಿಕೊಡುವ

- ಸಲುವಾಗಿ ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಜಾರಿಯ ಮೇಲೆ ಪರಿಣಾಮ ಬೀರತಕ್ಕದ್ದಲ್ಲ ಅಥವಾ ಅಂಥ ಯಾವುದೇ ಕಾನೂನನ್ನು ಮಾಡದಂತೆ ರಾಜ್ಯವನ್ನು ಪ್ರತಿಬಂಧಿಸತಕ್ಕದ್ದಲ್ಲ.

**ವಿವರಣೆ I** :- ಕೃಪಾಣವನ್ನು ಧರಿಸುವುದು ಮತ್ತು ಅದನ್ನು ಒಯ್ಯುವುದು ಸಿಖ್ ಧರ್ಮಾವಲಂಬನೆಯ ಒಂದು ಭಾಗವಾಗಿರುವುದಾಗಿ ಸೇರಿರುವುದೆಂದು ಭಾವಿಸತಕ್ಕದ್ದು.

**ವಿವರಣೆ II**:- (2)ನೆಯ ಖಂಡದ (ಬಿ) ಉಪಖಂಡದಲ್ಲಿನ ಹಿಂದುಗಳನ್ನು ಕುರಿತ ಉಲ್ಲೇಖದಲ್ಲಿ ಸಿಖ್, ಜೈನ ಅಥವಾ ಬೌದ್ಧ ಧರ್ಮಾವಲಂಬಿಗಳು ಸೇರಿರುವರೆಂದು ಅರ್ಥೈಸತಕ್ಕದ್ದು ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳನ್ನು ಕುರಿತ ಉಲ್ಲೇಖವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

**26. ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸಲು ಸ್ವಾತಂತ್ರ್ಯ** :- ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯ - ಇವುಗಳಿಗೆ ಒಳಪಟ್ಟು ಪ್ರತಿಯೊಂದು ಧಾರ್ಮಿಕ ಸಂಪ್ರದಾಯದವರಿಗೆ ಅಥವಾ ಅದರ ಯಾವುದೇ ವಿಭಾಗದವರಿಗೆ,-

(ಎ) ಧಾರ್ಮಿಕ ಮತ್ತು ಧರ್ಮಾರ್ಥ ಉದ್ದೇಶಗಳಿಗಾಗಿ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ನಿರ್ವಹಿಸುವ;

(ಬಿ) ಧರ್ಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ತಮ್ಮದೇ ಆದ ವ್ಯವಹಾರಗಳನ್ನು ನಿರ್ವಹಿಸುವ;

(ಸಿ) ಚರ ಮತ್ತು ಸ್ಥಿರ ಸ್ವತ್ತುಗಳ ಒಡೆತನವನ್ನು ಹೊಂದುವ ಮತ್ತು ಅವುಗಳನ್ನು ಆರ್ಜಿಸುವ; ಮತ್ತು

(ಡಿ) ಅಂಥ ಸ್ವತ್ತಿನ ಆಡಳಿತವನ್ನು ಕಾನೂನಿಗನುಸಾರವಾಗಿ ನಡೆಸುವ

- ಹಕ್ಕು ಇರತಕ್ಕದ್ದು.

**27. ಯಾವುದೇ ನಿರ್ದಿಷ್ಟ ಧರ್ಮದ ಉನ್ನತಿಗಾಗಿ ತೆರಿಗೆಗಳ ಸಂದಾಯದ ಬಗ್ಗೆ ಸ್ವಾತಂತ್ರ್ಯ :–** ಯಾವ ತೆರಿಗೆಗಳ ಉತ್ಪತ್ತಿಗಳನ್ನು ಯಾವುದೇ ಒಂದು ನಿರ್ದಿಷ್ಟ ಧರ್ಮದ ಅಥವಾ ಧಾರ್ಮಿಕ ಸಂಪ್ರದಾಯದ ಉನ್ನತಿಯ ಅಥವಾ ನಿರ್ವಹಣೆಯ ವೆಚ್ಚಗಳ ಸಂದಾಯಕ್ಕಾಗಿ ನಿರ್ದಿಷ್ಟವಾಗಿ ವಿನಿಯೋಗಿಸಲಾಗುವುದೋ ಅಂಥ ಯಾವುವೇ ತೆರಿಗೆಗಳನ್ನು ಸಂದಾಯ ಮಾಡುವಂತೆ ಯಾರೇ ವ್ಯಕ್ತಿಯನ್ನು ಒತ್ತಾಯಿಸತಕ್ಕದ್ದಲ್ಲ.

**28. ಕೆಲವು ಶೈಕ್ಷಣಿಕ ಸಂಸ್ಥೆಗಳಲ್ಲಿ ನಡೆಯುವ ಧಾರ್ಮಿಕ ಶಿಕ್ಷಣದಲ್ಲಿ ಅಥವಾ ಧಾರ್ಮಿಕ ಉಪಾಸನೆಯಲ್ಲಿ ಹಾಜರಾಗುವ ಸ್ವಾತಂತ್ರ್ಯ:–** (1) ರಾಜ್ಯನಿಧಿಗಳಿಂದ ಸಂಪೂರ್ಣವಾಗಿ ನಿರ್ವಹಿಸಲಾಗುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆಯಲ್ಲಿ ಯಾವುದೇ ಧಾರ್ಮಿಕ ಶಿಕ್ಷಣವನ್ನು ನೀಡತಕ್ಕದ್ದಲ್ಲ.

(2) (1)ನೇ ಖಂಡದಲ್ಲಿ ಇರುವುದು ಯಾವುದೂ, ಯಾವ ಶಿಕ್ಷಣ ಸಂಸ್ಥೆಯಲ್ಲಿ ಧಾರ್ಮಿಕ ಶಿಕ್ಷಣ ಕೊಡತಕ್ಕದ್ದೆಂದು ಅಗತ್ಯಪಡಿಸುವ ಯಾವುದೇ ದತ್ತಿ ಅಥವಾ ನ್ಯಾಸದ ಮೇರೆಗೆ ಸ್ಥಾಪಿತವಾಗಿರುವ, ಯಾವ ಶಿಕ್ಷಣ ಸಂಸ್ಥೆಯ ಆಡಳಿತವನ್ನು ರಾಜ್ಯವು ನಡೆಸುತ್ತಿದೆಯೋ, ಅಂಥ ಶಿಕ್ಷಣ ಸಂಸ್ಥೆಗೆ ಅನ್ವಯಿಸತಕ್ಕದ್ದಲ್ಲ.

(3) ರಾಜ್ಯದ ಮನ್ನಣೆ ಪಡೆದ ಅಥವಾ ರಾಜ್ಯನಿಧಿಗಳಿಂದ ನೆರವನ್ನು ಪಡೆಯುವ ಯಾವುದೇ ಶೈಕ್ಷಣಿಕ ಸಂಸ್ಥೆಗೆ ಹಾಜರಾಗುವ ಯಾರೇ ವ್ಯಕ್ತಿಯು ಆ ಶೈಕ್ಷಣಿಕ ಸಂಸ್ಥೆಯಲ್ಲಿ ಕೊಡಬಹುದಾದ ಯಾವುದೇ ಧಾರ್ಮಿಕ ಶಿಕ್ಷಣದಲ್ಲಿ ಭಾಗವಹಿಸಲು ಅಥವಾ ಆ ಶೈಕ್ಷಣಿಕ ಸಂಸ್ಥೆಯಲ್ಲಿ ಅಥವಾ ಅದಕ್ಕೆ ಸೇರಿದ ಯಾವುದೇ ಆವರಣದಲ್ಲಿ ನಡೆಯಬಹುದಾದ ಯಾವುದೇ ಧಾರ್ಮಿಕ ಉಪಾಸನೆಗೆ ಹಾಜರಾಗಲು ತನ್ನ ಸಮ್ಮತಿಯನ್ನು ಕೊಟ್ಟಿದ್ದ ಹೊರತು ಅಥವಾ ಅವನು ಅಪ್ರಾಪ್ತ ವಯಸ್ಕನಾಗಿದ್ದರೆ, ಅವನ ಪಾಲಕನು ಅದಕ್ಕೆ ಸಮ್ಮತಿಯನ್ನು ಕೊಟ್ಟಿದ್ದ ಹೊರತು, ಹಾಗೆ ಭಾಗವಹಿಸುವಂತೆ ಅಥವಾ ಹಾಜರಾಗುವಂತೆ ಅವನನ್ನು ಅಗತ್ಯಪಡಿಸತಕ್ಕದ್ದಲ್ಲ.

**ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು**

**29. ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ:–** (1) ಭಾರತದ ರಾಜ್ಯಕ್ಷೇತ್ರದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ವಾಸವಾಗಿರುವ ನಾಗರಿಕರ ಯಾವುದೇ ವಿಭಾಗವು ತನ್ನದೇ ಆದ ಯಾವುದೇ ವಿಭಿನ್ನ ಭಾಷೆ, ಲಿಪಿ ಅಥವಾ ಸಂಸ್ಕ ೃತಿಯನ್ನು ಹೊಂದಿದ್ದರೆ, ಆ ವಿಭಾಗವು ಅವುಗಳನ್ನು ಸಂರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು.

(2) ರಾಜ್ಯವು ನಿರ್ವಹಿಸುವ ಅಥವಾ ರಾಜ್ಯನಿಧಿಗಳಿಂದ ನೆರವನ್ನು ಪಡೆಯುವ ಯಾವುದೇ ಶೈಕ್ಷಣಿಕ ಸಂಸ್ಥೆಗೆ ಧರ್ಮ, ಮೂಲವಂಶ, ಜಾತಿ, ಭಾಷೆ, ಅಥವಾ ಅವುಗಳಲ್ಲಿ ಯಾವುದೇ ಒಂದರ ಆಧಾರದ ಮೇಲೆ ಮಾತ್ರವೇ ಯಾರೇ ನಾಗರಿಕನಿಗೆ ಪ್ರವೇಶಾವಕಾಶವನ್ನು ನಿರಾಕರಿಸತಕ್ಕದ್ದಲ್ಲ.

**30. ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅವುಗಳ ಆಡಳಿತ ನಡೆಸುವುದಕ್ಕೆ ಅಲ್ಪಸಂಖ್ಯಾತರ ಹಕ್ಕು:–** (1) ಧರ್ಮದ ಅಥವಾ ಭಾಷೆಯ ಮೇಲೆ ಆಧಾರಿತವಾದ ಎಲ್ಲಾ ಅಲ್ಪಸಂಖ್ಯಾತ ವರ್ಗಗಳವರೂ ತಮ್ಮ ಇಷ್ಟಕ್ಕನುಗುಣವಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತವನ್ನು ನಡೆಸಲು ಹಕ್ಕುಳ್ಳವರಾಗಿರತಕ್ಕದ್ದು.

[1][(1ಎ)(1)ನೇ ಖಂಡದಲ್ಲಿ ಉಲ್ಲೇಖಿಸಲಾದ ಅಲ್ಪಸಂಖ್ಯಾತ ವರ್ಗವು ಸ್ಥಾಪಿಸಿದ ಮತ್ತು ಆಡಳಿತ ನಡೆಸುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆಯ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಆರ್ಜನೆ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸುವ ಯಾವುದೇ ಕಾನೂನನ್ನು ಮಾಡುವಾಗ ರಾಜ್ಯವು, ಅಂಥ ಸ್ವತ್ತಿನ ಆರ್ಜನೆಗಾಗಿ ಅಂಥ ಕಾನೂನಿನ ಮೂಲಕ ನಿಗದಿಪಡಿಸಿದ ಅಥವಾ ಅದರ ಮೇರೆಗೆ ನಿರ್ಧರಿಸಿದ ಮೊಬಲಗು ಆ ಖಂಡದ ಮೇರೆಗೆ ಖಾತ್ರಿಗೊಳಿಸಿದ ಹಕ್ಕನ್ನು ನಿರ್ಬಂಧಿಸುವುದಿಲ್ಲವೆಂದು ಅಥವಾ ಅಂಥ ಹಕ್ಕನ್ನು ರದ್ದುಪಡಿಸುವುದಿಲ್ಲವೆಂದು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.]

---

1. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೇ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ (20-6-1979ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(2) ಶೈಕ್ಷಣಿಕ ಸಂಸ್ಥೆಗಳಿಗೆ ನೆರವನ್ನು ನೀಡುವಲ್ಲಿ, ರಾಜ್ಯವು ಯಾವುದೇ ಶೈಕ್ಷಣಿಕ ಸಂಸ್ಥೆಯು ಧರ್ಮದ ಅಥವಾ ಭಾಷೆಯ ಮೇಲೆ ಆಧಾರಿತವಾದ ಅಲ್ಪಸಂಖ್ಯಾತ ವರ್ಗದವರ ಆಡಳಿತದಲ್ಲಿ ಇದೆ ಎಂಬ ಕಾರಣದ ಮೇಲೆ ಅಂಥ ಸಂಸ್ಥೆಯ ವಿರುದ್ಧ ಯಾವುದೇ ತಾರತಮ್ಯ ಮಾಡತಕ್ಕದ್ದಲ್ಲ.

[1] * * * *

**31. (ಸ್ವತ್ತಿನ ಕಡ್ಡಾಯ ಆರ್ಜನೆ.)** *ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 6ನೆಯ ಪ್ರಕರಣದ ಮೂಲಕ (20-6-1979 ರಿಂದ ಜಾರಿಗೆ ಬರುವಂತೆ) ನಿರಸನಗೊಳಿಸಲಾಗಿದೆ.*

[2][ಕೆಲವು ಕಾನೂನುಗಳನ್ನು ಉಳಿಸುವುದು]

[3]**[31ಎ. ಎಸ್ಟೇಟು, ಮುಂತಾದವುಗಳ ಆರ್ಜನೆಗೆ ಉಪಬಂಧಿಸುವ ಕಾನೂನುಗಳನ್ನು ಉಳಿಸುವುದು:-** [4][(1) 13ನೆಯ ಅನುಚ್ಛೇದದಲ್ಲಿ ಏನೇ ಒಳಗೊಂಡಿದ್ದಾಗ್ಯೂ,-

(ಎ) ರಾಜ್ಯವು ಯಾವುದೇ ಎಸ್ಟೇಟನ್ನು ಅಥವಾ ಅದರಲ್ಲಿನ ಯಾವುವೇ ಹಕ್ಕುಗಳನ್ನು ಆರ್ಜಿಸುವುದಕ್ಕೆ ಅಥವಾ ಅಂಥ ಯಾವುವೇ ಹಕ್ಕುಗಳನ್ನು ಅಂತ್ಯಗೊಳಿಸುವುದಕ್ಕೆ ಅಥವಾ ಮಾರ್ಪಡಿಸುವುದಕ್ಕೆ; ಅಥವಾ

(ಬಿ) ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಸ್ವತ್ತಿನ ಸರಿಯಾದ ವ್ಯವಸ್ಥಾಪನೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶದಿಂದ, ರಾಜ್ಯವು ಆ ಸ್ವತ್ತಿನ ವ್ಯವಸ್ಥಾಪನೆಯನ್ನು ಪರಿಮಿತ ಅವಧಿಯವರೆಗೆ ವಹಿಸಿಕೊಳ್ಳುವುದಕ್ಕೆ; ಅಥವಾ

(ಸಿ) ಎರಡು ಅಥವಾ ಹೆಚ್ಚು ನಿಗಮಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಆ ನಿಗಮಗಳಲ್ಲಿ ಯಾವುದೇ ಒಂದರ ಸರಿಯಾದ ವ್ಯವಸ್ಥಾಪನೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶದಿಂದ ಅವುಗಳನ್ನು ಸಮ್ಮಿಲನಗೊಳಿಸುವುದಕ್ಕೆ; ಅಥವಾ

(ಡಿ) ನಿಗಮಗಳ ವ್ಯವಸ್ಥಾಪಕ ಏಜೆಂಟರ, ಕಾರ್ಯದರ್ಶಿಗಳ ಮತ್ತು ಕೋಶಾಧಿಕಾರಿಗಳ, ವ್ಯವಸ್ಥಾಪಕ ನಿರ್ದೇಶಕರ, ನಿರ್ದೇಶಕರ ಅಥವಾ ವ್ಯವಸ್ಥಾಪಕರ ಯಾವುವೇ ಹಕ್ಕುಗಳನ್ನು ಅಥವಾ ಅಂಥ ನಿಗಮದ ಷೇರುದಾರರ ಯಾವುವೇ ಮತದಾನದ ಹಕ್ಕುಗಳನ್ನು ಅಂತ್ಯಗೊಳಿಸುವುದಕ್ಕೆ ಅಥವಾ ಮಾರ್ಪಡಿಸುವುದಕ್ಕೆ; ಅಥವಾ

(ಇ) ಯಾವುದೇ ಖನಿಜವನ್ನು ಅಥವಾ ಖನಿಜ ತೈಲವನ್ನು ಪತ್ತೆಹಚ್ಚುವ ಅಥವಾ ಪಡೆದುಕೊಳ್ಳುವ ಉದ್ದೇಶಕ್ಕಾಗಿ ಯಾವುದೇ ಒಪ್ಪಂದದ, ಗುತ್ತಿಗೆಯ ಅಥವಾ ಲೈಸೆನ್ಸಿನ ಕಾರಣದಿಂದ ಪ್ರಾಪ್ತವಾಗುವ ಯಾವುವೇ ಹಕ್ಕುಗಳನ್ನು ಅಂತ್ಯಗೊಳಿಸುವುದಕ್ಕೆ ಅಥವಾ ಮಾರ್ಪಡಿಸುವುದಕ್ಕೆ ಅಥವಾ ಅಂಥ ಯಾವುದೇ ಒಪ್ಪಂದವನ್ನು, ಗುತ್ತಿಗೆಯನ್ನು ಅಥವಾ ಲೈಸೆನ್ಸನ್ನು ಅವಧಿಗೆ ಮುಂಚಿತವಾಗಿ ಸಮಾಪ್ತಿಗೊಳಿಸುವುದಕ್ಕೆ ಅಥವಾ ರದ್ದುಗೊಳಿಸುವುದಕ್ಕೆ

- ಉಪಬಂಧಿಸುವ ಯಾವುದೇ ಕಾನೂನು [5][14ನೆಯ ಅನುಚ್ಛೇದದಿಂದ ಅಥವಾ 19ನೆಯ ಅನುಚ್ಛೇದದಿಂದ] ಪ್ರದತ್ತವಾಗಿರುವ ಹಕ್ಕುಗಳಲ್ಲಿ ಯಾವುದೇ ಹಕ್ಕಿಗೆ ಅಸಂಗತವಾಗಿದೆ ಅಥವಾ ಅದನ್ನು ಕಸಿದುಕೊಳ್ಳುತ್ತದೆ ಅಥವಾ ಮೊಟಕುಗೊಳಿಸುತ್ತದೆ ಎಂಬ ಕಾರಣದ ಮೇಲೆ ಶೂನ್ಯವಾಗುವುದೆಂದು ಭಾವಿಸತಕ್ಕದ್ದಲ್ಲ:

ಪರಂತು, ಅಂಥ ಕಾನೂನು ಒಂದು ರಾಜ್ಯದ ವಿಧಾನ ಮಂಡಲವು ಮಾಡಿದ ಕಾನೂನಾಗಿರುವಲ್ಲಿ, ಅಂಥ ಕಾನೂನನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾಯ್ದಿರಿಸಿದ್ದು ಅದಕ್ಕೆ ಅವನ ಅನುಮತಿ ದೊರಕಿದ್ದ ಹೊರತು, ಈ ಅನುಚ್ಛೇದದ ಉಪಬಂಧಗಳು ಅದಕ್ಕೆ ಅನ್ವಯವಾಗತಕ್ಕದ್ದಲ್ಲ:]

---

1. 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೇ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ "ಸ್ವತ್ತಿನ ಹಕ್ಕು" ಎಂಬ ಉಪಶೀರ್ಷಿಕೆಯನ್ನು ಬಿಟ್ಟುಬಿಡಲಾಗಿದೆ.
2. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೇ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ (ಪೂರ್ವಾನ್ವಯ ಪರಿಣಾಮ ಸಹಿತವಾಗಿ) ಸೇರಿಸಲಾಗಿದೆ.
4. 1955ನೆಯ ಇಸವಿಯ ಸಂವಿಧಾನ (ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ (1)ನೆಯ ಖಂಡಕ್ಕೆ ಬದಲಾಗಿ (ಪೂರ್ವಾನ್ವಯ ಪರಿಣಾಮ ಸಹಿತವಾಗಿ) ಪ್ರತ್ಯಾಯೋಜಿಸಲಾಗಿದೆ.
5. 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 7ನೆಯ ಪ್ರಕರಣದ ಮೂಲಕ "14ನೆಯ ಅನುಚ್ಛೇದದಿಂದ, 19ನೆಯ ಅನುಚ್ಛೇದದಿಂದ, 31ನೆಯ ಅನುಚ್ಛೇದದಿಂದ" ಎಂಬುದಕ್ಕೆ ಬದಲಾಗಿ (20.6.1979 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

[1][ಮತ್ತೂ ಪರಂತು, ಯಾವುದೇ ಕಾನೂನು, ರಾಜ್ಯವು ಯಾವುದೇ ಎಸ್ಟೇಟನ್ನು ಆರ್ಜಿಸುವ ಬಗ್ಗೆ ಯಾವುದೇ ಉಪಬಂಧವನ್ನು ಮಾಡಿರುವಲ್ಲಿ ಮತ್ತು ಆ ಎಸ್ಟೇಟಿನಲ್ಲಿ ಅಡಕವಾದ ಯಾವುದೇ ಭೂಮಿಯನ್ನು ಯಾರೇ ವ್ಯಕ್ತಿಯು ಸ್ವಂತ ಸಾಗುವಳಿಯಲ್ಲಿಟ್ಟುಕೊಂಡಿದ್ದು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅವನಿಗೆ ಅನ್ವಯಿಸುವ ಪರಮಾವಧಿ ಮಿತಿಯೊಳಗಿರುವಂಥ ಆ ಭೂಮಿಯ ಯಾವುದೇ ಭಾಗವನ್ನು ಅಥವಾ ಅದರ ಮೇಲಿರುವ ಅಥವಾ ಅದಕ್ಕೆ ಲಗತ್ತಾಗಿರುವ ಯಾವುದೇ ಕಟ್ಟಡ ಅಥವಾ ರಚನೆಯನ್ನು ಅಂಥ ಭೂಮಿಯ, ಕಟ್ಟಡದ ಅಥವಾ ರಚನೆಯ ಆರ್ಜನೆಗೆ ಸಂಬಂಧಿಸಿದ ಕಾನೂನಿನಲ್ಲಿ ಆ ಭೂಮಿಯ, ಕಟ್ಟಡದ ಅಥವಾ ರಚನೆಯ ಮಾರುಕಟ್ಟೆಯ ಮೌಲ್ಯಕ್ಕೆ ಕಡಿಮೆಯಿಲ್ಲದ ದರದಲ್ಲಿ ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕಾಗಿ ಉಪಬಂಧಿಸಿದ್ದ ಹೊರತು ರಾಜ್ಯವು ಅದನ್ನು ಆರ್ಜಿಸುವುದು ಕಾನೂನುಸಮ್ಮತವಾಗತಕ್ಕದ್ದಲ್ಲ.]

(2) ಈ ಅನುಚ್ಛೇದದಲ್ಲಿ,-

[2][(ಎ) ಯಾವುದೇ ಸ್ಥಳೀಯ ಪ್ರದೇಶಕ್ಕೆ ಸಂಬಂಧಪಟ್ಟಂತೆ, "ಎಸ್ಟೇಟ್" ಎಂಬ ಪದಕ್ಕೆ, ಆ ಪ್ರದೇಶದಲ್ಲಿ ಭೂ ಹಿಡುವಳಿ ಪದ್ಧತಿಗಳಿಗೆ ಸಂಬಂಧಪಟ್ಟಂತೆ ಅಸ್ತಿತ್ವದಲ್ಲಿರುವ ಕಾನೂನಿನಲ್ಲಿ ಆ ಪದಕ್ಕೆ ಅಥವಾ ಅದರ ಸ್ಥಳೀಯ ಸಮಾನಾರ್ಥ ಪದಕ್ಕೆ ಯಾವ ಅರ್ಥವಿದೆಯೋ ಅದೇ ಅರ್ಥವೇ ಇರತಕ್ಕದ್ದು ಮತ್ತು ಆ ಪದದಲ್ಲಿ,-

(i) ಯಾವುದೇ ಜಹಗೀರು, ಇನಾಂ ಅಥವಾ ಮುವಾಫೀ ಅಥವಾ ಅದೇ ಬಗೆಯ ಇತರ ಅನುದಾನವು ಮತ್ತು [3][ತಮಿಳುನಾಡು] ಹಾಗೂ ಕೇರಳ ರಾಜ್ಯಗಳಲ್ಲಿನ ಯಾವುದೇ ಜನ್ಮಂ ಹಕ್ಕು;

(ii) ರೈತವಾರೀ ಪದ್ಧತಿಯ ಮೇರೆಗೆ ಹೊಂದಿರುವ ಯಾವುದೇ ಭೂಮಿ;

(iii) ಬಂಜರು ಭೂಮಿ, ಅರಣ್ಯ ಭೂಮಿ, ಗೋಮಾಳ ಅಥವಾ ಭೂ ಸಾಗುವಳಿದಾರರ, ಕೃಷಿ ಕಾರ್ಮಿಕರ ಮತ್ತು ಗ್ರಾಮೀಣ ಕುಶಲ ಕರ್ಮಿಗಳ ಅಧಿಭೋಗದಲ್ಲಿರುವ ಕಟ್ಟಡಗಳ ಮತ್ತು ಇತರ ರಚನೆಗಳ ನಿವೇಶನಗಳನ್ನು ಒಳಗೊಂಡು, ಕೃಷಿಯ ಉದ್ದೇಶಗಳಿಗಾಗಿ ಅಥವಾ ಅದಕ್ಕೆ ಸಹಾಯಕವಾದ ಉದ್ದೇಶಗಳಿಗಾಗಿ ಹೊಂದಿರುವ ಅಥವಾ ಗುತ್ತಿಗೆಗೆ ಕೊಟ್ಟಿರುವ ಯಾವುದೇ ಭೂಮಿ

- ಸಹ ಒಳಗೊಂಡಿರತಕ್ಕದ್ದು;]

(ಬಿ) ಎಸ್ಟೇಟಿಗೆ ಸಂಬಂಧಿಸಿದಂತೆ "ಹಕ್ಕುಗಳು" ಎಂಬ ಪದದಲ್ಲಿ ಒಬ್ಬ ಮಾಲೀಕನಲ್ಲಿ, ಉಪ-ಮಾಲೀಕನಲ್ಲಿ, ಅಧೀನ ಮಾಲೀಕನಲ್ಲಿ, ಹಿಡುವಳಿದಾರನಲ್ಲಿ, [4][ರೈತನಲ್ಲಿ, ಅಧೀನ ರೈತನಲ್ಲಿ] ಅಥವಾ ಇತರ ಮಧ್ಯವರ್ತಿಯಲ್ಲಿ ನಿಹಿತವಾಗಿರುವ ಯಾವುವೇ ಹಕ್ಕುಗಳು ಮತ್ತು ಭೂಕಂದಾಯಕ್ಕೆ ಸಂಬಂಧಿಸಿದ ಯಾವುವೇ ಹಕ್ಕುಗಳು ಅಥವಾ ವಿಶೇಷಾಧಿಕಾರಗಳು ಒಳಗೊಂಡಿರತಕ್ಕದ್ದು.]

[5]**[31ಬಿ. ಕೆಲವು ಅಧಿನಿಯಮಗಳನ್ನು ಮತ್ತು ರೆಗ್ಯುಲೇಷನ್‌ಗಳನ್ನು ಮಾನ್ಯಮಾಡುವುದು:**- 31ಎ ಅನುಚ್ಛೇದದಲ್ಲಿ ಅಡಕವಾಗಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಒಂಬತ್ತನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಧಿನಿಯಮವು ಮತ್ತು ರೆಗ್ಯುಲೇಷನ್ ಅಥವಾ ಅದರ ಯಾವುದೇ ಉಪಬಂಧವು ಈ ಭಾಗದ ಯಾವುದೇ ಉಪಬಂಧಗಳಿಂದ ಪ್ರದತ್ತವಾದ ಹಕ್ಕುಗಳಲ್ಲಿ ಯಾವುದಕ್ಕಾದರೂ ಅಸಂಗತವಾಗಿದೆ ಎಂಬ ಅಥವಾ ಆ ಹಕ್ಕುಗಳಲ್ಲಿ ಯಾವುದನ್ನಾದರೂ ಕಸಿದುಕೊಳ್ಳುತ್ತದೆ ಎಂಬ ಅಥವಾ ಮೊಟಕುಗೊಳಿಸುತ್ತದೆ ಎಂಬ ಕಾರಣದ ಮೇಲೆ ಶೂನ್ಯವಾಗುವುದಾಗಿ ಅಥವಾ ಎಂದಾದರೂ ಶೂನ್ಯವಾಗಿದ್ದುದಾಗಿ ಭಾವಿಸತಕ್ಕದ್ದಲ್ಲ ಮತ್ತು ಯಾವುದೇ ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶವು ತದ್ವಿರುದ್ಧವಾಗಿ ಇದ್ದಾಗ್ಯೂ, ಆ ಪ್ರತಿಯೊಂದು ಅಧಿನಿಯಮವನ್ನು ಮತ್ತು ರೆಗ್ಯುಲೇಷನ್‌ಅನ್ನು ನಿರಸನಗೊಳಿಸುವುದಕ್ಕೆ ಅಥವಾ ತಿದ್ದುಪಡಿ ಮಾಡುವುದಕ್ಕೆ ಸಕ್ಷಮವಾದ ಯಾವುದೇ ವಿಧಾನಮಂಡಲಕ್ಕೆ ಇರುವ ಅಧಿಕಾರಕ್ಕೆ ಒಳಪಟ್ಟು ಅವು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.]

---

1. 1964ನೇ ಇಸವಿಯ ಸಂವಿಧಾನ (ಹದಿನೇಳನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. (ಎ) ಉಪಖಂಡಕ್ಕೆ ಬದಲಾಗಿ 2ನೇ ಪ್ರಕರಣದ ಮೂಲಕ (ಪೂರ್ವಾನ್ವಯ ಪರಿಣಾಮಸಹಿತವಾಗಿ) ಪ್ರತ್ಯಾಯೋಜಿಸಲಾಗಿದೆ.
3. 1968ನೆಯ ಇಸವಿಯ ಮದ್ರಾಸು ರಾಜ್ಯದ (ಹೆಸರು ಬದಲಾವಣೆ) ಅಧಿನಿಯಮದ (1968ನೆಯ ಇಸವಿಯ 53ನೆಯ ಕ್ರಮಸಂಖ್ಯೆಯ ಅಧಿನಿಯಮದ) 4ನೆಯ ಪ್ರಕರಣದ ಮೂಲಕ "ಮದ್ರಾಸ್" ಎಂಬುದಕ್ಕೆ ಬದಲಾಗಿ (14-1-1969ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
4. 1955ನೆಯ ಇಸವಿಯ ಸಂವಿಧಾನ (ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ (ಪೂರ್ವಾನ್ವಯ ಪರಿಣಾಮ ಸಹಿತವಾಗಿ) ಸೇರಿಸಲಾಗಿದೆ.
5. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

[1][31ಸಿ. **ಕೆಲವು ನಿರ್ದೇಶಕ ತತ್ತ್ವಗಳನ್ನು ಜಾರಿಗೆ ತರುವ ಕಾನೂನುಗಳನ್ನು ಉಳಿಸುವುದು:-** 13ನೆಯ ಅನುಚ್ಛೇದದಲ್ಲಿ ಏನೇ ಒಳಗೊಂಡಿದ್ದಾಗ್ಯೂ, [2][ಭಾಗ IV ರಲ್ಲಿ ಹೇಳಲಾದ ಎಲ್ಲ ತತ್ವಗಳ ಅಥವಾ ಆ ಪೈಕಿ ಯಾವುದೇ ತತ್ವದ] ಅನ್ವಯವನ್ನು ಸುನಿಶ್ಚಿತಗೊಳಿಸುವ ರಾಜ್ಯನೀತಿಯನ್ನು ಜಾರಿಗೆ ತರುವ ಯಾವುದೇ ಕಾನೂನು, [3][14 ನೆಯ ಅನುಚ್ಛೇದದಿಂದ ಅಥವಾ 19ನೆಯ ಅನುಚ್ಛೇದದಿಂದ] ಪ್ರದತ್ತವಾಗಿರುವ ಹಕ್ಕುಗಳಲ್ಲಿ ಯಾವುದಕ್ಕಾದರೂ ಅಸಂಗತವಾಗಿದೆಯೆಂಬ ಅಥವಾ ಯಾವುದನ್ನಾದರೂ ಕಸಿದುಕೊಳ್ಳುತ್ತದೆ ಅಥವಾ ಮೊಟಕುಗೊಳಿಸುತ್ತದೆ ಎಂಬ ಕಾರಣದ ಮೇಲೆ ಶೂನ್ಯವಾಗುವುದೆಂದು ಭಾವಿಸತಕ್ಕದ್ದಲ್ಲ; [4]*ಮತ್ತು ಅಂಥ ನೀತಿಯನ್ನು ಜಾರಿಗೊಳಿಸುವ ಉದ್ದೇಶವನ್ನು ಹೊಂದಿದೆ ಎಂಬ ಘೋಷಣೆಯನ್ನೊಳಗೊಂಡಿರುವ ಯಾವುದೇ ಕಾನೂನು ಅಂಥ ನೀತಿಯನ್ನು ಜಾರಿಗೆ ತರುವುದಿಲ್ಲವೆಂಬ ಆಧಾರದ ಮೇಲೆ ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ:*

ಪರಂತು, ಒಂದು ರಾಜ್ಯದ ವಿಧಾನಮಂಡಲವು ಅಂಥ ಕಾನೂನನ್ನು ಮಾಡಿರುವಲ್ಲಿ ಮತ್ತು ಆ ಕಾನೂನನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾಯ್ದಿರಿಸಿದ್ದು ಅದಕ್ಕೆ ಅವನ ಅನುಮತಿಯನ್ನು ಪಡೆದಿದ್ದ ಹೊರತು, ಈ ಅನುಚ್ಛೇದದ ಉಪಬಂಧಗಳು ಆ ಕಾನೂನಿಗೆ ಅನ್ವಯವಾಗತಕ್ಕದ್ದಲ್ಲ.]

[5]**31ಡಿ.** *[ರಾಷ್ಟ್ರವಿರೋಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ಉಳಿಸುವುದು.] 1977ನೆಯ ಇಸವಿಯ ಸಂವಿಧಾನ (ನಲವತ್ತೂರನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (13-4-1978ರಿಂದ ಜಾರಿಗೆ ಬರುವಂತೆ) ನಿರಸನಗೊಳಿಸಲಾಗಿದೆ.*

## ಸಂವಿಧಾನಾತ್ಮಕ ಪರಿಹಾರೋಪಾಯಗಳ ಹಕ್ಕು

**32. ಈ ಭಾಗದಿಂದ ಪ್ರದತ್ತವಾಗಿರುವ ಹಕ್ಕುಗಳ ಜಾರಿಗಾಗಿ ಪರಿಹಾರೋಪಾಯಗಳು:-** (1) ಈ ಭಾಗದಿಂದ ಪ್ರದತ್ತವಾಗಿರುವ ಹಕ್ಕುಗಳನ್ನು ಜಾರಿಗೊಳಿಸುವುದಕ್ಕಾಗಿ ಸಮುಚಿತ ವ್ಯವಹರಣೆಗಳ ಮೂಲಕ ಸರ್ವೋಚ್ಚ ನ್ಯಾಯಾಲಯವನ್ನು ಕೋರುವ ಹಕ್ಕನ್ನು ಖಾತ್ರಿಗೊಳಿಸಲಾಗಿದೆ.

(2) ಈ ಭಾಗದಿಂದ ಪ್ರದತ್ತವಾಗಿರುವ ಹಕ್ಕುಗಳಲ್ಲಿ ಯಾವುದೇ ಹಕ್ಕನ್ನು ಜಾರಿಗೊಳಿಸುವುದಕ್ಕಾಗಿ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನಗಳು, ಆದೇಶಗಳು ಅಥವಾ ಹೇಬಿಯಸ್ ಕಾರ್ಪಸ್, ಮ್ಯಾಂಡಮಸ್, ಪ್ರೊಹಿಬಿಷನ್, ಕೊ ವಾರಂಟೋ ಮತ್ತು ಸರ್‌ಶಿಯೋರರಿ ಸ್ವರೂಪದ ರಿಟ್‌ಗಳೂ ಸೇರಿ ರಿಟ್‌ಗಳಲ್ಲಿ ಯಾವುದು ಸಮುಚಿತವೋ ಅದನ್ನು ಹೊರಡಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

---

1. 1971ನೆಯ ಇಸವಿಯ ಸಂವಿಧಾನ (ಇಪ್ಪತ್ತೈದನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ (20-4-1972ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

2. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ "39ನೇ ಅನುಚ್ಛೇದದ (ಬಿ) ಖಂಡದಲ್ಲಿ ಅಥವಾ (ಸಿ) ಖಂಡದಲ್ಲಿ ಉಲ್ಲೇಖಿತವಾದ ತತ್ವಗಳನ್ನು" ಎಂಬುದಕ್ಕೆ ಬದಲಾಗಿ (ದಿನಾಂಕ 3.1.77ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ. ಮಿನರ್ವ ಮಿಲ್ಸ್ ನಿಯಮಿತ ಮತ್ತು ಇತರರು – ವಿರುದ್ಧ – ಭಾರತ ಒಕ್ಕೂಟ ಮತ್ತು ಇತರರು (1980) 2. ಎಸ್.ಸಿ.ಸಿ. 591 ಈ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು 4ನೇ ಪ್ರಕರಣವನ್ನು ಅಸಿಂಧುವೆಂದು ತೀರ್ಮಾನಿಸಿದೆ.

3. 1978ನೇ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 8ನೇ ಪ್ರಕರಣದ ಮೂಲಕ "14ನೆಯ ಅನುಚ್ಛೇದದಿಂದ, 19ನೇ ಅನುಚ್ಛೇದದಿಂದ ಅಥವಾ 31ನೇ ಅನುಚ್ಛೇದದಿಂದ" ಎಂಬುದಕ್ಕೆ ಬದಲಾಗಿ (ದಿನಾಂಕ 20-6-79ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

4. ಕೇಶವಾನಂದ ಭಾರತಿ– ವಿರುದ್ಧ – ಕೇರಳ ರಾಜ್ಯ (1973) ಸಪ್ಲಿಮೆಂಟ್ ಎಸ್.ಸಿ.ಆರ್. 1; ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಇಟಾಲಿಕ್‌ನಲ್ಲಿರುವ ಉಪಬಂಧಗಳನ್ನು ಅಸಿಂಧುವೆಂದು ತೀರ್ಮಾನಿಸಿದೆ.

5. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(3) (1)ನೆಯ ಮತ್ತು (2)ನೆಯ ಖಂಡಗಳ ಮೂಲಕ ಸರ್ವೋಚ್ಚ ನ್ಯಾಯಾಲಯಕ್ಕೆ ಪ್ರದತ್ತವಾಗಿರುವ ಅಧಿಕಾರಗಳಿಗೆ ಬಾಧಕವಾಗದಂತೆ, (2)ನೆಯ ಖಂಡದ ಮೇರೆಗೆ ಸರ್ವೋಚ್ಚ ನ್ಯಾಯಾಲಯವು ಚಲಾಯಿಸಬಹುದಾದ ಎಲ್ಲ ಅಧಿಕಾರಗಳನ್ನು ಅಥವಾ ಆ ಪೈಕಿ ಯಾವುದೇ ಅಧಿಕಾರವನ್ನು ಇತರ ಯಾವುದೇ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಚಲಾಯಿಸುವಂತೆ, ಆ ಇತರ ನ್ಯಾಯಾಲಯಕ್ಕೆ ಸಂಸತ್ತು ಕಾನೂನಿನ ಮೂಲಕ ಅಧಿಕಾರ ನೀಡಬಹುದು.

(4) ಈ ಸಂವಿಧಾನದ ಮೂಲಕ ಅನ್ಯಥಾ ಉಪಬಂಧಿಸಿದಂತೆ ಹೊರತು ಈ ಅನುಚ್ಛೇದವು ಖಾತ್ರಿಗೊಳಿಸಿರುವ ಹಕ್ಕನ್ನು ಅಮಾನತುಗೊಳಿಸತಕ್ಕದ್ದಲ್ಲ.

[1]32ಎ. ***[32ನೇ ಅನುಚ್ಛೇದದ ಮೇರೆಗಿನ ವ್ಯವಹರಣೆಗಳಲ್ಲಿ, ರಾಜ್ಯದ ಕಾನೂನುಗಳ ಸಂವಿಧಾನಾತ್ಮಕ ಸಿಂಧುತ್ವವನ್ನು ಪರ್ಯಾಲೋಚಿಸತಕ್ಕದ್ದಲ್ಲ.]*** *1977ನೇ ಇಸವಿಯ ಸಂವಿಧಾನ (ನಲವತ್ತಮೂರನೇ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (13-4-78 ರಿಂದ ಜಾರಿಗೆ ಬರುವಂತೆ) ನಿರಸಿತವಾಗಿದೆ.*

[2][**33. ಈ ಭಾಗದಿಂದ ಪ್ರದತ್ತವಾದ ಹಕ್ಕುಗಳನ್ನು ಸಶಸ್ತ್ರ ಬಲಗಳು, ಮುಂತಾದವುಗಳಿಗೆ ಅನ್ವಯಿಸುವಲ್ಲಿ ಅವುಗಳನ್ನು ಮಾರ್ಪಡಿಸಲು ಸಂಸತ್ತಿಗಿರುವ ಅಧಿಕಾರ:-** ಸಂಸತ್ತು ಈ ಭಾಗದಿಂದ ಪ್ರದತ್ತವಾದ ಯಾವುವೇ ಹಕ್ಕುಗಳನ್ನು,-

(ಎ) ಸಶಸ್ತ್ರ ಬಲಗಳ ಸದಸ್ಯರಿಗೆ; ಅಥವಾ

(ಬಿ) ಸಾರ್ವಜನಿಕ ಸುವ್ಯವಸ್ಥೆಯ ಜವಾಬ್ದಾರಿಯನ್ನು ವಹಿಸಲಾಗಿರುವ ಬಲಗಳ ಸದಸ್ಯರಿಗೆ; ಅಥವಾ

(ಸಿ) ಗುಪ್ತವಾರ್ತೆ ಅಥವಾ ಪ್ರತಿಗುಪ್ತವಾರ್ತೆಯ ಉದ್ದೇಶಗಳಿಗಾಗಿ ರಾಜ್ಯವು ಸ್ಥಾಪಿಸಿರುವ ಯಾವುದೇ ಬ್ಯೂರೋ ಅಥವಾ ಇತರ ಸಂಸ್ಥೆಯಲ್ಲಿ ನಿಯೋಜಿತರಾಗಿರುವ ವ್ಯಕ್ತಿಗಳಿಗೆ; ಅಥವಾ

(ಡಿ) (ಎ) ಯಿಂದ (ಸಿ) ಖಂಡಗಳಲ್ಲಿ ಉಲ್ಲೇಖಿಸಿದ ಯಾವುದೇ ಬಲಗಳ, ಬ್ಯೂರೋದ ಅಥವಾ ಸಂಸ್ಥೆಯ ಉದ್ದೇಶಗಳಿಗಾಗಿ ಸ್ಥಾಪಿಸಿದ ದೂರ ಸಂಪರ್ಕ ವ್ಯವಸ್ಥೆಯಲ್ಲಿ ನಿಯೋಜಿತರಾದ ಅಥವಾ ಆ ವ್ಯವಸ್ಥೆಗೆ ಸಂಬಂಧಿಸಿದ ವ್ಯಕ್ತಿಗಳಿಗೆ

- ಅನ್ವಯಿಸುವಲ್ಲಿ, ಅವರ ಕರ್ತವ್ಯಗಳ ಸೂಕ್ತ ನಿರ್ವಹಣೆಯನ್ನು ಮತ್ತು ಅವರಲ್ಲಿ ಶಿಸ್ತುಪಾಲನೆಯನ್ನು ಸುನಿಶ್ಚಿತಗೊಳಿಸಲು ಅವುಗಳನ್ನು ಎಷ್ಟರಮಟ್ಟಿಗೆ ನಿರ್ಬಂಧಿಸತಕ್ಕದ್ದು ಅಥವಾ ನಿರಾಕರಿಸತಕ್ಕದ್ದು ಎಂಬುದನ್ನು ಕಾನೂನಿನ ಮೂಲಕ ನಿರ್ಧರಿಸಬಹುದು.]

**34. ಯಾವುದೇ ಪ್ರದೇಶದಲ್ಲಿ ಲಷ್ಕರೀ ಕಾನೂನು ಜಾರಿಯಲ್ಲಿರುವಾಗ ಈ ಭಾಗದಿಂದ ಪ್ರದತ್ತವಾದ ಹಕ್ಕುಗಳ ಮೇಲೆ ನಿರ್ಬಂಧ:-** ಈ ಭಾಗದ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದಾಗ್ಯೂ, ಸಂಸತ್ತು ಕಾನೂನಿನ ಮೂಲಕ ಒಕ್ಕೂಟದ ಅಥವಾ ಒಂದು ರಾಜ್ಯದ ಸೇವೆಯಲ್ಲಿರುವ ಯಾರೇ ವ್ಯಕ್ತಿ ಅಥವಾ ಇತರ ಯಾರೇ ವ್ಯಕ್ತಿಯು ಭಾರತದ ರಾಜ್ಯಕ್ಷೇತ್ರದೊಳಗೆ ಲಷ್ಕರೀ ಕಾನೂನು ಜಾರಿಯಲ್ಲಿದ್ದ ಯಾವುದೇ ಪ್ರದೇಶದಲ್ಲಿ ಸುವ್ಯವಸ್ಥೆಯ ನಿರ್ವಹಣೆ ಅಥವಾ ಅದರ ಮರುಸ್ಥಾಪನೆಗಾಗಿ ಮಾಡಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಅವನಿಗೆ ರಕ್ಷಣೆ ನೀಡಬಹುದು ಅಥವಾ ಅಂಥ ಪ್ರದೇಶದಲ್ಲಿ ಲಷ್ಕರೀ ಕಾನೂನಿನ ಮೇರೆಗೆ ವಿಧಿಸಿದ ಯಾವುದೇ ಶಿಕ್ಷೆಯನ್ನು, ವಿಧಿಸಿದ ದಂಡನೆಯನ್ನು, ಆದೇಶಿಸಿದ ಮುಟ್ಟುಗೋಲನ್ನು ಅಥವಾ ಮಾಡಿದ ಇತರ ಕಾರ್ಯವನ್ನು ಸಿಂಧುಗೊಳಿಸಬಹುದು.

---

1. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 6ನೇ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1984ನೇ ಇಸವಿಯ ಸಂವಿಧಾನ (ಐವತ್ತನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ ಅನುಚ್ಛೇದ 33ಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

**35. ಈ ಭಾಗದ ಉಪಬಂಧಗಳನ್ನು ಜಾರಿಗೆ ತರುವುದಕ್ಕಾಗಿ ಕಾನೂನು ರಚನೆ:–** ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,–

(ಎ) (i) 16ನೆಯ ಅನುಚ್ಛೇದದ (3)ನೆಯ ಖಂಡದ ಮೇರೆಗೆ, 32ನೆಯ ಅನುಚ್ಛೇದದ (3)ನೆಯ ಖಂಡದ ಮೇರೆಗೆ, 33ನೆಯ ಅನುಚ್ಛೇದದ ಮತ್ತು 34ನೆಯ ಅನುಚ್ಛೇದದ ಮೇರೆಗೆ, ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಸಂಸತ್ತು ಮಾಡಿದ ಕಾನೂನಿನ ಮೂಲಕ ಉಪಬಂಧಿಸಬಹುದೋ ಆ ವಿಷಯಗಳ ಪೈಕಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ; ಮತ್ತು

(ii) ಈ ಭಾಗದ ಮೇರೆಗೆ ಅಪರಾಧಗಳೆಂದು ಘೋಷಿಸಿರುವ ಕೃತ್ಯಗಳಿಗೆ ದಂಡನೆಯನ್ನು ಗೊತ್ತುಪಡಿಸುವುದಕ್ಕಾಗಿ

– ಕಾನೂನುಗಳನ್ನು ಮಾಡಲು ಸಂಸತ್ತಿಗೆ ಅಧಿಕಾರವಿರತಕ್ಕದ್ದು, ಆದರೆ ರಾಜ್ಯದ ವಿಧಾನ ಮಂಡಲಕ್ಕೆ ಅಂಥ ಅಧಿಕಾರವಿರತಕ್ಕದ್ದಲ್ಲ ಮತ್ತು ಸಂಸತ್ತು ಈ ಸಂವಿಧಾನವು ಪ್ರಾರಂಭವಾದ ಮೇಲೆ ಆದಷ್ಟು ಬೇಗನೆ (ii)ನೆಯ ಉಪಖಂಡದಲ್ಲಿ ಉಲ್ಲೇಖಿಸಿರುವ ಕೃತ್ಯಗಳಿಗೆ ದಂಡನೆಯನ್ನು ಗೊತ್ತುಪಡಿಸುವ ಕಾನೂನುಗಳನ್ನು ಮಾಡತಕ್ಕದ್ದು.

(ಬಿ) ಭಾರತದ ರಾಜ್ಯಕ್ಷೇತ್ರದಲ್ಲಿ, ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ (ಎ) ಖಂಡದ (i)ನೆಯ ಉಪಖಂಡದಲ್ಲಿ ಉಲ್ಲೇಖಿಸಿರುವ ವಿಷಯಗಳ ಪೈಕಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅಥವಾ ಆ ಖಂಡದ (ii)ನೆಯ ಉಪಖಂಡದಲ್ಲಿ ಉಲ್ಲೇಖಿಸಿರುವ ಯಾವುದೇ ಕೃತ್ಯಕ್ಕೆ ದಂಡನೆಯನ್ನು ಗೊತ್ತುಪಡಿಸುವುದಕ್ಕೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಯಾವುದೇ ಕಾನೂನು, ಅದರ ನಿಬಂಧನೆಗಳಿಗೆ ಮತ್ತು 372ನೆಯ ಅನುಚ್ಛೇದದ ಮೇರೆಗೆ ಅದರಲ್ಲಿ ಮಾಡಬಹುದಾದ ಯಾವುವೇ ಅಳವಡಿಕೆಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು, ಸಂಸತ್ತು ಅದನ್ನು ಬದಲಾಯಿಸುವವರೆಗೆ ಅಥವಾ ನಿರಸನಗೊಳಿಸುವವರೆಗೆ ಅಥವಾ ತಿದ್ದುಪಡಿ ಮಾಡುವವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

**ವಿವರಣೆ.–** ಈ ಅನುಚ್ಛೇದದಲ್ಲಿ "ಜಾರಿಯಲ್ಲಿರುವ ಕಾನೂನು" ಎಂಬ ಪದಗಳಿಗೆ 372ನೆಯ ಅನುಚ್ಛೇದದಲ್ಲಿ ಇರುವ ಅರ್ಥವೇ ಇರುತ್ತದೆ.

## ಭಾಗ - IV

## ರಾಜ್ಯನೀತಿಯ ನಿರ್ದೇಶಕ ತತ್ವಗಳು

**36. ಪರಿಭಾಷೆ :-** ಈ ಭಾಗದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, "ರಾಜ್ಯ" ಎಂಬ ಪದಕ್ಕೆ ಭಾಗ- III ರಲ್ಲಿರುವ ಅರ್ಥವೇ ಇರುತ್ತದೆ.

**37. ಈ ಭಾಗದಲ್ಲಿ ಅಡಕವಾಗಿರುವ ತತ್ತ್ವಗಳ ಅನ್ವಯ:-** ಈ ಭಾಗದಲ್ಲಿ ಅಡಕವಾಗಿರುವ ಉಪಬಂಧಗಳು ಯಾವುದೇ ನ್ಯಾಯಾಲಯದ ಮೂಲಕ ಜಾರಿಗೊಳಿಸುವಂತಹವುಗಳಾಗಿರತಕ್ಕದ್ದಲ್ಲ; ಆದಾಗ್ಯೂ ಈ ಭಾಗದಲ್ಲಿ ಹೇಳಲಾಗಿರುವ ತತ್ತ್ವಗಳು ದೇಶದ ಆಡಳಿತ ನಿರ್ವಹಣೆಯಲ್ಲಿ ಮೂಲಭೂತವಾದವುಗಳಾಗಿರುತ್ತವೆ ಮತ್ತು ಕಾನೂನುಗಳನ್ನು ಮಾಡುವಲ್ಲಿ ಈ ತತ್ವಗಳನ್ನು ಅನ್ವಯಿಸುವುದು ರಾಜ್ಯದ ಕರ್ತವ್ಯವಾಗಿರತಕ್ಕದ್ದು.

**38. ಜನತೆಯ ಕಲ್ಯಾಣೋನ್ನತಿಗಾಗಿ ರಾಜ್ಯವು ಸಾಮಾಜಿಕ ವ್ಯವಸ್ಥೆಯನ್ನು ಸುನಿಶ್ಚಿತಗೊಳಿಸುವುದು:-** [1][(1)] ರಾಜ್ಯವು ರಾಷ್ಟ್ರೀಯ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವು ವ್ಯಾಪ್ತವಾಗಿರುವ ಸಾಮಾಜಿಕ ವ್ಯವಸ್ಥೆಯನ್ನು ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಸುನಿಶ್ಚಿತಗೊಳಿಸುವ ಮತ್ತು ಸಂರಕ್ಷಣೆ ಮಾಡುವ ಮೂಲಕ ಜನತೆಯ ಕಲ್ಯಾಣವನ್ನು ಉನ್ನತಿಗೊಳಿಸಲು ಪ್ರಯತ್ನಿಸತಕ್ಕದ್ದು.

[2][(2) ರಾಜ್ಯವು ವಿಶೇಷವಾಗಿ ಆದಾಯದಲ್ಲಿನ ಅಸಮಾನತೆಗಳನ್ನು ಕಡಿಮೆ ಮಾಡಲು ಪ್ರಯತ್ನಿಸತಕ್ಕದ್ದು ಮತ್ತು ವ್ಯಕ್ತಿ ವ್ಯಕ್ತಿಗಳಲ್ಲಿ ಮಾತ್ರವಲ್ಲದೆ ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುವ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿರುವ ಜನರ ಗುಂಪುಗಳಲ್ಲಿ ಸ್ಥಾನಮಾನ, ಸೌಲಭ್ಯಗಳು ಮತ್ತು ಅವಕಾಶಗಳಲ್ಲಿರುವ ಅಸಮಾನತೆಗಳನ್ನು ತೆಗೆದುಹಾಕಲು ಪ್ರಯತ್ನಿಸತಕ್ಕದ್ದು.]

**39. ರಾಜ್ಯವು ಅನುಸರಿಸಬೇಕಾದ ಕೆಲವು ಕಾರ್ಯನೀತಿ ತತ್ತ್ವಗಳು:-** ರಾಜ್ಯವು ವಿಶೇಷವಾಗಿ,-

(ಎ) ನಾಗರಿಕರು ಅವರು ಪುರುಷರೇ ಆಗಿರಲಿ, ಸ್ತ್ರೀಯರೇ ಆಗಿರಲಿ ಸಮಾನವಾಗಿ ಜೀವನ ನಿರ್ವಹಿಸುವುದಕ್ಕೆ ಸಾಕಷ್ಟು ಸಾಧನಗಳಿಗೆ ಹಕ್ಕು ಹೊಂದಿರುವುದನ್ನು;

(ಬಿ) ಸಮುದಾಯದ ಭೌತಿಕ ಸಾಧನ ಸಂಪತ್ತಿಗಳ ಒಡೆತನವು ಮತ್ತು ನಿಯಂತ್ರಣವು ಸಕಲರ ಹಿತಸಾಧನೆಗೆ ಅತ್ಯುತ್ತಮ ರೀತಿಯಲ್ಲಿ ಸಹಾಯಕವಾಗುವಂತೆ ಹಂಚಿಕೆಯಾಗಿರುವುದನ್ನು;

(ಸಿ) ಸಕಲರ ಹಿತಸಾಧನೆಗೆ ಬಾಧಕವಾಗುವ ರೀತಿಯಲ್ಲಿ ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಕೇಂದ್ರಿಕೃತವಾಗದಂತೆ ಆರ್ಥಿಕ ವ್ಯವಸ್ಥೆಯನ್ನು ನಿರ್ವಹಿಸುವುದನ್ನು;

(ಡಿ) ಪುರುಷರಿಗೆ ಮತ್ತು ಸ್ತ್ರೀಯರಿಗೆ ಇಬ್ಬರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ದೊರೆಯುವುದನ್ನು;

(ಇ) ಪುರುಷ ಮತ್ತು ಮಹಿಳಾ ಕೆಲಸಗಾರರ ಆರೋಗ್ಯ ಮತ್ತು ಶಕ್ತಿ ಹಾಗೂ ಮಕ್ಕಳ ಎಳೆಯ ವಯಸ್ಸು ಇವುಗಳನ್ನು ದುರುಪಯೋಗಪಡಿಸಿಕೊಳ್ಳದಿರುವುದನ್ನು ಮತ್ತು ಆರ್ಥಿಕ ಅವಶ್ಯಕತೆಯ ಒತ್ತಡದಿಂದಾಗಿ ನಾಗರಿಕರು ತಮ್ಮ ವಯಸ್ಸಿಗೆ ಅಥವಾ ಶಕ್ತಿಗೆ ತಕ್ಕದ್ದಲ್ಲದ ಉಪ ಕಸಬುಗಳಲ್ಲಿ ತೊಡಗದೇ ಇರುವುದನ್ನು;

---

1. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 9ನೇ ಪ್ರಕರಣದ ಮೂಲಕ (20-6-1979ರಿಂದ ಜಾರಿಗೆ ಬರುವಂತೆ) 38ನೇ ಅನುಚ್ಛೇದವನ್ನು ಅದರ ಖಂಡ (1) ಎಂದು ಪುನರ್‌ಸಂಖ್ಯೆ ನೀಡಲಾಗಿದೆ.
2. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 9ನೇ ಪ್ರಕರಣದ ಮೂಲಕ (20.6.1979 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

[1][(ಎಫ್) ಆರೋಗ್ಯಕರವಾದ ರೀತಿಯಲ್ಲಿ ಮತ್ತು ಸ್ವತಂತ್ರ ಹಾಗೂ ಘನತೆಯ ವಾತಾವರಣದಲ್ಲಿ ಬೆಳವಣಿಗೆ ಹೊಂದಲು ಮಕ್ಕಳಿಗೆ ಅವಕಾಶ ಮತ್ತು ಅನುಕೂಲತೆಗಳು ದೊರೆಯುವುದನ್ನು ಹಾಗೂ ಬಾಲಕರಿಗೆ ಮತ್ತು ಯುವಕರಿಗೆ ಶೋಷಣೆಯ ಮತ್ತು ನೈತಿಕ ಹಾಗೂ ಐಹಿಕ ಪತನದ ವಿರುದ್ಧ ಸಂರಕ್ಷಣೆ ಒದಗಿಸುವುದನ್ನು]

– ಸುನಿಶ್ಚಿತಗೊಳಿಸುವ ದಿಸೆಯಲ್ಲಿ ತನ್ನ ನೀತಿಯನ್ನು ನಿರ್ದೇಶಿಸತಕ್ಕದ್ದು.

[2][**39ಎ. ಸಮಾನ ನ್ಯಾಯ ಮತ್ತು ಉಚಿತ ಕಾನೂನು ನೆರವು:–** ರಾಜ್ಯವು ಸಮಾನ ಅವಕಾಶದ ಆಧಾರದ ಮೇಲೆ ನ್ಯಾಯವು ಸಿಗುವಂತೆ ಕಾನೂನು ವ್ಯವಸ್ಥೆಯ ನಿರ್ವಹಣೆಯನ್ನು ಸುನಿಶ್ಚಿತಗೊಳಿಸತಕ್ಕದ್ದು ಮತ್ತು ವಿಶೇಷವಾಗಿ ಆರ್ಥಿಕ ಅಥವಾ ಇತರ ಅಸಮರ್ಥತೆಗಳ ಕಾರಣದಿಂದಾಗಿ ಯಾರೇ ನಾಗರಿಕನಿಗೆ ನ್ಯಾಯವನ್ನು ಪಡೆಯುವ ಅವಕಾಶಗಳನ್ನು ನಿರಾಕರಿಸದಿರುವುದನ್ನು ಸುನಿಶ್ಚಿತಗೊಳಿಸಲು ಸೂಕ್ತ ಕಾನೂನು ರಚನೆಯ ಮೂಲಕ ಅಥವಾ ಯೋಜನೆಗಳ ಮೂಲಕ ಅಥವಾ ಇತರ ಯಾವುದೇ ರೀತಿಯಲ್ಲಿ ಉಚಿತ ಕಾನೂನು ನೆರವನ್ನು ಒದಗಿಸತಕ್ಕದ್ದು.]

**40. ಗ್ರಾಮ ಪಂಚಾಯಿತಿಗಳ ಸಂಘಟನೆ:–** ರಾಜ್ಯವು ಗ್ರಾಮ ಪಂಚಾಯಿತಿಗಳನ್ನು ಸಂಘಟಿಸಲು ಕ್ರಮ ಕೈಗೊಳ್ಳತಕ್ಕದ್ದು ಮತ್ತು ಸ್ವಯಂ ಆಡಳಿತ ಘಟಕಗಳಾಗಿ ಅವು ಕೆಲಸ ಮಾಡುವುದಕ್ಕೆ ಅವಶ್ಯವಾಗಬಹುದಾದಂಥ ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಅವುಗಳಿಗೆ ಕೊಡತಕ್ಕದ್ದು.

**41. ಕೆಲವು ಸಂದರ್ಭಗಳಲ್ಲಿ ಕೆಲಸ ಮಾಡುವ, ಶಿಕ್ಷಣ ಪಡೆಯುವ ಮತ್ತು ಸರ್ಕಾರದ ಸಹಾಯ ಪಡೆಯುವ ಹಕ್ಕು:–** ಕೆಲಸ ಮಾಡುವ, ಶಿಕ್ಷಣ ಪಡೆಯುವ ಮತ್ತು ನಿರುದ್ಯೋಗ, ವೃದ್ಧಾಪ್ಯ, ರೋಗ ಮತ್ತು ಅಸಮರ್ಥತೆಯ ಮತ್ತು ಇತರ ಅನಿವಾರ್ಯ ದೈನ್ಯಾವಸ್ಥೆಯ ಸಂದರ್ಭಗಳಲ್ಲಿ ಸರ್ಕಾರದ ಸಹಾಯವನ್ನು ಪಡೆಯುವ ಹಕ್ಕನ್ನು ಸುನಿಶ್ಚಿತಗೊಳಿಸುವ ಬಗ್ಗೆ ರಾಜ್ಯವು ತನ್ನ ಆರ್ಥಿಕ ಸಾಮರ್ಥ್ಯದ ಮತ್ತು ಅಭಿವೃದ್ಧಿಯ ಪರಿಮಿತಿಗಳಲ್ಲಿ ಪರಿಣಾಮಕಾರಿಯಾದ ಉಪಬಂಧವನ್ನು ಮಾಡತಕ್ಕದ್ದು.

**42. ಕೆಲಸ ಮಾಡಲು ನ್ಯಾಯಯುತ ಮತ್ತು ಮಾನವೋಚಿತ ಪರಿಸ್ಥಿತಿಗಳಿರುವಂತೆ ಮತ್ತು ಪ್ರಸೂತಿ ಪ್ರಯೋಜನ ದೊರೆಯುವಂತೆ ಉಪಬಂಧಿಸುವುದು:–** ಕೆಲಸ ಮಾಡಲು ನ್ಯಾಯಯುತ ಮತ್ತು ಮಾನವೋಚಿತ ಪರಿಸ್ಥಿತಿಗಳಿರುವಂತೆ ಮತ್ತು ಪ್ರಸೂತಿ ಪ್ರಯೋಜನವು ದೊರೆಯುವಂತೆ ರಾಜ್ಯವು ಉಪಬಂಧವನ್ನು ಮಾಡತಕ್ಕದ್ದು.

**43. ಕೆಲಸಗಾರರಿಗೆ ಜೀವನ ನಿರ್ವಹಣಾ ಮಜೂರಿ, ಇತ್ಯಾದಿ:–** ರಾಜ್ಯವು ಸೂಕ್ತ ಕಾನೂನನ್ನು ರಚಿಸುವ ಮೂಲಕ ಅಥವಾ ಆರ್ಥಿಕ ವ್ಯವಸ್ಥೆಯ ಮೂಲಕ ಅಥವಾ ಇತರ ಯಾವುದೇ ರೀತಿಯಲ್ಲಿ ಕೃಷಿಯ, ಕೈಗಾರಿಕೆಯ ಅಥವಾ ಇತರ ಎಲ್ಲಾ ಕೆಲಸಗಾರರಿಗೂ ಕೆಲಸ, ಜೀವನ ನಿರ್ವಹಣಾ ಮಜೂರಿ ಮತ್ತು ಉತ್ತಮ ಜೀವನ ಮಟ್ಟವನ್ನು ಸುನಿಶ್ಚಿತಗೊಳಿಸುವ ಕೆಲಸದ ಸ್ಥಿತಿಗಳು ಮತ್ತು ವಿರಾಮದ ವೇಳೆಯ ಸಂಪೂರ್ಣ ಉಪಯೋಗ ಹಾಗೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಅವಕಾಶಗಳು ದೊರೆಯುವಂತೆ ಮಾಡಲು ಪ್ರಯತ್ನಿಸತಕ್ಕದ್ದು ಮತ್ತು ವಿಶೇಷವಾಗಿ, ರಾಜ್ಯವು ಗ್ರಾಮಾಂತರ ಪ್ರದೇಶಗಳಲ್ಲಿ ವೈಯಕ್ತಿಕ ಆಧಾರದ ಮೇಲೆ ಅಥವಾ ಸಹಕಾರಿ ವ್ಯವಸ್ಥೆಯ ಆಧಾರದ ಮೇಲೆ ಗೃಹಕೈಗಾರಿಕೆಗಳ ಸಂವರ್ಧನೆಗೆ ಪ್ರಯತ್ನಿಸತಕ್ಕದ್ದು.

[3][**43ಎ. ಕೈಗಾರಿಕೆಗಳ ಆಡಳಿತದಲ್ಲಿ ಕೆಲಸಗಾರರು ಭಾಗವಹಿಸುವುದು:–** ರಾಜ್ಯವು ಸೂಕ್ತ ಕಾನೂನನ್ನು ರಚಿಸುವ ಮೂಲಕ ಅಥವಾ ಇತರ ಯಾವುದೇ ರೀತಿಯಲ್ಲಿ ಉದ್ಯಮಗಳ, ಕಾರ್ಯಸಂಸ್ಥೆಗಳ ಅಥವಾ ಯಾವುದೇ ಕೈಗಾರಿಕೆಯಲ್ಲಿ ತೊಡಗಿರುವ ಇತರ ಸಂಘಟನೆಗಳ ಆಡಳಿತದಲ್ಲಿ ಕೆಲಸಗಾರರು ಭಾಗವಹಿಸುವುದನ್ನು ಸುನಿಶ್ಚಿತಪಡಿಸುವುದಕ್ಕಾಗಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.]

**44. ನಾಗರಿಕರಿಗೆ ಏಕರೂಪದ ಸಿವಿಲ್ ಸಂಹಿತೆ:–** ಭಾರತದ ರಾಜ್ಯಕ್ಷೇತ್ರದಾದ್ಯಂತ ನಾಗರಿಕರಿಗೆ ಏಕರೂಪದ ಸಿವಿಲ್ ಸಂಹಿತೆಯು ಇರುವ ಹಾಗೆ ರಾಜ್ಯವು ಪ್ರಯತ್ನಿಸತಕ್ಕದ್ದು.

---

1. 1976ರ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 7ನೆಯ ಪ್ರಕರಣದ ಮೂಲಕ (3.1.1977 ರಿಂದ ಜಾರಿಗೆ ಬರುವಂತೆ) (ಎಫ್) ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1976ರ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 8ನೇ ಪ್ರಕರಣದ ಮೂಲಕ (3-1-77ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 9ನೇ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

[1][45. ಆರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳ ಶೈಶವಾವಸ್ಥೆಯ ಪಾಲನೆ ಮತ್ತು ಅವರಿಗೆ ಶಿಕ್ಷಣ ಒದಗಿಸುವುದು:-** ರಾಜ್ಯವು ಆರು ವರ್ಷ ವಯಸ್ಸು ಪೂರ್ತಿಯಾಗುವ ತನಕ ಎಲ್ಲ ಮಕ್ಕಳ ಶೈಶವಾವಸ್ಥೆಯ ಪಾಲನೆಗೆ ಮತ್ತು ಅವರಿಗೆ ಶಿಕ್ಷಣ ಒದಗಿಸುವುದಕ್ಕೆ ಪ್ರಯತ್ನಿಸತಕ್ಕದ್ದು.]

**46. ಅನುಸೂಚಿತ ಜಾತಿಗಳ, ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ದುರ್ಬಲ ವರ್ಗಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳ ಸಂವರ್ಧನೆ:-** ರಾಜ್ಯವು ದುರ್ಬಲ ವರ್ಗಗಳ, ವಿಶೇಷವಾಗಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಜನತೆಯ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಜಾಗರೂಕತೆಯಿಂದ ಸಂವರ್ಧಿಸತಕ್ಕದ್ದು ಮತ್ತು ಅವರನ್ನು ಸಾಮಾಜಿಕ ಅನ್ಯಾಯದಿಂದ ಮತ್ತು ಎಲ್ಲಾ ರೀತಿಯ ಶೋಷಣೆಯಿಂದ ಸಂರಕ್ಷಿಸತಕ್ಕದ್ದು.

**47. ಪೌಷ್ಠಿಕತೆಯ ಮಟ್ಟವನ್ನು ಮತ್ತು ಜೀವನ ಮಟ್ಟವನ್ನು ಹೆಚ್ಚಿಸುವುದು ಹಾಗೂ ಸಾರ್ವಜನಿಕ ಆರೋಗ್ಯವನ್ನು ಸುಧಾರಿಸುವುದು ರಾಜ್ಯದ ಕರ್ತವ್ಯ:-** ರಾಜ್ಯವು ತನ್ನ ಜನತೆಯ ಪೌಷ್ಠಿಕತೆಯ ಮಟ್ಟವನ್ನು ಹಾಗೂ ಜೀವನದ ಮಟ್ಟವನ್ನು ಹೆಚ್ಚಿಸುವುದು ಮತ್ತು ಸಾರ್ವಜನಿಕ ಆರೋಗ್ಯವನ್ನು ಸುಧಾರಿಸುವುದು ತನ್ನ ಪ್ರಾಥಮಿಕ ಕರ್ತವ್ಯಗಳಲ್ಲಿ ಸೇರಿದೆಯೆಂದು ಪರಿಗಣಿಸತಕ್ಕದ್ದು ಮತ್ತು ವಿಶೇಷವಾಗಿ ಔಷಧದ ಉದ್ದೇಶಗಳಿಗಲ್ಲದೆ, ಮಾದಕ ಪಾನೀಯಗಳ ಮತ್ತು ಆರೋಗ್ಯಕ್ಕೆ ಹಾನಿಕರವಾದ ಔಷಧಿಗಳ ಸೇವನೆಯನ್ನು ನಿಷೇಧಿಸಲು ರಾಜ್ಯವು ಪ್ರಯತ್ನಿಸತಕ್ಕದ್ದು.

**48. ಕೃಷಿ ಮತ್ತು ಪಶುಸಂಗೋಪನೆಯ ಸಂಘಟನೆ:-** ರಾಜ್ಯವು ಕೃಷಿಯನ್ನು ಮತ್ತು ಪಶುಸಂಗೋಪನೆಯನ್ನು ಆಧುನಿಕ ಮತ್ತು ವೈಜ್ಞಾನಿಕ ರೀತಿಯಲ್ಲಿ ಸಂಘಟನೆಗೊಳಿಸುವುದಕ್ಕೆ ಪ್ರಯತ್ನಿಸತಕ್ಕದ್ದು ಮತ್ತು ವಿಶೇಷವಾಗಿ ತಳಿಗಳನ್ನು ಸಂರಕ್ಷಿಸಿ ಸುಧಾರಣೆಗೊಳಿಸುವುದಕ್ಕಾಗಿ ಹಸುಗಳ ಮತ್ತು ಕರುಗಳ ಹಾಗೂ ಇತರ ಹಾಲು ಕೊಡುವ ಮತ್ತು ಭಾರ ಎಳೆಯುವ ಜಾನುವಾರುಗಳ ವಧೆಯನ್ನು ನಿಷೇಧಿಸುವುದಕ್ಕಾಗಿ ಕ್ರಮ ಕೈಗೊಳ್ಳತಕ್ಕದ್ದು.

[2][**48ಎ. ಪರಿಸರ ಸಂರಕ್ಷಣೆ ಮತ್ತು ಸುಧಾರಣೆ ಮತ್ತು ಅರಣ್ಯಗಳ ಹಾಗೂ ವನ್ಯಜೀವಿಗಳ ರಕ್ಷಣೆ:-** ದೇಶದ ಪರಿಸರವನ್ನು ಸಂರಕ್ಷಿಸಲು ಮತ್ತು ಸುಧಾರಿಸಲು ಹಾಗೂ ಅರಣ್ಯಗಳನ್ನು ಮತ್ತು ವನ್ಯಜೀವಿಗಳನ್ನು ರಕ್ಷಿಸಲು ರಾಜ್ಯವು ಪ್ರಯತ್ನಿಸತಕ್ಕದ್ದು.]

**49. ರಾಷ್ಟ್ರೀಯ ಮಹತ್ವವುಳ್ಳ ಸ್ಮಾರಕಗಳ, ಸ್ಥಳಗಳ ಮತ್ತು ವಸ್ತುಗಳ ಸಂರಕ್ಷಣೆ:-** ರಾಷ್ಟ್ರೀಯ ಮಹತ್ವವುಳ್ಳದ್ದೆಂದು [3][ಸಂಸತ್ತು ಮಾಡಿದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಘೋಷಿಸಲಾಗಿರುವ] ಕಲಾತ್ಮಕ ಅಥವಾ ಐತಿಹಾಸಿಕ ಆಸಕ್ತಿ ಹುಟ್ಟಿಸುವ ಪ್ರತಿಯೊಂದು ಸ್ಮಾರಕವನ್ನು ಅಥವಾ ಸ್ಥಳವನ್ನು ಅಥವಾ ವಸ್ತುವನ್ನು, ಸಂದರ್ಭಾನುಸಾರ, ಅಪಹರಿಸದಂತೆ, ವಿರೂಪಗೊಳಿಸದಂತೆ, ನಾಶಗೊಳಿಸದಂತೆ, ತೆಗೆದುಕೊಂಡು ಹೋಗದಂತೆ, ವಿಲೇ ಮಾಡದಂತೆ ಅಥವಾ ರಫ್ತು ಮಾಡದಂತೆ ಸಂರಕ್ಷಿಸುವುದು ರಾಜ್ಯದ ಹೊಣೆಯಾಗಿರತಕ್ಕದ್ದು.

**50. ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವುದು:-** ರಾಜ್ಯದ ಲೋಕಸೇವೆಗಳಲ್ಲಿ ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸಲು ರಾಜ್ಯವು ಕ್ರಮ ಕೈಗೊಳ್ಳತಕ್ಕದ್ದು.

**51. ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯ ಸಂವರ್ಧನೆ:-** ರಾಜ್ಯವು,-

(ಎ) ಅಂತರರಾಷ್ಟ್ರೀಯ ಶಾಂತಿಯನ್ನು ಮತ್ತು ಭದ್ರತೆಯನ್ನು ಸಂವರ್ಧನೆಗೊಳಿಸುವುದಕ್ಕೆ;

(ಬಿ) ರಾಷ್ಟ್ರ ರಾಷ್ಟ್ರಗಳ ನಡುವೆ ನ್ಯಾಯಯುತವಾದ ಮತ್ತು ಗೌರವಯುತವಾದ ಸಂಬಂಧಗಳನ್ನಿಟ್ಟುಕೊಂಡು ಬರುವುದಕ್ಕೆ;

(ಸಿ) ಸಂಘಟಿತ ಜನರು, ಪರಸ್ಪರ ವ್ಯವಹರಿಸುವಲ್ಲಿ ಅಂತರರಾಷ್ಟ್ರೀಯ ಕಾನೂನುಗಳ ಮತ್ತು ಕೌಲುಗಳ ಬಾಧ್ಯತೆಗಳ ಬಗ್ಗೆ ಗೌರವ ಬೆಳೆಸುವುದಕ್ಕೆ; ಮತ್ತು

(ಡಿ) ಅಂತರರಾಷ್ಟ್ರೀಯ ವಿವಾದಗಳನ್ನು ಮಧ್ಯಸ್ಥಿಕೆಯ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಪ್ರೋತ್ಸಾಹಿಸುವುದಕ್ಕೆ

- ಪ್ರಯತ್ನಿಸತಕ್ಕದ್ದು.

---

1. 2002ನೆಯ ಇಸವಿಯ ಸಂವಿಧಾನ (ಎಂಬತ್ತಾರನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ (1.4.2010 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 10ನೆಯ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 27ನೆಯ ಪ್ರಕರಣದ ಮೇರೆಗೆ "ಸಂಸತ್ತು ಕಾನೂನು ಮೂಲಕ ಘೋಷಿಸಿರತಕ್ಕ" ಎಂಬ ಪದಗಳಿಗೆ ಬದಲಾಗಿ, ಈ ಪದಗಳನ್ನು ಪ್ರತ್ಯಾಯೋಜಿಸಲಾಗಿದೆ.

## [1][ಭಾಗ - IVಎ

## ಮೂಲಭೂತ ಕರ್ತವ್ಯಗಳು

**51ಎ. ಮೂಲಭೂತ ಕರ್ತವ್ಯಗಳು:-** ಕೆಳಕಂಡ ಕರ್ತವ್ಯಗಳನ್ನು ಪಾಲಿಸುವುದು ಭಾರತದ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿರತಕ್ಕದ್ದು ಎಂದರೆ:-

(ಎ) ಸಂವಿಧಾನಕ್ಕೆ ಬದ್ಧವಾಗಿರುವುದು ಹಾಗೂ ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಹಾಗೂ ರಾಷ್ಟ್ರಗೀತೆಯನ್ನು ಗೌರವಿಸುವುದು;

(ಬಿ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯಸಂಗ್ರಾಮಕ್ಕೆ ಸ್ಫೂರ್ತಿದಾಯಕವಾಗಿದ್ದ ಉದಾತ್ತ ಆದರ್ಶಗಳನ್ನು ಗೌರವಿಸುವುದು ಮತ್ತು ಅನುಸರಿಸುವುದು;

(ಸಿ) ಭಾರತದ ಸಾರ್ವಭೌಮತ್ವವನ್ನು, ಐಕ್ಯತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು;

(ಡಿ) ದೇಶವನ್ನು ರಕ್ಷಿಸುವುದು ಮತ್ತು ಕರೆಬಂದಾಗ ರಾಷ್ಟ್ರಕ್ಕೆ ಸೇವೆ ಸಲ್ಲಿಸುವುದು;

(ಇ) ಧಾರ್ಮಿಕ, ಭಾಷಾ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭೇದ-ಭಾವಗಳಿಂದ ಅತೀತವಾಗಿ, ಭಾರತದ ಎಲ್ಲಾ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು ಮತ್ತು ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಗಳನ್ನು ಬಿಟ್ಟುಬಿಡುವುದು;

(ಎಫ್) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು;

(ಜಿ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿಗೊಳಿಸುವುದು ಮತ್ತು ಪ್ರಾಣಿಗಳಿಗೆ ಅನುಕಂಪ ತೋರಿಸುವುದು;

(ಹೆಚ್) ವೈಜ್ಞಾನಿಕ ಮನೋಭಾವನೆ, ಮಾನವೀಯತೆ, ಜಿಜ್ಞಾಸೆಯ ಮತ್ತು ಸುಧಾರಣೆಯ ಪ್ರವೃತ್ತಿಗಳನ್ನು ಬೆಳೆಸುವುದು;

(ಐ) ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು;

(ಜೆ) ರಾಷ್ಟ್ರವು ನಿರಂತರವಾಗಿ ಸಾಧನೆಯ ಮತ್ತು ಸಿದ್ಧಿಯ ಉನ್ನತ ಮಟ್ಟಗಳನ್ನು ತಲುಪಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಯ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿ ಉನ್ನತಿಗಾಗಿ ಶ್ರಮಿಸುವುದು;]

[2][(ಕೆ) ತಂದೆ- ತಾಯಿ ಅಥವಾ ಪೋಷಕನು, ಸಂದರ್ಭಾನುಸಾರ ಆರರಿಂದ ಹದಿನಾಲ್ಕು ವಯಸ್ಸಿನ ತಮ್ಮ ಮಗುವಿಗೆ ಅಥವಾ ತಮ್ಮ ಪರಿಪಾಲಿತ ಮಗುವಿಗೆ ಶಿಕ್ಷಣ ಪಡೆಯಲು ಅವಕಾಶಗಳನ್ನು ಒದಗಿಸುವುದು.]

---

1. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 11ನೇ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 2002 ನೇ ಇಸವಿಯ ಸಂವಿಧಾನ (ಎಂಬತ್ತಾರನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ (1.4.2010 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

# ಭಾಗ – V

## ಒಕ್ಕೂಟ

## ಅಧ್ಯಾಯ I – ಕಾರ್ಯಾಂಗ

### ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ

**52. ಭಾರತದ ರಾಷ್ಟ್ರಪತಿ:–** ಭಾರತಕ್ಕೆ ಒಬ್ಬ ರಾಷ್ಟ್ರಪತಿಯಿರತಕ್ಕದ್ದು.

**53. ಒಕ್ಕೂಟದ ಕಾರ್ಯಾಂಗ ಅಧಿಕಾರ:–** (1) ಒಕ್ಕೂಟದ ಕಾರ್ಯಾಂಗ ಅಧಿಕಾರವು ರಾಷ್ಟ್ರಪತಿಯಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಅಂಥ ಅಧಿಕಾರವನ್ನು ಈ ಸಂವಿಧಾನಕ್ಕನುಸಾರವಾಗಿ ರಾಷ್ಟ್ರಪತಿಯು ನೇರವಾಗಿಯಾಗಲಿ ಅಥವಾ ತನಗೆ ಅಧೀನರಾದ ಅಧಿಕಾರಿಗಳ ಮೂಲಕವಾಗಿಯಾಗಲಿ ಚಲಾಯಿಸತಕ್ಕದ್ದು.

(2) ಮೇಲೆ ಹೇಳಿದ ಉಪಬಂಧದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಒಕ್ಕೂಟದ ರಕ್ಷಣಾ ಬಲಗಳ ಸರ್ವೋಚ್ಚ ಆಧಿಪತ್ಯವು ರಾಷ್ಟ್ರಪತಿಯಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಅದರ ಚಲಾವಣೆಯು ಕಾನೂನಿನ ಮೂಲಕ ವಿನಿಯಮಿತವಾಗತಕ್ಕದ್ದು.

(3) ಈ ಅನುಚ್ಛೇದದಲ್ಲಿರುವುದು ಯಾವುದೂ,–

(ಎ) ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನಿಂದ ಯಾವುದೇ ರಾಜ್ಯದ ಸರ್ಕಾರಕ್ಕೆ ಅಥವಾ ಇತರ ಪ್ರಾಧಿಕಾರಕ್ಕೆ ಪ್ರದತ್ತವಾದ ಯಾವುವೇ ಪ್ರಕಾರ್ಯಗಳನ್ನು ರಾಷ್ಟ್ರಪತಿಗೆ ವರ್ಗಾಯಿಸುವುದಾಗಿ ಭಾವಿಸತಕ್ಕದ್ದಲ್ಲ; ಅಥವಾ

(ಬಿ) ರಾಷ್ಟ್ರಪತಿಯನ್ನು ಹೊರತುಪಡಿಸಿ ಇತರ ಪ್ರಾಧಿಕಾರಗಳಿಗೆ, ಕಾನೂನಿನ ಮೂಲಕ ಪ್ರಕಾರ್ಯಗಳನ್ನು ಪ್ರದಾನ ಮಾಡದಂತೆ ಸಂಸತ್ತನ್ನು ಪ್ರತಿಬಂಧಿಸತಕ್ಕದ್ದಲ್ಲ.

**54. ರಾಷ್ಟ್ರಪತಿಯ ಚುನಾವಣೆ:–** ರಾಷ್ಟ್ರಪತಿಯು,–

(ಎ) ಸಂಸತ್ತಿನ ಉಭಯ ಸದನಗಳ ಚುನಾಯಿತ ಸದಸ್ಯರಿಂದ; ಮತ್ತು

(ಬಿ) ರಾಜ್ಯಗಳ ವಿಧಾನಸಭೆಗಳ ಚುನಾಯಿತ ಸದಸ್ಯರಿಂದ

– ಕೂಡಿದ ಚುನಾಯಕ ಗಣದ ಸದಸ್ಯರಿಂದ ಚುನಾಯಿತನಾಗತಕ್ಕದ್ದು.

[1][**ವಿವರಣೆ.**– ಈ ಅನುಚ್ಛೇದದಲ್ಲಿ ಮತ್ತು 55ನೇ ಅನುಚ್ಛೇದದಲ್ಲಿನ "ರಾಜ್ಯ" ಎಂಬ ಪದವು ದೆಹಲಿ ರಾಷ್ಟ್ರೀಯ ರಾಜಧಾನಿ ರಾಜ್ಯಕ್ಷೇತ್ರವನ್ನು ಮತ್ತು *ಪಾಂಡಿಚೆರಿ ಒಕ್ಕೂಟ ರಾಜ್ಯಕ್ಷೇತ್ರವನ್ನು ಒಳಗೊಳ್ಳುತ್ತದೆ.]

**55. ರಾಷ್ಟ್ರಪತಿಯ ಚುನಾವಣೆಯ ರೀತಿ:–** (1) ರಾಷ್ಟ್ರಪತಿಯ ಚುನಾವಣೆಯಲ್ಲಿ ವಿವಿಧ ರಾಜ್ಯಗಳ ಪ್ರಾತಿನಿಧ್ಯದ ಪ್ರಮಾಣದಲ್ಲಿ ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ ಏಕರೂಪತೆ ಇರತಕ್ಕದ್ದು.

(2) ರಾಜ್ಯಗಳಲ್ಲಿ ಪರಸ್ಪರ ಅಂಥ ಏಕರೂಪತೆಯನ್ನು ಮತ್ತು ಸಮಸ್ತ ರಾಜ್ಯಗಳ ಮತ್ತು ಒಕ್ಕೂಟದ ನಡುವೆ ಸಮತೆಯನ್ನುಂಟುಮಾಡುವ ಉದ್ದೇಶಕ್ಕಾಗಿ, ಅಂಥ ಚುನಾವಣೆಯಲ್ಲಿ, ಸಂಸತ್ತಿನ ಪ್ರತಿಯೊಬ್ಬ ಚುನಾಯಿತ ಸದಸ್ಯನು ಮತ್ತು ಪ್ರತಿಯೊಂದು ರಾಜ್ಯದ ವಿಧಾನಸಭೆಯ ಪ್ರತಿಯೊಬ್ಬ ಚುನಾಯಿತ ಸದಸ್ಯನು ಎಷ್ಟು ಮತಗಳನ್ನು ಕೊಡಲು ಹಕ್ಕುಳ್ಳವನಾಗಿರುತ್ತಾನೆಂಬುದನ್ನು ಕೆಳಕಂಡ ರೀತಿಯಲ್ಲಿ ನಿರ್ಧರಿಸತಕ್ಕದ್ದು,–

(ಎ) ಒಂದು ರಾಜ್ಯದ ವಿಧಾನಸಭೆಯ ಪ್ರತಿಯೊಬ್ಬ ಚುನಾಯಿತ ಸದಸ್ಯನಿಗೆ, ಆ ರಾಜ್ಯದ ಜನಸಂಖ್ಯೆಯನ್ನು ಆ ಸಭೆಯ ಚುನಾಯಿತ ಸದಸ್ಯರ ಒಟ್ಟು ಸಂಖ್ಯೆಯಿಂದ ಭಾಗಿಸಿದರೆ ಬರುವ ಭಾಗಲಬ್ಧದಲ್ಲಿ ಒಂದು ಸಾವಿರದ ಗುಣಕಗಳು ಎಷ್ಟಿವೆಯೋ ಅಷ್ಟು ಮತಗಳಿರತಕ್ಕದ್ದು;

(ಬಿ) ಸದರಿ ಒಂದು ಸಾವಿರದ ಗುಣಕಗಳನ್ನು ತೆಗೆದುಕೊಂಡ ಮೇಲೆ, ಶೇಷವು ಐನೂರಕ್ಕಿಂತಲೂ ಕಡಿಮೆಯಿಲ್ಲದಿದ್ದರೆ, (ಎ) ಉಪಖಂಡದಲ್ಲಿ ಉಲ್ಲೇಖಿತವಾಗಿರುವ ಪ್ರತಿಯೊಬ್ಬ ಸದಸ್ಯನ ಮತಗಳ ಸಂಖ್ಯೆಗೆ ಇನ್ನೂ ಒಂದು ಮತವನ್ನು ಸೇರಿಸತಕ್ಕದ್ದು;

---

1. 1992ನೇ ಇಸವಿಯ ಸಂವಿಧಾನ (ಎಪ್ಪತ್ತನೇ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (1.6.1995 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

* ಈಗ ಪುದುಚೆರಿಯಾಗಿದೆ. 2006 ನೇ ಇಸವಿಯ ಪಾಂಡಿಚೆರಿ (ಹೆಸರು ಬದಲಾವಣೆ) ಅಧಿನಿಯಮದ 3ನೇ ಪ್ರಕರಣವನ್ನು ನೋಡಿ. (1.10.2006 ರಿಂದ ಜಾರಿಗೆ ಬಂದಿದೆ).

(ಸಿ) ಸಂಸತ್ತಿನ ಪ್ರತಿಯೊಂದು ಸದನದ ಪ್ರತಿಯೊಬ್ಬ ಚುನಾಯಿತ ಸದಸ್ಯನು, (ಎ) ಮತ್ತು (ಬಿ) ಉಪಖಂಡಗಳ ಮೇರೆಗೆ ರಾಜ್ಯಗಳ ವಿಧಾನಸಭೆಗಳ ಸದಸ್ಯರಿಗೆ ನಿಗದಿಪಡಿಸಿರುವ ಮತಗಳ ಒಟ್ಟು ಸಂಖ್ಯೆಯನ್ನು, ಸಂಸತ್ತಿನ ಉಭಯ ಸದನಗಳ ಚುನಾಯಿತ ಸದಸ್ಯರ ಒಟ್ಟು ಸಂಖ್ಯೆಯಿಂದ ಭಾಗಿಸಿದರೆ ಬರುವ ಸಂಖ್ಯೆಯಷ್ಟು ಮತಗಳನ್ನು ಹೊಂದಿರತಕ್ಕದ್ದು; ಅರ್ಧಕ್ಕಿಂತ ಹೆಚ್ಚಾಗಿರುವ ಭಿನ್ನಾಂಕವನ್ನು ಒಂದು ಎಂದು ಎಣಿಸತಕ್ಕದ್ದು ಮತ್ತು ಇತರ ಭಿನ್ನಾಂಕಗಳನ್ನು ಎಣಿಸದೆ ಬಿಟ್ಟುಬಿಡತಕ್ಕದ್ದು.

(3) ರಾಷ್ಟ್ರಪತಿಯ ಚುನಾವಣೆಯನ್ನು ಏಕವರ್ಗಾವಣೀಯ ಮತದ ವಿಧಾನದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಗನುಸಾರ ನಡೆಸತಕ್ಕದ್ದು ಮತ್ತು ಅಂಥ ಚುನಾವಣೆಯಲ್ಲಿ ಮತದಾನವು ರಹಸ್ಯ ಮತದಾನದ ಮೂಲಕ ನಡೆಯತಕ್ಕದ್ದು.

[1][**ವಿವರಣೆ.**– ಈ ಅನುಚ್ಛೇದದಲ್ಲಿ "ಜನಸಂಖ್ಯೆ" ಎಂದರೆ, ಯಾವ ಹಿಂದಿನ ಕೊನೆಯ ಸಲದ ಜನಗಣತಿಯ ಸುಸಂಗತ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಜನಗಣತಿಯಲ್ಲಿ ಖಚಿತಪಡಿಸಿಕೊಂಡ ಜನಸಂಖ್ಯೆ:

ಪರಂತು, ಈ ವಿವರಣೆಯಲ್ಲಿ, ಯಾವ ಈ ಹಿಂದಿನ ಕೊನೆಯ ಜನಗಣತಿಯ ಸುಸಂಗತ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಜನಗಣತಿಗೆ ಮಾಡಿದ ಉಲ್ಲೇಖವನ್ನು, [2][2026 ನೆಯ] ಇಸವಿಯ ತರುವಾಯ ಮೊದಲನೇ ಸಲ ನಡೆಸಲಾಗುವ ಜನಗಣತಿಯ ಸುಸಂಗತ ಅಂಕಿಗಳು ಪ್ರಕಟವಾಗುವವರೆಗೆ, 1971ರ ಜನಗಣತಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.]

**56. ರಾಷ್ಟ್ರಪತಿಯ ಪದಾವಧಿ:**– (1) ರಾಷ್ಟ್ರಪತಿಯು ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಆ ಪದವನ್ನು ಧಾರಣಮಾಡತಕ್ಕದ್ದು:

ಪರಂತು,–

(ಎ) ರಾಷ್ಟ್ರಪತಿಯು, ತಾನು ಸಹಿ ಮಾಡಿದ ಪತ್ರವನ್ನು ಉಪರಾಷ್ಟ್ರಪತಿಗೆ ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು;

(ಬಿ) ರಾಷ್ಟ್ರಪತಿಯು ಈ ಸಂವಿಧಾನವನ್ನು ಉಲ್ಲಂಘಿಸಿದ ಸಂದರ್ಭದಲ್ಲಿ, ಅವನನ್ನು 61ನೆಯ ಅನುಚ್ಛೇದದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಮಹಾಭಿಯೋಗದ ಮೂಲಕ ಪದದಿಂದ ತೆಗೆದುಹಾಕಬಹುದು;

(ಸಿ) ರಾಷ್ಟ್ರಪತಿಯ ಪದಾವಧಿಯು ಮುಕ್ತಾಯವಾಗಿದ್ದಾಗ್ಯೂ ಅವನ ಉತ್ತರಾಧಿಕಾರಿಯು ಆ ಪದವನ್ನು ವಹಿಸಿಕೊಳ್ಳುವವರೆಗೆ ಅವನು ತನ್ನ ಪದದಲ್ಲಿ ಮುಂದುವರಿಯತಕ್ಕದ್ದು.

(2) ಉಪರಾಷ್ಟ್ರಪತಿಯು, (1)ನೆಯ ಖಂಡದ ಪರಂತುಕದ (ಎ) ಖಂಡದ ಮೇರೆಗೆ ತನಗೆ ಬರೆಯಲಾದ ಯಾವುದೇ ರಾಜೀನಾಮೆ ಬಗ್ಗೆ ತಕ್ಷಣವೇ ಲೋಕಸಭೆಯ ಅಧ್ಯಕ್ಷನಿಗೆ ತಿಳಿಸತಕ್ಕದ್ದು.

**57. ಮರು ಚುನಾವಣೆಗೆ ಅರ್ಹತೆ:**– ರಾಷ್ಟ್ರಪತಿಯಾಗಿ ಪದಧಾರಣ ಮಾಡಿರುವ ಅಥವಾ ಮಾಡಿದ್ದ ವ್ಯಕ್ತಿಯು ಈ ಸಂವಿಧಾನದ ಇತರ ಉಪಬಂಧಗಳಿಗೆ ಒಳಪಟ್ಟು, ಆ ಪದಕ್ಕೆ ಮರುಚುನಾಯಿತನಾಗಲು ಅರ್ಹನಾಗಿರತಕ್ಕದ್ದು.

**58. ರಾಷ್ಟ್ರಪತಿಯಾಗಿ ಚುನಾಯಿತನಾಗಲು ಅರ್ಹತೆಗಳು:**– (1) ಯಾರೇ ವ್ಯಕ್ತಿಯು,–

(ಎ) ಅವನು ಭಾರತದ ನಾಗರಿಕನಾಗಿರುವ ಹೊರತು,

(ಬಿ) ಅವನಿಗೆ ಮೂವತ್ತೈದು ವರ್ಷ ವಯಸ್ಸು ಪೂರ್ತಿಯಾಗಿರುವ ಹೊರತು, ಮತ್ತು

(ಸಿ) ಲೋಕಸಭೆಯ ಸದಸ್ಯನಾಗಿ ಚುನಾಯಿತನಾಗಲು ಅವನಿಗೆ ಅರ್ಹತೆಯಿರುವ ಹೊರತು

– ರಾಷ್ಟ್ರಪತಿಯಾಗಿ ಚುನಾಯಿತನಾಗಲು ಅರ್ಹನಾಗತಕ್ಕದ್ದಲ್ಲ.

---

1. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 12ನೇ ಪ್ರಕರಣದ ಮೂಲಕ ವಿವರಣೆಗೆ ಬದಲಾಗಿ (3.1.1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

2. 2001 ನೇ ಇಸವಿಯ ಸಂವಿಧಾನ (ಎಂಬತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ "2000 ದ" ಎಂಬ ಅಂಕಿಗಳಿಗೆ ಮತ್ತು ಅಕ್ಷರಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(2) ಯಾರೇ ವ್ಯಕ್ತಿಯು, ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯಸರ್ಕಾರದ ಅಧೀನದಲ್ಲಿ ಅಥವಾ ಆ ಯಾವುದೇ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರುವ ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ಇತರ ಪ್ರಾಧಿಕಾರದ ಅಧೀನದಲ್ಲಿ ಯಾವುದೇ ಲಾಭದಾಯಕ ಪದವನ್ನು ಧಾರಣಮಾಡಿದ್ದರೆ ಅವನು ರಾಷ್ಟ್ರಪತಿಯಾಗಿ ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ.

**ವಿವರಣೆ.**– ಈ ಅನುಚ್ಛೇದದ ಉದ್ದೇಶಗಳಿಗಾಗಿ, ಯಾರೇ ವ್ಯಕ್ತಿಯು ಒಕ್ಕೂಟದ ರಾಷ್ಟ್ರಪತಿಯಾಗಿ ಅಥವಾ ಉಪರಾಷ್ಟ್ರಪತಿಯಾಗಿ ಅಥವಾ ಯಾವುದೇ ರಾಜ್ಯದ ರಾಜ್ಯಪಾಲನಾಗಿ [1]* * * ಅಥವಾ ಒಕ್ಕೂಟದ ಅಥವಾ ಯಾವುದೇ ರಾಜ್ಯದ ಮಂತ್ರಿಯಾಗಿ ಇರುವ ಕಾರಣಮಾತ್ರದಿಂದಲೇ ಅವನು ಲಾಭದಾಯಕ ಪದವನ್ನು ಧಾರಣ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ.

**59. ರಾಷ್ಟ್ರಪತಿಯ ಪದದ ಷರತ್ತುಗಳು:**– (1) ರಾಷ್ಟ್ರಪತಿಯು ಸಂಸತ್ತಿನ ಯಾವುದೇ ಸದನದ ಅಥವಾ ಯಾವುದೇ ರಾಜ್ಯದ ವಿಧಾನಮಂಡಲದ ಯಾವುದೇ ಸದನದ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಸಂಸತ್ತಿನ ಯಾವುದೇ ಒಂದು ಸದನದ ಅಥವಾ ಯಾವುದೇ ರಾಜ್ಯದ ವಿಧಾನಮಂಡಲದ ಒಂದು ಸದನದ ಸದಸ್ಯನೊಬ್ಬನು ರಾಷ್ಟ್ರಪತಿಯಾಗಿ ಚುನಾಯಿತನಾದರೆ, ಅವನು ರಾಷ್ಟ್ರಪತಿಯಾಗಿ ಪದವನ್ನು ವಹಿಸಿಕೊಂಡ ದಿನಾಂಕದಂದು ಆ ಸದನದಲ್ಲಿನ ತನ್ನ ಸ್ಥಾನವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕದ್ದು.

(2) ರಾಷ್ಟ್ರಪತಿಯು ಇತರ ಯಾವುದೇ ಲಾಭದಾಯಕ ಪದವನ್ನು ಧಾರಣ ಮಾಡತಕ್ಕದ್ದಲ್ಲ.

(3) ರಾಷ್ಟ್ರಪತಿಯು ಬಾಡಿಗೆಯನ್ನು ಸಂದಾಯ ಮಾಡದೆ ತನ್ನ ಅಧಿಕೃತ ನಿವಾಸಗಳ ಉಪಯೋಗಕ್ಕೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಸಂಸತ್ತು ಕಾನೂನಿನ ಮೂಲಕ ನಿರ್ಧರಿಸಬಹುದಾದಂಥ ಉಪಲಬ್ಧಿಗಳಿಗೆ, ಭತ್ಯಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಮತ್ತು ಆ ಬಗ್ಗೆ ಹಾಗೆ ಉಪಬಂಧಿಸುವವರೆಗೆ, ಅವನು ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂಥ ಉಪಲಬ್ಧಿಗಳಿಗೆ, ಭತ್ಯೆಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಸಹ ಹಕ್ಕುಳ್ಳವನಾಗಿರತಕ್ಕದ್ದು.

(4) ರಾಷ್ಟ್ರಪತಿಯ ಪದಾವಧಿಯಲ್ಲಿ ಅವನ ಉಪಲಬ್ಧಿಗಳನ್ನು ಮತ್ತು ಭತ್ಯಗಳನ್ನು ಕಡಿಮೆ ಮಾಡತಕ್ಕದ್ದಲ್ಲ.

**60. ರಾಷ್ಟ್ರಪತಿಯಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ:**– ಪ್ರತಿಯೊಬ್ಬ ರಾಷ್ಟ್ರಪತಿಯು ಮತ್ತು ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುವ ಅಥವಾ ರಾಷ್ಟ್ರಪತಿಯ ಪ್ರಕಾರ್ಯಗಳನ್ನು ನಿರ್ವಹಿಸುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ಪದವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ಭಾರತದ ಮುಖ್ಯ ನ್ಯಾಯಾಧೀಶನ ಸಮಕ್ಷಮದಲ್ಲಿ ಅಥವಾ ಅವನ ಗೈರುಹಾಜರಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳ ಪೈಕಿ ಲಭ್ಯವಿರುವ ಜ್ಯೇಷ್ಠತಮ ನ್ಯಾಯಾಧೀಶನ ಸಮಕ್ಷಮದಲ್ಲಿ, ಈ ಕೆಳಕಂಡ ನಮೂನೆಯಲ್ಲಿ ಪ್ರಮಾಣ ಅಥವಾ ಪ್ರತಿಜ್ಞೆ ಮಾಡತಕ್ಕದ್ದು ಮತ್ತು ಅದಕ್ಕೆ ತನ್ನ ರುಜು ಹಾಕತಕ್ಕದ್ದು; ಎಂದರೆ:–

"........... ಎಂಬ ಹೆಸರಿನ ನಾನು, ಭಾರತದ ರಾಷ್ಟ್ರಪತಿ ಪದದ ಕಾರ್ಯಪಾಲನೆಯನ್ನು (ಅಥವಾ ರಾಷ್ಟ್ರಪತಿಯ ಪ್ರಕಾರ್ಯಗಳ ನಿರ್ವಹಣೆಯನ್ನು) ನಿಷ್ಠಾಪೂರ್ವಕವಾಗಿ ಮಾಡುತ್ತೇನೆಂದು ಮತ್ತು ನನಗೆ ಸಾಮರ್ಥ್ಯವಿದ್ದಷ್ಟೂ ಭಾರತದ ಸಂವಿಧಾನದ ಮತ್ತು ಕಾನೂನಿನ ಪರಿರಕ್ಷಣೆ, ಸಂರಕ್ಷಣೆ ಮತ್ತು ಪ್ರತಿರಕ್ಷಣೆ ಮಾಡುತ್ತೇನೆಂದು ಮತ್ತು ಭಾರತದ ಜನತೆಯ ಸೇವೆಯಲ್ಲಿ ಮತ್ತು ಯೋಗಕ್ಷೇಮ ಸಾಧನೆಯಲ್ಲಿ ನಿರತನಾಗಿರುತ್ತೇನೆಂದೂ, ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ / ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

**61. ರಾಷ್ಟ್ರಪತಿಯ ಮಹಾಭಿಯೋಗದ ಬಗ್ಗೆ ಕಾರ್ಯವಿಧಾನ:**– (1) ರಾಷ್ಟ್ರಪತಿಯು ಈ ಸಂವಿಧಾನವನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಅವನನ್ನು ಮಹಾಭಿಯೋಗಕ್ಕೆ ಗುರಿಪಡಿಸಬೇಕಾದಾಗ, ಸಂಸತ್ತಿನ ಯಾವುದೇ ಒಂದು ಸದನವು ದೋಷಾರೋಪವನ್ನು ಮಾಡತಕ್ಕದ್ದು.

(2) ಅಂಥ ಯಾವುದೇ ದೋಷಾರೋಪವನ್ನು –

(ಎ) ಅಂಥ ದೋಷಾರೋಪವನ್ನು ಮಾಡುವ ಪ್ರಸ್ತಾವವು ಒಂದು ನಿರ್ಣಯದಲ್ಲಿ ಅಡಕವಾಗಿದ್ದು ಅದನ್ನು ಮಂಡಿಸುವ ತಮ್ಮ ಉದ್ದೇಶವನ್ನು ತಿಳಿಸಿ ಆ ಸದನದ ಒಟ್ಟು ಸದಸ್ಯರ ಪೈಕಿ ನಾಲ್ಕನೆಯ ಒಂದು ಭಾಗಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ರುಜು ಹಾಕಿರುವ ಲಿಖಿತ ನೋಟೀಸನ್ನು ಕನಿಷ್ಠಪಕ್ಷ ಹದಿನಾಲ್ಕು ದಿನಗಳ ಮೊದಲು ಕೊಟ್ಟ ತರುವಾಯ ಆ ನಿರ್ಣಯವನ್ನು ಮಂಡಿಸಿದ್ದ ಹೊರತು; ಮತ್ತು

(ಬಿ) ಆ ಸದನದ ಒಟ್ಟು ಸದಸ್ಯರಲ್ಲಿ ಮೂರನೆಯ ಎರಡು ಭಾಗಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರ ಬಹುಮತದಿಂದ ಅಂಥ ನಿರ್ಣಯವು ಅಂಗೀಕೃತವಾದ ಹೊರತು

– ಮಾಡತಕ್ಕದ್ದಲ್ಲ.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಮೂಲಕ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನಾಗಿ ಅಥವಾ ಉಪರಾಜಪ್ರಮುಖನಾಗಿ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

(3) ಸಂಸತ್ತಿನ ಯಾವುದೇ ಒಂದು ಸದನವು ಹಾಗೆ ದೋಷಾರೋಪವನ್ನು ಮಾಡಿರುವಾಗ, ಇನ್ನೊಂದು ಸದನವು ಆ ದೋಷಾರೋಪದ ಬಗ್ಗೆ ತನಿಖೆಯನ್ನು ಮಾಡತಕ್ಕದ್ದು ಅಥವಾ ಮಾಡಿಸತಕ್ಕದ್ದು ಮತ್ತು ಅಂಥ ತನಿಖೆಯಲ್ಲಿ ರಾಷ್ಟ್ರಪತಿಯು ಹಾಜರಾಗಲು ಮತ್ತು ತನ್ನನ್ನು ಪ್ರತಿನಿಧಿಸಲು ಹಕ್ಕು ಹೊಂದಿರತಕ್ಕದ್ದು.

(4) ತನಿಖೆಯ ಪರಿಣಾಮವಾಗಿ, ದೋಷಾರೋಪದ ತನಿಖೆಯನ್ನು ಮಾಡಿದ ಅಥವಾ ಮಾಡಿಸಿದ ಸದನದ ಒಟ್ಟು ಸದಸ್ಯರ ಮೂರನೆಯ ಎರಡು ಭಾಗಕ್ಕೆ ಕಡಿಮೆಯಿಲ್ಲದಷ್ಟು ಬಹುಮತದಿಂದ, ರಾಷ್ಟ್ರಪತಿಯ ವಿರುದ್ಧ ಮಾಡಿದ ದೋಷಾರೋಪವು ಸಮರ್ಥಿತವಾಗಿದೆಯೆಂದು ಘೋಷಿಸುವ ನಿರ್ಣಯವು ಅಂಗೀಕೃತವಾದರೆ, ಆ ನಿರ್ಣಯವು ಹಾಗೆ ಅಂಗೀಕೃತವಾದ ದಿನಾಂಕದಿಂದ ರಾಷ್ಟ್ರಪತಿಯನ್ನು ಅವನ ಪದದಿಂದ ತೆಗೆದು ಹಾಕುವಂಥ ಪರಿಣಾಮವುಳ್ಳದ್ದಾಗಿರತಕ್ಕದ್ದು.

**62. ರಾಷ್ಟ್ರಪತಿಯ ಪದವು ಖಾಲಿಯಾದಲ್ಲಿ ಅದನ್ನು ಭರ್ತಿಮಾಡಲು ಚುನಾವಣೆ ನಡೆಸುವ ಕಾಲ ಮತ್ತು ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿಮಾಡಲು ಚುನಾಯಿತನಾದ ವ್ಯಕ್ತಿಯ ಪದಾವಧಿ:–** (1) ರಾಷ್ಟ್ರಪತಿಯ ಪದಾವಧಿಯು ಮುಕ್ತಾಯಗೊಳ್ಳುವುದರಿಂದ ಉಂಟಾಗುವ ಖಾಲಿಸ್ಥಾನವನ್ನು ಭರ್ತಿ ಮಾಡುವುದಕ್ಕೆ ನಡೆಸಬೇಕಾದ ಚುನಾವಣೆಯು ಆ ಅವಧಿಯು ಕೊನೆಗೊಳ್ಳುವುದರೊಳಗಾಗಿ ಪೂರ್ತಿಯಾಗತಕ್ಕದ್ದು.

(2) ರಾಷ್ಟ್ರಪತಿಯ ಮರಣದಿಂದ, ರಾಜೀನಾಮೆಯಿಂದ ಅಥವಾ ಅವನನ್ನು ತೆಗೆದುಹಾಕುವುದರಿಂದ ಅಥವಾ ಅನ್ಯಥಾ ಉಂಟಾಗುವ ರಾಷ್ಟ್ರಪತಿಯ ಪದದಲ್ಲಿನ ಖಾಲಿಸ್ಥಾನವನ್ನು ಭರ್ತಿಮಾಡುವುದಕ್ಕೆ ಚುನಾವಣೆಯನ್ನು, ಆ ಸ್ಥಾನವು ಖಾಲಿಯಾದ ತರುವಾಯ ಸಾಧ್ಯವಾದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲಿ ಸ್ಥಾನವು ಖಾಲಿಯಾದ ದಿನಾಂಕದಿಂದ ಆರು ತಿಂಗಳುಗಳಿಗೆ ಮೀರದಂತೆ ನಡೆಸತಕ್ಕದ್ದು; ಮತ್ತು ಖಾಲಿಸ್ಥಾನವನ್ನು ಭರ್ತಿಮಾಡುವುದಕ್ಕೆ ಚುನಾಯಿತನಾದ ವ್ಯಕ್ತಿಯು, ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ, 56ನೆಯ ಅನುಚ್ಛೇದದ ಉಪಬಂಧಗಳಿಗೊಳಪಟ್ಟು ಐದು ವರ್ಷಗಳ ಪೂರ್ತಿ ಅವಧಿಯವರೆಗೆ ಪದಧಾರಣ ಮಾಡಲು ಹಕ್ಕುಳ್ಳವನಾಗತಕ್ಕದ್ದು.

**63. ಭಾರತದ ಉಪರಾಷ್ಟ್ರಪತಿ:–** ಭಾರತಕ್ಕೆ ಒಬ್ಬ ಉಪರಾಷ್ಟ್ರಪತಿ ಇರತಕ್ಕದ್ದು.

**64. ಉಪರಾಷ್ಟ್ರಪತಿಯು ರಾಜ್ಯಸಭೆಯ ಪದನಿಮಿತ್ತ ಸಭಾಪತಿಯಾಗಿರತಕ್ಕದ್ದು:–** ಉಪರಾಷ್ಟ್ರಪತಿಯು ರಾಜ್ಯಸಭೆಯ ಪದನಿಮಿತ್ತ ಸಭಾಪತಿಯಾಗಿರತಕ್ಕದ್ದು ಮತ್ತು ಅವನು ಮತ್ತಾವುದೇ ಲಾಭದಾಯಕ ಪದದಲ್ಲಿ ಇರತಕ್ಕದ್ದಲ್ಲ:

ಪರಂತು, ಉಪರಾಷ್ಟ್ರಪತಿಯು 65ನೆಯ ಅನುಚ್ಛೇದದ ಮೇರೆಗೆ, ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುವ ಅಥವಾ ರಾಷ್ಟ್ರಪತಿಯ ಪ್ರಕಾರ್ಯಗಳನ್ನು ನಿರ್ವಹಿಸುವ ಯಾವುದೇ ಅವಧಿಯಲ್ಲಿ, ರಾಜ್ಯಸಭೆಯ ಸಭಾಪತಿಯ ಪದದ ಕರ್ತವ್ಯಗಳನ್ನು ನೆರವೇರಿಸತಕ್ಕದ್ದಲ್ಲ ಮತ್ತು 97ನೆಯ ಅನುಚ್ಛೇದದ ಮೇರೆಗೆ ರಾಜ್ಯಸಭೆಯ ಸಭಾಪತಿಗೆ ಸಂದಾಯವಾಗಬೇಕಾದ ಯಾವುದೇ ವೇತನಕ್ಕಾಗಲಿ ಅಥವಾ ಭತ್ಯಕ್ಕಾಗಲಿ ಹಕ್ಕುಳ್ಳವನಾಗಿರತಕ್ಕದ್ದಲ್ಲ.

**65. ರಾಷ್ಟ್ರಪತಿಯ ಪದವು ಆಕಸ್ಮಿಕವಾಗಿ ಖಾಲಿಯಾದಲ್ಲಿ ಅಥವಾ ರಾಷ್ಟ್ರಪತಿಯ ಗೈರುಹಾಜರಿಯಲ್ಲಿ ಉಪರಾಷ್ಟ್ರಪತಿಯು ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುವುದು ಅಥವಾ ಅವನ ಪ್ರಕಾರ್ಯಗಳನ್ನು ನಿರ್ವಹಿಸುವುದು:–** (1) ರಾಷ್ಟ್ರಪತಿಯ ಮರಣದಿಂದ, ರಾಜೀನಾಮೆಯಿಂದ ಅಥವಾ ಅವನನ್ನು ತೆಗೆದುಹಾಕುವುದರಿಂದ ಅಥವಾ ಅನ್ಯಥಾ ರಾಷ್ಟ್ರಪತಿಯ ಪದದಲ್ಲಿ ಯಾವುದೇ ಖಾಲಿಸ್ಥಾನ ಉಂಟಾದ ಸಂದರ್ಭದಲ್ಲಿ, ಅಂಥ ಖಾಲಿಸ್ಥಾನವನ್ನು ಭರ್ತಿ ಮಾಡುವುದಕ್ಕೆ ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಚುನಾಯಿತನಾದ ಹೊಸ ರಾಷ್ಟ್ರಪತಿಯು, ತನ್ನ ಪದವನ್ನು ವಹಿಸಿಕೊಳ್ಳುವ ದಿನಾಂಕದವರೆಗೆ ಉಪರಾಷ್ಟ್ರಪತಿಯು ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

(2) ಗೈರುಹಾಜರಿಯಿಂದ, ಕಾಯಿಲೆಯಿಂದ ಅಥವಾ ಇತರ ಯಾವುದೇ ಕಾರಣದಿಂದ ರಾಷ್ಟ್ರಪತಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾದಾಗ, ಅವನು ತನ್ನ ಕರ್ತವ್ಯಗಳನ್ನು ಮತ್ತೆ ವಹಿಸಿಕೊಳ್ಳುವ ದಿನಾಂಕದವರೆಗೆ ಉಪರಾಷ್ಟ್ರಪತಿಯು ರಾಷ್ಟ್ರಪತಿಯ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ಉಪರಾಷ್ಟ್ರಪತಿಯು, ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುವ ಅಥವಾ ರಾಷ್ಟ್ರಪತಿಯ ಪ್ರಕಾರ್ಯಗಳನ್ನು ನಿರ್ವಹಿಸುವ ಅವಧಿಯಲ್ಲಿ ಮತ್ತು ಆ ಅವಧಿಗೆ ಸಂಬಂಧಿಸಿದಂತೆ, ರಾಷ್ಟ್ರಪತಿಯ ಎಲ್ಲ ಅಧಿಕಾರಗಳನ್ನು ಮತ್ತು ಉನ್ಮುಕ್ತಿಗಳನ್ನು ಹೊಂದಿರತಕ್ಕದ್ದು ಮತ್ತು ಸಂಸತ್ತು ಕಾನೂನಿನ ಮೂಲಕ ನಿರ್ಧರಿಸಬಹುದಾದಂಥ ಉಪಲಬ್ಧಿಗಳಿಗೆ, ಭತ್ಯಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಮತ್ತು ಆ ಬಗ್ಗೆ ಹಾಗೆ ಉಪಬಂಧಿಸುವವರೆಗೆ ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂಥ ಉಪಲಬ್ಧಿಗಳಿಗೆ, ಭತ್ಯಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಅವನು ಹಕ್ಕುಳ್ಳವನಾಗಿರತಕ್ಕದ್ದು.

**66. ಉಪರಾಷ್ಟ್ರಪತಿಯ ಚುನಾವಣೆ:–** (1) [1][ಸಂಸತ್ತಿನ ಉಭಯ ಸದನಗಳ ಸದಸ್ಯರನ್ನು ಒಳಗೊಂಡ ಒಂದು ಚುನಾಯಕ ಗಣದ ಸದಸ್ಯರುಗಳ] ಮೂಲಕ ಏಕವರ್ಗಾವಣೀಯ ಮತದ ವಿಧಾನದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಗನುಸಾರವಾಗಿ ಉಪರಾಷ್ಟ್ರಪತಿಯು ಚುನಾಯಿತನಾಗತಕ್ಕದ್ದು ಮತ್ತು ಅಂಥ ಚುನಾವಣೆಯಲ್ಲಿ ಮತದಾನವು ರಹಸ್ಯ ಮತದಾನದ ಮೂಲಕ ನಡೆಯತಕ್ಕದ್ದು.

(2) ಉಪರಾಷ್ಟ್ರಪತಿಯು ಸಂಸತ್ತಿನ ಯಾವುದೇ ಸದನದ ಅಥವಾ ಯಾವುದೇ ರಾಜ್ಯದ ವಿಧಾನಮಂಡಲದ ಯಾವುದೇ ಸದನದ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಸಂಸತ್ತಿನ ಯಾವುದೇ ಸದನದ ಅಥವಾ ಯಾವುದೇ ರಾಜ್ಯದ ವಿಧಾನಮಂಡಲದ ಯಾವುದೇ ಸದನದ ಸದಸ್ಯನೊಬ್ಬನು ಉಪರಾಷ್ಟ್ರಪತಿಯಾಗಿ ಚುನಾಯಿತನಾದರೆ, ಅವನು ಉಪರಾಷ್ಟ್ರಪತಿಯಾಗಿ ಪದವನ್ನು ವಹಿಸಿಕೊಂಡ ದಿನಾಂಕದಂದು ಆ ಸದನದಲ್ಲಿನ ತನ್ನ ಸ್ಥಾನವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕದ್ದು.

(3) ಯಾರೇ ವ್ಯಕ್ತಿಯು,–

(ಎ) ಅವನು ಭಾರತದ ನಾಗರಿಕನಾಗಿರುವ ಹೊರತು;

(ಬಿ) ಅವನಿಗೆ ಮೂವತ್ತೈದು ವರ್ಷ ವಯಸ್ಸು ಪೂರ್ತಿಯಾಗಿರುವ ಹೊರತು; ಮತ್ತು

(ಸಿ) ರಾಜ್ಯಸಭೆಯ ಸದಸ್ಯನಾಗಿ ಚುನಾಯಿತನಾಗಲು ಅವನಿಗೆ ಅರ್ಹತೆಯಿರುವ ಹೊರತು

– ಉಪರಾಷ್ಟ್ರಪತಿಯಾಗಿ ಚುನಾಯಿತನಾಗಲು ಅರ್ಹನಾಗತಕ್ಕದ್ದಲ್ಲ.

(4) ಯಾರೇ ವ್ಯಕ್ತಿಯು, ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿ ಅಥವಾ ಆ ಯಾವುದೇ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರುವ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಧೀನದಲ್ಲಿ ಯಾವುದೇ ಲಾಭದಾಯಕ ಪದವನ್ನು ಧಾರಣಮಾಡಿದ್ದರೆ ಅವನು ಉಪರಾಷ್ಟ್ರಪತಿಯಾಗಿ ಚುನಾಯಿತನಾಗಲು ಅರ್ಹನಾಗತಕ್ಕದ್ದಲ್ಲ.

**ವಿವರಣೆ:–** ಈ ಅನುಚ್ಛೇದದ ಉದ್ದೇಶಗಳಿಗಾಗಿ, ಯಾರೇ ವ್ಯಕ್ತಿಯು, ಒಕ್ಕೂಟದ ರಾಷ್ಟ್ರಪತಿಯಾಗಿ ಅಥವಾ ಉಪರಾಷ್ಟ್ರಪತಿಯಾಗಿ ಅಥವಾ ಯಾವುದೇ ರಾಜ್ಯದ ರಾಜ್ಯಪಾಲನಾಗಿ [2]* * * * ಅಥವಾ ಒಕ್ಕೂಟದ ಅಥವಾ ಯಾವುದೇ ರಾಜ್ಯದ ಮಂತ್ರಿಯಾಗಿ ಇರುವ ಕಾರಣ ಮಾತ್ರದಿಂದಲೇ ಅವನು ಲಾಭದಾಯಕ ಪದವನ್ನು ಧಾರಣಮಾಡಿರುವುದಾಗಿ ಭಾವಿಸತಕ್ಕದ್ದಲ್ಲ.

**67. ಉಪರಾಷ್ಟ್ರಪತಿಯ ಪದಾವಧಿ:–** ಉಪರಾಷ್ಟ್ರಪತಿಯು, ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು:

ಪರಂತು,–

(ಎ) ಉಪರಾಷ್ಟ್ರಪತಿಯು ತಾನು ಸಹಿಮಾಡಿದ ಪತ್ರವನ್ನು ರಾಷ್ಟ್ರಪತಿಗೆ ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು;

(ಬಿ) ಉಪರಾಷ್ಟ್ರಪತಿಯನ್ನು, ರಾಜ್ಯಸಭೆಯ ಆಗಿನ ಎಲ್ಲಾ ಸದಸ್ಯರ ಬಹುಮತದ ಮೂಲಕ ಅಂಗೀಕೃತವಾಗಿ ಲೋಕಸಭೆಯ ಒಪ್ಪಿಗೆ ಪಡೆದ ನಿರ್ಣಯದ ಮೂಲಕ ಅವನ ಪದದಿಂದ ತೆಗೆದು ಹಾಕಬಹುದು; ಆದರೆ, ಈ ಖಂಡದ ಉದ್ದೇಶಕ್ಕಾಗಿ ಯಾವುದೇ ನಿರ್ಣಯವನ್ನು ಮಂಡಿಸುವ ಉದ್ದೇಶದ ನೋಟೀಸನ್ನು ಕನಿಷ್ಠ ಪಕ್ಷ ಹದಿನಾಲ್ಕು ದಿನಗಳ ಮುಂಚಿತವಾಗಿ ಕೊಟ್ಟಿದ್ದ ಹೊರತು, ಅಂಥ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ;

(ಸಿ) ಉಪರಾಷ್ಟ್ರಪತಿಯ ಪದಾವಧಿಯು ಮುಕ್ತಾಯವಾಗಿದ್ದಾಗ್ಯೂ, ಅವನ ಉತ್ತರಾಧಿಕಾರಿಯು ಪದವನ್ನು ವಹಿಸಿಕೊಳ್ಳುವವರೆಗೆ ಅವನು ತನ್ನ ಪದದಲ್ಲಿ ಮುಂದುವರಿಯತಕ್ಕದ್ದು.

**68. ಉಪರಾಷ್ಟ್ರಪತಿಯ ಪದವು ಖಾಲಿಯಾದಲ್ಲಿ ಅದನ್ನು ಭರ್ತಿಮಾಡಲು ಚುನಾವಣೆ ನಡೆಸುವ ಕಾಲ ಮತ್ತು ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡಲು ಚುನಾಯಿತನಾದ ವ್ಯಕ್ತಿಯ ಪದಾವಧಿ:–** (1) ಉಪರಾಷ್ಟ್ರಪತಿಯ ಪದಾವಧಿಯು ಮುಕ್ತಾಯಗೊಳ್ಳುವುದರಿಂದ ಉಂಟಾಗುವ ಖಾಲಿಸ್ಥಾನವನ್ನು ಭರ್ತಿಮಾಡುವುದಕ್ಕೆ ನಡೆಸಬೇಕಾದ ಚುನಾವಣೆಯು ಆ ಅವಧಿಯು ಮುಕ್ತಾಯವಾಗುವುದರೊಳಗಾಗಿ ಪೂರ್ತಿಯಾಗತಕ್ಕದ್ದು.

---

1. 1961ನೆಯ ಇಸವಿಯ ಸಂವಿಧಾನ (ಹನ್ನೊಂದನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ "ಸಂಯುಕ್ತ ಅಧಿವೇಶನದಲ್ಲಿ ಸಭೆ ಸೇರಿದ ಸಂಸತ್ತಿನ ಉಭಯ ಸದಸ್ಯರುಗಳಿಂದ" ಎಂಬ ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಮೂಲಕ ಮತ್ತು ಅನುಸೂಚಿಯ ಮೂಲಕ, "ಅಥವಾ ರಾಜಪ್ರಮುಖನಾಗಿ ಅಥವಾ ಉಪರಾಜ ಪ್ರಮುಖನಾಗಿ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

(2) ಉಪರಾಷ್ಟ್ರಪತಿಯ ಮರಣದಿಂದ, ರಾಜೀನಾಮೆಯಿಂದ ಅಥವಾ ಅವನನ್ನು ತೆಗೆದುಹಾಕುವುದರಿಂದ ಅಥವಾ ಅನ್ಯಥಾ ಉಂಟಾಗುವ ಉಪರಾಷ್ಟ್ರಪತಿಯ ಪದದಲ್ಲಿನ ಖಾಲಿಸ್ಥಾನವನ್ನು ಭರ್ತಿಮಾಡುವುದಕ್ಕೆ ಚುನಾವಣೆಯನ್ನು, ಸ್ಥಾನವು ಖಾಲಿಯಾದ ದಿನಾಂಕದ ತರುವಾಯ ಸಾಧ್ಯವಾದಷ್ಟು ಬೇಗನೆ ನಡಸತಕ್ಕದ್ದು ಮತ್ತು ಆ ಖಾಲಿಸ್ಥಾನವನ್ನು ಭರ್ತಿಮಾಡುವುದಕ್ಕೆ ಚುನಾಯಿತನಾದ ವ್ಯಕ್ತಿಯು ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ, 67ನೆಯ ಅನುಚ್ಛೇದದ ಉಪಬಂಧಗಳಿಗೊಳಪಟ್ಟು, ಐದು ವರ್ಷಗಳ ಪೂರ್ತಿ ಅವಧಿಯವರೆಗೆ ಪದಧಾರಣಮಾಡಲು ಹಕ್ಕುಳ್ಳವನಾಗಿರತಕ್ಕದ್ದು.

**69. ಉಪರಾಷ್ಟ್ರಪತಿಯಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ:–** ಪ್ರತಿಯೊಬ್ಬ ಉಪರಾಷ್ಟ್ರಪತಿಯು ತನ್ನ ಪದವನ್ನು ವಹಿಸಿಕೊಳ್ಳುವುದಕ್ಕೆ ಮೊದಲು ರಾಷ್ಟ್ರಪತಿಯ ಮುಂದೆ ಅಥವಾ ರಾಷ್ಟ್ರಪತಿಯು ಆ ಬಗ್ಗೆ ನೇಮಿಸಿದ ಯಾರೇ ವ್ಯಕ್ತಿಯ ಮುಂದೆ ಈ ಕೆಳಕಂಡ ನಮೂನೆಯಲ್ಲಿ ಪ್ರಮಾಣ ಅಥವಾ ಪ್ರತಿಜ್ಞೆ ಮಾಡತಕ್ಕದ್ದು ಮತ್ತು ತನ್ನ ರುಜು ಹಾಕತಕ್ಕದ್ದು, ಎಂದರೆ:–

"............. ಎಂಬ ಹೆಸರಿನ ನಾನು ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನಕ್ಕೆ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದು ಮತ್ತು ಈಗ ನಾನು ವಹಿಸಿಕೊಳ್ಳಲಿರುವ ಕರ್ತವ್ಯವನ್ನು ನಿಷ್ಠಾಪೂರ್ವಕವಾಗಿ ನಿರ್ವಹಿಸುತ್ತೇನೆಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ
ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

**70. ಇತರ ಆಕಸ್ಮಿಕ ಸಂದರ್ಭಗಳಲ್ಲಿ ರಾಷ್ಟ್ರಪತಿಯ ಪ್ರಕಾರ್ಯಗಳ ನಿರ್ವಹಣೆ:–** ಈ ಅಧ್ಯಾಯದಲ್ಲಿ ಉಪಬಂಧಿಸಿರದ ಯಾವುದೇ ಆಕಸ್ಮಿಕ ಸಂದರ್ಭದಲ್ಲಿ ಸಂಸತ್ತು ರಾಷ್ಟ್ರಪತಿಯ ಪ್ರಕಾರ್ಯಗಳ ನಿರ್ವಹಣೆಗಾಗಿ ತಾನು ಸೂಕ್ತವೆಂದು ಭಾವಿಸುವಂಥ ಉಪಬಂಧಗಳನ್ನು ಮಾಡಬಹುದು.

[1]**[71. ರಾಷ್ಟ್ರಪತಿಯ ಅಥವಾ ಉಪರಾಷ್ಟ್ರಪತಿಯ ಚುನಾವಣೆಗೆ ಸಂಬಂಧಿಸಿದ ಅಥವಾ ಸೇರಿದ ವಿಷಯಗಳು:–** (1) ರಾಷ್ಟ್ರಪತಿಯ ಅಥವಾ ಉಪರಾಷ್ಟ್ರಪತಿಯ ಚುನಾವಣೆಯಿಂದ ಉದ್ಭವಿಸುವ ಅಥವಾ ಅದಕ್ಕೆ ಸಂಬಂಧಪಟ್ಟ ಎಲ್ಲ ಸಂದೇಹಗಳನ್ನು ಮತ್ತು ವಿವಾದಗಳನ್ನು ಸರ್ವೋಚ್ಚ ನ್ಯಾಯಾಲಯವು ವಿಚಾರಣೆ ಮಾಡತಕ್ಕದ್ದು ಹಾಗೂ ತೀರ್ಮಾನಿಸತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(2) ರಾಷ್ಟ್ರಪತಿಯಾಗಿ ಅಥವಾ ಉಪರಾಷ್ಟ್ರಪತಿಯಾಗಿ ಚುನಾಯಿತನಾದ ಯಾರೇ ವ್ಯಕ್ತಿಯ ಚುನಾವಣೆಯು ಶೂನ್ಯವಾಗಿದೆಯೆಂದು ಸರ್ವೋಚ್ಚ ನ್ಯಾಯಾಲಯವು ಘೋಷಿಸಿದಲ್ಲಿ, ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ರಾಷ್ಟ್ರಪತಿಯ ಪದದ ಅಥವಾ ಸಂದರ್ಭಾನುಸಾರ ಉಪರಾಷ್ಟ್ರಪತಿಯ ಪದದ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ಕರ್ತವ್ಯಗಳ ನೆರವೇರಿಕೆಯಲ್ಲಿ ಅವನು ಮಾಡಿರುವ ಕಾರ್ಯಗಳು ಆ ಘೋಷಣೆಯ ಕಾರಣದಿಂದಾಗಿ ಅಸಿಂಧುವಾಗತಕ್ಕದ್ದಲ್ಲ.

(3) ಸಂಸತ್ತು ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ರಾಷ್ಟ್ರಪತಿಯ ಅಥವಾ ಉಪರಾಷ್ಟ್ರಪತಿಯ ಚುನಾವಣೆಗೆ ಸಂಬಂಧಿಸಿದ ಅಥವಾ ಸೇರಿದ ಯಾವುದೇ ವಿಷಯವನ್ನು ಕಾನೂನಿನ ಮೂಲಕ ವಿನಿಯಮಿಸಬಹುದು.

(4) ಒಬ್ಬ ವ್ಯಕ್ತಿಯನ್ನು ರಾಷ್ಟ್ರಪತಿಯಾಗಿ ಅಥವಾ ಉಪರಾಷ್ಟ್ರಪತಿಯಾಗಿ ಚುನಾಯಿಸಿರುವ ಚುನಾಯಕ ಗಣದ ಸದಸ್ಯರ ಪೈಕಿ ಯಾವುದೇ ಕಾರಣದಿಂದ ಯಾವುದೇ ಸ್ಥಾನವು ಖಾಲಿಯಿತ್ತೆಂಬ ಕಾರಣದ ಮೇಲೆ ಅಂಥ ವ್ಯಕ್ತಿಯ ಚುನಾವಣೆಯನ್ನು ಪ್ರಶ್ನಿಸತಕ್ಕದ್ದಲ್ಲ.]

**72. ಕೆಲವು ಪ್ರಕರಣಗಳಲ್ಲಿ ಕ್ಷಮಾದಾನ, ಮುಂತಾದವುಗಳನ್ನು ಮಾಡಲು, ಶಿಕ್ಷೆಯನ್ನು ಅಮಾನತ್ತಿನಲ್ಲಿಡಲು, ಮಾಫಿ ಮಾಡಲು ಅಥವಾ ಪರಿವರ್ತನೆ ಮಾಡಲು ರಾಷ್ಟ್ರಪತಿಯ ಅಧಿಕಾರ:–** (1) ಯಾವುದೇ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾದ ಯಾರೇ ವ್ಯಕ್ತಿಗೆ,–

(ಎ) ಸೇನಾ ನ್ಯಾಯಾಲಯವು ದಂಡನೆಯನ್ನು ಅಥವಾ ಶಿಕ್ಷೆಯನ್ನು ವಿಧಿಸಿದ ಎಲ್ಲ ಪ್ರಕರಣಗಳಲ್ಲಿ;

(ಬಿ) ಒಕ್ಕೂಟದ ಕಾರ್ಯಾಂಗ ಅಧಿಕಾರವು ವಿಸ್ತೃತವಾಗುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂಥ ಯಾವುದೇ ಕಾನೂನಿನ ವಿರುದ್ಧವಾದ ಅಪರಾಧಕ್ಕಾಗಿ ದಂಡನೆಯನ್ನು ಅಥವಾ ಶಿಕ್ಷೆಯನ್ನು ವಿಧಿಸಿರುವ ಎಲ್ಲ ಪ್ರಕರಣಗಳಲ್ಲಿ;

---

1. 71ನೇ ಅನುಚ್ಛೇದವನ್ನು 1975ನೇ ಇಸವಿಯ ಸಂವಿಧಾನ (ಮೂವತ್ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (10-8-75ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿತ್ತು. ಆ ತರುವಾಯ 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ)ಅಧಿನಿಯಮದ ಮೂಲಕ (20-6-79 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ. ಆದನ್ನು ಮೇಲಿರುವಂತೆ ಓದಿಕೊಳ್ಳತಕ್ಕದ್ದು.

(ಸಿ) ಶಿಕ್ಷೆಯು ಮರಣದಂಡನೆಯ ಶಿಕ್ಷೆಯಾಗಿರುವ ಎಲ್ಲ ಪ್ರಕರಣಗಳಲ್ಲಿ

– ವಿಧಿಸಿರುವ ದಂಡನೆಯ ಸಂಬಂಧದಲ್ಲಿ ಕ್ಷಮಾದಾನವನ್ನು, ಪ್ರವಿಲಂಬನವನ್ನು, ಮುಂದೂಡುವಿಕೆಯನ್ನು ಅಥವಾ ಮಾಫಿಯನ್ನು ಮಾಡಲು ಅಥವಾ ಶಿಕ್ಷೆಯನ್ನು ಅಮಾನತ್ತುಗೊಳಿಸಲು, ಮಾಫಿ ಮಾಡಲು ಅಥವಾ ಪರಿವರ್ತಿಸಲು ರಾಷ್ಟ್ರಪತಿಯು ಅಧಿಕಾರ ಹೊಂದಿರತಕ್ಕದ್ದು.

(2) (1) ನೆಯ ಖಂಡದ (ಎ) ಉಪಖಂಡದಲ್ಲಿ ಇರುವುದು ಯಾವುದೂ, ಯಾವುದೇ ಸೇನಾ ನ್ಯಾಯಾಲಯವು ವಿಧಿಸಿರುವ ಶಿಕ್ಷೆಯನ್ನು ಅಮಾನತ್ತುಗೊಳಿಸಲು, ಮಾಫಿ ಮಾಡಲು ಅಥವಾ ಪರಿವರ್ತನೆ ಮಾಡಲು ಒಕ್ಕೂಟದ ಸಶಸ್ತ್ರ ಬಲಗಳ ಯಾರೇ ಅಧಿಕಾರಿಗೆ ಕಾನೂನಿನ ಮೂಲಕ ಪ್ರದಾನ ಮಾಡಲಾಗಿರುವ ಅಧಿಕಾರವನ್ನು ಬಾಧಕಗೊಳಿಸತಕ್ಕದ್ದಲ್ಲ.

(3) (1) ನೆಯ ಖಂಡದ (ಸಿ) ಉಪಖಂಡದಲ್ಲಿ ಇರುವುದು ಯಾವುದೂ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಾಜ್ಯದ ರಾಜ್ಯಪಾಲನು [1] * * * * ಮರಣದಂಡನೆಯ ಶಿಕ್ಷೆಯನ್ನು ಅಮಾನತ್ತುಗೊಳಿಸಲು, ಮಾಫಿಮಾಡಲು ಅಥವಾ ಪರಿವರ್ತನೆ ಮಾಡಲು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಬಾಧಕಗೊಳಿಸತಕ್ಕದ್ದಲ್ಲ.

**73. ಒಕ್ಕೂಟದ ಕಾರ್ಯಾಂಗ ಅಧಿಕಾರ ವ್ಯಾಪ್ತಿ:-** (1) ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ಒಕ್ಕೂಟದ ಕಾರ್ಯಾಂಗ ಅಧಿಕಾರವನ್ನು,-

(ಎ) ಸಂಸತ್ತು ಕಾನೂನುಗಳನ್ನು ಮಾಡಲು ಅಧಿಕಾರವನ್ನು ಹೊಂದಿರತಕ್ಕ ವಿಷಯಗಳಿಗೆ; ಮತ್ತು

(ಬಿ) ಯಾವುದೇ ಕೌಲಿನ ಅಥವಾ ಒಪ್ಪಂದದ ಕಾರಣದಿಂದಾಗಿ ಭಾರತ ಸರ್ಕಾರವು ಚಲಾಯಿಸಬಹುದಾದಂಥ ಹಕ್ಕುಗಳ, ಪ್ರಾಧಿಕಾರದ ಮತ್ತು ಅಧಿಕಾರ ವ್ಯಾಪ್ತಿಯ ಚಲಾವಣೆಗೆ

– ವಿಸ್ತರಿಸತಕ್ಕದ್ದು:

ಪರಂತು, ಈ ಸಂವಿಧಾನದಲ್ಲಿ ಅಥವಾ ಸಂಸತ್ತು ಮಾಡಿದ ಯಾವುದೇ ಕಾನೂನಿನಲ್ಲಿ ಸ್ಪಷ್ಟವಾಗಿ ಉಪಬಂಧಿಸಿರುವುದನ್ನು ಉಳಿದು [2] * * * * ಯಾವುದೇ ರಾಜ್ಯದ ವಿಧಾನಮಂಡಲವು ಸಹ ಕಾನೂನುಗಳನ್ನು ಮಾಡಲು ಅಧಿಕಾರ ಹೊಂದಿರುವ ವಿಷಯಗಳಿಗೆ ಸಂಬಂಧಪಟ್ಟಂತೆ, ಆ ಯಾವುದೇ ರಾಜ್ಯಕ್ಕೆ (ಎ) ಉಪಖಂಡದಲ್ಲಿ ಉಲ್ಲೇಖಿತವಾಗಿರುವ ಕಾರ್ಯಾಂಗ ಅಧಿಕಾರವನ್ನು ವಿಸ್ತರಿಸತಕ್ಕದ್ದಲ್ಲ.

(2) ಈ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ಯಾವ ರಾಜ್ಯಕ್ಕಾಗಿ ಯಾವ ವಿಷಯಗಳ ಬಗ್ಗೆ ಕಾನೂನುಗಳನ್ನು ಮಾಡಲು ಸಂಸತ್ತಿಗೆ ಅಧಿಕಾರವಿದೆಯೋ ಆ ವಿಷಯಗಳ ಬಗ್ಗೆ ಆ ರಾಜ್ಯವು ಮತ್ತು ಆ ರಾಜ್ಯದ ಯಾರೇ ಅಧಿಕಾರಿಯು ಅಥವಾ ಪ್ರಾಧಿಕಾರವು ಈ ಸಂವಿಧಾನವು ಆರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಚಲಾಯಿಸುತ್ತಿದ್ದ ಕಾರ್ಯಾಂಗ ಅಧಿಕಾರವನ್ನು ಅಥವಾ ಪ್ರಕಾರ್ಯಗಳನ್ನು ಚಲಾಯಿಸುವುದನ್ನು, ಸಂಸತ್ತು ಅನ್ಯಥಾ ಉಪಬಂಧಿಸುವವರೆಗೆ ಮುಂದುವರಿಸಿಕೊಂಡು ಹೋಗಬಹುದು.

## ಮಂತ್ರಿಮಂಡಲ

**74. ರಾಷ್ಟ್ರಪತಿಗೆ ನೆರವು ಮತ್ತು ಸಲಹೆ ನೀಡಲು ಮಂತ್ರಿಮಂಡಲ:-** [3][(1) ರಾಷ್ಟ್ರಪತಿಗೆ ನೆರವು ಮತ್ತು ಸಲಹೆಯನ್ನು ನೀಡಲು ಪ್ರಧಾನಮಂತ್ರಿಯ ನೇತೃತ್ವದಲ್ಲಿ ಒಂದು ಮಂತ್ರಿಮಂಡಲವು ಇರತಕ್ಕದ್ದು ಮತ್ತು ರಾಷ್ಟ್ರಪತಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಮಂತ್ರಿಮಂಡಲದ ಸಲಹೆಗನುಸಾರ ಕಾರ್ಯನಿರ್ವಹಿಸತಕ್ಕದ್ದು:]

[4][ಪರಂತು, ಅಂಥ ಸಲಹೆಯನ್ನು ಸಾಮಾನ್ಯವಾಗಿ ಅಥವಾ ಅನ್ಯಥಾ ಪುನರ್‌ಪರಿಶೀಲಿಸುವಂತೆ ರಾಷ್ಟ್ರಪತಿಯು ಮಂತ್ರಿಮಂಡಲವನ್ನು ಅಗತ್ಯಪಡಿಸಬಹುದು ಮತ್ತು ಅಂಥ ಪುನರ್ ಪರಿಶೀಲನೆಯ ತರುವಾಯ ನೀಡಿದ ಸಲಹೆಗನುಸಾರ ರಾಷ್ಟ್ರಪತಿಯು ಕಾರ್ಯ ನಿರ್ವಹಿಸತಕ್ಕದ್ದು.]

(2) ಮಂತ್ರಿಗಳು ರಾಷ್ಟ್ರಪತಿಗೆ ಯಾವುದೇ ಸಲಹೆಯನ್ನು ನೀಡಿದ್ದರೇ ಮತ್ತು ಹಾಗೆ ನೀಡಿದ್ದರೆ ಯಾವ ಸಲಹೆಯನ್ನು ನೀಡಿದ್ದರು ಎಂಬ ಪ್ರಶ್ನೆಯನ್ನು ಕುರಿತು ಯಾವುದೇ ನ್ಯಾಯಾಲಯದಲ್ಲಿ ವಿಚಾರಣೆ ಮಾಡತಕ್ಕದ್ದಲ್ಲ.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಮೇರೆಗೆ ಮತ್ತು ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
2. 1956ನೆಯ ಇಸವಿ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೇರೆಗೆ "ಮೊದಲನೆಯ ಅನುಸೂಚಿಯ ಎ ಭಾಗದಲ್ಲಿ ಅಥವಾ ಬಿ ಭಾಗದಲ್ಲಿ ನಿರ್ದಿಷ್ಟಪಡಿಸಿರುವ" ಎಂಬ ಪದಗಳನ್ನು ಮತ್ತು ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.
3. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ, 13ನೆಯ ಪ್ರಕರಣದ ಮೂಲಕ (1)ನೆಯ ಖಂಡಕ್ಕೆ ಬದಲಾಗಿ (3-1-77ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
4. 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 11ನೆಯ ಪ್ರಕರಣದ ಮೂಲಕ (20-6-79ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

**75. ಮಂತ್ರಿಗಳ ಬಗ್ಗೆ ಇತರ ಉಪಬಂಧಗಳು:-** (1) ರಾಷ್ಟ್ರಪತಿಯು ಪ್ರಧಾನ ಮಂತ್ರಿಯನ್ನು ನೇಮಕ ಮಾಡತಕ್ಕದ್ದು ಮತ್ತು ಪ್ರಧಾನಮಂತ್ರಿಯ ಸಲಹೆಗನುಸಾರ ರಾಷ್ಟ್ರಪತಿಯು ಇತರ ಮಂತ್ರಿಗಳನ್ನು ನೇಮಕ ಮಾಡತಕ್ಕದ್ದು.

[1][(1ಎ) ಮಂತ್ರಿಮಂಡಲದಲ್ಲಿ, ಪ್ರಧಾನ ಮಂತ್ರಿಯೂ ಸೇರಿದಂತೆ, ಮಂತ್ರಿಗಳ ಒಟ್ಟು ಸಂಖ್ಯೆಯು, ಲೋಕಸಭೆಯ ಸದಸ್ಯರ ಒಟ್ಟು ಸಂಖ್ಯೆಯ ಶೇಕಡ ಹದಿನೈದನ್ನು ಮೀರತಕ್ಕದ್ದಲ್ಲ.

(1ಬಿ) ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರುವ, ಸಂಸತ್ತಿನ ಸದನಗಳಲ್ಲಿ ಯಾವುದೇ ಒಂದು ಸದನದ ಸದಸ್ಯನು, ಹತ್ತನೇ ಅನುಸೂಚಿಯ 2ನೇ ಪ್ಯಾರಾದ ಅಡಿಯಲ್ಲಿ ಆ ಸದನದ ಸದಸ್ಯನಾಗಿರಲು ಅನರ್ಹನಾಗಿದ್ದಲ್ಲಿ, ಆತನು ಅನರ್ಹತೆ ಹೊಂದಿದ ದಿನಾಂಕದಿಂದ ಪ್ರಾರಂಭವಾಗಿ ಹಾಗೆ ಸದಸ್ಯನಾಗಿ ಆತನ ಪದಾವಧಿಯು ಮುಕ್ತಾಯಗೊಳ್ಳುವ ದಿನಾಂಕದವರೆಗೆ ಅಥವಾ ಅಂಥ ಅವಧಿಯು ಮುಕ್ತಾಯವಾಗುವ ಮೊದಲು ಆತನು ಸಂಸತ್ತಿನ ಸದನಗಳಲ್ಲಿ ಯಾವುದೇ ಒಂದು ಸದನಕ್ಕೆ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿದರೆ, ಆತನು ಚುನಾಯಿತನಾಗಿದ್ದಾನೆ ಎಂದು ಘೋಷಿಸುವ ದಿನಾಂಕದವರೆಗೆ, ಅವೆರಡರಲ್ಲಿ ಯಾವುದು ಮುಂಚೆಯೋ, ಅಲ್ಲಿಯವರೆಗೆ (1)ನೇ ಖಂಡದ ಅಡಿಯಲ್ಲಿ ಆತನು ಮಂತ್ರಿಯಾಗಿ ನೇಮಕಗೊಳ್ಳುವುದಕ್ಕೂ ಅನರ್ಹನಾಗತಕ್ಕದ್ದು.]

(2) ರಾಷ್ಟ್ರಪತಿಯ ಇಷ್ಟಪರ್ಯಂತ ಮಂತ್ರಿಗಳು ಪದಧಾರಣ ಮಾಡತಕ್ಕದ್ದು.

(3) ಮಂತ್ರಿಮಂಡಲವು ಲೋಕಸಭೆಗೆ ಸಾಮೂಹಿಕವಾಗಿ ಜವಾಬ್ದಾರಿಯಾಗಿರತಕ್ಕದ್ದು.

(4) ಯಾರೇ ಮಂತ್ರಿಯು ತನ್ನ ಪದವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ರಾಷ್ಟ್ರಪತಿಯು ಅವನಿಗೆ ಪದದ ಮತ್ತು ಗೋಪ್ಯತಾ ಪಾಲನೆಯ ಪ್ರಮಾಣ ವಚನಗಳನ್ನು ಮೂರನೆಯ ಅನುಸೂಚಿಯಲ್ಲಿ ಆ ಉದ್ದೇಶಕ್ಕಾಗಿ ಕೊಡಲಾದ ನಮೂನೆಗಳಿಗೆ ಅನುಸಾರವಾಗಿ ಬೋಧಿಸತಕ್ಕದ್ದು.

(5) ಯಾರೇ ಮಂತ್ರಿಯು, ನಿರಂತರವಾಗಿ ಆರು ತಿಂಗಳ ಯಾವುದೇ ಅವಧಿಯವರೆಗೆ ಸಂಸತ್ತಿನ ಸದನಗಳ ಯಾವುದೇ ಸದನದ ಸದಸ್ಯನಾಗಿರದಿದ್ದರೆ ಆ ಅವಧಿಯು ಮುಕ್ತಾಯವಾದ ಮೇಲೆ ಅವನು ಮಂತ್ರಿಯಾಗಿರುವುದು ನಿಂತುಹೋಗತಕ್ಕದ್ದು.

(6) ಮಂತ್ರಿಗಳ ಸಂಬಳಗಳು ಹಾಗೂ ಭತ್ಯಗಳು ಕಾಲಕಾಲಕ್ಕೆ ಸಂಸತ್ತು ಕಾನೂನಿನ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ಸಂಸತ್ತು ಆ ರೀತಿ ನಿರ್ಧರಿಸುವವರೆಗೆ ಅವು ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಇರತಕ್ಕದ್ದು.

## ಭಾರತದ ಅಟಾರ್ನಿ ಜನರಲ್

**76. ಭಾರತದ ಅಟಾರ್ನಿ ಜನರಲ್:-** (1) ರಾಷ್ಟ್ರಪತಿಯು, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳಲು ಅರ್ಹತೆಯುಳ್ಳ ವ್ಯಕ್ತಿಯನ್ನು, ಭಾರತದ ಅಟಾರ್ನಿ ಜನರಲ್ ಆಗಿ ನೇಮಕ ಮಾಡತಕ್ಕದ್ದು.

(2) ಅಟಾರ್ನಿ ಜನರಲ್‌ನು, ರಾಷ್ಟ್ರಪತಿಯು ಕಾಲಕಾಲಕ್ಕೆ ತನಗೆ ಕಳುಹಿಸಬಹುದಾದಂಥ ಅಥವಾ ಒಪ್ಪಿಸಬಹುದಾದಂಥ ಕಾನೂನು ವಿಷಯಗಳ ಮೇಲೆ ಭಾರತ ಸರ್ಕಾರಕ್ಕೆ ಸಲಹೆ ಕೊಡುವುದು ಮತ್ತು ಕಾನೂನು ಸ್ವರೂಪದ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು ಹಾಗೂ ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ತನಗೆ ಪ್ರದಾನ ಮಾಡಿದ ಪ್ರಕಾರ್ಯಗಳನ್ನು ನಿರ್ವಹಿಸುವುದು ಅವನ ಕರ್ತವ್ಯವಾಗಿರತಕ್ಕದ್ದು.

(3) ಅಟಾರ್ನಿ ಜನರಲ್‌ನು, ತನ್ನ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಭಾರತದ ರಾಜ್ಯಕ್ಷೇತ್ರದಲ್ಲಿನ ಎಲ್ಲ ನ್ಯಾಯಾಲಯಗಳಲ್ಲಿ ವಾದಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಅಟಾರ್ನಿ ಜನರಲ್‌ನು ರಾಷ್ಟ್ರಪತಿಯ ಇಷ್ಟಪರ್ಯಂತ ಪದದಲ್ಲಿರತಕ್ಕದ್ದು ಮತ್ತು ರಾಷ್ಟ್ರಪತಿಯು ನಿರ್ಧರಿಸಬಹುದಾದಷ್ಟು ಸಂಭಾವನೆಯನ್ನು ಪಡೆಯತಕ್ಕದ್ದು.

---

1. 2003 ನೆಯ ಇಸವಿಯ ಸಂವಿಧಾನ (ತೊಂಬತ್ತೊಂದನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

## ಸರ್ಕಾರಿ ವ್ಯವಹಾರ ನಿರ್ವಹಣೆ

**77. ಭಾರತ ಸರ್ಕಾರದ ವ್ಯವಹಾರ ನಿರ್ವಹಣೆ:-** (1) ಭಾರತ ಸರ್ಕಾರದ ಎಲ್ಲ ಕಾರ್ಯಾಂಗದ ಸಮಸ್ತ ಕಾರ್ಯವು ರಾಷ್ಟ್ರಪತಿಯ ಹೆಸರಿನಲ್ಲಿ ನಡೆಯುತ್ತದೆಂದು ವ್ಯಕ್ತವಾಗತಕ್ಕದ್ದು.

(2) ರಾಷ್ಟ್ರಪತಿಯ ಹೆಸರಿನಲ್ಲಿ ಮಾಡಿದ ಆದೇಶಗಳನ್ನು ಮತ್ತು ಬರೆದುಕೊಟ್ಟ ಇತರ ಲಿಖಿತಗಳನ್ನು, ರಾಷ್ಟ್ರಪತಿಯು ರಚಿಸುವ[1] ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಅಧಿಪ್ರಮಾಣನ ಮಾಡತಕ್ಕದ್ದು ಮತ್ತು ಹಾಗೆ ಅಧಿಪ್ರಮಾಣನ ಮಾಡಿದ ಆದೇಶದ ಅಥವಾ ಲಿಖಿತದ ಸಿಂಧುತ್ವವನ್ನು ಅದು ರಾಷ್ಟ್ರಪತಿಯು ಮಾಡಿದ ಆದೇಶವಲ್ಲವೆಂಬ ಅಥವಾ ಬರೆದು ಕೊಟ್ಟ ಲಿಖಿತವಲ್ಲವೆಂಬ ಕಾರಣದ ಮೇಲೆ ಅದನ್ನು ಪ್ರಶ್ನಿಸತಕ್ಕದ್ದಲ್ಲ.

(3) ಭಾರತ ಸರ್ಕಾರದ ವ್ಯವಹಾರವು ಹೆಚ್ಚು ಅನುಕೂಲಕರವಾಗಿ ನಡೆಯಲು ಮತ್ತು ಸದರಿ ವ್ಯವಹಾರವನ್ನು ಮಂತ್ರಿಗಳಲ್ಲಿ ಹಂಚುವುದಕ್ಕೆ ರಾಷ್ಟ್ರಪತಿಯು ನಿಯಮಗಳನ್ನು ರಚಿಸತಕ್ಕದ್ದು.

[2]* * * * *

**78. ರಾಷ್ಟ್ರಪತಿಗೆ ಮಾಹಿತಿ, ಇತ್ಯಾದಿಗಳನ್ನು ಒದಗಿಸುವ ವಿಚಾರದಲ್ಲಿ ಪ್ರಧಾನಮಂತ್ರಿಯ ಕರ್ತವ್ಯಗಳು:-** ಪ್ರಧಾನಮಂತ್ರಿಯು,-

(ಎ) ಒಕ್ಕೂಟದ ವ್ಯವಹಾರಗಳ ಆಡಳಿತಕ್ಕೆ ಮತ್ತು ಕಾನೂನು ರಚನೆಯ ಪ್ರಸ್ತಾವಗಳಿಗೆ ಸಂಬಂಧಿಸಿದಂತೆ ಮಂತ್ರಿಮಂಡಲದ ಎಲ್ಲ ತೀರ್ಮಾನಗಳನ್ನು ರಾಷ್ಟ್ರಪತಿಗೆ ತಿಳಿಸುವುದು;

(ಬಿ) ಒಕ್ಕೂಟದ ವ್ಯವಹಾರಗಳ ಆಡಳಿತಕ್ಕೆ ಮತ್ತು ಕಾನೂನು ರಚನೆಯ ಪ್ರಸ್ತಾವಗಳಿಗೆ ಸಂಬಂಧಿಸಿದಂತೆ ರಾಷ್ಟ್ರಪತಿಯು ಕೇಳಬಹುದಾದಂಥ ಮಾಹಿತಿಯನ್ನು ಒದಗಿಸುವುದು; ಮತ್ತು

(ಸಿ) ಒಬ್ಬ ಮಂತ್ರಿಯು ತೀರ್ಮಾನ ಕೈಕೊಂಡಿರುವ, ಆದರೆ ಮಂತ್ರಿಮಂಡಲವು ಪರ್ಯಾಲೋಚಿಸದಿರುವ ಯಾವುದೇ ವಿಷಯವನ್ನು, ಮಂತ್ರಿಮಂಡಲದ ಪರ್ಯಾಲೋಚನೆಗೆ ಒಪ್ಪಿಸಬೇಕೆಂದು ರಾಷ್ಟ್ರಪತಿಯು ಅಗತ್ಯಪಡಿಸಿದಲ್ಲಿ ಅದನ್ನು ಹಾಗೆ ಒಪ್ಪಿಸುವುದು

– ಅವನ ಕರ್ತವ್ಯವಾಗಿರತಕ್ಕದ್ದು.

## ಅಧ್ಯಾಯ – II : ಸಂಸತ್ತು

### ಸಾಮಾನ್ಯ

**79. ಸಂಸತ್ತಿನ ರಚನೆ:-** ಒಕ್ಕೂಟವು ಒಂದು ಸಂಸತ್ತನ್ನು ಹೊಂದಿರತಕ್ಕದ್ದು ಮತ್ತು ಆ ಸಂಸತ್ತು ರಾಷ್ಟ್ರಪತಿಯನ್ನು ಹಾಗೂ ಅನುಕ್ರಮವಾಗಿ ರಾಜ್ಯಸಭೆ ಮತ್ತು ಲೋಕಸಭೆ ಎಂಬ ಹೆಸರುಗಳನ್ನುಳ್ಳ ಎರಡು ಸದನಗಳನ್ನು ಹೊಂದಿರತಕ್ಕದ್ದು.

**80. ರಾಜ್ಯಸಭೆಯ ರಚನೆ:-** (1) [3][[4]* * * * ರಾಜ್ಯಸಭೆಯು],-

(ಎ) (3)ನೆಯ ಖಂಡದ ಉಪಬಂಧಗಳಿಗನುಸಾರ ರಾಷ್ಟ್ರಪತಿಯು ನಾಮನಿರ್ದೇಶನ ಮಾಡತಕ್ಕ ಹನ್ನೆರಡು ಜನ ಸದಸ್ಯರನ್ನು; ಮತ್ತು

(ಬಿ) ರಾಜ್ಯಗಳಿಂದ [5][ಮತ್ತು ಒಕ್ಕೂಟ ರಾಜ್ಯಕ್ಷೇತ್ರಗಳಿಂದ] ಇನ್ನೂರ ಮೂವತ್ತೆಂಟಕ್ಕೆ ಮೀರದಷ್ಟು ಪ್ರತಿನಿಧಿಗಳನ್ನು

– ಒಳಗೊಂಡಿರತಕ್ಕದ್ದು.

---

1. ಕಾಲಕಾಲಕ್ಕೆ ತಿದ್ದುಪಡಿಯಾಗಿರುವ ಅಧಿಸೂಚನೆ ಸಂಖ್ಯೆ ಎಸ್.ಓ. 2297 ದಿನಾಂಕ 3.11.1958ರ ಭಾರತ ವಿಶೇಷ ರಾಜಪತ್ರ, ಭಾಗ II, ವಿಭಾಗ – 3(ii), ಪುಟ 1315 ನೋಡಿ.
2. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 14ನೇ ಪ್ರಕರಣದ ಮೂಲಕ (4)ನೇ ಖಂಡವನ್ನು (3-1-77ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿತ್ತು ಮತ್ತು ಇದನ್ನು 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 12ನೇ ಪ್ರಕರಣದ ಮೂಲಕ (20-6-79ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
3. 1974ನೆಯ ಇಸವಿಯ ಸಂವಿಧಾನ (ಮೂವತ್ತೈದನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ "ರಾಜ್ಯಸಭೆ" ಎಂಬ ಪದಕ್ಕೆ ಬದಲಾಗಿ (1 -3-75ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
4. 1975ನೇ ಇಸವಿಯ ಸಂವಿಧಾನ (ಮೂವತ್ತಾರನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ "ಹತ್ತನೇ ಅನುಸೂಚಿಯ 4ನೇ ಪ್ಯಾರಾದ ಉಪಬಂಧಗಳಿಗೆ ಒಳಪಟ್ಟು" ಎಂಬ ಪದಗಳನ್ನು (26-4-75ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
5. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

(2) ರಾಜ್ಯಗಳ [1][ಮತ್ತು ಒಕ್ಕೂಟ ರಾಜ್ಯಕ್ಷೇತ್ರಗಳ] ಪ್ರತಿನಿಧಿಗಳಿಂದ ಭರ್ತಿಯಾಗಬೇಕಾದ ರಾಜ್ಯಸಭೆಯಲ್ಲಿನ ಸ್ಥಾನಗಳ ಹಂಚಿಕೆಯನ್ನು ನಾಲ್ಕನೆಯ ಅನುಸೂಚಿಯಲ್ಲಿ ಅಡಕವಾಗಿರುವ ಆ ಬಗೆಗಿನ ಉಪಬಂಧಗಳಿಗನುಸಾರ ಮಾಡತಕ್ಕದ್ದು.

(3) (1)ನೆಯ ಖಂಡದ (ಎ) ಉಪಖಂಡದ ಮೇರೆಗೆ ರಾಷ್ಟ್ರಪತಿಯು, ನಾಮನಿರ್ದೇಶನ ಮಾಡುವ ಸದಸ್ಯರು, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ, ಎಂದರೆ:-

ಸಾಹಿತ್ಯ, ವಿಜ್ಞಾನ, ಕಲೆ ಮತ್ತು ಸಮಾಜ ಸೇವೆಗಳಲ್ಲಿ ವಿಶೇಷ ಜ್ಞಾನವನ್ನು ಅಥವಾ ವ್ಯಾವಹಾರಿಕ ಅನುಭವವನ್ನು ಪಡೆದವರಾಗಿರತಕ್ಕದ್ದು.

(4) ರಾಜ್ಯಸಭೆಯಲ್ಲಿನ [2] * * * * * ಪ್ರತಿಯೊಂದು ರಾಜ್ಯದ ಪ್ರತಿನಿಧಿಗಳು ಆಯಾ ರಾಜ್ಯದ ವಿಧಾನಸಭೆಯ ಚುನಾಯಿತ ಸದಸ್ಯರಿಂದ ಏಕವರ್ಗಾವಣೀಯ ಮತದ ವಿಧಾನದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಗನುಸಾರ ಚುನಾಯಿತರಾಗತಕ್ಕದ್ದು.

(5) ರಾಜ್ಯಸಭೆಯಲ್ಲಿನ [3][ಒಕ್ಕೂಟ ರಾಜ್ಯಕ್ಷೇತ್ರಗಳ] ಪ್ರತಿನಿಧಿಗಳು, ಸಂಸತ್ತು ಕಾನೂನಿನ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಆಯ್ಕೆ ಆಗತಕ್ಕದ್ದು.

[4][**81. ಲೋಕಸಭೆಯ ರಚನೆ:-** (1) [5][331ನೆಯ ಅನುಚ್ಛೇದದ [6] * * * ಉಪಬಂಧಗಳಿಗೊಳಪಟ್ಟು] ಲೋಕಸಭೆಯು,-

(ಎ) ರಾಜ್ಯಗಳಲ್ಲಿನ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಂದ ನೇರ ಚುನಾವಣೆಯ ಮೂಲಕ ಆಯ್ಕೆಯಾದ [7][ಐನೂರ ಮೂವತ್ತಕ್ಕಿಂತ] ಹೆಚ್ಚಲ್ಲದಷ್ಟು ಸದಸ್ಯರನ್ನು, ಮತ್ತು

(ಬಿ) ಒಕ್ಕೂಟ ರಾಜ್ಯಕ್ಷೇತ್ರಗಳನ್ನು ಪ್ರತಿನಿಧಿಸಲು, ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಬಹುದಾದಂಥ ರೀತಿಯಲ್ಲಿ ಆಯ್ಕೆಯಾದ [8][ಇಪ್ಪತ್ತಕ್ಕಿಂತ] ಹೆಚ್ಚಲ್ಲದಷ್ಟು ಸದಸ್ಯರನ್ನು

- ಒಳಗೊಂಡಿರತಕ್ಕದ್ದು.

(2) (1) ನೆಯ ಖಂಡದ (ಎ) ಉಪಖಂಡದ ಉದ್ದೇಶಗಳಿಗಾಗಿ,-

(ಎ) ಲೋಕಸಭೆಯಲ್ಲಿ ಪ್ರತಿಯೊಂದು ರಾಜ್ಯಕ್ಕೆ ಇರಬೇಕಾದ ಸ್ಥಾನಗಳ ಸಂಖ್ಯೆಯನ್ನು, ಆ ಸಂಖ್ಯೆ ಮತ್ತು ಆ ರಾಜ್ಯದ ಜನಸಂಖ್ಯೆ - ಇವೆರಡರ ನಡುವಣ ಅನುಪಾತವು, ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ, ಎಲ್ಲ ರಾಜ್ಯಗಳಿಗೂ ಒಂದೇ ಆಗಿರುವಂಥ ರೀತಿಯಲ್ಲಿ ಹಂಚಿಕೆ ಮಾಡತಕ್ಕದ್ದು; ಮತ್ತು

(ಬಿ) ಪ್ರತಿಯೊಂದು ಚುನಾವಣಾ ಕ್ಷೇತ್ರದ ಜನಸಂಖ್ಯೆ ಮತ್ತು ಅದಕ್ಕೆ ಹಂಚಲಾದ ಸ್ಥಾನಗಳ ಸಂಖ್ಯೆ - ಇವೆರಡರ ನಡುವಣ ಅನುಪಾತವು, ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ, ರಾಜ್ಯದಾದ್ಯಂತ ಒಂದೇ ಆಗಿರುವಂಥ ರೀತಿಯಲ್ಲಿ ಪ್ರತಿಯೊಂದು ರಾಜ್ಯವನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಾಗಿಸತಕ್ಕದ್ದು:

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ "ಮೊದಲನೆಯ ಅನುಸೂಚಿಯ 'ಎ' ಭಾಗ ಅಥವಾ 'ಬಿ' ಭಾಗದಲ್ಲಿ ನಿರ್ದಿಷ್ಟಪಡಿಸಿದ" ಎಂಬ ಪದಗಳನ್ನು ಮತ್ತು ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.
3. 1956ನೆಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿಯಮದ 3ನೆಯ ಪ್ರಕರಣದ ಮೂಲಕ "ಮೊದಲನೆಯ ಅನುಸೂಚಿಯ 'ಸಿ' ಭಾಗದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಗಳು" ಎಂಬ ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
4. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿಯಮದ 4ನೆಯ ಪ್ರಕರಣದ ಮೂಲಕ 81ನೆಯ ಮತ್ತು 82ನೆಯ ಅನುಚ್ಛೇದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. 1974ನೆಯ ಇಸವಿಯ ಸಂವಿಧಾನ (ಮೂವತ್ತೆದನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ "331ನೆಯ ಅನುಚ್ಛೇದದ ಉಪಬಂಧಗಳಿಗೆ ಒಳಪಟ್ಟು" ಎಂಬ ಪದಗಳಿಗೆ ಬದಲಾಗಿ (1-3-75ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
6. 1975ನೆಯ ಇಸವಿಯ ಸಂವಿಧಾನ (ಮೂವತ್ತಾರನೆಯ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ "ಮತ್ತು ಹತ್ತನೇ ಅನುಸೂಚಿಯ 4ನೇ ಪ್ಯಾರಾದ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು (26-4-75ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
7. 1987ನೇ ಇಸವಿಯ ಗೋವಾ, ದಾಮನ್ ಮತ್ತು ದೀವ್ ಪುನಾರಚನೆ ಅಧಿನಿಯಮದ (1987ರ 18) 63ನೇ ಪ್ರಕರಣದ ಮೂಲಕ "ಐದುನೂರ ಇಪ್ಪತ್ತೈದು ಸದಸ್ಯರು" ಎಂಬುದಕ್ಕೆ ಬದಲಾಗಿ (30-5-1987 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
8. 1973ನೇ ಇಸವಿಯ ಸಂವಿಧಾನ (ಮೂವತ್ತೊಂದನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ "ಇಪ್ಪತ್ತೈದು ಸದಸ್ಯರು" ಎಂಬ ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

[1][ಪರಂತು, ಲೋಕಸಭೆಯಲ್ಲಿ ಸ್ಥಾನಗಳನ್ನು ಹಂಚಿಕೆ ಮಾಡುವ ಉದ್ದೇಶಕ್ಕಾಗಿ ಯಾವುದೇ ರಾಜ್ಯಕ್ಕೆ, ಆ ರಾಜ್ಯದ ಜನಸಂಖ್ಯೆಯು, ಅರವತ್ತು ಲಕ್ಷ ಮೀರದಿರುವವರೆಗೆ ಈ ಖಂಡದ (ಎ) ಉಪಖಂಡದ ಉಪಬಂಧಗಳು ಆ ರಾಜ್ಯಕ್ಕೆ ಅನ್ವಯವಾಗತಕ್ಕದ್ದಲ್ಲ.]

(3) ಈ ಅನುಚ್ಛೇದದಲ್ಲಿ "ಜನಸಂಖ್ಯೆ" ಎಂದರೆ ಯಾವ ಹಿಂದಿನ ಕೊನೆಯ ಜನಗಣತಿಯ ಸುಸಂಗತ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಹಿಂದಿನ ಕೊನೆಯ ಜನಗಣತಿಯಲ್ಲಿ ಖಚಿತಪಡಿಸಿಕೊಂಡ ಜನಸಂಖ್ಯೆ:

[2][ಪರಂತು, ಈ ಖಂಡದಲ್ಲಿ ಯಾವ ಹಿಂದಿನ ಕೊನೆಯ ಜನಗಣತಿಯ ಸುಸಂಗತ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಜನಗಣತಿಗೆ ಮಾಡಿದ ಉಲ್ಲೇಖವನ್ನು [3][2026 ನೆಯ] ಇಸವಿಯ ತರುವಾಯ ಮೊದಲನೇ ಸಲ ನಡೆಸಲಾಗುವ ಜನಗಣತಿಯ ಸುಸಂಗತ ಅಂಕಿಗಳು ಪ್ರಕಟವಾಗುವವರೆಗೆ,-

[4][(i) (2)ನೇ ಖಂಡದ (ಎ) ಉಪಖಂಡದ ಮತ್ತು ಆ ಖಂಡದ ಪರಂತುಕದ ಉದ್ದೇಶಗಳಿಗಾಗಿ, 1971ರ ಜನಗಣತಿಗೆ ಮಾಡಿದ ಉಲ್ಲೇಖವೆಂದು; ಮತ್ತು

(ii) (2)ನೇ ಖಂಡದ (ಬಿ) ಉಪಖಂಡದ ಉದ್ದೇಶಗಳಿಗಾಗಿ, [5][2001ರ] ಜನಗಣತಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.]]]

**82. ಪ್ರತಿಯೊಂದು ಜನಗಣತಿಯ ತರುವಾಯ ಮರುಹೊಂದಾಣಿಕೆ:-** ಪ್ರತಿಯೊಂದು ಜನಗಣತಿಯು ಪೂರ್ಣಗೊಂಡ ಮೇಲೆ, ಲೋಕಸಭೆಯಲ್ಲಿ ಸ್ಥಾನಗಳನ್ನು ರಾಜ್ಯಗಳಿಗೆ ಹಂಚಲು ಮತ್ತು ಪ್ರತಿಯೊಂದು ರಾಜ್ಯವನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಾಗಿಸಲು ಸಂಸತ್ತು ಕಾನೂನು ಮೂಲಕ ನಿರ್ಧರಿಸಬಹುದಾದಂಥ ಪ್ರಾಧಿಕಾರವು ಮತ್ತು ಅಂಥ ರೀತಿಯಲ್ಲಿ ಮರು ಹೊಂದಾಣಿಕೆ ಮಾಡತಕ್ಕದ್ದು:

ಪರಂತು, ಅಂಥ ಮರುಹೊಂದಾಣಿಕೆಯು ಆಗ ಅಸ್ತಿತ್ವದಲ್ಲಿರುವ ಲೋಕಸಭೆಯು ವಿಸರ್ಜನೆಯಾಗುವವರೆಗೆ ಆ ಸಭೆಯಲ್ಲಿನ ಪ್ರಾತಿನಿಧ್ಯಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ:

[6][ಮತ್ತೂ ಪರಂತು, ಅಂಥ ಮರುಹೊಂದಾಣಿಕೆಯು ರಾಷ್ಟ್ರಪತಿಯ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಅಂಥ ಮರುಹೊಂದಾಣಿಕೆಯು ಜಾರಿಗೆ ಬರುವವರೆಗೆ, ಆ ಸಭೆಗೆ ಯಾವುದೇ ಚುನಾವಣೆಯನ್ನು ಅಂಥ ಮರುಹೊಂದಾಣಿಕೆಗೆ ಮೊದಲು ಅಸ್ತಿತ್ವದಲ್ಲಿರುವ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಆಧಾರದ ಮೇಲೆ ನಡೆಸಬಹುದು:

ಅಲ್ಲದೆ ಪರಂತು, [7][2026 ನೆಯ] ಇಸವಿಯ ತರುವಾಯ ಮೊದಲ ಸಲ ನಡೆಸಲಾಗುವ ಜನಗಣತಿಯ ಸುಸಂಗತ ಅಂಕಿಗಳು ಪ್ರಕಟವಾಗುವವರೆಗೆ,-

[8][(i) 1971ರ ಜನಗಣತಿಯ ಆಧಾರದ ಮೇಲೆ ಮರುಹೊಂದಾಣಿಕೆ ಮಾಡಿದಂತೆ ಲೋಕಸಭೆಯಲ್ಲಿನ ಸ್ಥಾನಗಳನ್ನು ರಾಜ್ಯಗಳಿಗೆ ಹಂಚಿಕೆ ಮಾಡುವುದನ್ನು; ಮತ್ತು

(ii) [9][2001ರ] ಜನಗಣತಿಯ ಆಧಾರದ ಮೇಲೆ ಮರುಹೊಂದಾಣಿಕೆ ಮಾಡಬಹುದಾದಂತೆ ಪ್ರತಿಯೊಂದು ರಾಜ್ಯವನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಭಾಗಿಸುವುದನ್ನು

– ಮರು ಹೊಂದಾಣಿಕೆ ಮಾಡುವುದು ಈ ಅನುಚ್ಛೇದದ ಮೇರೆಗೆ ಅವಶ್ಯವಾಗಿರತಕ್ಕದ್ದಲ್ಲ.]]]

1. 1973 ನೆಯ ಇಸವಿಯ ಸಂವಿಧಾನ (ಮೂವತ್ತೊಂದನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 1976 ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 15ನೆಯ ಪ್ರಕರಣದ ಮೂಲಕ (3.1.77 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 2001 ನೆಯ ಇಸವಿಯ ಸಂವಿಧಾನ (ಎಂಬತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ "2000 ದ" ಎಂಬ ಅಂಕಿಗಳಿಗೆ ಮತ್ತು ಅಕ್ಷರಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
4. ಅದೇ 3ನೆಯ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. 2003 ನೆಯ ಇಸವಿಯ ಸಂವಿಧಾನ (ಎಂಬತ್ತೇಳನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ "1991 ರ" ಎಂಬ ಅಂಕಿಗಳಿಗೆ ಮತ್ತು ಅಕ್ಷರಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
6. 1976 ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 16ನೆಯ ಪ್ರಕರಣದ ಮೂಲಕ (ದಿನಾಂಕ 3.1.1977 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
7. 2001 ನೆಯ ಇಸವಿಯ ಸಂವಿಧಾನ (ಎಂಬತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ "2000 ದ" ಎಂಬ ಅಂಕಿಗಳಿಗೆ ಮತ್ತು ಅಕ್ಷರಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
8. ಅದೇ 4 ನೆಯ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
9. 2003 ನೆಯ ಇಸವಿಯ ಸಂವಿಧಾನ (ಎಂಬತ್ತೇಳನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ "1991 ರ" ಎಂಬ ಅಂಕಿಗಳಿಗೆ ಮತ್ತು ಅಕ್ಷರಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

**83. ಸಂಸತ್ತಿನ ಸದನಗಳ ಅವಧಿ:–** (1) ರಾಜ್ಯಸಭೆಯು ವಿಸರ್ಜನೆಗೆ ಒಳಪಡತಕ್ಕದ್ದಲ್ಲ. ಆದರೆ ಅದರ ಸದಸ್ಯರಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಮೂರನೆಯ ಒಂದು ಭಾಗದಷ್ಟು ಸದಸ್ಯರು, ಸಂಸತ್ತು ಕಾನೂನಿನ ಮೂಲಕ ಆ ಬಗ್ಗೆ ಮಾಡಿದ ಉಪಬಂಧಗಳಿಗನುಸಾರವಾಗಿ, ಪ್ರತಿ ಎರಡನೆ ವರ್ಷ ಮುಕ್ತಾಯವಾದ ಮೇಲೆ ಆದಷ್ಟು ಬೇಗನೆ ನಿವೃತ್ತರಾಗತಕ್ಕದ್ದು.

(2) ಲೋಕಸಭೆಯು, ಅದರ ಮೊದಲನೆಯ ಸಭೆಗೆ ಗೊತ್ತುಮಾಡಿರುವ ದಿನಾಂಕದಿಂದ [1][ಐದು ವರ್ಷಗಳ] ಅವಧಿಗೆ ಮುಂಚಿತವಾಗಿ ವಿಸರ್ಜಿತವಾದ ಹೊರತು, ಅದು ಐದು ವರ್ಷಗಳ ಅವಧಿಯವರೆಗೆ ಮುಂದುವರಿಯತಕ್ಕದ್ದು. ಆದರೆ ಅದಕ್ಕಿಂತ ಹೆಚ್ಚುಕಾಲ ಮುಂದುವರಿಯತಕ್ಕದ್ದಲ್ಲ ಮತ್ತು ಸದರಿ [1][ಐದು ವರ್ಷಗಳ] ಅವಧಿಯ ಮುಕ್ತಾಯವು ಆ ಸದನವು ವಿಸರ್ಜನೆಯಾದಂತೆ ಪರಿಣಾಮವುಳ್ಳದ್ದಾಗಿರತಕ್ಕದ್ದು:

ಪರಂತು, ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಾಗ ಸಂಸತ್ತು ಕಾನೂನಿನ ಮೂಲಕ ಒಂದು ಸಲಕ್ಕೆ ಒಂದು ವರ್ಷಕ್ಕೆ ಮೀರದ ಅವಧಿಯವರೆಗೆ ಸದರಿ ಅವಧಿಯನ್ನು ವಿಸ್ತರಿಸಬಹುದು ಮತ್ತು ಆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋದ ತರುವಾಯ ಯಾವುದೇ ಸಂದರ್ಭದಲ್ಲಿ ಆರು ತಿಂಗಳಿಗೆ ಮೀರಿದ ಅವಧಿಯವರೆಗೆ ವಿಸ್ತರಿಸತಕ್ಕದ್ದಲ್ಲ.

**84. ಸಂಸತ್ತಿನ ಸದಸ್ಯತ್ವಕ್ಕೆ ಅರ್ಹತೆ:–** ಯಾರೇ ವ್ಯಕ್ತಿಯು,–

[2][(ಎ) ಭಾರತದ ನಾಗರಿಕನಾಗಿರುವ ಹೊರತು ಮತ್ತು ಚುನಾವಣಾ ಆಯೋಗವು ಆ ಬಗ್ಗೆ ಅಧಿಕೃತಗೊಳಿಸಿರುವ ಯಾರೇ ವ್ಯಕ್ತಿಯ ಮುಂದೆ ಮೂರನೆಯ ಅನುಸೂಚಿಯಲ್ಲಿ ಆ ಉದ್ದೇಶಕ್ಕಾಗಿ ಕೊಟ್ಟಿರುವ ನಮೂನೆಯಲ್ಲಿ ಪ್ರಮಾಣ ವಚನ ಅಥವಾ ದೃಢೀಕರಣವನ್ನು ಮಾಡಿರುವ ಹೊರತು ಹಾಗೂ ಅದಕ್ಕೆ ರುಜು ಹಾಕಿರುವ ಹೊರತು;]

(ಬಿ) ರಾಜ್ಯಸಭೆಯ ಸ್ಥಾನದ ಸಂದರ್ಭದಲ್ಲಿ ಮೂವತ್ತು ವರ್ಷಗಳಿಗಿಂತ ಕಡಿಮೆಯಿಲ್ಲದಷ್ಟು ವಯಸ್ಸಿನವನಾಗಿರುವ ಹೊರತು ಮತ್ತು ಲೋಕಸಭೆಯ ಸ್ಥಾನದ ಸಂದರ್ಭದಲ್ಲಿ ಇಪ್ಪತ್ತೈದು ವರ್ಷಗಳಿಗಿಂತ ಕಡಿಮೆಯಿಲ್ಲದಷ್ಟು ವಯಸ್ಸಿನವನಾಗಿರುವ ಹೊರತು; ಮತ್ತು

(ಸಿ) ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂಥ ಇತರ ಅರ್ಹತೆಗಳನ್ನು ಹೊಂದಿರುವ ಹೊರತು

– ಸಂಸತ್ತಿನ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಆಯ್ಕೆ ಹೊಂದಲು ಅವನು ಅರ್ಹನಾಗಿರತಕ್ಕದ್ದಲ್ಲ.

[3][**85. ಸಂಸತ್ತಿನ ಅಧಿವೇಶನಗಳು, ಅಧಿವೇಶನದ ಮುಕ್ತಾಯ ಮತ್ತು ವಿಸರ್ಜನೆ:–** (1) ರಾಷ್ಟ್ರಪತಿಯು ಸೂಕ್ತವೆಂದು ಭಾವಿಸತಕ್ಕಂಥ ಕಾಲದಲ್ಲಿ ಮತ್ತು ಸ್ಥಳದಲ್ಲಿ ಸಭೆ ಸೇರುವಂತೆ ಸಂಸತ್ತಿನ ಪ್ರತಿಯೊಂದು ಸದನವನ್ನೂ ಅವನು ಕಾಲಕಾಲಕ್ಕೆ ಕರೆಯತಕ್ಕದ್ದು; ಆದರೆ ಒಂದು ಅಧಿವೇಶನದ ಕೊನೆಯ ಉಪವೇಶನ ಮತ್ತು ಮುಂದಿನ ಅಧಿವೇಶನದ ಮೊದಲನೆಯ ಉಪವೇಶನಕ್ಕೆ ಗೊತ್ತುಮಾಡಿರುವ ದಿನಾಂಕ – ಇವುಗಳ ನಡುವೆ ಆರು ತಿಂಗಳ ಅಂತರವಿರತಕ್ಕದ್ದಲ್ಲ.

(2) ರಾಷ್ಟ್ರಪತಿಯು ಕಾಲಕಾಲಕ್ಕೆ,–

(ಎ) ಎರಡೂ ಸದನಗಳ ಅಧಿವೇಶನವನ್ನು ಅಥವಾ ಯಾವುದೇ ಒಂದು ಸದನದ ಅಧಿವೇಶನವನ್ನು ಮುಕ್ತಾಯಗೊಳಿಸಬಹುದು;

(ಬಿ) ಲೋಕಸಭೆಯನ್ನು ವಿಸರ್ಜಿಸಬಹುದು.]

**86. ಸದನಗಳನ್ನು ಸಂಬೋಧಿಸಿ ಭಾಷಣ ಮಾಡಲು ಮತ್ತು ಸದನಗಳಿಗೆ ಸಂದೇಶಗಳನ್ನು ಕಳುಹಿಸಲು ರಾಷ್ಟ್ರಪತಿಗಿರುವ ಹಕ್ಕು:–** (1) ರಾಷ್ಟ್ರಪತಿಯು ಸಂಸತ್ತಿನ ಉಭಯ ಸದನಗಳಲ್ಲಿ ಯಾವುದೇ ಒಂದು ಸದನವನ್ನು ಅಥವಾ ಒಟ್ಟಿಗೆ ಸಭೆ ಸೇರಿರುವ ಉಭಯ ಸದನಗಳನ್ನು ಸಂಬೋಧಿಸಿ ಭಾಷಣ ಮಾಡಬಹುದು ಮತ್ತು ಆ ಉದ್ದೇಶಕ್ಕಾಗಿ ಸದಸ್ಯರ ಹಾಜರಾತಿಯನ್ನು ಅಗತ್ಯಪಡಿಸಬಹುದು.

---

1. 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 13ನೆಯ ಪ್ರಕರಣದ ಮೂಲಕ "ಆರು ವರ್ಷಗಳು" ಎಂಬ ಪದಗಳಿಗೆ ಬದಲಾಗಿ (20–6–1979ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 17ನೆಯ ಪ್ರಕರಣದ ಮೂಲಕ "ಐದು ವರ್ಷಗಳು" ಎಂಬ ಮೂಲ ಪದಗಳಿಗೆ ಬದಲಾಗಿ (3–1–1977ರಿಂದ ಜಾರಿಗೆ ಬರುವಂತೆ) "ಆರು ವರ್ಷಗಳು" ಎಂಬ ಪದಗಳನ್ನು ಪ್ರತ್ಯಾಯೋಜಿಸಲಾಗಿತ್ತು.
2. 1963ನೆಯ ಇಸವಿಯ ಸಂವಿಧಾನ (ಹದಿನಾರನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (ಎ) ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 6ನೆಯ ಪ್ರಕರಣದ ಮೂಲಕ 85ನೇ ಅನುಚ್ಛೇದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(2) ಸಂಸತ್ತಿನಲ್ಲಿ ಆಗ ಇತ್ಯರ್ಥವಾಗದೆ ಉಳಿದಿರುವ ಯಾವುದೇ ವಿಧೇಯಕಕ್ಕೆ ಸಂಬಂಧಿಸಿದಂತೆ ಅಥವಾ ಬೇರೆ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿಯು ಸಂಸತ್ತಿನ ಉಭಯ ಸದನಗಳಲ್ಲಿ ಯಾವುದೇ ಸದನಕ್ಕಾದರೂ ಸಂದೇಶಗಳನ್ನು ಕಳುಹಿಸಬಹುದು ಮತ್ತು ಯಾವ ಸದನಕ್ಕೆ ಆ ಯಾವುದೇ ಸಂದೇಶವನ್ನು ಹಾಗೆ ಕಳುಹಿಸಲಾಗಿದೆಯೋ ಆ ಸದನವು, ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಸಂದೇಶದ ಮೂಲಕ ಅಗತ್ಯಪಡಿಸಿರುವ ಯಾವುದೇ ವಿಷಯವನ್ನು ಅನುಕೂಲವಾದಷ್ಟು ಬೇಗನೆ ಪರ್ಯಾಲೋಚಿಸತಕ್ಕದ್ದು.

**87. ರಾಷ್ಟ್ರಪತಿಯಿಂದ ವಿಶೇಷ ಭಾಷಣ:-** (1) [1][ಲೋಕಸಭೆಯ ಪ್ರತಿಯೊಂದು ಸಾರ್ವತ್ರಿಕ ಚುನಾವಣೆ ತರುವಾಯದ ಮೊದಲನೆಯ ಅಧಿವೇಶನದ ಪ್ರಾರಂಭದಲ್ಲಿ ಮತ್ತು ಪ್ರತಿವರ್ಷದ ಮೊದಲನೆಯ ಅಧಿವೇಶನದ ಪ್ರಾರಂಭದಲ್ಲಿ] ರಾಷ್ಟ್ರಪತಿಯು ಒಟ್ಟಿಗೆ ಸಭೆ ಸೇರುವ ಸಂಸತ್ತಿನ ಉಭಯ ಸದನಗಳನ್ನು ಸಂಬೋಧಿಸಿ ಭಾಷಣ ಮಾಡತಕ್ಕದ್ದು ಮತ್ತು ಸಂಸತ್ತನ್ನು ಕರೆದಿರುವ ಕಾರಣವನ್ನು ಅದಕ್ಕೆ ತಿಳಿಸತಕ್ಕದ್ದು.

(2) ಅಂಥ ಭಾಷಣದಲ್ಲಿ ಉಲ್ಲೇಖಿಸಿದ ವಿಷಯಗಳ ಚರ್ಚೆಗಾಗಿ ಕಾಲವನ್ನು ಗೊತ್ತುಪಡಿಸುವ ಬಗ್ಗೆ [2]* * * ಎರಡೂ ಸದನಗಳ ಕಾರ್ಯವಿಧಾನವನ್ನು ವಿನಿಯಮಗೊಳಿಸುವಂಥ ನಿಯಮಗಳ ಮೂಲಕ ಉಪಬಂಧವನ್ನು ಮಾಡತಕ್ಕದ್ದು.

**88. ಸದನಗಳ ಸಂಬಂಧದಲ್ಲಿ ಮಂತ್ರಿಗಳ ಮತ್ತು ಅಟಾರ್ನಿ ಜನರಲ್‌ನ ಹಕ್ಕುಗಳು:-** ಪ್ರತಿಯೊಬ್ಬ ಮಂತ್ರಿಯು ಮತ್ತು ಭಾರತದ ಅಟಾರ್ನಿ ಜನರಲ್‌ನು ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿ ಅಥವಾ ಉಭಯ ಸದನಗಳ ಯಾವುದೇ ಜಂಟಿ ಸಭೆಯಲ್ಲಿ ಮತ್ತು ಅವನನ್ನು ಸದಸ್ಯನಾಗಿ ಹೆಸರಿಸಬಹುದಾದ ಸಂಸತ್ತಿನ ಯಾವುದೇ ಸಮಿತಿಯಲ್ಲಿ ಮಾತನಾಡುವುದಕ್ಕೆ ಮತ್ತು ಅವುಗಳ ವ್ಯವಹರಣೆಗಳಲ್ಲಿ ಭಾಗವಹಿಸುವುದಕ್ಕೆ ಹಕ್ಕು ಹೊಂದಿರತಕ್ಕದ್ದು. ಆದರೆ ಈ ಅನುಚ್ಛೇದದ ಕಾರಣದಿಂದಲೇ ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

## ಸಂಸತ್ತಿನ ಅಧಿಕಾರಿಗಳು

**89. ರಾಜ್ಯ ಸಭೆಯ ಸಭಾಪತಿ ಮತ್ತು ಉಪಸಭಾಪತಿ:-** (1) ಭಾರತದ ಉಪರಾಷ್ಟ್ರಪತಿಯು ರಾಜ್ಯಸಭೆಯ ಪದನಿಮಿತ್ತ ಸಭಾಪತಿಯಾಗಿರತಕ್ಕದ್ದು.

(2) ರಾಜ್ಯಸಭೆಯು ಆದಷ್ಟು ಬೇಗನೆ ಆ ಸದನದ ಒಬ್ಬ ಸದಸ್ಯನನ್ನು ಅದರ ಉಪಸಭಾಪತಿಯಾಗಿ ಆಯ್ಕೆ ಮಾಡತಕ್ಕದ್ದು ಮತ್ತು ಉಪಸಭಾಪತಿಯ ಪದವು ಖಾಲಿ ಆದಾಗಲೆಲ್ಲಾ ರಾಜ್ಯ ಸಭೆಯು ಮತ್ತೊಬ್ಬ ಸದಸ್ಯನನ್ನು ಅದರ ಉಪಸಭಾಪತಿಯಾಗಿ ಆಯ್ಕೆಮಾಡತಕ್ಕದ್ದು.

**90. ಉಪಸಭಾಪತಿಯು ಪದವನ್ನು ಖಾಲಿ ಮಾಡುವುದು ಮತ್ತು ಪದಕ್ಕೆ ರಾಜೀನಾಮೆ ನೀಡುವುದು ಮತ್ತು ಪದದಿಂದ ಅವನನ್ನು ತೆಗೆದುಹಾಕುವುದು:-** ರಾಜ್ಯಸಭೆಯ ಉಪಸಭಾಪತಿಯಾಗಿ ಪದಧಾರಣ ಮಾಡಿರುವ ಸದಸ್ಯನು,-

(ಎ) ರಾಜ್ಯಸಭೆಯ ಸದಸ್ಯನಾಗಿರುವುದು ನಿಂತುಹೋದಲ್ಲಿ ತನ್ನ ಪದವನ್ನು ಖಾಲಿ ಮಾಡತಕ್ಕದ್ದು;

(ಬಿ) ತಾನು ಸಹಿ ಮಾಡಿದ ಪತ್ರವನ್ನು ಸಭಾಪತಿಗೆ ಬರೆದು ಯಾವುದೇ ಕಾಲದಲ್ಲಿ ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು; ಮತ್ತು

(ಸಿ) ರಾಜ್ಯಸಭೆಯ ಆಗಿನ ಎಲ್ಲ ಸದಸ್ಯರ ಬಹುಮತದಿಂದ ಅಂಗೀಕೃತವಾದ ರಾಜ್ಯಸಭೆಯ ನಿರ್ಣಯದ ಮೂಲಕ ಪದದಿಂದ ತೆಗೆದುಹಾಕಲ್ಪಡಬಹುದು:

ಪರಂತು, (ಸಿ) ಖಂಡದ ಉದ್ದೇಶಕ್ಕಾಗಿ ಯಾವುದೇ ನಿರ್ಣಯವನ್ನು ಮಂಡಿಸುವ ಆಶಯದ ನೋಟೀಸನ್ನು ಕನಿಷ್ಠಪಕ್ಷ ಹದಿನಾಲ್ಕು ದಿನಗಳ ಮುಂಚಿತವಾಗಿ ಕೊಟ್ಟಿದ್ದ ಹೊರತು ಅಂಥ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ.

**91. ಸಭಾಪತಿಯ ಪದದ ಕರ್ತವ್ಯಗಳನ್ನು ನೆರವೇರಿಸಲು ಅಥವಾ ಸಭಾಪತಿಯಾಗಿ ಕಾರ್ಯನಿರ್ವಹಿಸಲು ಉಪಸಭಾಪತಿಯ ಅಥವಾ ಇತರ ವ್ಯಕ್ತಿಯ ಅಧಿಕಾರ:-** (1) ಸಭಾಪತಿಯ ಪದವು ಖಾಲಿಯಾಗಿರುವಾಗ ಅಥವಾ ಉಪರಾಷ್ಟ್ರಪತಿಯು ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುತ್ತಿರುವ ಅಥವಾ ರಾಷ್ಟ್ರಪತಿಯ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಯಾವುದೇ ಅವಧಿಯಲ್ಲಿ ಉಪಸಭಾಪತಿಯು ಅಥವಾ ಉಪಸಭಾಪತಿಯ ಪದವೂ ಖಾಲಿಯಾಗಿರುವಲ್ಲಿ, ಸಭಾಪತಿಯ ಪದದ ಕರ್ತವ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ರಾಷ್ಟ್ರಪತಿಯು ನೇಮಕ ಮಾಡಬಹುದಾದಂಥ ರಾಜ್ಯಸಭೆಯ ಸದಸ್ಯನು ಆ ಪದದ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(2) ರಾಜ್ಯಸಭೆಯ ಯಾವುದೇ ಉಪವೇಶನದಲ್ಲಿ ಸಭಾಪತಿಯು ಗೈರುಹಾಜರಾಗಿರುವಾಗ ಉಪಸಭಾಪತಿಯು ಅಥವಾ ಅವನೂ ಗೈರುಹಾಜರಾಗಿರುವಾಗ ರಾಜ್ಯಸಭೆಯ ಪ್ರಕ್ರಿಯಾ ನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ವ್ಯಕ್ತಿಯು ಅಥವಾ ಅಂಥ ಯಾವ ವ್ಯಕ್ತಿಯೂ ಹಾಜರಿಲ್ಲದಿದ್ದರೆ ರಾಜ್ಯಸಭೆಯು ನಿರ್ಧರಿಸಬಹುದಾದಂಥ ಇತರ ಯಾರೇ ವ್ಯಕ್ತಿಯು ಸಭಾಪತಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

---

1. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 7ನೆಯ ಪ್ರಕರಣದ ಮೂಲಕ "ಪ್ರತಿಯೊಂದು ಅಧಿವೇಶನದ" ಎಂಬ ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 7ನೆಯ ಪ್ರಕರಣದ ಮೂಲಕ "ಮತ್ತು ಸದನದ ಇತರ ಕಾರ್ಯಕಲಾಪಗಳಿಗಿಂತ ಆ ಚರ್ಚೆಗೆ ಆದ್ಯತೆ ಕೊಡುವ ಬಗ್ಗೆ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

**92. ಸಭಾಪತಿಯನ್ನು ಅಥವಾ ಉಪಸಭಾಪತಿಯನ್ನು ಪದದಿಂದ ತೆಗೆದುಹಾಕುವ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಅವನು ಅಧ್ಯಕ್ಷತೆ ವಹಿಸತಕ್ಕದ್ದಲ್ಲ:–** (1) ರಾಜ್ಯಸಭೆಯ ಯಾವುದೇ ಉಪವೇಶನದಲ್ಲಿ ಉಪರಾಷ್ಟ್ರಪತಿಯನ್ನು ಅವನ ಪದದಿಂದ ತೆಗೆದುಹಾಕುವ ಯಾವುದೇ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಸಭಾಪತಿಯು ಹಾಜರಿದ್ದರೂ ಅವನು, ಅಥವಾ ಉಪಸಭಾಪತಿಯನ್ನು ಅವನ ಪದದಿಂದ ತೆಗೆದುಹಾಕುವ ಯಾವುದೇ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಉಪಸಭಾಪತಿಯು ಹಾಜರಿದ್ದರೂ ಅವನು, ಅಧ್ಯಕ್ಷತೆ ವಹಿಸತಕ್ಕದ್ದಲ್ಲ ಮತ್ತು 91ನೆಯ ಅನುಚ್ಛೇದದ (2)ನೆಯ ಖಂಡದ ಉಪಬಂಧಗಳು ಸಭಾಪತಿಯು ಅಥವಾ ಸಂದರ್ಭಾನುಸಾರ ಉಪಸಭಾಪತಿಯು ಗೈರುಹಾಜರಾಗಿರುವ ಉಪವೇಶನದ ಸಂಬಂಧದಲ್ಲಿ ಅನ್ವಯಿಸುವಂತೆಯೇ ಅಂಥ ಪ್ರತಿಯೊಂದು ಉಪವೇಶನದ ಸಂಬಂಧದಲ್ಲಿ ಅನ್ವಯಿಸತಕ್ಕದ್ದು.

(2) ಉಪರಾಷ್ಟ್ರಪತಿಯನ್ನು ಅವನ ಪದದಿಂದ ತೆಗೆದುಹಾಕುವ ಯಾವುದೇ ನಿರ್ಣಯವು ರಾಜ್ಯಸಭೆಯಲ್ಲಿ ಪರ್ಯಾಲೋಚನೆಯಲ್ಲಿರುವಾಗ, ಸಭಾಪತಿಯು ರಾಜ್ಯಸಭೆಯಲ್ಲಿ ಮಾತನಾಡುವ ಮತ್ತು ಅದರ ವ್ಯವಹರಣೆಗಳಲ್ಲಿ ಅನ್ಯಥಾ ಭಾಗವಹಿಸುವ ಹಕ್ಕನ್ನು ಹೊಂದಿರತಕ್ಕದ್ದು; ಆದರೆ 100ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ಅಂಥ ನಿರ್ಣಯದ ಮೇಲೆ ಅಥವಾ ಅಂಥ ವ್ಯವಹರಣೆಗಳ ಅವಧಿಯಲ್ಲಿ ಇತರ ಯಾವುದೇ ವಿಷಯದ ಮೇಲೆ ಮತ ನೀಡಲು ಅವನು ಹಕ್ಕನ್ನು ಹೊಂದಿರತಕ್ಕದ್ದಲ್ಲ.

**93. ಲೋಕಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ:–** ಲೋಕಸಭೆಯು ತನ್ನ ಸದಸ್ಯರಲ್ಲಿ ಇಬ್ಬರನ್ನು ಅನುಕ್ರಮವಾಗಿ ಆ ಸದನದ ಅಧ್ಯಕ್ಷನಾಗಿ ಮತ್ತು ಉಪಾಧ್ಯಕ್ಷನಾಗಿ ಆದಷ್ಟು ಬೇಗನೆ ಆಯ್ಕೆ ಮಾಡತಕ್ಕದ್ದು ಮತ್ತು ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಪದವು ಖಾಲಿ ಆದಾಗಲೆಲ್ಲ ಅಧ್ಯಕ್ಷನಾಗಿ ಅಥವಾ ಸಂದರ್ಭಾನುಸಾರ ಉಪಾಧ್ಯಕ್ಷನಾಗಿ ಮತ್ತೊಬ್ಬ ಸದಸ್ಯನನ್ನು ಸದನವು ಆಯ್ಕೆ ಮಾಡತಕ್ಕದ್ದು.

**94. ಲೋಕಸಭೆಯ ಅಧ್ಯಕ್ಷನು ಮತ್ತು ಉಪಾಧ್ಯಕ್ಷನು ಪದಗಳನ್ನು ಖಾಲಿ ಮಾಡುವುದು, ಅವುಗಳಿಗೆ ರಾಜೀನಾಮೆ ನೀಡುವುದು ಮತ್ತು ಆ ಪದಗಳಿಂದ ಅವರನ್ನು ತೆಗೆದುಹಾಕುವುದು:–** ಲೋಕಸಭೆಯ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಪದಧಾರಣ ಮಾಡಿರುವ ಸದಸ್ಯನು,–

(ಎ) ಲೋಕಸಭೆಯ ಸದಸ್ಯನಾಗಿರುವುದು ನಿಂತುಹೋದಲ್ಲಿ ತನ್ನ ಪದವನ್ನು ಖಾಲಿ ಮಾಡತಕ್ಕದ್ದು;

(ಬಿ) ಅಧ್ಯಕ್ಷನಾಗಿದ್ದರೆ ಉಪಾಧ್ಯಕ್ಷನಿಗೆ ಅಥವಾ ಅವನು ಉಪಾಧ್ಯಕ್ಷನಾಗಿದ್ದರೆ ಅಧ್ಯಕ್ಷನಿಗೆ ತಾನು ಸಹಿಮಾಡಿದ ಪತ್ರವನ್ನು ಬರೆದು ಯಾವುದೇ ಕಾಲದಲ್ಲಿ ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು; ಮತ್ತು

(ಸಿ) ಲೋಕಸಭೆಯ ಆಗಿನ ಎಲ್ಲ ಸದಸ್ಯರ ಬಹುಮತದಿಂದ ಅಂಗೀಕೃತವಾದ ನಿರ್ಣಯದ ಮೂಲಕ ಪದದಿಂದ ತೆಗೆದುಹಾಕಲ್ಪಡಬಹುದು:

ಪರಂತು, (ಸಿ) ಖಂಡದ ಉದ್ದೇಶಕ್ಕಾಗಿ ಯಾವುದೇ ನಿರ್ಣಯವನ್ನು ಮಂಡಿಸುವ ಆಶಯದ ನೋಟೀಸನ್ನು ಕನಿಷ್ಠಪಕ್ಷ ಹದಿನಾಲ್ಕು ದಿನಗಳ ಮುಂಚಿತವಾಗಿ ಕೊಟ್ಟಿದ್ದ ಹೊರತು ಅಂಥ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ:

ಮತ್ತೂ ಪರಂತು, ಲೋಕಸಭೆಯ ವಿಸರ್ಜನೆಯಾದಾಗಲೆಲ್ಲ, ಹಾಗೆ ವಿಸರ್ಜನೆಯಾದ ತರುವಾಯ ನಡೆಯುವ ಲೋಕಸಭೆಯ ಮೊದಲನೆಯ ಅಧಿವೇಶನದ ನಿಕಟಪೂರ್ವದ ಸಮಯದವರೆಗೂ ಅಧ್ಯಕ್ಷನು ತನ್ನ ಪದವನ್ನು ಖಾಲಿ ಮಾಡತಕ್ಕದ್ದಲ್ಲ.

**95. ಅಧ್ಯಕ್ಷ ಪದದ ಕರ್ತವ್ಯಗಳನ್ನು ನೆರವೇರಿಸಲು ಅಥವಾ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಲು ಉಪಾಧ್ಯಕ್ಷನ ಅಥವಾ ಇತರ ವ್ಯಕ್ತಿಯ ಅಧಿಕಾರ:–** (1) ಅಧ್ಯಕ್ಷನ ಪದವು ಖಾಲಿಯಾಗಿರುವಾಗ ಆ ಪದದ ಕರ್ತವ್ಯಗಳನ್ನು ಉಪಾಧ್ಯಕ್ಷನು ನೆರವೇರಿಸತಕ್ಕದ್ದು ಅಥವಾ ಉಪಾಧ್ಯಕ್ಷನ ಪದವೂ ಖಾಲಿಯಾಗಿರುವಾಗ ಅಧ್ಯಕ್ಷನ ಪದದ ಕರ್ತವ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ರಾಷ್ಟ್ರಪತಿಯು ನೇಮಕ ಮಾಡಬಹುದಾದಂಥ ಲೋಕಸಭೆಯ ಸದಸ್ಯನು ಆ ಪದದ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(2) ಲೋಕಸಭೆಯ ಯಾವುದೇ ಉಪವೇಶನದಲ್ಲಿ ಅಧ್ಯಕ್ಷನು ಗೈರುಹಾಜರಾಗಿರುವಾಗ ಉಪಾಧ್ಯಕ್ಷನು ಅಥವಾ ಅವನೂ ಗೈರುಹಾಜರಾಗಿರುವಾಗ ಲೋಕಸಭೆಯ ಪ್ರಕ್ರಿಯಾ ನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ವ್ಯಕ್ತಿಯು ಅಥವಾ ಅಂಥ ಯಾವ ವ್ಯಕ್ತಿಯೂ ಹಾಜರಿಲ್ಲದಿದ್ದರೆ ಸದನವು ನಿರ್ಧರಿಸಬಹುದಾದಂಥ ಇತರ ಯಾರೇ ವ್ಯಕ್ತಿಯು ಅಧ್ಯಕ್ಷನಾಗಿ ಕಾರ್ಯನಿರ್ವಹಿಸತಕ್ಕದ್ದು.

**96. ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು ಪದದಿಂದ ತೆಗೆದುಹಾಕುವ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಅವನು ಅಧ್ಯಕ್ಷತೆ ವಹಿಸತಕ್ಕದ್ದಲ್ಲ:–** (1) ಲೋಕಸಭೆಯ ಯಾವುದೇ ಉಪವೇಶನದಲ್ಲಿ ಅಧ್ಯಕ್ಷನನ್ನು ಅವನ ಪದದಿಂದ ತೆಗೆದುಹಾಕುವ ಯಾವುದೇ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಅಧ್ಯಕ್ಷನು ಹಾಜರಿದ್ದರೂ ಅವನು, ಅಥವಾ ಉಪಾಧ್ಯಕ್ಷನನ್ನು ಅವನ ಪದದಿಂದ ತೆಗೆದುಹಾಕುವ ಯಾವುದೇ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಉಪಾಧ್ಯಕ್ಷನು ಹಾಜರಿದ್ದರೂ, ಅವನು ಅಧ್ಯಕ್ಷತೆ ವಹಿಸತಕ್ಕದ್ದಲ್ಲ ಮತ್ತು 95ನೆಯ ಅನುಚ್ಛೇದದ (2)ನೆಯ ಖಂಡದ ಉಪಬಂಧಗಳು, ಅಧ್ಯಕ್ಷನು ಅಥವಾ ಸಂದರ್ಭಾನುಸಾರ ಉಪಾಧ್ಯಕ್ಷನು ಗೈರುಹಾಜರಾಗಿರುವ ಉಪವೇಶನದ ಸಂಬಂಧದಲ್ಲಿ ಅನ್ವಯಿಸುವಂತೆಯೇ ಅಂಥ ಪ್ರತಿಯೊಂದು ಉಪವೇಶನದ ಸಂಬಂಧದಲ್ಲಿ ಅವು ಅನ್ವಯಿಸತಕ್ಕದ್ದು.

(2) ಅಧ್ಯಕ್ಷನನ್ನು ಅವನ ಪದದಿಂದ ತೆಗೆದುಹಾಕುವ ಯಾವುದೇ ನಿರ್ಣಯವು ಲೋಕಸಭೆಯಲ್ಲಿ ಪರ್ಯಾಲೋಚನೆಯಲ್ಲಿರುವಾಗ ಅಧ್ಯಕ್ಷನು ಲೋಕಸಭೆಯಲ್ಲಿ ಮಾತನಾಡುವ ಮತ್ತು ಅದರ ವ್ಯವಹರಣೆಗಳಲ್ಲಿ ಅನ್ಯಥಾ ಭಾಗವಹಿಸುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು 100ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ ಅಂಥ ನಿರ್ಣಯದ ಮೇಲೆ ಅಥವಾ ಅಂಥ ವ್ಯವಹರಣೆಗಳ ಅವಧಿಯಲ್ಲಿ ಇತರ ಯಾವುದೇ ವಿಷಯದ ಮೇಲೆ ಪ್ರಥಮತಃ ಮಾತ್ರ ಮತ ಕೊಡುವ ಹಕ್ಕುಳ್ಳವನಾಗಿರತಕ್ಕದ್ದು; ಆದರೆ ಮತಗಳು ಸಮನಾಗಿರುವ ಸಂದರ್ಭದಲ್ಲಿ ಮತಕೊಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**97. ಸಭಾಪತಿಯ ಮತ್ತು ಉಪಸಭಾಪತಿಯ ಹಾಗೂ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಸಂಬಳಗಳು ಮತ್ತು ಭತ್ಯೆಗಳು:-** ರಾಜ್ಯಸಭೆಯ ಸಭಾಪತಿಗೆ ಮತ್ತು ಉಪಸಭಾಪತಿಗೆ ಮತ್ತು ಲೋಕಸಭೆಯ ಅಧ್ಯಕ್ಷನಿಗೆ ಮತ್ತು ಉಪಾಧ್ಯಕ್ಷನಿಗೆ, ಸಂಸತ್ತು ಕಾನೂನಿನ ಮೂಲಕ ಅನುಕ್ರಮವಾಗಿ ನಿಗದಿಪಡಿಸಬಹುದಾದಂಥ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಸಂದಾಯಮಾಡತಕ್ಕದ್ದು ಮತ್ತು ಆ ಬಗ್ಗೆ ಉಪಬಂಧವನ್ನು ಹಾಗೆ ಮಾಡುವವರೆಗೆ ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಅವರಿಗೆ ಸಂದಾಯಮಾಡತಕ್ಕದ್ದು.

**98. ಸಂಸತ್ತಿನ ಸಚಿವಾಲಯ:-** (1) ಸಂಸತ್ತಿನ ಪ್ರತಿಯೊಂದು ಸದನಕ್ಕೆ ಪ್ರತ್ಯೇಕ ಸಚಿವಾಲಯ ಸಿಬ್ಬಂದಿ ಇರತಕ್ಕದ್ದು:

ಪರಂತು, ಈ ಖಂಡದಲ್ಲಿ ಇರುವುದು ಯಾವುದೂ, ಸಂಸತ್ತಿನ ಉಭಯ ಸದನಗಳಿಗೂ ಸಾಮಾನ್ಯವಾಗಿರುವ ಹುದ್ದೆಗಳನ್ನು ಸೃಜಿಸುವುದಕ್ಕೆ ಅಡ್ಡಿಯನ್ನುಂಟುಮಾಡುವುದಾಗಿ ಅರ್ಥೈಸತಕ್ಕದ್ದಲ್ಲ.

(2) ಸಂಸತ್ತಿನ ಉಭಯ ಸದನಗಳ ಸಚಿವಾಲಯ ಸಿಬ್ಬಂದಿಯ ನೇಮಕಾತಿಯನ್ನು ಮತ್ತು ನೇಮಕಗೊಂಡ ವ್ಯಕ್ತಿಗಳ ಸೇವಾ ಷರತ್ತುಗಳನ್ನು ಸಂಸತ್ತು ಕಾನೂನಿನ ಮೂಲಕ ವಿನಿಯಮಿಸಬಹುದು.

(3) (2)ನೆಯ ಖಂಡದ ಮೇರೆಗೆ ಸಂಸತ್ತು ಉಪಬಂಧವನ್ನು ಮಾಡುವವರೆಗೆ, ರಾಷ್ಟ್ರಪತಿಯು ಲೋಕಸಭೆಯ ಅಧ್ಯಕ್ಷನೊಡನೆ ಅಥವಾ ಸಂದರ್ಭಾನುಸಾರ ರಾಜ್ಯಸಭೆಯ ಸಭಾಪತಿಯೊಡನೆ ಸಮಾಲೋಚಿಸಿ, ಲೋಕಸಭೆಯ ಅಥವಾ ರಾಜ್ಯಸಭೆಯ ಸಚಿವಾಲಯ ಸಿಬ್ಬಂದಿಯ ನೇಮಕಾತಿಯನ್ನು ಮತ್ತು ನೇಮಕಗೊಂಡ ವ್ಯಕ್ತಿಗಳ ಸೇವಾ ಷರತ್ತುಗಳನ್ನು ವಿನಿಯಮಿಸುವ ನಿಯಮಗಳನ್ನು ರಚಿಸಬಹುದು ಮತ್ತು ಹಾಗೆ ರಚಿತವಾದ ಯಾವುವೇ ನಿಯಮಗಳು ಸದರಿ ಖಂಡದ ಮೇರೆಗೆ ರಚಿತವಾದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು ಪರಿಣಾಮಕಾರಿಯಾಗತಕ್ಕದ್ದು.

## ಕಾರ್ಯಕಲಾಪ ನಿರ್ವಹಣೆ

**99. ಸದಸ್ಯರಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ:-** ಸಂಸತ್ತಿನ ಉಭಯ ಸದನಗಳ ಪ್ರತಿಯೊಬ್ಬ ಸದಸ್ಯನು ತನ್ನ ಸ್ಥಾನವನ್ನು ವಹಿಸಿಕೊಳ್ಳುವುದಕ್ಕೆ ಮುನ್ನ, ರಾಷ್ಟ್ರಪತಿಯ ಸಮಕ್ಷಮ ಅಥವಾ ರಾಷ್ಟ್ರಪತಿಯಿಂದ ಆ ಬಗ್ಗೆ ನೇಮಕಗೊಂಡ ವ್ಯಕ್ತಿಯ ಸಮಕ್ಷಮ ಆ ಉದ್ದೇಶಕ್ಕಾಗಿ ಮೂರನೆಯ ಅನುಸೂಚಿಯಲ್ಲಿ ಕೊಡಲಾಗಿರುವ ನಮೂನೆಗೆ ಅನುಸಾರವಾಗಿ ಪ್ರಮಾಣ ಅಥವಾ ಪ್ರತಿಜ್ಞೆ ಮಾಡತಕ್ಕದ್ದು ಮತ್ತು ಅದಕ್ಕೆ ತನ್ನ ರುಜು ಹಾಕತಕ್ಕದ್ದು.

**100. ಸದನಗಳಲ್ಲಿ ಮತದಾನ, ಖಾಲಿಸ್ಥಾನಗಳು ಏನೇ ಇದ್ದಾಗ್ಯೂ ಕಾರ್ಯನಿರ್ವಹಿಸಲು ಸದನಗಳ ಅಧಿಕಾರ ಮತ್ತು ಕೋರಂ:-** (1) ಈ ಸಂವಿಧಾನದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಹೊರತುಪಡಿಸಿ, ಪ್ರತಿಯೊಂದು ಸದನದ ಯಾವುದೇ ಉಪವೇಶನದಲ್ಲಿ ಅಥವಾ ಉಭಯ ಸದನಗಳ ಸಂಯುಕ್ತ ಉಪವೇಶನದಲ್ಲಿ, ಅಧ್ಯಕ್ಷನನ್ನು ಅಥವಾ ಸಭಾಪತಿಯಾಗಿ ಅಥವಾ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯನ್ನು ಹೊರತುಪಡಿಸಿ, ಹಾಜರಿರುವ ಹಾಗೂ ಮತ ನೀಡುವ ಸದಸ್ಯರ ಬಹುಮತದ ಮೂಲಕ ಎಲ್ಲ ಪ್ರಶ್ನೆಗಳನ್ನು ನಿರ್ಧರಿಸತಕ್ಕದ್ದು.

ಸಭಾಪತಿಯು ಅಥವಾ ಅಧ್ಯಕ್ಷನು ಅಥವಾ ಸಭಾಪತಿಯಾಗಿ ಅಥವಾ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯು ಪ್ರಥಮತಃ ಮತ ನೀಡತಕ್ಕದ್ದಲ್ಲ; ಆದರೆ ಮತಗಳು ಸಮನಾಗಿರುವ ಸಂದರ್ಭದಲ್ಲಿ ನಿರ್ಣಾಯಕ ಮತ ನೀಡಲು ಅವನಿಗೆ ಅಧಿಕಾರವಿರತಕ್ಕದ್ದು ಮತ್ತು ಅದನ್ನು ಅವನು ಚಲಾಯಿಸತಕ್ಕದ್ದು.

(2) ಸಂಸತ್ತಿನ ಯಾವುದೇ ಒಂದು ಸದನದಲ್ಲಿ ಯಾವುದೇ ಸದಸ್ಯ ಸ್ಥಾನವು ಖಾಲಿಯಾಗಿದ್ದಾಗ್ಯೂ, ಆ ಸದನವು ಕಾರ್ಯನಿರ್ವಹಿಸಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಸಂಸತ್ತಿನಲ್ಲಿ ಯಾವುದೇ ಕಾರ್ಯಕಲಾಪಗಳು ನಡೆಯುತ್ತಿರುವಾಗ, ಅಲ್ಲಿ ಕುಳಿತಿರಲು, ಮತ ನೀಡಲು ಅಥವಾ ಅನ್ಯಥಾ ಆ ವ್ಯವಹರಣೆಗಳಲ್ಲಿ ಭಾಗವಹಿಸಲು ಹಕ್ಕಿಲ್ಲದ ಯಾರೇ ವ್ಯಕ್ತಿಯು ಹಾಗೆ ಮಾಡಿರುವುದು ಆ ತರುವಾಯ ಕಂಡುಬಂದಾಗ್ಯೂ, ಆ ವ್ಯವಹರಣೆಗಳು ಸಿಂಧುವಾಗತಕ್ಕದ್ದು.

(3) ಸಂಸತ್ತು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸುವವರೆಗೆ, ಸಂಸತ್ತಿನ ಯಾವುದೇ ಸದನದ ಸಭೆಯು ನಡೆಯಲು ಆ ಸದನದ ಸದಸ್ಯರ ಒಟ್ಟು ಸಂಖ್ಯೆಯ ಹತ್ತನೆಯ ಒಂದು ಭಾಗವು ಆ ಸದನದ ಸಭೆಗೆ ಅಗತ್ಯವಾದ ಕೋರಂ ಆಗತಕ್ಕದ್ದು.

(4) ಯಾವುದೇ ಸದನದ ಸಭೆಯು ನಡೆಯುತ್ತಿರುವ ಯಾವುದೇ ಕಾಲದಲ್ಲಿ ಕೋರಂ ಇಲ್ಲದಿದ್ದರೆ, ಕೋರಂ ಆಗುವವರೆಗೆ ಸದನವನ್ನು ಮುಂದೂಡುವುದು ಅಥವಾ ಸಭೆಯನ್ನು ಸ್ಥಗಿತಗೊಳಿಸುವುದು ಸಭಾಪತಿಯ ಅಥವಾ ಅಧ್ಯಕ್ಷನ ಅಥವಾ ಸಭಾಪತಿಯಾಗಿ ಅಥವಾ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು.

### ಸದಸ್ಯರ ಅನರ್ಹತೆಗಳು

**101. ಸ್ಥಾನಗಳನ್ನು ಖಾಲಿ ಮಾಡುವುದು:-** (1) ಯಾರೇ ವ್ಯಕ್ತಿಯು ಸಂಸತ್ತಿನ ಉಭಯ ಸದನಗಳ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಉಭಯ ಸದನಗಳ ಸದಸ್ಯನಾಗಿ ಆಯ್ಕೆಯಾಗಿರುವ ಯಾರೇ ವ್ಯಕ್ತಿಯು, ಅವುಗಳಲ್ಲಿ ಯಾವುದಾದರೂ ಒಂದು ಸದನದಲ್ಲಿನ ತನ್ನ ಸ್ಥಾನವನ್ನು ಖಾಲಿ ಮಾಡುವಂತೆ ಸಂಸತ್ತು ಕಾನೂನಿನ ಮೂಲಕ ಉಪಬಂಧವನ್ನು ಮಾಡತಕ್ಕದ್ದು.

(2) ಯಾರೇ ವ್ಯಕ್ತಿಯು ಸಂಸತ್ತು ಮತ್ತು [1]* * * ಒಂದು ರಾಜ್ಯದ ವಿಧಾನ ಮಂಡಲದ ಯಾವುದೇ ಸದನ - ಇವೆರಡರ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು ಸಂಸತ್ತು ಮತ್ತು [2][ಒಂದು ರಾಜ್ಯದ] ವಿಧಾನಮಂಡಲದ ಯಾವುದೇ ಸದನ - ಈ ಎರಡರ ಸದಸ್ಯನಾಗಿ ಆಯ್ಕೆಯಾದಲ್ಲಿ, ಆಗ, ರಾಷ್ಟ್ರಪತಿಯು ರಚಿಸಿದ [3]ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯ ಮುಕ್ತಾಯವಾಗುವುದಕ್ಕೆ ಮುಂಚಿತವಾಗಿ ಅವನು ಆ ರಾಜ್ಯದ ವಿಧಾನಮಂಡಲದಲ್ಲಿನ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರದಿದ್ದರೆ, ಆ ಅವಧಿಯು ಮುಕ್ತಾಯವಾದ ಮೇಲೆ ಸಂಸತ್ತಿನಲ್ಲಿನ ಅವನ ಸ್ಥಾನವು ಖಾಲಿಯಾಗತಕ್ಕದ್ದು.

(3) ಸಂಸತ್ತಿನ ಯಾವುದೇ ಸದನದ ಸದಸ್ಯನು,-

(ಎ) [4][102ನೆಯ ಅನುಚ್ಛೇದದ (1)ನೆಯ ಖಂಡದಲ್ಲಿ ಅಥವಾ (2)ನೆಯ ಖಂಡದಲ್ಲಿ] ನಮೂದಿಸಿರುವ ಯಾವುದೇ ಅನರ್ಹತೆಗಳಿಗೆ ಒಳಗಾದರೆ; ಅಥವಾ

[5][(ಬಿ) ತಾನು ಸಹಿ ಮಾಡಿದ ಪತ್ರವನ್ನು ಸಭಾಪತಿಗೆ ಅಥವಾ ಸಂದರ್ಭಾನುಸಾರ ಅಧ್ಯಕ್ಷನಿಗೆ ಬರೆದು ಯಾವುದೇ ಕಾಲದಲ್ಲಿ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟರೆ ಮತ್ತು ಅವನ ರಾಜೀನಾಮೆಯನ್ನು ಸಭಾಪತಿಯು ಅಥವಾ ಸಂದರ್ಭಾನುಸಾರ ಅಧ್ಯಕ್ಷನು ಅಂಗೀಕರಿಸಿದರೆ]

- ಆ ತರುವಾಯ ಅವನ ಸ್ಥಾನವು ಖಾಲಿಯಾಗತಕ್ಕದ್ದು:

[6][ಪರಂತು, (ಬಿ) ಉಪಖಂಡದಲ್ಲಿ ಉಲ್ಲೇಖಿತವಾಗಿರುವ ಯಾವುದೇ ರಾಜೀನಾಮೆಯ ಸಂದರ್ಭದಲ್ಲಿ, ಸಭಾಪತಿಯು ಅಥವಾ ಸಂದರ್ಭಾನುಸಾರ ಅಧ್ಯಕ್ಷನು ತನಗೆ ದೊರೆತಿರುವ ಮಾಹಿತಿಯ ಮೇಲೆ ಅಥವಾ ಅನ್ಯಥಾ ಮತ್ತು ತನಗೆ ಸೂಕ್ತವೆಂದು ತೋರುವಂಥ ವಿಚಾರಣೆಯನ್ನು ನಡೆಸಿದ ಬಳಿಕ ಆ ರಾಜೀನಾಮೆಯು ಸ್ವಯಿಚ್ಛೆಯಿಂದ ಕೊಟ್ಟಿರುವಂಥದ್ದಲ್ಲ ಎಂದು ಅಥವಾ ನೈಜವಾದುದಲ್ಲ ಎಂದು ಮನಗಂಡರೆ, ಅವನು ಅಂಥ ರಾಜೀನಾಮೆಯನ್ನು ಅಂಗೀಕರಿಸತಕ್ಕದ್ದಲ್ಲ.]

(4) ಸಂಸತ್ತಿನ ಯಾವುದೇ ಸದನದ ಸದಸ್ಯನು ಆ ಸದನದ ಅನುಮತಿಯಿಲ್ಲದೆ ಅರವತ್ತು ದಿನಗಳವರೆಗೆ ಅದರ ಎಲ್ಲ ಸಭೆಗಳಿಗೂ ಗೈರುಹಾಜರಾದರೆ, ಅವನ ಸ್ಥಾನವು ಖಾಲಿಯಾಗಿದೆ ಎಂದು ಆ ಸದನವು ಘೋಷಿಸಬಹುದು:

ಪರಂತು, ಸದರಿ ಅರವತ್ತು ದಿನಗಳ ಅವಧಿಯನ್ನು ಲೆಕ್ಕ ಹಾಕುವಲ್ಲಿ ಆ ಸದನದ ಅಧಿವೇಶನವನ್ನು ಮುಕ್ತಾಯಗೊಳಿಸಲಾದ ಅಥವಾ ನಿರಂತರ ನಾಲ್ಕು ದಿನಗಳಿಗಿಂತ ಹೆಚ್ಚು ಕಾಲ ಮುಂದೂಡಲಾದ ಯಾವುದೇ ಅವಧಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಮೇರೆಗೆ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಭಾಗದಲ್ಲಾಗಲಿ ಅಥವಾ (ಬಿ) ಭಾಗದಲ್ಲಾಗಲಿ ಉಲ್ಲೇಖಿತವಾಗಿರುವ" ಎಂಬ ಪದಗಳನ್ನೂ, ಅಕ್ಷರಗಳನ್ನೂ ಬಿಟ್ಟುಬಿಡಲಾಗಿದೆ.
2. 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಂಥ ಒಂದು ರಾಜ್ಯ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. ಎಫ್.46/50-ಸಿ ಕ್ರಮಾಂಕದ-1950ನೆಯ ಇಸವಿಯ ಜನವರಿ ತಿಂಗಳ 26ನೆಯ ದಿನಾಂಕದ ಕಾನೂನು ಸಚಿವಾಲಯದ ಅಧಿಸೂಚನೆಯೊಂದಿಗೆ, ಭಾರತದ ವಿಶೇಷ ರಾಜಪತ್ರದ 678ನೆಯ ಪುಟದಲ್ಲಿ ಪ್ರಕಟಿತವಾಗಿದೆ, 1950ನೆಯ ಇಸವಿಯ ಏಕಕಾಲೀನ ಸದಸ್ಯತ್ವ ನಿಷೇಧ ನಿಯಮಗಳನ್ನು ನೋಡಿ.
4. 1985ನೆಯ ಇಸವಿಯ ಸಂವಿಧಾನ (ಐವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ ಪ್ರತ್ಯಾಯೋಜಿಸಲಾಗಿದೆ.
5. 1974ನೆಯ ಇಸವಿಯ ಸಂವಿಧಾನ (ಮೂವತ್ತಮೂರನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಮೂಲ (ಬಿ) ಉಪಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
6. 1974ನೆಯ ಇಸವಿಯ ಸಂವಿಧಾನ (ಮೂವತ್ತಮೂರನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.

**102. ಸದಸ್ಯತ್ವಕ್ಕೆ ಅನರ್ಹತೆಗಳು:-** (1) ಯಾರೇ ವ್ಯಕ್ತಿಯು,-

(ಎ) ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿರುವ ಯಾವ ಪದವನ್ನು ಧಾರಣ ಮಾಡಿದವನು ಅನರ್ಹನಾಗುವುದಿಲ್ಲವೆಂದು ಸಂಸತ್ತು ಕಾನೂನಿನ ಮೂಲಕ ಘೋಷಿಸಿದೆಯೋ ಅಂಥ ಪದವನ್ನು ಹೊರತುಪಡಿಸಿ, ಇತರ ಯಾವುದೇ ಲಾಭದಾಯಕ ಪದವನ್ನು ಅವನು ಧಾರಣ ಮಾಡಿದ್ದರೆ;

(ಬಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ;

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ;

(ಡಿ) ಭಾರತದ ನಾಗರಿಕನಾಗಿಲ್ಲದಿದ್ದರೆ ಅಥವಾ ಯಾವುದೇ ವಿದೇಶಿ ರಾಜ್ಯದ ನಾಗರಿಕತ್ವವನ್ನು ಸ್ವಇಚ್ಛೆಯಿಂದ ಆರ್ಜಿಸಿದ್ದರೆ ಅಥವಾ ಒಂದು ವಿದೇಶಿ ರಾಷ್ಟ್ರಕ್ಕೆ ನಿಷ್ಠೆ ಅಥವಾ ಅನುಸಕ್ತಿ ಹೊಂದಿರುವುದನ್ನು ಒಪ್ಪಿಕೊಂಡಿದ್ದರೆ;

(ಇ) ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅವನನ್ನು ಹಾಗೆ ಅನರ್ಹಗೊಳಿಸಿದ್ದರೆ

– ಅವನು ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿ ಆಯ್ಕೆಯಾಗಲು ಮತ್ತು ಅದರ ಸದಸ್ಯನಾಗಿರಲು ಅನರ್ಹನಾಗಿರತಕ್ಕದ್ದು.

[1][**ವಿವರಣೆ:-** ಈ ಖಂಡದ ಉದ್ದೇಶಗಳಿಗಾಗಿ] ಯಾರೇ ವ್ಯಕ್ತಿಯು ಒಕ್ಕೂಟದ ಅಥವಾ ಯಾವುದೇ ರಾಜ್ಯದ ಮಂತ್ರಿಯಾಗಿ ಇರುವ ಕಾರಣ ಮಾತ್ರದಿಂದಲೇ ಅವನು ಭಾರತ ಸರ್ಕಾರದ ಅಥವಾ ಅಂಥ ರಾಜ್ಯ ಸರ್ಕಾರದ ಅಧೀನದಲ್ಲಿ ಒಂದು ಲಾಭದಾಯಕ ಪದವನ್ನು ಧಾರಣ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ.

[2][(2) ಯಾರೇ ವ್ಯಕ್ತಿಯನ್ನು ಹತ್ತನೆಯ ಅನುಸೂಚಿಯ ಮೇರೆಗೆ ಹಾಗೆ ಅನರ್ಹಗೊಳಿಸಲಾಗಿದ್ದರೆ ಅವನು ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿರಲು ಅನರ್ಹನಾಗತಕ್ಕದ್ದು.]

[3][**103. ಸದಸ್ಯರ ಅನರ್ಹತೆಗಳನ್ನು ಕುರಿತ ಪ್ರಶ್ನೆಗಳ ತೀರ್ಮಾನ:-** (1) ಸಂಸತ್ತಿನ ಯಾವುದೇ ಸದನದ ಸದಸ್ಯನು 102ನೇ ಅನುಚ್ಛೇದದ (1)ನೇ ಖಂಡದಲ್ಲಿ ನಮೂದಾಗಿರುವ ಯಾವುದೇ ಅನರ್ಹತೆಗಳಿಗೆ ಒಳಪಟ್ಟಿದ್ದಾನೆಯೇ ಹೇಗೆ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಆ ಪ್ರಶ್ನೆಯನ್ನು ರಾಷ್ಟ್ರಪತಿಯ ತೀರ್ಮಾನಕ್ಕೆ ಒಪ್ಪಿಸತಕ್ಕದ್ದು ಮತ್ತು ಆ ಬಗ್ಗೆ ಅವನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(2) ಅಂಥ ಯಾವುದೇ ಪ್ರಶ್ನೆಯ ಮೇಲೆ ಯಾವುದೇ ತೀರ್ಮಾನವನ್ನು ಕೊಡುವುದಕ್ಕೆ ಮುಂಚಿತವಾಗಿ, ರಾಷ್ಟ್ರಪತಿಯು ಚುನಾವಣಾ ಆಯೋಗದ ಅಭಿಪ್ರಾಯವನ್ನು ಪಡೆಯತಕ್ಕದ್ದು ಮತ್ತು ಆ ಅಭಿಪ್ರಾಯಕ್ಕನುಸಾರ ಕಾರ್ಯ ಪ್ರವೃತ್ತನಾಗತಕ್ಕದ್ದು.]

**104. 99ನೆಯ ಅನುಚ್ಛೇದದ ಮೇರೆಗೆ ಪ್ರಮಾಣ ಅಥವಾ ಪ್ರತಿಜ್ಞೆ ಮಾಡುವುದಕ್ಕೆ ಮುಂಚೆ ಅಥವಾ ಅರ್ಹನಾಗಿಲ್ಲದಿರುವಾಗ ಅಥವಾ ಅನರ್ಹಗೊಳಿಸಿರುವಾಗ ಸದಸ್ಯನಾಗಿ ಕುಳಿತರೆ ಮತ್ತು ಮತ ಕೊಟ್ಟರೆ ದಂಡ:-** ಯಾರೇ ವ್ಯಕ್ತಿಯು ಸಂಸತ್ತಿನ ಯಾವುದೇ ಸದನದ ಸದಸ್ಯನಾಗಿ 99ನೆಯ ಅನುಚ್ಛೇದದ ಅಗತ್ಯತೆಗಳನ್ನು ಪಾಲಿಸುವುದಕ್ಕೆ ಮುಂಚೆ ಅಥವಾ ಅದರ ಸದಸ್ಯತ್ವಕ್ಕೆ ತಾನು ಅರ್ಹನಾಗಿಲ್ಲವೆಂದು ತಿಳಿದೂ ಅಥವಾ ಸದಸ್ಯತ್ವಕ್ಕೆ ತಾನು ಅನರ್ಹನಾಗಿರುವೆನೆಂದು ತಿಳಿದೂ ಅಥವಾ ಸಂಸತ್ತು ಮಾಡಿದ ಯಾವುದೇ ಕಾನೂನಿನ ಉಪಬಂಧಗಳು ತಾನು ಸದನದಲ್ಲಿ ಕುಳಿತುಕೊಳ್ಳುವುದನ್ನು ಅಥವಾ ಮತ ಕೊಡುವುದನ್ನು ನಿಷೇಧಿಸಿರುವುದು ತನಗೆ ತಿಳಿದಿದ್ದೂ, ಅವನು ಸದನದಲ್ಲಿ ಕುಳಿತರೆ ಅಥವಾ ಮತ ಕೊಟ್ಟರೆ, ಅವನು ಹಾಗೆ ಕುಳಿತ ಅಥವಾ ಮತ ಕೊಟ್ಟ ಪ್ರತಿ ದಿನಕ್ಕೂ ಐನೂರು ರೂಪಾಯಿಗಳ ದಂಡವನ್ನು ಕೊಡಲು ಬದ್ಧನಾಗಿರತಕ್ಕದ್ದು ಮತ್ತು ಆ ದಂಡವನ್ನು ಒಕ್ಕೂಟಕ್ಕೆ ಬರಬೇಕಾದ ಸಾಲದಂತೆ ವಸೂಲು ಮಾಡತಕ್ಕದ್ದು.

## ಸಂಸತ್ತಿನ ಮತ್ತು ಅದರ ಸದಸ್ಯರ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳು

**105. ಸಂಸತ್ತಿನ ಸದನಗಳ ಮತ್ತು ಅವುಗಳ ಸದಸ್ಯರ ಮತ್ತು ಸಮಿತಿಗಳ ಅಧಿಕಾರಗಳು, ವಿಶೇಷಾಧಿಕಾರಗಳು, ಇತ್ಯಾದಿ:-** (1) ಈ ಸಂವಿಧಾನದ ಉಪಬಂಧಗಳಿಗೆ ಮತ್ತು ಸಂಸತ್ತಿನ ಪ್ರಕ್ರಿಯೆಯನ್ನು ವಿನಿಯಮಗೊಳಿಸುವ ನಿಯಮಗಳಿಗೆ ಮತ್ತು ಸ್ಥಾಯಿ ಆದೇಶಗಳಿಗೆ ಒಳಪಟ್ಟು, ಸಂಸತ್ತಿನಲ್ಲಿ ವಾಕ್ ಸ್ವಾತಂತ್ರ್ಯವಿರತಕ್ಕದ್ದು.

---

1. 1985ನೆಯ ಇಸವಿಯ ಸಂವಿಧಾನ (ಐವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ "(2) ಈ ಅನುಚ್ಛೇದದ ಉದ್ದೇಶಗಳಿಗಾಗಿ" ಎಂಬುದಕ್ಕೆ ಬದಲಾಗಿ (1.3.1985 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಅದೇ ಅಧಿನಿಯಮದ 3ನೇ ಪ್ರಕರಣದ ಮೂಲಕ (1.3.1985 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 103ನೇ ಅನುಚ್ಛೇದವನ್ನು ಅನುಕ್ರಮವಾಗಿ 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 20ನೇ ಪ್ರಕರಣದ ಮೂಲಕ (3-1-77ರಿಂದ ಜಾರಿಗೆ ಬರುವಂತೆ) ಹಾಗೂ 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 14ನೇ ಪ್ರಕರಣದ ಮೂಲಕ (20-6-79ರಿಂದ ಜಾರಿಗೆ ಬರುವಂತೆ) ತಿದ್ದುಪಡಿ ಮಾಡಲಾಗಿದೆ. ಮೇಲ್ಕಂಡಂತೆ ಓದಿಕೊಳ್ಳಬೇಕು.

(2) ಸಂಸತ್ತಿನ ಯಾರೇ ಸದಸ್ಯನು ಸಂಸತ್ತಿನಲ್ಲಿ ಅಥವಾ ಅದರ ಯಾವುದೇ ಸಮಿತಿಯಲ್ಲಿ ತಾನು ಹೇಳಿದ ಯಾವುದೇ ವಿಚಾರಕ್ಕೆ ಅಥವಾ ತಾನು ಕೊಟ್ಟ ಯಾವುದೇ ಮತಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಲ್ಲಿ ಯಾವುವೇ ವ್ಯವಹರಣೆಗಳಿಗೆ ಗುರಿಯಾಗತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು ಸಂಸತ್ತಿನ ಯಾವುದೇ ಸದನದ ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ ಪ್ರಕಟವಾದ ಯಾವುದೇ ವರದಿಗೆ, ಪತ್ರಕ್ಕೆ, ಮತಗಳಿಗೆ ಅಥವಾ ನಡವಳಿಗಳಿಗೆ ಸಂಬಂಧಿಸಿದಂತೆ ಹಾಗೆ ಗುರಿಯಾಗತಕ್ಕದ್ದಲ್ಲ.

(3) ಇತರ ವಿಚಾರಗಳಿಗೆ ಸಂಬಂಧಪಟ್ಟಂತೆ, ಸಂಸತ್ತಿನ ಪ್ರತಿಯೊಂದು ಸದನದ ಮತ್ತು ಆ ಪ್ರತಿಯೊಂದು ಸದನದ ಸದಸ್ಯರ ಮತ್ತು ಸಮಿತಿಗಳ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳು ಸಂಸತ್ತು ಕಾನೂನಿನ ಮೂಲಕ ಕಾಲಕಾಲಕ್ಕೆ ಪರಿಭಾಷಿಸಬಹುದಾದಂತೆ ಇರತಕ್ಕದ್ದು ಮತ್ತು ಹಾಗೆ ಪರಿಭಾಷಿಸುವವರೆಗೆ [1][ಸಂವಿಧಾನದ (ನಲವತ್ತನಾಲ್ಕನೇ ತಿದ್ದುಪಡಿ) ಅಧಿನಿಯಮ, 1978ರ 15ನೇ ಪ್ರಕರಣವು ಜಾರಿಗೆ ಬರುವುದಕ್ಕೆ ನಿಕಟಪೂರ್ವದಲ್ಲಿ ಆ ಸದನಕ್ಕೆ, ಅದರ ಸದಸ್ಯರಿಗೆ ಮತ್ತು ಸಮಿತಿಗಳಿಗೆ ಇದ್ದಂತಹ ಅವೇ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳು ಇರತಕ್ಕದ್ದು.]

(4) (1), (2) ಮತ್ತು (3)ನೆಯ ಖಂಡಗಳ ಉಪಬಂಧಗಳು, ಸಂಸತ್ತಿನ ಸದಸ್ಯರ ಸಂಬಂಧದಲ್ಲಿ ಅನ್ವಯವಾಗುವಂತೆಯೇ ಈ ಸಂವಿಧಾನದ ಕಾರಣದಿಂದಾಗಿ ಸಂಸತ್ತಿನ ಸದನದಲ್ಲಿ ಅಥವಾ ಅದರ ಯಾವುದೇ ಸಮಿತಿಯಲ್ಲಿ ಮಾತನಾಡಲು ಮತ್ತು ಅದರ ವ್ಯವಹರಣೆಗಳಲ್ಲಿ ಅನ್ಯಥಾ ಭಾಗವಹಿಸಲು ಹಕ್ಕು ಹೊಂದಿರುವ ವ್ಯಕ್ತಿಗಳ ಸಂಬಂಧದಲ್ಲಿಯೂ ಅನ್ವಯವಾಗತಕ್ಕದ್ದು.

**106. ಸದಸ್ಯರ ಸಂಬಳಗಳು ಮತ್ತು ಭತ್ಯಗಳು:–** ಸಂಸತ್ತಿನ ಯಾವುದೇ ಸದನದ ಸದಸ್ಯರು, ಸಂಸತ್ತು ಕಾನೂನಿನ ಮೂಲಕ ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಸಂಬಳಗಳನ್ನು ಮತ್ತು ಭತ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು ಮತ್ತು ಆ ಬಗ್ಗೆ ಉಪಬಂಧವನ್ನು ಮಾಡುವವರೆಗೆ, ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಡೊಮಿನಿಯನ್ ಆಫ್ ಇಂಡಿಯಾದ ಸಂವಿಧಾನ ಸಭೆಯ ಸದಸ್ಯರ ಸಂಬಂಧದಲ್ಲಿ ಅನ್ವಯಿಸುತ್ತಿದ್ದಂಥ ದರಗಳಲ್ಲಿ ಮತ್ತು ಷರತ್ತುಗಳ ಮೇಲೆ ಭತ್ಯೆಗಳನ್ನು ಪಡೆಯಲು ಅವರು ಹಕ್ಕುಳ್ಳವರಾಗಿರತಕ್ಕದ್ದು.

## ವಿಧಾಯೀ ಪ್ರಕ್ರಿಯೆ

**107. ವಿಧೇಯಕಗಳ ಮಂಡನೆಗೆ ಮತ್ತು ಅಂಗೀಕಾರಕ್ಕೆ ಸಂಬಂಧಿಸಿದ ಉಪಬಂಧಗಳು:–** (1) ಧನವಿಧೇಯಕಗಳಿಗೆ ಮತ್ತು ಇತರ ಹಣಕಾಸು ವಿಧೇಯಕಗಳಿಗೆ ಸಂಬಂಧಪಟ್ಟಂತೆ 109ನೆಯ ಮತ್ತು 117ನೆಯ ಅನುಚ್ಛೇದಗಳ ಉಪಬಂಧಗಳಿಗೆ ಒಳಪಟ್ಟು, ಯಾವುದೇ ವಿಧೇಯಕವನ್ನು ಸಂಸತ್ತಿನ ಯಾವುದೇ ಸದನದಲ್ಲಿ ಪ್ರಥಮತಃ ಮಂಡಿಸಬಹುದು.

(2) 108ನೆಯ ಮತ್ತು 109ನೆಯ ಅನುಚ್ಛೇದಗಳ ಉಪಬಂಧಗಳಿಗೊಳಪಟ್ಟು, ಉಭಯ ಸದನಗಳು ಒಂದು ವಿಧೇಯಕವನ್ನು ತಿದ್ದುಪಡಿಯಿಲ್ಲದೆ ಅಥವಾ ಸಂಸತ್ತಿನ ಉಭಯ ಸದನಗಳು ಒಪ್ಪಿರುವಂಥ ತಿದ್ದುಪಡಿಗಳ ಸಹಿತವಾಗಿ ಮಾತ್ರವೇ ಒಪ್ಪಿಕೊಂಡಿರುವ ಹೊರತು, ಅದನ್ನು ಸಂಸತ್ತಿನ ಉಭಯ ಸದನಗಳು ಅಂಗೀಕರಿಸಿರುವುದಾಗಿ ಭಾವಿಸತಕ್ಕದ್ದಲ್ಲ.

(3) ಸಂಸತ್ತಿನಲ್ಲಿ ಇತ್ಯರ್ಥದಲ್ಲಿರುವ ಯಾವುದೇ ವಿಧೇಯಕವು, ಸದನಗಳ ಅಧಿವೇಶನಗಳನ್ನು ಮುಕ್ತಾಯಗೊಳಿಸಿದ ಕಾರಣದಿಂದ ಅಂತ್ಯಗೊಳ್ಳತಕ್ಕದ್ದಲ್ಲ.

(4) ಲೋಕಸಭೆಯಿಂದ ಅಂಗೀಕೃತವಾಗಿಲ್ಲದ, ಆದರೆ ರಾಜ್ಯಸಭೆಯಲ್ಲಿ ಇತ್ಯರ್ಥದಲ್ಲಿರುವ ವಿಧೇಯಕವು ಲೋಕಸಭೆಯ ವಿಸರ್ಜನೆಯಿಂದಾಗಿ ಅಂತ್ಯಗೊಳ್ಳತಕ್ಕದ್ದಲ್ಲ.

(5) ಲೋಕಸಭೆಯಲ್ಲಿ ಇತ್ಯರ್ಥದಲ್ಲಿರುವ ಅಥವಾ ಲೋಕಸಭೆಯಿಂದ ಅಂಗೀಕೃತವಾಗಿ ರಾಜ್ಯಸಭೆಯಲ್ಲಿ ಇತ್ಯರ್ಥದಲ್ಲಿರುವ ವಿಧೇಯಕವು ಲೋಕಸಭೆಯ ವಿಸರ್ಜನೆಯಿಂದಾಗಿ 108ನೆಯ ಅನುಚ್ಛೇದದ ಉಪಬಂಧಕ್ಕೊಳಪಟ್ಟು ಅಂತ್ಯಗೊಳ್ಳತಕ್ಕದ್ದು.

**108. ಕೆಲವು ಸಂದರ್ಭಗಳಲ್ಲಿ ಉಭಯ ಸದನಗಳ ಜಂಟಿ ಉಪವೇಶನ:–** (1) ಒಂದು ವಿಧೇಯಕವು ಒಂದು ಸದನದಲ್ಲಿ ಅಂಗೀಕೃತವಾಗಿ ಅದನ್ನು ಮತ್ತೊಂದು ಸದನಕ್ಕೆ ಕಳುಹಿಸಿದ ತರುವಾಯ,–

(ಎ) ಆ ವಿಧೇಯಕವನ್ನು ಆ ಮತ್ತೊಂದು ಸದನವು ತಿರಸ್ಕರಿಸಿದರೆ; ಅಥವಾ

(ಬಿ) ಆ ವಿಧೇಯಕದಲ್ಲಿ ಮಾಡಬೇಕಾದ ತಿದ್ದುಪಡಿಗಳ ಬಗ್ಗೆ ಸದನಗಳು ಅಂತಿಮವಾಗಿ ಒಪ್ಪದಿದ್ದರೆ; ಅಥವಾ

(ಸಿ) ಆ ವಿಧೇಯಕವನ್ನು ಯಾವ ಸದನಕ್ಕೆ ಕಳುಹಿಸಲಾಗಿದೆಯೋ ಆ ಸದನಕ್ಕೆ ಅದು ತಲುಪಿದ ದಿನಾಂಕದಿಂದ ಆ ವಿಧೇಯಕವು ಅಂಗೀಕಾರವಾಗದೇ ಆರು ತಿಂಗಳುಗಳಿಗಿಂತಲೂ ಹೆಚ್ಚುಕಾಲವು ಗತಿಸಿದ್ದರೆ;

---

1. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 15ನೇ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ (20-6-79ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

– ರಾಷ್ಟ್ರಪತಿಯು, ಲೋಕಸಭೆಯ ವಿಸರ್ಜನೆಯ ಕಾರಣದಿಂದ ಆ ವಿಧೇಯಕವು ಅಂತ್ಯಗೊಂಡಿದ್ದ ಹೊರತು, ಸದನಗಳ ಉಪವೇಶನವು ನಡೆಯುತ್ತಿದ್ದರೆ ಸಂದೇಶದ ಮೂಲಕ ಮತ್ತು ಅವುಗಳು ಉಪವೇಶನದಲ್ಲಿ ಇಲ್ಲದಿದ್ದರೆ ಸಾರ್ವಜನಿಕ ಅಧಿಸೂಚನೆಯ ಮೂಲಕ, ಆ ವಿಧೇಯಕವನ್ನು ಚರ್ಚಿಸುವ ಮತ್ತು ಅದರ ಮೇಲೆ ಮತ ಕೊಡುವ ಉದ್ದೇಶಕ್ಕಾಗಿ ಜಂಟಿ ಉಪವೇಶನದಲ್ಲಿ ಸಭೆ ಸೇರಬೇಕೆಂದು ಉಭಯ ಸದನಗಳಿಗೆ ಕರೆನೀಡುವ ತನ್ನ ಆಶಯವನ್ನು ಅಧಿಸೂಚಿಸಬಹುದು:

ಪರಂತು, ಈ ಖಂಡದಲ್ಲಿ ಇರುವುದು ಯಾವುದೂ ಧನವಿಧೇಯಕಕ್ಕೆ ಅನ್ವಯವಾಗತಕ್ಕದ್ದಲ್ಲ.

(2) (1)ನೆಯ ಖಂಡದಲ್ಲಿ ಉಲ್ಲೇಖಿಸಿರುವ ಆರು ತಿಂಗಳ ಯಾವುದೇ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಅದೇ ಖಂಡದ (ಸಿ) ಉಪಖಂಡದಲ್ಲಿ ಉಲ್ಲೇಖಿಸಿರುವ ಸದನದ ಅಧಿವೇಶನವನ್ನು ಮುಕ್ತಾಯಗೊಳಿಸಲಾದ ಅಥವಾ ನಿರಂತರ ನಾಲ್ಕು ದಿನಗಳಿಗಿಂತಲೂ ಹೆಚ್ಚುಕಾಲ ಮುಂದೂಡಲಾದ ಯಾವುದೇ ಅವಧಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(3) ರಾಷ್ಟ್ರಪತಿಯು (1)ನೆಯ ಖಂಡದ ಮೇರೆಗೆ ಜಂಟಿ ಉಪವೇಶನದಲ್ಲಿ ಸಭೆ ಸೇರಲು ಸದನಗಳಿಗೆ ಕರೆ ನೀಡುವ ತನ್ನ ಆಶಯವನ್ನು ಅಧಿಸೂಚಿಸಿದ್ದರೆ, ಯಾವುದೇ ಸದನವು ಆ ವಿಧೇಯಕದ ಸಂಬಂಧದಲ್ಲಿ ಮುಂದುವರಿಯತಕ್ಕದ್ದಲ್ಲ. ಆದರೆ ರಾಷ್ಟ್ರಪತಿಯು ತನ್ನ ಅಧಿಸೂಚನೆಯ ದಿನಾಂಕದ ತರುವಾಯ ಯಾವುದೇ ಕಾಲದಲ್ಲಿ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಜಂಟಿ ಉಪವೇಶನದಲ್ಲಿ ಸಭೆ ಸೇರುವಂತೆ ಆ ಸದನಗಳಿಗೆ ಕರೆ ನೀಡಬಹುದು ಮತ್ತು ಅವನು ಹಾಗೆ ಕರೆನೀಡಿದಲ್ಲಿ, ತದನುಸಾರ ಆ ಸದನಗಳು ಸಭೆ ಸೇರತಕ್ಕದ್ದು.

(4) ಜಂಟಿ ಉಪವೇಶನದಲ್ಲಿ ಒಪ್ಪಿಕೊಳ್ಳಲಾದಂಥ ತಿದ್ದುಪಡಿಗಳೇನಾದರೂ ಇದ್ದರೆ, ಆ ತಿದ್ದುಪಡಿಗಳ ಸಹಿತ ಆ ವಿಧೇಯಕವು ಉಭಯ ಸದನಗಳ ಜಂಟಿ ಉಪವೇಶನದಲ್ಲಿ ಅವುಗಳ ಒಟ್ಟು ಸದಸ್ಯರ ಪೈಕಿ ಹಾಜರಿದ್ದು ಮತ ನೀಡುವ ಸದಸ್ಯರ ಬಹುಮತದಿಂದ ಅಂಗೀಕೃತವಾಗಿದ್ದರೆ ಅದನ್ನು ಈ ಸಂವಿಧಾನದ ಉದ್ದೇಶಗಳಿಗಾಗಿ ಉಭಯ ಸದನಗಳು ಅಂಗೀಕರಿಸಿವೆ ಎಂದು ಭಾವಿಸತಕ್ಕದ್ದು:

ಪರಂತು, ಜಂಟಿ ಉಪವೇಶನದಲ್ಲಿ,-

(ಎ) ಆ ವಿಧೇಯಕವು ಒಂದು ಸದನದಿಂದ ಅಂಗೀಕೃತವಾಗಿದ್ದು ತಿದ್ದುಪಡಿಗಳೊಡನೆ ಮತ್ತೊಂದು ಸದನದಿಂದ ಅಂಗೀಕೃತವಾಗದಿದ್ದರೆ ಮತ್ತು ಯಾವ ಸದನದಲ್ಲಿ ಅದನ್ನು ಪ್ರಥಮತಃ ಮಂಡಿಸಲಾಗಿತ್ತೋ ಆ ಸದನಕ್ಕೆ ಅದನ್ನು ಹಿಂದಕ್ಕೆ ಕಳುಹಿಸಿದ್ದರೆ, ಆ ವಿಧೇಯಕದ ಅಂಗೀಕಾರದಲ್ಲಿ ಉಂಟಾದ ವಿಳಂಬದಿಂದಾಗಿ ಅವಶ್ಯವಾಗಿ ಮಾಡಲೇಬೇಕಾದ ತಿದ್ದುಪಡಿಗಳು ಯಾವುದಾದರೂ ಇದ್ದರೆ, ಅವುಗಳನ್ನು ಹೊರತುಪಡಿಸಿ ಆ ವಿಧೇಯಕಕ್ಕೆ ಇತರ ಯಾವುದೇ ತಿದ್ದುಪಡಿಯನ್ನು ಸೂಚಿಸತಕ್ಕದ್ದಲ್ಲ;

(ಬಿ) ವಿಧೇಯಕವನ್ನು ಹಾಗೆ ಅಂಗೀಕರಿಸಿ ಹಿಂದಕ್ಕೆ ಕಳುಹಿಸಿದ್ದರೆ, ಮೇಲೆ ಹೇಳಿದಂಥ ತಿದ್ದುಪಡಿಗಳನ್ನು ಮತ್ತು ಯಾವ ವಿಷಯಗಳನ್ನು ಸದನಗಳು ಒಪ್ಪಿಕೊಂಡಿಲ್ಲವೋ ಆ ವಿಷಯಗಳಿಗೆ ಸುಸಂಗತವಾಗಿರುವಂಥ ಇತರ ತಿದ್ದುಪಡಿಗಳನ್ನು ಮಾತ್ರ ಆ ವಿಧೇಯಕಕ್ಕೆ ಸೂಚಿಸತಕ್ಕದ್ದು;

ಮತ್ತು ಈ ಖಂಡದ ಮೇರೆಗೆ ಯಾವ ತಿದ್ದುಪಡಿಗಳು ಅಂಗೀಕಾರಾರ್ಹ ಎಂಬ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

(5) ರಾಷ್ಟ್ರಪತಿಯು ಜಂಟಿ ಉಪವೇಶನದಲ್ಲಿ ಸಭೆ ಸೇರಬೇಕೆಂದು ಉಭಯ ಸದನಗಳಿಗೆ ಕರೆನೀಡುವ ತನ್ನ ಆಶಯವನ್ನು ಅಧಿಸೂಚಿಸಿದ ತರುವಾಯ ಲೋಕಸಭೆಯು ವಿಸರ್ಜನೆಗೊಂಡಿದ್ದರೂ, ಈ ಅನುಚ್ಛೇದದ ಮೇರೆಗೆ ಜಂಟಿ ಉಪವೇಶನವು ನಡೆಯಬಹುದು ಮತ್ತು ಆ ಉಪವೇಶನದಲ್ಲಿ ವಿಧೇಯಕವನ್ನು ಅಂಗೀಕರಿಸಬಹುದು.

**109. ಧನ ವಿಧೇಯಕಗಳಿಗೆ ಸಂಬಂಧಿಸಿದಂತೆ ವಿಶೇಷ ಪ್ರಕ್ರಿಯೆ:-** (1) ಧನವಿಧೇಯಕವನ್ನು ರಾಜ್ಯಸಭೆಯಲ್ಲಿ ಮಂಡಿಸತಕ್ಕದ್ದಲ್ಲ.

(2) ಧನವಿಧೇಯಕವನ್ನು ಲೋಕಸಭೆಯು ಅಂಗೀಕರಿಸಿದ ತರುವಾಯ ಶಿಫಾರಸು ಕೋರಿ ಅದನ್ನು ರಾಜ್ಯಸಭೆಗೆ ಕಳುಹಿಸತಕ್ಕದ್ದು ಮತ್ತು ರಾಜ್ಯಸಭೆಯು ಆ ವಿಧೇಯಕವು ತನಗೆ ತಲುಪಿದ ದಿನಾಂಕದಿಂದ ಹದಿನಾಲ್ಕು ದಿನಗಳ ಅವಧಿಯೊಳಗಾಗಿ ತನ್ನ ಶಿಫಾರಸುಗಳ ಸಹಿತ ಅದನ್ನು ಲೋಕಸಭೆಗೆ ಹಿಂದಕ್ಕೆ ಕಳುಹಿಸತಕ್ಕದ್ದು ಮತ್ತು ಲೋಕಸಭೆಯು ಆ ತರುವಾಯ ರಾಜ್ಯಸಭೆಯ ಎಲ್ಲ ಶಿಫಾರಸುಗಳನ್ನು ಅಥವಾ ಅವುಗಳಲ್ಲಿ ಯಾವುದೇ ಶಿಫಾರಸನ್ನು ಒಪ್ಪಬಹುದು ಅಥವಾ ತಿರಸ್ಕರಿಸಬಹುದು.

(3) ರಾಜ್ಯಸಭೆಯ ಯಾವುದೇ ಶಿಫಾರಸನ್ನು ಲೋಕಸಭೆಯು ಒಪ್ಪಿಕೊಂಡರೆ, ಆ ಧನವಿಧೇಯಕವು ರಾಜ್ಯಸಭೆಯು ಶಿಫಾರಸು ಮಾಡಿದ ಮತ್ತು ಲೋಕಸಭೆಯು ಒಪ್ಪಿಕೊಂಡ ತಿದ್ದುಪಡಿಗಳ ಸಹಿತ, ಉಭಯ ಸದನಗಳಿಂದಲೂ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದು.

(4) ರಾಜ್ಯಸಭೆಯ ಯಾವ ಶಿಫಾರಸುಗಳನ್ನೂ ಲೋಕಸಭೆಯು ಒಪ್ಪದಿದ್ದರೆ, ಆ ಧನವಿಧೇಯಕವು, ರಾಜ್ಯಸಭೆಯು ಶಿಫಾರಸು ಮಾಡಿದ ಯಾವುದೇ ತಿದ್ದುಪಡಿಗಳೂ ಇಲ್ಲದೆಯೇ, ಲೋಕಸಭೆಯಿಂದ ಅಂಗೀಕೃತವಾದ ರೂಪದಲ್ಲಿಯೇ ಉಭಯ ಸದನಗಳಿಂದಲೂ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದು.

(5) ಲೋಕಸಭೆಯಿಂದ ಅಂಗೀಕೃತವಾಗಿ ರಾಜ್ಯಸಭೆಗೆ ಅದರ ಶಿಫಾರಸುಗಳಿಗಾಗಿ ಕಳುಹಿಸಿಕೊಟ್ಟ ಧನವಿಧೇಯಕವನ್ನು ಮೇಲೆ ಹೇಳಿದ ಹದಿನಾಲ್ಕು ದಿನಗಳ ಅವಧಿಯೊಳಗಾಗಿ ಲೋಕಸಭೆಗೆ ಹಿಂದಕ್ಕೆ ಕಳುಹಿಸದಿದ್ದರೆ, ಆ ಅವಧಿಯು ಮುಕ್ತಾಯವಾದ ಮೇಲೆ, ಅದು ಲೋಕಸಭೆಯಿಂದ ಅಂಗೀಕೃತವಾದ ರೂಪದಲ್ಲಿಯೇ ಉಭಯ ಸದನಗಳಿಂದಲೂ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದು.

**110.“ಧನ ವಿಧೇಯಕಗಳು” ಎಂಬುದರ ಪರಿಭಾಷೆ:–** (1) ಈ ಅಧ್ಯಾಯದ ಉದ್ದೇಶಗಳಿಗಾಗಿ, ಒಂದು ವಿಧೇಯಕವು ಈ ಕೆಳಕಂಡ ಎಲ್ಲ ವಿಷಯಗಳಿಗೆ ಅಥವಾ ಅವುಗಳಲ್ಲಿ ಯಾವುದೇ ಒಂದು ವಿಷಯಕ್ಕೆ ಸಂಬಂಧಪಟ್ಟ ಉಪಬಂಧಗಳನ್ನು ಮಾತ್ರ ಒಳಗೊಂಡಿದ್ದರೆ ಅದನ್ನು ಧನವಿಧೇಯಕವೆಂದು ಭಾವಿಸತಕ್ಕದ್ದು, ಎಂದರೆ:–

(ಎ) ಯಾವುದೇ ತೆರಿಗೆಯನ್ನು ವಿಧಿಸುವುದು, ರದ್ದು ಮಾಡುವುದು, ಮಾಫಿ ಮಾಡುವುದು, ಬದಲಾಯಿಸುವುದು ಅಥವಾ ವಿನಿಯಮಗೊಳಿಸುವುದು;

(ಬಿ) ಭಾರತ ಸರ್ಕಾರವು ಹಣವನ್ನು ಸಾಲವಾಗಿ ತೆಗೆದುಕೊಳ್ಳುವುದನ್ನು ಅಥವಾ ಯಾವುದೇ ಖಾತ್ರಿ ಕೊಡುವುದನ್ನು ವಿನಿಯಮಗೊಳಿಸುವುದು ಅಥವಾ ಭಾರತ ಸರ್ಕಾರವು ವಹಿಸಿಕೊಂಡಿರುವ ಅಥವಾ ವಹಿಸಿಕೊಳ್ಳಬೇಕಾಗಿರುವ ಯಾವುದೇ ಹಣಕಾಸಿನ ಬಾಧ್ಯತೆಗಳಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುವುದು;

(ಸಿ) ಭಾರತದ ಸಂಚಿತ ನಿಧಿಯ ಅಥವಾ ಸಾದಿಲ್ವಾರು ನಿಧಿಯ ಅಭಿರಕ್ಷೆ ಮತ್ತು ಅಂಥ ಯಾವುದೇ ನಿಧಿಗೆ ಹಣವನ್ನು ಸಂದಾಯ ಮಾಡುವುದು ಅಥವಾ ಅದರಿಂದ ಹಣವನ್ನು ತೆಗೆದುಕೊಳ್ಳುವುದು;

(ಡಿ) ಭಾರತದ ಸಂಚಿತ ನಿಧಿಯಿಂದ ಹಣವನ್ನು ವಿನಿಯೋಗಿಸುವುದು;

(ಇ) ಯಾವುದೇ ವೆಚ್ಚವನ್ನು ಭಾರತದ ಸಂಚಿತ ನಿಧಿಯ ಮೇಲೆ ಹೊರಿಸಲಾದ ವೆಚ್ಚವೆಂದು ಘೋಷಿಸುವುದು ಅಥವಾ ಅಂಥ ಯಾವುದೇ ವೆಚ್ಚದ ಮೊಬಲಗನ್ನು ಹೆಚ್ಚಿಸುವುದು;

(ಎಫ್) ಭಾರತದ ಸಂಚಿತ ನಿಧಿಯ ಲೆಕ್ಕಕ್ಕೆ ಅಥವಾ ಭಾರತದ ಸರ್ಕಾರಿ ಲೆಕ್ಕಕ್ಕೆ ಹಣವನ್ನು ಜಮೆ ಮಾಡುವುದು ಅಥವಾ ಅಂಥ ಹಣವನ್ನು ಅಭಿರಕ್ಷಿಸುವುದು ಅಥವಾ ಕೊಡುವುದು ಅಥವಾ ಒಕ್ಕೂಟದ ಅಥವಾ ರಾಜ್ಯದ ಲೆಕ್ಕಗಳ ಲೆಕ್ಕಪರಿಶೋಧನೆ ಮಾಡುವುದು; ಅಥವಾ

(ಜಿ) (ಎ) ಯಿಂದ (ಎಫ್) ವರೆಗಿನ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಪ್ರಾಸಂಗಿಕವಾಗಿರುವ ಯಾವುದೇ ವಿಷಯ.

(2) ವಿಧೇಯಕವು, ಜುಲ್ಮಾನೆಗಳನ್ನು ಅಥವಾ ಇತರ ಆರ್ಥಿಕ ದಂಡಗಳನ್ನು ವಿಧಿಸುವುದಕ್ಕೆ ಅಥವಾ ಲೈಸೆನ್ಸ್‌ಗಳಿಗೆ ಅಥವಾ ಸಲ್ಲಿಸಿದ ಸೇವೆಗಳಿಗೆ ಫೀಜನ್ನು ಕೇಳುವುದಕ್ಕೆ ಅಥವಾ ಸಂದಾಯ ಮಾಡುವುದಕ್ಕೆ ಉಪಬಂಧ ಕಲ್ಪಿಸುತ್ತದೆ ಎಂಬ ಕಾರಣಮಾತ್ರದಿಂದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ನಿಕಾಯವು ಸ್ಥಳೀಯ ಉದ್ದೇಶಗಳಿಗಾಗಿ ಯಾವುದೇ ತೆರಿಗೆಯನ್ನು ವಿಧಿಸುವುದಕ್ಕೆ, ರದ್ದುಪಡಿಸುವುದಕ್ಕೆ, ಮಾಫಿ ಮಾಡುವುದಕ್ಕೆ, ಬದಲಾವಣೆ ಮಾಡುವುದಕ್ಕೆ ಅಥವಾ ವಿನಿಯಮಗೊಳಿಸುವುದಕ್ಕೆ ಉಪಬಂಧ ಕಲ್ಪಿಸುತ್ತದೆ ಎಂಬ ಕಾರಣಮಾತ್ರದಿಂದ ಅದನ್ನು ಧನವಿಧೇಯಕವಾಗಿರುವುದಾಗಿ ಭಾವಿಸತಕ್ಕದ್ದಲ್ಲ.

(3) ಒಂದು ವಿಧೇಯಕವು ಧನವಿಧೇಯಕವೇ ಅಥವಾ ಅಲ್ಲವೇ ಎಂಬ ಯಾವುದೇ ಪ್ರಶ್ನೆ ಉದ್ಭವಿಸಿದರೆ ಆ ಬಗ್ಗೆ ಲೋಕಸಭೆಯ ಅಧ್ಯಕ್ಷನ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

(4) ಪ್ರತಿಯೊಂದು ಧನವಿಧೇಯಕವನ್ನು 109ನೆಯ ಅನುಚ್ಛೇದದ ಮೇರೆಗೆ ರಾಜ್ಯಸಭೆಗೆ ಕಳುಹಿಸುವಾಗ ಮತ್ತು 111ನೆಯ ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯ ಅನುಮತಿಗಾಗಿ ಒಪ್ಪಿಸುವಾಗ, ಅದನ್ನು ಧನವಿಧೇಯಕವೆಂಬುದಾಗಿ ಲೋಕಸಭೆಯ ಅಧ್ಯಕ್ಷನು ಪ್ರಮಾಣೀಕರಿಸಿ, ತನ್ನ ಸಹಿ ಹಾಕತಕ್ಕದ್ದು.

**111. ವಿಧೇಯಕಗಳಿಗೆ ಅನುಮತಿ:-** ಒಂದು ವಿಧೇಯಕವು ಸಂಸತ್ತಿನ ಸದನಗಳಿಂದ ಅಂಗೀಕೃತವಾದಾಗ ಅದನ್ನು ರಾಷ್ಟ್ರಪತಿಗೆ ಒಪ್ಪಿಸತಕ್ಕದ್ದು ಮತ್ತು ರಾಷ್ಟ್ರಪತಿಯು ಆ ವಿಧೇಯಕಕ್ಕೆ ತನ್ನ ಅನುಮತಿಯನ್ನು ಕೊಟ್ಟಿರುವುದಾಗಿ ಅಥವಾ ಅದಕ್ಕೆ ತನ್ನ ಅನುಮತಿಯನ್ನು ತಡೆಹಿಡಿದಿರುವುದಾಗಿ ಘೋಷಿಸತಕ್ಕದ್ದು:

ಪರಂತು, ವಿಧೇಯಕವನ್ನು ಅನುಮತಿಗಾಗಿ ರಾಷ್ಟ್ರಪತಿಗೆ ಒಪ್ಪಿಸಿದ ತರುವಾಯ, ಅವನು ಸಾಧ್ಯವಾದಷ್ಟು ಬೇಗನೆ, ಅದು ಧನವಿಧೇಯಕವಾಗಿಲ್ಲದಿದ್ದರೆ, ಸಂಸತ್ತಿನ ಸದನಗಳು ಆ ವಿಧೇಯಕವನ್ನು ಅಥವಾ ಅದರ ಯಾವುದೇ ನಿರ್ದಿಷ್ಟವಾದ ಉಪಬಂಧಗಳನ್ನು ಮತ್ತೊಮ್ಮೆ ಪರ್ಯಾಲೋಚಿಸಬೇಕೆಂದು ಮತ್ತು ವಿಶೇಷವಾಗಿ ಅವನು ತನ್ನ ಸಂದೇಶದಲ್ಲಿ ಶಿಫಾರಸುಮಾಡಬಹುದಾದಂಥ ಯಾವುದೇ ತಿದ್ದುಪಡಿಗಳನ್ನು ಮಂಡಿಸುವುದರ ಅಪೇಕ್ಷಣೀಯತೆಯನ್ನು ಪರ್ಯಾಲೋಚಿಸಬೇಕೆಂದು ಕೋರುವ ಸಂದೇಶದೊಡನೆ ಆ ವಿಧೇಯಕವನ್ನು ಆ ಸದನಗಳಿಗೆ ವಾಪಸು ಕಳಿಸಬಹುದು ಮತ್ತು ವಿಧೇಯಕವನ್ನು ಹಾಗೆ ವಾಪಸು ಕಳುಹಿಸಿದಾಗ ಸದನಗಳು ಆ ವಿಧೇಯಕವನ್ನು ತದನುಸಾರವಾಗಿ ಪುನಃ ಪರ್ಯಾಲೋಚಿಸತಕ್ಕದ್ದು ಮತ್ತು ಆ ವಿಧೇಯಕವನ್ನು ಸದನಗಳು ತಿದ್ದುಪಡಿ ಸಹಿತವಾಗಿ ಅಥವಾ ತಿದ್ದುಪಡಿ ಇಲ್ಲದೆ ಪುನಃ ಅಂಗೀಕರಿಸಿ ರಾಷ್ಟ್ರಪತಿಯ ಅನುಮತಿಗಾಗಿ ಒಪ್ಪಿಸಿದರೆ ರಾಷ್ಟ್ರಪತಿಯು ಅದಕ್ಕೆ ಅನುಮತಿಯನ್ನು ತಡೆಹಿಡಿಯತಕ್ಕದ್ದಲ್ಲ.

### ಹಣಕಾಸು ವಿಷಯಗಳ ಬಗ್ಗೆ ಪ್ರಕ್ರಿಯೆ

**112. ವಾರ್ಷಿಕ ಹಣಕಾಸು ವಿವರ ಪತ್ರ:-** (1) ರಾಷ್ಟ್ರಪತಿಯು, ಪ್ರತಿ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರದ ಅಂದಾಜು ಜಮೆಗಳ ಮತ್ತು ವೆಚ್ಚದ ವಿವರಣೆಯನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು; ಈ ಭಾಗದಲ್ಲಿ ಅದನ್ನು "ವಾರ್ಷಿಕ ಹಣಕಾಸು ವಿವರಪತ್ರ" ಎಂದು ಉಲ್ಲೇಖಿಸಲಾಗಿದೆ.

(2) ವಾರ್ಷಿಕ ಹಣಕಾಸು ವಿವರಪತ್ರದಲ್ಲಿ ಅಡಕವಾಗಿರುವ ವೆಚ್ಚದ ಅಂದಾಜುಗಳಲ್ಲಿ,-

(ಎ) ಭಾರತದ ಸಂಚಿತ ನಿಧಿಯ ಮೇಲೆ ಹೊರಿಸಲಾದ ವೆಚ್ಚವೆಂದು ಈ ಸಂವಿಧಾನದಲ್ಲಿ ವಿವರಿಸಿರುವ ವೆಚ್ಚವನ್ನು ಭರಿಸಲು ಬೇಕಾದ ಮೊಬಲಗುಗಳನ್ನು; ಮತ್ತು

(ಬಿ) ಭಾರತದ ಸಂಚಿತ ನಿಧಿಯಿಂದ ಖರ್ಚು ಮಾಡಬೇಕೆಂದು ಉದ್ದೇಶಿಸಿರುವ ಇತರ ವೆಚ್ಚವನ್ನು ಭರಿಸಲು ಬೇಕಾದ ಮೊಬಲಗುಗಳನ್ನು

- ಪ್ರತ್ಯೇಕವಾಗಿ ತೋರಿಸತಕ್ಕದ್ದು ಮತ್ತು ರಾಜಸ್ವ ಲೆಕ್ಕಕ್ಕೆ ಖರ್ಚು ಬೀಳುವ ವೆಚ್ಚವನ್ನು ಇತರ ವೆಚ್ಚದಿಂದ ಪ್ರತ್ಯೇಕಿಸಿ ತೋರಿಸತಕ್ಕದ್ದು.

(3) ಈ ಕೆಳಕಂಡ ವೆಚ್ಚವು ಭಾರತದ ಸಂಚಿತ ನಿಧಿಗೆ ಖರ್ಚು ಹಾಕಿದ ವೆಚ್ಚವಾಗಿರತಕ್ಕದ್ದು,-

(ಎ) ರಾಷ್ಟ್ರಪತಿಯ ಉಪಲಬ್ಧಿಗಳು ಮತ್ತು ಭತ್ಯಗಳು ಹಾಗೂ ಅವನ ಪದಕ್ಕೆ ಸಂಬಂಧಪಟ್ಟ ಇತರ ವೆಚ್ಚ;

(ಬಿ) ರಾಜ್ಯಸಭೆಯ ಸಭಾಪತಿಯ ಮತ್ತು ಉಪಸಭಾಪತಿಯ ಹಾಗೂ ಲೋಕಸಭೆಯ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಸಂಬಳಗಳು ಮತ್ತು ಭತ್ಯಗಳು;

(ಸಿ) ಬಡ್ಡಿ, ಸಾಲ ತೀರುವೆ ನಿಧಿಯ ಭಾರಗಳು ಮತ್ತು ಋಣ ವಿಮೋಚನೆ ಭಾರಗಳೂ ಸೇರಿದಂತೆ ಭಾರತ ಸರ್ಕಾರವು ಹೊಣೆಯಾಗಿರುವ ಋಣಭಾರಗಳು ಮತ್ತು ಸಾಲಗಳನ್ನು ಎತ್ತುವುದಕ್ಕೆ ಮತ್ತು ಋಣ ತೀರಿಕೆ ಸೇವೆಗೆ ಮತ್ತು ಋಣವಿಮೋಚನೆಗೆ ಸಂಬಂಧಪಟ್ಟ ಇತರ ವೆಚ್ಚ;

(ಡಿ) (i) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಅಥವಾ ಅವರಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಾದ ಸಂಬಳಗಳು, ಭತ್ಯಗಳು ಮತ್ತು ನಿವೃತ್ತಿ ವೇತನಗಳು;

(ii) ಫೆಡರಲ್ ನ್ಯಾಯಾಲಯದ ನ್ಯಾಯಾಧೀಶರಿಗೆ ಅಥವಾ ಅವರಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಾದ ನಿವೃತ್ತಿ ವೇತನಗಳು;

(iii) ಭಾರತದ ರಾಜ್ಯಕ್ಷೇತ್ರದಲ್ಲಿ ಒಳಗೊಂಡಿರುವ ಯಾವುದೇ ಪ್ರದೇಶದ ಸಂಬಂಧದಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿರುವ ಅಥವಾ [1][ಡೊಮಿನಿಯನ್ ಆಫ್ ಇಂಡಿಯಾದ ಗವರ್ನರನ ಪ್ರಾಂತದಲ್ಲಿ] ಒಳಗೊಂಡಿರುವ ಯಾವುದೇ ಪ್ರದೇಶದ ಸಂಬಂಧದಲ್ಲಿ ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿದ್ದ ಯಾವುದೇ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಅಥವಾ ಅವರಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಾದ ನಿವೃತ್ತಿವೇತನಗಳು;

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಮೂಲಕ ಹಾಗೂ ಅನುಸೂಚಿಯ ಮೇರೆಗೆ, "ಮೊದಲನೆಯ ಅನುಸೂಚಿಯ (ಎ) ಭಾಗದಲ್ಲಿ ನಿರ್ದಿಷ್ಟಪಡಿಸಿರುವ ಒಂದು ರಾಜ್ಯದ ಸಂವಾದಿ ಪ್ರಾಂತ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(ಇ) ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನಿಗೆ ಅಥವಾ ಅವನಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಾದ ಸಂಬಳ, ಭತ್ಯಗಳು ಮತ್ತು ನಿವೃತ್ತಿವೇತನ;

(ಎಫ್) ಯಾವುದೇ ನ್ಯಾಯಾಲಯದ ಅಥವಾ ಮಧ್ಯಸ್ಥಗಾರಿಕೆ ನ್ಯಾಯಾಧಿಕರಣದ ಯಾವುದೇ ತೀರ್ಪು, ಡಿಕ್ರಿ ಅಥವಾ ಐತೀರ್ಪು ಇವುಗಳ ಮೇರೆಗೆ ಸಂದಾಯ ಮಾಡಲೇಬೇಕಾದ ಯಾವುವೇ ಮೊಬಲಗುಗಳು;

(ಜಿ) ಹಾಗೆ ಹೊರಿಸತಕ್ಕದ್ದೆಂದು ಈ ಸಂವಿಧಾನದ ಮೂಲಕ ಅಥವಾ ಸಂಸತ್ತು ಕಾನೂನಿನ ಮೂಲಕ ಘೋಷಿಸಿದ ಇತರ ಯಾವುದೇ ವೆಚ್ಚ.

**113.ಅಂದಾಜುಗಳಿಗೆ ಸಂಬಂಧಪಟ್ಟಂತೆ ಸಂಸತ್ತಿನಲ್ಲಿ ಪ್ರಕ್ರಿಯೆ:–** (1) ಅಂದಾಜುಗಳಲ್ಲಿ ಭಾರತದ ಸಂಚಿತ ನಿಧಿಯ ಮೇಲೆ ಹೊರಿಸಲಾದ ವೆಚ್ಚಕ್ಕೆ ಸಂಬಂಧಿಸಿದ ಅಂದಾಜುಗಳನ್ನು ಸಂಸತ್ತಿಗೆ ಮತಕ್ಕಾಗಿ ಒಪ್ಪಿಸತಕ್ಕದ್ದಲ್ಲ; ಆದರೆ, ಈ ಖಂಡದಲ್ಲಿ ಇರುವುದು ಯಾವುದೂ, ಅಂಥ ಅಂದಾಜುಗಳ ಪೈಕಿ ಯಾವುದೇ ಅಂದಾಜನ್ನು ಸಂಸತ್ತಿನ ಯಾವುದೇ ಸದನದಲ್ಲಾದರೂ ಚರ್ಚಿಸುವುದಕ್ಕೆ ಅಡ್ಡಿಯನ್ನುಂಟು ಮಾಡುತ್ತದೆ ಎಂದು ಅರ್ಥೈಸತಕ್ಕದ್ದಲ್ಲ.

(2) ಸದರಿ ಅಂದಾಜುಗಳಲ್ಲಿ ಇತರ ವೆಚ್ಚಕ್ಕೆ ಸಂಬಂಧಿಸಿದ ಅಂದಾಜುಗಳನ್ನು ಅನುದಾನಗಳಿಗಾಗಿ ಬೇಡಿಕೆಯ ರೂಪದಲ್ಲಿ ಲೋಕಸಭೆಗೆ ಒಪ್ಪಿಸತಕ್ಕದ್ದು ಮತ್ತು ಲೋಕಸಭೆಯು ಯಾವುದೇ ಬೇಡಿಕೆಗೆ ಅನುಮತಿಯನ್ನು ಕೊಡಲು ಅಥವಾ ಅನುಮತಿಯನ್ನು ನಿರಾಕರಿಸಲು ಅಥವಾ ಅನುದಾನಗಳ ಬೇಡಿಕೆಯಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ಕಡಿಮೆ ಮಾಡುವುದಕ್ಕೆ ಒಳಪಟ್ಟು, ಯಾವುದೇ ಬೇಡಿಕೆಗೆ ಅನುಮತಿಯನ್ನು ಕೊಡಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) ಅನುದಾನಕ್ಕೆ ಸಂಬಂಧಿಸಿದ ಯಾವುದೇ ಬೇಡಿಕೆಯನ್ನು ರಾಷ್ಟ್ರಪತಿಯ ಶಿಫಾರಸಿನ ಹೊರತು ಮಂಡಿಸತಕ್ಕದ್ದಲ್ಲ.

**114. ಧನ ವಿನಿಯೋಗ ವಿಧೇಯಕಗಳು:–** (1) 113ನೆಯ ಅನುಚ್ಛೇದದ ಮೇರೆಗೆ ಲೋಕಸಭೆಯು ಅನುದಾನಗಳಿಗೆ ಒಪ್ಪಿಗೆ ಕೊಟ್ಟ ತರುವಾಯ ಆದಷ್ಟು ಬೇಗನೆ,–

(ಎ) ಲೋಕಸಭೆಯು ಆ ರೀತಿ ಒಪ್ಪಿಗೆ ಕೊಟ್ಟ ಅನುದಾನಗಳನ್ನು; ಮತ್ತು

(ಬಿ) ಭಾರತದ ಸಂಚಿತ ನಿಧಿಯ ಮೇಲೆ ಹೊರಿಸಲಾದ, ಆದರೆ ಸಂಸತ್ತಿನ ಮುಂದೆ ಈ ಹಿಂದೆ ಇಡಲಾಗಿದ್ದ ವಾರ್ಷಿಕ ಹಣಕಾಸು ವಿವರ ಪತ್ರದಲ್ಲಿ ತೋರಿಸಿದ್ದ ಮೊಬಲಗಿಗೆ ಯಾವುದೇ ಸಂದರ್ಭದಲ್ಲಿ ಮೀರದಷ್ಟು ವೆಚ್ಚವನ್ನು

– ಭರಿಸಲು ಅಗತ್ಯವಾದ ಎಲ್ಲ ಹಣವನ್ನು ಭಾರತದ ಸಂಚಿತ ನಿಧಿಯಿಂದ ವಿನಿಯೋಗಿಸುವುದಕ್ಕೆ ಉಪಬಂಧಿಸುವ ವಿಧೇಯಕವನ್ನು ಮಂಡಿಸತಕ್ಕದ್ದು.

(2) ಹಾಗೆ ಒಪ್ಪಿಗೆ ಕೊಡಲಾದ ಯಾವುದೇ ಅನುದಾನದ ಮೊಬಲಗನ್ನು ವ್ಯತ್ಯಸ್ತಗೊಳಿಸುವ ಅಥವಾ ಅದರ ಗೊತ್ತುಗುರಿಯನ್ನು ಬದಲಾಯಿಸುವ ಅಥವಾ ಭಾರತದ ಸಂಚಿತ ನಿಧಿಯ ಮೇಲೆ ಹೊರಿಸಲಾಗುವ ಯಾವುದೇ ವೆಚ್ಚದ ಮೊಬಲಗನ್ನು ವ್ಯತ್ಯಸ್ತಗೊಳಿಸುವ ಪರಿಣಾಮವುಂಟುಮಾಡುವ ಯಾವುದೇ ತಿದ್ದುಪಡಿಯನ್ನು, ಅಂಥ ಯಾವುದೇ ವಿಧೇಯಕಕ್ಕೆ ಸಂಸತ್ತಿನ ಯಾವುದೇ ಸದನದಲ್ಲಾಗಲಿ ಸೂಚಿಸತಕ್ಕದ್ದಲ್ಲ ಮತ್ತು ಈ ಖಂಡದ ಮೇರೆಗೆ ತಿದ್ದುಪಡಿಯು ಅಂಗೀಕಾರಾರ್ಹವೇ ಹೇಗೆ ಎಂಬ ವಿಷಯದಲ್ಲಿ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

(3) 115ನೆಯ ಮತ್ತು 116ನೆಯ ಅನುಚ್ಛೇದಗಳ ಉಪಬಂಧಗಳಿಗೊಳಪಟ್ಟು, ಭಾರತದ ಸಂಚಿತ ನಿಧಿಯಿಂದ ಯಾವುದೇ ಹಣವನ್ನು ಈ ಅನುಚ್ಛೇದದ ಉಪಬಂಧಗಳಿಗನುಸಾರ ಅಂಗೀಕೃತವಾದ ಕಾನೂನಿನ ಮೂಲಕ ಮಾಡಿದ ವಿನಿಯೋಗದ ಮೇರೆಗೆ ಹೊರತು ಇತರ ರೀತಿಯಲ್ಲಿ ಹಿಂತೆಗೆದುಕೊಳ್ಳತಕ್ಕದ್ದಲ್ಲ.

**115.ಪೂರಕ, ಹೆಚ್ಚುವರಿ ಅಥವಾ ಅಧಿಕ ಅನುದಾನಗಳು:–** (1) ರಾಷ್ಟ್ರಪತಿಯು,–

(ಎ) 114ನೆಯ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಮಾಡಿದ ಯಾವುದೇ ಕಾನೂನಿನ ಮೂಲಕ ಚಾಲ್ತಿ ಹಣಕಾಸು ವರ್ಷದಲ್ಲಿ ನಿರ್ದಿಷ್ಟ ಸೇವೆಗೆ ವೆಚ್ಚ ಮಾಡುವುದಕ್ಕಾಗಿ ಅಧಿಕೃತಗೊಳಿಸಿದ ಮೊಬಲಗು ಆ ವರ್ಷದ ಉದ್ದೇಶಗಳಿಗೆ ಸಾಕಾಗುವುದಿಲ್ಲವೆಂದು ಕಂಡುಬಂದರೆ ಅಥವಾ ಆ ಚಾಲ್ತಿ ಹಣಕಾಸು ವರ್ಷದ ವಾರ್ಷಿಕ ಹಣಕಾಸು ವಿವರ ಪತ್ರದಲ್ಲಿ ಉದ್ದೇಶಿಸಿಲ್ಲದ ಯಾವುದೇ ಹೊಸ ಸೇವೆಯ ಸಂಬಂಧದಲ್ಲಿ ಆ ವರ್ಷದಲ್ಲಿ ಪೂರಕ ಅಥವಾ ಹೆಚ್ಚುವರಿ ವೆಚ್ಚದ ಅಗತ್ಯತೆ ಉಂಟಾದರೆ; ಅಥವಾ

(ಬಿ) ಯಾವುದೇ ಸೇವೆಗಾಗಿ ಹಣಕಾಸು ವರ್ಷದಲ್ಲಿ ಆ ವರ್ಷಕ್ಕೆಂದು ಕೊಡಲಾದ ಮೊಬಲಗನ್ನು ಮೀರಿದ ಯಾವುದೇ ಹಣವು ಆ ಸೇವೆಗಾಗಿ ವೆಚ್ಚವಾಗಿದ್ದರೆ

– ಸಂದರ್ಭಾನುಸಾರ, ಆ ವೆಚ್ಚದ ಅಂದಾಜು ಮೊಬಲಗನ್ನು ತೋರಿಸುವ ಇನ್ನೊಂದು ವಿವರಪತ್ರವನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡುವಂತೆ ಅಥವಾ ಅಂಥ ಅಧಿಕ ಮೊಬಲಗಿಗೆ ಬೇಡಿಕೆಯನ್ನು ಲೋಕಸಭೆಯ ಮುಂದೆ ಇಡುವಂತೆ ಮಾಡತಕ್ಕದ್ದು.

(2) 112, 113 ಮತ್ತು 114ನೇ ಅನುಚ್ಛೇದಗಳ ಉಪಬಂಧಗಳು ವಾರ್ಷಿಕ ಹಣಕಾಸು ವಿವರಪತ್ರದ ಮತ್ತು ಆ ವಿವರಪತ್ರದಲ್ಲಿ ನಮೂದಿಸಿರುವ ವೆಚ್ಚ ಅಥವಾ ಅನುದಾನದ ಬೇಡಿಕೆ ಮತ್ತು ಅಂಥ ವೆಚ್ಚವನ್ನು ಅಥವಾ ಅನುದಾನವನ್ನು ಭರಿಸಲು ಭಾರತದ ಸಂಚಿತ ನಿಧಿಯಿಂದ ಹಣ ವಿನಿಯೋಗಿಸುವುದನ್ನು ಅಧಿಕೃತಗೊಳಿಸಲು ಮಾಡಬೇಕಾದ ಕಾನೂನಿನ ಸಂಬಂಧದಲ್ಲಿ ಪರಿಣಾಮಕಾರಿಯಾಗಿರುವಂತೆಯೇ, ಅಂಥ ಯಾವುದೇ ವಿವರಪತ್ರದ ಮತ್ತು ವೆಚ್ಚದ ಅಥವಾ ಬೇಡಿಕೆಯ ಹಾಗೂ ಅಂಥ ಬೇಡಿಕೆಗೆ ಸಂಬಂಧಿಸಿದ ಅಂಥ ವೆಚ್ಚವನ್ನು ಅಥವಾ ಅನುದಾನವನ್ನು ಭರಿಸಲು ಭಾರತದ ಸಂಚಿತ ನಿಧಿಯಿಂದ ಹಣ ವಿನಿಯೋಗಿಸುವುದನ್ನು ಅಧಿಕೃತಗೊಳಿಸುವ ಯಾವುದೇ ಕಾನೂನಿನ ಸಂಬಂಧದಲ್ಲಿಯೂ ಪರಿಣಾಮಕಾರಿಯಾಗತಕ್ಕದ್ದು.

**116. ಲೇಖಾನುದಾನಗಳು, ಪತ್ತಿನ ಅನುದಾನಗಳು ಮತ್ತು ಅಸಾಧಾರಣ ಅನುದಾನಗಳು:–** (1) ಈ ಅಧ್ಯಾಯದ ಈ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದಾಗ್ಯೂ, ಲೋಕಸಭೆಯು,–

(ಎ) ಯಾವುದೇ ಅನುದಾನವನ್ನು ಮತಕ್ಕೆ ಹಾಕುವ ವಿಷಯದಲ್ಲಿ 113ನೆಯ ಅನುಚ್ಛೇದದಲ್ಲಿ ನಿಯಮಿಸಿದ ಕಾರ್ಯವಿಧಾನವನ್ನು ಪೂರ್ಣಗೊಳಿಸುವವರೆಗೆ ಮತ್ತು ಆ ವೆಚ್ಚದ ಸಂಬಂಧದಲ್ಲಿ 114ನೆಯ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಕಾನೂನನ್ನು ಅಂಗೀಕರಿಸುವವರೆಗೆ ಯಾವುದೇ ಹಣಕಾಸು ವರ್ಷದ ಭಾಗಕ್ಕೆ ಅಂದಾಜು ಮಾಡಲಾದ ವೆಚ್ಚಕ್ಕೆ ಸಂಬಂಧಿಸಿದಂತೆ ಮುಂಚಿತವಾಗಿ ಅಂಥ ಅನುದಾನಕ್ಕೆ ಒಪ್ಪಿಗೆ ಕೊಡಲು;

(ಬಿ) ಸೇವೆಯು ಭಾರೀ ಪ್ರಮಾಣದ್ದಾಗಿರುವ ಅಥವಾ ಅನಿಶ್ಚಿತ ಸ್ವರೂಪದ್ದಾಗಿರುವ ಕಾರಣದಿಂದ ವಾರ್ಷಿಕ ಹಣಕಾಸು ವಿವರಪತ್ರದಲ್ಲಿ ಸಾಮಾನ್ಯವಾಗಿ ಕೊಡುವ ವಿವರಗಳೊಂದಿಗೆ ಆ ಬೇಡಿಕೆಯನ್ನು ನಮೂದಿಸಲು ಆಗದೆ ಇದ್ದರೆ ಭಾರತದ ಸಂಪನ್ಮೂಲಗಳಿಂದ ಅನಿರೀಕ್ಷಿತ ಬೇಡಿಕೆಯನ್ನು ಈಡೇರಿಸಲು ಅನುದಾನಕ್ಕೆ ಒಪ್ಪಿಗೆ ಕೊಡಲು;

(ಸಿ) ಯಾವುದೇ ಹಣಕಾಸು ವರ್ಷದಲ್ಲಿ ಚಾಲ್ತಿಸೇವೆಗೆ ಸೇರಿಲ್ಲದ ಅಸಾಧಾರಣ ಅನುದಾನಕ್ಕೆ ಒಪ್ಪಿಗೆ ಕೊಡಲು

– ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಯಾವ ಉದ್ದೇಶಗಳಿಗಾಗಿ ಸದರಿ ಅನುದಾನಗಳಿಗೆ ಒಪ್ಪಿಗೆ ಕೊಡಲಾಗಿದೆಯೋ ಆ ಉದ್ದೇಶಗಳಿಗಾಗಿ, ಭಾರತದ ಸಂಚಿತ ನಿಧಿಯಿಂದ ಹಣವನ್ನು ತೆಗೆದುಕೊಳ್ಳುವುದನ್ನು ಕಾನೂನಿನ ಮೂಲಕ ಅಧಿಕೃತಗೊಳಿಸಲು ಸಂಸತ್ತಿಗೆ ಅಧಿಕಾರವಿರತಕ್ಕದ್ದು.

(2) 113 ಮತ್ತು 114ನೆಯ ಅನುಚ್ಛೇದಗಳ ಉಪಬಂಧಗಳು ವಾರ್ಷಿಕ ಹಣಕಾಸು ವಿವರಪತ್ರದಲ್ಲಿ ನಮೂದಿಸಿರುವ ಯಾವುದೇ ವೆಚ್ಚಕ್ಕೆ ಸಂಬಂಧಿಸಿದಂತೆ ಅನುದಾನಕ್ಕೆ ಒಪ್ಪಿಗೆ ಕೊಡುವ ಮತ್ತು ಅಂಥ ವೆಚ್ಚವನ್ನು ಭರಿಸಲು ಭಾರತದ ಸಂಚಿತ ನಿಧಿಯಿಂದ ಹಣವನ್ನು ವಿನಿಯೋಗಿಸುವುದನ್ನು ಅಧಿಕೃತಗೊಳಿಸಲು ಮಾಡಬೇಕಾದ ಕಾನೂನಿನ ಸಂಬಂಧದಲ್ಲಿ ಪರಿಣಾಮಕಾರಿಯಾಗಿರುವಂತೆಯೇ (1)ನೆಯ ಖಂಡದ ಮೇರೆಗೆ ಯಾವುದೇ ಅನುದಾನಕ್ಕೆ ಒಪ್ಪಿಗೆ ಕೊಡುವ ಮತ್ತು ಆ ಖಂಡದ ಮೇರೆಗೆ ಯಾವುದೇ ಕಾನೂನನ್ನು ಮಾಡುವುದರ ಸಂಬಂಧದಲ್ಲಿಯೂ ಪರಿಣಾಮಕಾರಿಯಾಗಿರತಕ್ಕದ್ದು.

**117. ಹಣಕಾಸು ವಿಧೇಯಕಗಳ ಬಗ್ಗೆ ವಿಶೇಷ ಉಪಬಂಧಗಳು:–** (1) 110ನೆಯ ಅನುಚ್ಛೇದದ (1)ನೆಯ ಖಂಡದ (ಎ) ಯಿಂದ (ಎಫ್) ವರೆಗಿನ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವ ವಿಧೇಯಕವನ್ನು ಅಥವಾ ತಿದ್ದುಪಡಿಯನ್ನು, ರಾಷ್ಟ್ರಪತಿಯ ಶಿಫಾರಸಿನ ಹೊರತು ಮಂಡಿಸತಕ್ಕದ್ದಲ್ಲ ಅಥವಾ ಸೂಚಿಸತಕ್ಕದ್ದಲ್ಲ ಮತ್ತು ಅಂಥ ಉಪಬಂಧ ಕಲ್ಪಿಸುವ ವಿಧೇಯಕವನ್ನು ರಾಜ್ಯಸಭೆಯಲ್ಲಿ ಮಂಡಿಸತಕ್ಕದ್ದಲ್ಲ:

ಪರಂತು, ಯಾವುದೇ ತೆರಿಗೆಯನ್ನು ಕಡಿಮೆ ಮಾಡುವುದಕ್ಕೆ ಅಥವಾ ರದ್ದು ಮಾಡುವುದಕ್ಕೆ ಉಪಬಂಧ ಕಲ್ಪಿಸುವ ತಿದ್ದುಪಡಿಯನ್ನು ಮಂಡಿಸುವುದಕ್ಕಾಗಿ ಈ ಖಂಡದ ಮೇರೆಗೆ ಯಾವುದೇ ಶಿಫಾರಸಿನ ಅಗತ್ಯವಿರತಕ್ಕದ್ದಲ್ಲ.

(2) ಒಂದು ವಿಧೇಯಕವು ಅಥವಾ ತಿದ್ದುಪಡಿಯು, ಜುಲ್ಮಾನೆಗಳನ್ನು ಅಥವಾ ಇತರ ಆರ್ಥಿಕ ದಂಡಗಳನ್ನು ವಿಧಿಸುವುದಕ್ಕೆ ಅಥವಾ ಲೈಸೆನ್ಸುಗಳಿಗೆ ಅಥವಾ ಸಲ್ಲಿಸಿದ ಸೇವೆಗಳಿಗೆ ಫೀಜನ್ನು ಕೇಳುವುದಕ್ಕೆ ಅಥವಾ ಸಂದಾಯ ಮಾಡುವುದಕ್ಕೆ ಉಪಬಂಧ ಕಲ್ಪಿಸುತ್ತದೆ ಎಂಬ ಕಾರಣ ಮಾತ್ರದಿಂದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ನಿಕಾಯವು ಸ್ಥಳೀಯ ಉದ್ದೇಶಗಳಿಗಾಗಿ ಯಾವುದೇ ತೆರಿಗೆಯನ್ನು ವಿಧಿಸುವುದಕ್ಕೆ, ರದ್ದುಮಾಡುವುದಕ್ಕೆ, ಮಾಫಿ ಮಾಡುವುದಕ್ಕೆ, ಬದಲಾವಣೆ ಮಾಡುವುದಕ್ಕೆ ಅಥವಾ ವಿನಿಯಮಗೊಳಿಸುವುದಕ್ಕೆ ಅದು ಉಪಬಂಧ ಕಲ್ಪಿಸುತ್ತದೆ ಎಂಬ ಕಾರಣದಿಂದ ಆ ವಿಧೇಯಕವು ಅಥವಾ ತಿದ್ದುಪಡಿಯು ಹಿಂದೆ ಹೇಳಿದ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸುತ್ತದೆ ಎಂದು ಭಾವಿಸತಕ್ಕದ್ದಲ್ಲ.

(3) ಯಾವ ವಿಧೇಯಕವನ್ನು ಅಧಿನಿಯಮಿತಗೊಳಿಸಿ ಜಾರಿಗೆ ತಂದರೆ, ಭಾರತದ ಸಂಚಿತ ನಿಧಿಯಿಂದ ಹಣವನ್ನು ವೆಚ್ಚ ಮಾಡಬೇಕಾಗಿ ಬರುವುದೋ ಆ ವಿಧೇಯಕವನ್ನು ಸಂಸತ್ತಿನ ಯಾವುದೇ ಸದನವು ಪರ್ಯಾಲೋಚಿಸಬೇಕೆಂದು ರಾಷ್ಟ್ರಪತಿಯು ಆ ಸದನಕ್ಕೆ ಶಿಫಾರಸು ಮಾಡಿದ ಹೊರತು, ಆ ವಿಧೇಯಕವನ್ನು ಆ ಸದನವು ಅಂಗೀಕರಿಸತಕ್ಕದ್ದಲ್ಲ.

## ಸಾಮಾನ್ಯತಃ ಪ್ರಕ್ರಿಯೆ

**118.ಪ್ರಕ್ರಿಯಾ ನಿಯಮಗಳು:-** (1) ಸಂಸತ್ತಿನ ಪ್ರತಿಯೊಂದು ಸದನವು ತನ್ನ ಪ್ರಕ್ರಿಯೆಯನ್ನು ಮತ್ತು ತನ್ನ ಕಾರ್ಯಕಲಾಪ ನಡೆಸುವುದನ್ನು ವಿನಿಯಮಗೊಳಿಸುವುದಕ್ಕಾಗಿ ಈ ಸಂವಿಧಾನದ ಉಪಬಂಧಗಳಿಗೊಳಪಟ್ಟು ನಿಯಮಗಳನ್ನು ರಚಿಸಬಹುದು.

(2) (1)ನೆಯ ಖಂಡದ ಮೇರೆಗೆ ನಿಯಮಗಳನ್ನು ರಚಿಸುವವರೆಗೆ, ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಡೊಮಿನಿಯನ್ ಆಫ್ ಇಂಡಿಯಾದ ವಿಧಾನ ಮಂಡಲದ ಸಂಬಂಧದಲ್ಲಿ ಯಾವ ಪ್ರಕ್ರಿಯಾ ನಿಯಮಗಳು ಮತ್ತು ಸ್ಥಾಯೀ ಆದೇಶಗಳು ಜಾರಿಯಲ್ಲಿದ್ದುವೋ ಅವೇ ನಿಯಮಗಳು ಮತ್ತು ಸ್ಥಾಯೀ ಆದೇಶಗಳು, ರಾಜ್ಯ ಸಭೆಯ ಸಭಾಪತಿಯು ಅಥವಾ ಸಂದರ್ಭಾನುಸಾರ, ಲೋಕಸಭೆಯ ಅಧ್ಯಕ್ಷನು ಅವುಗಳಲ್ಲಿ ಮಾಡಬಹುದಾದಂಥ ಮಾರ್ಪಾಡುಗಳಿಗೆ ಮತ್ತು ಅಳವಡಿಕೆಗಳಿಗೆ ಒಳಪಟ್ಟು, ಸಂಸತ್ತಿಗೆ ಸಂಬಂಧಪಟ್ಟಂತೆ ಪರಿಣಾಮಕಾರಿಯಾಗತಕ್ಕದ್ದು.

(3) ರಾಷ್ಟ್ರಪತಿಯು ರಾಜ್ಯಸಭೆಯ ಸಭಾಪತಿಯೊಡನೆ ಮತ್ತು ಲೋಕಸಭೆಯ ಅಧ್ಯಕ್ಷನೊಡನೆ ಸಮಾಲೋಚನೆ ಮಾಡಿದ ತರುವಾಯ, ಆ ಉಭಯ ಸದನಗಳ ಜಂಟಿ ಉಪವೇಶನಗಳಿಗೆ ಮತ್ತು ಅವುಗಳ ನಡುವಣ ಸಂಪರ್ಕದ ಪ್ರಕ್ರಿಯೆಗೆ ಸಂಬಂಧಪಟ್ಟ ನಿಯಮಗಳನ್ನು ರಚಿಸಬಹುದು.

(4) ಉಭಯ ಸದನಗಳ ಜಂಟಿ ಉಪವೇಶನದಲ್ಲಿ, ಲೋಕಸಭೆಯ ಅಧ್ಯಕ್ಷನು ಅಥವಾ ಅವನ ಗೈರುಹಾಜರಿಯಲ್ಲಿ (3)ನೆಯ ಖಂಡದ ಮೇರೆಗೆ ರಚಿತವಾದ ಪ್ರಕ್ರಿಯಾ ನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ವ್ಯಕ್ತಿಯು ಅಧ್ಯಕ್ಷತೆ ವಹಿಸತಕ್ಕದ್ದು.

**119. ಸಂಸತ್ತಿನಲ್ಲಿ ಹಣಕಾಸು ಕಾರ್ಯಕಲಾಪಗಳಿಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ಕಾನೂನಿನ ಮೂಲಕ ವಿನಿಯಮಗೊಳಿಸುವುದು:-** ಹಣಕಾಸು ಕಾರ್ಯಕಲಾಪಗಳನ್ನು ಸಕಾಲದಲ್ಲಿ ಸಮಾಪ್ತಗೊಳಿಸುವ ಉದ್ದೇಶಕ್ಕಾಗಿ, ಸಂಸತ್ತು ಯಾವುದೇ ಹಣಕಾಸು ಕಾರ್ಯಕಲಾಪಗಳ ಬಗೆಗಿನ ಅಥವಾ ಭಾರತದ ಸಂಚಿತ ನಿಧಿಯಿಂದ ಹಣವನ್ನು ವಿನಿಯೋಗಿಸುವುದರ ಬಗೆಗಿನ ಯಾವುದೇ ವಿಧೇಯಕಕ್ಕೆ ಸಂಬಂಧಪಟ್ಟಂತೆ ಸಂಸತ್ತಿನ ಪ್ರತಿಯೊಂದು ಸದನದ ಕಾರ್ಯವಿಧಾನವನ್ನು ಮತ್ತು ಆ ಸದನದ ಕಾರ್ಯಕಲಾಪ ನಡೆಸುವುದನ್ನು ಕಾನೂನಿನ ಮೂಲಕ ವಿನಿಯಮಗೊಳಿಸಬಹುದು ಮತ್ತು ಹಾಗೆ ಮಾಡಿದ ಯಾವುದೇ ಕಾನೂನಿನ ಯಾವುದೇ ಉಪಬಂಧವು, 118ನೆಯ ಅನುಚ್ಛೇದದ (1)ನೆಯ ಖಂಡದ ಮೇರೆಗೆ ಸಂಸತ್ತಿನ ಸದನದಿಂದ ರಚಿತವಾದ ಯಾವುದೇ ನಿಯಮಕ್ಕೆ ಅಥವಾ ಆ ಅನುಚ್ಛೇದದ (2) ನೆಯ ಖಂಡದ ಮೇರೆಗೆ ಸಂಸತ್ತಿಗೆ ಸಂಬಂಧಪಟ್ಟಂತೆ ಪರಿಣಾಮವುಳ್ಳ ಯಾವುದೇ ನಿಯಮಕ್ಕೆ ಅಥವಾ ಸ್ಥಾಯಿ ಆದೇಶಕ್ಕೆ ಅಸಂಗತವಾಗಿದ್ದರೆ ಮತ್ತು ಹಾಗೆ ಅಸಂಗತವಾಗಿರುವಷ್ಟರ ಮಟ್ಟಿಗೆ ಅದು ಪ್ರಭಾವವುಳ್ಳದ್ದಾಗಿರತಕ್ಕದ್ದು.

**120. ಸಂಸತ್ತಿನಲ್ಲಿ ಬಳಸಬೇಕಾದ ಭಾಷೆ:-** (1) ಭಾಗ-XVII ರಲ್ಲಿ ಏನೇ ಇದ್ದಾಗ್ಯೂ, 348ನೆಯ ಅನುಚ್ಛೇದದ ಉಪಬಂಧಗಳಿಗೆ ಒಳಪಟ್ಟು, ಸಂಸತ್ತಿನಲ್ಲಿ ಕಾರ್ಯಕಲಾಪವು ಹಿಂದಿಯಲ್ಲಿ ಅಥವಾ ಇಂಗ್ಲೀಷ್‌ನಲ್ಲಿ ನಡೆಯತಕ್ಕದ್ದು:

ಪರಂತು, ಯಾರೇ ಸದಸ್ಯನಿಗೆ ಹಿಂದಿಯಲ್ಲಿ ಅಥವಾ ಇಂಗ್ಲೀಷ್‌ನಲ್ಲಿ ತನ್ನ ವಿಚಾರಗಳನ್ನು ಸಮರ್ಪಕವಾಗಿ ವ್ಯಕ್ತಗೊಳಿಸಲು ಆಗದಿರುವ ಪಕ್ಷದಲ್ಲಿ ಆ ವ್ಯಕ್ತಿಗೆ ಅವನ ಮಾತೃಭಾಷೆಯಲ್ಲಿ ಮಾತನಾಡಲು ರಾಜ್ಯಸಭೆಯ ಸಭಾಪತಿಯು ಅಥವಾ ಸಂದರ್ಭಾನುಸಾರ ಲೋಕಸಭೆಯ ಅಧ್ಯಕ್ಷನು ಅಥವಾ ಸಭಾಪತಿಯಾಗಿ ಅಥವಾ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಯು ಅನುಮತಿ ಕೊಡಬಹುದು.

(2) ಸಂಸತ್ತು, ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸಿದ ಹೊರತು, ಈ ಸಂವಿಧಾನವು ಪ್ರಾರಂಭವಾದಾಗಿನಿಂದ ಹದಿನೈದು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ, ಈ ಅನುಚ್ಛೇದದಲ್ಲಿರುವ "ಅಥವಾ ಇಂಗ್ಲಿಷ್‌ನಲ್ಲಿ" ಎಂಬ ಪದಗಳನ್ನು ಅದರಿಂದ ಬಿಟ್ಟುಬಿಡಲಾಗಿದ್ದರೆ ಹೇಗೋ ಹಾಗೆ ಈ ಅನುಚ್ಛೇದವು ಪರಿಣಾಮವುಳ್ಳದ್ದಾಗಿರತಕ್ಕದ್ದು.

**121. ಸಂಸತ್ತಿನಲ್ಲಿ ಚರ್ಚೆಯ ಮೇಲೆ ನಿರ್ಬಂಧ:-** ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಯಾರೇ ನ್ಯಾಯಾಧೀಶನನ್ನು ತೆಗೆದುಹಾಕಬೇಕಾಗಿ ಪ್ರಾರ್ಥಿಸುವ ಕೋರಿಕೆಯನ್ನು ಇದರಲ್ಲಿ ಇನ್ನು ಮುಂದೆ ಉಪಬಂಧಿಸಲಾದಂತೆ ರಾಷ್ಟ್ರಪತಿಗೆ ಸಲ್ಲಿಸುವ ಸೂಚನೆಯ ಮೇಲಲ್ಲದೆ, ಅಂಥ ನ್ಯಾಯಾಧೀಶನ ಕರ್ತವ್ಯ ನಿರ್ವಹಣೆಯಲ್ಲಿ ಅವನ ವರ್ತನೆಗೆ ಸಂಬಂಧಿಸಿದಂತೆ ಸಂಸತ್ತಿನಲ್ಲಿ ಯಾವ ಚರ್ಚೆಯೂ ನಡೆಯತಕ್ಕದ್ದಲ್ಲ.

**122. ನ್ಯಾಯಾಲಯಗಳು ಸಂಸತ್ತಿನ ವ್ಯವಹರಣೆಗಳ ಬಗ್ಗೆ ವಿಚಾರಣೆ ನಡೆಸದಿರುವುದು:**- (1) ಸಂಸತ್ತಿನಲ್ಲಿನ ಯಾವುವೇ ವ್ಯವಹರಣೆಗಳ ಸಿಂಧುತ್ವವನ್ನು, ಪ್ರಕ್ರಿಯೆಯಲ್ಲಿನ ಆಪಾದಿಸಲಾದ ಯಾವುದೇ ಕ್ರಮದೋಷದ ಆಧಾರದ ಮೇಲೆ ಪ್ರಶ್ನಿಸತಕ್ಕದ್ದಲ್ಲ.

(2) ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ಸಂಸತ್ತಿನ ಪ್ರಕ್ರಿಯೆಯನ್ನು ಅಥವಾ ಕಾರ್ಯಕಲಾಪ ನಡೆಸುವುದನ್ನು ವಿನಿಯಮಿಸುವ ಅಥವಾ ಸಂಸತ್ತಿನಲ್ಲಿ ಸುವ್ಯವಸ್ಥೆಯನ್ನು ಕಾಪಾಡುವ ಅಧಿಕಾರಗಳು ಸಂಸತ್ತಿನ ಯಾವ ಅಧಿಕಾರಿಯಲ್ಲಿ ಅಥವಾ ಸದಸ್ಯನಲ್ಲಿ ನಿಹಿತವಾಗಿರುವವೋ, ಆ ಯಾರೇ ಅಧಿಕಾರಿಯು ಅಥವಾ ಸದಸ್ಯನು, ಆ ಅಧಿಕಾರಗಳನ್ನು ತಾನು ಚಲಾಯಿಸುವುದಕ್ಕೆ ಸಂಬಂಧಿಸಿದಂತೆ, ಯಾವುದೇ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಒಳಪಡತಕ್ಕದ್ದಲ್ಲ.

## ಅಧ್ಯಾಯ - III - ರಾಷ್ಟ್ರಪತಿಯ ವಿಧಾಯೀ ಅಧಿಕಾರಗಳು

**123. ಸಂಸತ್ತಿನ ವಿರಾಮ ಕಾಲದಲ್ಲಿ ಅಧ್ಯಾದೇಶಗಳನ್ನು ಹೊರಡಿಸಲು ರಾಷ್ಟ್ರಪತಿಯ ಅಧಿಕಾರ:**- (1) ಸಂಸತ್ತಿನ ಉಭಯ ಸದನಗಳು ಅಧಿವೇಶನದಲ್ಲಿರುವ ಕಾಲವನ್ನು ಹೊರತುಪಡಿಸಿ, ಯಾವುದೇ ಕಾಲದಲ್ಲಿ ತಾನು ಕೂಡಲೇ ಕ್ರಮವನ್ನು ಕೈಕೊಳ್ಳುವುದು ಅವಶ್ಯವಾಗಿರುವಂಥ ಸನ್ನಿವೇಶಗಳು ಇರುವುದಾಗಿ ರಾಷ್ಟ್ರಪತಿಗೆ ಮನದಟ್ಟಾದರೆ, ಅವನು ಆ ಸನ್ನಿವೇಶಗಳಲ್ಲಿ ಅಗತ್ಯವೆಂದು ತನಗೆ ತೋರುವಂಥ ಅಧ್ಯಾದೇಶಗಳನ್ನು ಹೊರಡಿಸಬಹುದು.

(2) ಈ ಅನುಚ್ಛೇದದ ಮೇರೆಗೆ ಹೊರಡಿಸಲಾದ ಅಧ್ಯಾದೇಶವು ಸಂಸತ್ತಿನ ಅಧಿನಿಯಮದಂತೆಯೇ ಬಲವುಳ್ಳದ್ದಾಗಿಯೂ ಮತ್ತು ಪರಿಣಾಮವುಳ್ಳದ್ದಾಗಿಯೂ ಇರತಕ್ಕದ್ದು. ಆದರೆ ಅಂಥ ಪ್ರತಿಯೊಂದು ಅಧ್ಯಾದೇಶವನ್ನು,-

(ಎ) ಸಂಸತ್ತಿನ ಉಭಯ ಸದನಗಳ ಮುಂದೆ ಇಡತಕ್ಕದ್ದು ಮತ್ತು ಸಂಸತ್ತು ಪುನಃ ಸಭೆ ಸೇರಿದಾಗಿನಿಂದ ಆರು ವಾರಗಳು ಮುಕ್ತಾಯವಾದ ಅನಂತರ ಅಥವಾ ಆ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಆ ಅಧ್ಯಾದೇಶವನ್ನು ಅನುಮೋದಿಸದೆ ಇರುವ ನಿರ್ಣಯಗಳು ಉಭಯ ಸದನಗಳಿಂದಲೂ ಅಂಗೀಕೃತವಾದರೆ ಎರಡನೆಯ ನಿರ್ಣಯವು ಅಂಗೀಕೃತವಾದೊಡನೆಯೇ ಆ ಅಧ್ಯಾದೇಶವು ಜಾರಿಯಲ್ಲಿರುವುದು ನಿಂತು ಹೋಗತಕ್ಕದ್ದು; ಮತ್ತು

(ಬಿ) ಯಾವುದೇ ಕಾಲದಲ್ಲಿ ರಾಷ್ಟ್ರಪತಿಯು ಹಿಂತೆಗೆದುಕೊಳ್ಳಬಹುದು.

**ವಿವರಣೆ:**- ಸಂಸತ್ತಿನ ಸದನಗಳನ್ನು ಬೇರೆ ಬೇರೆ ದಿನಾಂಕಗಳಲ್ಲಿ ಪುನಃ ಸಮಾವೇಶಗೊಳ್ಳುವಂತೆ ಕರೆದಿರುವ ಸಂದರ್ಭದಲ್ಲಿ, ಈ ಖಂಡದ ಉದ್ದೇಶಗಳಿಗಾಗಿ ಆ ದಿನಾಂಕಗಳಲ್ಲಿ ಅನಂತರದ ದಿನಾಂಕದಿಂದ ಆರು ವಾರಗಳ ಅವಧಿಯನ್ನು ಲೆಕ್ಕಹಾಕತಕ್ಕದ್ದು.

(3) ಯಾವ ಉಪಬಂಧವನ್ನು ಈ ಸಂವಿಧಾನದ ಮೇರೆಗೆ ಅಧಿನಿಯಮಿಸಲು ಸಂಸತ್ತು ಸಕ್ಷಮವಾಗಿಲ್ಲವೋ ಅಂಥ ಯಾವುದೇ ಉಪಬಂಧವನ್ನು ಈ ಅನುಚ್ಛೇದದ ಮೇರೆಗಿನ ಯಾವುದೇ ಅಧ್ಯಾದೇಶವು ಕಲ್ಪಿಸಿದರೆ, ಅಂಥ ಅಧ್ಯಾದೇಶವು ಅಷ್ಟರ ಮಟ್ಟಿಗೆ ಶೂನ್ಯವಾಗತಕ್ಕದ್ದು.

[1]* * * * *

## ಅಧ್ಯಾಯ - IV - ಒಕ್ಕೂಟ ನ್ಯಾಯಾಂಗ

**124. ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆ ಮತ್ತು ರಚನೆ:**- (1) ಭಾರತಕ್ಕೆ ಒಂದು ಸರ್ವೋಚ್ಚ ನ್ಯಾಯಾಲಯವಿರತಕ್ಕದ್ದು ಮತ್ತು ಅದು ಭಾರತದ ಮುಖ್ಯ ನ್ಯಾಯಮೂರ್ತಿ ಮತ್ತು ಸಂಸತ್ತು ಕಾನೂನಿನ ಮೂಲಕ ಇನ್ನೂ ಅಧಿಕ ಸಂಖ್ಯೆಯನ್ನು ಗೊತ್ತುಪಡಿಸುವವರೆಗೆ [2]ಏಳಕ್ಕಿಂತ ಹೆಚ್ಚಾಗಿಲ್ಲದಷ್ಟು ಇತರ ನ್ಯಾಯಾಧೀಶರನ್ನು ಒಳಗೊಂಡಿರತಕ್ಕದ್ದು.

1. 1975ನೆಯ ಇಸವಿಯ ಸಂವಿಧಾನ (ಮೂವತ್ತೆಂಟನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (4)ನೇ ಖಂಡವನ್ನು (ಪೂರ್ವಾನ್ವಯ ಪರಿಣಾಮಸಹಿತವಾಗಿ) ಸೇರಿಸಲಾಗಿತ್ತು. ಅದನ್ನು 1978ನೆಯ ಇಸವಿ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 16ನೆಯ ಪ್ರಕರಣದ ಮೂಲಕ (20-6-1979ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
2. ಈಗ "ಮೂವತ್ತು", 2008ನೆಯ ಇಸವಿಯ ಸರ್ವೋಚ್ಚ ನ್ಯಾಯಾಲಯ (ನ್ಯಾಯಾಧೀಶರ ಸಂಖ್ಯೆ) (ತಿದ್ದುಪಡಿ) ಅಧಿನಿಯಮದ (ಸಂಖ್ಯೆ 2009 ರ 11) 2ನೇ ಪ್ರಕರಣವನ್ನು ನೋಡಿ. (5.2.2009 ರಿಂದ ಜಾರಿಗೆ ಬಂದಿದೆ).

(2) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡುವ ಉದ್ದೇಶಕ್ಕಾಗಿ ರಾಷ್ಟ್ರಪತಿಯು ಅವಶ್ಯವೆಂದು ಭಾವಿಸಬಹುದಾದಂಥ ಸರ್ವೋಚ್ಚ ನ್ಯಾಯಾಲಯದ ಮತ್ತು ರಾಜ್ಯಗಳ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸಿದ ತರುವಾಯ, ಅವನು ತನ್ನ ಸಹಿ ಮತ್ತು ಮೊಹರು ಇರುವ ವಾರಂಟಿನ ಮೂಲಕ ಅಂಥ ಪ್ರತಿಯೊಬ್ಬ ನ್ಯಾಯಾಧೀಶನನ್ನು ನೇಮಕ ಮಾಡತಕ್ಕದ್ದು ಮತ್ತು ಆ ನ್ಯಾಯಾಧೀಶನು ತನಗೆ ಅರವತ್ತೈದು ವರ್ಷಗಳ ವಯಸ್ಸು ತುಂಬುವವರೆಗೂ ಆ ಪದವನ್ನು ಧಾರಣ ಮಾಡತಕ್ಕದ್ದು:

ಪರಂತು, ಮುಖ್ಯ ನ್ಯಾಯಮೂರ್ತಿಯನ್ನು ಹೊರತುಪಡಿಸಿ ಇತರ ನ್ಯಾಯಾಧೀಶನ ನೇಮಕದ ಸಂದರ್ಭದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿಯೊಡನೆ ಸಮಾಲೋಚಿಸತಕ್ಕದ್ದು:

ಮತ್ತೂ ಪರಂತು,-

(ಎ) ನ್ಯಾಯಾಧೀಶನು ತಾನು ಸಹಿಮಾಡಿದ ಪತ್ರವನ್ನು ರಾಷ್ಟ್ರಪತಿಗೆ ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು:

(ಬಿ) (4)ನೆಯ ಖಂಡದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ನ್ಯಾಯಾಧೀಶನನ್ನು ಅವನ ಪದದಿಂದ ತೆಗೆದುಹಾಕಬಹುದು.

[1][(2ಎ) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನ ನೇಮಕಕ್ಕೆ ವಯಸ್ಸನ್ನು, ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಬಹುದಾದಂಥ ಪ್ರಾಧಿಕಾರವು ಮತ್ತು ಉಪಬಂಧಿಸಬಹುದಾದಂಥ ರೀತಿಯಲ್ಲಿ ನಿರ್ಧರಿಸತಕ್ಕದ್ದು.]

(3) ಯಾರೇ ವ್ಯಕ್ತಿಯು ಭಾರತದ ನಾಗರಿಕನಾಗಿರುವ ಹೊರತು ಮತ್ತು,-

(ಎ) ಒಂದು ಉಚ್ಚ ನ್ಯಾಯಾಲಯದಲ್ಲಿ ಅಥವಾ ನಿರಂತರವಾಗಿ ಎರಡು ಅಥವಾ ಇನ್ನೂ ಹೆಚ್ಚು ಉಚ್ಚ ನ್ಯಾಯಾಲಯಗಳಲ್ಲಿ ಕನಿಷ್ಠ ಪಕ್ಷ ಐದು ವರ್ಷಗಳ ಕಾಲ ನ್ಯಾಯಾಧೀಶನಾಗಿದ್ದ ಹೊರತು; ಅಥವಾ

(ಬಿ) ಒಂದು ಉಚ್ಚ ನ್ಯಾಯಾಲಯದಲ್ಲಿ ಅಥವಾ ನಿರಂತರವಾಗಿ ಎರಡು ಅಥವಾ ಹೆಚ್ಚು ಉಚ್ಚ ನ್ಯಾಯಾಲಯಗಳಲ್ಲಿ ಕನಿಷ್ಠಪಕ್ಷ ಹತ್ತು ವರ್ಷಗಳ ಕಾಲ ನ್ಯಾಯವಾದಿ ಆಗಿದ್ದ ಹೊರತು; ಅಥವಾ

(ಸಿ) ರಾಷ್ಟ್ರಪತಿಯ ಅಭಿಪ್ರಾಯದಲ್ಲಿ ಅವನು ಪ್ರಸಿದ್ಧ ನ್ಯಾಯವೇತ್ತನಾಗಿದ್ದ ಹೊರತು

- ಅವನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

**ವಿವರಣೆ I:-** ಈ ಖಂಡದಲ್ಲಿ "ಉಚ್ಚ ನ್ಯಾಯಾಲಯ" ಎಂದರೆ, ಭಾರತದ ರಾಜ್ಯಕ್ಷೇತ್ರದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿರುವ ಅಥವಾ ಈ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಅದನ್ನು ಚಲಾಯಿಸಿದ್ದ ಉಚ್ಚ ನ್ಯಾಯಾಲಯ.

**ವಿವರಣೆ II:-** ಈ ಖಂಡದ ಉದ್ದೇಶಕ್ಕಾಗಿ, ಯಾರೇ ವ್ಯಕ್ತಿಯು ನ್ಯಾಯವಾದಿ ಆಗಿರುವ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಅವನು ನ್ಯಾಯವಾದಿ ಆದ ಮೇಲೆ ಜಿಲ್ಲಾ ನ್ಯಾಯಾಧೀಶನ ಪದಕ್ಕೆ ಕಡಿಮೆಯಿಲ್ಲದ ನ್ಯಾಯಿಕ ಪದವನ್ನು ಧಾರಣ ಮಾಡಿದ್ದ ಅವಧಿಯನ್ನೂ ಸೇರಿಸತಕ್ಕದ್ದು.

(4) ಸರ್ವೋಚ್ಚ ನ್ಯಾಯಾಲಯದ ಯಾರೇ ನ್ಯಾಯಾಧೀಶನನ್ನು, ಅವನ ವಿಷಯದಲ್ಲಿ ರುಜುವಾತಾದ ದುರ್ವರ್ತನೆಯ ಅಥವಾ ಅಸಾಮರ್ಥ್ಯದ ಕಾರಣದ ಮೇಲೆ ತೆಗೆದು ಹಾಕಬೇಕೆಂಬುದಾಗಿ ಸಂಸತ್ತಿನ ಪ್ರತಿಯೊಂದು ಸದನದಿಂದ ಆ ಸದನದ ಒಟ್ಟು ಸದಸ್ಯ ಸಂಖ್ಯೆಯ ಬಹುಮತದ ಮೂಲಕ ಮತ್ತು ಹಾಜರಿದ್ದು ಮತ ಕೊಡುವ ಆ ಸದನದ ಸದಸ್ಯರಲ್ಲಿ ಮೂರನೆಯ ಎರಡು ಭಾಗಕ್ಕೆ ಕಡಿಮೆಯಿಲ್ಲದ ಬಹುಮತದ ಮೂಲಕ ಸಮರ್ಥಿತವಾದ ಕೋರಿಕೆಯನ್ನು ರಾಷ್ಟ್ರಪತಿಗೆ ಅದೇ ಅಧಿವೇಶನದಲ್ಲಿ ಒಪ್ಪಿಸಿದ ತರುವಾಯ ರಾಷ್ಟ್ರಪತಿಯು ಹೊರಡಿಸಿದ ಆದೇಶದ ಹೊರತು ತೆಗೆದು ಹಾಕತಕ್ಕದ್ದಲ್ಲ.

(5) (4)ನೆಯ ಖಂಡದ ಮೇರೆಗೆ ಕೋರಿಕೆಯನ್ನು ಒಪ್ಪಿಸುವ ಬಗ್ಗೆ ಮತ್ತು ಯಾರೇ ನ್ಯಾಯಾಧೀಶನ ದುರ್ವರ್ತನೆಯನ್ನು ಅಥವಾ ಅಸಾಮರ್ಥ್ಯವನ್ನು ತನಿಖೆ ಮಾಡಿ ರುಜುವಾತು ಮಾಡುವ ಬಗ್ಗೆ ಪ್ರಕ್ರಿಯೆಯನ್ನು ಸಂಸತ್ತು ಕಾನೂನಿನ ಮೂಲಕ ವಿನಿಯಮಿಸಬಹುದು.

---

1. 1963ನೆಯ ಇಸವಿಯ ಸಂವಿಧಾನ (ಹದಿನೈದನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

(6) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯು, ತನ್ನ ಪದವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ರಾಷ್ಟ್ರಪತಿಯ ಸಮಕ್ಷಮ ಅಥವಾ ಆ ಬಗ್ಗೆ ಅವನಿಂದ ನೇಮಕಗೊಂಡ ಒಬ್ಬ ವ್ಯಕ್ತಿಯ ಸಮಕ್ಷಮ, ಮೂರನೆಯ ಅನುಸೂಚಿಯಲ್ಲಿ ಆ ಉದ್ದೇಶಕ್ಕಾಗಿ ಕೊಟ್ಟಿರುವ ನಮೂನೆಗೆ ಅನುಸಾರವಾಗಿ ಪ್ರಮಾಣ ಅಥವಾ ಪ್ರತಿಜ್ಞೆ ಮಾಡತಕ್ಕದ್ದು ಮತ್ತು ಅದಕ್ಕೆ ತನ್ನ ಸಹಿ ಹಾಕತಕ್ಕದ್ದು.

(7) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ಪದಧಾರಣ ಮಾಡಿರುವ ಯಾರೇ ವ್ಯಕ್ತಿಯು, ಭಾರತದ ರಾಜ್ಯಕ್ಷೇತ್ರದಲ್ಲಿ ಇರುವ ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ವಾದಿಸತಕ್ಕದ್ದಲ್ಲ ಅಥವಾ ಕಾರ್ಯನಿರ್ವಹಿಸತಕ್ಕದ್ದಲ್ಲ.

**125. ನ್ಯಾಯಾಧೀಶರ ಸಂಬಳಗಳು, ಇತ್ಯಾದಿ:-** [1][(1) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಕಾನೂನಿನ ಮೂಲಕ ಸಂಸತ್ತು ನಿರ್ಧರಿಸಬಹುದಾದಂಥ ಸಂಬಳಗಳನ್ನು ಸಂದಾಯ ಮಾಡತಕ್ಕದ್ದು ಮತ್ತು ಆ ಬಗ್ಗೆ ಉಪಬಂಧವನ್ನು ಹಾಗೆ ಕಲ್ಪಿಸುವವರೆಗೆ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂಥ ಸಂಬಳಗಳನ್ನು ಸಂದಾಯ ಮಾಡತಕ್ಕದ್ದು.]

(2) ಪ್ರತಿಯೊಬ್ಬ ನ್ಯಾಯಾಧೀಶನು ಸಂಸತ್ತು ಮಾಡಿದ ಕಾನೂನಿನ ಮೂಲಕ ಅಥವಾ ಮೇರೆಗೆ ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ವಿಶೇಷಾಧಿಕಾರಗಳಿಗೆ ಮತ್ತು ಭತ್ಯಗಳಿಗೆ, ಗೈರುಹಾಜರಿ ರಜೆಗೆ ಮತ್ತು ನಿವೃತ್ತಿ ವೇತನಕ್ಕೆ ಸಂಬಂಧಿಸಿದಂಥ ಹಕ್ಕುಗಳಿಗೆ ಮತ್ತು ಅವುಗಳನ್ನು ಹಾಗೆ ನಿರ್ಧಾರ ಮಾಡುವವರೆಗೆ ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂಥ ವಿಶೇಷಾಧಿಕಾರಗಳಿಗೆ, ಭತ್ಯಗಳಿಗೆ ಮತ್ತು ಹಕ್ಕುಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ನ್ಯಾಯಾಧೀಶನ ವಿಶೇಷಾಧಿಕಾರಗಳು, ಭತ್ಯಗಳು, ಗೈರುಹಾಜರಿ ರಜೆಗೆ ಅಥವಾ ನಿವೃತ್ತಿ ವೇತನಕ್ಕೆ ಸಂಬಂಧಿಸಿದಂತೆ ಅವನ ಹಕ್ಕುಗಳು, ಅವನ ನೇಮಕದ ತರುವಾಯ, ಅವನಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ತಗೊಳ್ಳತಕ್ಕದ್ದಲ್ಲ.

**126. ಕಾರ್ಯಾರ್ಥ ಮುಖ್ಯ ನ್ಯಾಯಮೂರ್ತಿಯ ನೇಮಕ:-** ಭಾರತದ ಮುಖ್ಯ ನ್ಯಾಯಮೂರ್ತಿಯ ಪದವು ಖಾಲಿ ಆದಾಗ ಅಥವಾ ಮುಖ್ಯ ನ್ಯಾಯಮೂರ್ತಿಯು ಗೈರುಹಾಜರಾದ ಕಾರಣದಿಂದ ಅಥವಾ ಇತರ ಕಾರಣಗಳಿಂದ ತನ್ನ ಪದದ ಕರ್ತವ್ಯಗಳನ್ನು ನೆರವೇರಿಸಲು ಅವನು ಅಸಮರ್ಥನಾದಾಗ, ಆ ನ್ಯಾಯಾಲಯದ ಇತರ ನ್ಯಾಯಾಧೀಶರ ಪೈಕಿ ಆ ಉದ್ದೇಶಕ್ಕಾಗಿ ರಾಷ್ಟ್ರಪತಿಯು ನೇಮಕ ಮಾಡಬಹುದಾದಂಥ ನ್ಯಾಯಾಧೀಶನು ಆ ಪದದ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**127. ಅಡ್‌ಹಾಕ್ ನ್ಯಾಯಾಧೀಶರ ನೇಮಕ:-** (1) ಯಾವುದೇ ಕಾಲದಲ್ಲಿ ಸರ್ವೋಚ್ಚ ನ್ಯಾಯಾಲಯದ ಯಾವುದೇ ಅಧಿವೇಶನವನ್ನು ನಡೆಸಲು ಅಥವಾ ಮುಂದುವರಿಸಲು, ಆ ನ್ಯಾಯಾಲಯದ ನ್ಯಾಯಾಧೀಶರ ಕೋರಂ ಇಲ್ಲದಿರುವಲ್ಲಿ ರಾಷ್ಟ್ರಪತಿಯ ಪೂರ್ವಸಮ್ಮತಿ ಪಡೆದು, ಸಂಬಂಧಪಟ್ಟ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯೊಡನೆ ಸಮಾಲೋಚನೆ ನಡೆಸಿದ ತರುವಾಯ, ಭಾರತದ ಮುಖ್ಯ ನ್ಯಾಯಮೂರ್ತಿಯು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳುವುದಕ್ಕೆ ತಕ್ಕ ಅರ್ಹತೆ ಪಡೆದಿರುವ ಮತ್ತು ಭಾರತದ ಮುಖ್ಯ ನ್ಯಾಯಮೂರ್ತಿಯು ಹೆಸರಿಸಿದ ಉಚ್ಚ ನ್ಯಾಯಾಲಯದ ನ್ಯಾಯಾಧೀಶನೊಬ್ಬನನ್ನು ಅವಶ್ಯವಾಗಬಹುದಾದಷ್ಟು ಅವಧಿಯವರೆಗೆ, ಸರ್ವೋಚ್ಚ ನ್ಯಾಯಾಲಯದ ಉಪವೇಶನಗಳಲ್ಲಿ ಅಡ್‌ಹಾಕ್ ನ್ಯಾಯಾಧೀಶನಾಗಿ ಹಾಜರಿರುವಂತೆ ಲಿಖಿತದ ಮೂಲಕ ಕೋರಬಹುದು.

(2) ಹಾಗೆ ಹೆಸರಿಸಲಾದ ನ್ಯಾಯಾಧೀಶನು ಸರ್ವೋಚ್ಚ ನ್ಯಾಯಾಲಯದ ಉಪವೇಶನಗಳಲ್ಲಿ, ಅವನ ಹಾಜರಾತಿಯು ಅವಶ್ಯವಿರುವ ಕಾಲದಲ್ಲಿ ಮತ್ತು ಅವಶ್ಯವಿರುವ ಅವಧಿಯವರೆಗೆ ಹಾಜರಾಗಿ ಕೆಲಸ ಮಾಡಲು ತನ್ನ ಪದದ ಇತರ ಕರ್ತವ್ಯಗಳಿಗಿಂತ ಹೆಚ್ಚು ಆದ್ಯತೆ ಕೊಡುವುದು ಅವನ ಕರ್ತವ್ಯವಾಗಿರತಕ್ಕದ್ದು, ಮತ್ತು ಅವನು ಹಾಗೆ ಹಾಜರಾಗಿ ಕೆಲಸ ಮಾಡುವಾಗ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನ ಎಲ್ಲ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅವನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

---

1. 1986ನೇ ಇಸವಿಯ ಸಂವಿಧಾನ (ಐವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (1)ನೇ ಖಂಡಕ್ಕೆ ಬದಲಾಗಿ (1.4.1986 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

**128. ಸರ್ವೋಚ್ಚ ನ್ಯಾಯಾಲಯದ ಉಪವೇಶನಗಳಲ್ಲಿ ನಿವೃತ್ತ ನ್ಯಾಯಾಧೀಶರ ಹಾಜರಾತಿ:-** ಈ ಅಧ್ಯಾಯದಲ್ಲಿ ಏನೇ ಇದ್ದಾಗ್ಯೂ, ಭಾರತದ ಮುಖ್ಯ ನ್ಯಾಯಮೂರ್ತಿಯು ರಾಷ್ಟ್ರಪತಿಯ ಪೂರ್ವಸಮ್ಮತಿ ಪಡೆದು ಸರ್ವೋಚ್ಚ ನ್ಯಾಯಾಲಯದ ಅಥವಾ ಫೆಡರಲ್ ನ್ಯಾಯಾಲಯದ ನ್ಯಾಯಾಧೀಶನಾಗಿದ್ದ [1][ಅಥವಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿದ್ದ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳಲು ತಕ್ಕ ಅರ್ಹತೆಯುಳ್ಳ] ಯಾರೇ ವ್ಯಕ್ತಿಯನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ಕುಳಿತು ಕಾರ್ಯನಿರ್ವಹಿಸುವಂತೆ ಯಾವುದೇ ಕಾಲದಲ್ಲಿ ಕೋರಬಹುದು ಮತ್ತು ಯಾವ ವ್ಯಕ್ತಿಯನ್ನು ಹಾಗೆ ಕೋರಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು ಹಾಗೆ ಕಾರ್ಯ ನಿರ್ವಹಿಸುವಾಗ ರಾಷ್ಟ್ರಪತಿಯು ಆದೇಶದ ಮೂಲಕ ನಿರ್ಧರಿಸಬಹುದಾದಂಥ ಭತ್ಯಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅವನು ಆ ನ್ಯಾಯಾಲಯದ ನ್ಯಾಯಾಧೀಶನ ಎಲ್ಲ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಹೊಂದಿರತಕ್ಕದ್ದು; ಆದರೆ, ಅವನನ್ನು ಆ ನ್ಯಾಯಾಲಯದ ನ್ಯಾಯಾಧೀಶನೆಂದು ಅನ್ಯಥಾ ಭಾವಿಸತಕ್ಕದ್ದಲ್ಲ:

ಪರಂತು, ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಹಿಂದೆ ಹೇಳಿದ ಯಾರೇ ವ್ಯಕ್ತಿಯು, ಆ ನ್ಯಾಯಾಲಯದ ನ್ಯಾಯಾಧೀಶನಾಗಿ ಕುಳಿತು ಕಾರ್ಯನಿರ್ವಹಿಸಲು ಸಮ್ಮತಿಸಿದ ಹೊರತು, ಹಾಗೆ ಕಾರ್ಯ ನಿರ್ವಹಿಸಬೇಕೆಂದು ಅವನನ್ನು ಅಗತ್ಯಪಡಿಸುವುದಾಗಿ ಭಾವಿಸತಕ್ಕದ್ದಲ್ಲ.

**129. ಸರ್ವೋಚ್ಚ ನ್ಯಾಯಾಲಯವು ಅಭಿಲೇಖ ನ್ಯಾಯಾಲಯವಾಗಿರತಕ್ಕದ್ದು:-** ಸರ್ವೋಚ್ಚ ನ್ಯಾಯಾಲಯವು ಅಭಿಲೇಖ ನ್ಯಾಯಾಲಯವಾಗಿರತಕ್ಕದ್ದು ಮತ್ತು ಅದಕ್ಕೆ ಆದ ನಿಂದನೆಗೆ ದಂಡಿಸುವ ಅಧಿಕಾರವನ್ನೂ ಒಳಗೊಂಡಂತೆ ಅಂಥ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಅದು ಹೊಂದಿರತಕ್ಕದ್ದು.

**130. ಸರ್ವೋಚ್ಚ ನ್ಯಾಯಾಲಯದ ಕಾರ್ಯಸ್ಥಾನ:-** ಸರ್ವೋಚ್ಚ ನ್ಯಾಯಾಲಯವು ದೆಹಲಿಯಲ್ಲಿ ಅಥವಾ ಭಾರತದ ಮುಖ್ಯ ನ್ಯಾಯಮೂರ್ತಿಯು ರಾಷ್ಟ್ರಪತಿಯ ಅನುಮೋದನೆ ಪಡೆದು ಕಾಲಕಾಲಕ್ಕೆ ಗೊತ್ತು ಮಾಡಬಹುದಾದಂಥ ಇತರ ಸ್ಥಳದಲ್ಲಿ ಅಥವಾ ಸ್ಥಳಗಳಲ್ಲಿ ಉಪವೇಶನಗೊಳ್ಳತಕ್ಕದ್ದು.

**131.ಸರ್ವೋಚ್ಚ ನ್ಯಾಯಾಲಯದ ಮೂಲ ಅಧಿಕಾರ ವ್ಯಾಪ್ತಿ:-** ಈ ಸಂವಿಧಾನದ ಉಪಬಂಧಗಳಿಗೊಳಪಟ್ಟು,-

(ಎ) ಭಾರತ ಸರ್ಕಾರದ ಮತ್ತು ಒಂದು ಅಥವಾ ಹೆಚ್ಚು ರಾಜ್ಯಗಳ ನಡುವೆ; ಅಥವಾ

(ಬಿ) ಭಾರತ ಸರ್ಕಾರದ ಮತ್ತು ಯಾವುದೇ ರಾಜ್ಯ ಅಥವಾ ಯಾವುದೇ ರಾಜ್ಯಗಳು ಒಂದು ಕಡೆ ಹಾಗೂ ಒಂದು ಅಥವಾ ಹೆಚ್ಚು ಇತರ ರಾಜ್ಯಗಳು ಇನ್ನೊಂದು ಕಡೆ - ಇವುಗಳ ನಡುವೆ; ಅಥವಾ

(ಸಿ) ಎರಡು ಅಥವಾ ಹೆಚ್ಚು ರಾಜ್ಯಗಳ ನಡುವೆ

- ಇರುವ ಯಾವುದೇ ವಿವಾದವು ಯಾವ ಪ್ರಶ್ನೆಯ ಮೇಲೆ (ಅದು ಕಾನೂನಿನದಾಗಿರಲಿ ಅಥವಾ ಸಂಗತಿಯದಾಗಿರಲಿ) ಕಾನೂನು ಸಮ್ಮತ ಹಕ್ಕಿನ ಅಸ್ತಿತ್ವವು ಅಥವಾ ವ್ಯಾಪ್ತಿಯು ಅವಲಂಬಿತವಾಗಿರುವುದೋ ಆ ಯಾವುದೇ ಪ್ರಶ್ನೆಯನ್ನು ಒಳಗೊಂಡಿದ್ದರೆ ಮತ್ತು ಒಳಗೊಂಡಿರುವಷ್ಟರ ಮಟ್ಟಿಗೆ ಸರ್ವೋಚ್ಚ ನ್ಯಾಯಾಲಯವು ಇತರ ಯಾವುದೇ ನ್ಯಾಯಾಲಯವನ್ನು ಹೊರತುಪಡಿಸಿ ಅಂಥ ವಿವಾದದಲ್ಲಿ ಮೂಲ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು:

[2][ಪರಂತು, ಸದರಿ ಅಧಿಕಾರ ವ್ಯಾಪ್ತಿಯು ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಮಾಡಿಕೊಂಡ ಅಥವಾ ಬರೆದುಕೊಟ್ಟ ಮತ್ತು ಈ ಸಂವಿಧಾನದ ಪ್ರಾರಂಭದ ನಂತರವೂ ಜಾರಿಯಲ್ಲಿರುವ ಅಥವಾ ಸದರಿ ಅಧಿಕಾರ ವ್ಯಾಪ್ತಿಯನ್ನು ಅಂಥ ವಿವಾದಕ್ಕೆ ವಿಸ್ತರಿಸತಕ್ಕದ್ದಲ್ಲವೆಂದು ಉಪಬಂಧಿಸುವ ಯಾವುದೇ ಕೌಲು, ಒಪ್ಪಂದ, ಒಡಂಬಡಿಕೆ, ವಚನಬಂಧ, ಸನದು ಅಥವಾ ಅಂಥದೇ ಇತರ ಲಿಖಿತಗಳಿಂದ ಉದ್ಭವಿಸುವ ವಿವಾದಕ್ಕೆ ವಿಸ್ತೃತವಾಗತಕ್ಕದ್ದಲ್ಲ.]

[3]*131ಎ. **[ಕೇಂದ್ರ ಕಾನೂನುಗಳ ಸಂವಿಧಾನಾತ್ಮಕ ಸಿಂಧುತ್ವದ ಬಗೆಗಿನ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಅನನ್ಯ ಅಧಿಕಾರ ವ್ಯಾಪ್ತಿ].** 1977ನೆಯ ಇಸವಿಯ ಸಂವಿಧಾನ (ನಲವತ್ತ ಮೂರನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ (13-4-78ರಿಂದ ಜಾರಿಗೆ ಬರುವಂತೆ) ನಿರಸನಗೊಳಿಸಲಾಗಿದೆ.*

---

1. 1963ನೆಯ ಇಸವಿಯ ಸಂವಿಧಾನ (ಹದಿನೈದನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ ಪರಂತುಕಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 23ನೆಯ ಪ್ರಕರಣದ ಮೂಲಕ 131ಎ ಎಂಬ ಹೊಸ ಅನುಚ್ಛೇದವನ್ನು (1-2-77ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿತ್ತು.

**132. ಕೆಲವು ಮೊಕದ್ದಮೆಗಳಲ್ಲಿ ಉಚ್ಚ ನ್ಯಾಯಾಲಯಗಳಿಂದ ಬರುವ ಅಪೀಲುಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಅಪೀಲು ಅಧಿಕಾರ ವ್ಯಾಪ್ತಿ:**– (1) ಭಾರತದ ರಾಜ್ಯಕ್ಷೇತ್ರದಲ್ಲಿರುವ ಯಾವುದೇ ಉಚ್ಚ ನ್ಯಾಯಾಲಯವು ಸಿವಿಲ್, ಕ್ರಿಮಿನಲ್ ಅಥವಾ ಇತರ ವ್ಯವಹರಣೆಯಲ್ಲಿ ನೀಡಿದ ಯಾವುದೇ ತೀರ್ಪು, ಡಿಕ್ರಿ ಅಥವಾ ಅಂತಿಮ ಆದೇಶಕ್ಕೆ ಸಂಬಂಧಪಟ್ಟ ಮೊಕದ್ದಮೆಯು ಈ ಸಂವಿಧಾನದ ಅರ್ಥ ವಿವರಣೆಗೆ ಸಂಬಂಧಿಸಿದ ಗಣನೀಯವಾದ ಕಾನೂನಿನ ಪ್ರಶ್ನೆಯನ್ನು ಒಳಗೊಂಡಿದೆಯೆಂದು [1][134ಎ ಅನುಚ್ಛೇದದ ಮೇರೆಗೆ ಆ ಉಚ್ಚ ನ್ಯಾಯಾಲಯವು ಪ್ರಮಾಣೀಕರಿಸಿದರೆ] ಅಂಥ ತೀರ್ಪಿನ, ಡಿಕ್ರಿಯ ಅಥವಾ ಅಂತಿಮ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಹೂಡಲು ಅವಕಾಶವಿರತಕ್ಕದ್ದು.

[2]* * * * * *

(3) ಅಂಥ ಪ್ರಮಾಣ ಪತ್ರವನ್ನು ಕೊಟ್ಟಿರುವಲ್ಲಿ [3]* * * ಹಿಂದೆ ಹೇಳಿರುವಂಥ ಯಾವುದೇ ಪ್ರಶ್ನೆಯನ್ನು ತಪ್ಪಾಗಿ ತೀರ್ಮಾನಿಸಲಾಗಿದೆಯೆಂಬ ಕಾರಣದ ಮೇಲೆ ಆ ಮೊಕದ್ದಮೆಯ ಯಾರೇ ಪಕ್ಷಕಾರನು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು [3]* * *.

**ವಿವರಣೆ:**–ಈ ಅನುಚ್ಛೇದದ ಉದ್ದೇಶಗಳಿಗಾಗಿ "ಅಂತಿಮ ಆದೇಶ" ಎಂಬುದು, ವಿವಾದಾಂಶವನ್ನು ಅಪೀಲುದಾರನ ಪರವಾಗಿ ತೀರ್ಮಾನಿಸಿದರೆ, ಯಾವ ಆದೇಶವು ಆ ಅಂತಿಮ ವಿಲೆಗೆ ಸಾಕಾಗಬಹುದೋ ಆ ಆದೇಶವನ್ನು ಒಳಗೊಳ್ಳುತ್ತದೆ.

**133. ಸಿವಿಲ್ ವಿಷಯಗಳ ಸಂಬಂಧದಲ್ಲಿ ಉಚ್ಚ ನ್ಯಾಯಾಲಯಗಳಿಂದ ಬರುವ ಅಪೀಲುಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಅಪೀಲು ಅಧಿಕಾರ ವ್ಯಾಪ್ತಿ:**– [4][(1) ಭಾರತದ ರಾಜ್ಯಕ್ಷೇತ್ರದಲ್ಲಿರುವ ಒಂದು ಉಚ್ಚ ನ್ಯಾಯಾಲಯವು ಸಿವಿಲ್ ವ್ಯವಹರಣೆಯಲ್ಲಿ ನೀಡಿದ ಯಾವುದೇ ತೀರ್ಪು, ಡಿಕ್ರಿ ಅಥವಾ ಅಂತಿಮ ಆದೇಶದ ಸಂಬಂಧದಲ್ಲಿ,–

(ಎ) ಆ ಮೊಕದ್ದಮೆಯು ಸಾರ್ವಜನಿಕ ಮಹತ್ವದ ಮುಖ್ಯವಾದ ಕಾನೂನು ಪ್ರಶ್ನೆಯನ್ನು ಒಳಗೊಂಡಿದೆ ಎಂದು; ಮತ್ತು

(ಬಿ) ಉಚ್ಚ ನ್ಯಾಯಾಲಯದ ಅಭಿಪ್ರಾಯದಲ್ಲಿ ಸದರಿ ಪ್ರಶ್ನೆಯನ್ನು ಸರ್ವೋಚ್ಚ ನ್ಯಾಯಾಲಯವು ತೀರ್ಮಾನಿಸಬೇಕಾಗಿದೆ ಎಂದು

[5][ - 134ಎ ಅನುಚ್ಛೇದದ ಮೇರೆಗೆ ಆ ಉಚ್ಚ ನ್ಯಾಯಾಲಯವು ಪ್ರಮಾಣೀಕರಿಸಿದರೆ] ಅಂಥ ತೀರ್ಪಿನ, ಡಿಕ್ರಿಯ ಅಥವಾ ಅಂತಿಮ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಅಪೀಲು ಹೂಡಲು ಅವಕಾಶವಿರತಕ್ಕದ್ದು.]

(2) 132ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, (1)ನೇ ಖಂಡದ ಮೇರೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡುವ ಯಾರೇ ಪಕ್ಷಕಾರನು ಈ ಸಂವಿಧಾನದ ಅರ್ಥ ವಿವರಣೆಗೆ ಸಂಬಂಧಿಸಿದ ಮುಖ್ಯವಾದ ಕಾನೂನು ಪ್ರಶ್ನೆಯನ್ನು ತಪ್ಪಾಗಿ ತೀರ್ಮಾನಿಸಿರುವುದು ಅಂಥ ಅಪೀಲಿನ ಕಾರಣಗಳಲ್ಲಿ ಒಂದು ಕಾರಣವಾಗಿದೆ ಎಂದು ವಾದವನ್ನು ಮಂಡಿಸಬಹುದು.

(3) ಈ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ಸಂಸತ್ತು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸಿದ ಹೊರತು, ಉಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶನು ನೀಡಿದ ತೀರ್ಪು, ಡಿಕ್ರಿ ಅಥವಾ ಅಂತಿಮ ಆದೇಶದ ವಿರುದ್ಧ ಸವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದಲ್ಲ.

---

1. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 17ನೇ ಪ್ರಕರಣದ ಮೂಲಕ "ಆ ಉಚ್ಚ ನ್ಯಾಯಾಲಯವು ಪ್ರಮಾಣನ ಮಾಡಿದರೆ" ಎಂಬ ಪದಗಳಿಗೆ ಬದಲಾಗಿ (1-8-79ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 17ನೇ ಪ್ರಕರಣದ ಮೂಲಕ (1-8-1979ರಿಂದ ಜಾರಿಗೆ ಬರುವಂತೆ) (2)ನೇ ಖಂಡವನ್ನು ಬಿಟ್ಟುಬಿಡಲಾಗಿದೆ.
3. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 17ನೇ ಪ್ರಕರಣದ ಮೂಲಕ (1-8-1979 ರಿಂದ ಜಾರಿಗೆ ಬರುವಂತೆ) ಕೆಲವು ಪದಗಳನ್ನು ಬಿಟ್ಟುಬಿಡಲಾಗಿದೆ.
4. 1972ನೇ ಇಸವಿಯ ಸಂವಿಧಾನ (ಮೂವತ್ತನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (1)ನೇ ಖಂಡಕ್ಕೆ ಬದಲಾಗಿ (27-2-73 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
5. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 18ನೇ ಪ್ರಕರಣದ ಮೂಲಕ "ಉಚ್ಚ ನ್ಯಾಯಾಲಯವು ಪ್ರಮಾಣನ ಮಾಡಿದರೆ" ಎಂಬ ಪದಗಳಿಗೆ ಬದಲಾಗಿ (1-8-1979 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

**134. ಕ್ರಿಮಿನಲ್ ವಿಷಯದ ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯದ ಅಪೀಲು ಅಧಿಕಾರ ವ್ಯಾಪ್ತಿ:-** (1) ಭಾರತದ ರಾಜ್ಯಕ್ಷೇತ್ರದಲ್ಲಿರುವ ಒಂದು ಉಚ್ಚ ನ್ಯಾಯಾಲಯವು,-

(ಎ) ಆಪಾದಿತನನ್ನು ಖುಲಾಸೆ ಮಾಡುವ ಆದೇಶವನ್ನು ಅಪೀಲಿನಲ್ಲಿ ವಿಪರ್ಯಯಗೊಳಿಸಿ ಅವನಿಗೆ ಮರಣದಂಡನೆಯನ್ನು ವಿಧಿಸಿದ್ದರೆ; ಅಥವಾ

(ಬಿ) ತನ್ನ ಅಧಿಕಾರಕ್ಕೆ ಅಧೀನವಾಗಿರುವ ಯಾವುದೇ ನ್ಯಾಯಾಲಯದಿಂದ ಯಾವುದೇ ಮೊಕದ್ದಮೆಯನ್ನು ತಾನೇ ಅಧಿವಿಚಾರಣೆ ಮಾಡಲು ತರಿಸಿಕೊಂಡು, ಅಂಥ ಅಧಿವಿಚಾರಣೆಯಲ್ಲಿ ಅಪರಾಧಿಯೆಂದು ನಿರ್ಣಯಿಸಿ ಅವನಿಗೆ ಮರಣದಂಡನೆಯನ್ನು ವಿಧಿಸಿದ್ದರೆ; ಅಥವಾ

(ಸಿ) ಮೊಕದ್ದಮೆಯು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಲು ಯೋಗ್ಯವಾಗಿದೆಯೆಂದು [1][134ಎ ಅನುಚ್ಛೇದದ ಮೇರೆಗೆ ಪ್ರಮಾಣೀಕರಿಸಿದರೆ]

- ಆ ಉಚ್ಚ ನ್ಯಾಯಾಲಯವು ಕ್ರಿಮಿನಲ್ ವ್ಯವಹರಣೆಯಲ್ಲಿ ನೀಡಿದ ತೀರ್ಪಿನ, ಅಂತಿಮ ಆದೇಶದ ಅಥವಾ ಶಿಕ್ಷೆಯ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು:

ಪರಂತು, 145ನೆಯ ಅನುಚ್ಛೇದದ (1)ನೆಯ ಖಂಡದ ಮೇರೆಗೆ ಅಪೀಲು ಸಲ್ಲಿಸಲು ಕಲ್ಪಿಸಬಹುದಾದಂಥ ಉಪಬಂಧಗಳಿಗೆ ಮತ್ತು ಉಚ್ಚ ನ್ಯಾಯಾಲಯವು ವಿಧಿಸಬಹುದಾದಂಥ ಅಥವಾ ಅಗತ್ಯಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, (ಸಿ) ಉಪಖಂಡದ ಮೇರೆಗೆ ಅಪೀಲನ್ನು ಸಲ್ಲಿಸಲು ಅವಕಾಶವಿರತಕ್ಕದ್ದು.

(2) ಭಾರತದ ರಾಜ್ಯಕ್ಷೇತ್ರದಲ್ಲಿರುವ ಉಚ್ಚ ನ್ಯಾಯಾಲಯವು ಕ್ರಿಮಿನಲ್ ವ್ಯವಹರಣೆಯಲ್ಲಿ ನೀಡಿದ ಯಾವುದೇ ತೀರ್ಪಿನ, ಅಂತಿಮ ಆದೇಶದ ಅಥವಾ ಶಿಕ್ಷೆಯ ಆದೇಶದ ವಿರುದ್ಧ ಅಪೀಲುಗಳನ್ನು ಸ್ವೀಕರಿಸುವ ಮತ್ತು ಅಪೀಲುಗಳನ್ನು ಸುನಾವಣೆ ಮಾಡುವ ಸಂಬಂಧದಲ್ಲಿ ಸಂಸತ್ತು ಕಾನೂನಿನ ಮೂಲಕ, ಅಂಥ ಕಾನೂನಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು, ಸರ್ವೋಚ್ಚ ನ್ಯಾಯಾಲಯಕ್ಕೆ ಇನ್ನೂ ಯಾವುದೇ ಹೆಚ್ಚಿನ ಅಧಿಕಾರಗಳನ್ನು ಪ್ರದಾನ ಮಾಡಬಹುದು.

[2]**[134ಎ. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಪ್ರಮಾಣಪತ್ರ:-** 132ನೇ ಅನುಚ್ಛೇದದ (1)ನೇ ಖಂಡದಲ್ಲಿ ಅಥವಾ 133ನೇ ಅನುಚ್ಛೇದದ (1)ನೇ ಖಂಡದಲ್ಲಿ ಅಥವಾ 134ನೇ ಅನುಚ್ಛೇದದ (1)ನೇ ಖಂಡದಲ್ಲಿ ಉಲ್ಲೇಖಿಸಿದ ತೀರ್ಪು, ಡಿಕ್ರಿ, ಅಂತಿಮ ಆದೇಶ ಅಥವಾ ಶಿಕ್ಷೆಯ ಆದೇಶವನ್ನು ಮಾಡುವ ಅಥವಾ ಕೊಡುವ ಪ್ರತಿಯೊಂದು ಉಚ್ಚ ನ್ಯಾಯಾಲಯವು ಹಾಗೆ ಮಾಡಿದ ಅಥವಾ ಕೊಟ್ಟ ತರುವಾಯ, ಸಾಧ್ಯವಾದಷ್ಟು ಬೇಗ ಸಂದರ್ಭಾನುಸಾರ 132ನೇ ಅನುಚ್ಛೇದದ (1)ನೇ ಖಂಡದಲ್ಲಿ ಅಥವಾ 133ನೇ ಅನುಚ್ಛೇದದ (1)ನೇ ಖಂಡದಲ್ಲಿ ಅಥವಾ 134ನೇ ಅನುಚ್ಛೇದದ (1)ನೇ ಖಂಡದ (ಸಿ) ಉಪಖಂಡದಲ್ಲಿ ಉಲ್ಲೇಖಿಸಲಾದ ಸ್ವರೂಪದ ಪ್ರಮಾಣಪತ್ರವನ್ನು ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಡಬಹುದೇ ಎಂಬ ಪ್ರಶ್ನೆಯನ್ನು,-

(ಎ) ತನ್ನ ಸ್ವಪ್ರೇರಣೆಯಿಂದ ಹಾಗೆ ಮಾಡುವುದು ಯೋಗ್ಯವೆಂದು ಅದು ಭಾವಿಸಿದರೆ ನಿರ್ಧರಿಸಬಹುದು; ಮತ್ತು

(ಬಿ) ಅಂಥ ತೀರ್ಪು, ಡಿಕ್ರಿ, ಅಂತಿಮ ಆದೇಶ ಅಥವಾ ಶಿಕ್ಷೆಯ ಆದೇಶವನ್ನು ಮಾಡಿದ ಅಥವಾ ಕೊಟ್ಟ ನಿಕಟೋತ್ತರದಲ್ಲಿ, ಬಾಧಿತ ಪಕ್ಷಕಾರನು ಅಥವಾ ಅವನ ಪರವಾಗಿ ಮೌಖಿಕವಾಗಿ ಮನವಿ ಮಾಡಿಕೊಂಡರೆ ನಿರ್ಧರಿಸತಕ್ಕದ್ದು.]

---

1. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 19ನೇ ಪ್ರಕರಣದ ಮೂಲಕ " ಪ್ರಮಾಣನ ಮಾಡಿದರೆ" ಎಂಬ ಪದಗಳಿಗೆ ಬದಲಾಗಿ (1-8-1979ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 20ನೇ ಪ್ರಕರಣದ ಮೂಲಕ (1-8-79ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

**135. ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ ಫೆಡರಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು ಸರ್ವೋಚ್ಚ ನ್ಯಾಯಾಲಯವು ಚಲಾಯಿಸುವುದು:–** ಯಾವ ವಿಷಯಕ್ಕೆ ಸಂಬಂಧಿಸಿದಂತೆ ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಯಾವುದೇ ಕಾನೂನಿನ ಮೇರೆಗೆ ಫೆಡರಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು ಚಲಾಯಿಸಬಹುದಾಗಿತ್ತೋ ಮತ್ತು ಯಾವ ವಿಷಯಕ್ಕೆ 133ನೆಯ ಅಥವಾ 134ನೆಯ ಅನುಚ್ಛೇದದ ಉಪಬಂಧಗಳು ಅನ್ವಯಿಸುವುದಿಲ್ಲವೋ ಆ ವಿಷಯಕ್ಕೆ ಸಂಬಂಧಿಸಿದಂತೆಯೂ ಸಂಸತ್ತು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸುವವರೆಗೆ ಸರ್ವೋಚ್ಚ ನ್ಯಾಯಾಲಯವು ಆ ಅಧಿಕಾರವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು ಹೊಂದಿರತಕ್ಕದ್ದು.

**136. ಅಪೀಲು ಸಲ್ಲಿಸಲು ಸರ್ವೋಚ್ಚ ನ್ಯಾಯಾಲಯದಿಂದ ವಿಶೇಷ ಅನುಮತಿ:–** (1) ಈ ಅಧ್ಯಾಯದಲ್ಲಿ ಏನೇ ಇದ್ದಾಗ್ಯೂ, ಭಾರತದ ರಾಜ್ಯಕ್ಷೇತ್ರದಲ್ಲಿರುವ ಯಾವುದೇ ನ್ಯಾಯಾಲಯವು ಅಥವಾ ನ್ಯಾಯಾಧಿಕರಣವು ಯಾವುದೇ ವ್ಯಾಜ್ಯದಲ್ಲಿ ಅಥವಾ ವಿಷಯದಲ್ಲಿ ಮಾಡಿದ ಅಥವಾ ಕೊಟ್ಟ ಯಾವುದೇ ತೀರ್ಪಿನ, ಡಿಕ್ರಿಯ, ನಿರ್ಧರಣೆಯ, ಶಿಕ್ಷೆಯ ಆದೇಶದ ಅಥವಾ ಆದೇಶದ ವಿರುದ್ಧ ಅಪೀಲು ಹೂಡಲು, ಸರ್ವೋಚ್ಚ ನ್ಯಾಯಾಲಯವು ತನ್ನ ವಿವೇಚನಾನುಸಾರ ವಿಶೇಷ ಅನುಮತಿಯನ್ನು ನೀಡಬಹುದು.

(2) (1)ನೆಯ ಖಂಡದಲ್ಲಿ ಇರುವುದು ಯಾವುದೂ, ಸಶಸ್ತ್ರ ಬಲಗಳಿಗೆ ಸಂಬಂಧಪಟ್ಟ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ರಚಿಸಲಾದ ಯಾವುದೇ ನ್ಯಾಯಾಲಯವು ಅಥವಾ ನ್ಯಾಯಾಧಿಕರಣವು ಮಾಡಿದ ಅಥವಾ ಕೊಟ್ಟ ಯಾವುದೇ ತೀರ್ಪಿಗೆ, ನಿರ್ಧರಣೆಗೆ, ಶಿಕ್ಷೆಯ ಆದೇಶಕ್ಕೆ ಅಥವಾ ಆದೇಶಕ್ಕೆ ಅನ್ವಯಿಸತಕ್ಕದ್ದಲ್ಲ.

**137. ಸರ್ವೋಚ್ಚ ನ್ಯಾಯಾಲಯವು ತೀರ್ಪುಗಳನ್ನು ಅಥವಾ ಆದೇಶಗಳನ್ನು ಪುನರವಲೋಕನ ಮಾಡುವುದು:–** ಸಂಸತ್ತು ರಚಿಸಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಅಥವಾ 145ನೆಯ ಅನುಚ್ಛೇದದ ಮೇರೆಗೆ ರಚಿತವಾದ ಯಾವುದೇ ನಿಯಮಗಳಿಗೆ ಒಳಪಟ್ಟು, ಸರ್ವೋಚ್ಚ ನ್ಯಾಯಾಲಯವು ತಾನು ನೀಡಿದ ತೀರ್ಪನ್ನು ಅಥವಾ ಮಾಡಿದ ಆದೇಶವನ್ನು ಪುನರವಲೋಕನ ಮಾಡಲು ಅಧಿಕಾರವನ್ನು ಹೊಂದಿರತಕ್ಕದ್ದು.

**138. ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ವಿಸ್ತರಣೆ:–** (1) ಒಕ್ಕೂಟ ಪಟ್ಟಿಯಲ್ಲಿರುವ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಸಂಸತ್ತು ಕಾನೂನಿನ ಮೂಲಕ ಪ್ರದಾನ ಮಾಡಬಹುದಾದಂಥ ಇನ್ನೂ ಹೆಚ್ಚಿನ ಅಧಿಕಾರ ವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು ಸರ್ವೋಚ್ಚ ನ್ಯಾಯಾಲಯವು ಹೊಂದಿರತಕ್ಕದ್ದು.

(2) ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಭಾರತ ಸರ್ಕಾರವು ಮತ್ತು ಯಾವುದೇ ರಾಜ್ಯ ಸರ್ಕಾರವು ವಿಶೇಷ ಒಪ್ಪಂದದ ಮೂಲಕ ಪ್ರದಾನ ಮಾಡಬಹುದಾದಂಥ ಇನ್ನೂ ಹೆಚ್ಚಿನ ಅಧಿಕಾರ ವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು, ಸರ್ವೋಚ್ಚ ನ್ಯಾಯಾಲಯವು ಚಲಾಯಿಸಬೇಕೆಂದು ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಿದರೆ, ಸರ್ವೋಚ್ಚ ನ್ಯಾಯಾಲಯವು ಅಂಥ ಅಧಿಕಾರ ವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು ಹೊಂದಿರತಕ್ಕದ್ದು.

**139. ಸರ್ವೋಚ್ಚ ನ್ಯಾಯಾಲಯಕ್ಕೆ ಕೆಲವು ರಿಟ್‌ಗಳನ್ನು ಹೊರಡಿಸುವ ಅಧಿಕಾರಗಳನ್ನು ನೀಡುವುದು:–** 32ನೆಯ ಅನುಚ್ಛೇದದ (2)ನೆಯ ಖಂಡದಲ್ಲಿ ನಮೂದಿಸಿರುವ ಉದ್ದೇಶಗಳನ್ನು ಹೊರತುಪಡಿಸಿ ಯಾವುದೇ ಉದ್ದೇಶಗಳಿಗಾಗಿ ನಿರ್ದೇಶನಗಳನ್ನು, ಆದೇಶಗಳನ್ನು ಅಥವಾ ಹೇಬಿಯಸ್ ಕಾರ್ಪಸ್, ಮ್ಯಾಂಡಮಸ್, ಪ್ರೊಹಿಬಿಷನ್, ಕೋವಾರಂಟೊ ಮತ್ತು ಸರ್‌ಶಿಯೋರರಿ ಸ್ವರೂಪದ ರಿಟ್‌ಗಳೂ ಒಳಗೊಂಡಂತೆ ರಿಟ್‌ಗಳನ್ನು ಅಥವಾ ಅವುಗಳ ಪೈಕಿ ಯಾವುದನ್ನಾದರೂ ಹೊರಡಿಸಲು ಸಂಸತ್ತು, ಕಾನೂನಿನ ಮೂಲಕ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕಾರವನ್ನು ಪ್ರದಾನ ಮಾಡಬಹುದು.

[1] **[139ಎ. ಕೆಲವು ಮೊಕದ್ದಮೆಗಳ ವರ್ಗಾವಣೆ:–** [2] [(1) ಒಂದೇ ಬಗೆಯ ಅಥವಾ ಬಹುಮಟ್ಟಿಗೆ ಒಂದೇ ಬಗೆಯ ಕಾನೂನು ಪ್ರಶ್ನೆಗಳನ್ನು ಒಳಗೊಂಡಿರುವ ಮೊಕದ್ದಮೆಗಳು ಸರ್ವೋಚ್ಚ ನ್ಯಾಯಾಲಯದ ಮುಂದೆ ಮತ್ತು ಒಂದು ಅಥವಾ ಹೆಚ್ಚು ಉಚ್ಚನ್ಯಾಯಾಲಯಗಳ ಮುಂದೆ ಅಥವಾ ಎರಡು ಅಥವಾ ಹೆಚ್ಚು ಉಚ್ಚ ನ್ಯಾಯಾಲಯಗಳ ಮುಂದೆ ಇತ್ಯರ್ಥದಲ್ಲಿರುವಲ್ಲಿ ಮತ್ತು ಅಂಥ ಪ್ರಶ್ನೆಗಳು ಸಾರ್ವಜನಿಕ ಮಹತ್ವದ ಮುಖ್ಯ ಪ್ರಶ್ನೆಗಳಾಗಿವೆ ಎಂದು ಸರ್ವೋಚ್ಚ ನ್ಯಾಯಾಲಯಕ್ಕೆ ಸ್ವತಃ ಮನದಟ್ಟಾದರೆ ಅಥವಾ ಭಾರತದ ಅಟಾರ್ನಿ ಜನರಲ್ಲನು ಅಥವಾ ಅಂಥ ಯಾವುದೇ ಮೊಕದ್ದಮೆಯ ಪಕ್ಷಕಾರನು ಅರ್ಜಿಯನ್ನು ಸಲ್ಲಿಸಿದ ತರುವಾಯ ಮನದಟ್ಟಾದರೆ, ಸರ್ವೋಚ್ಚ ನ್ಯಾಯಾಲಯವು ಉಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯಗಳ ಮುಂದೆ ಇತ್ಯರ್ಥದಲ್ಲಿರುವ ಆ ಮೊಕದ್ದಮೆಯನ್ನು ಅಥವಾ ಮೊಕದ್ದಮೆಗಳನ್ನು ತರಿಸಿಕೊಳ್ಳಬಹುದು ಮತ್ತು ತಾನೇ ಆ ಎಲ್ಲ ಮೊಕದ್ದಮೆಗಳನ್ನು ವಿಲೆಮಾಡಬಹುದು:

1. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 24ನೆಯ ಪ್ರಕರಣದ ಮೂಲಕ (1-2-1977 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 21ನೆಯ ಪ್ರಕರಣದ ಮೂಲಕ (1)ನೆಯ ಖಂಡಕ್ಕೆ ಬದಲಾಗಿ (1.8.1979 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

ಪರಂತು, ಸರ್ವೋಚ್ಚ ನ್ಯಾಯಾಲಯವು, ಸದರಿ ಕಾನೂನು ಪ್ರಶ್ನೆಗಳನ್ನು ನಿರ್ಧರಿಸಿದ ತರುವಾಯ ಯಾವ ಉಚ್ಚ ನ್ಯಾಯಾಲಯದಿಂದ ಆ ಮೊಕದ್ದಮೆಯನ್ನು ತರಿಸಿಕೊಳ್ಳಲಾಗಿತ್ತೋ ಆ ಉಚ್ಚ ನ್ಯಾಯಾಲಯಕ್ಕೆ ಹಾಗೆ ತರಿಸಿಕೊಂಡಿದ್ದ ಯಾವುದೇ ಮೊಕದ್ದಮೆಯನ್ನು ಅಂಥ ಪ್ರಶ್ನೆಗಳ ಬಗ್ಗೆ ತನ್ನ ತೀರ್ಪಿನ ಒಂದು ಪ್ರತಿಯೊಡನೆ ವಾಪಸ್ಸು ಕಳುಹಿಸಬಹುದು ಮತ್ತು ಆ ಉಚ್ಚ ನ್ಯಾಯಾಲಯವು ಅದನ್ನು ಸ್ವೀಕರಿಸಿದ ಮೇಲೆ ಅಂಥ ತೀರ್ಪಿಗನುಸಾರವಾಗಿ ಮೊಕದ್ದಮೆಯನ್ನು ವಿಲೆ ಮಾಡಲು ಕ್ರಮ ಕೈಗೊಳ್ಳತಕ್ಕದ್ದು.]

(2) ಸರ್ವೋಚ್ಚ ನ್ಯಾಯಾಲಯವು, ಯಾವುದೇ ಉಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಮೊಕದ್ದಮೆಯನ್ನು, ಅಪೀಲನ್ನು ಅಥವಾ ಇತರ ವ್ಯವಹರಣೆಗಳನ್ನು ಇತರ ಯಾವುದೇ ಉಚ್ಚ ನ್ಯಾಯಾಲಯಕ್ಕೆ ವರ್ಗಾವಣೆ ಮಾಡುವುದು ನ್ಯಾಯೋದ್ದೇಶದಿಂದ ವಿಹಿತವೆಂದು ಭಾವಿಸಿದರೆ ಹಾಗೆ ವರ್ಗಾವಣೆ ಮಾಡಬಹುದು.]

**140. ಸರ್ವೋಚ್ಚ ನ್ಯಾಯಾಲಯದ ಪೂರಕ ಅಧಿಕಾರಗಳು:–** ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಪ್ರದಾನ ಮಾಡಿರುವ ಅಧಿಕಾರ ವ್ಯಾಪ್ತಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಚಲಾಯಿಸಲು ಸಾಧ್ಯವಾಗುವಂತೆ ಮಾಡುವ ಉದ್ದೇಶಕ್ಕಾಗಿ ಅವಶ್ಯವೆಂದು ಅಥವಾ ಅಪೇಕ್ಷಣೀಯವೆಂದು ತೋರಬಹುದಾದಂಥ ಮತ್ತು ಈ ಸಂವಿಧಾನದ ಯಾವುದೇ ಉಪಬಂಧಗಳಿಗೆ ಅಸಂಗತವಾಗಿಲ್ಲದಂಥ ಪೂರಕ ಅಧಿಕಾರಗಳನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಪ್ರದಾನ ಮಾಡಲು ಸಂಸತ್ತು ಕಾನೂನು ಮೂಲಕ ಉಪಬಂಧಿಸಬಹುದು.

**141.ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ಕಾನೂನಿಗೆ ಎಲ್ಲ ನ್ಯಾಯಾಲಯಗಳು ಬದ್ಧವಾಗಿರುವುದು:–** ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ಕಾನೂನಿಗೆ ಭಾರತದ ರಾಜ್ಯಕ್ಷೇತ್ರದಲ್ಲಿರುವ ಎಲ್ಲ ನ್ಯಾಯಾಲಯಗಳು ಬದ್ಧವಾಗಿರತಕ್ಕದ್ದು.

**142. ಸರ್ವೋಚ್ಚ ನ್ಯಾಯಾಲಯದ ಡಿಕ್ರಿಗಳ ಮತ್ತು ಆದೇಶಗಳ ಜಾರಿ ಮತ್ತು ಬಹಿರಂಗಪಡಿಸುವಿಕೆ, ಇತ್ಯಾದಿಗಳ ಬಗ್ಗೆ ಆದೇಶಗಳು:–** (1) ಸರ್ವೋಚ್ಚ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ, ತನ್ನ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ವ್ಯಾಜ್ಯದ ಬಗ್ಗೆ ಅಥವಾ ಇತರ ವಿಷಯದ ಬಗ್ಗೆ ಪೂರ್ಣನ್ಯಾಯವನ್ನು ದೊರಕಿಸುವುದಕ್ಕೆ ಅವಶ್ಯವಾದಂಥ ಡಿಕ್ರಿಯನ್ನು ಹೊರಡಿಸಬಹುದು ಅಥವಾ ಆದೇಶವನ್ನು ನೀಡಬಹುದು ಮತ್ತು ಹಾಗೆ ಹೊರಡಿಸಿದ ಡಿಕ್ರಿ ಅಥವಾ ಹಾಗೆ ನೀಡಿದ ಆದೇಶವು, ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಹಾಗೆ ಉಪಬಂಧವನ್ನು ಮಾಡುವವರೆಗೆ ರಾಷ್ಟ್ರಪತಿಯು [1]ಆದೇಶದ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ಭಾರತದ ರಾಜ್ಯಕ್ಷೇತ್ರದಾದ್ಯಂತ ಜಾರಿಗೊಳಿಸುವಂಥದ್ದಾಗಿರತಕ್ಕದ್ದು.

(2) ಸಂಸತ್ತು ಈ ಬಗ್ಗೆ ಯಾವುದೇ ಕಾನೂನಿನ ಮೂಲಕ ಮಾಡಿದ ಉಪಬಂಧಗಳಿಗೊಳಪಟ್ಟು, ಭಾರತದ ಸಮಸ್ತ ರಾಜ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯ ಹಾಜರಾತಿಯನ್ನು ಮತ್ತು ಯಾವುದೇ ದಸ್ತಾವೇಜುಗಳನ್ನು ಬಹಿರಂಗಪಡಿಸುವುದನ್ನು ಅಥವಾ ಹಾಜರುಪಡಿಸುವುದನ್ನು ಸುನಿಶ್ಚಿತಗೊಳಿಸುವ ಉದ್ದೇಶಕ್ಕಾಗಿ ಅಥವಾ ತನ್ನ ಯಾವುದೇ ನಿಂದನೆಯ ತನಿಖೆಯ ಅಥವಾ ದಂಡನೆಯ ಉದ್ದೇಶಕ್ಕಾಗಿ ಯಾವುದೇ ಆದೇಶ ಮಾಡಲು ಸರ್ವೋಚ್ಚ ನ್ಯಾಯಾಲಯವು ಎಲ್ಲ ಮತ್ತು ಪ್ರತಿಯೊಂದು ಅಧಿಕಾರವನ್ನು ಹೊಂದಿರತಕ್ಕದ್ದು.

**143. ಸರ್ವೋಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಲು ರಾಷ್ಟ್ರಪತಿಯ ಅಧಿಕಾರ:–** (1) ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ಪಡೆದುಕೊಳ್ಳುವುದು ವಿಹಿತವೆನಿಸುವಂಥ ಸ್ವರೂಪದ ಮತ್ತು ಸಾರ್ವಜನಿಕ ಮಹತ್ವವುಳ್ಳಂಥ ಕಾನೂನಿನ ಅಥವಾ ಸಂಗತಿಯ ಪ್ರಶ್ನೆಯು ಉದ್ಭವಿಸಿದೆ ಎಂದು ಅಥವಾ ಉದ್ಭವಿಸುವ ಸಂಭವ ಇದೆಯೆಂದು ಯಾವುದೇ ಕಾಲದಲ್ಲಿ ರಾಷ್ಟ್ರಪತಿಗೆ ಕಂಡುಬಂದರೆ, ಅವನು ಅದನ್ನು ನ್ಯಾಯಾಲಯದ ಪರ್ಯಾಲೋಚನೆಗಾಗಿ ಕಳಿಸಬಹುದು ಮತ್ತು ಆ ನ್ಯಾಯಾಲಯವು ಸೂಕ್ತವೆಂದು ಭಾವಿಸುವಂಥ ಸುನಾವಣೆ ಮಾಡಿದ ನಂತರ ಅದರ ಮೇಲೆ ತನ್ನ ಅಭಿಪ್ರಾಯವನ್ನು ರಾಷ್ಟ್ರಪತಿಗೆ ವರದಿ ಮಾಡಬಹುದು.

(2) 131ನೆಯ ಅನುಚ್ಛೇದದ [2]* * * ಪರಂತುಕದಲ್ಲಿ ಏನೇ ಇದ್ದಾಗ್ಯೂ, [3][ಆ ಪರಂತುಕದಲ್ಲಿ] ನಮೂದಾಗಿರುವಂಥ ಬಗೆಯ ವಿವಾದವನ್ನು ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯಕ್ಕಾಗಿ ರಾಷ್ಟ್ರಪತಿಯು ಕಳುಹಿಸಬಹುದು ಮತ್ತು ಸರ್ವೋಚ್ಚ ನ್ಯಾಯಾಲಯವು ಸೂಕ್ತವೆಂದು ಭಾವಿಸುವಂಥ ಸುನಾವಣೆ ಮಾಡಿದ ನಂತರ ಅದರ ಮೇಲೆ ತನ್ನ ಅಭಿಪ್ರಾಯವನ್ನು ರಾಷ್ಟ್ರಪತಿಗೆ ವರದಿ ಮಾಡತಕ್ಕದ್ದು.

---

1. 1954ನೆಯ ಇಸವಿಯ ಉಚ್ಚನ್ಯಾಯಾಲಯದ (ಡಿಕ್ರಿಗಳ ಮತ್ತು ಆದೇಶಗಳ) ಜಾರಿ ಆದೇಶವನ್ನು (ಸಿ.ಓ. 47) ನೋಡಿ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "(i)ನೆಯ ಖಂಡದಲ್ಲಿ" ಎಂಬ ಪದಗಳು, ಆವರಣಗಳು ಮತ್ತು ಅಂಕಿಯನ್ನು ಬಿಟ್ಟು ಬಿಡಲಾಗಿದೆ.
3. ಅದೇ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಆ ಖಂಡದಲ್ಲಿ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

**144. ಸಿವಿಲ್ ಮತ್ತು ನ್ಯಾಯಿಕ ಪ್ರಾಧಿಕಾರಿಗಳು ಸರ್ವೋಚ್ಚ ನ್ಯಾಯಾಲಯಕ್ಕೆ ಸಹಾಯಕರಾಗಿ ಕೆಲಸ ಮಾಡುವುದು:**- ಭಾರತದ ರಾಜ್ಯಕ್ಷೇತ್ರದ ಸಮಸ್ತ ಸಿವಿಲ್ ಮತ್ತು ನ್ಯಾಯಿಕ ಪ್ರಾಧಿಕಾರಿಗಳು ಸರ್ವೋಚ್ಚ ನ್ಯಾಯಾಲಯಕ್ಕೆ ಸಹಾಯಕರಾಗಿ ಕೆಲಸ ಮಾಡತಕ್ಕದ್ದು.

[1]***144ಎ. [ಕಾನೂನುಗಳ ಸಂವಿಧಾನಾತ್ಮಕ ಸಿಂಧುತ್ವಕ್ಕೆ ಸಂಬಂಧಪಟ್ಟ ಪ್ರಶ್ನೆಗಳ ವಿಲೆಗೆ ಸಂಬಂಧಿಸಿದ ವಿಶೇಷ ಉಪಬಂಧಗಳು.] ಸಂವಿಧಾನ (ನಲವತ್ತೂರನೆಯ ತಿದ್ದುಪಡಿ) ಅಧಿನಿಯಮ, 1977ರ 5ನೆಯ ಪ್ರಕರಣದ ಮೂಲಕ (13-4-78ರಿಂದ ಜಾರಿಗೆ ಬರುವಂತೆ) ನಿರಸಿತವಾಗಿದೆ.***

**145. ನ್ಯಾಯಾಲಯದ ನಿಯಮಗಳು, ಇತ್ಯಾದಿ:**- (1) ಸಂಸತ್ತು ಮಾಡಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ಸರ್ವೋಚ್ಚ ನ್ಯಾಯಾಲಯವು ಕಾಲಕಾಲಕ್ಕೆ ರಾಷ್ಟ್ರಪತಿಯ ಅನುಮೋದನೆ ಪಡೆದು ನ್ಯಾಯಾಲಯದ ಪದ್ಧತಿಯನ್ನು ಮತ್ತು ಪ್ರಕ್ರಿಯೆಯನ್ನು ಸಾಮಾನ್ಯವಾಗಿ ವಿನಿಯಮಗೊಳಿಸಲು ನಿಯಮಗಳನ್ನು ರಚಿಸಬಹುದು ಮತ್ತು ಆ ನಿಯಮಗಳಲ್ಲಿ ಈ ಕೆಳಕಂಡ ನಿಯಮಗಳೂ ಒಳಗೊಂಡಿರಬಹುದು,-

(ಎ) ಆ ನ್ಯಾಯಾಲಯದ ಮುಂದೆ ನ್ಯಾಯವಾದಿ ವೃತ್ತಿಯನ್ನು ನಡೆಸುವವರಿಗೆ ಸಂಬಂಧಿಸಿದ ನಿಯಮಗಳು;

(ಬಿ) ಅಪೀಲುಗಳ ಸುನಾವಣೆಯ ಪ್ರಕ್ರಿಯೆಗೆ ಸಂಬಂಧಿಸಿದ ಮತ್ತು ಆ ನ್ಯಾಯಾಲಯಕ್ಕೆ ಅಪೀಲುಗಳನ್ನು ಯಾವ ಕಾಲದೊಳಗಾಗಿ ದಾಖಲು ಮಾಡಬೇಕೆಂಬುದೂ ಸೇರಿದಂತೆ ಅಪೀಲುಗಳಿಗೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ನಿಯಮಗಳು;

(ಸಿ) IIIನೆಯ ಭಾಗದ ಮೂಲಕ ಪ್ರದಾನ ಮಾಡಲಾಗಿರುವ ಹಕ್ಕುಗಳಲ್ಲಿ ಯಾವುದೇ ಹಕ್ಕನ್ನು ಜಾರಿಗೊಳಿಸುವುದಕ್ಕಾಗಿ ಆ ನ್ಯಾಯಾಲಯದ ವ್ಯವಹರಣೆಗಳಿಗೆ ಸಂಬಂಧಿಸಿದ ನಿಯಮಗಳು;

[2][(ಸಿಸಿ) [3][139ಎ ಅನುಚ್ಛೇದದ] ಮೇರೆಗೆ ನ್ಯಾಯಾಲಯದ ವ್ಯವಹರಣೆಗಳಿಗೆ ಸಂಬಂಧಿಸಿದ ನಿಯಮಗಳು;]

(ಡಿ) 134ನೆಯ ಅನುಚ್ಛೇದದ (1)ನೆಯ ಖಂಡದ (ಸಿ) ಉಪಖಂಡದ ಮೇರೆಗೆ ಅಪೀಲುಗಳನ್ನು ಸ್ವೀಕರಿಸುವುದಕ್ಕೆ ಸಂಬಂಧಪಟ್ಟ ನಿಯಮಗಳು;

(ಇ) ಯಾವ ಷರತ್ತುಗಳಿಗೆ ಒಳಪಟ್ಟು, ನ್ಯಾಯಾಲಯವು ನೀಡಿದ ಯಾವುದೇ ತೀರ್ಪು ಅಥವಾ ಮಾಡಿದ ಆದೇಶವನ್ನು ಪುನರವಲೋಕನ ಮಾಡಬಹುದೋ ಆ ಷರತ್ತುಗಳಿಗೆ ಸಂಬಂಧಿಸಿದ ನಿಯಮಗಳು ಮತ್ತು ಅಂಥ ಪುನರವಲೋಕನಕ್ಕಾಗಿ ಯಾವ ಕಾಲದೊಳಗಾಗಿ ಅರ್ಜಿಗಳನ್ನು ನ್ಯಾಯಾಲಯಕ್ಕೆ ದಾಖಲು ಮಾಡಬೇಕೆಂಬುದೂ ಒಳಗೊಂಡಂತೆ, ಅಂಥ ಪುನರವಲೋಕನದ ಪ್ರಕ್ರಿಯೆಗೆ ಸಂಬಂಧಿಸಿದ ನಿಯಮಗಳು;

(ಎಫ್) ನ್ಯಾಯಾಲಯದಲ್ಲಿ ನಡೆಯುವ ಯಾವುದೇ ವ್ಯವಹರಣೆಗಳಿಗೆ ಮತ್ತು ಅವುಗಳಿಗೆ ಪ್ರಾಸಂಗಿಕವಾದ ಖರ್ಚುಗಳಿಗೆ ಸಂಬಂಧಪಟ್ಟ ಮತ್ತು ಅಲ್ಲಿನ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ವಿಧಿಸಬೇಕಾದ ಫೀಜುಗಳಿಗೆ ಸಂಬಂಧಪಟ್ಟ ನಿಯಮಗಳು;

(ಜಿ) ಜಾಮೀನಿನ ಮಂಜೂರಾತಿಗೆ ಸಂಬಂಧಿಸಿದ ನಿಯಮಗಳು;

(ಹೆಚ್) ವ್ಯವಹರಣೆಗಳ ತಡೆಗೆ ಸಂಬಂಧಿಸಿದ ನಿಯಮಗಳು;

(ಐ) ಯಾವ ಅಪೀಲು ಕ್ಷುಲ್ಲಕವಾದುದೆಂದು ಅಥವಾ ಕಿರುಕುಳ ಕೊಡುವಂಥದ್ದಾಗಿದೆಯೆಂದು ಅಥವಾ ವಿಳಂಬಗೊಳಿಸುವ ಉದ್ದೇಶದಿಂದ ಸಲ್ಲಿಸಲಾದದ್ದೆಂದು ಆ ನ್ಯಾಯಾಲಯಕ್ಕೆ ತೋರಿಬರುವುದೋ ಆ ಯಾವುದೇ ಅಪೀಲಿನ ಕ್ಷಿಪ್ರ ನಿರ್ಧರಣೆಗೆ ಅವಕಾಶ ಮಾಡಿಕೊಡುವ ನಿಯಮಗಳು;

(ಜೆ) 317ನೆಯ ಅನುಚ್ಛೇದದ (1)ನೆಯ ಖಂಡದಲ್ಲಿ ಉಲ್ಲೇಖಿಸಲಾಗಿರುವ ವಿಚಾರಣೆಗಳ ಪ್ರಕ್ರಿಯೆಗೆ ಸಂಬಂಧಿಸಿದ ನಿಯಮಗಳು.

---

1. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 25ನೇ ಪ್ರಕರಣದ ಮೂಲಕ (1-2-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 26ನೇ ಪ್ರಕರಣದ ಮೂಲಕ (1-2-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1977ನೆಯ ಇಸವಿಯ ಸಂವಿಧಾನ (ನಲವತ್ತೂರನೆಯ ತಿದ್ದುಪಡಿ) ಅಧಿನಿಯಮದ 6ನೇ ಪ್ರಕರಣದ ಮೂಲಕ "131ಎ ಮತ್ತು 139ಎ ಅನುಚ್ಛೇದಗಳ" ಎಂಬ ಪದಗಳ, ಅಂಕಿಗಳ ಮತ್ತು ಅಕ್ಷರಗಳ ಬದಲಾಗಿ (13-4-78ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

(2) [1][(3)ನೆಯ ಖಂಡದ [2]* * * * ಉಪಬಂಧಗಳಿಗೆ] ಒಳಪಟ್ಟು, ಈ ಅನುಚ್ಛೇದದ ಮೇರೆಗೆ ರಚಿಸಿದ ನಿಯಮಗಳು, ಯಾವುದೇ ಉದ್ದೇಶಕ್ಕಾಗಿ ಉಪವೇಶನದಲ್ಲಿರಬೇಕಾದ ನ್ಯಾಯಾಧೀಶರ ಕನಿಷ್ಠ ಸಂಖ್ಯೆಯನ್ನು ಗೊತ್ತುಪಡಿಸಬಹುದು ಮತ್ತು ಏಕ ನ್ಯಾಯಾಧೀಶನ ಹಾಗೂ ವಿಭಾಗೀಯ ನ್ಯಾಯಾಲಯಗಳ ಅಧಿಕಾರಗಳ ಬಗ್ಗೆ ಉಪಬಂಧಿಸಬಹುದು.

(3) ಈ ಸಂವಿಧಾನದ ಅರ್ಥವಿವರಣೆಗೆ ಸಂಬಂಧಿಸಿದಂತೆ ಮುಖ್ಯವಾದ ಕಾನೂನು ಪ್ರಶ್ನೆಯನ್ನು ಒಳಗೊಂಡಿರುವ ಯಾವುದೇ ಪ್ರಕರಣವನ್ನು ತೀರ್ಮಾನಿಸುವ ಉದ್ದೇಶಕ್ಕಾಗಿ ಉಪವೇಶನದಲ್ಲಿರಬೇಕಾದ ಅಥವಾ ಈ ಸಂವಿಧಾನದ 143ನೆಯ ಅನುಚ್ಛೇದದ ಮೇರೆಗಿನ ಯಾವುದೇ ಅಭಿಪ್ರಾಯ ಕೋರಿಕೆಯ ಸುನಾವಣೆಯ ಉದ್ದೇಶಕ್ಕಾಗಿ ಉಪವೇಶನದಲ್ಲಿರಬೇಕಾದ ನ್ಯಾಯಾಧೀಶರ [3][[2]* * * ಕನಿಷ್ಠ ಸಂಖ್ಯೆಯು] ಐದು ಆಗಿರತಕ್ಕದ್ದು:

ಪರಂತು, ಈ ಅಧ್ಯಾಯದ 132ನೆಯ ಅನುಚ್ಛೇದವನ್ನು ಹೊರತುಪಡಿಸಿ ಇತರ ಯಾವುದೇ ಉಪಬಂಧಗಳ ಮೇರೆಗೆ ಅಪೀಲನ್ನು ಸುನಾವಣೆ ಮಾಡುವ ಆ ನ್ಯಾಯಾಲಯದಲ್ಲಿ ಐದಕ್ಕಿಂತಲೂ ಕಡಿಮೆ ನ್ಯಾಯಾಧೀಶರಿದ್ದು ಅಪೀಲು ಸುನಾವಣೆ ಕಾಲದಲ್ಲಿ ಆ ಅಪೀಲು ಈ ಸಂವಿಧಾನದ ಅರ್ಥ ವಿವರಣೆಗೆ ಸಂಬಂಧಪಟ್ಟ ಮುಖ್ಯವಾದ ಕಾನೂನು ಪ್ರಶ್ನೆಯನ್ನು ಒಳಗೊಂಡಿದೆಯೆಂದು ಮತ್ತು ಅಪೀಲನ್ನು ವಿಲೆಮಾಡಲು ತನ್ನ ನಿರ್ಧರಣೆಯು ಅವಶ್ಯವೆಂದು ನ್ಯಾಯಾಲಯಕ್ಕೆ ಮನದಟ್ಟಾದರೆ, ಆ ನ್ಯಾಯಾಲಯವು ಅಂಥ ಪ್ರಶ್ನೆಯನ್ನು ಒಳಗೊಂಡಿರುವ ಯಾವುದೇ ಮೊಕದ್ದಮೆಯನ್ನು ತೀರ್ಮಾನ ಮಾಡುವ ಉದ್ದೇಶಕ್ಕಾಗಿ ಈ ಖಂಡವು ಅಗತ್ಯಪಡಿಸಿರುವಂತೆ ರಚಿತವಾಗಿರುವ ನ್ಯಾಯಾಲಯಕ್ಕೆ ಆ ಪ್ರಶ್ನೆಯನ್ನು ಅದರ ಅಭಿಪ್ರಾಯಕ್ಕಾಗಿ ಕಳಿಸಿಕೊಡತಕ್ಕದ್ದು ಮತ್ತು ಆ ಅಭಿಪ್ರಾಯವು ತಲುಪಿದ ಮೇಲೆ ಅಂಥ ಅಭಿಪ್ರಾಯಕ್ಕನುಸಾರವಾಗಿ ಅಪೀಲನ್ನು ವಿಲೆ ಮಾಡತಕ್ಕದ್ದು.

(4) ಸರ್ವೋಚ್ಚ ನ್ಯಾಯಾಲಯವು ಯಾವುದೇ ತೀರ್ಪನ್ನು ಬಹಿರಂಗ ನ್ಯಾಯಾಲಯದಲ್ಲಿ ಹೊರತು ಅನ್ಯಥಾ ಕೊಡತಕ್ಕದ್ದಲ್ಲ ಮತ್ತು ಬಹಿರಂಗ ನ್ಯಾಯಾಲಯದಲ್ಲಿ ಕೊಟ್ಟ ಅಭಿಪ್ರಾಯಕ್ಕೆ ಅನುಸಾರವಾಗಿಯಲ್ಲದೆ 143ನೆಯ ಅನುಚ್ಛೇದದ ಮೇರೆಗೆ ಯಾವುದೇ ವರದಿಯನ್ನು ಮಾಡತಕ್ಕದ್ದಲ್ಲ.

(5) ಸರ್ವೋಚ್ಚ ನ್ಯಾಯಾಲಯವು ಯಾವುದೇ ತೀರ್ಪನ್ನು ಮತ್ತು ಅಂಥ ಯಾವುದೇ ಅಭಿಪ್ರಾಯವನ್ನು, ಆ ಪ್ರಕರಣದ ಸುನಾವಣೆಯಲ್ಲಿ ಹಾಜರಿರುವ ನ್ಯಾಯಾಧೀಶರ ಬಹುಮತದ ಸಹಮತಿಯಿಂದ ಹೊರತು ಅನ್ಯಥಾ ಕೊಡತಕ್ಕದ್ದಲ್ಲ; ಆದರೆ ಈ ಖಂಡದಲ್ಲಿ ಇರುವುದು ಯಾವುದೂ ಸಹಮತಿಸದಿರುವ ನ್ಯಾಯಾಧೀಶನನ್ನು ತನ್ನ ಭಿನ್ನಾಭಿಪ್ರಾಯದ ತೀರ್ಪನ್ನು ಅಥವಾ ತನ್ನ ಭಿನ್ನಾಭಿಪ್ರಾಯವನ್ನು ಕೊಡದಂತೆ ಪ್ರತಿಬಂಧಿಸುತ್ತದೆ ಎಂದು ಭಾವಿಸತಕ್ಕದ್ದಲ್ಲ.

**146. ಸರ್ವೋಚ್ಚ ನ್ಯಾಯಾಲಯದ ಅಧಿಕಾರಿಗಳು ಮತ್ತು ನೌಕರರು ಹಾಗೂ ವೆಚ್ಚಗಳು:-** (1) ಸರ್ವೋಚ್ಚ ನ್ಯಾಯಾಲಯದ ಅಧಿಕಾರಿಗಳ ಮತ್ತು ನೌಕರರ ನೇಮಕಗಳನ್ನು ಭಾರತದ ಮುಖ್ಯ ನ್ಯಾಯಮೂರ್ತಿಯು ಅಥವಾ ಅವನು ನಿರ್ದೇಶಿಸಬಹುದಾದಂಥ ಆ ನ್ಯಾಯಾಲಯದ ಇತರ ನ್ಯಾಯಾಧೀಶನು ಅಥವಾ ಅಧಿಕಾರಿಯು ಮಾಡತಕ್ಕದ್ದು:

ಪರಂತು, ರಾಷ್ಟ್ರಪತಿಯು ನಿಯಮದ ಮೂಲಕ, ಆ ನಿಯಮದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭಗಳಲ್ಲಿ ಆ ನ್ಯಾಯಾಲಯಕ್ಕೆ ಆ ಮೊದಲೇ ಸೇರಿಲ್ಲದ ಯಾರೇ ವ್ಯಕ್ತಿಯನ್ನು, ಕೇಂದ್ರ ಲೋಕಸೇವಾ ಆಯೋಗದೊಡನೆ ಸಮಾಲೋಚನೆ ಮಾಡಿದ ಹೊರತು ಆ ನ್ಯಾಯಾಲಯಕ್ಕೆ ಸಂಬಂಧಪಟ್ಟ ಯಾವುದೇ ಪದಕ್ಕೆ ನೇಮಕ ಮಾಡತಕ್ಕದ್ದಲ್ಲವೆಂದು ಅಗತ್ಯಪಡಿಸಬಹುದು.

(2) ಸಂಸತ್ತು ಮಾಡಿದ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು, ಸರ್ವೋಚ್ಚ ನ್ಯಾಯಾಲಯದ ಅಧಿಕಾರಿಗಳ ಮತ್ತು ನೌಕರರ ಸೇವಾ ಷರತ್ತುಗಳು, ಭಾರತದ ಮುಖ್ಯ ನ್ಯಾಯಮೂರ್ತಿಯು ಅಥವಾ ಆ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಲು ಅವನು ಅಧಿಕೃತಗೊಳಿಸಿದ ಆ ನ್ಯಾಯಾಲಯದ ಇತರ ನ್ಯಾಯಾಧೀಶನು ಅಥವಾ ಅಧಿಕಾರಿಯು ರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಈ ಖಂಡದ ಮೇರೆಗೆ ರಚಿತವಾದ ನಿಯಮಗಳು ಸಂಬಳಗಳಿಗೆ, ಭತ್ಯಗಳಿಗೆ, ರಜೆಗೆ ಅಥವಾ ನಿವೃತ್ತಿ ವೇತನಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಆ ನಿಯಮಗಳಿಗೆ ರಾಷ್ಟ್ರಪತಿಯ ಅನುಮೋದನೆಯು ಅಗತ್ಯವಾಗಿರತಕ್ಕದ್ದು.

1. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 26ನೆ ಪ್ರಕರಣದ ಮೂಲಕ "(3)ನೇ ಖಂಡದ ಉಪಬಂಧಗಳಿಗೆ" ಎಂಬುದಕ್ಕೆ ಬದಲಾಗಿ (1-2-1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1977ನೆಯ ಇಸವಿಯ ಸಂವಿಧಾನ (ನಲವತ್ತೂರನೆಯ ತಿದ್ದುಪಡಿ) ಅಧಿನಿಯಮದ 6ನೇ ಪ್ರಕರಣದ ಮೂಲಕ ಕೆಲವು ಪದಗಳನ್ನು, ಅಂಕಿಗಳನ್ನು ಮತ್ತು ಅಕ್ಷರವನ್ನು (13-4-78ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
3. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 26ನೆಯ ಪ್ರಕರಣದ ಮೂಲಕ "ಕನಿಷ್ಠ ಸಂಖ್ಯೆಯು" ಎಂಬ ಪದಗಳಿಗೆ ಬದಲಾಗಿ (1-2-1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

(3) ಸರ್ವೋಚ್ಚ ನ್ಯಾಯಾಲಯದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಅಥವಾ ಅವರಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಾದ ಎಲ್ಲ ಸಂಬಳಗಳು, ಭತ್ಯಗಳು ಮತ್ತು ನಿವೃತ್ತಿವೇತನಗಳು ಸೇರಿದಂತೆ ಆ ನ್ಯಾಯಾಲಯದ ಆಡಳಿತ ವೆಚ್ಚವನ್ನು ಭಾರತದ ಸಂಚಿತ ನಿಧಿಯ ಮೇಲೆ ಹೊರಿಸತಕ್ಕದ್ದು ಮತ್ತು ಆ ನ್ಯಾಯಾಲಯವು ಸ್ವೀಕರಿಸುವ ಯಾವುದೇ ಫೀಜುಗಳು ಮತ್ತು ಇತರ ಹಣವು ಆ ನಿಧಿಯ ಭಾಗವಾಗಿರತಕ್ಕದ್ದು.

**147. ಅರ್ಥ ವಿವರಣೆ:-** ಈ ಅಧ್ಯಾಯದಲ್ಲಿ ಮತ್ತು VIನೇ ಭಾಗದ Vನೇ ಅಧ್ಯಾಯದಲ್ಲಿ ಈ ಸಂವಿಧಾನದ ಅರ್ಥ ವಿವರಣೆಗೆ ಸಂಬಂಧಿಸಿದ ಯಾವುದೇ ಮುಖ್ಯ ಕಾನೂನು ಪ್ರಶ್ನೆಯ ಉಲ್ಲೇಖಗಳು, 1935ನೆಯ ಇಸವಿಯ ಭಾರತ ಸರ್ಕಾರ ಅಧಿನಿಯಮದ (ಆ ಅಧಿನಿಯಮವನ್ನು ತಿದ್ದುಪಡಿ ಮಾಡುವ ಅಥವಾ ಅದಕ್ಕೆ ಸೇರ್ಪಡೆ ಮಾಡುವ ಯಾವುದೇ ಅಧಿನಿಯಮವೂ ಸೇರಿದಂತೆ) ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶದ ಅಥವಾ ಮಂತ್ರಾಲೋಚನಾ ಸಭೆಯ ಯಾವುದೇ ಆದೇಶದ ಅಥವಾ 1947ರ ಭಾರತ ಸ್ವಾತಂತ್ರ್ಯ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶದ ಅರ್ಥ ವಿವರಣೆಗೆ ಸಂಬಂಧಪಟ್ಟ ಯಾವುದೇ ಮುಖ್ಯ ಕಾನೂನು ಪ್ರಶ್ನೆಯ ಉಲ್ಲೇಖಗಳನ್ನೂ ಒಳಗೊಂಡಿರುವ ಹಾಗೆ ಅವುಗಳನ್ನು ಅರ್ಥೈಸತಕ್ಕದ್ದು.

## ಅಧ್ಯಾಯ V - ಭಾರತದ ಲೆಕ್ಕ ನಿಯಂತ್ರಕ- ಹಾಗೂ- ಮಹಾ ಲೆಕ್ಕಪರಿಶೋಧಕ

**148. ಭಾರತದ ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕ:-** (1) ಭಾರತಕ್ಕೆ ಒಬ್ಬ ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕ ಇರತಕ್ಕದ್ದು. ಅವನನ್ನು ರಾಷ್ಟ್ರಪತಿಯು ತಾನು ಸಹಿ ಮಾಡಿ ಮೊಹರು ಹಾಕಿದ ವಾರಂಟಿನ ಮೂಲಕ ನೇಮಕ ಮಾಡತಕ್ಕದ್ದು ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ತೆಗೆದುಹಾಕಬಹುದಾದಂಥ ರೀತಿಯಲ್ಲಿ ಮತ್ತು ಅಂಥವೇ ಕಾರಣಗಳ ಮೇಲೆ ಮಾತ್ರ ಪದದಿಂದ ತೆಗೆದುಹಾಕತಕ್ಕದ್ದು.

(2) ಭಾರತದ ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕನಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯು ತನ್ನ ಪದವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ರಾಷ್ಟ್ರಪತಿಯ ಮುಂದೆ ಅಥವಾ ರಾಷ್ಟ್ರಪತಿಯು ಆ ಬಗ್ಗೆ ನೇಮಕ ಮಾಡಿದ ಒಬ್ಬ ವ್ಯಕ್ತಿಯ ಮುಂದೆ ಮೂರನೆಯ ಅನುಸೂಚಿಯಲ್ಲಿ ಆ ಉದ್ದೇಶಕ್ಕಾಗಿ ಕೊಟ್ಟಿರುವ ನಮೂನೆಗೆ ಅನುಸಾರವಾಗಿ ಪ್ರಮಾಣ ಅಥವಾ ಪ್ರತಿಜ್ಞೆ ಮಾಡತಕ್ಕದ್ದು ಮತ್ತು ಅದಕ್ಕೆ ತನ್ನ ರುಜು ಹಾಕತಕ್ಕದ್ದು.

(3) ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕನ ಸಂಬಳ ಮತ್ತು ಇತರ ಸೇವಾ ಷರತ್ತುಗಳು ಸಂಸತ್ತು ಕಾನೂನಿನ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ಅವು ಹಾಗೆ ನಿರ್ಧಾರವಾಗುವವರೆಗೆ ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಇರತಕ್ಕದ್ದು:

ಪರಂತು, ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕನ ನೇಮಕದ ತರುವಾಯ ಅವನ ಸಂಬಳವನ್ನಾಗಲಿ ಅಥವಾ ಗೈರು ಹಾಜರಿ ರಜೆ, ನಿವೃತ್ತಿ ವೇತನ ಅಥವಾ ನಿವೃತ್ತಿ ವಯಸ್ಸಿಗೆ ಸಂಬಂಧಿಸಿದಂಥ ಅವನ ಹಕ್ಕುಗಳನ್ನಾಗಲಿ, ಅವನಿಗೆ ಅನನುಕೂಲವಾಗುವಂತೆ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

(4) ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕನು ತನ್ನ ಪದಧಾರಣೆ ಮಾಡಿರುವುದು ನಿಂತು ಹೋದ ತರುವಾಯ ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿನ ಯಾವುದೇ ಪದಕ್ಕೆ ಮತ್ತೆ ಅರ್ಹನಾಗತಕ್ಕದ್ದಲ್ಲ.

(5) ಈ ಸಂವಿಧಾನದ ಮತ್ತು ಸಂಸತ್ತು ಮಾಡಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ಭಾರತೀಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳ ಸೇವಾ ಷರತ್ತುಗಳು, ಮತ್ತು ಲೆಕ್ಕನಿಯಂತ್ರಕ ಹಾಗೂ ಮಹಾ ಲೆಕ್ಕಪರಿಶೋಧಕನ ಆಡಳಿತ ಅಧಿಕಾರಗಳು, ರಾಷ್ಟ್ರಪತಿಯು ಲೆಕ್ಕ ನಿಯಂತ್ರಕ ಹಾಗೂ ಮಹಾ ಲೆಕ್ಕಪರಿಶೋಧಕನೊಡನೆ ಸಮಾಲೋಚಿಸಿದ ಬಳಿಕ ರಚಿಸುವ ನಿಯಮಗಳ ಮೂಲಕ ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

(6) ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕನ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳಿಗೆ ಅಥವಾ ಅವರಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಾದ ಎಲ್ಲ ಸಂಬಳಗಳು, ಭತ್ಯಗಳು ಮತ್ತು ನಿವೃತ್ತಿ ವೇತನಗಳೂ ಸೇರಿ ಆ ಕಚೇರಿಯ ಆಡಳಿತ ವೆಚ್ಚಗಳನ್ನು ಭಾರತದ ಸಂಚಿತ ನಿಧಿಯ ಮೇಲೆ ಹೊರಿಸತಕ್ಕದ್ದು.

**149. ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕ ಪರಿಶೋಧಕನ ಕರ್ತವ್ಯಗಳು ಮತ್ತು ಅಧಿಕಾರಗಳು:-** ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕ ಪರಿಶೋಧಕನು, ಒಕ್ಕೂಟದ ಮತ್ತು ರಾಜ್ಯಗಳ ಮತ್ತು ಇತರ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಲೆಕ್ಕಗಳ ಸಂಬಂಧದಲ್ಲಿ ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಆ ಬಗ್ಗೆ ಹಾಗೆ ಉಪಬಂಧಿಸುವವರೆಗೆ ಒಕ್ಕೂಟದ ಮತ್ತು ರಾಜ್ಯಗಳ ಲೆಕ್ಕಗಳ ಸಂಬಂಧದಲ್ಲಿ, ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಅನುಕ್ರಮವಾಗಿ ಡೊಮಿನಿಯನ್ ಆಫ್ ಇಂಡಿಯಾದ ಮತ್ತು ಪ್ರಾಂತಗಳ ಲೆಕ್ಕಗಳಿಗೆ ಸಂಬಂಧಿಸಿದಂತೆ ಭಾರತದ ಮಹಾ ಲೆಕ್ಕಪರಿಶೋಧಕನಿಗೆ ಪ್ರದಾನ ಮಾಡಿದ್ದಂಥ ಅಥವಾ ಅವನು ಚಲಾಯಿಸಬಹುದಾಗಿದ್ದಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು.

[1][**150. ಒಕ್ಕೂಟದ ಮತ್ತು ರಾಜ್ಯಗಳ ಲೆಕ್ಕಗಳ ನಮೂನೆ:-** ಭಾರತದ ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕ ಪರಿಶೋಧಕನ [2][ಸಲಹೆಯ ಮೇರೆಗೆ] ರಾಷ್ಟ್ರಪತಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಒಕ್ಕೂಟದ ಮತ್ತು ರಾಜ್ಯಗಳ ಲೆಕ್ಕಗಳನ್ನು ಇಡತಕ್ಕದ್ದು.]

**151. ಲೆಕ್ಕ ಪರಿಶೋಧನ ವರದಿಗಳು:-** (1) ಒಕ್ಕೂಟದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಭಾರತದ ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕ ಪರಿಶೋಧಕನ ವರದಿಗಳನ್ನು ರಾಷ್ಟ್ರಪತಿಗೆ ಒಪ್ಪಿಸತಕ್ಕದ್ದು; ರಾಷ್ಟ್ರಪತಿಯು ಆ ವರದಿಗಳನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

(2) ಒಂದು ರಾಜ್ಯದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಭಾರತದ ಲೆಕ್ಕ ನಿಯಂತ್ರಕ- ಹಾಗೂ- ಮಹಾ ಲೆಕ್ಕ ಪರಿಶೋಧಕನ ವರದಿಗಳನ್ನು ಆ ರಾಜ್ಯದ ರಾಜ್ಯಪಾಲನಿಗೆ [3]* * * ಒಪ್ಪಿಸತಕ್ಕದ್ದು ಮತ್ತು ಆ ರಾಜ್ಯದ ರಾಜ್ಯಪಾಲನು ಅವುಗಳನ್ನು ಆ ರಾಜ್ಯದ ವಿಧಾನಮಂಡಲದ ಮುಂದೆ ಇಡುವಂತೆ ಮಾಡತಕ್ಕದ್ದು.

---

1. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 27ನೇ ಪ್ರಕರಣದ ಮೂಲಕ 150ನೆಯ ಅನುಚ್ಛೇದಕ್ಕೆ ಬದಲಾಗಿ (1-4-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

2. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 22ನೇ ಪ್ರಕರಣದ ಮೂಲಕ "ಸಮಾಲೋಚಿಸಿದ ಬಳಿಕ" ಎಂಬ ಪದಗಳಿಗೆ ಬದಲಾಗಿ (20-6-79ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

3. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ, "ಅಥವಾ ರಾಜಪ್ರಮುಖನಿಗೆ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

# ಭಾಗ – VI

## [1]*** ರಾಜ್ಯಗಳು

## ಅಧ್ಯಾಯ I – ಸಾಮಾನ್ಯ

**152. ಪರಿಭಾಷೆ:–** ಈ ಭಾಗದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು "ರಾಜ್ಯ" ಎಂಬ ಪದವು [2][ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಒಳಗೊಳ್ಳುವುದಿಲ್ಲ].

## ಅಧ್ಯಾಯ II – ಕಾರ್ಯಾಂಗ

### ರಾಜ್ಯಪಾಲ

**153. ರಾಜ್ಯಗಳ ರಾಜ್ಯಪಾಲರು:–** ಪ್ರತಿಯೊಂದು ರಾಜ್ಯಕ್ಕೂ ಒಬ್ಬ ರಾಜ್ಯಪಾಲನಿರತಕ್ಕದ್ದು:

[3][ಪರಂತು, ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಒಬ್ಬನೇ ವ್ಯಕ್ತಿಯನ್ನು ಎರಡು ಅಥವಾ ಹೆಚ್ಚು ರಾಜ್ಯಗಳಿಗೆ ರಾಜ್ಯಪಾಲನನ್ನಾಗಿ ನೇಮಿಸುವುದನ್ನು ಪ್ರತಿಬಂಧಿಸತಕ್ಕದ್ದಲ್ಲ.]

**154. ರಾಜ್ಯದ ಕಾರ್ಯಾಂಗ ಅಧಿಕಾರ:–** (1) ರಾಜ್ಯದ ಕಾರ್ಯಾಂಗ ಅಧಿಕಾರವು ರಾಜ್ಯಪಾಲನಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಅವನು ಅದನ್ನು ನೇರವಾಗಿ ಅಥವಾ ತನಗೆ ಅಧೀನರಾದ ಅಧಿಕಾರಿಗಳ ಮೂಲಕ ಈ ಸಂವಿಧಾನಕ್ಕನುಸಾರವಾಗಿ ಚಲಾಯಿಸತಕ್ಕದ್ದು.

(2) ಈ ಅನುಚ್ಛೇದದಲ್ಲಿ ಇರುವುದು ಯಾವುದೂ,–

(ಎ) ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಮೂಲಕ ಇತರ ಯಾವುದೇ ಪ್ರಾಧಿಕಾರಕ್ಕೆ ಪ್ರದಾನ ಮಾಡಿರುವ ಯಾವುದೇ ಪ್ರಕಾರ್ಯಗಳನ್ನು ರಾಜ್ಯಪಾಲನಿಗೆ ವರ್ಗಾಯಿಸುತ್ತದೆಂದು ಭಾವಿಸತಕ್ಕದ್ದಲ್ಲ; ಅಥವಾ

(ಬಿ) ರಾಜ್ಯಪಾಲನಿಗೆ ಅಧೀನವಾಗಿರುವ ಯಾವುದೇ ಪ್ರಾಧಿಕಾರಕ್ಕೆ ಸಂಸತ್ತು ಅಥವಾ ರಾಜ್ಯದ ವಿಧಾನ ಮಂಡಲವು ಕಾನೂನಿನ ಮೂಲಕ ಪ್ರಕಾರ್ಯಗಳನ್ನು ಪ್ರದಾನ ಮಾಡುವುದನ್ನು ಪ್ರತಿಬಂಧಿಸತಕ್ಕದ್ದಲ್ಲ.

**155. ರಾಜ್ಯಪಾಲನ ನೇಮಕ:–** ರಾಷ್ಟ್ರಪತಿಯು ಒಂದು ರಾಜ್ಯದ ರಾಜ್ಯಪಾಲನನ್ನು, ತಾನು ಸಹಿ ಮಾಡಿ ಮೊಹರು ಹಾಕಿದ ವಾರಂಟಿನ ಮೂಲಕ ನೇಮಕ ಮಾಡತಕ್ಕದ್ದು.

**156. ರಾಜ್ಯಪಾಲನ ಪದಾವಧಿ:–** (1) ರಾಜ್ಯಪಾಲನು ರಾಷ್ಟ್ರಪತಿಯ ಇಷ್ಟಪರ್ಯಂತ ಪದದಲ್ಲಿರತಕ್ಕದ್ದು.

(2) ರಾಜ್ಯಪಾಲನು ತಾನು ಸಹಿ ಮಾಡಿದ ಪತ್ರವನ್ನು ರಾಷ್ಟ್ರಪತಿಗೆ ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು.

(3) ಈ ಅನುಚ್ಛೇದದಲ್ಲಿ ಹಿಂದೆ ಹೇಳಿದ ಉಪಬಂಧಗಳಿಗೊಳಪಟ್ಟು, ರಾಜ್ಯಪಾಲನು, ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಪದದಲ್ಲಿರತಕ್ಕದ್ದು:

ಪರಂತು, ರಾಜ್ಯಪಾಲನು ತನ್ನ ಅವಧಿಯು ಮುಕ್ತಾಯವಾದಾಗ್ಯೂ, ತನ್ನ ಉತ್ತರಾಧಿಕಾರಿಯು ಪದವನ್ನು ವಹಿಸಿಕೊಳ್ಳುವವರೆಗೆ ಆ ಪದದಲ್ಲಿ ಮುಂದುವರಿಯತಕ್ಕದ್ದು.

**157. ರಾಜ್ಯಪಾಲನಾಗಿ ನೇಮಕಗೊಳ್ಳಲು ಅರ್ಹತೆಗಳು:–** ಯಾರೇ ವ್ಯಕ್ತಿಯು ಭಾರತದ ನಾಗರಿಕನಾಗಿರುವ ಹೊರತು ಮತ್ತು ಅವನಿಗೆ ಮೂವತ್ತೈದು ವರ್ಷ ವಯಸ್ಸು ಪೂರ್ತಿಯಾಗಿರುವ ಹೊರತು ರಾಜ್ಯಪಾಲನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

---

1. 1956ನೆಯ ಇಸವಿಯ ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ ಭಾಗ ಎ ಯಲ್ಲಿ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
2. 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ ಎಂದರೆ "ಮೊದಲನೆಯ ಅನುಸೂಚಿಯ ಭಾಗ 'ಎ' ಯಲ್ಲಿ ನಿರ್ದಿಷ್ಟಪಡಿಸಿರುವ ಒಂದು ರಾಜ್ಯವೆಂದು ಅರ್ಥ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 6ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

**158. ರಾಜ್ಯಪಾಲನ ಪದದ ಷರತ್ತುಗಳು:–** (1) ರಾಜ್ಯಪಾಲನು ಸಂಸತ್ತಿನ ಯಾವುದೇ ಒಂದು ಸದನದ ಅಥವಾ ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ರಾಜ್ಯದ ವಿಧಾನ ಮಂಡಲದ ಯಾವುದೇ ಒಂದು ಸದನದ ಸದಸ್ಯನೊಬ್ಬನು ರಾಜ್ಯಪಾಲನಾಗಿ ನೇಮಕಗೊಂಡರೆ, ಅವನು ರಾಜ್ಯಪಾಲನಾಗಿ ಪದವನ್ನು ವಹಿಸಿಕೊಂಡ ದಿನಾಂಕದಂದು ಆ ಸದನದಲ್ಲಿನ ತನ್ನ ಸ್ಥಾನವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕದ್ದು.

(2) ರಾಜ್ಯಪಾಲನು ಇತರ ಯಾವುದೇ ಲಾಭದಾಯಕ ಪದವನ್ನು ಧಾರಣ ಮಾಡತಕ್ಕದ್ದಲ್ಲ.

(3) ರಾಜ್ಯಪಾಲನು ಬಾಡಿಗೆಯನ್ನು ಸಂದಾಯ ಮಾಡದೆ ತನ್ನ ಅಧಿಕೃತ ನಿವಾಸಗಳನ್ನು ಬಳಸುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಸಂಸತ್ತು ಕಾನೂನಿನ ಮೂಲಕ ನಿರ್ಧರಿಸಬಹುದಾದಂಥ ಉಪಲಬ್ಧಿಗಳಿಗೆ, ಭತ್ಯಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಸಹ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಆ ಬಗ್ಗೆ ಹಾಗೆ ಉಪಬಂಧಿಸುವವರೆಗೆ ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂಥ ಉಪಲಬ್ಧಿಗಳಿಗೆ, ಭತ್ಯಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

[1][(3ಎ) ಒಬ್ಬನೇ ವ್ಯಕ್ತಿಯನ್ನು ಎರಡು ಅಥವಾ ಹೆಚ್ಚು ರಾಜ್ಯಗಳಿಗೆ ರಾಜ್ಯಪಾಲನಾಗಿ ನೇಮಕ ಮಾಡಿರುವಲ್ಲಿ, ಆ ರಾಜ್ಯಪಾಲನಿಗೆ ಸಂದಾಯ ಮಾಡಬೇಕಾದ ಉಪಲಬ್ಧಿಗಳನ್ನು ಮತ್ತು ಭತ್ಯಗಳನ್ನು ರಾಷ್ಟ್ರಪತಿಯು ಆದೇಶದ ಮೂಲಕ, ನಿರ್ಧರಿಸಬಹುದಾದಂಥ ಪ್ರಮಾಣದಲ್ಲಿ ಆ ರಾಜ್ಯಗಳೊಳಗೆ ಹಂಚಿಕೆ ಮಾಡತಕ್ಕದ್ದು.]

(4) ರಾಜ್ಯಪಾಲನ ಪದಾವಧಿಯಲ್ಲಿ ಅವನ ಉಪಲಬ್ಧಿಗಳನ್ನು ಮತ್ತು ಭತ್ಯಗಳನ್ನು ಕಡಿಮೆ ಮಾಡತಕ್ಕದ್ದಲ್ಲ.

**159. ರಾಜ್ಯಪಾಲನಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ:–** ಪ್ರತಿಯೊಬ್ಬ ರಾಜ್ಯಪಾಲನು ಮತ್ತು ರಾಜ್ಯಪಾಲನಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ಪದವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ಆ ರಾಜ್ಯದ ಸಂಬಂಧದಲ್ಲಿ ಅಧಿಕಾರ ವ್ಯಾಪ್ತಿಯುಳ್ಳ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯ ಅಥವಾ ಅವನ ಗೈರುಹಾಜರಿಯಲ್ಲಿ ಆ ನ್ಯಾಯಾಲಯದ ನ್ಯಾಯಾಧೀಶರ ಪೈಕಿ ಲಭ್ಯವಿರುವ ಜ್ಯೇಷ್ಠ ನ್ಯಾಯಾಧೀಶನ ಸಮಕ್ಷಮದಲ್ಲಿ ಈ ಕೆಳಕಂಡ ನಮೂನೆಯಲ್ಲಿ ಪ್ರಮಾಣ ಅಥವಾ ಪ್ರತಿಜ್ಞೆ ಮಾಡತಕ್ಕದ್ದು ಮತ್ತು ಅದಕ್ಕೆ ತನ್ನ ರುಜು ಹಾಕತಕ್ಕದ್ದು; ಎಂದರೆ:–

"..... ಎಂಬ ಹೆಸರಿನ ನಾನು ನಿಷ್ಠಾಪೂರ್ವಕವಾಗಿ ..... (ರಾಜ್ಯದ ಹೆಸರು) ರಾಜ್ಯಪಾಲನ ಪದದ ಕಾರ್ಯಪಾಲನೆಯನ್ನು (ಅಥವಾ ರಾಜ್ಯಪಾಲನ ಪ್ರಕಾರ್ಯಗಳ ನಿರ್ವಹಣೆಯನ್ನು) ಮಾಡುತ್ತೇನೆಂದೂ ಮತ್ತು ನನಗೆ ಸಾಮರ್ಥ್ಯವಿದ್ದಷ್ಟೂ ಭಾರತ ಸಂವಿಧಾನದ ಮತ್ತು ಕಾನೂನಿನ ಪರಿರಕ್ಷಣೆ, ಸಂರಕ್ಷಣೆ ಮತ್ತು ಪ್ರತಿರಕ್ಷಣೆ ಮಾಡುತ್ತೇನೆಂದೂ........(ರಾಜ್ಯದ ಹೆಸರು) ರಾಜ್ಯದ ಜನತೆಯ ಸೇವೆಯಲ್ಲಿ ಮತ್ತು ಯೋಗಕ್ಷೇಮ ಸಾಧನೆಯಲ್ಲಿ ನಿರತನಾಗಿರುತ್ತೇನೆಂದೂ, ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ / ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

**160. ಕೆಲವು ಆಕಸ್ಮಿಕ ಸಂದರ್ಭಗಳಲ್ಲಿ ರಾಜ್ಯಪಾಲನ ಪ್ರಕಾರ್ಯಗಳ ನಿರ್ವಹಣೆ:–** ಈ ಅಧ್ಯಾಯದಲ್ಲಿ ಉಪಬಂಧಿಸಿರದ ಯಾವುದೇ ಆಕಸ್ಮಿಕ ಸಂದರ್ಭದಲ್ಲಿ ರಾಜ್ಯದ ರಾಜ್ಯಪಾಲನ ಪ್ರಕಾರ್ಯಗಳ ನಿರ್ವಹಣೆಗಾಗಿ ರಾಷ್ಟ್ರಪತಿಯು ತಾನು ಸೂಕ್ತವೆಂದು ಭಾವಿಸುವಂಥ ಉಪಬಂಧವನ್ನು ಮಾಡಬಹುದು.

**161. ಕೆಲವು ಪ್ರಕರಣಗಳಲ್ಲಿ ಕ್ಷಮಾದಾನ, ಮುಂತಾದವುಗಳನ್ನು ಮಾಡಲು, ಶಿಕ್ಷೆಯನ್ನು ಅಮಾನತ್ತಿನಲ್ಲಿಡಲು, ಮಾಫಿ ಮಾಡಲು ಅಥವಾ ಕಡಿಮೆ ಮಾಡಲು ರಾಜ್ಯಪಾಲನ ಅಧಿಕಾರ:–** ರಾಜ್ಯದ ಕಾರ್ಯಾಂಗ ಅಧಿಕಾರವು ವ್ಯಾಪ್ತವಾಗುವ ಯಾವುದೇ ವಿಷಯಕ್ಕೆ ಸಂಬಂಧಿಸಿದ ಯಾವುದೇ ಕಾನೂನಿಗೆ ಸಂಬಂಧಿಸಿದಂತೆ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾದ ಯಾರೇ ವ್ಯಕ್ತಿಗೆ ವಿಧಿಸಿರುವ ದಂಡನೆಯ ಬಗ್ಗೆ ಕ್ಷಮಾದಾನವನ್ನು, ಪ್ರವಿಲಂಬನವನ್ನು, ಮುಂದೂಡಿಕೆ ಅಥವಾ ಮಾಫಿಯನ್ನು ಮಾಡಲು ಅಥವಾ ಶಿಕ್ಷೆಯನ್ನು ಅಮಾನತ್ತಿನಲ್ಲಿಡಲು, ಮಾಫಿ ಮಾಡಲು ಅಥವಾ ಪರಿವರ್ತನೆ ಮಾಡಲು ರಾಜ್ಯದ ರಾಜ್ಯಪಾಲನಿಗೆ ಅಧಿಕಾರವಿರತಕ್ಕದ್ದು.

**162. ರಾಜ್ಯದ ಕಾರ್ಯಾಂಗ ಅಧಿಕಾರ ವ್ಯಾಪ್ತಿ:–** ಈ ಸಂವಿಧಾನದ ಉಪಬಂಧಗಳಿಗೊಳಪಟ್ಟು, ರಾಜ್ಯದ ಕಾರ್ಯಾಂಗ ಅಧಿಕಾರವು, ಯಾವ ವಿಷಯಗಳ ಬಗ್ಗೆ ಆ ರಾಜ್ಯದ ವಿಧಾನ ಮಂಡಲವು ಕಾನೂನುಗಳನ್ನು ಮಾಡಲು ಅಧಿಕಾರವನ್ನು ಹೊಂದಿದೆಯೋ ಆ ವಿಷಯಗಳಿಗೆ ವ್ಯಾಪ್ತವಾಗತಕ್ಕದ್ದು:

ಪರಂತು, ರಾಜ್ಯದ ವಿಧಾನ ಮಂಡಲ ಮತ್ತು ಸಂಸತ್ತು ಯಾವ ವಿಷಯದ ಬಗ್ಗೆ ಕಾನೂನುಗಳನ್ನು ಮಾಡಲು ಅಧಿಕಾರವನ್ನು ಹೊಂದಿವೆಯೋ, ಆ ಯಾವುದೇ ವಿಷಯದ ಬಗ್ಗೆ ಆ ರಾಜ್ಯದ ಕಾರ್ಯಾಂಗ ಅಧಿಕಾರವು, ಈ ಸಂವಿಧಾನದ ಮೂಲಕ ಅಥವಾ ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಒಕ್ಕೂಟಕ್ಕೆ ಅಥವಾ ಅದರ ಪ್ರಾಧಿಕಾರಗಳಿಗೆ ವ್ಯಕ್ತವಾಗಿ ಪ್ರದಾನ ಮಾಡಲಾಗಿರುವ ಕಾರ್ಯಾಂಗ ಅಧಿಕಾರಕ್ಕೆ ಒಳಪಟ್ಟಿರತಕ್ಕದ್ದು ಮತ್ತು ಅಷ್ಟಕ್ಕೇ ಸೀಮಿತವಾಗಿರತಕ್ಕದ್ದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 7ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

## ಮಂತ್ರಿಮಂಡಲ

**163. ರಾಜ್ಯಪಾಲನಿಗೆ ನೆರವು ಮತ್ತು ಸಲಹೆ ನೀಡಲು ಮಂತ್ರಿಮಂಡಲ:-** (1) ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ರಾಜ್ಯಪಾಲನು, ತನ್ನ ಎಲ್ಲ ಪ್ರಕಾರ್ಯಗಳನ್ನು ಅಥವಾ ಅವುಗಳಲ್ಲಿ ಯಾವುದೇ ಪ್ರಕಾರ್ಯವನ್ನು ತನ್ನ ವಿವೇಚನಾನುಸಾರ ಚಲಾಯಿಸಲು ಅವನನ್ನು ಅಗತ್ಯಪಡಿಸಿರುವಷ್ಟರ ಮಟ್ಟಿಗೆ ಹೊರತು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವನಿಗೆ ನೆರವು ಮತ್ತು ಸಲಹೆಯನ್ನು ನೀಡಲು ಮುಖ್ಯಮಂತ್ರಿಯ ನೇತೃತ್ವದಲ್ಲಿ ಒಂದು ಮಂತ್ರಿಮಂಡಲ ಇರತಕ್ಕದ್ದು.

(2) ಯಾವುದೇ ವಿಷಯವು ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ರಾಜ್ಯಪಾಲನು ತನ್ನ ವಿವೇಚನಾನುಸಾರ ಕಾರ್ಯ ನಿರ್ವಹಿಸಬೇಕೆಂದು ಅವನನ್ನು ಅಗತ್ಯಪಡಿಸಿರುವ ವಿಷಯವೆ ಅಥವಾ ಅಲ್ಲವೆ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ರಾಜ್ಯಪಾಲನು ತನ್ನ ವಿವೇಚನಾನುಸಾರ ಕೈಗೊಂಡ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು ಮತ್ತು ರಾಜ್ಯಪಾಲನು ಕೈಗೊಂಡ ಯಾವುದೇ ಕಾರ್ಯದ ಸಿಂಧುತ್ವವನ್ನು ಅವನು ತನ್ನ ವಿವೇಚನಾನುಸಾರವಾಗಿ ಕಾರ್ಯನಿರ್ವಹಿಸಬೇಕಾಗಿತ್ತು ಅಥವಾ ಕಾರ್ಯನಿರ್ವಹಿಸಬಾರದಾಗಿತ್ತು ಎಂಬ ಕಾರಣದ ಮೇಲೆ ಪ್ರಶ್ನಿಸತಕ್ಕದ್ದಲ್ಲ.

(3) ಮಂತ್ರಿಗಳು ರಾಜ್ಯಪಾಲನಿಗೆ ಯಾವುದೇ ಸಲಹೆಯನ್ನು ನೀಡಿದ್ದರೇ ಮತ್ತು ಹಾಗೆ ನೀಡಿದ್ದರೆ ಯಾವ ಸಲಹೆಯನ್ನು ನೀಡಿದ್ದರು ಎಂಬ ಪ್ರಶ್ನೆಯನ್ನು ಕುರಿತು ಯಾವುದೇ ನ್ಯಾಯಾಲಯವು ವಿಚಾರಣೆ ಮಾಡತಕ್ಕದ್ದಲ್ಲ.

**164. ಮಂತ್ರಿಗಳಿಗೆ ಸಂಬಂಧಿಸಿದ ಇತರ ಉಪಬಂಧಗಳು:-** (1) ರಾಜ್ಯಪಾಲನು ಮುಖ್ಯಮಂತ್ರಿಯನ್ನು ನೇಮಕ ಮಾಡತಕ್ಕದ್ದು ಮತ್ತು ಮುಖ್ಯಮಂತ್ರಿಯ ಸಲಹೆಗನುಸಾರ ಇತರ ಮಂತ್ರಿಗಳನ್ನು ರಾಜ್ಯಪಾಲನು ನೇಮಕ ಮಾಡತಕ್ಕದ್ದು ಮತ್ತು ಮಂತ್ರಿಗಳು ರಾಜ್ಯಪಾಲನ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು:

ಪರಂತು, [1][ಛತ್ತಿಸ್‌ಘಡ, ಝಾರ್ಖಂಡ,] ಮಧ್ಯಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಬುಡಕಟ್ಟು ಜನಾಂಗಗಳ ಕಲ್ಯಾಣಕ್ಕೆ ಸಂಬಂಧಪಟ್ಟಂತೆ ಒಬ್ಬ ಮಂತ್ರಿಯಿರತಕ್ಕದ್ದು ಮತ್ತು ಅವನು ಅದರ ಜೊತೆಗೆ ಅನುಸೂಚಿತ ಜಾತಿಗಳ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಅಥವಾ ಇತರ ಯಾವುದೇ ಕಾರ್ಯವನ್ನು ನೋಡಿಕೊಳ್ಳಬಹುದು.

[2][(1ಎ) ಒಂದು ರಾಜ್ಯದ ಮಂತ್ರಿಮಂಡಲದಲ್ಲಿ, ಮುಖ್ಯಮಂತ್ರಿಯೂ ಸೇರಿದಂತೆ ಮಂತ್ರಿಗಳ ಒಟ್ಟು ಸಂಖ್ಯೆಯು ಆ ರಾಜ್ಯದ ವಿಧಾನ ಸಭೆಯ ಸದಸ್ಯರುಗಳ ಒಟ್ಟು ಸಂಖ್ಯೆಯ ಶೇಕಡ ಹದಿನೈದನ್ನು ಮೀರತಕ್ಕದ್ದಲ್ಲ:

ಪರಂತು, ಒಂದು ರಾಜ್ಯದಲ್ಲಿ ಮುಖ್ಯಮಂತ್ರಿಯೂ ಸೇರಿದಂತೆ ಮಂತ್ರಿಗಳ ಸಂಖ್ಯೆಯು ಹನ್ನೆರಡಕ್ಕಿಂತ ಕಡಿಮೆಯಿರತಕ್ಕದ್ದಲ್ಲ:

ಮತ್ತೂ ಪರಂತು, ಸಂವಿಧಾನ (ತೊಂಬತ್ತೊಂದನೇ ತಿದ್ದುಪಡಿ) ಅಧಿನಿಯಮ, 2003ರ ಪ್ರಾರಂಭದಲ್ಲಿ ಯಾವುದೇ ರಾಜ್ಯದ ಮಂತ್ರಿ ಮಂಡಲದಲ್ಲಿ ಮುಖ್ಯಮಂತ್ರಿಯೂ ಸೇರಿದಂತೆ ಮಂತ್ರಿಗಳ ಒಟ್ಟು ಸಂಖ್ಯೆಯನ್ನು ಸಂದರ್ಭಾನುಸಾರ ಸದರಿ ಶೇಕಡ ಹದಿನೈದನ್ನು ಅಥವಾ ಮೊದಲನೇ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಸಂಖ್ಯೆಯನ್ನು ಮೀರಿದ್ದರೆ, ಆಗ, ಆ ರಾಜ್ಯದಲ್ಲಿ ಮಂತ್ರಿಗಳ ಒಟ್ಟು ಸಂಖ್ಯೆಯು, ರಾಷ್ಟ್ರಪತಿಯು ಸಾರ್ವಜನಿಕ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕ* ದಿಂದ ಆರು ತಿಂಗಳುಗಳ ಒಳಗಾಗಿ ಈ ಖಂಡದ ಉಪಬಂಧಗಳಿಗೆ ಅನುಗುಣವಾಗಿರುವಂತೆ ಮಾಡತಕ್ಕದ್ದು.

(1ಬಿ) ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರುವ, ರಾಜ್ಯದ ವಿಧಾನ ಸಭೆಯ ಅಥವಾ ವಿಧಾನಪರಿಷತ್ತನ್ನು ಹೊಂದಿರುವ ರಾಜ್ಯದ ವಿಧಾನ ಮಂಡಲದ ಎರಡೂ ಸದನಗಳಲ್ಲಿ ಯಾವುದೇ ಸದನದ ಸದಸ್ಯನು, ಹತ್ತನೇ ಅನುಸೂಚಿಯ 2ನೇ ಕಂಡಿಕೆಯಡಿಯಲ್ಲಿ ಆ ಸದನದ ಸದಸ್ಯನಾಗಲು ಅನರ್ಹನಾಗಿದ್ದಲ್ಲಿ, ಸಂದರ್ಭಾನುಸಾರ ಆತನು ಅನರ್ಹತೆ ಹೊಂದಿದ ದಿನಾಂಕದಿಂದ ಪ್ರಾರಂಭವಾಗಿ ಆತನು ಹಾಗೆ ಸದಸ್ಯನಾಗಿರುವ ಪದಾವಧಿಯು ಮುಕ್ತಾಯಗೊಳ್ಳುವ ದಿನಾಂಕದವರೆಗೆ ಅಥವಾ ಅಂಥ ಅವಧಿಯು ಮುಕ್ತಾಯವಾಗುವ ಮೊದಲು ಆತನು ರಾಜ್ಯದ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತನ್ನು ಹೊಂದಿರುವ ರಾಜ್ಯದ ವಿಧಾನ ಮಂಡಲದ ಎರಡು ಸದನಗಳಲ್ಲಿ ಯಾವುದೇ ಸದನದ ಚುನಾವಣೆಯಲ್ಲಿ ಸ್ಪರ್ಧಿಸಿದರೆ, ಆತನು ಚುನಾಯಿತನಾಗಿದ್ದಾನೆ ಎಂದು ಘೋಷಿಸುವ ದಿನಾಂಕದವರೆಗೆ, ಅವೆರಡರಲ್ಲಿ ಯಾವುದು ಮುಂಚೆಯೋ ಅಲ್ಲಿಯವರೆಗಿನ ಅವಧಿಯಲ್ಲಿ ಆತನು ಮಂತ್ರಿಯಾಗಿ ನೇಮಕಗೊಳ್ಳುವುದಕ್ಕೂ ಅನರ್ಹನಾಗತಕ್ಕದ್ದು.]

---

1. 2006 ನೆಯ ಇಸವಿಯ ಸಂವಿಧಾನ (ತೊಂಬತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ "ಬಿಹಾರ್" ಎಂಬ ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 2003 ನೆಯ ಇಸವಿಯ ಸಂವಿಧಾನ (ತೊಂಬತ್ತೊಂದನೇ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

* 7.1.2004, ನೋಡಿ : ಎಸ್.ಓ. 21 (ಇ), ದಿನಾಂಕ : 7.1.2004.

(2) ಮಂತ್ರಿ ಮಂಡಲವು ಆ ರಾಜ್ಯದ ವಿಧಾನಸಭೆಗೆ ಸಾಮೂಹಿಕವಾಗಿ ಜವಾಬ್ದಾರಿಯಾಗಿರತಕ್ಕದ್ದು.

(3) ಯಾರೇ ಮಂತ್ರಿಯು ತನ್ನ ಪದವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ರಾಜ್ಯಪಾಲನು ಅವನಿಗೆ ಪದದ ಮತ್ತು ಗೋಪ್ಯತಾ ಪಾಲನೆಯ ಪ್ರಮಾಣವಚನಗಳನ್ನು, ಮೂರನೆಯ ಅನುಸೂಚಿಯಲ್ಲಿ ಆ ಉದ್ದೇಶಕ್ಕಾಗಿ ಕೊಡಲಾದ ನಮೂನೆಗಳಿಗೆ ಅನುಸಾರವಾಗಿ ಬೋಧಿಸತಕ್ಕದ್ದು.

(4) ಯಾರೇ ಮಂತ್ರಿಯು ನಿರಂತರವಾಗಿ ಆರು ತಿಂಗಳ ಅವಧಿಯವರೆಗೆ ರಾಜ್ಯದ ವಿಧಾನಮಂಡಲದ ಸದಸ್ಯನಾಗದಿದ್ದರೆ ಆ ಅವಧಿಯು ಮುಕ್ತಾಯವಾದ ಮೇಲೆ ಅವನು ಮಂತ್ರಿಯಾಗಿರುವುದು ನಿಂತುಹೋಗತಕ್ಕದ್ದು.

(5) ಮಂತ್ರಿಗಳ ಸಂಬಳಗಳು ಹಾಗೂ ಭತ್ಯಗಳು ಕಾಲಕಾಲಕ್ಕೆ ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ವಿಧಾನ ಮಂಡಲವು ಆ ರೀತಿ ನಿರ್ಧರಿಸುವವರೆಗೆ ಅವು ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಇರತಕ್ಕದ್ದು.

## ರಾಜ್ಯದ ಅಡ್ವೋಕೇಟ್ ಜನರಲ್

**165. ರಾಜ್ಯದ ಅಡ್ವೋಕೇಟ್ ಜನರಲ್:-** (1) ಪ್ರತಿಯೊಂದು ರಾಜ್ಯದ ರಾಜ್ಯಪಾಲನು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳಲು ಅರ್ಹತೆಯುಳ್ಳ ವ್ಯಕ್ತಿಯನ್ನು ಆ ರಾಜ್ಯದ ಅಡ್ವೋಕೇಟ್ ಜನರಲ್ ಆಗಿ ನೇಮಕ ಮಾಡತಕ್ಕದ್ದು.

(2) ಅಡ್ವೋಕೇಟ್ ಜನರಲ್‌ನು, ರಾಜ್ಯಪಾಲನು ಕಾಲಕಾಲಕ್ಕೆ ತನಗೆ ಕಳುಹಿಸಬಹುದಾದಂಥ ಅಥವಾ ಒಪ್ಪಿಸಬಹುದಾದಂಥ ಕಾನೂನು ವಿಷಯಗಳ ಮೇಲೆ ರಾಜ್ಯಸರ್ಕಾರಕ್ಕೆ ಸಲಹೆ ಕೊಡುವುದು ಮತ್ತು ಕಾನೂನು ಸ್ವರೂಪದಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು ಹಾಗೂ ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ತನಗೆ ಪ್ರದಾನ ಮಾಡಿದ ಪ್ರಕಾರ್ಯಗಳನ್ನು ನಿರ್ವಹಿಸುವುದು ಅವನ ಕರ್ತವ್ಯವಾಗಿರತಕ್ಕದ್ದು.

(3) ಅಡ್ವೋಕೇಟ್ ಜನರಲ್‌ನು ರಾಜ್ಯಪಾಲನ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು; ಮತ್ತು ರಾಜ್ಯಪಾಲನು ನಿರ್ಧರಿಸಬಹುದಾದ ಸಂಭಾವನೆಯನ್ನು ಪಡೆಯತಕ್ಕದ್ದು.

## ಸರ್ಕಾರದ ವ್ಯವಹಾರ ನಿರ್ವಹಣೆ

**166. ರಾಜ್ಯ ಸರ್ಕಾರದ ವ್ಯವಹಾರ ನಿರ್ವಹಣೆ:-** (1) ರಾಜ್ಯ ಸರ್ಕಾರದ ಕಾರ್ಯಾಂಗದ ಸಮಸ್ತ ಕಾರ್ಯವು ರಾಜ್ಯಪಾಲನ ಹೆಸರಿನಲ್ಲಿ ನಡೆಯುತ್ತದೆಂದು ವ್ಯಕ್ತವಾಗತಕ್ಕದ್ದು.

(2) ರಾಜ್ಯಪಾಲನ ಹೆಸರಿನಲ್ಲಿ ಮಾಡಿದ ಆದೇಶಗಳನ್ನು ಮತ್ತು ಬರೆದುಕೊಟ್ಟ ಇತರ ಲಿಖಿತಗಳನ್ನು, ರಾಜ್ಯಪಾಲನು ರಚಿಸಬೇಕಾದ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಅಧಿಪ್ರಮಾಣನ ಮಾಡತಕ್ಕದ್ದು ಮತ್ತು ಹಾಗೆ ಅಧಿಪ್ರಮಾಣನ ಮಾಡಿದ ಆದೇಶದ ಅಥವಾ ಲಿಖಿತದ ಸಿಂಧುತ್ವವನ್ನು, ಅದು ರಾಜ್ಯಪಾಲನು ಮಾಡಿದ ಆದೇಶವಲ್ಲವೆಂಬ ಅಥವಾ ಬರೆದುಕೊಟ್ಟ ಲಿಖಿತವಲ್ಲವೆಂಬ ಕಾರಣದ ಮೇಲೆ ಪ್ರಶ್ನಿಸತಕ್ಕದ್ದಲ್ಲ.

(3) ರಾಜ್ಯ ಸರ್ಕಾರದ ವ್ಯವಹಾರವನ್ನು ಹೆಚ್ಚು ಅನುಕೂಲಕರವಾಗಿ ನಿರ್ವಹಿಸಲು ಮತ್ತು ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ರಾಜ್ಯಪಾಲನು ತನ್ನ ವಿವೇಚನಾನುಸಾರ ನಿರ್ವಹಿಸಬೇಕಾಗಿರುವ ವ್ಯವಹಾರವಾಗಿಲ್ಲದಿರುವಷ್ಟರ ಮಟ್ಟಿಗೆ ಸದರಿ ವ್ಯವಹಾರವನ್ನು ಮಂತ್ರಿಗಳಿಗೆ ಹಂಚಿಕೆ ಮಾಡಲು ರಾಜ್ಯಪಾಲನು ನಿಯಮಗಳನ್ನು ರಚಿಸತಕ್ಕದ್ದು.

[1] * * * *

**167. ರಾಜ್ಯಪಾಲನಿಗೆ ಮಾಹಿತಿ, ಇತ್ಯಾದಿಗಳನ್ನು ಒದಗಿಸುವ ವಿಚಾರದಲ್ಲಿ ಮುಖ್ಯಮಂತ್ರಿಯ ಕರ್ತವ್ಯಗಳು:-** ಪ್ರತಿಯೊಂದು ರಾಜ್ಯದ ಮುಖ್ಯ ಮಂತ್ರಿಯು,-

(ಎ) ರಾಜ್ಯದ ವ್ಯವಹಾರಗಳ ಆಡಳಿತಕ್ಕೆ ಮತ್ತು ಕಾನೂನು ರಚನೆಯ ಪ್ರಸ್ತಾವಗಳಿಗೆ ಸಂಬಂಧಿಸಿದಂತೆ ಮಂತ್ರಿಮಂಡಲದ ಎಲ್ಲ ತೀರ್ಮಾನಗಳನ್ನು ರಾಜ್ಯದ ರಾಜ್ಯಪಾಲನಿಗೆ ತಿಳಿಸುವುದು;

---

1. (4)ನೆಯ ಖಂಡವನ್ನು 1976ನೆಯ ಇಸವಿ ಸಂವಿಧಾನ (ನಲ್ವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 28ನೇ ಪ್ರಕರಣದ ಮೂಲಕ (3-1-77ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿತ್ತು ಮತ್ತು ಅದನ್ನು 1978ನೆಯ ಇಸವಿ ಸಂವಿಧಾನ (ನಲ್ವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 28ನೆಯ ಪ್ರಕರಣದ ಮೂಲಕ (20-6-79ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.

(ಬಿ) ರಾಜ್ಯದ ವ್ಯವಹಾರಗಳ ಆಡಳಿತಕ್ಕೆ ಮತ್ತು ಕಾನೂನು ರಚನೆಯ ಪ್ರಸ್ತಾವಗಳಿಗೆ ಸಂಬಂಧಿಸಿದಂತೆ ರಾಜ್ಯಪಾಲನು ಕೇಳಬಹುದಾದಂಥ ಮಾಹಿತಿಯನ್ನು ಒದಗಿಸುವುದು; ಮತ್ತು

(ಸಿ) ಒಬ್ಬ ಮಂತ್ರಿಯು ತೀರ್ಮಾನ ಕೈಗೊಂಡಿರುವ, ಆದರೆ ಮಂತ್ರಿ ಮಂಡಲವು ಪರ್ಯಾಲೋಚಿಸದಿರುವ ಯಾವುದೇ ವಿಷಯವನ್ನು ಮಂತ್ರಿಮಂಡಲದ ಪರ್ಯಾಲೋಚನೆಗೆ ಒಪ್ಪಿಸಬೇಕೆಂದು ರಾಜ್ಯಪಾಲನು ಅಗತ್ಯಪಡಿಸಿದಲ್ಲಿ ಅದನ್ನು ಹಾಗೆ ಒಪ್ಪಿಸುವುದು

– ಅವನ ಕರ್ತವ್ಯವಾಗಿರತಕ್ಕದ್ದು.

## ಅಧ್ಯಾಯ III – ರಾಜ್ಯ ವಿಧಾನಮಂಡಲ

### ಸಾಮಾನ್ಯ

**168. ರಾಜ್ಯಗಳ ವಿಧಾನಮಂಡಲಗಳ ರಚನೆ:–** (1) ಪ್ರತಿಯೊಂದು ರಾಜ್ಯಕ್ಕೂ ಒಂದು ವಿಧಾನ ಮಂಡಲ ಇರತಕ್ಕದ್ದು ಮತ್ತು ಅದು ರಾಜ್ಯಪಾಲನನ್ನು, ಮತ್ತು–

(ಎ) [1]* * * [2][ಆಂಧ್ರಪ್ರದೇಶ], ಬಿಹಾರ, [3]* * * [4][ಮಧ್ಯಪ್ರದೇಶ], [5]* * * [6][ಮಹಾರಾಷ್ಟ್ರ], [7][ಕರ್ನಾಟಕ], [8]* * * [9][ತಮಿಳುನಾಡು] [10][ಮತ್ತು ಉತ್ತರ ಪ್ರದೇಶ] ಈ ರಾಜ್ಯಗಳಲ್ಲಿ ಎರಡು ಸದನಗಳನ್ನೂ;

(ಬಿ) ಇತರ ರಾಜ್ಯಗಳಲ್ಲಿ ಒಂದು ಸದನವನ್ನೂ

– ಒಳಗೊಂಡಿರತಕ್ಕದ್ದು.

(2) ಒಂದು ರಾಜ್ಯದ ವಿಧಾನಮಂಡಲವು ಎರಡು ಸದನಗಳನ್ನು ಹೊಂದಿರುವಲ್ಲಿ, ಒಂದನ್ನು ವಿಧಾನಪರಿಷತ್ತು ಎಂದು ಮತ್ತು ಇನ್ನೊಂದನ್ನು ವಿಧಾನಸಭೆ ಎಂದು ಮತ್ತು ಒಂದೇ ಸದನವನ್ನು ಹೊಂದಿರುವಲ್ಲಿ ಅದನ್ನು ವಿಧಾನಸಭೆ ಎಂದು ಕರೆಯತಕ್ಕದ್ದು.

**169. ರಾಜ್ಯಗಳಲ್ಲಿ ವಿಧಾನಪರಿಷತ್ತುಗಳನ್ನು ರದ್ದುಗೊಳಿಸುವುದು ಅಥವಾ ಸೃಜಿಸುವುದು:–** (1) 168ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ವಿಧಾನಪರಿಷತ್ತು ಇರುವ ರಾಜ್ಯದಲ್ಲಿ ಅದನ್ನು ರದ್ದುಗೊಳಿಸಬೇಕೆಂದು ಅಥವಾ ಅಂಥ ಪರಿಷತ್ತು ಇಲ್ಲದ ರಾಜ್ಯದಲ್ಲಿ ಅಂಥ ಪರಿಷತ್ತನ್ನು ಸೃಜಿಸಬೇಕೆಂದು ಆ ರಾಜ್ಯದ ವಿಧಾನಸಭೆಯು ಆ ಸಭೆಯ ಒಟ್ಟು ಸದಸ್ಯರ ಬಹುಮತದ ಮೂಲಕ ಮತ್ತು ಸಭೆಯಲ್ಲಿ ಹಾಜರಿದ್ದು ಮತ ಕೊಡುವ ಸದಸ್ಯರ ಮೂರನೆಯ ಎರಡು ಭಾಗಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರ ಬಹುಮತದ ಮೂಲಕ ಆ ಬಗ್ಗೆ ನಿರ್ಣಯವನ್ನು ಅಂಗೀಕರಿಸಿದರೆ ಸಂಸತ್ತು ಕಾನೂನಿನ ಮೂಲಕ ಆ ಬಗ್ಗೆ ಉಪಬಂಧಿಸಬಹುದು.

---

1. 1985ನೇ ಇಸವಿಯ ಆಂಧ್ರಪ್ರದೇಶ ವಿಧಾನ ಪರಿಷತ್ (ರದ್ದತಿ) ಅಧಿನಿಯಮದ (1985ರ 34) 4ನೇ ಪ್ರಕರಣದ ಮೂಲಕ (1.6.1985 ರಿಂದ ಜಾರಿಗೆ ಬರುವಂತೆ) "ಆಂಧ್ರಪ್ರದೇಶ" ಎಂಬ ಪದಗಳನ್ನು ಬಿಟ್ಟು ಬಿಡಲಾಗಿದೆ.
2. 2005ನೇ ಇಸವಿಯ ಆಂಧ್ರಪ್ರದೇಶ ವಿಧಾನ ಪರಿಷತ್ ಅಧಿನಿಯಮದ (2006ರ 1) 3ನೆಯ ಪ್ರಕರಣದ ಮೂಲಕ (30.3.2007 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1960 ನೆಯ ಇಸವಿಯ ಮುಂಬಯಿ ಪುನರ್ರಚನೆ ಅಧಿನಿಯಮದ (1960ರ 11) 20ನೆಯ ಪ್ರಕರಣದ ಮೂಲಕ (1-5-1960 ರಿಂದ ಜಾರಿಗೆ ಬರುವಂತೆ) "ಬಾಂಬೆ" ಎಂಬ ಪದವನ್ನು ಬಿಟ್ಟುಬಿಡಲಾಗಿದೆ.
4. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 8(2)ನೇ ಪ್ರಕರಣದ ಮೂಲಕ ಈ ಉಪಖಂಡದಲ್ಲಿ "ಮಧ್ಯಪ್ರದೇಶ" ಎಂಬ ಪದಗಳನ್ನು ಸೇರಿಸಲು ಯಾವುದೇ ದಿನಾಂಕವನ್ನು ಗೊತ್ತುಮಾಡಿಲ್ಲ.
5. 1986ನೇ ಇಸವಿಯ ತಮಿಳುನಾಡು ವಿಧಾನ ಪರಿಷತ್ (ರದ್ದತಿ) ಅಧಿನಿಯಮದ (1986ರ 40) 4ನೇ ಪ್ರಕರಣದ ಮೂಲಕ (1.11.1986 ರಿಂದ ಜಾರಿಗೆ ಬರುವಂತೆ) 'ತಮಿಳುನಾಡು' ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
6. 1960ನೆಯ ಇಸವಿಯ ಬಾಂಬೆ ಪುನರ್ರಚನೆ ಅಧಿನಿಯಮದ (1960ರ 11) 20ನೆಯ ಪ್ರಕರಣದ ಮೂಲಕ (1-5-1960ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
7. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 8 (1)ನೆಯ ಪ್ರಕರಣದ ಮೂಲಕ "ಮೈಸೂರು" ಎಂಬ ಪದವನ್ನು ಸೇರಿಸಲಾಗಿತ್ತು ಮತ್ತು 1973ನೆಯ ಇಸವಿಯ ಮೈಸೂರು ರಾಜ್ಯ (ಹೆಸರು ಬದಲಾವಣೆ) ಅಧಿನಿಯಮದ (1973ರ 31) 4ನೆಯ ಪ್ರಕರಣದ ಮೂಲಕ (1-11-73 ರಿಂದ ಜಾರಿಗೆ ಬರುವಂತೆ) "ಮೈಸೂರು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
8. 1969ನೆಯ ಇಸವಿಯ ಪಂಜಾಬ್ ವಿಧಾನ ಪರಿಷತ್ (ರದ್ದತಿ) ಅಧಿನಿಯಮದ (1969ರ 46) 4ನೆಯ ಪ್ರಕರಣದ ಮೂಲಕ (7-1-1970 ರಿಂದ ಜಾರಿಗೆ ಬರುವಂತೆ) "ಪಂಜಾಬ್" ಎಂಬ ಪದವನ್ನು ಬಿಟ್ಟುಬಿಡಲಾಗಿದೆ.
9. 2010ನೇ ಇಸವಿಯ ತಮಿಳುನಾಡು ವಿಧಾನ ಪರಿಷತ್ ಅಧಿನಿಯಮದ (2010ರ 16) 3ನೇ ಪ್ರಕರಣದ ಮೂಲಕ ಸೇರಿಸಲಾಗಿದೆ. (ಇದು ಇನ್ನೂ ಜಾರಿಗೆ ಬಂದಿರುವುದಿಲ್ಲ. ದಿನಾಂಕವನ್ನು ನಂತರ ಅಧಿಸೂಚಿಸಲಾಗುವುದು).
10. 1969ನೆಯ ಇಸವಿಯ ಪಶ್ಚಿಮ ಬಂಗಾಳ ವಿಧಾನಪರಿಷತ್ (ರದ್ದತಿ) ಅಧಿನಿಯಮದ (1969ರ 20) 4ನೆಯ ಪ್ರಕರಣದ ಮೂಲಕ "ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ" ಎಂಬ ಪದಗಳಿಗೆ ಬದಲಾಗಿ (1-8-1969 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

(2) (1)ನೆಯ ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಕಾನೂನು, ಆ ಕಾನೂನಿನ ಉಪಬಂಧಗಳನ್ನು ಜಾರಿಗೊಳಿಸಲು ಅವಶ್ಯವಾಗಬಹುದಾದಂತೆ ಈ ಸಂವಿಧಾನವನ್ನು ತಿದ್ದುಪಡಿ ಮಾಡುವಂಥ ಉಪಬಂಧಗಳನ್ನು ಒಳಗೊಂಡಿರತಕ್ಕದ್ದು ಮತ್ತು ಸಂಸತ್ತು ಅವಶ್ಯವೆಂದು ಭಾವಿಸಬಹುದಾದಂಥ ಪೂರಕ, ಪ್ರಾಸಂಗಿಕ ಮತ್ತು ಆನುಷಂಗಿಕ ಉಪಬಂಧಗಳನ್ನೂ ಸಹ ಒಳಗೊಂಡಿರಬಹುದು.

(3) ಹಿಂದೆ ಹೇಳಿದ ಅಂಥ ಯಾವುದೇ ಕಾನೂನನ್ನು 368ನೆಯ ಅನುಚ್ಛೇದದ ಉದ್ದೇಶಗಳಿಗಾಗಿ ಈ ಸಂವಿಧಾನದ ಒಂದು ತಿದ್ದುಪಡಿಯೆಂದು ಭಾವಿಸತಕ್ಕದ್ದಲ್ಲ.

[1][**170. ವಿಧಾನಸಭೆಗಳ ಸಂರಚನೆ:-** (1) 333ನೆಯ ಅನುಚ್ಛೇದದ ಉಪಬಂಧಗಳಿಗೊಳಪಟ್ಟು, ಪ್ರತಿಯೊಂದು ರಾಜ್ಯದ ವಿಧಾನಸಭೆಯು ಆ ರಾಜ್ಯದಲ್ಲಿನ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಂದ ನೇರ ಚುನಾವಣೆಯ ಮೂಲಕ ಆಯ್ಕೆಯಾದ ಐದುನೂರಕ್ಕಿಂತಲೂ ಹೆಚ್ಚಾಗಿಲ್ಲದಷ್ಟು ಆದರೆ ಅರವತ್ತಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರನ್ನು ಒಳಗೊಂಡಿರತಕ್ಕದ್ದು.

(2) (1)ನೆಯ ಖಂಡದ ಉದ್ದೇಶಗಳಿಗಾಗಿ ಪ್ರತಿಯೊಂದು ರಾಜ್ಯವನ್ನು ಪ್ರತಿಯೊಂದು ಚುನಾವಣಾ ಕ್ಷೇತ್ರದ ಜನಸಂಖ್ಯೆ ಮತ್ತು ಅದಕ್ಕೆ ಹಂಚಲಾದ ಸ್ಥಾನಗಳ ಸಂಖ್ಯೆ - ಇವೆರಡರ ನಡುವಣ ಅನುಪಾತವು ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ, ರಾಜ್ಯದಾದ್ಯಂತ ಒಂದೇ ಆಗಿರುವಂಥ ರೀತಿಯಲ್ಲಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಾಗಿಸತಕ್ಕದ್ದು.

[2][ವಿವರಣೆ:- ಈ ಖಂಡದಲ್ಲಿ "ಜನಸಂಖ್ಯೆ" ಎಂದರೆ, ಯಾವ ಹಿಂದಿನ ಕೊನೆಯ ಜನಗಣತಿಯ ಸುಸಂಗತ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಹಿಂದಿನ ಕೊನೆಯ ಜನಗಣತಿಯಲ್ಲಿ ಖಚಿತಪಡಿಸಿಕೊಂಡ ಜನಸಂಖ್ಯೆ :

ಪರಂತು, ಈ ವಿವರಣೆಯಲ್ಲಿ ಯಾವ ಹಿಂದಿನ ಕೊನೆಯ ಜನಗಣತಿಯ ಸುಸಂಗತ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಜನಗಣತಿಗೆ ಮಾಡಿದ ಉಲ್ಲೇಖವನ್ನು [3][2026 ನೇಯ] ಇಸವಿಯ ತರುವಾಯ ಮೊದಲನೆಯ ಸಲ ನಡೆಸಲಾಗುವ ಜನಗಣತಿಯ ಸುಸಂಗತ ಅಂಕಿಗಳು ಪ್ರಕಟವಾಗುವವರೆಗೆ, [4][2001 ರ] ಜನಗಣತಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.]

(3) ಪ್ರತಿಯೊಂದು ಜನಗಣತಿಯು ಪೂರ್ಣಗೊಂಡ ಮೇಲೆ, ಪ್ರತಿಯೊಂದು ರಾಜ್ಯದ ವಿಧಾನಸಭೆಯಲ್ಲಿನ ಒಟ್ಟು ಸ್ಥಾನಗಳನ್ನು ಮತ್ತು ಪ್ರತಿಯೊಂದು ರಾಜ್ಯವನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಾಗಿಸಿರುವುದನ್ನು ಸಂಸತ್ತು ಕಾನೂನಿನ ಮೂಲಕ ನಿರ್ಧರಿಸಬಹುದಾದಂಥ ಪ್ರಾಧಿಕಾರವು ಮತ್ತು ಅಂಥ ರೀತಿಯಲ್ಲಿ ಮರು ಹೊಂದಾಣಿಕೆ ಮಾಡತಕ್ಕದ್ದು:

ಪರಂತು, ಅಂಥ ಮರುಹೊಂದಾಣಿಕೆಯು ಆಗ ಅಸ್ತಿತ್ವದಲ್ಲಿರುವ ವಿಧಾನಸಭೆಯ ವಿಸರ್ಜನೆ ಆಗುವವರೆಗೆ ಆ ಸಭೆಯಲ್ಲಿನ ಪ್ರಾತಿನಿಧ್ಯಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ:]

[5][ಮತ್ತೂ ಪರಂತು, ಅಂಥ ಮರುಹೊಂದಾಣಿಕೆಯು ರಾಷ್ಟ್ರಪತಿಯು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಅಂಥ ಮರುಹೊಂದಾಣಿಕೆಯು ಜಾರಿಗೆ ಬರುವವರೆಗೆ ವಿಧಾನಸಭೆಗೆ ಯಾವುದೇ ಚುನಾವಣೆಯನ್ನು ಅಂಥ ಮರುಹೊಂದಾಣಿಕೆಗೆ ಮೊದಲು ಅಸ್ತಿತ್ವದಲ್ಲಿರುವ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಆಧಾರದ ಮೇಲೆ ನಡೆಸಬಹುದು:

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 9ನೆಯ ಪ್ರಕರಣದ ಮೂಲಕ ಮೂಲ 170ನೇ ಅನುಚ್ಛೇದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಮೂಲಕ "ವಿವರಣೆ"ಗೆ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. 2001 ನೇ ಇಸವಿಯ ಸಂವಿಧಾನ (ಎಂಬತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ ಅನುಕ್ರಮವಾಗಿ "2000ದ" ಮತ್ತು "1971ರ" ಎಂಬ ಅಂಕಿಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
4. 2003ನೇ ಇಸವಿಯ ಸಂವಿಧಾನ (ಎಂಬತ್ತೇಳನೆಯ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ "1991ರ" ಎಂಬ ಅಂಕಿಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಮೂಲಕ (3-1-77 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

ಮತ್ತೂ ಪರಂತು, [1][2026 ನೆಯ] ಇಸವಿಯ ತರುವಾಯ ಮೊದಲನೆಯ ಸಲ ನಡೆಸಲಾಗುವ ಜನಗಣತಿಯ ಸುಸಂಗತ ಅಂಕಿಗಳು ಪ್ರಕಟವಾಗುವವರೆಗೆ, ಈ ಖಂಡದ ಮೇರೆಗೆ,-

[2][(i) 1971ರ ಜನಗಣತಿ ಆಧಾರದ ಮೇಲೆ ಮರುಹೊಂದಾಣಿಕೆ ಮಾಡಿರುವಂತೆ ಪ್ರತಿಯೊಂದು ರಾಜ್ಯದ ವಿಧಾನ ಸಭೆಯಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಯನ್ನು; ಮತ್ತು

(ii) [3][2001ರ] ಜನಗಣತಿ ಆಧಾರದ ಮೇಲೆ ಮರುಹೊಂದಾಣಿಕೆ ಮಾಡಬಹುದಾದಂತೆ ಅಂಥ ರಾಜ್ಯವನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಾಗಿಸುವುದನ್ನು

– ಮರುಹೊಂದಾಣಿಕೆ ಮಾಡುವುದು ಅವಶ್ಯಕವಾಗಿರತಕ್ಕದ್ದಲ್ಲ.]

**171. ವಿಧಾನ ಪರಿಷತ್ತುಗಳ ಸಂರಚನೆ:-** (1) ವಿಧಾನಪರಿಷತ್ತು ಇರುವ ರಾಜ್ಯದಲ್ಲಿ ವಿಧಾನ ಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆಯು, ಆ ರಾಜ್ಯದ ವಿಧಾನಸಭೆಯ ಸದಸ್ಯರ ಒಟ್ಟು ಸಂಖ್ಯೆಯ [4][ಮೂರನೆಯ ಒಂದು ಭಾಗವನ್ನು] ಮೀರತಕ್ಕದ್ದಲ್ಲ:

ಪರಂತು, ಒಂದು ರಾಜ್ಯದ ವಿಧಾನಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆಯು ಯಾವುದೇ ಸಂದರ್ಭದಲ್ಲಿ ನಲವತ್ತಕ್ಕಿಂತಲೂ ಕಡಿಮೆಯಾಗಿರತಕ್ಕದ್ದಲ್ಲ.

(2) ಸಂಸತ್ತು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸುವವರೆಗೆ, ಒಂದು ರಾಜ್ಯದ ವಿಧಾನಪರಿಷತ್ತಿನ ರಚನೆಯು (3)ನೆಯ ಖಂಡದಲ್ಲಿ ಉಪಬಂಧಿಸಿರುವಂತೆ ಇರತಕ್ಕದ್ದು.

(3) ಒಂದು ರಾಜ್ಯದ ವಿಧಾನಪರಿಷತ್ತಿನ ಸದಸ್ಯರ ಒಟ್ಟು ಸಂಖ್ಯೆಯಲ್ಲಿ,-

(ಎ) ಆದಷ್ಟು ಮಟ್ಟಿಗೆ ಮೂರನೆಯ ಒಂದು ಭಾಗದಷ್ಟು ಸದಸ್ಯರು ಆ ರಾಜ್ಯದಲ್ಲಿನ ಪೌರಸಭೆಗಳ, ಜಿಲ್ಲಾ ಮಂಡಲಿಗಳ ಮತ್ತು ಸಂಸತ್ತು ಕಾನೂನಿನ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಸ್ಥಳೀಯ ಪ್ರಾಧಿಕಾರಗಳ ಸದಸ್ಯರನ್ನು ಒಳಗೊಂಡಿರುವ ಮತದಾರರ ಗಣಗಳಿಂದ ಚುನಾಯಿತರಾಗತಕ್ಕದ್ದು;

(ಬಿ) ಆದಷ್ಟುಮಟ್ಟಿಗೆ ಹನ್ನೆರಡನೆಯ ಒಂದು ಭಾಗದಷ್ಟು ಸದಸ್ಯರು ಭಾರತದ ರಾಜ್ಯಕ್ಷೇತ್ರದಲ್ಲಿನ ಯಾವುದೇ ವಿಶ್ವವಿದ್ಯಾನಿಲಯದ ಪದವೀಧರರಾಗಿ ಕನಿಷ್ಠ ಪಕ್ಷ ಮೂರು ವರ್ಷಗಳಾದರೂ ಆಗಿರುವ ಅಥವಾ ಅಂಥ ಯಾವುದೇ ವಿಶ್ವವಿದ್ಯಾನಿಲಯದ ಪದವೀಧರನಿಗೆ ಸಮಾನವಾದ ಅರ್ಹತೆಗಳೆಂದು ಸಂಸತ್ತು ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಿದ ಅರ್ಹತೆಗಳನ್ನು ಪಡೆದು ಕನಿಷ್ಠಪಕ್ಷ ಮೂರು ವರ್ಷಗಳಾದರೂ ಆಗಿರುವ ಮತ್ತು ಆ ರಾಜ್ಯದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳನ್ನು ಒಳಗೊಂಡಿರುವ ಮತದಾರರ ಗಣಗಳಿಂದ ಚುನಾಯಿತರಾಗತಕ್ಕದ್ದು;

(ಸಿ) ಆದಷ್ಟು ಮಟ್ಟಿಗೆ ಹನ್ನೆರಡನೆಯ ಒಂದು ಭಾಗದಷ್ಟು ಸದಸ್ಯರು ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂತೆ ರಾಜ್ಯದಲ್ಲಿನ ಪ್ರೌಢಶಾಲೆಯ ದರ್ಜೆಗೆ ಕಡಿಮೆ ಇಲ್ಲದಂತಹ ದರ್ಜೆಯ ಶಿಕ್ಷಣ ಸಂಸ್ಥೆಗಳಲ್ಲಿ ಕನಿಷ್ಠಪಕ್ಷ ಮೂರು ವರ್ಷಗಳಿಂದಾದರೂ ಬೋಧನೆಯಲ್ಲಿ ತೊಡಗಿರುವ ವ್ಯಕ್ತಿಗಳನ್ನೊಳಗೊಂಡಿರುವ ಮತದಾರರ ಗಣಗಳಿಂದ ಚುನಾಯಿತರಾಗತಕ್ಕದ್ದು;

(ಡಿ) ಆದಷ್ಟು ಮಟ್ಟಿಗೆ ಮೂರನೆಯ ಒಂದು ಭಾಗದಷ್ಟು ಸದಸ್ಯರನ್ನು, ಆ ರಾಜ್ಯದ ವಿಧಾನಸಭೆಯ ಸದಸ್ಯರು ಆ ಸಭೆಯ ಸದಸ್ಯರಲ್ಲದ ವ್ಯಕ್ತಿಗಳಿಂದ ಚುನಾಯಿಸತಕ್ಕದ್ದು;

(ಇ) ಉಳಿದ ಸದಸ್ಯರು (5)ನೆಯ ಖಂಡದ ಉಪಬಂಧಗಳಿಗೆ ಅನುಸಾರವಾಗಿ ಆ ರಾಜ್ಯದ ರಾಜ್ಯಪಾಲನಿಂದ ನಾಮನಿರ್ದೇಶಿತರಾಗತಕ್ಕದ್ದು.

---

1. 2001 ನೇ ಇಸವಿಯ ಸಂವಿಧಾನ (ಎಂಬತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ ಅನುಕ್ರಮವಾಗಿ "2000ದ" ಮತ್ತು "1971ರ" ಎಂಬ ಅಂಕಿಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 2001 ನೆಯ ಇಸವಿಯ ಸಂವಿಧಾನ (ಎಂಬತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. 2003ನೇ ಇಸವಿಯ ಸಂವಿಧಾನ (ಎಂಬತ್ತೇಳನೆಯ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ "1991ರ" ಎಂಬ ಅಂಕಿಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
4. 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 10ನೆಯ ಪ್ರಕರಣದ ಮೇರೆಗೆ "ಕಾಲು ಭಾಗಕ್ಕಿಂತಲೂ" ಎಂಬುದಕ್ಕೆ ಬದಲಾಗಿ (1-11-56ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

(4) (3)ನೇಯ ಖಂಡದ (ಎ), (ಬಿ) ಮತ್ತು (ಸಿ) ಉಪಖಂಡಗಳ ಮೇರೆಗೆ ಚುನಾಯಿತರಾಗಬೇಕಾದ ಸದಸ್ಯರು ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂಥ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಂದ ಆಯ್ಕೆಯಾಗತಕ್ಕದ್ದು ಮತ್ತು ಸದರಿ ಉಪಖಂಡಗಳ ಮೇರೆಗೆ ಮತ್ತು ಸದರಿ ಖಂಡದ (ಡಿ) ಉಪಖಂಡದ ಮೇರೆಗೆ ನಡೆಯುವ ಚುನಾವಣೆಗಳು ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಗನುಸಾರ ಏಕವರ್ಗಾವಣೀಯ ಮತದ ಮೂಲಕ ನಡೆಯತಕ್ಕದ್ದು.

(5) ರಾಜ್ಯಪಾಲನಿಂದ (3)ನೆಯ ಖಂಡದ (ಇ) ಉಪಖಂಡದ ಮೇರೆಗೆ ನಾಮನಿರ್ದೇಶಿತರಾಗಬೇಕಾದ ಸದಸ್ಯರು ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಎಂದರೆ,-

ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರ ಚಳವಳಿ ಮತ್ತು ಸಮಾಜ ಸೇವೆಗಳಲ್ಲಿ ವಿಶೇಷ ಜ್ಞಾನವನ್ನು ಅಥವಾ ವ್ಯಾವಹಾರಿಕ ಅನುಭವವನ್ನು ಪಡೆದವರಾಗಿರತಕ್ಕದ್ದು.

**172. ರಾಜ್ಯ ವಿಧಾನಮಂಡಲಗಳ ಅವಧಿ:-** (1) ಪ್ರತಿಯೊಂದು ರಾಜ್ಯದ ಪ್ರತಿಯೊಂದು ವಿಧಾನಸಭೆಯು ಮುಂಚಿತವಾಗಿಯೇ ವಿಸರ್ಜನೆಯಾದ ಹೊರತು ಅದು ತನ್ನ ಮೊದಲ ಸಭೆಗೆ ಗೊತ್ತುಪಡಿಸಿದ ದಿನಾಂಕದಿಂದ [1][ಐದು ವರ್ಷಗಳ] ಅವಧಿಯವರೆಗೆ ಮುಂದುವರಿಯತಕ್ಕದ್ದು. ಆದರೆ ಅದಕ್ಕಿಂತ ಹೆಚ್ಚು ಕಾಲ ಮುಂದುವರಿಯತಕ್ಕದ್ದಲ್ಲ ಮತ್ತು ಸದರಿ [1][ಐದು ವರ್ಷಗಳ] ಅವಧಿಯ ಮುಕ್ತಾಯವು ಆ ಸದನದ ವಿಸರ್ಜನೆಯು ಪರಿಣಾಮವುಳ್ಳದ್ದಾಗಿರತಕ್ಕದ್ದು:

ಪರಂತು, ಸದರಿ ಅವಧಿಯನ್ನು ತುರ್ತು ಪರಿಸ್ಥಿಯ ಉದ್ಘೋಷಣೆಯು ಜಾರಿಯಲ್ಲಿರುವಾಗ, ಸಂಸತ್ತು ಕಾನೂನಿನ ಮೂಲಕ ಒಂದು ಸಲಕ್ಕೆ ಒಂದು ವರ್ಷಕ್ಕೆ ಮೀರದ ಅವಧಿಯವರೆಗೆ ವಿಸ್ತರಿಸಬಹುದು ಮತ್ತು ಆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋದ ತರುವಾಯ ಯಾವುದೇ ಸಂದರ್ಭದಲ್ಲಿ ಆರು ತಿಂಗಳ ಅವಧಿಗೆ ಮೀರಿ ವಿಸ್ತರಿಸತಕ್ಕದ್ದಲ್ಲ.

(2) ಒಂದು ರಾಜ್ಯದ ವಿಧಾನಪರಿಷತ್ತು ವಿಸರ್ಜನೆಗೊಳಪಡತಕ್ಕದ್ದಲ್ಲ; ಆದರೆ ಅದರ ಸದಸ್ಯರಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಮೂರನೆಯ ಒಂದು ಭಾಗದಷ್ಟು ಸದಸ್ಯರು ಸಂಸತ್ತು ಕಾನೂನಿನ ಮೂಲಕ ಆ ಬಗ್ಗೆ ಮಾಡಿದ ಉಪಬಂಧಗಳಿಗನುಸಾರವಾಗಿ ಪ್ರತಿ ಎರಡನೇ ವರ್ಷ ಮುಕ್ತಾಯವಾದ ಮೇಲೆ ಆದಷ್ಟು ಬೇಗನೆ ನಿವೃತ್ತರಾಗತಕ್ಕದ್ದು.

**173. ರಾಜ್ಯ ವಿಧಾನಮಂಡಲದ ಸದಸ್ಯತ್ವಕ್ಕೆ ಅರ್ಹತೆ:-** ಯಾರೇ ವ್ಯಕ್ತಿಯು,-

[2][(ಎ) ಭಾರತದ ನಾಗರಿಕನಾಗಿರುವ ಹೊರತು ಮತ್ತು ಚುನಾವಣಾ ಆಯೋಗವು ಆ ಬಗ್ಗೆ ಅಧಿಕೃತಗೊಳಿಸಿರುವ ಯಾರೇ ವ್ಯಕ್ತಿಯ ಮುಂದೆ ಮೂರನೆಯ ಅನುಸೂಚಿಯಲ್ಲಿ ಆ ಉದ್ದೇಶಕ್ಕಾಗಿ ಕೊಟ್ಟಿರುವ ನಮೂನೆಯಲ್ಲಿ ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿ ಅದಕ್ಕೆ ರುಜು ಮಾಡಿರುವ ಹೊರತು;]

(ಬಿ) ವಿಧಾನಸಭೆಯ ಸ್ಥಾನದ ಸಂದರ್ಭದಲ್ಲಿ ಇಪ್ಪತ್ತೈದು ವರ್ಷಗಳಿಗಿಂತ ಕಡಿಮೆಯಿಲ್ಲದಷ್ಟು ವಯಸ್ಸಿನವನಾಗಿರುವ ಹೊರತು ಮತ್ತು ವಿಧಾನಪರಿಷತ್ತಿನ ಸ್ಥಾನದ ಸಂದರ್ಭದಲ್ಲಿ ಮೂವತ್ತು ವರ್ಷಗಳಿಗಿಂತ ಕಡಿಮೆಯಿಲ್ಲದಷ್ಟು ವಯಸ್ಸಿನವನಾಗಿರುವ ಹೊರತು; ಮತ್ತು

(ಸಿ) ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂಥ ಇತರ ಅರ್ಹತೆಗಳನ್ನು ಹೊಂದಿದ್ದ ಹೊರತು

- ರಾಜ್ಯದ ವಿಧಾನಮಂಡಲದಲ್ಲಿನ ಒಂದು ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಆಯ್ಕೆಯಾಗಲು ಅರ್ಹನಾಗಿರತಕ್ಕದ್ದಲ್ಲ.

---

1. 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 24ನೆಯ ಪ್ರಕರಣದ ಮೂಲಕ "ಆರು ವರ್ಷಗಳ" ಎಂಬ ಪದಗಳ ಬದಲಾಗಿ (6-9-79ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 30ನೇ ಪ್ರಕರಣದ ಮೂಲಕ "ಐದು ವರ್ಷಗಳ" ಎಂಬ ಮೂಲ ಪದಗಳಿಗೆ ಬದಲಾಗಿ "ಆರು ವರ್ಷಗಳ" ಎಂಬ ಪದಗಳನ್ನು (3-1-77 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿತ್ತು.

2. 1963ನೆಯ ಇಸವಿಯ ಸಂವಿಧಾನ (ಹದಿನಾರನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ (ಎ) ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

[1][**174. ರಾಜ್ಯ ವಿಧಾನಮಂಡಲದ ಅಧಿವೇಶನಗಳು, ಅಧಿವೇಶನದ ಮುಕ್ತಾಯ ಮತ್ತು ವಿಸರ್ಜನೆ:-** (1) ರಾಜ್ಯಪಾಲನು ತಾನು ಸೂಕ್ತವೆಂದು ಭಾವಿಸತಕ್ಕಂಥ ಕಾಲದಲ್ಲಿ ಮತ್ತು ಸ್ಥಳದಲ್ಲಿ ರಾಜ್ಯದ ವಿಧಾನಮಂಡಲದ ಸದನವನ್ನು ಅಥವಾ ಪ್ರತಿಯೊಂದು ಸದನವನ್ನು ಕಾಲಕಾಲಕ್ಕೆ ಕರೆಯತಕ್ಕದ್ದು; ಆದರೆ ಒಂದು ಅಧಿವೇಶನದ ಕೊನೆಯ ಉಪವೇಶನದ ಮತ್ತು ಮುಂದಿನ ಅಧಿವೇಶನದ ಮೊದಲನೆಯ ಉಪವೇಶನಕ್ಕೆ ಗೊತ್ತುಮಾಡಿರುವ ದಿನಾಂಕದ ನಡುವೆ ಆರು ತಿಂಗಳ ಅಂತರವಿರತಕ್ಕದ್ದಲ್ಲ.

(2) ರಾಜ್ಯಪಾಲನು ಕಾಲಕಾಲಕ್ಕೆ,-

(ಎ) ಸದನದ ಅಧಿವೇಶನವನ್ನು ಅಥವಾ ಎರಡು ಸದನಗಳಲ್ಲಿ ಯಾವುದೇ ಒಂದು ಸದನದ ಅಧಿವೇಶನವನ್ನು ಮುಕ್ತಾಯಗೊಳಿಸಬಹುದು;

(ಬಿ) ವಿಧಾನಸಭೆಯನ್ನು ವಿಸರ್ಜಿಸಬಹುದು.]

**175. ಸದನವನ್ನು ಅಥವಾ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಲು ಮತ್ತು ಅವುಗಳಿಗೆ ಸಂದೇಶಗಳನ್ನು ಕಳುಹಿಸಲು ರಾಜ್ಯಪಾಲನಿಗೆ ಇರುವ ಹಕ್ಕು:-** (1) ರಾಜ್ಯಪಾಲನು, ವಿಧಾನಸಭೆಯನ್ನು ಅಥವಾ ರಾಜ್ಯವು ವಿಧಾನಪರಿಷತ್ತನ್ನು ಹೊಂದಿರುವ ಸಂದರ್ಭದಲ್ಲಿ ಆ ರಾಜ್ಯದ ವಿಧಾನಮಂಡಲದ ಎರಡರಲ್ಲಿ ಒಂದು ಸದನವನ್ನು ಅಥವಾ ಒಟ್ಟಿಗೆ ಸಭೆ ಸೇರಿರುವ ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡಬಹುದು ಮತ್ತು ಆ ಉದ್ದೇಶಕ್ಕಾಗಿ ಸದಸ್ಯರ ಹಾಜರಾತಿಯನ್ನು ಅಗತ್ಯಪಡಿಸಬಹುದು.

(2) ರಾಜ್ಯದ ವಿಧಾನಮಂಡಲದಲ್ಲಿ ಆಗ ಇತ್ಯರ್ಥವಾಗದೆ ಉಳಿದಿರುವ ಯಾವುದೇ ವಿಧೇಯಕಕ್ಕೆ ಸಂಬಂಧಿಸಿದ ಅಥವಾ ಬೇರೆ ವಿಷಯಕ್ಕೆ ಸಂಬಂಧಿಸಿದ ಸಂದೇಶಗಳನ್ನು, ರಾಜ್ಯಪಾಲನು, ರಾಜ್ಯದ ವಿಧಾನಮಂಡಲದ ಸದನಕ್ಕೆ ಅಥವಾ ಸದನಗಳಿಗೆ ಕಳುಹಿಸಬಹುದು ಮತ್ತು ಯಾವ ಸದನಕ್ಕೆ ಯಾವುದೇ ಸಂದೇಶವನ್ನು, ಹಾಗೆ ಕಳುಹಿಸಲಾಗಿದೆಯೋ ಆ ಸದನವು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಆ ಸಂದೇಶದ ಮೂಲಕ ಅಗತ್ಯಪಡಿಸಿರುವ ಯಾವುದೇ ವಿಷಯವನ್ನು ಅನುಕೂಲವಾದಷ್ಟು ಬೇಗನೆ ಆ ಸದನವು ಪರ್ಯಾಲೋಚಿಸತಕ್ಕದ್ದು.

**176. ರಾಜ್ಯಪಾಲನಿಂದ ವಿಶೇಷ ಭಾಷಣ:-** (1) [2][ವಿಧಾನಸಭೆಯ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ತರುವಾಯ ಮೊದಲನೆಯ ಅಧಿವೇಶನದ ಪ್ರಾರಂಭದಲ್ಲಿ ಮತ್ತು ಪ್ರತಿವರ್ಷದ ಮೊದಲನೆಯ ಅಧಿವೇಶನದ ಪ್ರಾರಂಭದಲ್ಲಿ] ರಾಜ್ಯಪಾಲನು, ವಿಧಾನಸಭೆಯನ್ನು ಅಥವಾ ರಾಜ್ಯವು ವಿಧಾನಪರಿಷತ್ತನ್ನು ಹೊಂದಿರುವ ಸಂದರ್ಭದಲ್ಲಿ ಒಟ್ಟಿಗೆ ಸಭೆ ಸೇರಿರುವ ಉಭಯ ಸದನಗಳನ್ನು ಉದ್ದೇಶಿಸಿ ಭಾಷಣ ಮಾಡತಕ್ಕದ್ದು ಮತ್ತು ವಿಧಾನಮಂಡಲವನ್ನು ಕರೆದಿರುವುದರ ಕಾರಣಗಳನ್ನು ಅದಕ್ಕೆ ತಿಳಿಸತಕ್ಕದ್ದು.

(2) ಅಂಥ ಭಾಷಣದಲ್ಲಿ ಉಲ್ಲೇಖಿಸಿದ ವಿಷಯಗಳ ಚರ್ಚೆಗಾಗಿ ಕಾಲವನ್ನು ನಿಗದಿಪಡಿಸುವುದಕ್ಕಾಗಿ [3]* * * * ಸದನದ ಅಥವಾ ಎರಡೂ ಸದನಗಳ ಕಾರ್ಯವಿಧಾನವನ್ನು ವಿನಿಯಮಗೊಳಿಸುವಂಥ ನಿಯಮಗಳ ಮೂಲಕ ಉಪಬಂಧವನ್ನು ಕಲ್ಪಿಸತಕ್ಕದ್ದು.

**177. ಸದನಗಳ ಸಂಬಂಧದಲ್ಲಿ ಮಂತ್ರಿಗಳ ಮತ್ತು ಅಡ್ವೊಕೇಟ್ ಜನರಲ್‌ನ ಹಕ್ಕುಗಳು:-** ರಾಜ್ಯದ ಪ್ರತಿಯೊಬ್ಬ ಮಂತ್ರಿಯು ಮತ್ತು ಅಡ್ವೋಕೇಟ್ ಜನರಲ್‌ನು ರಾಜ್ಯದ ವಿಧಾನಸಭೆಯ ವ್ಯವಹರಣೆಗಳಲ್ಲಿ ಅಥವಾ ಆ ರಾಜ್ಯವು ವಿಧಾನಪರಿಷತ್ತನ್ನು ಹೊಂದಿರುವ ಸಂದರ್ಭದಲ್ಲಿ ಉಭಯ ಸದನಗಳ ವ್ಯವಹರಣೆಗಳಲ್ಲಿ ಮಾತನಾಡಲು ಮತ್ತು ಅನ್ಯಥಾ ಭಾಗವಹಿಸಲು ಹಾಗೂ ಅವನನ್ನು ಸದಸ್ಯನಾಗಿ ಹೆಸರಿಸಿರಬಹುದಾದಂಥ ವಿಧಾನಮಂಡಲದ ಯಾವುದೇ ಸಮಿತಿಯಲ್ಲಿ ಮಾತನಾಡಲು ಮತ್ತು ಅನ್ಯಥಾ ಅವುಗಳ ವ್ಯವಹರಣೆಗಳಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದ್ದು. ಆದರೆ ಈ ಅನುಚ್ಛೇದದ ಕಾರಣದಿಂದಲೇ ಮತದಾನ ಮಾಡಲು ಅವನು ಹಕ್ಕುಳ್ಳವನಾಗಿರತಕ್ಕದ್ದಲ್ಲ.

---

1. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 8ನೆಯ ಪ್ರಕರಣದ ಮೂಲಕ ಮೂಲ 174ನೇ ಅನುಚ್ಛೇದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 9ನೆಯ ಪ್ರಕರಣದ ಮೂಲಕ "ಪ್ರತಿಯೊಂದು ಅಧಿವೇಶನದಲ್ಲಿ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 9ನೆಯ ಪ್ರಕರಣದ ಮೂಲಕ "ಮತ್ತು ಸದನದ ಇತರ ಕಾರ್ಯಕಲಾಪಗಳಿಗಿಂತ ಆ ಚರ್ಚೆಗೆ ಅಗ್ರ ಪ್ರಾಶಸ್ತ್ಯ ಕೊಡುವಂತೆ ಗೊತ್ತುಮಾಡುವ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

## ರಾಜ್ಯ ವಿಧಾನಮಂಡಲದ ಅಧಿಕಾರಿಗಳು

**178. ವಿಧಾನಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ:-** ರಾಜ್ಯದ ಪ್ರತಿಯೊಂದು ವಿಧಾನಸಭೆಯು ತನ್ನ ಸದಸ್ಯರಲ್ಲಿ ಇಬ್ಬರನ್ನು ಅನುಕ್ರಮವಾಗಿ ಅದರ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಆದಷ್ಟು ಬೇಗ ಆಯ್ಕೆ ಮಾಡತಕ್ಕದ್ದು ಮತ್ತು ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಪದವು ಖಾಲಿ ಆದಾಗಲೆಲ್ಲಾ, ಅಧ್ಯಕ್ಷನನ್ನಾಗಿ ಅಥವಾ ಸಂದರ್ಭಾನುಸಾರ, ಉಪಾಧ್ಯಕ್ಷನನ್ನಾಗಿ ಮತ್ತೊಬ್ಬ ಸದಸ್ಯನನ್ನು ಆಯ್ಕೆಮಾಡತಕ್ಕದ್ದು.

**179. ಅಧ್ಯಕ್ಷನು ಮತ್ತು ಉಪಾಧ್ಯಕ್ಷನು ಪದಗಳನ್ನು ಖಾಲಿಮಾಡುವುದು, ಅವುಗಳಿಗೆ ರಾಜೀನಾಮೆ ನೀಡುವುದು ಮತ್ತು ಆ ಪದಗಳಿಂದ ಅವರನ್ನು ತೆಗೆದುಹಾಕುವುದು:-** ಸಭೆಯ ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ಪದಧಾರಣ ಮಾಡಿರುವ ಸದಸ್ಯನು,-

(ಎ) ಆ ಸಭೆಯ ಸದಸ್ಯನಾಗಿರುವುದು ನಿಂತುಹೋದರೆ ತನ್ನ ಪದವನ್ನು ಖಾಲಿ ಮಾಡತಕ್ಕದ್ದು;

(ಬಿ) ಅಂಥ ಸದಸ್ಯನು ಅಧ್ಯಕ್ಷನಾಗಿದ್ದರೆ ಉಪಾಧ್ಯಕ್ಷನಿಗೆ ಮತ್ತು ಉಪಾಧ್ಯಕ್ಷನಾಗಿದ್ದರೆ ಅಧ್ಯಕ್ಷನಿಗೆ ಯಾವುದೇ ಕಾಲದಲ್ಲಿ ತಾನು ಸಹಿ ಮಾಡಿದ ಪತ್ರವನ್ನು ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು; ಮತ್ತು

(ಸಿ) ವಿಧಾನಸಭೆಯ ಆಗಿನ ಎಲ್ಲ ಸದಸ್ಯರ ಬಹುಮತದಿಂದ ಅಂಗೀಕೃತವಾದ ನಿರ್ಣಯದ ಮೂಲಕ ಅವನನ್ನು ಪದದಿಂದ ತೆಗೆದುಹಾಕಬಹುದು:

ಪರಂತು, (ಸಿ) ಖಂಡದ ಉದ್ದೇಶಕ್ಕಾಗಿ ಯಾವುದೇ ನಿರ್ಣಯವನ್ನು ಮಂಡಿಸುವ ಆಶಯದ ನೋಟೀಸನ್ನು ಕನಿಷ್ಠಪಕ್ಷ ಹದಿನಾಲ್ಕು ದಿನಗಳ ಮುಂಚಿತವಾಗಿ ಕೊಟ್ಟಿದ್ದ ಹೊರತು ಅಂಥ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ:

ಮತ್ತೂ ಪರಂತು, ವಿಧಾನಸಭೆಯು ವಿಸರ್ಜನೆಯಾದಾಗಲೆಲ್ಲ, ವಿಸರ್ಜನೆಯಾದ ತರುವಾಯ ನಡೆಯುವ ವಿಧಾನಸಭೆಯ ಮೊದಲನೆಯ ಅಧಿವೇಶನದ ನಿಕಟಪೂರ್ವದ ಸಮಯದವರೆಗೆ ಅಧ್ಯಕ್ಷನು ತನ್ನ ಪದವನ್ನು ಖಾಲಿ ಮಾಡತಕ್ಕದ್ದಲ್ಲ.

**180. ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಲು ಅಥವಾ ಅಧ್ಯಕ್ಷ ಪದದ ಕರ್ತವ್ಯಗಳನ್ನು ನೆರವೇರಿಸಲು ಉಪಾಧ್ಯಕ್ಷನ ಅಥವಾ ಇತರ ವ್ಯಕ್ತಿಯ ಅಧಿಕಾರ:-** (1) ಅಧ್ಯಕ್ಷನ ಪದವು ಖಾಲಿಯಾಗಿರುವಾಗ ಆ ಪದದ ಕರ್ತವ್ಯಗಳನ್ನು ಉಪಾಧ್ಯಕ್ಷನು ನೆರವೇರಿಸತಕ್ಕದ್ದು ಅಥವಾ ಉಪಾಧ್ಯಕ್ಷನ ಪದವೂ ಖಾಲಿಯಾಗಿರುವಾಗ ಆ ಉದ್ದೇಶಕ್ಕಾಗಿ ರಾಜ್ಯಪಾಲನು ನೇಮಕ ಮಾಡಬಹುದಾದಂಥ ಸಭೆಯ ಸದಸ್ಯನು ಅಧ್ಯಕ್ಷನ ಪದದ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(2) ಸಭೆಯ ಯಾವುದೇ ಉಪವೇಶನದಲ್ಲಿ ಅಧ್ಯಕ್ಷನು ಗೈರುಹಾಜರಾಗಿರುವಾಗ, ಉಪಾಧ್ಯಕ್ಷನು ಅಥವಾ ಅವನೂ ಗೈರುಹಾಜರಾಗಿರುವಾಗ ಸಭೆಯ ಪ್ರಕ್ರಿಯಾ ನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ವ್ಯಕ್ತಿಯು ಅಥವಾ ಅಂಥ ಯಾವ ವ್ಯಕ್ತಿಯೂ ಹಾಜರಿಲ್ಲದಿದ್ದರೆ ಸಭೆಯು ನಿರ್ಧರಿಸಬಹುದಾದಂಥ ಇತರ ಯಾರೇ ವ್ಯಕ್ತಿಯು ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸತಕ್ಕದ್ದು.

**181. ಅಧ್ಯಕ್ಷನನ್ನು ಅಥವಾ ಉಪಾಧ್ಯಕ್ಷನನ್ನು ಪದದಿಂದ ತೆಗೆದುಹಾಕುವ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಅವನು ಅಧ್ಯಕ್ಷತೆ ವಹಿಸತಕ್ಕದ್ದಲ್ಲ:-** (1) ವಿಧಾನಸಭೆಯ ಯಾವುದೇ ಉಪವೇಶನದಲ್ಲಿ ಅಧ್ಯಕ್ಷನನ್ನು ಅವನ ಪದದಿಂದ ತೆಗೆದುಹಾಕುವ ಯಾವುದೇ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ, ಅಧ್ಯಕ್ಷನು ಹಾಜರಿದ್ದರೂ ಅವನು, ಅಥವಾ ಉಪಾಧ್ಯಕ್ಷನನ್ನು ಅವನ ಪದದಿಂದ ತೆಗೆದುಹಾಕುವ ಯಾವುದೇ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ, ಉಪಾಧ್ಯಕ್ಷನು ಹಾಜರಿದ್ದರೂ ಅವನು ಅಧ್ಯಕ್ಷತೆ ವಹಿಸತಕ್ಕದ್ದಲ್ಲ. 180ನೆಯ ಅನುಚ್ಛೇದದ (2)ನೆಯ ಖಂಡದ ಉಪಬಂಧಗಳು, ಅಧ್ಯಕ್ಷನು ಅಥವಾ ಸಂದರ್ಭಾನುಸಾರ ಉಪಾಧ್ಯಕ್ಷನು ಗೈರುಹಾಜರಾಗಿರುವ ಉಪವೇಶನದ ಸಂಬಂಧದಲ್ಲಿ ಅನ್ವಯವಾಗುವಂತೆಯೇ ಅಂಥ ಪ್ರತಿಯೊಂದು ಉಪವೇಶನದ ಸಂಬಂಧದಲ್ಲಿಯೂ ಅನ್ವಯವಾಗತಕ್ಕದ್ದು.

(2) ಅಧ್ಯಕ್ಷನನ್ನು ಪದದಿಂದ ತೆಗೆದುಹಾಕುವ ಯಾವುದೇ ನಿರ್ಣಯವು ವಿಧಾನ ಸಭೆಯ ಪರ್ಯಾಲೋಚನೆಯಲ್ಲಿರುವಾಗ ಅಧ್ಯಕ್ಷನು ವಿಧಾನಸಭೆಯಲ್ಲಿ ಮಾತನಾಡುವ ಮತ್ತು ಅದರ ವ್ಯವಹರಣೆಗಳಲ್ಲಿ ಅನ್ಯಥಾ ಭಾಗವಹಿಸುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು 189ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ಅಂಥ ನಿರ್ಣಯದ ಮೇಲೆ ಅಥವಾ ಅಂಥ ವ್ಯವಹರಣೆಗಳಲ್ಲಿ ಇತರ ಯಾವುದೇ ವಿಷಯದ ಮೇಲೆ ಪ್ರಥಮತಃ ಮಾತ್ರ ಮತಕೊಡುವ ಹಕ್ಕು ಅವನಿಗಿರತಕ್ಕದ್ದು; ಆದರೆ, ಮತಗಳು ಸಮವಾಗಿರುವ ಸಂದರ್ಭದಲ್ಲಿ ಮತ ಕೊಡಲು ಅವನು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**182. ವಿಧಾನ ಪರಿಷತ್ತಿನ ಸಭಾಪತಿ ಮತ್ತು ಉಪಸಭಾಪತಿ:-** ವಿಧಾನಪರಿಷತ್ತನ್ನು ಹೊಂದಿರುವ ಪ್ರತಿಯೊಂದು ರಾಜ್ಯದ ವಿಧಾನ ಪರಿಷತ್ತು, ತನ್ನ ಇಬ್ಬರು ಸದಸ್ಯರನ್ನು ಅನುಕ್ರಮವಾಗಿ ಅದರ ಸಭಾಪತಿಯಾಗಿ ಮತ್ತು ಉಪಸಭಾಪತಿಯಾಗಿ ಆದಷ್ಟು ಬೇಗ ಆಯ್ಕೆ ಮಾಡತಕ್ಕದ್ದು ಮತ್ತು ಸಭಾಪತಿಯ ಪದವು ಮತ್ತು ಉಪಸಭಾಪತಿಯ ಪದವು ಖಾಲಿ ಆದಾಗಲೆಲ್ಲ ಸಭಾಪತಿಯಾಗಿ ಅಥವಾ ಸಂದರ್ಭಾನುಸಾರ ಉಪಸಭಾಪತಿಯಾಗಿ ಮತ್ತೊಬ್ಬ ಸದಸ್ಯನನ್ನು ಆಯ್ಕೆ ಮಾಡತಕ್ಕದ್ದು.

**183. ಸಭಾಪತಿಯು ಮತ್ತು ಉಪಸಭಾಪತಿಯು ಪದಗಳನ್ನು ಖಾಲಿ ಮಾಡುವುದು, ಪದಗಳಿಗೆ ರಾಜೀನಾಮೆ ನೀಡುವುದು ಮತ್ತು ಪದಗಳಿಂದ ಅವರನ್ನು ತೆಗೆದುಹಾಕುವುದು:-** ವಿಧಾನಪರಿಷತ್ತಿನ ಸಭಾಪತಿಯಾಗಿ ಅಥವಾ ಉಪಸಭಾಪತಿಯಾಗಿ ಪದಧಾರಣ ಮಾಡಿರುವ ಸದಸ್ಯನು,-

(ಎ) ಆ ಪರಿಷತ್ತಿನ ಸದಸ್ಯನಾಗಿರುವುದು ನಿಂತುಹೋದಲ್ಲಿ ತನ್ನ ಪದವನ್ನು ಖಾಲಿ ಮಾಡತಕ್ಕದ್ದು;

(ಬಿ) ಅಂಥ ಸದಸ್ಯನು ಸಭಾಪತಿಯಾಗಿದ್ದರೆ ಉಪಸಭಾಪತಿಗೆ ಅಥವಾ ಉಪಸಭಾಪತಿಯಾಗಿದ್ದರೆ ಸಭಾಪತಿಗೆ ಯಾವುದೇ ಕಾಲದಲ್ಲಿ ತಾನು ಸಹಿ ಮಾಡಿದ ಪತ್ರವನ್ನು ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು; ಮತ್ತು

(ಸಿ) ಆ ಪರಿಷತ್ತಿನ ಆಗಿನ ಎಲ್ಲ ಸದಸ್ಯರ ಬಹುಮತದಿಂದ ಅಂಗೀಕೃತವಾದ ನಿರ್ಣಯದ ಮೂಲಕ ಅವನನ್ನು ಪದದಿಂದ ತೆಗೆದುಹಾಕಬಹುದು:

ಪರಂತು, (ಸಿ) ಖಂಡದ ಉದ್ದೇಶಕ್ಕಾಗಿ ಯಾವುದೇ ನಿರ್ಣಯವನ್ನು ಮಂಡಿಸುವ ಆಶಯದ ನೋಟೀಸನ್ನು ಕನಿಷ್ಠಪಕ್ಷ ಹದಿನಾಲ್ಕು ದಿನಗಳ ಮುಂಚಿತವಾಗಿ ಕೊಟ್ಟಿದ್ದ ಹೊರತು ಅಂಥ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ.

**184. ಸಭಾಪತಿಯಾಗಿ ಕಾರ್ಯನಿರ್ವಹಿಸಲು ಅಥವಾ ಸಭಾಪತಿಯ ಪದದ ಕರ್ತವ್ಯಗಳನ್ನು ನೆರವೇರಿಸಲು ಉಪಸಭಾಪತಿಯ ಅಥವಾ ಇತರ ವ್ಯಕ್ತಿಯ ಅಧಿಕಾರ:-** (1) ಸಭಾಪತಿಯ ಪದವು ಖಾಲಿಯಾಗಿರುವಾಗ ಆ ಪದದ ಕರ್ತವ್ಯಗಳನ್ನು ಉಪಸಭಾಪತಿಯು ನೆರವೇರಿಸತಕ್ಕದ್ದು ಅಥವಾ ಉಪಸಭಾಪತಿಯ ಪದವೂ ಖಾಲಿಯಾಗಿರುವಲ್ಲಿ ಆ ಉದ್ದೇಶಕ್ಕಾಗಿ ರಾಜ್ಯಪಾಲನು ನೇಮಕ ಮಾಡಬಹುದಾದಂಥ ಪರಿಷತ್ತಿನ ಸದಸ್ಯನು ಸಭಾಪತಿಯ ಪದದ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(2) ಪರಿಷತ್ತಿನ ಯಾವುದೇ ಉಪವೇಶನದಲ್ಲಿ ಸಭಾಪತಿಯು ಗೈರುಹಾಜರಾಗಿರುವಾಗ ಉಪಸಭಾಪತಿಯು, ಅಥವಾ ಅವನೂ ಗೈರುಹಾಜರಿರುವಾಗ ಆ ಪರಿಷತ್ತಿನ ಪ್ರಕ್ರಿಯಾ ನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ವ್ಯಕ್ತಿಯು ಅಥವಾ ಅಂಥ ಯಾವ ವ್ಯಕ್ತಿಯೂ ಹಾಜರಿಲ್ಲದಿದ್ದರೆ, ಆ ಪರಿಷತ್ತು ನಿರ್ಧರಿಸಬಹುದಾದಂಥ ಇತರ ಯಾರೇ ವ್ಯಕ್ತಿಯು ಸಭಾಪತಿಯಾಗಿ ಕಾರ್ಯ ನಿರ್ವಹಿಸತಕ್ಕದ್ದು.

**185. ಸಭಾಪತಿಯನ್ನು ಅಥವಾ ಉಪಸಭಾಪತಿಯನ್ನು ಪದದಿಂದ ತೆಗೆದುಹಾಕುವ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಅವನು ಅಧ್ಯಕ್ಷತೆ ವಹಿಸತಕ್ಕದ್ದಲ್ಲ:-** (1) ವಿಧಾನಪರಿಷತ್ತಿನ ಯಾವುದೇ ಉಪವೇಶನದಲ್ಲಿ ಸಭಾಪತಿಯನ್ನು ಅವನ ಪದದಿಂದ ತೆಗೆದುಹಾಕುವ ಯಾವುದೇ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಸಭಾಪತಿಯು ಹಾಜರಿದ್ದರೂ ಅವನು, ಅಥವಾ ಉಪಸಭಾಪತಿಯನ್ನು ಅವನ ಪದದಿಂದ ತೆಗೆದುಹಾಕುವ ಯಾವುದೇ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ ಉಪಸಭಾಪತಿಯು ಹಾಜರಿದ್ದರೂ ಅವನು ಅಧ್ಯಕ್ಷತೆ ವಹಿಸತಕ್ಕದ್ದಲ್ಲ ಮತ್ತು 184ನೆಯ ಅನುಚ್ಛೇದದ (2)ನೆಯ ಖಂಡದ ಉಪಬಂಧಗಳು, ಸಭಾಪತಿಯು ಅಥವಾ ಸಂದರ್ಭಾನುಸಾರ ಉಪಸಭಾಪತಿಯು ಗೈರುಹಾಜರಾಗಿರುವ ಉಪವೇಶನದ ಸಂಬಂಧದಲ್ಲಿ ಅನ್ವಯವಾಗುವಂತೆಯೇ ಅಂಥ ಪ್ರತಿಯೊಂದು ಉಪವೇಶನದ ಸಂಬಂಧದಲ್ಲಿಯೂ ಅನ್ವಯವಾಗತಕ್ಕದ್ದು.

(2) ಸಭಾಪತಿಯನ್ನು ಅವನ ಪದದಿಂದ ತೆಗೆದುಹಾಕುವ ಯಾವುದೇ ನಿರ್ಣಯವು ವಿಧಾನ ಪರಿಷತ್ತಿನಲ್ಲಿ ಪರ್ಯಾಲೋಚನೆಯಲ್ಲಿರುವಾಗ ಸಭಾಪತಿಯು ವಿಧಾನಪರಿಷತ್ತಿನಲ್ಲಿ ಮಾತನಾಡುವ ಮತ್ತು ಅದರ ವ್ಯವಹರಣೆಗಳಲ್ಲಿ ಅನ್ಯಥಾ ಭಾಗವಹಿಸುವ ಹಕ್ಕನ್ನು ಹೊಂದಿರತಕ್ಕದ್ದು; ಮತ್ತು 189ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ಅಂಥ ನಿರ್ಣಯದ ಮೇಲೆ ಅಥವಾ ವ್ಯವಹರಣೆಗಳ ಇತರ ಯಾವುದೇ ವಿಷಯದ ಮೇಲೆ ಪ್ರಥಮತಃ ಮತ ಕೊಡಲು ಹಕ್ಕುಳ್ಳವನಾಗಿರತಕ್ಕದ್ದು; ಆದರೆ ಮತಗಳು ಸಮನಾಗಿರುವ ಸಂದರ್ಭದಲ್ಲಿ ಮತ ಕೊಡುವ ಹಕ್ಕು ಅವನಿಗಿರತಕ್ಕದ್ದಲ್ಲ.

**186. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಹಾಗೂ ಸಭಾಪತಿಯ ಮತ್ತು ಉಪಸಭಾಪತಿಯ ಸಂಬಳಗಳು ಮತ್ತು ಭತ್ಯೆಗಳು:–** ವಿಧಾನಸಭೆಯ ಅಧ್ಯಕ್ಷನಿಗೆ ಮತ್ತು ಉಪಾಧ್ಯಕ್ಷನಿಗೆ ಹಾಗೂ ವಿಧಾನ ಪರಿಷತ್ತಿನ ಸಭಾಪತಿಗೆ ಮತ್ತು ಉಪಸಭಾಪತಿಗೆ ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ಅನುಕ್ರಮವಾಗಿ ನಿಗದಿಪಡಿಸಬಹುದಾದಂಥ ಸಂಬಳಗಳು ಮತ್ತು ಭತ್ಯಗಳು ಸಂದಾಯವಾಗತಕ್ಕದ್ದು ಮತ್ತು ಈ ಬಗ್ಗೆ ಉಪಬಂಧವನ್ನು ಹಾಗೆ ಮಾಡುವವರೆಗೆ ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಸಂಬಳಗಳು ಮತ್ತು ಭತ್ಯಗಳು ಅವರಿಗೆ ಸಂದಾಯವಾಗತಕ್ಕದ್ದು.

**187. ರಾಜ್ಯವಿಧಾನಮಂಡಲದ ಸಚಿವಾಲಯ:–** (1) ಒಂದು ರಾಜ್ಯದ ವಿಧಾನಮಂಡಲದ ಸದನಕ್ಕೆ ಅಥವಾ ಉಭಯ ಸದನಗಳಿಗೆ ಪ್ರತ್ಯೇಕ ಸಚಿವಾಲಯ ಸಿಬ್ಬಂದಿ ಇರತಕ್ಕದ್ದು:

ಪರಂತು, ಈ ಖಂಡದಲ್ಲಿ ಇರುವುದು ಯಾವುದೂ ವಿಧಾನಪರಿಷತ್ತನ್ನು ಹೊಂದಿರುವ ರಾಜ್ಯದ ವಿಧಾನಮಂಡಲದ ಸಂದರ್ಭದಲ್ಲಿ ಅಂಥ ವಿಧಾನಮಂಡಲದ ಉಭಯ ಸದನಗಳಿಗೆ ಸಾಮಾನ್ಯವಾಗಿರುವ ಹುದ್ದೆಗಳನ್ನು ಸೃಜಿಸುವುದಕ್ಕೆ ಅಡ್ಡಿಯನ್ನುಂಟುಮಾಡುವುದಾಗಿ ಅರ್ಥೈಸತಕ್ಕದ್ದಲ್ಲ.

(2) ರಾಜ್ಯದ ವಿಧಾನಮಂಡಲದ ಸದನದ ಅಥವಾ ಉಭಯ ಸದನಗಳ ಸಚಿವಾಲಯ ಸಿಬ್ಬಂದಿಯ ನೇಮಕಾತಿಯನ್ನು ಮತ್ತು ನೇಮಕಗೊಂಡ ವ್ಯಕ್ತಿಗಳ ಸೇವಾ ಷರತ್ತುಗಳನ್ನು ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ವಿನಿಯಮಿಸಬಹುದು.

(3) (2)ನೆಯ ಖಂಡದ ಮೇರೆಗೆ ರಾಜ್ಯದ ವಿಧಾನಮಂಡಲವು ಉಪಬಂಧವನ್ನು ಮಾಡುವವರೆಗೆ, ರಾಜ್ಯಪಾಲನು ವಿಧಾನಸಭೆಯ ಅಧ್ಯಕ್ಷನೊಂದಿಗೆ ಅಥವಾ ಸಂದರ್ಭಾನುಸಾರ, ವಿಧಾನಪರಿಷತ್ತಿನ ಸಭಾಪತಿಯೊಂದಿಗೆ ಸಮಾಲೋಚಿಸಿ ಆ ಸಭೆಯ ಅಥವಾ ಆ ಪರಿಷತ್ತಿನ ಸಚಿವಾಲಯ ಸಿಬ್ಬಂದಿ ನೇಮಕಾತಿಯನ್ನು ಮತ್ತು ನೇಮಕಗೊಂಡ ವ್ಯಕ್ತಿಗಳ ಸೇವಾ ಷರತ್ತುಗಳನ್ನು ವಿನಿಯಮಿಸುವ ನಿಯಮಗಳನ್ನು ರಚಿಸಬಹುದು ಮತ್ತು ಹಾಗೆ ರಚಿತವಾದ ಯಾವುವೇ ನಿಯಮಗಳು ಸದರಿ ಖಂಡದ ಮೇರೆಗೆ ರಚಿತವಾದ ಕಾನೂನಿನ ಯಾವುವೇ ಉಪಬಂಧಗಳಿಗೆ ಒಳಪಟ್ಟು ಪರಿಣಾಮಕಾರಿಯಾಗತಕ್ಕದ್ದು.

## ಕಾರ್ಯಕಲಾಪ ನಿರ್ವಹಣೆ

**188. ಸದಸ್ಯರಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ:–** ಒಂದು ರಾಜ್ಯದ ವಿಧಾನಸಭೆಯ ಅಥವಾ ವಿಧಾನಪರಿಷತ್ತಿನ ಪ್ರತಿಯೊಬ್ಬ ಸದಸ್ಯನು, ತನ್ನ ಸ್ಥಾನವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ರಾಜ್ಯಪಾಲನ ಸಮಕ್ಷಮ ಅಥವಾ ರಾಜ್ಯಪಾಲನಿಂದ ಆ ಬಗ್ಗೆ ನೇಮಕಗೊಂಡ ವ್ಯಕ್ತಿಯ ಸಮಕ್ಷಮ ಆ ಉದ್ದೇಶಕ್ಕಾಗಿ ಮೂರನೆಯ ಅನುಸೂಚಿಯಲ್ಲಿ ಕೊಡಲಾಗಿರುವ ನಮೂನೆಗೆ ಅನುಸಾರ ಪ್ರಮಾಣ ಅಥವಾ ಪ್ರತಿಜ್ಞೆ ಮಾಡತಕ್ಕದ್ದು ಮತ್ತು ಅದಕ್ಕೆ ತನ್ನ ರುಜು ಹಾಕತಕ್ಕದ್ದು.

**189. ಸದನಗಳಲ್ಲಿ ಮತದಾನ, ಖಾಲಿಸ್ಥಾನಗಳು ಏನೇ ಇದ್ದಾಗ್ಯೂ ಕಾರ್ಯನಿರ್ವಹಿಸಲು ಸದನಗಳ ಅಧಿಕಾರ ಮತ್ತು ಕೋರಂ:–** (1) ಈ ಸಂವಿಧಾನದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಹೊರತುಪಡಿಸಿ ಒಂದು ರಾಜ್ಯದ ವಿಧಾನಮಂಡಲದ ಒಂದು ಸದನದ ಯಾವುದೇ ಉಪವೇಶನದಲ್ಲಿ ಅಧ್ಯಕ್ಷನನ್ನು ಅಥವಾ ಸಭಾಪತಿಯನ್ನು ಅಥವಾ ಅಧ್ಯಕ್ಷನಾಗಿ ಅಥವಾ ಸಭಾಪತಿಯಾಗಿ ಕಾರ್ಯವನ್ನು ನಿರ್ವಹಿಸುವ ವ್ಯಕ್ತಿಯನ್ನು ಹೊರತುಪಡಿಸಿ ಹಾಜರಿದ್ದು ಮತಕೊಡುವ ಸದಸ್ಯರ ಬಹುಮತದ ಮೂಲಕ ಎಲ್ಲ ಪ್ರಶ್ನೆಗಳನ್ನು ನಿರ್ಧರಿಸತಕ್ಕದ್ದು.

ಅಧ್ಯಕ್ಷನು ಅಥವಾ ಸಭಾಪತಿಯು ಅಥವಾ ಅಧ್ಯಕ್ಷನಾಗಿ ಅಥವಾ ಸಭಾಪತಿಯಾಗಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಯು ಪ್ರಥಮತಃ ಮತ ಕೊಡತಕ್ಕದ್ದಲ್ಲ, ಆದರೆ ಮತಗಳು ಸಮನಾಗಿರುವ ಸಂದರ್ಭದಲ್ಲಿ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಅವನು ಚಲಾಯಿಸತಕ್ಕದ್ದು.

(2) ಒಂದು ರಾಜ್ಯದ ವಿಧಾನಮಂಡಲದ ಸದನದಲ್ಲಿ ಯಾವುದೇ ಸದಸ್ಯ ಸ್ಥಾನವು ಖಾಲಿ ಆಗಿದ್ದಾಗ್ಯೂ ಆ ಸದನವು ಕಾರ್ಯನಿರ್ವಹಿಸಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಒಂದು ರಾಜ್ಯದ ವಿಧಾನಮಂಡಲದಲ್ಲಿ ಯಾವುವೇ ವ್ಯವಹರಣೆಗಳು ನಡೆಯುತ್ತಿರುವಾಗ ಅಲ್ಲಿ ಕುಳಿತಿರಲು, ಮತ ಕೊಡಲು ಅಥವಾ ಅನ್ಯಥಾ ಅದರ ವ್ಯವಹರಣೆಗಳಲ್ಲಿ ಭಾಗವಹಿಸಲು ಹಕ್ಕಿಲ್ಲದ ಯಾರೇ ವ್ಯಕ್ತಿಯು ಹಾಗೆ ಮಾಡಿರುವುದು ಆ ತರುವಾಯ ಕಂಡು ಬಂದಾಗ್ಯೂ, ಆ ವ್ಯವಹರಣೆಗಳು ಸಿಂಧುವಾಗಿರತಕ್ಕದ್ದು.

(3) ಒಂದು ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸುವವರೆಗೆ, ಆ ರಾಜ್ಯದ ವಿಧಾನಮಂಡಲದ ಸದನದ ಸಭೆಯು ನಡೆಯಲು ಒಂದು ಸದನದ ಹತ್ತು ಮಂದಿ ಸದಸ್ಯರು ಅಥವಾ ಆ ಸದನದ ಸದಸ್ಯರ ಒಟ್ಟು ಸಂಖ್ಯೆಯ ಹತ್ತನೆಯ ಒಂದು ಭಾಗದಷ್ಟು ಸದಸ್ಯರು – ಇವುಗಳಲ್ಲಿ ಯಾವುದು ಹೆಚ್ಚೋ ಅದು ಆ ಸದನದ ಸಭೆಗೆ ಬೇಕಾದ ಕೋರಂ ಆಗಿರತಕ್ಕದ್ದು.

(4) ಒಂದು ರಾಜ್ಯದ ವಿಧಾನಸಭೆಯ ಅಥವಾ ವಿಧಾನಪರಿಷತ್ತಿನ ಸಭೆಯು ನಡೆಯುತ್ತಿರುವ ಯಾವುದೇ ಕಾಲದಲ್ಲಿ ಕೋರಂ ಇಲ್ಲದಿದ್ದರೆ, ಕೋರಂ ಆಗುವವರೆಗೆ ಸದನವನ್ನು ಮುಂದೂಡುವುದು ಅಥವಾ ಸಭೆಯನ್ನು ಸ್ಥಗಿತಗೊಳಿಸುವುದು ಅಧ್ಯಕ್ಷನ ಅಥವಾ ಸಭಾಪತಿಯ ಅಥವಾ ಅಧ್ಯಕ್ಷನಾಗಿ ಅಥವಾ ಸಭಾಪತಿಯಾಗಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು.

## ಸದಸ್ಯರ ಅನರ್ಹತೆಗಳು

**190. ಸ್ಥಾನಗಳನ್ನು ಖಾಲಿ ಮಾಡುವುದು:–** (1) ಯಾರೇ ವ್ಯಕ್ತಿಯು ಒಂದು ರಾಜ್ಯದ ವಿಧಾನಮಂಡಲದ ಉಭಯ ಸದನಗಳ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಉಭಯ ಸದನಗಳ ಸದಸ್ಯನಾಗಿ ಆಯ್ಕೆಯಾದರೆ, ಯಾರೇ ವ್ಯಕ್ತಿಯು ಅವನು ಉಭಯ ಸದನಗಳಲ್ಲಿ ಯಾವುದಾದರೂ ಒಂದು ಸದನದ ತನ್ನ ಸ್ಥಾನವನ್ನು ಖಾಲಿ ಮಾಡುವಂತೆ ಆ ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ಉಪಬಂಧವನ್ನು ಮಾಡತಕ್ಕದ್ದು.

(2) ಯಾರೇ ವ್ಯಕ್ತಿಯು ಮೊದಲನೆಯ ಅನುಸೂಚಿಯಲ್ಲಿ ಉಲ್ಲಿಖಿತವಾಗಿರುವ ಎರಡು ಅಥವಾ ಹೆಚ್ಚು ರಾಜ್ಯಗಳ ವಿಧಾನಮಂಡಲಗಳ ಸದಸ್ಯನಾಗಿರತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು ಅಂಥ ಎರಡು ಅಥವಾ ಹೆಚ್ಚು ರಾಜ್ಯಗಳ ವಿಧಾನಮಂಡಲಗಳ ಸದಸ್ಯನಾಗಿ ಆಯ್ಕೆಯಾದರೆ, ಆಗ ರಾಷ್ಟ್ರಪತಿಯು ರಚಿಸಿದ [1]ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯು ಮುಕ್ತಾಯವಾಗುವುದಕ್ಕಿಂತ ಮುಂಚಿತವಾಗಿ ಅವನು ಆ ರಾಜ್ಯಗಳಲ್ಲಿ ಒಂದು ರಾಜ್ಯದ ಹೊರತು ಉಳಿದ ರಾಜ್ಯಗಳ ವಿಧಾನಮಂಡಲಗಳಲ್ಲಿನ ತನ್ನ ಸ್ಥಾನಕ್ಕೆ ಆ ಮೊದಲೇ ರಾಜೀನಾಮೆ ಕೊಟ್ಟಿರದಿದ್ದರೆ ಆ ಅವಧಿಯು ಮುಕ್ತಾಯವಾದ ಮೇಲೆ ಆ ಎಲ್ಲ ರಾಜ್ಯಗಳ ವಿಧಾನಮಂಡಲಗಳಲ್ಲಿ ಅವನ ಸ್ಥಾನವು ಖಾಲಿ ಆಗತಕ್ಕದ್ದು.

(3) ಒಂದು ರಾಜ್ಯದ ವಿಧಾನಮಂಡಲದ ಯಾವುದೇ ಸದನದ ಸದಸ್ಯನು,–

(ಎ) [2][191ನೆಯ ಅನುಚ್ಛೇದದ (1)ನೆಯ ಖಂಡದಲ್ಲಿ ಅಥವಾ (2) ನೆಯ ಖಂಡದಲ್ಲಿ] ನಮೂದಿಸಿರುವ ಅನರ್ಹತೆಗಳಲ್ಲಿ ಯಾವುದೇ ಅನರ್ಹತೆಗೆ ಒಳಗಾದರೆ; ಅಥವಾ

[3][(ಬಿ) ಅಧ್ಯಕ್ಷನಿಗೆ ಅಥವಾ ಸಂದರ್ಭಾನುಸಾರ ಸಭಾಪತಿಗೆ ತಾನು ಸಹಿ ಮಾಡಿದ ಪತ್ರವನ್ನು ಬರೆದು ತನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟರೆ ಮತ್ತು ಅವನ ರಾಜೀನಾಮೆಯನ್ನು ಅಧ್ಯಕ್ಷನು ಅಥವಾ ಸಂದರ್ಭಾನುಸಾರ ಸಭಾಪತಿಯು ಅಂಗೀಕರಿಸಿದರೆ]

– ಆ ನಂತರ ಅವನ ಸ್ಥಾನವು ಖಾಲಿಯಾಗತಕ್ಕದ್ದು:

[4][ಪರಂತು, (ಬಿ) ಉಪಖಂಡದಲ್ಲಿ ಉಲ್ಲಿಖಿತವಾದ ಯಾವುದೇ ರಾಜೀನಾಮೆಯ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಸಂದರ್ಭಾನುಸಾರ ಸಭಾಪತಿಯು ತನಗೆ ದೊರೆತಿರುವ ಮಾಹಿತಿಯ ಮೇಲೆ ಅಥವಾ ಅನ್ಯಥಾ ಮತ್ತು ತನಗೆ ಸೂಕ್ತವೆಂದು ತೋರುವಂಥ ವಿಚಾರಣೆಯನ್ನು ನಡೆಸಿದ ಬಳಿಕ, ಆ ರಾಜೀನಾಮೆಯನ್ನು ಸ್ವಯಿಚ್ಛೆಯಿಂದ ಕೊಟ್ಟಿಲ್ಲವೆಂದು ಅಥವಾ ಅದು ನೈಜವಾದುದಲ್ಲ ಎಂದು ಮನಗಂಡರೆ, ಅವನು ಅಂಥ ರಾಜೀನಾಮೆಯನ್ನು ಅಂಗೀಕರಿಸತಕ್ಕದ್ದಲ್ಲ.]

---

1. 1950ನೇ ಇಸವಿಯ ಏಕಕಾಲಿಕ ಸದಸ್ಯತ್ವ ನಿಷೇಧ ನಿಯಮಗಳು – ಭಾರತ ವಿಶೇಷ ರಾಜಪತ್ರದ 678ನೇ ಪುಟದಲ್ಲಿ ಪ್ರಕಟವಾಗಿರುವ ಕಾನೂನು ಮಂತ್ರಾಲಯದ ಅಧಿಸೂಚನೆ ಎಫ್. 46/50-ಸಿ, ದಿನಾಂಕ: 26-1-1950 ನೋಡಿ.
2. 1985ನೆಯ ಇಸವಿಯ ಸಂವಿಧಾನ (ಐವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ "191ನೆಯ ಅನುಚ್ಛೇದದ (1)ನೇ ಖಂಡದಲ್ಲಿ" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. 1974ನೆಯ ಇಸವಿಯ ಸಂವಿಧಾನ (ಮೂವತ್ತಮೂರನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಮೂಲ (ಬಿ) ಉಪಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
4. 1974ನೆಯ ಇಸವಿಯ ಸಂವಿಧಾನ (ಮೂವತ್ತಮೂರನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

(4) ಒಂದು ರಾಜ್ಯದ ವಿಧಾನಮಂಡಲದ ಯಾವುದೇ ಸದನದ ಸದಸ್ಯನು ಆ ಸದನದ ಅನುಮತಿ ಇಲ್ಲದೆ ಅರವತ್ತು ದಿನಗಳ ಅವಧಿಯವರೆಗೆ ಅದರ ಎಲ್ಲ ಸಭೆಗಳಿಗೂ ಗೈರುಹಾಜರಾದರೆ, ಅವನ ಸ್ಥಾನವು ಖಾಲಿಯಾಗಿದೆಯೆಂದು ಆ ಸದನವು ಘೋಷಿಸಬಹುದು:

ಪರಂತು, ಸದರಿ ಅರವತ್ತು ದಿನಗಳ ಅವಧಿಯನ್ನು ಲೆಕ್ಕಹಾಕುವಲ್ಲಿ ಆ ಸದನದ ಅಧಿವೇಶನವನ್ನು ಮುಕ್ತಾಯಗೊಳಿಸಲಾದ ಅವಧಿಯನ್ನು ಅಥವಾ ನಿರಂತರ ನಾಲ್ಕು ದಿನಗಳಿಗಿಂತ ಹೆಚ್ಚು ಕಾಲ ಮುಂದೂಡಲಾದ ಯಾವುದೇ ಅವಧಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**191. ಸದಸ್ಯತ್ವಕ್ಕೆ ಅನರ್ಹತೆಗಳು:–** (1) ಯಾರೇ ವ್ಯಕ್ತಿಯು,–

(ಎ) ಭಾರತ ಸರ್ಕಾರದ ಅಥವಾ ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ರಾಜ್ಯಸರ್ಕಾರದ ಅಧೀನದಲ್ಲಿರುವ ಯಾವ ಪದವನ್ನು ಧಾರಣ ಮಾಡಿದವನು ಹಾಗೆ ಅನರ್ಹನಾಗುವುದಿಲ್ಲವೆಂದು ರಾಜ್ಯದ ವಿಧಾನಮಂಡಲವು ಕಾನೂನು ಮೂಲಕ ಘೋಷಿಸಿದೆಯೋ ಅಂಥ ಪದವನ್ನು ಹೊರತುಪಡಿಸಿ, ಇತರ ಯಾವುದೇ ಲಾಭದಾಯಕ ಪದವನ್ನು ಧಾರಣ ಮಾಡಿದ್ದರೆ;

(ಬಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ;

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ;

(ಡಿ) ಭಾರತದ ನಾಗರಿಕನಾಗಿಲ್ಲದಿದ್ದರೆ ಅಥವಾ ಯಾವುದೇ ವಿದೇಶಿ ರಾಜ್ಯದ ನಾಗರೀಕತ್ವವನ್ನು ಸ್ವಇಚ್ಛೆಯಿಂದ ಆರ್ಜಿಸಿದರೆ ಅಥವಾ ಒಂದು ವಿದೇಶಿ ರಾಜ್ಯಕ್ಕೆ ನಿಷ್ಠೆ ಅಥವಾ ಅನುಸಕ್ತಿ ಹೊಂದಿರುವುದನ್ನು ಒಪ್ಪಿಕೊಂಡಿದ್ದರೆ;

(ಇ) ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅವನನ್ನು ಹಾಗೆಂದು ಅನರ್ಹಗೊಳಿಸಿದ್ದರೆ.

– ಅವನು ರಾಜ್ಯದ ವಿಧಾನಸಭೆಯ ಅಥವಾ ವಿಧಾನಪರಿಷತ್ತಿನ ಸದಸ್ಯನಾಗಿ ಆಯ್ಕೆಯಾಗಲು ಅಥವಾ ಅದರ ಸದಸ್ಯನಾಗಿರಲು ಅನರ್ಹನಾಗಿರತಕ್ಕದ್ದು.

[1][**ವಿವರಣೆ:–** ಈ ಖಂಡದ ಉದ್ದೇಶಗಳಿಗಾಗಿ, ಯಾರೇ ವ್ಯಕ್ತಿಯು ಒಕ್ಕೂಟದ ಅಥವಾ ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ರಾಜ್ಯದ ಮಂತ್ರಿಯಾಗಿರುವ ಕಾರಣಮಾತ್ರದಿಂದಲೇ, ಅವನು ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿ ಒಂದು ಲಾಭದಾಯಕ ಪದವನ್ನು ಧಾರಣ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ.]

[2][(2) ಹತ್ತನೆಯ ಅನುಸೂಚಿಯ ಮೇರೆಗೆ ಯಾರೇ ವ್ಯಕ್ತಿಯನ್ನು ಅನರ್ಹಗೊಳಿಸಲಾಗಿದ್ದರೆ ಅವನು ರಾಜ್ಯದ ವಿಧಾನಸಭೆಯ ಅಥವಾ ವಿಧಾನಪರಿಷತ್ತಿನ ಸದಸ್ಯನಾಗಿರಲು ಅನರ್ಹನಾಗತಕ್ಕದ್ದು.]

[3]**[192. ಸದಸ್ಯರ ಅನರ್ಹತೆಗಳನ್ನು ಕುರಿತ ಪ್ರಶ್ನೆಗಳ ತೀರ್ಮಾನ:–** (1) ಒಂದು ರಾಜ್ಯ ವಿಧಾನಮಂಡಲದ ಸದನದ ಯಾರೇ ಸದಸ್ಯನು 191ನೆಯ ಅನುಚ್ಛೇದದ (1)ನೆಯ ಖಂಡದಲ್ಲಿ ನಮೂದಾಗಿರುವ ಯಾವುವೇ ಅನರ್ಹತೆಗಳಿಗೆ ಒಳಪಟ್ಟಿದ್ದಾನೆಯೇ ಹೇಗೆ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಆ ಪ್ರಶ್ನೆಯನ್ನು ರಾಜ್ಯಪಾಲನ ತೀರ್ಮಾನಕ್ಕೆ ಒಪ್ಪಿಸತಕ್ಕದ್ದು ಮತ್ತು ಆ ಬಗ್ಗೆ ಅವನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

---

1. 1985ನೆಯ ಇಸವಿಯ ಸಂವಿಧಾನ (ಐವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ "(2) ಈ ಅನುಚ್ಛೇದದ ಉದ್ದೇಶಗಳಿಗಾಗಿ" ಎಂಬುದಕ್ಕೆ ಬದಲಾಗಿ (1.3.1985 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1985ನೆಯ ಇಸವಿಯ ಸಂವಿಧಾನ (ಐವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ (1.3.1985 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 192ನೆಯ ಅನುಚ್ಛೇದವನ್ನು ಒಂದಾದ ಮೇಲೊಂದರಂತೆ 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 33ನೇ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) ಮತ್ತು 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 25ನೇ ಪ್ರಕರಣದ ಮೂಲಕ (20-6-79ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದ್ದು ಮೇಲ್ಕಂಡಂತೆ ಓದಿಕೊಳ್ಳತಕ್ಕದ್ದು.

(2) ಅಂಥ ಯಾವುದೇ ಪ್ರಶ್ನೆಯ ಮೇಲೆ ಯಾವುದೇ ತೀರ್ಮಾನವನ್ನು ಕೊಡುವುದಕ್ಕೆ ಮುಂಚಿತವಾಗಿ ರಾಜ್ಯಪಾಲನು ಚುನಾವಣಾ ಆಯೋಗದ ಅಭಿಪ್ರಾಯವನ್ನು ಪಡೆಯತಕ್ಕದ್ದು ಮತ್ತು ಆ ಅಭಿಪ್ರಾಯಕ್ಕನುಸಾರವಾಗಿ ಕಾರ್ಯ ಪ್ರವೃತ್ತನಾಗತಕ್ಕದ್ದು.]

**193. 188ನೇ ಅನುಚ್ಛೇದದ ಮೇರೆಗೆ ಪ್ರಮಾಣ ಅಥವಾ ಪ್ರತಿಜ್ಞೆ ಮಾಡುವುದಕ್ಕೆ ಮುಂಚೆ ಅಥವಾ ಅರ್ಹನಾಗಿಲ್ಲದಿರುವಾಗ ಅಥವಾ ಅನರ್ಹತೆಗೊಳಿಸಿರುವಾಗ ಸದಸ್ಯನಾಗಿ ಕುಳಿತರೆ ಮತ್ತು ಮತ ಕೊಟ್ಟರೆ ದಂಡ:-** ಯಾರೇ ವ್ಯಕ್ತಿಯು, ಒಂದು ರಾಜ್ಯದ ವಿಧಾನಸಭೆಯ ಅಥವಾ ವಿಧಾನಪರಿಷತ್ತಿನ ಸದಸ್ಯನಾಗಿ 188ನೆಯ ಅನುಚ್ಛೇದದ ಅಗತ್ಯತೆಗಳನ್ನು ಪಾಲಿಸುವುದಕ್ಕೆ ಮುಂಚೆ, ಅಥವಾ ಅದರ ಸದಸ್ಯತ್ವಕ್ಕೆ ತಾನು ಅರ್ಹನಾಗಿಲ್ಲವೆಂದು ತಿಳಿದೂ ಅಥವಾ ಸದಸ್ಯತ್ವಕ್ಕೆ ತಾನು ಅನರ್ಹನಾಗಿರುವೆನೆಂದು ತಿಳಿದೂ ಅಥವಾ ಸಂಸತ್ತು ಅಥವಾ ರಾಜ್ಯದ ವಿಧಾನಮಂಡಲವು ಮಾಡಿದ ಯಾವುದೇ ಕಾನೂನಿನ ಉಪಬಂಧಗಳು ತಾನು ಸದನದಲ್ಲಿ ಕುಳಿತುಕೊಳ್ಳುವುದನ್ನು ಅಥವಾ ಮತ ಕೊಡುವುದನ್ನು ನಿಷೇಧಿಸಿರುವುದು ಅವನಿಗೆ ತಿಳಿದಿದ್ದೂ, ಅವನು ಸದನದಲ್ಲಿ ಕುಳಿತರೆ ಅಥವಾ ಮತ ಕೊಟ್ಟರೆ, ಅವನು ಹಾಗೆ ಕುಳಿತ ಅಥವಾ ಮತ ಕೊಟ್ಟ ಪ್ರತಿದಿನಕ್ಕೂ ಐನೂರು ರೂಪಾಯಿಗಳ ದಂಡವನ್ನು ಕೊಡಲು ಬದ್ಧನಾಗಿರತಕ್ಕದ್ದು ಮತ್ತು ಆ ದಂಡವನ್ನು ಆ ರಾಜ್ಯಕ್ಕೆ ಬರಬೇಕಾದ ಸಾಲದಂತೆ ವಸೂಲಿ ಮಾಡತಕ್ಕದ್ದು.

**ರಾಜ್ಯವಿಧಾನಮಂಡಲಗಳ ಮತ್ತು ಅವುಗಳ ಸದಸ್ಯರ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳು**

**194. ವಿಧಾನಮಂಡಲದ ಸದನಗಳ ಮತ್ತು ಅದರ ಸದಸ್ಯರ ಮತ್ತು ಸಮಿತಿಗಳ ಅಧಿಕಾರಗಳು, ವಿಶೇಷಾಧಿಕಾರಗಳು, ಇತ್ಯಾದಿ:-** (1) ಈ ಸಂವಿಧಾನದ ಉಪಬಂಧಗಳಿಗೆ ಮತ್ತು ವಿಧಾನಮಂಡಲದ ಪ್ರಕ್ರಿಯೆಯನ್ನು ವಿನಿಯಮಗೊಳಿಸುವ ನಿಯಮಗಳಿಗೆ ಮತ್ತು ಸ್ಥಾಯೀ ಆದೇಶಗಳಿಗೆ ಒಳಪಟ್ಟು, ಪ್ರತಿಯೊಂದು ರಾಜ್ಯದ ವಿಧಾನಮಂಡಲದಲ್ಲಿ ವಾಕ್ ಸ್ವಾತಂತ್ರ್ಯವಿರತಕ್ಕದ್ದು.

(2) ಒಂದು ರಾಜ್ಯದ ವಿಧಾನಮಂಡಲದ ಯಾರೇ ಸದಸ್ಯನು ಆ ವಿಧಾನಮಂಡಲದಲ್ಲಿ ಅಥವಾ ಅದರ ಯಾವುದೇ ಸಮಿತಿಯಲ್ಲಿ ತಾನು ಹೇಳಿದ ಯಾವುದೇ ವಿಚಾರಕ್ಕೆ ಅಥವಾ ತಾನು ಕೊಟ್ಟ ಯಾವುದೇ ಮತಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಲ್ಲಿ ಯಾವುವೇ ವ್ಯವಹರಣೆಗಳಿಗೆ ಗುರಿಯಾಗತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು ಅಂಥ ವಿಧಾನಮಂಡಲದ ಸದನದ ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ ಪ್ರಕಟವಾದ ಯಾವುದೇ ವರದಿಗೆ, ಪತ್ರಕ್ಕೆ, ಮತಗಳಿಗೆ ಅಥವಾ ನಡವಳಿಗಳಿಗೆ ಸಂಬಂಧಿಸಿದಂತೆ ಹಾಗೆ ಗುರಿಯಾಗತಕ್ಕದ್ದಲ್ಲ.

(3) ಇತರ ವಿಚಾರಗಳಿಗೆ ಸಂಬಂಧಪಟ್ಟಂತೆ ಒಂದು ರಾಜ್ಯದ ವಿಧಾನಮಂಡಲದ ಸದನದ ಮತ್ತು ಅಂಥ ವಿಧಾನಮಂಡಲದ ಸದನದ ಸದಸ್ಯರ ಮತ್ತು ಸಮಿತಿಗಳ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳು ವಿಧಾನಮಂಡಲವು ಕಾನೂನಿನ ಮೂಲಕ ಕಾಲಕಾಲಕ್ಕೆ ಪರಿಭಾಷಿಸಬಹುದಾದಂತೆ ಇರತಕ್ಕದ್ದು ಮತ್ತು ಹಾಗೆ ಪರಿಭಾಷಿಸುವವರೆಗೆ, [1][1978ರ ಸಂವಿಧಾನ (ನಲವತ್ನಾಲ್ಕನೇ ತಿದ್ದುಪಡಿ) ಅಧಿನಿಯಮದ 26ನೆಯ ಪ್ರಕರಣವು ಜಾರಿಗೆ ಬರುವ ನಿಕಟಪೂರ್ವದಲ್ಲಿ ಆ ಸಭೆಗೆ, ಅದರ ಸದಸ್ಯರಿಗೆ ಮತ್ತು ಸಮಿತಿಗಳಿಗೆ ಇದ್ದಂತಹ ಅವೇ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳು ಇರತಕ್ಕದ್ದು.]

(4) (1)ನೆಯ, (2)ನೆಯ ಮತ್ತು (3)ನೆಯ ಖಂಡಗಳ ಉಪಬಂಧಗಳು ಒಂದು ರಾಜ್ಯದ ವಿಧಾನಮಂಡಲದ ಸದಸ್ಯರ ಸಂಬಂಧದಲ್ಲಿ ಅನ್ವಯವಾಗುವಂತೆಯೇ ಈ ಸಂವಿಧಾನದ ಕಾರಣದಿಂದಾಗಿ, ಆ ರಾಜ್ಯದ ವಿಧಾನಮಂಡಲದ ಸದನದಲ್ಲಿ ಅಥವಾ ಅದರ ಯಾವುದೇ ಸಮಿತಿಯಲ್ಲಿ ಮಾತನಾಡಲು ಮತ್ತು ಅದರ ವ್ಯವಹರಣೆಗಳಲ್ಲಿ ಅನ್ಯಥಾ ಭಾಗವಹಿಸಲು ಹಕ್ಕು ಹೊಂದಿರುವವರ ಸಂಬಂಧದಲ್ಲಿಯೂ ಅನ್ವಯವಾಗತಕ್ಕದ್ದು.

**195. ಸದಸ್ಯರ ಸಂಬಳಗಳು ಮತ್ತು ಭತ್ಯಗಳು:-** ಒಂದು ರಾಜ್ಯದ ವಿಧಾನಸಭೆಯ ಮತ್ತು ವಿಧಾನಪರಿಷತ್ತಿನ ಸದಸ್ಯರು ಆ ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಸಂಬಳಗಳನ್ನು ಮತ್ತು ಭತ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು, ಮತ್ತು ಆ ಬಗ್ಗೆ ಉಪಬಂಧವನ್ನು ಮಾಡುವವರೆಗೆ, ಸದಸ್ಯರು ಈ ಸಂವಿಧಾನವು ಪ್ರಾರಂಭವಾಗುವ ನಿಕಟಪೂರ್ವದಲ್ಲಿ ಆಯಾಯ ಪ್ರಾಂತೀಯ ವಿಧಾನಸಭೆಯ ಸದಸ್ಯರ ಸಂಬಂಧದಲ್ಲಿ ಅನ್ವಯಿಸುತ್ತಿದ್ದಂಥ ದರಗಳಲ್ಲಿ ಮತ್ತು ಷರತ್ತುಗಳ ಮೇಲೆ ಸಂಬಳಗಳನ್ನು ಮತ್ತು ಭತ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

---

1. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 26ನೇ ಪ್ರಕರಣದ ಮೂಲಕ (20-6-79 ರಿಂದ ಜಾರಿಗೆ ಬರುವಂತೆ) ಕೆಲವು ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

## ವಿಧಾಯೀ ಪ್ರಕ್ರಿಯೆ

**196. ವಿಧೇಯಕಗಳ ಮಂಡನೆಗೆ ಮತ್ತು ಅಂಗೀಕಾರಕ್ಕೆ ಸಂಬಂಧಿಸಿದ ಉಪಬಂಧಗಳು:–** (1) ಧನವಿಧೇಯಕಗಳಿಗೆ ಮತ್ತು ಇತರ ಹಣಕಾಸು ವಿಧೇಯಕಗಳಿಗೆ ಸಂಬಂಧಪಟ್ಟಂತೆ 198ನೆಯ ಮತ್ತು 207ನೆಯ ಅನುಚ್ಛೇದಗಳ ಉಪಬಂಧಗಳಿಗೆ ಒಳಪಟ್ಟು, ಯಾವುದೇ ವಿಧೇಯಕವನ್ನು ವಿಧಾನಪರಿಷತ್ತನ್ನು ಹೊಂದಿರುವ ಒಂದು ರಾಜ್ಯದ ವಿಧಾನಮಂಡಲದ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿ ಪ್ರಥಮತಃ ಮಂಡಿಸಬಹುದು.

(2) 197ನೆಯ ಮತ್ತು 198ನೆಯ ಅನುಚ್ಛೇದಗಳ ಉಪಬಂಧಗಳಿಗೆ ಒಳಪಟ್ಟು ವಿಧಾನಪರಿಷತ್ತನ್ನು ಹೊಂದಿರುವ ಒಂದು ರಾಜ್ಯದ ವಿಧಾನಮಂಡಲದ ಉಭಯ ಸದನಗಳು, ಒಂದು ವಿಧೇಯಕವನ್ನು ತಿದ್ದುಪಡಿಯಿಲ್ಲದೆ ಅಥವಾ ಉಭಯ ಸದನಗಳು ಒಪ್ಪಿರುವಂಥ ತಿದ್ದುಪಡಿಗಳ ಸಹಿತವಾಗಿ ಮಾತ್ರವೇ ಒಪ್ಪಿಕೊಂಡಿರುವ ಹೊರತು ವಿಧಾನಮಂಡಲದ ಉಭಯ ಸದನಗಳು ಆ ವಿಧೇಯಕವನ್ನು ಅಂಗೀಕರಿಸಿರುವುದಾಗಿ ಭಾವಿಸತಕ್ಕದ್ದಲ್ಲ.

(3) ಒಂದು ರಾಜ್ಯದ ವಿಧಾನಮಂಡಲದಲ್ಲಿ ಇತ್ಯರ್ಥದಲ್ಲಿರುವ ಯಾವುದೇ ವಿಧೇಯಕವು, ಆ ವಿಧಾನಮಂಡಲದ ಯಾವುದೇ ಸದನವನ್ನು ಅಥವಾ ಉಭಯ ಸದನಗಳನ್ನು ಮುಕ್ತಾಯಗೊಳಿಸಿದ ಕಾರಣದಿಂದ ಅಂತ್ಯಗೊಳ್ಳತಕ್ಕದ್ದಲ್ಲ.

(4) ಒಂದು ರಾಜ್ಯದ ವಿಧಾನಪರಿಷತ್ತಿನಲ್ಲಿ ಇತ್ಯರ್ಥದಲ್ಲಿರುವ ಮತ್ತು ವಿಧಾನಸಭೆಯಿಂದ ಅಂಗೀಕೃತವಾಗಿರದ ವಿಧೇಯಕವು ವಿಧಾನಸಭೆಯ ವಿಸರ್ಜನೆಯಿಂದಾಗಿ ಅಂತ್ಯಗೊಳ್ಳತಕ್ಕದ್ದಲ್ಲ.

(5) ಒಂದು ರಾಜ್ಯದ ವಿಧಾನಸಭೆಯಲ್ಲಿ ಇತ್ಯರ್ಥದಲ್ಲಿರುವ ಅಥವಾ ವಿಧಾನಸಭೆಯಿಂದ ಅಂಗೀಕೃತವಾಗಿ ವಿಧಾನಪರಿಷತ್ತಿನಲ್ಲಿ ಇತ್ಯರ್ಥದಲ್ಲಿರುವ ವಿಧೇಯಕವು ವಿಧಾನಸಭೆಯ ವಿಸರ್ಜನೆಯಿಂದಾಗಿ ಅಂತ್ಯಗೊಳ್ಳತಕ್ಕದ್ದು.

**197. ಧನವಿಧೇಯಕಗಳಲ್ಲದ ಇತರ ವಿಧೇಯಕಗಳಿಗೆ ಸಂಬಂಧಪಟ್ಟಂತೆ ವಿಧಾನಪರಿಷತ್ತಿಗೆ ಇರುವ ಅಧಿಕಾರಗಳ ಮೇಲೆ ನಿರ್ಬಂಧ:–** (1) ವಿಧಾನಪರಿಷತ್ತನ್ನು ಹೊಂದಿರುವ ಒಂದು ರಾಜ್ಯದ ವಿಧಾನ ಸಭೆಯಿಂದ ಒಂದು ವಿಧೇಯಕವು ಅಂಗೀಕೃತವಾಗಿ ಅದನ್ನು ವಿಧಾನಪರಿಷತ್ತಿಗೆ ಕಳುಹಿಸಿದ ತರುವಾಯ,–

(ಎ) ಆ ವಿಧೇಯಕವನ್ನು ಆ ಪರಿಷತ್ತು ತಿರಸ್ಕರಿಸಿದರೆ; ಅಥವಾ

(ಬಿ) ಆ ವಿಧೇಯಕವನ್ನು ಆ ಪರಿಷತ್ತಿನ ಮುಂದಿರಿಸಿದ ದಿನಾಂಕದಿಂದ ಅದು ಆ ಪರಿಷತ್ತಿನಿಂದ ಅಂಗೀಕೃತವಾಗಿರದೆ ಮೂರು ತಿಂಗಳುಗಳಿಗಿಂತಲೂ ಹೆಚ್ಚು ಕಾಲ ಗತಿಸಿದ್ದರೆ; ಅಥವಾ

(ಸಿ) ಆ ವಿಧೇಯಕವು ವಿಧಾನಸಭೆಯು ಒಪ್ಪದೆ ಇರುವಂಥ ತಿದ್ದುಪಡಿಗಳೊಂದಿಗೆ ಆ ಪರಿಷತ್ತಿನಿಂದ ಅಂಗೀಕೃತವಾದರೆ

– ವಿಧಾನಸಭೆಯು, ತನ್ನ ಪ್ರಕ್ರಿಯೆಯನ್ನು ವಿನಿಯಮಿಸುವ ನಿಯಮಗಳಿಗೆ ಒಳಪಟ್ಟು, ಆ ವಿಧೇಯಕವನ್ನು ಅದೇ ಅಧಿವೇಶನದಲ್ಲಾಗಲಿ ಅಥವಾ ಮುಂದಿನ ಯಾವುದೇ ಅಧಿವೇಶನದಲ್ಲಾಗಲಿ ವಿಧಾನಪರಿಷತ್ತು ಮಾಡಿದ, ಸೂಚಿಸಿದ ಅಥವಾ ಒಪ್ಪಿಕೊಂಡ ಯಾವುದೇ ತಿದ್ದುಪಡಿಗಳಿದ್ದಲ್ಲಿ ಆ ತಿದ್ದುಪಡಿಗಳ ಸಹಿತವಾಗಿ ಅಥವಾ ತಿದ್ದುಪಡಿಗಳಿಲ್ಲದೆಯೇ ಪುನಃ ಅಂಗೀಕರಿಸಬಹುದು ಮತ್ತು ಆ ತರುವಾಯ ಹಾಗೆ ಅಂಗೀಕರಿಸಿದ ವಿಧೇಯಕವನ್ನು ವಿಧಾನಪರಿಷತ್ತಿಗೆ ಕಳುಹಿಸಬಹುದು.

(2) ವಿಧೇಯಕವು ಹಾಗೆ ಎರಡನೆಯ ಸಲ ವಿಧಾನಸಭೆಯಿಂದ ಅಂಗೀಕೃತವಾಗಿ ಅದನ್ನು ವಿಧಾನಪರಿಷತ್ತಿಗೆ ಕಳುಹಿಸಿಕೊಟ್ಟ ತರುವಾಯ,–

(ಎ) ಆ ವಿಧೇಯಕವನ್ನು ಆ ಪರಿಷತ್ತು ತಿರಸ್ಕರಿಸಿದರೆ; ಅಥವಾ

(ಬಿ) ಆ ವಿಧೇಯಕವನ್ನು ಆ ಪರಿಷತ್ತಿನ ಮುಂದಿರಿಸಿದ ದಿನಾಂಕದಿಂದ ಆ ವಿಧೇಯಕವು ಪರಿಷತ್ತಿನಿಂದ ಅಂಗೀಕೃತವಾಗಿರದೆ; ಒಂದು ತಿಂಗಳಿಗೂ ಹೆಚ್ಚು ಕಾಲ ಗತಿಸಿದ್ದರೆ; ಅಥವಾ

(ಸಿ) ಆ ವಿಧೇಯಕವು ವಿಧಾನಸಭೆಯು ಒಪ್ಪದೆ ಇರುವಂಥ ತಿದ್ದುಪಡಿಗಳೊಂದಿಗೆ ಆ ಪರಿಷತ್ತಿನಿಂದ ಅಂಗೀಕೃತವಾದರೆ

– ಆ ವಿಧೇಯಕವು, ವಿಧಾನಪರಿಷತ್ತು ಮಾಡಿದ ಅಥವಾ ಸೂಚಿಸಿದ ಮತ್ತು ವಿಧಾನಸಭೆಯು ಒಪ್ಪಿರುವ ತಿದ್ದುಪಡಿಗಳು ಯಾವುವಾದರೂ ಇದ್ದರೆ, ಅಂಥ ತಿದ್ದುಪಡಿಗಳ ಸಹಿತವಾಗಿ, ವಿಧಾನಸಭೆಯಿಂದ ಎರಡನೆಯ ಸಲ ಅದು ಅಂಗೀಕೃತವಾದ ರೂಪದಲ್ಲಿಯೇ ರಾಜ್ಯದ ವಿಧಾನಮಂಡಲದ ಸದನಗಳಿಂದಲೂ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದು.

(3) ಈ ಅನುಚ್ಛೇದದಲ್ಲಿ ಇರುವುದು ಯಾವುದೂ ಧನವಿಧೇಯಕಕ್ಕೆ ಅನ್ವಯವಾಗತಕ್ಕದ್ದಲ್ಲ.

**198. ಧನವಿಧೇಯಕಗಳಿಗೆ ಸಂಬಂಧಿಸಿದಂತೆ ವಿಶೇಷ ಪ್ರಕ್ರಿಯೆ:–** (1) ಧನವಿಧೇಯಕವನ್ನು ವಿಧಾನಪರಿಷತ್ತಿನಲ್ಲಿ ಮಂಡಿಸತಕ್ಕದ್ದಲ್ಲ.

(2) ವಿಧಾನ ಪರಿಷತ್ತನ್ನು ಹೊಂದಿರುವ ಒಂದು ರಾಜ್ಯದ ವಿಧಾನಸಭೆಯಲ್ಲಿ ಧನವಿಧೇಯಕವನ್ನು ಅಂಗೀಕರಿಸಿದ ತರುವಾಯ ಶಿಫಾರಸು ಕೋರಿ ಅದನ್ನು ವಿಧಾನಪರಿಷತ್ತಿಗೆ ಕಳುಹಿಸತಕ್ಕದ್ದು ಮತ್ತು ವಿಧಾನಪರಿಷತ್ತು ಆ ವಿಧೇಯಕವು ತನಗೆ ತಲುಪಿದ ದಿನಾಂಕದಿಂದ ಹದಿನಾಲ್ಕು ದಿನಗಳ ಅವಧಿಯೊಳಗಾಗಿ ತನ್ನ ಶಿಫಾರಸುಗಳೊಡನೆ ಆ ವಿಧೇಯಕವನ್ನು ವಿಧಾನಸಭೆಗೆ ಹಿಂದಕ್ಕೆ ಕಳುಹಿಸತಕ್ಕದ್ದು ಮತ್ತು ಆ ತರುವಾಯ ವಿಧಾನಸಭೆಯು ವಿಧಾನ ಪರಿಷತ್ತಿನ ಎಲ್ಲ ಶಿಫಾರಸುಗಳನ್ನು ಅಥವಾ ಅವುಗಳಲ್ಲಿ ಯಾವುದೇ ಶಿಫಾರಸನ್ನು ಒಪ್ಪಬಹುದು ಅಥವಾ ತಿರಸ್ಕರಿಸಬಹುದು.

(3) ವಿಧಾನಸಭೆಯು ವಿಧಾನಪರಿಷತ್ತಿನ ಶಿಫಾರಸುಗಳ ಪೈಕಿ ಯಾವುದೇ ಶಿಫಾರಸನ್ನು ಒಪ್ಪಿಕೊಂಡರೆ ಆ ಧನವಿಧೇಯಕವು ವಿಧಾನಪರಿಷತ್ತು ಶಿಫಾರಸು ಮಾಡಿದ ಮತ್ತು ವಿಧಾನ ಸಭೆಯು ಒಪ್ಪಿಕೊಂಡ ತಿದ್ದುಪಡಿಗಳೊಂದಿಗೆ ಉಭಯ ಸದನಗಳಿಂದಲೂ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದು.

(4) ವಿಧಾನಪರಿಷತ್ತಿನ ಯಾವ ಶಿಫಾರಸುಗಳನ್ನೂ ವಿಧಾನಸಭೆಯು ಒಪ್ಪದಿದ್ದರೆ ಆ ಧನವಿಧೇಯಕವು, ವಿಧಾನಪರಿಷತ್ತು ಶಿಫಾರಸು ಮಾಡಿದ ಯಾವುದೇ ತಿದ್ದುಪಡಿಗಳು ಇಲ್ಲದೆಯೇ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿಯೇ ಉಭಯ ಸದನಗಳಿಂದಲೂ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದು.

(5) ವಿಧಾನಸಭೆಯಿಂದ ಅಂಗೀಕೃತವಾಗಿ ವಿಧಾನಪರಿಷತ್ತಿಗೆ ಅದರ ಶಿಫಾರಸುಗಳಿಗಾಗಿ ಕಳುಹಿಸಿಕೊಟ್ಟ ಧನವಿಧೇಯಕವನ್ನು, ಮೇಲೆ ಹೇಳಿದ ಹದಿನಾಲ್ಕು ದಿನಗಳ ಅವಧಿಯೊಳಗಾಗಿ ವಿಧಾನಸಭೆಗೆ ಹಿಂದಕ್ಕೆ ಕಳುಹಿಸದಿದ್ದರೆ ಆ ಅವಧಿಯು ಮುಕ್ತಾಯವಾದ ಮೇಲೆ ಅದು ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿಯೇ ಉಭಯ ಸದನಗಳಿಂದಲೂ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದು.

**199. "ಧನವಿಧೇಯಕಗಳು" ಎಂಬುದರ ಪರಿಭಾಷೆ:–** (1) ಈ ಅಧ್ಯಾಯದ ಉದ್ದೇಶಗಳಿಗಾಗಿ ಒಂದು ವಿಧೇಯಕವು ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಸಂಬಂಧಪಟ್ಟ ಉಪಬಂಧಗಳನ್ನು ಮಾತ್ರ ಒಳಗೊಂಡಿದ್ದರೆ ಅದನ್ನು ಧನವಿಧೇಯಕವೆಂದು ಭಾವಿಸತಕ್ಕದ್ದು,–

(ಎ) ಯಾವುದೇ ತೆರಿಗೆಯನ್ನು ವಿಧಿಸುವುದು, ರದ್ದುಮಾಡುವುದು, ಮಾಫಿ ಮಾಡುವುದು, ಬದಲಾಯಿಸುವುದು ಅಥವಾ ವಿನಿಯಮಗೊಳಿಸುವುದು;

(ಬಿ) ರಾಜ್ಯವು ಹಣವನ್ನು ಸಾಲವಾಗಿ ತೆಗೆದುಕೊಳ್ಳುವುದನ್ನು ಅಥವಾ ಯಾವುದೇ ಖಾತ್ರಿ ಕೊಡುವುದನ್ನು ವಿನಿಯಮಗೊಳಿಸುವುದು ಅಥವಾ ಆ ರಾಜ್ಯವು ವಹಿಸಿಕೊಂಡಿರುವ ಅಥವಾ ವಹಿಸಿಕೊಳ್ಳಬೇಕಾಗಿರುವ ಹಣಕಾಸಿನ ಯಾವುವೇ ಬಾಧ್ಯತೆಗಳಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುವುದು;

(ಸಿ) ರಾಜ್ಯದ ಸಂಚಿತ ನಿಧಿಯ ಅಥವಾ ಸಾದಿಲ್ವಾರು ನಿಧಿಯ ಅಭಿರಕ್ಷೆ ಮತ್ತು ಅಂಥ ಯಾವುದೇ ನಿಧಿಗೆ ಹಣವನ್ನು ಸಂದಾಯ ಮಾಡುವುದು ಅಥವಾ ಅದರಿಂದ ಹಣವನ್ನು ತೆಗೆದುಕೊಳ್ಳುವುದು;

(ಡಿ) ರಾಜ್ಯದ ಸಂಚಿತ ನಿಧಿಯಿಂದ ಹಣವನ್ನು ವಿನಿಯೋಗಿಸುವುದು;

(ಇ) ಯಾವುದೇ ವೆಚ್ಚವನ್ನು ರಾಜ್ಯದ ಸಂಚಿತ ನಿಧಿಯ ಮೇಲೆ ಹೊರಿಸಲಾದ ವೆಚ್ಚವೆಂದು ಘೋಷಿಸುವುದು ಅಥವಾ ಅಂಥ ಯಾವುದೇ ವೆಚ್ಚದ ಮೊಬಲಗನ್ನು ಹೆಚ್ಚಿಸುವುದು;

(ಎಫ್) ರಾಜ್ಯದ ಸಂಚಿತ ನಿಧಿಯ ಲೆಕ್ಕಕ್ಕೆ ಅಥವಾ ರಾಜ್ಯದ ಸರ್ಕಾರಿ ಲೆಕ್ಕಕ್ಕೆ ಹಣವನ್ನು ಜಮೆಮಾಡುವುದು ಅಥವಾ ಅಂಥ ಹಣವನ್ನು ಅಭಿರಕ್ಷಿಸುವುದು ಅಥವಾ ಕೊಡುವುದು; ಅಥವಾ

(ಜಿ) (ಎ) ಯಿಂದ (ಎಫ್) ವರೆಗಿನ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಪ್ರಾಸಂಗಿಕವಾಗಿರುವ ಯಾವುದೇ ವಿಷಯ.

(2) ಒಂದು ವಿಧೇಯಕವು ಜುಲ್ಮಾನೆಗಳನ್ನು ಅಥವಾ ಇತರ ಹಣದ ರೂಪದ ದಂಡಗಳನ್ನು ವಿಧಿಸುವುದಕ್ಕೆ ಅಥವಾ ಲೈಸೆನ್ಸುಗಳಿಗೆ ಅಥವಾ ಸಲ್ಲಿಸಿದ ಸೇವೆಗಳಿಗೆ ಫೀಜನ್ನು ಕೇಳುವುದಕ್ಕೆ ಅಥವಾ ಸಂದಾಯ ಮಾಡುವುದಕ್ಕೆ ಉಪಬಂಧಿಸುತ್ತದೆಂಬ ಕಾರಣ ಮಾತ್ರದಿಂದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ನಿಕಾಯವು ಸ್ಥಳೀಯ ಉದ್ದೇಶಗಳಿಗಾಗಿ ಯಾವುದೇ ತೆರಿಗೆಯನ್ನು ವಿಧಿಸುವುದಕ್ಕೆ, ರದ್ದುಪಡಿಸುವುದಕ್ಕೆ, ಮಾಫಿಮಾಡುವುದಕ್ಕೆ, ಬದಲಾವಣೆ ಮಾಡುವುದಕ್ಕೆ ಅಥವಾ ವಿನಿಯಮಗೊಳಿಸುವುದಕ್ಕೆ ಉಪಬಂಧಿಸುತ್ತದೆ ಎಂಬ ಕಾರಣಮಾತ್ರದಿಂದ, ಅದನ್ನು ಧನವಿಧೇಯಕವೆಂದು ಭಾವಿಸತಕ್ಕದ್ದಲ್ಲ.

(3) ವಿಧಾನಪರಿಷತ್ತನ್ನು ಹೊಂದಿರುವ ಒಂದು ರಾಜ್ಯದ ವಿಧಾನಮಂಡಲದಲ್ಲಿ ಮಂಡಿಸಿದ ಯಾವುದೇ ವಿಧೇಯಕವು ಧನವಿಧೇಯಕವೇ ಅಥವಾ ಅಲ್ಲವೇ ಎಂಬ ಪ್ರಶ್ನೆ ಉದ್ಭವಿಸಿದರೆ ಆ ಬಗ್ಗೆ ಆ ರಾಜ್ಯದ ವಿಧಾನಸಭೆಯ ಅಧ್ಯಕ್ಷನ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

(4) ಪ್ರತಿಯೊಂದು ಧನವಿಧೇಯಕವನ್ನು 198ನೆಯ ಅನುಚ್ಛೇದದ ಮೇರೆಗೆ ವಿಧಾನಪರಿಷತ್ತಿಗೆ ಕಳುಹಿಸುವಾಗ ಮತ್ತು 200ನೆಯ ಅನುಚ್ಛೇದದ ಮೇರೆಗೆ ರಾಜ್ಯಪಾಲನ ಅನುಮತಿಗಾಗಿ ಒಪ್ಪಿಸುವಾಗ ಅದನ್ನು ಧನವಿಧೇಯಕವೆಂಬುದಾಗಿ ವಿಧಾನಸಭೆಯ ಅಧ್ಯಕ್ಷನು ಪ್ರಮಾಣೀಕರಿಸಿ ತನ್ನ ಸಹಿ ಹಾಕತಕ್ಕದ್ದು.

**200. ವಿಧೇಯಕಗಳಿಗೆ ಅನುಮತಿ:–** ಒಂದು ವಿಧೇಯಕವು ಒಂದುರಾಜ್ಯದ ವಿಧಾನಸಭೆಯಿಂದ ಅಂಗೀಕೃತವಾದಾಗ ಅಥವಾ ವಿಧಾನಪರಿಷತ್ತನ್ನು ಹೊಂದಿರುವ ಒಂದು ರಾಜ್ಯದ ಸಂದರ್ಭದಲ್ಲಿ ಆ ರಾಜ್ಯದ ವಿಧಾನಮಂಡಲದ ಉಭಯ ಸದನಗಳಿಂದ ಅಂಗೀಕೃತವಾದಾಗ, ಅದನ್ನು ರಾಜ್ಯಪಾಲನಿಗೆ ಒಪ್ಪಿಸತಕ್ಕದ್ದು ಮತ್ತು ರಾಜ್ಯಪಾಲನು ಆ ವಿಧೇಯಕಕ್ಕೆ ತನ್ನ ಅನುಮತಿಯನ್ನು ಕೊಟ್ಟಿರುವುದಾಗಿ ಅಥವಾ ಅದಕ್ಕೆ ಅನುಮತಿಯನ್ನು ತಡೆಹಿಡಿದಿರುವುದಾಗಿ ಅಥವಾ ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಅದನ್ನು ಕಾಯ್ದಿರಿಸಿರುವುದಾಗಿ ಘೋಷಿಸತಕ್ಕದ್ದು:

ಪರಂತು, ವಿಧೇಯಕವನ್ನು ಅನುಮತಿಗಾಗಿ ರಾಜ್ಯಪಾಲನಿಗೆ ಒಪ್ಪಿಸಿದ ತರುವಾಯ ಅವನು ಸಾಧ್ಯವಾದಷ್ಟು ಬೇಗನೆ, ಅದು ಧನವಿಧೇಯಕವಾಗಿಲ್ಲದಿದ್ದರೆ ವಿಧಾನಮಂಡಲದ ಸದನವು ಅಥವಾ ಸದನಗಳು ಆ ವಿಧೇಯಕವನ್ನು ಅಥವಾ ಅದರ ಯಾವುವೇ ನಿರ್ದಿಷ್ಟವಾದ ಉಪಬಂಧಗಳನ್ನು ಮತ್ತೊಮ್ಮೆ ಪರ್ಯಾಲೋಚಿಸಬೇಕೆಂದು ಮತ್ತು ವಿಶೇಷವಾಗಿ ಅವನು ತನ್ನ ಸಂದೇಶದಲ್ಲಿ ಶಿಫಾರಸು ಮಾಡಬಹುದಾದಂಥ ಯಾವುವೇ ತಿದ್ದುಪಡಿಗಳನ್ನು ಮಂಡಿಸುವುದರ ಅಪೇಕ್ಷಣೀಯತೆಯನ್ನು ಪರ್ಯಾಲೋಚಿಸಬೇಕೆಂದು ಕೋರುವ ಸಂದೇಶದೊಡನೆ ಆ ವಿಧೇಯಕವನ್ನು ವಾಪಸ್ಸು ಕಳುಹಿಸಬಹುದು ಮತ್ತು ವಿಧೇಯಕವನ್ನು ಹಾಗೆ ವಾಪಸ್ಸು ಕಳುಹಿಸಿದಾಗ, ವಿಧಾನಮಂಡಲದ ಸದನ ಅಥವಾ ಸದನಗಳು ಆ ವಿಧೇಯಕವನ್ನು ತದನುಸಾರ ಪುನಃ ಪರ್ಯಾಲೋಚಿಸತಕ್ಕದ್ದು ಮತ್ತು ಆ ವಿಧೇಯಕವನ್ನು ಸದನ ಅಥವಾ ಸದನಗಳು ತಿದ್ದುಪಡಿ ಸಹಿತವಾಗಿ ಅಥವಾ ತಿದ್ದುಪಡಿ ಇಲ್ಲದೆ ಪುನಃ ಅಂಗೀಕರಿಸಿ, ರಾಜ್ಯಪಾಲನ ಅನುಮತಿಗಾಗಿ ಒಪ್ಪಿಸಿದರೆ, ರಾಜ್ಯಪಾಲನು ಅದಕ್ಕೆ ಅನುಮತಿಯನ್ನು ತಡೆಹಿಡಿಯತಕ್ಕದ್ದಲ್ಲ:

ಮತ್ತೂ ಪರಂತು, ಯಾವುದೇ ವಿಧೇಯಕವು ಕಾನೂನಾದರೆ, ಅದು ಈ ಸಂವಿಧಾನದ ಮೇರೆಗೆ ಉಚ್ಚ ನ್ಯಾಯಾಲಯವು ಯಾವ ಸ್ಥಾನವನ್ನು ಹೊಂದಿರಬೇಕೆಂದು ಉದ್ದೇಶಿಸಲಾಗಿದೆಯೋ ಆ ಸ್ಥಾನಕ್ಕೆ ಅಪಾಯವುಂಟುಮಾಡುವ ರೀತಿಯಲ್ಲಿ ಆ ನ್ಯಾಯಾಲಯದ ಅಧಿಕಾರಗಳನ್ನು ಅಲ್ಪೀಕರಿಸುತ್ತದೆಂದು ರಾಜ್ಯಪಾಲನು ಅಭಿಪ್ರಾಯ ಪಟ್ಟರೆ ಅಂಥ ವಿಧೇಯಕಕ್ಕೆ ಅವನು ಅನುಮತಿಯನ್ನು ಕೊಡತಕ್ಕದ್ದಲ್ಲ, ಆದರೆ ಅದನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾಯ್ದಿರಿಸತಕ್ಕದ್ದು.

**201. ಪರ್ಯಾಲೋಚನೆಗಾಗಿ ಕಾಯ್ದಿರಿಸಿದ ವಿಧೇಯಕಗಳು:–** ವಿಧೇಯಕವನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ರಾಜ್ಯಪಾಲನು ಕಾಯ್ದಿರಿಸಿದಾಗ, ರಾಷ್ಟ್ರಪತಿಯು ಆ ವಿಧೇಯಕಕ್ಕೆ ತಾನು ಅನುಮತಿ ಕೊಟ್ಟಿರುವುದಾಗಿ, ಅಥವಾ ಅನುಮತಿಯನ್ನು ತಡೆಹಿಡಿದಿರುವುದಾಗಿ ಘೋಷಿಸತಕ್ಕದ್ದು:

ಪರಂತು, ಒಂದು ವಿಧೇಯಕವು ಧನವಿಧೇಯಕವಾಗಿಲ್ಲದಿದ್ದರೆ ಆ ವಿಧೇಯಕವನ್ನು ಸಂದರ್ಭಾನುಸಾರ, ರಾಜ್ಯದ ವಿಧಾನಮಂಡಲದ ಸದನಕ್ಕೆ ಅಥವಾ ಸದನಗಳಿಗೆ 200ನೆಯ ಅನುಚ್ಛೇದದ ಮೊದಲನೆಯ ಪರಂತುಕದಲ್ಲಿ ನಮೂದಿಸಲಾದ ಸಂದೇಶದ ಸಹಿತ ವಾಪಸ್ಸು ಕಳುಹಿಸುವಂತೆ ರಾಷ್ಟ್ರಪತಿಯು ರಾಜ್ಯಪಾಲನಿಗೆ ನಿರ್ದೇಶಿಸಬಹುದು ಮತ್ತು ಆ ವಿಧೇಯಕವನ್ನು ಹಾಗೆ ವಾಪಸ್ಸು ಕಳುಹಿಸಿದಾಗ, ಆ ಸದನವು ಅಥವಾ ಸದನಗಳು ಅಂಥ ಸಂದೇಶವು ತಲುಪಿದ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗಾಗಿ, ಆ ಸಂದೇಶಕ್ಕನುಸಾರವಾಗಿ ಆ ವಿಧೇಯಕವನ್ನು ಪುನಃ ಪರ್ಯಾಲೋಚಿಸತಕ್ಕದ್ದು ಮತ್ತು ಅದು ಆ ಸದನದಿಂದ ಅಥವಾ ಸದನಗಳಿಂದ ತಿದ್ದುಪಡಿಯ ಸಹಿತ ಅಥವಾ ತಿದ್ದುಪಡಿಯಿಲ್ಲದೆ ಪುನಃ ಅಂಗೀಕೃತವಾದರೆ ಅದನ್ನು ಪರ್ಯಾಲೋಚನೆಗಾಗಿ ರಾಷ್ಟ್ರಪತಿಗೆ ಪುನಃ ಒಪ್ಪಿಸತಕ್ಕದ್ದು.

## ಹಣಕಾಸು ವಿಷಯಗಳ ಬಗ್ಗೆ ಪ್ರಕ್ರಿಯೆ

**202. ವಾರ್ಷಿಕ ಹಣಕಾಸು ವಿವರ ಪತ್ರ:-** (1) ರಾಜ್ಯಪಾಲನು ಪ್ರತಿ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ರಾಜ್ಯದ ಅಂದಾಜು ಜಮೆಗಳ ಮತ್ತು ವೆಚ್ಚದ ವಿವರಣೆಯನ್ನು ರಾಜ್ಯ ವಿಧಾನಮಂಡಲದ ಸದನದ ಅಥವಾ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು. ಈ ಭಾಗದಲ್ಲಿ ಅದನ್ನು "ವಾರ್ಷಿಕ ಹಣಕಾಸು ವಿವರಪತ್ರ" ಎಂದು ಉಲ್ಲೇಖಿಸಲಾಗಿದೆ.

(2) ವಾರ್ಷಿಕ ಹಣಕಾಸು ವಿವರಪತ್ರದಲ್ಲಿ ಒಳಗೊಂಡಿರುವ ವೆಚ್ಚದ ಅಂದಾಜುಗಳಲ್ಲಿ,-

(ಎ) ರಾಜ್ಯದ ಸಂಚಿತ ನಿಧಿಯ ಮೇಲೆ ಹೊರಿಸಲಾದ ವೆಚ್ಚವೆಂದು ಈ ಸಂವಿಧಾನದಲ್ಲಿ ವಿವರಿಸಿರುವ ವೆಚ್ಚವನ್ನು ಭರಿಸಲು ಬೇಕಾದ ಮೊಬಲಗುಗಳನ್ನು; ಮತ್ತು

(ಬಿ) ರಾಜ್ಯದ ಸಂಚಿತನಿಧಿಯಿಂದ ಖರ್ಚುಮಾಡಬೇಕೆಂದು ಉದ್ದೇಶಿಸಿರುವ ಇತರ ವೆಚ್ಚವನ್ನು ಭರಿಸಲು ಬೇಕಾದ ಮೊಬಲಗುಗಳನ್ನು

- ಪ್ರತ್ಯೇಕವಾಗಿ ತೋರಿಸತಕ್ಕದ್ದು ಮತ್ತು ರಾಜಸ್ವ ಲೆಕ್ಕಕ್ಕೆ ಖರ್ಚು ಬೀಳುವ ವೆಚ್ಚವನ್ನು ಮತ್ತು ಇತರ ವೆಚ್ಚದಿಂದ ಪ್ರತ್ಯೇಕಿಸಿ ತೋರಿಸತಕ್ಕದ್ದು.

(3) ಈ ಕೆಳಕಂಡ ವೆಚ್ಚವು ಪ್ರತಿಯೊಂದು ರಾಜ್ಯದ ಸಂಚಿತ ನಿಧಿಯ ಮೇಲೆ ಹೊರಿಸಲಾಗುವ ವೆಚ್ಚವಾಗಿರತಕ್ಕದ್ದು:-

(ಎ) ರಾಜ್ಯಪಾಲನ ಉಪಲಬ್ಧಿಗಳು ಮತ್ತು ಭತ್ಯಗಳು ಹಾಗೂ ಅವನ ಪದಕ್ಕೆ ಸಂಬಂಧಪಟ್ಟ ಇತರ ವೆಚ್ಚ ;

(ಬಿ) ವಿಧಾನಸಭೆಯ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಸಂಬಳಗಳು ಮತ್ತು ಭತ್ಯಗಳು ಮತ್ತು ವಿಧಾನಪರಿಷತ್ತು ಇರುವ ರಾಜ್ಯದ ಸಂದರ್ಭದಲ್ಲಿ ಆ ವಿಧಾನಪರಿಷತ್ತಿನ ಸಭಾಪತಿಯ ಅಥವಾ ಉಪಸಭಾಪತಿಯ ಸಂಬಳಗಳು ಮತ್ತು ಭತ್ಯಗಳು;

(ಸಿ) ಬಡ್ಡಿ, ಸಾಲ ತೀರುವ ನಿಧಿಯ ಭಾರಗಳು ಮತ್ತು ಋಣ ವಿಮೋಚನೆಯ ಭಾರಗಳು ಸೇರಿದಂತೆ ರಾಜ್ಯಸರ್ಕಾರವು ಹೊಣೆಯಾಗಿರುವ ಋಣಭಾರಗಳು ಮತ್ತು ಸಾಲಗಳನ್ನು ಎತ್ತುವುದಕ್ಕೆ ಸಂಬಂಧಪಟ್ಟ ಮತ್ತು ಋಣ ತೀರಿಕೆ ಸೇವೆಗೆ ಹಾಗೂ ಋಣವಿಮೋಚನೆಗೆ ಸಂಬಂಧಪಟ್ಟ ಇತರ ವೆಚ್ಚ;

(ಡಿ) ಯಾವುದೇ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಸಂಬಳಗಳಿಗೆ ಮತ್ತು ಭತ್ಯಗಳಿಗೆ ಸಂಬಂಧಪಟ್ಟ ವೆಚ್ಚ;

(ಇ) ಯಾವುದೇ ನ್ಯಾಯಾಲಯದ ಅಥವಾ ಮಧ್ಯಸ್ಥಗಾರಿಕೆ ನ್ಯಾಯಾಧಿಕರಣದ ಯಾವುದೇ ತೀರ್ಪು, ಡಿಕ್ರಿ ಅಥವಾ ಐತೀರ್ಪುಗಳ ಮೇರೆಗೆ ಸಂದಾಯ ಮಾಡಲು ಬೇಕಾಗಿರುವ ಯಾವುವೇ ಮೊಬಲಗುಗಳು;

(ಎಫ್) ಈ ಸಂವಿಧಾನದ ಮೂಲಕ ಅಥವಾ ರಾಜ್ಯ ವಿಧಾನಮಂಡಲವು ಕಾನೂನಿನ ಮೂಲಕ ಹಾಗೆ ಹೊರಿಸಲಾಗಿರುವ ವೆಚ್ಚ ಎಂದು ಘೋಷಿಸಲಾದ ಇತರ ಯಾವುದೇ ವೆಚ್ಚ.

**203. ಅಂದಾಜುಗಳಿಗೆ ಸಂಬಂಧಪಟ್ಟಂತೆ ವಿಧಾನಮಂಡಲದಲ್ಲಿ ಪ್ರಕ್ರಿಯೆ:-** (1) ಅಂದಾಜುಗಳಲ್ಲಿ ರಾಜ್ಯದ ಸಂಚಿತನಿಧಿಯ ಮೇಲೆ ಹೊರಿಸಲಾದ ವೆಚ್ಚಕ್ಕೆ ಸಂಬಂಧಿಸಿದ ಅಂದಾಜುಗಳನ್ನು ವಿಧಾನಸಭೆಯ ಮತಕ್ಕಾಗಿ ಒಪ್ಪಿಸತಕ್ಕದ್ದಲ್ಲ; ಆದರೆ ಈ ಖಂಡದಲ್ಲಿ ಇರುವುದು ಯಾವುದೂ, ಅಂಥ ಅಂದಾಜುಗಳ ಪೈಕಿ ಯಾವುದೇ ಅಂದಾಜನ್ನು ವಿಧಾನಮಂಡಲದಲ್ಲಿ ಚರ್ಚಿಸುವುದಕ್ಕೆ ಅಡ್ಡಿಯನ್ನುಂಟುಮಾಡುತ್ತದೆ ಎಂದು ಅರ್ಥೈಸತಕ್ಕದ್ದಲ್ಲ.

(2) ಸದರಿ ಅಂದಾಜುಗಳಲ್ಲಿ ಇತರ ವೆಚ್ಚಕ್ಕೆ ಸಂಬಂಧಿಸಿದ ಅಂದಾಜುಗಳನ್ನು ಅನುದಾನಗಳಿಗಾಗಿ ಬೇಡಿಕೆಯ ರೂಪದಲ್ಲಿ ವಿಧಾನಸಭೆಗೆ ಒಪ್ಪಿಸತಕ್ಕದ್ದು ಮತ್ತು ವಿಧಾನಸಭೆಯು ಯಾವುದೇ ಬೇಡಿಕೆಗೆ ಅನುಮತಿಯನ್ನು ಕೊಡಲು ಅಥವಾ ಅನುಮತಿಯನ್ನು ನಿರಾಕರಿಸಲು ಅಥವಾ ಅನುದಾನಗಳ ಬೇಡಿಕೆಯಲ್ಲಿ ನಿರ್ದಿಷ್ಟಪಡಿಸಿದ ಮೊಬಲಗುಗಳನ್ನು ಕಡಿಮೆ ಮಾಡುವುದಕ್ಕೆ ಒಳಪಟ್ಟು ಯಾವುದೇ ಬೇಡಿಕೆಗೆ ಅನುಮತಿಯನ್ನು ಕೊಡಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) ಅನುದಾನಕ್ಕೆ ಸಂಬಂಧಿಸಿದ ಯಾವುದೇ ಬೇಡಿಕೆಯನ್ನು ರಾಜ್ಯಪಾಲನ ಶಿಫಾರಸಿನ ಹೊರತು ಮಂಡಿಸತಕ್ಕದ್ದಲ್ಲ.

**204. ಧನವಿನಿಯೋಗ ವಿಧೇಯಕಗಳು:-** (1) 203ನೆಯ ಅನುಚ್ಛೇದದ ಮೇರೆಗೆ ವಿಧಾನಸಭೆಯು ಅನುದಾನಗಳಿಗೆ ಒಪ್ಪಿಗೆ ಕೊಟ್ಟ ತರುವಾಯ ಆದಷ್ಟು ಬೇಗನೆ,-

(ಎ) ಸಭೆಯು ಆ ರೀತಿ ಒಪ್ಪಿಗೆ ಕೊಟ್ಟ ಅನುದಾನಗಳನ್ನು; ಮತ್ತು

(ಬಿ) ರಾಜ್ಯದ ಸಂಚಿತ ನಿಧಿಯ ಮೇಲೆ ಹೊರಿಸಲಾದ, ಆದರೆ ಸದನದ ಅಥವಾ ಸದನಗಳ ಮುಂದೆ ಈ ಹಿಂದೆ ಇಡಲಾಗಿದ್ದ ವಾರ್ಷಿಕ ಹಣಕಾಸು ವಿವರ ಪತ್ರದಲ್ಲಿ ತೋರಿಸಿದ್ದ ಮೊಬಲಗಿಗೆ ಯಾವುದೇ ಸಂದರ್ಭದಲ್ಲಿ ಮೀರದಷ್ಟು ವೆಚ್ಚವನ್ನು

- ಭರಿಸಲು ಅಗತ್ಯವಾದ ಎಲ್ಲ ಹಣವನ್ನು ರಾಜ್ಯದ ಸಂಚಿತ ನಿಧಿಯಿಂದ ವಿನಿಯೋಗಿಸುವುದಕ್ಕೆ ಉಪಬಂಧಿಸುವ ವಿಧೇಯಕವನ್ನು ಮಂಡಿಸತಕ್ಕದ್ದು.

(2) ಹಾಗೆ ಒಪ್ಪಿಗೆ ಕೊಡಲಾದ ಯಾವುದೇ ಅನುದಾನದ ಮೊಬಲಗನ್ನು ವ್ಯತ್ಯಸ್ತಗೊಳಿಸುವ ಅಥವಾ ಅದರ ಗೊತ್ತುಗುರಿಯನ್ನು ಬದಲಾಯಿಸುವ ಅಥವಾ ರಾಜ್ಯದ ಸಂಚಿತ ನಿಧಿಯ ಮೇಲೆ ಹೊರಿಸಲಾಗುವ ಯಾವುದೇ ವೆಚ್ಚದ ಮೊಬಲಗನ್ನು ವ್ಯತ್ಯಸ್ತಗೊಳಿಸುವ, ಪರಿಣಾಮವುಂಟುಮಾಡುವ ಯಾವುದೇ ತಿದ್ದುಪಡಿಯನ್ನು ಅಂಥ ಯಾವುದೇ ವಿಧೇಯಕಕ್ಕೆ ರಾಜ್ಯದ ವಿಧಾನಮಂಡಲದ ಸದನದಲ್ಲಿ ಅಥವಾ ಎರಡು ಸದನಗಳ ಪೈಕಿ ಯಾವುದೇ ಒಂದು ಸದನದಲ್ಲಿ ಸೂಚಿಸತಕ್ಕದ್ದಲ್ಲ ಮತ್ತು ಈ ಖಂಡದ ಮೇರೆಗೆ ತಿದ್ದುಪಡಿಯು ಅಂಗೀಕಾರಾರ್ಹವೇ ಹೇಗೆ ಎಂಬ ವಿಷಯದಲ್ಲಿ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

(3) 205ನೆಯ ಮತ್ತು 206ನೆಯ ಅನುಚ್ಛೇದಗಳ ಉಪಬಂಧಗಳಿಗೆ ಒಳಪಟ್ಟು ರಾಜ್ಯದ ಸಂಚಿತನಿಧಿಯಿಂದ ಯಾವುದೇ ಹಣವನ್ನು, ಈ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಅಂಗೀಕೃತವಾದ ಕಾನೂನಿನ ಮೂಲಕ ಮಾಡಿದ ವಿನಿಯೋಗದ ಮೇರೆಗೆ ಹೊರತು ಇತರ ರೀತಿಯಲ್ಲಿ ಹಿಂತೆಗೆದುಕೊಳ್ಳತಕ್ಕದ್ದಲ್ಲ.

**205. ಪೂರಕ, ಹೆಚ್ಚುವರಿ ಅಥವಾ ಅಧಿಕ ಅನುದಾನಗಳು:-** (1) ರಾಜ್ಯಪಾಲನು,-

(ಎ) 204ನೆಯ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಮಾಡಿದ ಯಾವುದೇ ಕಾನೂನಿನ ಮೂಲಕ, ಚಾಲ್ತಿ ಹಣಕಾಸು ವರ್ಷದಲ್ಲಿ ನಿರ್ದಿಷ್ಟ ಸೇವೆಗೆ ವೆಚ್ಚ ಮಾಡುವುದಕ್ಕಾಗಿ ಅಧಿಕೃತಗೊಳಿಸಿದ ಮೊಬಲಗು ಆ ವರ್ಷದ ಉದ್ದೇಶಗಳಿಗೆ ಸಾಕಾಗುವುದಿಲ್ಲವೆಂದು ಕಂಡು ಬಂದರೆ ಅಥವಾ ಆ ಚಾಲ್ತಿ ಹಣಕಾಸು ವರ್ಷದ ವಾರ್ಷಿಕ ಹಣಕಾಸು ವಿವರಪತ್ರದಲ್ಲಿ ಉದ್ದೇಶಿಸಿಲ್ಲದ ಯಾವುದೇ ಹೊಸ ಸೇವೆಯ ಸಂಬಂಧದಲ್ಲಿ ಆ ವರ್ಷದಲ್ಲಿ ಪೂರಕ ಅಥವಾ ಅಧಿಕ ವೆಚ್ಚದ ಅಗತ್ಯತೆವುಂಟಾದರೆ, ಅಥವಾ

(ಬಿ) ಯಾವುದೇ ಸೇವೆಗಾಗಿ ಹಣಕಾಸು ವರ್ಷದಲ್ಲಿ ಆ ವರ್ಷಕ್ಕೆ ಕೊಡಲಾದ ಮೊಬಲಗನ್ನು ಮೀರಿದ ಯಾವುದೇ ಹಣವು ಆ ಸೇವೆಗಾಗಿ ವೆಚ್ಚವಾಗಿದ್ದರೆ

- ಸಂದರ್ಭಾನುಸಾರ, ಆ ವೆಚ್ಚದ ಅಂದಾಜು ಮೊಬಲಗನ್ನು ತೋರಿಸುವ ಇನ್ನೊಂದು ವಿವರಪತ್ರವನ್ನು ರಾಜ್ಯದ ವಿಧಾನಮಂಡಲದ ಸದನದ ಅಥವಾ ಸದನಗಳ ಮುಂದೆ ಇಡುವಂತೆ ಅಥವಾ ಅಂಥ ಅಧಿಕ ಮೊಬಲಗಿಗೆ ಬೇಡಿಕೆಯನ್ನು ರಾಜ್ಯದ ವಿಧಾನಸಭೆಯ ಮುಂದೆ ಇಡುವಂತೆ ಮಾಡತಕ್ಕದ್ದು.

(2) 202, 203 ಮತ್ತು 204ನೆಯ ಅನುಚ್ಛೇದಗಳ ಉಪಬಂಧಗಳು ವಾರ್ಷಿಕ ಹಣಕಾಸು ವಿವರಪತ್ರದ ಮತ್ತು ಆ ವಿವರಪತ್ರದಲ್ಲಿ ನಮೂದಿಸಿದ ವೆಚ್ಚದ ಅಥವಾ ಅನುದಾನದ ಬೇಡಿಕೆ ಮತ್ತು ಅಂಥ ವೆಚ್ಚವನ್ನು ಅಥವಾ ಅನುದಾನವನ್ನು ಭರಿಸಲು ರಾಜ್ಯದ ಸಂಚಿತ ನಿಧಿಯಿಂದ ಹಣವನ್ನು ವಿನಿಯೋಗಿಸುವುದನ್ನು ಅಧಿಕೃತಗೊಳಿಸಲು ಮಾಡಬೇಕಾದ ಕಾನೂನಿನ ಸಂಬಂಧದಲ್ಲಿ ಪರಿಣಾಮಕಾರಿಯಾಗಿರುವಂತೆಯೇ, ಅಂಥ ಯಾವುದೇ ವಿವರಪತ್ರದ ಮತ್ತು ವೆಚ್ಚದ ಅಥವಾ ಬೇಡಿಕೆಯ ಹಾಗೂ ಅಂಥ ಬೇಡಿಕೆಗೆ ಸಂಬಂಧಿಸಿದ ವೆಚ್ಚವನ್ನು ಅಥವಾ ಅನುದಾನವನ್ನು ಭರಿಸಲು ರಾಜ್ಯದ ಸಂಚಿತನಿಧಿಯಿಂದ ಹಣ ವಿನಿಯೋಗಿಸುವುದನ್ನು ಅಧಿಕೃತಗೊಳಿಸುವ ಯಾವುದೇ ಕಾನೂನಿನ ಸಂಬಂಧದಲ್ಲಿಯೂ ಪರಿಣಾಮಕಾರಿಯಾಗಿರತಕ್ಕದ್ದು.

**206. ಲೇಖಾನುದಾನಗಳು, ಪತ್ತಿನ ಅನುದಾನಗಳು ಮತ್ತು ಅಸಾಧಾರಣ ಅನುದಾನಗಳು:-** (1) ಈ ಅಧ್ಯಾಯದ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದಾಗ್ಯೂ, ಒಂದು ರಾಜ್ಯದ ವಿಧಾನಸಭೆಯು,-

(ಎ) ಯಾವುದೇ ಅನುದಾನವನ್ನು ಮತಕ್ಕೆ ಹಾಕುವ ವಿಷಯದಲ್ಲಿ 203ನೆಯ ಅನುಚ್ಛೇದದಲ್ಲಿ ನಿಯಮಿಸಿದ ಕಾರ್ಯವಿಧಾನವನ್ನು ಪೂರ್ಣಗೊಳಿಸುವವರೆಗೆ ಮತ್ತು ಆ ವೆಚ್ಚದ ಸಂಬಂಧದಲ್ಲಿ 204ನೆಯ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಕಾನೂನನ್ನು ಅಂಗೀಕರಿಸುವವರೆಗೆ ಯಾವುದೇ ಹಣಕಾಸು ವರ್ಷದ ಭಾಗಕ್ಕೆ, ಅಂದಾಜು ಮಾಡಲಾದ ವೆಚ್ಚಕ್ಕೆ ಸಂಬಂಧಿಸಿದಂತೆ ಮುಂಚಿತವಾಗಿ ಅಂಥ ಅನುದಾನಕ್ಕೆ ಒಪ್ಪಿಗೆ ಕೊಡಲು;

(ಬಿ) ಸೇವೆಯು ಭಾರೀ ಪ್ರಮಾಣದ್ದಾಗಿರುವ ಅಥವಾ ಅನಿಶ್ಚಿತ ಸ್ವರೂಪದ್ದಾಗಿರುವ ಕಾರಣದಿಂದ ವಾರ್ಷಿಕ ಹಣಕಾಸು ವಿವರಪತ್ರದಲ್ಲಿ ಸಾಮಾನ್ಯವಾಗಿ ಕೊಡುವ ವಿವರಗಳೊಂದಿಗೆ ಆ ಬೇಡಿಕೆಯನ್ನು ನಮೂದಿಸಲು ಆಗದೇ ಇದ್ದರೆ ರಾಜ್ಯದ ಸಂಪನ್ಮೂಲಗಳಿಂದ ಅನಿರೀಕ್ಷಿತ ಬೇಡಿಕೆಯನ್ನು ಈಡೇರಿಸಲು ಅನುದಾನಕ್ಕೆ ಒಪ್ಪಿಗೆ ಕೊಡಲು;

(ಸಿ) ಯಾವುದೇ ಹಣಕಾಸು ವರ್ಷದ ಚಾಲ್ತಿಸೇವೆಗೆ ಸೇರಿಲ್ಲದ ಅಸಾಧಾರಣವಾದ ಅನುದಾನಕ್ಕೆ ಒಪ್ಪಿಗೆ ಕೊಡಲು

– ಅಧಿಕಾರವನ್ನು ಹೊಂದಿರತಕ್ಕದ್ದು

ಮತ್ತು ಯಾವ ಉದ್ದೇಶಗಳಿಗಾಗಿ ಸದರಿ ಅನುದಾನಗಳಿಗೆ ಒಪ್ಪಿಗೆ ಕೊಡಲಾಗಿದೆಯೋ ಆ ಉದ್ದೇಶಗಳಿಗಾಗಿ ರಾಜ್ಯದ ಸಂಚಿತನಿಧಿಯಿಂದ ಹಣ ತೆಗೆದುಕೊಳ್ಳುವುದನ್ನು ಕಾನೂನಿನ ಮೂಲಕ ಅಧಿಕೃತಗೊಳಿಸಲು ರಾಜ್ಯದ ವಿಧಾನಸಭೆಗೆ ಅಧಿಕಾರವಿರತಕ್ಕದ್ದು.

(2) 203ನೆಯ ಮತ್ತು 204ನೆಯ ಅನುಚ್ಛೇದಗಳ ಉಪಬಂಧಗಳು ವಾರ್ಷಿಕ ಹಣಕಾಸು ವಿವರಪತ್ರದಲ್ಲಿ ನಮೂದಿಸಿರುವ ಯಾವುದೇ ವೆಚ್ಚಕ್ಕೆ ಸಂಬಂಧಿಸಿದಂತೆ ಅನುದಾನಕ್ಕೆ ಒಪ್ಪಿಗೆ ಕೊಡುವ ಮತ್ತು ಅಂಥ ವೆಚ್ಚವನ್ನು ಭರಿಸಲು ರಾಜ್ಯದ ಸಂಚಿತನಿಧಿಯಿಂದ ಹಣ ವಿನಿಯೋಗಿಸುವುದನ್ನು ಅಧಿಕೃತಗೊಳಿಸಲು ಮಾಡಬೇಕಾದ ಕಾನೂನಿನ ಸಂಬಂಧದಲ್ಲಿ ಪರಿಣಾಮಕಾರಿಯಾಗಿರುವಂತೆಯೇ (1)ನೆಯ ಖಂಡದ ಮೇರೆಗೆ ಯಾವುದೇ ಅನುದಾನಕ್ಕೆ ಒಪ್ಪಿಗೆ ಕೊಡುವ ಮತ್ತು ಆ ಖಂಡದ ಮೇರೆಗೆ ಯಾವುದೇ ಕಾನೂನನ್ನು ಮಾಡುವ ಸಂಬಂಧದಲ್ಲಿಯೂ ಪರಿಣಾಮಕಾರಿಯಾಗಿರತಕ್ಕದ್ದು.

**207. ಹಣಕಾಸು ವಿಧೇಯಕಗಳ ಬಗ್ಗೆ ವಿಶೇಷ ಉಪಬಂಧಗಳು:–** (1) 199ನೆಯ ಅನುಚ್ಛೇದದ (1)ನೆಯ ಖಂಡದ (ಎ) ಯಿಂದ (ಎಫ್) ವರೆಗಿನ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವ ವಿಧೇಯಕವನ್ನು ಅಥವಾ ತಿದ್ದುಪಡಿಯನ್ನು ರಾಜ್ಯಪಾಲನ ಶಿಫಾರಸಿನ ಹೊರತು ಮಂಡಿಸತಕ್ಕದ್ದಲ್ಲ ಅಥವಾ ಸೂಚಿಸತಕ್ಕದ್ದಲ್ಲ; ಮತ್ತು ಅಂಥ ಉಪಬಂಧ ಕಲ್ಪಿಸುವ ವಿಧೇಯಕವನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸತಕ್ಕದ್ದಲ್ಲ:

ಪರಂತು, ಯಾವುದೇ ತೆರಿಗೆಯನ್ನು ಕಡಿಮೆ ಮಾಡುವುದಕ್ಕೆ ಅಥವಾ ರದ್ದು ಮಾಡುವುದಕ್ಕೆ ಉಪಬಂಧ ಕಲ್ಪಿಸುವ ತಿದ್ದುಪಡಿಯನ್ನು ಮಂಡಿಸುವುದಕ್ಕಾಗಿ ಈ ಖಂಡದ ಮೇರೆಗೆ ಯಾವುದೇ ಶಿಫಾರಸಿನ ಅಗತ್ಯವಿರತಕ್ಕದ್ದಲ್ಲ.

(2) ಒಂದು ವಿಧೇಯಕವು ಅಥವಾ ತಿದ್ದುಪಡಿಯು, ಜುಲ್ಮಾನೆಗಳನ್ನು ಅಥವಾ ಇತರ ಹಣರೂಪದ ದಂಡಗಳನ್ನು ವಿಧಿಸುವುದಕ್ಕೆ ಅಥವಾ ಲೈಸೆನ್ಸುಗಳಿಗೆ ಅಥವಾ ಮಾಡಿದ ಸೇವೆಗಳಿಗೆ ಫೀಜನ್ನು ಕೇಳುವುದಕ್ಕೆ ಅಥವಾ ಸಂದಾಯ ಮಾಡುವುದಕ್ಕೆ ಉಪಬಂಧ ಕಲ್ಪಿಸುತ್ತದೆ ಎಂಬ ಕಾರಣಮಾತ್ರದಿಂದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ನಿಕಾಯವು ಸ್ಥಳೀಯ ಉದ್ದೇಶಗಳಿಗಾಗಿ ಯಾವುದೇ ತೆರಿಗೆಯನ್ನು ವಿಧಿಸುವುದಕ್ಕೆ, ರದ್ದುಪಡಿಸುವುದಕ್ಕೆ, ಮಾಫಿ ಮಾಡುವುದಕ್ಕೆ, ಬದಲಾವಣೆ ಮಾಡುವುದಕ್ಕೆ ಅಥವಾ ವಿನಿಯಮನ ಗೊಳಿಸುವುದಕ್ಕೆ ಉಪಬಂಧ ಕಲ್ಪಿಸುತ್ತದೆ ಎಂಬ ಕಾರಣದಿಂದ ಆ ವಿಧೇಯಕವು ಅಥವಾ ತಿದ್ದುಪಡಿಯು ಹಿಂದೆ ಹೇಳಿದ ಯಾವುವೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುತ್ತದೆ ಎಂದು ಭಾವಿಸತಕ್ಕದ್ದಲ್ಲ.

(3) ಯಾವ ವಿಧೇಯಕವನ್ನು ಅಧಿನಿಯಮಿತಗೊಳಿಸಿ ಜಾರಿಗೆ ತಂದರೆ, ರಾಜ್ಯದ ಸಂಚಿತ ನಿಧಿಯಿಂದ ಹಣವನ್ನು ವೆಚ್ಚ ಮಾಡಬೇಕಾಗಿ ಬರುವುದೋ ಆ ವಿಧೇಯಕವನ್ನು ರಾಜ್ಯದ ವಿಧಾನಮಂಡಲದ ಯಾವುದೇ ಒಂದು ಸದನವು ಪರ್ಯಾಲೋಚಿಸಬೇಕೆಂದು ರಾಜ್ಯಪಾಲನು ಆ ಸದನಕ್ಕೆ ಶಿಫಾರಸು ಮಾಡಿದ ಹೊರತು ಆ ವಿಧೇಯಕವನ್ನು ಆ ಸದನವು ಅಂಗೀಕರಿಸತಕ್ಕದ್ದಲ್ಲ.

## ಸಾಮಾನ್ಯತಃ ಪ್ರಕ್ರಿಯೆ

**208. ಪ್ರಕ್ರಿಯಾ ನಿಯಮಗಳು:-** (1) ರಾಜ್ಯದ ವಿಧಾನ ಮಂಡಲದ ಒಂದು ಸದನವು ತನ್ನ ಪ್ರಕ್ರಿಯೆಯನ್ನು ಮತ್ತು ಅದರ ಕಾರ್ಯಕಲಾಪ ನಡೆಸುವುದನ್ನು ವಿನಿಯಮಗೊಳಿಸುವುದಕ್ಕಾಗಿ ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು ನಿಯಮಗಳನ್ನು ರಚಿಸಬಹುದು.

(2) (1)ನೇಯ ಖಂಡದ ಮೇರೆಗೆ ನಿಯಮಗಳನ್ನು ರಚಿಸುವವರೆಗೆ ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ, ಆ ರಾಜ್ಯಕ್ಕೆ ಸಂವಾದಿ ಪ್ರಾಂತದ ವಿಧಾನಮಂಡಲದ ಸಂಬಂಧದಲ್ಲಿ ಯಾವ ಪ್ರಕ್ರಿಯಾ ನಿಯಮಗಳು ಮತ್ತು ಸ್ಥಾಯಿ ಆದೇಶಗಳು ಜಾರಿಯಲ್ಲಿದ್ದವೋ ಅವೇ ನಿಯಮಗಳು ಮತ್ತು ಸ್ಥಾಯಿ ಆದೇಶಗಳು, ವಿಧಾನಸಭೆಯ ಅಧ್ಯಕ್ಷನು ಅಥವಾ ಸಂದರ್ಭಾನುಸಾರ ವಿಧಾನಪರಿಷತ್ತಿನ ಸಭಾಪತಿಯು ಅವುಗಳಲ್ಲಿ ಮಾಡಬಹುದಾದಂಥ ಮಾರ್ಪಾಡುಗಳಿಗೆ ಮತ್ತು ಅಳವಡಿಕೆಗಳಿಗೆ ಒಳಪಟ್ಟು, ರಾಜ್ಯದ ವಿಧಾನ ಮಂಡಲಕ್ಕೆ ಸಂಬಂಧಪಟ್ಟಂತೆ ಪರಿಣಾಮಕಾರಿಯಾಗತಕ್ಕದ್ದು.

(3) ವಿಧಾನ ಪರಿಷತ್ತನ್ನು ಹೊಂದಿರುವ ರಾಜ್ಯಗಳ ಸಂಬಂಧದಲ್ಲಿ ರಾಜ್ಯಪಾಲನು, ವಿಧಾನಸಭೆಯ ಅಧ್ಯಕ್ಷನೊಡನೆ ಮತ್ತು ವಿಧಾನ ಪರಿಷತ್ತಿನ ಸಭಾಪತಿಯೊಡನೆ ಸಮಾಲೋಚಿಸಿದ ತರುವಾಯ, ಆ ಎರಡು ಸದನಗಳ ನಡುವಣ ಸಂಪರ್ಕದ ಪ್ರಕ್ರಿಯೆಗೆ ಸಂಬಂಧಪಟ್ಟ ನಿಯಮಗಳನ್ನು ರಚಿಸಬಹುದು.

**209. ರಾಜ್ಯದ ವಿಧಾನ ಮಂಡಲದಲ್ಲಿ ಹಣಕಾಸು ಕಾರ್ಯಕಲಾಪಗಳಿಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ಕಾನೂನಿನ ಮೂಲಕ ವಿನಿಯಮಗೊಳಿಸುವುದು:-** ಹಣಕಾಸು ಕಾರ್ಯಕಲಾಪಗಳನ್ನು ಸಕಾಲದಲ್ಲಿ ಸಮಾಪ್ತಗೊಳಿಸುವ ಉದ್ದೇಶಕ್ಕಾಗಿ ರಾಜ್ಯದ ವಿಧಾನ ಮಂಡಲವು ಯಾವುದೇ ಹಣಕಾಸು ಕಾರ್ಯಕಲಾಪಗಳ ಬಗೆಗಿನ ಅಥವಾ ರಾಜ್ಯದ ಸಂಚಿತನಿಧಿಯಿಂದ ಹಣವನ್ನು ವಿನಿಯೋಗಿಸುವ ಬಗೆಗಿನ ಯಾವುದೇ ವಿಧೇಯಕಕ್ಕೆ ಸಂಬಂಧಪಟ್ಟಂತೆ ಆ ವಿಧಾನಮಂಡಲದ ಸದನದ ಅಥವಾ ಸದನಗಳ ಕಾರ್ಯವಿಧಾನವನ್ನು ಅಥವಾ ಸದನದ ಕಾರ್ಯಕಲಾಪ ನಡೆಸುವುದನ್ನು ಕಾನೂನಿನ ಮೂಲಕ ವಿನಿಯಮಗೊಳಿಸಬಹುದು ಮತ್ತು ಹಾಗೆ ಮಾಡಿದ ಯಾವುದೇ ಕಾನೂನಿನ ಯಾವುದೇ ಉಪಬಂಧವು 208ನೇಯ ಅನುಚ್ಛೇದದ (1) ನೇಯ ಖಂಡದ ಮೇರೆಗೆ ರಾಜ್ಯದ ವಿಧಾನ ಮಂಡಲದ ಸದನದಿಂದ ಅಥವಾ ಎರಡೂ ಸದನಗಳಲ್ಲಿ ಯಾವುದೇ ಒಂದು ಸದನದಿಂದ ರಚಿತವಾದ ಯಾವುದೇ ನಿಯಮಕ್ಕೆ ಅಥವಾ ಆ ಅನುಚ್ಛೇದದ (2) ನೇಯ ಖಂಡದ ಮೇರೆಗೆ ಆ ರಾಜ್ಯದ ವಿಧಾನ ಮಂಡಲಕ್ಕೆ ಸಂಬಂಧಪಟ್ಟಂತೆ ಪರಿಣಾಮವುಳ್ಳ ಯಾವುದೇ ನಿಯಮಕ್ಕೆ ಅಥವಾ ಸ್ಥಾಯೀ ಆದೇಶಕ್ಕೆ ಅಸಂಗತವಾಗಿದ್ದರೆ ಮತ್ತು ಹಾಗೆ ಅಸಂಗತವಾಗುವಷ್ಟರ ಮಟ್ಟಿಗೆ ಅಂಥ ಉಪಬಂಧವು ಪ್ರಭಾವವುಳ್ಳದ್ದಾಗಿರತಕ್ಕದ್ದು.

**210. ವಿಧಾನ ಮಂಡಲದಲ್ಲಿ ಬಳಸಬೇಕಾದ ಭಾಷೆ:-** (1) ಭಾಗ XVII ರಲ್ಲಿ ಏನೇ ಇದ್ದಾಗ್ಯೂ, 348ನೇಯ ಅನುಚ್ಛೇದದ ಉಪಬಂಧಗಳಿಗೆ ಒಳಪಟ್ಟು, ರಾಜ್ಯದ ವಿಧಾನ ಮಂಡಲದ ಕಾರ್ಯಕಲಾಪವು ಆ ರಾಜ್ಯದ ರಾಜಭಾಷೆಯಲ್ಲಿ ಅಥವಾ ರಾಜಭಾಷೆಗಳಲ್ಲಿ ಅಥವಾ ಹಿಂದಿಯಲ್ಲಿ ಅಥವಾ ಇಂಗ್ಲೀಷಿನಲ್ಲಿ ನಡೆಯತಕ್ಕದ್ದು:

ಪರಂತು, ಯಾರೇ ಸದಸ್ಯನಿಗೆ ಮೇಲೆ ಹೇಳಿದ ಯಾವುದೇ ಭಾಷೆಯಲ್ಲಿ ತನ್ನ ವಿಚಾರಗಳನ್ನು ಸಮರ್ಪಕವಾಗಿ ವ್ಯಕ್ತಪಡಿಸಲು ಆಗದಿರುವ ಪಕ್ಷದಲ್ಲಿ ಅವನ ಮಾತೃಭಾಷೆಯಲ್ಲಿ ಮಾತನಾಡಲು,ಆ ರಾಜ್ಯದ ವಿಧಾನ ಸಭೆಯ ಅಧ್ಯಕ್ಷನು ಅಥವಾ ಸಂದರ್ಭಾನುಸಾರ ವಿಧಾನ ಪರಿಷತ್ತಿನ ಸಭಾಪತಿಯು ಅಥವಾ ಅಧ್ಯಕ್ಷನಾಗಿ ಅಥವಾ ಸಭಾಪತಿಯಾಗಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಯು ಅನುಮತಿಸಬಹುದು.

(2) ರಾಜ್ಯದ ವಿಧಾನ ಮಂಡಲವು, ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸಿದ್ದ ಹೊರತು, ಈ ಸಂವಿಧಾನವು ಪ್ರಾರಂಭವಾದಾಗಿನಿಂದ ಹದಿನೈದು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ, ಈ ಅನುಚ್ಛೇದದಲ್ಲಿರುವ "ಅಥವಾ ಇಂಗ್ಲೀಷಿನಲ್ಲಿ" ಎಂಬ ಪದಗಳನ್ನು ಅದರಿಂದ ಬಿಟ್ಟುಬಿಡಲಾಗಿದ್ದರೆ ಹೇಗೋ ಹಾಗೆ ಆ ಅನುಚ್ಛೇದವು ಪರಿಣಾಮವುಳ್ಳದ್ದಾಗಿರತಕ್ಕದ್ದು:

[1][ಪರಂತು, [2][ಹಿಮಾಚಲ ಪ್ರದೇಶ, ಮಣಿಪುರ, ಮೇಘಾಲಯ ಮತ್ತು ತ್ರಿಪುರ ರಾಜ್ಯಗಳ ವಿಧಾನ ಮಂಡಲಗಳ] ಸಂಬಂಧದಲ್ಲಿ ಈ ಖಂಡವು, ಅದರಲ್ಲಿ ಬರುವ "ಹದಿನೈದು ವರ್ಷಗಳ" ಎಂಬ ಪದಗಳ ಬದಲಾಗಿ "ಇಪ್ಪತ್ತೈದು ವರ್ಷಗಳ" ಎಂಬ ಪದಗಳನ್ನು ಸೇರಿಸಿದ್ದರೆ ಹೇಗೋ ಹಾಗೆ ಪರಿಣಾಮವುಳ್ಳದ್ದಾಗಿರತಕ್ಕದ್ದು :]

---

1. 1970ನೇಯ ಇಸವಿಯ ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮದ (1970ರ 53) 46ನೇಯ ಪ್ರಕರಣದ ಮೂಲಕ (25-1-71ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1971ನೇಯ ಇಸವಿಯ ಈಶಾನ್ಯ ಪ್ರದೇಶಗಳ (ಪುನಾರಚನೆಯ) ಅಧಿನಿಯಮದ (1971ರ 81) 71ನೇಯ ಪ್ರಕರಣದ ಮೂಲಕ "ಹಿಮಾಚಲ ಪ್ರದೇಶ ರಾಜ್ಯದ ವಿಧಾನ ಮಂಡಲದ" ಎಂಬುದಕ್ಕೆ ಬದಲಾಗಿ (21-1-1972 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

[1][ಮತ್ತೂ ಪರಂತು, [2][3][[ಅರುಣಾಚಲ ಪ್ರದೇಶ, ಗೋವಾ ಮತ್ತು ಮಿಜೋರಾಂ] ರಾಜ್ಯಗಳ ವಿಧಾನ ಮಂಡಲಗಳ] ಸಂಬಂಧದಲ್ಲಿ ಈ ಖಂಡವು, ಅದರಲ್ಲಿ ಬರುವ "ಹದಿನೈದು ವರ್ಷಗಳು" ಎಂಬ ಪದಗಳಿಗೆ ಬದಲಾಗಿ "ನಲವತ್ತು ವರ್ಷಗಳು" ಎಂಬ ಪದಗಳನ್ನು ಸೇರಿಸಿದ್ದರೆ ಹೇಗೋ ಹಾಗೆ ಪರಿಣಾಮವುಳ್ಳದ್ದಾಗಿರತಕ್ಕದ್ದು.]

**211. ವಿಧಾನ ಮಂಡಲದಲ್ಲಿ ಚರ್ಚೆಯ ಮೇಲೆ ನಿರ್ಬಂಧ:–** ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಯಾರೇ ನ್ಯಾಯಾಧೀಶನ ಕರ್ತವ್ಯ ನಿರ್ವಹಣೆಯಲ್ಲಿನ ಅವನ ವರ್ತನೆಗೆ ಸಂಬಂಧಿಸಿದಂತೆ ರಾಜ್ಯ ವಿಧಾನ ಮಂಡಲದಲ್ಲಿ ಯಾವುದೇ ಚರ್ಚೆಯು ನಡೆಯತಕ್ಕದ್ದಲ್ಲ.

**212. ನ್ಯಾಯಾಲಯಗಳು ವಿಧಾನ ಮಂಡಲದ ವ್ಯವಹರಣೆಗಳ ಬಗ್ಗೆ ವಿಚಾರಣೆ ನಡೆಸದಿರುವುದು:–** (1) ರಾಜ್ಯದ ವಿಧಾನ ಮಂಡಲದಲ್ಲಿನ ಯಾವುವೇ ವ್ಯವಹರಣೆಗಳ ಸಿಂಧುತ್ವವನ್ನು ಪ್ರಕ್ರಿಯೆಯಲ್ಲಿ ಆಪಾದಿಸಲಾದ ಯಾವುದೇ ಕ್ರಮದೋಷದ ಆಧಾರದ ಮೇಲೆ ಪ್ರಶ್ನಿಸತಕ್ಕದ್ದಲ್ಲ.

(2) ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ರಾಜ್ಯದ ವಿಧಾನ ಮಂಡಲದ ಪ್ರಕ್ರಿಯೆಯನ್ನು ಅಥವಾ ಕಾರ್ಯಕಲಾಪ ನಡೆಸುವುದನ್ನು ವಿನಿಯಮಿಸುವ ಅಥವಾ ವಿಧಾನ ಮಂಡಲದಲ್ಲಿ ಸುವ್ಯವಸ್ಥೆಯನ್ನು ಕಾಪಾಡುವ ಅಧಿಕಾರಗಳು, ಆ ವಿಧಾನ ಮಂಡಲದ ಯಾವ ಅಧಿಕಾರಿಯಲ್ಲಿ ಅಥವಾ ಸದಸ್ಯನಲ್ಲಿ ನಿಹಿತವಾಗಿರುವುವೋ, ಆ ಯಾರೇ ಅಧಿಕಾರಿಯು ಅಥವಾ ಸದಸ್ಯನು ಆ ಅಧಿಕಾರಗಳನ್ನು ತಾನು ಚಲಾಯಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಒಳಪಡತಕ್ಕದ್ದಲ್ಲ.

## ಅಧ್ಯಾಯ – IV ರಾಜ್ಯಪಾಲನ ವಿಧಾಯೀ ಅಧಿಕಾರ

**213. ವಿಧಾನ ಮಂಡಲದ ವಿರಾಮ ಕಾಲದಲ್ಲಿ ಅಧ್ಯಾದೇಶಗಳನ್ನು ಹೊರಡಿಸಲು ರಾಜ್ಯಪಾಲನ ಅಧಿಕಾರ:–** (1) ರಾಜ್ಯದ ವಿಧಾನ ಸಭೆಯು ಅಧಿವೇಶನದಲ್ಲಿರುವ ಕಾಲವನ್ನು ಹೊರತುಪಡಿಸಿ ಅಥವಾ ರಾಜ್ಯದಲ್ಲಿ ವಿಧಾನ ಪರಿಷತ್ತು ಇರುವಲ್ಲಿ ವಿಧಾನ ಮಂಡಲದ ಉಭಯ ಸದನಗಳು ಅಧಿವೇಶನದಲ್ಲಿರುವ ಕಾಲವನ್ನು ಹೊರತುಪಡಿಸಿ, ಯಾವುದೇ ಕಾಲದಲ್ಲಿ ತಾನು ಕೂಡಲೇ ಕ್ರಮವನ್ನು ಕೈಗೊಳ್ಳುವುದು ಅವಶ್ಯವಾಗಿರುವ ಸನ್ನಿವೇಶಗಳು ಇರುವುದಾಗಿ ರಾಜ್ಯಪಾಲನಿಗೆ ಮನದಟ್ಟಾದರೆ, ಅವನು ಆ ಸನ್ನಿವೇಶಗಳಿಗೆ ಅಗತ್ಯವೆಂದು ತನಗೆ ತೋರುವಂಥ ಅಧ್ಯಾದೇಶಗಳನ್ನು ಹೊರಡಿಸಬಹುದು:

ಪರಂತು, ರಾಜ್ಯಪಾಲನು,–

(ಎ) ವಿಧೇಯಕವು ಆ ಅಧ್ಯಾದೇಶದಲ್ಲಿರುವಂಥವೇ ಉಪಬಂಧಗಳನ್ನೊಳಗೊಂಡಿದ್ದು, ಅದನ್ನು ವಿಧಾನ ಮಂಡಲದಲ್ಲಿ ಮಂಡಿಸಬೇಕಾದರೆ ಈ ಸಂವಿಧಾನದ ಮೇರೆಗೆ ಅದಕ್ಕೆ ರಾಷ್ಟ್ರಪತಿಯ ಮಂಜೂರಾತಿಯನ್ನು ಮುಂಚಿತವಾಗಿ ಪಡೆಯಬೇಕಾದುದು ಅಗತ್ಯವಾಗಿದ್ದರೆ; ಅಥವಾ

(ಬಿ) ಅವೇ ಉಪಬಂಧಗಳನ್ನು ಒಳಗೊಂಡ ವಿಧೇಯಕವನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾಯ್ದಿರಿಸುವುದು ಅವಶ್ಯವೆಂದು ರಾಜ್ಯಪಾಲನು ಭಾವಿಸಿದರೆ; ಅಥವಾ

(ಸಿ) ಅವೇ ಉಪಬಂಧಗಳನ್ನು ಒಳಗೊಂಡ ರಾಜ್ಯದ ವಿಧಾನ ಮಂಡಲದ ಒಂದು ಅಧಿನಿಯಮವನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾಯ್ದಿರಿಸಿದ್ದು ಅದಕ್ಕೆ ರಾಷ್ಟ್ರಪತಿಯ ಅನುಮತಿಯು ದೊರೆಯದೆ ಹೋದ ಪಕ್ಷದಲ್ಲಿ ಈ ಸಂವಿಧಾನದ ಮೇರೆಗೆ ಅದು ಅಸಿಂಧುವಾಗುತ್ತಿದ್ದರೆ

– ರಾಷ್ಟ್ರಪತಿಯಿಂದ ಅನುದೇಶಗಳನ್ನು ಪಡೆಯದೆಯೇ ಅಂಥ ಯಾವುದೇ ಅಧ್ಯಾದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಈ ಅನುಚ್ಛೇದದ ಮೇರೆಗೆ ಹೊರಡಿಸಲಾದ ಅಧ್ಯಾದೇಶವು ರಾಜ್ಯಪಾಲನಿಂದ ಅನುಮತಿಯನ್ನು ಪಡೆದಿರುವ ರಾಜ್ಯದ ವಿಧಾನ ಮಂಡಲದ ಒಂದು ಅಧಿನಿಯಮದಂತೆಯೇ ಬಲವುಳ್ಳದ್ದಾಗಿಯೂ ಮತ್ತು ಪರಿಣಾಮವುಳ್ಳದ್ದಾಗಿಯೂ ಇರತಕ್ಕದ್ದು. ಆದರೆ ಅಂಥ ಪ್ರತಿಯೊಂದು ಅಧ್ಯಾದೇಶವನ್ನು,–

---

1. 1986ರ ಮಿಜೋರಾಂ ಅಧಿನಿಯಮದ 39ನೆಯ ಪ್ರಕರಣದ ಮೂಲಕ (20.2.1987 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1986ರ ಅರುಣಾಚಲ ಪ್ರದೇಶ ರಾಜ್ಯ ಅಧಿನಿಯಮದ (1986ರ 69) 42ನೇ ಪ್ರಕರಣದ ಮೂಲಕ "ಮಿಜೋರಾಂ ರಾಜ್ಯ ವಿಧಾನಮಂಡಲ" ಎಂಬುದಕ್ಕೆ ಬದಲಾಗಿ (20–2–87 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. 1987ರ ಗೋವ, ದಾಮನ್ ಮತ್ತು ದೀವ್ ಪುನಾರಚನೆಯ ಅಧಿನಿಯಮದ (1987ರ 18) 63ನೇ ಪ್ರಕರಣದ ಮೂಲಕ "ಅರುಣಾಚಲಪ್ರದೇಶ ಮತ್ತು ಮಿಜೋರಾಂ" ಎಂಬುದಕ್ಕೆ ಬದಲಾಗಿ (30–5–1987ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

(ಎ) ರಾಜ್ಯದ ವಿಧಾನಸಭೆಯ ಮುಂದೆ ಅಥವಾ ರಾಜ್ಯದಲ್ಲಿ ವಿಧಾನ ಪರಿಷತ್ತು ಇದ್ದಲ್ಲಿ ಅವೆರಡೂ ಸದನಗಳ ಮುಂದೆ ಇಡತಕ್ಕದ್ದು ಮತ್ತು ವಿಧಾನ ಮಂಡಲವು ಪುನಃ ಸಭೆ ಸೇರಿದಾಗಿನಿಂದ ಆರು ವಾರಗಳು ಮುಕ್ತಾಯವಾದ ಅನಂತರ ಅಥವಾ ಆ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಆ ಅಧ್ಯಾದೇಶವನ್ನು ಅನುಮೋದಿಸದೆ ಇರುವ ನಿರ್ಣಯವು ವಿಧಾನ ಸಭೆಯಿಂದ ಅಂಗೀಕೃತವಾದರೆ ಮತ್ತು ವಿಧಾನ ಪರಿಷತ್ತು ಇರುವಲ್ಲಿ ಅದು ಅಂಥ ನಿರ್ಣಯಕ್ಕೆ ಒಪ್ಪಿಗೆ ಕೊಟ್ಟರೆ, ಆ ನಿರ್ಣಯವು ಅಂಗೀಕೃತವಾದೊಡನೆಯೇ ಅಥವಾ ಸಂದರ್ಭಾನುಸಾರ ವಿಧಾನ ಪರಿಷತ್ತು ಅದಕ್ಕೆ ಒಪ್ಪಿಗೆ ಕೊಟ್ಟೊಡನೆಯೇ ಅದು ಜಾರಿಯಲ್ಲಿರುವುದು ನಿಂತು ಹೋಗತಕ್ಕದ್ದು; ಮತ್ತು

(ಬಿ) ಯಾವುದೇ ಕಾಲದಲ್ಲಿ ರಾಜ್ಯಪಾಲನು ಹಿಂತೆಗೆದುಕೊಳ್ಳಬಹುದು.

**ವಿವರಣೆ:-** ವಿಧಾನ ಪರಿಷತ್ತು ಇರುವ ರಾಜ್ಯದ ವಿಧಾನ ಮಂಡಲದ ಸದನಗಳನ್ನು ಬೇರೆ ಬೇರೆ ದಿನಾಂಕಗಳಲ್ಲಿ ಪುನಃ ಸಮಾವೇಶಗೊಳ್ಳುವಂತೆ ಕರೆದಿರುವ ಸಂದರ್ಭದಲ್ಲಿ ಈ ಖಂಡದ ಉದ್ದೇಶಗಳಿಗಾಗಿ, ಆ ದಿನಾಂಕಗಳಲ್ಲಿ ಆನಂತರದ ದಿನಾಂಕದಿಂದ ಆರು ವಾರಗಳ ಅವಧಿಯನ್ನು ಲೆಕ್ಕಹಾಕತಕ್ಕದ್ದು.

(3) ಯಾವ ಉಪಬಂಧವನ್ನು ರಾಜ್ಯ ವಿಧಾನ ಮಂಡಲದ ಅಧಿನಿಯಮದಲ್ಲಿ ಅಧಿನಿಯಮಿತಗೊಳಿಸಿದ್ದರೆ ಮತ್ತು ರಾಜ್ಯಪಾಲನು ಅನುಮತಿಯನ್ನು ಕೊಟ್ಟಿದ್ದರೆ ಸಿಂಧುವಾಗುತ್ತಿರಲಿಲ್ಲವೋ ಅಂಥ ಯಾವುದೇ ಉಪಬಂಧವನ್ನು ಈ ಅನುಚ್ಛೇದದ ಮೇರೆಗೆ ಯಾವುದೇ ಅಧ್ಯಾದೇಶದ ಮೂಲಕ ಮಾಡಿದರೆ ಮತ್ತು ಮಾಡುವಷ್ಟರಮಟ್ಟಿಗೆ ಅಂಥ ಅಧ್ಯಾದೇಶವು ಶೂನ್ಯವಾಗತಕ್ಕದ್ದು:

ಪರಂತು, ಸಮವರ್ತಿ ಪಟ್ಟಿಯಲ್ಲಿ ನಮೂದಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ಸಂಸತ್ತಿನ ಅಧಿನಿಯಮಕ್ಕೆ ಅಥವಾ ಅಸ್ತಿತ್ವದಲ್ಲಿರುವ ಕಾನೂನಿಗೆ ವಿರುದ್ಧವಾಗಿರುವ ಒಂದು ರಾಜ್ಯದ ವಿಧಾನ ಮಂಡಲದ ಅಧಿನಿಯಮದ ಪರಿಣಾಮಕ್ಕೆ ಸಂಬಂಧಿಸಿದ ಈ ಸಂವಿಧಾನದ ಉಪಬಂಧಗಳ ಉದ್ದೇಶಗಳಿಗಾಗಿ, ರಾಷ್ಟ್ರಪತಿಯ ಅನುದೇಶಗಳಿಗನುಸಾರವಾಗಿ ಈ ಅನುಚ್ಛೇದದ ಮೇರೆಗೆ ಹೊರಡಿಸಿದ ಅಧ್ಯಾದೇಶವನ್ನು, ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾಯ್ದಿರಿಸಿದ್ದು ಅವನಿಂದ ಅನುಮತಿಯನ್ನು ಪಡೆದಿರುವ ರಾಜ್ಯ ವಿಧಾನ ಮಂಡಲದ ಒಂದು ಅಧಿನಿಯಮವಾಗಿರುವುದಾಗಿ ಭಾವಿಸತಕ್ಕದ್ದು.

[1] * * *

## ಅಧ್ಯಾಯ – V – ರಾಜ್ಯಗಳ ಉಚ್ಚ ನ್ಯಾಯಾಲಯಗಳು

**214. ರಾಜ್ಯಗಳಿಗಾಗಿ ಉಚ್ಚ ನ್ಯಾಯಾಲಯಗಳು:-** [2] * * * ಪ್ರತಿಯೊಂದು ರಾಜ್ಯಕ್ಕೂ ಒಂದು ಉಚ್ಚ ನ್ಯಾಯಾಲಯವಿರತಕ್ಕದ್ದು.

[3] * * *

**215. ಉಚ್ಚ ನ್ಯಾಯಾಲಯಗಳು ಅಭಿಲೇಖ ನ್ಯಾಯಾಲಯಗಳಾಗಿರತಕ್ಕದ್ದು:-** ಪ್ರತಿಯೊಂದು ಉಚ್ಚ ನ್ಯಾಯಾಲಯವೂ ಅಭಿಲೇಖ ನ್ಯಾಯಾಲಯವಾಗಿರತಕ್ಕದ್ದು ಮತ್ತು ಅದು ತನಗಾದ ನಿಂದನೆಗೆ ಶಿಕ್ಷಿಸುವ ಅಧಿಕಾರವನ್ನು ಒಳಗೊಂಡಂತೆ ಅಂಥ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನೂ ಹೊಂದಿರತಕ್ಕದ್ದು.

**216. ಉಚ್ಚ ನ್ಯಾಯಾಲಯಗಳ ರಚನೆ:-** ಪ್ರತಿಯೊಂದು ಉಚ್ಚ ನ್ಯಾಯಾಲಯವು ಒಬ್ಬ ಮುಖ್ಯ ನ್ಯಾಯಮೂರ್ತಿಯನ್ನು ಮತ್ತು ರಾಷ್ಟ್ರಪತಿಯು ಕಾಲಕಾಲಕ್ಕೆ ನೇಮಕ ಮಾಡುವುದು ಅವಶ್ಯವೆಂದು ಭಾವಿಸುವಷ್ಟು ಸಂಖ್ಯೆಯ ಇತರ ನ್ಯಾಯಾಧೀಶರನ್ನು ಒಳಗೊಂಡಿರತಕ್ಕದ್ದು.

[4] * * *

---

1. 1975ನೆಯ ಇಸವಿಯ ಸಂವಿಧಾನ (ಮೂವತ್ತೆಂಟನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ (ಪೂರ್ವಾನ್ವಯ ಪರಿಣಾಮ ಸಹಿತವಾಗಿ) (4)ನೆಯ ಖಂಡವನ್ನು ಸೇರಿಸಲಾಗಿತ್ತು ಹಾಗೂ 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 27ನೆಯ ಪ್ರಕರಣದ ಮೂಲಕ (20-6-1979ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ (1) ಎಂಬ ಅಂಕಿಗಳು ಮತ್ತು ಆವರಣಗಳನ್ನು ಬಿಟ್ಟು ಬಿಡಲಾಗಿದೆ.
3. ಅದೇ ತಿದ್ದುಪಡಿ ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ (2)ನೆಯ ಮತ್ತು (3)ನೆಯ ಖಂಡಗಳನ್ನು ಬಿಟ್ಟುಬಿಡಲಾಗಿದೆ.
4. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 11ನೆಯ ಪ್ರಕರಣದ ಮೂಲಕ ಪರಂತುಕವನ್ನು ಬಿಟ್ಟುಬಿಡಲಾಗಿದೆ.

**217. ಉಚ್ಚ ನ್ಯಾಯಾಲಯದ ನ್ಯಾಯಾಧೀಶನ ನೇಮಕ ಮತ್ತು ಆ ಪದದ ಷರತ್ತುಗಳು:-** (1) ಉಚ್ಚ ನ್ಯಾಯಾಲಯದ ಪ್ರತಿಯೊಬ್ಬ ನ್ಯಾಯಾಧೀಶನನ್ನು ರಾಷ್ಟ್ರಪತಿಯು ಭಾರತದ ಮುಖ್ಯ ನ್ಯಾಯಮೂರ್ತಿಯೊಡನೆ, ರಾಜ್ಯದ ರಾಜ್ಯಪಾಲನೊಡನೆ ಸಮಾಲೋಚಿಸಿ ಮತ್ತು ಮುಖ್ಯ ನ್ಯಾಯಮೂರ್ತಿಯನ್ನು ಹೊರತುಪಡಿಸಿ ಇತರ ನ್ಯಾಯಾಧೀಶರ ನೇಮಕದ ಸಂದರ್ಭದಲ್ಲಿ, ಆ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯೊಡನೆ ಸಮಾಲೋಚಿಸಿದ ತರುವಾಯ, ಅವನು ತನ್ನ ಸಹಿ ಮತ್ತು ಮೊಹರು ಇರುವ ವಾರಂಟಿನ ಮೂಲಕ ನೇಮಕ ಮಾಡತಕ್ಕದ್ದು ಮತ್ತು [1][ಹೆಚ್ಚುವರಿ ಅಥವಾ ಕಾರ್ಯಾರ್ಥ ನ್ಯಾಯಾಧೀಶನ ಸಂದರ್ಭದಲ್ಲಿ 224ನೆಯ ಅನುಚ್ಛೇದದಲ್ಲಿ ಉಪಬಂಧಿಸಿರುವಂತೆ ಮತ್ತು ಇತರ ಯಾವುದೇ ಸಂದರ್ಭದಲ್ಲಿ ಅವನಿಗೆ [2][ಅರವತ್ತೆರಡು ವರ್ಷ] ವಯಸ್ಸು ತುಂಬುವವರೆಗೆ ಪದಧಾರಣ ಮಾಡತಕ್ಕದ್ದು:]

ಪರಂತು,-

(ಎ) ನ್ಯಾಯಾಧೀಶನು ತಾನು ಸಹಿಮಾಡಿದ ಪತ್ರವನ್ನು ರಾಷ್ಟ್ರಪತಿಗೆ ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು;

(ಬಿ) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ತೆಗೆದುಹಾಕುವುದಕ್ಕಾಗಿ 124ನೆಯ ಅನುಚ್ಛೇದದ (4)ನೆಯ ಖಂಡದಲ್ಲಿ ಉಪಬಂಧಿಸಿರುವಂಥ ರೀತಿಯಲ್ಲಿಯೇ ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ರಾಷ್ಟ್ರಪತಿಯು ತೆಗೆದುಹಾಕಬಹುದು;

(ಸಿ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನಾಗಿ ರಾಷ್ಟ್ರಪತಿಯು ನೇಮಕ ಮಾಡಿದರೆ ಅಥವಾ ಭಾರತದ ರಾಜ್ಯಕ್ಷೇತ್ರದಲ್ಲಿರುವ ಇತರ ಯಾವುದೇ ಉಚ್ಚ ನ್ಯಾಯಾಲಯಕ್ಕೆ ಅವನನ್ನು ರಾಷ್ಟ್ರಪತಿಯು ವರ್ಗಾಯಿಸಿದರೆ ಅಂಥ ನೇಮಕ ಅಥವಾ ವರ್ಗಾವಣೆಯಿಂದಾಗಿ ಆ ನ್ಯಾಯಾಧೀಶನ ಪದವು ಖಾಲಿಯಾಗತಕ್ಕದ್ದು.

(2) ಯಾರೇ ವ್ಯಕ್ತಿಯು ಭಾರತದ ನಾಗರಿಕನಾಗಿದ್ದ ಹೊರತು ಮತ್ತು,-

(ಎ) ಕನಿಷ್ಠಪಕ್ಷ ಹತ್ತು ವರ್ಷಗಳ ಕಾಲ ಭಾರತದ ರಾಜ್ಯಕ್ಷೇತ್ರದಲ್ಲಿ ನ್ಯಾಯಿಕ ಪದಧಾರಣ ಮಾಡಿದ್ದ ಹೊರತು; ಅಥವಾ

(ಬಿ) [3] * * * ಉಚ್ಚ ನ್ಯಾಯಾಲಯದ ನ್ಯಾಯವಾದಿಯಾಗಿ ಅಥವಾ ಎರಡು ಅಥವಾ ಹೆಚ್ಚು ಅಂಥ ನ್ಯಾಯಾಲಯಗಳಲ್ಲಿ ನಿರಂತರವಾಗಿ ಕನಿಷ್ಠ ಹತ್ತು ವರ್ಷಗಳ ಕಾಲ ನ್ಯಾಯವಾದಿಯಾಗಿದ್ದ ಹೊರತು [4] * * *

[4] * * *

- ಅವನು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

**ವಿವರಣೆ:-** ಈ ಖಂಡದ ಉದ್ದೇಶಗಳಿಗಾಗಿ,-

[5][(ಎ) ಒಬ್ಬ ವ್ಯಕ್ತಿಯು ಭಾರತದ ರಾಜ್ಯಕ್ಷೇತ್ರದಲ್ಲಿ ಒಂದು ನ್ಯಾಯಿಕ ಪದವನ್ನು ಧಾರಣ ಮಾಡಿದ್ದ ಅವಧಿಯನ್ನು ಲೆಕ್ಕ ಹಾಕುವಲ್ಲಿ ಅವನು ಯಾವುದೇ ನ್ಯಾಯಿಕ ಪದವನ್ನು ಧಾರಣ ಮಾಡಿದ್ದ ತರುವಾಯ ಉಚ್ಚ ನ್ಯಾಯಾಲಯದ ನ್ಯಾಯವಾದಿಯಾಗಿದ್ದ ಅಥವಾ ನ್ಯಾಯಾಧಿಕರಣದ ಸದಸ್ಯನಾಗಿ ಪದಧಾರಣ ಮಾಡಿದ್ದ ಅಥವಾ ಒಕ್ಕೂಟದ ಅಥವಾ ರಾಜ್ಯದ ಅಧೀನದಲ್ಲಿ ಕಾನೂನಿನ ವಿಶೇಷ ಜ್ಞಾನವನ್ನು ಅಗತ್ಯಪಡಿಸುವ ಯಾವುದೇ ಹುದ್ದೆಯನ್ನು ಧಾರಣ ಮಾಡಿದ್ದ ಅವಧಿಯನ್ನು ಸೇರಿಸತಕ್ಕದ್ದು;]

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 12ನೆಯ ಪ್ರಕರಣದ ಮೂಲಕ "ಅರವತ್ತು ವರ್ಷ ವಯಸ್ಸು ಅವನಿಗೆ ತುಂಬುವವರೆಗೆ ಆ ಪದಧಾರಣ ಮಾಡತಕ್ಕದ್ದು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1963ನೆಯ ಇಸವಿಯ ಸಂವಿಧಾನ (ಹದಿನೈದನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ "ಅರವತ್ತು ವರ್ಷಗಳು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದಾದರೂ ರಾಜ್ಯದ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
4. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 36ನೆಯ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) "ಅಥವಾ" ಎಂಬ ಪದವನ್ನು ಮತ್ತು "ಸಿ" ಉಪಖಂಡವನ್ನು ಸೇರಿಸಲಾಗಿತ್ತು ಮತ್ತು ಅವುಗಳನ್ನು 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 28ನೆಯ ಪ್ರಕರಣದ ಮೂಲಕ (20-6-79 ರಿಂದ ಜಾರಿಗೆ ಬರುವಂತೆ) ಬಿಟ್ಟು ಬಿಡಲಾಗಿದೆ.
5. 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 28ನೆಯ ಪ್ರಕರಣದ ಮೂಲಕ (20-6-1979ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

[1][(ಎಎ)] ಒಬ್ಬ ವ್ಯಕ್ತಿಯು ಉಚ್ಚ ನ್ಯಾಯಾಲಯದ ನ್ಯಾಯವಾದಿಯಾಗಿದ್ದ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಅವನು ನ್ಯಾಯವಾದಿಯಾದ ಅನಂತರ ನ್ಯಾಯಿಕ ಪದವನ್ನು ಅಥವಾ [2][ನ್ಯಾಯಾಧಿಕರಣದ ಸದಸ್ಯನ ಪದವನ್ನು ಅಥವಾ ಒಕ್ಕೂಟದ ಅಥವಾ ರಾಜ್ಯದ ಅಧೀನದಲ್ಲಿ ಕಾನೂನಿನ ವಿಶೇಷ ಜ್ಞಾನವನ್ನು ಅಗತ್ಯಪಡಿಸುವ ಯಾವುದೇ ಹುದ್ದೆಯನ್ನು ಧಾರಣ ಮಾಡಿದ್ದ] ಯಾವುದೇ ಅವಧಿಯನ್ನು ಸೇರಿಸತಕ್ಕದ್ದು;

(ಬಿ) ಒಬ್ಬ ವ್ಯಕ್ತಿಯು ಭಾರತದ ರಾಜ್ಯಕ್ಷೇತ್ರದಲ್ಲಿ ನ್ಯಾಯಿಕ ಪದವನ್ನು ಧಾರಣ ಮಾಡಿದ್ದ ಅಥವಾ ಉಚ್ಚ ನ್ಯಾಯಾಲಯದ ನ್ಯಾಯವಾದಿಯಾಗಿದ್ದ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಈ ಸಂವಿಧಾನದ ಪ್ರಾರಂಭಕ್ಕೆ ಮುಂಚೆ, 1947ನೆಯ ಇಸವಿ ಆಗಸ್ಟ್ ಹದಿನೈದನೆಯ ದಿನಕ್ಕೆ ಮೊದಲು, ಭಾರತ ಸರ್ಕಾರ ಅಧಿನಿಯಮ, 1935ರಲ್ಲಿ ಪರಿಭಾಷಿಸಲಾದಂತೆ, ಭಾರತದ ಒಳಗೆ ಅಡಕವಾಗಿದ್ದ ಯಾವುದೇ ಪ್ರದೇಶದಲ್ಲಿ ಅವನು ನ್ಯಾಯಿಕ ಪದವನ್ನು ಧಾರಣಮಾಡಿದ್ದ ಅಥವಾ ಸಂದರ್ಭಾನುಸಾರ ಅಂಥ ಯಾವುದೇ ಪ್ರದೇಶದಲ್ಲಿನ ಯಾವುದೇ ಉಚ್ಚ ನ್ಯಾಯಾಲಯದ ನ್ಯಾಯವಾದಿಯಾಗಿದ್ದ ಅವಧಿಯನ್ನು ಸೇರಿಸತಕ್ಕದ್ದು.

[3][(3) ಉಚ್ಚ ನ್ಯಾಯಾಲಯದ ನ್ಯಾಯಾಧೀಶನ ವಯಸ್ಸಿನ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ರಾಷ್ಟ್ರಪತಿಯು ಭಾರತದ ಮುಖ್ಯ ನ್ಯಾಯಮೂರ್ತಿಯೊಡನೆ ಸಮಾಲೋಚಿಸಿದ ತರುವಾಯ ಆ ಪ್ರಶ್ನೆಯನ್ನು ತೀರ್ಮಾನಿಸತಕ್ಕದ್ದು ಮತ್ತು ರಾಷ್ಟ್ರಪತಿಯ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.]

**218. ಸರ್ವೋಚ್ಚ ನ್ಯಾಯಾಲಯಕ್ಕೆ ಸಂಬಂಧಪಟ್ಟ ಕೆಲವು ಉಪಬಂಧಗಳು ಉಚ್ಚ ನ್ಯಾಯಾಲಯಗಳಿಗೆ ಅನ್ವಯವಾಗುವುದು:–** 124ನೆಯ ಅನುಚ್ಛೇದದ (4)ನೆಯ ಮತ್ತು (5)ನೆಯ ಖಂಡಗಳ ಉಪಬಂಧಗಳು, ಸರ್ವೋಚ್ಚ ನ್ಯಾಯಾಲಯಕ್ಕೆ ಮಾಡಿದ ಉಲ್ಲೇಖಗಳಿರುವ ಕಡೆಯಲ್ಲೆಲ್ಲಾ ಉಚ್ಚ ನ್ಯಾಯಾಲಯಕ್ಕೆ ಮಾಡಿದ ಉಲ್ಲೇಖಗಳಂತೆ ಬದಲಾಯಿಸಿಕೊಂಡು, ಸರ್ವೋಚ್ಚ ನ್ಯಾಯಾಲಯದ ಸಂಬಂಧದಲ್ಲಿ ಅವು ಅನ್ವಯವಾಗುವಂತೆಯೇ ಉಚ್ಚ ನ್ಯಾಯಾಲಯದ ಸಂಬಂಧದಲ್ಲೂ ಅನ್ವಯವಾಗತಕ್ಕದ್ದು.

**219. ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರಿಂದ ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ:–** [4]* * * ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪದವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ರಾಜ್ಯದ ರಾಜ್ಯಪಾಲನ ಮುಂದೆ ಅಥವಾ ಅವನಿಂದ ಆ ಬಗ್ಗೆ ನೇಮಕಗೊಂಡ ಇತರ ವ್ಯಕ್ತಿಯ ಮುಂದೆ ಮೂರನೆಯ ಅನುಸೂಚಿಯಲ್ಲಿ ಆ ಉದ್ದೇಶಕ್ಕಾಗಿ ಕೊಟ್ಟಿರುವ ನಮೂನೆಗನುಸಾರವಾಗಿ ಪ್ರಮಾಣ ಅಥವಾ ಪ್ರತಿಜ್ಞೆ ಮಾಡತಕ್ಕದ್ದು ಮತ್ತು ಅದಕ್ಕೆ ತನ್ನ ಸಹಿ ಹಾಕತಕ್ಕದ್ದು.

[5]**[220. ಖಾಯಂ ನ್ಯಾಯಾಧೀಶನಾಗಿದ್ದವನು ತರುವಾಯ ನ್ಯಾಯವಾದಿ ವೃತ್ತಿಯನ್ನು ನಡೆಸುವುದರ ಮೇಲೆ ನಿರ್ಬಂಧ:–** ಈ ಸಂವಿಧಾನವು ಪ್ರಾರಂಭವಾದ ತರುವಾಯ ಒಂದು ಉಚ್ಚ ನ್ಯಾಯಾಲಯದ ಖಾಯಂ ನ್ಯಾಯಾಧೀಶನಾಗಿ ಪದಧಾರಣ ಮಾಡಿದ್ದ ಯಾರೇ ವ್ಯಕ್ತಿಯು ಸರ್ವೋಚ್ಚ ನ್ಯಾಯಾಲಯದಲ್ಲಿ ಅಥವಾ ಇತರ ಉಚ್ಚ ನ್ಯಾಯಾಲಯಗಳಲ್ಲಿ ಹೊರತು ಭಾರತದಲ್ಲಿರುವ ಇತರ ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ವಾದಿಸತಕ್ಕದ್ದಲ್ಲ ಅಥವಾ ಕಾರ್ಯನಿರ್ವಹಿಸತಕ್ಕದ್ದಲ್ಲ.

**ವಿವರಣೆ:–** ಈ ಅನುಚ್ಛೇದದಲ್ಲಿ "ಉಚ್ಚ ನ್ಯಾಯಾಲಯದ" ಎಂಬ ಪದವು 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ[6] ಅಸ್ತಿತ್ವದಲ್ಲಿದ್ದ ಮತ್ತು ಮೊದಲನೆಯ ಅನುಸೂಚಿಯ 'ಬಿ' ಭಾಗದಲ್ಲಿ ನಿರ್ದಿಷ್ಟಪಡಿಸಿದ್ದ ರಾಜ್ಯದ ಉಚ್ಚ ನ್ಯಾಯಾಲಯವನ್ನು ಒಳಗೊಳ್ಳುವುದಿಲ್ಲ.]

---

1. 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 28ನೆಯ ಪ್ರಕರಣದ ಮೂಲಕ (20-6-1979 ರಿಂದ ಜಾರಿಗೆ ಬರುವಂತೆ) (ಎ) ಖಂಡಕ್ಕೆ (ಎಎ) ಖಂಡ ಎಂದು ಪುನಃ ಅಕ್ಷರಗಳನ್ನು ನೀಡಲಾಗಿದೆ.
2. 1976ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 36ನೆಯ ಪ್ರಕರಣದ ಮೂಲಕ "ನ್ಯಾಯಿಕ ಪದವನ್ನು ಪಡೆದಿದ್ದ" ಎಂಬ ಪದಗಳಿಗೆ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. 1963ನೆಯ ಇಸವಿಯ ಸಂವಿಧಾನ (ಹದಿನೈದನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ (ಪೂರ್ವಾನ್ವಯವಾಗಿ) ಜಾರಿಗೆ ಬರುವಂತೆ ಸೇರಿಸಲಾಗಿದೆ.
4. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಒಂದು ರಾಜ್ಯದಲ್ಲಿ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
5. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 13ನೆಯ ಪ್ರಕರಣದ ಮೂಲಕ ಮೂಲ 220ನೆಯ ಅನುಚ್ಛೇದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
6. 1956ನೆಯ ಇಸವಿಯ ನವೆಂಬರ್ ತಿಂಗಳ 1ನೆಯ ತಾರೀಖು.

**221. ನ್ಯಾಯಾಧೀಶರ ಸಂಬಳಗಳು, ಇತ್ಯಾದಿ:-** [1][(1) ಪ್ರತಿಯೊಂದು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಕಾನೂನಿನ ಮೂಲಕ ಸಂಸತ್ತು ನಿರ್ಧರಿಸಬಹುದಾದಂಥ ಸಂಬಳಗಳು ಮತ್ತು ಆ ಬಗ್ಗೆ ಉಪಬಂಧವನ್ನು ಹಾಗೆ ಕಲ್ಪಿಸುವವರೆಗೆ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂಥ ಸಂಬಳಗಳು ಸಂದಾಯವಾಗತಕ್ಕದ್ದು.]

(2) ಪ್ರತಿಯೊಬ್ಬ ನ್ಯಾಯಾಧೀಶನು, ಸಂಸತ್ತು ರಚಿಸಿದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಭತ್ಯಗಳಿಗೆ ಮತ್ತು ಗೈರುಹಾಜರಿ ರಜೆಗೆ ಮತ್ತು ನಿವೃತ್ತಿ ವೇತನಗಳಿಗೆ ಸಂಬಂಧಿಸಿದ ಹಕ್ಕುಗಳಿಗೆ ಮತ್ತು ಅವು ಹಾಗೆ ನಿರ್ಧಾರವಾಗುವವರೆಗೆ ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂಥ ಭತ್ಯಗಳಿಗೆ ಮತ್ತು ಹಕ್ಕುಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ನ್ಯಾಯಾಧೀಶನ ಭತ್ಯಗಳನ್ನು ಮತ್ತು ಗೈರುಹಾಜರಿ ರಜೆ ಅಥವಾ ನಿವೃತ್ತಿ ವೇತನಗಳಿಗೆ ಸಂಬಂಧಿಸಿದ ಅವನ ಹಕ್ಕುಗಳನ್ನು ಅವನು ನೇಮಕಗೊಂಡ ಅನಂತರ ಅವನಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

**222. ನ್ಯಾಯಾಧೀಶನನ್ನು ಒಂದು ಉಚ್ಚ ನ್ಯಾಯಾಲಯದಿಂದ ಇನ್ನೊಂದು ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸುವುದು:-** (1) ರಾಷ್ಟ್ರಪತಿಯು ಭಾರತದ ಮುಖ್ಯ ನ್ಯಾಯಮೂರ್ತಿಯೊಡನೆ ಸಮಾಲೋಚಿಸಿದ ತರುವಾಯ, ಒಬ್ಬ ನ್ಯಾಯಾಧೀಶನನ್ನು [2] * * * ಒಂದು ಉಚ್ಚ ನ್ಯಾಯಾಲಯದಿಂದ ಇತರ ಯಾವುದೇ ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸಬಹುದು.

[3][(2) ಒಬ್ಬ ನ್ಯಾಯಾಧೀಶನನ್ನು ಹಾಗೆ ವರ್ಗಾಯಿಸಿದಾಗ ಅಥವಾ ವರ್ಗಾಯಿಸುವಾಗ ಅವನು 1963ನೆಯ ಇಸವಿಯ ಸಂವಿಧಾನ (ಹದಿನೈದನೆಯ ತಿದ್ದುಪಡಿ) ಅಧಿನಿಯಮವು ಪ್ರಾರಂಭವಾದ ಅನಂತರ ಇತರ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ಕೆಲಸ ಮಾಡುವ ಅವಧಿಯಲ್ಲಿ ತನ್ನ ಸಂಬಳದ ಜೊತೆಗೆ ಸಂಸತ್ತು ಕಾನೂನಿನ ಮೂಲಕ ನಿರ್ಧರಿಸಬಹುದಾದಂಥ ಪರಿಹಾರ ಭತ್ಯವನ್ನು ಮತ್ತು ಹಾಗೆ ನಿರ್ಧರಿಸುವವರೆಗೆ, ರಾಷ್ಟ್ರಪತಿಯು ಆದೇಶದ ಮೂಲಕ ನಿಗದಿಮಾಡಬಹುದಾದ ಪರಿಹಾರ ಭತ್ಯವನ್ನು ಪಡೆಯಲು ಅವನು ಹಕ್ಕುಳ್ಳವನಾಗಿರತಕ್ಕದ್ದು.]

**223. ಕಾರ್ಯಾರ್ಥ ಮುಖ್ಯ ನ್ಯಾಯಮೂರ್ತಿಯ ನೇಮಕ:-** ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯ ಪದವು ಖಾಲಿಯಾದಾಗ ಅಥವಾ ಮುಖ್ಯ ನ್ಯಾಯಮೂರ್ತಿಯ ಗೈರುಹಾಜರಿಯ ಕಾರಣದಿಂದ ಅಥವಾ ಅನ್ಯಥಾ ತನ್ನ ಪದದ ಕರ್ತವ್ಯಗಳನ್ನು ನೆರವೇರಿಸಲು ಅಸಮರ್ಥನಾದಾಗ ಆ ಪದದ ಕರ್ತವ್ಯಗಳನ್ನು ಆ ನ್ಯಾಯಾಲಯದ ಇತರ ನ್ಯಾಯಾಧೀಶರ ಪೈಕಿ ಆ ಉದ್ದೇಶಕ್ಕಾಗಿ ರಾಷ್ಟ್ರಪತಿಯು ನೇಮಕ ಮಾಡಬಹುದಾದಂಥ ನ್ಯಾಯಾಧೀಶನು ನೆರವೇರಿಸತಕ್ಕದ್ದು.

[4]**[224. ಹೆಚ್ಚುವರಿ ಹಾಗೂ ಕಾರ್ಯಾರ್ಥ ನ್ಯಾಯಾಧೀಶರ ನೇಮಕ:-** (1) ಯಾವುದೇ ಉಚ್ಚ ನ್ಯಾಯಾಲಯದ ಕಾರ್ಯವು ತಾತ್ಕಾಲಿಕವಾಗಿ ಹೆಚ್ಚಾಗಿರುವ ಕಾರಣದಿಂದ ಅಥವಾ ಆ ನ್ಯಾಯಾಲಯದಲ್ಲಿ ಕೆಲಸ ಕಾರ್ಯಗಳು ಬಾಕಿ ಉಳಿದಿರುವ ಕಾರಣದಿಂದ ಅಂಥ ನ್ಯಾಯಾಲಯದ ನ್ಯಾಯಾಧೀಶರ ಸಂಖ್ಯೆಯನ್ನು ತತ್ಕಾಲದಲ್ಲಿ ಹೆಚ್ಚಿಸಬೇಕು ಎಂದು ರಾಷ್ಟ್ರಪತಿಗೆ ಕಂಡುಬಂದರೆ, ಅವನು ತಕ್ಕ ಅರ್ಹತೆಯುಳ್ಳ ವ್ಯಕ್ತಿಗಳನ್ನು ಎರಡು ವರ್ಷಗಳಿಗೆ ಮೀರದಂತೆ ತಾನು ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಆ ನ್ಯಾಯಾಲಯದ ಹೆಚ್ಚುವರಿ ನ್ಯಾಯಾಧೀಶರನ್ನಾಗಿ ನೇಮಕ ಮಾಡಬಹುದು.

---

1. 1986ನೆಯ ಇಸವಿಯ ಸಂವಿಧಾನ (ಐವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ (1.4.1986 ರಿಂದ ಜಾರಿಗೆ ಬರುವಂತೆ) (1)ನೇ ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 14ನೆಯ ಪ್ರಕರಣದ ಮೂಲಕ "ಭಾರತದ ರಾಜ್ಯಕ್ಷೇತ್ರದಲ್ಲಿರತಕ್ಕ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
3. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 14ನೆಯ ಪ್ರಕರಣದ ಮೇರೆಗೆ ಮೂಲ (2)ನೆಯ ಖಂಡವನ್ನು ಬಿಟ್ಟುಬಿಡಲಾಗಿತ್ತು, 1963ನೆಯ ಇಸವಿಯ ಸಂವಿಧಾನ (ಹದಿನೈದನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
4. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 15ನೆಯ ಪ್ರಕರಣದ ಮೂಲಕ 224ನೆಯ ಅನುಚ್ಛೇದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(2) ಮುಖ್ಯ ನ್ಯಾಯಮೂರ್ತಿಯಲ್ಲದ ಉಚ್ಚ ನ್ಯಾಯಾಲಯದ ಇತರ ಯಾರೇ ನ್ಯಾಯಾಧೀಶನು, ಗೈರುಹಾಜರಿಯ ಕಾರಣದಿಂದ ಅಥವಾ ಯಾವುದೇ ಇತರ ಕಾರಣದಿಂದ ತನ್ನ ಪದದ ಕರ್ತವ್ಯಗಳನ್ನು ನೆರವೇರಿಸಲು ಅಸಮರ್ಥನಾಗಿರುವಾಗ ಅಥವಾ ಅಂಥ ನ್ಯಾಯಾಧೀಶನು ತಾತ್ಕಾಲಿಕವಾಗಿ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸಲು ನೇಮಕಗೊಂಡಿರುವಾಗ ಖಾಯಂ ನ್ಯಾಯಾಧೀಶನು ತನ್ನ ಕರ್ತವ್ಯಗಳನ್ನು ಪುನಃ ವಹಿಸಿಕೊಳ್ಳುವವರೆಗೆ ರಾಷ್ಟ್ರಪತಿಯು ತಕ್ಕ ಅರ್ಹತೆಯುಳ್ಳ ವ್ಯಕ್ತಿಯನ್ನು ಆ ನ್ಯಾಯಾಲಯದ ನ್ಯಾಯಾಧೀಶನಾಗಿ ಕಾರ್ಯನಿರ್ವಹಿಸಲು ನೇಮಕ ಮಾಡಬಹುದು.

(3) ಯಾವುದೇ ಉಚ್ಚ ನ್ಯಾಯಾಲಯದ ಹೆಚ್ಚುವರಿ ಅಥವಾ ಕಾರ್ಯಾರ್ಥ ನ್ಯಾಯಾಧೀಶನಾಗಿ ನೇಮಕಗೊಂಡಿರುವ ಯಾವ ವ್ಯಕ್ತಿಯೂ [1][ಅರವತ್ತೆರಡು ವರ್ಷ] ವಯಸ್ಸು ತುಂಬಿದ ಬಳಿಕ ಪದದಲ್ಲಿರತಕ್ಕದ್ದಲ್ಲ.]

[2][**224ಎ. ಉಚ್ಚ ನ್ಯಾಯಾಲಯಗಳ ಉಪವೇಶನಗಳಿಗೆ ನಿವೃತ್ತ ನ್ಯಾಯಾಧೀಶರ ನೇಮಕ:–** ಈ ಅಧ್ಯಾಯದಲ್ಲಿ ಏನೇ ಇದ್ದಾಗ್ಯೂ, ಯಾವುದೇ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯು, ರಾಷ್ಟ್ರಪತಿಯ ಪೂರ್ವಸಮ್ಮತಿಯನ್ನು ಪಡೆದು, ಅದೇ ನ್ಯಾಯಾಲಯದ ಅಥವಾ ಇತರ ಯಾವುದೇ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿದ್ದ ಯಾರೇ ವ್ಯಕ್ತಿಯನ್ನು ಆ ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ಕಾರ್ಯನಿರ್ವಹಿಸುವಂತೆ ಯಾವುದೇ ಕಾಲದಲ್ಲಿ ಕೋರಬಹುದು, ಮತ್ತು ಹಾಗೆ ಕೋರಲಾದ ಆ ಪ್ರತಿಯೊಬ್ಬ ವ್ಯಕ್ತಿಯೂ ಹಾಗೆ ಕಾರ್ಯನಿರ್ವಹಿಸುವಾಗ ರಾಷ್ಟ್ರಪತಿಯು ಆದೇಶದ ಮೂಲಕ ನಿರ್ಧರಿಸಬಹುದಾದಂಥ ಭತ್ಯಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅವನು ಆ ಉಚ್ಚ ನ್ಯಾಯಾಲಯದ ನ್ಯಾಯಾಧೀಶನ ಎಲ್ಲ ಅಧಿಕಾರ ವ್ಯಾಪ್ತಿಯನ್ನು, ಅಧಿಕಾರಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಹೊಂದಿರತಕ್ಕದ್ದು, ಆದರೆ ಅವನನ್ನು ಆ ಉಚ್ಚ ನ್ಯಾಯಾಲಯದ ನ್ಯಾಯಾಧೀಶನೆಂದು ಅನ್ಯಥಾ ಭಾವಿಸತಕ್ಕದ್ದಲ್ಲ:

ಪರಂತು, ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಹಿಂದೆ ಹೇಳಿದ ಯಾರೇ ವ್ಯಕ್ತಿಯು ಆ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ಕುಳಿತು ಕಾರ್ಯನಿರ್ವಹಿಸಲು ಸಮ್ಮತಿಸಿದ ಹೊರತು ಅವನನ್ನು ಹಾಗೆ ಮಾಡಬೇಕೆಂದು ಅಗತ್ಯಪಡಿಸುವುದಾಗಿ ಭಾವಿಸತಕ್ಕದ್ದಲ್ಲ.]

**225. ಅಸ್ತಿತ್ವದಲ್ಲಿರುವ ಉಚ್ಚ ನ್ಯಾಯಾಲಯಗಳ ಅಧಿಕಾರವ್ಯಾಪ್ತಿ:–** ಈ ಸಂವಿಧಾನದ ಉಪಬಂಧಗಳಿಗೆ ಮತ್ತು ಈ ಸಂವಿಧಾನದ ಮೂಲಕ ಸಮುಚಿತ ವಿಧಾನಮಂಡಲಕ್ಕೆ ಪ್ರದಾನ ಮಾಡಿದ ಅಧಿಕಾರಗಳ ಕಾರಣದಿಂದಾಗಿ ಆ ವಿಧಾನಮಂಡಲವು ಮಾಡಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ಅಸ್ತಿತ್ವದಲ್ಲಿರುವ ಯಾವುದೇ ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿ ಮತ್ತು ಆ ಉಚ್ಚ ನ್ಯಾಯಾಲಯದಲ್ಲಿ ನಿರ್ವಹಿಸುತ್ತಿದ್ದ ಕಾನೂನು ಮತ್ತು ಆ ನ್ಯಾಯಾಲಯದ ನಿಯಮಗಳನ್ನು ರಚಿಸುವ ಯಾವುದೇ ಅಧಿಕಾರ ಮತ್ತು ಆ ನ್ಯಾಯಾಲಯದ ಉಪವೇಶನಗಳನ್ನು ಮತ್ತು ಅದರ ಸದಸ್ಯರು ಏಕ ನ್ಯಾಯಪೀಠದಲ್ಲಿ ಕುಳಿತುಕೊಳ್ಳಬೇಕೇ ಅಥವಾ ವಿಭಾಗೀಯ ನ್ಯಾಯಪೀಠಗಳಲ್ಲಿ ಕುಳಿತುಕೊಳ್ಳಬೇಕೇ ಎಂಬುದನ್ನು ವಿನಿಯಮಿಸುವುದನ್ನೂ ಒಳಗೊಂಡು ಆ ನ್ಯಾಯಾಲಯದಲ್ಲಿ ನ್ಯಾಯ ನಿರ್ವಹಣೆಗೆ ಸಂಬಂಧಿಸಿದಂತೆ ಅದರ ನ್ಯಾಯಾಧೀಶರ ಅನುಕ್ರಮ ಅಧಿಕಾರಗಳು ಈ ಸಂವಿಧಾನವು ಆರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಇದ್ದಂಥವುಗಳೇ ಆಗಿರತಕ್ಕದ್ದು:

[3][ಪರಂತು, ರಾಜಸ್ವಕ್ಕೆ ಸಂಬಂಧಪಟ್ಟ ಅಥವಾ ಅದನ್ನು ಸಂಗ್ರಹಿಸುವಾಗ ಆದೇಶಿಸಲಾದ ಅಥವಾ ಮಾಡಲಾದ ಯಾವುದೇ ಕಾರ್ಯಕ್ಕೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ಯಾವುದೇ ಉಚ್ಚ ನ್ಯಾಯಾಲಯವು ಅಸಲು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದು ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಯಾವ ನಿರ್ಬಂಧಕ್ಕೆ ಒಳಪಟ್ಟಿತ್ತೋ ಆ ಯಾವುದೇ ನಿರ್ಬಂಧವು ಇನ್ನು ಮುಂದೆ ಅಂಥ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವುದಕ್ಕೆ ಅನ್ವಯವಾಗತಕ್ಕದ್ದಲ್ಲ.]

---

1. 1963ನೆಯ ಇಸವಿಯ ಸಂವಿಧಾನ (ಹದಿನೈದನೆಯ ತಿದ್ದುಪಡಿ) ಅಧಿನಿಯಮದ 6ನೆಯ ಪ್ರಕರಣದ ಮೂಲಕ "ಅರವತ್ತು ವರ್ಷ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1963ನೆಯ ಇಸವಿಯ ಸಂವಿಧಾನ (ಹದಿನೈದನೆಯ ತಿದ್ದುಪಡಿ) ಅಧಿನಿಯಮದ 7ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
3. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಮೂಲಕ (20-6-79ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ. ಮೂಲ ಪರಂತುಕವನ್ನು 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 37ನೇ ಪ್ರಕರಣದ ಮೂಲಕ (1-2-1977ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿತ್ತು.

[1][226. ಕೆಲವು ರಿಟ್ಟುಗಳನ್ನು ಹೊರಡಿಸಲು ಉಚ್ಚ ನ್ಯಾಯಾಲಯಗಳ ಅಧಿಕಾರ:- (1) ಈ ಸಂವಿಧಾನದ 32ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, [2]* * * ಪ್ರತಿಯೊಂದು ಉಚ್ಚ ನ್ಯಾಯಾಲಯವು ಯಾವ ರಾಜ್ಯಕ್ಷೇತ್ರಗಳ ಸಂಬಂಧದಲ್ಲಿ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವುದೋ ಆ ರಾಜ್ಯಕ್ಷೇತ್ರಗಳಾದ್ಯಂತ, ಆ ರಾಜ್ಯಕ್ಷೇತ್ರಗಳಲ್ಲಿರುವ ಯಾರೇ ವ್ಯಕ್ತಿಗೆ ಅಥವಾ ಸಮುಚಿತ ಸಂದರ್ಭಗಳಲ್ಲಿ ಯಾವುದೇ ಸರ್ಕಾರವನ್ನೂ ಒಳಗೊಂಡು ಯಾವುದೇ ಪ್ರಾಧಿಕಾರಕ್ಕೆ IIIನೆಯ ಭಾಗದ ಮೂಲಕ ಪ್ರದಾನ ಮಾಡಲಾದ ಯಾವುವೇ ಹಕ್ಕುಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಇತರ ಯಾವುದೇ ಉದ್ದೇಶಕ್ಕಾಗಿ ನಿರ್ದೇಶನಗಳನ್ನು, ಆದೇಶಗಳನ್ನು ಅಥವಾ [3][ಹೇಬಿಯಸ್ ಕಾರ್ಪಸ್, ಮ್ಯಾಂಡಮಸ್, ಪ್ರೋಹಿಬಿಷನ್, ಕೋವಾರಂಟೊ ಮತ್ತು ಸರ್ಷಿಯೋರರಿ ಸ್ವರೂಪದಲ್ಲಿರುವ ರಿಟ್ಟುಗಳೂ ಒಳಗೊಂಡಂತೆ ರಿಟ್ಟುಗಳನ್ನು ಅಥವಾ ಅವುಗಳ ಪೈಕಿ ಯಾವುದನ್ನಾದರೂ ಹೊರಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.]

(2) ಯಾವುದೇ ಸರ್ಕಾರಕ್ಕೆ, ಪ್ರಾಧಿಕಾರಕ್ಕೆ ಅಥವಾ ವ್ಯಕ್ತಿಗೆ ನಿರ್ದೇಶನಗಳನ್ನು, ಆದೇಶಗಳನ್ನು ಅಥವಾ ರಿಟ್ಟುಗಳನ್ನು ಹೊರಡಿಸಲು (1)ನೆಯ ಖಂಡದ ಮೂಲಕ ಪ್ರದಾನ ಮಾಡಿರುವ ಅಧಿಕಾರವನ್ನು ಪೂರ್ಣವಾಗಿ ಅಥವಾ ಭಾಗಶಃ ವ್ಯಾಜ್ಯಕಾರಣವು ಉದ್ಭವಿಸಿರುವ ರಾಜ್ಯಕ್ಷೇತ್ರಗಳ ಸಂಬಂಧದಲ್ಲಿ ಯಾವ ಉಚ್ಚ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಚಲಾಯಿಸುತ್ತಿರುವುದೋ ಆ ಯಾವುದೇ ಉಚ್ಚ ನ್ಯಾಯಾಲಯವು ಅಂಥ ಅಧಿಕಾರವನ್ನು ಅಂಥ ಸರ್ಕಾರದ ಅಥವಾ ಪ್ರಾಧಿಕಾರದ ಸ್ಥಾನವು ಅಥವಾ ಅಂಥ ವ್ಯಕ್ತಿಯ ನಿವಾಸಸ್ಥಾನವು ಆ ರಾಜ್ಯಕ್ಷೇತ್ರಗಳೊಳಗೆ ಇಲ್ಲದಿದ್ದಾಗ್ಯೂ ಸಹ ಚಲಾಯಿಸಬಹುದು.

[4][(3) (1)ನೆಯ ಖಂಡದ ಮೇರೆಗಿನ ಅರ್ಜಿಯ ಮೇಲೆ ಅಥವಾ ಅದಕ್ಕೆ ಸಂಬಂಧಪಟ್ಟ ವ್ಯವಹರಣೆಗಳಲ್ಲಿ ಯಾವ ಪಕ್ಷಕಾರನ ವಿರುದ್ಧ ನಿರ್ಬಂಧಕಾಜ್ಞೆಯ ಅಥವಾ ತಡೆಯಾಜ್ಞೆಯ ಮೂಲಕ ಅಥವಾ ಇತರ ಯಾವುದೇ ರೀತಿಯಲ್ಲಿ,-

(ಎ) ಅಂಥ ಅರ್ಜಿಯನ್ನು ಮತ್ತು ಅಂಥ ಮಧ್ಯಕಾಲೀನ ಆದೇಶದ ಕೋರಿಕೆಯನ್ನು ಸಮರ್ಥಿಸುವ ಎಲ್ಲ ದಸ್ತಾವೇಜುಗಳ ಪ್ರತಿಗಳನ್ನು ಅಂಥ ಪಕ್ಷಕಾರನಿಗೆ ಒದಗಿಸದೆ; ಮತ್ತು

(ಬಿ) ಅಂಥ ಪಕ್ಷಕಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಡದೆ

– ಮಧ್ಯಕಾಲೀನ ಆದೇಶವನ್ನು ಮಾಡಲಾಗಿದೆಯೋ, ಆ ಯಾರೇ ಪಕ್ಷಕಾರನು ಅಂಥ ಆದೇಶವನ್ನು ತೆರವು ಮಾಡುವುದಕ್ಕಾಗಿ ಉಚ್ಚ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದರೆ ಹಾಗೂ ಯಾವ ಪಕ್ಷಕಾರನ ಪರವಾಗಿ ಅಂಥ ಆದೇಶವನ್ನು ಮಾಡಲಾಗಿದೆಯೋ ಆ ಪಕ್ಷಕಾರನಿಗೆ ಅಥವಾ ಅಂಥ ಪಕ್ಷಕಾರನ ನ್ಯಾಯವಾದಿಗೆ ಅಂಥ ಅರ್ಜಿಯ ಪ್ರತಿಯನ್ನು ಒದಗಿಸಿದರೆ, ಉಚ್ಚ ನ್ಯಾಯಾಲಯವು ಆ ಅರ್ಜಿಯನ್ನು ಸ್ವೀಕರಿಸಿದ ದಿನಾಂಕ ಅಥವಾ ಅಂಥ ಒಂದು ಪ್ರತಿಯನ್ನು ಹಾಗೆ ಒದಗಿಸಿದ ದಿನಾಂಕ-ಇವುಗಳಲ್ಲಿ ಯಾವುದು ತರುವಾಯದ್ದೋ ಆ ದಿನಾಂಕದಿಂದ ಎರಡುವಾರಗಳ ಅವಧಿಯೊಳಗೆ ಅಥವಾ ಆ ಅವಧಿಯ ಕೊನೆಯ ದಿನದಂದು ಉಚ್ಚ ನ್ಯಾಯಾಲಯವು ಮುಚ್ಚಿದ್ದರೆ, ಉಚ್ಚ ನ್ಯಾಯಾಲಯವನ್ನು ತೆರೆದ ತರುವಾಯ ಮಾರನೆಯ ದಿನವು ಮುಕ್ತಾಯವಾಗುವುದಕ್ಕೆ ಮೊದಲು ಉಚ್ಚ ನ್ಯಾಯಾಲಯವು ಅದನ್ನು ವಿಲೆ ಮಾಡತಕ್ಕದ್ದು; ಮತ್ತು ಆ ಅರ್ಜಿಯನ್ನು ಹಾಗೆ ವಿಲೆ ಮಾಡದಿದ್ದರೆ ಆ ಮಧ್ಯಕಾಲೀನ ಆದೇಶವು ಆ ಅವಧಿಯು ಮುಕ್ತಾಯವಾದಾಗ ಅಥವಾ ಸಂದರ್ಭಾನುಸಾರ ಸದರಿ ಮಾರನೆಯ ದಿನವು ಮುಗಿದ ಬಳಿಕ ತೆರವಾಗತಕ್ಕದ್ದು.]

---

1. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 38ನೇ ಪ್ರಕರಣದ ಮೂಲಕ 226ನೆಯ ಅನುಚ್ಛೇದಕ್ಕೆ ಬದಲಾಗಿ (1-2-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1977ನೇ ಇಸವಿಯ ಸಂವಿಧಾನ (ನಲವತ್ತಮೂರನೆಯ ತಿದ್ದುಪಡಿ) ಅಧಿನಿಯಮದ 7ನೆಯ ಪ್ರಕರಣದ ಮೂಲಕ "ಆದರೆ 131ಎ ಅನುಚ್ಛೇದದ ಮತ್ತು 226ಎ ಅನುಚ್ಛೇದದ ಉಪಬಂಧಗಳಿಗೊಳಪಟ್ಟು" ಎಂಬ ಪದಗಳನ್ನು, ಅಂಕಿಗಳನ್ನು ಮತ್ತು ಅಕ್ಷರಗಳನ್ನು (13-4-1978ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
3. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 30ನೇ ಪ್ರಕರಣದ ಮೂಲಕ "ಹೇಬಿಯಸ್ ಕಾರ್ಪಸ್, ಮ್ಯಾಂಡಮಸ್, ಪ್ರೊಹಿಬಿಷನ್ ಕೋವಾರಂಟೋ ಮತ್ತು ಸರ್ಷಿಯೋರರಿ ಸ್ವರೂಪದ ರಿಟ್ಟುಗಳು ಅಥವಾ ಅವುಗಳಲ್ಲಿ ಯಾವುದನ್ನಾದರೂ" ಎಂಬ ಪದಗಳಿಂದ ಪ್ರಾರಂಭವಾಗುವ "ಮತ್ತು ಅಂಥ ಕಾನೂನು ಬಾಹಿರತೆಯು ಸಾರಭೂತವಾದ ನ್ಯಾಯವಿಫಲತೆಗೆ ಎಡೆಗೊಟ್ಟಿದೆ" ಎಂಬ ಪದಗಳಿಂದ ಕೊನೆಗೊಳ್ಳುವ ಭಾಗಕ್ಕೆ ಬದಲಾಗಿ (1-8-79ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
4. ಅದೇ 30ನೇ ಪ್ರಕರಣದ ಮೂಲಕ (3), (4), (5) ಮತ್ತು (6)ನೇ ಖಂಡಗಳಿಗೆ ಬದಲಾಗಿ (1.8.1979 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

[1][(4)] ಈ ಅನುಚ್ಛೇದದ ಮೂಲಕ ಉಚ್ಚ ನ್ಯಾಯಾಲಯಕ್ಕೆ ಪ್ರದಾನ ಮಾಡಿರುವ ಅಧಿಕಾರವು 32ನೆಯ ಅನುಚ್ಛೇದದ (2)ನೆಯ ಖಂಡದ ಮೂಲಕ ಸರ್ವೋಚ್ಚ ನ್ಯಾಯಾಲಯಕ್ಕೆ ಪ್ರದಾನ ಮಾಡಿರುವ ಅಧಿಕಾರವನ್ನು ಅಲ್ಪೀಕರಿಸುವಂಥದ್ದಾಗಿರತಕ್ಕದ್ದಲ್ಲ.]

[2]***226ಎ. [226ನೇ ಅನುಚ್ಛೇದದ ಮೇರೆಗಿನ ವ್ಯವಹರಣೆಗಳಲ್ಲಿ ಕೇಂದ್ರ ಕಾನೂನುಗಳ ಸಂವಿಧಾನಾತ್ಮಕ ಸಿಂಧುತ್ವವನ್ನು ಪರ್ಯಾಲೋಚಿಸತಕ್ಕದ್ದಲ್ಲ.] 1977ನೇ ಇಸವಿಯ ಸಂವಿಧಾನ (ನಲವತ್ತಮೂರನೆಯ ತಿದ್ದುಪಡಿ) ಅಧಿನಿಯಮದ 8ನೇ ಪ್ರಕರಣದ ಮೂಲಕ (13-4-78 ರಿಂದ ಜಾರಿಗೆ ಬರುವಂತೆ) ನಿರಸನಗೊಳಿಸಲಾಗಿದೆ.***

**227. ಎಲ್ಲ ನ್ಯಾಯಾಲಯಗಳ ಮೇಲೆ ಉಚ್ಚನ್ಯಾಯಾಲಯದ ಅಧೀಕ್ಷಣಾಧಿಕಾರ:-** [3][(1) ಪ್ರತಿಯೊಂದು ಉಚ್ಚ ನ್ಯಾಯಾಲಯವು, ಅದು ಯಾವ ರಾಜ್ಯಕ್ಷೇತ್ರಗಳ ಸಂಬಂಧದಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದೋ ಆ ರಾಜ್ಯಕ್ಷೇತ್ರಗಳ ಆದ್ಯಂತ ಇರುವ ಎಲ್ಲ ನ್ಯಾಯಾಲಯಗಳ ಮತ್ತು ನ್ಯಾಯಾಧಿಕರಣಗಳ ಮೇಲೆ ಅಧೀಕ್ಷಣಾಧಿಕಾರವನ್ನು ಹೊಂದಿರತಕ್ಕದ್ದು.]

(2) ಹಿಂದೆ ಹೇಳಿದ ಉಪಬಂಧದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಉಚ್ಚ ನ್ಯಾಯಾಲಯವು,-

(ಎ) ಅಂಥ ನ್ಯಾಯಾಲಯಗಳಿಂದ ವಿವರ ಪಟ್ಟಿಕೆಗಳನ್ನು ತರಿಸಿಕೊಳ್ಳಬಹುದು;

(ಬಿ) ಅಂಥ ನ್ಯಾಯಾಲಯಗಳ ಪದ್ಧತಿ ಮತ್ತು ವ್ಯವಹರಣೆಗಳನ್ನು ವಿನಿಯಮನಗೊಳಿಸುವುದಕ್ಕಾಗಿ ಸಾಮಾನ್ಯ ನಿಯಮವನ್ನು ರಚಿಸಿ ಹೊರಡಿಸಬಹುದು ಮತ್ತು ನಮೂನೆಗಳನ್ನು ಗೊತ್ತುಪಡಿಸಬಹುದು; ಮತ್ತು

(ಸಿ) ಅಂಥ ಯಾವುವೇ ನ್ಯಾಯಾಲಯಗಳ ಅಧಿಕಾರಿಗಳು ಯಾವ ನಮೂನೆಗಳಲ್ಲಿ ಪುಸ್ತಕಗಳನ್ನು, ನಮೂದುಗಳನ್ನು ಮತ್ತು ಲೆಕ್ಕಪತ್ರಗಳನ್ನು ಇಡತಕ್ಕದ್ದೋ ಅಂಥ ನಮೂನೆಗಳನ್ನು ಗೊತ್ತುಪಡಿಸಬಹುದು.

(3) ಉಚ್ಚ ನ್ಯಾಯಾಲಯವು ಅಂಥ ನ್ಯಾಯಾಲಯಗಳ ಷರೀಫರಿಗೆ ಮತ್ತು ಎಲ್ಲಾ ಗುಮಾಸ್ತರಿಗೆ ಹಾಗೂ ಅಧಿಕಾರಿಗಳಿಗೆ ಹಾಗೂ ಅಲ್ಲಿ ವೃತ್ತಿ ನಡೆಸುತ್ತಿರುವ ಅಟಾರ್ನಿಗಳಿಗೆ, ನ್ಯಾಯವಾದಿಗಳಿಗೆ ಮತ್ತು ಪ್ಲೀಡರುಗಳಿಗೆ ಕೊಡಬಹುದಾದ ಫೀಜುಗಳ ಕೋಷ್ಟಕಗಳನ್ನು ಸಹ ನಿರ್ಧರಿಸಬಹುದು:

ಪರಂತು, (2)ನೆಯ ಅಥವಾ (3)ನೆಯ ಖಂಡದ ಮೇರೆಗೆ ರಚಿಸಿದ ಯಾವುವೇ ನಿಯಮಗಳು, ಗೊತ್ತುಪಡಿಸಿದ ನಮೂನೆಗಳು, ನಿರ್ಧರಿಸಿದ ಫೀಜುಗಳ ಕೋಷ್ಟಕಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಅಸಂಗತವಾಗಿರತಕ್ಕದ್ದಲ್ಲ ಮತ್ತು ಅವುಗಳಿಗೆ ರಾಜ್ಯಪಾಲನ ಪೂರ್ವಾನುಮೋದನೆ ಅಗತ್ಯವಾಗಿರತಕ್ಕದ್ದು.

(4) ಈ ಅನುಚ್ಛೇದದಲ್ಲಿರುವುದು ಯಾವುದೂ ಸಶಸ್ತ್ರ ಬಲಗಳಿಗೆ ಸಂಬಂಧಪಟ್ಟ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಯಾವುದೇ ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಮೇಲೆ ಉಚ್ಚ ನ್ಯಾಯಾಲಯಕ್ಕೆ ಅಧೀಕ್ಷಣಾಧಿಕಾರಗಳನ್ನು ಪ್ರದಾನ ಮಾಡುವುದಾಗಿ ಭಾವಿಸತಕ್ಕದ್ದಲ್ಲ.

[4]* * * * *

**228. ಉಚ್ಚ ನ್ಯಾಯಾಲಯಕ್ಕೆ ಕೆಲವು ಮೊಕದ್ದಮೆಗಳ ವರ್ಗಾವಣೆ:-** ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರುವ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಯು ಈ ಸಂವಿಧಾನದ ಅರ್ಥವಿವರಣೆಯ ಬಗ್ಗೆ ಕಾನೂನಿಗೆ ಸಂಬಂಧಿಸಿದ ಮುಖ್ಯವಾದ ಪ್ರಶ್ನೆಯನ್ನು ಒಳಗೊಂಡಿದೆಯೆಂದು ಮತ್ತು ಅಂಥ ಪ್ರಶ್ನೆಯ ನಿರ್ಧಾರವು ಆ ಮೊಕದ್ದಮೆಯನ್ನು ವಿಲೆ ಮಾಡುವುದಕ್ಕೆ ಅವಶ್ಯವಾಗಿದೆಯೆಂದು ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ ಅದು [5][ಆ ಮೊಕದ್ದಮೆಯನ್ನು ತರಿಸಿಕೊಳ್ಳತಕ್ಕದ್ದು ಮತ್ತು [6]* * *]

---

1. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 30ನೇ ಪ್ರಕರಣದ ಮೂಲಕ ಮೂಲ (7)ನೇ ಖಂಡಕ್ಕೆ (4)ನೇ ಖಂಡ ಎಂದು ಪುನರ್ ಸಂಖ್ಯೆ ಕೊಡಲಾಗಿದೆ.
2. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 39ನೇ ಪ್ರಕರಣದ ಮೂಲಕ (1-2-77 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1ನೆಯ ಖಂಡವನ್ನು 1976ನೇ ಇಸವಿಯ ಸಂವಿಧಾನ (ನಲವತ್ತಎರಡನೆಯ ತಿದ್ದುಪಡಿ) ಅಧಿನಿಯಮದ 40ನೇ ಪ್ರಕರಣದ ಮೂಲಕ (1-2-77ರಿಂದ ಜಾರಿಗೆ ಬರುವಂತೆ) ಹಾಗೂ ಆ ತರುವಾಯ 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 31ನೇ ಪ್ರಕರಣದ ಮೂಲಕ (20-6-79 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದ್ದು, ಮೇಲ್ಕಂಡಂತೆ ಓದಿಕೊಳ್ಳತಕ್ಕದ್ದು.
4. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 40ನೆಯ ಪ್ರಕರಣದ ಮೂಲಕ (1-2-1977ರಿಂದ ಜಾರಿಗೆ ಬರುವಂತೆ) 5ನೇ ಖಂಡವನ್ನು ಸೇರಿಸಲಾಗಿತ್ತು ಮತ್ತು ಅದನ್ನು 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 31ನೆಯ ಪ್ರಕರಣದ ಮೂಲಕ (20-6-1979ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
5. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 41ನೇ ಪ್ರಕರಣದ ಮೂಲಕ "ಆ ಮೊಕದ್ದಮೆಯನ್ನು ಅದು ಹಿಂತೆಗೆದುಕೊಳ್ಳತಕ್ಕದ್ದು ಮತ್ತು ..... ಬಹುದು" ಎಂಬ ಪದಗಳಿಗೆ ಬದಲಾಗಿ (1-2-77ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
6. 1977ನೆಯ ಇಸವಿಯ ಸಂವಿಧಾನ (ನಲವತ್ತಮೂರನೆಯ ತಿದ್ದುಪಡಿ) ಅಧಿನಿಯಮದ 9ನೇ ಪ್ರಕರಣದ ಮೂಲಕ "131ಎ ಅನುಚ್ಛೇದದ ಉಪಬಂಧಗಳಿಗೊಳಪಟ್ಟು" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳನ್ನು (13-4-1978ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.

(ಎ) ಆ ಮೊಕದ್ದಮೆಯನ್ನು ತಾನೇ ವಿಲೆ ಮಾಡಬಹುದು, ಅಥವಾ

(ಬಿ) ಸದರಿ ಕಾನೂನಿನ ಪ್ರಶ್ನೆಯನ್ನು ತಾನೆ ನಿರ್ಧರಿಸಬಹುದು ಮತ್ತು ಆ ಮೊಕದ್ದಮೆಯನ್ನು ಯಾವ ನ್ಯಾಯಾಲಯದಿಂದ ತರಿಸಿಕೊಳ್ಳಲಾಗಿತ್ತೋ ಆ ನ್ಯಾಯಾಲಯಕ್ಕೆ ಅಂಥ ಪ್ರಶ್ನೆಯ ಮೇಲಿನ ತನ್ನ ತೀರ್ಪಿನ ಒಂದು ಪ್ರತಿಯೊಂದಿಗೆ ಅದನ್ನು ವಾಪಸ್ಸು ಕಳುಹಿಸಿಕೊಡಬಹುದು ಮತ್ತು ಸದರಿ ಅಧೀನ ನ್ಯಾಯಾಲಯವು ಆ ಮೊಕದ್ದಮೆಯನ್ನು ಸ್ವೀಕರಿಸಿದ ಮೇಲೆ, ಆ ತೀರ್ಪಿಗೆ ಅನುಸಾರ ಅದನ್ನು ವಿಲೆ ಮಾಡಲು ಕ್ರಮಕೈಗೊಳ್ಳತಕ್ಕದ್ದು.

[1]**228ಎ. [ರಾಜ್ಯ ಕಾನೂನುಗಳ ಸಂವಿಧಾನಾತ್ಮಕ ಸಿಂಧುತ್ವಕ್ಕೆ ಸಂಬಂಧಿಸಿದ ಪ್ರಶ್ನೆಗಳ ವಿಲೆಯ ಬಗ್ಗೆ ವಿಶೇಷ ಉಪಬಂಧಗಳು].** 1977ನೇ ಇಸವಿಯ ಸಂವಿಧಾನ (ನಲವತ್ತಮೂರನೆಯ ತಿದ್ದುಪಡಿ) ಅಧಿನಿಯಮದ 10ನೆಯ ಪ್ರಕರಣದ ಮೂಲಕ 13-4-1978ರಿಂದ ಜಾರಿಗೆ ಬರುವಂತೆ ನಿರಸನಗೊಳಿಸಲಾಗಿದೆ.

**229. ಉಚ್ಚ ನ್ಯಾಯಾಲಯಗಳ ಅಧಿಕಾರಿಗಳು ಮತ್ತು ನೌಕರರು ಹಾಗೂ ವೆಚ್ಚಗಳು:-** (1) ಉಚ್ಚ ನ್ಯಾಯಾಲಯದ ಅಧಿಕಾರಿಗಳು ಮತ್ತು ನೌಕರರ ನೇಮಕಗಳನ್ನು ಆ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯು ಅಥವಾ ಅವನು ನಿರ್ದೇಶಿಸಬಹುದಾದಂಥ ಆ ನ್ಯಾಯಾಲಯದ ಇತರ ನ್ಯಾಯಾಧೀಶನು ಅಥವಾ ಅಧಿಕಾರಿಯು ಮಾಡತಕ್ಕದ್ದು:

ಪರಂತು, [2] * * * ಆ ರಾಜ್ಯದ ರಾಜ್ಯಪಾಲನು ನಿಯಮದ ಮೂಲಕ ಆ ನಿಯಮದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭಗಳಲ್ಲಿ, ಆ ನ್ಯಾಯಾಲಯಕ್ಕೆ ಈ ಮೊದಲೇ ಸೇರಿಲ್ಲದ ಯಾರೇ ವ್ಯಕ್ತಿಯನ್ನು ಆ ರಾಜ್ಯದ ಲೋಕಸೇವಾ ಆಯೋಗದೊಡನೆ ಸಮಾಲೋಚನೆ ಮಾಡಿದ ಹೊರತು ಆ ನ್ಯಾಯಾಲಯಕ್ಕೆ ಸಂಬಂಧಪಟ್ಟ ಯಾವುದೇ ಪದಕ್ಕೆ ನೇಮಕ ಮಾಡತಕ್ಕದ್ದಲ್ಲವೆಂದು ಅಗತ್ಯಪಡಿಸಬಹುದು.

(2) ರಾಜ್ಯದ ವಿಧಾನ ಮಂಡಲವು ಮಾಡಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ಉಚ್ಚ ನ್ಯಾಯಾಲಯದ ಅಧಿಕಾರಿಗಳ ಮತ್ತು ನೌಕರರ ಸೇವಾ ಷರತ್ತುಗಳು, ಆ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯು ಅಥವಾ ಆ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಲು ಅವನು ಅಧಿಕೃತಗೊಳಿಸುವಂಥ ಆ ನ್ಯಾಯಾಲಯದ ಇತರ ನ್ಯಾಯಾಧೀಶನು ಅಥವಾ ಅಧಿಕಾರಿಯು ರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಸಂಬಳಗಳಿಗೆ, ಭತ್ಯೆಗಳಿಗೆ, ರಜೆಗೆ ಅಥವಾ ನಿವೃತ್ತಿವೇತನಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಈ ಖಂಡದ ಮೇರೆಗೆ ಮಾಡಿದ ನಿಯಮಗಳಿಗೆ [2] * * * ಆ ರಾಜ್ಯದ ರಾಜ್ಯಪಾಲನ ಅನುಮೋದನೆಯು ಅಗತ್ಯವಾಗಿರತಕ್ಕದ್ದು.

(3) ಉಚ್ಚ ನ್ಯಾಯಾಲಯದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಅಥವಾ ಅವರಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಾದ ಎಲ್ಲ ಸಂಬಳಗಳು, ಭತ್ಯೆಗಳು ಮತ್ತು ನಿವೃತ್ತಿವೇತನಗಳೂ ಸೇರಿ, ಆ ಉಚ್ಚ ನ್ಯಾಯಾಲಯದ ಆಡಳಿತ ವೆಚ್ಚವನ್ನು ಆ ರಾಜ್ಯದ ಸಂಚಿತನಿಧಿಯ ಮೇಲೆ ಹೊರಿಸತಕ್ಕದ್ದು ಮತ್ತು ಆ ನ್ಯಾಯಾಲಯಕ್ಕೆ ಬರುವ ಯಾವುವೇ ಫೀಜುಗಳು ಅಥವಾ ಇತರ ಹಣಗಳು ಆ ಸಂಚಿತನಿಧಿಯ ಭಾಗವಾಗತಕ್ಕದ್ದು.

[3]**[230. ಉಚ್ಚ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯನ್ನು ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ವಿಸ್ತರಿಸುವುದು:-** (1) ಸಂಸತ್ತು, ಕಾನೂನಿನ ಮೂಲಕ ಯಾವುದೇ ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಯಾವುದೇ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ವಿಸ್ತರಿಸಬಹುದು ಅಥವಾ ಯಾವುದೇ ಉಚ್ಚನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಯಾವುದೇ ಒಕ್ಕೂಟ ರಾಜ್ಯಕ್ಷೇತ್ರದಿಂದ ಹೊರತುಪಡಿಸಬಹುದು.

(2) ಯಾವುದೇ ರಾಜ್ಯದ ಉಚ್ಚ ನ್ಯಾಯಾಲಯವು ಒಂದು ಒಕ್ಕೂಟ ರಾಜ್ಯಕ್ಷೇತ್ರದ ಸಂಬಂಧದಲ್ಲಿ ಅಧಿಕಾರವ್ಯಾಪ್ತಿಯನ್ನು ಚಲಾಯಿಸುತ್ತಿರುವಾಗ,-

---

1. 1976ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 42ನೇ ಪ್ರಕರಣದ ಮೂಲಕ (1-2-77ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿತ್ತು.
2. 1956ನೆ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಮೂಲಕ ಹಾಗೂ ಅನುಸೂಚಿಯ ಮೂಲಕ ಆ "ಉಚ್ಚ ನ್ಯಾಯಾಲಯದ ಮುಖ್ಯ ಸ್ಥಾನವು ಯಾವ ರಾಜ್ಯದಲ್ಲಿದೆಯೋ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
3. 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 16ನೆಯ ಪ್ರಕರಣದ ಮೂಲಕ ಮತ್ತು 230, 231 ಮತ್ತು 232ನೆಯ ಅನುಚ್ಛೇದಗಳಿಗೆ ಬದಲಾಗಿ ಈ ಅನುಚ್ಛೇದಗಳನ್ನು ಪ್ರತ್ಯಾಯೋಜಿಸಲಾಗಿದೆ.

(ಎ) ಈ ಸಂವಿಧಾನದಲ್ಲಿರುವುದು ಯಾವುದೂ ಆ ರಾಜ್ಯದ ವಿಧಾನ ಮಂಡಲಕ್ಕೆ ಆ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸುವ, ನಿರ್ಬಂಧಿಸುವ ಅಥವಾ ರದ್ದುಮಾಡುವ ಅಧಿಕಾರವನ್ನು ಕೊಡುತ್ತದೆ ಎಂದು ಅರ್ಥೈಸತಕ್ಕದ್ದಲ್ಲ; ಮತ್ತು

(ಬಿ) 227ನೇ ಅನುಚ್ಛೇದದಲ್ಲಿ ರಾಜ್ಯಪಾಲನಿಗೆ ಸಂಬಂಧಪಟ್ಟ ಉಲ್ಲೇಖವನ್ನು ಆ ರಾಜ್ಯಕ್ಷೇತ್ರದಲ್ಲಿನ ಅಧೀನ ನ್ಯಾಯಾಲಯಗಳ ಬಗ್ಗೆ ಮಾಡಿದ ಯಾವುವೇ ನಿಯಮಗಳು, ನಮೂನೆಗಳು ಅಥವಾ ಕೋಷ್ಟಕಗಳಿಗೆ ಸಂಬಂಧಿಸಿದಂತೆ, ರಾಷ್ಟ್ರಪತಿಯನ್ನು ಕುರಿತು ಮಾಡಿರುವ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**231. ಎರಡು ಅಥವಾ ಹೆಚ್ಚು ರಾಜ್ಯಗಳಿಗೆ ಒಂದೇ ಉಚ್ಚ ನ್ಯಾಯಾಲಯವನ್ನು ಸ್ಥಾಪಿಸುವುದು:-** (1) ಈ ಅಧ್ಯಾಯದ ಹಿಂದಿನ ಉಪಬಂಧಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಂಸತ್ತು ಕಾನೂನಿನ ಮೂಲಕ ಎರಡು ಅಥವಾ ಹೆಚ್ಚು ರಾಜ್ಯಗಳಿಗೆ ಅಥವಾ ಎರಡು ಅಥವಾ ಹೆಚ್ಚು ರಾಜ್ಯಗಳು ಮತ್ತು ಒಂದು ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಒಂದೇ ಉಚ್ಚನ್ಯಾಯಾಲಯವನ್ನು ಸ್ಥಾಪಿಸಬಹುದು.

(2) ಅಂಥ ಯಾವುದೇ ಉಚ್ಚ ನ್ಯಾಯಾಲಯಕ್ಕೆ ಸಂಬಂಧಿಸಿದಂತೆ,-

(ಎ) 217ನೆಯ ಅನುಚ್ಛೇದದಲ್ಲಿ ರಾಜ್ಯದ ರಾಜ್ಯಪಾಲನಿಗೆ ಸಂಬಂಧಪಟ್ಟ ಉಲ್ಲೇಖವನ್ನು ಆ ಉಚ್ಚ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿರುವ ಎಲ್ಲ ರಾಜ್ಯಗಳ ರಾಜ್ಯಪಾಲರನ್ನು ಕುರಿತು ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು;

(ಬಿ) 227ನೆಯ ಅನುಚ್ಛೇದದಲ್ಲಿ ರಾಜ್ಯಪಾಲನಿಗೆ ಸಂಬಂಧಪಟ್ಟ ಉಲ್ಲೇಖವನ್ನು ಅಧೀನ ನ್ಯಾಯಾಲಯಗಳ ಬಗ್ಗೆ ಮಾಡಿರುವ ಯಾವುವೇ ನಿಯಮಗಳು, ನಮೂನೆಗಳು ಅಥವಾ ಕೋಷ್ಟಕಗಳಿಗೆ ಸಂಬಂಧಿಸಿದಂತೆ, ಆ ಅಧೀನ ನ್ಯಾಯಾಲಯಗಳು ಇರುವ ರಾಜ್ಯದ ರಾಜ್ಯಪಾಲನನ್ನು ಕುರಿತು ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು; ಮತ್ತು

(ಸಿ) 219ನೆಯ ಮತ್ತು 229ನೆಯ ಅನುಚ್ಛೇದಗಳಲ್ಲಿ ರಾಜ್ಯಕ್ಕೆ ಸಂಬಂಧಪಟ್ಟ ಉಲ್ಲೇಖಗಳನ್ನು ಉಚ್ಚನ್ಯಾಯಾಲಯದ ಮುಖ್ಯ ಸ್ಥಾನವಿರುವ ರಾಜ್ಯವನ್ನು ಕುರಿತು ಮಾಡಿರುವ ಉಲ್ಲೇಖವೆಂದು ಅರ್ಥೈಸತಕ್ಕದ್ದು:

ಪರಂತು, ಅಂಥ ಮುಖ್ಯಸ್ಥಾನವು ಒಂದು ಒಕ್ಕೂಟ ರಾಜ್ಯಕ್ಷೇತ್ರದಲ್ಲಿದ್ದರೆ, 219ನೆಯ ಮತ್ತು 229ನೆಯ ಅನುಚ್ಛೇದಗಳಲ್ಲಿ ರಾಜ್ಯದ ರಾಜ್ಯಪಾಲನಿಗೆ, ಲೋಕಸೇವಾ ಆಯೋಗಕ್ಕೆ, ವಿಧಾನಮಂಡಲಕ್ಕೆ ಮತ್ತು ಸಂಚಿತನಿಧಿಗೆ ಸಂಬಂಧಪಟ್ಟ ಉಲ್ಲೇಖಗಳನ್ನು ಅನುಕ್ರಮವಾಗಿ ರಾಷ್ಟ್ರಪತಿ, ಕೇಂದ್ರ ಲೋಕಸೇವಾ ಆಯೋಗ, ಸಂಸತ್ತು ಮತ್ತು ಭಾರತದ ಸಂಚಿತನಿಧಿ ಕುರಿತು ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.]

## ಅಧ್ಯಾಯ – VI ಅಧೀನ ನ್ಯಾಯಾಲಯಗಳು

**233. ಜಿಲ್ಲಾ ನ್ಯಾಯಾಧೀಶರ ನೇಮಕ:-** (1) ಯಾವುದೇ ರಾಜ್ಯದ ರಾಜ್ಯಪಾಲನು, ಆ ರಾಜ್ಯದಲ್ಲಿ ಜಿಲ್ಲಾ ನ್ಯಾಯಾಧೀಶರ ನೇಮಕ, ಸ್ಥಳನಿಯುಕ್ತಿ ಮತ್ತು ಬಡ್ತಿಯನ್ನು ಅಂಥ ರಾಜ್ಯಕ್ಕೆ ಸಂಬಂಧಿಸಿದಂತೆ ಅಧಿಕಾರವ್ಯಾಪ್ತಿಯನ್ನು ಚಲಾಯಿಸುತ್ತಿರುವ ಉಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಿದ ತರುವಾಯ ಮಾಡತಕ್ಕದ್ದು.

(2) ಒಕ್ಕೂಟದ ಅಥವಾ ರಾಜ್ಯದ ಸೇವೆಯಲ್ಲಿ ಈ ಮೊದಲೇ ಇಲ್ಲದಿರುವ ಯಾರೇ ವ್ಯಕ್ತಿಯು ಏಳು ವರ್ಷಗಳಿಗಿಂತ ಕಡಿಮೆಯಿಲ್ಲದಷ್ಟು ಕಾಲ ನ್ಯಾಯವಾದಿಯಾಗಿದ್ದು ಅಥವಾ ಪ್ಲೀಡರ್ ಆಗಿದ್ದು ಅವನನ್ನು ಜಿಲ್ಲಾ ನ್ಯಾಯಾಧೀಶನಾಗಿ ನೇಮಿಸಲು ಉಚ್ಚ ನ್ಯಾಯಾಲಯವು ಶಿಫಾರಸು ಮಾಡಿದ್ದರೆ ಮಾತ್ರ ಅವನು ಹಾಗೆ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು.

[1][233ಎ. **ಕೆಲವು ಜಿಲ್ಲಾ ನ್ಯಾಯಾಧೀಶರ ನೇಮಕ ಮತ್ತು ಅವರು ಕೊಟ್ಟಿರುವ ತೀರ್ಪು, ಇತ್ಯಾದಿಗಳ ಸಿಂಧುತ್ವ:–** ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶ ಏನೇ ಇದ್ದಾಗ್ಯೂ, 1966ನೇ ಇಸವಿಯ ಸಂವಿಧಾನ (ಇಪ್ಪತ್ತನೆಯ ತಿದ್ದುಪಡಿ) ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಯಾವುದೇ ಕಾಲದಲ್ಲಿ,–

(ಎ) (i) ಯಾವುದೇ ರಾಜ್ಯದ ನ್ಯಾಯಿಕ ಸೇವೆಯಲ್ಲಿ ಈಗಾಗಲೇ ಇರುವ ಯಾರೇ ವ್ಯಕ್ತಿಯನ್ನು ಅಥವಾ ಏಳು ವರ್ಷಗಳಿಗೆ ಕಡಿಮೆಯಿಲ್ಲದಷ್ಟು ಕಾಲ ನ್ಯಾಯವಾದಿಯಾಗಿದ್ದ ಅಥವಾ ಪ್ಲೀಡರನಾಗಿದ್ದ ಯಾರೇ ವ್ಯಕ್ತಿಯನ್ನು 233ನೆಯ ಅಥವಾ 235ನೆಯ ಅನುಚ್ಛೇದದ ಉಪಬಂಧಗಳಿಗನುಸಾರವಾಗಿಯಲ್ಲದೆ ಅನ್ಯಥಾ ಆ ರಾಜ್ಯದಲ್ಲಿ ಜಿಲ್ಲಾ ನ್ಯಾಯಾಧೀಶನನ್ನಾಗಿ ಮಾಡಿದ ಯಾವುದೇ ನೇಮಕವನ್ನು, ಮತ್ತು

(ii) ಸದರಿ ಉಪಬಂಧಗಳಿಗನುಸಾರವಾಗಲ್ಲದೆ ಅನ್ಯಥಾ ಜಿಲ್ಲಾ ನ್ಯಾಯಾಧೀಶನಾಗಿ ನೇಮಕಗೊಂಡ ಅಂಥ ಯಾರೇ ವ್ಯಕ್ತಿಯ ಯಾವುದೇ ಸ್ಥಳ ನಿಯುಕ್ತಿ, ಬಡ್ತಿ ಅಥವಾ ವರ್ಗಾವಣೆಯನ್ನು

– ಸದರಿ ಉಪಬಂಧಗಳಿಗನುಸಾರವಾಗಿ ಮಾಡಿಲ್ಲವೆಂಬ ಸಂಗತಿಯ ಕಾರಣಮಾತ್ರದಿಂದ ಅವು ಕಾನೂನುಬಾಹಿರವಾಗಿವೆ ಅಥವಾ ಶೂನ್ಯವಾಗಿವೆ ಎಂದು ಅಥವಾ ಎಂದಾದರೂ ಕಾನೂನು ಬಾಹಿರವಾಗಿದ್ದುವು ಅಥವಾ ಶೂನ್ಯವಾಗಿದ್ದುವು ಎಂದು ಭಾವಿಸತಕ್ಕದ್ದಲ್ಲ;

(ಬಿ) 1966ನೆಯ ಸಂವಿಧಾನ (ಇಪ್ಪತ್ತನೆಯ ತಿದ್ದುಪಡಿ) ಅಧಿನಿಯಮದ ಪ್ರಾರಂಭಕ್ಕೆ ಮುಂಚೆ 233ನೆಯ ಅಥವಾ 235ನೆಯ ಅನುಚ್ಛೇದದ ಉಪಬಂಧಗಳಿಗನುಸಾರವಾಗಿಯಲ್ಲದೆ ಅನ್ಯಥಾ ಯಾವುದೇ ರಾಜ್ಯದಲ್ಲಿ ಜಿಲ್ಲಾ ನ್ಯಾಯಾಧೀಶನಾಗಿ ನೇಮಕಗೊಂಡಿರುವ, ಸ್ಥಳನಿಯುಕ್ತಿ ಹೊಂದಿರುವ, ಬಡ್ತಿ ಪಡೆದಿರುವ ಅಥವಾ ವರ್ಗಾವಣೆಯಾಗಿರುವ ಯಾರೇ ವ್ಯಕ್ತಿಯು ಚಲಾಯಿಸಿದ ಯಾವುದೇ ಅಧಿಕಾರವ್ಯಾಪ್ತಿ, ಕೊಟ್ಟ ಅಥವಾ ಮಾಡಿದ ಯಾವುದೇ ತೀರ್ಪು, ಡಿಕ್ರಿ, ಶಿಕ್ಷೆ ಅಥವಾ ಆದೇಶವು ಅಥವಾ ಅವನ ಸಮ್ಮುಖದಲ್ಲಿ ಮಾಡಲಾದ ಅಥವಾ ಕೈಗೊಳ್ಳಲಾದ ಇತರ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ಅಂಥ ನೇಮಕ, ಸ್ಥಳ ನಿಯುಕ್ತಿ, ಬಡ್ತಿ ಅಥವಾ ವರ್ಗಾವಣೆಯನ್ನು ಸದರಿ ಉಪಬಂಧಗಳಿಗನುಸಾರ ಮಾಡಿಲ್ಲವೆಂಬ ಸಂಗತಿಯ ಕಾರಣಮಾತ್ರದಿಂದಲೇ ಕಾನೂನುಬಾಹಿರವಾಗಿವೆ ಅಥವಾ ಅಸಿಂಧುವಾಗಿವೆ ಎಂದು ಅಥವಾ ಎಂದಾದರೂ ಕಾನೂನು ಬಾಹಿರವಾಗಿದ್ದವು ಅಥವಾ ಅಸಿಂಧುವಾಗಿದ್ದವು ಎಂದು ಭಾವಿಸತಕ್ಕದ್ದಲ್ಲ.]

**234. ನ್ಯಾಯಿಕ ಸೇವೆಗೆ ಜಿಲ್ಲಾ ನ್ಯಾಯಾಧೀಶರಲ್ಲದ ಇತರ ವ್ಯಕ್ತಿಗಳ ನೇಮಕಾತಿ:–** ರಾಜ್ಯದ ನ್ಯಾಯಿಕ ಸೇವೆಗೆ ಜಿಲ್ಲಾ ನ್ಯಾಯಾಧೀಶರಲ್ಲದ ಇತರ ವ್ಯಕ್ತಿಗಳ ನೇಮಕಗಳನ್ನು ಮಾಡುವ ಸಂಬಂಧದಲ್ಲಿ ರಾಜ್ಯಪಾಲನು ರಾಜ್ಯ ಲೋಕಸೇವಾ ಆಯೋಗದೊಡನೆ ಮತ್ತು ಅಂಥ ರಾಜ್ಯಕ್ಕೆ ಸಂಬಂಧಿಸಿದಂತೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿರುವ ಉಚ್ಚ ನ್ಯಾಯಾಲಯದೊಡನೆ ಸಮಾಲೋಚಿಸಿದ ನಂತರ ತಾನು ರಚಿಸಿದ ನಿಯಮಗಳಿಗನುಸಾರವಾಗಿ ಅಂಥ ನೇಮಕಗಳನ್ನು ಮಾಡತಕ್ಕದ್ದು.

**235. ಅಧೀನ ನ್ಯಾಯಾಲಯಗಳ ಮೇಲೆ ನಿಯಂತ್ರಣ:–** ರಾಜ್ಯದ ನ್ಯಾಯಿಕ ಸೇವೆಗೆ ಸೇರಿದ ಮತ್ತು ಜಿಲ್ಲಾ ನ್ಯಾಯಾಧೀಶನ ಪದಕ್ಕೆ ಕಡಿಮೆ ಇರುವ ಯಾವುದೇ ಪದದಲ್ಲಿರುವ ವ್ಯಕ್ತಿಗಳ ಸ್ಥಳನಿಯುಕ್ತಿ, ಬಡ್ತಿ ಮತ್ತು ಅವರಿಗೆ ರಜೆ ಕೊಡುವುದೂ ಸೇರಿ ಜಿಲ್ಲಾ ನ್ಯಾಯಾಲಯಗಳ ಮತ್ತು ಅವುಗಳಿಗೆ ಅಧೀನವಾಗಿರುವ ನ್ಯಾಯಾಲಯಗಳ ಮೇಲಣ ನಿಯಂತ್ರಣವು ಉಚ್ಚ ನ್ಯಾಯಾಲಯದಲ್ಲಿ ನಿಹಿತವಾಗಿರತಕ್ಕದ್ದು; ಆದರೆ ಈ ಅನುಚ್ಛೇದದಲ್ಲಿರುವುದು ಯಾವುದೂ, ಅಂಥ ಯಾರೇ ವ್ಯಕ್ತಿಯ ಸೇವಾ ಷರತ್ತುಗಳನ್ನು ವಿನಿಯಮಗೊಳಿಸುವ ಕಾನೂನಿನ ಮೇರೆಗೆ ಅಪೀಲು ಮಾಡಲು ಅವನು ಹೊಂದಿರಬಹುದಾದ ಯಾವುದೇ ಹಕ್ಕನ್ನು ಅವನಿಂದ ಕಸಿದುಕೊಳ್ಳುವುದೆಂದು ಅಥವಾ ಅಂಥ ಕಾನೂನಿನ ಮೇರೆಗೆ ನಿಯಮಿಸಿದ ಅವನ ಸೇವಾ ಷರತ್ತುಗಳಿಗನುಸಾರವಾಗಿಯಲ್ಲದೆ ಅನ್ಯಥಾ ಅವನೊಡನೆ ವ್ಯವಹರಿಸಲು ಉಚ್ಚ ನ್ಯಾಯಾಲಯವನ್ನು ಅಧಿಕೃತಗೊಳಿಸುವುದೆಂದು ಅರ್ಥೈಸತಕ್ಕದ್ದಲ್ಲ.

---

1. 1966ನೇ ಇಸವಿಯ ಸಂವಿಧಾನ (ಇಪ್ಪತ್ತನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

**236. ಅರ್ಥ ವಿವರಣೆ:**- ಈ ಅಧ್ಯಾಯದಲ್ಲಿ,-

(ಎ) "ಜಿಲ್ಲಾ ನ್ಯಾಯಾಧೀಶ" ಎಂಬ ಪದವು ನಗರ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ, ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ, ಜಂಟಿ ಜಿಲ್ಲಾ ನ್ಯಾಯಾಧೀಶ, ಸಹಾಯಕ ಜಿಲ್ಲಾ ನ್ಯಾಯಾಧೀಶ, ಲಘು ವಿವಾದ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ, ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್, ಅಡಿಷನಲ್ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್, ಸೆಷನ್ಸ್ ನ್ಯಾಯಾಧೀಶ, ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಮತ್ತು ಸಹಾಯಕ ಸೆಷನ್ಸ್ ನ್ಯಾಯಾಧೀಶರನ್ನು ಒಳಗೊಳ್ಳುತ್ತದೆ;

(ಬಿ) "ನ್ಯಾಯಿಕ ಸೇವೆ" ಎಂದರೆ ಜಿಲ್ಲಾ ನ್ಯಾಯಾಧೀಶನ ಹುದ್ದೆಯನ್ನು ಮತ್ತು ಜಿಲ್ಲಾ ನ್ಯಾಯಾಧೀಶನ ಹುದ್ದೆಗಿಂತ ಕಡಿಮೆಯಿರುವ ಇತರ ಸಿವಿಲ್ ನ್ಯಾಯಿಕ ಹುದ್ದೆಗಳನ್ನು ಭರ್ತಿಮಾಡುವ ಉದ್ದೇಶದಿಂದ ನೇಮಕಮಾಡಲಾಗುವ ವ್ಯಕ್ತಿಗಳನ್ನು ಮಾತ್ರವೇ ಒಳಗೊಂಡ ಸೇವೆ ಎಂದರ್ಥ.

**237. ಕೆಲವು ದರ್ಜೆ ಅಥವಾ ದರ್ಜೆಗಳ ಮ್ಯಾಜಿಸ್ಟ್ರೇಟರುಗಳಿಗೆ ಈ ಅಧ್ಯಾಯದ ಉಪಬಂಧಗಳ ಅನ್ವಯ:**- ಈ ಅಧ್ಯಾಯದಲ್ಲಿ ಹಿಂದೆ ಹೇಳಿದ ಉಪಬಂಧಗಳು ಮತ್ತು ಅವುಗಳ ಮೇರೆಗೆ ರಚಿಸಿದ ಯಾವುವೇ ನಿಯಮಗಳು ರಾಜ್ಯದ ನ್ಯಾಯಿಕ ಸೇವೆಗೆ ನೇಮಕಗೊಂಡಿರುವ ವ್ಯಕ್ತಿಗಳ ಸಂಬಂಧದಲ್ಲಿ ಅನ್ವಯಿಸುವಂತೆಯೇ, ರಾಜ್ಯಪಾಲನು ಸಾರ್ವಜನಿಕ ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳು ಮತ್ತು ಮಾರ್ಪಾಟುಗಳಿಗೆ ಒಳಪಟ್ಟು, ಅವನು ಈ ಬಗ್ಗೆ ನಿಗದಿಪಡಿಸಬಹುದಾದಂಥ ದಿನಾಂಕದಿಂದ ರಾಜ್ಯದಲ್ಲಿರುವ ಯಾವುದೇ ದರ್ಜೆಯ ಅಥವಾ ಯಾವುವೇ ದರ್ಜೆಗಳ ಮ್ಯಾಜಿಸ್ಟ್ರೇಟರುಗಳಿಗೆ ಸಂಬಂಧಿಸಿದಂತೆಯೂ ಅನ್ವಯಿಸತಕ್ಕದ್ದೆಂದು ನಿರ್ದೇಶಿಸಬಹುದು.

## ಭಾಗ - VII

*[ಮೊದಲನೆಯ ಅನುಸೂಚಿಯ 'ಬಿ' ಭಾಗದಲ್ಲಿರುವ ರಾಜ್ಯಗಳು.] 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.*

## ಭಾಗ - VIII

### [1][ಒಕ್ಕೂಟ ರಾಜ್ಯ ಕ್ಷೇತ್ರಗಳು]

[2][**239. ಒಕ್ಕೂಟ ರಾಜ್ಯಕ್ಷೇತ್ರಗಳ ಆಡಳಿತ:-** (1) ಸಂಸತ್ತು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸಿರುವ ಹೊರತು ರಾಷ್ಟ್ರಪತಿಯು ತಾನು ನೇಮಿಸಬಹುದಾದ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಪದನಾಮವನ್ನು ಹೊಂದಿರುವ ಒಬ್ಬ ಆಡಳಿತಗಾರನ ಮೂಲಕ ತನಗೆ ಯುಕ್ತವೆಂದು ತೋರುವಷ್ಟರಮಟ್ಟಿಗೆ ಕಾರ್ಯನಿರ್ವಹಿಸಿ ಪ್ರತಿಯೊಂದು ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತವನ್ನು ನಡೆಸತಕ್ಕದ್ದು.

(2) ಭಾಗ - VI ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ರಾಷ್ಟ್ರಪತಿಯು ಒಂದು ರಾಜ್ಯದ ರಾಜ್ಯಪಾಲನನ್ನು ಆ ರಾಜ್ಯಕ್ಕೆ ಹೊಂದಿಕೊಂಡಿರುವ ಯಾವುದೇ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರನನ್ನಾಗಿ ನೇಮಕ ಮಾಡಬಹುದು ಮತ್ತು ಹಾಗೆ ನೇಮಕಗೊಂಡ ರಾಜ್ಯಪಾಲನು ಅಂಥ ಆಡಳಿತಗಾರನಾಗಿ ತನ್ನ ಮಂತ್ರಿಮಂಡಲದಿಂದ ಸ್ವತಂತ್ರನಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

[3][**239ಎ. ಕೆಲವು ಒಕ್ಕೂಟ ರಾಜ್ಯಕ್ಷೇತ್ರಗಳಿಗಾಗಿ ಸ್ಥಳೀಯ ವಿಧಾನ ಮಂಡಲಗಳನ್ನು ಅಥವಾ ಮಂತ್ರಿ ಮಂಡಲವನ್ನು ಅಥವಾ ಎರಡನ್ನೂ ಸೃಜಿಸುವುದು:-** (1) [4][[5][ಪುದುಚೆರಿ] ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ] ಸಂಸತ್ತು ಕಾನೂನಿನ ಮೂಲಕ,-

(ಎ) ಆ ಒಕ್ಕೂಟ ರಾಜ್ಯಕ್ಷೇತ್ರದ ವಿಧಾನ ಮಂಡಲವಾಗಿ ಕಾರ್ಯನಿರ್ವಹಿಸಲು ಚುನಾಯಿತರಾದ ಅಥವಾ ಭಾಗಶಃ ನಾಮನಿರ್ದೇಶಿತರಾದ ಮತ್ತು ಭಾಗಶಃ ಚುನಾಯಿತರಾದ ಸದಸ್ಯರಿಂದ ಕೂಡಿದ ಒಂದು ನಿಕಾಯವನ್ನು, ಅಥವಾ

(ಬಿ) ಒಂದು ಮಂತ್ರಿ ಮಂಡಲವನ್ನು

- ಅಥವಾ ಇವೆರಡನ್ನೂ ಸೃಜಿಸಬಹುದು ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಅವುಗಳ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಆ ಕಾನೂನಿನಲ್ಲಿ ನಿರ್ದಿಷ್ಟಪಡಿಸಬಹುದು.

(2) (1)ನೆಯ ಖಂಡದಲ್ಲಿ ಉಲ್ಲೇಖಿಸಲಾದಂಥ ಯಾವುದೇ ಕಾನೂನು ಈ ಸಂವಿಧಾನವನ್ನು ತಿದ್ದುಪಡಿ ಮಾಡುವ ಅಥವಾ ತಿದ್ದುಪಡಿ ಮಾಡುವ ಪರಿಣಾಮವುಳ್ಳ ಯಾವುದೇ ಉಪಬಂಧವನ್ನು ಒಳಗೊಂಡಿದ್ದಾಗ್ಯೂ, ಅದನ್ನು 368ನೆಯ ಅನುಚ್ಛೇದದ ಉದ್ದೇಶಗಳಿಗಾಗಿ ಈ ಸಂವಿಧಾನದ ಒಂದು ತಿದ್ದುಪಡಿಯೆಂದು ಭಾವಿಸತಕ್ಕದ್ದಲ್ಲ.]

[6][**239ಎಎ. ದೆಹಲಿಗೆ ಸಂಬಂಧಿಸಿದ ವಿಶೇಷ ಉಪಬಂಧಗಳು:-** (1) ಸಂವಿಧಾನ (ಅರವತ್ತೊಂಬತ್ತನೇ ತಿದ್ದುಪಡಿ) ಅಧಿನಿಯಮ, 1991ರ ಪ್ರಾರಂಭದ ದಿನಾಂಕದಿಂದ ದೆಹಲಿ ಒಕ್ಕೂಟ ರಾಜ್ಯಕ್ಷೇತ್ರವನ್ನು ರಾಷ್ಟ್ರದ ರಾಜಧಾನಿ ದೆಹಲಿ ರಾಜ್ಯಕ್ಷೇತ್ರವೆಂದು ಕರೆಯತಕ್ಕದ್ದು. (ಈ ಭಾಗದಲ್ಲಿ ಇನ್ನು ಮುಂದೆ ರಾಷ್ಟ್ರದ ರಾಜಧಾನಿ ರಾಜ್ಯಕ್ಷೇತ್ರ ಎಂದು ಉಲ್ಲೇಖಿಸಲಾಗಿದೆ) ಮತ್ತು 239ನೇ ಅನುಚ್ಛೇದದ ಮೇರೆಗೆ ನೇಮಕ ಮಾಡಲಾಗುವ ಅದರ ಆಡಳಿತಗಾರನನ್ನು ಉಪ ರಾಜ್ಯಪಾಲ ಎಂದು ಹೆಸರಿಸತಕ್ಕದ್ದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 17ನೆಯ ಪ್ರಕರಣದ ಮೂಲಕ "ಮೊದಲನೆಯ ಅನುಸೂಚಿಯ (ಸಿ) ಭಾಗದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಗಳು" ಎಂಬ ಮೂಲಶೀರ್ಷಿಕೆಗೆ ಬದಲಾಗಿ ಈ ಶೀರ್ಷಿಕೆಯನ್ನು ಪ್ರತ್ಯಾಯೋಜಿಸಲಾಗಿದೆ.
2. ಅದೇ ಅಧಿನಿಯಮದ 17ನೆಯ ಪ್ರಕರಣದ ಮೇರೆಗೆ 239ನೆಯ ಮತ್ತು 240ನೆಯ ಅನುಚ್ಛೇದಗಳಿಗೆ ಬದಲಾಗಿ ಈ ಅನುಚ್ಛೇದಗಳನ್ನು ಪ್ರತ್ಯಾಯೋಜಿಸಲಾಗಿದೆ.
3. 1962ನೆಯ ಇಸವಿಯ ಸಂವಿಧಾನ (ಹದಿನಾಲ್ಕನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
4. 1987ನೆಯ ಇಸವಿಯ ಗೋವಾ, ದಾಮನ್ ಮತ್ತು ದೀವ್ ಪುನಾರಚನೆ ಅಧಿನಿಯಮದ (1987ರ 18) 63ನೇ ಪ್ರಕರಣದ ಮೂಲಕ "ಗೋವಾ, ದಾಮನ್ ಮತ್ತು ದೀವ್ ಹಾಗು ಪಾಂಡಿಚೆರಿಯ ಯಾವುದೇ ಒಕ್ಕೂಟ ರಾಜ್ಯ ಕ್ಷೇತ್ರಗಳ" ಎಂಬ ಪದಗಳ ಬದಲಾಗಿ (30-5-1987 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
5. 2006ನೇ ಇಸವಿಯ ಪಾಂಡಿಚೇರಿ (ಹೆಸರು ಬದಲಾವಣೆ) ಅಧಿನಿಯಮದ (2006ರ 44) 4ನೇ ಪ್ರಕರಣದ ಮೂಲಕ "ಪಾಂಡಿಚೆರಿ"ಗೆ ಬದಲಾಗಿ (1.10.2006 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
6. 1991ನೇ ಇಸವಿಯ ಸಂವಿಧಾನ (ಅರವತ್ತೊಂಬತ್ತನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (1.2.1992 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(2)(ಎ) ರಾಷ್ಟ್ರದ ರಾಜಧಾನಿ ರಾಜ್ಯಕ್ಷೇತ್ರಕ್ಕೆ ಒಂದು ವಿಧಾನ ಸಭೆ ಇರತಕ್ಕದ್ದು ಮತ್ತು ಅಂಥ ಸಭೆಯಲ್ಲಿನ ಸ್ಥಾನಗಳನ್ನು ರಾಷ್ಟ್ರದ ರಾಜಧಾನಿ ರಾಜ್ಯಕ್ಷೇತ್ರದಲ್ಲಿನ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಂದ ನೇರ ಚುನಾವಣೆಯ ಮೂಲಕ ಆಯ್ಕೆಯಾಗುವ ಸದಸ್ಯರಿಂದ ಭರ್ತಿ ಮಾಡತಕ್ಕದ್ದು.

(ಬಿ) ವಿಧಾನ ಸಭೆಯಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆ ಅನುಸೂಚಿತ ಜಾತಿಗಳಿಗೆ ಕಾದಿರಿಸುವ ಸ್ಥಾನಗಳ ಸಂಖ್ಯೆ, ರಾಷ್ಟ್ರದ ರಾಜಧಾನಿ ರಾಜ್ಯಕ್ಷೇತ್ರವನ್ನು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಾಗಿ ವಿಭಜಿಸುವುದು (ಅಂಥ ವಿಭಜನೆಯ ಆಧಾರವೂ ಸೇರಿ) ಮತ್ತು ವಿಧಾನ ಸಭೆಯ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಇತರ ಎಲ್ಲಾ ವಿಷಯಗಳನ್ನು ಸಂಸತ್ತು ರಚಿಸಿದ ಕಾನೂನಿನ ಮೂಲಕ ವಿನಿಯಮಿಸತಕ್ಕದ್ದು.

(ಸಿ) 324 ರಿಂದ 327ರ ವರೆಗಿನ ಮತ್ತು 329ನೇ ಅನುಚ್ಛೇದಗಳ ಉಪಬಂಧಗಳು, ಅನುಕ್ರಮವಾಗಿ ಒಂದು ರಾಜ್ಯ, ಒಂದು ರಾಜ್ಯದ ವಿಧಾನ ಸಭೆ ಮತ್ತು ಅದರ ಸದಸ್ಯರಿಗೆ ಸಂಬಂಧಿಸಿದಂತೆ ಅನ್ವಯವಾಗುವಂತೆಯೇ ರಾಷ್ಟ್ರದ ರಾಜಧಾನಿ ರಾಜ್ಯಕ್ಷೇತ್ರ, ರಾಷ್ಟ್ರದ ರಾಜಧಾನಿ ರಾಜ್ಯಕ್ಷೇತ್ರದ ವಿಧಾನಸಭೆ ಮತ್ತು ಅದರ ಸದಸ್ಯರಿಗೆ ಸಂಬಂಧಿಸಿದಂತೆಯೂ ಅನ್ವಯವಾಗತಕ್ಕದ್ದು ಮತ್ತು "ಸಮುಚಿತ ವಿಧಾನ ಮಂಡಲ"ಕ್ಕೆ ಸಂಬಂಧಿಸಿದಂತೆ 326 ಮತ್ತು 329ನೇ ಅನುಚ್ಛೇದಗಳಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಸಂಸತ್ತಿಗೆ ಮಾಡಿದ ಉಲ್ಲೇಖವೆಂದು ಭಾವಿಸತಕ್ಕದ್ದು.

(3)(ಎ) ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ವಿಧಾನ ಸಭೆಯು, ರಾಜ್ಯಪಟ್ಟಿಯಲ್ಲಿ ಅಥವಾ ಸಮವರ್ತಿ ಪಟ್ಟಿಯಲ್ಲಿ ನಿರೂಪಿಸಲಾಗಿರುವ ವಿಷಯಗಳ ಪೈಕಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯಪಟ್ಟಿಯ 1, 2 ಮತ್ತು 18ನೇ ನಮೂದುಗಳು ಮತ್ತು ಆ ಪಟ್ಟಿಯ 64, 65 ಮತ್ತು 66ನೇ ನಮೂದುಗಳು, ಸದರಿ 1, 2 ಮತ್ತು 18ನೇ ನಮೂದುಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಆ ನಮೂದುಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಹೊರತುಪಡಿಸಿ, ಅಂಥ ಯಾವುದೇ ವಿಷಯವು ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಅನ್ವಯವಾಗುವಷ್ಟರ ಮಟ್ಟಿಗೆ, ರಾಷ್ಟ್ರದ ರಾಜಧಾನಿ ರಾಜ್ಯಕ್ಷೇತ್ರದ ಇಡೀ ಪ್ರದೇಶಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(ಬಿ) (ಎ)ಉಪ-ಖಂಡದಲ್ಲಿರುವುದು ಯಾವುದೂ, ಒಕ್ಕೂಟ ರಾಜ್ಯಕ್ಷೇತ್ರ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಪಟ್ಟ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸಲು ಈ ಸಂವಿಧಾನದ ಮೇರೆಗೆ ಸಂಸತ್ತಿಗೆ ಇರುವ ಅಧಿಕಾರಗಳನ್ನು ಅಲ್ಪೀಕರಿಸತಕ್ಕದ್ದಲ್ಲ.

(ಸಿ) ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ವಿಧಾನ ಸಭೆಯು ರಚಿಸಿದ ಕಾನೂನಿನ ಯಾವುದೇ ಉಪಬಂಧವು, ವಿಧಾನ ಸಭೆಯು ಆ ಕಾನೂನನ್ನು ರಚಿಸುವುದಕ್ಕೆ ಮುಂಚೆ ಅಥವಾ ಆ ತರುವಾಯ ಸಂಸತ್ತು ಆ ವಿಷಯಕ್ಕೆ ಸಂಬಂಧಿಸಿದಂತೆ ರಚಿಸಿದ ಕಾನೂನಿನ ಉಪಬಂಧಕ್ಕೆ ಅಥವಾ ವಿಧಾನ ಸಭೆಯು ರಚಿಸಿದ ಕಾನೂನನ್ನು ಹೊರತುಪಡಿಸಿ, ಆ ಮುಂಚಿನ ಕಾನೂನಿನ ಯಾವುದೇ ಉಪಬಂಧಕ್ಕೆ ವಿರುದ್ಧವಾಗಿದ್ದರೆ, ಎರಡೂ ಸಂದರ್ಭಗಳಲ್ಲಿ, ಸಂಸತ್ತು ರಚಿಸಿದ ಕಾನೂನು ಅಥವಾ ಸಂದರ್ಭಾನುಸಾರ, ಅಂಥ ಮುಂಚಿನ ಕಾನೂನು ಪ್ರಭಾವವುಳ್ಳದ್ದಾಗಿರತಕ್ಕದ್ದು ಮತ್ತು ವಿಧಾನ ಸಭೆಯು ರಚಿಸಿದ ಕಾನೂನು ಹಾಗೆ ವಿರುದ್ಧವಾಗಿರುವಷ್ಟರ ಮಟ್ಟಿಗೆ ಶೂನ್ಯವಾಗತಕ್ಕದ್ದು :

ಪರಂತು, ವಿಧಾನಸಭೆಯು ರಚಿಸಿದಂಥ ಯಾವುದೇ ಕಾನೂನನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾದಿರಿಸಿದ್ದು ಅದಕ್ಕೆ ಅವನ ಅನುಮತಿ ದೊರೆತಿದ್ದರೆ, ಅಂಥ ಕಾನೂನು ರಾಷ್ಟ್ರದ ರಾಜಧಾನಿ ರಾಜ್ಯಕ್ಷೇತ್ರದಲ್ಲಿ ಪ್ರಭಾವವುಳ್ಳದ್ದಾಗಿರತಕ್ಕದ್ದು:

ಮತ್ತೂ ಪರಂತು, ಈ ಉಪಖಂಡದಲ್ಲಿರುವುದು ಯಾವುದೂ, ವಿಧಾನ ಸಭೆಯು ಹಾಗೆ ರಚಿಸಿದ ಕಾನೂನಿಗೆ ಹೆಚ್ಚಿನ ವಿಷಯವನ್ನು ಸೇರಿಸುವುದು, ಅದನ್ನು ತಿದ್ದುಪಡಿ ಮಾಡುವುದು, ವ್ಯತ್ಯಾಸಗೊಳಿಸುವುದು ಅಥವಾ ನಿರಸನಗೊಳಿಸುವುದೂ ಸೇರಿದಂತೆ, ಅದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಮಯದಲ್ಲಿ ಯಾವುದೇ ಕಾನೂನನ್ನು ಅಧಿನಿಯಮಿಸದಂತೆ ಸಂಸತ್ತನ್ನು ಪ್ರತಿಬಂಧಿಸತಕ್ಕದ್ದಲ್ಲ.

(4) ಮುಖ್ಯಮಂತ್ರಿಯ ನೇತೃತ್ವದಲ್ಲಿ ವಿಧಾನ ಸಭೆಯ ಒಟ್ಟು ಸದಸ್ಯರ ಶೇಕಡಾ ಹತ್ತಕ್ಕೆ ಮೀರದಷ್ಟು ಸದಸ್ಯರಿಂದ ಕೂಡಿದ ಒಂದು ಮಂತ್ರಿಮಂಡಲವಿರತಕ್ಕದ್ದು ಮತ್ತು ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಉಪ ರಾಜ್ಯಪಾಲನು ತನ್ನ ವಿವೇಚನಾನುಸಾರ ಕಾರ್ಯ ನಿರ್ವಹಿಸಲು ಅವನನ್ನು ಅಗತ್ಯಪಡಿಸಿರುವಷ್ಟರಮಟ್ಟಿಗೆ ಹೊರತು, ಯಾವ ವಿಷಯಗಳಿಗೆ ಸಂಬಂಧಪಟ್ಟಂತೆ ಕಾನೂನುಗಳನ್ನು ರಚಿಸಲು ವಿಧಾನ ಸಭೆಯು ಅಧಿಕಾರವನ್ನು ಹೊಂದಿದೆಯೋ ಆ ವಿಷಯಗಳಿಗೆ ಸಂಬಂಧಪಟ್ಟಂತೆ ಉಪ ರಾಜ್ಯಪಾಲನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅವನಿಗೆ ಮಂತ್ರಿಮಂಡಲವು ನೆರವು ಮತ್ತು ಸಲಹೆ ನೀಡತಕ್ಕದ್ದು:

ಪರಂತು, ಯಾವುದೇ ವಿಷಯದ ಬಗ್ಗೆ ಉಪ ರಾಜ್ಯಪಾಲ ಮತ್ತು ಅವನ ಮಂತ್ರಿಗಳ ನಡುವೆ ಭಿನ್ನಾಭಿಪ್ರಾಯ ಉಂಟಾದ ಸಂದರ್ಭದಲ್ಲಿ, ಉಪ ರಾಜ್ಯಪಾಲನು ಅದನ್ನು ತೀರ್ಮಾನಕ್ಕಾಗಿ ರಾಷ್ಟ್ರಪತಿಗೆ ಕಳುಹಿಸತಕ್ಕದ್ದು ಮತ್ತು ಆ ಬಗ್ಗೆ ರಾಷ್ಟ್ರಪತಿಯು ನೀಡಿದ ತೀರ್ಮಾನಕ್ಕನುಸಾರವಾಗಿ ಅವನು ಕ್ರಮ ಕೈಗೊಳ್ಳತಕ್ಕದ್ದು ಮತ್ತು ಅಂಥ ತೀರ್ಮಾನ ಆಗುವವರೆಗೆ, ಆ ವಿಷಯವು ಅತಿ ಜರೂರು ವಿಷಯವಾಗಿದ್ದು, ತಾನು ಕೂಡಲೇ ಕ್ರಮ ಕೈಗೊಳ್ಳಬೇಕಾಗಿರುವುದೆಂದು ಉಪ ರಾಜ್ಯಪಾಲನು ಅಭಿಪ್ರಾಯಪಡುವ ಯಾವುದೇ ಸಂದರ್ಭದಲ್ಲಿ, ಅಂಥ ಕ್ರಮವನ್ನು ಕೈಗೊಳ್ಳಲು ಅಥವಾ ಆ ವಿಷಯದ ಬಗ್ಗೆ ತಾನು ಅವಶ್ಯವೆಂದು ಭಾವಿಸುವಂಥ ನಿರ್ದೇಶನವನ್ನು ನೀಡಲು ಉಪ ರಾಜ್ಯಪಾಲನು ಸಕ್ಷಮನಾಗಿರತಕ್ಕದ್ದು.

(5) ಮುಖ್ಯ ಮಂತ್ರಿಯನ್ನು ರಾಷ್ಟ್ರಪತಿಯು ನೇಮಕ ಮಾಡತಕ್ಕದ್ದು ಮತ್ತು ಇತರ ಮಂತ್ರಿಗಳನ್ನು ಮುಖ್ಯ ಮಂತ್ರಿಯ ಸಲಹೆಯ ಮೇರೆಗೆ ರಾಷ್ಟ್ರಪತಿಯು ನೇಮಕ ಮಾಡತಕ್ಕದ್ದು ಮತ್ತು ಆ ಮಂತ್ರಿಗಳು ರಾಷ್ಟ್ರಪತಿಯ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

(6) ಮಂತ್ರಿ ಮಂಡಲವು ಸಾಮೂಹಿಕವಾಗಿ ವಿಧಾನ ಸಭೆಗೆ ಜವಾಬ್ದಾರಿಯಾಗಿರತಕ್ಕದ್ದು.

[1][(7) (ಎ)] ಸಂಸತ್ತು, ಹಿಂದೆ ಹೇಳಿದ ಖಂಡಗಳಲ್ಲಿ ಒಳಗೊಂಡ ಉಪಬಂಧಗಳನ್ನು ಜಾರಿಗೆ ತರಲು ಅಥವಾ ಅವುಗಳಿಗೆ ಹೆಚ್ಚಿಗೆ ಸೇರ್ಪಡೆ ಮಾಡಲು ಮತ್ತು ಅವುಗಳಿಗೆ ಪ್ರಾಸಂಗಿಕವಾದ ಅಥವಾ ಆನುಷಂಗಿಕವಾದ ಎಲ್ಲಾ ವಿಷಯಗಳ ಬಗ್ಗೆ ಕಾನೂನಿನ ಮೂಲಕ ಉಪಬಂಧ ಕಲ್ಪಿಸಬಹುದು.

[2][(ಬಿ) (ಎ) ಉಪಖಂಡದಲ್ಲಿ ಉಲ್ಲೇಖಿಸಲಾಗಿರುವಂಥ ಯಾವುದೇ ಕಾನೂನು ಈ ಸಂವಿಧಾನವನ್ನು ತಿದ್ದುಪಡಿ ಮಾಡುವ ಅಥವಾ ತಿದ್ದುಪಡಿ ಮಾಡುವ ಪರಿಣಾಮವನ್ನು ಹೊಂದಿರುವ ಯಾವುದೇ ಉಪಬಂಧವನ್ನು ಒಳಗೊಂಡಿದ್ದರೂ, ಅದನ್ನು 368ನೇ ಅನುಚ್ಛೇದದ ಉದ್ದೇಶಗಳಿಗಾಗಿ ಈ ಸಂವಿಧಾನದ ಒಂದು ತಿದ್ದುಪಡಿಯೆಂದು ಭಾವಿಸತಕ್ಕದ್ದಲ್ಲ.]

(8) 239ಬಿ ಅನುಚ್ಛೇದದ ಉಪಬಂಧಗಳು ಅವು ಅನುಕ್ರಮವಾಗಿ [3][ಪುದುಚೆರಿ] ಒಕ್ಕೂಟ ರಾಜ್ಯ ಕ್ಷೇತ್ರ, ಅದರ ಆಡಳಿತಗಾರ ಮತ್ತು ವಿಧಾನ ಮಂಡಲಕ್ಕೆ ಅನ್ವಯವಾಗುವಂತೆಯೇ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ರಾಷ್ಟ್ರದ ರಾಜಧಾನಿ ರಾಜ್ಯಕ್ಷೇತ್ರ, ಅದರ ಉಪರಾಜ್ಯಪಾಲ ಮತ್ತು ವಿಧಾನ ಸಭೆಗೂ ಅನ್ವಯವಾಗತಕ್ಕದ್ದು, ಮತ್ತು ಆ ಅನುಚ್ಛೇದದಲ್ಲಿ "239ಎ ಅನುಚ್ಛೇದದ (1)ನೇ ಖಂಡ" ಕ್ಕೆ ಮಾಡಿದ ಯಾವುದೇ ಉಲ್ಲೇಖವನ್ನು ಈ ಅನುಚ್ಛೇದಕ್ಕೆ ಅಥವಾ ಸಂದರ್ಭಾನುಸಾರ 239ಎಬಿ ಅನುಚ್ಛೇದಕ್ಕೆ ಮಾಡಿದ ಉಲ್ಲೇಖವೆಂದು ಭಾವಿಸತಕ್ಕದ್ದು.

**239ಎಬಿ. ಸಂವಿಧಾನಾತ್ಮಕ ವ್ಯವಸ್ಥೆಯು ವಿಫಲವಾದ ಸಂದರ್ಭದಲ್ಲಿ ಉಪಬಂಧ:-** ರಾಷ್ಟ್ರಪತಿಯು ಉಪ ರಾಜ್ಯಪಾಲನಿಂದ ವರದಿಯನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ,-

(ಎ) 239ಎಎ ಅನುಚ್ಛೇದದ ಅಥವಾ ಆ ಅನುಚ್ಛೇದದ ಅನುಸಾರವಾಗಿ ರಚಿಸಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಅನುಸಾರವಾಗಿ ರಾಷ್ಟ್ರದ ರಾಜಧಾನಿ ರಾಜ್ಯಕ್ಷೇತ್ರದ ಆಡಳಿತವನ್ನು ನಡೆಸಲಾಗದ ಪರಿಸ್ಥಿತಿಯು ಉದ್ಭವಿಸಿದೆ ಎಂದು; ಅಥವಾ

(ಬಿ) ರಾಷ್ಟ್ರದ ರಾಜಧಾನಿ ರಾಜ್ಯಕ್ಷೇತ್ರದ ಆಡಳಿತವನ್ನು ಸೂಕ್ತವಾಗಿ ನಡೆಸಲು ಹಾಗೆ ಮಾಡುವುದು ಅವಶ್ಯವೆಂದು ಅಥವಾ ವಿಹಿತವೆಂದು ರಾಷ್ಟ್ರಪತಿಗೆ ಮನದಟ್ಟಾದರೆ

– ಅವನು ಆದೇಶದ ಮೂಲಕ 239ಎಎ ಅನುಚ್ಛೇದದ ಯಾವುದೇ ಉಪಬಂಧದ ಅಥವಾ ಆ ಅನುಚ್ಛೇದವನ್ನು ಅನುಸರಿಸಿ ರಚಿಸಿದ ಯಾವುದೇ ಕಾನೂನಿನ ಎಲ್ಲಾ ಅಥವಾ ಯಾವುವೇ ಉಪಬಂಧಗಳ ಜಾರಿಯನ್ನು, ಅಂಥ ಕಾನೂನಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಸ್ಥಗಿತಗೊಳಿಸಬಹುದು ಮತ್ತು 239ನೇ ಅನುಚ್ಛೇದದ ಮತ್ತು 239ಎಎ ಅನುಚ್ಛೇದದ ಉಪಬಂಧಗಳಿಗೆ ಅನುಸಾರವಾಗಿ ರಾಷ್ಟ್ರದ ರಾಜಧಾನಿ ರಾಜ್ಯಕ್ಷೇತ್ರದ ಆಡಳಿತವನ್ನು ನಡೆಸಲು ಅವಶ್ಯ ಅಥವಾ ವಿಹಿತವೆಂದು ತನಗೆ ಕಂಡುಬರಬಹುದಾದಂಥ ಪ್ರಾಸಂಗಿಕವಾದ ಮತ್ತು ಆನುಷಂಗಿಕವಾದ ಉಪಬಂಧಗಳನ್ನು ರಚಿಸಬಹುದು.

---

1. 1992ನೇ ಇಸವಿಯ ಸಂವಿಧಾನ (ಎಪ್ಪತ್ತನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ "(7)"ನೇ ಖಂಡಕ್ಕೆ ಬದಲಾಗಿ (21.12.1991 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1992ನೇ ಇಸವಿಯ ಸಂವಿಧಾನ (ಎಪ್ಪತ್ತನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.
3. 2006ನೇ ಇಸವಿಯ ಪಾಂಡಿಚೆರಿ (ಹೆಸರು ಬದಲಾವಣೆ) ಅಧಿನಿಯಮದ (2006ರ 44) 4ನೇ ಪ್ರಕರಣದ ಮೂಲಕ (1.10.2006 ರಿಂದ ಜಾರಿಗೆ ಬರುವಂತೆ) "ಪಾಂಡಿಚೆರಿ"ಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

[1][239ಬಿ. ವಿಧಾನಮಂಡಲದ ವಿರಾಮ ಕಾಲದಲ್ಲಿ ಅಧ್ಯಾದೇಶಗಳನ್ನು ಹೊರಡಿಸುವುದಕ್ಕೆ ಆಡಳಿತಗಾರನ ಅಧಿಕಾರ:- (1) [2][[3][ಪುದುಚೆರಿ] ಒಕ್ಕೂಟ ರಾಜ್ಯಕ್ಷೇತ್ರದ] ವಿಧಾನಮಂಡಲವು ಅಧಿವೇಶನದಲ್ಲಿರುವ ಕಾಲವನ್ನು ಹೊರತುಪಡಿಸಿ ಉಳಿದ ಯಾವುದೇ ಕಾಲದಲ್ಲಿ ತಾನು ಕೂಡಲೇ ಕ್ರಮವನ್ನು ಕೈಕೊಳ್ಳುವುದು ಅವಶ್ಯವಾಗಿರುವ ಸನ್ನಿವೇಶಗಳು ಉದ್ಭವಿಸಿವೆಯೆಂದು ಆ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರನಿಗೆ ಮನದಟ್ಟಾದರೆ, ಆ ಸನ್ನಿವೇಶಗಳು ಅವನನ್ನು ಅಗತ್ಯಪಡಿಸುತ್ತವೆ ಎಂದು ತೋರಬಹುದಾದಂಥ ಅಧ್ಯಾದೇಶಗಳನ್ನು ಹೊರಡಿಸಬಹುದು:

ಪರಂತು, ಆಡಳಿತಗಾರನು, ಆ ಬಗ್ಗೆ ರಾಷ್ಟ್ರಪತಿಯಿಂದ ಅನುದೇಶಗಳನ್ನು ಪಡೆದಿರುವ ಹೊರತು, ಯಾವುದೇ ಅಂಥ ಅಧ್ಯಾದೇಶವನ್ನು ಹೊರಡಿಸತಕ್ಕದ್ದಲ್ಲ:

ಮತ್ತೂ ಪರಂತು, ಸದರಿ ವಿಧಾನ ಮಂಡಲವು ವಿಸರ್ಜನೆಯಾದಾಗಲೆಲ್ಲ ಅಥವಾ 239ನೆಯ (ಎ) ಅನುಚ್ಛೇದದ (1)ನೆಯ ಖಂಡದಲ್ಲಿ ಉಲ್ಲಿಖಿತವಾದಂಥ ಯಾವುದೇ ಕಾನೂನಿನ ಮೇರೆಗೆ ಯಾವುದೇ ಕ್ರಮವನ್ನು ಕೈಗೊಂಡಿರುವ ಕಾರಣದಿಂದ, ಆ ವಿಧಾನಮಂಡಲವು ಕಾರ್ಯನಡೆಸುವುದು ಸ್ಥಗಿತವಾಗಿರುವಾಗ, ಆಡಳಿತಗಾರನು ಅಂಥ ವಿಸರ್ಜನೆಯ ಅಥವಾ ಸ್ಥಗಿತದ ಕಾಲಾವಧಿಯಲ್ಲಿ ಯಾವುದೇ ಅಧ್ಯಾದೇಶವನ್ನು ಹೊರಡಿಸತಕ್ಕದ್ದಲ್ಲ.

(2) ರಾಷ್ಟ್ರಪತಿಯ ಅನುದೇಶಗಳಿಗನುಸಾರವಾಗಿ ಈ ಅನುಚ್ಛೇದದ ಮೇರೆಗೆ ಹೊರಡಿಸಲಾದ ಅಧ್ಯಾದೇಶವನ್ನು, 239ಎ ಅನುಚ್ಛೇದದ (1)ನೆಯ ಖಂಡದಲ್ಲಿ ಉಲ್ಲಿಖಿತವಾದಂಥ ಯಾವುದೇ ಕಾನೂನಿನಲ್ಲಿ ಆ ಬಗ್ಗೆ ಒಳಗೊಂಡಿರುವ ಉಪಬಂಧಗಳನ್ನು ಅನುಸರಿಸಿ ಯುಕ್ತ ರೀತಿಯಲ್ಲಿ ಆ ಒಕ್ಕೂಟ ರಾಜ್ಯಕ್ಷೇತ್ರದ ವಿಧಾನ ಮಂಡಲದಿಂದ ಅಧಿನಿಯಮಿತವಾದ ಒಂದು ಅಧಿನಿಯಮವೆಂಬುದಾಗಿ ಭಾವಿಸತಕ್ಕದ್ದು, ಆದರೆ ಅಂಥ ಪ್ರತಿಯೊಂದು ಅಧ್ಯಾದೇಶವನ್ನು,-

(ಎ) ಆ ಒಕ್ಕೂಟ ರಾಜ್ಯಕ್ಷೇತ್ರದ ವಿಧಾನ ಮಂಡಲದ ಮುಂದೆ ಇರಿಸತಕ್ಕದ್ದು ಮತ್ತು ವಿಧಾನಮಂಡಲವು ಮತ್ತೆ ಅಧಿವೇಶನ ಸೇರಿದಾಗಿನಿಂದ ಆರು ವಾರಗಳು ಮುಕ್ತಾಯವಾದ ಅನಂತರ ಅದು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು ಅಥವಾ ಆ ಅವಧಿಗೆ ಮುಂಚಿತವಾಗಿ ಆ ಅಧ್ಯಾದೇಶವನ್ನು ತಿರಸ್ಕರಿಸುವ ನಿರ್ಣಯವು ವಿಧಾನಮಂಡಲದಿಂದ ಅಂಗೀಕೃತವಾದರೆ ಆ ನಿರ್ಣಯವು ಅಂಗೀಕೃತವಾದೊಡನೆಯೇ ಅದು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು; ಮತ್ತು

(ಬಿ) ರಾಷ್ಟ್ರಪತಿಯಿಂದ ಆ ಬಗ್ಗೆ ಅನುದೇಶಗಳನ್ನು ಪಡೆದುಕೊಂಡ ಆಡಳಿತಗಾರನು ಯಾವುದೇ ಕಾಲದಲ್ಲಿ ಆ ಅಧ್ಯಾದೇಶವನ್ನು ಹಿಂತೆಗೆದುಕೊಳ್ಳಬಹುದು.

(3) 239ಎ ಅನುಚ್ಛೇದದ (1)ನೆಯ ಖಂಡದಲ್ಲಿ ಉಲ್ಲಿಖಿತವಾದಂಥ ಯಾವುದೇ ಕಾನೂನಿನಲ್ಲಿ ಆ ಬಗ್ಗೆ ಒಳಗೊಂಡಿರುವ ಉಪಬಂಧಗಳನ್ನು ಅನುಸರಿಸಿ ಮಾಡಿದ ಒಕ್ಕೂಟ ರಾಜ್ಯಕ್ಷೇತ್ರದ ವಿಧಾನ ಮಂಡಲದ ಅಧಿನಿಯಮದಲ್ಲಿ ಅಧಿನಿಯಮಿತಗೊಳಿಸಿದ್ದರೆ ಸಿಂಧುವಾಗದೆ ಇರುತ್ತಿದ್ದ ಯಾವುದೇ ಉಪಬಂಧವನ್ನು, ಈ ಅನುಚ್ಛೇದದ ಮೇರೆಗಿನ ಅಧ್ಯಾದೇಶದ ಮೂಲಕ ಮಾಡಿದ್ದರೆ ಮತ್ತು ಮಾಡಿರುವಷ್ಟರಮಟ್ಟಿಗೆ ಅದು ಶೂನ್ಯವಾಗತಕ್ಕದ್ದು.]

[4]* * *

---

1. 1971ನೇ ಇಸವಿಯ ಸಂವಿಧಾನ (ಇಪ್ಪತ್ತೇಳನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (30-12-1971ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1987ರ ಗೋವ, ದಾಮನ್ ಮತ್ತು ದೀವ್ (ಪುನಾರಚನೆ) ಅಧಿನಿಯಮದ (1987ರ 18) 63ನೇ ಪ್ರಕರಣದ ಮೂಲಕ "239ಎ ಅನುಚ್ಛೇದದ (1)ನೇ ಖಂಡದಲ್ಲಿ ಉಲ್ಲೇಖಿಸಲಾದ ಒಕ್ಕೂಟ ರಾಜ್ಯಕ್ಷೇತ್ರದ" ಎಂಬುದಕ್ಕೆ ಬದಲಾಗಿ (30-5-1987ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. 2006ನೇ ಇಸವಿಯ ಪಾಂಡಿಚೇರಿ (ಹೆಸರು ಬದಲಾವಣೆ) ಅಧಿನಿಯಮದ (2006ರ 44) 4ನೇ ಪ್ರಕರಣದ ಮೂಲಕ (1.10.2006 ರಿಂದ ಜಾರಿಗೆ ಬರುವಂತೆ) "ಪಾಂಡಿಚೇರಿ"ಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
4. 1975ನೆಯ ಇಸವಿಯ ಸಂವಿಧಾನ (ಮೂವತ್ತೆಂಟನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ (4)ನೇ ಖಂಡವನ್ನು (ಪೂರ್ವಾನ್ವಯವಾಗಿ) ಜಾರಿಗೆ ಬರುವಂತೆ ಸೇರಿಸಲಾಗಿತ್ತು. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 32ನೇ ಪ್ರಕರಣದ ಮೂಲಕ (20-6-79ರಿಂದ ಜಾರಿಗೆ ಬರುವಂತೆ) (4)ನೇ ಖಂಡವನ್ನು ಬಿಟ್ಟುಬಿಡಲಾಗಿದೆ.

**240.** ಕೆಲವು ಒಕ್ಕೂಟ ರಾಜ್ಯ ಕ್ಷೇತ್ರಗಳಿಗಾಗಿ ವಿನಿಯಮಗಳನ್ನು ರಚಿಸಲು ರಾಷ್ಟ್ರಪತಿಯ ಅಧಿಕಾರ:- (1) ರಾಷ್ಟ್ರಪತಿಯು,-

(ಎ) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು;

[1][(ಬಿ) ಲಕ್ಷ ದ್ವೀಪ;]

[2][(ಸಿ) ದಾದ್ರಾ ಮತ್ತು ನಗರ್‌ಹವೇಲಿ;]

[3][(ಡಿ) ದಾಮನ್ ಮತ್ತು ದೀವ್;]

[4][(ಇ) [5][ಪುದುಚೆರಿ];]

[6] * * *

[7] * * *

– ಈ ಒಕ್ಕೂಟ ರಾಜ್ಯಕ್ಷೇತ್ರಗಳ ಶಾಂತಿ, ಪ್ರಗತಿ ಮತ್ತು ಉತ್ತಮ ಆಡಳಿತದ ಬಗ್ಗೆ ವಿನಿಯಮಗಳನ್ನು ರಚಿಸಬಹುದು:

[8][ಪರಂತು, [5][ಪುದುಚೆರಿ] [9][ಒಕ್ಕೂಟ ರಾಜ್ಯಕ್ಷೇತ್ರದ ವಿಧಾನಮಂಡಲವಾಗಿ ಕಾರ್ಯನಿರ್ವಹಿಸಲು 239ಎ ಅನುಚ್ಛೇದದ ಮೇರೆಗೆ ಯಾವುದೇ ನಿಕಾಯವನ್ನು ಸೃಜಿಸಿರುವಲ್ಲಿ, ಆ ವಿಧಾನಮಂಡಲದ ಮೊದಲನೆಯ ಸಭೆಗಾಗಿ ಗೊತ್ತುಮಾಡಿದ ದಿನಾಂಕದಿಂದ ರಾಷ್ಟ್ರಪತಿಯು ಆ ಒಕ್ಕೂಟ ರಾಜ್ಯಕ್ಷೇತ್ರದ ಶಾಂತಿ, ಪ್ರಗತಿ ಮತ್ತು ಉತ್ತಮ ಆಡಳಿತಕ್ಕಾಗಿ ಯಾವುದೇ ವಿನಿಯಮವನ್ನು ರಚಿಸತಕ್ಕದ್ದಲ್ಲ:]

[10][ಮತ್ತೂ ಪರಂತು, [5][ಪುದುಚೆರಿ] ಒಕ್ಕೂಟ ರಾಜ್ಯಕ್ಷೇತ್ರದ ಸಂಬಂಧದಲ್ಲಿ ವಿಧಾನಮಂಡಲವಾಗಿ ಕಾರ್ಯನಿರ್ವಹಿಸುತ್ತಿರುವ ನಿಕಾಯವು ವಿಸರ್ಜನೆಯಾದಾಗಲೆಲ್ಲ ಅಥವಾ 239ಎ ಅನುಚ್ಛೇದದ (1)ನೆಯ ಖಂಡದಲ್ಲಿ ಉಲ್ಲಿಖಿತವಾದಂಥ ಯಾವುದೇ ಕಾನೂನಿನ ಮೇರೆಗೆ ಯಾವುದೇ ಕ್ರಮವನ್ನು ಕೈಗೊಂಡಿರುವ ಕಾರಣದಿಂದ ಅಂಥ ವಿಧಾನಮಂಡಲವಾಗಿ ಆ ನಿಕಾಯವು ಕಾರ್ಯ ನಿರ್ವಹಿಸುವುದು ಸ್ಥಗಿತವಾಗಿರುವಾಗಲೆಲ್ಲ ರಾಷ್ಟ್ರಪತಿಯು ಅಂಥ ವಿಸರ್ಜನೆಯ ಅಥವಾ ಸ್ಥಗಿತದ ಅವಧಿಯಲ್ಲಿ, ಆ ಒಕ್ಕೂಟ ರಾಜ್ಯಕ್ಷೇತ್ರದ ಶಾಂತಿ, ಪ್ರಗತಿ ಮತ್ತು ಉತ್ತಮ ಆಡಳಿತಕ್ಕಾಗಿ ವಿನಿಯಮಗಳನ್ನು ರಚಿಸಬಹುದು.]

---

1. 1973ನೇ ಇಸವಿಯ ಲಕ್ಷದ್ವೀಪ, ಮಿನಿಕೋಯ್ ಮತ್ತು ಅಮೀನ್‌ದೀವಿ ದ್ವೀಪಗಳ (ಹೆಸರಿನ ಬದಲಾವಣೆ) (1973ರ 34) ಅಧಿನಿಯಮದ 4ನೆಯ ಪ್ರಕರಣದ ಮೂಲಕ (ಬಿ) ನಮೂದಿನ ಬದಲಾಗಿ (1-11-73ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1961ನೆಯ ಇಸವಿಯ ಸಂವಿಧಾನ (ಹತ್ತನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
3. 1987ರ ಗೋವಾ, ದಾಮನ್ ಮತ್ತು ದೀವ್ (ಪುನಾರಚನೆ) ಅಧಿನಿಯಮದ (1987ರ 18) 63ನೇ ಪ್ರಕರಣದ ಮೂಲಕ (ಡಿ) ನಮೂದಿಗೆ ಬದಲಾಗಿ (30-5-1987ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
4. 1962ನೇ ಇಸವಿಯ ಸಂವಿಧಾನ (ಹದಿನಾಲ್ಕನೇ ತಿದ್ದುಪಡಿ) ಅಧಿನಿಯಮದ 5 ಮತ್ತು 7ನೇ ಪ್ರಕರಣಗಳ ಮೂಲಕ (16.8.1962 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
5. 2006ನೇ ಇಸವಿಯ ಪಾಂಡಿಚೆರಿ (ಹೆಸರು ಬದಲಾವಣೆ) ಅಧಿನಿಯಮದ (2006ರ 44) 4ನೇ ಪ್ರಕರಣದ ಮೂಲಕ "ಪಾಂಡಿಚೆರಿ"ಗೆ ಬದಲಾಗಿ (1.10.2006 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
6. ಮಿಜೋರಾಂಗೆ ಸಂಬಂಧಿಸಿದ ನಮೂದು (ಎಫ್)ನ್ನು 1986ರ ಮಿಜೋರಾಂ ರಾಜ್ಯ ಅಧಿನಿಯಮದ (1986ರ 34) 39ನೇ ಪ್ರಕರಣದ ಮೂಲಕ (20.2.1987 ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
7. ಅರುಣಾಚಲ ಪ್ರದೇಶಕ್ಕೆ ಸಂಬಂಧಿಸಿದ ನಮೂದು (ಜಿ)ಯನ್ನು 1986ರ ಅರುಣಾಚಲ ಪ್ರದೇಶ ರಾಜ್ಯ ಅಧಿನಿಯಮದ (1986ರ 69) 42ನೇ ಪ್ರಕರಣದ ಮೂಲಕ (20.2.1987 ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
8. 1962 ನೇ ಇಸವಿಯ ಸಂವಿಧಾನ (ಹದಿನಾಲ್ಕನೇ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.
9. 1971 ನೇ ಇಸವಿಯ ಸಂವಿಧಾನ (ಇಪ್ಪತ್ತೇಳನೇ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ "ಗೋವಾ, ದಮನ್ ಮತ್ತು ದೀವ್ ಅಥವಾ ಪಾಂಡಿಚೇರಿ ಒಕ್ಕೂಟ ರಾಜ್ಯ ಕ್ಷೇತ್ರದ" ಎಂಬುದಕ್ಕೆ ಬದಲಾಗಿ (15.2.1972 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
10. 1971 ನೇ ಇಸವಿಯ ಸಂವಿಧಾನ (ಇಪ್ಪತ್ತೇಳನೇ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ (15.2.1972 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(2) ಹಾಗೆ ರಚಿಸಲಾದ ಯಾವುದೇ ವಿನಿಯಮವು ಸಂಸತ್ತು ಮಾಡಿದ ಯಾವುದೇ ಅಧಿನಿಯಮವನ್ನು ಅಥವಾ ತತ್ಕಾಲದಲ್ಲಿ ಆ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಅನ್ವಯವಾಗಬಹುದಾದ [1][ಯಾವುದೇ ಇತರ ಕಾನೂನನ್ನು] ನಿರಸನಗೊಳಿಸಬಹುದು ಅಥವಾ ತಿದ್ದುಪಡಿ ಮಾಡಬಹುದು ಮತ್ತು ಆ ವಿನಿಯಮವನ್ನು ರಾಷ್ಟ್ರಪತಿಯು ಹೊರಡಿಸಿರುವಾಗ ಅದು ಆ ರಾಜ್ಯಕ್ಷೇತ್ರಕ್ಕೆ ಅನ್ವಯವಾಗುವ ಸಂಸತ್ತಿನ ಒಂದು ಅಧಿನಿಯಮದಂತೆಯೇ ಬಲ ಮತ್ತು ಪರಿಣಾಮವುಳ್ಳದ್ದಾಗಿರತಕ್ಕದ್ದು.]

**241. ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಉಚ್ಚ ನ್ಯಾಯಾಲಯಗಳು:-** (1) ಯಾವುದೇ [2][ಒಕ್ಕೂಟ ರಾಜ್ಯಕ್ಷೇತ್ರಕ್ಕೆ] ಸಂಸತ್ತು ಕಾನೂನಿನ ಮೂಲಕ ಒಂದು ಉಚ್ಚ ನ್ಯಾಯಾಲಯವನ್ನು ಸ್ಥಾಪಿಸಬಹುದು ಅಥವಾ ಯಾವುದೇ [3][ಅಂಥ ರಾಜ್ಯ ಕ್ಷೇತ್ರ]ದಲ್ಲಿ ಇರುವ ಯಾವುದೇ ನ್ಯಾಯಾಲಯವನ್ನು ಈ ಸಂವಿಧಾನದ ಎಲ್ಲ ಅಥವಾ ಯಾವುವೇ ಉದ್ದೇಶಗಳಿಗಾಗಿ ಉಚ್ಚ ನ್ಯಾಯಾಲಯವೆಂಬುದಾಗಿ ಘೋಷಿಸಬಹುದು.

(2) 214ನೆಯ ಅನುಚ್ಛೇದದಲ್ಲಿ ಉಲ್ಲೇಖಿತವಾದ ಉಚ್ಚ ನ್ಯಾಯಾಲಯದ ಸಂಬಂಧದಲ್ಲಿ VIನೆಯ ಭಾಗದ Vನೆಯ ಅಧ್ಯಾಯದ ಉಪಬಂಧಗಳು ಅನ್ವಯವಾಗುವಂತೆಯೇ (1)ನೆಯ ಖಂಡದಲ್ಲಿ ಉಲ್ಲೇಖಿತವಾಗಿರುವ ಪ್ರತಿಯೊಂದು ಉಚ್ಚ ನ್ಯಾಯಾಲಯದ ಸಂಬಂಧದಲ್ಲಿ ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಬಹುದಾದಂಥ ಮಾರ್ಪಾಡುಗಳಿಗೆ ಅಥವಾ ವಿನಾಯಿತಿಗಳಿಗೆ ಒಳಪಟ್ಟು ಅವು ಅನ್ವಯಿಸತಕ್ಕದ್ದು.

[4][(3) ಈ ಸಂವಿಧಾನದ ಉಪಬಂಧಗಳಿಗೆ ಮತ್ತು ಈ ಸಂವಿಧಾನದ ಮೂಲಕ ಅಥವಾ ಅದರ ಮೇರೆಗೆ ಸಮುಚಿತ ವಿಧಾನ ಮಂಡಲಕ್ಕೆ ಪ್ರದತ್ತವಾದ ಅಧಿಕಾರಗಳ ಕಾರಣದಿಂದ ಆ ವಿಧಾನ ಮಂಡಲವು ರಚಿಸಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಒಕ್ಕೂಟ ರಾಜ್ಯಕ್ಷೇತ್ರದ ಸಂಬಂಧದಲ್ಲಿ 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುತ್ತಿದ್ದ ಪ್ರತಿಯೊಂದು ಉಚ್ಚ ನ್ಯಾಯಾಲಯವು ಆ ಅಧಿನಿಯಮವು ಪ್ರಾರಂಭವಾದ ತರುವಾಯವೂ, ಆ ರಾಜ್ಯಕ್ಷೇತ್ರದ ಸಂಬಂಧದಲ್ಲಿ ಅಂಥ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವುದನ್ನು ಮುಂದುವರಿಸಿಕೊಂಡು ಹೋಗತಕ್ಕದ್ದು.

(4) ಈ ಅನುಚ್ಛೇದದಲ್ಲಿರುವುದಾವುದೂ, ಯಾವುದೇ ರಾಜ್ಯದಲ್ಲಿರುವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಯಾವುದಾದರೂ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ವಿಸ್ತರಿಸುವುದಕ್ಕೆ ಅಥವಾ ಆ ರಾಜ್ಯಕ್ಷೇತ್ರದಿಂದ ಅಥವಾ ಅದರ ಭಾಗದಿಂದ ಆ ಅಧಿಕಾರ ವ್ಯಾಪ್ತಿಯನ್ನು ಹೊರತುಪಡಿಸುವುದಕ್ಕೆ ಸಂಸತ್ತಿಗೆ ಇರುವ ಅಧಿಕಾರವನ್ನು ಅಲ್ಪೀಕರಿಸುವುದಿಲ್ಲ.]

**242.** [ಕೊಡಗು] 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

---

1. 1971 ನೇ ಇಸವಿಯ ಸಂವಿಧಾನ (ಇಪ್ಪತ್ತೇಳನೇ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ (15.2.1972 ರಿಂದ ಜಾರಿಗೆ ಬರುವಂತೆ) "ಯಾವುದೇ ಚಾಲ್ತಿಯಲ್ಲಿರುವ ಕಾನೂನನ್ನು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

2. 1956 ನೇ ಇಸವಿಯ ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಮತ್ತು ಅನುಸೂಚಿಯ ಮೂಲಕ "ಮೊದಲನೇ ಅನುಸೂಚಿಯ ಭಾಗ ಸಿ ನಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಕೆ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

3. 1956 ನೇ ಇಸವಿಯ ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ "ಅಂಥ ರಾಜ್ಯದಲ್ಲಿ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

4. 1956 ನೇ ಇಸವಿಯ ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಮತ್ತು ಅನುಸೂಚಿಯ ಮೂಲಕ (3) ಮತ್ತು (4)ನೇ ಖಂಡಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

## [1][ಭಾಗ - IX

### ಪಂಚಾಯತಿಗಳು

**243. ಪರಿಭಾಷೆಗಳು:-** ಈ ಭಾಗದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಜಿಲ್ಲೆ" ಎಂದರೆ ಒಂದು ರಾಜ್ಯದಲ್ಲಿನ ಜಿಲ್ಲೆ;

(ಬಿ) "ಗ್ರಾಮಸಭೆ" ಎಂದರೆ ಗ್ರಾಮಮಟ್ಟದಲ್ಲಿ ಪಂಚಾಯತಿ ಪ್ರದೇಶದೊಳಗೆ ಸೇರಿರುವ ಗ್ರಾಮಕ್ಕೆ ಸಂಬಂಧಿಸಿದ ಮತದಾರರ ಪಟ್ಟಿಗಳಲ್ಲಿ ನೋಂದಾಯಿತರಾದ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ನಿಕಾಯ;

(ಸಿ) "ಮಧ್ಯಂತರ ಮಟ್ಟ" ಎಂದರೆ ಈ ಭಾಗದ ಉದ್ದೇಶಗಳಿಗಾಗಿ ಮಧ್ಯಂತರ ಮಟ್ಟವೆಂದು ರಾಜ್ಯದ ರಾಜ್ಯಪಾಲನು ಸಾರ್ವಜನಿಕ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಗ್ರಾಮ ಮತ್ತು ಜಿಲ್ಲೆಯ ನಡುವಣ ಮಟ್ಟ;

(ಡಿ) "ಪಂಚಾಯತಿ" ಎಂದರೆ ಗ್ರಾಮೀಣ ಪ್ರದೇಶಗಳಿಗಾಗಿ 243ಬಿ ಅನುಚ್ಛೇದದ ಮೇರೆಗೆ ರಚಿತವಾದ (ಯಾವುದೇ ಹೆಸರಿನಿಂದ ಕರೆಯುವ) ಒಂದು ಸ್ವಯಮಾಡಳಿತ ಸಂಸ್ಥೆ;

(ಇ) "ಪಂಚಾಯತಿ ಪ್ರದೇಶ" ಎಂದರೆ ಪಂಚಾಯತಿಯ ವ್ಯಾಪ್ತಿ ಪ್ರದೇಶ;

(ಎಫ್) "ಜನಸಂಖ್ಯೆ" ಎಂದರೆ ಯಾವ ಹಿಂದಿನ ಕೊನೆಯ ಸಲದ ಜನಗಣತಿಯ ಸುಸಂಗತ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಜನಗಣತಿಯಲ್ಲಿ ಖಚಿತಪಡಿಸಿಕೊಂಡ ಜನಸಂಖ್ಯೆ;

(ಜಿ) "ಗ್ರಾಮ" ಎಂದರೆ ಈ ಭಾಗದ ಉದ್ದೇಶಗಳಿಗಾಗಿ ರಾಜ್ಯಪಾಲನು ಸಾರ್ವಜನಿಕ ಅಧಿಸೂಚನೆಯ ಮೂಲಕ ಗ್ರಾಮವೆಂದು ನಿರ್ದಿಷ್ಟಪಡಿಸಿದ ಗ್ರಾಮ ಮತ್ತು ಇದು ಹಾಗೆ ನಿರ್ದಿಷ್ಟಪಡಿಸಲಾದ ಗ್ರಾಮಗಳ ಸಮೂಹವನ್ನು ಒಳಗೊಳ್ಳುತ್ತದೆ.

**243ಎ. ಗ್ರಾಮಸಭೆ:-** ಗ್ರಾಮಸಭೆಯು ರಾಜ್ಯದ ವಿಧಾನ ಮಂಡಲವು ಕಾನೂನಿನ ಮೂಲಕ ಉಪಬಂಧಿಸಬಹುದಾದಂಥ ಅಧಿಕಾರಗಳನ್ನು ಗ್ರಾಮಮಟ್ಟದಲ್ಲಿ ಚಲಾಯಿಸಬಹುದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸಬಹುದು.

**243ಬಿ. ಪಂಚಾಯತಿಗಳ ರಚನೆ:-** (1) ಈ ಭಾಗದ ಉಪಬಂಧಗಳಿಗೆ ಅನುಸಾರವಾಗಿ ಪ್ರತಿಯೊಂದು ರಾಜ್ಯದಲ್ಲಿ ಗ್ರಾಮಮಟ್ಟ, ಮಧ್ಯಂತರ ಮಟ್ಟ ಮತ್ತು ಜಿಲ್ಲಾಮಟ್ಟದಲ್ಲಿ ಪಂಚಾಯತಿಗಳನ್ನು ರಚಿಸತಕ್ಕದ್ದು.

(2) (1)ನೇ ಖಂಡದಲ್ಲಿ ಏನೇ ಇದ್ದರೂ, ಇಪ್ಪತ್ತು ಲಕ್ಷಕ್ಕೆ ಮೀರದಷ್ಟು ಜನಸಂಖ್ಯೆಯಿರುವ ರಾಜ್ಯದಲ್ಲಿ ಮಧ್ಯಂತರ ಮಟ್ಟದ ಪಂಚಾಯತಿಗಳನ್ನು ರಚಿಸದೆ ಇರಬಹುದು.

**243ಸಿ. ಪಂಚಾಯತಿಗಳ ಸಂರಚನೆ:-** (1) ಈ ಭಾಗದ ಉಪಬಂಧಗಳಿಗೆ ಒಳಪಟ್ಟು, ರಾಜ್ಯದ ವಿಧಾನ ಮಂಡಲವು ಕಾನೂನಿನ ಮೂಲಕ ಪಂಚಾಯತಿಗಳ ಸಂರಚನೆಗೆ ಸಂಬಂಧಿಸಿದಂತೆ ಉಪಬಂಧಗಳನ್ನು ಮಾಡಬಹುದು:

ಪರಂತು, ಯಾವುದೇ ಮಟ್ಟದ ಪಂಚಾಯತಿ ವ್ಯಾಪ್ತಿ ಪ್ರದೇಶದ ಜನಸಂಖ್ಯೆಯ ಮತ್ತು ಚುನಾವಣೆಯ ಮೂಲಕ ಭರ್ತಿ ಮಾಡಬೇಕಾದ ಅಂಥ ಪಂಚಾಯತಿಯಲ್ಲಿನ ಸ್ಥಾನಗಳ ಸಂಖ್ಯೆಯ ನಡುವಣ ಅನುಪಾತವು ಸಾಧ್ಯವಾದಷ್ಟು ಮಟ್ಟಿಗೆ ರಾಜ್ಯದಾದ್ಯಂತ ಒಂದೇ ರೀತಿ ಇರತಕ್ಕದ್ದು.

(2) ಪಂಚಾಯತಿಯಲ್ಲಿನ ಎಲ್ಲ ಸ್ಥಾನಗಳನ್ನು ಪಂಚಾಯತಿ ಪ್ರದೇಶದಲ್ಲಿನ ಚುನಾವಣಾ ಕ್ಷೇತ್ರಗಳಿಂದ ನೇರ ಚುನಾವಣೆಯ ಮೂಲಕ ಆಯ್ಕೆಗೊಂಡ ವ್ಯಕ್ತಿಗಳಿಂದ ಭರ್ತಿ ಮಾಡತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ, ಪ್ರತಿಯೊಂದು ಪಂಚಾಯತಿ ಪ್ರದೇಶವನ್ನು, ಪ್ರತಿಯೊಂದು ಚುನಾವಣಾ ಕ್ಷೇತ್ರದ ಜನಸಂಖ್ಯೆಯ ಮತ್ತು ಆ ಕ್ಷೇತ್ರಕ್ಕೆ ಹಂಚಿಕೆ ಮಾಡಲಾದ ಸ್ಥಾನಗಳ ಸಂಖ್ಯೆಯ ನಡುವಣ ಅನುಪಾತವು ಸಾಧ್ಯವಾದಷ್ಟು ಮಟ್ಟಿಗೆ ಪಂಚಾಯತಿ ಪ್ರದೇಶದಾದ್ಯಂತ ಒಂದೇ ರೀತಿಯಿರುವಂತೆ ಚುನಾವಣಾ ಕ್ಷೇತ್ರಗಳಾಗಿ ವಿಭಾಗಿಸತಕ್ಕದ್ದು.

---

1. 1992ನೇ ಇಸವಿಯ ಸಂವಿಧಾನ (ಎಪ್ಪತ್ತಮೂರನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (24.4.1993 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ. ಮೂಲ ಭಾಗ IXನ್ನು 1956 ನೇ ಇಸವಿಯ ಸಂವಿಧಾನದ (ಏಳನೇ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ ಬಿಟ್ಟುಬಿಡಲಾಗಿತ್ತು.

(3) ಒಂದು ರಾಜ್ಯದ ವಿಧಾನ ಮಂಡಲವು,-

(ಎ) ಗ್ರಾಮಮಟ್ಟದ ಪಂಚಾಯತಿ ಅಧ್ಯಕ್ಷರಿಗೆ ಮಧ್ಯಂತರ ಮಟ್ಟದ ಪಂಚಾಯತಿಗಳಲ್ಲಿ ಅಥವಾ ಮಧ್ಯಂತರ ಮಟ್ಟದ ಪಂಚಾಯತಿಗಳಿಲ್ಲದಿರುವ ರಾಜ್ಯದ ಸಂದರ್ಭದಲ್ಲಿ ಅವರಿಗೆ ಜಿಲ್ಲಾ ಮಟ್ಟದ ಪಂಚಾಯತಿಗಳಲ್ಲಿ;

(ಬಿ) ಮಧ್ಯಂತರ ಮಟ್ಟದ ಪಂಚಾಯತಿಗಳ ಅಧ್ಯಕ್ಷರಿಗೆ ಜಿಲ್ಲಾ ಮಟ್ಟದ ಪಂಚಾಯತಿಗಳಲ್ಲಿ;

(ಸಿ) ಗ್ರಾಮಮಟ್ಟವನ್ನು ಹೊರತುಪಡಿಸಿ ಇತರ ಮಟ್ಟದ ಪಂಚಾಯತಿ ಪ್ರದೇಶವನ್ನು ಪೂರ್ಣವಾಗಿ ಅಥವಾ ಭಾಗಶಃ ಒಳಗೊಳ್ಳುವಂಥ ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಲೋಕಸಭಾ ಸದಸ್ಯರಿಗೆ ಅಥವಾ ರಾಜ್ಯ ವಿಧಾನಸಭಾ ಸದಸ್ಯರಿಗೆ ಅಂಥ ಪಂಚಾಯತಿಯಲ್ಲಿ ;

(ಡಿ) ರಾಜ್ಯಸಭಾ ಸದಸ್ಯರಿಗೆ ಮತ್ತು ವಿಧಾನ ಪರಿಷತ್ ಸದಸ್ಯರಿಗೆ,-

(i) ಮಧ್ಯಂತರ ಮಟ್ಟದ ಪಂಚಾಯತಿ ಪ್ರದೇಶದೊಳಗೆ ಅವರು ಮತದಾರರೆಂದು ನೋಂದಾಯಿಸಿಕೊಂಡಿರುವಲ್ಲಿ ಅಂಥ ಮಧ್ಯಂತರ ಮಟ್ಟದ ಪಂಚಾಯತಿಯಲ್ಲಿ;

(ii) ಜಿಲ್ಲಾ ಮಟ್ಟದ ಪಂಚಾಯತಿ ಪ್ರದೇಶದೊಳಗೆ ಅವರು ಮತದಾರರೆಂದು ನೋಂದಾಯಿಸಿಕೊಂಡಿರುವಲ್ಲಿ ಅಂಥ ಜಿಲ್ಲಾ ಮಟ್ಟದ ಪಂಚಾಯತಿಯಲ್ಲಿ

- ಪ್ರಾತಿನಿಧ್ಯವನ್ನು ಕಾನೂನಿನ ಮೂಲಕ ಒದಗಿಸಬಹುದು.

(4) ಪಂಚಾಯತಿಯ ಅಧ್ಯಕ್ಷನು ಅಥವಾ ಪಂಚಾಯತಿಯ ಇತರ ಸದಸ್ಯರು ಪಂಚಾಯತಿ ಪ್ರದೇಶದಲ್ಲಿನ ಚುನಾವಣಾ ಕ್ಷೇತ್ರದಿಂದ ನೇರವಾಗಿ ಆಯ್ಕೆಯಾಗಿರಲಿ ಅಥವಾ ಆಗಿಲ್ಲದಿರಲಿ, ಪಂಚಾಯತಿಗಳ ಸಭೆಗಳಲ್ಲಿ ಮತ ನೀಡಲು ಹಕ್ಕುಳ್ಳವರಾಗಿರತಕ್ಕದ್ದು.

(5)(ಎ) ಗ್ರಾಮ ಮಟ್ಟದ ಪಂಚಾಯತಿಯ ಅಧ್ಯಕ್ಷನು ರಾಜ್ಯ ವಿಧಾನಮಂಡಲವು ಕಾನೂನಿನ ಮೂಲಕ ಉಪಬಂಧಿಸಬಹುದಾದಂಥ ರೀತಿಯಲ್ಲಿ ಚುನಾಯಿತನಾಗತಕ್ಕದ್ದು; ಮತ್ತು

(ಬಿ) ಮಧ್ಯಂತರ ಮಟ್ಟದ ಪಂಚಾಯತಿಯ ಅಥವಾ ಜಿಲ್ಲಾ ಮಟ್ಟದ ಪಂಚಾಯತಿಯ ಚುನಾಯಿತ ಸದಸ್ಯರು ತಮ್ಮ ಪೈಕಿ ಒಬ್ಬನನ್ನು ಆ ಪಂಚಾಯತಿಯ ಅಧ್ಯಕ್ಷನನ್ನಾಗಿ ಚುನಾಯಿಸತಕ್ಕದ್ದು.

**243ಡಿ. ಸ್ಥಾನಗಳ ಮೀಸಲಾತಿ:**- (1) ಪ್ರತಿಯೊಂದು ಪಂಚಾಯತಿಯಲ್ಲಿ,-

(ಎ) ಅನುಸೂಚಿತ ಜಾತಿಗಳಿಗೆ; ಮತ್ತು

(ಬಿ) ಅನುಸೂಚಿತ ಬುಡಕಟ್ಟುಗಳಿಗೆ

- ಸ್ಥಾನಗಳನ್ನು ಮೀಸಲಿಡತಕ್ಕದ್ದು ಮತ್ತು ಹಾಗೆ ಮೀಸಲಿಡಲಾದ ಸ್ಥಾನಗಳ ಸಂಖ್ಯೆಯು, ಆ ಪಂಚಾಯತಿಯಲ್ಲಿ ನೇರ ಚುನಾವಣೆಯ ಮೂಲಕ ಭರ್ತಿ ಮಾಡಬೇಕಾದ ಸ್ಥಾನಗಳ ಒಟ್ಟು ಸಂಖ್ಯೆಗೆ ಆ ಪಂಚಾಯತಿ ಪ್ರದೇಶದಲ್ಲಿ ಅನುಸೂಚಿತ ಜಾತಿಗಳ ಅಥವಾ ಆ ಪಂಚಾಯತಿ ಪ್ರದೇಶದಲ್ಲಿ ಅನುಸೂಚಿತ ಬುಡಕಟ್ಟುಗಳ ಜನಸಂಖ್ಯೆಯು ಆ ಪ್ರದೇಶದ ಒಟ್ಟು ಜನಸಂಖ್ಯೆಗೆ ಯಾವ ಪ್ರಮಾಣವನ್ನು ಹೊಂದಿರುವುದೋ ಸಾಧ್ಯವಾದಷ್ಟು ಮಟ್ಟಿಗೆ ಅದೇ ಪ್ರಮಾಣವನ್ನು ಹೊಂದಿರತಕ್ಕದ್ದು ಮತ್ತು ಅಂಥ ಸ್ಥಾನಗಳನ್ನು ಪಂಚಾಯತಿಯ ಬೇರೆಬೇರೆ ಚುನಾವಣಾ ಕ್ಷೇತ್ರಗಳಿಗೆ ಸರದಿಯ ಪ್ರಕಾರ ಹಂಚಿಕೆ ಮಾಡತಕ್ಕದ್ದು.

(2) (1)ನೇ ಖಂಡದ ಮೇರೆಗೆ ಮೀಸಲಿಡಲಾದ ಸ್ಥಾನಗಳ ಒಟ್ಟು ಸಂಖ್ಯೆಯ ಮೂರನೆಯ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸ್ಥಾನಗಳನ್ನು ಅನುಸೂಚಿತ ಜಾತಿಗಳಿಗೆ ಸೇರಿದ ಅಥವಾ ಸಂದರ್ಭಾನುಸಾರ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಮಹಿಳೆಯರಿಗೆ ಮೀಸಲಿರಿಸತಕ್ಕದ್ದು.

(3) ಪ್ರತಿಯೊಂದು ಪಂಚಾಯತಿಯಲ್ಲಿ ನೇರ ಚುನಾವಣೆಯ ಮೂಲಕ ಭರ್ತಿಮಾಡಬೇಕಾದ ಒಟ್ಟು ಸಂಖ್ಯೆಯ ಸ್ಥಾನಗಳ ಪೈಕಿ (ಅನುಸೂಚಿತ ಜಾತಿಗಳಿಗೆ ಸೇರಿದ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಮಹಿಳೆಯರಿಗೆ ಮೀಸಲಿಡಲಾದ ಸ್ಥಾನಗಳ ಸಂಖ್ಯೆಯನ್ನು ಒಳಗೊಂಡು) ಮೂರನೆಯ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡತಕ್ಕದ್ದು ಮತ್ತು ಅಂಥ ಸ್ಥಾನಗಳನ್ನು ಪಂಚಾಯತಿಯ ಬೇರೆ ಬೇರೆ ಚುನಾವಣಾ ಕ್ಷೇತ್ರಗಳಿಗೆ ಸರದಿಯ ಪ್ರಕಾರ ಹಂಚಿಕೆ ಮಾಡತಕ್ಕದ್ದು.

(4) ಗ್ರಾಮಮಟ್ಟದ ಅಥವಾ ಯಾವುದೇ ಇತರ ಮಟ್ಟದ ಪಂಚಾಯತಿಗಳ ಅಧ್ಯಕ್ಷರ ಪದಗಳನ್ನು ಒಂದು ರಾಜ್ಯದ ವಿಧಾನ ಮಂಡಲವು ಕಾನೂನಿನ ಮೂಲಕ ಉಪಬಂಧಿಸಬಹುದಾದಂಥ ರೀತಿಯಲ್ಲಿ ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಬುಡಕಟ್ಟುಗಳಿಗೆ ಮತ್ತು ಮಹಿಳೆಯರಿಗೆ ಮೀಸಲಿಡತಕ್ಕದ್ದು:

ಪರಂತು, ಯಾವುದೇ ರಾಜ್ಯದಲ್ಲಿ ಪ್ರತಿಯೊಂದು ಮಟ್ಟದ ಪಂಚಾಯತಿಗಳಲ್ಲಿ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟ ಅಧ್ಯಕ್ಷರ ಪದಗಳ ಸಂಖ್ಯೆಯು, ಪ್ರತಿಯೊಂದು ಮಟ್ಟದ ಪಂಚಾಯತಿಗಳಲ್ಲಿನ ಅಂಥ ಪದಗಳ ಒಟ್ಟು ಸಂಖ್ಯೆಗೆ, ಆ ರಾಜ್ಯದಲ್ಲಿನ ಅನುಸೂಚಿತ ಜಾತಿಗಳ ಅಥವಾ ಆ ರಾಜ್ಯದಲ್ಲಿನ ಅನುಸೂಚಿತ ಬುಡಕಟ್ಟುಗಳ ಜನಸಂಖ್ಯೆಯು, ಆ ರಾಜ್ಯದ ಒಟ್ಟು ಜನಸಂಖ್ಯೆಗೆ ಯಾವ ಪ್ರಮಾಣವನ್ನು ಹೊಂದಿರುವುದೋ ಸಾಧ್ಯವಾದಷ್ಟು ಮಟ್ಟಿಗೆ ಅದೇ ಪ್ರಮಾಣವನ್ನು ಹೊಂದಿರತಕ್ಕದ್ದು;

ಮತ್ತೂ ಪರಂತು, ಪ್ರತಿಯೊಂದು ಮಟ್ಟದ ಪಂಚಾಯತಿಗಳ ಅಧ್ಯಕ್ಷರ ಪದಗಳ ಒಟ್ಟು ಸಂಖ್ಯೆಯ ಮೂರನೆಯ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡತಕ್ಕದ್ದು:

ಮತ್ತು ಪರಂತು, ಈ ಖಂಡದ ಮೇರೆಗೆ ಮೀಸಲಿಡಲಾದ ಪದಗಳ ಸಂಖ್ಯೆಯನ್ನು ಪ್ರತಿಯೊಂದು ಮಟ್ಟದಲ್ಲಿ ವಿವಿಧ ಪಂಚಾಯತಿಗಳಿಗೆ ಸರದಿಯ ಮೇಲೆ ಹಂಚಿಕೆ ಮಾಡತಕ್ಕದ್ದು.

(5) (1) ಮತ್ತು (2)ನೇ ಖಂಡಗಳ ಮೇರೆಗಿನ ಸ್ಥಾನಗಳ ಮೀಸಲಾತಿಯು ಮತ್ತು (4)ನೇ ಖಂಡದ ಮೇರೆಗೆ ಅಧ್ಯಕ್ಷರ ಪದಗಳ (ಮಹಿಳೆಯರ ಮೀಸಲಾತಿಯನ್ನು ಹೊರತುಪಡಿಸಿ) ಮೀಸಲಾತಿಯು, 334ನೇ ಅನುಚ್ಛೇದದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯು ಮುಕ್ತಾಯವಾದ ತರುವಾಯ ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು.

(6) ಈ ಭಾಗದಲ್ಲಿರುವುದು ಯಾವುದೂ, ಹಿಂದುಳಿದ ನಾಗರಿಕರ ವರ್ಗದವರಿಗಾಗಿ ಯಾವುದೇ ಪಂಚಾಯತಿಯಲ್ಲಿ ಸ್ಥಾನಗಳನ್ನು ಅಥವಾ ಯಾವುದೇ ಮಟ್ಟದ ಪಂಚಾಯತಿಯಲ್ಲಿ ಅಧ್ಯಕ್ಷರ ಪದಗಳನ್ನು ಮೀಸಲಿಡುವುದಕ್ಕಾಗಿ ಯಾವುದೇ ಉಪಬಂಧ ಮಾಡದಂತೆ ರಾಜ್ಯ ವಿಧಾನಮಂಡಲವನ್ನು ಪ್ರತಿಬಂಧಿಸತಕ್ಕದ್ದಲ್ಲ.

**243ಇ. ಪಂಚಾಯತಿಗಳ ಅವಧಿ, ಇತ್ಯಾದಿ:-** (1) ಪ್ರತಿಯೊಂದು ಪಂಚಾಯತಿಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಐದು ವರ್ಷಗಳಿಗಿಂತ ಮುಂಚಿತವಾಗಿ ವಿಸರ್ಜಿಸಿದ್ದ ಹೊರತು, ಅದರ ಮೊದಲ ಸಭೆಗಾಗಿ ಗೊತ್ತುಪಡಿಸಿದ ದಿನಾಂಕದಿಂದ ಅದು ಐದು ವರ್ಷಗಳ ಅವಧಿಯವರೆಗೆ ಮುಂದುವರಿಯತಕ್ಕದ್ದು, ಆದರೆ ಅದಕ್ಕಿಂತ ಹೆಚ್ಚು ಅವಧಿಯವರೆಗೆ ಅಲ್ಲ.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಯಾವುದೇ ತಿದ್ದುಪಡಿಯು ಅಂಥ ತಿದ್ದುಪಡಿಗೆ ನಿಕಟಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿರುವಂಥ ಯಾವುದೇ ಮಟ್ಟದ ಪಂಚಾಯತಿಯು, (1)ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಅದರ ಅವಧಿಯು ಮುಕ್ತಾಯಗೊಳ್ಳುವವರೆಗೆ, ವಿಸರ್ಜನೆಗೆ ಕಾರಣವಾಗುವ ಪರಿಣಾಮವನ್ನು ಹೊಂದಿರತಕ್ಕದ್ದಲ್ಲ.

(3) ಪಂಚಾಯತಿಯನ್ನು ರಚಿಸಲು ನಡೆಸಬೇಕಾದ ಚುನಾವಣೆಯನ್ನು,-

(ಎ) (1)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ಅದರ ಅವಧಿಯು ಮುಕ್ತಾಯಗೊಳ್ಳುವುದಕ್ಕೆ ಮುಂಚೆ;

(ಬಿ) ಅದರ ವಿಸರ್ಜನೆಯ ದಿನಾಂಕದಿಂದ ಆರು ತಿಂಗಳ ಅವಧಿಯು ಮುಕ್ತಾಯಗೊಳ್ಳುವುದಕ್ಕೆ ಮುಂಚೆ

- ಪೂರ್ಣಗೊಳಿಸತಕ್ಕದ್ದು :

ಪರಂತು, ವಿಸರ್ಜಿತ ಪಂಚಾಯತಿಯು ಯಾವ ಉಳಿದ ಅವಧಿಯವರೆಗೆ ಮುಂದುವರಿಯಬಹುದಾಗಿತ್ತೋ ಆ ಅವಧಿಯು ಆರು ತಿಂಗಳಿಗಿಂತ ಕಡಿಮೆಯಿರುವಲ್ಲಿ, ಅಂಥ ಅವಧಿಗೆ ಪಂಚಾಯತಿಯನ್ನು ರಚಿಸಲು ಈ ಖಂಡದ ಮೇರೆಗೆ ಯಾವುದೇ ಚುನಾವಣೆ ನಡೆಸುವುದು ಅವಶ್ಯವಾಗಿರತಕ್ಕದ್ದಲ್ಲ.

(4) ಒಂದು ಪಂಚಾಯತಿಯು ಅದರ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ವಿಸರ್ಜಿತವಾದ ತರುವಾಯ ರಚಿತವಾದ ಪಂಚಾಯತಿಯು, ವಿಸರ್ಜಿತ ಪಂಚಾಯತಿಯು ಹಾಗೆ ವಿಸರ್ಜಿತವಾಗದೆ ಹೋಗಿದ್ದರೆ ಅದು (1)ನೇ ಖಂಡದ ಮೇರೆಗೆ ಯಾವ ಅವಧಿಯವರೆಗೆ ಮುಂದುವರೆಯಬಹುದಾಗಿತ್ತೋ ಆ ಉಳಿದ ಅವಧಿಯವರೆಗೆ ಮಾತ್ರ ಮುಂದುವರೆಯತಕ್ಕದ್ದು.

**243ಎಫ್. ಸದಸ್ಯತ್ವಕ್ಕೆ ಅನರ್ಹತೆಗಳು:-** (1) ಒಬ್ಬ ವ್ಯಕ್ತಿಯು,-

(ಎ) ಸಂಬಂಧಪಟ್ಟ ರಾಜ್ಯದ ವಿಧಾನಮಂಡಲದ ಚುನಾವಣೆಗಳ ಉದ್ದೇಶಗಳಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅವನನ್ನು ಅನರ್ಹಗೊಳಿಸಿದಾಗ:

ಪರಂತು, ಇಪ್ಪತ್ತೊಂದು ವರ್ಷ ವಯಸ್ಸು ತುಂಬಿರುವ ಯಾರೇ ವ್ಯಕ್ತಿಯನ್ನು, ಅವನು ಇಪ್ಪತ್ತೈದು ವರ್ಷಕ್ಕಿಂತ ಕಡಿಮೆ ವಯಸ್ಸಿನವನೆಂಬ ಕಾರಣದ ಮೇಲೆ ಅನರ್ಹಗೊಳಿಸತಕ್ಕದ್ದಲ್ಲ;

(ಬಿ) ರಾಜ್ಯ ವಿಧಾನಮಂಡಲವು ರಚಿಸಿದ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅವನನ್ನು ಹಾಗೆ ಅನರ್ಹಗೊಳಿಸಿರುವಾಗ

– ಪಂಚಾಯತಿಯ ಸದಸ್ಯನಾಗಿ ಚುನಾಯಿತನಾಗಲು ಮತ್ತು ಅದರ ಸದಸ್ಯನಾಗಿರಲು ಅನರ್ಹನಾಗತಕ್ಕದ್ದು,

(2) ಪಂಚಾಯತಿಯ ಒಬ್ಬ ಸದಸ್ಯನು, (1)ನೆಯ ಖಂಡದಲ್ಲಿ ಉಲ್ಲೇಖಿಸಲಾದ ಯಾವುವೇ ಅನರ್ಹತೆಗಳಿಗೆ ಒಳಗಾಗಿರುವನೇ ಹೇಗೆ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅಂಥ ಪ್ರಶ್ನೆಯನ್ನು ರಾಜ್ಯ ವಿಧಾನಮಂಡಲವು ಕಾನೂನಿನ ಮೂಲಕ ಗೊತ್ತುಪಡಿಸಬಹುದಾದಂಥ ಪ್ರಾಧಿಕಾರಕ್ಕೆ ಮತ್ತು ಉಪಬಂಧಿಸಬಹುದಾದಂಥ ರೀತಿಯಲ್ಲಿ ತೀರ್ಮಾನಕ್ಕಾಗಿ ಕಳುಹಿಸತಕ್ಕದ್ದು.

**243ಜಿ. ಪಂಚಾಯತಿಗಳ ಅಧಿಕಾರಗಳು, ಪ್ರಾಧಿಕಾರ ಮತ್ತು ಜವಾಬ್ದಾರಿಗಳು:-** ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು ಒಂದು ರಾಜ್ಯದ ವಿಧಾನಮಂಡಲವು, ಕಾನೂನಿನ ಮೂಲಕ, ಆ ಪಂಚಾಯತಿಗಳಿಗೆ, ಅವು ಸ್ವಯಮಾಡಳಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವುದಕ್ಕೆ ಅನುಕೂಲವಾಗಲು ಅವಶ್ಯವಾಗಬಹುದಾದಂಥ ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ನೀಡಬಹುದು ಮತ್ತು ಅಂಥ ಕಾನೂನು,-

(ಎ) ಆರ್ಥಿಕಾಭಿವೃದ್ಧಿಯ ಮತ್ತು ಸಾಮಾಜಿಕ ನ್ಯಾಯ ಯೋಜನೆಗಳನ್ನು ಸಿದ್ಧಪಡಿಸುವುದಕ್ಕೆ;

(ಬಿ) ಹನ್ನೊಂದನೇ ಅನುಸೂಚಿಯಲ್ಲಿ ಪಟ್ಟಿಮಾಡಿದ ವಿಷಯಗಳೂ ಸೇರಿದಂತೆ, ಪಂಚಾಯತಿಗಳಿಗೆ ವಹಿಸಬಹುದಾದಂಥ ಆರ್ಥಿಕಾಭಿವೃದ್ಧಿಯ ಮತ್ತು ಸಾಮಾಜಿಕ ನ್ಯಾಯದ ಪರಿಯೋಜನೆಗಳ ಅನುಷ್ಠಾನಕ್ಕೆ

– ಸಂಬಂಧಪಟ್ಟಂತೆ, ಆ ಕಾನೂನಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಸೂಕ್ತಮಟ್ಟದಲ್ಲಿ ಪಂಚಾಯತಿಗಳಿಗೆ ಅಧಿಕಾರಗಳನ್ನು ಮತ್ತು ಜವಾಬ್ದಾರಿಗಳನ್ನು ವಹಿಸಿಕೊಡುವುದಕ್ಕಾಗಿ ಉಪಬಂಧಗಳನ್ನು ಒಳಗೊಂಡಿರಬಹುದು.

**243ಹೆಚ್. ತೆರಿಗೆಗಳನ್ನು ವಿಧಿಸಲು ಪಂಚಾಯತಿಗಳ ಅಧಿಕಾರಗಳು ಮತ್ತು ಅವುಗಳ ನಿಧಿಗಳು:-** ಒಂದು ರಾಜ್ಯ ವಿಧಾನಮಂಡಲವು ಕಾನೂನಿನ ಮೂಲಕ, ಅಂಥ ಕಾನೂನಿನಲ್ಲಿ ನಿರ್ದಿಷ್ಟಪಡಿಸಬಹುದಾದ,-

(ಎ) ಅಂಥ ಪ್ರಕ್ರಿಯೆಗೆ ಅನುಸಾರವಾಗಿ ಮತ್ತು ಅಂಥ ಪರಿಮಿತಿಗಳಿಗೆ ಒಳಪಟ್ಟು ಅಂಥ ತೆರಿಗೆಗಳು, ಸುಂಕಗಳು, ದಾರಿಸುಂಕಗಳು ಮತ್ತು ಫೀಜುಗಳನ್ನು ವಿಧಿಸಲು, ವಸೂಲಿಮಾಡಲು ಮತ್ತು ವಿನಿಯೋಗಿಸಲು ಪಂಚಾಯತಿಗೆ ಅಧಿಕಾರ ನೀಡಬಹುದು;

(ಬಿ) ಅಂಥ ಉದ್ದೇಶಗಳಿಗಾಗಿ ಮತ್ತು ಅಂಥ ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಟ್ಟು ರಾಜ್ಯ ಸರ್ಕಾರವು ವಿಧಿಸಿದ ಮತ್ತು ವಸೂಲಿ ಮಾಡಿದಂಥ ತೆರಿಗೆಗಳು, ಸುಂಕಗಳು, ದಾರಿಸುಂಕಗಳು ಮತ್ತು ಫೀಜುಗಳನ್ನು ಪಂಚಾಯತಿಗೆ ಹಸ್ತಾಂತರಿಸಬಹುದು;

(ಸಿ) ರಾಜ್ಯದ ಸಂಚಿತ ನಿಧಿಯಿಂದ ಪಂಚಾಯತಿಗಳಿಗೆ ಅಂಥ ಸಹಾಯಾನುದಾನಗಳನ್ನು ನೀಡುವುದಕ್ಕಾಗಿ ಉಪಬಂಧಿಸಬಹುದು; ಮತ್ತು

(ಡಿ) ಅನುಕ್ರಮವಾಗಿ ಪಂಚಾಯತಿಗಳು ಅಥವಾ ಅವುಗಳ ಪರವಾಗಿ ಸ್ವೀಕರಿಸಿದ ಎಲ್ಲ ಹಣವನ್ನು ಜಮೆ ಮಾಡುವುದಕ್ಕಾಗಿ ಅಂಥ ನಿಧಿಗಳನ್ನು ರಚಿಸಲು ಮತ್ತು ಅದರಿಂದ ಅಂಥ ಹಣವನ್ನು ತೆಗೆಯಲು ಸಹ ಉಪಬಂಧಿಸಬಹುದು.

**243ಐ. ಹಣಕಾಸು ಸ್ಥಿತಿಗತಿಯನ್ನು ಪರಿಶೀಲಿಸಲು ಹಣಕಾಸು ಆಯೋಗದ ರಚನೆ:–** (1) ಒಂದು ರಾಜ್ಯದ ರಾಜ್ಯಪಾಲನು, ಸಂವಿಧಾನ (ಎಪ್ಪತ್ತಮೂರನೇ ತಿದ್ದುಪಡಿ) ಅಧಿನಿಯಮ, 1992 ಪ್ರಾರಂಭವಾದ ದಿನಾಂಕದಿಂದ ಒಂದು ವರ್ಷದೊಳಗೆ ಮತ್ತು ಆ ತರುವಾಯ ಪ್ರತಿ ಐದನೇ ವರ್ಷವು ಮುಕ್ತಾಯವಾದಾಗ ಸಾಧ್ಯವಾದಷ್ಟು ಬೇಗನೆ ಪಂಚಾಯತಿಗಳ ಹಣಕಾಸು ಸ್ಥಿತಿಗತಿಗಳನ್ನು ಪರಿಶೀಲಿಸಲು; ಮತ್ತು,–

(ಎ) ಈ ಮುಂದಿನ ವಿಷಯಗಳಿಗೆ ಎಂದರೆ:–

(i) ಈ ಭಾಗದ ಮೇರೆಗೆ ರಾಜ್ಯದ ಮತ್ತು ಪಂಚಾಯತಿಗಳ ನಡುವೆ ಭಾಗ ಮಾಡಿಕೊಳ್ಳಬಹುದಾದಂಥ ಮತ್ತು ರಾಜ್ಯವು ವಿಧಿಸಬಹುದಾದ ತೆರಿಗೆಗಳ, ಸುಂಕಗಳ, ದಾರಿಸುಂಕಗಳ ಮತ್ತು ಫೀಜುಗಳ ನಿವ್ವಳ ಉತ್ಪತ್ತಿಯನ್ನು ರಾಜ್ಯದ ಮತ್ತು ಪಂಚಾಯತಿಗಳ ನಡುವೆ ವಿತರಿಸುವುದಕ್ಕೆ ಮತ್ತು ಎಲ್ಲ ಮಟ್ಟಗಳ ಪಂಚಾಯತಿಗಳಿಗೆ ಅಂಥ ಉತ್ಪತ್ತಿಯಲ್ಲಿನ ಆಯಾ ಪಂಚಾಯತಿಗಳ ಪಾಲನ್ನು ಹಂಚುವುದಕ್ಕೆ;

(ii) ಪಂಚಾಯತಿಗಳಿಗೆ ವಹಿಸಿಕೊಡಬಹುದಾದ ಅಥವಾ ಅವುಗಳು ವಿನಿಯೋಗಿಸಬಹುದಾದ ತೆರಿಗೆಗಳು, ಶುಲ್ಕಗಳು, ದಾರಿಸುಂಕಗಳು ಮತ್ತು ಫೀಜುಗಳನ್ನು ನಿರ್ಧರಿಸುವುದಕ್ಕೆ;

(iii) ರಾಜ್ಯದ ಸಂಚಿತ ನಿಧಿಯಿಂದ ಪಂಚಾಯತಿಗಳಿಗೆ ನೀಡುವ ಸಹಾಯಾನುದಾನಕ್ಕೆ;

(ಬಿ) ಪಂಚಾಯತಿಗಳ ಹಣಕಾಸು ಸ್ಥಿತಿಗತಿಯನ್ನು ಸುಧಾರಿಸಲು ಕೈಗೊಳ್ಳಬೇಕಾದ ಕ್ರಮಗಳಿಗೆ;

(ಸಿ) ಪಂಚಾಯತಿಗಳ ಸುಭದ್ರ ಹಣಕಾಸಿನ ದೃಷ್ಟಿಯಿಂದ ರಾಜ್ಯಪಾಲನು ಹಣಕಾಸು ಆಯೋಗಕ್ಕೆ ಕಳುಹಿಸಬಹುದಾದ ಯಾವುದೇ ಇತರ ವಿಷಯಕ್ಕೆ

– ಅನ್ವಯವಾಗುವ ತತ್ವಗಳನ್ನು ಕುರಿತು ರಾಜ್ಯಪಾಲನಿಗೆ ಶಿಫಾರಸು ಮಾಡಲು ಹಣಕಾಸು ಆಯೋಗವನ್ನು ರಚಿಸತಕ್ಕದ್ದು.

(2) ಒಂದು ರಾಜ್ಯದ ವಿಧಾನಮಂಡಲವು ಆಯೋಗದ ರಚನೆ, ಅದರ ಸದಸ್ಯರಾಗಿ ನೇಮಕಕ್ಕೆ ಅವಶ್ಯವಾದ ಅರ್ಹತೆಗಳನ್ನು ಮತ್ತು ಅವರನ್ನು ಆಯ್ಕೆಮಾಡಬೇಕಾದ ರೀತಿಯನ್ನು ಕಾನೂನಿನ ಮೂಲಕ ಉಪಬಂಧಿಸಬಹುದು.

(3) ಆಯೋಗವು, ತನ್ನ ಕಾರ್ಯವಿಧಾನವನ್ನು ನಿರ್ಧರಿಸತಕ್ಕದ್ದು ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ರಾಜ್ಯ ವಿಧಾನ ಮಂಡಲವು ಕಾನೂನಿನ ಮೂಲಕ ಅದಕ್ಕೆ ಪ್ರದಾನ ಮಾಡಬಹುದಾದಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು.

(4) ರಾಜ್ಯಪಾಲನು, ಈ ಅನುಚ್ಛೇದದ ಮೇರೆಗೆ ಆಯೋಗವು ಮಾಡಿದ ಪ್ರತಿಯೊಂದು ಶಿಫಾರಸನ್ನು ಅದರ ಮೇರೆಗೆ ಕೈಗೊಂಡ ಕ್ರಮದ ಬಗೆಗಿನ ವಿವರಣಾತ್ಮಕ ಪತ್ರದ ಸಹಿತ, ರಾಜ್ಯ ವಿಧಾನಮಂಡಲದ ಮುಂದೆ ಇಡುವಂತೆ ಮಾಡತಕ್ಕದ್ದು.

**243ಜೆ. ಪಂಚಾಯತಿಗಳ ಲೆಕ್ಕಪತ್ರಗಳ ಪರಿಶೋಧನೆ:–** (1) ಒಂದು ರಾಜ್ಯದ ವಿಧಾನಮಂಡಲವು, ಪಂಚಾಯತಿಗಳು ಲೆಕ್ಕ ಪತ್ರಗಳನ್ನು ಇಟ್ಟುಕೊಂಡು ಬರಲು ಮತ್ತು ಅಂಥ ಲೆಕ್ಕಪತ್ರಗಳನ್ನು ಪರಿಶೋಧಿಸಲು ಕಾನೂನಿನ ಮೂಲಕ ಉಪಬಂಧಗಳನ್ನು ಮಾಡಬಹುದು.

**243ಕೆ. ಪಂಚಾಯತಿಗಳಿಗೆ ಚುನಾವಣೆಗಳು:–** (1) ಪಂಚಾಯತಿಗಳಿಗೆ ನಡೆಯುವ ಎಲ್ಲ ಚುನಾವಣೆಗಳಿಗೆ ಸಂಬಂಧಪಟ್ಟಂತೆ ಮತದಾರರ ಪಟ್ಟಿಗಳ ತಯಾರಿಕೆಯ ಮತ್ತು ಆ ಎಲ್ಲ ಚುನಾವಣೆಗಳ ನಿರ್ವಹಣೆಯ ಮೇಲಿನ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ರಾಜ್ಯಪಾಲನಿಂದ ನೇಮಕಗೊಳ್ಳುವ ರಾಜ್ಯ ಚುನಾವಣಾ ಆಯುಕ್ತನನ್ನು ಒಳಗೊಂಡಿರುವ ರಾಜ್ಯ ಚುನಾವಣಾ ಆಯೋಗದಲ್ಲಿ ನಿಹಿತವಾಗಿರತಕ್ಕದ್ದು.

(2) ಒಂದು ರಾಜ್ಯದ ವಿಧಾನಮಂಡಲವು ಮಾಡಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ರಾಜ್ಯ ಚುನಾವಣಾ ಆಯುಕ್ತನ ಸೇವಾ ಷರತ್ತುಗಳು ಮತ್ತು ಪದಾವಧಿಯು, ರಾಜ್ಯಪಾಲನು ನಿಯಮದ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕದ್ದು:

ಪರಂತು, ರಾಜ್ಯ ಚುನಾವಣಾ ಆಯುಕ್ತನನ್ನು ಅವನ ಪದದಿಂದ, ಉಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ತೆಗೆದುಹಾಕುವ ರೀತಿಯಲ್ಲಿಯೇ ಮತ್ತು ಅವೇ ಕಾರಣಗಳ ಮೇಲೆ ಹೊರತು ತೆಗೆದುಹಾಕತಕ್ಕದ್ದಲ್ಲ ಮತ್ತು ರಾಜ್ಯ ಚುನಾವಣಾ ಆಯುಕ್ತನ ಸೇವಾ ಷರತ್ತುಗಳನ್ನು, ಅವನ ನೇಮಕದ ತರುವಾಯ ಅವನಿಗೆ ಅನಾನುಕೂಲವಾಗುವಂತೆ ಬದಲಾಯಿಸತಕ್ಕದ್ದಲ್ಲ.

(3) (1)ನೇ ಖಂಡದ ಮೂಲಕ ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸಲಾದ ಪ್ರಕಾರ್ಯಗಳನ್ನು ನಿರ್ವಹಿಸಲು ಅವಶ್ಯವಾಗಬಹುದಾದಂಥ ಸಿಬ್ಬಂದಿಯನ್ನು ಒದಗಿಸುವಂತೆ ರಾಜ್ಯ ಚುನಾವಣಾ ಆಯೋಗವು ಮನವಿ ಸಲ್ಲಿಸಿದಾಗ ರಾಜ್ಯದ ರಾಜ್ಯಪಾಲನು ರಾಜ್ಯ ಚುನಾವಣಾ ಆಯೋಗಕ್ಕೆ ಅಂಥ ಸಿಬ್ಬಂದಿಯನ್ನು ಒದಗಿಸತಕ್ಕದ್ದು.

(4) ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ಪಂಚಾಯತಿಗಳ ಚುನಾವಣೆಗಳಿಗೆ ಅನ್ವಯವಾಗುವ ಎಲ್ಲ ವಿಷಯಗಳ ಬಗ್ಗೆ ಅಥವಾ ಅವುಗಳ ಸಂಬಂಧದಲ್ಲಿ ವಿಧಾನ ಮಂಡಲವು ಕಾನೂನಿನ ಮೂಲಕ ಉಪಬಂಧವನ್ನು ಮಾಡಬಹುದು.

**243ಎಲ್. ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಅನ್ವಯ:–** ಈ ಭಾಗದ ಉಪಬಂಧಗಳು ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಅನ್ವಯವಾಗತಕ್ಕದ್ದು ಮತ್ತು ಅವುಗಳನ್ನು ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಅನ್ವಯಿಸುವಾಗ ರಾಜ್ಯದ ರಾಜ್ಯಪಾಲನಿಗೆ ಮಾಡಲಾದ ಉಲ್ಲೇಖಗಳು 239ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರನಿಗೆ ಮಾಡಲಾದ ಉಲ್ಲೇಖಗಳಾಗಿದ್ದರೆ ಹೇಗೋ ಹಾಗೆ ಮತ್ತು ರಾಜ್ಯ ವಿಧಾನಮಂಡಲಕ್ಕೆ ಅಥವಾ ವಿಧಾನಸಭೆಗೆ ಮಾಡಲಾದ ಉಲ್ಲೇಖಗಳು, ವಿಧಾನ ಸಭೆಯನ್ನು ಹೊಂದಿರುವ ಒಕ್ಕೂಟ ರಾಜ್ಯಕ್ಷೇತ್ರದ ಸಂಬಂಧದಲ್ಲಿ ಆ ವಿಧಾನಸಭೆಗೆ ಮಾಡಲಾದ ಉಲ್ಲೇಖಗಳಾಗಿದ್ದರೆ ಹೇಗೋ ಹಾಗೆ, ಆ ಉಪಬಂಧಗಳು ಪರಿಣಾಮಕಾರಿಯಾಗತಕ್ಕದ್ದು:

ಪರಂತು, ರಾಷ್ಟ್ರಪತಿಯು, ಸಾರ್ವಜನಿಕ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು ಈ ಭಾಗದ ಉಪಬಂಧಗಳು ಯಾವುದೇ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು.

**243ಎಂ. ಕೆಲವು ಪ್ರದೇಶಗಳಿಗೆ ಈ ಭಾಗವು ಅನ್ವಯವಾಗದಿರುವುದು:–** (1) ಈ ಭಾಗದಲ್ಲಿರುವುದು ಯಾವುದೂ, 244ನೇ ಅನುಚ್ಛೇದದ (1)ನೇ ಖಂಡದಲ್ಲಿ ಉಲ್ಲೇಖಿಸಲಾದ ಅನುಸೂಚಿತ ಪ್ರದೇಶಗಳಿಗೆ ಮತ್ತು (2)ನೇ ಖಂಡದಲ್ಲಿ ಉಲ್ಲೇಖಿಸಲಾದ ಬುಡಕಟ್ಟು ಪ್ರದೇಶಗಳಿಗೆ ಅನ್ವಯವಾಗತಕ್ಕದ್ದಲ್ಲ.

(2) ಈ ಭಾಗದಲ್ಲಿರುವುದು ಯಾವುದೂ,–

(ಎ) ನಾಗಾಲ್ಯಾಂಡ್, ಮೇಘಾಲಯ ಮತ್ತು ಮಿಜೋರಾಂ ರಾಜ್ಯಗಳಿಗೆ;

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಜಿಲ್ಲಾ ಪರಿಷತ್‌ಗಳನ್ನು ಹೊಂದಿರುವಂಥ ಮಣಿಪುರ ರಾಜ್ಯದಲ್ಲಿನ ಗುಡ್ಡಗಾಡು ಪ್ರದೇಶಗಳಿಗೆ

– ಅನ್ವಯವಾಗತಕ್ಕದ್ದಲ್ಲ.

(3) ಈ ಭಾಗದಲ್ಲಿರುವುದು ಯಾವುದೂ,–

(ಎ) ಜಿಲ್ಲಾ ಮಟ್ಟದ ಪಂಚಾಯತಿಗಳಿಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಡಾರ್ಜಿಲಿಂಗ್ ಗೂರ್ಖಾ ಗುಡ್ಡಗಾಡು ಪರಿಷತ್ತನ್ನು ಹೊಂದಿರುವಂಥ ಪಶ್ಚಿಮ ಬಂಗಾಳ ರಾಜ್ಯದಲ್ಲಿನ ಡಾರ್ಜಿಲಿಂಗ್ ಜಿಲ್ಲಾ ಗುಡ್ಡಗಾಡು ಪ್ರದೇಶಗಳಿಗೆ ಅನ್ವಯವಾಗತಕ್ಕದ್ದಲ್ಲ;

(ಬಿ) ಸದರಿ ಕಾನೂನಿನ ಮೇರೆಗೆ ರಚಿತವಾದ ಡಾರ್ಜಿಲಿಂಗ್ ಗೂರ್ಖಾ ಗುಡ್ಡಗಾಡು ಪರಿಷತ್ತಿನ ಪ್ರಕಾರ್ಯಗಳಿಗೆ ಮತ್ತು ಅಧಿಕಾರಗಳಿಗೆ ಬಾಧಕ ಉಂಟುಮಾಡುವುದಾಗಿ ಅರ್ಥೈಸತಕ್ಕದ್ದಲ್ಲ.

[1][(3ಎ) 243ಡಿ ಅನುಚ್ಛೇದದಲ್ಲಿ ಇರುವುದು ಯಾವುದೂ, ಅನುಸೂಚಿತ ಜಾತಿಗಳ ಸ್ಥಾನಗಳ ಮೀಸಲಾತಿಗೆ ಸಂಬಂಧಿಸಿದಂತೆ ಅರುಣಾಚಲ ಪ್ರದೇಶಕ್ಕೆ ಅನ್ವಯವಾಗತಕ್ಕದ್ದಲ್ಲ.]

---

1. 2000ದ ಇಸವಿಯ ಸಂವಿಧಾನ (ಎಂಬತ್ತಮೂರನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (8.9.2000 ದಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(4) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,-

(ಎ) (1)ನೇ ಖಂಡದಲ್ಲಿ ಉಲ್ಲೇಖಿಸಲಾದ ಪ್ರದೇಶಗಳು, ಯಾವುವಾದರೂ ಇದ್ದರೆ, ಅವುಗಳನ್ನು ಹೊರತುಪಡಿಸಿ (2)ನೇ ಖಂಡದ (ಎ) ಉಪಖಂಡದಲ್ಲಿ ಉಲ್ಲೇಖಿಸಲಾದ ಒಂದು ರಾಜ್ಯದ ವಿಧಾನ ಮಂಡಲವು, ಆ ರಾಜ್ಯಕ್ಕೆ ಈ ಭಾಗವನ್ನು ವಿಸ್ತರಿಸಬೇಕೆಂದು ಆ ರಾಜ್ಯದ ವಿಧಾನಸಭೆಯ ಒಟ್ಟು ಸದಸ್ಯರ ಬಹುಮತದ ಮೂಲಕ ಮತ್ತು ಆ ಸದನದಲ್ಲಿ ಹಾಜರಿದ್ದು ಮತ ನೀಡುವ ಸದಸ್ಯರ ಮೂರನೇ ಎರಡು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರ ಬಹುಮತದ ಮೂಲಕ ಒಂದು ನಿರ್ಣಯವನ್ನು ಅಂಗೀಕರಿಸಿದರೆ, ಅದು ಕಾನೂನಿನ ಮೂಲಕ ಹಾಗೆ ವಿಸ್ತರಿಸಬಹುದು;

(ಬಿ) ಸಂಸತ್ತು, ಕಾನೂನಿನ ಮೂಲಕ ಈ ಭಾಗದ ಉಪಬಂಧಗಳನ್ನು, (1)ನೇ ಖಂಡದಲ್ಲಿ ಉಲ್ಲೇಖಿಸಲಾದ ಅನುಸೂಚಿತ ಪ್ರದೇಶಗಳು ಮತ್ತು ಬುಡಕಟ್ಟು ಪ್ರದೇಶಗಳಿಗೆ ಅಂಥ ಕಾನೂನಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳು ಮತ್ತು ಮಾರ್ಪಾಟುಗಳಿಗೆ ಒಳಪಟ್ಟು ವಿಸ್ತರಿಸಬಹುದು ಮತ್ತು ಯಾವುದೇ ಅಂಥ ಕಾನೂನನ್ನು 368ನೇ ಅನುಚ್ಛೇದದ ಉದ್ದೇಶಗಳಿಗಾಗಿ ಈ ಸಂವಿಧಾನದ ಒಂದು ತಿದ್ದುಪಡಿಯೆಂದು ಭಾವಿಸತಕ್ಕದ್ದಲ್ಲ.

**243ಎನ್. ಜಾರಿಯಲ್ಲಿರುವ ಕಾನೂನುಗಳನ್ನು ಮತ್ತು ಅಸ್ತಿತ್ವದಲ್ಲಿರುವ ಪಂಚಾಯತಿಗಳನ್ನು ಮುಂದುವರೆಸುವುದು:-** ಈ ಭಾಗದಲ್ಲಿ ಏನೇ ಇದ್ದರೂ, ಈ ಭಾಗದ ಉಪಬಂಧಗಳಿಗೆ ಅಸಂಗತವಾಗಿರುವಂಥ, ಸಂವಿಧಾನ (ಎಪ್ಪತ್ತಮೂರನೇ ತಿದ್ದುಪಡಿ) ಅಧಿನಿಯಮ, 1992ರ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಪಂಚಾಯತಿಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಯಾವುದೇ ಉಪಬಂಧವು, ಸಕ್ಷಮ ವಿಧಾನಮಂಡಲದಿಂದ ಅಥವಾ ಇತರ ಸಕ್ಷಮ ಪ್ರಾಧಿಕಾರದಿಂದ ತಿದ್ದುಪಡಿಯಾಗುವವರೆಗೆ ಅಥವಾ ನಿರಸಿತವಾಗುವವರೆಗೆ ಅಥವಾ ಅಂಥ ಪ್ರಾರಂಭದಿಂದ ಒಂದು ವರ್ಷ ಮುಕ್ತಾಯವಾಗುವವರೆಗೆ, ಇವುಗಳಲ್ಲಿ ಯಾವುದು ಮುಂಚಿತವೋ ಅಲ್ಲಿಯವರೆಗೆ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು:

ಪರಂತು, ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲ ಪಂಚಾಯತಿಗಳನ್ನು, ಆ ರಾಜ್ಯದ ವಿಧಾನಸಭೆಯು, ಅಥವಾ ವಿಧಾನ ಪರಿಷತ್ತನ್ನು ಹೊಂದಿರುವ ರಾಜ್ಯದ ಸಂದರ್ಭದಲ್ಲಿ ಆ ರಾಜ್ಯದ ವಿಧಾನಮಂಡಲದ ಪ್ರತಿಯೊಂದು ಸದನವು ನಿರ್ಣಯದ ಮೂಲಕ ಅವಧಿಗೆ ಮುಂಚೆ ವಿಸರ್ಜಿಸಿದ ಹೊರತು, ಆ ಪಂಚಾಯತಿಗಳ ಅವಧಿಯು ಮುಕ್ತಾಯವಾಗುವವರೆಗೆ ಅವು ಮುಂದುವರೆಯತಕ್ಕದ್ದು.

**243ಓ. ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯವು ಮಧ್ಯಪ್ರವೇಶಿಸುವುದರ ಪ್ರತಿಷೇಧ:-** ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,-

(ಎ) ಚುನಾವಣಾ ಕ್ಷೇತ್ರಗಳ ಸೀಮಾನಿರ್ಣಯಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ಸಿಂಧುತ್ವವನ್ನು ಅಥವಾ 243ಕೆ ಅನುಚ್ಛೇದದ ಮೇರೆಗೆ ಮಾಡಲಾದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಅಂಥ ಚುನಾವಣಾ ಕ್ಷೇತ್ರಗಳ ಸ್ಥಾನಗಳ ಹಂಚಿಕೆಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ;

(ಬಿ) ಯಾವುದೇ ಪಂಚಾಯತಿಗೆ ನಡೆಯುವ ಯಾವುದೇ ಚುನಾವಣೆಯನ್ನು, ರಾಜ್ಯ ವಿಧಾನ ಮಂಡಲವು ರಚಿಸಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಲಾದಂಥ ಪ್ರಾಧಿಕಾರಕ್ಕೆ ಮತ್ತು ಉಪಬಂಧಿಸಲಾದಂಥ ರೀತಿಯಲ್ಲಿ ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಿದ ಹೊರತು ಪ್ರಶ್ನಿಸತಕ್ಕದ್ದಲ್ಲ.]

## [1][ಭಾಗ - IXಎ

### ಪೌರಸಭೆಗಳು

**243ಪಿ. ಪರಿಭಾಷೆಗಳು:–** ಈ ಭಾಗದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಮಿತಿ" ಎಂದರೆ 243ಎಸ್ ಅನುಚ್ಛೇದದ ಮೇರೆಗೆ ರಚಿತವಾದ ಒಂದು ಸಮಿತಿ;

(ಬಿ) "ಜಿಲ್ಲೆ" ಎಂದರೆ ಒಂದು ರಾಜ್ಯದಲ್ಲಿನ ಜಿಲ್ಲೆ;

(ಸಿ) "ಮಹಾನಗರ ಪ್ರದೇಶ" ಎಂದರೆ ಹತ್ತು ಲಕ್ಷ ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ, ಒಂದು ಅಥವಾ ಹೆಚ್ಚು ಜಿಲ್ಲೆಗಳಲ್ಲಿ ಅಡಕವಾಗಿರುವ ಮತ್ತು ಎರಡು ಅಥವಾ ಹೆಚ್ಚು ಪೌರಸಭೆಗಳನ್ನು ಅಥವಾ ಪಂಚಾಯತಿಗಳನ್ನು ಅಥವಾ ಹೊಂದಿಕೊಂಡಿರುವ ಇತರ ಪ್ರದೇಶಗಳನ್ನು ಒಳಗೊಂಡಿರುವ ಮತ್ತು ರಾಜ್ಯಪಾಲನು ಈ ಭಾಗದ ಉದ್ದೇಶಗಳಿಗಾಗಿ ಸಾರ್ವಜನಿಕ ಅಧಿಸೂಚನೆಯ ಮೂಲಕ ಮಹಾನಗರ ಪ್ರದೇಶವೆಂದು ನಿರ್ದಿಷ್ಟಪಡಿಸಿದ ಪ್ರದೇಶ;

(ಡಿ) "ಪೌರಸಭಾ ಪ್ರದೇಶ" ಎಂದರೆ ರಾಜ್ಯಪಾಲನು ಅಧಿಸೂಚಿಸಿದಂಥ ಪೌರಸಭೆಯ ವ್ಯಾಪ್ತಿ ಪ್ರದೇಶ;

(ಇ) "ಪೌರಸಭೆ" ಎಂದರೆ 243ಕ್ಯೂ ಅನುಚ್ಛೇದದ ಮೇರೆಗೆ ರಚಿತವಾದ ಒಂದು ಸ್ವಯಮಾಡಳಿತ ಸಂಸ್ಥೆ;

(ಎಫ್) "ಪಂಚಾಯತಿ" ಎಂದರೆ 243ಬಿ ಅನುಚ್ಛೇದದ ಮೇರೆಗೆ ರಚಿತವಾದ ಒಂದು ಪಂಚಾಯತಿ;

(ಜಿ) "ಜನಸಂಖ್ಯೆ" ಎಂದರೆ ಯಾವ ಹಿಂದಿನ ಕೊನೆಯ ಜನಗಣತಿಯ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಜನಗಣತಿಯಲ್ಲಿ ಖಚಿತಪಡಿಸಿಕೊಂಡ ಜನಸಂಖ್ಯೆ.

**243ಕ್ಯೂ. ಪೌರಸಭೆಗಳ ರಚನೆ:–** (1) ಪ್ರತಿಯೊಂದು ರಾಜ್ಯದಲ್ಲಿ,–

(ಎ) ಪರಿವರ್ತನೆಗೊಳ್ಳುತ್ತಿರುವ ಪ್ರದೇಶಕ್ಕೆ, ಎಂದರೆ, ಗ್ರಾಮೀಣ ಪ್ರದೇಶವು ನಗರ ಪ್ರದೇಶವಾಗಿ ಪರಿವರ್ತನೆಗೊಳ್ಳುತ್ತಿರುವ ಪ್ರದೇಶಕ್ಕೆ (ಯಾವುದೇ ಹೆಸರಿನಿಂದ ಕರೆಯಲಾಗಲಿ) ಒಂದು ನಗರ ಪಂಚಾಯತಿಯನ್ನು;

(ಬಿ) ಸಣ್ಣ ನಗರ ಪ್ರದೇಶಕ್ಕೆ ನಗರ ಸಭೆಯನ್ನು; ಮತ್ತು

(ಸಿ) ದೊಡ್ಡ ನಗರ ಪ್ರದೇಶಕ್ಕೆ ನಗರ ಪಾಲಿಕೆಯನ್ನು

– ಈ ಭಾಗದ ಉಪಬಂಧಗಳಿಗೆ ಅನುಸಾರವಾಗಿ ರಚಿಸತಕ್ಕದ್ದು:

ಪರಂತು, ರಾಜ್ಯಪಾಲನು ನಗರ ಪ್ರದೇಶದ ವಿಸ್ತೀರ್ಣ ಮತ್ತು ಆ ಪ್ರದೇಶದಲ್ಲಿ ಕೈಗಾರಿಕಾ ಕಾರ್ಯ ಸಂಸ್ಥೆಗಳು ಒದಗಿಸಿರುವ ಅಥವಾ ಒದಗಿಸಲು ಉದ್ದೇಶಿಸಿರುವ ಪೌರ ಸೌಕರ್ಯಗಳನ್ನು ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ಇತರ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಸಾರ್ವಜನಿಕ ಅಧಿಸೂಚನೆಯ ಮೂಲಕ ಕೈಗಾರಿಕಾ ಪ್ರದೇಶವೆಂದು ನಿರ್ದಿಷ್ಟಪಡಿಸಬಹುದಾದಂಥ ನಗರ ಪ್ರದೇಶದಲ್ಲಿ ಅಥವಾ ಅದರ ಭಾಗದಲ್ಲಿ ಈ ಖಂಡದ ಮೇರೆಗೆ ಪೌರಸಭೆಯನ್ನು ರಚಿಸದೆ ಇರಬಹುದು.

(2) ಈ ಅನುಚ್ಛೇದದಲ್ಲಿ "ಪರಿವರ್ತನೆಗೊಳ್ಳುತ್ತಿರುವ ಪ್ರದೇಶ", "ಸಣ್ಣ ನಗರ ಪ್ರದೇಶ" ಅಥವಾ "ದೊಡ್ಡ ನಗರ ಪ್ರದೇಶ" ಎಂದರೆ ರಾಜ್ಯಪಾಲನು ಆ ಪ್ರದೇಶದ ಜನಸಂಖ್ಯೆ, ಅದರಲ್ಲಿರುವ ಜನಸಂಖ್ಯೆಯ ಸಾಂದ್ರತೆ, ಸ್ಥಳೀಯ ಆಡಳಿತಕ್ಕೆ ದೊರೆಯುವ ರಾಜಸ್ವ, ಕೃಷಿಯೇತರ ಚಟುವಟಿಕೆಗಳಲ್ಲಿ ಉದ್ಯೋಗದ ಶೇಕಡಾ ಪ್ರಮಾಣ, ಆರ್ಥಿಕ ಪ್ರಾಮುಖ್ಯತೆ ಅಥವಾ ಅವನು ಸೂಕ್ತವೆಂದು ಭಾವಿಸಬಹುದಾದಂಥ ಇತರ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು, ಈ ಭಾಗದ ಉದ್ದೇಶಗಳಿಗಾಗಿ ಸಾರ್ವಜನಿಕ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶ.

---

1. 1992ರ ಸಂವಿಧಾನ (ಎಪ್ಪತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (1.6.93 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

**243ಆರ್. ಪೌರಸಭೆಗಳ ಸಂರಚನೆ:-** (1) (2)ನೇ ಖಂಡದಲ್ಲಿ ಉಪಬಂಧಿಸಿರುವುದನ್ನುಳಿದು, ಪೌರಸಭೆಯಲ್ಲಿನ ಎಲ್ಲ ಸ್ಥಾನಗಳನ್ನು, ಪೌರಸಭಾ ಪ್ರದೇಶದಲ್ಲಿನ ಚುನಾವಣಾ ಕ್ಷೇತ್ರಗಳಿಂದ ನೇರ ಚುನಾವಣೆಯ ಮೂಲಕ ಚುನಾಯಿತರಾದ ವ್ಯಕ್ತಿಗಳಿಂದ ಭರ್ತಿಮಾಡತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಪ್ರತಿಯೊಂದು ಪೌರಸಭಾ ಪ್ರದೇಶವನ್ನು ವಾರ್ಡ್‌ಗಳೆಂದು ಕರೆಯಲಾಗುವ ಚುನಾವಣಾ ಕ್ಷೇತ್ರಗಳಾಗಿ ವಿಭಾಗಿಸತಕ್ಕದ್ದು.

(2) ರಾಜ್ಯ ವಿಧಾನಮಂಡಲವು,-

(ಎ) (i) ಪೌರಸಭಾ ಆಡಳಿತದಲ್ಲಿ ವಿಶೇಷ ಜ್ಞಾನ ಅಥವಾ ಅನುಭವವನ್ನು ಹೊಂದಿರುವ ವ್ಯಕ್ತಿಗಳಿಗೆ;

(ii) ಪೌರಸಭಾ ಪ್ರದೇಶವನ್ನು ಪೂರ್ಣವಾಗಿ ಅಥವಾ ಭಾಗಶಃ ಒಳಗೊಂಡಿರುವಂಥ ಚುನಾವಣಾ ಕ್ಷೇತ್ರಗಳನ್ನು ಪ್ರತಿನಿಧಿಸುವ ಲೋಕಸಭಾ ಸದಸ್ಯರಿಗೆ ಮತ್ತು ರಾಜ್ಯ ವಿಧಾನಸಭಾ ಸದಸ್ಯರಿಗೆ;

(iii) ಪೌರಸಭಾ ಪ್ರದೇಶದೊಳಗೆ ಮತದಾರರಾಗಿ ನೋಂದಾಯಿತರಾಗಿರುವ ರಾಜ್ಯ ಸಭಾ ಸದಸ್ಯರಿಗೆ ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರಿಗೆ;

(iv) 243ಎಸ್ ಅನುಚ್ಛೇದದ 5ನೇ ಖಂಡದ ಮೇರೆಗೆ ರಚಿತವಾದ ಸಮಿತಿಗಳ ಅಧ್ಯಕ್ಷರುಗಳಿಗೆ

- ಕಾನೂನಿನ ಮೂಲಕ ಪೌರಸಭೆಯಲ್ಲಿ ಪ್ರಾತಿನಿಧ್ಯವನ್ನು ಒದಗಿಸಬಹುದು:

ಪರಂತು, (i)ನೇ ಪ್ಯಾರಾದಲ್ಲಿ ಉಲ್ಲೇಖಿಸಲಾಗಿರುವ ವ್ಯಕ್ತಿಗಳು ಪೌರಸಭೆಯ ಸಭೆಗಳಲ್ಲಿ ಮತ ನೀಡುವ ಹಕ್ಕನ್ನು ಹೊಂದಿರತಕ್ಕದ್ದಲ್ಲ;

(ಬಿ) ಪೌರಸಭೆಯ ಅಧ್ಯಕ್ಷರ ಚುನಾವಣೆಯ ರೀತಿಯನ್ನು ಕಾನೂನಿನ ಮೂಲಕ ಉಪಬಂಧಿಸಬಹುದು.

**243ಎಸ್. ವಾರ್ಡ್ ಸಮಿತಿಗಳು, ಇತ್ಯಾದಿಗಳ ರಚನೆ ಮತ್ತು ಸಂರಚನೆ:-** (1) ಮೂರು ಲಕ್ಷ ಅಥವಾ ಅದಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪೌರಸಭಾ ವ್ಯಾಪ್ತಿ ಪ್ರದೇಶದೊಳಗೆ ಒಂದು ಅಥವಾ ಹೆಚ್ಚು ವಾರ್ಡ್‌ಗಳನ್ನು ಒಳಗೊಂಡಿರುವ ವಾರ್ಡು ಸಮಿತಿಗಳನ್ನು ರಚಿಸತಕ್ಕದ್ದು.

(2) ರಾಜ್ಯ ವಿಧಾನ ಮಂಡಲವು,-

(ಎ) ವಾರ್ಡ್ ಸಮಿತಿಯ ಸಂರಚನೆ ಮತ್ತು ವ್ಯಾಪ್ತಿ ಪ್ರದೇಶಕ್ಕೆ;

(ಬಿ) ವಾರ್ಡ್ ಸಮಿತಿಯಲ್ಲಿನ ಸ್ಥಾನಗಳನ್ನು ಭರ್ತಿಮಾಡತಕ್ಕ ರೀತಿಗೆ

- ಸಂಬಂಧಿಸಿದಂತೆ ಕಾನೂನಿನ ಮೂಲಕ ಉಪಬಂಧವನ್ನು ಕಲ್ಪಿಸಬಹುದು.

(3) ವಾರ್ಡ್ ಸಮಿತಿಯ ವ್ಯಾಪ್ತಿ ಪ್ರದೇಶದೊಳಗಿರುವ ಒಂದು ವಾರ್ಡ್‌ನ್ನು ಪ್ರತಿನಿಧಿಸುವ ಪೌರಸಭೆಯ ಸದಸ್ಯನು ಆ ಸಮಿತಿಯ ಸದಸ್ಯನಾಗಿರತಕ್ಕದ್ದು.

(4) ಒಂದು ವಾರ್ಡ್ ಸಮಿತಿಯು,-

(ಎ) ಒಂದು ವಾರ್ಡನ್ನು ಒಳಗೊಂಡಿರುವಲ್ಲಿ, ಪೌರಸಭೆಯಲ್ಲಿ ಆ ವಾರ್ಡನ್ನು ಪ್ರತಿನಿಧಿಸುವ ಸದಸ್ಯನು; ಅಥವಾ

(ಬಿ) ಎರಡು ಅಥವಾ ಹೆಚ್ಚು ವಾರ್ಡ್‌ಗಳನ್ನು ಒಳಗೊಂಡಿರುವಲ್ಲಿ, ವಾರ್ಡ್ ಸಮಿತಿಯ ಸದಸ್ಯರಿಂದ ಆಯ್ಕೆಗೊಂಡ ಪೌರಸಭೆಯಲ್ಲಿ ಅಂಥ ವಾರ್ಡ್‌ಗಳನ್ನು ಪ್ರತಿನಿಧಿಸುವ ಸದಸ್ಯರಲ್ಲಿ ಒಬ್ಬ ಸದಸ್ಯನು ಆ ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು.

(5) ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ವಾರ್ಡ್ ಸಮಿತಿಗಳ ಜೊತೆಗೆ ಇತರ ಸಮಿತಿಗಳನ್ನು ರಚಿಸಲು ಯಾವುದೇ ಉಪಬಂಧವನ್ನು ಮಾಡದಂತೆ ರಾಜ್ಯವಿಧಾನಮಂಡಲವನ್ನು ಪ್ರತಿಬಂಧಿಸುತ್ತದೆಂದು ಭಾವಿಸತಕ್ಕದ್ದಲ್ಲ.

**243ಟಿ. ಸ್ಥಾನಗಳ ಮೀಸಲಾತಿ:-** (1) ಪ್ರತಿಯೊಂದು ಪೌರಸಭೆಯಲ್ಲಿ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸ್ಥಾನಗಳನ್ನು ಮೀಸಲಿಡತಕ್ಕದ್ದು ಮತ್ತು ಹಾಗೆ ಮೀಸಲಿಡಲಾದ ಸ್ಥಾನಗಳ ಸಂಖ್ಯೆಯು ಆ ಪೌರಸಭೆಯಲ್ಲಿ ನೇರ ಚುನಾವಣೆಯ ಮೂಲಕ ಭರ್ತಿ ಮಾಡಬೇಕಾದ ಸ್ಥಾನಗಳ ಒಟ್ಟು ಸಂಖ್ಯೆಗೆ, ಆ ಪೌರಸಭೆಯ ಪ್ರದೇಶದಲ್ಲಿ ಅನುಸೂಚಿತ ಜಾತಿಗಳ ಅಥವಾ ಪೌರಸಭಾ ಪ್ರದೇಶದಲ್ಲಿ ಅನುಸೂಚಿತ ಬುಡಕಟ್ಟುಗಳ ಜನಸಂಖ್ಯೆಯು, ಆ ಪೌರಸಭಾ ಪ್ರದೇಶದ ಒಟ್ಟು ಜನಸಂಖ್ಯೆಗೆ ಯಾವ ಪ್ರಮಾಣವನ್ನು ಹೊಂದಿರುವುದೋ ಸಾಧ್ಯವಾದಷ್ಟು ಮಟ್ಟಿಗೆ ಅದೇ ಪ್ರಮಾಣವನ್ನು ಹೊಂದಿರತಕ್ಕದ್ದು ಮತ್ತು ಅಂಥ ಸ್ಥಾನಗಳನ್ನು ಪೌರಸಭೆಯ ಬೇರೆ ಬೇರೆ ಚುನಾವಣಾ ಕ್ಷೇತ್ರಗಳಿಗೆ ಸರದಿಯ ಪ್ರಕಾರ ಹಂಚಿಕೆ ಮಾಡತಕ್ಕದ್ದು.

(2) (1)ನೇ ಖಂಡದ ಮೇರೆಗೆ ಮೀಸಲಿಡಲಾದ ಸ್ಥಾನಗಳ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸ್ಥಾನಗಳನ್ನು ಅನುಸೂಚಿತ ಜಾತಿಗಳಿಗೆ, ಅಥವಾ ಸಂದರ್ಭಾನುಸಾರ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಮಹಿಳೆಯರಿಗೆ ಮೀಸಲಿರಿಸತಕ್ಕದ್ದು.

(3) ಪ್ರತಿಯೊಂದು ಪೌರಸಭೆಯಲ್ಲಿ ನೇರ ಚುನಾವಣೆಯ ಮೂಲಕ ಭರ್ತಿ ಮಾಡತಕ್ಕ ಒಟ್ಟುಸಂಖ್ಯೆಯ ಸ್ಥಾನಗಳ ಪೈಕಿ (ಅನುಸೂಚಿತ ಜಾತಿಗಳಿಗೆ ಸೇರಿದ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಮಹಿಳೆಯರಿಗೆ ಮೀಸಲಿಡಲಾದ ಸ್ಥಾನಗಳ ಸಂಖ್ಯೆಯನ್ನು ಒಳಗೊಂಡು) ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡತಕ್ಕದ್ದು ಮತ್ತು ಅಂಥ ಸ್ಥಾನಗಳನ್ನು ಪೌರಸಭೆಯಲ್ಲಿನ ಬೇರೆ ಬೇರೆ ಚುನಾವಣಾ ಕ್ಷೇತ್ರಗಳಿಗೆ ಸರದಿಯ ಪ್ರಕಾರ ಹಂಚಿಕೆ ಮಾಡತಕ್ಕದ್ದು.

(4) ಪೌರಸಭೆಗಳಲ್ಲಿನ ಅಧ್ಯಕ್ಷರ ಪದಗಳನ್ನು ಒಂದು ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ಉಪಬಂಧಿಸಬಹುದಾದಂಥ ರೀತಿಯಲ್ಲಿ ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಬುಡಕಟ್ಟುಗಳಿಗೆ ಮತ್ತು ಮಹಿಳೆಯರಿಗೆ ಮೀಸಲಿಡತಕ್ಕದ್ದು.

(5) (1) ಮತ್ತು (2)ನೇ ಖಂಡಗಳ ಮೇರೆಗಿನ ಸ್ಥಾನಗಳ ಮೀಸಲಾತಿಯು ಮತ್ತು (4)ನೇ ಖಂಡದ ಮೇರೆಗೆ ಅಧ್ಯಕ್ಷರ ಪದಗಳ (ಮಹಿಳೆಯರಿಗೆ ಮೀಸಲಾತಿಯನ್ನು ಹೊರತುಪಡಿಸಿ) ಮೀಸಲಾತಿಯು 334ನೇ ಅನುಚ್ಛೇದದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯು ಮುಕ್ತಾಯವಾದ ತರುವಾಯ ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು.

(6) ಈ ಭಾಗದಲ್ಲಿರುವುದು ಯಾವುದೂ, ಹಿಂದುಳಿದ ನಾಗರಿಕರ ವರ್ಗದವರಿಗಾಗಿ ಯಾವುದೇ ಪೌರಸಭೆಯಲ್ಲಿ ಸ್ಥಾನಗಳನ್ನು ಅಥವಾ ಪೌರಸಭೆಗಳಲ್ಲಿ ಅಧ್ಯಕ್ಷರ ಪದಗಳನ್ನು ಮೀಸಲಿಡುವುದಕ್ಕಾಗಿ ಯಾವುದೇ ಉಪಬಂಧ ಮಾಡದಂತೆ ರಾಜ್ಯ ವಿಧಾನ ಮಂಡಲವನ್ನು ಪ್ರತಿಬಂಧಿಸತಕ್ಕದ್ದಲ್ಲ.

**243ಯು. ಪೌರಸಭೆಗಳ ಅವಧಿ, ಇತ್ಯಾದಿ:-** (1) ಪ್ರತಿಯೊಂದು ಪೌರಸಭೆಯು, ಅದನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಐದು ವರ್ಷಗಳಿಗಿಂತ ಮುಂಚಿತವಾಗಿ ವಿಸರ್ಜಿಸಿದ ಹೊರತು ಅದರ ಮೊದಲ ಸಭೆಗೆ ಗೊತ್ತುಪಡಿಸಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಮುಂದುವರೆಯತಕ್ಕದ್ದು, ಆದರೆ ಅದಕ್ಕಿಂತ ಹೆಚ್ಚು ಅವಧಿಯವರೆಗೆ ಅಲ್ಲ:

ಪರಂತು, ಪೌರಸಭೆಯನ್ನು ವಿಸರ್ಜಿಸುವುದಕ್ಕೆ ಮುಂಚೆ ಅಹವಾಲನ್ನು ಹೇಳಿಕೊಳ್ಳಲು ಅದಕ್ಕೆ ಯುಕ್ತ ಅವಕಾಶವನ್ನು ನೀಡತಕ್ಕದ್ದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಯಾವುದೇ ತಿದ್ದುಪಡಿಯು, ಅಂಥ ತಿದ್ದುಪಡಿಗೆ ನಿಕಟಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿರುವಂಥ ಯಾವುದೇ ಮಟ್ಟದ ಪೌರಸಭೆಯನ್ನು (1)ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಅದರ ಅವಧಿಯು ಮುಕ್ತಾಯಗೊಳ್ಳುವವರೆಗೆ, ವಿಸರ್ಜಿಸಲು ಕಾರಣವಾಗುವ ಪರಿಣಾಮವನ್ನು ಹೊಂದಿರತಕ್ಕದ್ದಲ್ಲ.

(3) ಪೌರಸಭೆಯನ್ನು ರಚಿಸಲು ನಡೆಸಬೇಕಾದ ಚುನಾವಣೆಯನ್ನು,-

(ಎ) (1)ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಅದರ ಅವಧಿಯು ಮುಕ್ತಾಯಗೊಳ್ಳುವುದಕ್ಕೆ ಮುಂಚೆ;

(ಬಿ) ಅದರ ವಿಸರ್ಜನೆಯ ದಿನಾಂಕದಿಂದ ಆರು ತಿಂಗಳ ಅವಧಿಯು ಮುಕ್ತಾಯಗೊಳ್ಳುವುದಕ್ಕೆ ಮುಂಚೆ

– ಪೂರ್ಣಗೊಳಿಸತಕ್ಕದ್ದು:

ಪರಂತು, ವಿಸರ್ಜಿತ ಪೌರಸಭೆಯು ಯಾವ ಉಳಿದ ಅವಧಿಯವರೆಗೆ ಮುಂದುವರಿಯಬಹುದಾಗಿತ್ತೋ ಆ ಅವಧಿಯು ಆರು ತಿಂಗಳಿಗಿಂತ ಕಡಿಮೆಯಿರುವಲ್ಲಿ ಅಂಥ ಅವಧಿಗೆ ಪೌರಸಭೆಯನ್ನು ರಚಿಸಲು ಈ ಖಂಡದ ಮೇರೆಗೆ ಯಾವುದೇ ಚುನಾವಣೆ ನಡೆಸುವುದು ಅವಶ್ಯವಾಗಿರತಕ್ಕದ್ದಲ್ಲ.

(4) ಒಂದು ಪೌರಸಭೆಯು ಅದರ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ವಿಸರ್ಜಿತವಾದ ತರುವಾಯ ರಚಿತವಾದ ಪೌರಸಭೆಯು, ವಿಸರ್ಜಿತ ಪೌರಸಭೆಯು ಹಾಗೆ ವಿಸರ್ಜಿತವಾಗದೆ ಹೋಗಿದ್ದರೆ (1)ನೇ ಖಂಡದ ಮೇರೆಗೆ ಯಾವ ಅವಧಿಯವರೆಗೆ ಮುಂದುವರೆಯಬಹುದಾಗಿತ್ತೋ ಆ ಉಳಿದ ಅವಧಿಯವರೆಗೆ ಮಾತ್ರ ಮುಂದುವರೆಯತಕ್ಕದ್ದು.

**243ವಿ. ಸದಸ್ಯತ್ವಕ್ಕೆ ಅನರ್ಹತೆ:–** (1) ಒಬ್ಬ ವ್ಯಕ್ತಿಯು,–

(ಎ) ಸಂಬಂಧಪಟ್ಟ ರಾಜ್ಯ ವಿಧಾನ ಮಂಡಲದ ಚುನಾವಣೆಗಳ ಉದ್ದೇಶಗಳಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅವನನ್ನು ಅನರ್ಹಗೊಳಿಸಿದಾಗ:

ಪರಂತು, ಇಪ್ಪತ್ತೊಂದು ವರ್ಷ ವಯಸ್ಸು ತುಂಬಿರುವ ಯಾರೇ ವ್ಯಕ್ತಿಯನ್ನು, ಅವನು ಇಪ್ಪತ್ತೈದು ವರ್ಷಗಳಿಗಿಂತಲೂ ಕಡಿಮೆ ವಯಸ್ಸಿನವನೆಂಬ ಕಾರಣದ ಮೇಲೆ ಅನರ್ಹಗೊಳಿಸತಕ್ಕದ್ದಲ್ಲ;

(ಬಿ) ರಾಜ್ಯ ವಿಧಾನ ಮಂಡಲವು ರಚಿಸಿದ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅವನನ್ನು ಹಾಗೆ ಅನರ್ಹಗೊಳಿಸಿರುವಾಗ

– ಪೌರಸಭೆಯ ಸದಸ್ಯನಾಗಿ ಚುನಾಯಿತನಾಗಲು ಮತ್ತು ಸದಸ್ಯನಾಗಿರಲು ಅನರ್ಹನಾಗತಕ್ಕದ್ದು.

(2) ಪೌರಸಭೆಯ ಒಬ್ಬ ಸದಸ್ಯನು, (1)ನೆಯ ಖಂಡದಲ್ಲಿ ಉಲ್ಲೇಖಿಸಲಾದ ಯಾವುವೇ ಅನರ್ಹತೆಗಳಿಗೆ ಒಳಗಾಗಿರುವನೇ ಹೇಗೆ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ಅಂಥ ಪ್ರಶ್ನೆಯನ್ನು ರಾಜ್ಯ ವಿಧಾನಮಂಡಲವು ಕಾನೂನಿನ ಮೂಲಕ ಗೊತ್ತುಪಡಿಸಬಹುದಾದಂಥ ಪ್ರಾಧಿಕಾರಕ್ಕೆ, ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ತೀರ್ಮಾನಕ್ಕಾಗಿ ಕಳುಹಿಸತಕ್ಕದ್ದು.

**243ಡಬ್ಲ್ಯೂ. ಪೌರಸಭೆಗಳ ಅಧಿಕಾರಗಳು, ಪ್ರಾಧಿಕಾರ ಮತ್ತು ಜವಾಬ್ದಾರಿಗಳು, ಇತ್ಯಾದಿ:–** ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ಒಂದು ರಾಜ್ಯ ವಿಧಾನಮಂಡಲವು, ಕಾನೂನಿನ ಮೂಲಕ,–

(ಎ) ಪೌರಸಭೆಗಳು ಸ್ವಯಮಾಡಳಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವುದಕ್ಕೆ ಅನುಕೂಲವಾಗಲು ಅವಶ್ಯವಾಗಬಹುದಾದಂಥ ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಅವುಗಳಿಗೆ ನೀಡಬಹುದು ಮತ್ತು ಅಂಥ ಕಾನೂನು,–

(i) ಆರ್ಥಿಕಾಭಿವೃದ್ಧಿಯ ಮತ್ತು ಸಾಮಾಜಿಕ ನ್ಯಾಯ ಯೋಜನೆಗಳನ್ನು ಸಿದ್ಧಪಡಿಸುವುದಕ್ಕೆ;

(ii) ಹನ್ನೆರಡನೇ ಅನುಸೂಚಿಯಲ್ಲಿ ಪಟ್ಟಿಮಾಡಿದ ವಿಷಯಗಳೂ ಸೇರಿದಂತೆ ಪೌರಸಭೆಗಳಿಗೆ ವಹಿಸಬಹುದಾದಂಥ ಪ್ರಕಾರ್ಯಗಳ ನಿರ್ವಹಣೆ ಮತ್ತು ಪರಿಯೋಜನೆಗಳ ಅನುಷ್ಠಾನಕ್ಕೆ

– ಸಂಬಂಧಿಸಿದಂತೆ, ಆ ಕಾನೂನಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಪೌರಸಭೆಗಳಿಗೆ ಅಧಿಕಾರಗಳನ್ನು ಮತ್ತು ಜವಾಬ್ದಾರಿಗಳನ್ನು ವಹಿಸಿಕೊಡುವುದಕ್ಕಾಗಿ ಉಪಬಂಧಗಳನ್ನು ಒಳಗೊಂಡಿರಬಹುದು;

(ಬಿ) ಹನ್ನೆರಡನೇ ಅನುಸೂಚಿಯಲ್ಲಿ ಪಟ್ಟಿಮಾಡಿದ ವಿಷಯಗಳೂ ಸೇರಿದಂತೆ ಪೌರಸಭೆಗಳಿಗೆ ವಹಿಸಲಾದ ಜವಾಬ್ದಾರಿಗಳನ್ನು ಕಾರ್ಯಗತಗೊಳಿಸುವುದಕ್ಕೆ ಅವುಗಳನ್ನು ಸಮರ್ಥಗೊಳಿಸಲು ಅವಶ್ಯವಾಗಬಹುದಾದಂಥ ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಸಮಿತಿಗಳಿಗೆ ನೀಡಬಹುದು.

**243ಎಕ್ಸ್. ತೆರಿಗೆಗಳನ್ನು ವಿಧಿಸಲು ಪೌರಸಭೆಗಳ ಅಧಿಕಾರಗಳು ಮತ್ತು ಅವುಗಳ ನಿಧಿಗಳು:–** ಒಂದು ರಾಜ್ಯ ವಿಧಾನ ಮಂಡಲವು ಕಾನೂನಿನ ಮೂಲಕ, ಅಂಥ ಕಾನೂನಿನಲ್ಲಿ ನಿರ್ದಿಷ್ಟಪಡಿಸಬಹುದಾದ,–

(ಎ) ಅಂಥ ಪ್ರಕ್ರಿಯೆಗೆ ಅನುಸಾರವಾಗಿ ಮತ್ತು ಅಂಥ ಪರಿಮಿತಿಗಳಿಗೆ ಒಳಪಟ್ಟು ಅಂಥ ತೆರಿಗೆಗಳು, ಸುಂಕಗಳು, ದಾರಿ ಸುಂಕಗಳು ಮತ್ತು ಫೀಜುಗಳನ್ನು ವಿಧಿಸಲು, ವಸೂಲಿಮಾಡಲು ಮತ್ತು ವಿನಿಯೋಗಿಸಲು ಪೌರಸಭೆಗೆ ಅಧಿಕಾರ ನೀಡಬಹುದು;

(ಬಿ) ಅಂಥ ಉದ್ದೇಶಗಳಿಗಾಗಿ ಮತ್ತು ಅಂಥ ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಟ್ಟು, ರಾಜ್ಯ ಸರ್ಕಾರವು ವಿಧಿಸಿದ ಮತ್ತು ವಸೂಲಿ ಮಾಡಿದಂಥ ತೆರಿಗೆಗಳು, ಸುಂಕಗಳು, ದಾರಿಸುಂಕಗಳು ಮತ್ತು ಫೀಜುಗಳನ್ನು ಪೌರಸಭೆಗೆ ಹಸ್ತಾಂತರಿಸಬಹುದು;

(ಸಿ) ರಾಜ್ಯದ ಸಂಚಿತ ನಿಧಿಯಿಂದ ಪೌರಸಭೆಗಳಿಗೆ ಅಂಥ ಸಹಾಯಾನುದಾನಗಳನ್ನು ನೀಡುವುದಕ್ಕಾಗಿ ಉಪಬಂಧಿಸಬಹುದು; ಮತ್ತು

(ಡಿ) ಅನುಕ್ರಮವಾಗಿ ಪೌರಸಭೆಗಳು ಅಥವಾ ಅವುಗಳ ಪರವಾಗಿ ಸ್ವೀಕರಿಸಿದ ಎಲ್ಲ ಹಣವನ್ನು ಜಮೆ ಮಾಡುವುದಕ್ಕಾಗಿ ಅಂಥ ನಿಧಿಗಳನ್ನು ರಚಿಸಲು ಮತ್ತು ಅದರಿಂದ ಅಂಥ ಹಣವನ್ನು ತೆಗೆಯಲು ಸಹ ಉಪಬಂಧಿಸಬಹುದು.

**243ವೈ. ಹಣಕಾಸು ಆಯೋಗ:–** (1) 243ಐ ಅನುಚ್ಛೇದದ ಮೇರೆಗೆ ರಚಿತವಾದ ಹಣಕಾಸು ಆಯೋಗವು ಪೌರಸಭೆಗಳ ಹಣಕಾಸು ಸ್ಥಿತಿಗತಿಯನ್ನು ಪರಿಶೀಲಿಸತಕ್ಕದ್ದು; ಮತ್ತು

(ಎ) ಈ ಮುಂದಿನ ವಿಷಯಗಳಿಗೆ, ಎಂದರೆ:–

(i) ಈ ಭಾಗದ ಮೇರೆಗೆ ರಾಜ್ಯದ ಮತ್ತು ಪೌರಸಭೆಗಳ ನಡುವೆ ಭಾಗ ಮಾಡಿಕೊಳ್ಳಬಹುದಾದಂಥ ಮತ್ತು ರಾಜ್ಯವು ವಿಧಿಸಬಹುದಾದ ತೆರಿಗೆಗಳ, ಸುಂಕಗಳ, ದಾರಿ ಸುಂಕಗಳ ಮತ್ತು ಫೀಜುಗಳ ನಿವ್ವಳ ಉತ್ಪತ್ತಿಯನ್ನು ರಾಜ್ಯದ ಮತ್ತು ಪೌರಸಭೆಗಳ ನಡುವೆ ವಿತರಿಸುವುದಕ್ಕೆ ಮತ್ತು ಎಲ್ಲ ಮಟ್ಟಗಳ ಪೌರಸಭೆಗಳ ನಡುವೆ ಅಂಥ ಉತ್ಪತ್ತಿಯಲ್ಲಿನ ಆಯಾ ಪೌರಸಭೆಗಳ ಪಾಲನ್ನು ಹಂಚುವುದಕ್ಕೆ;

(ii) ಪೌರಸಭೆಗಳಿಗೆ ವಹಿಸಿಕೊಡಬಹುದಾದ ಅಥವಾ ಅವುಗಳು ವಿನಿಯೋಗಿಸಬಹುದಾದ ತೆರಿಗೆಗಳು, ಸುಂಕಗಳು, ದಾರಿಸುಂಕಗಳು ಮತ್ತು ಫೀಜುಗಳನ್ನು ನಿರ್ಧರಿಸುವುದಕ್ಕೆ;

(iii) ರಾಜ್ಯದ ಸಂಚಿತ ನಿಧಿಯಿಂದ ಪೌರಸಭೆಗಳಿಗೆ ನೀಡುವ ಸಹಾಯಾನುದಾನಕ್ಕೆ;

(ಬಿ) ಪೌರಸಭೆಗಳ ಹಣಕಾಸು ಸ್ಥಿತಿಗತಿಯನ್ನು ಸುಧಾರಿಸಲು ಕೈಗೊಳ್ಳಬೇಕಾದ ಕ್ರಮಗಳಿಗೆ;

(ಸಿ) ಪೌರಸಭೆಗಳ ಸುಭದ್ರ ಹಣಕಾಸಿನ ದೃಷ್ಟಿಯಿಂದ ರಾಜ್ಯಪಾಲನು ಹಣಕಾಸು ಆಯೋಗಕ್ಕೆ ಕಳುಹಿಸಬಹುದಾದ ಯಾವುದೇ ಇತರ ವಿಷಯಕ್ಕೆ

– ಅನ್ವಯವಾಗುವ ತತ್ವಗಳನ್ನು ಕುರಿತು ರಾಜ್ಯಪಾಲನಿಗೆ ಶಿಫಾರಸು ಮಾಡತಕ್ಕದ್ದು.

(2) ರಾಜ್ಯಪಾಲನು, ಈ ಅನುಚ್ಛೇದದ ಮೇರೆಗೆ ಆಯೋಗವು ಮಾಡಿದ ಪ್ರತಿಯೊಂದು ಶಿಫಾರಸನ್ನು, ಅದರ ಮೇಲೆ ಕೈಗೊಂಡ ಕ್ರಮದ ಬಗೆಗಿನ ವಿವರಣಾತ್ಮಕ ಪತ್ರದ ಸಹಿತ, ರಾಜ್ಯ ವಿಧಾನ ಮಂಡಲದ ಮುಂದೆ ಇಡುವಂತೆ ಮಾಡತಕ್ಕದ್ದು.

**243ಜಡ್. ಪೌರಸಭೆಗಳ ಲೆಕ್ಕಪತ್ರಗಳ ಪರಿಶೋಧನೆ:–** ಒಂದು ರಾಜ್ಯದ ವಿಧಾನ ಮಂಡಲವು, ಪೌರಸಭೆಗಳು ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರಲು ಮತ್ತು ಅಂಥ ಲೆಕ್ಕಪತ್ರಗಳನ್ನು ಪರಿಶೋಧಿಸಲು ಕಾನೂನಿನ ಮೂಲಕ ಉಪಬಂಧಗಳನ್ನು ಮಾಡಬಹುದು.

**243ಜಡ್‌ಎ. ಪೌರಸಭೆಗಳಿಗೆ ಚುನಾವಣೆಗಳು:–** (1) ಪೌರಸಭೆಗಳಿಗೆ ನಡೆಯುವ ಎಲ್ಲ ಚುನಾವಣೆಗಳಿಗೆ ಸಂಬಂಧಪಟ್ಟಂತೆ ಮತದಾರರ ಪಟ್ಟಿಗಳ ತಯಾರಿಕೆಯ ಮತ್ತು ಆ ಎಲ್ಲ ಚುನಾವಣೆಗಳ ನಿರ್ವಹಣೆಯ ಮೇಲಿನ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು 243ಕೆ ಅನುಚ್ಛೇದದಲ್ಲಿ ಉಲ್ಲಿಖಿತವಾದ ರಾಜ್ಯ ಚುನಾವಣಾ ಆಯೋಗದಲ್ಲಿ ನಿಹಿತವಾಗಿರತಕ್ಕದ್ದು.

(2) ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ಒಂದು ರಾಜ್ಯದ ವಿಧಾನ ಮಂಡಲವು, ಕಾನೂನಿನ ಮೂಲಕ, ಪೌರಸಭೆಗಳ ಚುನಾವಣೆಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ಅಥವಾ ಅವುಗಳ ಸಂಬಂಧದಲ್ಲಿ ಉಪಬಂಧಗಳನ್ನು ರಚಿಸಬಹುದು.

**243ಜಡ್‌ಬಿ. ಒಕ್ಕೂಟ ರಾಜ್ಯ ಕ್ಷೇತ್ರಗಳಿಗೆ ಅನ್ವಯ:-** ಈ ಭಾಗದ ಉಪಬಂಧಗಳು ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಅನ್ವಯವಾಗತಕ್ಕದ್ದು ಮತ್ತು ಅವುಗಳನ್ನು ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಅನ್ವಯಿಸುವಾಗ, ಒಂದು ರಾಜ್ಯದ ರಾಜ್ಯಪಾಲನಿಗೆ ಮಾಡಲಾದ ಉಲ್ಲೇಖಗಳು 239ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರನಿಗೆ ಮಾಡಲಾದ ಉಲ್ಲೇಖಗಳಾಗಿದ್ದರೋ ಹೇಗೋ ಹಾಗೇ ಮತ್ತು ಒಂದು ರಾಜ್ಯ ವಿಧಾನ ಮಂಡಲಕ್ಕೆ ಅಥವಾ ವಿಧಾನ ಸಭೆಗೆ ಮಾಡಲಾದ ಉಲ್ಲೇಖಗಳು, ವಿಧಾನ ಸಭೆಯನ್ನು ಹೊಂದಿರುವ ಒಕ್ಕೂಟ ರಾಜ್ಯಕ್ಷೇತ್ರದ ಸಂಬಂಧದಲ್ಲಿ ಆ ವಿಧಾನ ಸಭೆಗೆ ಮಾಡಲಾದ ಉಲ್ಲೇಖಗಳಾಗಿದ್ದರೆ ಹೇಗೋ ಹಾಗೇ ಪರಿಣಾಮಕಾರಿಯಾಗತಕ್ಕದ್ದು:

ಪರಂತು, ರಾಷ್ಟ್ರಪತಿಯು, ಸಾರ್ವಜನಿಕ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳು ಮತ್ತು ಮಾರ್ಪಾಟುಗಳಿಗೆ ಒಳಪಟ್ಟು ಈ ಭಾಗದ ಉಪಬಂಧಗಳು, ಯಾವುದೇ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು.

**243ಜಡ್‌ಸಿ. ಈ ಭಾಗವು ಕೆಲವು ಪ್ರದೇಶಗಳಿಗೆ ಅನ್ವಯವಾಗದಿರುವುದು:-** (1) ಈ ಭಾಗದಲ್ಲಿರುವುದು ಯಾವುದೂ 244ನೇ ಅನುಚ್ಛೇದದ (1)ನೇ ಖಂಡದಲ್ಲಿ ಉಲ್ಲೇಖಿಸಲಾದ ಅನುಸೂಚಿತ ಪ್ರದೇಶಗಳಿಗೆ ಮತ್ತು (2)ನೇ ಖಂಡದಲ್ಲಿ ಉಲ್ಲೇಖಿಸಲಾದ ಬುಡಕಟ್ಟು ಪ್ರದೇಶಗಳಿಗೆ ಅನ್ವಯವಾಗತಕ್ಕದ್ದಲ್ಲ.

(2) ಈ ಭಾಗದಲ್ಲಿರುವುದು ಯಾವುದೂ, ಪಶ್ಚಿಮ ಬಂಗಾಳ ರಾಜ್ಯದಲ್ಲಿನ ಡಾರ್ಜಿಲಿಂಗ್ ಜಿಲ್ಲೆಯ ಗುಡ್ಡಗಾಡು ಪ್ರದೇಶಗಳಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿತವಾದ ಡಾರ್ಜಿಲಿಂಗ್ ಗೂರ್ಖಾ ಗುಡ್ಡಗಾಡು ಪರಿಷತ್ತಿನ ಪ್ರಕಾರ್ಯಗಳಿಗೆ ಮತ್ತು ಅಧಿಕಾರಗಳಿಗೆ ಬಾಧಕ ಉಂಟುಮಾಡುವುದಾಗಿ ಅರ್ಥೈಸತಕ್ಕದ್ದಲ್ಲ.

(3) ಈ ಸಂವಿಧಾನದಲ್ಲಿ ಏನೇ ಇದ್ದರೂ, ಸಂಸತ್ತು ಕಾನೂನಿನ ಮೂಲಕ, ಅಂಥ ಕಾನೂನಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳು, ಮತ್ತು ಮಾರ್ಪಾಟುಗಳಿಗೆ ಒಳಪಟ್ಟು (1)ನೇ ಖಂಡದಲ್ಲಿ ಉಲ್ಲೇಖಿಸಲಾದ ಅನುಸೂಚಿತ ಪ್ರದೇಶಗಳಿಗೆ ಮತ್ತು ಬುಡಕಟ್ಟು ಪ್ರದೇಶಗಳಿಗೆ, ಈ ಭಾಗದ ಉಪಬಂಧಗಳನ್ನು ವಿಸ್ತರಿಸಬಹುದು, ಮತ್ತು ಯಾವುದೇ ಅಂಥ ಕಾನೂನನ್ನು 368ನೇ ಅನುಚ್ಛೇದದ ಉದ್ದೇಶಗಳಿಗಾಗಿ ಈ ಸಂವಿಧಾನದ ತಿದ್ದುಪಡಿಯೆಂದು ಭಾವಿಸತಕ್ಕದ್ದಲ್ಲ.

**243ಜಡ್‌ಡಿ. ಜಿಲ್ಲಾ ಯೋಜನಾ ಸಮಿತಿ:-** (1) ಜಿಲ್ಲೆಯಲ್ಲಿನ ಪಂಚಾಯತಿಗಳು ಮತ್ತು ಪೌರಸಭೆಗಳು ಸಿದ್ಧಪಡಿಸಿದ ಯೋಜನೆಗಳನ್ನು ಕ್ರೋಡೀಕರಿಸಲು ಮತ್ತು ಇಡೀ ಜಿಲ್ಲೆಗಾಗಿ ಅಭಿವೃದ್ಧಿ ಯೋಜನೆಯ ಕರಡನ್ನು ಸಿದ್ಧಪಡಿಸಲು ಪ್ರತಿಯೊಂದು ರಾಜ್ಯದಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸತಕ್ಕದ್ದು.

(2) ರಾಜ್ಯ ವಿಧಾನಮಂಡಲವು,-

(ಎ) ಜಿಲ್ಲಾ ಯೋಜನಾ ಸಮಿತಿಗಳ ಸಂರಚನೆಗೆ;

(ಬಿ) ಅಂಥ ಸಮಿತಿಗಳಲ್ಲಿ ಸ್ಥಾನಗಳನ್ನು ಭರ್ತಿಮಾಡತಕ್ಕ ರೀತಿಗೆ

– ಸಂಬಂಧಿಸಿದಂತೆ ಕಾನೂನಿನ ಮೂಲಕ ಉಪಬಂಧವನ್ನು ಕಲ್ಪಿಸಬಹುದು:

ಪರಂತು, ಜಿಲ್ಲಾ ಮಟ್ಟದ ಪಂಚಾಯತಿಗಳ ಮತ್ತು ಜಿಲ್ಲೆಯೊಳಗಿನ ಪೌರಸಭೆಗಳ ಚುನಾಯಿತ ಸದಸ್ಯರು ತಮ್ಮ ಪೈಕಿಯಿಂದ ಅಂಥ ಸಮಿತಿಯ ಸದಸ್ಯರ ಒಟ್ಟು ಸಂಖ್ಯೆಯ ಐದನೇ ನಾಲ್ಕಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರನ್ನು ಜಿಲ್ಲೆಯಲ್ಲಿನ ಗ್ರಾಮೀಣ ಪ್ರದೇಶಗಳ ಮತ್ತು ನಗರ ಪ್ರದೇಶಗಳ ಜನಸಂಖ್ಯೆಯ ನಡುವಣ ಧಾಮಾಷಾ ಪ್ರಮಾಣಕ್ಕೆ ಅನುಸಾರವಾಗಿ ಚುನಾಯಿಸತಕ್ಕದ್ದು;

(ಸಿ) ಜಿಲ್ಲಾ ಯೋಜನೆಗಳಿಗೆ ಸಂಬಂಧಪಟ್ಟಂತೆ ಅಂಥ ಸಮಿತಿಗಳಿಗೆ ವಹಿಸಬಹುದಾದಂಥ ಪ್ರಕಾರ್ಯಗಳಿಗೆ;

(ಡಿ) ಅಂಥ ಸಮಿತಿಗಳ ಅಧ್ಯಕ್ಷರುಗಳನ್ನು ಆಯ್ಕೆ ಮಾಡತಕ್ಕ ರೀತಿಗೆ

– ಸಂಬಂಧಿಸಿದಂತೆ ಕಾನೂನಿನ ಮೂಲಕ ಉಪಬಂಧವನ್ನು ಕಲ್ಪಿಸಬಹುದು.

(3) ಪ್ರತಿಯೊಂದು ಜಿಲ್ಲಾ ಯೋಜನಾ ಸಮಿತಿಯು, ಅಭಿವೃದ್ಧಿ ಯೋಜನೆಯ ಕರಡನ್ನು ಸಿದ್ಧಪಡಿಸುವಾಗ,-

(ಎ) (i) ಪ್ರಾದೇಶಿಕ ಯೋಜನೆ, ನೀರು ಮತ್ತು ಇತರ ಭೌತಿಕ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಹಂಚಿಕೆ, ಮೂಲ ಸೌಲಭ್ಯಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯೂ ಒಳಗೊಂಡಂತೆ ಪಂಚಾಯತಿಗಳು ಮತ್ತು ಪೌರಸಭೆಗಳ ನಡುವಣ ಸಾಮಾನ್ಯ ಹಿತಾಸಕ್ತಿಯ ವಿಷಯಗಳಿಗೆ;

(ii) ಹಣಕಾಸಿನ ಅಥವಾ ಇತರ ರೀತಿಯ ಲಭ್ಯ ಸಂಪನ್ಮೂಲಗಳ ಪ್ರಮಾಣ ಮತ್ತು ಬಗೆಗೆ

- ಗಮನ ನೀಡತಕ್ಕದ್ದು;

(ಬಿ) ರಾಜ್ಯಪಾಲನು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸಂಸ್ಥೆಗಳು ಮತ್ತು ಸಂಘಟನೆಗಳೊಂದಿಗೆ ಸಮಾಲೋಚಿಸತಕ್ಕದ್ದು.

(4) ಪ್ರತಿಯೊಂದು ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷನು, ಸಮಿತಿಯು ಶಿಫಾರಸು ಮಾಡಿದಂಥ ಅಭಿವೃದ್ಧಿ ಯೋಜನೆಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**243ಜಡ್‌ಇ. ಮಹಾನಗರ ಯೋಜನಾ ಸಮಿತಿ:-** (1) ಇಡೀ ಮಹಾನಗರ ಪ್ರದೇಶಕ್ಕೆ ಅಭಿವೃದ್ಧಿ ಯೋಜನೆಯ ಕರಡನ್ನು ಸಿದ್ಧಪಡಿಸಲು ಪ್ರತಿಯೊಂದು ಮಹಾನಗರ ಪ್ರದೇಶದಲ್ಲಿ ಮಹಾನಗರ ಯೋಜನಾ ಸಮಿತಿಯೊಂದನ್ನು ರಚಿಸತಕ್ಕದ್ದು.

(2) ಒಂದು ರಾಜ್ಯದ ವಿಧಾನ ಮಂಡಲವು,-

(ಎ) ಮಹಾನಗರ ಯೋಜನಾ ಸಮಿತಿಗಳ ಸಂರಚನೆಗೆ;

(ಬಿ) ಅಂಥ ಸಮಿತಿಗಳ ಸ್ಥಾನಗಳನ್ನು ಭರ್ತಿ ಮಾಡತಕ್ಕ ರೀತಿಗೆ

- ಸಂಬಂಧಿಸಿದಂತೆ ಕಾನೂನಿನ ಮೂಲಕ ಉಪಬಂಧಿಸಬಹುದು:

ಪರಂತು, ಅಂಥ ಸಮಿತಿಯ ಸದಸ್ಯರ ಮೂರನೇ ಎರಡು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರನ್ನು, ಮಹಾನಗರ ಪ್ರದೇಶದ ಪೌರಸಭೆಗಳ ಚುನಾಯಿತ ಸದಸ್ಯರು ಮತ್ತು ಪಂಚಾಯತಿಗಳ ಅಧ್ಯಕ್ಷರು ತಮ್ಮ ಪೈಕಿಯಿಂದ ಪೌರಸಭೆಗಳ ಮತ್ತು ಆ ಪ್ರದೇಶದಲ್ಲಿನ ಪಂಚಾಯತಿಗಳ ಜನಸಂಖ್ಯೆಯ ನಡುವಣ ದಾಮಾಷಾ ಪ್ರಮಾಣಕ್ಕೆ ಅನುಸಾರವಾಗಿ ಚುನಾಯಿಸತಕ್ಕದ್ದು;

(ಸಿ) ಅಂಥ ಸಮಿತಿಗಳಲ್ಲಿ ಭಾರತ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಮತ್ತು ಅಂಥ ಸಮಿತಿಗಳಿಗೆ ವಹಿಸಿದ ಪ್ರಕಾರ್ಯಗಳನ್ನು ನಿರ್ವಹಿಸಲು ಅವಶ್ಯವೆಂದು ಭಾವಿಸಬಹುದಾದಂಥ ಸಂಘಟನೆಗಳ ಮತ್ತು ಸಂಸ್ಥೆಗಳ ಪ್ರಾತಿನಿಧ್ಯಕ್ಕೆ;

(ಡಿ) ಮಹಾನಗರ ಪ್ರದೇಶದ ಯೋಜನೆಗೆ ಮತ್ತು ಸಮನ್ವಯಕ್ಕೆ ಸಂಬಂಧಪಟ್ಟಂತೆ ಅಂಥ ಸಮಿತಿಗಳಿಗೆ ವಹಿಸಿ ಕೊಡಬಹುದಾದಂಥ ಪ್ರಕಾರ್ಯಗಳಿಗೆ;

(ಇ) ಅಂಥ ಸಮಿತಿಗಳ ಅಧ್ಯಕ್ಷರನ್ನು ಚುನಾಯಿಸತಕ್ಕ ರೀತಿಗೆ

- ಸಂಬಂಧಿಸಿದಂತೆ ಕಾನೂನಿನ ಮೂಲಕ ಉಪಬಂಧವನ್ನು ಕಲ್ಪಿಸಬಹುದು.

(3) ಪ್ರತಿಯೊಂದು ಮಹಾನಗರ ಯೋಜನಾ ಸಮಿತಿಯು, ಅಭಿವೃದ್ಧಿ ಯೋಜನೆ ಕರಡನ್ನು ಸಿದ್ಧಪಡಿಸುವಾಗ,-

(ಎ) ಕೆಳಕಂಡ ವಿಷಯಗಳ ಬಗ್ಗೆ ಎಂದರೆ:-

(i) ಮಹಾನಗರ ಪ್ರದೇಶದಲ್ಲಿನ ಪೌರಸಭೆಗಳು ಮತ್ತು ಪಂಚಾಯತಿಗಳು ಸಿದ್ಧಪಡಿಸಿದ ಯೋಜನೆಗಳಿಗೆ;

(ii) ಆ ಪ್ರದೇಶದ ಸಮನ್ವಿತ ಪ್ರಾದೇಶಿಕ ಯೋಜನೆ, ನೀರು ಮತ್ತು ಇತರ ಭೌತಿಕ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಹಂಚಿಕೆ, ಮೂಲ ಸೌಲಭ್ಯಗಳ ಸಮಗ್ರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯೂ ಒಳಗೊಂಡಂತೆ, ಪೌರಸಭೆಗಳು ಮತ್ತು ಪಂಚಾಯತಿಗಳ ನಡುವಣ ಸಾಮಾನ್ಯ ಹಿತಾಸಕ್ತಿಯ ವಿಷಯಗಳಿಗೆ;

(iii) ಭಾರತ ಸರ್ಕಾರವು ಮತ್ತು ರಾಜ್ಯ ಸರ್ಕಾರವು ನಿಗದಿಪಡಿಸಿದ ಸಮಗ್ರ ಉದ್ದೇಶಗಳು ಮತ್ತು ಆದ್ಯತೆಗಳಿಗೆ;

(iv) ಭಾರತ ಸರ್ಕಾರದ ಮತ್ತು ರಾಜ್ಯಸರ್ಕಾರದ ಏಜೆನ್ಸಿಗಳು ಮಹಾನಗರ ಪ್ರದೇಶದಲ್ಲಿ ಹೂಡಬಹುದಾದ ಹೂಡಿಕೆಗಳ ಮತ್ತು ಹಣಕಾಸು ಅಥವಾ ಇತರ ರೀತಿಯ ಲಭ್ಯವಿರುವ ಇತರ ಸಂಪನ್ಮೂಲಗಳ ಪ್ರಮಾಣ ಮತ್ತು ಸ್ವರೂಪಕ್ಕೆ

– ಗಮನ ನೀಡತಕ್ಕದ್ದು ;

(ಬಿ) ರಾಜ್ಯಪಾಲನು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸಂಸ್ಥೆಗಳು ಮತ್ತು ಸಂಘಟನೆಗಳೊಂದಿಗೆ ಮಹಾನಗರ ಯೋಜನಾ ಸಮಿತಿಯು ಸಮಾಲೋಚಿಸತಕ್ಕದ್ದು.

(4) ಪ್ರತಿಯೊಂದು ಮಹಾನಗರ ಯೋಜನಾ ಸಮಿತಿಯ ಅಧ್ಯಕ್ಷನು, ಸಮಿತಿಯು ಶಿಫಾರಸು ಮಾಡಿದಂಥ ಅಭಿವೃದ್ಧಿ ಯೋಜನೆಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**243ಜಡ್‌ಎಫ್. ಜಾರಿಯಲ್ಲಿರುವ ಕಾನೂನುಗಳನ್ನು ಮತ್ತು ಅಸ್ತಿತ್ವದಲ್ಲಿರುವ ಪೌರಸಭೆಗಳನ್ನು ಮುಂದುವರೆಸುವುದು:–** ಈ ಭಾಗದಲ್ಲಿ ಏನೇ ಇದ್ದರೂ, ಈ ಭಾಗದ ಉಪಬಂಧಗಳಿಗೆ ಅಸಂಗತವಾಗಿರುವಂಥ, ಸಂವಿಧಾನ (ಎಪ್ಪತ್ತನಾಲ್ಕನೇ ತಿದ್ದುಪಡಿ) ಅಧಿನಿಯಮ, 1992ರ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಪೌರಸಭೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಯಾವುದೇ ಉಪಬಂಧವು ಸಕ್ಷಮ ವಿಧಾನ ಮಂಡಲದಿಂದ ಅಥವಾ ಇತರ ಸಕ್ಷಮ ಪ್ರಾಧಿಕಾರದಿಂದ ತಿದ್ದುಪಡಿಯಾಗುವವರೆಗೆ ಅಥವಾ ನಿರಸಿತವಾಗುವವರೆಗೆ ಅಥವಾ ಅಂಥ ಪ್ರಾರಂಭದಿಂದ ಒಂದು ವರ್ಷ ಮುಕ್ತಾಯವಾಗುವವರೆಗೆ ಇವುಗಳಲ್ಲಿ ಯಾವುದು ಮುಂಚಿತವೋ ಅಲ್ಲಿಯವರೆಗೆ ಅದು ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು:

ಪರಂತು, ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲ ಪೌರಸಭೆಗಳನ್ನು ಆ ರಾಜ್ಯದ ವಿಧಾನ ಸಭೆಯು, ಅಥವಾ ವಿಧಾನ ಪರಿಷತ್ತನ್ನು ಹೊಂದಿರುವ ರಾಜ್ಯದ ಸಂದರ್ಭದಲ್ಲಿ, ಆ ರಾಜ್ಯದ ವಿಧಾನ ಮಂಡಲದ ಪ್ರತಿಯೊಂದು ಸದನವು ನಿರ್ಣಯದ ಮೂಲಕ ಅವಧಿಗೆ ಮುಂಚೆ ವಿಸರ್ಜಿಸಿದ ಹೊರತು, ಅವುಗಳ ಅವಧಿಯು ಮುಕ್ತಾಯವಾಗುವವರೆಗೆ ಮುಂದುವರೆಯತಕ್ಕದ್ದು.

**243ಜಡ್‌ಜಿ. ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯವು ಮಧ್ಯ ಪ್ರವೇಶಿಸುವುದರ ಪ್ರತಿಷೇಧ:–** ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,–

(ಎ) ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ಸಿಂಧುತ್ವವನ್ನು ಅಥವಾ 243ನೇ ಜಡ್‌ಎ ಅನುಚ್ಛೇದದ ಮೇರೆಗೆ ಮಾಡಲಾದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಅಂಥ ಚುನಾವಣಾ ಕ್ಷೇತ್ರಗಳ ಸ್ಥಾನಗಳ ಹಂಚಿಕೆಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ;

(ಬಿ) ಯಾವುದೇ ಪೌರಸಭೆಗೆ ನಡೆಯುವ ಯಾವುದೇ ಚುನಾವಣೆಯನ್ನು, ರಾಜ್ಯ ವಿಧಾನಮಂಡಲವು ರಚಿಸಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಗೊತ್ತುಪಡಿಸಲಾದಂಥ ಪ್ರಾಧಿಕಾರಕ್ಕೆ, ಗೊತ್ತುಪಡಿಸಲಾದಂಥ ರೀತಿಯಲ್ಲಿ ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಿದ ಹೊರತು ಪ್ರಶ್ನಿಸತಕ್ಕದ್ದಲ್ಲ.]

# ಭಾಗ - X

## ಅನುಸೂಚಿತ ಮತ್ತು ಬುಡಕಟ್ಟು ಪ್ರದೇಶಗಳು

**244. ಅನುಸೂಚಿತ ಪ್ರದೇಶಗಳ ಹಾಗೂ ಬುಡಕಟ್ಟು ಪ್ರದೇಶಗಳ ಆಡಳಿತ:-** (1) [1] * * * [2][ಅಸ್ಸಾಂ, [3][[4][ಮೇಘಾಲಯ, ತ್ರಿಪುರ ಮತ್ತು ಮಿಜೋರಾಂ ರಾಜ್ಯಗಳನ್ನು]]] ಹೊರತುಪಡಿಸಿ ಯಾವುದೇ ರಾಜ್ಯದ ಅನುಸೂಚಿತ ಪ್ರದೇಶಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಆಡಳಿತಕ್ಕೆ ಮತ್ತು ನಿಯಂತ್ರಣಕ್ಕೆ ಐದನೆಯ ಅನುಸೂಚಿಯ ಉಪಬಂಧಗಳು ಅನ್ವಯವಾಗತಕ್ಕದ್ದು.

(2) ಆರನೆಯ ಅನುಸೂಚಿಯ ಉಪಬಂಧಗಳು [2][ಅಸ್ಸಾಂ, [3][[5][ಮೇಘಾಲಯ, ತ್ರಿಪುರ ಮತ್ತು ಮಿಜೋರಾಂ ರಾಜ್ಯಗಳಲ್ಲಿ]]] ಇರುವ ಬುಡಕಟ್ಟು ಪ್ರದೇಶಗಳ ಆಡಳಿತಕ್ಕೆ ಅನ್ವಯವಾಗತಕ್ಕದ್ದು.

[6][**244ಎ. ಅಸ್ಸಾಂನಲ್ಲಿರುವ ಕೆಲವು ಬುಡಕಟ್ಟು ಪ್ರದೇಶಗಳನ್ನೊಳಗೊಂಡ ಸ್ವಾಯತ್ತ ರಾಜ್ಯದ ರಚನೆ ಮತ್ತು ಅದಕ್ಕಾಗಿ ಸ್ಥಳೀಯ ವಿಧಾನ ಮಂಡಲವನ್ನು ಅಥವಾ ಮಂತ್ರಿ ಮಂಡಲವನ್ನು ಅಥವಾ ಅವೆರಡನ್ನು ಸೃಜಿಸುವುದು:-** (1) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ಸಂಸತ್ತು ಕಾನೂನಿನ ಮೂಲಕ ಅಸ್ಸಾಂ ರಾಜ್ಯದಲ್ಲಿ, ಆರನೆಯ ಅನುಸೂಚಿಯ 20ನೆಯ ಪ್ಯಾರಾಕ್ಕೆ ಅನುಬಂಧಿಸಿದ ಕೋಷ್ಟಕದ [7][Iನೆಯ ಭಾಗ] ದಲ್ಲಿ ನಿರ್ದಿಷ್ಟಪಡಿಸಿದ ಬುಡಕಟ್ಟುಗಳ ಎಲ್ಲ ಅಥವಾ ಯಾವುದೇ ಪ್ರದೇಶವನ್ನೊಳಗೊಂಡ (ಪೂರ್ತಿಯಾಗಿ ಅಥವಾ ಭಾಗಶಃ) ಒಂದು ಸ್ವಾಯತ್ತ ರಾಜ್ಯವನ್ನು ರಚಿಸಬಹುದು ಮತ್ತು ಆ ರಾಜ್ಯಕ್ಕಾಗಿ,-

(ಎ) ಆ ಸ್ವಾಯತ್ತ ರಾಜ್ಯದ ವಿಧಾನ ಮಂಡಲವಾಗಿ ಕಾರ್ಯನಿರ್ವಹಿಸಲು ಚುನಾಯಿತವಾದ ಅಥವಾ ಭಾಗಶಃ ನಾಮನಿರ್ದೇಶಿತವಾದ ಮತ್ತು ಭಾಗಶಃ ಚುನಾಯಿತವಾದ ಒಂದು ನಿಕಾಯವನ್ನು, ಅಥವಾ

(ಬಿ) ಒಂದು ಮಂತ್ರಿಮಂಡಲವನ್ನು

– ಅಥವಾ ಅವೆರಡನ್ನೂ ಸೃಜಿಸಬಹುದು ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಅವುಗಳ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಆ ಕಾನೂನಿನಲ್ಲಿ ನಿರ್ದಿಷ್ಟಪಡಿಸಬಹುದು.

---

1. "ಮೊದಲನೇ ಅನುಸೂಚಿಯ ಭಾಗ–ಎ ಅಥವಾ ಭಾಗ–ಬಿ ಯಲ್ಲಿ ನಿರ್ದಿಷ್ಟಪಡಿಸಿದ" ಪದಗಳನ್ನು ಮತ್ತು ಅಕ್ಷರಗಳನ್ನು 1956 ನೇ ಇಸವಿಯ ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ ಬಿಟ್ಟುಬಿಡಲಾಗಿದೆ.
2. 1971 ನೇ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್ರಚನೆ) ಅಧಿನಿಯಮದ (1971ರ 81) 71ನೇ ಪ್ರಕರಣದ ಮೂಲಕ "ಅಸ್ಸಾಂ ರಾಜ್ಯ" ಎಂಬುದಕ್ಕೆ ಬದಲಾಗಿ (21.1.1972 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. 1984 ನೇ ಇಸವಿಯ ಸಂವಿಧಾನ (ನಲವತ್ತೊಂಬತ್ತನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ "ಮತ್ತು ಮೇಘಾಲಯ" ಎಂಬುದಕ್ಕೆ ಬದಲಾಗಿ (1.4.1985 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
4. 1986 ನೇ ಇಸವಿಯ ಮಿಜೋರಾಂ ರಾಜ್ಯ ಅಧಿನಿಯಮದ (1986ರ 34) 39ನೇ ಪ್ರಕರಣದ ಮೂಲಕ, "ಮೇಘಾಲಯ ಮತ್ತು ತ್ರಿಪುರ" ಎಂಬುದಕ್ಕೆ ಬದಲಾಗಿ (20.2.1987 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
5. 1986 ನೇ ಇಸವಿಯ ಮಿಜೋರಾಂ ರಾಜ್ಯ ಅಧಿನಿಯಮದ (1986ರ 34) 39ನೇ ಪ್ರಕರಣದ ಮೂಲಕ "ಮೇಘಾಲಯ ಮತ್ತು ತ್ರಿಪುರ ಹಾಗು ಮಿಜೋರಾಂ ಒಕ್ಕೂಟ ರಾಜ್ಯ ಕ್ಷೇತ್ರ" ಎಂಬುದಕ್ಕೆ ಬದಲಾಗಿ (20.2.1987 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
6. 1969 ನೇ ಇಸವಿಯ ಸಂವಿಧಾನ (ಇಪ್ಪತ್ತೆರಡನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.
7. 1971 ನೇ ಇಸವಿಯ ಈಶಾನ್ಯ ಪ್ರದೇಶದ (ಪುನರ್ರಚನೆ) ಅಧಿನಿಯಮದ (1971ರ 81) 71ನೇ ಪ್ರಕರಣದ ಮೂಲಕ (21.1.1972 ರಿಂದ ಜಾರಿಗೆ ಬರುವಂತೆ) "ಭಾಗ–ಎ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(2) (1) ನೆಯ ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಕಾನೂನು ವಿಶೇಷವಾಗಿ,-

(ಎ) ರಾಜ್ಯಪಟ್ಟಿಯಲ್ಲಿ ಅಥವಾ ಸಮವರ್ತಿಪಟ್ಟಿಯಲ್ಲಿ ನಮೂದಿಸಲಾದ ವಿಷಯಗಳ ಪೈಕಿ ಯಾವ ವಿಷಯಗಳ ಬಗ್ಗೆ ಸ್ವಾಯತ್ತ ರಾಜ್ಯದ ವಿಧಾನ ಮಂಡಲವು, ಅಸ್ಸಾಂ ರಾಜ್ಯದ ವಿಧಾನ ಮಂಡಲವನ್ನು ಹೊರತುಪಡಿಸಿ ಅಥವಾ ಅನ್ಯಥಾ ಆ ಇಡೀ ಸ್ವಾಯತ್ತ ರಾಜ್ಯಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಕಾನೂನುಗಳನ್ನು ರಚಿಸುವ ಅಧಿಕಾರವನ್ನು ಹೊಂದಿರತಕ್ಕದ್ದೆಂಬುದನ್ನು ನಿರ್ದಿಷ್ಟಪಡಿಸಬಹುದು;

(ಬಿ) ಯಾವ ವಿಷಯಗಳಿಗೆ ಸಂಬಂಧಿಸಿದಂತೆ, ಸ್ವಾಯತ್ತ ರಾಜ್ಯದ ಕಾರ್ಯಾಂಗ ಅಧಿಕಾರವನ್ನು ವಿಸ್ತರಿಸತಕ್ಕದ್ದೋ ಆ ವಿಷಯಗಳನ್ನು ನಿರ್ಧರಿಸಬಹುದು;

(ಸಿ) ಅಸ್ಸಾಂ ರಾಜ್ಯವು ವಿಧಿಸಿದ ಯಾವುದೇ ತೆರಿಗೆಯ ಉತ್ಪತ್ತಿಯು ಆ ಸ್ವಾಯತ್ತ ರಾಜ್ಯಕ್ಕೆ ಸೇರಬಹುದಾದಷ್ಟರ ಮಟ್ಟಿಗೆ ಅದನ್ನು ಆ ರಾಜ್ಯಕ್ಕೆ ವಹಿಸಿಕೊಡತಕ್ಕದ್ದೆಂದು ಉಪಬಂಧಿಸಬಹುದು;

(ಡಿ) ಈ ಸಂವಿಧಾನದ ಯಾವುದೇ ಅನುಚ್ಛೇದದಲ್ಲಿ ಒಂದು ರಾಜ್ಯಕ್ಕೆ ಸಂಬಂಧಪಟ್ಟ ಯಾವುದೇ ಉಲ್ಲೇಖವು ಸ್ವಾಯತ್ತ ರಾಜ್ಯಕ್ಕೆ ಸಂಬಂಧಪಟ್ಟ ಉಲ್ಲೇಖವನ್ನು ಒಳಗೊಂಡಿರುವಂತೆ ಅರ್ಥೈಸತಕ್ಕದ್ದೆಂದು ಉಪಬಂಧಿಸಬಹುದು; ಮತ್ತು

(ಇ) ಅವಶ್ಯವೆಂದು ಭಾವಿಸಬಹುದಾದಂಥ ಪೂರಕ, ಪ್ರಾಸಂಗಿಕ ಮತ್ತು ಆನುಷಂಗಿಕ ಉಪಬಂಧಗಳನ್ನು ಕಲ್ಪಿಸಬಹುದು.

(3) ಮೇಲೆ ಹೇಳಿದಂಥ ಕಾನೂನಿನ ತಿದ್ದುಪಡಿಯು, (2)ನೆಯ ಖಂಡದ (ಎ) ಉಪಖಂಡದಲ್ಲಿ ಅಥವಾ (ಬಿ) ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಲ್ಲಿ ಯಾವುದಕ್ಕಾದರೂ ಸಂಬಂಧಿಸುವಷ್ಟರ ಮಟ್ಟಿಗೆ, ಸಂಸತ್ತಿನ ಪ್ರತಿಯೊಂದು ಸದನದಲ್ಲಿ ಹಾಜರಿದ್ದು ಮತ ಕೊಡುವ ಸದಸ್ಯರ ಸಂಖ್ಯೆಯ ಮೂರನೆಯ ಎರಡಕ್ಕಿಂತ ಕಡಿಮೆ ಇಲ್ಲದಷ್ಟು ಸಂಖ್ಯೆಯ ಸದಸ್ಯರಿಂದ ಅಂಗೀಕೃತವಾಗಿರುವ ಹೊರತು ಅಂಥ ತಿದ್ದುಪಡಿಯು ಪರಿಣಾಮಕಾರಿಯಾಗತಕ್ಕದ್ದಲ್ಲ.

(4) ಈ ಅನುಚ್ಛೇದದಲ್ಲಿ ಉಲ್ಲೇಖಿಸಲಾದ ಯಾವುದೇ ಕಾನೂನು, ಸಂವಿಧಾನವನ್ನು ತಿದ್ದುಪಡಿಮಾಡುವ ಅಥವಾ ತಿದ್ದುಪಡಿ ಮಾಡುವ ಪರಿಣಾಮವುಳ್ಳ ಯಾವುದೇ ಉಪಬಂಧವನ್ನು ಒಳಗೊಂಡಿದ್ದರೂ, 368ನೆಯ ಅನುಚ್ಛೇದದ ಉದ್ದೇಶಗಳಿಗಾಗಿ ಅದನ್ನು ಈ ಸಂವಿಧಾನದ ಒಂದು ತಿದ್ದುಪಡಿ ಎಂದು ಭಾವಿಸತಕ್ಕದ್ದಲ್ಲ.]

# ಭಾಗ -XI

## ಒಕ್ಕೂಟದ ಮತ್ತು ರಾಜ್ಯಗಳ ನಡುವಣ ಸಂಬಂಧಗಳು

### ಅಧ್ಯಾಯ - I ವಿಧಾಯೀ ಸಂಬಂಧಗಳು

### ವಿಧಾಯೀ ಅಧಿಕಾರಗಳ ಹಂಚಿಕೆ

**245. ಸಂಸತ್ತು ಮತ್ತು ರಾಜ್ಯಗಳ ವಿಧಾನ ಮಂಡಲಗಳು ರಚಿಸಿದ ಕಾನೂನುಗಳ ವ್ಯಾಪ್ತಿ:-** (1) ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ಸಂಸತ್ತು ಭಾರತದ ಸಮಗ್ರ ರಾಜ್ಯಕ್ಷೇತ್ರಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಕಾನೂನುಗಳನ್ನು ರಚಿಸಬಹುದು ಮತ್ತು ಒಂದು ರಾಜ್ಯದ ವಿಧಾನ ಮಂಡಲವು ಸಮಗ್ರ ರಾಜ್ಯಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಕಾನೂನುಗಳನ್ನು ರಚಿಸಬಹುದು.

(2) ಸಂಸತ್ತು ರಚಿಸಿದ ಯಾವುದೇ ಕಾನೂನು, ರಾಜ್ಯಕ್ಷೇತ್ರಾತೀತ ಪರಿಣಾಮವುಳ್ಳದ್ದಾಗಿರುವುದೆಂಬ ಕಾರಣದ ಮೇಲೆ ಅಸಿಂಧುವಾಗಿದೆ ಎಂದು ಭಾವಿಸತಕ್ಕದ್ದಲ್ಲ.

**246. ಸಂಸತ್ತು ಮತ್ತು ರಾಜ್ಯಗಳ ವಿಧಾನ ಮಂಡಲಗಳು ರಚಿಸಿದ ಕಾನೂನುಗಳ ವಸ್ತು ವಿಷಯ:-** (1) (2)ನೆಯ ಮತ್ತು (3)ನೆಯ ಖಂಡಗಳಲ್ಲಿ ಏನೇ ಇದ್ದಾಗ್ಯೂ, ಏಳನೆಯ ಅನುಸೂಚಿಯ Iನೇ ಪಟ್ಟಿಯಲ್ಲಿ (ಇದನ್ನು ಈ ಸಂವಿಧಾನದಲ್ಲಿ 'ಒಕ್ಕೂಟ ಪಟ್ಟಿ' ಎಂದು ಉಲ್ಲೇಖಿಸಲಾಗಿದೆ) ನಮೂದಿಸಿರುವ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸಲು ಸಂಸತ್ತು ಅನನ್ಯ ಅಧಿಕಾರವನ್ನು ಹೊಂದಿರುತ್ತದೆ.

(2) (3)ನೆಯ ಖಂಡದಲ್ಲಿ ಏನೇ ಇದ್ದಾಗ್ಯೂ, ಸಂಸತ್ತು, ಮತ್ತು (1)ನೆಯ ಖಂಡಕ್ಕೊಳಪಟ್ಟು [1]* * * ಯಾವುದೇ ರಾಜ್ಯದ ವಿಧಾನ ಮಂಡಲವು ಸಹ, ಏಳನೆಯ ಅನುಸೂಚಿಯ IIIನೆಯ ಪಟ್ಟಿಯಲ್ಲಿ (ಈ ಸಂವಿಧಾನದಲ್ಲಿ ಇದನ್ನು 'ಸಮವರ್ತಿಪಟ್ಟಿ' ಎಂದು ಉಲ್ಲೇಖಿಸಲಾಗಿದೆ) ನಮೂದಿಸಿರುವ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸಲು ಅಧಿಕಾರವನ್ನು ಹೊಂದಿರುತ್ತದೆ.

(3) (1)ನೆಯ ಮತ್ತು (2)ನೆಯ ಖಂಡಗಳಿಗೆ ಒಳಪಟ್ಟು, [1]* * * ಯಾವುದೇ ರಾಜ್ಯದ ವಿಧಾನ ಮಂಡಲವು ಏಳನೆಯ ಅನುಸೂಚಿಯ IIನೆಯ ಪಟ್ಟಿಯಲ್ಲಿ (ಈ ಸಂವಿಧಾನದಲ್ಲಿ ಇದನ್ನು 'ರಾಜ್ಯಪಟ್ಟಿ' ಎಂದು ಉಲ್ಲೇಖಿಸಲಾಗಿದೆ) ನಮೂದಿಸಿರುವ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಅಂಥ ರಾಜ್ಯಕ್ಕಾಗಿ ಅಥವಾ ಆ ರಾಜ್ಯದ ಯಾವುದೇ ಭಾಗಕ್ಕಾಗಿ ಕಾನೂನುಗಳನ್ನು ರಚಿಸಲು ಅನನ್ಯ ಅಧಿಕಾರವನ್ನು ಹೊಂದಿರುತ್ತದೆ.

(4) [2][ಒಂದು ರಾಜ್ಯದಲ್ಲಿ] ಒಳಗೊಂಡಿರದ ಭಾರತದ ರಾಜ್ಯಕ್ಷೇತ್ರದ ಯಾವುದೇ ಭಾಗಕ್ಕಾಗಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಆ ವಿಷಯವು ರಾಜ್ಯಪಟ್ಟಿಯಲ್ಲಿ ನಮೂದಿಸಿರುವ ವಿಷಯವಾಗಿದ್ದಾಗ್ಯೂ, ಕಾನೂನುಗಳನ್ನು ರಚಿಸಲು ಸಂಸತ್ತು ಅಧಿಕಾರವನ್ನು ಹೊಂದಿರುತ್ತದೆ.

**247. ಕೆಲವು ಹೆಚ್ಚುವರಿ ನ್ಯಾಯಾಲಯಗಳ ಸ್ಥಾಪನೆಗಾಗಿ ಉಪಬಂಧಿಸಲು ಸಂಸತ್ತಿನ ಅಧಿಕಾರ:-** ಈ ಅಧ್ಯಾಯದಲ್ಲಿ ಏನೇ ಇದ್ದಾಗ್ಯೂ, ಸಂಸತ್ತು ರಚಿಸಿದ ಕಾನೂನುಗಳ ಅಥವಾ ಒಕ್ಕೂಟ ಪಟ್ಟಿಯಲ್ಲಿ ನಮೂದಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಯಾವುವೇ ಕಾನೂನುಗಳ ಉತ್ತಮ ನಿರ್ವಹಣೆಗಾಗಿ ಯಾವುದೇ ಹೆಚ್ಚುವರಿ ನ್ಯಾಯಾಲಯಗಳನ್ನು ಸ್ಥಾಪಿಸಲು ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಬಹುದು.

**248. ಕಾನೂನು ರಚನೆಗೆ ಸಂಬಂಧಿಸಿದಂತೆ ಉಳಿಕೆ ಅಧಿಕಾರಗಳು:-** (1) ಸಮವರ್ತಿ ಪಟ್ಟಿಯಲ್ಲಿ ಅಥವಾ ರಾಜ್ಯಪಟ್ಟಿಯಲ್ಲಿ ನಮೂದಿಸಿರದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಕಾನೂನನ್ನು ರಚಿಸಲು ಸಂಸತ್ತು ಅನನ್ಯ ಅಧಿಕಾರವನ್ನು ಹೊಂದಿರುತ್ತದೆ.

(2) ಅಂಥ ಅಧಿಕಾರವು, ಆ ಎರಡು ಪಟ್ಟಿಗಳ ಪೈಕಿ ಯಾವುದೇ ಪಟ್ಟಿಯಲ್ಲಿ ನಮೂದಿಸಿರದ ತೆರಿಗೆಯನ್ನು ವಿಧಿಸುವ ಯಾವುದೇ ಕಾನೂನನ್ನು ರಚಿಸುವ ಅಧಿಕಾರವನ್ನು ಒಳಗೊಳ್ಳತಕ್ಕದ್ದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಅಥವಾ (ಬಿ) ಭಾಗದಲ್ಲಿ ನಿರ್ದಿಷ್ಟಪಡಿಸಿರುವ" ಎಂಬ ಪದಗಳನ್ನು, ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ ಎ ಅಥವಾ ಬಿ ಭಾಗದಲ್ಲಿ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

**249. ರಾಜ್ಯಪಟ್ಟಿಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಹಿತದೃಷ್ಟಿಯಿಂದ ಕಾನೂನು ರಚಿಸಲು ಸಂಸತ್ತಿನ ಅಧಿಕಾರ:**– (1) ಈ ಅಧ್ಯಾಯದಲ್ಲಿ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದಾಗ್ಯೂ, ನಿರ್ಣಯದಲ್ಲಿ ನಿರ್ದಿಷ್ಟಪಡಿಸಿರುವ ರಾಜ್ಯಪಟ್ಟಿಯಲ್ಲಿ ನಮೂದಿಸಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸಂಸತ್ತು ಕಾನೂನುಗಳನ್ನು ರಚಿಸುವುದು ರಾಷ್ಟ್ರದ ಹಿತದೃಷ್ಟಿಯಿಂದ ಅವಶ್ಯವೆಂದು ಅಥವಾ ವಿಹಿತವೆಂದು ರಾಜ್ಯ ಸಭೆಯು, ಹಾಜರಿದ್ದು ಮತಕೊಡುವ ಸದಸ್ಯರಲ್ಲಿ ಮೂರನೇ ಎರಡರಷ್ಟಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ಬೆಂಬಲಿಸಿದ ನಿರ್ಣಯದ ಮೂಲಕ ಘೋಷಿಸಿದ್ದರೆ ಆ ನಿರ್ಣಯವು ಜಾರಿಯಲ್ಲಿರುವಾಗ, ಆ ವಿಷಯಕ್ಕೆ ಸಂಬಂಧಿಸಿದಂತೆ ಭಾರತದ ಸಮಗ್ರ ರಾಜ್ಯಕ್ಷೇತ್ರಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಸಂಸತ್ತು ಕಾನೂನುಗಳನ್ನು ರಚಿಸುವುದು ಕಾನೂನುಬದ್ಧವಾಗಿರತಕ್ಕದ್ದು.

(2) (1)ನೆಯ ಖಂಡದ ಮೇರೆಗೆ ಅಂಗೀಕೃತವಾದ ನಿರ್ಣಯವು, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಒಂದು ವರ್ಷಕ್ಕೆ ಮೀರದ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು:

ಪರಂತು, ಅಂಥ ಯಾವುದೇ ನಿರ್ಣಯವು ಜಾರಿಯಲ್ಲಿರುವುದು ಮುಂದುವರಿಯುವುದನ್ನು ಅನುಮೋದಿಸುವ ನಿರ್ಣಯವು (1)ನೆಯ ಖಂಡದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಅಂಗೀಕೃತವಾದರೆ ಮತ್ತು ಅದು ಹಾಗೆ ಅಂಗೀಕೃತವಾದಾಗಲೆಲ್ಲಾ, ಅಂಥ ನಿರ್ಣಯವು ಯಾವ ದಿನಾಂಕದಂದು ಈ ಖಂಡದ ಮೇರೆಗೆ ಜಾರಿಯಲ್ಲಿರುವುದು ಅನ್ಯಥಾ ನಿಂತು ಹೋಗುತ್ತಿತ್ತೋ ಆ ದಿನಾಂಕದಿಂದ ಮತ್ತೆ ಒಂದು ವರ್ಷದ ಅವಧಿಯವರೆಗೆ ಅದು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

(3) (1)ನೆಯ ಖಂಡದ ಮೇರೆಗಿನ ನಿರ್ಣಯವು ಅಂಗೀಕೃತವಾಗಿರದಿದ್ದರೆ ಯಾವ ಕಾನೂನನ್ನು ರಚಿಸಲು ಸಂಸತ್ತು ಸಕ್ಷಮವಾಗಿರುತ್ತಿರಲಿಲ್ಲವೋ ಅಂಥ ಕಾನೂನನ್ನು ಸಂಸತ್ತು ರಚಿಸಿದರೆ, ಹಾಗೆ ಸಕ್ಷಮವಾಗಿಲ್ಲದಿರುವಷ್ಟರಮಟ್ಟಿಗೆ, ಆ ನಿರ್ಣಯವು ಜಾರಿಯಲ್ಲಿರುವುದು ನಿಂತುಹೋದ ತರುವಾಯ ಆರು ತಿಂಗಳ ಅವಧಿಯು ಮುಕ್ತಾಯವಾದ ನಂತರ, ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟ ಕಾರ್ಯಗಳಿಗೆ ಸಂಬಂಧಿಸಿದಂತೆ ಹೊರತು, ಆ ಕಾನೂನು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.

**250. ತುರ್ತು ಪರಿಸ್ಥಿತಿಗೆ ಸಂಬಂಧಿಸಿದ ಉದ್ಘೋಷಣೆಯು ಜಾರಿಯಲ್ಲಿರುವಾಗ ರಾಜ್ಯಪಟ್ಟಿಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನು ರಚಿಸಲು ಸಂಸತ್ತಿನ ಅಧಿಕಾರ:**– (1) ಈ ಅಧ್ಯಾಯದಲ್ಲಿ ಏನೇ ಇದ್ದಾಗ್ಯೂ, ತುರ್ತು ಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಾಗ, ರಾಜ್ಯಪಟ್ಟಿಯಲ್ಲಿ ನಮೂದಿಸಿದ ವಿಷಯಗಳ ಪೈಕಿ ಯಾವುದೇ ವಿಷಯದ ಬಗ್ಗೆ ಭಾರತದ ಸಮಗ್ರ ರಾಜ್ಯಕ್ಷೇತ್ರಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ ಕಾನೂನುಗಳನ್ನು ರಚಿಸಲು ಸಂಸತ್ತು ಅಧಿಕಾರವನ್ನು ಹೊಂದಿರತಕ್ಕದ್ದು.

(2) ತುರ್ತು ಪರಿಸ್ಥಿತಿಯ ಉದ್ಘೋಷಣೆಯನ್ನು ಹೊರಡಿಸದೆ ಇದ್ದಲ್ಲಿ, ಯಾವ ಕಾನೂನನ್ನು ರಚಿಸಲು ಸಂಸತ್ತು ಸಕ್ಷಮವಾಗುತ್ತಿರಲಿಲ್ಲವೋ ಅಂಥ ಕಾನೂನನ್ನು ಸಂಸತ್ತು ರಚಿಸಿದರೆ, ಹಾಗೆ ಸಕ್ಷಮವಾಗಿಲ್ಲದಿರುವಷ್ಟರ ಮಟ್ಟಿಗೆ, ಆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋದ ತರುವಾಯ ಆರು ತಿಂಗಳುಗಳ ಅವಧಿಯು ಮುಕ್ತಾಯವಾದ ನಂತರ, ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟ ಕಾರ್ಯಗಳಿಗೆ ಸಂಬಂಧಿಸಿದಂತೆ ಹೊರತು, ಆ ಕಾನೂನು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.

**251. 249 ಮತ್ತು 250ನೆಯ ಅನುಚ್ಛೇದಗಳ ಮೇರೆಗೆ ಸಂಸತ್ತು ರಚಿಸಿದ ಕಾನೂನುಗಳು ಮತ್ತು ರಾಜ್ಯಗಳ ವಿಧಾನ ಮಂಡಲಗಳು ರಚಿಸಿದ ಕಾನೂನುಗಳ ನಡುವಣ ಅಸಂಗತತೆ:**– 249 ಮತ್ತು 250ನೆಯ ಅನುಚ್ಛೇದಗಳಲ್ಲಿ ಇರುವುದು ಯಾವುದೂ, ಈ ಸಂವಿಧಾನದ ಮೇರೆಗೆ ಯಾವ ಕಾನೂನನ್ನು ರಚಿಸಲು ಒಂದು ರಾಜ್ಯದ ವಿಧಾನ ಮಂಡಲವು ಅಧಿಕಾರ ಹೊಂದಿರುವುದೋ ಆ ಯಾವುದೇ ಕಾನೂನನ್ನು ರಚಿಸುವ ಅಧಿಕಾರವನ್ನು ನಿರ್ಬಂಧಿಸತಕ್ಕದ್ದಲ್ಲ, ಆದರೆ ಒಂದು ರಾಜ್ಯದ ವಿಧಾನ ಮಂಡಲವು ರಚಿಸಿದ ಕಾನೂನಿನ ಯಾವುದೇ ಉಪಬಂಧವು, ಸಂಸತ್ತು ಸದರಿ ಅನುಚ್ಛೇದಗಳಲ್ಲಿ ಯಾವುದರ ಮೇರೆಗಾದರೂ ಯಾವ ಕಾನೂನನ್ನು ರಚಿಸಲು ಅಧಿಕಾರವನ್ನು ಹೊಂದಿದೆಯೋ, ಸಂಸತ್ತು ಅಂಗೀಕರಿಸಿದ ಆ ಕಾನೂನಿನ ಉಪಬಂಧಕ್ಕೆ ವಿರುದ್ಧವಾಗಿದ್ದರೆ, ರಾಜ್ಯ ವಿಧಾನ ಮಂಡಲವು ಆ ಕಾನೂನನ್ನು ಮುಂಚೆಯೇ ರಚಿಸಿರಲಿ ಅಥವಾ ತರುವಾಯವೇ ರಚಿಸಿರಲಿ ಸಂಸತ್ತು ಅಂಗೀಕರಿಸಿದ ಆ ಕಾನೂನು ಪ್ರಭಾವವುಳ್ಳದ್ದಾಗಿರತಕ್ಕದ್ದು ಮತ್ತು ರಾಜ್ಯದ ವಿಧಾನಮಂಡಲವು ರಚಿಸಿದ ಕಾನೂನು, ಸಂಸತ್ತು ರಚಿಸಿದ ಕಾನೂನಿಗೆ ವಿರುದ್ಧವಾಗಿರುವಷ್ಟರಮಟ್ಟಿಗೆ ಮತ್ತು ಸಂಸತ್ತು ರಚಿಸಿದ ಕಾನೂನು ಪರಿಣಾಮಕಾರಿಯಾಗಿರುವವರೆಗೆ ಮಾತ್ರ ಜಾರಿಗೊಳಿಸುವಂಥದ್ದಾಗಿರತಕ್ಕದ್ದಲ್ಲ.

**252. ಎರಡು ಅಥವಾ ಹೆಚ್ಚು ರಾಜ್ಯಗಳ ಸಮ್ಮತಿಯಿಂದ ಆ ರಾಜ್ಯಗಳಿಗಾಗಿ ಕಾನೂನು ರಚಿಸಲು ಸಂಸತ್ತಿಗಿರುವ ಅಧಿಕಾರ ಮತ್ತು ಇತರ ಯಾವುದೇ ರಾಜ್ಯವು ಅಂಥ ಕಾನೂನನ್ನು ಅಂಗೀಕರಿಸುವುದು:-** (1) 249 ಮತ್ತು 250ನೆಯ ಅನುಚ್ಛೇದಗಳಲ್ಲಿ ಉಪಬಂಧಿಸಿದಂತೆ ಹೊರತು ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಸಂಸತ್ತು ರಾಜ್ಯಗಳಿಗಾಗಿ ಕಾನೂನುಗಳನ್ನು ರಚಿಸುವ ಅಧಿಕಾರವನ್ನು ಹೊಂದಿರುವುದಿಲ್ಲವೋ ಆ ಯಾವುದೇ ವಿಷಯಗಳನ್ನು ಸಂಸತ್ತು ಕಾನೂನಿನ ಮೂಲಕ ಅಂಥ ರಾಜ್ಯಗಳಲ್ಲಿ ವಿನಿಯಮಗೊಳಿಸುವುದು ಅಪೇಕ್ಷಣೀಯವೆಂದು ಎರಡು ಅಥವಾ ಹೆಚ್ಚು ರಾಜ್ಯಗಳ ವಿಧಾನ ಮಂಡಲಗಳಿಗೆ ಕಂಡುಬಂದರೆ ಮತ್ತು ಆ ರಾಜ್ಯಗಳ ವಿಧಾನ ಮಂಡಲಗಳ ಎಲ್ಲಾ ಸದನಗಳಿಂದ ನಿರ್ಣಯಗಳು ಹಾಗೆಂದು ಅಂಗೀಕೃತವಾದರೆ ಆ ನಿರ್ಣಯಗಳಿಗನುಸಾರವಾಗಿ ಆ ವಿಷಯವನ್ನು ವಿನಿಯಮಗೊಳಿಸಲು ಒಂದು ಅಧಿನಿಯಮವನ್ನು ಸಂಸತ್ತು ಅಂಗೀಕರಿಸುವುದು ಕಾನೂನುಬದ್ಧವಾಗಿರತಕ್ಕದ್ದು ಹಾಗೂ ಹಾಗೆ ಅಂಗೀಕೃತವಾದ ಯಾವುದೇ ಅಧಿನಿಯಮವು ಅಂಥ ರಾಜ್ಯಗಳಿಗೆ ಅನ್ವಯವಾಗತಕ್ಕದ್ದು ಮತ್ತು ಆ ತರುವಾಯ ಯಾವ ರಾಜ್ಯದ ವಿಧಾನ ಮಂಡಲದ ಸದನವು ಅಥವಾ ಎರಡು ಸದನಗಳಿರುವಲ್ಲಿ ಪ್ರತಿಯೊಂದು ಸದನವು ಆ ಅಧಿನಿಯಮವನ್ನು ಆ ರಾಜ್ಯಕ್ಕೆ ಅನ್ವಯಿಸಬೇಕೆಂಬ ಬಗ್ಗೆ ನಿರ್ಣಯವನ್ನು ಅನುಮೋದಿಸುವ ಮೂಲಕ ಅಂಗೀಕರಿಸುವುದೋ ಆ ಯಾವುದೇ ಇತರ ರಾಜ್ಯಕ್ಕೂ ಸಹ ಅದು ಅನ್ವಯಿಸತಕ್ಕದ್ದು.

(2) ಹಾಗೆ ಸಂಸತ್ತಿನಿಂದ ಅಂಗೀಕೃತವಾದ ಯಾವುದೇ ಅಧಿನಿಯಮವನ್ನು ಸಂಸತ್ತಿನಿಂದ ಅದೇ ರೀತಿಯಲ್ಲಿ ಅಂಗೀಕೃತವಾದ ಅಥವಾ ಅನುಮೋದಿತವಾದ ಒಂದು ಅಧಿನಿಯಮದ ಮೂಲಕ ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು, ಆದರೆ ಆ ಅಧಿನಿಯಮವು ಯಾವ ರಾಜ್ಯಕ್ಕೆ ಅನ್ವಯವಾಗುತ್ತದೆಯೋ ಆ ರಾಜ್ಯಕ್ಕೆ ಸಂಬಂಧಿಸಿದಂತೆ, ಅದು ಆ ರಾಜ್ಯದ ವಿಧಾನಮಂಡಲದ ಒಂದು ಅಧಿನಿಯಮದ ಮೂಲಕ ತಿದ್ದುಪಡಿಯಾಗತಕ್ಕದ್ದಲ್ಲ ಅಥವಾ ನಿರಸನಗೊಳ್ಳತಕ್ಕದ್ದಲ್ಲ.

**253. ಅಂತರರಾಷ್ಟ್ರೀಯ ಒಪ್ಪಂದಗಳನ್ನು ಜಾರಿಗೆ ತರಲು ಕಾನೂನು ರಚನೆ:-** ಈ ಅಧ್ಯಾಯದ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದಾಗ್ಯೂ, ಇತರ ಯಾವುದೇ ದೇಶದೊಡನೆ ಅಥವಾ ದೇಶಗಳೊಡನೆ ಮಾಡಿಕೊಂಡಿರುವ ಕೌಲು, ಒಪ್ಪಂದ ಅಥವಾ ಒಡಂಬಡಿಕೆಯನ್ನು ಅಥವಾ ಯಾವುದೇ ಅಂತರರಾಷ್ಟ್ರೀಯ ಸಮ್ಮೇಳನ, ಸಂಘ ಅಥವಾ ಇತರ ನಿಕಾಯದಲ್ಲಿ ತೆಗೆದುಕೊಂಡ ಯಾವುದೇ ತೀರ್ಮಾನವನ್ನು ಕಾರ್ಯಗತಗೊಳಿಸುವುದಕ್ಕಾಗಿ ಭಾರತದ ಸಮಗ್ರ ರಾಜ್ಯಕ್ಷೇತ್ರಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ, ಯಾವುದೇ ಕಾನೂನನ್ನು ರಚಿಸಲು ಸಂಸತ್ತು ಅಧಿಕಾರವನ್ನು ಹೊಂದಿರುತ್ತದೆ.

**254. ಸಂಸತ್ತು ರಚಿಸಿದ ಮತ್ತು ರಾಜ್ಯಗಳ ವಿಧಾನ ಮಂಡಲಗಳು ರಚಿಸಿದ ಕಾನೂನುಗಳ ನಡುವಣ ಅಸಂಗತತೆ:-** (1) ಯಾವ ಕಾನೂನನ್ನು ಅಧಿನಿಯಮಿಸಲು ಸಂಸತ್ತು ಸಕ್ಷಮವಾಗಿರುವುದೋ, ಸಂಸತ್ತು ರಚಿಸಿದ ಆ ಕಾನೂನಿನ ಯಾವುದೇ ಉಪಬಂಧಕ್ಕೆ ಅಥವಾ ಸಮವರ್ತಿಪಟ್ಟಿಯಲ್ಲಿ ನಮೂದಾಗಿರುವ ವಿಷಯಗಳ ಪೈಕಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಅಸ್ತಿತ್ವದಲ್ಲಿರುವ ಕಾನೂನಿನ ಯಾವುದೇ ಉಪಬಂಧಕ್ಕೆ ಒಂದು ರಾಜ್ಯದ ವಿಧಾನ ಮಂಡಲವು ರಚಿಸಿದ ಕಾನೂನಿನ ಯಾವುದೇ ಉಪಬಂಧವು ವಿರುದ್ಧವಾಗಿದ್ದರೆ, ಆಗ ಅಂಥ ರಾಜ್ಯದ ವಿಧಾನಮಂಡಲವು ಆ ಕಾನೂನನ್ನು ಮುಂಚೆಯೇ ರಚಿಸಿರಲಿ ಅಥವಾ ತರುವಾಯವೇ ರಚಿಸಿರಲಿ (2)ನೇ ಖಂಡದ ಉಪಬಂಧಗಳಿಗೆ ಒಳಪಟ್ಟು ಸಂಸತ್ತು ರಚಿಸಿದ ಕಾನೂನು ಅಥವಾ ಸಂದರ್ಭಾನುಸಾರ ಅಸ್ತಿತ್ವದಲ್ಲಿರುವ ಕಾನೂನು ಪ್ರಭಾವವುಳ್ಳದ್ದಾಗಿರತಕ್ಕದ್ದು ಮತ್ತು ಆ ರಾಜ್ಯದ ವಿಧಾನ ಮಂಡಲವು ರಚಿಸಿದ ಕಾನೂನು ಹಾಗೇ ವಿರುದ್ಧವಾಗಿರುವಷ್ಟರ ಮಟ್ಟಿಗೆ ಶೂನ್ಯವಾಗಿರತಕ್ಕದ್ದು.

(2) [1]* * * ಒಂದು ರಾಜ್ಯದ ವಿಧಾನಮಂಡಲವು ಸಮವರ್ತಿಪಟ್ಟಿಯಲ್ಲಿ ನಮೂದಾಗಿರುವ ವಿಷಯಗಳ ಪೈಕಿ ಯಾವುದೇ ವಿಷಯದ ಬಗ್ಗೆ ರಚಿಸಿದ ಕಾನೂನು, ಆ ವಿಷಯಕ್ಕೆ ಸಂಬಂಧಿಸಿದಂತೆ ಸಂಸತ್ತು ರಚಿಸಿದ ಹಿಂದಿನ ಕಾನೂನಿನ ಉಪಬಂಧಗಳಿಗೆ ಅಥವಾ ಅಸ್ತಿತ್ವದಲ್ಲಿರುವ ಕಾನೂನಿಗೆ ವಿರುದ್ಧವಾಗಿರುವ ಯಾವುದೇ ಉಪಬಂಧವನ್ನು ಒಳಗೊಂಡಿರುವಲ್ಲಿ, ಆಗ ಅಂಥ ರಾಜ್ಯ ವಿಧಾನಮಂಡಲವು ಹಾಗೆ ರಚಿಸಿದ ಕಾನೂನನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾಯ್ದಿರಿಸಿದ್ದರೆ ಮತ್ತು ಅದಕ್ಕೆ ಅವನ ಅನುಮತಿ ದೊರೆತಿದ್ದರೆ, ಆ ರಾಜ್ಯದಲ್ಲಿ ಅದು ಪ್ರಭಾವವುಳ್ಳದ್ದಾಗಿರತಕ್ಕದ್ದು:

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಅಥವಾ (ಬಿ) ಭಾಗದಲ್ಲಿ ನಿರ್ದಿಷ್ಟಪಡಿಸಿರುವ" ಎಂಬ ಪದಗಳನ್ನೂ, ಅಕ್ಷರಗಳನ್ನೂ ಬಿಟ್ಟುಬಿಡಲಾಗಿದೆ.

ಪರಂತು, ಈ ಖಂಡದಲ್ಲಿ ಇರುವುದು ಯಾವುದೂ ಅಂಥ ರಾಜ್ಯದ ವಿಧಾನಮಂಡಲವು ಹಾಗೆ ರಚಿಸಿದ ಕಾನೂನಿಗೆ ಸೇರ್ಪಡೆ ಮಾಡುವಂಥ, ಅದನ್ನು ತಿದ್ದುಪಡಿ ಮಾಡುವಂಥ, ವ್ಯತ್ಯಾಸಗೊಳಿಸುವಂಥ ಅಥವಾ ನಿರಸನಗೊಳಿಸುವಂಥ ಕಾನೂನೂ ಸೇರಿದಂತೆ ಅದೇ ವಿಷಯಕ್ಕೆ ಸಂಬಂಧಿಸಿದ ಯಾವುದೇ ಕಾನೂನನ್ನು ಯಾವುದೇ ಕಾಲದಲ್ಲಿ ಅಧಿನಿಯಮಿಸದಂತೆ ಸಂಸತ್ತನ್ನು ಪ್ರತಿಬಂಧಿಸತಕ್ಕದ್ದಲ್ಲ.

**255. ಶಿಫಾರಸುಗಳಿಗೆ ಮತ್ತು ಪೂರ್ವ ಮಂಜೂರಾತಿಗಳಿಗೆ ಸಂಬಂಧಿಸಿದ ಅಗತ್ಯಗಳನ್ನು ಕೇವಲ ಪ್ರಕ್ರಿಯೆಗೆ ಸಂಬಂಧಿಸಿದ ವಿಷಯಗಳೆಂಬಂತೆ ಪರಿಗಣಿಸುವುದು:–** ಸಂಸತ್ತಿನ ಅಥವಾ [1]* * *ಒಂದು ರಾಜ್ಯದ ವಿಧಾನ ಮಂಡಲದ ಯಾವುದೇ ಅಧಿನಿಯಮಕ್ಕೆ,–

(ಎ) ರಾಜ್ಯಪಾಲನ ಶಿಫಾರಸು ಅಗತ್ಯವಾಗಿದ್ದು, ರಾಜ್ಯಪಾಲನು ಅಥವಾ ರಾಷ್ಟ್ರಪತಿಯು ಅದಕ್ಕೆ ಅನುಮತಿ ಕೊಟ್ಟಿದ್ದರೆ;

(ಬಿ) ರಾಜಪ್ರಮುಖನ ಶಿಫಾರಸು ಅಗತ್ಯವಾಗಿದ್ದು ರಾಜಪ್ರಮುಖನು ಅಥವಾ ರಾಷ್ಟ್ರಪತಿಯು ಅದಕ್ಕೆ ಅನುಮತಿಕೊಟ್ಟಿದ್ದರೆ;

(ಸಿ) ರಾಷ್ಟ್ರಪತಿಯ ಶಿಫಾರಸು ಅಥವಾ ಪೂರ್ವ ಮಂಜೂರಾತಿಯು ಅಗತ್ಯವಾಗಿದ್ದು ಅದಕ್ಕೆ ರಾಷ್ಟ್ರಪತಿಯು ಅನುಮತಿಯನ್ನು ಕೊಟ್ಟಿದ್ದರೆ

– ಈ ಸಂವಿಧಾನದ ಮೇರೆಗೆ ಅಗತ್ಯವಾಗಿರುವ ಯಾವುದೇ ಶಿಫಾರಸು ಅಥವಾ ಪೂರ್ವ ಮಂಜೂರಾತಿಯು ಲಭಿಸಿಲ್ಲವೆಂಬ ಕಾರಣಮಾತ್ರದಿಂದಲೇ ಅಂಥ ಯಾವುದೇ ಅಧಿನಿಯಮವು ಅಥವಾ ಅಂಥ ಯಾವುದೇ ಅಧಿನಿಯಮದಲ್ಲಿನ ಯಾವುದೇ ಉಪಬಂಧವು ಅಸಿಂಧುವಾಗತಕ್ಕದ್ದಲ್ಲ.

## ಅಧ್ಯಾಯ II – ಆಡಳಿತ ಸಂಬಂಧಗಳು

### ಸಾಮಾನ್ಯ

**256. ರಾಜ್ಯಗಳ ಹಾಗೂ ಒಕ್ಕೂಟದ ಬಾಧ್ಯತೆ:–** ಪ್ರತಿಯೊಂದು ರಾಜ್ಯದ ಕಾರ್ಯಾಂಗ ಅಧಿಕಾರವನ್ನು ಸಂಸತ್ತು ರಚಿಸಿದ ಕಾನೂನುಗಳ ಮತ್ತು ಆ ರಾಜ್ಯಕ್ಕೆ ಅನ್ವಯವಾಗುವಂಥ ಅಸ್ತಿತ್ವದಲ್ಲಿರುವ ಯಾವುವೇ ಕಾನೂನುಗಳ ಪಾಲನೆಯನ್ನು ಸುನಿಶ್ಚಿತಗೊಳಿಸುವ ಹಾಗೆ ಚಲಾಯಿಸತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವೆಂದು ಭಾರತ ಸರ್ಕಾರಕ್ಕೆ ತೋರಬಹುದಾದಂಥ ನಿರ್ದೇಶನಗಳನ್ನು ಒಂದು ರಾಜ್ಯಕ್ಕೆ ನೀಡುವುದಕ್ಕೆ ಸಂಬಂಧಿಸಿದಂತೆ ಒಕ್ಕೂಟದ ಕಾರ್ಯಾಂಗ ಅಧಿಕಾರವನ್ನು ವಿಸ್ತರಿಸತಕ್ಕದ್ದು.

**257. ಕೆಲವು ಸಂದರ್ಭಗಳಲ್ಲಿ ರಾಜ್ಯಗಳ ಮೇಲೆ ಒಕ್ಕೂಟದ ನಿಯಂತ್ರಣ:–** (1) ಪ್ರತಿಯೊಂದು ರಾಜ್ಯದ ಕಾರ್ಯಾಂಗ ಅಧಿಕಾರವನ್ನು ಒಕ್ಕೂಟದ ಕಾರ್ಯಾಂಗ ಅಧಿಕಾರದ ಚಲಾವಣೆಗೆ ಅಡಚಣೆ ಅಥವಾ ಪ್ರತಿಕೂಲವಾಗದ ಹಾಗೆ ಚಲಾಯಿಸತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವೆಂದು ಭಾರತ ಸರ್ಕಾರಕ್ಕೆ ತೋರಬಹುದಾದಂಥ ನಿರ್ದೇಶನಗಳನ್ನು ಒಂದು ರಾಜ್ಯಕ್ಕೆ ನೀಡುವುದಕ್ಕೆ ಸಂಬಂಧಿಸಿದಂತೆ ಒಕ್ಕೂಟದ ಕಾರ್ಯಾಂಗ ಅಧಿಕಾರವನ್ನು ವಿಸ್ತರಿಸತಕ್ಕದ್ದು.

(2) ಒಕ್ಕೂಟದ ಕಾರ್ಯಾಂಗ ಅಧಿಕಾರವನ್ನು, ರಾಷ್ಟ್ರೀಯ ಮತ್ತು ಸೈನಿಕ ಮಹತ್ವವುಳ್ಳವುಗಳೆಂಬುದಾಗಿ ನಿರ್ದೇಶನದಲ್ಲಿ ಘೋಷಿಸಿರುವ ಸಂಪರ್ಕ ಸಾಧನಗಳ ನಿರ್ಮಾಣಕ್ಕೆ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ಒಂದು ರಾಜ್ಯಕ್ಕೆ ನಿರ್ದೇಶನಗಳನ್ನು ನೀಡುವುದಕ್ಕೆ ಸಹ ವಿಸ್ತರಿಸತಕ್ಕದ್ದು:

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಅಥವಾ (ಬಿ) ಭಾಗದಲ್ಲಿ ನಿರ್ದಿಷ್ಟಪಡಿಸಿರುವ" ಎಂಬ ಪದಗಳನ್ನೂ, ಅಕ್ಷರಗಳನ್ನೂ ಬಿಟ್ಟುಬಿಡಲಾಗಿದೆ.

ಪರಂತು, ಈ ಖಂಡದಲ್ಲಿ ಇರುವುದು ಯಾವುದೂ, ಹೆದ್ದಾರಿಗಳನ್ನು ಅಥವಾ ಜಲಮಾರ್ಗಗಳನ್ನು ರಾಷ್ಟ್ರೀಯ ಹೆದ್ದಾರಿಗಳೆಂಬುದಾಗಿ ಅಥವಾ ರಾಷ್ಟ್ರೀಯ ಜಲಮಾರ್ಗಗಳೆಂಬುದಾಗಿ ಘೋಷಿಸುವುದಕ್ಕೆ ಸಂಸತ್ತಿಗಿರುವ ಅಧಿಕಾರವನ್ನು ಅಥವಾ ಹಾಗೆ ಘೋಷಿಸಲಾದ ಹೆದ್ದಾರಿಗಳಿಗೆ ಅಥವಾ ಜಲಮಾರ್ಗಗಳಿಗೆ ಸಂಬಂಧಿಸಿದಂತೆ ಒಕ್ಕೂಟದ ಅಧಿಕಾರವನ್ನು ಅಥವಾ ನೌಕಾ, ಸೈನಿಕ ಮತ್ತು ವಾಯುಬಲಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಅದರ ಪ್ರಕಾರ್ಯಗಳ ಭಾಗವಾಗಿ ಸಂಪರ್ಕ ಸಾಧನಗಳ ನಿರ್ಮಾಣ ಮತ್ತು ನಿರ್ವಹಣೆಯ ಬಗ್ಗೆ ಒಕ್ಕೂಟದ ಅಧಿಕಾರವನ್ನು ನಿರ್ಬಂಧಿಸುತ್ತದೆಂದು ಭಾವಿಸತಕ್ಕದ್ದಲ್ಲ.

(3) ಒಕ್ಕೂಟದ ಕಾರ್ಯಾಂಗ ಅಧಿಕಾರವನ್ನು, ಒಂದು ರಾಜ್ಯದಲ್ಲಿರುವ ರೈಲ್ವೆಮಾರ್ಗಗಳ ರಕ್ಷಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಆ ರಾಜ್ಯಕ್ಕೆ ನಿರ್ದೇಶನಗಳನ್ನು ನೀಡುವುದಕ್ಕೆ ಸಹ ವಿಸ್ತರಿಸತಕ್ಕದ್ದು.

(4) ಯಾವುದೇ ಸಂಪರ್ಕ ಸಾಧನಗಳ ನಿರ್ಮಾಣಕ್ಕೆ ಅಥವಾ ನಿರ್ವಹಣೆಗೆ ಸಂಬಂಧಿಸಿದಂತೆ (2)ನೆಯ ಖಂಡದ ಮೇರೆಗೆ ಅಥವಾ ಯಾವುವೇ ರೈಲುಮಾರ್ಗಗಳ ರಕ್ಷಣೆಗಾಗಿ ಕೈಕೊಳ್ಳಬೇಕಾದ ಕ್ರಮಗಳಿಗೆ ಸಂಬಂಧಿಸಿದಂತೆ (3)ನೆಯ ಖಂಡದ ಮೇರೆಗೆ ಒಂದು ರಾಜ್ಯಕ್ಕೆ ನೀಡಿರುವ ಯಾವುದೇ ನಿರ್ದೇಶನವನ್ನು ಪಾಲಿಸುವಾಗ, ಅಂಥ ನಿರ್ದೇಶನವನ್ನು ನೀಡಿರದಿದ್ದ ಪಕ್ಷದಲ್ಲಿ, ರಾಜ್ಯದ ವಾಡಿಕೆಯ ಕರ್ತವ್ಯಗಳನ್ನು ನಿರ್ವಹಿಸುವಾಗ ಅದು ವಹಿಸಬಹುದಾಗಿದ್ದ ಖರ್ಚುಗಳಿಗಿಂತ ಹೆಚ್ಚಿನ ಖರ್ಚುಗಳನ್ನು ವಹಿಸಿದ್ದರೆ, ಆ ರಾಜ್ಯವು ಹಾಗೆ ವಹಿಸಿದ ಹೆಚ್ಚುವರಿ ಖರ್ಚಿಗೆ ಸಂಬಂಧಿಸಿದಂತೆ ಒಪ್ಪಿಕೊಳ್ಳಬಹುದಾದಷ್ಟು ಮೊಬಲಗನ್ನು ಅಥವಾ ಒಪ್ಪಿಕೊಳ್ಳದಿದ್ದರೆ, ಭಾರತದ ಮುಖ್ಯ ನ್ಯಾಯಮೂರ್ತಿಯು ನೇಮಕ ಮಾಡಿದ ಮಧ್ಯಸ್ಥಗಾರನು ನಿರ್ಧರಿಸಬಹುದಾದ ಮೊಬಲಗನ್ನು ಭಾರತ ಸರ್ಕಾರವು ಆ ರಾಜ್ಯಕ್ಕೆ ಸಂದಾಯ ಮಾಡತಕ್ಕದ್ದು.

[1]**257ಎ.** ***[ಒಕ್ಕೂಟದ ಸಶಸ್ತ್ರ ಬಲಗಳು ಅಥವಾ ಇತರ ಬಲಗಳನ್ನು ನಿಯೋಜಿಸುವ ಮೂಲಕ ರಾಜ್ಯಗಳಿಗೆ ನೆರವು]*** *1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 33ನೆಯ ಪ್ರಕರಣದ ಮೂಲಕ (20-6-1979ರಿಂದ ಜಾರಿಗೆ ಬರುವಂತೆ) ನಿರಸನಗೊಳಿಸಲಾಗಿದೆ.*

**258. ಕೆಲವು ಸಂದರ್ಭಗಳಲ್ಲಿ ರಾಜ್ಯಗಳಿಗೆ ಅಧಿಕಾರ, ಇತ್ಯಾದಿಗಳನ್ನು ಪ್ರದಾನ ಮಾಡಲು ಒಕ್ಕೂಟದ ಅಧಿಕಾರ:–** (1) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ರಾಷ್ಟ್ರಪತಿಯು, ಒಂದು ರಾಜ್ಯ ಸರ್ಕಾರದ ಸಮ್ಮತಿಯನ್ನು ಪಡೆದು, ಆ ಸರ್ಕಾರಕ್ಕೆ ಅಥವಾ ಅದರ ಅಧಿಕಾರಿಗಳಿಗೆ, ಒಕ್ಕೂಟದ ಕಾರ್ಯಾಂಗ ಅಧಿಕಾರವನ್ನು ಯಾವ ವಿಷಯಕ್ಕೆ ವಿಸ್ತರಿಸಲಾಗುವುದೋ ಆ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಾರ್ಯಗಳನ್ನು, ಷರತ್ತು ಸಹಿತವಾಗಿ ಅಥವಾ ಷರತ್ತು ರಹಿತವಾಗಿ ವಹಿಸಿಕೊಡಬಹುದು.

(2) ಸಂಸತ್ತು ರಚಿಸಿದ ಮತ್ತು ಯಾವುದೇ ರಾಜ್ಯಕ್ಕೆ ಅನ್ವಯಿಸುವ ಕಾನೂನು, ಯಾವ ವಿಷಯದ ಬಗ್ಗೆ ಕಾನೂನುಗಳನ್ನು ರಚಿಸಲು ಆ ರಾಜ್ಯದ ವಿಧಾನಮಂಡಲಕ್ಕೆ ಅಧಿಕಾರವಿಲ್ಲವೋ ಆ ವಿಷಯಕ್ಕೆ ಅದು ಸಂಬಂಧಪಟ್ಟಿದ್ದಾಗ್ಯೂ, ಆ ರಾಜ್ಯಕ್ಕೆ ಅಥವಾ ಅದರ ಅಧಿಕಾರಿಗಳಿಗೆ ಮತ್ತು ಪ್ರಾಧಿಕಾರಗಳಿಗೆ ಅಧಿಕಾರಗಳನ್ನು ಪ್ರದಾನ ಮಾಡಬಹುದು ಮತ್ತು ಕರ್ತವ್ಯಗಳನ್ನು ವಿಧಿಸಬಹುದು ಅಥವಾ ಹಾಗೆ ಅಧಿಕಾರಗಳನ್ನು ಪ್ರದಾನಮಾಡುವುದನ್ನು ಮತ್ತು ಕರ್ತವ್ಯಗಳನ್ನು ವಿಧಿಸುವುದನ್ನು ಅಧಿಕೃತಗೊಳಿಸಬಹುದು.

(3) ಈ ಅನುಚ್ಛೇದದ ಕಾರಣದಿಂದಾಗಿ ರಾಜ್ಯಕ್ಕೆ ಅಥವಾ ಅದರ ಅಧಿಕಾರಿಗಳಿಗೆ ಅಥವಾ ಪ್ರಾಧಿಕಾರಗಳಿಗೆ ಅಧಿಕಾರಗಳನ್ನು ಪ್ರದಾನ ಮಾಡಿರುವಲ್ಲಿ ಅಥವಾ ಕರ್ತವ್ಯಗಳನ್ನು ವಿಧಿಸಿರುವಲ್ಲಿ ಆ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಸಂಬಂಧಪಟ್ಟಂತೆ ಆ ರಾಜ್ಯವು ವಹಿಸಿದ ಆಡಳಿತದ ಯಾವುವೇ ಹೆಚ್ಚುವರಿ ಖರ್ಚುಗಳಿಗೆ ಸಂಬಂಧಿಸಿದಂತೆ ಒಪ್ಪಿಕೊಳ್ಳಬಹುದಾದ ಮೊಬಲಗನ್ನು ಅಥವಾ ಒಪ್ಪಿಕೊಳ್ಳದಿದ್ದರೆ, ಭಾರತದ ಮುಖ್ಯ ನ್ಯಾಯಮೂರ್ತಿಯು ನೇಮಕ ಮಾಡಿದ ಮಧ್ಯಸ್ಥಗಾರನು ನಿರ್ಧರಿಸಬಹುದಾದಂಥ ಮೊಬಲಗನ್ನು ಭಾರತ ಸರ್ಕಾರವು ಆ ರಾಜ್ಯಕ್ಕೆ ಸಂದಾಯ ಮಾಡತಕ್ಕದ್ದು.

---

1. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 43ನೆಯ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

[1][**258ಎ. ಒಕ್ಕೂಟಕ್ಕೆ ಪ್ರಕಾರ್ಯಗಳನ್ನು ವಹಿಸಿಕೊಡಲು ರಾಜ್ಯಗಳ ಅಧಿಕಾರ:-** ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ಒಂದು ರಾಜ್ಯದ ರಾಜ್ಯಪಾಲನು ಭಾರತ ಸರ್ಕಾರದ ಸಮ್ಮತಿಯನ್ನು ಪಡೆದು, ಭಾರತ ಸರ್ಕಾರಕ್ಕೆ ಅಥವಾ ಅದರ ಅಧಿಕಾರಿಗಳಿಗೆ, ಆ ರಾಜ್ಯದ ಕಾರ್ಯಾಂಗ ಅಧಿಕಾರವನ್ನು ಯಾವ ವಿಷಯಕ್ಕೆ ವಿಸ್ತರಿಸಲಾಗುವುದೋ ಆ ವಿಷಯಕ್ಕೆ ಸಂಬಂಧಿಸಿದ ಪ್ರಕಾರ್ಯಗಳನ್ನು, ಷರತ್ತು ಸಹಿತವಾಗಿ ಅಥವಾ ಷರತ್ತು ರಹಿತವಾಗಿ ವಹಿಸಿಕೊಡಬಹುದು.]

*259. [ಮೊದಲನೆಯ ಅನುಸೂಚಿಯ (ಬಿ) ಭಾಗದ ರಾಜ್ಯಗಳ ಸಶಸ್ತ್ರ ಬಲಗಳು] 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.*

**260. ಭಾರತದ ಹೊರಗಿನ ರಾಜ್ಯಕ್ಷೇತ್ರಗಳ ಸಂಬಂಧದಲ್ಲಿ ಒಕ್ಕೂಟದ ಅಧಿಕಾರ ವ್ಯಾಪ್ತಿ:-** ಭಾರತ ಸರ್ಕಾರವು, ಭಾರತದ ರಾಜ್ಯಕ್ಷೇತ್ರದ ಭಾಗವಾಗಿರದ ಯಾವುದೇ ರಾಜ್ಯಕ್ಷೇತ್ರದ ಸರ್ಕಾರದಲ್ಲಿ ನಿಹಿತವಾಗಿರುವ ಯಾವುದೇ ಕಾರ್ಯಾಂಗ, ವಿಧಾಯೀ ಅಥವಾ ನ್ಯಾಯಿಕ ಪ್ರಕಾರ್ಯಗಳನ್ನು ಅಂಥ ಸರ್ಕಾರದೊಡನೆ ಒಪ್ಪಂದ ಮಾಡಿಕೊಳ್ಳುವ ಮೂಲಕ ವಹಿಸಿಕೊಳ್ಳಬಹುದು; ಆದರೆ ಅಂಥ ಪ್ರತಿಯೊಂದು ಒಪ್ಪಂದವು ವಿದೇಶೀ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟಿರತಕ್ಕದ್ದು ಮತ್ತು ಅಂಥ ಕಾನೂನಿನ ಮೂಲಕ ನಿಯಂತ್ರಿತವಾಗತಕ್ಕದ್ದು.

**261. ಸಾರ್ವಜನಿಕ ಕಾರ್ಯಗಳು, ದಾಖಲೆಗಳು ಮತ್ತು ನ್ಯಾಯಿಕ ವ್ಯವಹರಣೆಗಳು:-** (1) ಒಕ್ಕೂಟದ ಮತ್ತು ಪ್ರತಿಯೊಂದು ರಾಜ್ಯದ ಸಾರ್ವಜನಿಕ ಕಾರ್ಯಗಳಿಗೆ, ದಾಖಲೆಗಳಿಗೆ ಮತ್ತು ನ್ಯಾಯಿಕ ವ್ಯವಹರಣೆಗಳಿಗೆ ಭಾರತದ ರಾಜ್ಯಕ್ಷೇತ್ರದಾದ್ಯಂತ ಪೂರ್ಣ ವಿಶ್ವಾಸ ತೋರಿಸತಕ್ಕದ್ದು ಮತ್ತು ಮಾನ್ಯತೆಯನ್ನು ಕೊಡತಕ್ಕದ್ದು.

(2) (1)ನೆಯ ಖಂಡದಲ್ಲಿ ಉಲ್ಲೇಖಿಸಿರುವ ಕಾರ್ಯಗಳು, ದಾಖಲೆಗಳು ಮತ್ತು ನ್ಯಾಯಿಕ ವ್ಯವಹರಣೆಗಳನ್ನು ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳ ಮೇರೆಗೆ ರುಜುವಾತುಪಡಿಸಬೇಕು ಮತ್ತು ಅವುಗಳ ಪರಿಣಾಮವನ್ನು ನಿರ್ಧರಿಸಬೇಕು ಎಂಬುದು ಸಂಸತ್ತು ರಚಿಸಿದ ಕಾನೂನಿನಲ್ಲಿ ಉಪಬಂಧಿಸಿರುವಂತೆ ಇರತಕ್ಕದ್ದು.

(3) ಭಾರತ ರಾಜ್ಯಕ್ಷೇತ್ರದ ಯಾವುದೇ ಭಾಗದಲ್ಲಿ ಸಿವಿಲ್ ನ್ಯಾಯಾಲಯಗಳು ಕೊಟ್ಟ ಅಂತಿಮ ತೀರ್ಪುಗಳು ಅಥವಾ ಮಾಡಿದ ಆದೇಶಗಳು ಆ ರಾಜ್ಯಕ್ಷೇತ್ರದೊಳಗೆ ಎಲ್ಲಿಯೇ ಆಗಲಿ ಕಾನೂನಿಗನುಸಾರವಾಗಿ ಜಾರಿಗೊಳಿಸಲು ಸಮರ್ಥವಾದವುಗಳಾಗಿರತಕ್ಕದ್ದು.

## ಜಲ ಸಂಬಂಧೀ ವಿವಾದಗಳು

**262. ಅಂತರರಾಜ್ಯ ನದಿಗಳ ಅಥವಾ ನದೀ ಕಣಿವೆಗಳ ಜಲ ಸಂಬಂಧೀ ವಿವಾದಗಳಲ್ಲಿ ನ್ಯಾಯನಿರ್ಣಯ:-** (1) ಯಾವುದೇ ಅಂತರರಾಜ್ಯ ನದಿಯ ಅಥವಾ ನದೀ ಕಣಿವೆಯ ಅಥವಾ ನದಿಯಲ್ಲಿನ ಅಥವಾ ನದೀ ಕಣಿವೆಯಲ್ಲಿನ ನೀರಿನ ಬಳಕೆ, ಹಂಚಿಕೆ ಅಥವಾ ನಿಯಂತ್ರಣಕ್ಕೆ ಸಂಬಂಧಿಸಿದ ಯಾವುದೇ ವಿವಾದದ ಅಥವಾ ದೂರಿನ ಬಗ್ಗೆ ನ್ಯಾಯ ನಿರ್ಣಯ ಮಾಡುವುದಕ್ಕಾಗಿ, ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಬಹುದು.

(2) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, (1)ನೆಯ ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ಅಂಥ ವಿವಾದದ ಅಥವಾ ದೂರಿನ ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಥವಾ ಇತರ ಯಾವುದೇ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸತಕ್ಕದ್ದಲ್ಲವೆಂದು ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಬಹುದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 18ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

## ರಾಜ್ಯಗಳ ನಡುವೆ ಸಮನ್ವಯ

**263. ಅಂತರರಾಜ್ಯ ಪರಿಷತ್ತಿಗೆ ಸಂಬಂಧಪಟ್ಟ ಉಪಬಂಧಗಳು:**– ಒಂದು ಪರಿಷತ್ತನ್ನು ಸ್ಥಾಪಿಸಿ, ಅದಕ್ಕೆ –

(ಎ) ರಾಜ್ಯಗಳ ನಡುವೆ ಉದ್ಭವಿಸಬಹುದಾದ ವಿವಾದಗಳ ಬಗ್ಗೆ ವಿಚಾರಣೆ ಮಾಡುವ ಮತ್ತು ಸಲಹೆ ಕೊಡುವ;

(ಬಿ) ಯಾವುದೇ ಕೆಲವು ಅಥವಾ ಎಲ್ಲ ರಾಜ್ಯಗಳು ಅಥವಾ ಒಕ್ಕೂಟ ಮತ್ತು ಒಂದು ಅಥವಾ ಹೆಚ್ಚಿನ ರಾಜ್ಯಗಳು ಸಾಮಾನ್ಯ ಹಿತಾಸಕ್ತಿಯನ್ನು ಹೊಂದಿರುವ ವಿಷಯಗಳ ಬಗ್ಗೆ ತನಿಖೆ ಮಾಡುವ ಮತ್ತು ಚರ್ಚಿಸುವ; ಅಥವಾ

(ಸಿ) ಅಂಥ ಯಾವುದೇ ವಿಷಯದ ಮೇಲೆ ಶಿಫಾರಸುಗಳನ್ನು ಮಾಡುವ ಮತ್ತು ವಿಶೇಷವಾಗಿ, ಆ ವಿಷಯಕ್ಕೆ ಸಂಬಂಧಿಸಿದ ಕಾರ್ಯನೀತಿ ಮತ್ತು ಕ್ರಮಗಳನ್ನು ಉತ್ತಮ ರೀತಿಯಲ್ಲಿ ಸಮನ್ವಯಗೊಳಿಸುವುದಕ್ಕಾಗಿ ಶಿಫಾರಸುಗಳನ್ನು ಮಾಡುವ

– ಕರ್ತವ್ಯವನ್ನು ವಿಧಿಸುವುದರಿಂದ ಸಾರ್ವಜನಿಕ ಹಿತ ಸಾಧನೆಯಾಗುವುದೆಂದು ರಾಷ್ಟ್ರಪತಿಗೆ ಯಾವುದೇ ಕಾಲದಲ್ಲಿ ಕಂಡುಬಂದರೆ, ಅವನು ಆದೇಶದ ಮೂಲಕ ಅಂಥ ಪರಿಷತ್ತನ್ನು ಸ್ಥಾಪಿಸುವುದು ಮತ್ತು ಅದು ನೆರವೇರಿಸಬೇಕಾದ ಕರ್ತವ್ಯಗಳ ಸ್ವರೂಪವನ್ನು ಮತ್ತು ಅದರ ಸಂಘಟನೆಯನ್ನು ಮತ್ತು ಪ್ರಕ್ರಿಯೆಯನ್ನು ನಿರ್ಧರಿಸುವುದು ಕಾನೂನುಬದ್ಧವಾಗಿರತಕ್ಕದ್ದು.

## ಭಾಗ - XII

## ಹಣಕಾಸು, ಸ್ವತ್ತು , ಕರಾರುಗಳು ಮತ್ತು ದಾವೆಗಳು

### ಅಧ್ಯಾಯ I – ಹಣಕಾಸು

### ಸಾಮಾನ್ಯ

[1][264. ಅರ್ಥ ವಿವರಣೆ:– ಈ ಭಾಗದಲ್ಲಿ "ಹಣಕಾಸು ಆಯೋಗ" ಎಂದರೆ 280ನೆಯ ಅನುಚ್ಛೇದದ ಮೇರೆಗೆ ರಚಿಸಲಾದ ಹಣಕಾಸು ಆಯೋಗ.]

**265. ಕಾನೂನಿನ ಅಧಿಕಾರದ ಮೂಲಕ ಹೊರತು ತೆರಿಗೆಗಳನ್ನು ವಿಧಿಸದಿರುವುದು:–** ಕಾನೂನಿನ ಅಧಿಕಾರದ ಮೂಲಕ ಹೊರತು ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ ಅಥವಾ ಸಂಗ್ರಹಿಸತಕ್ಕದ್ದಲ್ಲ.

**266. ಭಾರತದ ಮತ್ತು ರಾಜ್ಯಗಳ ಸಂಚಿತ ನಿಧಿಗಳು ಮತ್ತು ಸರ್ಕಾರಿ ಲೆಕ್ಕಪತ್ರಗಳು:–** (1) ಕೆಲವು ತೆರಿಗೆಗಳ ಮತ್ತು ಸುಂಕಗಳ ನಿವ್ವಳ ಉತ್ಪತ್ತಿಯನ್ನು ಪೂರ್ಣವಾಗಿ ಅಥವಾ ಭಾಗಶಃ ರಾಜ್ಯಗಳಿಗೆ ವಹಿಸಿಕೊಡುವುದಕ್ಕೆ ಸಂಬಂಧಿಸಿದಂತೆ 267ನೆಯ ಅನುಚ್ಛೇದದ ಉಪಬಂಧಗಳಿಗೆ ಮತ್ತು ಈ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು ಭಾರತ ಸರ್ಕಾರವು ಸ್ವೀಕರಿಸಿದ ಎಲ್ಲ ರಾಜಸ್ವಗಳು, ಟ್ರೆಜರಿ ಬಿಲ್ಲುಗಳನ್ನು ಹೊರಡಿಸುವ ಮೂಲಕ, ಸಾಲಗಳ ಅಥವಾ ಅರ್ಥೋಪಾಯ ಮುಂಗಡಗಳ ಮೂಲಕ ಆ ಸರ್ಕಾರವು ಎತ್ತಿದ ಎಲ್ಲ ಸಾಲಗಳು ಮತ್ತು ಸಾಲಗಳ ಮರು ಸಂದಾಯದಲ್ಲಿ ಆ ಸರ್ಕಾರವು ಸ್ವೀಕರಿಸಿದ ಎಲ್ಲ ಹಣ ಇವೆಲ್ಲ ಸೇರಿ "ಭಾರತದ ಸಂಚಿತ ನಿಧಿ" ಎಂದು ಕರೆಯಲಾಗುವ ಒಂದು ಸಂಚಿತ ನಿಧಿಯಾಗತಕ್ಕದ್ದು ಮತ್ತು ಒಂದು ರಾಜ್ಯದ ಸರ್ಕಾರವು ಸ್ವೀಕರಿಸಿದ ಎಲ್ಲ ರಾಜಸ್ವಗಳು, ಟ್ರೆಜರಿ ಬಿಲ್ಲುಗಳನ್ನು ಹೊರಡಿಸುವ ಮೂಲಕ, ಸಾಲಗಳ ಅಥವಾ ಅರ್ಥೋಪಾಯ ಮುಂಗಡಗಳ ಮೂಲಕ ಆ ಸರ್ಕಾರವು ಎತ್ತಿದ ಎಲ್ಲ ಸಾಲಗಳು ಮತ್ತು ಸಾಲಗಳ ಮರುಸಂದಾಯದಲ್ಲಿ ಆ ಸರ್ಕಾರವು ಸ್ವೀಕರಿಸಿದ ಎಲ್ಲ ಹಣ ಇವೆಲ್ಲ ಸೇರಿ ಆ "ರಾಜ್ಯದ ಸಂಚಿತ ನಿಧಿ" ಎಂದು ಕರೆಯಲಾಗುವ ಒಂದು ಸಂಚಿತ ನಿಧಿಯಾಗತಕ್ಕದ್ದು.

(2) ಭಾರತ ಸರ್ಕಾರವು ಸ್ವೀಕರಿಸಿದ ಅಥವಾ ಅದರ ಪರವಾಗಿ ಸ್ವೀಕರಿಸಿದ ಅಥವಾ ಒಂದು ರಾಜ್ಯ ಸರ್ಕಾರವು ಸ್ವೀಕರಿಸಿದ ಅಥವಾ ಅದರ ಪರವಾಗಿ ಸ್ವೀಕರಿಸಿದ ಇತರ ಎಲ್ಲ ಸಾರ್ವಜನಿಕ ಹಣಗಳನ್ನು, ಭಾರತ ಸರ್ಕಾರದ ಲೆಕ್ಕಕ್ಕೆ ಅಥವಾ ಸಂದರ್ಭಾನುಸಾರ ಆ ರಾಜ್ಯ ಸರ್ಕಾರದ ಲೆಕ್ಕಕ್ಕೆ ಜಮೆ ಮಾಡತಕ್ಕದ್ದು.

(3) ಭಾರತದ ಸಂಚಿತ ನಿಧಿಯಿಂದ ಅಥವಾ ಒಂದು ರಾಜ್ಯದ ಸಂಚಿತನಿಧಿಯಿಂದ ಯಾವುವೇ ಹಣವನ್ನು ಕಾನೂನಿಗೆ ಅನುಸಾರವಾಗಿಯಲ್ಲದೆ ಮತ್ತು ಈ ಸಂವಿಧಾನದಲ್ಲಿ ಉಪಬಂಧಿಸಿರುವ ಉದ್ದೇಶಗಳಿಗಲ್ಲದೆ ಮತ್ತು ಆ ರೀತಿಯಲ್ಲಲ್ಲದೆ ಅನ್ಯಥಾ ವಿನಿಯೋಗಿಸತಕ್ಕದ್ದಲ್ಲ.

**267.ಸಾದಿಲ್ವಾರು ನಿಧಿ:–** (1) ಸಂಸತ್ತು ಕಾನೂನಿನ ಮೂಲಕ "ಭಾರತದ ಸಾದಿಲ್ವಾರು ನಿಧಿ" ಎಂಬ ಹೆಸರಿನ ಕೈಹಣದ ಸ್ವರೂಪದ ಒಂದು ಸಾದಿಲ್ವಾರು ನಿಧಿಯನ್ನು ಸ್ಥಾಪಿಸಬಹುದು, ಆ ನಿಧಿಗೆ ಅಂಥ ಕಾನೂನಿನ ಮೂಲಕ ನಿರ್ಧರಿಸಬಹುದಾದಂಥ ಮೊತ್ತಗಳನ್ನು ಕಾಲಕಾಲಕ್ಕೆ ಸಂದಾಯ ಮಾಡತಕ್ಕದ್ದು ಮತ್ತು ಅನಿರೀಕ್ಷಿತ ವೆಚ್ಚವನ್ನು ಭರಿಸುವ ಉದ್ದೇಶಗಳಿಗಾಗಿ 115ನೆಯ ಅಥವಾ 116ನೆಯ ಅನುಚ್ಛೇದದ ಮೇರೆಗೆ ಅಂಥ ವೆಚ್ಚವನ್ನು ಸಂಸತ್ತು ಕಾನೂನಿನ ಮೂಲಕ ಅಧಿಕೃತಗೊಳಿಸುವವರೆಗೆ, ಅಂಥ ನಿಧಿಯಿಂದ ಮುಂಗಡಗಳನ್ನು ಒದಗಿಸುವುದಕ್ಕೆ ರಾಷ್ಟ್ರಪತಿಗೆ ಸಾಧ್ಯವಾಗುವಂತೆ ಸದರಿ ನಿಧಿಯನ್ನು ಅವನ ವಶದಲ್ಲಿ ಇರಿಸತಕ್ಕದ್ದು.

(2) ಒಂದು ರಾಜ್ಯದ ವಿಧಾನ ಮಂಡಲವು ಕಾನೂನಿನ ಮೂಲಕ, ಆ "ರಾಜ್ಯದ ಸಾದಿಲ್ವಾರು ನಿಧಿ" ಎಂಬ ಹೆಸರಿನ ಕೈ ಹಣದ ಸ್ವರೂಪದ ಒಂದು ಸಾದಿಲ್ವಾರು ನಿಧಿಯನ್ನು ಸ್ಥಾಪಿಸಬಹುದು, ಆ ನಿಧಿಗೆ ಅಂಥ ಕಾನೂನಿನ ಮೂಲಕ ನಿರ್ಧರಿಸಬಹುದಾದಂಥ ಮೊತ್ತಗಳನ್ನು ಕಾಲಕಾಲಕ್ಕೆ ಸಂದಾಯ ಮಾಡತಕ್ಕದ್ದು ಮತ್ತು ಅನಿರೀಕ್ಷಿತ ವೆಚ್ಚವನ್ನು ಭರಿಸುವ ಉದ್ದೇಶಗಳಿಗಾಗಿ, 205ನೆಯ ಅಥವಾ 206ನೆಯ ಅನುಚ್ಛೇದದ ಮೇರೆಗೆ ಅಂಥ ವೆಚ್ಚವನ್ನು ಆ ರಾಜ್ಯದ ವಿಧಾನ ಮಂಡಲವು ಕಾನೂನಿನ ಮೂಲಕ ಅಧಿಕೃತಗೊಳಿಸುವವರೆಗೆ ಅಂಥ ನಿಧಿಯಿಂದ ಮುಂಗಡಗಳನ್ನು ಒದಗಿಸುವುದಕ್ಕೆ ರಾಜ್ಯಪಾಲನಿಗೆ ಸಾಧ್ಯವಾಗುವಂತೆ ಸದರಿ ನಿಧಿಯನ್ನು ಆ ರಾಜ್ಯದ ರಾಜ್ಯಪಾಲನ [2] * * * ವಶದಲ್ಲಿ ಇರಿಸತಕ್ಕದ್ದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ 264ನೆಯ ಅನುಚ್ಛೇದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1956ನೇ ಇಸವಿಯ ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಮತ್ತು ಅನುಸೂಚಿಯ ಮೂಲಕ "ಅಥವಾ ರಾಜ ಪ್ರಮುಖನ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

## ಒಕ್ಕೂಟ ಮತ್ತು ರಾಜ್ಯಗಳ ನಡುವೆ ರಾಜಸ್ವಗಳ ಹಂಚಿಕೆ

**268. ಒಕ್ಕೂಟವು ವಿಧಿಸಿದ ಆದರೆ ರಾಜ್ಯಗಳು ಸಂಗ್ರಹಿಸಿದ ಮತ್ತು ವಿನಿಯೋಗಿಸಿದ ಸುಂಕಗಳು:–** (1) ಒಕ್ಕೂಟ ಪಟ್ಟಿಯಲ್ಲಿ ನಮೂದಾಗಿರುವಂಥ ಸ್ಟಾಂಪು ಸುಂಕಗಳನ್ನು ಮತ್ತು ಔಷಧ ಮತ್ತು ಪ್ರಸಾಧನ ತಯಾರಿಕೆಗಳ ಮೇಲಿನ ಉತ್ಪಾದನಾಸುಂಕಗಳನ್ನು ಭಾರತ ಸರ್ಕಾರವು ವಿಧಿಸತಕ್ಕದ್ದು; ಆದರೆ,-

(ಎ) ಯಾವುದೇ [1][ಒಕ್ಕೂಟ ರಾಜ್ಯಕ್ಷೇತ್ರದಲ್ಲಿ] ಅಂಥ ಸುಂಕಗಳನ್ನು ವಿಧಿಸಲಾಗುವ ಸಂದರ್ಭದಲ್ಲಿ, ಭಾರತ ಸರ್ಕಾರವು, ಮತ್ತು

(ಬಿ) ಇತರ ಸಂದರ್ಭಗಳಲ್ಲಿ, ಯಾವ ರಾಜ್ಯಗಳಲ್ಲಿ ಅಂಥ ಸುಂಕಗಳನ್ನು ಅನುಕ್ರಮವಾಗಿ ವಿಧಿಸಲಾಗುವುದೋ ಆ ರಾಜ್ಯಗಳು

– ಅಂಥ ಸುಂಕಗಳನ್ನು ಸಂಗ್ರಹಿಸತಕ್ಕದ್ದು.

(2) ಯಾವುದೇ ರಾಜ್ಯದಲ್ಲಿ ಯಾವುದೇ ಹಣಕಾಸು ವರ್ಷದಲ್ಲಿ ವಿಧಿಸಬಹುದಾದಂಥ ಯಾವುದೇ ಸುಂಕದ ಉತ್ಪತ್ತಿಗಳು ಭಾರತದ ಸಂಚಿತ ನಿಧಿಯ ಭಾಗವಾಗತಕ್ಕದ್ದಲ್ಲ; ಆದರೆ ಆ ಉತ್ಪತ್ತಿಯನ್ನು ಆ ರಾಜ್ಯಕ್ಕೆ ವಹಿಸಿಕೊಡತಕ್ಕದ್ದು.

*[**268ಎ. ಒಕ್ಕೂಟವು ಸೇವಾ ತೆರಿಗೆ ವಿಧಿಸುವುದು ಮತ್ತು ಒಕ್ಕೂಟ ಮತ್ತು ರಾಜ್ಯಗಳು ಅದನ್ನು ಸಂಗ್ರಹಿಸುವುದು ಮತ್ತು ವಿನಿಯೋಗಿಸುವುದು:–** (1) ಭಾರತ ಸರ್ಕಾರವು ಸೇವೆಗಳ ಮೇಲೆ ತೆರಿಗೆಗಳನ್ನು ವಿಧಿಸತಕ್ಕದ್ದು ಮತ್ತು ಅಂಥ ತೆರಿಗೆಯನ್ನು (2)ನೇ ಖಂಡದಲ್ಲಿ ಉಪಬಂಧಿಸಿದ ರೀತಿಯಲ್ಲಿ ಭಾರತ ಸರ್ಕಾರವು ಮತ್ತು ರಾಜ್ಯಗಳು ಸಂಗ್ರಹಿಸತಕ್ಕದ್ದು ಮತ್ತು ವಿನಿಯೋಗಿಸತಕ್ಕದ್ದು.

(2) (1)ನೇ ಖಂಡದ ಉಪಬಂಧಗಳಿಗೆ ಅನುಸಾರವಾಗಿ ಯಾವುದೇ ಹಣಕಾಸು ವರ್ಷದಲ್ಲಿ ವಿಧಿಸಿದ ಅಂಥ ಯಾವುದೇ ತೆರಿಗೆಯ ಉತ್ಪತ್ತಿಯನ್ನು ಸಂಸತ್ತು ಕಾನೂನಿನ ಮೂಲಕ ರೂಪಿಸಬಹುದಾದಂಥ ಸಂಗ್ರಹಣೆ ಮತ್ತು ವಿನಿಯೋಗ ತತ್ವಗಳಿಗನುಸಾರವಾಗಿ,-

(ಎ) ಭಾರತ ಸರ್ಕಾರ ಮತ್ತು ರಾಜ್ಯಗಳು ಸಂಗ್ರಹಿಸತಕ್ಕದ್ದು;

(ಬಿ) ಭಾರತ ಸರ್ಕಾರ ಮತ್ತು ರಾಜ್ಯಗಳು ವಿನಿಯೋಗಿಸತಕ್ಕದ್ದು.]

**269. ಒಕ್ಕೂಟವು ವಿಧಿಸಿ ಸಂಗ್ರಹಿಸಿದ ಆದರೆ ರಾಜ್ಯಗಳಿಗೆ ವಹಿಸಿದ ತೆರಿಗೆಗಳು:–** [2][(1) ಸರಕುಗಳ ಮಾರಾಟದ ಮತ್ತು ಖರೀದಿಯ ಮೇಲಿನ ತೆರಿಗೆಗಳನ್ನು ಮತ್ತು ಸರಕುಗಳ ರವಾನೆಯ ಮೇಲಿನ ತೆರಿಗೆಗಳನ್ನು ಭಾರತ ಸರ್ಕಾರವು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು. ಆದರೆ, ಅವುಗಳನ್ನು (2)ನೇ ಖಂಡದಲ್ಲಿ ಉಪಬಂಧಿಸಿರುವ ರೀತಿಯಲ್ಲಿ 1996ರ ಏಪ್ರಿಲ್, 1ರಂದು ಅಥವಾ ಆ ತರುವಾಯ ರಾಜ್ಯಗಳಿಗೆ ವಹಿಸಿಕೊಡತಕ್ಕದ್ದು ಮತ್ತು ವಹಿಸಿಕೊಡಲಾಗಿದೆಯೆಂದು ಭಾವಿಸತಕ್ಕದ್ದು.

**ವಿವರಣೆ.**– ಈ ಖಂಡದ ಉದ್ದೇಶಗಳಿಗಾಗಿ,-

(ಎ) "ಸರಕುಗಳ ಮಾರಾಟ ಅಥವಾ ಖರೀದಿಯ ಮೇಲಿನ ತೆರಿಗೆಗಳು" ಎಂಬ ಪದಾವಳಿಗೆ ವೃತ್ತ ಪತ್ರಿಕೆಗಳನ್ನು ಹೊರತುಪಡಿಸಿ, ಇತರ ಸರಕುಗಳ ಮಾರಾಟ ಅಥವಾ ಖರೀದಿಯು ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಕ್ರಮದಲ್ಲಿ ನಡೆಯುವಲ್ಲಿ, ಅಂಥ ಮಾರಾಟದ ಅಥವಾ ಖರೀದಿಯ ಮೇಲಿನ ತೆರಿಗೆಗಳು ಎಂದು ಅರ್ಥವಿರತಕ್ಕದ್ದು;

(ಬಿ) "ಸರಕುಗಳ ರವಾನೆಯ ಮೇಲಿನ ತೆರಿಗೆಗಳು" ಎಂಬ ಪದಾವಳಿಗೆ ಸರಕುಗಳ ರವಾನೆಯು (ಆ ರವಾನೆಯನ್ನು, ಅದನ್ನು ಮಾಡುವ ವ್ಯಕ್ತಿಗಾಗಲಿ ಅಥವಾ ಇತರ ಯಾರೇ ವ್ಯಕ್ತಿಗೇ ಆಗಲಿ ಮಾಡಿರಲಿ) ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಕ್ರಮದಲ್ಲಿ ನಡೆಯುವಲ್ಲಿ ಅಂಥ ರವಾನೆಯ ಮೇಲಿನ ತೆರಿಗೆಗಳು ಎಂದು ಅರ್ಥವಿರತಕ್ಕದ್ದು.

---

1. 1956ನೇ ಇಸವಿಯ ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಮತ್ತು ಅನುಸೂಚಿಯ ಮೂಲಕ "ಮೊದಲನೇ ಅನುಸೂಚಿಯ ಭಾಗ ಸಿನಲ್ಲಿ ಉಲ್ಲೇಖಿಸಿದ ರಾಜ್ಯ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

* 2003ನೇ ಇಸವಿಯ ಸಂವಿಧಾನ (ಎಂಬತ್ತೆಂಟನೇ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ. (ಇದು ಇನ್ನೂ ಜಾರಿಗೆ ಬಂದಿರುವುದಿಲ್ಲ, ದಿನಾಂಕವನ್ನು ನಂತರ ಅಧಿಸೂಚಿಸಲಾಗುವುದು).

2. 2000ದ ಇಸವಿಯ ಸಂವಿಧಾನ (ಎಂಬತ್ತನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (1)ನೇ ಮತ್ತು (2)ನೇ ಖಂಡಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(2) ಯಾವುದೇ ಹಣಕಾಸು ವರ್ಷದಲ್ಲಿ, ಅಂಥ ತೆರಿಗೆಯ ನಿವ್ವಳ ಉತ್ಪತ್ತಿಯು ಒಕ್ಕೂಟ ರಾಜ್ಯ ಕ್ಷೇತ್ರಗಳದ್ದೆಂದು ಹೇಳಬಹುದಾದ ಉತ್ಪತ್ತಿಗಳನ್ನು ಪ್ರತಿನಿಧಿಸುವಷ್ಟರಮಟ್ಟಿಗೆ ಹೊರತು, ಅವು ಭಾರತದ ಸಂಚಿತ ನಿಧಿಯ ಭಾಗವಾಗಿರತಕ್ಕದ್ದಲ್ಲ. ಆದರೆ, ಆ ತೆರಿಗೆಯನ್ನು ಆ ವರ್ಷದಲ್ಲಿ ಯಾವ ರಾಜ್ಯಗಳಲ್ಲಿ ವಿಧಿಸಬಹುದಾಗಿದೆಯೋ ಆ ರಾಜ್ಯಗಳಿಗೆ ತೆರಿಗೆಯ ಉತ್ಪತ್ತಿಗಳನ್ನು ವಹಿಸಿಕೊಡತಕ್ಕದ್ದು, ಮತ್ತು ಸಂಸತ್ತು ಕಾನೂನಿನ ಮೂಲಕ ರೂಪಿಸಬಹುದಾದಂಥ ಹಂಚಿಕೆಯ ತತ್ವಗಳಿಗನುಸಾರವಾಗಿ ಆ ರಾಜ್ಯಗಳಲ್ಲಿ ಅವುಗಳನ್ನು ಹಂಚತಕ್ಕದ್ದು.]

[1][(3) [2][ಸರಕುಗಳ ಮಾರಾಟವು ಅಥವಾ ಖರೀದಿಯು ಅಥವಾ ಸರಕು ರವಾನೆಯು][2] ಯಾವಾಗ ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಕ್ರಮದಲ್ಲಿ ನಡೆಯುತ್ತದೆಂಬುದನ್ನು ನಿರ್ಧರಿಸಲು, ಸಂಸತ್ತು ಕಾನೂನಿನ ಮೂಲಕ ತತ್ವಗಳನ್ನು ರೂಪಿಸಬಹುದು.]

[3]**[270. ಒಕ್ಕೂಟವು ವಿಧಿಸಿದ ಮತ್ತು ಒಕ್ಕೂಟದ ಮತ್ತು ರಾಜ್ಯಗಳ ನಡುವೆ ಹಂಚಿಕೆಯಾದ ತೆರಿಗೆಗಳು:–** (1) ಅನುಕ್ರಮವಾಗಿ, *[268 ಮತ್ತು 269ನೇ] ಅನುಚ್ಛೇದಗಳಲ್ಲಿ ಉಲ್ಲೇಖಿಸಿದ ಸುಂಕಗಳನ್ನು ಮತ್ತು ತೆರಿಗೆಗಳನ್ನು ಹೊರತುಪಡಿಸಿ, ಒಕ್ಕೂಟ ಪಟ್ಟಿಯಲ್ಲಿ ಉಲ್ಲೇಖಿಸಿರುವ ಎಲ್ಲ ತೆರಿಗೆಗಳನ್ನು ಮತ್ತು ಸುಂಕಗಳನ್ನು, 271ನೇ ಅನುಚ್ಛೇದದಲ್ಲಿ ಉಲ್ಲೇಖಿಸಿರುವ ತೆರಿಗೆಗಳ ಮತ್ತು ಸುಂಕಗಳ ಮೇಲಿನ ಅಧಿಭಾರವನ್ನು ಮತ್ತು ಸಂಸತ್ತು ರಚಿಸಿದ ಯಾವುದೇ ಕಾನೂನಿನ ಮೇರೆಗಿನ ನಿರ್ದಿಷ್ಟ ಉದ್ದೇಶಗಳಿಗಾಗಿ ವಿಧಿಸುವ ಯಾವುದೇ ಉಪಕರವನ್ನು, ಭಾರತ ಸರ್ಕಾರವು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು ಮತ್ತು ಆ ಉತ್ಪತ್ತಿಯನ್ನು (2)ನೆಯ ಖಂಡದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಒಕ್ಕೂಟ ಮತ್ತು ರಾಜ್ಯಗಳ ನಡುವೆ ಹಂಚತಕ್ಕದ್ದು.

(2) ಯಾವುದೇ ಹಣಕಾಸು ವರ್ಷದಲ್ಲಿ, ಅಂಥ ಯಾವುದೇ ತೆರಿಗೆಯ ಅಥವಾ ಸುಂಕದ ನಿವ್ವಳ ಉತ್ಪತ್ತಿಗಳ ಪೈಕಿ, ನಿಯಮಿಸಬಹುದಾದಂಥ ಶೇಕಡಾ ಪ್ರಮಾಣವು ಭಾರತದ ಸಂಚಿತ ನಿಧಿಯ ಭಾಗವಾಗತಕ್ಕದ್ದಲ್ಲ, ಆದರೆ ಆ ವರ್ಷದಲ್ಲಿ ಯಾವ ರಾಜ್ಯಗಳಲ್ಲಿ ಆ ತೆರಿಗೆಯನ್ನು ಅಥವಾ ಸುಂಕವನ್ನು ವಿಧಿಸಬಹುದೋ ಆ ರಾಜ್ಯಗಳಿಗೆ ಅದನ್ನು ವಹಿಸಿಕೊಡತಕ್ಕದ್ದು, ಮತ್ತು (3)ನೇ ಖಂಡದಲ್ಲಿ ಉಪಬಂಧಿಸಿದ ರೀತಿಯಲ್ಲಿ ನಿಯಮಿಸಬಹುದಾದಂತೆ ಅಂಥ ರೀತಿಯಲ್ಲಿ ಮತ್ತು ಅಂಥ ಕಾಲದಿಂದ ಆ ರಾಜ್ಯಗಳಲ್ಲಿ ಹಂಚತಕ್ಕದ್ದು.

(3) ಈ ಅನುಚ್ಛೇದದಲ್ಲಿ, "ನಿಯಮಿಸಬಹುದಾದಂತೆ" ಎಂದರೆ:–

(i) ಹಣಕಾಸು ಆಯೋಗವೊಂದನ್ನು ರಚಿಸುವವರೆಗೆ, ರಾಷ್ಟ್ರಪತಿಯು ಆದೇಶದ ಮೂಲಕ ನಿಯಮಿಸಬಹುದಾದುದು, ಮತ್ತು

(ii) ಹಣಕಾಸು ಆಯೋಗವೊಂದನ್ನು ರಚಿಸಿದ ತರುವಾಯ, ಆ ಹಣಕಾಸು ಆಯೋಗದ ಶಿಫಾರಸುಗಳನ್ನು ಪರ್ಯಾಲೋಚಿಸಿದ ನಂತರ, ರಾಷ್ಟ್ರಪತಿಯು ಆದೇಶದ ಮೂಲಕ ನಿಯಮಿಸಬಹುದಾದುದು.]

**271. ಒಕ್ಕೂಟದ ಉದ್ದೇಶಗಳಿಗಾಗಿ ಕೆಲವು ಸುಂಕಗಳ ಮತ್ತು ತೆರಿಗೆಗಳ ಮೇಲೆ ಅಧಿಭಾರ:–** 269ನೇ ಮತ್ತು 270ನೇ ಅನುಚ್ಛೇದಗಳಲ್ಲಿ ಏನೇ ಇದ್ದಾಗ್ಯೂ, ಒಕ್ಕೂಟದ ಉದ್ದೇಶಗಳಿಗಾಗಿ ಸಂಸತ್ತು ಯಾವುದೇ ಕಾಲದಲ್ಲಿ, ಆ ಅನುಚ್ಛೇದಗಳಲ್ಲಿ ಉಲ್ಲೇಖಿಸಲಾದ ಯಾವುವೇ ಸುಂಕಗಳ ಅಥವಾ ತೆರಿಗೆಗಳ ಮೇಲೆ ಅಧಿಭಾರವನ್ನು ವಿಧಿಸಿ ಅವುಗಳನ್ನು ಹೆಚ್ಚಿಸಬಹುದು ಮತ್ತು ಅಂಥ ಯಾವುದೇ ಅಧಿಭಾರದ ಪೂರ್ಣ ಉತ್ಪತ್ತಿಯು ಭಾರತದ ಸಂಚಿತ ನಿಧಿಯ ಭಾಗವಾಗತಕ್ಕದ್ದು.

---

1. 1956ನೇ ಇಸವಿಯ ಸಂವಿಧಾನ (ಆರನೇ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 1982ನೆಯ ಇಸವಿಯ ಸಂವಿಧಾನ (ನಲವತ್ತಾರನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ "ಸರಕುಗಳ ಮಾರಾಟವು ಅಥವಾ ಖರೀದಿಯು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. 2000ದ ಇಸವಿಯ ಸಂವಿಧಾನ (ಎಂಬತ್ತನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ 270ನೇ ಅನುಚ್ಛೇದಕ್ಕೆ ಬದಲಾಗಿ (1.4.1996 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

* 2003ನೇ ಇಸವಿಯ ಸಂವಿಧಾನ (ಎಂಬತ್ತೆಂಟನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಆವರಣಗಳಲ್ಲಿರುವ ಪದಗಳು ಮತ್ತು ಅಂಕಿಗಳು "268, 268ಎ ಮತ್ತು 269ನೇ ಅನುಚ್ಛೇದಗಳಲ್ಲಿ" ಎಂಬುದಾಗಿ ಪ್ರತ್ಯಾಯೋಜಿತವಾಗತಕ್ಕದ್ದು. (ಇದು ಇನ್ನೂ ಜಾರಿಗೆ ಬಂದಿರುವುದಿಲ್ಲ, ದಿನಾಂಕವನ್ನು ನಂತರ ಅಧಿಸೂಚಿಸಲಾಗುವುದು).

**272.** *[ಒಕ್ಕೂಟವು ವಿಧಿಸಿರುವ ಮತ್ತು ಸಂಗ್ರಹಿಸಿರುವ ಮತ್ತು ಒಕ್ಕೂಟ ಮತ್ತು ರಾಜ್ಯಗಳ ನಡುವೆ ಹಂಚಿಕೆ ಮಾಡಬಹುದಾದ ತೆರಿಗೆಗಳು] 2000 ದ ಇಸವಿಯ ಸಂವಿಧಾನ (ಎಂಬತ್ತನೇ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ ನಿರಸನಗೊಳಿಸಲಾಗಿದೆ.*

**273. ಸೆಣಬು ಮತ್ತು ಸೆಣಬಿನ ಉತ್ಪನ್ನಗಳ ಮೇಲೆ ರಫ್ತು ಸುಂಕಕ್ಕೆ ಬದಲಾಗಿ ಅನುದಾನಗಳು:–** (1) ಅಸ್ಸಾಂ, ಬಿಹಾರ್, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಿಗೆ, ಪ್ರತಿಯೊಂದು ವರ್ಷದಲ್ಲಿ ಸೆಣಬಿನ ಮೇಲಿನ ಮತ್ತು ಸೆಣಬಿನ ಉತ್ಪನ್ನಗಳ ಮೇಲಿನ ರಫ್ತು ಸುಂಕದ ನಿವ್ವಳ ಉತ್ಪತ್ತಿಗಳ ಯಾವುದೇ ಭಾಗವನ್ನು ವಹಿಸಿಕೊಡುವುದಕ್ಕೆ ಬದಲಾಗಿ, ನಿಯಮಿಸಬಹುದಾದಂತೆ ಅಂಥ ಮೊತ್ತಗಳನ್ನು ಆ ರಾಜ್ಯಗಳ ರಾಜಸ್ವಗಳ ಸಹಾಯಾನುದಾನಗಳಾಗಿ ಪ್ರತಿ ವರ್ಷವೂ ಭಾರತದ ಸಂಚಿತ ನಿಧಿಯ ಮೇಲೆ ಹೊರಿಸತಕ್ಕದ್ದು.

(2) ಹಾಗೆ ನಿಯಮಿಸಬಹುದಾದಂತೆ ಅಂಥ ಮೊತ್ತಗಳನ್ನು ಸೆಣಬಿನ ಮೇಲೆ ಅಥವಾ ಸೆಣಬಿನ ಉತ್ಪನ್ನಗಳ ಮೇಲೆ ಯಾವುದೇ ರಫ್ತು ಸುಂಕವನ್ನು ಭಾರತ ಸರ್ಕಾರವು ವಿಧಿಸುತ್ತಿರುವವರೆಗೆ ಅಥವಾ ಈ ಸಂವಿಧಾನವು ಪ್ರಾರಂಭವಾದಾಗಿನಿಂದ ಹತ್ತು ವರ್ಷಗಳು ಮುಕ್ತಾಯವಾಗುವವರೆಗೆ – ಇವೆರಡರಲ್ಲಿ ಯಾವುದು ಮುಂಚಿತವೋ ಅಲ್ಲಿಯವರೆಗೆ, ಭಾರತದ ಸಂಚಿತ ನಿಧಿಯ ಮೇಲೆ ಹಾಗೆ ಹೊರಿಸುವುದು ಮುಂದುವರಿಯತಕ್ಕದ್ದು.

(3) ಈ ಅನುಚ್ಛೇದದಲ್ಲಿ "ನಿಯಮಿಸಬಹುದಾದಂತೆ" ಎಂಬ ಪದವು 270ನೆಯ ಅನುಚ್ಛೇದದಲ್ಲಿರುವ ಅರ್ಥವನ್ನೇ ಹೊಂದಿರುತ್ತದೆ.

**274. ರಾಜ್ಯಗಳು ಹಿತಾಸಕ್ತಿ ಹೊಂದಿರುವ ತೆರಿಗೆಯನ್ನು ವಿಧಿಸುವುದಕ್ಕೆ ಸಂಬಂಧಿಸಿದ ವಿಧೇಯಕಗಳಿಗೆ ರಾಷ್ಟ್ರಪತಿಯ ಪೂರ್ವ ಶಿಫಾರಸು ಅಗತ್ಯ:–** (1) ರಾಜ್ಯಗಳು ಹಿತಾಸಕ್ತಿ ಹೊಂದಿರುವ ಯಾವುದೇ ತೆರಿಗೆಯನ್ನು ಅಥವಾ ಸುಂಕವನ್ನು ವಿಧಿಸುವ ಅಥವಾ ವ್ಯತ್ಯಾಸಗೊಳಿಸುವ ಅಥವಾ ಭಾರತದ ವರಮಾನ ತೆರಿಗೆಗೆ ಸಂಬಂಧಿಸಿದ ಅಧಿನಿಯಮಿತಿಗಳ ಉದ್ದೇಶಗಳಿಗಾಗಿ ಪರಿಭಾಷಿಸಲಾದಂತೆ "ಕೃಷಿ ವರಮಾನ" ಎಂಬ ಪದಗಳ ಅರ್ಥವನ್ನು ವ್ಯತ್ಯಾಸ ಮಾಡುವ ಅಥವಾ ಈ ಅಧ್ಯಾಯದಲ್ಲಿ ಹಿಂದೆ ಹೇಳಿದ ಯಾವುವೇ ಉಪಬಂಧಗಳ ಮೇರೆಗೆ ಯಾವ ತತ್ತ್ವಗಳ ಮೇಲೆ ಹಣವನ್ನು ರಾಜ್ಯಗಳಿಗೆ ಹಂಚತಕ್ಕದ್ದೋ ಅಥವಾ ಹಂಚಬಹುದೋ ಆ ತತ್ತ್ವಗಳ ಮೇಲೆ ಪರಿಣಾಮ ಬೀರುವ ಅಥವಾ ಈ ಅಧ್ಯಾಯದಲ್ಲಿ ಹಿಂದೆ ಹೇಳಿದ ಉಪಬಂಧಗಳಲ್ಲಿ ಒಕ್ಕೂಟದ ಉದ್ದೇಶಗಳಿಗಾಗಿ ನಮೂದಿಸಿರುವ ಯಾವುದೇ ಅಧಿಭಾರವನ್ನು ವಿಧಿಸುವ ಯಾವುದೇ ವಿಧೇಯಕವನ್ನು ಅಥವಾ ತಿದ್ದುಪಡಿಯನ್ನು ರಾಷ್ಟ್ರಪತಿಯ ಶಿಫಾರಸ್ಸಿನ ಮೇಲೆ ಹೊರತು ಸಂಸತ್ತಿನ ಯಾವ ಸದನದಲ್ಲೇ ಆಗಲಿ ತರತಕ್ಕದ್ದಲ್ಲ ಅಥವಾ ಮಂಡಿಸತಕ್ಕದ್ದಲ್ಲ.

(2) ಈ ಅನುಚ್ಛೇದದಲ್ಲಿ "ರಾಜ್ಯಗಳು ಹಿತಾಸಕ್ತಿ ಹೊಂದಿರುವ ತೆರಿಗೆ ಅಥವಾ ಸುಂಕ" ಎಂದರೆ,–

(ಎ) ಯಾವ ತೆರಿಗೆಯ ಅಥವಾ ಸುಂಕದ ಪೂರ್ಣ ನಿವ್ವಳ ಉತ್ಪತ್ತಿಗಳನ್ನು ಅಥವಾ ಅದರ ಭಾಗವನ್ನು ಯಾವುದೇ ರಾಜ್ಯಕ್ಕೆ ವಹಿಸಿಕೊಡಲಾಗಿದೆಯೋ ಆ ತೆರಿಗೆ ಅಥವಾ ಸುಂಕ; ಅಥವಾ

(ಬಿ) ಯಾವ ತೆರಿಗೆಯ ಅಥವಾ ಸುಂಕದ ನಿವ್ವಳ ಉತ್ಪತ್ತಿಗಳಿಗೆ ಸಂಬಂಧಿಸಿದಂತೆ ಮೊತ್ತಗಳು ತತ್ಕಾಲದಲ್ಲಿ ಯಾವುದೇ ರಾಜ್ಯಕ್ಕೆ ಭಾರತ ಸಂಚಿತ ನಿಧಿಯಿಂದ ಸಂದಾಯವಾಗಬೇಕಾಗಿದೆಯೋ ಆ ತೆರಿಗೆ ಅಥವಾ ಸುಂಕ.

**275. ಒಕ್ಕೂಟದಿಂದ ಕೆಲವು ರಾಜ್ಯಗಳಿಗೆ ಅನುದಾನಗಳು:–** (1) ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಬಹುದಾದಂಥ ಮೊತ್ತಗಳನ್ನು, ಸಹಾಯದ ಅವಶ್ಯಕತೆಯುಳ್ಳ ರಾಜ್ಯಗಳೆಂಬುದಾಗಿ ಸಂಸತ್ತು ನಿರ್ಧರಿಸಬಹುದಾದಂಥ ರಾಜ್ಯಗಳ ರಾಜಸ್ವಗಳ ಸಹಾಯ ಅನುದಾನಗಳಾಗಿ ಪ್ರತಿಯೊಂದು ವರ್ಷದಲ್ಲಿ ಭಾರತದ ಸಂಚಿತ ನಿಧಿಯ ಮೇಲೆ ಹೊರಿಸತಕ್ಕದ್ದು ಮತ್ತು ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ಮೊತ್ತಗಳನ್ನು ನಿಗದಿಪಡಿಸಬಹುದು:

ಪರಂತು, ಒಂದು ರಾಜ್ಯದಲ್ಲಿರುವ ಅನುಸೂಚಿತ ಬುಡಕಟ್ಟುಗಳ ಕಲ್ಯಾಣಾಭಿವೃದ್ಧಿಗಾಗಿ ಅಥವಾ ಅಲ್ಲಿನ ಅನುಸೂಚಿತ ಪ್ರದೇಶಗಳ ಆಡಳಿತ ಮಟ್ಟವನ್ನು ಆ ರಾಜ್ಯದ ಉಳಿದ ಪ್ರದೇಶಗಳ ಆಡಳಿತ ಮಟ್ಟಕ್ಕೆ ಏರಿಸುವುದಕ್ಕಾಗಿ, ಭಾರತ ಸರ್ಕಾರದ ಅನುಮೋದನೆಯನ್ನು ಪಡೆದು ಆ ರಾಜ್ಯವು ಕೈಗೊಳ್ಳಬಹುದಾದ ಅಭಿವೃದ್ಧಿ ಯೋಜನೆಗಳ ಖರ್ಚುಗಳನ್ನು ಭರಿಸಲು ಆ ರಾಜ್ಯವನ್ನು ಸಮರ್ಥಗೊಳಿಸುವುದಕ್ಕೆ ಅವಶ್ಯವಾಗಬಹುದಾದಷ್ಟು ಬಂಡವಾಳ ಮತ್ತು ಆವರ್ತಕ ಮೊತ್ತಗಳನ್ನು ಆ ರಾಜ್ಯದ ರಾಜಸ್ವಗಳ ಸಹಾಯಾನುದಾನಗಳನ್ನಾಗಿ ಭಾರತದ ಸಂಚಿತ ನಿಧಿಯಿಂದ ಸಂದಾಯ ಮಾಡತಕ್ಕದ್ದು:

ಮತ್ತೂ ಪರಂತು, ಭಾರತದ ಸಂಚಿತ ನಿಧಿಯಿಂದ,-

(ಎ) ಆರನೆಯ ಅನುಸೂಚಿಯ 20ನೆಯ ಪ್ಯಾರಾಕ್ಕೆ ಅನುಬಂಧಿಸಿದ [1][Iನೆಯ ಭಾಗ]ದ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದ ಬುಡಕಟ್ಟು ಪ್ರದೇಶಗಳ ಆಡಳಿತಕ್ಕೆ ಸಂಬಂಧಿಸಿದಂತೆ, ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದ ಎರಡು ವರ್ಷಗಳ ಕಾಲದಲ್ಲಿ ರಾಜಸ್ವಗಳಿಗಿಂತ ವೆಚ್ಚವು ಸರಾಸರಿ ಎಷ್ಟು ಹೆಚ್ಚಾಗಿದೆಯೋ ಆ ಹೆಚ್ಚಿನ ಮೊಬಲಗಿಗೆ ಸಮನಾದ; ಮತ್ತು

(ಬಿ) ಸದರಿ ಪ್ರದೇಶಗಳ ಆಡಳಿತದ ಮಟ್ಟವನ್ನು ಆ ರಾಜ್ಯದ ಉಳಿದ ಪ್ರದೇಶಗಳ ಆಡಳಿತ ಮಟ್ಟಕ್ಕೆ ಏರಿಸುವುದಕ್ಕಾಗಿ ಭಾರತ ಸರ್ಕಾರದ ಅನುಮೋದನೆಯನ್ನು ಪಡೆದು ಆ ರಾಜ್ಯವು ಕೈಕೊಳ್ಳಬಹುದಾದಂಥ ಅಭಿವೃದ್ಧಿ ಯೋಜನೆಗಳ ಖರ್ಚುಗಳಿಗೆ ಸಮನಾದ

– ಬಂಡವಾಳ ಮತ್ತು ಆವರ್ತಕ ಮೊತ್ತಗಳನ್ನು ಅಸ್ಸಾಂ ರಾಜ್ಯದ ರಾಜಸ್ವಗಳ ಸಹಾಯಾನುದಾನಗಳನ್ನಾಗಿ ಭಾರತದ ಸಂಚಿತನಿಧಿಯಿಂದ ಸಂದಾಯ ಮಾಡತಕ್ಕದ್ದು.

[2][(1ಎ) 244(ಎ) ಅನುಚ್ಛೇದದ ಮೇರೆಗೆ ಸ್ವಾಯತ್ತ ರಾಜ್ಯವು ರಚಿತವಾದ ಮೇಲೆ ಮತ್ತು ಅಂದಿನಿಂದ,-

(i) (1)ನೇ ಖಂಡದ ಎರಡನೆಯ ಪರಂತುಕದ (ಎ) ಖಂಡದ ಮೇರೆಗೆ ಸಂದಾಯ ಮಾಡಬೇಕಾದ ಯಾವುವೇ ಮೊತ್ತಗಳನ್ನು, ಆ ಸ್ವಾಯತ್ತ ರಾಜ್ಯವು ಸದರಿ ಖಂಡದಲ್ಲಿ ಉಲ್ಲೇಖಿಸಿದ ಎಲ್ಲ ಬುಡಕಟ್ಟು ಪ್ರದೇಶಗಳನ್ನು ಒಳಗೊಂಡಿದ್ದರೆ, ಆ ಸ್ವಾಯತ್ತ ರಾಜ್ಯಕ್ಕೆ ಸಂದಾಯ ಮಾಡತಕ್ಕದ್ದು ಮತ್ತು ಆ ಸ್ವಾಯತ್ತ ರಾಜ್ಯವು ಆ ಬುಡಕಟ್ಟು ಪ್ರದೇಶಗಳಲ್ಲಿ ಕೆಲವು ಪ್ರದೇಶಗಳನ್ನು ಮಾತ್ರ ಒಳಗೊಂಡಿದ್ದರೆ, ರಾಷ್ಟ್ರಪತಿಯು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಆ ಮೊತ್ತಗಳನ್ನು ಅಸ್ಸಾಂ ರಾಜ್ಯ ಮತ್ತು ಆ ಸ್ವಾಯತ್ತ ರಾಜ್ಯ ಇವೆರಡರ ನಡುವೆ ಹಂಚತಕ್ಕದ್ದು;

(ii) ಆ ಸ್ವಾಯತ್ತ ರಾಜ್ಯದ ಆಡಳಿತ ಮಟ್ಟವನ್ನು ಅಸ್ಸಾಂ ರಾಜ್ಯದ ಉಳಿದ ಭಾಗದ ಆಡಳಿತದ ಮಟ್ಟಕ್ಕೆ ಏರಿಸುವುದಕ್ಕಾಗಿ ಭಾರತ ಸರ್ಕಾರದ ಅನುಮೋದನೆಯನ್ನು ಪಡೆದು ಆ ಸ್ವಾಯತ್ತ ರಾಜ್ಯವು ಕೈಕೊಳ್ಳಬಹುದಾದಂಥ ಅಭಿವೃದ್ಧಿ ಯೋಜನೆಗಳ ಖರ್ಚುಗಳಿಗೆ ಸಮನಾದ ಬಂಡವಾಳ ಮತ್ತು ಆವರ್ತಕ ಮೊತ್ತಗಳನ್ನು ಆ ಸ್ವಾಯತ್ತ ರಾಜ್ಯದ ರಾಜಸ್ವಗಳ ಸಹಾಯಾನುದಾನಗಳನ್ನಾಗಿ ಭಾರತದ ಸಂಚಿತ ನಿಧಿಯಿಂದ ಸಂದಾಯ ಮಾಡತಕ್ಕದ್ದು.]

(2)(1)ನೆಯ ಖಂಡದ ಮೇರೆಗೆ ಸಂಸತ್ತು ಉಪಬಂಧವನ್ನು ಮಾಡುವವರೆಗೆ, ಆ ಖಂಡದ ಮೇರೆಗೆ ಸಂಸತ್ತಿಗೆ ಪ್ರದತ್ತವಾದ ಅಧಿಕಾರಗಳನ್ನು ರಾಷ್ಟ್ರಪತಿಯು ಆದೇಶದ ಮೂಲಕ ಚಲಾಯಿಸಲು ಅವಕಾಶವಿರತಕ್ಕದ್ದು ಮತ್ತು ಈ ಖಂಡದ ಮೇರೆಗೆ ರಾಷ್ಟ್ರಪತಿಯು ಮಾಡಿದ ಯಾವುದೇ ಆದೇಶವು ಸಂಸತ್ತಿನಿಂದ ಹಾಗೆ ಮಾಡಲಾದ ಯಾವುದೇ ಉಪಬಂಧಕ್ಕೆ ಒಳಪಟ್ಟು ಪರಿಣಾಮವುಳ್ಳದ್ದಾಗಿರತಕ್ಕದ್ದು:

ಪರಂತು, ಹಣಕಾಸು ಆಯೋಗವು ರಚಿತವಾದ ತರುವಾಯ, ಆ ಹಣಕಾಸು ಆಯೋಗದ ಶಿಫಾರಸುಗಳನ್ನು ಪರ್ಯಾಲೋಚಿಸಿದ ತರುವಾಯ ಹೊರತು ಈ ಖಂಡದ ಮೇರೆಗೆ ರಾಷ್ಟ್ರಪತಿಯು ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**276. ವೃತ್ತಿಗಳ, ವ್ಯಾಪಾರಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆಗಳು:-** (1) 246ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಅಥವಾ ಉದ್ಯೋಗಗಳಿಗೆ ಸಂಬಂಧಿಸಿದಂತೆ ಒಂದು ರಾಜ್ಯದ ಅಥವಾ ಆ ರಾಜ್ಯದಲ್ಲಿನ ಪೌರಸಭೆಯ, ಜಿಲ್ಲಾ ಮಂಡಲಿಯ, ಸ್ಥಳೀಯ ಮಂಡಲಿಯ ಅಥವಾ ಇತರ ಸ್ಥಳೀಯ ಪ್ರಾಧಿಕಾರದ ಪ್ರಯೋಜನಕ್ಕಾಗಿ ವಿಧಿಸತಕ್ಕ ತೆರಿಗೆಗಳಿಗೆ ಸಂಬಂಧಿಸಿದಂಥ, ರಾಜ್ಯದ ವಿಧಾನಮಂಡಲದ ಯಾವುದೇ ಕಾನೂನು, ವರಮಾನದ ಮೇಲಿನ ತೆರಿಗೆಗೆ ಸಂಬಂಧಪಟ್ಟಿದೆ ಎಂಬ ಕಾರಣದ ಮೇಲೆ ಅಸಿಂಧುವಾಗತಕ್ಕದ್ದಲ್ಲ.

---

1. 1971ನೇ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್ರಚನೆ) ಅಧಿನಿಯಮದ (1971ರ 81) 71ನೇ ಪ್ರಕರಣದ ಮೂಲಕ 'ಎ ಭಾಗ' ಎಂಬುದಕ್ಕೆ ಬದಲಾಗಿ (21-1-1972ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1969ನೆಯ ಇಸವಿಯ ಸಂವಿಧಾನ (ಇಪ್ಪತ್ತೆರಡನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

(2) ವೃತ್ತಿಗಳ, ವ್ಯಾಪಾರಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆಗಳ ರೂಪದಲ್ಲಿ ಒಂದು ರಾಜ್ಯಕ್ಕೆ, ಅಥವಾ ಆ ರಾಜ್ಯದಲ್ಲಿನ ಯಾವುದೇ ಒಂದು ಪೌರಸಭೆಗೆ, ಜಿಲ್ಲಾ ಮಂಡಲಿಗೆ, ಸ್ಥಳೀಯ ಮಂಡಲಿಗೆ ಅಥವಾ ಇತರ ಸ್ಥಳೀಯ ಪ್ರಾಧಿಕಾರಕ್ಕೆ ಯಾರೇ ವ್ಯಕ್ತಿಯ ಸಂಬಂಧದಲ್ಲಿ ಸಂದಾಯವಾಗಬೇಕಾದ ಒಟ್ಟು ಮೊಬಲಗು ವರ್ಷವೊಂದಕ್ಕೆ [1][ಎರಡು ಸಾವಿರದ ಐದುನೂರು ರೂಪಾಯಿಗಳಿಗೆ] ಮೀರತಕ್ಕದ್ದಲ್ಲ.

[2]* * *

(3) ವೃತ್ತಿಗಳ, ವ್ಯಾಪಾರಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆಗಳಿಗೆ ಸಂಬಂಧಪಟ್ಟಂತೆ ಹಿಂದೆ ಹೇಳಿದ ಹಾಗೆ ಕಾನೂನುಗಳನ್ನು ರಚಿಸಲು ರಾಜ್ಯದ ವಿಧಾನಮಂಡಲವು ಹೊಂದಿರುವ ಅಧಿಕಾರವು ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳಿಂದ ಪ್ರಾಪ್ತವಾಗುವ ಅಥವಾ ಒದಗಿಬರುವ ವರಮಾನ ತೆರಿಗೆಗಳಿಗೆ ಸಂಬಂಧಪಟ್ಟಂತೆ ಕಾನೂನುಗಳನ್ನು ರಚಿಸಲು ಸಂಸತ್ತಿಗಿರುವ ಅಧಿಕಾರವನ್ನು ಯಾವ ರೀತಿಯಲ್ಲೇ ಆಗಲಿ ಪರಿಮಿತಗೊಳಿಸುವುದಾಗಿ ಅರ್ಥೈಸತಕ್ಕದ್ದಲ್ಲ.

**277. ಉಳಿಸುವಿಕೆಗಳು:–** ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಯಾವುದೇ ರಾಜ್ಯಸರ್ಕಾರದಿಂದ ಅಥವಾ ಯಾವುದೇ ಪೌರಸಭೆಯಿಂದ ಅಥವಾ ಇತರ ಸ್ಥಳೀಯ ಪ್ರಾಧಿಕಾರ ಅಥವಾ ನಿಕಾಯದಿಂದ ರಾಜ್ಯದ, ಪೌರಸಭೆಯ, ಜಿಲ್ಲೆಯ ಅಥವಾ ಇತರ ಸ್ಥಳೀಯ ಪ್ರದೇಶದ ಉದ್ದೇಶಗಳಿಗಾಗಿ ಕಾನೂನುಬದ್ಧವಾಗಿ ವಿಧಿಸಲಾಗುತ್ತಿದ್ದ ಯಾವುವೇ ತೆರಿಗೆಗಳು, ಸುಂಕಗಳು, ಉಪಕರಗಳು ಅಥವಾ ಫೀಜುಗಳು ಒಕ್ಕೂಟಪಟ್ಟಿಯಲ್ಲಿ ನಮೂದಾಗಿದ್ದಾಗ್ಯೂ, ಸಂಸತ್ತು ಕಾನೂನಿನ ಮೂಲಕ ತದ್ವಿರುದ್ಧವಾದ ಉಪಬಂಧವನ್ನು ಮಾಡುವವರೆಗೆ ಅವುಗಳನ್ನು ವಿಧಿಸುವುದು ಮತ್ತು ಅವೇ ಉದ್ದೇಶಗಳಿಗಾಗಿ ವಿನಿಯೋಗಿಸುವುದು ಮುಂದುವರಿಯಬಹುದು.

**278.** *[ಮೊದಲನೆಯ ಅನುಸೂಚಿಯ 'ಬಿ' ಭಾಗದಲ್ಲಿರುವ ರಾಜ್ಯಗಳೊಡನೆ ಕೆಲವು ಹಣಕಾಸು ವಿಷಯಗಳ ಬಗ್ಗೆ ಒಪ್ಪಂದ]. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣ ಮತ್ತು ಅನುಸೂಚಿಯ ಮೂಲಕ ನಿರಸಿತವಾಗಿದೆ.*

**279. "ನಿವ್ವಳ ಉತ್ಪತ್ತಿಗಳು", ಮುಂತಾದವುಗಳನ್ನು ಲೆಕ್ಕ ಹಾಕುವುದು:–** (1) ಈ ಅಧ್ಯಾಯದಲ್ಲಿ ಹಿಂದೆ ಹೇಳಿದ ಉಪಬಂಧಗಳಲ್ಲಿ ಯಾವುದೇ ತೆರಿಗೆಗೆ ಅಥವಾ ಸುಂಕಕ್ಕೆ ಸಂಬಂಧಪಟ್ಟಂತೆ "ನಿವ್ವಳ ಉತ್ಪತ್ತಿಗಳು" ಎಂದರೆ ಆ ಉತ್ಪತ್ತಿಗಳನ್ನು ಸಂಗ್ರಹಿಸುವ ಖರ್ಚನ್ನು ಕಡಿತ ಮಾಡಿದ ತರುವಾಯ ಉಳಿಯುವ ನಿವ್ವಳ ಉತ್ಪತ್ತಿಗಳು ಮತ್ತು ಆ ಉಪಬಂಧಗಳ ಉದ್ದೇಶಗಳಿಗಾಗಿ ಯಾವುದೇ ಪ್ರದೇಶದಲ್ಲಿನ ಅಥವಾ ಪ್ರದೇಶದ್ದೆಂದು ಹೇಳಬಹುದಾದ ತೆರಿಗೆಯ ಅಥವಾ ಅದರ ಯಾವುದೇ ಭಾಗದ ಅಥವಾ ಸುಂಕದ ಅಥವಾ ಅದರ ಯಾವುದೇ ಭಾಗದ ನಿವ್ವಳ ಉತ್ಪತ್ತಿಗಳನ್ನು ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಖಚಿತಪಡಿಸಿಕೊಳ್ಳತಕ್ಕದ್ದು ಹಾಗೂ ಪ್ರಮಾಣೀಕರಿಸತಕ್ಕದ್ದು ಮತ್ತು ಆ ಬಗ್ಗೆ ಅವನ ಪ್ರಮಾಣಪತ್ರವು ಅಂತಿಮವಾಗಿರತಕ್ಕದ್ದು.

(2) ಹಿಂದೆ ಹೇಳಿದ ಮತ್ತು ಈ ಅಧ್ಯಾಯದ ಇತರ ಯಾವುದೇ ವ್ಯಕ್ತ ಉಪಬಂಧಕ್ಕೆ ಒಳಪಟ್ಟು, ಸಂಸತ್ತು ರಚಿಸಿದ ಕಾನೂನು ಅಥವಾ ರಾಷ್ಟ್ರಪತಿಯ ಆದೇಶವು, ಈ ಭಾಗದ ಮೇರೆಗೆ ಯಾವುದೇ ಸುಂಕದ ಅಥವಾ ತೆರಿಗೆಯ ಉತ್ಪತ್ತಿಗಳನ್ನು ಯಾವುದೇ ರಾಜ್ಯಕ್ಕೆ ವಹಿಸಿಕೊಟ್ಟಿರುವ ಅಥವಾ ವಹಿಸಿಕೊಡಬಹುದಾದ ಯಾವುದೇ ಸಂದರ್ಭದಲ್ಲಿ ಆ ಉತ್ಪತ್ತಿಗಳನ್ನು ಯಾವ ರೀತಿಯಲ್ಲಿ ಲೆಕ್ಕ ಹಾಕಬೇಕು ಮತ್ತು ಯಾವುದೇ ಸಂದಾಯಗಳನ್ನು ಯಾವ ಕಾಲದಿಂದ ಮತ್ತು ಯಾವ ಕಾಲದಲ್ಲಿ ಹಾಗೂ ಯಾವ ರೀತಿಯಲ್ಲಿ ಮಾಡಬೇಕು ಎಂಬ ಬಗ್ಗೆ ಮತ್ತು ಒಂದು ಹಣಕಾಸು ವರ್ಷದ ಮತ್ತು ಇನ್ನೊಂದು ಹಣಕಾಸು ವರ್ಷದ ನಡುವೆ ಹೊಂದಾಣಿಕೆಗಳನ್ನು ಮಾಡುವ ಬಗ್ಗೆ ಮತ್ತು ಇತರೆ ಯಾವುದೇ ಪ್ರಾಸಂಗಿಕ ಅಥವಾ ಸಹಾಯಕ ವಿಷಯಗಳ ಬಗ್ಗೆ ಉಪಬಂಧಿಸಬಹುದು.

**280. ಹಣಕಾಸು ಆಯೋಗ:–** (1) ರಾಷ್ಟ್ರಪತಿಯು ಈ ಸಂವಿಧಾನದ ಪ್ರಾರಂಭದಿಂದ ಎರಡು ವರ್ಷಗಳೊಳಗಾಗಿ ಮತ್ತು ಆ ತರುವಾಯ ಪ್ರತಿ ಐದು ವರ್ಷಗಳು ಮುಕ್ತಾಯವಾದ ಮೇಲೆ ಅಥವಾ ರಾಷ್ಟ್ರಪತಿಯು ಅವಶ್ಯವೆಂದು ಪರ್ಯಾಲೋಚಿಸುವಂತಹ ಇನ್ನೂ ಮುಂಚಿನ ಕಾಲದಲ್ಲಿ ಆದೇಶದ ಮೂಲಕ ಒಂದು ಹಣಕಾಸು ಆಯೋಗವನ್ನು ರಚಿಸತಕ್ಕದ್ದು; ಆ ಆಯೋಗವು ರಾಷ್ಟ್ರಪತಿಯು ನೇಮಕ ಮಾಡುವ ಒಬ್ಬ ಅಧ್ಯಕ್ಷನನ್ನು ಮತ್ತು ಇತರ ನಾಲ್ವರು ಸದಸ್ಯರನ್ನು ಒಳಗೊಂಡಿರತಕ್ಕದ್ದು.

---

1. 1988ನೆಯ ಇಸವಿಯ ಸಂವಿಧಾನ (ಅರವತ್ತನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ "ಎರಡುನೂರ ಐವತ್ತು ರೂಪಾಯಿಗಳಿಗೆ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1988ನೆಯ ಇಸವಿಯ ಸಂವಿಧಾನ (ಅರವತ್ತನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ ಪರಂತುಕವನ್ನು ಬಿಟ್ಟುಬಿಡಲಾಗಿದೆ.

(2) ಆಯೋಗದ ಸದಸ್ಯರಾಗಿ ನೇಮಕಗೊಳ್ಳಲು ಅಗತ್ಯವಿರುವ ಅರ್ಹತೆಗಳನ್ನು ಮತ್ತು ಅವರನ್ನು ಆಯ್ಕೆ ಮಾಡತಕ್ಕ ರೀತಿಯನ್ನು ಸಂಸತ್ತು ಕಾನೂನಿನ ಮೂಲಕ ನಿರ್ಧರಿಸಬಹುದು.

(3) ಹಣಕಾಸು ಆಯೋಗವು ರಾಷ್ಟ್ರಪತಿಗೆ,-

(ಎ) ಈ ಅಧ್ಯಾಯದ ಮೇರೆಗೆ ಒಕ್ಕೂಟದ ಮತ್ತು ರಾಜ್ಯಗಳ ನಡುವೆ ಹಂಚಬೇಕಾದ ಅಥವಾ ಹಂಚಬಹುದಾದ ತೆರಿಗೆಗಳ ನಿವ್ವಳ ಉತ್ಪತ್ತಿಗಳ ವಿತರಣೆಗೆ ಮತ್ತು ಅಂಥ ಉತ್ಪತ್ತಿಗಳಲ್ಲಿ ಆಯಾಯ ರಾಜ್ಯಗಳ ನಡುವೆ ಆಯಾಯ ಪಾಲುಗಳನ್ನು ಹಂಚುವುದಕ್ಕೆ;

(ಬಿ) ಭಾರತದ ಸಂಚಿತ ನಿಧಿಯಿಂದ ಕೊಡಬೇಕಾದ ರಾಜ್ಯಗಳ ರಾಜಸ್ವಗಳ ಸಹಾಯಾನುದಾನಗಳ ಬಗ್ಗೆ ಅನುಸರಿಸಬೇಕಾದ ತತ್ತ್ವಗಳಿಗೆ;

[1][(ಬಿಬಿ) ರಾಜ್ಯದ ಹಣಕಾಸು ಆಯೋಗವು ಮಾಡಿದ ಶಿಫಾರಸುಗಳ ಆಧಾರದ ಮೇಲೆ ಆ ರಾಜ್ಯದಲ್ಲಿನ ಪಂಚಾಯತಿಗಳ ಸಂಪನ್ಮೂಲಗಳನ್ನು ಹೆಚ್ಚಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯನ್ನು ಬಲಪಡಿಸಲು ಅಗತ್ಯವಾದ ಕ್ರಮಗಳಿಗೆ;]

[2][(ಸಿ) ರಾಜ್ಯದ ಹಣಕಾಸು ಆಯೋಗವು ಮಾಡಿದ ಶಿಫಾರಸುಗಳ ಆಧಾರದ ಮೇಲೆ ಆ ರಾಜ್ಯದಲ್ಲಿನ ಪೌರಸಭೆಗಳ ಸಂಪನ್ಮೂಲಗಳನ್ನು ಹೆಚ್ಚಿಸುವುದಕ್ಕಾಗಿ ರಾಜ್ಯ ಸಂಚಿತ ನಿಧಿಯನ್ನು ಬಲಪಡಿಸಲು ಅಗತ್ಯವಾದ ಕ್ರಮಗಳಿಗೆ;]

[3][(ಡಿ)] ಸುಭದ್ರ ಹಣಕಾಸು ಸ್ಥಿತಿಯ ಹಿತದೃಷ್ಟಿಯಿಂದ ರಾಷ್ಟ್ರಪತಿಯು ಆಯೋಗಕ್ಕೆ ಒಪ್ಪಿಸುವ ಇತರ ಯಾವುದೇ ವಿಷಯಕ್ಕೆ

– ಸಂಬಂಧಿಸಿದಂತೆ ಶಿಫಾರಸುಗಳನ್ನು ಮಾಡುವುದು ಅದರ ಕರ್ತವ್ಯವಾಗಿರತಕ್ಕದ್ದು.

(4) ಆಯೋಗವು ತನ್ನ ಕಾರ್ಯವಿಧಾನವನ್ನು ನಿರ್ಧರಿಸಿಕೊಳ್ಳತಕ್ಕದ್ದು ಮತ್ತು ತನ್ನ ಪ್ರಕಾರ್ಯಗಳ ನೆರವೇರಿಕೆಯಲ್ಲಿ ಸಂಸತ್ತು ಕಾನೂನಿನ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಹೊಂದಿರತಕ್ಕದ್ದು.

**281. ಹಣಕಾಸು ಆಯೋಗದ ಶಿಫಾರಸುಗಳು:–** ರಾಷ್ಟ್ರಪತಿಯು, ಈ ಸಂವಿಧಾನದ ಉಪಬಂಧಗಳ ಮೇರೆಗೆ ಹಣಕಾಸು ಆಯೋಗವು ಮಾಡಿದ ಪ್ರತಿಯೊಂದು ಶಿಫಾರಸನ್ನು ಅದರ ಮೇಲೆ ಕೈಕೊಳ್ಳಲಾದ ಕ್ರಮಕ್ಕೆ ಸಂಬಂಧಿಸಿದ ವಿವರಣಾತ್ಮಕ ಜ್ಞಾಪನಪತ್ರದೊಡನೆ ಸಂಸತ್ತಿನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು.

## ಸಂಕೀರ್ಣ ಹಣಕಾಸು ಉಪಬಂಧಗಳು

**282. ಒಕ್ಕೂಟವು ಅಥವಾ ಒಂದು ರಾಜ್ಯವು ತನ್ನ ರಾಜಸ್ವಗಳಿಂದ ಭರಿಸಬಹುದಾದ ವೆಚ್ಚಗಳು:–** ಒಕ್ಕೂಟವು ಅಥವಾ ಒಂದು ರಾಜ್ಯವು ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ, ಆ ಉದ್ದೇಶವು ಸಂಸತ್ತು ಅಥವಾ ಸಂದರ್ಭಾನುಸಾರ ಆ ರಾಜ್ಯದ ವಿಧಾನ ಮಂಡಲವು ಕಾನೂನು ರಚಿಸಬಹುದಾದಂಥ ಉದ್ದೇಶವಾಗಿರದಿದ್ದಾಗ್ಯೂ, ಯಾವುದೇ ಅನುದಾನವನ್ನು ಕೊಡಬಹುದು.

**283. ಸಂಚಿತ ನಿಧಿಗಳ, ಸಾದಿಲ್ವಾರು ನಿಧಿಗಳ ಮತ್ತು ಸರ್ಕಾರಿ ಲೆಕ್ಕಗಳಿಗೆ ಜಮೆಯಾದ ಹಣಗಳ ಅಭಿರಕ್ಷೆ, ಇತ್ಯಾದಿ:–** (1) ಭಾರತದ ಸಂಚಿತ ನಿಧಿಯ ಮತ್ತು ಭಾರತದ ಸಾದಿಲ್ವಾರು ನಿಧಿಯ ಅಭಿರಕ್ಷೆ, ಅಂಥ ನಿಧಿಗಳಿಗೆ ಹಣವನ್ನು ಸಂದಾಯ ಮಾಡುವುದು, ಅವುಗಳಿಂದ ಹಣವನ್ನು ಹಿಂತೆಗೆದುಕೊಳ್ಳುವುದು, ಅಂಥ ನಿಧಿಗಳಿಗೆ ಜಮೆಯಾದ ಹಣವನ್ನು ಹೊರತುಪಡಿಸಿ ಭಾರತ ಸರ್ಕಾರವು ಸ್ವೀಕರಿಸಿದ ಅಥವಾ ಅದರ ಪರವಾಗಿ ಸ್ವೀಕರಿಸಿದ ಎಲ್ಲ ಸರ್ಕಾರಿ ಹಣದ ಅಭಿರಕ್ಷೆ, ಅವುಗಳನ್ನು ಭಾರತದ ಸರ್ಕಾರಿ ಲೆಕ್ಕಕ್ಕೆ ಸಂದಾಯ ಮಾಡುವುದು ಮತ್ತು ಅಂಥ ಲೆಕ್ಕದಿಂದ ಹಣವನ್ನು ಹಿಂತೆಗೆದುಕೊಳ್ಳುವುದು ಮತ್ತು ಹಿಂದೆ ಹೇಳಿದ ವಿಷಯಗಳಿಗೆ ಸಂಬಂಧಿಸಿದ ಅಥವಾ ಅದಕ್ಕೆ ಸಹಾಯಕವಾದ ಇತರ ಎಲ್ಲ ವಿಷಯಗಳನ್ನು ಸಂಸತ್ತು ರಚಿಸುವ ಕಾನೂನಿನ ಮೂಲಕ ವಿನಿಯಮಿಸತಕ್ಕದ್ದು ಮತ್ತು ಆ ಬಗ್ಗೆ ಹಾಗೆ ಉಪಬಂಧವನ್ನು ಮಾಡುವವರೆಗೆ, ಅವು ರಾಷ್ಟ್ರಪತಿಯು ರಚಿಸಿದ ನಿಯಮಗಳಿಂದ ವಿನಿಯಮಿಸತಕ್ಕದ್ದು.

---

1. 1992ರ ಸಂವಿಧಾನ (ಎಪ್ಪತ್ತಮೂರನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (24-4-93 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1992ರ ಸಂವಿಧಾನ (ಎಪ್ಪತ್ತ ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (1-6-93ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1992ನೇ ಇಸವಿಯ ಸಂವಿಧಾನ (ಎಪ್ಪತ್ತ ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (1.6.93 ರಿಂದ ಜಾರಿಗೆ ಬರುವಂತೆ) (ಸಿ) ಉಪ-ಖಂಡವನ್ನು (ಡಿ) ಉಪ-ಖಂಡವೆಂದು ಪುನರ್ ಅಕ್ಷರ ನೀಡಲಾಗಿದೆ.

(2) ಒಂದು ರಾಜ್ಯದ ಸಂಚಿತ ನಿಧಿಯ ಮತ್ತು ಒಂದು ರಾಜ್ಯದ ಸಾದಿಲ್ವಾರು ನಿಧಿಯ ಅಭಿರಕ್ಷೆ, ಅಂಥ ನಿಧಿಗಳಿಗೆ ಹಣವನ್ನು ಸಂದಾಯ ಮಾಡುವುದು, ಅವುಗಳಿಂದ ಹಣವನ್ನು ಹಿಂತೆಗೆದುಕೊಳ್ಳುವುದು, ಅಂಥ ನಿಧಿಗಳಿಗೆ ಜಮೆಯಾದ ಹಣವನ್ನು ಹೊರತುಪಡಿಸಿ ಆ ರಾಜ್ಯ ಸರ್ಕಾರವು ಸ್ವೀಕರಿಸಿದ ಅಥವಾ ಅದರ ಪರವಾಗಿ ಸ್ವೀಕರಿಸಿದ ಎಲ್ಲ ಸರ್ಕಾರಿ ಹಣದ ಅಭಿರಕ್ಷೆ, ಅವುಗಳನ್ನು ಆ ರಾಜ್ಯದ ಸರ್ಕಾರಿ ಲೆಕ್ಕಕ್ಕೆ ಸಂದಾಯ ಮಾಡುವುದು ಮತ್ತು ಅಂಥ ಲೆಕ್ಕದಿಂದ ಹಣವನ್ನು ಹಿಂತೆಗೆದುಕೊಳ್ಳುವುದು ಮತ್ತು ಹಿಂದೆ ಹೇಳಿದ ವಿಷಯಗಳಿಗೆ ಸಂಬಂಧಿಸಿದ ಅಥವಾ ಅದಕ್ಕೆ ಸಹಾಯಕವಾದ ಇತರ ಎಲ್ಲ ವಿಷಯಗಳನ್ನು, ಆ ರಾಜ್ಯದ ವಿಧಾನಮಂಡಲವು ರಚಿಸುವ ಕಾನೂನಿನ ಮೂಲಕ ವಿನಿಯಮಿಸತಕ್ಕದ್ದು ಮತ್ತು ಆ ಬಗ್ಗೆ ಹಾಗೆ ಉಪಬಂಧವನ್ನು ಮಾಡುವವರೆಗೆ ಅವು ಆ ರಾಜ್ಯದ ರಾಜ್ಯಪಾಲನು [1] * * * * ರಚಿಸಿದ ನಿಯಮಗಳಿಂದ ವಿನಿಯಮಿಸತಕ್ಕದ್ದು.

**284. ಲೋಕನೌಕರರು ಮತ್ತು ನ್ಯಾಯಾಲಯಗಳು ಸ್ವೀಕರಿಸಿದ ದಾವೆಗಾರರ ಠೇವಣಿಗಳ ಮತ್ತು ಇತರ ಹಣದ ಅಭಿರಕ್ಷೆ:–** ಭಾರತದ ಸರ್ಕಾರೀ ಲೆಕ್ಕಕ್ಕೆ ಅಥವಾ ಸಂದರ್ಭಾನುಸಾರ ರಾಜ್ಯದ ಸರ್ಕಾರಿ ಲೆಕ್ಕಕ್ಕೆ–

(ಎ) ಭಾರತ ಸರ್ಕಾರವು ಅಥವಾ ಸಂದರ್ಭಾನುಸಾರ ಆ ರಾಜ್ಯಸರ್ಕಾರವು ಎತ್ತಿದ ಅಥವಾ ಸ್ವೀಕರಿಸಿದ ರಾಜಸ್ವಗಳನ್ನು ಅಥವಾ ಸರ್ಕಾರಿ ಹಣವನ್ನು ಹೊರತುಪಡಿಸಿ, ಒಕ್ಕೂಟದ ಅಥವಾ ಒಂದು ರಾಜ್ಯದ ವ್ಯವಹಾರಗಳ ಸಂಬಂಧದಲ್ಲಿ ನಿಯೋಜಿತನಾದ ಯಾರೇ ಅಧಿಕಾರಿಯು ತನ್ನ ಸ್ಥಾನಬಲದಿಂದ ಸ್ವೀಕರಿಸಿದ ಅಥವಾ ಅಂಥ ಅಧಿಕಾರಿಯ ವಶದಲ್ಲಿ ಠೇವಣಿ ಇಡಲಾದ ಎಲ್ಲ ಹಣವನ್ನು; ಅಥವಾ

(ಬಿ) ಭಾರತದ ರಾಜ್ಯಕ್ಷೇತ್ರದಲ್ಲಿರುವ ಯಾವುದೇ ನ್ಯಾಯಾಲಯವು ಯಾವುದೇ ವ್ಯಾಜ್ಯದ, ವಿಷಯದ, ಖಾತೆಯ ಅಥವಾ ವ್ಯಕ್ತಿಗಳ ಲೆಕ್ಕಕ್ಕೆ ಸ್ವೀಕರಿಸಿದ ಅಥವಾ ಅಂಥ ನ್ಯಾಯಾಲಯದ ವಶದಲ್ಲಿ ಠೇವಣಿ ಇಟ್ಟಿರುವ ಎಲ್ಲ ಹಣವನ್ನು

– ಸಂದಾಯ ಮಾಡತಕ್ಕದ್ದು.

**285. ಒಕ್ಕೂಟದ ಸ್ವತ್ತಿಗೆ ರಾಜ್ಯದ ತೆರಿಗೆಯಿಂದ ವಿನಾಯಿತಿ:–** (1) ಸಂಸತ್ತು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸುವುದನ್ನುಳಿದು, ಒಂದು ರಾಜ್ಯವು ಅಥವಾ ಆ ರಾಜ್ಯದಲ್ಲಿರುವ ಯಾವುದೇ ಪ್ರಾಧಿಕಾರವು ವಿಧಿಸುವ ಎಲ್ಲ ತೆರಿಗೆಗಳಿಂದ ಒಕ್ಕೂಟದ ಸ್ವತ್ತಿಗೆ ವಿನಾಯಿತಿ ಇರತಕ್ಕದ್ದು.

(2) (1)ನೇ ಖಂಡದಲ್ಲಿ ಇರುವುದು ಯಾವುದೂ, ಸಂಸತ್ತು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸುವವರೆಗೆ, ಒಕ್ಕೂಟದ ಯಾವ ಸ್ವತ್ತು ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಯಾವ ತೆರಿಗೆಗೆ ಗುರಿಯಾಗಿದ್ದಿತೋ ಅಥವಾ ಗುರಿಯಾಗಿದ್ದಂತೆ ಪರಿಗಣಿಸಲಾಗಿದ್ದಿತೋ ಅಂಥ ಯಾವುದೇ ಸ್ವತ್ತಿನ ಮೇಲೆ ಆ ಯಾವುದೇ ತೆರಿಗೆಯನ್ನು ಆ ರಾಜ್ಯದಲ್ಲಿ ವಿಧಿಸುತ್ತಿರುವುದು ಮುಂದುವರಿಯುವವರೆಗೆ ಆ ತೆರಿಗೆಯನ್ನು ಆ ರಾಜ್ಯದಲ್ಲಿರುವ ಯಾವುದೇ ಪ್ರಾಧಿಕಾರವು ವಿಧಿಸದಂತೆ ಪ್ರತಿಬಂಧಿಸತಕ್ಕದ್ದಲ್ಲ.

**286. ಸರಕುಗಳ ಮಾರಾಟದ ಅಥವಾ ಖರೀದಿಯ ಮೇಲೆ ತೆರಿಗೆಯನ್ನು ವಿಧಿಸುವುದರ ಮೇಲೆ ನಿರ್ಬಂಧಗಳು:–** (1) ಸರಕುಗಳ ಮಾರಾಟವು ಅಥವಾ ಖರೀದಿಯು –

(ಎ) ರಾಜ್ಯದ ಹೊರಗಡೆ ನಡೆದರೆ; ಅಥವಾ

(ಬಿ) ಭಾರತದ ರಾಜ್ಯಕ್ಷೇತ್ರದ ಒಳಕ್ಕೆ ಸರಕುಗಳನ್ನು ಆಮದು ಮಾಡುವಾಗ ಅಥವಾ ಭಾರತದ ರಾಜ್ಯಕ್ಷೇತ್ರದಿಂದ ಹೊರಕ್ಕೆ ಸರಕುಗಳನ್ನು ರಫ್ತು ಮಾಡುವಾಗ ನಡೆದರೆ

– ಅಂಥ ಮಾರಾಟದ ಅಥವಾ ಖರೀದಿಯ ಮೇಲೆ ರಾಜ್ಯದ ಯಾವುದೇ ಕಾನೂನಿನ ಮೂಲಕ ತೆರಿಗೆಯನ್ನು ವಿಧಿಸತಕ್ಕದ್ದಲ್ಲ ಅಥವಾ ವಿಧಿಸುವುದನ್ನು ಅಧಿಕೃತಗೊಳಿಸತಕ್ಕದ್ದಲ್ಲ.

[2] * * *

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
2. 1956ನೇ ಇಸವಿಯ ಸಂವಿಧಾನ (ಆರನೆಯ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ(1)ನೆಯ ಖಂಡದ ವಿವರಣೆಯನ್ನು ಬಿಟ್ಟುಬಿಡಲಾಗಿದೆ.

[1][(2) ಸರಕುಗಳ ಮಾರಾಟವು ಅಥವಾ ಖರೀದಿಯು (1)ನೆಯ ಖಂಡದಲ್ಲಿ ನಮೂದಿಸಿರುವ ರೀತಿಗಳ ಪೈಕಿ ಯಾವ ರೀತಿಯಲ್ಲಿ ಯಾವಾಗ ನಡೆಯುತ್ತದೆಂಬುದನ್ನು ನಿರ್ಧರಿಸಲು ಸಂಸತ್ತು ಕಾನೂನಿನ ಮೂಲಕ ಸೂತ್ರಗಳನ್ನು ರೂಪಿಸಬಹುದು.

[2][(3) ಒಂದು ರಾಜ್ಯದ ಯಾವುದೇ ಕಾನೂನು –

(ಎ) ಅಂತರರಾಜ್ಯ ವ್ಯಾಪಾರದಲ್ಲಿ ಅಥವಾ ವಾಣಿಜ್ಯದಲ್ಲಿ ವಿಶೇಷ ಮಹತ್ವವುಳ್ಳ ಸರಕುಗಳೆಂಬುದಾಗಿ ಸಂಸತ್ತು ಕಾನೂನಿನ ಮೂಲಕ ಘೋಷಿಸಿರುವ ಸರಕುಗಳ ಮಾರಾಟದ ಅಥವಾ ಖರೀದಿಯ ಮೇಲೆ; ಅಥವಾ

(ಬಿ) 366ನೇ ಅನುಚ್ಛೇದದ (29ಎ) ಖಂಡದ (ಬಿ) ಉಪಖಂಡದಲ್ಲಿ, (ಸಿ) ಉಪಖಂಡದಲ್ಲಿ ಅಥವಾ (ಡಿ) ಉಪಖಂಡದಲ್ಲಿ ಉಲ್ಲೇಖಿಸಿದ ಸ್ವರೂಪದ ಸರಕುಗಳ ಮಾರಾಟದ ಅಥವಾ ಖರೀದಿಯ ಮೇಲೆ

– ತೆರಿಗೆಯನ್ನು ವಿಧಿಸುವಷ್ಟರಮಟ್ಟಿಗೆ ಅಥವಾ ವಿಧಿಸುವುದನ್ನು ಅಧಿಕೃತಗೊಳಿಸುವಷ್ಟರಮಟ್ಟಿಗೆ ಅಂಥ ಕಾನೂನು, ಆ ತೆರಿಗೆ ವಿಧಿಸುವ ಪದ್ಧತಿ, ದರಗಳು ಮತ್ತು ಇತರ ಪ್ರಾಸಂಗಿಕ ವಿಷಯಗಳ ಬಗ್ಗೆ ಸಂಸತ್ತು ಕಾನೂನಿನ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.]]

**287. ವಿದ್ಯುಚ್ಛಕ್ತಿಗೆ ತೆರಿಗೆಯಿಂದ ವಿನಾಯಿತಿ:–** ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಬಹುದಾದಷ್ಟರ ಮಟ್ಟಿಗೆ ಹೊರತು ಒಂದು ರಾಜ್ಯದ ಯಾವುದೇ ಕಾನೂನು–

(ಎ) ಭಾರತ ಸರ್ಕಾರವು ಬಳಸಿದ ಅಥವಾ ಭಾರತ ಸರ್ಕಾರದ ಬಳಕೆಗಾಗಿ ಆ ಸರ್ಕಾರಕ್ಕೆ ಮಾರಿದ; ಅಥವಾ

(ಬಿ) ಭಾರತ ಸರ್ಕಾರವು ಅಥವಾ ರೈಲ್ವೆಯನ್ನು ನಡೆಸುವ ರೈಲ್ವೆ ಕಂಪನಿಯು ಯಾವುದೇ ರೈಲ್ವೆಯ ನಿರ್ಮಾಣದಲ್ಲಿ, ನಿರ್ವಹಣೆಯಲ್ಲಿ ಅಥವಾ ನಡೆಸುವಿಕೆಯಲ್ಲಿ ಬಳಸಿದ ಅಥವಾ ಯಾವುದೇ ರೈಲ್ವೆಯ ನಿರ್ಮಾಣ, ನಿರ್ವಹಣೆ ಅಥವಾ ನಡೆಸುವಿಕೆಯಲ್ಲಿ ಬಳಸಲು ಭಾರತ ಸರ್ಕಾರಕ್ಕೆ ಅಥವಾ ಯಾವುದೇ ರೈಲ್ವೆ ಕಂಪನಿಗೆ ಮಾರಿದ

– ವಿದ್ಯುಚ್ಛಕ್ತಿಯ (ಅದು ಸರ್ಕಾರದಿಂದ ಉತ್ಪಾದಿತವಾಗಿರಲಿ ಅಥವಾ ಇತರ ವ್ಯಕ್ತಿಗಳಿಂದ ಉತ್ಪಾದಿತವಾಗಿರಲಿ) ಬಳಕೆಯ ಅಥವಾ ಮಾರಾಟದ ಮೇಲೆ ತೆರಿಗೆಯನ್ನು ವಿಧಿಸತಕ್ಕದ್ದಲ್ಲ ಅಥವಾ ವಿಧಿಸುವುದನ್ನು ಅಧಿಕೃತಗೊಳಿಸತಕ್ಕದ್ದಲ್ಲ ಮತ್ತು ವಿದ್ಯುಚ್ಛಕ್ತಿಯ ಮಾರಾಟದ ಮೇಲೆ ತೆರಿಗೆಯನ್ನು ವಿಧಿಸುವ ಅಥವಾ ವಿಧಿಸುವುದನ್ನು ಅಧಿಕೃತಗೊಳಿಸುವಂಥ ಯಾವುದೇ ಕಾನೂನು, ಭಾರತ ಸರ್ಕಾರದ ಬಳಕೆಗಾಗಿ ಆ ಸರ್ಕಾರಕ್ಕೆ ಮಾರಿದ ಅಥವಾ ಯಾವುದೇ ರೈಲ್ವೆ ನಿರ್ಮಾಣ, ನಿರ್ವಹಣೆ ಅಥವಾ ನಡೆಯಿಸುವಿಕೆಯಲ್ಲಿ ಬಳಸುವುದಕ್ಕಾಗಿ ಮೇಲೆ ಹೇಳಿದ ಅಂಥ ಯಾವುದೇ ರೈಲ್ವೆ ಕಂಪನಿಗೆ ಮಾರಿದ ವಿದ್ಯುಚ್ಛಕ್ತಿಯ ಬೆಲೆಯು, ಗಣನೀಯವಾದ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಬಳಸುವ ಇತರ ಬಳಕೆದಾರರ ಮೇಲೆ ವಿಧಿಸುವ ಬೆಲೆಯಲ್ಲಿ ತೆರಿಗೆಯ ಮೊಬಲಗನ್ನು ಕಳೆದರೆ ಉಳಿಯುವ ಮೊಬಲಗಿನಷ್ಟು ಬೆಲೆಯಾಗಿದೆ ಎಂಬುದನ್ನು ಸುನಿಶ್ಚಿತಪಡಿಸತಕ್ಕದ್ದು.

**288. ಕೆಲವು ಸಂದರ್ಭಗಳಲ್ಲಿ ನೀರಿನ ಅಥವಾ ವಿದ್ಯುಚ್ಛಕ್ತಿಯ ಬಗ್ಗೆ ರಾಜ್ಯಗಳ ತೆರಿಗೆಯಿಂದ ವಿನಾಯಿತಿ:–** (1) ರಾಷ್ಟ್ರಪತಿಯು ಆದೇಶದ ಮೂಲಕ ಅನ್ಯಥಾ ಉಪಬಂಧಿಸಬಹುದಾದಷ್ಟರ ಮಟ್ಟಿಗೆ ಹೊರತು, ಈ ಸಂವಿಧಾನವು, ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಒಂದು ರಾಜ್ಯದ ಯಾವುದೇ ಕಾನೂನು, ಯಾವುದೇ ಅಂತರರಾಜ್ಯ ನದಿಯನ್ನು ಅಥವಾ ನದಿಯ ಕಣಿವೆಯನ್ನು ವಿನಿಯಮಗೊಳಿಸುವುದಕ್ಕಾಗಿ ಅಥವಾ ಅಭಿವೃದ್ಧಿಪಡಿಸುವುದಕ್ಕಾಗಿ ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಸ್ಥಾಪಿತವಾದ ಯಾವುದೇ ಪ್ರಾಧಿಕಾರವು ಶೇಖರಿಸಿದ, ಉತ್ಪಾದಿಸಿದ, ಬಳಸಿದ, ಹಂಚಿದ ಅಥವಾ ಮಾರಾಟಮಾಡಿದ ಯಾವುದೇ ನೀರು ಅಥವಾ ವಿದ್ಯುಚ್ಛಕ್ತಿಯ ಮೇಲೆ ತೆರಿಗೆಯನ್ನು ವಿಧಿಸತಕ್ಕದ್ದಲ್ಲ ಅಥವಾ ವಿಧಿಸುವುದನ್ನು ಅಧಿಕೃತಗೊಳಿಸತಕ್ಕದ್ದಲ್ಲ.

1. 1956ನೇ ಇಸವಿಯ ಸಂವಿಧಾನ (ಆರನೆಯ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ ಮೂಲ (2)ನೆಯ ಮತ್ತು (3)ನೆಯ ಖಂಡಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1982ನೇ ಇಸವಿಯ ಸಂವಿಧಾನ (ನಲವತ್ತಾರನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (3)ನೆಯ ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

**ವಿವರಣೆ:**– ಈ ಖಂಡದಲ್ಲಿರುವ "ಜಾರಿಯಲ್ಲಿದ್ದ ಒಂದು ರಾಜ್ಯದ ಕಾನೂನು" ಎಂಬ ಪದಗಳು ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಒಂದು ರಾಜ್ಯದ ಯಾವ ಕಾನೂನು ಅಂಗೀಕೃತವಾಗಿತ್ತೋ ಅಥವಾ ರಚಿತವಾಗಿತ್ತೋ ಆದರೆ ಈ ಹಿಂದೆಯೇ ನಿರಸಿತವಾಗಿರಲಿಲ್ಲವೋ ಆ ರಾಜ್ಯದ ಆ ಕಾನೂನು ಅಥವಾ ಅದರ ಭಾಗಗಳು ಅಂಥ ಪ್ರಾರಂಭದಲ್ಲಿ ಎಲ್ಲಿಯೇ ಆಗಲಿ ಅಥವಾ ನಿರ್ದಿಷ್ಟ ಪ್ರದೇಶಗಳಲ್ಲೇ ಆಗಲಿ ಜಾರಿಯಲ್ಲಿಲ್ಲದಿದ್ದಾಗ್ಯೂ ಅಂಥ ಕಾನೂನನ್ನು ಒಳಗೊಂಡಿರತಕ್ಕದ್ದು.

(2) ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ (1)ನೆಯ ಖಂಡದಲ್ಲಿ ನಮೂದಾಗಿರುವಂಥ ಯಾವುದೇ ತೆರಿಗೆಯನ್ನು ವಿಧಿಸಬಹುದು ಅಥವಾ ವಿಧಿಸುವುದನ್ನು ಅಧಿಕೃತಗೊಳಿಸಬಹುದು; ಆದರೆ ಅಂಥ ಯಾವುದೇ ಕಾನೂನನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾಯ್ದಿರಿಸಿದ್ದು ಅದಕ್ಕೆ ಅವನ ಅನುಮತಿಯು ದೊರೆತಿದ್ದ ಹೊರತು ಅದು ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಮತ್ತು ಅಂಥ ಯಾವುದೇ ಕಾನೂನು, ಆ ಕಾನೂನಿನ ಮೇರೆಗೆ ಯಾವುದೇ ಪ್ರಾಧಿಕಾರವು ಮಾಡಬೇಕಾದ ನಿಯಮಗಳ ಅಥವಾ ಆದೇಶಗಳ ಮೂಲಕ ಅಂಥ ತೆರಿಗೆಯ ದರಗಳನ್ನು ಮತ್ತು ಅದರ ಪ್ರಾಸಂಗಿಕ ವಿಷಯಗಳನ್ನು ನಿಗದಿಮಾಡುವ ಬಗ್ಗೆ ಉಪಬಂಧಿಸಿದ್ದರೆ ಆ ಕಾನೂನು ಅಂಥ ಯಾವುದೇ ನಿಯಮವನ್ನು ಅಥವಾ ಆದೇಶವನ್ನು ಮಾಡುವುದಕ್ಕೆ ರಾಷ್ಟ್ರಪತಿಯ ಪೂರ್ವಸಮ್ಮತಿಯನ್ನು ಪಡೆಯುವುದಕ್ಕಾಗಿ ಉಪಬಂಧಿಸತಕ್ಕದ್ದು.

**289. ಒಕ್ಕೂಟದ ತೆರಿಗೆಯಿಂದ ಒಂದು ರಾಜ್ಯದ ಸ್ವತ್ತಿಗೆ ಮತ್ತು ವರಮಾನಕ್ಕೆ ವಿನಾಯಿತಿ:**– (1) ಒಂದು ರಾಜ್ಯದ ಸ್ವತ್ತು ಮತ್ತು ವರಮಾನವು ಒಕ್ಕೂಟದ ತೆರಿಗೆಯಿಂದ ವಿನಾಯಿತಿಯನ್ನು ಹೊಂದಿರತಕ್ಕದ್ದು.

(2) (1)ನೇ ಖಂಡದಲ್ಲಿ ಇರುವುದು ಯಾವುದೂ, ಒಂದು ರಾಜ್ಯ ಸರ್ಕಾರವು ನಡೆಸುವ ಅಥವಾ ಅದರ ಪರವಾಗಿ ನಡೆಸಲಾಗುವ ಯಾವುದೇ ಬಗೆಯ ವ್ಯಾಪಾರ ಅಥವಾ ವ್ಯವಹಾರದ ಬಗ್ಗೆ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಕಾರ್ಯಾಚರಣೆಯ ಬಗ್ಗೆ ಅಥವಾ ಅಂಥ ವ್ಯಾಪಾರದ ಅಥವಾ ವ್ಯವಹಾರದ ಉದ್ದೇಶಗಳಿಗಾಗಿ ಉಪಯೋಗಿಸಿದ ಅಥವಾ ಅನುಭೋಗಿಸಿದ ಯಾವುದೇ ಸ್ವತ್ತಿನ ಬಗ್ಗೆ ಅಥವಾ ಅದಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ಅಥವಾ ಪ್ರಾಪ್ತವಾಗುವ ಯಾವುದೇ ವರಮಾನಕ್ಕೆ ಸಂಬಂಧಿಸಿದಂತೆ ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಬಹುದಾದಷ್ಟರ ಮಟ್ಟಿಗೆ, ಯಾವುದಾದರೂ ತೆರಿಗೆಯನ್ನು ವಿಧಿಸುವುದಿದ್ದರೆ ಅದನ್ನು ವಿಧಿಸಲು ಅಥವಾ ವಿಧಿಸುವುದನ್ನು ಅಧಿಕೃತಗೊಳಿಸಲು ಒಕ್ಕೂಟವನ್ನು ಪ್ರತಿಬಂಧಿಸತಕ್ಕದ್ದಲ್ಲ.

(3) (2)ನೇ ಖಂಡದಲ್ಲಿ ಇರುವುದು ಯಾವುದೂ, ಸರ್ಕಾರದ ಸಾಮಾನ್ಯ ಪ್ರಕಾರ್ಯಗಳಿಗೆ ಪ್ರಾಸಂಗಿಕವಾದುದೆಂದು ಸಂಸತ್ತು ಕಾನೂನಿನ ಮೂಲಕ ಘೋಷಿಸಬಹುದಾದ ಯಾವುದೇ ವ್ಯಾಪಾರ ಅಥವಾ ವ್ಯವಹಾರಕ್ಕೆ ಅಥವಾ ಯಾವುದೇ ವರ್ಗದ ವ್ಯಾಪಾರ ಅಥವಾ ವ್ಯವಹಾರಕ್ಕೆ ಅನ್ವಯವಾಗತಕ್ಕದ್ದಲ್ಲ.

**290. ಕೆಲವು ವೆಚ್ಚಗಳಿಗೆ ಮತ್ತು ನಿವೃತ್ತಿ ವೇತನಗಳಿಗೆ ಸಂಬಂಧಿಸಿದಂತೆ ಹೊಂದಾಣಿಕೆ:**– ಈ ಸಂವಿಧಾನದ ಉಪಬಂಧಗಳ ಮೇರೆಗೆ ಯಾವುದೇ ನ್ಯಾಯಾಲಯದ ಅಥವಾ ಆಯೋಗದ ವೆಚ್ಚಗಳನ್ನು ಅಥವಾ ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಅಧೀನದಲ್ಲಿ ಅಥವಾ ಈ ಸಂವಿಧಾನವು ಪ್ರಾರಂಭವಾದ ತರುವಾಯ ಒಕ್ಕೂಟದ ಅಥವಾ ಒಂದು ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸೇವೆ ಸಲ್ಲಿಸಿರುವ ವ್ಯಕ್ತಿಗೆ ಸಂದಾಯವಾಗಬೇಕಾದ ಅಥವಾ ಅಂಥ ವ್ಯಕ್ತಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ನಿವೃತ್ತಿವೇತನವನ್ನು ಭಾರತದ ಸಂಚಿತ ನಿಧಿಯ ಮೇಲೆ ಅಥವಾ ರಾಜ್ಯದ ಸಂಚಿತ ನಿಧಿಯ ಮೇಲೆ ಹೊರಿಸಿರುವಲ್ಲಿ–

(ಎ) ಭಾರತದ ಸಂಚಿತ ನಿಧಿಯ ಮೇಲೆ ಅದನ್ನು ಹೊರಿಸಿರುವ ಸಂದರ್ಭದಲ್ಲಿ ಆ ನ್ಯಾಯಾಲಯವು ಅಥವಾ ಆಯೋಗವು ರಾಜ್ಯದ ಪ್ರತ್ಯೇಕ ಅವಶ್ಯಕತೆಗಳ ಪೈಕಿ ಯಾವುದನ್ನಾದರೂ ಪೂರೈಸಿರುವಲ್ಲಿ ಅಥವಾ ಆ ವ್ಯಕ್ತಿಯು ಪೂರ್ಣವಾಗಿ ಅಥವಾ ಭಾಗಶಃ ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸೇವೆಯನ್ನು ಸಲ್ಲಿಸಿರುವಲ್ಲಿ; ಅಥವಾ

(ಬಿ) ರಾಜ್ಯದ ಸಂಚಿತ ನಿಧಿಯ ಮೇಲೆ ಅದನ್ನು ಹೊರಿಸಿರುವ ಸಂದರ್ಭದಲ್ಲಿ, ಆ ನ್ಯಾಯಾಲಯವು ಅಥವಾ ಆಯೋಗವು ಒಕ್ಕೂಟದ ಅಥವಾ ಇನ್ನೊಂದು ರಾಜ್ಯದ ಪ್ರತ್ಯೇಕ ಅವಶ್ಯಕತೆಗಳನ್ನು ಪೂರೈಸಿರುವಲ್ಲಿ ಅಥವಾ ಆ ವ್ಯಕ್ತಿಯು ಪೂರ್ಣವಾಗಿ ಅಥವಾ ಭಾಗಶಃ ಒಕ್ಕೂಟದ ಅಥವಾ ಆ ಇನ್ನೊಂದು ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸೇವೆಯನ್ನು ಸಲ್ಲಿಸಿರುವಲ್ಲಿ

– ಆ ವೆಚ್ಚಗಳ ಅಥವಾ ನಿವೃತ್ತಿ ವೇತನದ ಬಗ್ಗೆ ಒಪ್ಪಿಗೆ ಆಗಬಹುದಾದ ಅಥವಾ ಒಪ್ಪಿಗೆ ಆಗದಿದ್ದರೆ, ಭಾರತದ ಮುಖ್ಯ ನ್ಯಾಯಮೂರ್ತಿಯು ನೇಮಿಸುವ ಮಧ್ಯಸ್ಥಗಾರನು ನಿರ್ಧರಿಸಬಹುದಾದಂಥ ವಂತಿಗೆಯನ್ನು ಆ ರಾಜ್ಯದ ಸಂಚಿತ ನಿಧಿಯ ಮೇಲೆ ಅಥವಾ ಸಂದರ್ಭಾನುಸಾರ ಭಾರತದ ಸಂಚಿತ ನಿಧಿಯ ಮೇಲೆ ಅಥವಾ ಆ ಇತರ ರಾಜ್ಯದ ಸಂಚಿತ ನಿಧಿಯ ಮೇಲೆ ಹೊರಿಸಿ, ಅದನ್ನು ಆ ಸಂಚಿತ ನಿಧಿಯಿಂದ ಸಂದಾಯ ಮಾಡತಕ್ಕದ್ದು.

[1][290ಎ. ಕೆಲವು ದೇವಸ್ವಂ ನಿಧಿಗಳಿಗೆ ವಾರ್ಷಿಕ ಸಂದಾಯ:- ನಲವತ್ತಾರು ಲಕ್ಷ ಐವತ್ತು ಸಾವಿರ ರೂಪಾಯಿಗಳ ಮೊತ್ತವನ್ನು ಕೇರಳ ರಾಜ್ಯದ ಸಂಚಿತ ನಿಧಿಯ ಮೇಲೆ ಹೊರಿಸತಕ್ಕದ್ದು ಮತ್ತು ಆ ಸಂಚಿತ ನಿಧಿಯಿಂದ ತಿರುವಾಂಕೂರು ದೇವಸ್ವಂ ನಿಧಿಗೆ ಪ್ರತಿವರ್ಷ ಆ ಮೊತ್ತವನ್ನು ಸಂದಾಯ ಮಾಡತಕ್ಕದ್ದು; ಮತ್ತು 1956ನೆಯ ಇಸವಿ ನವೆಂಬರ್ ಒಂದನೆಯ ದಿನಾಂಕದಂದು ತಿರುವಾಂಕೂರು-ಕೊಚ್ಚಿ ರಾಜ್ಯದಿಂದ [2][ತಮಿಳುನಾಡು] ರಾಜ್ಯಕ್ಕೆ ಯಾವ ರಾಜ್ಯ ಕ್ಷೇತ್ರಗಳನ್ನು ವರ್ಗಾಯಿಸಲಾಯಿತೋ ಆ ರಾಜ್ಯಕ್ಷೇತ್ರಗಳಲ್ಲಿರುವ ಹಿಂದೂ ದೇವಾಲಯಗಳ ಹಾಗೂ ಪುಣ್ಯಕ್ಷೇತ್ರಗಳ ನಿರ್ವಹಣೆಗಾಗಿ ತಮಿಳುನಾಡು ರಾಜ್ಯದಲ್ಲಿ ಸ್ಥಾಪಿತವಾಗಿರುವ ದೇವಸ್ವಂ ನಿಧಿಗೆ ಹದಿಮೂರು ಲಕ್ಷ ಐವತ್ತು ಸಾವಿರ ರೂಪಾಯಿಗಳ ಮೊತ್ತವನ್ನು ತಮಿಳುನಾಡು ರಾಜ್ಯದ ಸಂಚಿತ ನಿಧಿಯ ಮೇಲೆ ಹೊರಿಸತಕ್ಕದ್ದು ಮತ್ತು ಆ ಮೊತ್ತವನ್ನು ಆ ನಿಧಿಯಿಂದ ಪ್ರತಿ ವರ್ಷ ಅದಕ್ಕೆ ಸಂದಾಯ ಮಾಡತಕ್ಕದ್ದು.]

**291.** *[ರಾಜರ ರಾಜಧನದ ಮೊತ್ತಗಳು.] 1971ನೆಯ ಇಸವಿಯ ಸಂವಿಧಾನ (ಇಪ್ಪತ್ತಾರನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೇರೆಗೆ ನಿರಸಿತವಾಗಿದೆ.*

## ಅಧ್ಯಾಯ - II ಸಾಲ ತೆಗೆದುಕೊಳ್ಳುವುದು

**292. ಭಾರತ ಸರ್ಕಾರವು ಸಾಲ ತೆಗೆದುಕೊಳ್ಳುವುದು:-** ಸಂಸತ್ತು ಕಾನೂನಿನ ಮೂಲಕ ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಪರಿಮಿತಿಗಳು, ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು ಭಾರತದ ಸಂಚಿತ ನಿಧಿಯ ಭದ್ರತೆಯ ಮೇಲೆ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಹಾಗೆ ನಿಗದಿಪಡಿಸಬಹುದಾದಂಥ ಪರಿಮಿತಿಗಳು ಯಾವುವಾದರೂ ಇದ್ದರೆ ಆ ಪರಿಮಿತಿಗಳಿಗೆ ಒಳಪಟ್ಟು ಖಾತ್ರಿಗಳನ್ನು ಕೊಡುವುದಕ್ಕೆ ಒಕ್ಕೂಟದ ಕಾರ್ಯಾಂಗ ಅಧಿಕಾರವು ವ್ಯಾಪ್ತವಾಗುತ್ತದೆ.

**293. ರಾಜ್ಯಗಳು ಸಾಲ ತೆಗೆದುಕೊಳ್ಳುವುದು:-** (1) ಈ ಅನುಚ್ಛೇದದ ಉಪಬಂಧಗಳಿಗೆ ಒಳಪಟ್ಟು, ಒಂದು ರಾಜ್ಯದ ಕಾರ್ಯಾಂಗ ಅಧಿಕಾರವು ಅಂಥ ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಪರಿಮಿತಿಗಳು, ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು ಆ ರಾಜ್ಯದ ಸಂಚಿತ ನಿಧಿಯ ಭದ್ರತೆಯ ಮೇಲೆ ಭಾರತದ ರಾಜ್ಯಕ್ಷೇತ್ರದೊಳಗೆ ಸಾಲ ತೆಗೆದುಕೊಳ್ಳುವುದಕ್ಕೆ ಮತ್ತು ಹಾಗೆ ನಿಗದಿಪಡಿಸಬಹುದಾದಂಥ ಪರಿಮಿತಿಗಳು ಯಾವುವಾದರೂ ಇದ್ದರೆ ಆ ಪರಿಮಿತಿಗಳಿಗೆ ಒಳಪಟ್ಟು ಖಾತ್ರಿಗಳನ್ನು ಕೊಡುವುದಕ್ಕೆ ವ್ಯಾಪ್ತವಾಗುತ್ತದೆ.

(2) ಭಾರತ ಸರ್ಕಾರವು, ಸಂಸತ್ತು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ವಿಧಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಯಾವುದೇ ರಾಜ್ಯಕ್ಕೆ ಸಾಲಗಳನ್ನು ಕೊಡಬಹುದು ಅಥವಾ 292ನೇ ಅನುಚ್ಛೇದದ ಮೇರೆಗೆ ನಿಗದಿಪಡಿಸಿರುವ ಯಾವುವೇ ಪರಿಮಿತಿಗಳನ್ನು ಮೀರದೆ ಇರುವವರೆಗೆ ಯಾವುದೇ ರಾಜ್ಯವು ಎತ್ತಿದ ಸಾಲಗಳಿಗೆ ಸಂಬಂಧಿಸಿದಂತೆ ಖಾತ್ರಿಗಳನ್ನು ಕೊಡಬಹುದು ಮತ್ತು ಅಂಥ ಸಾಲಗಳನ್ನು ಕೊಡುವ ಉದ್ದೇಶಕ್ಕಾಗಿ ಅಗತ್ಯವಾಗುವ ಯಾವುವೇ ಮೊತ್ತಗಳನ್ನು ಭಾರತದ ಸಂಚಿತ ನಿಧಿಯ ಮೇಲೆ ಹೊರಿಸತಕ್ಕದ್ದು.

(3) ಯಾವುದೇ ರಾಜ್ಯಕ್ಕೆ ಭಾರತ ಸರ್ಕಾರವು ಅಥವಾ ಅದರ ಪೂರ್ವವರ್ತಿ ಸರ್ಕಾರವು ಕೊಟ್ಟಿರುವ ಸಾಲದ ಯಾವುದೇ ಭಾಗವು ಅಥವಾ ಭಾರತ ಸರ್ಕಾರವು ಅಥವಾ ಅದರ ಪೂರ್ವವರ್ತಿ ಸರ್ಕಾರವು ಯಾವ ಸಾಲಕ್ಕೆ ಸಂಬಂಧಿಸಿದಂತೆ ಖಾತ್ರಿಯನ್ನು ಕೊಟ್ಟಿದೆಯೋ ಆ ಸಾಲದ ಯಾವುದೇ ಭಾಗವು ಇನ್ನೂ ಬಾಕಿ ಇರುವಾಗ, ಆ ರಾಜ್ಯವು ಭಾರತ ಸರ್ಕಾರದ ಸಮ್ಮತಿಯಿಲ್ಲದೆ ಯಾವುದೇ ಸಾಲವನ್ನು ಎತ್ತುವ ಹಾಗಿಲ್ಲ.

(4) ಭಾರತ ಸರ್ಕಾರವು ವಿಧಿಸುವುದು ಸೂಕ್ತವೆಂದು ಭಾವಿಸಬಹುದಾದಂಥ ಯಾವುವೇ ಷರತ್ತುಗಳಿಗೆ ಒಳಪಟ್ಟು, (3)ನೇ ಖಂಡದ ಮೇರೆಗೆ ಸಮ್ಮತಿಯನ್ನು ಕೊಡಬಹುದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 19ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 1968ನೆಯ ಇಸವಿಯ ಮದ್ರಾಸು ರಾಜ್ಯ (ಹೆಸರು ಬದಲಾವಣೆ) ಅಧಿನಿಯಮದ (1968ರ 53) 4ನೆಯ ಪ್ರಕರಣದ ಮೂಲಕ "ಮದ್ರಾಸು" ಎಂಬುದಕ್ಕೆ ಬದಲಾಗಿ (14-1-69 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

## ಅಧ್ಯಾಯ – III ಸ್ವತ್ತು, ಕರಾರುಗಳು, ಹಕ್ಕುಗಳು, ಹೊಣೆಗಾರಿಕೆಗಳು, ಬಾಧ್ಯತೆಗಳು ಮತ್ತು ದಾವೆಗಳು

**294. ಕೆಲವು ಸಂದರ್ಭಗಳಲ್ಲಿ ಸ್ವತ್ತು, ಆಸ್ತಿ, ಹಕ್ಕು, ಹೊಣೆಗಾರಿಕೆ ಮತ್ತು ಬಾಧ್ಯತೆಗಳಿಗೆ ಉತ್ತರಾಧಿಕಾರ:–** ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಡೊಮಿನಿಯನ್ ಆಫ್ ಪಾಕಿಸ್ತಾನವನ್ನು ಅಥವಾ ಪಶ್ಚಿಮ ಬಂಗಾಳ, ಪೂರ್ವ ಬಂಗಾಳ, ಪಶ್ಚಿಮ ಪಂಜಾಬ್ ಮತ್ತು ಪೂರ್ವ ಪಂಜಾಬ್ ಪ್ರಾಂತಗಳನ್ನು ಸೃಜಿಸಿದ ಕಾರಣದಿಂದ ಮಾಡಿದ ಅಥವಾ ಮಾಡಬೇಕಾದ ಯಾವುದೇ ಹೊಂದಾಣಿಕೆಗೆ ಒಳಪಟ್ಟು, ಈ ಸಂವಿಧಾನವು ಪ್ರಾರಂಭವಾದಾಗಿನಿಂದ,–

(ಎ) ಹಾಗೆ ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ, ಡೊಮಿನಿಯನ್ ಆಫ್ ಇಂಡಿಯಾ ಸರ್ಕಾರದ ಉದ್ದೇಶಗಳಿಗಾಗಿ ಬ್ರಿಟಿಷ್ ಸಾಮ್ರಾಟನಲ್ಲಿ ನಿಹಿತವಾಗಿದ್ದ ಎಲ್ಲ ಸ್ವತ್ತು ಮತ್ತು ಆಸ್ತಿಗಳು ಮತ್ತು ಹಾಗೆ ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ ಪ್ರತಿಯೊಬ್ಬ ಗೌರ್ನರನ ಪ್ರಾಂತ ಸರ್ಕಾರದ ಉದ್ದೇಶಗಳಿಗಾಗಿ ಬ್ರಿಟಿಷ್ ಸಾಮ್ರಾಟನಲ್ಲಿ ನಿಹಿತವಾಗಿದ್ದ ಎಲ್ಲ ಸ್ವತ್ತು ಮತ್ತು ಆಸ್ತಿಗಳು ಅನುಕ್ರಮವಾಗಿ ಒಕ್ಕೂಟದಲ್ಲಿ ಮತ್ತು ಸಂವಾದಿ ರಾಜ್ಯದಲ್ಲಿ ನಿಹಿತವಾಗತಕ್ಕದ್ದು; ಮತ್ತು

(ಬಿ) ಡೊಮಿನಿಯನ್ ಆಫ್ ಇಂಡಿಯಾ ಸರ್ಕಾರದ ಮತ್ತು ಪ್ರತಿಯೊಬ್ಬ ಗೌರ್ನರ್‌ನ ಪ್ರಾಂತ ಸರ್ಕಾರದ ಎಲ್ಲ ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳು ಯಾವುದೇ ಕರಾರಿನ ಮೂಲಕ ಉಂಟಾಗಿರಲಿ ಅಥವಾ ಅನ್ಯಥಾ ಉಂಟಾಗಿರಲಿ ಅವು ಅನುಕ್ರಮವಾಗಿ ಭಾರತ ಸರ್ಕಾರದ ಮತ್ತು ಸಂವಾದಿ ರಾಜ್ಯ ಸರ್ಕಾರದ ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳು ಆಗಿರತಕ್ಕದ್ದು.

**295. ಇತರ ಸಂದರ್ಭಗಳಲ್ಲಿ ಸ್ವತ್ತು, ಆಸ್ತಿ, ಹಕ್ಕು, ಹೊಣೆಗಾರಿಕೆ ಮತ್ತು ಬಾಧ್ಯತೆಗಳಿಗೆ ಉತ್ತರಾಧಿಕಾರ:–** (1) ಭಾರತ ಸರ್ಕಾರವು ಆಯಾ ರಾಜ್ಯದ ಸರ್ಕಾರದೊಡನೆ ಮಾಡಿಕೊಂಡಿರುವ ಯಾವುದೇ ಒಪ್ಪಂದಕ್ಕೆ ಒಳಪಟ್ಟು, ಈ ಸಂವಿಧಾನವು ಪ್ರಾರಂಭವಾದಾಗಿನಿಂದ,–

(ಎ) ಹಾಗೆ ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ, ಮೊದಲನೆಯ ಅನುಸೂಚಿಯ 'ಬಿ' ಭಾಗದಲ್ಲಿ ನಿರ್ದಿಷ್ಟಪಡಿಸಿದ್ದ ಒಂದು ರಾಜ್ಯಕ್ಕೆ ಸಂವಾದಿಯಾದ ಯಾವುದೇ ಭಾರತೀಯ ಸಂಸ್ಥಾನದಲ್ಲಿ ನಿಹಿತವಾಗಿದ್ದ ಎಲ್ಲ ಸ್ವತ್ತು ಮತ್ತು ಆಸ್ತಿಗಳನ್ನು ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಯಾವ ಉದ್ದೇಶಗಳಿಗಾಗಿ ಇಟ್ಟುಕೊಳ್ಳಲಾಗಿತ್ತೋ ಆ ಉದ್ದೇಶಗಳು ಈ ಸಂವಿಧಾನವು ಪ್ರಾರಂಭವಾದ ತರುವಾಯ ಒಕ್ಕೂಟ ಪಟ್ಟಿಯಲ್ಲಿ ನಮೂದಾಗಿರುವ ಯಾವುವೇ ವಿಷಯಗಳಿಗೆ ಸಂಬಂಧಿಸಿದ ಒಕ್ಕೂಟದ ಉದ್ದೇಶಗಳಾಗಿದ್ದರೆ ಅಂಥ ಸ್ವತ್ತು ಮತ್ತು ಆಸ್ತಿಗಳು ಒಕ್ಕೂಟದಲ್ಲಿ ನಿಹಿತವಾಗತಕ್ಕದ್ದು; ಮತ್ತು

(ಬಿ) ಮೊದಲನೆಯ ಅನುಸೂಚಿಯ 'ಬಿ' ಭಾಗದಲ್ಲಿ ನಿರ್ದಿಷ್ಟಪಡಿಸಿದ್ದ ಒಂದು ರಾಜ್ಯಕ್ಕೆ ಸಂವಾದಿಯಾದ ಯಾವುದೇ ಭಾರತೀಯ ಸಂಸ್ಥಾನದ ಸರ್ಕಾರದ ಎಲ್ಲ ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳು ಯಾವುದೇ ಕರಾರಿನ ಮೂಲಕ ಉಂಟಾಗಿರಲಿ ಅಥವಾ ಅನ್ಯಥಾ ಉಂಟಾಗಿರಲಿ ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಯಾವ ಉದ್ದೇಶಗಳಿಗಾಗಿ ಅಂಥ ಹಕ್ಕುಗಳನ್ನು ಆರ್ಜಿಸಲಾಯಿತೋ ಅಥವಾ ಹೊಣೆಗಾರಿಕೆಗಳನ್ನು ಅಥವಾ ಬಾಧ್ಯತೆಗಳನ್ನು ವಹಿಸಿಕೊಳ್ಳಲಾಯಿತೋ ಆ ಉದ್ದೇಶಗಳು ಈ ಸಂವಿಧಾನವು ಪ್ರಾರಂಭವಾದ ತರುವಾಯ ಒಕ್ಕೂಟಪಟ್ಟಿಯಲ್ಲಿ ನಮೂದಾಗಿರುವ ಯಾವುವೇ ವಿಷಯಗಳಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಉದ್ದೇಶಗಳಾಗಿದ್ದರೆ ಅವು ಭಾರತ ಸರ್ಕಾರದ ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳು ಆಗಿರತಕ್ಕದ್ದು.

(2) ಹಿಂದೆ ಹೇಳಿದುದಕ್ಕೊಳಪಟ್ಟು, (1)ನೆಯ ಖಂಡದಲ್ಲಿ ಉಲ್ಲೇಖಿಸಿದ ಸ್ವತ್ತು, ಆಸ್ತಿಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳನ್ನು ಹೊರತುಪಡಿಸಿ ಇತರ ಎಲ್ಲ ಸ್ವತ್ತು ಮತ್ತು ಆಸ್ತಿಗಳು, ಎಲ್ಲಾ ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳಿಗೆ ಸಂಬಂಧಿಸಿದಂತೆ, ಅವು ಯಾವುದೇ ಕರಾರಿನ ಮೂಲಕ ಉಂಟಾಗಿರಲಿ ಅಥವಾ ಅನ್ಯಥಾ ಉಂಟಾಗಿರಲಿ, ಮೊದಲನೆಯ ಅನುಸೂಚಿಯ 'ಬಿ' ಭಾಗದಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಂದು ರಾಜ್ಯ ಸರ್ಕಾರವು ಈ ಸಂವಿಧಾನವು ಪ್ರಾರಂಭವಾದಾಗಿನಿಂದ ಅದಕ್ಕೆ ಸಂವಾದಿಯಾಗಿರುವ ದೇಶೀಯ ರಾಜ್ಯ ಸರ್ಕಾರದ ಉತ್ತರಾಧಿಕಾರಿಯಾಗಿರತಕ್ಕದ್ದು.

**296. ರಾಜಗಾಮಿತ್ವ ಅಥವಾ ರದ್ದಿಯಾತಿ ಅಥವಾ ಸ್ವಾಮಿವಿಹೀನತೆಯಿಂದ ಪ್ರಾಪ್ತವಾಗುವ ಸ್ವತ್ತು:-** ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವುದಕ್ಕೆ ಒಳಪಟ್ಟು, ಈ ಸಂವಿಧಾನವು ಜಾರಿಗೆ ಬಾರದಿದ್ದರೆ ರಾಜಗಾಮಿತ್ವದಿಂದಾಗಿ ಅಥವಾ ರದ್ದಿಯಾತಿಯಿಂದಾಗಿ ಅಥವಾ ಹಕ್ಕುಳ್ಳ ಒಡೆಯನಿಲ್ಲದ ಕಾರಣ ಸ್ವಾಮಿವಿಹೀನವಾಗಿರುವುದರಿಂದಾಗಿ ಭಾರತದ ರಾಜ್ಯಕ್ಷೇತ್ರದಲ್ಲಿರುವ ಯಾವ ಸ್ವತ್ತು ಬ್ರಿಟಿಷ್ ಸಾಮ್ರಾಟನಿಗೆ ಅಥವಾ ಒಂದು ಭಾರತೀಯ ಸಂಸ್ಥಾನದ ರಾಜನಿಗೆ ಒದಗಿಬರುತ್ತಿದ್ದಿತೋ ಅಂಥ ಯಾವುದೇ ಸ್ವತ್ತು ಒಂದು ರಾಜ್ಯದಲ್ಲಿದ್ದರೆ ಅದು ಆ ರಾಜ್ಯದಲ್ಲಿ ನಿಹಿತವಾಗತಕ್ಕದ್ದು ಮತ್ತು ಇತರ ಯಾವುದೇ ಸಂದರ್ಭದಲ್ಲಿ ಒಕ್ಕೂಟದಲ್ಲಿ ನಿಹಿತವಾಗತಕ್ಕದ್ದು:

ಪರಂತು, ಯಾವ ದಿನಾಂಕದಂದು ಯಾವ ಸ್ವತ್ತು ಬ್ರಿಟಿಷ್ ಸಾಮ್ರಾಟನಿಗೆ ಅಥವಾ ಭಾರತೀಯ ಸಂಸ್ಥಾನದ ರಾಜನಿಗೆ ಪ್ರಾಪ್ತವಾಗಬಹುದಾಗಿತ್ತೋ ಆ ದಿನಾಂಕದಂದು ಆ ಸ್ವತ್ತು ಭಾರತ ಸರ್ಕಾರದ ಅಥವಾ ಒಂದು ರಾಜ್ಯ ಸರ್ಕಾರದ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇದ್ದರೆ ಆ ಸ್ವತ್ತನ್ನು ಒಕ್ಕೂಟದ ಅಥವಾ ರಾಜ್ಯದ ಯಾವ ಉದ್ದೇಶಗಳಿಗನುಸಾರವಾಗಿ, ಆಗ ಉಪಯೋಗಿಸಲಾಗುತ್ತಿತ್ತೋ ಅಥವಾ ಇಟ್ಟುಕೊಳ್ಳಲಾಗಿತ್ತೋ ಆ ಉದ್ದೇಶಗಳಿಗಾಗಿ ಅದು ಒಕ್ಕೂಟದಲ್ಲಿ ಅಥವಾ ಆ ರಾಜ್ಯದಲ್ಲಿ ನಿಹಿತವಾಗತಕ್ಕದ್ದು.

**ವಿವರಣೆ:-** ಈ ಅನುಚ್ಛೇದದಲ್ಲಿನ "ರಾಜ" ಮತ್ತು "ಭಾರತೀಯ ಸಂಸ್ಥಾನ" ಎಂಬ ಪದಗಳಿಗೆ 363ನೆಯ ಅನುಚ್ಛೇದದಲ್ಲಿರುವಂತಹ ಅರ್ಥಗಳೇ ಇರತಕ್ಕದ್ದು.

[1][**297. ರಾಜ್ಯ ಕ್ಷೇತ್ರೀಯ ಸಮುದ್ರದಲ್ಲಿನ ಅಥವಾ ಕಾಂಟಿನೆಂಟಲ್ ಶೆಲ್ಫ್‌ಗಳಲ್ಲಿನ ಬೆಲೆ ಬಾಳುವ ವಸ್ತುಗಳು ಮತ್ತು ಅನನ್ಯ ಆರ್ಥಿಕ ವಲಯದ ಸಂಪನ್ಮೂಲಗಳು ಒಕ್ಕೂಟದಲ್ಲಿ ನಿಹಿತವಾಗತಕ್ಕದ್ದು:-** (1) ಭಾರತದ ರಾಜ್ಯಕ್ಷೇತ್ರೀಯ ಸಮುದ್ರದಲ್ಲಿನ ಅಥವಾ ಕಾಂಟಿನೆಂಟಲ್ ಶೆಲ್ಫ್‌ನಲ್ಲಿನ ಅಥವಾ ಅನನ್ಯ ಆರ್ಥಿಕ ವಲಯದಲ್ಲಿನ ಸಾಗರದ ಕೆಳಗಿರುವ ಎಲ್ಲ ಭೂಮಿಗಳು, ಖನಿಜಗಳು ಮತ್ತು ಬೆಲೆ ಬಾಳುವ ಇತರ ವಸ್ತುಗಳು ಒಕ್ಕೂಟದಲ್ಲಿ ನಿಹಿತವಾಗತಕ್ಕದ್ದು ಮತ್ತು ಒಕ್ಕೂಟದ ಉದ್ದೇಶಗಳಿಗಾಗಿ ಅದರ ವಶದಲ್ಲಿರತಕ್ಕದ್ದು.

(2) ಭಾರತದ ಅನನ್ಯ ಆರ್ಥಿಕ ವಲಯದ ಇತರ ಎಲ್ಲ ಸಂಪನ್ಮೂಲಗಳೂ ಒಕ್ಕೂಟದಲ್ಲಿ ನಿಹಿತವಾಗತಕ್ಕದ್ದು ಮತ್ತು ಒಕ್ಕೂಟದ ಉದ್ದೇಶಗಳಿಗಾಗಿ ಅದರ ವಶದಲ್ಲಿರತಕ್ಕದ್ದು.

(3) ಭಾರತ ರಾಜ್ಯಕ್ಷೇತ್ರೀಯ ಸಮುದ್ರದ, ಕಾಂಟಿನೆಂಟಲ್ ಶೆಲ್ಫಿನ ಪ್ರದೇಶಗಳ ಮತ್ತು ಅನನ್ಯ ಆರ್ಥಿಕ ವಲಯದ ಮತ್ತು ಇತರ ಸಮುದ್ರೀಯ ವಲಯಗಳ ಪರಿಮಿತಿಗಳು, ಸಂಸತ್ತು ಕಾಲಕಾಲಕ್ಕೆ ರಚಿಸುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಬಹುದಾದಂಥ ಎಲ್ಲೆಗಳಾಗಿರತಕ್ಕದ್ದು.]

[2][**298. ವ್ಯಾಪಾರ, ಮುಂತಾದವನ್ನು ನಡೆಸಲು ಅಧಿಕಾರ:-** ಒಕ್ಕೂಟದ ಮತ್ತು ಪ್ರತಿಯೊಂದು ರಾಜ್ಯದ ಕಾರ್ಯಾಂಗ ಅಧಿಕಾರವು ಯಾವುದೇ ವ್ಯಾಪಾರವನ್ನು ಅಥವಾ ವ್ಯವಹಾರವನ್ನು ನಡೆಸುವುದಕ್ಕೆ ಮತ್ತು ಸ್ವತ್ತನ್ನು ಆರ್ಜಿಸುವುದಕ್ಕೆ, ಧಾರಣ ಮಾಡುವುದಕ್ಕೆ, ವಿಲೆ ಮಾಡುವುದಕ್ಕೆ ಮತ್ತು ಯಾವುದೇ ಉದ್ದೇಶಕ್ಕಾಗಿ ಕರಾರುಗಳನ್ನು ಮಾಡಿಕೊಳ್ಳುವುದಕ್ಕೆ ವ್ಯಾಪ್ತವಾಗತಕ್ಕದ್ದು:

ಪರಂತು,

(ಎ) ಒಕ್ಕೂಟದ ಸದರಿ ಕಾರ್ಯಾಂಗ ಅಧಿಕಾರವು ಅಂಥ ವ್ಯಾಪಾರ, ವ್ಯವಹಾರ ಅಥವಾ ಅಂಥ ಉದ್ದೇಶಕ್ಕಾಗಿ ಸಂಸತ್ತು ಕಾನೂನು ರಚಿಸಲಾಗುವುದಿಲ್ಲವೋ ಆ ವ್ಯಾಪಾರ, ಆ ವ್ಯವಹಾರ ಅಥವಾ ಆ ಉದ್ದೇಶದ ಮಟ್ಟಿಗೆ ಅದು ಪ್ರತಿಯೊಂದು ರಾಜ್ಯದಲ್ಲಿ ಆ ರಾಜ್ಯದ ಕಾನೂನು ರಚನೆಗೆ ಒಳಪಟ್ಟಿರತಕ್ಕದ್ದು.

(ಬಿ) ಪ್ರತಿಯೊಂದು ರಾಜ್ಯದ ಸದರಿ ಕಾರ್ಯಾಂಗ ಅಧಿಕಾರವು ಅಂಥ ವ್ಯಾಪಾರ, ವ್ಯವಹಾರ ಅಥವಾ ಅಂಥ ಉದ್ದೇಶಕ್ಕಾಗಿ ರಾಜ್ಯ ವಿಧಾನ ಮಂಡಲವು ಕಾನೂನು ರಚಿಸಲಾಗುವುದಿಲ್ಲವೋ ಆ ವ್ಯಾಪಾರ, ಆ ವ್ಯವಹಾರ ಅಥವಾ ಆ ಉದ್ದೇಶದ ಮಟ್ಟಿಗೆ ಅದು ಸಂಸತ್ತು ರಚಿಸುವ ಕಾನೂನಿಗೆ ಒಳಪಟ್ಟಿರತಕ್ಕದ್ದು.]

---

1. 1976ನೆಯ ಇಸವಿಯ ಸಂವಿಧಾನ (ನಲವತ್ತನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ 297ನೆಯ ಅನುಚ್ಛೇದಕ್ಕೆ ಬದಲಾಗಿ (27-5-76 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 20ನೆಯ ಪ್ರಕರಣದ ಮೂಲಕ ಮೂಲ 298ನೆಯ ಅನುಚ್ಛೇದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

**299. ಕರಾರುಗಳು:–** (1) ಒಕ್ಕೂಟದ ಅಥವಾ ಒಂದು ರಾಜ್ಯದ ಕಾರ್ಯಾಂಗ ಅಧಿಕಾರವನ್ನು ಚಲಾಯಿಸಿ ಮಾಡಿಕೊಂಡ ಎಲ್ಲಾ ಕರಾರುಗಳು, ರಾಷ್ಟ್ರಪತಿಯು ಅಥವಾ ಸಂದರ್ಭಾನುಸಾರ ಆ ರಾಜ್ಯದ ರಾಜ್ಯಪಾಲನು [1]* * * ಮಾಡಿಕೊಂಡಂತೆ ವ್ಯಕ್ತವಾಗತಕ್ಕದ್ದು ಮತ್ತು ಆ ಅಧಿಕಾರವನ್ನು ಚಲಾಯಿಸಿ ಮಾಡಿಕೊಂಡ ಎಲ್ಲ ಕರಾರುಗಳು ಮತ್ತು ಸ್ವತ್ತಿನ ಎಲ್ಲ ಹಸ್ತಾಂತರಣ ಪತ್ರಗಳು, ರಾಷ್ಟ್ರಪತಿಯ ಅಥವಾ ರಾಜ್ಯಪಾಲನ [1]* * * ಪರವಾಗಿ ಅವನು ನಿರ್ದೇಶಿಸಬಹುದಾದ ಅಥವಾ ಅಧಿಕೃತಗೊಳಿಸಬಹುದಾದಂಥ ರೀತಿಯಲ್ಲಿರತಕ್ಕದ್ದು ಮತ್ತು ನಿರ್ದೇಶಿಸಬಹುದಾದಂಥ ಮತ್ತು ಅಧಿಕೃತಗೊಳಿಸಬಹುದಾದಂಥ ವ್ಯಕ್ತಿಗಳು ಬರೆದುಕೊಡತಕ್ಕದ್ದು.

(2) ರಾಷ್ಟಪತಿಯು ಅಥವಾ ರಾಜ್ಯಪಾಲನು [2]* * * ಈ ಸಂವಿಧಾನದ ಉದ್ದೇಶಗಳಿಗಾಗಿ ಅಥವಾ ಭಾರತ ಸರ್ಕಾರಕ್ಕೆ ಸಂಬಂಧಿಸಿದಂತೆ ಈವರೆಗೆ ಜಾರಿಯಲ್ಲಿದ್ದಂಥ ಯಾವುದೇ ಅಧಿನಿಯಮಿತಿಯ ಉದ್ದೇಶಗಳಿಗಾಗಿ ಮಾಡಿದ ಅಥವಾ ಬರೆದುಕೊಟ್ಟ ಯಾವುದೇ ಕರಾರಿಗೆ ಅಥವಾ ಹಸ್ತಾಂತರಣ ಪತ್ರಕ್ಕೆ ಸಂಬಂಧಿಸಿದಂತೆ ವೈಯಕ್ತಿಕವಾಗಿ ಹೊಣೆಯಾಗತಕ್ಕದ್ದಲ್ಲ ಅಥವಾ ಅವರಲ್ಲಿ ಯಾರೊಬ್ಬರ ಪರವಾಗಿ ಅಂಥ ಯಾವುದೇ ಕರಾರನ್ನು ಅಥವಾ ಹಸ್ತಾಂತರಣ ಪತ್ರವನ್ನು ಮಾಡುವ ಅಥವಾ ಬರೆದುಕೊಡುವ ಯಾರೇ ವ್ಯಕ್ತಿಯು ಅದಕ್ಕೆ ಸಂಬಂಧಿಸಿದಂತೆ ವೈಯಕ್ತಿಕವಾಗಿ ಹೊಣೆಯಾಗತಕ್ಕದ್ದಲ್ಲ.

**300. ದಾವೆಗಳು ಮತ್ತು ವ್ಯವಹರಣೆಗಳು:–** (1) ಭಾರತ ಸರ್ಕಾರವು ಒಕ್ಕೂಟದ ಹೆಸರಿನಲ್ಲಿ ದಾವೆಯನ್ನು ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು ಮತ್ತು ಒಂದು ರಾಜ್ಯದ ಹೆಸರಿನಲ್ಲಿ ಆ ರಾಜ್ಯ ಸರ್ಕಾರವು ದಾವೆಯನ್ನು ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು ಮತ್ತು ಈ ಸಂವಿಧಾನವು ಪ್ರದಾನ ಮಾಡಿದ ಅಧಿಕಾರಗಳ ಬಲದಿಂದಾಗಿ ಅಧಿನಿಯಮಿಸಿದ ಸಂಸತ್ತಿನ ಅಥವಾ ಅಂಥ ರಾಜ್ಯ ವಿಧಾನಮಂಡಲದ ಅಧಿನಿಯಮದ ಮೂಲಕ ಮಾಡಬಹುದಾದ ಯಾವುವೇ ಉಪಬಂಧಗಳಿಗೊಳಪಟ್ಟು ಈ ಸಂವಿಧಾನವು ಅಧಿನಿಯಮಿತವಾಗಿರದಿದ್ದರೆ ಡೊಮಿನಿಯನ್ ಆಫ್ ಇಂಡಿಯಾ ಮತ್ತು ಸಂವಾದಿ ಪ್ರಾಂತ್ಯಗಳು ಅಥವಾ ಸಂವಾದಿ ಭಾರತೀಯ ಸಂಸ್ಥಾನಗಳು ಯಾವ ಸಂದರ್ಭಗಳಲ್ಲಿ ದಾವೆಯನ್ನು ಹೂಡಬಹುದಾಗಿತ್ತೋ ಅಥವಾ ದಾವೆಗೆ ಗುರಿಯಾಗಬಹುದಾಗಿತ್ತೋ ಅಂಥವೇ ಸಂದರ್ಭಗಳಲ್ಲಿ ಡೊಮಿನಿಯನ್ ಆಫ್ ಇಂಡಿಯಾ ಮತ್ತು ಆ ಸಂವಾದಿ ಪ್ರಾಂತ್ಯಗಳು ಅಥವಾ ಆ ಸಂವಾದಿ ಭಾರತೀಯ ಸಂಸ್ಥಾನಗಳು ಅವುಗಳ ಅನುಕ್ರಮ ವ್ಯವಹಾರಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು.

(2) ಈ ಸಂವಿಧಾನವು ಪ್ರಾರಂಭವಾದಾಗ–

(ಎ) ಯಾವ ಕಾನೂನು ವ್ಯವಹರಣೆಗಳಲ್ಲಿ ಡೊಮಿನಿಯನ್ ಆಫ್ ಇಂಡಿಯಾ ಒಂದು ಪಕ್ಷವಾಗಿರುವುದೋ ಆ ಯಾವುವೇ ಕಾನೂನು ವ್ಯವಹರಣೆಗಳು ಇತ್ಯರ್ಥದಲ್ಲಿರುವಾಗ, ಆ ವ್ಯವಹರಣೆಗಳಲ್ಲಿ ಡೊಮಿನಿಯನ್ ಆಫ್ ಇಂಡಿಯಾದ ಬದಲಾಗಿ ಭಾರತದ ಒಕ್ಕೂಟವನ್ನು ಪ್ರತ್ಯಾಯೋಜಿಸಿರುವುದಾಗಿ ಭಾವಿಸತಕ್ಕದ್ದು; ಮತ್ತು

(ಬಿ) ಯಾವ ಕಾನೂನು ವ್ಯವಹರಣೆಗಳಲ್ಲಿ ಒಂದು ಪ್ರಾಂತ್ಯವು ಅಥವಾ ಒಂದು ಭಾರತೀಯ ಸಂಸ್ಥಾನವು ಒಂದು ಪಕ್ಷವಾಗಿರುವುದೋ ಆ ಯಾವುವೇ ಕಾನೂನು ವ್ಯವಹರಣೆಗಳು ಇತ್ಯರ್ಥದಲ್ಲಿರುವಾಗ, ಆ ವ್ಯವಹರಣೆಗಳಲ್ಲಿ ಆ ಪ್ರಾಂತ್ಯಕ್ಕೆ ಅಥವಾ ಆ ಭಾರತೀಯ ಸಂಸ್ಥಾನಕ್ಕೆ ಬದಲಾಗಿ, ಅದಕ್ಕೆ ಸಂವಾದಿಯಾದ ರಾಜ್ಯವನ್ನು ಪ್ರತ್ಯಾಯೋಜಿಸಿರುವುದಾಗಿ ಭಾವಿಸತಕ್ಕದ್ದು.

## [3][ಅಧ್ಯಾಯ IV – ಸ್ವತ್ತಿನ ಹಕ್ಕು

**300ಎ. ಕಾನೂನಿನ ಅಧಿಕಾರವಿಲ್ಲದೆ ವ್ಯಕ್ತಿಗಳ ಸ್ವತ್ತನ್ನು ಕಸಿದುಕೊಳ್ಳತಕ್ಕದ್ದಲ್ಲ:–** ಕಾನೂನಿನ ಅಧಿಕಾರವಿಲ್ಲದೆ ಯಾರೇ ವ್ಯಕ್ತಿಯ ಸ್ವತ್ತನ್ನು ಕಸಿದುಕೊಳ್ಳತಕ್ಕದ್ದಲ್ಲ.]

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
2. 1956ನೇ ಇಸವಿಯ ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಮತ್ತು ಅನುಸೂಚಿಯ ಮೂಲಕ "ಅಥವಾ ರಾಜ ಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
3. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 34ನೇ ಪ್ರಕರಣದ ಮೂಲಕ (20-6-79ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

## ಭಾಗ – XIII

## ಭಾರತದ ರಾಜ್ಯಕ್ಷೇತ್ರದೊಳಗೆ ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರ

**301. ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರ ಸ್ವಾತಂತ್ರ್ಯ:–** ಈ ಭಾಗದ ಇತರ ಉಪಬಂಧಗಳಿಗೆ ಒಳಪಟ್ಟು, ಭಾರತದ ರಾಜ್ಯಕ್ಷೇತ್ರದಾದ್ಯಂತ ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರವು ಮುಕ್ತವಾಗಿರತಕ್ಕದ್ದು.

**302. ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರದ ಮೇಲೆ ನಿರ್ಬಂಧಗಳನ್ನು ವಿಧಿಸಲು ಸಂಸತ್ತಿನ ಅಧಿಕಾರ:–** ಒಂದು ರಾಜ್ಯ ಮತ್ತು ಇನ್ನೊಂದು ರಾಜ್ಯದ ನಡುವೆ ನಡೆಯುವ ಅಥವಾ ಭಾರತದ ರಾಜ್ಯಕ್ಷೇತ್ರದ ಯಾವುದೇ ಭಾಗದಲ್ಲಿ ನಡೆಯುವ ವ್ಯಾಪಾರ, ವಾಣಿಜ್ಯ ಅಥವಾ ಪರಸ್ಪರ ವ್ಯವಹಾರ ಸ್ವಾತಂತ್ರ್ಯದ ಮೇಲೆ ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವಾಗಬಹುದಾದಂಥ ನಿರ್ಬಂಧಗಳನ್ನು ಸಂಸತ್ತು ಕಾನೂನಿನ ಮೂಲಕ ವಿಧಿಸಬಹುದು.

**303. ವ್ಯಾಪಾರ ಮತ್ತು ವಾಣಿಜ್ಯದ ಬಗ್ಗೆ ಒಕ್ಕೂಟದ ಮತ್ತು ರಾಜ್ಯಗಳ ವಿಧಾಯೀ ಅಧಿಕಾರಗಳ ಮೇಲೆ ನಿರ್ಬಂಧಗಳು:–** (1) 302ನೇ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ಏಳನೆಯ ಅನುಸೂಚಿಯ ಯಾವುದೇ ಪಟ್ಟಿಯಲ್ಲಿ ವ್ಯಾಪಾರಕ್ಕೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ ಇರುವ ಯಾವುದೇ ನಮೂದಿನ ಕಾರಣದಿಂದ ಒಂದು ರಾಜ್ಯಕ್ಕಿಂತ ಇನ್ನೊಂದು ರಾಜ್ಯಕ್ಕೆ ಯಾವುದೇ ಪ್ರಾಶಸ್ತ್ಯವನ್ನು ಕೊಡುವ ಅಥವಾ ಕೊಡುವುದನ್ನು ಅಧಿಕೃತಗೊಳಿಸುವ ಅಥವಾ ಒಂದು ರಾಜ್ಯ ಮತ್ತು ಇನ್ನೊಂದು ರಾಜ್ಯದ ನಡುವೆ ಯಾವುದೇ ತಾರತಮ್ಯವನ್ನು ಮಾಡುವ ಅಥವಾ ಮಾಡುವುದನ್ನು ಅಧಿಕೃತಗೊಳಿಸುವ ಯಾವುದೇ ಕಾನೂನನ್ನು ರಚಿಸಲು ಸಂಸತ್ತೇ ಆಗಲಿ ಅಥವಾ ರಾಜ್ಯದ ವಿಧಾನಮಂಡಲವೇ ಆಗಲಿ ಅಧಿಕಾರವನ್ನು ಹೊಂದಿರತಕ್ಕದ್ದಲ್ಲ.

(2) (1)ನೇ ಖಂಡದಲ್ಲಿ ಇರುವುದು ಯಾವುದೂ, ಭಾರತದ ರಾಜ್ಯಕ್ಷೇತ್ರದ ಯಾವುದೇ ಭಾಗದಲ್ಲಿ ಸರಕುಗಳ ಅಭಾವದಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ನಿಭಾಯಿಸುವ ಉದ್ದೇಶಕ್ಕಾಗಿ ಯಾವುದೇ ಪ್ರಾಶಸ್ತ್ಯವನ್ನು ಕೊಡುವ ಅಥವಾ ಕೊಡುವುದನ್ನು ಅಧಿಕೃತಗೊಳಿಸುವ ಅಥವಾ ಯಾವುದೇ ತಾರತಮ್ಯವನ್ನು ಮಾಡುವ ಅಥವಾ ಮಾಡುವುದನ್ನು ಅಧಿಕೃತಗೊಳಿಸುವ ಯಾವುದೇ ಕಾನೂನನ್ನು ರಚಿಸುವುದು ಅವಶ್ಯವೆಂದು ಅಂಥ ಕಾನೂನಿನ ಮೂಲಕ ಘೋಷಿಸಿದ್ದರೆ ಅಂಥ ಕಾನೂನನ್ನು ರಚಿಸದಂತೆ ಸಂಸತ್ತನ್ನು ಪ್ರತಿಬಂಧಿಸತಕ್ಕದ್ದಲ್ಲ.

**304. ರಾಜ್ಯಗಳ ನಡುವೆ ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರಗಳ ಮೇಲೆ ನಿರ್ಬಂಧಗಳು:–** 301ನೆಯ ಅಥವಾ 303ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ಒಂದು ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ –

(ಎ) ಇತರ ರಾಜ್ಯಗಳಿಂದ [1][ಅಥವಾ ಒಕ್ಕೂಟ ರಾಜ್ಯಕ್ಷೇತ್ರಗಳಿಂದ] ಆಮದಾದ ಸರಕುಗಳ ಮೇಲೆ, ಆ ರಾಜ್ಯದಲ್ಲಿಯೇ ತಯಾರಾದ ಅಥವಾ ಉತ್ಪಾದಿತವಾದ ಅದೇ ಬಗೆಯ ಸರಕುಗಳು ಯಾವ ತೆರಿಗೆಗೆ ಒಳಪಟ್ಟಿವೆಯೋ ಅಂಥ ಯಾವುದೇ ತೆರಿಗೆಯನ್ನು ಹಾಗೆ ಆಮದಾದ ಸರಕುಗಳಿಗೆ ಮತ್ತು ಹಾಗೆ ತಯಾರಾದ ಅಥವಾ ಉತ್ಪಾದಿತವಾದ ಸರಕುಗಳ ನಡುವೆ ಯಾವುದೇ ತಾರತಮ್ಯವನ್ನೂ ಮಾಡದ ಹಾಗೆ ವಿಧಿಸಬಹುದು; ಮತ್ತು

(ಬಿ) ಆ ರಾಜ್ಯದೊಂದಿಗೆ ಅಥವಾ ಆ ರಾಜ್ಯದೊಳಗೆ ನಡೆಯುವ ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರ ಸ್ವಾತಂತ್ರ್ಯದ ಮೇಲೆ ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವಾಗಬಹುದಾದಂಥ ಯುಕ್ತ ನಿರ್ಬಂಧಗಳನ್ನು ವಿಧಿಸಬಹುದು:

ಪರಂತು, (ಬಿ) ಖಂಡದ ಉದ್ದೇಶಗಳಿಗಾಗಿ ಯಾವುದೇ ವಿಧೇಯಕವನ್ನು ಅಥವಾ ತಿದ್ದುಪಡಿಯನ್ನು ರಾಷ್ಟ್ರಪತಿಯ ಪೂರ್ವ ಮಂಜೂರಾತಿ ಇಲ್ಲದೆ ಒಂದು ರಾಜ್ಯದ ವಿಧಾನಮಂಡಲದಲ್ಲಿ ತರತಕ್ಕದ್ದಲ್ಲ ಮತ್ತು ಮಂಡಿಸತಕ್ಕದ್ದಲ್ಲ.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ ಸೇರಿಸಲಾಗಿದೆ.

[1][305. ಅಸ್ತಿತ್ವದಲ್ಲಿರುವ ಕಾನೂನುಗಳ ಮತ್ತು ರಾಜ್ಯದ ಏಕಸ್ವಾಮ್ಯದ ಬಗ್ಗೆ ಉಪಬಂಧಿಸುವ ಕಾನೂನುಗಳ ಉಳಿಸುವಿಕೆ:– 301ನೆಯ ಮತ್ತು 303ನೆಯ ಅನುಚ್ಛೇದಗಳಲ್ಲಿ ಇರುವುದು ಯಾವುದೂ, ರಾಷ್ಟ್ರಪತಿಯು ಆದೇಶದ ಮೂಲಕ ಅನ್ಯಥಾ ನಿರ್ದೇಶಿಸಬಹುದಾದಷ್ಟರ ಮಟ್ಟಿಗೆ ಹೊರತು, ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ; ಮತ್ತು 301ನೆಯ ಅನುಚ್ಛೇದದಲ್ಲಿ ಇರುವುದು ಯಾವುದೂ, 1955ನೆಯ ಇಸವಿಯ ಸಂವಿಧಾನ (ನಾಲ್ಕನೆಯ ತಿದ್ದುಪಡಿ) ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಮಾಡಿದ ಯಾವುದೇ ಕಾನೂನಿನ ಜಾರಿಗೆ, ಆ ಕಾನೂನು 19ನೆಯ ಅನುಚ್ಛೇದದ (6)ನೆಯ ಖಂಡದ (ii)ನೆಯ ಉಪಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ವಿಷಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ ಅಥವಾ ಅಂಥ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಕಾನೂನನ್ನು ರಚಿಸದಂತೆ ಸಂಸತ್ತನ್ನು ಅಥವಾ ಒಂದು ರಾಜ್ಯದ ವಿಧಾನಮಂಡಲವನ್ನು ಪ್ರತಿಬಂಧಿಸತಕ್ಕದ್ದಲ್ಲ.]

**306.** *[ವ್ಯಾಪಾರ ಮತ್ತು ವಾಣಿಜ್ಯದ ಮೇಲೆ ನಿರ್ಬಂಧಗಳನ್ನು ವಿಧಿಸಲು ಮೊದಲನೆಯ ಅನುಸೂಚಿಯ 'ಬಿ' ಭಾಗದಲ್ಲಿರುವ ಕೆಲವು ರಾಜ್ಯಗಳ ಅಧಿಕಾರ.] 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಮತ್ತು ಅನುಸೂಚಿಯ ಮೇರೆಗೆ ನಿರಸಿತವಾಗಿದೆ.*

**307. 301ರಿಂದ 304ರವರೆಗಿನ ಅನುಚ್ಛೇದಗಳ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಪ್ರಾಧಿಕಾರದ ನೇಮಕ:–** ಸಂಸತ್ತು, 301ನೆಯ, 302ನೆಯ, 303ನೆಯ ಮತ್ತು 304ನೆಯ ಅನುಚ್ಛೇದಗಳ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ತಾನು ಸಮುಚಿತವೆಂದು ಪರ್ಯಾಲೋಚಿಸುವಂಥ ಪ್ರಾಧಿಕಾರವನ್ನು ಕಾನೂನಿನ ಮೂಲಕ ನೇಮಕ ಮಾಡಬಹುದು ಮತ್ತು ಹಾಗೆ ನೇಮಕಗೊಂಡ ಪ್ರಾಧಿಕಾರಕ್ಕೆ ಸಂಸತ್ತು ಅವಶ್ಯವೆಂದು ಭಾವಿಸುವಂಥ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಪ್ರದಾನ ಮಾಡಬಹುದು.

---

1. 1955ನೆಯ ಇಸವಿಯ ಸಂವಿಧಾನದ (ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ ಮೂಲ 305ನೇ ಅನುಚ್ಛೇದನಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

## ಭಾಗ - XIV

## ಒಕ್ಕೂಟದ ಮತ್ತು ರಾಜ್ಯಗಳ ಅಧೀನದಲ್ಲಿನ ಸೇವೆಗಳು

### ಅಧ್ಯಾಯ - I ಸೇವೆಗಳು

**308. ಅರ್ಥವಿವರಣೆ:-** ಈ ಭಾಗದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು 'ರಾಜ್ಯ' ಎಂಬ ಪದವು [1][ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಒಳಗೊಳ್ಳುವುದಿಲ್ಲ.]

**309. ಒಕ್ಕೂಟಕ್ಕೆ ಅಥವಾ ರಾಜ್ಯಕ್ಕೆ ಸೇವೆ ಸಲ್ಲಿಸುವ ವ್ಯಕ್ತಿಗಳ ನೇಮಕಾತಿ ಮತ್ತು ಸೇವಾ ಷರತ್ತುಗಳು:-** ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು, ಸಮುಚಿತ ವಿಧಾನ ಮಂಡಲದ ಅಧಿನಿಯಮಗಳು ಒಕ್ಕೂಟದ ಅಥವಾ ಯಾವುದೇ ರಾಜ್ಯದ ವ್ಯವಹಾರಗಳ ಸಂಬಂಧದಲ್ಲಿನ ಲೋಕಸೇವೆಗಳಿಗೆ ಮತ್ತು ಹುದ್ದೆಗಳ ನೇಮಕಾತಿಯನ್ನು ಮತ್ತು ಅವುಗಳಿಗೆ ನೇಮಕಗೊಂಡ ವ್ಯಕ್ತಿಗಳ ಸೇವಾ ಷರತ್ತುಗಳನ್ನು ವಿನಿಯಮಿಸಬಹುದು:

ಪರಂತು, ಒಕ್ಕೂಟದ ವ್ಯವಹಾರಗಳಿಗೆ ಸಂಬಂಧಪಟ್ಟ ಸೇವೆಗಳ ಮತ್ತು ಹುದ್ದೆಗಳ ಸಂದರ್ಭದಲ್ಲಿ ರಾಷ್ಟ್ರಪತಿಯು ಅಥವಾ ಅವನು ನಿರ್ದೇಶಿಸಬಹುದಾದಂಥ ವ್ಯಕ್ತಿಯು ಮತ್ತು ಒಂದು ರಾಜ್ಯದ ವ್ಯವಹಾರಗಳಿಗೆ ಸಂಬಂಧಪಟ್ಟ ಸೇವೆಗಳ ಮತ್ತು ಹುದ್ದೆಗಳ ಸಂದರ್ಭದಲ್ಲಿ ಆ ರಾಜ್ಯದ ರಾಜ್ಯಪಾಲನು [2] * * * ಅಥವಾ ಅವನು ನಿರ್ದೇಶಿಸಬಹುದಾದಂಥ ವ್ಯಕ್ತಿಯು, ಈ ಅನುಚ್ಛೇದದ ಮೇರೆಗೆ, ಆ ಬಗ್ಗೆ ಸಮುಚಿತ ವಿಧಾನಮಂಡಲದ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಉಪಬಂಧಿಸುವವರೆಗೆ, ಅಂಥ ಸೇವೆಗಳಿಗೆ ಮತ್ತು ಹುದ್ದೆಗಳಿಗೆ ನೇಮಕಾತಿಯನ್ನು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಗಳ ಸೇವಾ ಷರತ್ತುಗಳನ್ನು ವಿನಿಯಮಿಸುವ ನಿಯಮಗಳನ್ನು ರಚಿಸಲು ಸಕ್ಷಮನಾಗಿರತಕ್ಕದ್ದು ಮತ್ತು ಹಾಗೆ ರಚಿಸಿದ ಯಾವುವೇ ನಿಯಮಗಳು ಅಂಥ ಯಾವುದೇ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು.

**310. ಒಕ್ಕೂಟಕ್ಕೆ ಅಥವಾ ರಾಜ್ಯಕ್ಕೆ ಸೇವೆ ಸಲ್ಲಿಸುವ ವ್ಯಕ್ತಿಗಳ ಪದಾವಧಿ:-** (1) ಈ ಸಂವಿಧಾನದಲ್ಲಿ ವ್ಯಕ್ತವಾಗಿ ಉಪಬಂಧಿಸಿರುವ ರೀತಿಯಲ್ಲಲ್ಲದೆ, ಒಕ್ಕೂಟದ ರಕ್ಷಣಾ ಸೇವೆಯ ಅಥವಾ ಸಿವಿಲ್ ಸೇವೆಯ ಅಥವಾ ಅಖಿಲ ಭಾರತ ಸೇವೆಯ ಸದಸ್ಯನಾಗಿರುವ ಅಥವಾ ಒಕ್ಕೂಟದ ಅಧೀನದಲ್ಲಿ ರಕ್ಷಣೆಗೆ ಸಂಬಂಧಪಟ್ಟ ಯಾವುದೇ ಹುದ್ದೆಯನ್ನು ಅಥವಾ ಯಾವುದೇ ಸಿವಿಲ್ ಹುದ್ದೆಯನ್ನು ಧಾರಣ ಮಾಡಿರುವ ಪ್ರತಿಯೊಬ್ಬ ವ್ಯಕ್ತಿಯು ರಾಷ್ಟ್ರಪತಿಯ ಇಷ್ಟಪರ್ಯಂತ ಪದದಲ್ಲಿರತಕ್ಕದ್ದು ಮತ್ತು ರಾಜ್ಯದ ಸಿವಿಲ್ ಸೇವಾ ಸದಸ್ಯನಾಗಿರುವ ಅಥವಾ ರಾಜ್ಯದ ಅಧೀನದಲ್ಲಿ ಯಾವುದೇ ಸಿವಿಲ್ ಹುದ್ದೆಯನ್ನು ಧಾರಣ ಮಾಡಿರುವ ಪ್ರತಿಯೊಬ್ಬ ವ್ಯಕ್ತಿಯು ಆ ರಾಜ್ಯದ ರಾಜ್ಯಪಾಲನ [3] * * * ಇಷ್ಟಪರ್ಯಂತ ಪದದಲ್ಲಿರತಕ್ಕದ್ದು.

(2) ಒಕ್ಕೂಟದ ಅಥವಾ ರಾಜ್ಯದ ಅಧೀನದಲ್ಲಿನ ಒಂದು ಸಿವಿಲ್ ಹುದ್ದೆಯನ್ನು ಧಾರಣ ಮಾಡಿರುವ ವ್ಯಕ್ತಿಯು ರಾಷ್ಟ್ರಪತಿಯ ಅಥವಾ ಸಂದರ್ಭಾನುಸಾರ ರಾಜ್ಯದ ರಾಜ್ಯಪಾಲನ [4] * * * ಇಷ್ಟಪರ್ಯಂತ ಆ ಪದದಲ್ಲಿ ಇರಬಹುದಾಗಿದ್ದಾಗ್ಯೂ, ರಕ್ಷಣಾ ಸೇವೆಯ ಅಥವಾ ಅಖಿಲ ಭಾರತ ಸೇವೆಯ ಅಥವಾ ಒಕ್ಕೂಟದ ಅಥವಾ ರಾಜ್ಯದ ಸಿವಿಲ್ ಸೇವೆಯ ಸದಸ್ಯನಾಗಿರದ ವ್ಯಕ್ತಿಯನ್ನು ಈ ಸಂವಿಧಾನದ ಮೇರೆಗೆ ಅಂಥ ಹುದ್ದೆಯನ್ನು ಧಾರಣ ಮಾಡಲು, ಯಾವುದೇ ಕರಾರಿನ ಮೇರೆಗೆ ನೇಮಕ ಮಾಡಿದರೆ ಮತ್ತು ಹಾಗೆ ನೇಮಕ ಮಾಡುವುದು, ವಿಶೇಷ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಯ ಸೇವೆಗಳನ್ನು ಪಡೆಯುವ ದೃಷ್ಟಿಯಿಂದ ಅವಶ್ಯವೆಂದು ರಾಷ್ಟ್ರಪತಿಯು ಅಥವಾ ಸಂದರ್ಭಾನುಸಾರ ರಾಜ್ಯಪಾಲನು [4] * * * ಭಾವಿಸಿದರೆ, ಅಂಥ ಕರಾರಿನಲ್ಲಿ ನಿಗದಿಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಆ ಹುದ್ದೆಯು ರದ್ದಾದರೆ ಅಥವಾ ಯಾವುದೇ ದುರ್ವರ್ತನೆಗೆ ಸಂಬಂಧಪಡದ ಕಾರಣಗಳಿಗಾಗಿ ಆ ಹುದ್ದೆಯನ್ನು ಖಾಲಿ ಮಾಡಬೇಕೆಂದು ಆ ಹುದ್ದೆಯ ಧಾರಕನನ್ನು ಅಗತ್ಯಪಡಿಸಿದರೆ ಅವನಿಗೆ ನಷ್ಟಪರಿಹಾರವನ್ನು ಸಂದಾಯ ಮಾಡುವುದಕ್ಕಾಗಿ ಆ ಕರಾರಿನಲ್ಲಿ ಉಪಬಂಧವನ್ನು ಕಲ್ಪಿಸಬಹುದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಭಾಗದಲ್ಲಿ ಅಥವಾ (ಬಿ) ಭಾಗದಲ್ಲಿ ನಿರ್ದಿಷ್ಟಪಡಿಸಿದ ಒಂದು ರಾಜ್ಯ ಎಂದರ್ಥ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. ಅದೇ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
3. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ ಅನುಕ್ರಮವಾಗಿ "ಸಂದರ್ಭಾನುಸಾರ" ಮತ್ತು "ಅಥವಾ ರಾಜಪ್ರಮುಖನ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
4. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

**311. ಒಕ್ಕೂಟದ ಅಥವಾ ರಾಜ್ಯದ ಅಧೀನದಲ್ಲಿ ಸಿವಿಲ್ ಸ್ಥಾನಗಳಲ್ಲಿ ನಿಯೋಜಿತರಾಗಿರುವ ವ್ಯಕ್ತಿಗಳನ್ನು ವಜಾ ಮಾಡುವುದು, ತೆಗೆದುಹಾಕುವುದು ಅಥವಾ ಅವರ ದರ್ಜೆಯನ್ನು ಇಳಿಸುವುದು:–** (1) ಒಕ್ಕೂಟದ ಸಿವಿಲ್ ಸೇವೆಯ ಅಥವಾ ಅಖಿಲ ಭಾರತ ಸೇವೆಯ ಅಥವಾ ರಾಜ್ಯದ ಸಿವಿಲ್ ಸೇವೆಯ ಸದಸ್ಯನಾಗಿರುವ ಅಥವಾ ಒಕ್ಕೂಟದ ಅಥವಾ ರಾಜ್ಯದ ಅಧೀನದಲ್ಲಿನ ಸಿವಿಲ್ ಹುದ್ದೆಯನ್ನು ಧಾರಣ ಮಾಡಿರುವ ಯಾರೇ ವ್ಯಕ್ತಿಯನ್ನು, ಅವನು ಯಾವ ಪ್ರಾಧಿಕಾರಿಯಿಂದ ನೇಮಕಗೊಂಡನೋ ಆ ಪ್ರಾಧಿಕಾರಿಗೆ ಅಧೀನನಾಗಿರುವ ಪ್ರಾಧಿಕಾರಿಯು ವಜಾ ಮಾಡತಕ್ಕದ್ದಲ್ಲ ಅಥವಾ ತೆಗೆದುಹಾಕತಕ್ಕದ್ದಲ್ಲ.

[1][(2) ಹಿಂದೆ ಹೇಳಿದಂಥ ಯಾರೇ ವ್ಯಕ್ತಿಯನ್ನು ಅವನ ವಿರುದ್ಧದ ಆಪಾದನೆಗಳನ್ನು ಅವನಿಗೆ ತಿಳಿಸಿ, ಆ ಆಪಾದನೆಗಳಿಗೆ ಸಂಬಂಧಿಸಿದಂತೆ [2] * * * ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಅವನಿಗೆ ಕೊಟ್ಟು ವಿಚಾರಣೆಯನ್ನು ನಡೆಸಿದ ತರುವಾಯವಲ್ಲದೆ, ವಜಾ ಮಾಡತಕ್ಕದ್ದಲ್ಲ ಅಥವಾ ತೆಗೆದುಹಾಕತಕ್ಕದ್ದಲ್ಲ ಅಥವಾ ಅವನ ದರ್ಜೆಯನ್ನು ಇಳಿಸತಕ್ಕದ್ದಲ್ಲ:

[3][ಪರಂತು, ಅಂಥ ವಿಚಾರಣೆಯ ತರುವಾಯ ಯಾವುದೇ ಅಂಥ ದಂಡನೆಯನ್ನು ಅವನಿಗೆ ವಿಧಿಸಬೇಕೆಂದು ಉದ್ದೇಶಿಸಿದರೆ ಅಂಥ ವಿಚಾರಣೆಯಲ್ಲಿ ಒದಗಿಸಿದ ಸಾಕ್ಷ್ಯದ ಆಧಾರದ ಮೇಲೆ ಅಂಥ ದಂಡನೆಯನ್ನು ವಿಧಿಸಬಹುದು ಮತ್ತು ಉದ್ದೇಶಿತ ದಂಡನೆಯ ಬಗ್ಗೆ ಮನವಿಯನ್ನು ಸಲ್ಲಿಸಲು ಅಂಥ ವ್ಯಕ್ತಿಗೆ ಯಾವುದೇ ಅವಕಾಶವನ್ನು ಕೊಡುವುದು ಅವಶ್ಯವಾಗಿರತಕ್ಕದ್ದಲ್ಲ:

ಮತ್ತೂ ಪರಂತು,–

(ಎ) ಕ್ರಿಮಿನಲ್ ಆರೋಪದ ಮೇಲೆ ಅಪರಾಧ ನಿರ್ಣಯಕ್ಕೆ ಗುರಿಯಾಗಿರುವ ವ್ಯಕ್ತಿಯ ವರ್ತನೆಯ ಆಧಾರದ ಮೇಲೆ ಅವನನ್ನು ವಜಾ ಮಾಡಿರುವಾಗ, ತೆಗೆದುಹಾಕಿರುವಾಗ ಅಥವಾ ದರ್ಜೆಯಿಂದ ಇಳಿಸಿರುವಾಗ; ಅಥವಾ

(ಬಿ) ವ್ಯಕ್ತಿಯನ್ನು ವಜಾ ಮಾಡಲು ಅಥವಾ ತೆಗೆದುಹಾಕಲು ಅಥವಾ ಅವನನ್ನು ದರ್ಜೆಯಿಂದ ಇಳಿಸಲು ಶಕ್ತನಾದ ಪ್ರಾಧಿಕಾರಿಗೆ ದಾಖಲಿಸಬೇಕಾದ ಕೆಲವು ಕಾರಣದಿಂದಾಗಿ ಅಂಥ ವಿಚಾರಣೆಯನ್ನು ನಡೆಸುವುದು ಯುಕ್ತವಾಗಿ ಕಾರ್ಯಸಾಧ್ಯವಲ್ಲವೆಂದು ಮನದಟ್ಟಾದಾಗ; ಅಥವಾ

(ಸಿ) ಅಂಥ ವಿಚಾರಣೆಯನ್ನು ನಡೆಸುವುದು ರಾಜ್ಯದ ಭದ್ರತೆಯ ದೃಷ್ಟಿಯಿಂದ ವಿಹಿತವಲ್ಲವೆಂದು ರಾಷ್ಟ್ರಪತಿಗೆ ಅಥವಾ ಸಂದರ್ಭಾನುಸಾರ ರಾಜ್ಯಪಾಲನಿಗೆ ಮನದಟ್ಟಾದಾಗ

– ಈ ಖಂಡವು ಅನ್ವಯವಾಗತಕ್ಕದ್ದಲ್ಲ.]

(3) ಹಿಂದೆ ಹೇಳಿದಂತೆ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ (2)ನೆಯ ಖಂಡದಲ್ಲಿ ಹೇಳಿದಂಥ ವಿಚಾರಣೆಯನ್ನು ನಡೆಸುವುದು ಯುಕ್ತವಾಗಿ ಕಾರ್ಯಸಾಧ್ಯವೇ ಎಂಬ ಪ್ರಶ್ನೆಯು ಉದ್ಭವಿಸಿದರೆ ಅಂಥ ವ್ಯಕ್ತಿಯನ್ನು ವಜಾ ಮಾಡಲು ಅಥವಾ ತೆಗೆದುಹಾಕಲು ಅಥವಾ ಅವನನ್ನು ದರ್ಜೆಯಿಂದ ಇಳಿಸಲು ಶಕ್ತನಾದ ಪ್ರಾಧಿಕಾರಿಯು ಆ ಬಗ್ಗೆ ಕೈಗೊಳ್ಳುವ ತೀರ್ಮಾನವು ಅಂತಿಮವಾಗಿರತಕ್ಕದ್ದು.]

---

1. 1963ನೆಯ ಇಸವಿಯ ಸಂವಿಧಾನ (ಹದಿನೈದನೆಯ ತಿದ್ದುಪಡಿ) ಅಧಿನಿಯಮದ 10ನೆಯ ಪ್ರಕರಣದ ಮೂಲಕ (2)ನೆಯ ಮತ್ತು (3)ನೆಯ ಖಂಡಗಳಿಗೆ ಬದಲಾಗಿ ಈ ಖಂಡಗಳನ್ನು ಪ್ರತ್ಯಾಯೋಜಿಸಲಾಗಿದೆ.

2. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 44ನೆಯ ಪ್ರಕರಣದ ಮೂಲಕ (3-1-77ರಿಂದ ಜಾರಿಗೆ ಬರುವಂತೆ) ಕೆಲವು ಪದಗಳನ್ನು ಬಿಟ್ಟುಬಿಡಲಾಗಿದೆ.

3. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 44ನೆಯ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ (3-1-77ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

**312. ಅಖಿಲ ಭಾರತ ಸೇವೆಗಳು:-** (1) [1][VIನೆಯ ಭಾಗದ VIನೆಯ ಅಧ್ಯಾಯದಲ್ಲಿ ಅಥವಾ XIನೆಯ ಭಾಗದಲ್ಲಿ] ಏನೇ ಇದ್ದಾಗ್ಯೂ, ಒಕ್ಕೂಟಕ್ಕೆ ಮತ್ತು ರಾಜ್ಯಗಳಿಗೆ ಒಂದೇ ರೀತಿಯ ಒಂದು ಅಥವಾ ಹೆಚ್ಚಿನ ಅಖಿಲ ಭಾರತ ಸೇವೆಗಳನ್ನು [2][ಒಂದು ಅಖಿಲ ಭಾರತ ನ್ಯಾಯಿಕ ಸೇವೆಯನ್ನೂ ಒಳಗೊಂಡು] ಸೃಜಿಸುವುದಕ್ಕಾಗಿ ಕಾನೂನು ಮೂಲಕ ಉಪಬಂಧಿಸುವುದು ರಾಷ್ಟ್ರದ ಹಿತದೃಷ್ಟಿಯಿಂದ ಅವಶ್ಯವೆಂದು ಅಥವಾ ವಿಹಿತವೆಂದು ರಾಜ್ಯಸಭೆಯಲ್ಲಿ ಹಾಜರಿದ್ದು ಮತ ನೀಡುವ ಸದಸ್ಯರ ಪೈಕಿ ಮೂರನೇ ಎರಡು ಭಾಗಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ಬೆಂಬಲಿಸಿದ ನಿರ್ಣಯದ ಮೂಲಕ ಆ ಸದನವು ಘೋಷಿಸಿದರೆ ಸಂಸತ್ತು ಕಾನೂನು ಮೂಲಕ ಹಾಗೆ ಉಪಬಂಧಿಸಬಹುದು ಮತ್ತು ಈ ಅಧ್ಯಾಯದ ಇತರ ಉಪಬಂಧಗಳಿಗೆ ಒಳಪಟ್ಟು ಅಂಥ ಯಾವುದೇ ಸೇವೆಗೆ ನೇಮಕಾತಿಯನ್ನು ಮತ್ತು ನೇಮಕಗೊಂಡ ವ್ಯಕ್ತಿಗಳ ಸೇವಾ ಷರತ್ತುಗಳನ್ನು ಸಂಸತ್ತು ವಿನಿಯಮಿಸಬಹುದು.

(2) ಈ ಸಂವಿಧಾನದ ಪ್ರಾರಂಭದಲ್ಲಿ ಭಾರತ ಆಡಳಿತ ಸೇವೆ ಮತ್ತು ಭಾರತ ಪೊಲೀಸ್ ಸೇವೆ ಎಂದು ಕರೆಯಲಾಗುತ್ತಿದ್ದ ಸೇವೆಗಳನ್ನು ಈ ಅನುಚ್ಛೇದದ ಮೇರೆಗೆ ಸಂಸತ್ತು ಸೃಜಿಸಿದ ಸೇವೆಗಳೆಂದು ಭಾವಿಸತಕ್ಕದ್ದು.

[2][(3)(1)ನೆಯ ಖಂಡದಲ್ಲಿ ಉಲ್ಲೇಖಿಸಲಾದ ಅಖಿಲ ಭಾರತ ನ್ಯಾಯಿಕ ಸೇವೆಯು 236ನೆಯ ಅನುಚ್ಛೇದದಲ್ಲಿ ಪರಿಭಾಷಿಸಲಾದಂತೆ ಜಿಲ್ಲಾ ನ್ಯಾಯಾಧೀಶನ ಹುದ್ದೆಗಿಂತ ಕಡಿಮೆಯಾದ ಯಾವುದೇ ಹುದ್ದೆಯನ್ನು ಒಳಗೊಳ್ಳತಕ್ಕದ್ದಲ್ಲ.

(4) ಹಿಂದೆ ಹೇಳಿದ ಅಖಿಲ ಭಾರತ ನ್ಯಾಯಿಕ ಸೇವೆಯನ್ನು ಸೃಜಿಸುವುದಕ್ಕೆ ಉಪಬಂಧಿಸುವ ಕಾನೂನಿನ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ VIನೆಯ ಭಾಗದ VI ನೆಯ ಅಧ್ಯಾಯವನ್ನು ತಿದ್ದುಪಡಿ ಮಾಡಲು ಅವಶ್ಯಕವಾಗಬಹುದಾದಂತೆ ಆ ಕಾನೂನು ಉಪಬಂಧಗಳನ್ನು ಒಳಗೊಳ್ಳಬಹುದು ಮತ್ತು ಅಂಥ ಯಾವುದೇ ಕಾನೂನನ್ನು 368ನೆಯ ಅನುಚ್ಛೇದದ ಉದ್ದೇಶಗಳಿಗಾಗಿ ಈ ಸಂವಿಧಾನದ ಒಂದು ತಿದ್ದುಪಡಿ ಎಂಬುದಾಗಿ ಭಾವಿಸತಕ್ಕದ್ದಲ್ಲ.]

[3][**312ಎ. ಕೆಲವು ಸೇವೆಗಳ ಅಧಿಕಾರಿಗಳ ಸೇವಾ ಷರತ್ತುಗಳನ್ನು ವ್ಯತ್ಯಸ್ತಗೊಳಿಸಲು ಅಥವಾ ರದ್ದುಗೊಳಿಸಲು ಸಂಸತ್ತಿನ ಅಧಿಕಾರ:-** (1) ಸಂಸತ್ತು, ಕಾನೂನಿನ ಮೂಲಕ,-

(ಎ) ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಸೆಕ್ರೆಟರಿ ಆಫ್ ಸ್ಟೇಟ್‌ನಿಂದ ಅಥವಾ ಸೆಕ್ರೆಟರಿ ಆಫ್ ಸ್ಟೇಟ್ ಇನ್ ಕೌನ್ಸಿಲ್‌ನಿಂದ ಭಾರತದಲ್ಲಿ ಸಾಮ್ರಾಟನ ಸಿವಿಲ್ ಸೇವೆಗೆ ನೇಮಕಗೊಂಡಿದ್ದು ಸಂವಿಧಾನ (ಇಪ್ಪತ್ತೆಂಟನೆಯ ತಿದ್ದುಪಡಿ) ಅಧಿನಿಯಮ, 1972 ಪ್ರಾರಂಭವಾದಂದು ಮತ್ತು ಆ ತರುವಾಯ ಭಾರತ ಸರ್ಕಾರದ ಅಥವಾ ಒಂದು ರಾಜ್ಯ ಸರ್ಕಾರದ ಅಧೀನದಲ್ಲಿ ಯಾವುದೇ ಸೇವೆಯಲ್ಲಿ ಅಥವಾ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳ ಪರಿಶ್ರಮಧನ, ರಜೆ ಮತ್ತು ನಿವೃತ್ತಿವೇತನಗಳಿಗೆ ಸಂಬಂಧಪಟ್ಟ ಸೇವಾ ಷರತ್ತುಗಳನ್ನು ಮತ್ತು ಶಿಸ್ತುಪಾಲನೆಗೆ ಸಂಬಂಧಪಟ್ಟ ಅವರ ಹಕ್ಕುಗಳನ್ನು ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ ವ್ಯತ್ಯಸ್ತಗೊಳಿಸಬಹುದು ಅಥವಾ ರದ್ದುಗೊಳಿಸಬಹುದು;

(ಬಿ) ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಸೆಕ್ರೆಟರಿ ಆಫ್ ಸ್ಟೇಟ್‌ನಿಂದ ಅಥವಾ ಸೆಕ್ರೆಟರಿ ಆಫ್ ಸ್ಟೇಟ್ ಇನ್ ಕೌನ್ಸಿಲ್‌ನಿಂದ ಭಾರತದಲ್ಲಿ ಸಾಮ್ರಾಟನ ಒಂದು ಸಿವಿಲ್ ಸೇವೆಗೆ ನೇಮಕಗೊಂಡಿದ್ದು, ಸಂವಿಧಾನ (ಇಪ್ಪತ್ತೆಂಟನೆಯ ತಿದ್ದುಪಡಿ) ಅಧಿನಿಯಮ, 1972 ಪ್ರಾರಂಭವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ನಿವೃತ್ತಿ ಹೊಂದಿರುವ ಅಥವಾ ಅನ್ಯಥಾ ಸೇವೆಯಲ್ಲಿರುವುದು ನಿಂತುಹೋಗಿರುವ ವ್ಯಕ್ತಿಗಳ ನಿವೃತ್ತಿ ವೇತನದ ಸಂಬಂಧದಲ್ಲಿನ ಸೇವಾ ಷರತ್ತುಗಳನ್ನು ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ ವ್ಯತ್ಯಸ್ತಗೊಳಿಸಬಹುದು ಅಥವಾ ರದ್ದುಗೊಳಿಸಬಹುದು:

---

1. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 45ನೆಯ ಪ್ರಕರಣದ ಮೂಲಕ "ಭಾಗ-XI" ರಲ್ಲಿ ಎಂಬುದಕ್ಕೆ ಬದಲಾಗಿ (3-1-77ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 45ನೆಯ ಪ್ರಕರಣದ ಮೂಲಕ (3-1-77ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1972ನೆಯ ಇಸವಿಯ ಸಂವಿಧಾನ (ಇಪ್ಪತ್ತೆಂಟನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (29-8-72ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

ಪರಂತು, ಅಂಥ ಯಾರೇ ವ್ಯಕ್ತಿಯು ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯ ಅಥವಾ ಇತರ ನ್ಯಾಯಾಧೀಶನ, ಭಾರತದ ಲೆಕ್ಕನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನ, ಒಕ್ಕೂಟದ ಅಥವಾ ರಾಜ್ಯದ ಲೋಕಸೇವಾ ಆಯೋಗದ ಅಧ್ಯಕ್ಷನ ಅಥವಾ ಇತರ ಸದಸ್ಯನ ಅಥವಾ ಮುಖ್ಯ ಚುನಾವಣಾ ಆಯುಕ್ತನ ಪದವನ್ನು ಧಾರಣ ಮಾಡಿರುವ ಅಥವಾ ಧಾರಣ ಮಾಡಿದ್ದ ಸಂದರ್ಭದಲ್ಲಿ, (ಎ) ಉಪ ಖಂಡದಲ್ಲಿ ಅಥವಾ (ಬಿ) ಉಪಖಂಡದಲ್ಲಿರುವುದು ಯಾವುದೂ, ಅವನು ಅಂಥ ಪದಕ್ಕೆ ನೇಮಕಗೊಂಡ ತರುವಾಯ, ಅವನು ಸೆಕ್ರೆಟರಿ ಆಫ್ ಸ್ಟೇಟ್‌ನಿಂದ ಅಥವಾ ಸೆಕ್ರೆಟರಿ ಆಫ್ ಸ್ಟೇಟ್ ಇನ್ ಕೌನ್ಸಿಲ್‌ನಿಂದ ಭಾರತದಲ್ಲಿ ಸಾಮ್ರಾಟನ ಸಿವಿಲ್ ಸೇವೆಗೆ ನೇಮಕಗೊಂಡ ವ್ಯಕ್ತಿಯಾಗಿರುವನೆಂಬ ಕಾರಣದ ಮೇಲೆ ಅವನ ಸೇವಾ ಷರತ್ತುಗಳು ಅವನಿಗೆ ಅನ್ವಯವಾಗುವಷ್ಟರ ಮಟ್ಟಿಗೆ ಹೊರತು, ಅವನಿಗೆ ಅನನುಕೂಲವಾಗುವಂತೆ ಅಂಥ ಸೇವಾ ಷರತ್ತುಗಳನ್ನು ವ್ಯತ್ಯಸ್ತಗೊಳಿಸಲು ಅಥವಾ ರದ್ದುಗೊಳಿಸಲು ಸಂಸತ್ತಿಗೆ ಅಧಿಕಾರ ನೀಡುತ್ತದೆ ಎಂದು ಅರ್ಥೈಸತಕ್ಕದ್ದಲ್ಲ.

(2) ಈ ಅನುಚ್ಛೇದದ ಮೇರೆಗೆ ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಿರುವಷ್ಟರ ಮಟ್ಟಿಗೆ ಹೊರತು, ಈ ಅನುಚ್ಛೇದದಲ್ಲಿರುವುದು ಯಾವುದೂ (1)ನೆಯ ಖಂಡದಲ್ಲಿ ಉಲ್ಲೇಖಿಸಿದ ವ್ಯಕ್ತಿಗಳ ಸೇವಾ ಷರತ್ತುಗಳನ್ನು ವಿನಿಯಮಿಸಲು ಈ ಸಂವಿಧಾನದ ಯಾವುದೇ ಇತರ ಉಪಬಂಧದ ಮೇರೆಗೆ ಯಾವುದೇ ವಿಧಾನ ಮಂಡಲಕ್ಕೆ ಅಥವಾ ಇತರ ಪ್ರಾಧಿಕಾರಿಗೆ ಇರುವ ಅಧಿಕಾರಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

(3) ಸರ್ವೋಚ್ಚ ನ್ಯಾಯಾಲಯವೇ ಆಗಲಿ ಅಥವಾ ಇತರ ಯಾವುದೇ ನ್ಯಾಯಾಲಯವೇ ಆಗಲಿ,-

(ಎ) (1)ನೆಯ ಖಂಡದಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯು ಮಾಡಿಕೊಂಡ ಅಥವಾ ಬರೆದುಕೊಟ್ಟ ಯಾವುದೇ ಒಡಂಬಡಿಕೆಯ, ಒಪ್ಪಂದದ ಅಥವಾ ಅದೇ ಬಗೆಯ ಇತರ ಲಿಖಿತದ ಯಾವುದೇ ಉಪಬಂಧದಿಂದ ಅಥವಾ ಅದರ ಮೇಲಿನ ಯಾವುದೇ ಹಿಂಬರಹದಿಂದ ಉದ್ಭವಿಸುವ ಅಥವಾ ಭಾರತದಲ್ಲಿ ಸಾಮ್ರಾಟನ ಯಾವುದೇ ಸಿವಿಲ್ ಸೇವೆಗೆ ಅಂಥ ವ್ಯಕ್ತಿಯನ್ನು ನೇಮಕ ಮಾಡುವ ಸಂಬಂಧದಲ್ಲಿ ಅಥವಾ ಡೊಮಿನಿಯನ್ ಆಫ್ ಇಂಡಿಯಾ ಸರ್ಕಾರದ ಅಥವಾ ಅದರ ಪ್ರಾಂತ ಸರ್ಕಾರದ ಅಧೀನದಲ್ಲಿ ಅವನನ್ನು ಸೇವೆಯಲ್ಲಿ ಮುಂದುವರಿಸಿಕೊಂಡು ಹೋಗುವ ಸಂಬಂಧದಲ್ಲಿ ಆ ವ್ಯಕ್ತಿಗೆ ಕೊಡಲಾದ ಯಾವುದೇ ಪತ್ರದಿಂದ ಉದ್ಭವಿಸುವ ಯಾವುದೇ ವಿವಾದದಲ್ಲಿ;

(ಬಿ) ಮೂಲತಃ ಅಧಿನಿಯಮಿತವಾಗಿದ್ದಂತೆ, 314ನೆಯ ಅನುಚ್ಛೇದದ ಮೇರೆಗೆ ಯಾವುದೇ ಹಕ್ಕು, ಹೊಣೆಗಾರಿಕೆಗೆ ಅಥವಾ ಬಾಧ್ಯತೆಗೆ ಸಂಬಂಧಿಸಿದ ಯಾವುದೇ ವಿವಾದದಲ್ಲಿ

- ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

(4) ಮೂಲತಃ ಅಧಿನಿಯಮಿತವಾಗಿದ್ದಂತೆ 314ನೆಯ ಅನುಚ್ಛೇದದಲ್ಲಿ ಅಥವಾ ಈ ಸಂವಿಧಾನದ ಇತರ ಯಾವುದೇ ಉಪಬಂಧದಲ್ಲಿ ಏನೇ ಇದ್ದಾಗ್ಯೂ, ಈ ಅನುಚ್ಛೇದದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.]

**313. ಸಂಕ್ರಮಣಕಾಲೀನ ಉಪಬಂಧಗಳು:-** ಈ ಸಂವಿಧಾನದ ಮೇರೆಗೆ ಈ ಬಗ್ಗೆ ಇತರ ಉಪಬಂಧವನ್ನು ಮಾಡುವವರೆಗೆ, ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಮತ್ತು ಈ ಸಂವಿಧಾನವು ಪ್ರಾರಂಭವಾದ ಮೇಲೆ ಯಾವ ಸೇವೆಯು ಅಥವಾ ಹುದ್ದೆಯು ಅಖಿಲ ಭಾರತ ಸೇವೆಯಾಗಿ ಅಥವಾ ಒಕ್ಕೂಟದ ಅಥವಾ ರಾಜ್ಯದ ಅಧೀನದಲ್ಲಿನ ಸೇವೆಯಾಗಿ ಅಥವಾ ಹುದ್ದೆಯಾಗಿ ಮುಂದುವರಿಯುವುದೋ ಆ ಯಾವುದೇ ಲೋಕಸೇವೆಗೆ ಅಥವಾ ಯಾವುದೇ ಹುದ್ದೆಗೆ ಅನ್ವಯಿಸತಕ್ಕ ಎಲ್ಲ ಕಾನೂನುಗಳು ಈ ಸಂವಿಧಾನದ ಉಪಬಂಧಗಳಿಗೆ ಸುಸಂಗತವಾಗಿರುವಷ್ಟರ ಮಟ್ಟಿಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

**314.** *[ಕೆಲವು ಸೇವೆಗಳಲ್ಲಿ ಹಾಲಿಯಿರುವ ಅಧಿಕಾರಿಗಳ ರಕ್ಷಣೆಗಾಗಿ ಉಪಬಂಧ.] 1972ನೆಯ ಇಸವಿಯ ಸಂವಿಧಾನ (ಇಪ್ಪತ್ತೆಂಟನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೇರೆಗೆ (29-8-72 ರಿಂದ ಜಾರಿಗೆ ಬರುವಂತೆ) ನಿರಸಿತವಾಗಿದೆ.*

## ಅಧ್ಯಾಯ – II ಲೋಕಸೇವಾ ಆಯೋಗಗಳು

**315. ಒಕ್ಕೂಟಕ್ಕೆ ಮತ್ತು ರಾಜ್ಯಗಳಿಗೆ ಲೋಕಸೇವಾ ಆಯೋಗಗಳು:–** (1) ಈ ಅನುಚ್ಛೇದದ ಉಪಬಂಧಗಳಿಗೆ ಒಳಪಟ್ಟು, ಒಕ್ಕೂಟಕ್ಕೆ ಒಂದು ಲೋಕಸೇವಾ ಆಯೋಗವಿರತಕ್ಕದ್ದು ಮತ್ತು ಪ್ರತಿಯೊಂದು ರಾಜ್ಯಕ್ಕೂ ಒಂದು ಲೋಕಸೇವಾ ಆಯೋಗವಿರತಕ್ಕದ್ದು.

(2) ಎರಡು ಅಥವಾ ಹೆಚ್ಚು ರಾಜ್ಯಗಳ ಗುಂಪಿಗೆ ಒಂದು ಲೋಕಸೇವಾ ಆಯೋಗವಿರತಕ್ಕದ್ದೆಂದು ಆ ರಾಜ್ಯಗಳು ಒಪ್ಪಿಕೊಳ್ಳಬಹುದು ಮತ್ತು ಆ ಬಗ್ಗೆ ಆ ರಾಜ್ಯಗಳ ಪೈಕಿ ಪ್ರತಿಯೊಂದು ರಾಜ್ಯದ ವಿಧಾನ ಮಂಡಲದ ಸದನದಲ್ಲಿ ಅಥವಾ ಎರಡು ಸದನಗಳಿರುವ ಸಂದರ್ಭದಲ್ಲಿ ಪ್ರತಿಯೊಂದು ಸದನದಲ್ಲಿ ಒಂದು ನಿರ್ಣಯವು ಅಂಗೀಕೃತವಾದರೆ, ಸಂಸತ್ತು ಆ ರಾಜ್ಯಗಳ ಅವಶ್ಯಕತೆಗಳನ್ನು ಪೂರೈಸಲು ಒಂದು ಜಂಟಿ ರಾಜ್ಯ ಲೋಕಸೇವಾ ಆಯೋಗವನ್ನು (ಈ ಅಧ್ಯಾಯದಲ್ಲಿ ಇದನ್ನು ಜಂಟಿ ಆಯೋಗವೆಂಬುದಾಗಿ ಉಲ್ಲೇಖಿಸಲಾಗಿದೆ) ನೇಮಕ ಮಾಡಲು ಕಾನೂನಿನ ಮೂಲಕ ಉಪಬಂಧಿಸಬಹುದು.

(3) ಹಿಂದೆ ಹೇಳಿದಂಥ ಯಾವುದೇ ಕಾನೂನಿನ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅವಶ್ಯವಾಗಬಹುದಾದಂಥ ಅಥವಾ ಅಪೇಕ್ಷಣೀಯವಾಗಬಹುದಾದಂಥ ಪ್ರಾಸಂಗಿಕ ಅಥವಾ ಆನುಷಂಗಿಕ ಉಪಬಂಧಗಳನ್ನು ಅಂಥ ಕಾನೂನು ಒಳಗೊಂಡಿರಬಹುದು.

(4) ಒಂದು ರಾಜ್ಯದ ರಾಜ್ಯಪಾಲನು [1] * * * ಆ ರಾಜ್ಯದ ಎಲ್ಲ ಅಥವಾ ಯಾವುದೇ ಅವಶ್ಯಕತೆಗಳನ್ನು ಪೂರೈಸಬೇಕೆಂದು ಒಕ್ಕೂಟ ಲೋಕಸೇವಾ ಆಯೋಗವನ್ನು ಕೋರಿದರೆ, ಅದು ರಾಷ್ಟ್ರಪತಿಯ ಅನುಮೋದನೆ ಪಡೆದು ಹಾಗೆ ಮಾಡಲು ಒಪ್ಪಬಹುದು.

(5) ಈ ಸಂವಿಧಾನದಲ್ಲಿ ಒಕ್ಕೂಟ ಲೋಕಸೇವಾ ಆಯೋಗಕ್ಕೆ ಅಥವಾ ಒಂದು ರಾಜ್ಯದ ಲೋಕಸೇವಾ ಆಯೋಗಕ್ಕೆ ಸಂಬಂಧಿಸಿದ ಉಲ್ಲೇಖಗಳನ್ನು, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಸಂಬಂಧಪಟ್ಟ ನಿರ್ದಿಷ್ಟ ವಿಷಯದ ಬಗ್ಗೆ ಒಕ್ಕೂಟದ ಅಥವಾ ಸಂದರ್ಭಾನುಸಾರ ಆ ರಾಜ್ಯದ ಅವಶ್ಯಕತೆಗಳನ್ನು ಪೂರೈಸುವ ಆಯೋಗಕ್ಕೆ ಮಾಡಿದ ಉಲ್ಲೇಖಗಳು ಎಂದು ಅರ್ಥೈಸತಕ್ಕದ್ದು.

**316. ಸದಸ್ಯರ ನೇಮಕ ಮತ್ತು ಪದಾವಧಿ:–** (1) ಲೋಕಸೇವಾ ಆಯೋಗದ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ಒಕ್ಕೂಟ ಆಯೋಗದ ಅಥವಾ ಜಂಟಿ ಆಯೋಗದ ಸಂದರ್ಭದಲ್ಲಿ ರಾಷ್ಟ್ರಪತಿಯು ಮತ್ತು ರಾಜ್ಯದ ಆಯೋಗದ ಸಂದರ್ಭದಲ್ಲಿ ಆ ರಾಜ್ಯದ ರಾಜ್ಯಪಾಲನು [1] * * * ನೇಮಕ ಮಾಡತಕ್ಕದ್ದು:

ಪರಂತು, ಪ್ರತಿಯೊಂದು ಲೋಕಸೇವಾ ಆಯೋಗದ ಸದಸ್ಯರಲ್ಲಿ ಸಾಧ್ಯವಾಗಬಹುದಾದ ಮಟ್ಟಿಗೆ ಅರ್ಧದಷ್ಟು ಸದಸ್ಯರು, ಅವರು ಅನುಕ್ರಮವಾಗಿ ನೇಮಕಗೊಂಡ ದಿನಾಂಕಗಳಂದು ಭಾರತ ಸರ್ಕಾರದ ಅಧೀನದಲ್ಲಾಗಲಿ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಾಗಲಿ ಕನಿಷ್ಠಪಕ್ಷ ಹತ್ತು ವರ್ಷಗಳವರೆಗೆ ಪದಧಾರಣ ಮಾಡಿದವರಾಗಿರತಕ್ಕದ್ದು ಮತ್ತು ಈ ಹತ್ತು ವರ್ಷಗಳ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಭಾರತ ಸಾಮ್ರಾಟನ ಅಧೀನದಲ್ಲಿ ಅಥವಾ ಒಂದು ಭಾರತೀಯ ಸಂಸ್ಥಾನ ಸರ್ಕಾರದ ಅಧೀನದಲ್ಲಿ ಒಬ್ಬ ವ್ಯಕ್ತಿಯು ಪದಧಾರಣ ಮಾಡಿದ್ದ ಯಾವುದೇ ಅವಧಿಯನ್ನು ಸೇರಿಸಿಕೊಳ್ಳತಕ್ಕದ್ದು.

[2][(1ಎ) ಆಯೋಗದ ಅಧ್ಯಕ್ಷನ ಪದವು ಖಾಲಿಯಾದರೆ ಅಥವಾ ಅಂಥ ಯಾರೇ ಅಧ್ಯಕ್ಷನು ತನ್ನ ಗೈರುಹಾಜರಿಯ ಕಾರಣದಿಂದಾಗಿ ಅಥವಾ ಇತರ ಯಾವುದೇ ಕಾರಣದಿಂದಾಗಿ ತನ್ನ ಪದದ ಕರ್ತವ್ಯಗಳನ್ನು ನೆರವೇರಿಸಲು ಅಸಮರ್ಥನಾದರೆ, ಹಾಗೆ ಖಾಲಿಯಾದ ಪದಕ್ಕೆ (1)ನೆಯ ಖಂಡದ ಮೇರೆಗೆ ನೇಮಕಗೊಂಡ ಯಾರೇ ವ್ಯಕ್ತಿಯು ಆ ಪದದ ಕರ್ತವ್ಯಗಳನ್ನು ವಹಿಸಿಕೊಳ್ಳುವವರೆಗೆ ಅಥವಾ ಸಂದರ್ಭಾನುಸಾರ ಅಧ್ಯಕ್ಷನೇ ತನ್ನ ಕರ್ತವ್ಯಗಳನ್ನು ಪುನಃ ವಹಿಸಿಕೊಳ್ಳುವವರೆಗೆ, ಒಕ್ಕೂಟ ಆಯೋಗದ ಅಥವಾ ಜಂಟಿ ಆಯೋಗದ ಸಂದರ್ಭದಲ್ಲಿ ರಾಷ್ಟ್ರಪತಿಯು, ಅಥವಾ ರಾಜ್ಯ ಆಯೋಗದ ಸಂದರ್ಭದಲ್ಲಿ ಆ ರಾಜ್ಯದ ರಾಜ್ಯಪಾಲನು ಆ ಉದ್ದೇಶಕ್ಕಾಗಿ ನೇಮಕ ಮಾಡಬಹುದಾದಂಥ ಆ ಆಯೋಗದ ಇತರ ಸದಸ್ಯರುಗಳ ಪೈಕಿ ಒಬ್ಬ ಸದಸ್ಯನು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.]

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನು"ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

2. 1963ನೆಯ ಇಸವಿಯ ಸಂವಿಧಾನ (ಹದಿನೈದನೆಯ ತಿದ್ದುಪಡಿ) ಅಧಿನಿಯಮದ 11ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

(2) ಲೋಕಸೇವಾ ಆಯೋಗದ ಸದಸ್ಯನು, ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಆರು ವರ್ಷಗಳ ಅವಧಿಯವರೆಗೆ, ಅಥವಾ ಒಕ್ಕೂಟ ಆಯೋಗದ ಸಂದರ್ಭದಲ್ಲಿ ಅವನಿಗೆ ಅರವತ್ತೈದು ವರ್ಷಗಳು ತುಂಬುವವರೆಗೆ ಮತ್ತು ಒಂದು ರಾಜ್ಯ ಆಯೋಗದ ಅಥವಾ ಜಂಟಿ ಆಯೋಗದ ಸಂದರ್ಭದಲ್ಲಿ ಅವನಿಗೆ [1][ಅರವತ್ತೆರಡು ವರ್ಷಗಳು] ತುಂಬುವವರೆಗೆ-ಈ ಎರಡು ಅವಧಿಗಳ ಪೈಕಿ ಯಾವುದು ಮೊದಲೋ ಆ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು:

ಪರಂತು,-

(ಎ) ಲೋಕಸೇವಾ ಆಯೋಗದ ಯಾರೇ ಸದಸ್ಯನು, ಒಕ್ಕೂಟ ಆಯೋಗದ ಅಥವಾ ಜಂಟಿ ಆಯೋಗದ ಸಂದರ್ಭದಲ್ಲಿ, ರಾಷ್ಟ್ರಪತಿಗೆ ಮತ್ತು ರಾಜ್ಯ ಆಯೋಗದ ಸಂದರ್ಭದಲ್ಲಿ ಆ ರಾಜ್ಯದ ರಾಜ್ಯಪಾಲನಿಗೆ [2] * * * ತಾನು ಸಹಿ ಮಾಡಿದ ಪತ್ರವನ್ನು ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು;

(ಬಿ) ಲೋಕಸೇವಾ ಆಯೋಗದ ಯಾರೇ ಸದಸ್ಯನನ್ನು 317ನೆಯ ಅನುಚ್ಛೇದದ (1)ನೆಯ ಖಂಡದಲ್ಲಿ ಅಥವಾ (3)ನೆಯ ಖಂಡದಲ್ಲಿ ಉಪಬಂಧಿಸಿದ ರೀತಿಯಲ್ಲಿ ಅವನ ಪದದಿಂದ ತೆಗೆದುಹಾಕಬಹುದು.

(3) ಲೋಕಸೇವಾ ಆಯೋಗದ ಸದಸ್ಯನಾಗಿ ಪದಧಾರಣ ಮಾಡಿರುವ ವ್ಯಕ್ತಿಯ ಪದಾವಧಿಯು ಮುಕ್ತಾಯವಾದ ಮೇಲೆ ಆ ಪದಕ್ಕೆ ಪುನಃ ನೇಮಕಗೊಳ್ಳಲು ಅವನು ಅನರ್ಹನಾಗತಕ್ಕದ್ದು.

**317. ಲೋಕಸೇವಾ ಆಯೋಗದ ಸದಸ್ಯನನ್ನು ತೆಗೆದುಹಾಕುವುದು ಮತ್ತು ಅಮಾನತ್ತಿನಲ್ಲಿಡುವುದು:-** (1) (3)ನೆಯ ಖಂಡದ ಉಪಬಂಧಗಳಿಗೊಳಪಟ್ಟು, ಲೋಕಸೇವಾ ಆಯೋಗದ ಅಧ್ಯಕ್ಷನನ್ನು ಅಥವಾ ಇತರ ಯಾವನೇ ಸದಸ್ಯನನ್ನು ದುರ್ವರ್ತನೆಯ ಕಾರಣದ ಮೇಲೆ, ರಾಷ್ಟ್ರಪತಿಯು ಆ ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯ ಕೇಳಿ ಕಳುಹಿಸಿದ್ದ ಕೋರಿಕೆಯ ಬಗ್ಗೆ ಸರ್ವೋಚ್ಚ ನ್ಯಾಯಾಲಯವು 145ನೆಯ ಅನುಚ್ಛೇದದ ಮೇರೆಗೆ ನಿಯಮಿಸಲಾದ ಪ್ರಕ್ರಿಯೆಗೆ ಅನುಸಾರವಾಗಿ ವಿಚಾರಣೆ ನಡೆಸಿ, ಆ ಅಧ್ಯಕ್ಷನನ್ನು ಅಥವಾ ಸಂದರ್ಭಾನುಸಾರ ಅಂಥ ಇತರ ಯಾರೇ ಸದಸ್ಯನನ್ನು ಅಂಥ ಯಾವುದೇ ಕಾರಣದ ಮೇಲೆ ತೆಗೆದುಹಾಕತಕ್ಕದ್ದೆಂದು ವರದಿ ಮಾಡಿದ ತರುವಾಯ ರಾಷ್ಟ್ರಪತಿಯ ಆದೇಶದ ಮೂಲಕ ಮಾತ್ರವೇ ಅವನನ್ನು ಪದದಿಂದ ತೆಗೆದುಹಾಕತಕ್ಕದ್ದು.

(2) ಒಕ್ಕೂಟ ಆಯೋಗದ ಅಥವಾ ಜಂಟಿ ಆಯೋಗದ ಸಂದರ್ಭದಲ್ಲಿ ರಾಷ್ಟ್ರಪತಿಯು ಮತ್ತು ಒಂದು ರಾಜ್ಯದ ಆಯೋಗದ ಸಂದರ್ಭದಲ್ಲಿ ರಾಜ್ಯಪಾಲನು [2] * * * ಆಯೋಗದ ಯಾವ ಅಧ್ಯಕ್ಷನಿಗೆ ಅಥವಾ ಇತರ ಯಾವ ಸದಸ್ಯನಿಗೆ ಸಂಬಂಧಿಸಿದಂತೆ (1)ನೆಯ ಖಂಡದ ಮೇರೆಗೆ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯ ಕೇಳಿ ಕೋರಿಕೆಯನ್ನು ಕಳುಹಿಸಲಾಗಿದೆಯೋ ಆ ಅಧ್ಯಕ್ಷನನ್ನು ಅಥವಾ ಇತರ ಸದಸ್ಯನನ್ನು ಅಂಥ ಅಭಿಪ್ರಾಯ ಕೋರಿಕೆಯ ಮೇಲೆ ಸರ್ವೋಚ್ಚ ನ್ಯಾಯಾಲಯದ ವರದಿಯನ್ನು ಸ್ವೀಕರಿಸಿದ ತರುವಾಯ ರಾಷ್ಟ್ರಪತಿಯು ಆದೇಶಗಳನ್ನು ಮಾಡುವವರೆಗೆ ಅಮಾನತ್ತಿನಲ್ಲಿಡಬಹುದು.

(3) (1)ನೆಯ ಖಂಡದಲ್ಲಿ ಏನೇ ಇದ್ದಾಗ್ಯೂ, ಲೋಕಸೇವಾ ಆಯೋಗದ ಅಧ್ಯಕ್ಷನು ಅಥವಾ ಸಂದರ್ಭಾನುಸಾರ ಇತರ ಯಾರೇ ಸದಸ್ಯನು,-

(ಎ) ದಿವಾಳಿಯೆಂದು ನ್ಯಾಯನಿರ್ಣೀತನಾದರೆ; ಅಥವಾ

(ಬಿ) ಅವನ ಪದಾವಧಿಯಲ್ಲಿ ಅವನ ಪದದ ಕರ್ತವ್ಯಗಳಲ್ಲದ ಬೇರೆ ಯಾವುದೇ ಸಂಬಳದ ಉದ್ಯೋಗದಲ್ಲಿ ತೊಡಗಿದ್ದರೆ; ಅಥವಾ

(ಸಿ) ಮಾನಸಿಕ ಅಥವಾ ಶಾರೀರಿಕ ದೌರ್ಬಲ್ಯದ ಕಾರಣದ ಮೇಲೆ ಪದದಲ್ಲಿ ಮುಂದುವರಿಯಲು ಯೋಗ್ಯನಾಗಿಲ್ಲವೆಂದು ರಾಷ್ಟ್ರಪತಿಯು ಅಭಿಪ್ರಾಯಪಟ್ಟರೆ

- ಅಂಥ ಅಧ್ಯಕ್ಷನನ್ನು ಅಥವಾ ಆ ಯಾರೇ ಇತರ ಸದಸ್ಯನನ್ನು ರಾಷ್ಟ್ರಪತಿಯು ಆದೇಶದ ಮೂಲಕ ಪದದಿಂದ ತೆಗೆದುಹಾಕಬಹುದು.

---

1. 1976ನೆಯ ಇಸವಿಯ ಸಂವಿಧಾನ (ನಲವತ್ತೊಂದನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ "ಅರವತ್ತು ವರ್ಷಗಳು" ಎಂಬ ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

(4) ಲೋಕಸೇವಾ ಆಯೋಗದ ಅಧ್ಯಕ್ಷನು ಅಥವಾ ಇತರ ಯಾರೇ ಸದಸ್ಯನು, ಭಾರತ ಸರ್ಕಾರವು ಮಾಡಿಕೊಂಡ ಅಥವಾ ಅದರ ಪರವಾಗಿ ಮಾಡಿಕೊಂಡ ಅಥವಾ ಒಂದು ರಾಜ್ಯ ಸರ್ಕಾರವು ಮಾಡಿಕೊಂಡ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರು ಅಥವಾ ಒಪ್ಪಂದದಲ್ಲಿ ಯಾವುದೇ ರೀತಿಯಲ್ಲಿ ಸಂಬಂಧ ಹೊಂದಿದ್ದರೆ ಅಥವಾ ಹಿತಾಸಕ್ತಿ ಉಳ್ಳವನಾಗಿದ್ದರೆ ಅಥವಾ ಅದರ ಲಾಭದಲ್ಲಿ ಅಥವಾ ನಿಗಮಿತ ಕಂಪನಿಯ ಸದಸ್ಯನಾಗಿಯಲ್ಲದೆ ಮತ್ತು ಅದರ ಇತರ ಸದಸ್ಯರೊಂದಿಗೆ ಒಡಗೂಡಿಯಲ್ಲದೆ, ಅನ್ಯಥಾ ಅದರಿಂದ ಉದ್ಭವಿಸುವ ಯಾವುದೇ ಪ್ರಯೋಜನದಲ್ಲಿ ಅಥವಾ ಉಪಲಬ್ಧಿಯಲ್ಲಿ ಯಾವುದೇ ರೀತಿಯಲ್ಲಿ ಪಾಲ್ಗೊಂಡರೆ ಅವನು (1)ನೆಯ ಖಂಡದ ಉದ್ದೇಶಗಳಿಗಾಗಿ ದುರ್ವರ್ತನೆಯ ತಪ್ಪಿತಸ್ಥನಾಗಿದ್ದಾನೆಂದು ಭಾವಿಸತಕ್ಕದ್ದು.

**318. ಆಯೋಗದ ಸದಸ್ಯರ ಮತ್ತು ಸಿಬ್ಬಂದಿಯ ಸೇವಾ ಷರತ್ತುಗಳ ಬಗ್ಗೆ ವಿನಿಯಮಗಳನ್ನು ರಚಿಸಲು ಅಧಿಕಾರ:–** ಒಕ್ಕೂಟ ಆಯೋಗದ ಅಥವಾ ಜಂಟಿ ಆಯೋಗದ ಸಂದರ್ಭದಲ್ಲಿ ರಾಷ್ಟ್ರಪತಿಯು ಮತ್ತು ಒಂದು ರಾಜ್ಯ ಆಯೋಗದ ಸಂದರ್ಭದಲ್ಲಿ ಆ ರಾಜ್ಯದ ರಾಜ್ಯಪಾಲನು [1]*** ವಿನಿಯಮಗಳ ಮೂಲಕ,–

(ಎ) ಆಯೋಗದ ಸದಸ್ಯರ ಸಂಖ್ಯೆಯನ್ನು ಮತ್ತು ಅವರ ಸೇವಾ ಷರತ್ತುಗಳನ್ನು ನಿರ್ಧರಿಸಬಹುದು; ಮತ್ತು

(ಬಿ) ಆಯೋಗದ ಸಿಬ್ಬಂದಿಯ ಸಂಖ್ಯೆ ಮತ್ತು ಅವರ ಸೇವಾ ಷರತ್ತುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು:

ಪರಂತು, ಲೋಕಸೇವಾ ಆಯೋಗದ ಸದಸ್ಯನ ಸೇವಾ ಷರತ್ತುಗಳನ್ನು, ಅವನ ನೇಮಕದ ತರುವಾಯ ಅವನಿಗೆ ಅನನುಕೂಲವಾಗುವಂತೆ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

**319. ಆಯೋಗದ ಸದಸ್ಯರು, ಹಾಗೆ ಸದಸ್ಯರಾಗಿರುವುದು ನಿಂತುಹೋದ ಮೇಲೆ ಪದಗಳನ್ನು ಧಾರಣ ಮಾಡುವ ಬಗ್ಗೆ ನಿಷೇಧ:–** ಪದಧಾರಣ ಮಾಡಿರುವುದು ನಿಂತುಹೋದ ಮೇಲೆ,–

(ಎ) ಒಕ್ಕೂಟ ಲೋಕಸೇವಾ ಆಯೋಗದ ಅಧ್ಯಕ್ಷನು ಭಾರತ ಸರ್ಕಾರದ ಅಧೀನದಲ್ಲಾಗಲೀ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಾಗಲೀ ಮತ್ತೆ ಉದ್ಯೋಗವನ್ನು ಪಡೆಯಲು ಅನರ್ಹನಾಗಿರತಕ್ಕದ್ದು;

(ಬಿ) ಒಂದು ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷನು ಒಕ್ಕೂಟ ಲೋಕಸೇವಾ ಆಯೋಗದ ಅಧ್ಯಕ್ಷನಾಗಿ ಅಥವಾ ಇತರ ಯಾರೇ ಸದಸ್ಯನಾಗಿ ಅಥವಾ ಇತರ ಯಾವುದೇ ರಾಜ್ಯದ ಲೋಕಸೇವಾ ಆಯೋಗದ ಅಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು. ಆದರೆ ಭಾರತ ಸರ್ಕಾರದ ಅಧೀನದಲ್ಲಾಗಲಿ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಾಗಲಿ ಇತರ ಯಾವುದೇ ಉದ್ಯೋಗವನ್ನು ಪಡೆಯಲು ಅರ್ಹನಾಗಿರತಕ್ಕದ್ದಲ್ಲ;

(ಸಿ) ಒಕ್ಕೂಟ ಲೋಕಸೇವಾ ಆಯೋಗದ ಅಧ್ಯಕ್ಷನಲ್ಲದ ಇತರ ಯಾರೇ ಸದಸ್ಯನು ಒಕ್ಕೂಟ ಲೋಕಸೇವಾ ಆಯೋಗದ ಅಧ್ಯಕ್ಷನಾಗಿ ಅಥವಾ ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು. ಆದರೆ ಭಾರತ ಸರ್ಕಾರದ ಅಧೀನದಲ್ಲಾಗಲಿ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಾಗಲಿ ಇತರ ಯಾವುದೇ ಉದ್ಯೋಗವನ್ನು ಪಡೆಯಲು ಅರ್ಹನಾಗಿರತಕ್ಕದ್ದಲ್ಲ;

(ಡಿ) ಒಂದು ರಾಜ್ಯ ಲೋಕಸೇವಾ ಆಯೋಗದ ಅಧ್ಯಕ್ಷನಲ್ಲದ ಇತರ ಯಾರೇ ಸದಸ್ಯನು, ಒಕ್ಕೂಟ ಲೋಕಸೇವಾ ಆಯೋಗದ ಅಧ್ಯಕ್ಷನಾಗಿ ಅಥವಾ ಇತರ ಯಾರೇ ಸದಸ್ಯನಾಗಿ ಅಥವಾ ಆ ರಾಜ್ಯದ ಅಥವಾ ಇತರ ಯಾವುದೇ ರಾಜ್ಯದ ಲೋಕಸೇವಾ ಆಯೋಗದ ಅಧ್ಯಕ್ಷನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು. ಆದರೆ ಭಾರತ ಸರ್ಕಾರದ ಅಧೀನದಲ್ಲಾಗಲಿ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಾಗಲಿ ಇತರ ಯಾವುದೇ ಉದ್ಯೋಗವನ್ನು ಪಡೆಯಲು ಅರ್ಹನಾಗಿರತಕ್ಕದ್ದಲ್ಲ.

**320. ಲೋಕಸೇವಾ ಆಯೋಗಗಳ ಪ್ರಕಾರ್ಯಗಳು:–** (1) ಒಕ್ಕೂಟದ ಸೇವೆಗಳಿಗೆ ಮತ್ತು ಒಂದು ರಾಜ್ಯದ ಸೇವೆಗಳಿಗೆ ನೇಮಕಗಳನ್ನು ಮಾಡುವುದಕ್ಕಾಗಿ ಪರೀಕ್ಷೆಗಳನ್ನು ನಡೆಸುವುದು ಅನುಕ್ರಮವಾಗಿ ಒಕ್ಕೂಟ ಲೋಕಸೇವಾ ಆಯೋಗದ ಮತ್ತು ಆಯಾ ರಾಜ್ಯ ಲೋಕಸೇವಾ ಆಯೋಗದ ಕರ್ತವ್ಯವಾಗಿರತಕ್ಕದ್ದು.

(2)ಯಾವುದೇ ಎರಡು ಅಥವಾ ಹೆಚ್ಚು ರಾಜ್ಯಗಳು, ವಿಶೇಷ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ಅಗತ್ಯವಾಗಿರುವ ಯಾವುವೇ ಸೇವೆಗಳಿಗೆ ಜಂಟಿಯಾಗಿ ನೇಮಕಾತಿ ಮಾಡುವ ಯೋಜನೆಗಳನ್ನು ರೂಪಿಸುವುದಕ್ಕಾಗಿ ಮತ್ತು ಜಾರಿಗೆ ತರುವುದಕ್ಕಾಗಿ ಸಹಾಯ ಮಾಡಲು ಒಕ್ಕೂಟ ಲೋಕಸೇವಾ ಆಯೋಗವನ್ನು ಕೋರಿದರೆ ಆ ರಾಜ್ಯಗಳಿಗೆ ಹಾಗೆ ಸಹಾಯ ಮಾಡುವುದೂ ಸಹ ಅದರ ಕರ್ತವ್ಯವಾಗಿರತಕ್ಕದ್ದು.

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

(3) ಒಕ್ಕೂಟ ಲೋಕಸೇವಾ ಆಯೋಗದೊಡನೆ ಅಥವಾ ಸಂದರ್ಭಾನುಸಾರ ರಾಜ್ಯ ಲೋಕಸೇವಾ ಆಯೋಗದೊಡನೆ,-

(ಎ) ಸಿವಿಲ್ ಸೇವೆಗಳಿಗೆ ಮತ್ತು ಸಿವಿಲ್ ಹುದ್ದೆಗಳಿಗೆ ನೇಮಕಾತಿ ಮಾಡುವ ವಿಧಾನಗಳಿಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ;

(ಬಿ) ಸಿವಿಲ್ ಸೇವೆಗಳಿಗೆ ಮತ್ತು ಹುದ್ದೆಗಳಿಗೆ ನೇಮಕಗಳನ್ನು ಮಾಡುವಲ್ಲಿ ಮತ್ತು ಬಡ್ತಿಗಳನ್ನು ನೀಡುವಲ್ಲಿ ಮತ್ತು ಒಂದು ಸೇವೆಯಿಂದ ಇನ್ನೊಂದು ಸೇವೆಗೆ ವರ್ಗಾವಣೆಗಳನ್ನು ಮಾಡುವಲ್ಲಿ ಅನುಸರಿಸಬೇಕಾದ ತತ್ವಗಳ ಬಗ್ಗೆ ಮತ್ತು ಅಂಥ ನೇಮಕಗಳು, ಬಡ್ತಿಗಳು ಅಥವಾ ವರ್ಗಾವಣೆಗಳಿಗೆ ಅಭ್ಯರ್ಥಿಗಳ ಸೂಕ್ತತೆಯ ಬಗ್ಗೆ;

(ಸಿ) ಶಿಸ್ತುಪಾಲನಾ ವಿಷಯಗಳಿಗೆ ಸಂಬಂಧಪಟ್ಟ ಮನವಿಗಳು ಅಥವಾ ಅರ್ಜಿಗಳೂ ಸೇರಿದಂತೆ ಭಾರತ ಸರ್ಕಾರದ ಅಧೀನದಲ್ಲಿ ಅಥವಾ ಒಂದು ರಾಜ್ಯ ಸರ್ಕಾರದ ಅಧೀನದಲ್ಲಿ ಸಿವಿಲ್ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ಒಬ್ಬ ವ್ಯಕ್ತಿಯ ಮೇಲೆ ಪರಿಣಾಮ ಬೀರುವಂಥ ಎಲ್ಲ ಶಿಸ್ತುಪಾಲನಾ ವಿಷಯಗಳ ಬಗ್ಗೆ;

(ಡಿ) ಭಾರತ ಸರ್ಕಾರದ ಅಧೀನದಲ್ಲಿ ಅಥವಾ ಒಂದು ರಾಜ್ಯ ಸರ್ಕಾರದ ಅಧೀನದಲ್ಲಿ ಅಥವಾ ಭಾರತದ ಸಾಮ್ರಾಟನ ಅಧೀನದಲ್ಲಿ ಅಥವಾ ಭಾರತೀಯ ಸಂಸ್ಥಾನದ ಸರ್ಕಾರದ ಅಧೀನದಲ್ಲಿ ಸಿವಿಲ್ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಥವಾ ಸೇವೆ ಸಲ್ಲಿಸಿರುವ ಒಬ್ಬ ವ್ಯಕ್ತಿಯು ಅವನ ಕರ್ತವ್ಯವನ್ನು ನಿರ್ವಹಿಸುವಲ್ಲಿ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಕಾರ್ಯಗಳ ಬಗ್ಗೆ ಅವನ ವಿರುದ್ಧ ಹೂಡಲಾದ ಕಾನೂನು ವ್ಯವಹರಣೆಗಳಲ್ಲಿ ಪ್ರತಿರಕ್ಷಣೆ ಮಾಡಿಕೊಳ್ಳುವುದಕ್ಕಾಗಿ, ಅವನಿಗೆ ತಗುಲಿದ ಯಾವುವೇ ಖರ್ಚುಗಳನ್ನು, ಭಾರತದ ಸಂಚಿತ ನಿಧಿಯಿಂದ ಅಥವಾ ಸಂದರ್ಭಾನುಸಾರ ಆ ರಾಜ್ಯದ ಸಂಚಿತ ನಿಧಿಯಿಂದ ಸಂದಾಯ ಮಾಡಬೇಕೆಂದು ಅವನು ಮಾಡಿದ ಅಥವಾ ಅವನಿಗೆ ಸಂಬಂಧಿಸಿದಂತೆ ಹಾಗೆ ಮಾಡಲಾದ ಯಾವುದೇ ಕ್ಲೇಮಿನ ಬಗ್ಗೆ; ಮತ್ತು

(ಇ) ಭಾರತ ಸರ್ಕಾರದ ಅಧೀನದಲ್ಲಿ ಅಥವಾ ಒಂದು ರಾಜ್ಯ ಸರ್ಕಾರದ ಅಧೀನದಲ್ಲಿ ಅಥವಾ ಭಾರತದ ಸಾಮ್ರಾಟನ ಅಧೀನದಲ್ಲಿ ಅಥವಾ ಭಾರತೀಯ ಸಂಸ್ಥಾನದ ಸರ್ಕಾರದ ಅಧೀನದಲ್ಲಿ ಸಿವಿಲ್ ಹುದ್ದೆಯಲ್ಲಿ ಸೇವೆ ಸಲ್ಲಿಸುವಾಗ ಒಬ್ಬ ವ್ಯಕ್ತಿಗೆ ಉಂಟಾದ ಹಾನಿಗಳ ಸಂಬಂಧದಲ್ಲಿ ನಿವೃತ್ತಿ ವೇತನ ಕುರಿತಂತೆ ಐತೀರ್ಪಿಗಾಗಿ ಮಾಡಿದ ಯಾವುದೇ ಕ್ಲೇಮಿನ ಬಗ್ಗೆ ಮತ್ತು ಅಂಥ ಐತೀರ್ಪಿನ ಮೊಬಲಗು ಕುರಿತ ಯಾವುದೇ ಪ್ರಶ್ನೆಯ ಬಗ್ಗೆ

– ಸಮಾಲೋಚಿಸತಕ್ಕದ್ದು ಮತ್ತು ಹಾಗೆ ಲೋಕಸೇವಾ ಆಯೋಗಕ್ಕೆ ಕಳುಹಿಸಲಾದ ಯಾವುದೇ ವಿಷಯದ ಬಗ್ಗೆ ಮತ್ತು ರಾಷ್ಟ್ರಪತಿಯು ಅಥವಾ ಸಂದರ್ಭಾನುಸಾರ ರಾಜ್ಯದ ರಾಜ್ಯಪಾಲನು [1] * * * ತನಗೆ ಕಳುಹಿಸಿಕೊಡಬಹುದಾದ ಇತರ ಯಾವುದೇ ವಿಷಯದ ಬಗ್ಗೆ ಸಲಹೆಯನ್ನು ನೀಡುವುದು ಲೋಕಸೇವಾ ಆಯೋಗದ ಕರ್ತವ್ಯವಾಗಿರತಕ್ಕದ್ದು:

ಪರಂತು, ಅಖಿಲ ಭಾರತ ಸೇವೆಗಳ ಬಗ್ಗೆ ಮತ್ತು ಒಕ್ಕೂಟದ ವ್ಯವಹಾರಗಳಿಗೆ ಸಂಬಂಧಿಸಿದ ಇತರ ಸೇವೆಗಳ ಮತ್ತು ಹುದ್ದೆಗಳ ಬಗ್ಗೆ ರಾಷ್ಟ್ರಪತಿಯು ಮತ್ತು ಒಂದು ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದ ಇತರ ಸೇವೆಗಳ ಮತ್ತು ಹುದ್ದೆಗಳ ಬಗ್ಗೆ ರಾಜ್ಯಪಾಲನು [2] * * * ಯಾವ ವಿಷಯಗಳಲ್ಲಿ ಸಾಮಾನ್ಯವಾಗಿ ಅಥವಾ ಯಾವುದೇ ನಿರ್ದಿಷ್ಟ ಸಂದರ್ಭದಲ್ಲಿ ಅಥವಾ ಯಾವುವೇ ನಿರ್ದಿಷ್ಟ ಸನ್ನಿವೇಶಗಳಲ್ಲಿ ಲೋಕಸೇವಾ ಆಯೋಗದೊಡನೆ ಸಮಾಲೋಚನೆ ಮಾಡುವುದು ಅವಶ್ಯವಾಗಿಲ್ಲವೋ ಆ ವಿಷಯಗಳನ್ನು ನಿರ್ದಿಷ್ಟಪಡಿಸಿ ವಿನಿಯಮಗಳನ್ನು ರಚಿಸಬಹುದು.

(4) (3)ನೆಯ ಖಂಡದಲ್ಲಿ ಇರುವುದು ಯಾವುದೂ, 16ನೆಯ ಅನುಚ್ಛೇದದ (4)ನೆಯ ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ಉಪಬಂಧವನ್ನು ಯಾವ ರೀತಿಯಲ್ಲಿ ಕಲ್ಪಿಸಬಹುದು ಎಂಬ ಬಗ್ಗೆ ಅಥವಾ 335ನೆಯ ಅನುಚ್ಛೇದದ ಉಪಬಂಧಗಳನ್ನು ಯಾವ ರೀತಿಯಲ್ಲಿ ಕಾರ್ಯಗತಗೊಳಿಸಬಹುದು ಎಂಬ ಬಗ್ಗೆ ಲೋಕಸೇವಾ ಆಯೋಗದೊಡನೆ ಸಮಾಲೋಚನೆ ನಡೆಸಬೇಕೆಂದು ಅಗತ್ಯಪಡಿಸತಕ್ಕದ್ದಲ್ಲ.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಮತ್ತು ಅನುಸೂಚಿಯ ಮೂಲಕ "ಅಥವಾ ಸಂದರ್ಭಾನುಸಾರ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

(5) (3)ನೆಯ ಖಂಡದ ಪರಂತುಕದ ಮೇರೆಗೆ ರಾಷ್ಟ್ರಪತಿಯು ಅಥವಾ ಒಂದು ರಾಜ್ಯದ ರಾಜ್ಯಪಾಲನು [1] * * * ರಚಿಸಿದ ಎಲ್ಲ ವಿನಿಯಮಗಳನ್ನು, ಅವುಗಳನ್ನು ಹಾಗೆ ರಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅಥವಾ ಸಂದರ್ಭಾನುಸಾರ, ಆ ರಾಜ್ಯದ ವಿಧಾನ ಮಂಡಲದ ಸದನದ ಮುಂದೆ ಅಥವಾ ಎರಡು ಸದನಗಳಿರುವಲ್ಲಿ ಪ್ರತಿಯೊಂದು ಸದನದ ಮುಂದೆ, ಹದಿನಾಲ್ಕು ದಿನಗಳಿಗೆ ಕಡಿಮೆಯಿಲ್ಲದಷ್ಟು ಕಾಲದವರೆಗೆ ಇಡತಕ್ಕದ್ದು, ಮತ್ತು ವಿನಿಯಮಗಳನ್ನು ಹಾಗೆ ಯಾವ ಅಧಿವೇಶನದಲ್ಲಿ ಇಡಲಾಗಿದೆಯೋ ಆ ಅಧಿವೇಶನದಲ್ಲಿ, ನಿರಸನಗೊಳಿಸುವ ಮೂಲಕ ಅಥವಾ ತಿದ್ದುಪಡಿ ಮಾಡುವ ಮೂಲಕ ಸಂಸತ್ತಿನ ಉಭಯ ಸದನಗಳು ಅಥವಾ ಆ ರಾಜ್ಯದ ವಿಧಾನಮಂಡಲದ ಸದನವು ಅಥವಾ ಉಭಯ ಸದನಗಳು ಮಾಡಬಹುದಾದಂಥ ಮಾರ್ಪಾಟುಗಳಿಗೆ ಅವು ಒಳಪಟ್ಟಿರತಕ್ಕದ್ದು.

**321. ಲೋಕಸೇವಾ ಆಯೋಗಗಳ ಪ್ರಕಾರ್ಯಗಳನ್ನು ವಿಸ್ತರಿಸುವ ಅಧಿಕಾರ:-** ಸಂಸತ್ತು ಅಥವಾ ಸಂದರ್ಭಾನುಸಾರ ಒಂದು ರಾಜ್ಯದ ವಿಧಾನ ಮಂಡಲವು ರಚಿಸಿದ ಅಧಿನಿಯಮವು ಒಕ್ಕೂಟದ ಅಥವಾ ಆ ರಾಜ್ಯದ ಸೇವೆಗಳ ಬಗ್ಗೆ ಮತ್ತು ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ಕಾನೂನಿನ ಮೂಲಕ ರಚಿಸಿದ ಇತರ ನಿಗಮಿತ ನಿಕಾಯದ ಅಥವಾ ಯಾವುದೇ ಸಾರ್ವಜನಿಕ ಸಂಸ್ಥೆಯ ಸೇವೆಗಳ ಬಗ್ಗೆ ಸಹಾ ಒಕ್ಕೂಟ ಲೋಕಸೇವಾ ಆಯೋಗ ಅಥವಾ ಒಂದು ರಾಜ್ಯ ಲೋಕಸೇವಾ ಆಯೋಗವು ಹೆಚ್ಚಿನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಉಪಬಂಧಿಸಬಹುದು.

**322. ಲೋಕಸೇವಾ ಆಯೋಗಗಳ ವೆಚ್ಚಗಳು:-** ಆಯೋಗದ ಸದಸ್ಯರಿಗೆ ಅಥವಾ ಸಿಬ್ಬಂದಿಗೆ ಅಥವಾ ಅವರಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಾದ ಯಾವುವೇ ಸಂಬಳಗಳು, ಭತ್ಯಗಳು ಮತ್ತು ನಿವೃತ್ತಿ ವೇತನಗಳನ್ನೊಳಗೊಂಡು ಒಕ್ಕೂಟ ಅಥವಾ ರಾಜ್ಯ ಲೋಕಸೇವಾ ಆಯೋಗದ ವೆಚ್ಚಗಳನ್ನು ಭಾರತದ ಸಂಚಿತನಿಧಿಯ ಮೇಲೆ ಅಥವಾ ಸಂದರ್ಭಾನುಸಾರ ರಾಜ್ಯದ ಸಂಚಿತನಿಧಿಯ ಮೇಲೆ ಹೊರಿಸತಕ್ಕದ್ದು.

**323. ಲೋಕಸೇವಾ ಆಯೋಗಗಳ ವರದಿಗಳು:-** (1) ಒಕ್ಕೂಟ ಆಯೋಗವು ಪ್ರತಿ ವರ್ಷ ತಾನು ಮಾಡಿದ ಕೆಲಸದ ಬಗ್ಗೆ ವರದಿಯನ್ನು ರಾಷ್ಟ್ರಪತಿಗೆ ಒಪ್ಪಿಸುವುದು ಅದರ ಕರ್ತವ್ಯವಾಗಿರತಕ್ಕದ್ದು ಮತ್ತು ರಾಷ್ಟ್ರಪತಿಯು ಅಂಥ ವರದಿಯನ್ನು ಸ್ವೀಕರಿಸಿದ ಮೇಲೆ ಅದರ ಒಂದು ಪ್ರತಿಯನ್ನು, ಆಯೋಗದ ಸಲಹೆಯು ಅಂಗೀಕೃತವಾಗಿಲ್ಲದ ಸಂದರ್ಭಗಳೇನಾದರೂ ಇದ್ದಲ್ಲಿ, ಅವುಗಳಿಗೆ ಸಂಬಂಧಿಸಿದಂತೆ ಆ ಸಲಹೆಯು ಅಂಗೀಕೃತವಾಗದಿರುವುದಕ್ಕೆ ಕಾರಣಗಳೇನೆಂಬುದನ್ನು ವಿವರಿಸುವ ಒಂದು ವಿವರಣ ಪತ್ರದೊಂದಿಗೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸುವಂತೆ ಮಾಡತಕ್ಕದ್ದು.

(2) ಒಂದು ರಾಜ್ಯದ ಆಯೋಗವು ಪ್ರತಿ ವರ್ಷ ಆ ರಾಜ್ಯದ ರಾಜ್ಯಪಾಲನಿಗೆ [1] * * * ತಾನು ಮಾಡಿದ ಕೆಲಸದ ಬಗ್ಗೆ ವರದಿಯನ್ನು ಒಪ್ಪಿಸುವುದು ಅದರ ಕರ್ತವ್ಯವಾಗಿರತಕ್ಕದ್ದು ಮತ್ತು ಜಂಟಿ ಆಯೋಗವು, ಯಾವ ರಾಜ್ಯಗಳ ಅವಶ್ಯಕತೆಗಳ ಪೂರೈಕೆಗಾಗಿ ಇದೆಯೋ ಅಂಥ ಪ್ರತಿಯೊಂದು ರಾಜ್ಯದ ರಾಜ್ಯಪಾಲನಿಗೆ [1] * * * ಪ್ರತಿ ವರ್ಷ, ಆ ಜಂಟಿ ಆಯೋಗವು ಆಯಾಯ ರಾಜ್ಯಕ್ಕೆ ಸಂಬಂಧಿಸಿದಂತೆ ಮಾಡಿದ ಕೆಲಸದ ಬಗ್ಗೆ ವರದಿಯನ್ನು ಒಪ್ಪಿಸುವುದು ಅದರ ಕರ್ತವ್ಯವಾಗಿರತಕ್ಕದ್ದು, ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಅಂಥ ವರದಿಯನ್ನು ಸ್ವೀಕರಿಸಿದ ತರುವಾಯ ರಾಜ್ಯಪಾಲನು [2] * * * ಅದರ ಒಂದು ಪ್ರತಿಯನ್ನು ಆಯೋಗದ ಸಲಹೆಯು ಅಂಗೀಕೃತವಾಗಿಲ್ಲದ ಸಂದರ್ಭಗಳೇನಾದರೂ ಇದ್ದಲ್ಲಿ ಅವುಗಳಿಗೆ ಸಂಬಂಧಿಸಿದಂತೆ, ಆ ಸಲಹೆಯು ಅಂಗೀಕೃತವಾಗದಿರುವುದಕ್ಕೆ ಕಾರಣಗಳೇನೆಂಬುದನ್ನು ವಿವರಿಸುವ ವಿವರಣ ಪತ್ರದೊಂದಿಗೆ ಆ ರಾಜ್ಯದ ವಿಧಾನ ಮಂಡಲದ ಮುಂದೆ ಇರಿಸುವಂತೆ ಮಾಡತಕ್ಕದ್ದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

2. ಅದೇ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ಸಂದರ್ಭಾನುಸಾರ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

## [1][ಭಾಗ - XIVಎ

## ನ್ಯಾಯಾಧಿಕರಣಗಳು

**323ಎ. ಆಡಳಿತ ನ್ಯಾಯಾಧಿಕರಣಗಳು:–** (1) ಒಕ್ಕೂಟದ ಅಥವಾ ಯಾವುದೇ ರಾಜ್ಯದ ಅಥವಾ ಭಾರತ ರಾಜ್ಯ ಕ್ಷೇತ್ರದಲ್ಲಿನ ಅಥವಾ ಭಾರತ ಸರ್ಕಾರದ ನಿಯಂತ್ರಣದಲ್ಲಿರುವ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಥವಾ ಸರ್ಕಾರದ ಒಡೆತನದಲ್ಲಿ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮದ ವ್ಯವಹಾರಗಳ ಸಂಬಂಧದಲ್ಲಿ ಲೋಕಸೇವೆಗಳಿಗೆ ಮತ್ತು ಹುದ್ದೆಗಳ ನೇಮಕಾತಿಗೆ ಮತ್ತು ಅವುಗಳಿಗೆ ನೇಮಕಗೊಂಡ ವ್ಯಕ್ತಿಗಳ ಸೇವಾ ಷರತ್ತುಗಳಿಗೆ ಸಂಬಂಧಿಸಿದ ವಿವಾದಗಳನ್ನು ಮತ್ತು ದೂರುಗಳನ್ನು ಆಡಳಿತ ನ್ಯಾಯಾಧಿಕರಣಗಳು ನ್ಯಾಯನಿರ್ಣಯ ಅಥವಾ ಅಧಿವಿಚಾರಣೆ ಮಾಡಲು ಸಂಸತ್ತು ಕಾನೂನಿನ ಮೂಲಕ ಉಪಬಂಧಿಸಬಹುದು.

(2) (1)ನೆಯ ಖಂಡದ ಮೇರೆಗೆ ರಚಿಸಿದ ಕಾನೂನು,-

(ಎ) ಒಕ್ಕೂಟಕ್ಕೆ ಒಂದು ಆಡಳಿತ ನ್ಯಾಯಾಧಿಕರಣವನ್ನು ಮತ್ತು ಪ್ರತಿಯೊಂದು ರಾಜ್ಯಕ್ಕೆ ಅಥವಾ ಎರಡು ಅಥವಾ ಹೆಚ್ಚು ರಾಜ್ಯಗಳಿಗೆ ಒಂದೊಂದು ಪ್ರತ್ಯೇಕ ಆಡಳಿತ ನ್ಯಾಯಾಧಿಕರಣವನ್ನು ಸ್ಥಾಪಿಸುವುದಕ್ಕೆ ಉಪಬಂಧಿಸಬಹುದು;

(ಬಿ) ಸದರಿ ನ್ಯಾಯಾಧಿಕರಣಗಳಲ್ಲಿ ಪ್ರತಿಯೊಂದು ನ್ಯಾಯಾಧಿಕರಣವೂ ಚಲಾಯಿಸಬಹುದಾದ ಅಧಿಕಾರ ವ್ಯಾಪ್ತಿಯನ್ನು (ನಿಂದನೆಗಾಗಿ ದಂಡನೆ ವಿಧಿಸುವ ಅಧಿಕಾರವನ್ನೊಳಗೊಂಡು), ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ನಿರ್ದಿಷ್ಟಪಡಿಸಬಹುದು;

(ಸಿ) ಸದರಿ ನ್ಯಾಯಾಧಿಕರಣಗಳು ಅನುಸರಿಸಬೇಕಾದ (ಕಾಲಪರಿಮಿತಿ ಹಾಗೂ ಸಾಕ್ಷ್ಯ ನಿಯಮಗಳಿಗೆ ಸಂಬಂಧಿಸಿದ ಉಪಬಂಧಗಳನ್ನು ಒಳಗೊಂಡು) ಕಾರ್ಯವಿಧಾನವನ್ನು ಉಪಬಂಧಿಸಬಹುದು;

(ಡಿ) (1)ನೆಯ ಖಂಡದಲ್ಲಿ ಉಲ್ಲೇಖಿಸಿದ ವಿವಾದಗಳ ಬಗ್ಗೆ ಅಥವಾ ದೂರುಗಳ ಬಗ್ಗೆ 136ನೆಯ ಅನುಚ್ಛೇದದ ಮೇರೆಗೆ ಸರ್ವೋಚ್ಚ ನ್ಯಾಯಾಲಯಕ್ಕಿರುವ ಅಧಿಕಾರ ವ್ಯಾಪ್ತಿಯನ್ನುಳಿದು ಎಲ್ಲ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ಹೊರತುಪಡಿಸಬಹುದು;

(ಇ) ಅಂಥ ನ್ಯಾಯಾಧಿಕರಣದ ಸ್ಥಾಪನೆಗೆ ನಿಕಟಪೂರ್ವದಲ್ಲಿ ಯಾವುದೇ ನ್ಯಾಯಾಲಯದ ಅಥವಾ ಇತರ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿದ್ದ ಯಾವುವೇ ಪ್ರಕರಣಗಳನ್ನು, ಅಂಥ ದಾವೆಗಳಿಗೆ ಅಥವಾ ವ್ಯವಹರಣೆಗಳಿಗೆ ಆಧಾರವಾಗಿರುವ ವ್ಯಾಜ್ಯ ಕಾರಣಗಳು, ಅಂಥ ಆಡಳಿತ ನ್ಯಾಯಾಧಿಕರಣಗಳ ಸ್ಥಾಪನೆಯ ನಂತರ ಉದ್ಭವಿಸಿದ್ದರೆ, ಯಾವ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯೊಳಗೆ ಬರುತ್ತಿದ್ದವೋ ಅಂಥ ಪ್ರತಿಯೊಂದು ಆಡಳಿತ ನ್ಯಾಯಾಧಿಕರಣಕ್ಕೆ ವರ್ಗಾಯಿಸುವುದಕ್ಕೆ ಉಪಬಂಧಿಸಬಹುದು;

(ಎಫ್) 371ಡಿ ಅನುಚ್ಛೇದದ (3)ನೇ ಖಂಡದ ಮೇರೆಗೆ ರಾಷ್ಟ್ರಪತಿಯು ಮಾಡಿದ ಯಾವುದೇ ಆದೇಶವನ್ನು ನಿರಸನಗೊಳಿಸಬಹುದು ಅಥವಾ ತಿದ್ದುಪಡಿ ಮಾಡಬಹುದು;

(ಜಿ) ಅಂಥ ನ್ಯಾಯಾಧಿಕರಣಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಮತ್ತು ಆ ನ್ಯಾಯಾಧಿಕರಣಗಳು ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ಮತ್ತು ಅವುಗಳ ಆದೇಶಗಳ ಜಾರಿಗಾಗಿ ಸಂಸತ್ತು ಅವಶ್ಯವೆಂದು ಭಾವಿಸಬಹುದಾದಂಥ (ಫೀಜುಗಳಿಗೆ ಸಂಬಂಧಿಸಿದ ಉಪಬಂಧಗಳನ್ನೊಳಗೊಂಡು) ಪೂರಕ, ಪ್ರಾಸಂಗಿಕ ಮತ್ತು ಆನುಷಂಗಿಕ ಉಪಬಂಧಗಳನ್ನು ಒಳಗೊಂಡಿರಬಹುದು.

(3) ಈ ಸಂವಿಧಾನದ ಯಾವುದೇ ಇತರ ಉಪಬಂಧದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದಾಗ್ಯೂ, ಈ ಅನುಚ್ಛೇದದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

---

1. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 46ನೆಯ ಪ್ರಕರಣದ ಮೂಲಕ (3-1-77 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

**323ಬಿ. ಇತರ ವಿಷಯಗಳಿಗಾಗಿ ನ್ಯಾಯಾಧಿಕರಣಗಳು:–** (1) ಸಮುಚಿತ ವಿಧಾನ ಮಂಡಲವು, (2)ನೆಯ ಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವ ವಿಷಯಗಳ ಬಗ್ಗೆ ಅಂಥ ವಿಧಾನಮಂಡಲವು ಕಾನೂನುಗಳನ್ನು ರಚಿಸಲು ಅಧಿಕಾರವನ್ನು ಹೊಂದಿದೆಯೋ ಆ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಸಂಬಂಧಿಸಿ ಯಾವುವೇ ವಿವಾದಗಳ, ದೂರುಗಳ ಅಥವಾ ಅಪರಾಧಗಳ ಬಗ್ಗೆ ನ್ಯಾಯಾಧಿಕರಣಗಳು ನ್ಯಾಯನಿರ್ಣಯ ಅಥವಾ ಅಧಿವಿಚಾರಣೆ ಮಾಡುವುದಕ್ಕಾಗಿ ಕಾನೂನಿನ ಮೂಲಕ ಉಪಬಂಧಿಸಬಹುದು.

(2) (1)ನೇ ಖಂಡದಲ್ಲಿ ಉಲ್ಲೇಖಿಸಿದ ವಿಷಯಗಳು ಈ ಕೆಳಕಂಡಂತಿವೆ, ಎಂದರೆ:–

(ಎ) ಯಾವುದೇ ತೆರಿಗೆಯನ್ನು ವಿಧಿಸುವುದು, ನಿರ್ಧರಿಸುವುದು, ಸಂಗ್ರಹಿಸುವುದು ಮತ್ತು ಅವನ್ನು ಜಾರಿಗೊಳಿಸುವುದು;

(ಬಿ) ವಿದೇಶಿ ವಿನಿಮಯ, ಸೀಮಾ ಸುಂಕ ಸರಹದ್ದಿನ ಆಚೆ-ಈಚೆ ನಡೆಯುವ ಆಮದು ಮತ್ತು ರಫ್ತು;

(ಸಿ) ಕೈಗಾರಿಕಾ ಮತ್ತು ಕಾರ್ಮಿಕ ವಿವಾದಗಳು;

(ಡಿ) 31ಎ ಅನುಚ್ಛೇದದಲ್ಲಿ ಪರಿಭಾಷಿಸಲಾದಂತೆ ರಾಜ್ಯವು ಯಾವುದೇ ಎಸ್ಟೇಟನ್ನು, ಅಥವಾ ಅದರಲ್ಲಿನ ಯಾವುವೇ ಹಕ್ಕುಗಳನ್ನು ಆರ್ಜಿಸುವ ಮೂಲಕ ಅಥವಾ ಯಾವುವೇ ಅಂಥ ಹಕ್ಕುಗಳನ್ನು ಅಂತ್ಯಗೊಳಿಸುವ ಅಥವಾ ಮಾರ್ಪಾಟು ಮಾಡುವ ಮೂಲಕ ಅಥವಾ ಕೃಷಿ ಭೂಮಿಯ ಮೇಲೆ ಗರಿಷ್ಠ ಪರಿಮಿತಿಯನ್ನು ವಿಧಿಸುವ ಮೂಲಕ ಅಥವಾ ಇತರ ಯಾವುದೇ ರೂಪದಲ್ಲಿ ಮಾಡಲಾಗುವ ಭೂ ಸುಧಾರಣೆಗಳು;

(ಇ) ನಗರ ಆಸ್ತಿಯ ಮೇಲಣ ಗರಿಷ್ಠ ಪರಿಮಿತಿ;

(ಎಫ್) 329 ಮತ್ತು 329ಎ ಅನುಚ್ಛೇದಗಳಲ್ಲಿ ಉಲ್ಲೇಖಿಸಿದ ವಿಷಯಗಳನ್ನು ಹೊರತುಪಡಿಸಿ, ಸಂಸತ್ತಿನ ಯಾವುದೇ ಸದನಕ್ಕೆ ಅಥವಾ ಒಂದು ರಾಜ್ಯದ ವಿಧಾನ ಮಂಡಲದ ಸದನಕ್ಕೆ ಅಥವಾ ಯಾವುದೇ ಸದನಕ್ಕೆ ನಡೆಯುವ ಚುನಾವಣೆಗಳು;

(ಜಿ) ಆಹಾರ ಪದಾರ್ಥಗಳ (ಖಾದ್ಯ ಎಣ್ಣೆ ಬೀಜಗಳು ಮತ್ತು ಎಣ್ಣೆಗಳನ್ನು ಒಳಗೊಂಡು) ಮತ್ತು ಈ ಅನುಚ್ಛೇದದ ಉದ್ದೇಶಕ್ಕಾಗಿ ರಾಷ್ಟ್ರಪತಿಯು ಸಾರ್ವಜನಿಕ ಅಧಿಸೂಚನೆಯ ಮೂಲಕ ಅತ್ಯಾವಶ್ಯಕ ಸರಕುಗಳೆಂದು ಘೋಷಿಸಬಹುದಾದಂಥ ಇತರ ಸರಕುಗಳ ಉತ್ಪಾದನೆ, ಸಂಗ್ರಹಣೆ, ಸರಬರಾಜು ಮತ್ತು ವಿತರಣೆ ಮತ್ತು ಅಂಥ ಸರಕುಗಳ ಬೆಲೆಗಳ ನಿಯಂತ್ರಣ;

[1][(ಎಚ್) ಬಾಡಿಗೆ, ಅದರ ವಿನಿಯಮನ ಹಾಗೂ ನಿಯಂತ್ರಣ ಮತ್ತು ಭೂ ಮಾಲೀಕರ ಮತ್ತು ಬಾಡಿಗೆದಾರರ ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಯನ್ನೊಳಗೊಂಡಂತೆ ಬಾಡಿಗೆದಾರರಿಗೆ ಸಂಬಂಧಿಸಿದ ವಿವಾದಗಳು;]

[2][(ಐ)] (ಎ) ಯಿಂದ [3][(ಎಚ್)] ವರೆಗಿನ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಪೈಕಿ ಯಾವುವೇ ವಿಷಯಗಳಿಗೆ ಸಂಬಂಧಿಸಿದ ಕಾನೂನುಗಳ ವಿರುದ್ಧ ಅಪರಾಧಗಳು, ಮತ್ತು ಆ ಯಾವುವೇ ವಿಷಯಗಳಿಗೆ ಸಂಬಂಧಿಸಿದಂತೆ ಫೀಜುಗಳು;

[2][(ಜೆ)] (ಎ) ಯಿಂದ [4][(ಐ)] ವರೆಗಿನ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಪೈಕಿ ಯಾವುವೇ ವಿಷಯಗಳಿಗೆ ಪ್ರಾಸಂಗಿಕವಾದ ಯಾವುದೇ ವಿಷಯ.

---

1. 1993 ನೇ ಇಸವಿಯ ಸಂವಿಧಾನ (ಎಪ್ಪತ್ತೈದನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (15.5.1994 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1993 ನೇ ಇಸವಿಯ ಸಂವಿಧಾನ (ಎಪ್ಪತ್ತೈದನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (ಹೆಚ್) ಮತ್ತು (ಐ) ಉಪಖಂಡಗಳನ್ನು (ಐ) ಮತ್ತು (ಜೆ) ಉಪ ಖಂಡಗಳಿಗೆ (15.5.1994 ರಿಂದ ಜಾರಿಗೆ ಬರುವಂತೆ) ಪುನರ್ ಅಕ್ಷರಗೊಳಿಸಲಾಗಿದೆ.
3. 1993 ನೇ ಇಸವಿಯ ಸಂವಿಧಾನ (ಎಪ್ಪತ್ತೈದನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ "(ಜಿ)"ಗೆ ಬದಲಾಗಿ (15.5.1994 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
4. 1993 ನೇ ಇಸವಿಯ ಸಂವಿಧಾನ (ಎಪ್ಪತ್ತೈದನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ "(ಹೆಚ್)"ಗೆ ಬದಲಾಗಿ (15.5.1994 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

(3) (1)ನೇ ಖಂಡದ ಮೇರೆಗೆ ರಚಿಸಿದ ಕಾನೂನು,-

(ಎ) ನ್ಯಾಯಾಧಿಕರಣಗಳ ಅನುಕ್ರಮ ಶ್ರೇಣಿಯ ಸ್ಥಾಪನೆಗಾಗಿ ಉಪಬಂಧಿಸಬಹುದು;

(ಬಿ) ಸದರಿ ನ್ಯಾಯಾಧಿಕರಣಗಳಲ್ಲಿ ಪ್ರತಿಯೊಂದು ನ್ಯಾಯಾಧಿಕರಣವೂ ಚಲಾಯಿಸಬಹುದಾದ ಅಧಿಕಾರ ವ್ಯಾಪ್ತಿಯನ್ನು (ನಿಂದನೆಗಾಗಿ ದಂಡನೆ ವಿಧಿಸುವ ಅಧಿಕಾರವನ್ನೂ ಒಳಗೊಂಡು) ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ನಿರ್ದಿಷ್ಟಪಡಿಸಬಹುದು;

(ಸಿ) ಸದರಿ ನ್ಯಾಯಾಧಿಕರಣಗಳು ಅನುಸರಿಸಬೇಕಾದ (ಕಾಲಪರಿಮಿತಿ ಹಾಗೂ ಸಾಕ್ಷ್ಯ ನಿಯಮಗಳಿಗೆ ಸಂಬಂಧಿಸಿದ ಉಪಬಂಧಗಳೂ ಸೇರಿ) ಕಾರ್ಯವಿಧಾನವನ್ನು ಉಪಬಂಧಿಸಬಹುದು;

(ಡಿ) ಸದರಿ ನ್ಯಾಯಾಧಿಕರಣಗಳ ಅಧಿಕಾರ ವ್ಯಾಪ್ತಿಯೊಳಗೆ ಬರುವ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಸಂಬಂಧಿಸಿದಂತೆ, 136ನೇ ಅನುಚ್ಛೇದದ ಮೇರೆಗೆ ಸರ್ವೋಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಉಳಿದು, ಇತರ ಎಲ್ಲ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ಹೊರತುಪಡಿಸಬಹುದು;

(ಇ) ಅಂಥ ನ್ಯಾಯಾಧಿಕರಣದ ಸ್ಥಾಪನೆಗೆ ನಿಕಟಪೂರ್ವದಲ್ಲಿ ಯಾವುದೇ ನ್ಯಾಯಾಲಯದ ಅಥವಾ ಇತರ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿದ್ದ ಯಾವುವೇ ಪ್ರಕರಣಗಳನ್ನು, ಅಂಥ ದಾವೆಗಳಿಗೆ ಅಥವಾ ವ್ಯವಹರಣೆಗಳಿಗೆ ಆಧಾರವಾಗಿರುವ ವ್ಯಾಜ್ಯ ಕಾರಣಗಳು ಅಂಥ ನ್ಯಾಯಾಧಿಕರಣಗಳ ಸ್ಥಾಪನೆಯ ನಂತರ ಉದ್ಭವಿಸಿದರೆ ಯಾವ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಗೆ ಒಳಪಡಬಹುದಾಗಿದ್ದವೋ ಅಂಥ ಪ್ರತಿಯೊಂದು ನ್ಯಾಯಾಧಿಕರಣಕ್ಕೆ ವರ್ಗಾಯಿಸುವುದಕ್ಕೆ ಉಪಬಂಧಿಸಬಹುದು;

(ಎಫ್) ಅಂಥ ನ್ಯಾಯಾಧಿಕರಣಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಮತ್ತು ಆ ನ್ಯಾಯಾಧಿಕರಣಗಳು ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ಮತ್ತು ಅವುಗಳ ಆದೇಶಗಳನ್ನು ಜಾರಿಗೊಳಿಸಲು ಸಮುಚಿತ ವಿಧಾನ ಮಂಡಲವು ಅವಶ್ಯವೆಂದು ಭಾವಿಸಬಹುದಾದಂಥ (ಫೀಜುಗಳಿಗೆ ಸಂಬಂಧಿಸಿದ ಉಪಬಂಧಗಳನ್ನೊಳಗೊಂಡು) ಪೂರಕ, ಪ್ರಾಸಂಗಿಕ ಮತ್ತು ಆನುಷಂಗಿಕ ಉಪಬಂಧಗಳನ್ನು ಒಳಗೊಂಡಿರಬಹುದು.

(4) ಈ ಸಂವಿಧಾನದ ಇತರ ಯಾವುದೇ ಉಪಬಂಧದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದಾಗ್ಯೂ ಈ ಅನುಚ್ಛೇದದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

**ವಿವರಣೆ:-** ಈ ಅನುಚ್ಛೇದದಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ "ಸಮುಚಿತ ವಿಧಾನ ಮಂಡಲ" ಎಂದರೆ ಸಂಸತ್ತು ಅಥವಾ ಸಂದರ್ಭಾನುಸಾರ XIನೇ ಭಾಗದ ಉಪಬಂಧಗಳಿಗನುಸಾರವಾಗಿ ಅಂಥ ವಿಷಯದ ಬಗ್ಗೆ ಕಾನೂನುಗಳನ್ನು ರಚಿಸಲು ಸಕ್ಷಮವಾದ ರಾಜ್ಯ ವಿಧಾನಮಂಡಲ.]

## ಭಾಗ -XV

### ಚುನಾವಣೆಗಳು

**324. ಚುನಾವಣೆಗಳ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಚುನಾವಣಾ ಆಯೋಗದಲ್ಲಿ ನಿಹಿತವಾಗಿರುವುದು:-** (1) ಈ ಸಂವಿಧಾನದ ಮೇರೆಗೆ [1] * * * ಸಂಸತ್ತಿನ ಮತ್ತು ಪ್ರತಿಯೊಂದು ರಾಜ್ಯದ ವಿಧಾನ ಮಂಡಲದ ಹಾಗೂ ರಾಷ್ಟ್ರಪತಿಯ ಮತ್ತು ಉಪರಾಷ್ಟ್ರಪತಿಯ ಪದಗಳ ಎಲ್ಲ ಚುನಾವಣೆಗಳಿಗೆ ಸಂಬಂಧಿಸಿದಂತೆ ಮತದಾರರ ಪಟ್ಟಿಗಳ ತಯಾರಿಕೆಯ ಮತ್ತು ಆ ಎಲ್ಲ ಚುನಾವಣೆಗಳನ್ನು ನಡೆಸುವುದರ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು (ಈ ಸಂವಿಧಾನದಲ್ಲಿ ಚುನಾವಣಾ ಆಯೋಗವೆಂದು ಉಲ್ಲೇಖಿಸಲಾದ) ಒಂದು ಆಯೋಗದಲ್ಲಿ ನಿಹಿತವಾಗಿರತಕ್ಕದ್ದು.

(2) ಚುನಾವಣಾ ಆಯೋಗವು ಮುಖ್ಯ ಚುನಾವಣಾ ಆಯುಕ್ತನನ್ನು ಮತ್ತು ರಾಷ್ಟ್ರಪತಿಯು ಕಾಲಕಾಲಕ್ಕೆ ನಿಗದಿಪಡಿಸಬಹುದಾದಷ್ಟು ಸಂಖ್ಯೆಯ ಇತರ ಚುನಾವಣಾ ಆಯುಕ್ತರುಗಳು ಯಾರಾದರೂ ಇದ್ದರೆ, ಅವರನ್ನು ಒಳಗೊಂಡಿರತಕ್ಕದ್ದು ಮತ್ತು ಮುಖ್ಯ ಚುನಾವಣಾ ಆಯುಕ್ತನ ಮತ್ತು ಇತರ ಚುನಾವಣಾ ಆಯುಕ್ತರುಗಳ ನೇಮಕವನ್ನು ಆ ಬಗ್ಗೆ ಸಂಸತ್ತು ಮಾಡಿದ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು ರಾಷ್ಟ್ರಪತಿಯು ಮಾಡತಕ್ಕದ್ದು.

(3) ಇತರ ಯಾರೇ ಚುನಾವಣಾ ಆಯುಕ್ತನು ಹಾಗೆ ನೇಮಕಗೊಂಡಾಗ, ಮುಖ್ಯ ಚುನಾವಣಾ ಆಯುಕ್ತನು ಚುನಾವಣಾ ಆಯೋಗದ ಅಧ್ಯಕ್ಷನಾಗಿ ಕಾರ್ಯನಿರ್ವಹಿಸತಕ್ಕದ್ದು.

(4) ಲೋಕಸಭೆಗೆ ಮತ್ತು ಪ್ರತಿಯೊಂದು ರಾಜ್ಯದ ವಿಧಾನಸಭೆಗೆ ಪ್ರತಿ ಸಾರ್ವತ್ರಿಕ ಚುನಾವಣೆಯನ್ನು ನಡೆಸುವುದಕ್ಕೆ ಮುಂಚೆ, ಮತ್ತು ಮೊದಲನೆಯ ಸಾರ್ವತ್ರಿಕ ಚುನಾವಣೆಯು ನಡೆಯುವುದಕ್ಕೆ ಮುಂಚೆ ಮತ್ತು ಅನಂತರ ಪರಿಷತ್ತನ್ನುಳ್ಳ ಪ್ರತಿಯೊಂದು ರಾಜ್ಯದ ವಿಧಾನ ಪರಿಷತ್ತಿನ ಪ್ರತಿ ದ್ವೈವಾರ್ಷಿಕ ಚುನಾವಣೆಗೆ ಮುಂಚೆ, ರಾಷ್ಟ್ರಪತಿಯು ಚುನಾವಣಾ ಆಯೋಗದೊಡನೆ ಸಮಾಲೋಚಿಸಿದ ತರುವಾಯ (1)ನೆಯ ಖಂಡದ ಮೂಲಕ ಚುನಾವಣಾ ಆಯೋಗಕ್ಕೆ ಪ್ರದತ್ತವಾದ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಆ ಆಯೋಗಕ್ಕೆ ಸಹಾಯ ಮಾಡಲು ತಾನು ಅವಶ್ಯವೆಂದು ಭಾವಿಸಬಹುದಾದಂಥ ಪ್ರಾದೇಶಿಕ ಆಯುಕ್ತರುಗಳನ್ನು ಸಹ ನೇಮಕ ಮಾಡಬಹುದು.

(5) ಸಂಸತ್ತು ರಚಿಸಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ಚುನಾವಣಾ ಆಯುಕ್ತರುಗಳ ಮತ್ತು ಪ್ರಾದೇಶಿಕ ಆಯುಕ್ತರುಗಳ ಸೇವಾ ಷರತ್ತುಗಳು ಮತ್ತು ಪದಾವಧಿಯು ರಾಷ್ಟ್ರಪತಿಯು ನಿಯಮದ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕದ್ದು:

ಪರಂತು, ಮುಖ್ಯ ಚುನಾವಣಾ ಆಯುಕ್ತನನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ತೆಗೆದುಹಾಕುವಂತಹ ರೀತಿಯಲ್ಲಿ ಮತ್ತು ಅಂತಹವೇ ಕಾರಣಗಳ ಮೇಲೆ ಹೊರತು ಅವನ ಪದದಿಂದ ತೆಗೆದುಹಾಕತಕ್ಕದ್ದಲ್ಲ ಮತ್ತು ಮುಖ್ಯ ಚುನಾವಣಾ ಆಯುಕ್ತನ ಸೇವಾ ಷರತ್ತುಗಳನ್ನು ಅವನ ನೇಮಕದ ತರುವಾಯ ಅವನಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ತಗೊಳಿಸತಕ್ಕದ್ದಲ್ಲ:

ಮತ್ತೂ ಪರಂತು, ಇತರ ಯಾರೇ ಚುನಾವಣಾ ಆಯುಕ್ತನನ್ನು ಅಥವಾ ಪ್ರಾದೇಶಿಕ ಆಯುಕ್ತನನ್ನು, ಮುಖ್ಯ ಚುನಾವಣಾ ಆಯುಕ್ತನ ಶಿಫಾರಸ್ಸಿನ ಮೇಲಲ್ಲದೆ ಪದದಿಂದ ತೆಗೆದುಹಾಕತಕ್ಕದ್ದಲ್ಲ.

(6) ಚುನಾವಣಾ ಆಯೋಗವು ತನಗೆ ಅಥವಾ ಪ್ರಾದೇಶಿಕ ಆಯುಕ್ತನಿಗೆ, (1)ನೇ ಖಂಡದ ಮೂಲಕ ಚುನಾವಣಾ ಆಯೋಗಕ್ಕೆ ಪ್ರದತ್ತವಾದ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅವಶ್ಯಕವಾಗಬಹುದಾದಷ್ಟು ಸಿಬ್ಬಂದಿಯನ್ನು ಒದಗಿಸಲು ರಾಷ್ಟ್ರಪತಿಯನ್ನು ಅಥವಾ ಒಂದು ರಾಜ್ಯದ ರಾಜ್ಯಪಾಲನನ್ನು [2] * * * ಕೋರಿದಾಗ ಅವನು ಹಾಗೆ ಒದಗಿಸತಕ್ಕದ್ದು.

---

1. 1966ನೆಯ ಇಸವಿಯ ಸಂವಿಧಾನ (ಹತ್ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ, "ಮತ್ತು ಸಂಸತ್ತಿಗೂ ರಾಜ್ಯಗಳ ವಿಧಾನಮಂಡಲಗಳಿಗೂ ನಡೆಯತಕ್ಕ ಚುನಾವಣೆಗಳಿಂದ ಅಥವಾ ಚುನಾವಣೆಗಳ ಸಂಬಂಧದಲ್ಲಿ ಉದ್ಭವಿಸುವ ಸಂದೇಹಗಳನ್ನೂ, ವಿವಾದಗಳನ್ನೂ ಇತ್ಯರ್ಥಪಡಿಸುವುದಕ್ಕಾಗಿ ಚುನಾವಣಾ ನ್ಯಾಯಾಧಿಕರಣಗಳ ನೇಮಕಾತಿಯನ್ನು ಒಳಗೊಂಡು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ, "ಅಥವಾ ರಾಜಪ್ರಮುಖನನ್ನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

**325. ಧರ್ಮ, ಮೂಲವಂಶ, ಜಾತಿ ಅಥವಾ ಲಿಂಗದ ಆಧಾರಗಳ ಮೇಲೆ ಯಾರೇ ವ್ಯಕ್ತಿಯು ಮತದಾರರ ಪಟ್ಟಿಯಲ್ಲಿ ಸೇರಲು ಅನರ್ಹನಾಗದಿರುವುದು ಅಥವಾ ವಿಶೇಷ ಮತದಾರರ ಪಟ್ಟಿಯಲ್ಲಿ ಸೇರಿಸುವಂತೆ ಅವನು ಕ್ಲೇಮು ಮಾಡಲಾಗದಿರುವುದು:-** ಸಂಸತ್ತಿನ ಎರಡೂ ಸದನಗಳಿಗೆ ಅಥವಾ ಒಂದು ರಾಜ್ಯದ ವಿಧಾನ ಮಂಡಲದ ಸದನಕ್ಕೆ ಅಥವಾ ಎರಡೂ ಸದನಗಳಿಗೆ ಚುನಾವಣೆ ನಡೆಸಲು ಪ್ರತಿಯೊಂದು ಪ್ರಾದೇಶಿಕ ಚುನಾವಣಾ ಕ್ಷೇತ್ರಕ್ಕೆ ಒಂದು ಸಾರ್ವತ್ರಿಕ ಮತದಾರರ ಪಟ್ಟಿಯು ಇರತಕ್ಕದ್ದು, ಮತ್ತು ಯಾರೇ ವ್ಯಕ್ತಿಯು, ಧರ್ಮ, ಮೂಲವಂಶ, ಜಾತಿ ಮತ್ತು ಲಿಂಗ ಇವುಗಳ ಆಧಾರದ ಮೇಲೆ ಅಥವಾ ಇವುಗಳ ಪೈಕಿ ಯಾವುದೇ ಒಂದರ ಆಧಾರದ ಮೇಲೆ ಅಂಥ ಯಾವುದೇ ಪಟ್ಟಿಯಲ್ಲಿ ಸೇರಲು ಅವನು ಅನರ್ಹಗೊಳ್ಳತಕ್ಕದ್ದಲ್ಲ ಅಥವಾ ಅಂಥ ಯಾವುದೇ ಚುನಾವಣಾ ಕ್ಷೇತ್ರದ ಯಾವುದೇ ವಿಶೇಷ ಮತದಾರರ ಪಟ್ಟಿಯಲ್ಲಿ ತನ್ನ ಹೆಸರನ್ನು ಸೇರಿಸುವಂತೆ ಅವನು ಕ್ಲೇಮು ಮಾಡತಕ್ಕದ್ದಲ್ಲ.

**326. ಲೋಕಸಭೆಯ ಮತ್ತು ರಾಜ್ಯಗಳ ವಿಧಾನ ಸಭೆಗಳ ಚುನಾವಣೆಗಳು ವಯಸ್ಕ ಮತಾಧಿಕಾರದ ಆಧಾರದ ಮೇಲೆ ನಡೆಯುವುದು:-** ಲೋಕಸಭೆಗೆ ಮತ್ತು ಪ್ರತಿಯೊಂದು ರಾಜ್ಯದ ವಿಧಾನ ಸಭೆಗೆ ಚುನಾವಣೆಗಳು ವಯಸ್ಕ ಮತಾಧಿಕಾರದ ಆಧಾರದ ಮೇಲೆ ನಡೆಯತಕ್ಕದ್ದು ಎಂದರೆ, ಭಾರತದ ನಾಗರಿಕನಾಗಿರುವ ಮತ್ತು ಸಮುಚಿತ ವಿಧಾನ ಮಂಡಲವು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಗದಿಪಡಿಸಬಹುದಾದಂಥ ದಿನಾಂಕದಂದು [1][ಹದಿನೆಂಟು ವರ್ಷ] ವಯಸ್ಸಿಗೆ ಕಡಿಮೆ ಇಲ್ಲದವನಾಗಿರುವ ಮತ್ತು ಈ ಸಂವಿಧಾನದ ಅಥವಾ ಸಮುಚಿತ ವಿಧಾನ ಮಂಡಲವು ಮಾಡಿದ ಯಾವುದೇ ಕಾನೂನಿನ ಮೇರೆಗೆ, ಅನಿವಾಸ, ಅಸ್ವಸ್ಥಚಿತ್ತತೆ, ಅಪರಾಧ ಅಥವಾ ಭ್ರಷ್ಟಾಚಾರ ಅಥವಾ ಕಾನೂನುಬಾಹಿರ ಆಚರಣೆಯ ಕಾರಣದ ಮೇಲೆ ಅನ್ಯಥಾ ಅನರ್ಹನಾಗಿಲ್ಲದಿರುವ ಪ್ರತಿಯೊಬ್ಬ ವ್ಯಕ್ತಿಯೂ, ಅಂಥ ಯಾವುದೇ ಚುನಾವಣೆಯಲ್ಲಿ ಮತದಾರನಾಗಿ ತನ್ನ ಹೆಸರನ್ನು ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

**327. ವಿಧಾನ ಮಂಡಲಗಳ ಚುನಾವಣೆಗಳ ಬಗ್ಗೆ ಉಪಬಂಧವನ್ನು ಮಾಡಲು ಸಂಸತ್ತಿನ ಅಧಿಕಾರ:-** ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು ಸಂಸತ್ತು ಕಾನೂನಿನ ಮೂಲಕ ಮತದಾರರ ಪಟ್ಟಿಗಳ ತಯಾರಿಕೆ, ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ ಮತ್ತು ಸಂಸತ್ತಿನ ಎರಡೂ ಸದನಗಳ ಅಥವಾ ರಾಜ್ಯದ ವಿಧಾನ ಮಂಡಲದ ಸದನದ ಅಥವಾ ಎರಡೂ ಸದನಗಳ ಕ್ರಮಬದ್ಧ ರಚನೆಯನ್ನು ಸುನಿಶ್ಚಿತಗೊಳಿಸಲು ಅವಶ್ಯವಾದ ಎಲ್ಲ ಇತರ ವಿಷಯಯಗಳನ್ನೊಳಗೊಂಡು ಅಂಥ ಸದನದ ಅಥವಾ ಸದನಗಳ ಚುನಾವಣೆಗಳಿಗೆ ಅನ್ವಯಿಸುವ ಅಥವಾ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ಕಾಲಕಾಲಕ್ಕೆ ಉಪಬಂಧವನ್ನು ಮಾಡಬಹುದು.

**328. ರಾಜ್ಯದ ವಿಧಾನ ಮಂಡಲದ ಚುನಾವಣೆಗಳ ಬಗ್ಗೆ ಉಪಬಂಧವನ್ನು ಮಾಡಲು ಅಂಥ ವಿಧಾನ ಮಂಡಲದ ಅಧಿಕಾರ:-** ಈ ಸಂವಿಧಾನದ ಉಪಬಂಧಗಳಿಗೊಳಪಟ್ಟು ಮತ್ತು ಆ ಬಗ್ಗೆ ಸಂಸತ್ತು ಉಪಬಂಧ ಮಾಡಿಲ್ಲದಿರುವಷ್ಟರ ಮಟ್ಟಿಗೆ ರಾಜ್ಯ ವಿಧಾನ ಮಂಡಲವು ಕಾನೂನಿನ ಮೂಲಕ ಮತದಾರರ ಪಟ್ಟಿಗಳ ತಯಾರಿಕೆ ಮತ್ತು ಆ ರಾಜ್ಯದ ವಿಧಾನ ಮಂಡಲದ ಸದನ ಅಥವಾ ಎರಡೂ ಸದನಗಳ ಕ್ರಮಬದ್ಧ ರಚನೆಯನ್ನು ಸುನಿಶ್ಚಿತಗೊಳಿಸುವುದಕ್ಕೆ ಅವಶ್ಯವಾದ ಎಲ್ಲ ವಿಷಯಗಳನ್ನೊಳಗೊಂಡು ಅಂಥ ಸದನದ ಅಥವಾ ಸದನಗಳ ಚುನಾವಣೆಗಳಿಗೆ ಅನ್ವಯಿಸುವ ಅಥವಾ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ಕಾಲಕಾಲಕ್ಕೆ ಉಪಬಂಧವನ್ನು ಮಾಡಬಹುದು.

---

1. 1988ನೆಯ ಇಸವಿಯ ಸಂವಿಧಾನ (ಅರವತ್ತೊಂದನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ "ಇಪ್ಪತ್ತೊಂದು ವರ್ಷಗಳ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

**329. ಚುನಾವಣಾ ವಿಷಯಗಳಲ್ಲಿ ನ್ಯಾಯಾಲಯಗಳ ಹಸ್ತಕ್ಷೇಪಕ್ಕೆ ಪ್ರತಿಷೇಧ:–** [1][ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, [2] * * *],-

(ಎ) ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯಕ್ಕೆ ಅಥವಾ ಅಂಥ ಚುನಾವಣಾ ಕ್ಷೇತ್ರಗಳಿಗೆ ಸ್ಥಾನಗಳನ್ನು ಹಂಚುವುದಕ್ಕೆ ಸಂಬಂಧಪಟ್ಟಂತೆ, 327ನೆಯ ಅನುಚ್ಛೇದದ ಅಥವಾ 328ನೆಯ ಅನುಚ್ಛೇದದ ಮೇರೆಗೆ ಮಾಡಿದ ಅಥವಾ ಮಾಡಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾನೂನಿನ ಸಿಂಧುತ್ವವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ;

(ಬಿ) ಸಂಸತ್ತಿನ ಎರಡೂ ಸದನಗಳಿಗೆ ಅಥವಾ ಒಂದು ರಾಜ್ಯದ ವಿಧಾನಮಂಡಲದ ಸದನಕ್ಕೆ ಅಥವಾ ಎರಡೂ ಸದನಗಳಿಗೆ ನಡೆದ ಯಾವುದೇ ಚುನಾವಣೆಯನ್ನು ಸಮುಚಿತ ವಿಧಾನಮಂಡಲವು ಮಾಡಿದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನಿಗದಿಪಡಿಸಬಹುದಾದಂಥ ಪ್ರಾಧಿಕಾರಿಗೆ, ನಿಗದಿಪಡಿಸಬಹುದಾದಂಥ ರೀತಿಯಲ್ಲಿ ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸುವ ಮೂಲಕ ಹೊರತು ಪ್ರಶ್ನಿಸತಕ್ಕದ್ದಲ್ಲ.

[3]**329ಎ.** *[ಸಂಸತ್ತಿಗೆ ಪ್ರಧಾನ ಮಂತ್ರಿ ಮತ್ತು ಅಧ್ಯಕ್ಷರ ಚುನಾವಣೆಗೆ ಸಂಬಂಧಿಸಿದ ವಿಶೇಷ ಉಪಬಂಧ] 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 36ನೆಯ ಪ್ರಕರಣದ ಮೂಲಕ (20-6-79 ರಿಂದ ಜಾರಿಗೆ ಬರುವಂತೆ) ನಿರಸಿತವಾಗಿದೆ.*

---

1. 1975ನೇ ಇಸವಿಯ ಸಂವಿಧಾನ (ಮೂವತ್ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

2. 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 35ನೆಯ ಪ್ರಕರಣದ ಮೂಲಕ (20-6-79ರಿಂದ ಜಾರಿಗೆ ಬರುವಂತೆ) "ಆದರೆ 329ಎ ಅನುಚ್ಛೇದದ ಉಪಬಂಧಗಳಿಗೊಳಪಟ್ಟು" ಎಂಬ ಪದಗಳನ್ನು, ಅಂಕಿಗಳನ್ನು, ಅಕ್ಷರವನ್ನು ಬಿಟ್ಟುಬಿಡಲಾಗಿದೆ.

3. 1975 ನೆಯ ಇಸವಿಯ ಸಂವಿಧಾನ (ಮೂವತ್ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.

## ಭಾಗ - XVI

### ಕೆಲವು ವರ್ಗಗಳಿಗೆ ಸಂಬಂಧಪಟ್ಟ ವಿಶೇಷ ಉಪಬಂಧಗಳು

**330. ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಲೋಕಸಭೆಯಲ್ಲಿ ಸ್ಥಾನಗಳನ್ನು ಮೀಸಲಿಡುವುದು:-** (1) ಲೋಕಸಭೆಯಲ್ಲಿ,-

(ಎ) ಅನುಸೂಚಿತ ಜಾತಿಗಳಿಗೆ;

[1][(ಬಿ) ಅಸ್ಸಾಂನ ಸ್ವಾಯತ್ತ ಜಿಲ್ಲೆಗಳಲ್ಲಿನ ಅನುಸೂಚಿತ ಬುಡಕಟ್ಟುಗಳನ್ನು ಹೊರತುಪಡಿಸಿ ಇತರ ಅನುಸೂಚಿತ ಬುಡಕಟ್ಟುಗಳಿಗೆ; ಮತ್ತು]

(ಸಿ) ಅಸ್ಸಾಂನ ಸ್ವಾಯತ್ತ ಜಿಲ್ಲೆಗಳಲ್ಲಿರುವ ಅನುಸೂಚಿತ ಬುಡಕಟ್ಟುಗಳಿಗೆ

- ಸ್ಥಾನಗಳನ್ನು ಮೀಸಲಿಡತಕ್ಕದ್ದು.

(2) (1)ನೆಯ ಖಂಡದ ಮೇರೆಗೆ ಯಾವುದೇ ರಾಜ್ಯದಲ್ಲಿ [2][ಅಥವಾ ಒಕ್ಕೂಟ ರಾಜ್ಯಕ್ಷೇತ್ರ] ದಲ್ಲಿ ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟ ಸ್ಥಾನಗಳ ಸಂಖ್ಯೆಯು, ಯಾವ ರಾಜ್ಯ ಅಥವಾ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಸ್ಥಾನಗಳನ್ನು ಹಾಗೆ ಮೀಸಲಿಡಲಾಗಿದೆಯೋ ಆ ರಾಜ್ಯದಲ್ಲಿನ [2][ಅಥವಾ ಒಕ್ಕೂಟ ರಾಜ್ಯಕ್ಷೇತ್ರ]ದಲ್ಲಿನ ಅನುಸೂಚಿತ ಜಾತಿಗಳ ಅಥವಾ ಸಂದರ್ಭಾನುಸಾರ ಆ ರಾಜ್ಯದ [2][ಅಥವಾ ಒಕ್ಕೂಟ ರಾಜ್ಯಕ್ಷೇತ್ರ] ದಲ್ಲಿನ ಅಥವಾ ಆ ರಾಜ್ಯದ [2][ಅಥವಾ ಒಕ್ಕೂಟ ರಾಜ್ಯಕ್ಷೇತ್ರ]ದ ಭಾಗದಲ್ಲಿನ ಅನುಸೂಚಿತ ಬುಡಕಟ್ಟುಗಳ ಜನಸಂಖ್ಯೆಯು, ಆ ರಾಜ್ಯದಲ್ಲಿನ [2][ಅಥವಾ ಒಕ್ಕೂಟ ರಾಜ್ಯಕ್ಷೇತ್ರ]ದ ಒಟ್ಟು ಜನಸಂಖ್ಯೆಗೆ ಯಾವ ಪ್ರಮಾಣವನ್ನು ಹೊಂದಿದೆಯೋ, ಸಾಧ್ಯವಾದಷ್ಟು ಮಟ್ಟಿಗೆ ಲೋಕಸಭೆಯಲ್ಲಿ ಆ ರಾಜ್ಯಕ್ಕೆ [2][ಅಥವಾ ಒಕ್ಕೂಟ ರಾಜ್ಯಕ್ಷೇತ್ರಕ್ಕೆ] ಹಂಚಿಕೆ ಮಾಡಲಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಅದೇ ಪ್ರಮಾಣವನ್ನು ಹೊಂದಿರತಕ್ಕದ್ದು.

[3][(3) (2)ನೆಯ ಖಂಡದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಲೋಕಸಭೆಯಲ್ಲಿ ಅಸ್ಸಾಂ ರಾಜ್ಯದ ಸ್ವಾಯತ್ತ ಜಿಲ್ಲೆಗಳ ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟ ಸ್ಥಾನಗಳ ಸಂಖ್ಯೆಯು, ಆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಸದರಿ ಸ್ವಾಯತ್ತ ಜಿಲ್ಲೆಗಳಲ್ಲಿನ ಅನುಸೂಚಿತ ಬುಡಕಟ್ಟುಗಳ ಜನಸಂಖ್ಯೆಯು ಯಾವ ಪ್ರಮಾಣವನ್ನು ಹೊಂದಿದೆಯೋ ಆ ಪ್ರಮಾಣಕ್ಕೆ ಕಡಿಮೆಯಿಲ್ಲದ ಪ್ರಮಾಣವನ್ನು ಆ ರಾಜ್ಯಕ್ಕೆ ಹಂಚಿಕೆ ಮಾಡಲಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಹೊಂದಿರತಕ್ಕದ್ದು.]

[4][**ವಿವರಣೆ:-** ಈ ಅನುಚ್ಛೇದದಲ್ಲಿ ಮತ್ತು 332ನೆಯ ಅನುಚ್ಛೇದದಲ್ಲಿ "ಜನಸಂಖ್ಯೆ" ಎಂದರೆ ಯಾವ ಹಿಂದಿನ ಕೊನೆಯ ಜನಗಣತಿಯ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಜನಗಣತಿಯಲ್ಲಿ ಖಚಿತಪಡಿಸಿಕೊಂಡ ಜನಸಂಖ್ಯೆ:

ಪರಂತು, ಈ ವಿವರಣೆಯಲ್ಲಿ ಈ ಹಿಂದಿನ ಕೊನೆಯ ಜನಗಣತಿಯ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಜನಗಣತಿಗೆ ಮಾಡಿದ ಉಲ್ಲೇಖವನ್ನು [5][2026 ನೆಯ] ಇಸವಿಯ ತರುವಾಯ ಮೊದಲ ಸಲ ನಡೆಸಲಾಗುವ ಜನಗಣತಿಗೆ ಸಂಬಂಧಪಟ್ಟ ಅಂಕಿಗಳು ಪ್ರಕಟವಾಗುವವರೆಗೆ, [6][2001 ರ] ಜನಗಣತಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.]

---

1. 1984ನೆಯ ಇಸವಿಯ ಸಂವಿಧಾನ (ಐವತ್ತೊಂದನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (16.6.1986 ರಿಂದ ಜಾರಿಗೆ ಬರುವಂತೆ) (ಬಿ) ಉಪಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ ಸೇರಿಸಲಾಗಿದೆ.
3. 1973ನೆಯ ಇಸವಿಯ ಸಂವಿಧಾನ (ಮೂವತ್ತೊಂದನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
4. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 47ನೆಯ ಪ್ರಕರಣದ ಮೂಲಕ (ದಿನಾಂಕ 3-1-77 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
5. 2001 ನೇ ಇಸವಿಯ ಸಂವಿಧಾನ (ಎಂಬತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 6ನೆಯ ಪ್ರಕರಣದ ಮೂಲಕ ಅನುಕ್ರಮವಾಗಿ "2000ದ" ಮತ್ತು "1971ನೆಯ" ಎಂಬ ಅಂಕಿಗಳಿಗೆ ಮತ್ತು ಅಕ್ಷರಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
6. 2003 ನೇ ಇಸವಿಯ ಸಂವಿಧಾನ (ಎಂಬತ್ತೇಳನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ "1991 ರ" ಎಂಬ ಅಂಕಿಗಳಿಗೆ ಮತ್ತು ಅಕ್ಷರಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

**331. ಲೋಕಸಭೆಯಲ್ಲಿ ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ಪ್ರಾತಿನಿಧ್ಯ:-** 81ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ರಾಷ್ಟ್ರಪತಿಯು ಲೋಕಸಭೆಯಲ್ಲಿ ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ಸಾಕಷ್ಟು ಪ್ರಾತಿನಿಧ್ಯವಿಲ್ಲವೆಂದು ಅಭಿಪ್ರಾಯಪಟ್ಟರೆ, ಅವನು ಆ ಸಮುದಾಯದ ಇಬ್ಬರಿಗಿಂತ ಹೆಚ್ಚಿಲ್ಲದಷ್ಟು ಸಂಖ್ಯೆಯ ಸದಸ್ಯರನ್ನು ಲೋಕಸಭೆಗೆ ನಾಮನಿರ್ದೇಶನ ಮಾಡಬಹುದು.

**332. ರಾಜ್ಯಗಳ ವಿಧಾನ ಸಭೆಗಳಲ್ಲಿ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸ್ಥಾನಗಳನ್ನು ಮೀಸಲಿಡುವುದು:-** (1) [1]*** ಪ್ರತಿಯೊಂದು ರಾಜ್ಯದ ವಿಧಾನಸಭೆಯಲ್ಲಿ ಅನುಸೂಚಿತ ಜಾತಿಗಳಿಗೆ ಮತ್ತು [2][ಅಸ್ಸಾಂನ ಸ್ವಾಯತ್ತ ಜಿಲ್ಲೆಗಳಲ್ಲಿನ ಅನುಸೂಚಿತ ಬುಡಕಟ್ಟುಗಳನ್ನು ಹೊರತುಪಡಿಸಿ,] ಇತರ ಅನುಸೂಚಿತ ಬುಡಕಟ್ಟುಗಳಿಗೆ ಸ್ಥಾನಗಳನ್ನು ಮೀಸಲಿಡತಕ್ಕದ್ದು.

(2) ಅಸ್ಸಾಂ ರಾಜ್ಯದ ವಿಧಾನಸಭೆಯಲ್ಲಿ, ಸ್ವಾಯತ್ತ ಜಿಲ್ಲೆಗಳಿಗೂ ಸಹ ಸ್ಥಾನಗಳನ್ನು ಮೀಸಲಿಡತಕ್ಕದ್ದು.

(3) (1)ನೆಯ ಖಂಡದ ಮೇರೆಗೆ, ಯಾವುದೇ ರಾಜ್ಯದ ವಿಧಾನಸಭೆಯಲ್ಲಿ, ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟ ಸ್ಥಾನಗಳ ಸಂಖ್ಯೆಯು, ಆ ರಾಜ್ಯದಲ್ಲಿನ ಅನುಸೂಚಿತ ಜಾತಿಗಳ ಅಥವಾ ಸಂದರ್ಭಾನುಸಾರ ಆ ರಾಜ್ಯದಲ್ಲಿನ ಅಥವಾ ಆ ರಾಜ್ಯದ ಒಂದು ಭಾಗದಲ್ಲಿನ ಅನುಸೂಚಿತ ಬುಡಕಟ್ಟುಗಳ ಜನಸಂಖ್ಯೆಯು, ಆ ರಾಜ್ಯದ ಒಟ್ಟು ಜನಸಂಖ್ಯೆಗೆ ಯಾವ ಪ್ರಮಾಣವನ್ನು ಹೊಂದಿದೆಯೋ ಆದಷ್ಟು ಮಟ್ಟಿಗೆ ಅದೇ ಪ್ರಮಾಣವನ್ನು ಆ ವಿಧಾನಸಭೆಯಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಗೆ ಹೊಂದಿರತಕ್ಕದ್ದು.

[3][(3ಎ) (3)ನೇ ಖಂಡದಲ್ಲಿ ಏನೇ ಒಳಗೊಂಡಿದ್ದಾಗ್ಯೂ, [4][2026 ನೆಯ] ಇಸವಿಯ ತರುವಾಯ ನಡೆಸುವ ಮೊದಲ ಜನಗಣತಿಯ ಆಧಾರದ ಮೇಲೆ ಅರುಣಾಚಲ ಪ್ರದೇಶ, ಮೇಘಾಲಯ, ಮಿಜೋರಾಂ ಮತ್ತು ನಾಗಾಲ್ಯಾಂಡ್ ರಾಜ್ಯಗಳ ವಿಧಾನಸಭೆಗಳ ಸ್ಥಾನಗಳ ಸಂಖ್ಯೆಯ ಮರುಹೊಂದಾಣಿಕೆಯು 170ನೇ ಅನುಚ್ಛೇದದ ಮೇರೆಗೆ ಜಾರಿಗೆ ಬರುವವರೆಗೆ ಅಂಥ ಯಾವುದೇ ರಾಜ್ಯದ ವಿಧಾನಸಭೆಯಲ್ಲಿ,-

(ಎ) ಸಂವಿಧಾನದ (ಐವತ್ತೇಳನೇ ತಿದ್ದುಪಡಿ) ಅಧಿನಿಯಮ, 1987 ಜಾರಿಗೆ ಬರುವ ದಿನಾಂಕದಂದು ಅಸ್ತಿತ್ವದಲ್ಲಿರುವ ಅಂಥ ರಾಜ್ಯ ವಿಧಾನಸಭೆಯ (ಇಲ್ಲಿ ಇನ್ನು ಮುಂದೆ ಈ ಖಂಡದಲ್ಲಿ ಅಸ್ತಿತ್ವದಲ್ಲಿರುವ ವಿಧಾನಸಭೆಯೆಂದು ಉಲ್ಲೇಖಿಸಲಾಗಿದೆ) ಎಲ್ಲ ಸ್ಥಾನಗಳನ್ನು ಅನುಸೂಚಿತ ಬುಡಕಟ್ಟುಗಳ ಸದಸ್ಯರು ಧಾರಣ ಮಾಡಿದ್ದರೆ, ಒಂದು ಸ್ಥಾನವನ್ನು ಹೊರತುಪಡಿಸಿ ಇತರ ಎಲ್ಲ ಸ್ಥಾನಗಳನ್ನು ಅನುಸೂಚಿತ ಬುಡಕಟ್ಟುಗಳವರಿಗೆ ಮೀಸಲಿಡತಕ್ಕದ್ದು;

(ಬಿ) ಯಾವುದೇ ಇತರ ಸಂದರ್ಭದಲ್ಲಿ, (ಸದರಿ ದಿನಾಂಕದಂದು) ಅಸ್ತಿತ್ವದಲ್ಲಿರುವ ವಿಧಾನಸಭೆಯಲ್ಲಿ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸದಸ್ಯರ ಸಂಖ್ಯೆಯು, ಅಸ್ತಿತ್ವದಲ್ಲಿರುವ ವಿಧಾನಸಭೆಯಲ್ಲಿನ ಒಟ್ಟು ಸದಸ್ಯರ ಸಂಖ್ಯೆಗೆ ಯಾವ ಪ್ರಮಾಣವನ್ನು ಹೊಂದಿರುವುದೋ ಅದಕ್ಕೆ ಕಡಿಮೆ ಇಲ್ಲದ ಹಾಗೆ ಒಟ್ಟು ಸ್ಥಾನಗಳಿಗೆ ಅದಕ್ಕಿಂತ ಕಡಿಮೆ ಇಲ್ಲದಷ್ಟು ಪ್ರಮಾಣವನ್ನು ಹೊಂದಿರುವ ಸಂಖ್ಯೆಯ ಸ್ಥಾನಗಳನ್ನು ಅನುಸೂಚಿತ ಬುಡಕಟ್ಟುಗಳವರಿಗೆ ಮೀಸಲಿಡತಕ್ಕದ್ದು.]

[5][(3ಬಿ) (3)ನೇ ಖಂಡದಲ್ಲಿ ಏನೇ ಒಳಗೊಂಡಿದ್ದಾಗ್ಯೂ, [4][2026 ನೆಯ] ಇಸವಿಯ ತರುವಾಯ ನಡೆಸುವ ಮೊದಲನೆಯ ಜನಗಣತಿಯ ಆಧಾರದ ಮೇಲೆ ತ್ರಿಪುರಾ ರಾಜ್ಯದ ವಿಧಾನಸಭೆಯ ಸ್ಥಾನಗಳ ಸಂಖ್ಯೆಯ ಮರುಹೊಂದಾಣಿಕೆಯು 170ನೇ ಅನುಚ್ಛೇದದ ಮೇರೆಗೆ ಜಾರಿಗೆ ಬರುವವರೆಗೆ, ಆ ವಿಧಾನಸಭೆಯಲ್ಲಿ ಅನುಸೂಚಿತ

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಭಾಗದಲ್ಲಿ ಅಥವಾ (ಬಿ) ಭಾಗದಲ್ಲಿ ನಿರ್ದಿಷ್ಟಪಡಿಸಿದ" ಎಂಬುದನ್ನು ಬಿಟ್ಟುಬಿಡಲಾಗಿದೆ.
2. 1984ನೆಯ ಇಸವಿಯ ಸಂವಿಧಾನ (ಐವತ್ತೊಂದನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ (16.6.1986 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. 1987ನೆಯ ಇಸವಿಯ ಸಂವಿಧಾನ (ಐವತ್ತೇಳನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (21.9.1987 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
4. 2001ನೆಯ ಇಸವಿಯ ಸಂವಿಧಾನ (ಎಂಬತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 7ನೆಯ ಪ್ರಕರಣದ ಮೂಲಕ "2000 ದ" ಎಂಬ ಅಂಕಿಗಳಿಗೆ ಮತ್ತು ಅಕ್ಷರಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. 1992ನೆಯ ಇಸವಿಯ ಸಂವಿಧಾನ (ಎಪ್ಪತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (5.12.1992 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

ಬುಡಕಟ್ಟುಗಳಿಗೆ ಮೀಸಲಿಡತಕ್ಕ ಸ್ಥಾನಗಳು ಸಂವಿಧಾನ (ಎಪ್ಪತ್ತೆರಡನೇ ತಿದ್ದುಪಡಿ) ಅಧಿನಿಯಮ, 1992 ಇದು ಜಾರಿಗೆ ಬರುವ ದಿನಾಂಕದಂದು ಅಸ್ತಿತ್ವದಲ್ಲಿದ್ದ ವಿಧಾನಸಭೆಯ ಸದಸ್ಯರ ಒಟ್ಟು ಸಂಖ್ಯೆಗೆ ಯಾವ ಪ್ರಮಾಣದಲ್ಲಿ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸದಸ್ಯರ ಸ್ಥಾನಗಳು ಇದ್ದವೋ ಆ ಪ್ರಮಾಣಕ್ಕೆ ಕಡಿಮೆ ಇಲ್ಲದಷ್ಟು ಇರತಕ್ಕದ್ದು.]

(4) ಅಸ್ಸಾಂ ರಾಜ್ಯದ ವಿಧಾನಸಭೆಯಲ್ಲಿ, ಸ್ವಾಯತ್ತ ಜಿಲ್ಲೆಗೆ ಕಾಯ್ದಿರಿಸಿದ ಸ್ಥಾನಗಳ ಸಂಖ್ಯೆಯು, ಆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಆ ಜಿಲ್ಲೆಯ ಜನಸಂಖ್ಯೆಯು ಯಾವ ಪ್ರಮಾಣವನ್ನು ಹೊಂದಿದೆಯೋ ಆ ಪ್ರಮಾಣಕ್ಕೆ ಕಡಿಮೆಯಿಲ್ಲದಷ್ಟು ಪ್ರಮಾಣವನ್ನು ಆ ವಿಧಾನಸಭೆಯಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಹೊಂದಿರತಕ್ಕದ್ದು.

(5) ಅಸ್ಸಾಂನ ಯಾವುದೇ ಸ್ವಾಯತ್ತ ಜಿಲ್ಲೆಗೆ ಮೀಸಲಿಟ್ಟ ಸ್ಥಾನಗಳಿಗಾಗಿ ಇರುವ ಚುನಾವಣಾ ಕ್ಷೇತ್ರಗಳು [1]*** ಆ ಜಿಲ್ಲೆಯ ಹೊರಗಿನ ಯಾವುದೇ ಪ್ರದೇಶವನ್ನು ಒಳಗೊಂಡಿರತಕ್ಕದ್ದಲ್ಲ.

(6) ಅಸ್ಸಾಂ ರಾಜ್ಯದ ಯಾವುದೇ ಸ್ವಾಯತ್ತ ಜಿಲ್ಲೆಯ ಅನುಸೂಚಿತ ಬುಡಕಟ್ಟಿಗೆ ಸೇರಿರದ ಯಾರೇ ವ್ಯಕ್ತಿಯು [1]*** ಆ ಜಿಲ್ಲೆಯ ಯಾವುದೇ ಚುನಾವಣಾ ಕ್ಷೇತ್ರದಿಂದ ಆ ರಾಜ್ಯದ ವಿಧಾನಸಭೆಗೆ ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ :

[2][ಪರಂತು, ಅಸ್ಸಾಂ ರಾಜ್ಯದ ವಿಧಾನ ಸಭೆಗೆ ಚುನಾವಣೆಗಳಿಗಾಗಿ, ಬೋಡೋಲ್ಯಾಂಡ್ ಪ್ರಾದೇಶಿಕ ಕ್ಷೇತ್ರಗಳ ಜಿಲ್ಲೆಯಲ್ಲಿ ಒಳಗೊಂಡಿರುವ ಚುನಾವಣಾ ಕ್ಷೇತ್ರಗಳಲ್ಲಿ ಅನುಸೂಚಿತ ಬುಡಕಟ್ಟುಗಳ ಮತ್ತು ಅನುಸೂಚಿತವಲ್ಲದ ಬುಡಕಟ್ಟುಗಳ ಪ್ರಾತಿನಿಧ್ಯವನ್ನು, ಬೋಡೋಲ್ಯಾಂಡ್ ಪ್ರಾದೇಶಿಕ ಕ್ಷೇತ್ರಗಳ ಜಿಲ್ಲೆಯನ್ನು ರಚಿಸುವ ಪೂರ್ವದಲ್ಲಿ ಹಾಗೆ ಅಧಿಸೂಚಿಸಿದ್ದಂಥ ಮತ್ತು ಅಸ್ತಿತ್ವದಲ್ಲಿದ್ದಂಥ ರೀತಿಯಲ್ಲಿಯೇ ನಿರ್ವಹಿಸಿಕೊಂಡು ಬರತಕ್ಕದ್ದು.]

**333. ರಾಜ್ಯಗಳ ವಿಧಾನಸಭೆಗಳಲ್ಲಿ ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ಪ್ರಾತಿನಿಧ್ಯ:-** 170ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ಒಂದು ರಾಜ್ಯದ ರಾಜ್ಯಪಾಲನು [3]*** ಆ ರಾಜ್ಯದ ವಿಧಾನಸಭೆಯಲ್ಲಿ ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ಪ್ರಾತಿನಿಧ್ಯವು ಅವಶ್ಯವೆಂದು ಮತ್ತು ಆ ಸಭೆಯಲ್ಲಿ ಅದಕ್ಕೆ ಸಾಕಷ್ಟು ಪ್ರಾತಿನಿಧ್ಯವಿಲ್ಲವೆಂದು ಅಭಿಪ್ರಾಯಪಟ್ಟರೆ ಅವನು [4][ಆ ಸಮುದಾಯದ ಒಬ್ಬ ಸದಸ್ಯನನ್ನು ವಿಧಾನಸಭೆಗೆ ನಾಮನಿರ್ದೇಶನ ಮಾಡಬಹುದು.]

**334. ಸ್ಥಾನಗಳನ್ನು ಮೀಸಲಿಡುವುದು ಮತ್ತು ವಿಶೇಷ ಪ್ರಾತಿನಿಧ್ಯವು [5][ಎಪ್ಪತ್ತು ವರ್ಷಗಳ] ನಂತರ ನಿಂತುಹೋಗತಕ್ಕದ್ದು:-** ಈ ಭಾಗದಲ್ಲಿ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದಾಗ್ಯೂ-

(ಎ) ಲೋಕಸಭೆಯಲ್ಲಿ ಮತ್ತು ರಾಜ್ಯಗಳ ವಿಧಾನ ಸಭೆಗಳಲ್ಲಿ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸ್ಥಾನಗಳನ್ನು ಮೀಸಲಿಡುವುದಕ್ಕೆ ಸಂಬಂಧಪಟ್ಟಂತೆ; ಮತ್ತು

(ಬಿ) ಲೋಕಸಭೆಯಲ್ಲಿ ಮತ್ತು ರಾಜ್ಯಗಳ ವಿಧಾನ ಸಭೆಗಳಲ್ಲಿ ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ನಾಮ ನಿರ್ದೇಶನದ ಮೂಲಕ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಸಂಬಂಧಪಟ್ಟಂತೆ

- ಈ ಸಂವಿಧಾನದ ಉಪಬಂಧಗಳು, ಈ ಸಂವಿಧಾನವು ಪ್ರಾರಂಭವಾದಾಗಿನಿಂದ [5][ಎಪ್ಪತ್ತು ವರ್ಷಗಳ] ಅವಧಿಯು ಮುಕ್ತಾಯವಾದ ಅನಂತರ ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು:

ಪರಂತು, ಈ ಅನುಚ್ಛೇದದಲ್ಲಿ ಇರುವುದು ಯಾವುದೂ ಆಗ ಅಸ್ತಿತ್ವದಲ್ಲಿರುವಂಥ ಲೋಕಸಭೆಯು ಅಥವಾ ಒಂದು ರಾಜ್ಯದ ವಿಧಾನ ಸಭೆಯು ವಿಸರ್ಜನೆಯಾಗುವವರೆಗೆ ಲೋಕಸಭೆಯಲ್ಲಿನ ಅಥವಾ ಸಂದರ್ಭಾನುಸಾರ ಆ ವಿಧಾನ ಸಭೆಯಲ್ಲಿನ ಯಾವುದೇ ಪ್ರಾತಿನಿಧ್ಯಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

---

1. 1971ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ರಚನೆಯ) ಅಧಿನಿಯಮದ (1971ರ 81) 71ನೆಯ ಪ್ರಕರಣದ ಮೇರೆಗೆ (21-1-1972ರಿಂದ ಜಾರಿಗೆ ಬರುವಂತೆ) ಕೆಲವು ಪದಗಳನ್ನು ಬಿಟ್ಟುಬಿಡಲಾಗಿದೆ.
2. 2003 ನೆಯ ಇಸವಿಯ ಸಂವಿಧಾನ (ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
3. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
4. 1969ನೆಯ ಇಸವಿಯ ಸಂವಿಧಾನ (ಇಪ್ಪತ್ತಮೂರನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ "ತಾನು ಸಮುಚಿತವೆಂದು ಪರ್ಯಾಲೋಚಿಸುವಂಥ ಸಂಖ್ಯೆಯ ಆ ಸಮುದಾಯದ ಸದಸ್ಯರನ್ನು ವಿಧಾನಸಭೆಗೆ ನಾಮನಿರ್ದೇಶಿಸಬಹುದು" ಎಂಬ ಪದಗಳ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. 2009ನೆಯ ಇಸವಿಯ ಸಂವಿಧಾನ (ತೊಂಬತ್ತೈದನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ "ಅರವತ್ತು ವರ್ಷಗಳ" ಎಂಬ ಪದಗಳಿಗೆ ಬದಲಾಗಿ 25-1-2010 ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

**335. ಸೇವೆಗಳಿಗೆ ಮತ್ತು ಹುದ್ದೆಗಳಿಗೆ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಕ್ಲೇಮುಗಳು:–** ಒಕ್ಕೂಟದ ಅಥವಾ ಒಂದು ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದ ಸೇವೆಗಳಿಗೆ ಮತ್ತು ಹುದ್ದೆಗಳಿಗೆ ನೇಮಕಗಳನ್ನು ಮಾಡುವ ಸಂಬಂಧದಲ್ಲಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಕ್ಲೇಮುಗಳನ್ನು, ಆಡಳಿತ ದಕ್ಷತೆಯನ್ನು ಕಾಪಾಡಿಕೊಂಡು ಬರುವುದಕ್ಕೆ ಸುಸಂಗತವಾಗಿರುವಂತೆ, ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕದ್ದು:

[1][ಪರಂತು, ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಒಕ್ಕೂಟದ ಅಥವಾ ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದ ಸೇವೆಗಳ ಅಥವಾ ಹುದ್ದೆಗಳ ಯಾವುದೇ ವರ್ಗಕ್ಕೆ ಅಥವಾ ವರ್ಗಗಳಿಗೆ ಬಡ್ತಿ ವಿಷಯಗಳಲ್ಲಿ ಮೀಸಲಾತಿಗಾಗಿ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಅನುಕೂಲವಾಗುವಂತೆ ಯಾವುದೇ ಪರೀಕ್ಷೆಯಲ್ಲಿ ಅರ್ಹತಾದಾಯಕ ಅಂಕಗಳನ್ನು ಸಡಿಲಿಸಲು ಅಥವಾ ಮೌಲ್ಯಮಾಪನದ ಮಾನಕಗಳನ್ನು ತಗ್ಗಿಸಲು ಯಾವುದೇ ಉಪಬಂಧ ಮಾಡುವುದನ್ನು ಪ್ರತಿಬಂಧಿಸತಕ್ಕದ್ದಲ್ಲ.]

**336. ಕೆಲವು ಸೇವೆಗಳಲ್ಲಿ ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ವಿಶೇಷ ಉಪಬಂಧ:–** (1) ಈ ಸಂವಿಧಾನವು ಪ್ರಾರಂಭವಾದ ತರುವಾಯ, ಮೊದಲಿನ ಎರಡು ವರ್ಷಗಳಲ್ಲಿ ಒಕ್ಕೂಟದ ರೈಲ್ವೆ, ಕಸ್ಟಮ್ಸ್, ಅಂಚೆ ಮತ್ತು ತಂತಿ ಸೇವೆಗಳ ಹುದ್ದೆಗಳಿಗೆ ಆಂಗ್ಲೋ-ಇಂಡಿಯನ್ ಸಮುದಾಯದ ಸದಸ್ಯರ ನೇಮಕಗಳನ್ನು, 1947ನೆಯ ಇಸವಿ ಆಗಸ್ಟ್ ಹದಿನೈದನೆಯ ದಿನಾಂಕಕ್ಕೆ ನಿಕಟಪೂರ್ವದಲ್ಲಿದ್ದಂತಹ ಆಧಾರದ ಮೇಲೆಯೇ ಮಾಡತಕ್ಕದ್ದು.

ಆ ತರುವಾಯದ ಪ್ರತಿ ಎರಡು ವರ್ಷಗಳ ಅವಧಿಯಲ್ಲಿ ಸದರಿ ಸೇವೆಗಳಲ್ಲಿ ಆ ಸಮುದಾಯದ ಪಂಗಡದ ಸದಸ್ಯರಿಗೆ ಮೀಸಲಿಟ್ಟ ಹುದ್ದೆಗಳ ಸಂಖ್ಯೆಯು, ಆ ಅವಧಿಗೆ ನಿಕಟಪೂರ್ವದ ಎರಡು ವರ್ಷಗಳ ಅವಧಿಯಲ್ಲಿ, ಹಾಗೆ ಮೀಸಲಿಟ್ಟ ಹುದ್ದೆಗಳ ಸಂಖ್ಯೆಗಿಂತ ಸಾಧ್ಯವಾದಷ್ಟು ಮಟ್ಟಿಗೆ ಶೇಕಡಾ ಹತ್ತರಷ್ಟು ಕಡಿಮೆಯಾಗಿರತಕ್ಕದ್ದು:

ಪರಂತು, ಈ ಸಂವಿಧಾನವು ಪ್ರಾರಂಭವಾದಾಗಿನಿಂದ ಹತ್ತು ವರ್ಷಗಳ ಕೊನೆಯಲ್ಲಿ, ಆ ಎಲ್ಲ ಮೀಸಲಾತಿಗಳು ನಿಂತುಹೋಗತಕ್ಕದ್ದು.

(2) (1)ನೆಯ ಖಂಡದಲ್ಲಿ ಇರುವುದು ಯಾವುದೂ, ಇತರ ಸಮುದಾಯಗಳ ಸದಸ್ಯರಿಗೆ ಹೋಲಿಸಿದಾಗ ಆಂಗ್ಲೋ-ಇಂಡಿಯನ್ ಸಮುದಾಯದ ಸದಸ್ಯರು ಯೋಗ್ಯತೆಯ ಆಧಾರದ ಮೇಲೆ ನೇಮಕಗೊಳ್ಳಲು ಅರ್ಹರಾಗಿರುವುದಾಗಿ ಕಂಡುಬಂದರೆ, ಅವರನ್ನು (1)ನೆಯ ಖಂಡದ ಮೇರೆಗೆ ಆ ಸಮುದಾಯಕ್ಕೆ ಮೀಸಲಿಟ್ಟ ಹುದ್ದೆಗಳಲ್ಲದ ಇತರ ಹುದ್ದೆಗಳಿಗೆ ಅಥವಾ ಮೀಸಲಿಟ್ಟ ಹುದ್ದೆಗಳ ಜೊತೆಗೆ ಇತರ ಹುದ್ದೆಗಳಿಗೆ ನೇಮಕ ಮಾಡುವುದನ್ನು ಪ್ರತಿಷೇಧಿಸತಕ್ಕದ್ದಲ್ಲ.

**337. ಆಂಗ್ಲೋ-ಇಂಡಿಯನ್ ಸಮುದಾಯದ ಪ್ರಯೋಜನಕ್ಕಾಗಿ ಶೈಕ್ಷಣಿಕ ಅನುದಾನಗಳ ಬಗ್ಗೆ ವಿಶೇಷ ಉಪಬಂಧ:–** 1948ನೇ ಇಸವಿ ಮಾರ್ಚ್ ಮೂವತ್ತೊಂದನೆಯ ದಿನದಂದು ಮುಕ್ತಾಯವಾಗುವ ಹಣಕಾಸು ವರ್ಷದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆಂಗ್ಲೋ-ಇಂಡಿಯನ್ ಸಮುದಾಯದ ಪ್ರಯೋಜನಕ್ಕಾಗಿ ಕೊಡಲಾಗಿದ್ದಂಥವೇ ಅನುದಾನಗಳನ್ನು ಒಕ್ಕೂಟವು ಮತ್ತು [2] * * * ಪ್ರತಿಯೊಂದು ರಾಜ್ಯವು ಈ ಸಂವಿಧಾನವು ಪ್ರಾರಂಭವಾದ ಮೇಲೆ ಮೊದಲ ಮೂರು ಹಣಕಾಸು ವರ್ಷಗಳ ಅವಧಿಯಲ್ಲಿ ಕೊಡತಕ್ಕದ್ದು.

ಆ ತರುವಾಯದ ಪ್ರತಿ ತ್ರೈವಾರ್ಷಿಕ ಅವಧಿಯಲ್ಲಿ, ಅದಕ್ಕೆ ನಿಕಟಪೂರ್ವದ ತ್ರೈವಾರ್ಷಿಕ ಅವಧಿಯಲ್ಲಿ ಕೊಡಲಾಗಿದ್ದ ಅನುದಾನಗಳಿಗಿಂತ ಶೇಕಡ ಹತ್ತರಷ್ಟು ಕಡಿಮೆ ಅನುದಾನಗಳನ್ನು ಕೊಡಬಹುದು:

ಪರಂತು, ಈ ಸಂವಿಧಾನದ ಪ್ರಾರಂಭದಿಂದ ಹತ್ತು ವರ್ಷಗಳ ಕೊನೆಯಲ್ಲಿ, ಅಂಥ ಅನುದಾನಗಳು, ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ವಿಶೇಷ ರಿಯಾಯಿತಿಯಾಗಿರುವಷ್ಟರ ಮಟ್ಟಿಗೆ, ಅವು ನಿಂತುಹೋಗತಕ್ಕದ್ದು:

---

1. 2000ದ ಇಸವಿಯ ಸಂವಿಧಾನ (ಎಂಬತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (8.9.2000 ದಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1956 ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಭಾಗದಲ್ಲಿ ಅಥವಾ (ಬಿ) ಭಾಗದಲ್ಲಿ ನಿರ್ದಿಷ್ಟಪಡಿಸಿರತಕ್ಕ" ಎಂಬ ಪದಗಳನ್ನು, ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.

ಮತ್ತೂ ಪರಂತು, ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಪ್ರತಿಯೊಂದು ವರ್ಷದ ಪ್ರವೇಶಗಳಲ್ಲಿ ಕನಿಷ್ಠ ಪಕ್ಷ ಶೇಕಡ ನಲವತ್ತರಷ್ಟು ಪ್ರವೇಶಗಳು ಆಂಗ್ಲೋ-ಇಂಡಿಯನ್ ಸಮುದಾಯವನ್ನು ಬಿಟ್ಟು ಇತರ ಸಮುದಾಯಗಳ ಸದಸ್ಯರಿಗೆ ಲಭ್ಯವಾಗುವಂತೆ ಮಾಡಿದ ಹೊರತು, ಅಂಥ ಯಾವುದೇ ಶಿಕ್ಷಣ ಸಂಸ್ಥೆಯು, ಈ ಅನುಚ್ಛೇದದ ಮೇರೆಗೆ ಯಾವುದೇ ಅನುದಾನವನ್ನು ಪಡೆಯಲು ಹಕ್ಕು ಹೊಂದಿರತಕ್ಕದ್ದಲ್ಲ.

**338.** [1][**ಅನುಸೂಚಿತ ಜಾತಿಗಳ ರಾಷ್ಟ್ರೀಯ ಆಯೋಗ:–**] [2][(1) ಅನುಸೂಚಿತ ಜಾತಿಗಳಿಗಾಗಿ ಅನುಸೂಚಿತ ಜಾತಿಗಳ ರಾಷ್ಟ್ರೀಯ ಆಯೋಗ ಎಂದು ಕರೆಯಲಾಗುವ ಒಂದು ಆಯೋಗವು ಇರತಕ್ಕದ್ದು.

(2) ಸಂಸತ್ತು ಈ ಬಗ್ಗೆ ರಚಿಸಿದ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು, ಆಯೋಗವು ಒಬ್ಬ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಮೂವರು ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ಹಾಗೆ ನೇಮಕಗೊಂಡ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರ ಸೇವಾ ಷರತ್ತುಗಳು ಮತ್ತು ಅವರ ಪದಾವಧಿಯ ರಾಷ್ಟ್ರಪತಿಯು ನಿಯಮದ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕದ್ದು.]

(3) ಆಯೋಗದ ಅಧ್ಯಕ್ಷನನ್ನು, ಉಪಾಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ರಾಷ್ಟ್ರಪತಿಯು, ತಾನು ಸಹಿಮಾಡಿ, ಮೊಹರು ಹಾಕಿದ ವಾರಂಟಿನ ಮೂಲಕ ನೇಮಕ ಮಾಡತಕ್ಕದ್ದು.

(4) ಆಯೋಗವು ತನ್ನದೇ ಆದ ಪ್ರಕ್ರಿಯೆಯನ್ನು ವಿನಿಯಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(5) ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವುದು ಆಯೋಗದ ಕರ್ತವ್ಯವಾಗಿರತಕ್ಕದ್ದು, ಎಂದರೆ:–

(ಎ) ಈ ಸಂವಿಧಾನದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅಥವಾ ಸರ್ಕಾರದ ಯಾವುದೇ ಆದೇಶದ ಮೇರೆಗೆ ಅನುಸೂಚಿತ ಜಾತಿಗಳಿಗೆ [3]* * * ಒದಗಿಸಿರುವ ರಕ್ಷಣೆಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಬಗ್ಗೆ ತನಿಖೆ ಮಾಡುವುದು ಮತ್ತು ಮೇಲ್ವಿಚಾರಣೆ ನಡೆಸುವುದು ಹಾಗೂ ಅಂಥ ರಕ್ಷಣಾ ಕ್ರಮಗಳ ಅನುಷ್ಠಾನದ ಮೌಲ್ಯಮಾಪನ ಮಾಡುವುದು;

(ಬಿ) ಅನುಸೂಚಿತ ಜಾತಿಗಳಿಗೆ [3]* * * ಹಕ್ಕುಗಳನ್ನು ಮತ್ತು ರಕ್ಷಣಾ ಕ್ರಮಗಳನ್ನು ತಪ್ಪಿಸುವುದಕ್ಕೆ ಸಂಬಂಧಿಸಿದ ನಿರ್ದಿಷ್ಟ ದೂರುಗಳ ಬಗ್ಗೆ ವಿಚಾರಣೆ ನಡೆಸುವುದು;

(ಸಿ) ಅನುಸೂಚಿತ ಜಾತಿಗಳ [3]* * * ಸಾಮಾಜಿಕ – ಆರ್ಥಿಕ ಅಭಿವೃದ್ಧಿಯ ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಮತ್ತು ಆ ಕುರಿತು ಸಲಹೆ ನೀಡುವುದು ಹಾಗೂ ಅವರ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಒಕ್ಕೂಟವು ಮತ್ತು ಯಾವುದೇ ರಾಜ್ಯವು ಕೈಗೊಂಡ ಅಭಿವೃದ್ಧಿ ಕ್ರಮಗಳ ಪ್ರಗತಿಯ ಮೌಲ್ಯಮಾಪನ ಮಾಡುವುದು;

(ಡಿ) ರಕ್ಷಣಾ ಕ್ರಮಗಳ ಅನುಷ್ಠಾನ ಕುರಿತು ವರದಿಗಳನ್ನು ಪ್ರತಿವರ್ಷ ಮತ್ತು ಆಯೋಗವು ಸೂಕ್ತವೆಂದು ಭಾವಿಸಬಹುದಾದಂಥ ಇತರ ಕಾಲಗಳಲ್ಲಿ ರಾಷ್ಟ್ರಪತಿಗೆ ಸಲ್ಲಿಸುವುದು;

(ಇ) ಆ ರಕ್ಷಣಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದಕ್ಕಾಗಿ ಒಕ್ಕೂಟವು ಅಥವಾ ಯಾವುದೇ ರಾಜ್ಯವು ಕೈಗೊಳ್ಳಬೇಕಾದ ಕ್ರಮಗಳ ಮತ್ತು ಅನುಸೂಚಿತ ಜಾತಿಗಳವರ [4]* * * ಸಂರಕ್ಷಣೆ, ಕಲ್ಯಾಣ ಮತ್ತು ಸಾಮಾಜಿಕ-ಆರ್ಥಿಕ ಅಭಿವೃದ್ಧಿಗಾಗಿ ಇತರ ಕ್ರಮಗಳ ಬಗ್ಗೆ ಅಂಥ ವರದಿಗಳಲ್ಲಿ ಶಿಫಾರಸ್ಸು ಮಾಡುವುದು; ಮತ್ತು

---

1. 2003 ನೆಯ ಇಸವಿಯ ಸಂವಿಧಾನ (ಎಂಬತ್ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಅಂಚಿನಲ್ಲಿನ ಶೀರ್ಷಿಕೆಯ ಬದಲಾಗಿ (19.2.2004 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಅದೇ ಅಧಿನಿಯಮದ 2ನೆಯ ಪ್ರಕರಣದ ಮೂಲಕ (1) ಮತ್ತು (2) ನೆಯ ಖಂಡಗಳ ಬದಲಾಗಿ (19.2.2004 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. ಅದೇ ಅಧಿನಿಯಮದ 2ನೆಯ ಪ್ರಕರಣದ ಮೂಲಕ "ಮತ್ತು ಅನುಸೂಚಿತ ಬುಡಕಟ್ಟು" ಎಂಬ ಪದಗಳನ್ನು (19.2.2004 ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
4. 2003 ನೆಯ ಇಸವಿಯ ಸಂವಿಧಾನ (ಎಂಬತ್ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ "ಮತ್ತು ಅನುಸೂಚಿತ ಬುಡಕಟ್ಟುಗಳವರ" ಎಂಬ ಪದಗಳನ್ನು (19.2.2004 ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.

(ಎಫ್) ಸಂಸತ್ತು ರಚಿಸಿದ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು ಅನುಸೂಚಿತ ಜಾತಿಗಳವರ [1]* * * ಸಂರಕ್ಷಣೆ, ಕಲ್ಯಾಣ ಮತ್ತು ಅಭಿವೃದ್ಧಿ ಹಾಗೂ ಪ್ರಗತಿಗೆ ಸಂಬಂಧಿಸಿದಂಥ ಇತರ ಪ್ರಕಾರ್ಯಗಳನ್ನು ರಾಷ್ಟ್ರಪತಿಯು ನಿಯಮದ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ನೆರವೇರಿಸುವುದು.

(6) ರಾಷ್ಟ್ರಪತಿಯು, ಒಕ್ಕೂಟಕ್ಕೆ ಸಂಬಂಧಿಸಿದ ಶಿಫಾರಸ್ಸುಗಳ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮವನ್ನು ಮತ್ತು ಅಂಥ ಶಿಫಾರಸ್ಸುಗಳಲ್ಲಿ ಯಾವುದೇ ಶಿಫಾರಸನ್ನು ಅಂಗೀಕರಿಸದಿರುವುದಕ್ಕೆ ಕಾರಣಗಳಾವುವಾದರೂ ಇದ್ದರೆ ಅವುಗಳನ್ನು ವಿವರಿಸುವ ವಿವರಣ ಪತ್ರದೊಂದಿಗೆ ಅಂಥ ಎಲ್ಲಾ ವರದಿಗಳನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

(7) ಅಂಥ ಯಾವುದೇ ವರದಿಯು ಅಥವಾ ಅದರ ಯಾವುದೇ ಭಾಗವು, ಯಾವುದೇ ರಾಜ್ಯ ಸರ್ಕಾರದ ಯಾವುದೇ ವಿಷಯಕ್ಕೆ ಸಂಬಂಧಿಸಿರುವಲ್ಲಿ, ಅಂಥ ವರದಿಯ ಒಂದು ಪ್ರತಿಯನ್ನು ಆ ರಾಜ್ಯದ ರಾಜ್ಯಪಾಲನಿಗೆ ಕಳುಹಿಸತಕ್ಕದ್ದು ಮತ್ತು ಅವನು, ರಾಜ್ಯಕ್ಕೆ ಸಂಬಂಧಿಸಿದ ಶಿಫಾರಸುಗಳ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮವನ್ನು ಮತ್ತು ಅಂಥ ಶಿಫಾರಸುಗಳಲ್ಲಿ ಯಾವುದೇ ಶಿಫಾರಸನ್ನು ಅಂಗೀಕರಿಸದಿರುವುದಕ್ಕೆ ಕಾರಣಗಳಾವುವಾದರೂ ಇದ್ದರೆ ಅವುಗಳನ್ನು ವಿವರಿಸುವ ವಿವರಣ ಪತ್ರದೊಂದಿಗೆ ಅಂಥ ವರದಿಯನ್ನು ರಾಜ್ಯ ವಿಧಾನಮಂಡಲದ ಮುಂದೆ ಇಡುವಂತೆ ಮಾಡತಕ್ಕದ್ದು.

(8) ಆಯೋಗವು, (5)ನೆಯ ಖಂಡದ (ಎ) ಉಪಖಂಡದಲ್ಲಿ ಉಲ್ಲೇಖಿಸಿದ ಯಾವುದೇ ವಿಷಯದ ಬಗ್ಗೆ ತನಿಖೆ ಮಾಡುವಾಗ ಅಥವಾ (ಬಿ) ಉಪಖಂಡದಲ್ಲಿ ಉಲ್ಲೇಖಿಸಿದ ಯಾವುದೇ ದೂರಿನ ಬಗ್ಗೆ ವಿಚಾರಣೆ ನಡೆಸುವಾಗ, ದಾವೆಯ ಅಧಿವಿಚಾರಣೆ ನಡೆಸುವ ಸಿವಿಲ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು, ವಿಶೇಷವಾಗಿ ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಹೊಂದಿರತಕ್ಕದ್ದು, ಎಂದರೆ:-

(ಎ) ಭಾರತದ ಯಾವುದೇ ಭಾಗದಿಂದ ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಹಾಜರಾಗುವಂತೆ ಒತ್ತಾಯಿಸುವುದು ಹಾಗೂ ಪ್ರಮಾಣ ಮಾಡಿಸಿ ವಿಚಾರಣೆ ಮಾಡುವುದು;

(ಬಿ) ಯಾವುದೇ ದಸ್ತಾವೇಜನ್ನು ಪತ್ತೆಹಚ್ಚುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರ ವಿಚಾರಣೆ ನಡೆಸುವುದಕ್ಕಾಗಿ ಮತ್ತು ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಕಮಿಷನುಗಳನ್ನು ಹೊರಡಿಸುವುದು;

(ಎಫ್) ರಾಷ್ಟ್ರಪತಿಯು ನಿಯಮದ ಮೂಲಕ ನಿರ್ಧರಿಸಬಹುದಾದಂಥ ಯಾವುದೇ ಇತರ ವಿಷಯ.

(9) ಒಕ್ಕೂಟವು ಮತ್ತು ಪ್ರತಿಯೊಂದು ರಾಜ್ಯ ಸರ್ಕಾರವು, ಅನುಸೂಚಿತ ಜಾತಿಗಳವರ [1]* * * ಮೇಲೆ ಪರಿಣಾಮ ಬೀರುವ ಎಲ್ಲಾ ಮಹತ್ವಪೂರ್ಣ ಕಾರ್ಯನೀತಿಯ ವಿಷಯಗಳನ್ನು ಕುರಿತು ಆಯೋಗದೊಡನೆ ಸಮಾಲೋಚಿಸತಕ್ಕದ್ದು.]

[2][(10)] ಈ ಅನುಚ್ಛೇದದಲ್ಲಿ, ಅನುಸೂಚಿತ ಜಾತಿಗಳಿಗೆ [1]* * * ಸಂಬಂಧಪಟ್ಟಂತೆ ಮಾಡಿದ ಉಲ್ಲೇಖಗಳು, 340ನೆಯ ಅನುಚ್ಛೇದದ (1)ನೆಯ ಖಂಡದ ಮೇರೆಗೆ ನೇಮಕಗೊಂಡ ಆಯೋಗವು ನೀಡಿದ ವರದಿಯು ತಲುಪಿದ ತರುವಾಯ ರಾಷ್ಟ್ರಪತಿಯು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಹಿಂದುಳಿದ ವರ್ಗಗಳಿಗೆ ಮತ್ತು ಆಂಗ್ಲೋ-ಇಂಡಿಯನ್ ಸಮುದಾಯಕ್ಕೆ ಸಂಬಂಧಪಟ್ಟಂತೆ ಮಾಡಿದ ಉಲ್ಲೇಖಗಳನ್ನು ಒಳಗೊಂಡಿರುವಂತೆ ಅವುಗಳನ್ನು ಅರ್ಥೈಸತಕ್ಕದ್ದು.

---

1. 2003 ನೆಯ ಇಸವಿಯ ಸಂವಿಧಾನ (ಎಂಬತ್ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ "ಮತ್ತು ಅನುಸೂಚಿತ ಬುಡಕಟ್ಟು" ಎಂಬ ಪದಗಳನ್ನು (19.2.2004 ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
2. 1990ನೆಯ ಇಸವಿಯ ಸಂವಿಧಾನ (ಅರವತ್ತೈದನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (3)ನೇ ಖಂಡವನ್ನು (10)ನೇ ಖಂಡವೆಂದು (12.03.1992 ರಿಂದ ಜಾರಿಗೆ ಬರುವಂತೆ) ಪುನರ್ ಸಂಖ್ಯೆ ನೀಡಲಾಗಿದೆ.

[1][338ಎ. ಅನುಸೂಚಿತ ಬುಡಕಟ್ಟುಗಳ ರಾಷ್ಟ್ರೀಯ ಆಯೋಗ:– (1) ಅನುಸೂಚಿತ ಬುಡಕಟ್ಟುಗಳಿಗಾಗಿ ಅನುಸೂಚಿತ ಬುಡಕಟ್ಟುಗಳ ರಾಷ್ಟ್ರೀಯ ಆಯೋಗ ಎಂದು ಕರೆಯಲಾಗುವ ಒಂದು ಆಯೋಗವು ಇರತಕ್ಕದ್ದು.

(2) ಸಂಸತ್ತು ಈ ಬಗ್ಗೆ ರಚಿಸಿದ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು, ಆಯೋಗವು ಒಬ್ಬ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಮೂವರು ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ಹಾಗೆ ನೇಮಕಗೊಂಡ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇತರ ಸದಸ್ಯರ ಸೇವಾ ಷರತ್ತುಗಳು ಮತ್ತು ಅವರ ಪದಾವಧಿಯು ರಾಷ್ಟ್ರಪತಿಯು ನಿಯಮದ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕದ್ದು.

(3) ಆಯೋಗದ ಅಧ್ಯಕ್ಷನನ್ನು, ಉಪಾಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ರಾಷ್ಟ್ರಪತಿಯು, ತಾನು ಸಹಿಮಾಡಿ, ಮೊಹರು ಹಾಕಿದ ವಾರಂಟಿನ ಮೂಲಕ ನೇಮಕ ಮಾಡತಕ್ಕದ್ದು.

(4) ಆಯೋಗವು ತನ್ನದೇ ಆದ ಪ್ರಕ್ರಿಯೆಯನ್ನು ವಿನಿಯಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(5) ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವುದು ಆಯೋಗದ ಕರ್ತವ್ಯವಾಗಿರತಕ್ಕದ್ದು, ಎಂದರೆ:–

(ಎ) ಈ ಸಂವಿಧಾನದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅಥವಾ ಸರ್ಕಾರದ ಯಾವುದೇ ಆದೇಶದ ಮೇರೆಗೆ ಅನುಸೂಚಿತ ಬುಡಕಟ್ಟುಗಳಿಗೆ ಒದಗಿಸಿರುವ ರಕ್ಷಣೆಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಬಗ್ಗೆ ತನಿಖೆ ಮಾಡುವುದು ಮತ್ತು ಮೇಲ್ವಿಚಾರಣೆ ನಡೆಸುವುದು ಹಾಗೂ ಅಂಥ ರಕ್ಷಣಾ ಕ್ರಮಗಳ ಅನುಷ್ಠಾನದ ಮೌಲ್ಯಮಾಪನವನ್ನು ಮಾಡುವುದು;

(ಬಿ) ಅನುಸೂಚಿತ ಬುಡಕಟ್ಟುಗಳಿಗೆ ಹಕ್ಕುಗಳನ್ನು ಮತ್ತು ಇತರ ರಕ್ಷಣಾ ಕ್ರಮಗಳನ್ನು ತಪ್ಪಿಸುವುದಕ್ಕೆ ಸಂಬಂಧಿಸಿದ ನಿರ್ದಿಷ್ಟ ದೂರುಗಳ ಬಗ್ಗೆ ವಿಚಾರಣೆ ನಡೆಸುವುದು;

(ಸಿ) ಅನುಸೂಚಿತ ಬುಡಕಟ್ಟುಗಳ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಯೋಜನಾ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಮತ್ತು ಆ ಕುರಿತು ಸಲಹೆ ನೀಡುವುದು ಹಾಗೂ ಅವರ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಒಕ್ಕೂಟವು ಮತ್ತು ಯಾವುದೇ ರಾಜ್ಯವು ಕೈಗೊಂಡ ಅಭಿವೃದ್ಧಿ ಕ್ರಮಗಳ ಪ್ರಗತಿಯ ಮೌಲ್ಯಮಾಪನ ಮಾಡುವುದು;

(ಡಿ) ರಕ್ಷಣಾ ಕ್ರಮಗಳ ಅನುಷ್ಠಾನ ಕುರಿತು ವರದಿಗಳನ್ನು ಪ್ರತಿವರ್ಷ ಮತ್ತು ಆಯೋಗವು ಸೂಕ್ತವೆಂದು ಭಾವಿಸಬಹುದಾದಂಥ ಇತರ ಕಾಲಗಳಲ್ಲಿ ರಾಷ್ಟ್ರಪತಿಗೆ ಸಲ್ಲಿಸುವುದು;

(ಇ) ಆ ರಕ್ಷಣಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದಕ್ಕಾಗಿ ಒಕ್ಕೂಟವು ಅಥವಾ ಯಾವುದೇ ರಾಜ್ಯವು ಕೈಗೊಳ್ಳಬೇಕಾದ ಕ್ರಮಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಸಂರಕ್ಷಣೆ, ಕಲ್ಯಾಣ ಮತ್ತು ಸಾಮಾಜಿಕ–ಆರ್ಥಿಕ ಅಭಿವೃದ್ಧಿಗಾಗಿ ಇತರ ಕ್ರಮಗಳ ಬಗ್ಗೆ ಅಂಥ ವರದಿಗಳಲ್ಲಿ ಶಿಫಾರಸ್ಸು ಮಾಡುವುದು; ಮತ್ತು

(ಎಫ್) ಸಂಸತ್ತು ರಚಿಸಿದ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು ಅನುಸೂಚಿತ ಬುಡಕಟ್ಟುಗಳ ಸಂರಕ್ಷಣೆ, ಕಲ್ಯಾಣ ಮತ್ತು ಅಭಿವೃದ್ಧಿ ಹಾಗೂ ಪ್ರಗತಿಗೆ ಸಂಬಂಧಿಸಿದಂಥ ಇತರ ಪ್ರಕಾರ್ಯಗಳನ್ನು ರಾಷ್ಟ್ರಪತಿಯು ನಿಯಮದ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ನೆರವೇರಿಸುವುದು.

(6) ರಾಷ್ಟ್ರಪತಿಯು, ಒಕ್ಕೂಟಕ್ಕೆ ಸಂಬಂಧಿಸಿದ ಶಿಫಾರಸ್ಸುಗಳ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮವನ್ನು ಮತ್ತು ಅಂಥ ಶಿಫಾರಸ್ಸುಗಳಲ್ಲಿ ಯಾವುದೇ ಶಿಫಾರಸನ್ನು ಅಂಗೀಕರಿಸದಿರುವುದಕ್ಕೆ ಕಾರಣಗಳಾವುವಾದರೂ ಇದ್ದರೆ ಅವುಗಳನ್ನು ವಿವರಿಸುವ ವಿವರಣ ಪತ್ರದೊಂದಿಗೆ ಅಂಥ ಎಲ್ಲಾ ವರದಿಗಳನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

---

1. 2003 ನೆಯ ಇಸವಿಯ ಸಂವಿಧಾನ (ಎಂಬತ್ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ (19.2.2004 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(7) ಅಂಥ ಯಾವುದೇ ವರದಿಯು ಅಥವಾ ಅದರ ಯಾವುದೇ ಭಾಗವು, ಯಾವುದೇ ರಾಜ್ಯ ಸರ್ಕಾರದ ಯಾವುದೇ ವಿಷಯಕ್ಕೆ ಸಂಬಂಧಿಸಿರುವಲ್ಲಿ, ಅಂಥ ವರದಿಯ ಒಂದು ಪ್ರತಿಯನ್ನು ಆ ರಾಜ್ಯದ ರಾಜ್ಯಪಾಲನಿಗೆ ಕಳುಹಿಸತಕ್ಕದ್ದು ಮತ್ತು ಅವನು, ರಾಜ್ಯಕ್ಕೆ ಸಂಬಂಧಿಸಿದ ಶಿಫಾರಸುಗಳ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಕ್ರಮವನ್ನು ಮತ್ತು ಅಂಥ ಶಿಫಾರಸುಗಳಲ್ಲಿ ಯಾವುದೇ ಶಿಫಾರಸನ್ನು ಅಂಗೀಕರಿಸದಿರುವುದಕ್ಕೆ ಕಾರಣಗಳಾವುವಾದರೂ ಇದ್ದರೆ ಅವುಗಳನ್ನು ವಿವರಿಸುವ ವಿವರಣ ಪತ್ರದೊಂದಿಗೆ ಅಂಥ ವರದಿಯನ್ನು ರಾಜ್ಯವಿಧಾನಮಂಡಲದ ಮುಂದೆ ಇಡುವಂತೆ ಮಾಡತಕ್ಕದ್ದು.

(8) ಆಯೋಗವು, (5)ನೆಯ ಖಂಡದ (ಎ) ಉಪಖಂಡದಲ್ಲಿ ಉಲ್ಲೇಖಿಸಿದ ಯಾವುದೇ ವಿಷಯದ ಬಗ್ಗೆ ತನಿಖೆ ಮಾಡುವಾಗ ಅಥವಾ (ಬಿ) ಉಪಖಂಡದಲ್ಲಿ ಉಲ್ಲೇಖಿಸಿದ ಯಾವುದೇ ದೂರಿನ ಬಗ್ಗೆ ವಿಚಾರಣೆ ನಡೆಸುವಾಗ, ದಾವೆಯ ಅಧಿವಿಚಾರಣೆ ನಡೆಸುವ ಸಿವಿಲ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು, ವಿಶೇಷವಾಗಿ ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಹೊಂದಿರತಕ್ಕದ್ದು, ಎಂದರೆ:-

(ಎ) ಭಾರತದ ಯಾವುದೇ ಭಾಗದಿಂದ ಯಾರೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಹಾಜರಾಗುವಂತೆ ಒತ್ತಾಯಿಸುವುದು ಹಾಗೂ ಪ್ರಮಾಣ ಮಾಡಿಸಿ ವಿಚಾರಣೆ ಮಾಡುವುದು;

(ಬಿ) ಯಾವುದೇ ದಸ್ತಾವೇಜನ್ನು ಪತ್ತೆಹಚ್ಚುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರ ವಿಚಾರಣೆ ನಡೆಸುವುದಕ್ಕಾಗಿ ಮತ್ತು ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಕಮೀಷನುಗಳನ್ನು ಹೊರಡಿಸುವುದು;

(ಎಫ್) ರಾಷ್ಟ್ರಪತಿಯು ನಿಯಮದ ಮೂಲಕ ನಿರ್ಧರಿಸಬಹುದಾದಂಥ ಯಾವುದೇ ಇತರ ವಿಷಯ.

(9) ಒಕ್ಕೂಟವು ಮತ್ತು ಪ್ರತಿಯೊಂದು ರಾಜ್ಯ ಸರ್ಕಾರವು, ಅನುಸೂಚಿತ ಬುಡಕಟ್ಟುಗಳವರ ಮೇಲೆ ಪರಿಣಾಮಬೀರುವ ಎಲ್ಲಾ ಮಹತ್ವಪೂರ್ಣ ಕಾರ್ಯನೀತಿಯ ವಿಷಯಗಳನ್ನು ಕುರಿತು ಆಯೋಗದೊಡನೆ ಸಮಾಲೋಚಿಸತಕ್ಕದ್ದು.]

**339. ಅನುಸೂಚಿತ ಪ್ರದೇಶಗಳ ಆಡಳಿತದ ಮತ್ತು ಅನುಸೂಚಿತ ಬುಡಕಟ್ಟುಗಳ ಕಲ್ಯಾಣದ ಸಂಬಂಧದಲ್ಲಿ ಒಕ್ಕೂಟದ ನಿಯಂತ್ರಣ:-** (1) ರಾಷ್ಟ್ರಪತಿಯು ಯಾವುದೇ ಕಾಲದಲ್ಲಿ [1] * * * ರಾಜ್ಯಗಳಲ್ಲಿನ ಅನುಸೂಚಿತ ಪ್ರದೇಶಗಳ ಆಡಳಿತದ ಮತ್ತು ಅನುಸೂಚಿತ ಬುಡಕಟ್ಟುಗಳ ಕಲ್ಯಾಣದ ವಿಷಯದಲ್ಲಿ ವರದಿ ಮಾಡಲು ಆದೇಶದ ಮೂಲಕ ಒಂದು ಆಯೋಗವನ್ನು ನೇಮಕ ಮಾಡಬಹುದು ಮತ್ತು ಈ ಸಂವಿಧಾನದ ಪ್ರಾರಂಭದಿಂದ ಹತ್ತು ವರ್ಷಗಳ ತರುವಾಯ ಅದನ್ನು ನೇಮಕ ಮಾಡತಕ್ಕದ್ದು.

ಆ ಆದೇಶವು ಅಂಥ ಆಯೋಗದ ರಚನೆ, ಅದರ ಅಧಿಕಾರಗಳನ್ನು ಮತ್ತು ಕಾರ್ಯವಿಧಾನವನ್ನು ನಿರ್ದಿಷ್ಟಪಡಿಸಬಹುದು ಮತ್ತು ರಾಷ್ಟ್ರಪತಿಯು ಅವಶ್ಯವೆಂದು ಅಥವಾ ಅಪೇಕ್ಷಣೀಯವೆಂದು ಭಾವಿಸಬಹುದಾದಂಥ ಪ್ರಾಸಂಗಿಕ ಅಥವಾ ಸಹಾಯಕ ಉಪಬಂಧಗಳನ್ನು ಆ ಆದೇಶವು ಒಳಗೊಂಡಿರಬಹುದು.

(2) ಒಕ್ಕೂಟದ ಕಾರ್ಯಾಂಗ ಅಧಿಕಾರವು ಒಂದು ರಾಜ್ಯದಲ್ಲಿರುವ ಅನುಸೂಚಿತ ಬುಡಕಟ್ಟುಗಳ ಕಲ್ಯಾಣಕ್ಕಾಗಿ ಅತ್ಯಾವಶ್ಯಕವೆಂದು ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿರುವ ಯೋಜನೆಗಳನ್ನು ರೂಪಿಸುವ ಮತ್ತು ಕಾರ್ಯಗತಗೊಳಿಸುವ ಬಗ್ಗೆ [2][ಆ ರಾಜ್ಯಕ್ಕೆ] ನಿರ್ದೇಶನಗಳನ್ನು ಕೊಡುವುದಕ್ಕೆ ವ್ಯಾಪ್ತವಾಗತಕ್ಕದ್ದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಭಾಗದಲ್ಲಿ ಅಥವಾ (ಬಿ) ಭಾಗದಲ್ಲಿ ನಿರ್ದಿಷ್ಟಪಡಿಸಿದ" ಎಂಬ ಪದಗಳನ್ನು, ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ, "ಅಂಥ ಯಾವುದೇ ರಾಜ್ಯಕ್ಕೆ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

**340. ಹಿಂದುಳಿದ ವರ್ಗಗಳ ಸ್ಥಿತಿಗತಿಗಳ ಅನ್ವೇಷಣೆಗಾಗಿ ಆಯೋಗದ ನೇಮಕ:-** (1) ಭಾರತದ ರಾಜ್ಯಕ್ಷೇತ್ರದಲ್ಲಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ವರ್ಗಗಳ ಸ್ಥಿತಿಗತಿಗಳನ್ನು ಮತ್ತು ಅವರು ಅನುಭವಿಸುತ್ತಿರುವ ತೊಂದರೆಗಳನ್ನು ಅನ್ವೇಷಣೆ ಮಾಡಲು ಮತ್ತು ಅಂಥ ತೊಂದರೆಗಳನ್ನು ನಿವಾರಿಸಲು ಹಾಗೂ ಅವರ ಸ್ಥಿತಿಯನ್ನು ಉತ್ತಮಪಡಿಸಲು ಒಕ್ಕೂಟವು ಅಥವಾ ಯಾವುದೇ ರಾಜ್ಯವು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮತ್ತು ಆ ಉದ್ದೇಶಕ್ಕಾಗಿ ಒಕ್ಕೂಟವು ಅಥವಾ ಯಾವುದೇ ರಾಜ್ಯವು ಕೊಡಬೇಕಾದ ಅನುದಾನಗಳ ಬಗ್ಗೆ ಮತ್ತು ಆ ಅನುದಾನಗಳನ್ನು ಯಾವ ಷರತ್ತುಗಳಿಗೊಳಪಟ್ಟು ಕೊಡಬೇಕಾಗಿದೆಯೋ ಆ ಷರತ್ತುಗಳ ಬಗ್ಗೆ ಶಿಫಾರಸ್ಸುಗಳನ್ನು ಮಾಡುವುದಕ್ಕಾಗಿ; ರಾಷ್ಟ್ರಪತಿಯು ಸೂಕ್ತವೆಂದು ಭಾವಿಸುವಂಥ ವ್ಯಕ್ತಿಗಳನ್ನು ಒಳಗೊಂಡ ಒಂದು ಆಯೋಗವನ್ನು ಆದೇಶದ ಮೂಲಕ ನೇಮಿಸಬಹುದು ಮತ್ತು ಆ ಆಯೋಗವನ್ನು ನೇಮಿಸುವ ಆದೇಶದಲ್ಲಿ ಆ ಆಯೋಗವು ಅನುಸರಿಸಬೇಕಾದ ಕಾರ್ಯವಿಧಾನವನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಹಾಗೆ ನೇಮಕಗೊಂಡ ಆಯೋಗವು, ತನಗೆ ಒಪ್ಪಿಸಿದ ವಿಷಯಗಳ ಬಗ್ಗೆ ಅನ್ವೇಷಣೆ ಮಾಡತಕ್ಕದ್ದು ಮತ್ತು ತನಗೆ ಕಂಡುಬಂದ ಸಂಗತಿಗಳನ್ನು ನಿರೂಪಿಸಿರುವ ಮತ್ತು ತಾನು ಉಚಿತವೆಂದು ಭಾವಿಸುವಂಥ ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ರಾಷ್ಟ್ರಪತಿಗೆ ಒಪ್ಪಿಸತಕ್ಕದ್ದು.

(3) ಹಾಗೆ ಒಪ್ಪಿಸಲಾದ ವರದಿಯ ಪ್ರತಿಯನ್ನು, ಅದರ ಮೇಲೆ ಕೈಗೊಂಡ ಕ್ರಮವನ್ನು ವಿವರಿಸುವ ಒಂದು ವಿವರಣ ಪತ್ರದೊಂದಿಗೆ ರಾಷ್ಟ್ರಪತಿಯು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

**341. ಅನುಸೂಚಿತ ಜಾತಿಗಳು:-** (1) ರಾಷ್ಟ್ರಪತಿಯು [1][ಯಾವುದೇ ರಾಜ್ಯಕ್ಕೆ [2][ಅಥವಾ ಯಾವುದೇ ಒಕ್ಕೂಟ ರಾಜ್ಯಕ್ಷೇತ್ರಕ್ಕೆ] ಸಂಬಂಧಿಸಿದಂತೆ ಮತ್ತು ಅದು [3] * * * ಒಂದು ರಾಜ್ಯವಾಗಿರುವ ಸಂದರ್ಭದಲ್ಲಿ ಅದರ ರಾಜ್ಯಪಾಲನೊಡನೆ [4] * * * ಸಮಾಲೋಚನೆ ಮಾಡಿದ ತರುವಾಯ] ಈ ಸಂವಿಧಾನದ ಉದ್ದೇಶಗಳಿಗಾಗಿ ಆ ರಾಜ್ಯದ [2][ಅಥವಾ ಸಂದರ್ಭಾನುಸಾರ ಆ ಒಕ್ಕೂಟ ರಾಜ್ಯಕ್ಷೇತ್ರದ] ಸಂಬಂಧದಲ್ಲಿ ಅನುಸೂಚಿತ ಜಾತಿಗಳೆಂಬುದಾಗಿ ಭಾವಿಸಬೇಕಾದ ಜಾತಿಗಳು, ಮೂಲ ವಂಶಗಳು ಅಥವಾ ಬುಡಕಟ್ಟುಗಳನ್ನು ಅಥವಾ ಜಾತಿಯ, ಮೂಲವಂಶದ ಅಥವಾ ಬುಡಕಟ್ಟಿನ ಭಾಗಗಳನ್ನು ಅಥವಾ ಅವುಗಳೊಳಗಿನ ಗುಂಪುಗಳನ್ನು ಸಾರ್ವಜನಿಕ ಅಧಿಸೂಚನೆ[5]ಯ ಮೂಲಕ ನಿರ್ದಿಷ್ಟಪಡಿಸಬಹುದು.

---

1. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 10ನೆಯ ಪ್ರಕರಣದ ಮೂಲಕ "ಒಂದು ರಾಜ್ಯದ ರಾಜ್ಯಪಾಲನೊಡನೆ ಅಥವಾ ರಾಜಪ್ರಮುಖನೊಡನೆ ಸಮಾಲೋಚನೆ ಮಾಡಿದ ತರುವಾಯ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ ಸೇರಿಸಲಾಗಿದೆ.
3. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಭಾಗದಲ್ಲಿ ಅಥವಾ (ಬಿ) ಭಾಗದಲ್ಲಿ ನಿರ್ದಿಷ್ಟಪಡಿಸಿರತಕ್ಕ" ಎಂಬ ಪದಗಳನ್ನು, ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.
4. 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನೊಡನೆ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
5. ಸಂವಿಧಾನ (ಅನುಸೂಚಿತ ಜಾತಿಗಳ) ಆದೇಶ, 1950 (ಸಿ.ಓ. 19), ಸಂವಿಧಾನ (ಅನುಸೂಚಿತ ಜಾತಿಗಳ) (ಒಕ್ಕೂಟ ರಾಜ್ಯ ಕ್ಷೇತ್ರಗಳ) ಆದೇಶ, 1951 (ಸಿ.ಓ. 32), ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ, 1956 (ಸಿ.ಓ. 52), ಸಂವಿಧಾನ (ದಾದ್ರ ಮತ್ತು ನಗರ ಹವೇಲಿ) ಅನುಸೂಚಿತ ಜಾತಿಗಳ ಆದೇಶ, 1962 (ಸಿ.ಓ. 64), ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964 (ಸಿ.ಓ. 68), ಸಂವಿಧಾನ (ಗೋವಾ, ದಾಮನ್ ಮತ್ತು ದೀವ್) ಅನುಸೂಚಿತ ಜಾತಿಗಳ ಆದೇಶ, 1968 (ಸಿ.ಓ. 81) ಮತ್ತು ಸಂವಿಧಾನ (ಸಿಕ್ಕಿಂ) ಅನುಸೂಚಿತ ಜಾತಿಗಳ ಆದೇಶ, 1978 (ಸಿ.ಓ. 110)ನ್ನು ನೋಡಿ.

(2) ಸಂಸತ್ತು, ಕಾನೂನಿನ ಮೂಲಕ ಯಾವುದೇ ಜಾತಿ, ಮೂಲ ವಂಶ ಅಥವಾ ಬುಡಕಟ್ಟನ್ನು ಅಥವಾ ಯಾವುದೇ ಜಾತಿಯ, ಮೂಲವಂಶದ ಅಥವಾ ಬುಡಕಟ್ಟಿನ ಭಾಗವನ್ನು ಅಥವಾ ಅದರೊಳಗಿನ ಗುಂಪನ್ನು (1)ನೆಯ ಖಂಡದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅನುಸೂಚಿತ ಜಾತಿಗಳ ಪಟ್ಟಿಯಲ್ಲಿ ಸೇರಿಸಬಹುದು ಅಥವಾ ಅದರಿಂದ ತೆಗೆದುಹಾಕಬಹುದು; ಆದರೆ ಮೇಲೆ ಹೇಳಿದಂತೆ ಹೊರತು, ಸದರಿ ಖಂಡದ ಮೇರೆಗೆ ಹೊರಡಿಸಲಾದ ಅಧಿಸೂಚನೆಯನ್ನು ಆ ತರುವಾಯದ ಯಾವುದೇ ಅಧಿಸೂಚನೆಯ ಮೂಲಕ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

**342. ಅನುಸೂಚಿತ ಬುಡಕಟ್ಟುಗಳು:-** (1) ರಾಷ್ಟ್ರಪತಿಯು [1][ಯಾವುದೇ ರಾಜ್ಯಕ್ಕೆ [2][ಅಥವಾ ಯಾವುದೇ ಒಕ್ಕೂಟ ರಾಜ್ಯಕ್ಷೇತ್ರಕ್ಕೆ] ಸಂಬಂಧಿಸಿದಂತೆ, ಮತ್ತು ಅದು [3] * * * ಒಂದು ರಾಜ್ಯವಾಗಿರುವ ಸಂದರ್ಭದಲ್ಲಿ ಅದರ ರಾಜ್ಯಪಾಲನೊಡನೆ [4] * * * ಸಮಾಲೋಚನೆ ಮಾಡಿದ ತರುವಾಯ] ಈ ಸಂವಿಧಾನದ ಉದ್ದೇಶಗಳಿಗಾಗಿ ಆ ರಾಜ್ಯದ [2][ಅಥವಾ ಸಂದರ್ಭಾನುಸಾರ ಆ ಒಕ್ಕೂಟ ರಾಜ್ಯಕ್ಷೇತ್ರದ]ಸಂಬಂಧದಲ್ಲಿ ಅನುಸೂಚಿತ ಬುಡಕಟ್ಟುಗಳೆಂದು ಭಾವಿಸಬೇಕಾದ ಅನುಸೂಚಿತ ಬುಡಕಟ್ಟುಗಳನ್ನು ಅಥವಾ ಬುಡಕಟ್ಟುಗಳ ಸಮುದಾಯಗಳನ್ನು ಅಥವಾ ಬುಡಕಟ್ಟುಗಳ ಅಥವಾ ಬುಡಕಟ್ಟು ಸಮುದಾಯದ ಭಾಗಗಳನ್ನು ಅಥವಾ ಅದರೊಳಗಿನ ಗುಂಪುಗಳನ್ನು ಸಾರ್ವಜನಿಕ ಅಧಿಸೂಚನೆ[5]ಯ ಮೂಲಕ ನಿರ್ದಿಷ್ಟಪಡಿಸಬಹುದು.

(2) ಸಂಸತ್ತು, ಕಾನೂನಿನ ಮೂಲಕ ಯಾವುದೇ ಬುಡಕಟ್ಟನ್ನು ಅಥವಾ ಬುಡಕಟ್ಟಿನ ಸಮುದಾಯವನ್ನು ಅಥವಾ ಯಾವುದೇ ಬುಡಕಟ್ಟಿನ ಅಥವಾ ಬುಡಕಟ್ಟಿನ ಸಮುದಾಯದ ಭಾಗವನ್ನು ಅಥವಾ ಅದರೊಳಗಿನ ಗುಂಪನ್ನು, (1)ನೆಯ ಖಂಡದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅನುಸೂಚಿತ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರಿಸಬಹುದು ಅಥವಾ ಅದರಿಂದ ತೆಗೆದುಹಾಕಬಹುದು; ಆದರೆ ಮೇಲೆ ಹೇಳಿದಂತೆ ಹೊರತು, ಸದರಿ ಖಂಡದ ಮೇರೆಗೆ ಹೊರಡಿಸಲಾದ ಅಧಿಸೂಚನೆಯನ್ನು ಆ ತರುವಾಯದ ಯಾವುದೇ ಅಧಿಸೂಚನೆಯ ಮೂಲಕ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

---

1. 1951 ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 11ನೆಯ ಪ್ರಕರಣದ ಮೂಲಕ, "ಒಂದು ರಾಜ್ಯದ ರಾಜ್ಯಪಾಲನೊಡನೆ ಅಥವಾ ರಾಜ ಪ್ರಮುಖನೊಡನೆ ಸಮಾಲೋಚನೆ ಮಾಡಿದ ತರುವಾಯ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ ಸೇರಿಸಲಾಗಿದೆ.
3. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ, "ಮೊದಲನೆಯ ಅನುಸೂಚಿಯ (ಎ) ಭಾಗದಲ್ಲಿ ಅಥವಾ (ಬಿ) ಭಾಗದಲ್ಲಿ ನಿರ್ದಿಷ್ಟಪಡಿಸಿರತಕ್ಕ " ಎಂಬ ಪದಗಳನ್ನು, ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.
4. 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ, " ಅಥವಾ ರಾಜಪ್ರಮುಖನೊಡನೆ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
5. ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) ಆದೇಶ, 1950 (ಸಿ.ಓ. 22), ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಒಕ್ಕೂಟ ರಾಜ್ಯ ಕ್ಷೇತ್ರಗಳ) ಆದೇಶ, 1951 (ಸಿ.ಓ. 33), ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959 (ಸಿ.ಓ. 58), ಸಂವಿಧಾನ (ದಾದ್ರಾ ಮತ್ತು ನಗರ ಹವೇಲಿ) ಅನುಸೂಚಿತ ಬುಡಕಟ್ಟುಗಳ ಆದೇಶ, 1962 (ಸಿ.ಓ. 65), ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967 (ಸಿ.ಓ. 78), ಸಂವಿಧಾನ (ಗೋವಾ, ದಾಮನ್ ಮತ್ತು ದೀವ್) ಅನುಸೂಚಿತ ಬುಡಕಟ್ಟುಗಳ ಆದೇಶ, 1968 (ಸಿ.ಓ. 82), ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ, 1970 (ಸಿ.ಓ. 88) ಮತ್ತು ಸಂವಿಧಾನ (ಸಿಕ್ಕಿಂ) ಅನುಸೂಚಿತ ಬುಡಕಟ್ಟುಗಳ ಆದೇಶ, 1978 (ಸಿ.ಓ. 111)ನ್ನು ನೋಡಿ.

## ಭಾಗ - XVII

## ರಾಜಭಾಷೆ

### ಅಧ್ಯಾಯ - I ಒಕ್ಕೂಟದ ಭಾಷೆ

**343. ಒಕ್ಕೂಟದ ರಾಜಭಾಷೆ:-** (1) ದೇವನಾಗರಿ ಲಿಪಿಯಲ್ಲಿರುವ ಹಿಂದಿಯು ಒಕ್ಕೂಟದ ರಾಜಭಾಷೆ ಆಗಿರತಕ್ಕದ್ದು.

ಒಕ್ಕೂಟದ ಸರ್ಕಾರಿ ಉದ್ದೇಶಗಳಿಗಾಗಿ ಬಳಸಬೇಕಾದ ಅಂಕಿಗಳ ರೂಪವು ಭಾರತೀಯ ಅಂಕಿಗಳ ಅಂತರರಾಷ್ಟ್ರೀಯ ರೂಪವಾಗಿರತಕ್ಕದ್ದು.

(2) (1)ನೆಯ ಖಂಡದಲ್ಲಿ ಏನೇ ಇದ್ದಾಗ್ಯೂ, ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಒಕ್ಕೂಟದ ಯಾವ ಸರ್ಕಾರಿ ಉದ್ದೇಶಗಳಿಗಾಗಿ ಇಂಗ್ಲೀಷ್ ಭಾಷೆಯನ್ನು ಬಳಸಲಾಗುತ್ತಿತ್ತೋ ಆ ಎಲ್ಲ ಸರ್ಕಾರೀ ಉದ್ದೇಶಗಳಿಗಾಗಿ ಸಂವಿಧಾನದ ಪ್ರಾರಂಭದಿಂದ ಹದಿನೈದು ವರ್ಷಗಳವರೆಗೆ ಇಂಗ್ಲೀಷ್ ಭಾಷೆಯ ಬಳಕೆಯನ್ನು ಮುಂದುವರಿಸಿಕೊಂಡು ಹೋಗತಕ್ಕದ್ದು:

ಪರಂತು, ರಾಷ್ಟ್ರಪತಿಯು [1]ಆದೇಶದ ಮೂಲಕ ಸದರಿ ಅವಧಿಯಲ್ಲಿ ಒಕ್ಕೂಟದ ಸರ್ಕಾರಿ ಉದ್ದೇಶಗಳ ಪೈಕಿ ಯಾವುದೇ ಉದ್ದೇಶಕ್ಕಾಗಿ, ಇಂಗ್ಲೀಷ್ ಭಾಷೆಯ ಜೊತೆಗೆ ಹಿಂದಿ ಭಾಷೆಯನ್ನು ಮತ್ತು ಅಂತರರಾಷ್ಟ್ರೀಯ ರೂಪದಲ್ಲಿರುವ ಭಾರತೀಯ ಅಂಕಿಗಳ ಜೊತೆಗೆ ದೇವನಾಗರಿ ರೂಪದಲ್ಲಿರುವ ಅಂಕಿಗಳ ಬಳಕೆಯನ್ನು ಅಧಿಕೃತಗೊಳಿಸಬಹುದು.

(3) ಈ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ಸಂಸತ್ತು ಸದರಿ ಹದಿನೈದು ವರ್ಷಗಳ ಅವಧಿಯ ತರುವಾಯ-

(ಎ) ಇಂಗ್ಲೀಷ್ ಭಾಷೆಯನ್ನು, ಅಥವಾ

(ಬಿ) ದೇವನಾಗರಿ ರೂಪದಲ್ಲಿರುವ ಅಂಕಿಗಳನ್ನು,

– ಕಾನೂನಿನ ಮೂಲಕ, ಆ ಕಾನೂನಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಉದ್ದೇಶಗಳಿಗಾಗಿ ಬಳಸುವುದಕ್ಕೆ ಉಪಬಂಧಿಸಬಹುದು.

**344. ರಾಜಭಾಷೆಯ ಬಗ್ಗೆ ಆಯೋಗ ಮತ್ತು ಸಂಸತ್ ಸಮಿತಿ:-** (1) ರಾಷ್ಟ್ರಪತಿಯು ಈ ಸಂವಿಧಾನದ ಪ್ರಾರಂಭದಿಂದ ಐದು ವರ್ಷಗಳು ಕಳೆದ ಮೇಲೆ ಮತ್ತು ಆ ತರುವಾಯ ಸಂವಿಧಾನದ ಪ್ರಾರಂಭದಿಂದ ಹತ್ತು ವರ್ಷಗಳು ಕಳೆದ ಮೇಲೆ ಆದೇಶದ ಮೂಲಕ ಒಂದು ಆಯೋಗವನ್ನು ರಚಿಸತಕ್ಕದ್ದು. ಆ ಆಯೋಗವು ರಾಷ್ಟ್ರಪತಿಯು ನೇಮಕ ಮಾಡತಕ್ಕ ಒಬ್ಬ ಅಧ್ಯಕ್ಷನನ್ನು ಮತ್ತು ಎಂಟನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ವಿವಿಧ ಭಾಷೆಗಳನ್ನು ಪ್ರತಿನಿಧಿಸುವ ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ಆ ಆಯೋಗವು ಅನುಸರಿಸಬೇಕಾದ ಕಾರ್ಯವಿಧಾನವನ್ನು ಆ ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(2) ಆಯೋಗವು,-

(ಎ) ಒಕ್ಕೂಟದ ಸರ್ಕಾರಿ ಉದ್ದೇಶಗಳಿಗಾಗಿ ಹೆಚ್ಚು ಹೆಚ್ಚಾಗಿ ಹಿಂದಿ ಭಾಷೆಯನ್ನು ಬಳಸುವ ಬಗ್ಗೆ;

(ಬಿ) ಒಕ್ಕೂಟದ ಎಲ್ಲ ಅಥವಾ ಯಾವುದೇ ಸರ್ಕಾರಿ ಉದ್ದೇಶಕ್ಕಾಗಿ ಇಂಗ್ಲೀಷ್ ಭಾಷೆಯ ಬಳಕೆಯನ್ನು ನಿರ್ಬಂಧಿಸುವ ಬಗ್ಗೆ;

(ಸಿ) 348ನೆಯ ಅನುಚ್ಛೇದದಲ್ಲಿ ನಮೂದಿಸಿರುವ ಎಲ್ಲ ಉದ್ದೇಶಗಳಿಗಾಗಿ ಅಥವಾ ಯಾವುದೇ ಉದ್ದೇಶಕ್ಕಾಗಿ ಬಳಸಬೇಕಾದ ಭಾಷೆಯ ಬಗ್ಗೆ;

---

1. ಸಿ.ಒ. 41 ಇದನ್ನು ನೋಡಿ.

(ಡಿ) ಒಕ್ಕೂಟದ ನಿರ್ದಿಷ್ಟಪಡಿಸಿದ ಯಾವುದೇ ಒಂದು ಅಥವಾ ಹೆಚ್ಚು ಉದ್ದೇಶಗಳಿಗಾಗಿ ಬಳಸಬೇಕಾದ ಅಂಕಿಗಳ ರೂಪದ ಬಗ್ಗೆ;

(ಇ) ಒಕ್ಕೂಟದ ರಾಜ ಭಾಷೆಯ ಮತ್ತು ಒಕ್ಕೂಟದ ಮತ್ತು ಒಂದು ರಾಜ್ಯದ ನಡುವಣ ಅಥವಾ ಒಂದು ರಾಜ್ಯ ಮತ್ತು ಇನ್ನೊಂದು ರಾಜ್ಯದ ನಡುವಣ ಸಂಪರ್ಕ ಭಾಷೆಯ ಮತ್ತು ಅವುಗಳ ಬಳಕೆಯ ಸಂಬಂಧದಲ್ಲಿ ರಾಷ್ಟ್ರಪತಿಯು ಆಯೋಗಕ್ಕೆ ಕಳುಹಿಸಿದ ಇತರ ಯಾವುದೇ ವಿಷಯದ ಬಗ್ಗೆ

– ರಾಷ್ಟ್ರಪತಿಗೆ ಶಿಫಾರಸುಗಳನ್ನು ಮಾಡುವುದು ಅದರ ಕರ್ತವ್ಯವಾಗಿರತಕ್ಕದ್ದು.

(3) (2)ನೆಯ ಖಂಡದ ಮೇರೆಗೆ ಆಯೋಗವು ತನ್ನ ಶಿಫಾರಸುಗಳನ್ನು ಮಾಡುವಲ್ಲಿ ಭಾರತದ ಔದ್ಯಮಿಕ, ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಉನ್ನತಿಗೆ ಮತ್ತು ಲೋಕಸೇವೆಗಳ ಸಂಬಂಧದಲ್ಲಿ ಹಿಂದೀ ಭಾಷೆಯನ್ನು ಮಾತನಾಡದ ಪ್ರದೇಶಗಳಿಗೆ ಸೇರಿದ ವ್ಯಕ್ತಿಗಳ ನ್ಯಾಯವಾದ ಕ್ಲೇಮುಗಳಿಗೆ ಮತ್ತು ಹಿತಾಸಕ್ತಿಗಳಿಗೆ ಯುಕ್ತ ಗಮನವನ್ನು ಕೊಡತಕ್ಕದ್ದು.

(4) ಮೂವತ್ತು ಜನ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ರಚಿಸತಕ್ಕದ್ದು, ಆ ಪೈಕಿ ಇಪ್ಪತ್ತು ಜನ ಲೋಕಸಭೆಯ ಸದಸ್ಯರು ಮತ್ತು ಹತ್ತು ಜನ ರಾಜ್ಯಸಭೆಯ ಸದಸ್ಯರು ಇರತಕ್ಕದ್ದು, ಅವರನ್ನು ಅನುಕ್ರಮವಾಗಿ ಲೋಕಸಭೆಯ ಸದಸ್ಯರು ಮತ್ತು ರಾಜ್ಯಸಭೆಯ ಸದಸ್ಯರು ಏಕ ವರ್ಗಾವಣೀಯ ಮತದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯ ಪದ್ಧತಿಗನುಸಾರವಾಗಿ ಚುನಾಯಿಸತಕ್ಕದ್ದು.

(5) (1)ನೆಯ ಖಂಡದ ಮೇರೆಗೆ ರಚಿತವಾದ ಆಯೋಗದ ಶಿಫಾರಸುಗಳನ್ನು ಪರಿಶೀಲಿಸಿ, ಅವುಗಳ ಬಗ್ಗೆ ತನ್ನ ಅಭಿಪ್ರಾಯವನ್ನು ರಾಷ್ಟ್ರಪತಿಗೆ ವರದಿ ಮಾಡುವುದು ಆ ಸಮಿತಿಯ ಕರ್ತವ್ಯವಾಗಿರತಕ್ಕದ್ದು.

(6) 343ನೆಯ ಅನುಚ್ಛೇದದಲ್ಲಿ ಏನೇ ಇದ್ದಾಗ್ಯೂ, ರಾಷ್ಟ್ರಪತಿಯು, (5)ನೆಯ ಖಂಡದಲ್ಲಿ ಉಲ್ಲೇಖಿಸಿದ ವರದಿಯನ್ನು ಪರ್ಯಾಲೋಚಿಸಿದ ತರುವಾಯ ಆ ಇಡೀ ವರದಿಗನುಸಾರ ಅಥವಾ ಅದರ ಯಾವುದೇ ಭಾಗಕ್ಕನುಸಾರ ನಿರ್ದೇಶನಗಳನ್ನು ಹೊರಡಿಸಬಹುದು.

## ಅಧ್ಯಾಯ – II ಪ್ರಾದೇಶಿಕ ಭಾಷೆಗಳು

**345. ರಾಜ್ಯದ ರಾಜಭಾಷೆ ಅಥವಾ ರಾಜಭಾಷೆಗಳು:–** 346 ಮತ್ತು 347ನೆಯ ಅನುಚ್ಛೇದಗಳ ಉಪಬಂಧಗಳಿಗೆ ಒಳಪಟ್ಟು, ಒಂದು ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ಆ ರಾಜ್ಯದಲ್ಲಿ ಬಳಕೆಯಲ್ಲಿರುವ ಯಾವುದೇ ಒಂದು ಭಾಷೆಯನ್ನು ಅಥವಾ ಹೆಚ್ಚು ಭಾಷೆಗಳನ್ನು ಅಥವಾ ಹಿಂದಿ ಭಾಷೆಯನ್ನು, ಆ ರಾಜ್ಯದ ಎಲ್ಲ ಉದ್ದೇಶಗಳಿಗಾಗಿ ಅಥವಾ ಯಾವುದೇ ಸರ್ಕಾರಿ ಉದ್ದೇಶಕ್ಕಾಗಿ ಬಳಸುವ ಭಾಷೆಯನ್ನಾಗಿ ಅಥವಾ ಭಾಷೆಗಳನ್ನಾಗಿ ಅಂಗೀಕರಿಸಬಹುದು:

ಪರಂತು, ಆ ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸುವವರೆಗೆ, ಆ ರಾಜ್ಯದೊಳಗೆ, ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಯಾವ ಸರ್ಕಾರಿ ಉದ್ದೇಶಗಳಿಗಾಗಿ ಇಂಗ್ಲೀಷ್ ಭಾಷೆಯನ್ನು ಬಳಸಲಾಗುತ್ತಿತ್ತೋ ಆ ಉದ್ದೇಶಗಳಿಗಾಗಿ ಆ ಭಾಷೆಯ ಬಳಕೆಯನ್ನು ಮುಂದುವರಿಸಿಕೊಂಡು ಹೋಗತಕ್ಕದ್ದು.

**346. ರಾಜ್ಯ–ರಾಜ್ಯಗಳ ಅಥವಾ ರಾಜ್ಯ–ಒಕ್ಕೂಟದ ನಡುವೆ ಸಂಪರ್ಕಕ್ಕಾಗಿ ರಾಜಭಾಷೆ:–** ಒಕ್ಕೂಟದಲ್ಲಿ ಸರ್ಕಾರಿ ಉದ್ದೇಶಗಳಿಗಾಗಿ ಬಳಸಲು ತತ್ಕಾಲದಲ್ಲಿ ಅಧಿಕೃತವಾಗಿರುವ ಭಾಷೆಯು, ಒಂದು ರಾಜ್ಯದ ಮತ್ತು ಇನ್ನೊಂದು ರಾಜ್ಯದ ನಡುವಣ ಮತ್ತು ಒಂದು ರಾಜ್ಯದ ಮತ್ತು ಒಕ್ಕೂಟದ ನಡುವಣ ಸಂಪರ್ಕಕ್ಕಾಗಿ ಬಳಸಬೇಕಾದ ರಾಜಭಾಷೆಯಾಗಿರತಕ್ಕದ್ದು:

ಪರಂತು, ಎರಡು ಅಥವಾ ಹೆಚ್ಚು ರಾಜ್ಯಗಳು, ತಮ್ಮ ನಡುವೆ ಸಂಪರ್ಕಕ್ಕಾಗಿ ಹಿಂದಿ ಭಾಷೆಯು ರಾಜಭಾಷೆಯಾಗಿರಬೇಕೆಂದು ಒಪ್ಪಿಕೊಂಡರೆ, ಅಂಥ ರಾಜ್ಯಗಳು ಆ ಭಾಷೆಯನ್ನು ಅಂಥ ಸಂಪರ್ಕಕ್ಕಾಗಿ ಬಳಸಬಹುದು.

**347. ಒಂದು ರಾಜ್ಯದ ಜನಸಮುದಾಯದ ಒಂದು ವರ್ಗದವರು ಮಾತನಾಡುವ ಭಾಷೆಗೆ ಸಂಬಂಧಪಟ್ಟ ವಿಶೇಷ ಉಪಬಂಧ:–** ಒಂದು ರಾಜ್ಯದ ಜನ ಸಮುದಾಯದ ಪೈಕಿ ಗಣನೀಯ ಪ್ರಮಾಣದ ಜನ ತಾವು ಮಾತನಾಡುವ ಯಾವುದೇ ಭಾಷೆಯನ್ನು ಬಳಸಲು ಆ ರಾಜ್ಯವು ಮನ್ನಣೆ ಕೊಡಬೇಕೆಂದು ಅಪೇಕ್ಷಿಸುತ್ತಾರೆಂದು, ಆ ಕುರಿತು ಅವರು ಕೋರಿಕೆಯನ್ನು ಸಲ್ಲಿಸಿದ ಮೇಲೆ ರಾಷ್ಟ್ರಪತಿಗೆ ಮನದಟ್ಟಾದರೆ, ಅವನು, ತಾನು ನಿರ್ದಿಷ್ಟಪಡಿಸಬಹುದಾದಂಥ ಉದ್ದೇಶಕ್ಕಾಗಿ ಆ ರಾಜ್ಯದಾದ್ಯಂತ ಅಥವಾ ಅದರ ಯಾವುದೇ ಭಾಗದಲ್ಲಿ ಅಂಥ ಭಾಷೆಗೆ ಸಹಾ ಅಧಿಕೃತವಾಗಿ ಮನ್ನಣೆ ಕೊಡತಕ್ಕದ್ದೆಂದು ನಿರ್ದೇಶಿಸಬಹುದು.

## ಅಧ್ಯಾಯ – III ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯ, ಮುಂತಾದವುಗಳ ಭಾಷೆ

**348. ಸರ್ವೋಚ್ಚ ನ್ಯಾಯಾಲಯದಲ್ಲಿ ಮತ್ತು ಉಚ್ಚ ನ್ಯಾಯಾಲಯಗಳಲ್ಲಿ ಮತ್ತು ಅಧಿನಿಯಮಗಳು, ವಿಧೇಯಕಗಳು ಮುಂತಾದವುಗಳಿಗಾಗಿ ಬಳಸಬೇಕಾದ ಭಾಷೆ:–** (1) ಈ ಭಾಗದಲ್ಲಿ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದಾಗ್ಯೂ, ಸಂಸತ್ತು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸುವವರೆಗೆ–

(ಎ) ಸರ್ವೋಚ್ಚ ನ್ಯಾಯಾಲಯದ ಮತ್ತು ಪ್ರತಿಯೊಂದು ಉಚ್ಚ ನ್ಯಾಯಾಲಯದ ಎಲ್ಲ ವ್ಯವಹರಣೆಗಳ;

(ಬಿ) (i) ಸಂಸತ್ತಿನ ಯಾವುದೇ ಸದನದಲ್ಲಿ ಅಥವಾ ಒಂದು ರಾಜ್ಯದ ವಿಧಾನಮಂಡಲದ ಸದನದಲ್ಲಿ ಅಥವಾ ಅದರ ಯಾವುದೇ ಸದನದಲ್ಲಿ ಮಂಡಿಸಬೇಕಾದ ಎಲ್ಲ ವಿಧೇಯಕಗಳ ಅಥವಾ ಅವುಗಳ ತಿದ್ದುಪಡಿಗಳ,

(ii) ಸಂಸತ್ತು ಅಥವಾ ಒಂದು ರಾಜ್ಯದ ವಿಧಾನಮಂಡಲವು ಅಂಗೀಕರಿಸಿದ ಎಲ್ಲ ಅಧಿನಿಯಮಗಳ ಮತ್ತು ರಾಷ್ಟ್ರಪತಿಯು ಅಥವಾ ರಾಜ್ಯದ ರಾಜ್ಯಪಾಲನು [1]*** ಹೊರಡಿಸಿದ ಎಲ್ಲ ಅಧ್ಯಾದೇಶಗಳ, ಮತ್ತು

(iii) ಈ ಸಂವಿಧಾನದ ಮೇರೆಗೆ ಮಾಡಲಾದ ಅಥವಾ ಸಂಸತ್ತು ಅಥವಾ ರಾಜ್ಯದ ವಿಧಾನಮಂಡಲವು ಮಾಡಿದ ಯಾವುದೇ ಕಾನೂನಿನ ಮೇರೆಗೆ ಹೊರಡಿಸಿದ ಎಲ್ಲ ಆದೇಶಗಳ, ನಿಯಮಗಳ, ವಿನಿಯಮಗಳ ಮತ್ತು ಉಪವಿಧಿಗಳ

– ಅಧಿಕೃತ ಪಾಠಗಳು ಇಂಗ್ಲೀಷ್ ಭಾಷೆಯಲ್ಲಿರತಕ್ಕದ್ದು.

(2) (1)ನೆಯ ಖಂಡದ (ಎ) ಉಪಖಂಡದಲ್ಲಿ ಏನೇ ಇದ್ದಾಗ್ಯೂ, ಒಂದು ರಾಜ್ಯದ ರಾಜ್ಯಪಾಲನು [1]***ಹಿಂದಿ ಭಾಷೆಯನ್ನು ಅಥವಾ ಆ ರಾಜ್ಯದ ಯಾವುದೇ ಸರ್ಕಾರಿ ಉದ್ದೇಶಗಳಿಗಾಗಿ ಬಳಸುವ ಇತರ ಯಾವುದೇ ಭಾಷೆಯನ್ನು ಆ ರಾಜ್ಯದಲ್ಲಿ ಪ್ರಧಾನ ನ್ಯಾಯಪೀಠವನ್ನು ಹೊಂದಿರುವ ಉಚ್ಚ ನ್ಯಾಯಾಲಯದ ವ್ಯವಹರಣೆಗಳಲ್ಲಿ ಬಳಸುವುದನ್ನು ರಾಷ್ಟ್ರಪತಿಯ ಪೂರ್ವಸಮ್ಮತಿಯನ್ನು ಪಡೆದು ಅಧಿಕೃತಗೊಳಿಸಬಹುದು:

ಪರಂತು, ಈ ಖಂಡದಲ್ಲಿರುವುದು ಯಾವುದೂ, ಅಂಥ ಉಚ್ಚ ನ್ಯಾಯಾಲಯವು ಕೊಟ್ಟ ಯಾವುದೇ ತೀರ್ಪು ಅಥವಾ ಹೊರಡಿಸಿದ ಡಿಕ್ರಿ ಅಥವಾ ಆದೇಶಕ್ಕೆ ಅನ್ವಯಿಸತಕ್ಕದ್ದಲ್ಲ.

(3) (1)ನೆಯ ಖಂಡದ (ಬಿ) ಉಪಖಂಡದಲ್ಲಿ ಏನೇ ಇದ್ದಾಗ್ಯೂ, ರಾಜ್ಯದ ವಿಧಾನಮಂಡಲವು, ಆ ರಾಜ್ಯದ ವಿಧಾನಮಂಡಲದಲ್ಲಿ ಮಂಡಿಸಲಾದ ವಿಧೇಯಕಗಳಲ್ಲಿ ಅಥವಾ ಆ ವಿಧಾನಮಂಡಲವು ಅಂಗೀಕರಿಸಿದ ಅಧಿನಿಯಮಗಳಲ್ಲಿ ಅಥವಾ ಆ ರಾಜ್ಯದ ರಾಜ್ಯಪಾಲನು [1]*** ಹೊರಡಿಸಿದ ಅಧ್ಯಾದೇಶಗಳಲ್ಲಿ ಅಥವಾ ಆ ಉಪಖಂಡದ (iii)ನೆಯ ಪ್ಯಾರಾದಲ್ಲಿ ಉಲ್ಲೇಖಿಸಿದ ಯಾವುದೇ ಆದೇಶದಲ್ಲಿ, ನಿಯಮದಲ್ಲಿ, ವಿನಿಯಮದಲ್ಲಿ ಅಥವಾ ಉಪವಿಧಿಯಲ್ಲಿ ಬಳಸುವುದಕ್ಕಾಗಿ ಇಂಗ್ಲೀಷ್ ಭಾಷೆಯಲ್ಲದ ಇತರ ಯಾವುದೇ ಭಾಷೆಯನ್ನು ನಿಯಮಿಸಿರುವಲ್ಲಿ, ಆ ರಾಜ್ಯದ ರಾಜ್ಯಪಾಲನ [1]*** ಅಧಿಕಾರದ ಮೇರೆಗೆ ರಾಜಪತ್ರದಲ್ಲಿ ಪ್ರಕಟವಾದ ಅದರ ಇಂಗ್ಲೀಷ್ ಭಾಷಾಂತರವನ್ನು ಈ ಅನುಚ್ಛೇದದ ಮೇರೆಗೆ ಅದರ ಅಧಿಕೃತ ಪಾಠವೆಂದು ಭಾವಿಸತಕ್ಕದ್ದು.

**349. ಭಾಷೆಗೆ ಸಂಬಂಧಪಟ್ಟ ಕೆಲವು ಕಾನೂನುಗಳನ್ನು ಅಧಿನಿಯಮಿಸುವುದಕ್ಕಾಗಿ ವಿಶೇಷ ಕಾರ್ಯವಿಧಾನ:–** ಈ ಸಂವಿಧಾನದ ಪ್ರಾರಂಭದಿಂದ ಹದಿನೈದು ವರ್ಷಗಳ ಅವಧಿಯಲ್ಲಿ 348ನೆಯ ಅನುಚ್ಛೇದದ (1)ನೆಯ ಖಂಡದಲ್ಲಿ ನಮೂದಿಸಿರುವ ಉದ್ದೇಶಗಳ ಪೈಕಿ ಯಾವುದಕ್ಕಾಗಲಿ ಬಳಸುವ ಭಾಷೆಯ ಬಗ್ಗೆ ಉಪಬಂಧಿಸುವ ಸಲುವಾಗಿ ರಾಷ್ಟ್ರಪತಿಯ ಪೂರ್ವ ಮಂಜೂರಾತಿಯಿಲ್ಲದೆ ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿ ಯಾವುದೇ ವಿಧೇಯಕವನ್ನು ಅಥವಾ ತಿದ್ದುಪಡಿಯನ್ನು ತರತಕ್ಕದ್ದಲ್ಲ ಅಥವಾ ಮಂಡಿಸತಕ್ಕದ್ದಲ್ಲ ಮತ್ತು ರಾಷ್ಟ್ರಪತಿಯು, 344ನೆಯ ಅನುಚ್ಛೇದದ (1)ನೆಯ ಖಂಡದ ಮೇರೆಗೆ ರಚಿತವಾದ ಆಯೋಗದ ಶಿಫಾರಸುಗಳನ್ನು ಮತ್ತು ಆ ಅನುಚ್ಛೇದದ (4)ನೆಯ ಖಂಡದ ಮೇರೆಗೆ ರಚಿತವಾದ ಸಮಿತಿಯ ವರದಿಯನ್ನು ಪರ್ಯಾಲೋಚನೆಗೆ ತೆಗೆದುಕೊಂಡ ಹೊರತು, ಅಂಥ ಯಾವುದೇ ವಿಧೇಯಕವನ್ನು ತರಲು ಅಥವಾ ಅಂಥ ತಿದ್ದುಪಡಿಯನ್ನು ಮಂಡಿಸಲು ಮಂಜೂರಾತಿಯನ್ನು ಕೊಡತಕ್ಕದ್ದಲ್ಲ.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

## ಅಧ್ಯಾಯ – IV ವಿಶೇಷ ನಿರ್ದೇಶನಗಳು

**350. ಕುಂದುಕೊರತೆಗಳ ನಿವಾರಣೆಗಾಗಿ ಕೋರಿ ಸಲ್ಲಿಸುವ ಮನವಿಗಳಲ್ಲಿ ಬಳಸಬೇಕಾದ ಭಾಷೆ:–** ಪ್ರತಿಯೊಬ್ಬ ವ್ಯಕ್ತಿಯು, ಯಾವುದೇ ಕುಂದುಕೊರತೆಯ ನಿವಾರಣೆಗಾಗಿ ಒಕ್ಕೂಟದ ಅಥವಾ ಒಂದು ರಾಜ್ಯದ ಯಾರೇ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಒಕ್ಕೂಟದಲ್ಲಿ ಅಥವಾ ಸಂದರ್ಭಾನುಸಾರ ಆ ರಾಜ್ಯದಲ್ಲಿ ಬಳಸುವ ಭಾಷೆಗಳ ಪೈಕಿ ಯಾವುದೇ ಭಾಷೆಯಲ್ಲಿ ಮನವಿಯನ್ನು ಸಲ್ಲಿಸಲು ಹಕ್ಕುಳ್ಳವನಾಗಿರತಕ್ಕದ್ದು.

[1][**350ಎ. ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಸೌಲಭ್ಯಗಳು:–** ಭಾಷಾ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಮಕ್ಕಳಿಗೆ ವಿದ್ಯಾಭ್ಯಾಸದ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣಕ್ಕಾಗಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಲು ಪ್ರತಿಯೊಂದು ರಾಜ್ಯವು ಮತ್ತು ಆ ರಾಜ್ಯದಲ್ಲಿನ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವೂ ಪ್ರಯತ್ನಿಸತಕ್ಕದ್ದು ಮತ್ತು ಅಂಥ ಸೌಲಭ್ಯಗಳನ್ನು ಒದಗಿಸುವುದನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ರಾಷ್ಟ್ರಪತಿಯು ತಾನು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ಯಾವುದೇ ರಾಜ್ಯಕ್ಕೆ ಕೊಡಬಹುದು.

**350ಬಿ. ಭಾಷಾ ಅಲ್ಪಸಂಖ್ಯಾತರಿಗಾಗಿ ವಿಶೇಷ ಅಧಿಕಾರಿ:–** (1) ಭಾಷಾ ಅಲ್ಪಸಂಖ್ಯಾತರಿಗಾಗಿ ರಾಷ್ಟ್ರಪತಿಯು ನೇಮಕಮಾಡುವ ಒಬ್ಬ ವಿಶೇಷ ಅಧಿಕಾರಿ ಇರತಕ್ಕದ್ದು.

(2) ಈ ಸಂವಿಧಾನದ ಮೇರೆಗೆ, ಭಾಷಾ ಅಲ್ಪಸಂಖ್ಯಾತರಿಗಾಗಿ ಒದಗಿಸಿರುವ ರಕ್ಷಣೆಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ತನಿಖೆ ಮಾಡುವುದು ಮತ್ತು ರಾಷ್ಟ್ರಪತಿಯು ನಿರ್ದೇಶಿಸಬಹುದಾದಂಥ ಅವಧಿಯ ಅಂತರಗಳಲ್ಲಿ ಆ ವಿಷಯಗಳ ಬಗ್ಗೆ ರಾಷ್ಟ್ರಪತಿಗೆ ವರದಿ ಮಾಡುವುದು ವಿಶೇಷ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು ಮತ್ತು ರಾಷ್ಟ್ರಪತಿಯು ಅಂಥ ಎಲ್ಲ ವರದಿಗಳನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮತ್ತು ಸಂಬಂಧಪಟ್ಟ ರಾಜ್ಯಸರ್ಕಾರಗಳಿಗೆ ಅವುಗಳನ್ನು ಕಳುಹಿಸಿಕೊಡುವಂತೆ ಮಾಡತಕ್ಕದ್ದು.]

**351. ಹಿಂದಿ ಭಾಷೆಯ ಅಭಿವೃದ್ಧಿಗಾಗಿ ನಿರ್ದೇಶನ:–** ಭಾರತದ ಸಂಮಿಶ್ರ ಸಂಸ್ಕೃತಿಯ ಎಲ್ಲ ಮೂಲತತ್ವಗಳ ಅಭಿವ್ಯಕ್ತಿ ಮಾಧ್ಯಮವಾಗಿರುವಂತೆ ಹಿಂದಿ ಭಾಷೆಯನ್ನು ಅಭಿವೃದ್ಧಿಗೊಳಿಸುವುದು ಮತ್ತು ಅದರ ಜಾಯಮಾನಕ್ಕೆ ಚ್ಯುತಿ ಬಾರದಂತೆ ಹಿಂದೂಸ್ಥಾನಿ ಭಾಷೆಯಲ್ಲಿ ಅಥವಾ ಎಂಟನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಭಾರತದ ಇತರ ಭಾಷೆಗಳಲ್ಲಿ ಬಳಸಿರುವ ರೂಪಗಳು, ಶೈಲಿ ಮತ್ತು ಪದಾವಳಿಗಳನ್ನು ಸಮೀಕರಿಸುವುದರ ಮೂಲಕ ಮತ್ತು ಅವಶ್ಯವಾದಾಗಲೆಲ್ಲ ಅಥವಾ ಅಪೇಕ್ಷಿತವಾದೆಡೆಗಳಲ್ಲೆಲ್ಲ, ಅದರ ಶಬ್ದಭಂಡಾರಕ್ಕಾಗಿ ಮೊದಲನೆಯದಾಗಿ ಸಂಸ್ಕೃತದಿಂದಲೂ, ಎರಡನೆಯದಾಗಿ ಇತರ ಭಾಷೆಗಳಿಂದಲೂ ಶಬ್ದಗಳನ್ನು ತೆಗೆದುಕೊಂಡು ಹಿಂದಿ ಭಾಷೆಯ ಶ್ರೀಮಂತಿಕೆಯು ಸುನಿಶ್ಚಿತಗೊಳ್ಳುವಂತೆ ಆ ಭಾಷೆಯ ಪ್ರಸಾರವನ್ನು ಉನ್ನತಿಗೊಳಿಸುವುದು ಒಕ್ಕೂಟದ ಕರ್ತವ್ಯವಾಗಿರತಕ್ಕದ್ದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 21ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

## ಭಾಗ - XVIII

### ತುರ್ತುಪರಿಸ್ಥಿತಿಯ ಉಪಬಂಧಗಳು

**352. ತುರ್ತುಪರಿಸ್ಥಿತಿಯ ಉದ್ಘೋಷಣೆ:-** (1) ಭಾರತದ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗದ ಭದ್ರತೆಗೆ ಯುದ್ಧದಿಂದಾಗಲೀ ಅಥವಾ ಬಾಹ್ಯ ಆಕ್ರಮಣದಿಂದಾಗಲೀ ಅಥವಾ [1][ಸಶಸ್ತ್ರ ದಂಗೆಯಿಂದಾಗಲೀ] ಬೆದರಿಕೆಯ ಗಂಭೀರ ತುರ್ತು ಪರಿಸ್ಥಿತಿಯುಂಟಾಗಿದೆಯೆಂದು ರಾಷ್ಟ್ರಪತಿಗೆ ಮನದಟ್ಟಾದರೆ, ಅವನು ಉದ್ಘೋಷಣೆಯ ಮೂಲಕ [2][ಇಡೀ ಭಾರತಕ್ಕೆ ಸಂಬಂಧಿಸಿದಂತೆ ಅಥವಾ ಆ ಉದ್ಘೋಷಣೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಭಾರತದ ರಾಜ್ಯಕ್ಷೇತ್ರದ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ] ತುರ್ತುಪರಿಸ್ಥಿತಿಯನ್ನು ಘೋಷಿಸಬಹುದು.

[3][**ವಿವರಣೆ:-** ಭಾರತದ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗದ ಭದ್ರತೆಗೆ ಯುದ್ಧದಿಂದ ಅಥವಾ ಬಾಹ್ಯ ಆಕ್ರಮಣದಿಂದ ಅಥವಾ ಸಶಸ್ತ್ರ ದಂಗೆಯಿಂದ ಅಪಾಯವು ಸನ್ನಿಹಿತವಾಗಿದೆಯೆಂದು ರಾಷ್ಟ್ರಪತಿಗೆ ಮನದಟ್ಟಾದರೆ, ಅಂಥ ಯುದ್ಧವು ಅಥವಾ ಅಂಥ ಯಾವುದೇ ಆಕ್ರಮಣವು ಅಥವಾ ದಂಗೆಯು ವಾಸ್ತವಿಕವಾಗಿ ಘಟಿಸುವುದಕ್ಕೆ ಮೊದಲೇ, ಅಂಥ ಬೆದರಿಕೆಯು ಒದಗಿದೆಯೆಂದು ತುರ್ತುಪರಿಸ್ಥಿತಿಯ ಉದ್ಘೋಷಣೆಯನ್ನು ಹೊರಡಿಸಬಹುದು.]

[4][(2) (1)ನೇ ಖಂಡದ ಮೇರೆಗೆ ಹೊರಡಿಸಿದ ಉದ್ಘೋಷಣೆಯನ್ನು ತದನಂತರದ ಉದ್ಘೋಷಣೆಯ ಮೂಲಕ ವ್ಯತ್ಯಸ್ತಗೊಳಿಸಬಹುದು ಅಥವಾ ರದ್ದುಪಡಿಸಬಹುದು.

(3) ರಾಷ್ಟ್ರಪತಿಯು (1)ನೇ ಖಂಡದ ಮೇರೆಗೆ ಯಾವುದೇ ಉದ್ಘೋಷಣೆಯನ್ನು ಅಥವಾ ಅಂಥ ಉದ್ಘೋಷಣೆಯನ್ನು ವ್ಯತ್ಯಸ್ತಗೊಳಿಸುವ ಯಾವುದೇ ಉದ್ಘೋಷಣೆಯನ್ನು, ಒಕ್ಕೂಟದ ಮಂತ್ರಿಮಂಡಲವು (ಎಂದರೆ 75ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಪ್ರಧಾನಮಂತ್ರಿ ಮತ್ತು ಸಂಪುಟ ದರ್ಜೆಯ ಇತರ ಮಂತ್ರಿಗಳಿಂದ ಕೂಡಿದ ಮಂತ್ರಿಮಂಡಲ) ಅಂಥ ಉದ್ಘೋಷಣೆಯನ್ನು ಹೊರಡಿಸಬಹುದೆಂಬ ತೀರ್ಮಾನವನ್ನು ತನಗೆ ಬರಹದ ಮೂಲಕ ತಿಳಿಸಿದ ಹೊರತು, ಹೊರಡಿಸತಕ್ಕದ್ದಲ್ಲ.

(4) ಈ ಅನುಚ್ಛೇದದ ಮೇರೆಗೆ ಹೊರಡಿಸಿದ ಪ್ರತಿಯೊಂದು ಉದ್ಘೋಷಣೆಯನ್ನು ಸಂಸತ್ತಿನ ಪ್ರತಿಯೊಂದು ಸದನದಲ್ಲಿ ಇರಿಸತಕ್ಕದ್ದು ಮತ್ತು ಅದು ಈ ಮುಂಚಿನ ಒಂದು ಉದ್ಘೋಷಣೆಯನ್ನು ರದ್ದುಗೊಳಿಸುವ ಉದ್ಘೋಷಣೆಯಾಗಿದ್ದ ಹೊರತು, ಒಂದು ತಿಂಗಳ ಅವಧಿಯು ಮುಗಿಯುವುದಕ್ಕೆ ಮುಂಚೆ ಸಂಸತ್ತಿನ ಎರಡು ಸದನಗಳಿಂದಲೂ ನಿರ್ಣಯಗಳ ಮೂಲಕ ಅದು ಅನುಮೋದಿತವಾಗಿಲ್ಲದ ಪಕ್ಷದಲ್ಲಿ, ಆ ಅವಧಿಯು ಮುಗಿದ ಮೇಲೆ ಅದು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು:

ಪರಂತು, ಅಂಥ ಯಾವುದೇ ಉದ್ಘೋಷಣೆಯನ್ನು, (ಮುಂಚಿನ ಒಂದು ಉದ್ಘೋಷಣೆಯನ್ನು ರದ್ದುಗೊಳಿಸುವ ಉದ್ಘೋಷಣೆಯಾಗಿರದ) ಲೋಕಸಭೆಯು ವಿಸರ್ಜನೆಯಾಗಿರುವ ಸಮಯದಲ್ಲಿ ಹೊರಡಿಸಿದ್ದರೆ ಅಥವಾ ಈ ಖಂಡದಲ್ಲಿ ಉಲ್ಲೇಖಿಸಿರುವ ಒಂದು ತಿಂಗಳ ಅವಧಿಯೊಳಗೆ ಲೋಕಸಭೆಯು ವಿಸರ್ಜನೆಯಾದರೆ, ಮತ್ತು ಆ ಉದ್ಘೋಷಣೆಯನ್ನು ಅನುಮೋದಿಸುವ ನಿರ್ಣಯವು ರಾಜ್ಯಸಭೆಯಿಂದ ಅಂಗೀಕೃತವಾಗಿದ್ದು, ಆದರೆ ಅಂಥ ಉದ್ಘೋಷಣೆಯ ಬಗೆಗಿನ ಯಾವುದೇ ನಿರ್ಣಯವು, ಆ ಅವಧಿಯು ಮುಕ್ತಾಯವಾಗುವುದರೊಳಗೆ ಲೋಕಸಭೆಯಿಂದ ಅಂಗೀಕೃತವಾಗಿಲ್ಲದಿದ್ದಲ್ಲಿ, ಲೋಕಸಭೆಯು ಪುನರ್‌ರಚಿತವಾದ ಬಳಿಕ ಅದು ಮೊದಲನೆಯ ಸಲ ಸಭೆ ಸೇರಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯು ಮುಗಿಯುವುದಕ್ಕೆ ಮುಂಚೆ ಲೋಕಸಭೆಯಿಂದಲೂ ಸಹ ಆ ಉದ್ಘೋಷಣೆಯನ್ನು ಅನುಮೋದಿಸುವ ನಿರ್ಣಯವು ಅಂಗೀಕೃತವಾಗಿದ್ದ ಹೊರತು, ಆ ಅವಧಿಯು ಮುಗಿದ ಮೇಲೆ ಆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು.

---

1. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 37ನೆಯ ಪ್ರಕರಣದ ಮೂಲಕ "ಆಂತರಿಕ ಅಶಾಂತಿಯಿಂದ" ಎಂಬ ಪದಗಳಿಗೆ ಬದಲಾಗಿ (ದಿನಾಂಕ 20-6-79ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 48ನೆಯ ಪ್ರಕರಣದ ಮೂಲಕ (3-1-77ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 37ನೆಯ ಪ್ರಕರಣದ ಮೂಲಕ (20-6-79ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
4. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 37ನೆಯ ಪ್ರಕರಣದ ಮೂಲಕ (2), (2ಎ) ಮತ್ತು (3)ನೆಯ ಖಂಡಗಳಿಗೆ ಬದಲಾಗಿ (20-6-79ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

(5) ಹಾಗೆ ಅನುಮೋದಿತವಾದ ಉದ್ಘೋಷಣೆಯನ್ನು ರದ್ದುಗೊಳಿಸದಿದ್ದರೆ, (4)ನೆಯ ಖಂಡದ ಮೇರೆಗೆ ಆ ಉದ್ಘೋಷಣೆಯನ್ನು ಅನುಮೋದಿಸುವ ನಿರ್ಣಯಗಳಲ್ಲಿ, ಎರಡನೆಯದನ್ನು ಅಂಗೀಕರಿಸಿದ ದಿನಾಂಕದಿಂದ ಆರು ತಿಂಗಳುಗಳ ಅವಧಿಯು ಮುಕ್ತಾಯವಾದ ಮೇಲೆ ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು:

ಪರಂತು, ಅಂಥ ಉದ್ಘೋಷಣೆಯು ಜಾರಿಯಲ್ಲಿರುವುದನ್ನು ಮುಂದುವರಿಸುವ ನಿರ್ಣಯವನ್ನು ಸಂಸತ್ತಿನ ಎರಡೂ ಸದನಗಳು ಅನುಮೋದಿಸಿದರೆ ಮತ್ತು ಹಾಗೆ ಅನುಮೋದಿಸಿದಾಗಲೆಲ್ಲಾ, ಆ ಉದ್ಘೋಷಣೆಯನ್ನು ರದ್ದುಪಡಿಸಿದ ಹೊರತು ಈ ಖಂಡದ ಮೇರೆಗೆ ಅದು ಯಾವ ದಿನಾಂಕದಿಂದ ಜಾರಿಯಲ್ಲಿರುವುದು ಅನ್ಯಥಾ ನಿಂತುಹೋಗಬೇಕಾಗಿತ್ತೋ ಆ ದಿನಾಂಕದಿಂದ ಮತ್ತೆ ಆರು ತಿಂಗಳ ಅವಧಿಯವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು:

ಮತ್ತೂ ಪರಂತು, ಅಂಥ ಯಾವುದೇ ಆರು ತಿಂಗಳ ಅವಧಿಯೊಳಗೆ ಲೋಕಸಭೆಯ ವಿಸರ್ಜನೆಯಾದರೆ ಮತ್ತು ಅಂಥ ಉದ್ಘೋಷಣೆಯು ಜಾರಿಯಲ್ಲಿರುವುದನ್ನು ಮುಂದುವರಿಸುವ ನಿರ್ಣಯವನ್ನು ರಾಜ್ಯಸಭೆಯು ಅಂಗೀಕರಿಸಿದ್ದು, ಆದರೆ ಅಂಥ ಉದ್ಘೋಷಣೆಯು ಜಾರಿಯಲ್ಲಿರುವುದನ್ನು ಮುಂದುವರಿಸುವ ಬಗ್ಗೆ ಯಾವುದೇ ನಿರ್ಣಯವನ್ನು ಆ ಸದರಿ ಅವಧಿಯಲ್ಲಿ ಲೋಕಸಭೆಯು ಅಂಗೀಕರಿಸದಿದ್ದರೆ, ಲೋಕಸಭೆಯು ಪುನರ್‌ರಚಿತವಾದ ಬಳಿಕ ಮೊದಲನೆಯ ಸಲ ಸಭೆ ಸೇರಿದ ದಿನಾಂಕದಿಂದ ಮೂವತ್ತು ದಿನಗಳು ಮುಗಿಯುವುದಕ್ಕೆ ಮುಂಚೆ ಜಾರಿಯಲ್ಲಿರುವ ಆ ಉದ್ಘೋಷಣೆಯ ಮುಂದುವರಿಕೆಯನ್ನು ಅನುಮೋದಿಸುವ ನಿರ್ಣಯವನ್ನು ಲೋಕಸಭೆಯು ಸಹ ಅಂಗೀಕರಿಸಿದ ಹೊರತು ಆ ಮೂವತ್ತು ದಿನಗಳ ಅವಧಿ ಮುಗಿದ ಮೇಲೆ ಆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು.

(6) (4)ನೆಯ ಮತ್ತು (5)ನೆಯ ಖಂಡಗಳ ಉದ್ದೇಶಗಳಿಗಾಗಿ, ಸಂಸತ್ತಿನ ಯಾವುದೇ ಸದನವು ಆ ಸದನದ ಒಟ್ಟು ಸದಸ್ಯರ ಬಹುಮತದ ಮೂಲಕ ಮತ್ತು ಹಾಜರಿದ್ದು ಮತನೀಡುವ ಆ ಸದನದ ಸದಸ್ಯರ ಮೂರನೇ ಎರಡಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರ ಬಹುಮತದ ಮೂಲಕ ಮಾತ್ರ ನಿರ್ಣಯವನ್ನು ಅಂಗೀಕರಿಸಬಹುದು.

(7) ಹಿಂದೆ ಹೇಳಿದ ಖಂಡಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, (1)ನೇ ಖಂಡದ ಮೇರೆಗೆ ಹೊರಡಿಸಿದ ಉದ್ಘೋಷಣೆಯನ್ನು ಅಥವಾ ಅಂಥ ಉದ್ಘೋಷಣೆಯನ್ನು ವ್ಯತ್ಯಸ್ತಗೊಳಿಸುವ ಉದ್ಘೋಷಣೆಯನ್ನು ಲೋಕಸಭೆಯು ಅನುಮೋದಿಸದಿರುವ ಅಥವಾ ಸಂದರ್ಭಾನುಸಾರ ಅದರ ಜಾರಿಯ ಮುಂದುವರಿಕೆಯನ್ನು ಅನುಮೋದಿಸದಿರುವ ನಿರ್ಣಯವನ್ನು ಅಂಗೀಕರಿಸಿದರೆ ರಾಷ್ಟ್ರಪತಿಯು ಅಂಥ ಉದ್ಘೋಷಣೆಯನ್ನು ರದ್ದುಗೊಳಿಸತಕ್ಕದ್ದು.

(8) (1)ನೆಯ ಖಂಡದ ಮೇರೆಗೆ ಹೊರಡಿಸಲಾದ ಉದ್ಘೋಷಣೆಯನ್ನು ಅಥವಾ ಅಂಥ ಉದ್ಘೋಷಣೆಯನ್ನು ವ್ಯತ್ಯಸ್ತಗೊಳಿಸುವ ಉದ್ಘೋಷಣೆಯನ್ನು ಅನುಮೋದಿಸದಿರುವ ಅಥವಾ ಸಂದರ್ಭಾನುಸಾರ ಅದರ ಜಾರಿಯ ಮುಂದುವರಿಕೆಯನ್ನು ಅನುಮೋದಿಸದಿರುವ ನಿರ್ಣಯವನ್ನು ಮಂಡಿಸುವ ತಮ್ಮ ಆಶಯದ ಬಗ್ಗೆ ಲೋಕಸಭೆಯ ಒಟ್ಟು ಸದಸ್ಯರ ಹತ್ತನೇ ಒಂದಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರು ಸಹಿ ಮಾಡಿದ ಲಿಖಿತ ಸೂಚನೆಯನ್ನು,-

(ಎ) ಸದನವು ಅಧಿವೇಶನದಲ್ಲಿದ್ದರೆ, ಅಧ್ಯಕ್ಷನಿಗೆ; ಅಥವಾ

(ಬಿ) ಸದನವು ಅಧಿವೇಶನದಲ್ಲಿಲ್ಲದಿದ್ದರೆ, ರಾಷ್ಟ್ರಪತಿಗೆ

- ಕೊಟ್ಟಿರುವಲ್ಲಿ ಅಂಥ ಸೂಚನೆಯನ್ನು ಅಧ್ಯಕ್ಷನು ಅಥವಾ ಸಂದರ್ಭಾನುಸಾರ ರಾಷ್ಟ್ರಪತಿಯು ಸ್ವೀಕರಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳ ಒಳಗಾಗಿ ಅಂಥ ನಿರ್ಣಯವನ್ನು ಪರ್ಯಾಲೋಚಿಸುವ ಉದ್ದೇಶಕ್ಕಾಗಿ ಸದನದ ಒಂದು ವಿಶೇಷ ಉಪವೇಶನವನ್ನು ನಡೆಸತಕ್ಕದ್ದು.]

[1][2][(9)] (1)ನೆಯ ಖಂಡದ ಮೇರೆಗೆ ರಾಷ್ಟ್ರಪತಿಯು ಈಗಾಗಲೇ ಉದ್ಘೋಷಣೆಯನ್ನು ಹೊರಡಿಸಿರಲಿ ಅಥವಾ ಇಲ್ಲದಿರಲಿ ಮತ್ತು ಅಂಥ ಉದ್ಘೋಷಣೆಯು ಜಾರಿಯಲ್ಲಿರಲಿ ಅಥವಾ ಇಲ್ಲದಿರಲಿ, ಬೇರೆ ಬೇರೆ ಆಧಾರಗಳ ಮೇಲೆ ಎಂದರೆ, ಯುದ್ಧದ ಅಥವಾ ಬಾಹ್ಯ ಆಕ್ರಮಣದ ಅಥವಾ [3][ಸಶಸ್ತ್ರ ದಂಗೆಯ] ಆಧಾರದ ಮೇಲೆ ಅಥವಾ ಯುದ್ಧ ಅಥವಾ ಬಾಹ್ಯ ಆಕ್ರಮಣ ಅಥವಾ [3][ಸಶಸ್ತ್ರದಂಗೆಯ] ಅಪಾಯವು ಸನ್ನಿಹಿತವಾಗಿದೆ ಎಂಬ ಆಧಾರದ ಮೇಲೆ, ಬೇರೆ ಬೇರೆ ಉದ್ಘೋಷಣೆಗಳನ್ನು ಹೊರಡಿಸುವ ಅಧಿಕಾರವನ್ನು ಈ ಅನುಚ್ಛೇದದ ಮೂಲಕ ರಾಷ್ಟ್ರಪತಿಗೆ ಪ್ರದತ್ತವಾದ ಅಧಿಕಾರವು ಒಳಗೊಂಡಿರತಕ್ಕದ್ದು.

[4] * * * * *]

**353. ತುರ್ತುಪರಿಸ್ಥಿತಿಯ ಉದ್ಘೋಷಣೆಯ ಪರಿಣಾಮ:–** ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಾಗ,–

(ಎ) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ಒಕ್ಕೂಟದ ಕಾರ್ಯಾಂಗ ಅಧಿಕಾರವು, ಯಾವುದೇ ರಾಜ್ಯವು ತನ್ನ ಕಾರ್ಯಾಂಗ ಅಧಿಕಾರವನ್ನು ಯಾವ ರೀತಿಯಲ್ಲಿ ಚಲಾಯಿಸಬೇಕೆಂಬ ಬಗ್ಗೆ ನಿರ್ದೇಶನಗಳನ್ನು ಕೊಡುವುದಕ್ಕೆ ವ್ಯಾಪ್ತವಾಗತಕ್ಕದ್ದು;

(ಬಿ) ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸಲು ಸಂಸತ್ತಿಗಿರುವ ಅಧಿಕಾರವು, ಆ ವಿಷಯವು ಒಕ್ಕೂಟಪಟ್ಟಿಯಲ್ಲಿ ನಮೂದಾಗಿಲ್ಲದ ವಿಷಯವಾಗಿದ್ದಾಗ್ಯೂ, ಆ ಬಗ್ಗೆ ಒಕ್ಕೂಟಕ್ಕೆ ಅಥವಾ ಒಕ್ಕೂಟದ ಅಧಿಕಾರಿಗಳಿಗೆ ಮತ್ತು ಪ್ರಾಧಿಕಾರಗಳಿಗೆ ಅಧಿಕಾರಗಳನ್ನು ಪ್ರದಾನ ಮಾಡುವ ಮತ್ತು ಕರ್ತವ್ಯಗಳನ್ನು ವಿಧಿಸುವ ಅಥವಾ ಅಧಿಕಾರಗಳನ್ನು ಪ್ರದಾನ ಮಾಡುವುದನ್ನು ಮತ್ತು ಕರ್ತವ್ಯಗಳನ್ನು ವಿಧಿಸುವುದನ್ನು ಅಧಿಕೃತಗೊಳಿಸುವ ಕಾನೂನುಗಳನ್ನು ರಚಿಸುವ ಅಧಿಕಾರವನ್ನು ಒಳಗೊಂಡಿರತಕ್ಕದ್ದು:

[5][ಪರಂತು, ತುರ್ತುಪರಿಸ್ಥಿತಿಯ ಉದ್ಘೋಷಣೆಯು ಭಾರತದ ರಾಜ್ಯಕ್ಷೇತ್ರದ ಯಾವುದೇ ಭಾಗದಲ್ಲಿ ಮಾತ್ರ ಜಾರಿಯಲ್ಲಿರುವಾಗ,–

(i) (ಎ) ಖಂಡದ ಮೇರೆಗೆ ನಿರ್ದೇಶನಗಳನ್ನು ಕೊಡುವುದಕ್ಕೆ ಒಕ್ಕೂಟಕ್ಕಿರುವ ಕಾರ್ಯಾಂಗ ಅಧಿಕಾರವು, ಮತ್ತು

(ii) (ಬಿ) ಖಂಡದ ಮೇರೆಗೆ ಕಾನೂನುಗಳನ್ನು ರಚಿಸಲು ಸಂಸತ್ತಿಗಿರುವ ಅಧಿಕಾರವು

– ಭಾರತದ ಯಾವ ರಾಜ್ಯಕ್ಷೇತ್ರದಲ್ಲಿ ಅಥವಾ ಅದರ ಯಾವ ಭಾಗದಲ್ಲಿ ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವುದೋ ಆ ರಾಜ್ಯಕ್ಷೇತ್ರದಲ್ಲಿ ಅಥವಾ ಅದರ ಭಾಗದಲ್ಲಿ ಅಥವಾ ಅವುಗಳಿಗೆ ಸಂಬಂಧಿಸಿದಂತೆ ನಡೆಯುತ್ತಿರುವ ಚಟುವಟಿಕೆಗಳ ಕಾರಣದಿಂದ ಭಾರತದ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗದ ಭದ್ರತೆಗೆ ಬೆದರಿಕೆ ಉಂಟಾಗುವಂತಿದ್ದರೆ ಮತ್ತು ಹಾಗೆ ಉಂಟಾಗುವಷ್ಟರ ಮಟ್ಟಿಗೆ, ತುರ್ತುಪರಿಸ್ಥಿತಿಯು ಜಾರಿಯಲ್ಲಿರುವ ರಾಜ್ಯವನ್ನು ಅಥವಾ ಅದರ ಭಾಗವನ್ನು ಹೊರತುಪಡಿಸಿ ಇತರ ಯಾವುದೇ ರಾಜ್ಯಕ್ಕೆ ಸಹ, ವ್ಯಾಪ್ತವಾಗತಕ್ಕದ್ದು.]

---

1. 1975ನೆಯ ಇಸವಿಯ ಸಂವಿಧಾನ (ಮೂವತ್ತೆಂಟನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ (ಪೂರ್ವಾನ್ವಯವಾಗಿ) ಸೇರಿಸಲಾಗಿದೆ
2. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 37ನೆಯ ಪ್ರಕರಣದ ಮೂಲಕ (20.6.79 ರಿಂದ ಜಾರಿಗೆ ಬರುವಂತೆ) (4)ನೆಯ ಖಂಡಕ್ಕೆ (9) ಎಂದು ಪುನರ್ ಸಂಖ್ಯೆ ನೀಡಲಾಗಿದೆ.
3. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 37ನೆಯ ಪ್ರಕರಣದ ಮೂಲಕ "ಆಂತರಿಕ ಅಶಾಂತಿ" ಎಂಬ ಪದಗಳಿಗೆ ಬದಲಾಗಿ (20–6–79ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
4. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 37ನೆಯ ಪ್ರಕರಣದ ಮೂಲಕ (5)ನೇ ಖಂಡವನ್ನು (20–6–79ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
5. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 49ನೆಯ ಪ್ರಕರಣದ ಮೂಲಕ (3–1–77ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

**354. ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಾಗ ರಾಜಸ್ವಗಳ ಹಂಚಿಕೆಗಳಿಗೆ ಸಂಬಂಧಿಸಿದ ಉಪಬಂಧಗಳ ಅನ್ವಯ:–** (1) ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಾಗ ರಾಷ್ಟ್ರಪತಿಯು ಆದೇಶದ ಮೂಲಕ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ, ಆದರೆ ಯಾವ ಹಣಕಾಸು ವರ್ಷದಲ್ಲಿ ಆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋಗುತ್ತದೆಯೋ ಆ ವರ್ಷವು ಮುಕ್ತಾಯವಾದ ನಂತರ, ಅಂಥ ಅವಧಿಯನ್ನು ಯಾವುದೇ ಸಂದರ್ಭದಲ್ಲಿ ಹೆಚ್ಚಿಸದೆ, ತಾನು ಸೂಕ್ತವೆಂದು ಭಾವಿಸುವಂಥ ವಿನಾಯಿತಿಗಳಿಗೆ ಅಥವಾ ಮಾರ್ಪಾಡುಗಳಿಗೆ ಒಳಪಟ್ಟು 268ರಿಂದ 279ರ ವರೆಗಿನ ಅನುಚ್ಛೇದಗಳ ಎಲ್ಲ ಅಥವಾ ಯಾವುದೇ ಉಪಬಂಧಗಳು ಪರಿಣಾಮಕಾರಿಯಾಗತಕ್ಕದ್ದೆಂದು ನಿರ್ದೇಶಿಸಬಹುದು.

(2) (1)ನೆಯ ಖಂಡದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದಿಡತಕ್ಕದ್ದು.

**355. ಬಾಹ್ಯ ಆಕ್ರಮಣ ಮತ್ತು ಆಂತರಿಕ ಗಲಭೆಯಿಂದ ರಾಜ್ಯಗಳನ್ನು ಸಂರಕ್ಷಿಸುವುದು ಒಕ್ಕೂಟದ ಕರ್ತವ್ಯ:–** (1) ಪ್ರತಿಯೊಂದು ರಾಜ್ಯವನ್ನು ಬಾಹ್ಯ ಆಕ್ರಮಣದಿಂದ ಮತ್ತು ಆಂತರಿಕ ಗಲಭೆಯಿಂದ ಸಂರಕ್ಷಿಸುವುದು ಮತ್ತು ಪ್ರತಿಯೊಂದು ರಾಜ್ಯದ ಸರ್ಕಾರವು ಈ ಸಂವಿಧಾನದ ಉಪಬಂಧಗಳಿಗೆ ಅನುಸಾರವಾಗಿ ನಡೆಯುವುದನ್ನು ಸುನಿಶ್ಚಿತಗೊಳಿಸುವುದು ಒಕ್ಕೂಟದ ಕರ್ತವ್ಯವಾಗಿರತಕ್ಕದ್ದು.

**356. ರಾಜ್ಯಗಳಲ್ಲಿ ಸಂವಿಧಾನಾತ್ಮಕ ವ್ಯವಸ್ಥೆಯು ವಿಫಲವಾದ ಸಂದರ್ಭದಲ್ಲಿ ಉಪಬಂಧಗಳು:–** (1) ಈ ಸಂವಿಧಾನದ ಉಪಬಂಧಗಳಿಗೆ ಅನುಸಾರವಾಗಿ ಒಂದು ರಾಜ್ಯದ ಸರ್ಕಾರವನ್ನು ನಡೆಸಲು ಶಕ್ಯವಿಲ್ಲದಂಥ ಸನ್ನಿವೇಶವು ಉದ್ಭವಿಸಿದೆಯೆಂದು ಆ ರಾಜ್ಯದ ರಾಜ್ಯಪಾಲನಿಂದ [1]***ವರದಿಯನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ ರಾಷ್ಟ್ರಪತಿಗೆ ಮನದಟ್ಟಾದರೆ, ಅವನು ಉದ್ಘೋಷಣೆಯ ಮೂಲಕ,–

(ಎ) ಆ ರಾಜ್ಯ ಸರ್ಕಾರದ ಎಲ್ಲ ಅಥವಾ ಯಾವುವೇ ಪ್ರಕಾರ್ಯಗಳನ್ನು ಮತ್ತು ರಾಜ್ಯಪಾಲನಲ್ಲಿ [2]* * * ಅಥವಾ ರಾಜ್ಯದ ವಿಧಾನಮಂಡಲವನ್ನು ಹೊರತುಪಡಿಸಿ ರಾಜ್ಯದಲ್ಲಿನ ಇತರ ಯಾವುದೇ ನಿಕಾಯದಲ್ಲಿ ಅಥವಾ ಪ್ರಾಧಿಕಾರದಲ್ಲಿ ನಿಹಿತವಾಗಿರುವ ಅಥವಾ ಅವನು ಅಥವಾ ಅದು ಚಲಾಯಿಸಬಹುದಾಗಿರುವ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ತಾನೇ ವಹಿಸಿಕೊಳ್ಳಬಹುದು;

(ಬಿ) ಆ ರಾಜ್ಯದ ವಿಧಾನಮಂಡಲದ ಅಧಿಕಾರಗಳನ್ನು ಸಂಸತ್ತಿನ ಪ್ರಾಧಿಕಾರದ ಮೂಲಕ ಅಥವಾ ಅದರ ಮೇರೆಗೆ ಚಲಾಯಿಸತಕ್ಕದ್ದೆಂದು ಘೋಷಿಸಬಹುದು;

(ಸಿ) ಆ ರಾಜ್ಯದಲ್ಲಿನ ಯಾವುದೇ ನಿಕಾಯಕ್ಕೆ ಅಥವಾ ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ ಈ ಸಂವಿಧಾನದ ಯಾವುವೇ ಉಪಬಂಧಗಳ ಜಾರಿಯನ್ನು ಪೂರ್ಣವಾಗಿ ಅಥವಾ ಭಾಗಶಃ ಅಮಾನತ್ತುಗೊಳಿಸುವ ಉಪಬಂಧಗಳನ್ನು ಒಳಗೊಂಡು, ಉದ್ಘೋಷಣೆಯ ಉದ್ದೇಶಗಳನ್ನು ಜಾರಿಗೆ ತರಲು ಅವಶ್ಯವೆಂದು ಅಥವಾ ಅಪೇಕ್ಷಣೀಯವೆಂದು ರಾಷ್ಟ್ರಪತಿಗೆ ಕಂಡುಬರುವಂಥ ಪ್ರಾಸಂಗಿಕ ಮತ್ತು ಆನುಷಂಗಿಕ ಉಪಬಂಧಗಳನ್ನು ಮಾಡಬಹುದು:

ಪರಂತು, ಈ ಖಂಡದಲ್ಲಿ ಇರುವುದು ಯಾವುದೂ, ಉಚ್ಚ ನ್ಯಾಯಾಲಯದಲ್ಲಿ ನಿಹಿತವಾಗಿರುವ ಅಥವಾ ಅದು ಚಲಾಯಿಸಬಹುದಾಗಿರುವ ಅಧಿಕಾರಗಳ ಪೈಕಿ ಯಾವುದೇ ಅಧಿಕಾರವನ್ನು ರಾಷ್ಟ್ರಪತಿಯು ತಾನೇ ವಹಿಸಿಕೊಳ್ಳುವುದಕ್ಕೆ ಅಥವಾ ಉಚ್ಚ ನ್ಯಾಯಾಲಯಗಳಿಗೆ ಸಂಬಂಧಪಟ್ಟಂತೆ, ಈ ಸಂವಿಧಾನದ ಯಾವುದೇ ಉಪಬಂಧದ ಜಾರಿಯನ್ನು ಪೂರ್ಣವಾಗಿ ಅಥವಾ ಭಾಗಶಃ ಅಮಾನತ್ತುಗೊಳಿಸುವುದಕ್ಕೆ ಅವನನ್ನು ಅಧಿಕೃತಗೊಳಿಸತಕ್ಕದ್ದಲ್ಲ.

(2) ಅಂಥ ಯಾವುದೇ ಉದ್ಘೋಷಣೆಯನ್ನು ತದನಂತರದ ಉದ್ಘೋಷಣೆಯ ಮೂಲಕ ರದ್ದುಗೊಳಿಸಬಹುದು ಅಥವಾ ವ್ಯತ್ಯಸ್ತಗೊಳಿಸಬಹುದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನಿಂದ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ಸಂದರ್ಭಾನುಸಾರ ರಾಜಪ್ರಮುಖನಲ್ಲಿ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

(3) ಈ ಅನುಚ್ಛೇದದ ಮೇರೆಗಿನ ಪ್ರತಿಯೊಂದು ಉದ್ಘೋಷಣೆಯನ್ನು, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು ಮತ್ತು ಅದು ಈ ಮುಂಚಿನ ಒಂದು ಉದ್ಘೋಷಣೆಯನ್ನು ರದ್ದುಗೊಳಿಸುವ ಉದ್ಘೋಷಣೆಯಾಗಿದ್ದ ಹೊರತು, ಎರಡು ತಿಂಗಳ ಅವಧಿಯು ಮುಗಿಯುವುದಕ್ಕೆ ಮುನ್ನ, ಸಂಸತ್ತಿನ ಎರಡೂ ಸದನಗಳಿಂದ ನಿರ್ಣಯಗಳ ಮೂಲಕ ಅದು ಅನುಮೋದಿತವಾಗಿದ್ದ ಹೊರತು ಆ ಅವಧಿಯು ಮುಕ್ತಾಯವಾದ ಮೇಲೆ ಅದು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು:

ಪರಂತು, ಅಂಥ ಯಾವುದೇ ಉದ್ಘೋಷಣೆಯನ್ನು (ಮುಂಚಿನ ಒಂದು ಉದ್ಘೋಷಣೆಯನ್ನು ರದ್ದುಗೊಳಿಸುವ ಉದ್ಘೋಷಣೆಯಾಗಿರದ) ಲೋಕಸಭೆಯ ವಿಸರ್ಜನೆಯಾಗಿರುವ ಸಮಯದಲ್ಲಿ ಹೊರಡಿಸಿದ್ದರೆ ಅಥವಾ ಈ ಖಂಡದಲ್ಲಿ ಉಲ್ಲೇಖಿಸಿರುವ ಎರಡು ತಿಂಗಳ ಅವಧಿಯೊಳಗೆ ಲೋಕಸಭೆಯು ವಿಸರ್ಜನೆಯಾದರೆ ಮತ್ತು ಆ ಉದ್ಘೋಷಣೆಯನ್ನು ಅನುಮೋದಿಸುವ ನಿರ್ಣಯವು ರಾಜ್ಯಸಭೆಯಿಂದ ಅಂಗೀಕೃತವಾಗಿದ್ದು, ಆದರೆ ಅಂಥ ಉದ್ಘೋಷಣೆಯ ಬಗೆಗಿನ ಯಾವುದೇ ನಿರ್ಣಯವು ಆ ಅವಧಿಯು ಮುಗಿಯುವುದರೊಳಗೆ ಲೋಕಸಭೆಯಿಂದ ಅಂಗೀಕೃತವಾಗಿಲ್ಲದಿದ್ದರೆ, ಲೋಕಸಭೆಯು ಪುನರ್‌ರಚಿತವಾದ ಬಳಿಕ ಅದು ಮೊದಲನೆಯ ಸಲ ಸಭೆ ಸೇರಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯು ಮುಗಿಯುವುದಕ್ಕೆ ಮುಂಚೆ, ಲೋಕಸಭೆಯಿಂದಲೂ ಸಹ ಆ ಉದ್ಘೋಷಣೆಯನ್ನು ಅನುಮೋದಿಸುವ ನಿರ್ಣಯವು ಅಂಗೀಕೃತವಾಗಿದ್ದ ಹೊರತು, ಆ ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ಮೇಲೆ ಆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು.

(4) ಹಾಗೆ ಅನುಮೋದಿತವಾದ ಉದ್ಘೋಷಣೆಯನ್ನು ರದ್ದುಗೊಳಿಸದಿದ್ದರೆ, [1][ಆ ಉದ್ಘೋಷಣೆಯನ್ನು ಹೊರಡಿಸಲಾದ ದಿನಾಂಕದಿಂದ ಆರು ತಿಂಗಳ] ಅವಧಿಯು ಮುಗಿದ ಮೇಲೆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು:

ಪರಂತು, ಅಂಥ ಉದ್ಘೋಷಣೆಯು ಜಾರಿಯಲ್ಲಿರುವುದನ್ನು ಮುಂದುವರೆಸುವ ನಿರ್ಣಯವನ್ನು ಸಂಸತ್ತಿನ ಎರಡೂ ಸದನಗಳು ಅಂಗೀಕರಿಸಿದರೆ, ಮತ್ತು ಅಂಗೀಕರಿಸಿದಾಗಲೆಲ್ಲಾ, ಆ ಉದ್ಘೋಷಣೆಯನ್ನು ರದ್ದುಪಡಿಸಿದ ಹೊರತು ಈ ಖಂಡದ ಮೇರೆಗೆ, ಅದು ಯಾವ ದಿನಾಂಕದಿಂದ ಜಾರಿಯಲ್ಲಿರುವುದು ಅನ್ಯಥಾ ನಿಂತುಹೋಗಬೇಕಾಗಿತ್ತೋ ಆ ದಿನಾಂಕದಿಂದ ಮತ್ತೆ [2][ಆರು ತಿಂಗಳ] ಅವಧಿಯವರೆಗೆ ಅದು ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು, ಆದರೆ ಅಂಥ ಯಾವುದೇ ಉದ್ಘೋಷಣೆಯು ಯಾವುದೇ ಸಂದರ್ಭದಲ್ಲಿ, ಮೂರು ವರ್ಷಗಳಿಗಿಂತ ಹೆಚ್ಚಾಗಿ ಜಾರಿಯಲ್ಲಿರತಕ್ಕದ್ದಲ್ಲ:

ಮತ್ತೂ ಪರಂತು, ಅಂಥ ಯಾವುದೇ [2][ಆರು ತಿಂಗಳ] ಅವಧಿಯೊಳಗೆ ಲೋಕಸಭೆಯ ವಿಸರ್ಜನೆಯಾದರೆ ಮತ್ತು ಅಂಥ ಉದ್ಘೋಷಣೆಯು ಜಾರಿಯಲ್ಲಿರುವುದನ್ನು ಮುಂದುವರೆಸುವ ನಿರ್ಣಯವನ್ನು ರಾಜ್ಯಸಭೆಯು ಅಂಗೀಕರಿಸಿದ್ದು, ಆದರೆ ಅಂಥ ಉದ್ಘೋಷಣೆಯು ಜಾರಿಯಲ್ಲಿರುವುದನ್ನು ಮುಂದುವರೆಸುವ ಬಗ್ಗೆ ಯಾವುದೇ ನಿರ್ಣಯವನ್ನು ಆ ಸದರಿ ಅವಧಿಯಲ್ಲಿ ಲೋಕಸಭೆಯು ಅಂಗೀಕರಿಸದಿದ್ದರೆ, ಲೋಕಸಭೆಯು ಪುನರ್‌ರಚಿತವಾದ ಬಳಿಕ ಮೊದಲನೆಯ ಸಲ ಸಭೆ ಸೇರಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯು ಮುಗಿಯುವುದಕ್ಕೆ ಮುಂಚೆ ಜಾರಿಯಲ್ಲಿರುವ ಆ ಉದ್ಘೋಷಣೆಯ ಮುಂದುವರಿಕೆಯನ್ನು ಅನುಮೋದಿಸುವ ನಿರ್ಣಯವನ್ನು ಲೋಕಸಭೆಯು ಸಹ ಅಂಗೀಕರಿಸಿದ ಹೊರತು ಆ ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ಮೇಲೆ ಆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು:

---

1. 1978ನೇ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 38ನೇ ಪ್ರಕರಣದ ಮೂಲಕ "(3)ನೆಯ ಖಂಡದ ಮೂಲಕ ಆ ಉದ್ಘೋಷಣೆಯನ್ನು ಅನುಮೋದಿಸುವ ನಿರ್ಣಯಗಳಲ್ಲಿ ಎರಡನೆಯದು ಅನುಮೋದಿತವಾದ ತಾರೀಖಿನಿಂದ ಒಂದು ವರ್ಷ" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳಿಗೆ ಬದಲಾಗಿ (20.06.79ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 50ನೆಯ ಪ್ರಕರಣದ ಮೂಲಕ "ಆರು ತಿಂಗಳು" ಎಂಬ ಮೂಲ ಪದಗಳಿಗೆ ಬದಲಾಗಿ "ಒಂದು ವರ್ಷ" ಎಂಬ ಪದಗಳನ್ನು (3-1-77ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿತ್ತು.

2. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 38ನೇ ಪ್ರಕರಣದ ಮೂಲಕ "ಒಂದು ವರ್ಷ" ಎಂಬ ಪದಗಳಿಗೆ ಬದಲಾಗಿ (20.6.79ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 50ನೇ ಪ್ರಕರಣದ ಮೂಲಕ "ಆರು ತಿಂಗಳು" ಎಂಬ ಮೂಲ ಪದಗಳಿಗೆ ಬದಲಾಗಿ "ಒಂದು ವರ್ಷ" ಎಂಬ ಪದಗಳನ್ನು (3.1.1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿತ್ತು.

[1][ಮತ್ತೂ ಪರಂತು, (1)ನೇ ಖಂಡದ ಮೇರೆಗೆ ಪಂಜಾಬ್ ರಾಜ್ಯಕ್ಕೆ ಸಂಬಂಧಿಸಿದಂತೆ 1987ರ ಮೇ 11ನೇ ದಿನದಂದು ಹೊರಡಿಸಿದ ಉದ್ಘೋಷಣೆಯ ಸಂದರ್ಭದಲ್ಲಿ ಈ ಖಂಡದ ಮೊದಲನೆಯ ಪರಂತುಕದಲ್ಲಿ "ಮೂರು ವರ್ಷಗಳಿಗಿಂತ" ಎಂಬುದಕ್ಕೆ ಮಾಡಿದ ಉಲ್ಲೇಖವನ್ನು [2][ಐದು ವರ್ಷಗಳಿಗಿಂತ] ಎಂಬುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.]

[3][(5) (4)ನೆಯ ಖಂಡದಲ್ಲಿ ಏನೇ ಒಳಗೊಂಡಿದ್ದಾಗ್ಯೂ, (3)ನೆಯ ಖಂಡದ ಮೇರೆಗೆ ಅನುಮೋದಿತವಾದ ಉದ್ಘೋಷಣೆಯನ್ನು ಹೊರಡಿಸಿದ ದಿನಾಂಕದಿಂದ ಒಂದು ವರ್ಷವನ್ನು ಮೀರಿ ಯಾವುದೇ ಅವಧಿಯವರೆಗೆ ಅದು ಜಾರಿಯಲ್ಲಿರುವುದನ್ನು ಮುಂದುವರಿಸುವ ಬಗ್ಗೆ ಯಾವುದೇ ನಿರ್ಣಯವನ್ನು ಯಾವ ಸದನವೇ ಆಗಲಿ,-

(ಎ) ಅಂಥ ನಿರ್ಣಯವನ್ನು ಅಂಗೀಕರಿಸುವ ಕಾಲದಲ್ಲಿ, ಭಾರತದಾದ್ಯಂತ ಅಥವಾ ಸಂದರ್ಭಾನುಸಾರ ಇಡೀ ಆ ರಾಜ್ಯದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿದ್ದ ಹೊರತು; ಮತ್ತು

(ಬಿ) ಅಂಥ ನಿರ್ಣಯದಲ್ಲಿ ನಿರ್ದಿಷ್ಟಪಡಿಸಿದ ಅವಧಿಯಲ್ಲಿ (3)ನೆಯ ಖಂಡದ ಮೇರೆಗೆ ಅನುಮೋದಿತವಾದ ಉದ್ಘೋಷಣೆಯು ಜಾರಿಯಲ್ಲಿ ಮುಂದುವರಿಯುವುದು, ಸಂಬಂಧಪಟ್ಟ ರಾಜ್ಯದ ವಿಧಾನಸಭೆಗೆ ಸಾರ್ವತ್ರಿಕ ಚುನಾವಣೆಗಳನ್ನು ನಡೆಸುವಲ್ಲಿ ಉಂಟಾಗುವ ತೊಂದರೆಗಳ ಕಾರಣದಿಂದಾಗಿ ಅವಶ್ಯವೆಂದು ಚುನಾವಣಾ ಆಯೋಗವು ಪ್ರಮಾಣೀಕರಿಸಿದ ಹೊರತು

– ಅಂಗೀಕರಿಸತಕ್ಕದ್ದಲ್ಲ:]

[4][ಪರಂತು, ಈ ಖಂಡದಲ್ಲಿರುವುದು ಯಾವುದೂ, (1)ನೇ ಖಂಡದ ಮೇರೆಗೆ ಪಂಜಾಬ್ ರಾಜ್ಯಕ್ಕೆ ಸಂಬಂಧಿಸಿದಂತೆ 1987ರ ಮೇ 11ನೇ ದಿನದಂದು ಹೊರಡಿಸಿದ ಉದ್ಘೋಷಣೆಗೆ ಅನ್ವಯವಾಗತಕ್ಕದ್ದಲ್ಲ.]

**357. 356ನೆಯ ಅನುಚ್ಛೇದದ ಮೇರೆಗೆ ಹೊರಡಿಸಿದ ಉದ್ಘೋಷಣೆಯ ಮೇರೆಗೆ ವಿಧಾಯೀ ಅಧಿಕಾರಗಳ ಚಲಾವಣೆ:**- (1) ರಾಜ್ಯದ ವಿಧಾನಮಂಡಲದ ಅಧಿಕಾರವನ್ನು ಸಂಸತ್ತಿನ ಪ್ರಾಧಿಕಾರದ ಮೂಲಕ ಅಥವಾ ಅದರ ಮೇರೆಗೆ ಚಲಾಯಿಸತಕ್ಕದ್ದೆಂದು 356ನೆಯ ಅನುಚ್ಛೇದದ (1)ನೆಯ ಖಂಡದ ಮೇರೆಗೆ ಹೊರಡಿಸಿದ ಉದ್ಘೋಷಣೆಯ ಮೂಲಕ ಘೋಷಿಸಿರುವಲ್ಲಿ,-

(ಎ) ರಾಜ್ಯದ ವಿಧಾನಮಂಡಲದ ಕಾನೂನು ರಚನಾಧಿಕಾರವನ್ನು ರಾಷ್ಟ್ರಪತಿಗೆ ಪ್ರದಾನ ಮಾಡಲು ಮತ್ತು ಹಾಗೆ ಪ್ರದತ್ತವಾದ ಅಧಿಕಾರವನ್ನು, ರಾಷ್ಟ್ರಪತಿಯು ವಿಧಿಸಲು ಯೋಗ್ಯವೆಂದು ಭಾವಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಅವನು ಆ ಸಂಬಂಧದಲ್ಲಿ ನಿರ್ದಿಷ್ಟಪಡಿಸಬೇಕಾದ ಇತರ ಯಾರೇ ಪ್ರಾಧಿಕಾರಿಗೆ ವಹಿಸಿಕೊಡಲು ರಾಷ್ಟ್ರಪತಿಯನ್ನು ಅಧಿಕೃತಗೊಳಿಸಲು ಸಂಸತ್ತು ಸಕ್ಷಮವಾಗಿರತಕ್ಕದ್ದು;

(ಬಿ) ಒಕ್ಕೂಟಕ್ಕೆ ಅಥವಾ ಅದರ ಅಧಿಕಾರಿಗಳಿಗೆ ಮತ್ತು ಪ್ರಾಧಿಕಾರಗಳಿಗೆ ಅಧಿಕಾರಗಳನ್ನು ಪ್ರದಾನ ಮಾಡುವ ಮತ್ತು ಕರ್ತವ್ಯಗಳನ್ನು ವಿಧಿಸುವ ಅಥವಾ ಅಧಿಕಾರವನ್ನು ಪ್ರದಾನ ಮಾಡುವುದನ್ನು ಮತ್ತು ಕರ್ತವ್ಯಗಳನ್ನು ವಿಧಿಸುವುದನ್ನು ಅಧಿಕೃತಗೊಳಿಸುವ ಕಾನೂನುಗಳನ್ನು ರಚಿಸಲು ಸಂಸತ್ತು ಸಕ್ಷಮವಾಗಿರತಕ್ಕದ್ದು ಅಥವಾ (ಎ) ಉಪಖಂಡದ ಮೇರೆಗೆ ಅಂಥ ಕಾನೂನು ರಚನಾ ಅಧಿಕಾರವು ನಿಹಿತವಾಗಿರುವ ರಾಷ್ಟ್ರಪತಿಯು ಅಥವಾ ಇತರ ಪ್ರಾಧಿಕಾರಿಯು ಸಕ್ಷಮರಾಗಿರತಕ್ಕದ್ದು;

---

1. 1990ನೆಯ ಇಸವಿಯ ಸಂವಿಧಾನ (ಅರವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 1990 ನೇ ಇಸವಿಯ ಸಂವಿಧಾನ (ಅರವತ್ತೇಳನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ ಮತ್ತು 1991ನೇ ಇಸವಿಯ ಸಂವಿಧಾನ (ಅರವತ್ತೆಂಟನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ ಅನುಕ್ರಮವಾಗಿ ಪ್ರತ್ಯಾಯೋಜಿಸಲಾಗಿದ್ದು, ಈ ಮೇಲಿನಂತೆ ಓದಿಕೊಳ್ಳತಕ್ಕದ್ದು.
3. 1978 ನೇ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 38 ನೇ ಪ್ರಕರಣದ ಮೂಲಕ (5) ನೇ ಖಂಡಕ್ಕೆ ಬದಲಾಗಿ (20-6-79 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ. 1975 ನೇ ಇಸವಿಯ ಸಂವಿಧಾನ (ಮೂವತ್ತೆಂಟನೇ ತಿದ್ದುಪಡಿ) ಅಧಿನಿಯಮದ 6ನೇ ಪ್ರಕರಣದ ಮೂಲಕ (5) ನೇ ಖಂಡವನ್ನು (ಪೂರ್ವಾನ್ವಯವಾಗಿ) ಸೇರಿಸಲಾಗಿತ್ತು.
4. 1989ನೇ ಇಸವಿಯ ಸಂವಿಧಾನ (ಅರವತ್ತಮೂರನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (6.1.1990 ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿತ್ತು. 1990ನೇ ಇಸವಿಯ ಸಂವಿಧಾನ (ಅರವತ್ನಾಲ್ಕನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.

(ಸಿ) ಲೋಕಸಭೆಯು ಅಧಿವೇಶನದಲ್ಲಿ ಇಲ್ಲದಿರುವಾಗ, ರಾಜ್ಯದ ಸಂಚಿತ ನಿಧಿಯಿಂದ ವೆಚ್ಚ ಮಾಡುವುದಕ್ಕೆ ಸಂಸತ್ತಿನ ಮಂಜೂರಾತಿ ದೊರೆಯುವವರೆಗೆ ಹಾಗೆ ವೆಚ್ಚ ಮಾಡುವುದನ್ನು ಅಧಿಕೃತಗೊಳಿಸಲು ರಾಷ್ಟ್ರಪತಿಯು ಸಕ್ಷಮನಾಗಿರತಕ್ಕದ್ದು.

[1][(2) 356ನೆಯ ಅನುಚ್ಛೇದದ ಮೇರೆಗೆ ಒಂದು ಉದ್ಘೋಷಣೆಯನ್ನು ಹೊರಡಿಸದೆ ಇದ್ದಿದ್ದರೆ ರಾಜ್ಯದ ವಿಧಾನಮಂಡಲದ ಅಧಿಕಾರವನ್ನು ಚಲಾಯಿಸಿ ಸಂಸತ್ತು ಅಥವಾ ರಾಷ್ಟ್ರಪತಿಯು ಅಥವಾ (1)ನೆಯ ಖಂಡದ (ಎ) ಉಪಖಂಡದಲ್ಲಿ ಉಲ್ಲೇಖಿಸಲಾದ ಇತರ ಪ್ರಾಧಿಕಾರವು ಯಾವ ಕಾನೂನನ್ನು ರಚಿಸಲು ಸಕ್ಷಮವಾಗುತ್ತಿರಲಿಲ್ಲವೋ, ಸಂಸತ್ತು ಅಥವಾ ರಾಷ್ಟ್ರಪತಿಯು ಅಥವಾ ಆ ಇತರ ಪ್ರಾಧಿಕಾರವು ರಚಿಸಿದ ಅಂಥ ಯಾವುದೇ ಕಾನೂನು, ಆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋದ ತರುವಾಯ ಸಕ್ಷಮ ವಿಧಾನ ಮಂಡಲವು ಅಥವಾ ಇತರ ಪ್ರಾಧಿಕಾರವು ಅದನ್ನು ಬದಲಾಯಿಸುವವರೆಗೆ, ನಿರಸನಗೊಳಿಸುವವರೆಗೆ ಅಥವಾ ತಿದ್ದುಪಡಿ ಮಾಡುವವರೆಗೆ ಅದು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.]

**358. ತುರ್ತುಪರಿಸ್ಥಿತಿಗಳಲ್ಲಿ 19ನೆಯ ಅನುಚ್ಛೇದದ ಉಪಬಂಧಗಳ ಅಮಾನತು:-** [2][(1)] [3][ಭಾರತದ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗದ ಭದ್ರತೆಗೆ ಯುದ್ಧದಿಂದ ಅಥವಾ ಬಾಹ್ಯ ಆಕ್ರಮಣದಿಂದ ಭೀತಿ ಉಂಟಾಗಿದೆಯೆಂದು ಘೋಷಿಸುವ ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಾಗ] ಯಾವ ಕಾನೂನನ್ನು ರಚಿಸಲು ಅಥವಾ ಯಾವ ಕಾರ್ಯಾಂಗ ಕ್ರಮವನ್ನು ಕೈಗೊಳ್ಳಲು ರಾಜ್ಯವು IIIನೆಯ ಭಾಗದಲ್ಲಿ ಒಳಗೊಂಡಿರುವ ಉಪಬಂಧಗಳಿಲ್ಲದಿದ್ದರೆ ಸಕ್ಷಮವಾಗುತ್ತಿದ್ದಿತೋ ಅಂಥ ಕಾನೂನನ್ನು ರಚಿಸಲು ಅಥವಾ ಅಂಥ ಕಾರ್ಯಾಂಗ ಕ್ರಮವನ್ನು ಕೈಗೊಳ್ಳಲು, ಆ ಭಾಗದಲ್ಲಿ ಪರಿಭಾಷಿಸಿದ ರಾಜ್ಯದ ಅಧಿಕಾರವನ್ನು 19ನೆಯ ಅನುಚ್ಛೇದದಲ್ಲಿ ಇರುವುದು ಯಾವುದೂ ನಿರ್ಬಂಧಿಸತಕ್ಕದ್ದಲ್ಲ, ಆದರೆ ಹಾಗೆ ರಚಿಸಲಾದ ಯಾವುದೇ ಕಾನೂನು, ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋದ ಕೂಡಲೇ, ಆ ಕಾನೂನು ಪರಿಣಾಮಕಾರಿಯಾಗಿರುವುದು ನಿಂತುಹೋಗುವುದಕ್ಕೆ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟ ಕಾರ್ಯವನ್ನು ಹೊರತುಪಡಿಸಿ ಇತರ ವಿಷಯಗಳಲ್ಲಿ ಸಕ್ಷಮವಾಗಿಲ್ಲದಿರುವಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು:

[4][ಪರಂತು, ಭಾರತದ ರಾಜ್ಯಕ್ಷೇತ್ರದ ಯಾವುದೇ ಭಾಗದಲ್ಲಿ ಮಾತ್ರವೇ [5][ತುರ್ತುಪರಿಸ್ಥಿತಿಯ ಅಂಥ ಉದ್ಘೋಷಣೆಯು] ಜಾರಿಯಲ್ಲಿರುವಲ್ಲಿ, ಯಾವ ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವುದಿಲ್ಲವೋ, ಆ ಯಾವುದೇ ರಾಜ್ಯಕ್ಕೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಪಟ್ಟಂತೆ, ಭಾರತದ ಯಾವ ರಾಜ್ಯಕ್ಷೇತ್ರದ ಭಾಗದಲ್ಲಿ ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವುದೋ, ಆ ರಾಜ್ಯಕ್ಷೇತ್ರದಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ನಡೆಯುವ ಚಟುವಟಿಕೆಗಳ ಕಾರಣಗಳಿಂದ ಭಾರತದ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗದ ಭದ್ರತೆಗೆ ಭೀತಿಯುಂಟಾಗಿದ್ದರೆ ಮತ್ತು ಭೀತಿ ಉಂಟಾಗಿರುವಷ್ಟರ ಮಟ್ಟಿಗೆ, ಈ ಅನುಚ್ಛೇದದ ಮೇರೆಗೆ ಅಂಥ ಯಾವುದೇ ಕಾನೂನನ್ನು ರಚಿಸಬಹುದು ಅಥವಾ ಅಂಥ ಕಾರ್ಯಾಂಗ ಕ್ರಮವನ್ನು ಕೈಗೊಳ್ಳಬಹುದು.]

[6][(2) (1)ನೇ ಖಂಡದಲ್ಲಿರುವುದು ಯಾವುದೂ,-

---

1. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 51ನೆಯ ಪ್ರಕರಣದ ಮೂಲಕ (2)ನೆಯ ಖಂಡಕ್ಕೆ ಬದಲಾಗಿ (3-1-1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 39ನೆಯ ಪ್ರಕರಣದ ಮೂಲಕ 358ನೆಯ ಅನುಚ್ಛೇದವನ್ನು ಅದರ (1)ನೆಯ ಖಂಡವೆಂದು (20-6-1979ರಿಂದ ಜಾರಿಗೆ ಬರುವಂತೆ) ಪುನರ್‌ಸಂಖ್ಯೆ ನೀಡಲಾಗಿದೆ.
3. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 39ನೆಯ ಪ್ರಕರಣದ ಮೂಲಕ "ತುರ್ತು ಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಾಗ" ಎಂಬುದರ ಬದಲಾಗಿ (20.6.1979 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
4. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 52ನೆಯ ಪ್ರಕರಣದ ಮೂಲಕ (3-1-77ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
5. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 39ನೆಯ ಪ್ರಕರಣದ ಮೂಲಕ "ತುರ್ತು ಪರಿಸ್ಥಿತಿಯ ಉದ್ಘೋಷಣೆಯು" ಎಂಬುದರ ಬದಲಾಗಿ (20.6.1979 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
6. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 39ನೇ ಪ್ರಕರಣದ ಮೂಲಕ (20-6-1979ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(ಎ) ಯಾವ ಕಾನೂನನ್ನು ರಚಿಸಿದಾಗ ಅದು ಜಾರಿಯಲ್ಲಿರುವ ತುರ್ತುಪರಿಸ್ಥಿತಿಯ ಉದ್ಘೋಷಣೆಗೆ ಸಂಬಂಧಪಟ್ಟ ಕಾನೂನಾಗಿದೆ ಎಂಬ ಒಕ್ಕಣೆಯನ್ನು ಒಳಗೊಂಡಿರುವುದಿಲ್ಲವೋ ಆ ಯಾವುದೇ ಕಾನೂನಿಗೆ; ಅಥವಾ

(ಬಿ) ಅಂಥ ಒಕ್ಕಣೆಯನ್ನು ಒಳಗೊಂಡಿರುವ ಕಾನೂನಿನ ಮೇರೆಗಲ್ಲದೆ ಅನ್ಯಥಾ ಕೈಗೊಂಡ ಯಾವುದೇ ಕಾರ್ಯಾಂಗ ಕ್ರಮಕ್ಕೆ

– ಅನ್ವಯಿಸತಕ್ಕದ್ದಲ್ಲ.]

**359. ತುರ್ತುಪರಿಸ್ಥಿತಿಗಳಲ್ಲಿ ಭಾಗ III ರಿಂದ ಪ್ರದತ್ತವಾದ ಹಕ್ಕುಗಳ ಜಾರಿಯ ಅಮಾನತು:–** (1) ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಲ್ಲಿ ರಾಷ್ಟ್ರಪತಿಯು ಆದೇಶದ ಮೂಲಕ [1][ಭಾಗ III ರಿಂದ ಪ್ರದತ್ತವಾದ ಹಕ್ಕುಗಳ ಪೈಕಿ (20 ಮತ್ತು 21ನೆಯ ಅನುಚ್ಛೇದಗಳನ್ನು ಹೊರತುಪಡಿಸಿ)] ಆ ಆದೇಶದಲ್ಲಿ ನಮೂದಿಸಬಹುದಾದಂಥ ಹಕ್ಕುಗಳನ್ನು ಜಾರಿಗೊಳಿಸುವುದಕ್ಕಾಗಿ ಯಾವುದೇ ನ್ಯಾಯಾಲಯವನ್ನು ಕೋರುವ ಹಕ್ಕು ಮತ್ತು ಹಾಗೆ ನಮೂದಿಸಿದ ಹಕ್ಕುಗಳನ್ನು ಜಾರಿಗೊಳಿಸುವುದಕ್ಕಾಗಿ ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ಎಲ್ಲ ವ್ಯವಹರಣೆಗಳು, ಆ ಉದ್ಘೋಷಣೆಯು ಜಾರಿಯಲ್ಲಿರುವ ಅವಧಿಯವರೆಗೆ ಅಥವಾ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇನ್ನೂ ಕಡಿಮೆ ಅವಧಿಯವರೆಗೆ ಅಮಾನತ್ತಿನಲ್ಲಿರತಕ್ಕದ್ದೆಂದು ಘೋಷಿಸಬಹುದು.

[2][(1ಎ) [1][ಭಾಗ IIIರಿಂದ ಪ್ರದತ್ತವಾದಂಥ ಹಕ್ಕುಗಳ ಪೈಕಿ ಯಾವುದೇ ಹಕ್ಕನ್ನು (20 ಮತ್ತು 21ನೆಯ ಅನುಚ್ಛೇದಗಳನ್ನು ಹೊರತುಪಡಿಸಿ)] ನಮೂದಿಸಿ (1)ನೆಯ ಖಂಡದ ಮೇರೆಗೆ ಮಾಡಿದ ಆದೇಶವು ಜಾರಿಯಲ್ಲಿರುವಾಗ ಆ ಹಕ್ಕುಗಳನ್ನು ಪ್ರದಾನ ಮಾಡುವ ಆ ಭಾಗದಲ್ಲಿರುವುದು ಯಾವುದೂ, ಆ ಭಾಗದಲ್ಲಿ ಒಳಗೊಂಡಿರುವ ಉಪಬಂಧಗಳು ಇಲ್ಲದಿದ್ದರೆ, ಯಾವ ಕಾನೂನನ್ನು ರಚಿಸಲು ಅಥವಾ ಕಾರ್ಯಾಂಗ ಕ್ರಮವನ್ನು ಕೈಗೊಳ್ಳಲು ರಾಜ್ಯವು ಸಕ್ಷಮವಾಗುತ್ತಿತ್ತೋ ಅಂಥ ಕಾನೂನನ್ನು ರಚಿಸಲು ಅಥವಾ ಕಾರ್ಯಾಂಗ ಕ್ರಮವನ್ನು ಕೈಗೊಳ್ಳಲು ಆ ಭಾಗದಲ್ಲಿ ಪರಿಭಾಷಿಸಿರುವ ಆ ರಾಜ್ಯದ ಅಧಿಕಾರವನ್ನು ನಿರ್ಬಂಧಿಸತಕ್ಕದ್ದಲ್ಲ, ಆದರೆ ಹಾಗೆ ಮಾಡಲಾದ ಯಾವುದೇ ಕಾನೂನು ಹಿಂದೆ ಹೇಳಿದ ಆದೇಶವು ಜಾರಿಯಲ್ಲಿರುವುದು ನಿಂತುಹೋದ ಕೂಡಲೇ ಆ ಕಾನೂನು ಹಾಗೆ ಪರಿಣಾಮಕಾರಿಯಾಗಿರುವುದು ನಿಂತುಹೋಗುವುದಕ್ಕೆ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟ ಕಾರ್ಯಗಳನ್ನು ಹೊರತುಪಡಿಸಿ ಇತರ ವಿಷಯಗಳಲ್ಲಿ ಸಕ್ಷಮವಾಗಿಲ್ಲದಿರುವಷ್ಟರಮಟ್ಟಿಗೆ ಪರಿಣಾಮಕಾರಿಯಾಗುವುದು ನಿಂತುಹೋಗತಕ್ಕದ್ದು:]

[3][ಪರಂತು, ಭಾರತದ ರಾಜ್ಯಕ್ಷೇತ್ರದ ಯಾವುದೇ ಭಾಗದಲ್ಲಿ ಮಾತ್ರ ತುರ್ತುಪರಿಸ್ಥಿತಿಯ ಅಂಥ ಉದ್ಘೋಷಣೆಯು ಜಾರಿಯಲ್ಲಿರುವಲ್ಲಿ, ಯಾವ ರಾಜ್ಯದಲ್ಲಿ ಅಥವಾ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವುದಿಲ್ಲವೋ, ಆ ಯಾವುದೇ ರಾಜ್ಯಕ್ಕೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಪಟ್ಟಂತೆ, ಭಾರತದ ಯಾವ ರಾಜ್ಯಕ್ಷೇತ್ರದ ಭಾಗದಲ್ಲಿ ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವುದೋ ಆ ರಾಜ್ಯಕ್ಷೇತ್ರದಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ನಡೆಯುವ ಚಟುವಟಿಕೆಗಳ ಕಾರಣಗಳಿಂದ ಭಾರತದ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗದ ಭದ್ರತೆಗೆ ಭೀತಿಯುಂಟಾಗಿದ್ದರೆ ಮತ್ತು ಭೀತಿ ಉಂಟಾಗಿರುವಷ್ಟರಮಟ್ಟಿಗೆ, ಈ ಅನುಚ್ಛೇದದ ಮೇರೆಗೆ ಅಂಥ ಯಾವುದೇ ಕಾನೂನನ್ನು ರಚಿಸಬಹುದು ಅಥವಾ ಅಂಥ ಕಾರ್ಯಾಂಗ ಕ್ರಮವನ್ನು ಕೈಗೊಳ್ಳಬಹುದು.]

[4][(1ಬಿ) (1ಎ) ಖಂಡದಲ್ಲಿರುವುದು ಯಾವುದೂ,–

---

1. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 40ನೆಯ ಪ್ರಕರಣದ ಮೂಲಕ (20–6.1979ರಿಂದ ಜಾರಿಗೆ ಬರುವಂತೆ) "ಭಾಗ III ರಿಂದ ಕೊಡಲಾಗಿರುವ ಅಧಿಕಾರಗಳ ಪೈಕಿ" ಎಂಬ ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1975ನೆಯ ಇಸವಿಯ ಸಂವಿಧಾನ (ಮೂವತ್ತೆಂಟನೆಯ ತಿದ್ದುಪಡಿ) ಅಧಿನಿಯಮದ 7ನೆಯ ಪ್ರಕರಣದ ಮೂಲಕ (ಪೂರ್ವಾನ್ವಯವಾಗಿ) ಸೇರಿಸಲಾಗಿದೆ.
3. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 53ನೆಯ ಪ್ರಕರಣದ ಮೂಲಕ (3–1.77ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
4. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 40ನೆಯ ಪ್ರಕರಣದ ಮೂಲಕ (20–6–79ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(ಎ) ಯಾವ ಕಾನೂನನ್ನು ರಚಿಸಿದಾಗ ಅದು ಜಾರಿಯಲ್ಲಿರುವ ತುರ್ತುಪರಿಸ್ಥಿತಿಯ ಉದ್ಘೋಷಣೆಗೆ ಸಂಬಂಧಪಟ್ಟ ಕಾನೂನಾಗಿದೆ ಎಂಬ ಒಕ್ಕಣೆಯನ್ನು ಒಳಗೊಂಡಿರುವುದಿಲ್ಲವೋ ಆ ಯಾವುದೇ ಕಾನೂನಿಗೆ; ಅಥವಾ

(ಬಿ) ಅಂಥ ಒಕ್ಕಣೆಯನ್ನು ಒಳಗೊಂಡಿರುವ ಕಾನೂನಿನ ಮೇರೆಗಲ್ಲದೆ ಅನ್ಯಥಾ ಕೈಗೊಂಡ ಯಾವುದೇ ಕಾರ್ಯಾಂಗ ಕ್ರಮಕ್ಕೆ

– ಅನ್ವಯಿಸತಕ್ಕದ್ದಲ್ಲ.]

(2) ಹಿಂದೆ ಹೇಳಿದಂತೆ ಮಾಡಲಾದ ಆದೇಶವು ಸಮಗ್ರ ಭಾರತಕ್ಕೆ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗಕ್ಕೆ ವ್ಯಾಪ್ತವಾಗಬಹುದು:

[1][ಪರಂತು, ಭಾರತದ ರಾಜ್ಯಕ್ಷೇತ್ರದ ಯಾವುದೇ ಭಾಗದಲ್ಲಿ ಮಾತ್ರವೇ ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಲ್ಲಿ, ಭಾರತದ ಯಾವ ರಾಜ್ಯಕ್ಷೇತ್ರದ ಭಾಗದಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವುದೋ ಆ ರಾಜ್ಯಕ್ಷೇತ್ರದಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ನಡೆಯುವ ಚಟುವಟಿಕೆಗಳ ಕಾರಣದಿಂದ ಭಾರತದ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗದ ಭದ್ರತೆಗೆ ಭೀತಿ ಉಂಟಾಗಿದೆಯೆಂದು ರಾಷ್ಟ್ರಪತಿಯು ಮನದಟ್ಟು ಮಾಡಿಕೊಂಡು ಅಂಥ ವಿಸ್ತರಣೆಯು ಅವಶ್ಯವೆಂದು ಪರ್ಯಾಲೋಚಿಸಿದ ಹೊರತು, ಅಂಥ ಯಾವುದೇ ಆದೇಶವನ್ನು ಭಾರತದ ರಾಜ್ಯಕ್ಷೇತ್ರದ ಇತರ ಯಾವುದೇ ಭಾಗಕ್ಕೆ ವಿಸ್ತರಿಸತಕ್ಕದ್ದಲ್ಲ.]

(3) (1)ನೆಯ ಖಂಡದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

[2]**359ಎ.** *[ಪಂಜಾಬ್ ರಾಜ್ಯಕ್ಕೆ ಈ ಭಾಗದ ಅನ್ವಯ] 1989ನೇ ಇಸವಿಯ ಸಂವಿಧಾನ (ಅರವತ್ತೂರನೇ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (6-1-1990 ರಿಂದ ಜಾರಿಗೆ ಬರುವಂತೆ) ನಿರಸನಗೊಳಿಸಲಾಗಿದೆ.*

**360. ಹಣಕಾಸಿನ ತುರ್ತುಪರಿಸ್ಥಿತಿಗೆ ಸಂಬಂಧಿಸಿದ ಉಪಬಂಧಗಳು:–** (1) ಭಾರತದ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗದ ಹಣಕಾಸಿನ ಸ್ಥಿರತೆಗೆ ಅಥವಾ ಪತ್ತಿಗೆ ಭೀತಿ ಉಂಟಾಗುವಂಥ ಪರಿಸ್ಥಿತಿ ಉದ್ಭವಿಸಿದೆಯೆಂದು ರಾಷ್ಟ್ರಪತಿಗೆ ಮನದಟ್ಟಾದರೆ, ಅವನು ಉದ್ಘೋಷಣೆಯ ಮೂಲಕ ಆ ಬಗ್ಗೆ ಒಂದು ಘೋಷಣೆಯನ್ನು ಮಾಡಬಹುದು.

[3][(2)(1)ನೆಯ ಖಂಡದ ಮೇರೆಗೆ ಹೊರಡಿಸಿದ ಉದ್ಘೋಷಣೆಯನ್ನು,–

(ಎ) ತದನಂತರದ ಉದ್ಘೋಷಣೆಯ ಮೂಲಕ ರದ್ದುಗೊಳಿಸಬಹುದು ಅಥವಾ ವ್ಯತ್ಯಸ್ತಗೊಳಿಸಬಹುದು;

(ಬಿ) ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು;

(ಸಿ) ಎರಡು ತಿಂಗಳುಗಳ ಅವಧಿಯು ಮುಗಿಯುವುದಕ್ಕೆ ಮುಂಚೆ ಸಂಸತ್ತಿನ ಎರಡೂ ಸದನಗಳು ನಿರ್ಣಯಗಳ ಮೂಲಕ ಅನುಮೋದಿಸಿದ್ದ ಹೊರತು, ಆ ಅವಧಿಯು ಮುಕ್ತಾಯವಾದ ಮೇಲೆ ಅಂಥ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತು ಹೋಗತಕ್ಕದ್ದು:

---

1. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 53ನೆಯ ಪ್ರಕರಣದ ಮೂಲಕ (3-1-77ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1988 ನೆಯ ಇಸವಿಯ ಸಂವಿಧಾನ (ಐವತ್ತೊಂಬತ್ತನೇ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ. ಇದು ಈ ಅಧಿನಿಯಮವು ಜಾರಿಗೆ ಬಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ಮೇಲೆ, ಎಂದರೆ 1988ರ ಮಾರ್ಚ್ ಮೂವತ್ತನೇ ದಿನದಿಂದ ಜಾರಿಯಲ್ಲಿರುವುದು ನಿಂತುಹೋಗುತ್ತದೆ.
3. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 41ನೆಯ ಪ್ರಕರಣದ ಮೂಲಕ (2)ನೆಯ ಖಂಡಕ್ಕೆ ಬದಲಾಗಿ (20-6-1979ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

ಪರಂತು, ಅಂಥ ಯಾವುದೇ ಉದ್ಘೋಷಣೆಯನ್ನು ಲೋಕಸಭೆಯು ವಿಸರ್ಜನೆಯಾಗಿರುವ ಸಮಯದಲ್ಲಿ ಹೊರಡಿಸಿದ್ದರೆ ಅಥವಾ (ಸಿ) ಉಪಖಂಡದಲ್ಲಿ ಉಲ್ಲೇಖಿಸಿರುವ ಎರಡು ತಿಂಗಳ ಅವಧಿಯೊಳಗೆ ಲೋಕಸಭೆಯ ವಿಸರ್ಜನೆಯಾದರೆ ಮತ್ತು ಆ ಉದ್ಘೋಷಣೆಯನ್ನು ಅನುಮೋದಿಸುವ ನಿರ್ಣಯವು ರಾಜ್ಯಸಭೆಯಿಂದ ಅಂಗೀಕೃತವಾಗಿದ್ದು, ಆದರೆ ಅಂಥ ಉದ್ಘೋಷಣೆಯ ಬಗೆಗಿನ ಯಾವುದೇ ನಿರ್ಣಯವು ಆ ಅವಧಿಯು ಮುಗಿಯುವುದರೊಳಗೆ ಲೋಕಸಭೆಯಿಂದ ಅಂಗೀಕೃತವಾಗಿಲ್ಲದಿದ್ದರೆ, ಲೋಕಸಭೆಯು ಪುನರ್‌ರಚಿತವಾದ ಬಳಿಕ ಅದು ಮೊದಲನೆಯ ಸಲ ಸಭೆ ಸೇರಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯು ಮುಗಿಯುವುದಕ್ಕೆ ಮುಂಚೆ ಲೋಕಸಭೆಯಿಂದಲೂ ಸಹಾ ಆ ಉದ್ಘೋಷಣೆಯನ್ನು ಅನುಮೋದಿಸುವ ನಿರ್ಣಯವು ಅಂಗೀಕೃತವಾಗಿದ್ದ ಹೊರತು, ಆ ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ಮೇಲೆ ಆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು.]

(3) (1)ನೆಯ ಖಂಡದಲ್ಲಿ ನಮೂದಿಸಿರುವಂಥ ಯಾವುದೇ ಉದ್ಘೋಷಣೆಯು ಜಾರಿಯಲ್ಲಿರುವ ಅವಧಿಯಲ್ಲಿ ಒಕ್ಕೂಟದ ಕಾರ್ಯಾಂಗ ಅಧಿಕಾರವು, ಯಾವುದೇ ರಾಜ್ಯಕ್ಕೆ ನಿರ್ದೇಶನಗಳನ್ನು, ಆ ನಿರ್ದೇಶನಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹಣಕಾಸಿನ ಔಚಿತ್ಯಕ್ಕೆ ಸಂಬಂಧಿಸಿದ ಸೂತ್ರಗಳನ್ನು ಪಾಲಿಸಲು ನೀಡುವುದಕ್ಕೆ ಮತ್ತು ಆ ಉದ್ದೇಶಕ್ಕೆ ಅವಶ್ಯವೆಂದು ಮತ್ತು ಸಾಕಷ್ಟೆಂದು ರಾಷ್ಟ್ರಪತಿಯು ಭಾವಿಸಬಹುದಾದಂಥ ಇತರ ನಿರ್ದೇಶನಗಳನ್ನು ನೀಡುವುದಕ್ಕೆ ವ್ಯಾಪ್ತವಾಗತಕ್ಕದ್ದು.

(4)ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,-

(ಎ) ಅಂಥ ಯಾವುದೇ ನಿರ್ದೇಶನವು-

(i) ಒಂದು ರಾಜ್ಯದ ವ್ಯವಹಾರಗಳ ಸಂಬಂಧದಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲ ವರ್ಗಗಳ ಅಥವಾ ಯಾವುದೇ ವರ್ಗದ ವ್ಯಕ್ತಿಗಳ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಕಡಿಮೆ ಮಾಡುವಂತೆ ಅಗತ್ಯಪಡಿಸುವ ಉಪಬಂಧವನ್ನು;

(ii) ಎಲ್ಲ ಧನ ವಿಧೇಯಕಗಳನ್ನು ಅಥವಾ 207ನೆಯ ಅನುಚ್ಛೇದದ ಉಪಬಂಧಗಳು ಅನ್ವಯವಾಗುವ ಇತರ ವಿಧೇಯಕಗಳು ಆ ರಾಜ್ಯದ ವಿಧಾನಮಂಡಲದಿಂದ ಅಂಗೀಕೃತವಾದ ತರುವಾಯ ಅವುಗಳನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾಯ್ದಿರಿಸುವಂತೆ ಅಗತ್ಯಪಡಿಸುವ ಉಪಬಂಧವನ್ನು

- ಒಳಗೊಳ್ಳಬಹುದು;

(ಬಿ) ಈ ಅನುಚ್ಛೇದದ ಮೇರೆಗೆ ಹೊರಡಿಸಿದ ಯಾವುದೇ ಉದ್ಘೋಷಣೆಯು ಜಾರಿಯಲ್ಲಿರುವ ಅವಧಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಮತ್ತು ಉಚ್ಚನ್ಯಾಯಾಲಯದ ನ್ಯಾಯಾಧೀಶರನ್ನು ಒಳಗೊಂಡು, ಒಕ್ಕೂಟದ ವ್ಯವಹಾರಗಳ ಸಂಬಂಧದಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲ ವರ್ಗಗಳ ಅಥವಾ ಯಾವುದೇ ವರ್ಗದ ವ್ಯಕ್ತಿಗಳ ಸಂಬಳಗಳನ್ನು ಮತ್ತು ಭತ್ಯಗಳನ್ನು ಕಡಿಮೆ ಮಾಡುವಂತೆ ನಿರ್ದೇಶನಗಳನ್ನು ನೀಡಲು ರಾಷ್ಟ್ರಪತಿಯು ಸಕ್ಷಮನಾಗಿರತಕ್ಕದ್ದು.

[1] * * * * *

---

1. 1975ನೆಯ ಇಸವಿಯ ಸಂವಿಧಾನ (ಮೂವತ್ತೆಂಟನೆಯ ತಿದ್ದುಪಡಿ) ಅಧಿನಿಯಮದ 8ನೆಯ ಪ್ರಕರಣದ ಮೂಲಕ (5)ನೇ ಖಂಡವನ್ನು (ಪೂರ್ವಾನ್ವಯವಾಗಿ) ಸೇರಿಸಲಾಗಿತ್ತು ಮತ್ತು 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 41ನೆಯ ಪ್ರಕರಣದ ಮೂಲಕ (20-6-1979ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.

## ಭಾಗ - XIX

## ಸಂಕೀರ್ಣ

**361. ರಾಷ್ಟ್ರಪತಿಗೆ ಮತ್ತು ರಾಜ್ಯಪಾಲರಿಗೆ ಹಾಗೂ ರಾಜಪ್ರಮುಖರಿಗೆ ಸಂರಕ್ಷಣೆ:-** (1) ರಾಷ್ಟ್ರಪತಿಯು ಅಥವಾ ಒಂದು ರಾಜ್ಯದ ರಾಜ್ಯಪಾಲನು ಅಥವಾ ರಾಜಪ್ರಮುಖನು ತನ್ನ ಪದದ ಅಧಿಕಾರಗಳ ಚಲಾವಣೆಯ ಬಗ್ಗೆ ಮತ್ತು ಕರ್ತವ್ಯಗಳ ನೆರವೇರಿಕೆಯ ಬಗ್ಗೆ ಅಥವಾ ಆ ಅಧಿಕಾರಗಳ ಚಲಾವಣೆಯಲ್ಲಿ ಮತ್ತು ಕರ್ತವ್ಯಗಳ ನೆರವೇರಿಕೆಯಲ್ಲಿ ತಾನು ಮಾಡಿದ ಅಥವಾ ಮಾಡಿದಂತೆ ತಾತ್ಪರ್ಯವಾಗುವ ಯಾವುದೇ ಕಾರ್ಯದ ಬಗ್ಗೆ ಯಾವುದೇ ನ್ಯಾಯಾಲಯಕ್ಕೆ ಜವಾಬ್ದಾರನಾಗತಕ್ಕದ್ದಲ್ಲ:

ಪರಂತು, ರಾಷ್ಟ್ರಪತಿಯ ವರ್ತನೆಯು, 61ನೆಯ ಅನುಚ್ಛೇದದ ಮೇರೆಗಿನ ಆರೋಪದ ತನಿಖೆಗಾಗಿ ಸಂಸತ್ತಿನ ಯಾವುದಾದರೊಂದು ಸದನದಿಂದ ನೇಮಕಗೊಂಡ ಅಥವಾ ಹೆಸರಿಸಲಾದ ಯಾವುದೇ ನ್ಯಾಯಾಲಯದ, ನ್ಯಾಯಾಧಿಕರಣದ ಅಥವಾ ನಿಕಾಯದ ಪುನರವಲೋಕನಕ್ಕೆ ಒಳಪಡಬಹುದು:

ಮತ್ತೂ ಪರಂತು, ಈ ಖಂಡದಲ್ಲಿ ಇರುವುದು ಯಾವುದೂ, ಭಾರತ ಸರ್ಕಾರದ ಅಥವಾ ಒಂದು ರಾಜ್ಯ ಸರ್ಕಾರದ ವಿರುದ್ಧ ಸಮುಚಿತ ವ್ಯವಹರಣೆಗಳನ್ನು ಹೂಡಲು ಯಾರೇ ವ್ಯಕ್ತಿಗಿರುವ ಹಕ್ಕನ್ನು ನಿರ್ಬಂಧಿಸುವುದಾಗಿ ಅರ್ಥೈಸತಕ್ಕದ್ದಲ್ಲ.

(2) ರಾಷ್ಟ್ರಪತಿಯ ಅಥವಾ ಒಂದು ರಾಜ್ಯದ ರಾಜ್ಯಪಾಲನ [1] * * * ಪದಾವಧಿಯಲ್ಲಿ ಅವನ ವಿರುದ್ಧ ಯಾವುದೇ ಕ್ರಿಮಿನಲ್ ವ್ಯವಹರಣೆಗಳನ್ನು ಯಾವುದೇ ನ್ಯಾಯಾಲಯದಲ್ಲಿ ಹೂಡತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ.

(3) ರಾಷ್ಟ್ರಪತಿಯ ಅಥವಾ ಒಂದು ರಾಜ್ಯದ ರಾಜ್ಯಪಾಲನ [1] * * * ಪದಾವಧಿಯಲ್ಲಿ ಅವನನ್ನು ದಸ್ತಗಿರಿ ಮಾಡಲು ಅಥವಾ ಕಾರಾಗೃಹದಲ್ಲಿರಿಸಲು ಯಾವುದೇ ನ್ಯಾಯಾಲಯವು ಯಾವುದೇ ಆದೇಶಿಕೆಯನ್ನು ಹೊರಡಿಸತಕ್ಕದ್ದಲ್ಲ.

(4) ರಾಷ್ಟ್ರಪತಿಯಾಗಿ ಅಥವಾ ಒಂದು ರಾಜ್ಯದ ರಾಜ್ಯಪಾಲನಾಗಿ [1] * * * ಪದವನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ಅಥವಾ ವಹಿಸಿಕೊಂಡ ತರುವಾಯ ಅವನು ವೈಯಕ್ತಿಕವಾಗಿ ಮಾಡಿದ ಅಥವಾ ಮಾಡಿದಂತೆ ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿಯ ಅಥವಾ ಅಂಥ ರಾಜ್ಯದ ರಾಜ್ಯಪಾಲನ [1] *** ವಿರುದ್ಧ ಪರಿಹಾರವನ್ನು ಯಾವ ಸಿವಿಲ್ ವ್ಯವಹರಣೆಗಳಲ್ಲಿ ಕ್ಲೇಮು ಮಾಡಬಹುದೋ ಆ ಯಾವುವೇ ಸಿವಿಲ್ ವ್ಯವಹರಣೆಗಳನ್ನು ಅವನ ಪದಾವಧಿಯಲ್ಲಿ ಯಾವುದೇ ನ್ಯಾಯಾಲಯದಲ್ಲಿ, ಆ ವ್ಯವಹರಣೆಗಳ ಸ್ವರೂಪ, ಅದರ ವ್ಯಾಜ್ಯ ಕಾರಣ, ಅಂಥ ವ್ಯವಹರಣೆಗಳನ್ನು ಹೂಡುವ ಪಕ್ಷಕಾರನ ಹೆಸರು, ವರ್ಣನೆ, ನಿವಾಸಸ್ಥಾನ ಮತ್ತು ಅವನು ಕ್ಲೇಮು ಮಾಡುವ ಪರಿಹಾರ ಇವನ್ನು ತಿಳಿಸುವ ಲಿಖಿತ ನೋಟೀಸನ್ನು ರಾಷ್ಟ್ರಪತಿಗೆ ಅಥವಾ ಸಂದರ್ಭಾನುಸಾರ ಆ ರಾಜ್ಯಪಾಲನಿಗೆ [2] * * * ತಲುಪಿಸಿದ ಬಳಿಕ ಅಥವಾ ಕಚೇರಿಯಲ್ಲಿ ಕೊಟ್ಟ ಅನಂತರ, ಎರಡು ತಿಂಗಳು ಮುಗಿಯುವವರೆಗೆ ಹೂಡತಕ್ಕದ್ದಲ್ಲ.

[3][**361ಎ. ಸಂಸತ್ತು ಮತ್ತು ರಾಜ್ಯ ವಿಧಾನಮಂಡಲಗಳ ವ್ಯವಹರಣೆಗಳ ಪ್ರಕಟಣೆಯ ಸಂರಕ್ಷಣೆ:-** (1) ಸಂಸತ್ತಿನ ಯಾವುದೇ ಸದನದ ಅಥವಾ ಒಂದು ರಾಜ್ಯದ ವಿಧಾನಸಭೆಯ ಅಥವಾ ಸಂದರ್ಭಾನುಸಾರ ವಿಧಾನಮಂಡಲದ ಯಾವುದೇ ಸದನದ ಯಾವುದೇ ವ್ಯವಹರಣೆಗಳ ಬಗ್ಗೆ ಸಾರಭೂತವಾಗಿ ನಿಜವಾದ ವರದಿಯನ್ನು ವೃತ್ತಪತ್ರಿಕೆಯಲ್ಲಿ ಪ್ರಕಟಿಸಿದುದಕ್ಕೆ ಸಂಬಂಧಿಸಿದಂತೆ, ಆ ಪ್ರಕಟಣೆಯನ್ನು ದ್ವೇಷಪೂರ್ವಕವಾಗಿ ಮಾಡಲಾಗಿದೆಯೆಂದು ರುಜುವಾತುಪಡಿಸಿದ ಹೊರತು, ಯಾರೇ ವ್ಯಕ್ತಿಯು ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗಳಿಗೆ ಗುರಿಯಾಗತಕ್ಕದ್ದಲ್ಲ:

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ, "ಅಥವಾ ರಾಜಪ್ರಮುಖ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
2. 1956 ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನಿಗೆ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
3. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 42ನೆಯ ಪ್ರಕರಣದ ಮೂಲಕ (ದಿನಾಂಕ 20-6-79ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

ಪರಂತು, ಈ ಖಂಡದಲ್ಲಿರುವುದಾವುದೂ, ಸಂಸತ್ತಿನ ಯಾವುದೇ ಸದನದ ಅಥವಾ ಒಂದು ರಾಜ್ಯದ ವಿಧಾನಸಭೆಯ ಅಥವಾ ಸಂದರ್ಭಾನುಸಾರ ವಿಧಾನಮಂಡಲದ ಯಾವುದೇ ಸದನದ ರಹಸ್ಯ ಉಪವೇಶನದ ವ್ಯವಹರಣೆಗಳ ಯಾವುದೇ ವರದಿಯ ಪ್ರಕಟಣೆಗೆ ಅನ್ವಯವಾಗತಕ್ಕದ್ದಲ್ಲ.

(2) ವೃತ್ತಪತ್ರಿಕೆಯಲ್ಲಿ ಪ್ರಕಟಿಸಿದ ವರದಿಗಳ ಅಥವಾ ವಿಷಯಗಳ ಸಂಬಂಧದಲ್ಲಿ (1)ನೆಯ ಖಂಡವು ಅನ್ವಯವಾಗುವಂತೆಯೇ ಪ್ರಸಾರ ಕೇಂದ್ರದ ಮೂಲಕ ಬಿತ್ತರಿಸಿದ ಯಾವುದೇ ಕಾರ್ಯಕ್ರಮದ ಅಥವಾ ಸೇವೆಯ ಅಂಗವಾಗಿ, ವೈರ್‌ಲೆಸ್ ಟೆಲಿಗ್ರಾಫ್ ಮೂಲಕ ಪ್ರಸಾರ ಮಾಡಿದ ವರದಿಗಳ ಅಥವಾ ವಿಷಯಗಳ ಸಂಬಂಧದಲ್ಲಿಯೂ ಆ ಖಂಡವು ಅನ್ವಯವಾಗತಕ್ಕದ್ದು.

**ವಿವರಣೆ.**- ಈ ಅನುಚ್ಛೇದದಲ್ಲಿ 'ವೃತ್ತಪತ್ರಿಕೆ' ಎಂಬುದರಲ್ಲಿ ವೃತ್ತಪತ್ರಿಕೆಯಲ್ಲಿ ಪ್ರಕಟಣೆಗಾಗಿ ಇರುವ ವಿಷಯ ಸಾಮಗ್ರಿಗಳನ್ನು ಒಳಗೊಂಡಿರುವ ವಾರ್ತಾ ಏಜೆನ್ಸಿಯ ವರದಿಯೂ ಒಳಗೊಳ್ಳುತ್ತದೆ.]

[1][**361ಬಿ. ಲಾಭಪ್ರದ ರಾಜಕೀಯ ಹುದ್ದೆಗೆ ನೇಮಕಕ್ಕೆ ಅನರ್ಹತೆ:**- ಹತ್ತನೇ ಅನುಸೂಚಿಯ 2ನೇ ಪ್ಯಾರಾದ ಅಡಿಯಲ್ಲಿ ಸದನದ ಸದಸ್ಯನಾಗಿರಲು ಅನರ್ಹನಾಗಿರುವ, ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರುವ, ಸದನದ ಒಬ್ಬ ಸದಸ್ಯನು, ಆತನು ಅನರ್ಹತೆ ಹೊಂದಿದ ದಿನಾಂಕದಿಂದ ಪ್ರಾರಂಭವಾಗಿ ಯಾವ ದಿನಾಂಕದಂದು ಅಂಥ ಸದಸ್ಯನಾಗಿ ಅವನ ಪದಾವಧಿಯು ಮುಕ್ತಾಯವಾಗುತ್ತಿತ್ತೋ ಆ ದಿನಾಂಕದವರೆಗೆ ಅಥವಾ ಆತನು ಒಂದು ಸದನಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸಿರುವನೋ, ಅದಕ್ಕೆ ಚುನಾಯಿತನಾಗಿದ್ದಾನೆಂದು ಘೋಷಿತನಾಗುವ ದಿನಾಂಕದವರೆಗೆ, ಅವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆತನು ಲಾಭಪ್ರದ ರಾಜಕೀಯ ಹುದ್ದೆಯನ್ನು ಹೊಂದಲು ಕೂಡಾ ಅನರ್ಹನಾಗತಕ್ಕದ್ದು.

**ವಿವರಣೆ.**- ಈ ಅನುಚ್ಛೇದದ ಉದ್ದೇಶಗಳಿಗಾಗಿ,-

(ಎ) "ಸದನ" ಎಂಬ ಪದವು ಹತ್ತನೇ ಅನುಸೂಚಿಯ 1ನೇ ಪ್ಯಾರಾದ (ಎ) ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಬಿ) "ಲಾಭಪ್ರದ ರಾಜಕೀಯ ಹುದ್ದೆ" ಎಂಬ ಪದಗಳಿಗೆ, ಆ ಹುದ್ದೆಗೆ . ಸಂಬಳವನ್ನು ಅಥವಾ ಪರಿಶ್ರಮಧನವನ್ನು ಪರಿಹಾರಾತ್ಮಕ ಸ್ವರೂಪದಲ್ಲಿ ಸಂದಾಯ ಮಾಡಿದ್ದ ಹೊರತು,-

(i) ಅಂಥ ಯಾವುದೇ ಹುದ್ದೆಗೆ ಸಂದರ್ಭಾನುಸಾರ ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಸಾರ್ವಜನಿಕ ರಾಜಸ್ವದಿಂದ ಸಂಬಳವನ್ನು ಅಥವಾ ಪರಿಶ್ರಮಧನವನ್ನು ಸಂದಾಯ ಮಾಡಲಾಗುತ್ತಿದೆಯೋ ಆ ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿನ ಯಾವುದೇ ಹುದ್ದೆ ಎಂದು ಅರ್ಥ; ಅಥವಾ

(ii) ಭಾರತ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಸಂಪೂರ್ಣವಾಗಿ ಅಥವಾ ಭಾಗಶಃ ಒಡೆತನವನ್ನು ಹೊಂದಿರುವ ನಿಕಾಯವು ಅದು ನಿಗಮಿತವಾಗಿರಲಿ ಅಥವಾ ಆಗಿರದಿರಲಿ ಮತ್ತು ಅಂಥ ನಿಕಾಯವು ಅಂಥ ಹುದ್ದೆಗೆ ಸಂಬಳವನ್ನು ಅಥವಾ ಪರಿಶ್ರಮಧನವನ್ನು ಸಂದಾಯ ಮಾಡುತ್ತಿದ್ದರೆ ಆ ನಿಕಾಯದ ಅಧೀನದಲ್ಲಿರುವ ಯಾವುದೇ ಹುದ್ದೆ ಎಂದು ಅರ್ಥ].

**362.** *[ಭಾರತೀಯ ಸಂಸ್ಥಾನಗಳ ರಾಜರುಗಳ ಹಕ್ಕುಗಳು ಮತ್ತು ವಿಶೇಷ ಅಧಿಕಾರಗಳು] 1971ನೇ ಇಸವಿಯ ಸಂವಿಧಾನ (ಇಪ್ಪತ್ತಾರನೆಯ ತಿದ್ದುಪಡಿ)* ಅಧಿನಿಯಮದ 2ನೆಯ ಪ್ರಕರಣದ ಮೂಲಕ ನಿರಸಿತವಾಗಿದೆ.

---

1. 2003 ನೇ ಇಸವಿಯ ಸಂವಿಧಾನ (ತೊಂಬತ್ತೊಂದನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

**363. ಕೆಲವು ಕೌಲುಗಳು, ಒಪ್ಪಂದಗಳು, ಮುಂತಾದವುಗಳಿಂದ ಉದ್ಭವಿಸುವ ವಿವಾದಗಳಲ್ಲಿ ನ್ಯಾಯಾಲಯಗಳ ಹಸ್ತಕ್ಷೇಪಕ್ಕೆ ಪ್ರತಿಷೇಧ:**– (1) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ಆದರೆ 143ನೆಯ ಅನುಚ್ಛೇದದ ಉಪಬಂಧಗಳಿಗೆ ಒಳಪಟ್ಟು, ಈ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಯಾವುದೇ ಭಾರತೀಯ ಸಂಸ್ಥಾನದ ರಾಜನು ಯಾವ ಕೌಲು, ಒಪ್ಪಂದ, ಒಡಂಬಡಿಕೆ, ವಚನಬಂಧ, ಸನ್ನದು ಅಥವಾ ಅದೇ ಬಗೆಯ ಇತರ ಲಿಖಿತವನ್ನು ಮಾಡಿಕೊಂಡಿದ್ದನೋ ಅಥವಾ ಬರೆದುಕೊಟ್ಟಿದ್ದನೋ ಮತ್ತು ಅವುಗಳಲ್ಲಿ ಯಾವುದಕ್ಕೆ ಡೊಮಿನಿಯನ್ ಆಫ್ ಇಂಡಿಯಾ ಸರ್ಕಾರವು ಅಥವಾ ಅದಕ್ಕೆ ಹಿಂದೆ ಇದ್ದ ಸರ್ಕಾರಗಳಲ್ಲಿ ಯಾವುದೇ ಸರ್ಕಾರವು ಒಂದು ಪಕ್ಷವಾಗಿತ್ತೋ ಮತ್ತು ಈ ಸಂವಿಧಾನವು ಪ್ರಾರಂಭವಾದ ತರುವಾಯ ಅವುಗಳಲ್ಲಿ ಯಾವುದು ಜಾರಿಯಲ್ಲಿರುವುದು ಮುಂದುವರೆದಿದೆಯೋ ಅಥವಾ ಯಾವುದರ ಜಾರಿಯನ್ನು ಮುಂದುವರೆಸಲಾಗಿದೆಯೋ ಅಂಥ ಯಾವುದೇ ಕೌಲು, ಒಪ್ಪಂದ, ಒಡಂಬಡಿಕೆ, ವಚನಬಂಧ, ಸನ್ನದು ಅಥವಾ ಅದೇ ಬಗೆಯ ಇತರ ಲಿಖಿತದ ಯಾವುದೇ ಉಪಬಂಧದಿಂದ ಉದ್ಭವಿಸುವ ಯಾವುದೇ ವಿವಾದದಲ್ಲಿ, ಅಥವಾ ಅಂಥ ಯಾವುದೇ ಕೌಲು, ಒಪ್ಪಂದ, ಒಡಂಬಡಿಕೆ, ವಚನಬಂಧ, ಸನ್ನದು ಅಥವಾ ಅದೇ ಬಗೆಯ ಇತರ ಲಿಖಿತಕ್ಕೆ ಸಂಬಂಧಪಟ್ಟಂತೆ, ಈ ಸಂವಿಧಾನದ ಯಾವುದೇ ಉಪಬಂಧದ ಮೇರೆಗೆ ಪ್ರಾಪ್ತವಾಗುವ ಯಾವುದೇ ಹಕ್ಕಿಗೆ ಅಥವಾ ಆ ಉಪಬಂಧದಿಂದ ಉದ್ಭವಿಸುವ ಯಾವುದೇ ಹೊಣೆಗಾರಿಕೆಗೆ ಅಥವಾ ಬಾಧ್ಯತೆಗೆ ಸಂಬಂಧಿಸಿದ ಯಾವುದೇ ವಿವಾದದಲ್ಲಿ ಸರ್ವೋಚ್ಚ ನ್ಯಾಯಾಲಯವೇ ಆಗಲಿ ಅಥವಾ ಬೇರೆ ಯಾವುದೇ ನ್ಯಾಯಾಲಯವೇ ಆಗಲಿ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

(2) ಈ ಅನುಚ್ಛೇದದಲ್ಲಿ,–

(ಎ) "ಭಾರತೀಯ ಸಂಸ್ಥಾನ" ಎಂದರೆ, ಈ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಸಾಮ್ರಾಟನಿಂದ ಅಥವಾ ಡೊಮಿನಿಯನ್ ಆಫ್ ಇಂಡಿಯಾ ಸರ್ಕಾರದಿಂದ ಭಾರತೀಯ ಸಂಸ್ಥಾನ ಎಂದು ಮನ್ನಣೆ ಪಡೆದಿದ್ದ ಯಾವುದೇ ರಾಜ್ಯಕ್ಷೇತ್ರ; ಮತ್ತು

(ಬಿ) "ರಾಜ" ಎಂಬುದರಲ್ಲಿ, ಈ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಸಾಮ್ರಾಟನಿಂದ ಅಥವಾ ಡೊಮಿನಿಯನ್ ಆಫ್ ಇಂಡಿಯಾ ಸರ್ಕಾರದಿಂದ ಯಾವುದೇ ಭಾರತೀಯ ಸಂಸ್ಥಾನದ ರಾಜನೆಂದು ಮನ್ನಣೆ ಪಡೆದಿದ್ದ ಯಾರೇ ರಾಜಕುಮಾರ, ಅಧಿಪತಿ ಅಥವಾ ಇತರ ವ್ಯಕ್ತಿಯೂ ಒಳಗೊಳ್ಳುತ್ತಾನೆ.

[1][**363ಎ. ಭಾರತೀಯ ಸಂಸ್ಥಾನಗಳ ರಾಜರಿಗೆ ಕೊಟ್ಟಿರುವ ಮನ್ನಣೆಯು ನಿಂತುಹೋಗುವುದು ಮತ್ತು ರಾಜಧನಗಳನ್ನು ರದ್ದುಗೊಳಿಸುವುದು:**– ಈ ಸಂವಿಧಾನದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದಾಗ್ಯೂ–

(ಎ) 1971ನೆಯ ಇಸವಿಯ ಸಂವಿಧಾನ (ಇಪ್ಪತ್ತಾರನೆಯ ತಿದ್ದುಪಡಿ) ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ರಾಷ್ಟ್ರಪತಿಯಿಂದ ಒಂದು ಭಾರತೀಯ ಸಂಸ್ಥಾನದ ರಾಜನೆಂದು ಮನ್ನಣೆ ಪಡೆದಿದ್ದ ರಾಜಕುಮಾರ, ಅಧಿಪತಿ ಅಥವಾ ಇತರ ವ್ಯಕ್ತಿಯು ಅಥವಾ ಅಂಥ ಪ್ರಾರಂಭಕ್ಕೆ ಮುಂಚೆ ಯಾವುದೇ ಕಾಲದಲ್ಲಿ ರಾಷ್ಟ್ರಪತಿಯಿಂದ ಅಂಥ ರಾಜನ ಉತ್ತರಾಧಿಕಾರಿ ಎಂದು ಮನ್ನಣೆ ಪಡೆದಿದ್ದ ಯಾರೇ ವ್ಯಕ್ತಿಯು, ಅಂಥ ಪ್ರಾರಂಭದಂದು ಮತ್ತು ಅಂಥ ಪ್ರಾರಂಭದಿಂದ ಅಂಥ ರಾಜನೆಂದು ಅಥವಾ ಅಂಥ ರಾಜನ ಉತ್ತರಾಧಿಕಾರಿ ಎಂದು ಮನ್ನಣೆ ಪಡೆದಿರುವುದು ನಿಂತುಹೋಗತಕ್ಕದ್ದು;

(ಬಿ) 1971ನೆಯ ಇಸವಿಯ ಸಂವಿಧಾನ (ಇಪ್ಪತ್ತಾರನೆಯ ತಿದ್ದುಪಡಿ) ಅಧಿನಿಯಮದ ಪ್ರಾರಂಭದಂದು ಮತ್ತು ಪ್ರಾರಂಭದಿಂದ ರಾಜಧನವನ್ನು ರದ್ದುಗೊಳಿಸಲಾಗಿದೆ ಮತ್ತು ರಾಜಧನಕ್ಕೆ ಸಂಬಂಧಿಸಿದ ಎಲ್ಲ ಹಕ್ಕುಗಳನ್ನು, ಹೊಣೆಗಳನ್ನು ಮತ್ತು ಬಾಧ್ಯತೆಗಳನ್ನು ಅಂತ್ಯಗೊಳಿಸಲಾಗಿದೆ ಮತ್ತು ಅದಕ್ಕನುಸಾರವಾಗಿ (ಎ) ಖಂಡದಲ್ಲಿ ಉಲ್ಲೇಖಿಸಿದ ರಾಜನಿಗೆ ಅಥವಾ ಸಂದರ್ಭಾನುಸಾರ ಅಂಥ ರಾಜನ ಉತ್ತರಾಧಿಕಾರಿಗೆ ಅಥವಾ ಯಾರೇ ಇತರ ವ್ಯಕ್ತಿಗೆ ರಾಜಧನವಾಗಿ ಯಾವುದೇ ಮೊತ್ತವನ್ನು ಸಂದಾಯ ಮಾಡತಕ್ಕದ್ದಲ್ಲ.]

**364. ದೊಡ್ಡ ಬಂದರುಗಳ ಮತ್ತು ವಿಮಾನ ನಿಲ್ದಾಣಗಳ ಬಗ್ಗೆ ವಿಶೇಷ ಉಪಬಂಧಗಳು:**– (1) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ರಾಷ್ಟ್ರಪತಿಯು ಸಾರ್ವಜನಿಕ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ,–

---

1. 1971ನೆಯ ಇಸವಿಯ ಸಂವಿಧಾನ (ಇಪ್ಪತ್ತಾರನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

(ಎ) ಸಂಸತ್ತು ಅಥವಾ ಒಂದು ರಾಜ್ಯದ ವಿಧಾನಮಂಡಲವು ರಚಿಸಿದ ಯಾವುದೇ ಕಾನೂನು ಯಾವುದೇ ದೊಡ್ಡ ಬಂದರಿಗೆ ಅಥವಾ ವಿಮಾನ ನಿಲ್ದಾಣಕ್ಕೆ ಅನ್ವಯವಾಗತಕ್ಕದ್ದಲ್ಲವೆಂದು ಅಥವಾ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳಿಗೆ ಅಥವಾ ಮಾರ್ಪಾಡುಗಳಿಗೆ ಒಳಪಟ್ಟು ಅನ್ವಯವಾಗತಕ್ಕದ್ದೆಂದು, ಅಥವಾ

(ಬಿ) ಅಸ್ತಿತ್ವದಲ್ಲಿರುವ ಯಾವುದೇ ಕಾನೂನು, ಸದರಿ ದಿನಾಂಕಕ್ಕೆ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟ ಕಾರ್ಯಗಳಿಗೆ ಸಂಬಂಧಿಸಿದಂತೆ ಹೊರತು, ಯಾವುದೇ ದೊಡ್ಡ ಬಂದರಿನ ಅಥವಾ ವಿಮಾನ ನಿಲ್ದಾಣದ ವಿಷಯದಲ್ಲಿ ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದೆಂದು ಅಥವಾ ಅಂಥ ಕಾನೂನನ್ನು ಅಂಥ ಬಂದರಿಗೆ ಅಥವಾ ವಿಮಾನ ನಿಲ್ದಾಣಕ್ಕೆ ಅನ್ವಯಿಸುವಾಗ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ವಿನಾಯಿತಿಗಳಿಗೆ ಅಥವಾ ಮಾರ್ಪಾಡುಗಳಿಗೆ ಒಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದೆಂದು

– ನಿರ್ದೇಶಿಸಬಹುದು.

(2) ಈ ಅನುಚ್ಛೇದದಲ್ಲಿ,–

(ಎ) "ದೊಡ್ಡ ಬಂದರು" ಎಂದರೆ ಸಂಸತ್ತು ರಚಿಸಿದ ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ದೊಡ್ಡ ಬಂದರೆಂದು ಘೋಷಿಸಲಾಗಿರುವ ಬಂದರು ಮತ್ತು ಅಂಥ ಬಂದರಿನ ಎಲ್ಲೆಗಳೊಳಗೆ ತತ್ಕಾಲದಲ್ಲಿ ಸೇರಿರುವ ಎಲ್ಲ ಪ್ರದೇಶಗಳನ್ನು ಅದು ಒಳಗೊಳ್ಳುತ್ತದೆ;

(ಬಿ) "ವಿಮಾನ ನಿಲ್ದಾಣ" ಎಂದರೆ ವಾಯುಮಾರ್ಗಗಳು, ವಿಮಾನ ಮತ್ತು ವಿಮಾನ ಯಾನಕ್ಕೆ ಸಂಬಂಧಪಟ್ಟ ಅಧಿನಿಯಮಿತಿಗಳ ಉದ್ದೇಶಗಳಿಗಾಗಿ ವಿಮಾನ ನಿಲ್ದಾಣವೆಂದು ಪರಿಭಾಷಿಸಿರುವ ವಿಮಾನ ನಿಲ್ದಾಣ.

**365. ಒಕ್ಕೂಟವು ನೀಡಿದ ನಿರ್ದೇಶನಗಳನ್ನು ಪಾಲಿಸಲು ಅಥವಾ ಅವುಗಳನ್ನು ಕಾರ್ಯಗತಗೊಳಿಸಲು ತಪ್ಪಿದುದರ ಪರಿಣಾಮ:–** ಈ ಸಂವಿಧಾನದ ಉಪಬಂಧಗಳಲ್ಲಿ ಯಾವುದೇ ಉಪಬಂಧದ ಮೇರೆಗೆ ಒಕ್ಕೂಟದ ಕಾರ್ಯಾಂಗ ಅಧಿಕಾರವನ್ನು ಚಲಾಯಿಸಿ ನೀಡಿದ ಯಾವುವೇ ನಿರ್ದೇಶನಗಳನ್ನು ಪಾಲಿಸಲು ಅಥವಾ ಅವುಗಳನ್ನು ಕಾರ್ಯಗತಗೊಳಿಸಲು ಯಾವುದೇ ರಾಜ್ಯವು ತಪ್ಪಿದಲ್ಲಿ ಆ ರಾಜ್ಯದ ಸರ್ಕಾರವನ್ನು ಈ ಸಂವಿಧಾನದ ಉಪಬಂಧಗಳಿಗೆ ಅನುಸಾರವಾಗಿ ನಡೆಸಲು ಶಕ್ಯವಿಲ್ಲದ ಪರಿಸ್ಥಿತಿಯು ಉದ್ಭವಿಸಿದೆ ಎಂದು ರಾಷ್ಟ್ರಪತಿಯು ಭಾವಿಸುವುದು ಕಾನೂನುಬದ್ಧವಾಗಿರತಕ್ಕದ್ದು.

**366. ಪರಿಭಾಷೆಗಳು:–** ಈ ಸಂವಿಧಾನದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು ಈ ಕೆಳಗಿನ ಪದಗಳಿಗೆ ಅನುಕ್ರಮವಾಗಿ ಕೊಟ್ಟಿರುವಂಥ ಅರ್ಥಗಳೇ ಅವುಗಳಿಗೆ ಇರುತ್ತವೆ; ಎಂದರೆ:–

(1) "ಕೃಷಿ ವರಮಾನ" ಎಂದರೆ ಭಾರತೀಯ ವರಮಾನ ತೆರಿಗೆಗೆ ಸಂಬಂಧಪಟ್ಟ ಅಧಿನಿಯಮಗಳ ಉದ್ದೇಶಗಳಿಗಾಗಿ ಪರಿಭಾಷಿಸಿದ ಕೃಷಿ ವರಮಾನ;

(2) "ಆಂಗ್ಲೋ ಇಂಡಿಯನ್" ಎಂದರೆ ಯಾವ ವ್ಯಕ್ತಿಯ ತಂದೆಯಾಗಲಿ ಅಥವಾ ಪಿತೃಪರಂಪರೆಯ ಇತರ ಪೂರ್ವಜಪುರುಷರಲ್ಲಿ ಯಾರೇ ಆಗಲಿ ಯೂರೋಪೀಯ ಸಂತತಿಯವನಾಗಿರುವನೋ ಅಥವಾ ಆಗಿದ್ದನೋ ಮತ್ತು ಆ ಯಾವ ವ್ಯಕ್ತಿಯು ಭಾರತದ ರಾಜ್ಯಕ್ಷೇತ್ರದೊಳಗೆ ಅಧಿವಾಸಿಯಾಗಿರುವನೋ ಮತ್ತು ಆ ರಾಜ್ಯಕ್ಷೇತ್ರದಲ್ಲಿ ಸಾಮಾನ್ಯ ನಿವಾಸಿಯಾಗಿರುವ ಮತ್ತು ಕೇವಲ ತಾತ್ಕಾಲಿಕ ಉದ್ದೇಶಗಳಿಗಾಗಿ ಮಾತ್ರ ನೆಲೆಸಿರದ ತಂದೆತಾಯಿಗಳಿಂದ ಅಂಥ ರಾಜ್ಯಕ್ಷೇತ್ರದಲ್ಲಿ ಜನ್ಮ ಪಡೆದಿರುವನೋ ಅಥವಾ ಪಡೆದಿದ್ದನೋ ಅಂಥ ವ್ಯಕ್ತಿ;

(3) "ಅನುಚ್ಛೇದ" ಎಂದರೆ ಈ ಸಂವಿಧಾನದ ಒಂದು ಅನುಚ್ಛೇದ;

(4) "ಸಾಲ ತೆಗೆದುಕೊಳ್ಳುವುದು" ಎಂಬುದರಲ್ಲಿ ವರ್ಷಾಶನಗಳನ್ನು ನೀಡುವ ಮೂಲಕ ಹಣ ಸಾಲ ಎತ್ತುವುದು ಸೇರಿರುತ್ತದೆ ಮತ್ತು "ಸಾಲ" ಎಂಬುದನ್ನು ಅದಕ್ಕನುಸಾರವಾಗಿ ಅರ್ಥೈಸತಕ್ಕದ್ದು;

[1] * * * *

1. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 54ನೆಯ ಪ್ರಕರಣದ ಮೂಲಕ (1-2-1977ರಿಂದ ಜಾರಿಗೆ ಬರುವಂತೆ) (4ಎ) ಖಂಡವನ್ನು ಸೇರಿಸಲಾಗಿತ್ತು ಮತ್ತು 1977ನೆಯ ಇಸವಿಯ ಸಂವಿಧಾನ (ನಲವತ್ಮೂರನೆಯ ತಿದ್ದುಪಡಿ) ಅಧಿನಿಯಮದ 11ನೆಯ ಪ್ರಕರಣದ ಮೂಲಕ (13-4-1978ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.

(5) "ಖಂಡ" ಎಂದರೆ ಯಾವ ಅನುಚ್ಛೇದದಲ್ಲಿ ಆ ಪದವು ಬಂದಿದೆಯೋ ಆ ಅನುಚ್ಛೇದದ ಖಂಡ;

(6) "ನಿಗಮ ತೆರಿಗೆ" ಎಂದರೆ ವರಮಾನದ ಮೇಲೆ ಕಂಪನಿಗಳು ಯಾವ ತೆರಿಗೆಯನ್ನು ಸಂದಾಯ ಮಾಡಬೇಕಾಗಿದೆಯೋ ಮತ್ತು ಯಾವ ತೆರಿಗೆ ವಿಷಯದಲ್ಲಿ ಈ ಕೆಳಕಂಡ ಷರತ್ತುಗಳನ್ನು ಪೂರೈಸಲಾಗಿದೆಯೋ ಆ ತೆರಿಗೆಯಷ್ಟರ ಮಟ್ಟಿಗೆ ವರಮಾನದ ಮೇಲಣ ಯಾವುದೇ ತೆರಿಗೆ,–

(ಎ) ಅದನ್ನು ಕೃಷಿ ವರಮಾನದ ವಿಷಯದಲ್ಲಿ ವಿಧಿಸಿರಬಾರದು;

(ಬಿ) ಕಂಪನಿಗಳು ತೆರಿಗೆಯನ್ನು ಸಂದಾಯ ಮಾಡಿದ್ದಕ್ಕೆ ಸಂಬಂಧಿಸಿದಂತೆ ಆ ತೆರಿಗೆಗೆ ಅನ್ವಯವಾಗಬಹುದಾದಂಥ ಯಾವುವೇ ಅಧಿನಿಯಮಿತಿಗಳ ಮೂಲಕ, ಕಂಪನಿಗಳಿಂದ ವ್ಯಕ್ತಿಗಳಿಗೆ ಸಂದಾಯ ಮಾಡಬೇಕಾದ ಯಾವುದೇ ಲಾಭಾಂಶಗಳಿಂದ ಕಳೆಯುವುದನ್ನು ಅಧಿಕೃತಗೊಳಿಸಿರಬಾರದು;

(ಸಿ) ಹಾಗೆ ಸಂದಾಯ ಮಾಡಿದ ತೆರಿಗೆಯನ್ನು, ಅಂಥ ಲಾಭಾಂಶಗಳನ್ನು ಪಡೆಯುವ ವ್ಯಕ್ತಿಗಳ ಒಟ್ಟು ವರಮಾನವನ್ನು ಭಾರತೀಯ ವರಮಾನ ತೆರಿಗೆ ಉದ್ದೇಶಗಳಿಗಾಗಿ ಲೆಕ್ಕ ಹಾಕುವಾಗ ಅಥವಾ ಅಂಥ ವ್ಯಕ್ತಿಗಳು ಸಂದಾಯಮಾಡಬೇಕಾದ ಅಥವಾ ಅವರಿಗೆ ಮರುಪಾವತಿಸಬೇಕಾದ ಭಾರತೀಯ ವರಮಾನ ತೆರಿಗೆಯನ್ನು ಲೆಕ್ಕ ಹಾಕುವಾಗ, ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂಬ ಬಗ್ಗೆ ಯಾವ ಉಪಬಂಧವೂ ಇರಬಾರದು;

(7) "ಸಂವಾದಿ ಪ್ರಾಂತ್ಯ", "ಸಂವಾದಿ ಭಾರತೀಯ ಸಂಸ್ಥಾನ" ಅಥವಾ "ಸಂವಾದಿ ರಾಜ್ಯ" ಎಂದರೆ ಸಂದೇಹ ಬಂದ ಸಂದರ್ಭಗಳಲ್ಲಿ ಪ್ರಶ್ನಿತ ನಿರ್ದಿಷ್ಟ ಉದ್ದೇಶಕ್ಕಾಗಿ ರಾಷ್ಟ್ರಪತಿಯು, ಸಂದರ್ಭಾನುಸಾರ ಸಂವಾದಿ ಪ್ರಾಂತ್ಯ, ಸಂವಾದಿ ಭಾರತೀಯ ಸಂಸ್ಥಾನ ಅಥವಾ ಸಂವಾದಿ ರಾಜ್ಯ ಎಂದು ನಿರ್ಧರಿಸಬಹುದಾದಂಥ ಪ್ರಾಂತ್ಯ, ಭಾರತೀಯ ಸಂಸ್ಥಾನ ಅಥವಾ ರಾಜ್ಯ;

(8) "ಋಣ" ಎಂಬುದರಲ್ಲಿ ಮೂಲಧನದ ಮೊತ್ತಗಳನ್ನು, ವರ್ಷಾಶನಗಳ ರೂಪದಲ್ಲಿ ಮರು ಸಂದಾಯ ಮಾಡಬೇಕಾಗಿರುವ ಯಾವುದೇ ಬಾಧ್ಯತೆಗೆ ಸಂಬಂಧಿಸಿದಂತೆ ಯಾವುದೇ ಹೊಣೆಗಾರಿಕೆ ಹಾಗೂ ಯಾವುದೇ ಖಾತರಿಯ ಮೇರೆಗೆ ಇರತಕ್ಕ ಯಾವುದೇ ಹೊಣೆಗಾರಿಕೆಯು ಒಳಗೊಳ್ಳುತ್ತದೆ ಮತ್ತು 'ಋಣಭಾರ'ಗಳನ್ನು ಅದಕ್ಕನುಸಾರವಾಗಿ ಅರ್ಥೈಸತಕ್ಕದ್ದು;

(9) "ಎಸ್ಟೇಟ್ ಸುಂಕ" ಎಂದರೆ ಆ ಸುಂಕಕ್ಕೆ ಸಂಬಂಧಿಸಿದಂತೆ ಸಂಸತ್ತು ಅಥವಾ ಒಂದು ರಾಜ್ಯದ ವಿಧಾನಮಂಡಲವು ರಚಿಸಿದ ಕಾನೂನುಗಳ ಮೂಲಕ ಅಥವಾ ಅವುಗಳ ಮೇರೆಗೆ ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿ, ಮರಣಾನಂತರ ಪ್ರಾಪ್ತವಾಗುವ ಅಥವಾ ಆ ಕಾನೂನುಗಳ ಉಪಬಂಧಗಳಿಗನುಸಾರವಾಗಿ ಹಾಗೆ ಪ್ರಾಪ್ತವಾಗುವುದೆಂದು ಭಾವಿಸಲಾಗುವ ಎಲ್ಲ ಸ್ವತ್ತಿನ ವಿಷಯದಲ್ಲಿ ಖಚಿತಪಡಿಸಿಕೊಂಡ ಮೂಲ ಮೌಲ್ಯದ ಮೇಲೆ ಅಥವಾ ಅದನ್ನು ಉಲ್ಲೇಖಿಸಿ ನಿರ್ಧರಿಸಲಾಗುವ ಸುಂಕ;

(10) "ಅಸ್ತಿತ್ವದಲ್ಲಿರುವ ಕಾನೂನು" ಎಂದರೆ ಕಾನೂನು, ಅಧ್ಯಾದೇಶ, ಆದೇಶ, ಉಪವಿಧಿ, ನಿಯಮ ಅಥವಾ ವಿನಿಯಮವನ್ನು ರಚಿಸಲು ಅಧಿಕಾರವುಳ್ಳ ಯಾವುದೇ ವಿಧಾನಮಂಡಲವು, ಪ್ರಾಧಿಕಾರವು ಅಥವಾ ವ್ಯಕ್ತಿಯು ಈ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಮಾಡಿದಂಥ ಅಥವಾ ರಚಿಸಿದಂಥ ಕಾನೂನು, ಅಧ್ಯಾದೇಶ, ಆದೇಶ, ಉಪವಿಧಿ, ನಿಯಮ ಅಥವಾ ವಿನಿಯಮನ;

(11) "ಫೆಡರಲ್ ನ್ಯಾಯಾಲಯ" ಎಂದರೆ ಭಾರತ ಸರ್ಕಾರ ಅಧಿನಿಯಮ, 1935ರ ಮೇರೆಗೆ ಸ್ಥಾಪಿಸಿದ ಫೆಡರಲ್ ನ್ಯಾಯಾಲಯ;

(12) "ಸರಕುಗಳು" ಎಂಬುದರಲ್ಲಿ ಎಲ್ಲ ಸಾಮಗ್ರಿಗಳು, ವ್ಯಾಪಾರ ಸರಕುಗಳು ಮತ್ತು ವಸ್ತುಗಳು ಒಳಗೊಳ್ಳುತ್ತವೆ;

(13) "ಖಾತರಿ" ಎಂಬುದರಲ್ಲಿ ಯಾವುದೇ ಉದ್ಯಮದ ಲಾಭಗಳು ನಿರ್ದಿಷ್ಟವಾದ ಮೊತ್ತಕ್ಕಿಂತ ಕಡಿಮೆ ಬಿದ್ದ ಸಂದರ್ಭದಲ್ಲಿ ಸಂದಾಯಗಳನ್ನು ಮಾಡಲು ಈ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ವಹಿಸಿಕೊಂಡ ಯಾವುದೇ ಬಾಧ್ಯತೆಯನ್ನು ಒಳಗೊಳ್ಳುತ್ತದೆ;

(14)"ಉಚ್ಚ ನ್ಯಾಯಾಲಯ" ಎಂದರೆ ಈ ಸಂವಿಧಾನದ ಉದ್ದೇಶಗಳಿಗಾಗಿ ಯಾವುದೇ ರಾಜ್ಯದ ಉಚ್ಚ ನ್ಯಾಯಾಲಯವೆಂದು ಭಾವಿಸಲಾಗಿರುವ ಯಾವುದೇ ನ್ಯಾಯಾಲಯ ಮತ್ತು ಅದರಲ್ಲಿ-

(ಎ) ಈ ಸಂವಿಧಾನದ ಮೇರೆಗೆ ಭಾರತದ ರಾಜ್ಯಕ್ಷೇತ್ರದಲ್ಲಿ ಉಚ್ಚ ನ್ಯಾಯಾಲಯವಾಗಿ ಸ್ಥಾಪಿತವಾದ ಅಥವಾ ಪುನರ್ ಸ್ಥಾಪಿತವಾದ ಯಾವುದೇ ನ್ಯಾಯಾಲಯವು, ಮತ್ತು

(ಬಿ) ಈ ಸಂವಿಧಾನದ ಎಲ್ಲ ಉದ್ದೇಶಗಳಿಗಾಗಿ ಅಥವಾ ಯಾವುದೇ ಉದ್ದೇಶಕ್ಕಾಗಿ ಸಂಸತ್ತು ಕಾನೂನಿನ ಮೂಲಕ ಉಚ್ಚ ನ್ಯಾಯಾಲಯವಾಗಿರುವುದಾಗಿ ಘೋಷಿಸಬಹುದಾದ ಭಾರತದ ರಾಜ್ಯಕ್ಷೇತ್ರದಲ್ಲಿನ ಇತರ ಯಾವುದೇ ನ್ಯಾಯಾಲಯವು

- ಒಳಗೊಳ್ಳುತ್ತದೆ;

(15)"ಭಾರತೀಯ ಸಂಸ್ಥಾನ" ಎಂದರೆ ಭಾರತೀಯ ಸಂಸ್ಥಾನವೆಂದು ಡೊಮಿನಿಯನ್ ಆಫ್ ಇಂಡಿಯಾ ಸರ್ಕಾರದಿಂದ ಮನ್ನಣೆ ಪಡೆದಿದ್ದ ಯಾವುದೇ ರಾಜ್ಯಕ್ಷೇತ್ರ;

(16)"ಭಾಗ" ಎಂದರೆ ಈ ಸಂವಿಧಾನದ ಒಂದು ಭಾಗ;

(17)"ನಿವೃತ್ತಿವೇತನ" ಎಂದರೆ ಯಾರೇ ವ್ಯಕ್ತಿಗೆ ಅಥವಾ ಅವನಿಗೆ ಸಂಬಂಧಿಸಿದಂತೆ ಸಂದಾಯವಾಗಬೇಕಾದ ವಂತಿಕೆಯದ್ದಾಗಿರುವ ಅಥವಾ ಅಲ್ಲದಿರುವ, ಯಾವುದೇ ಬಗೆಯ ನಿವೃತ್ತಿವೇತನ ಮತ್ತು ಅದರಲ್ಲಿ ಸಂದಾಯವಾಗಬೇಕಾದ ಸೇವಾನಿವೃತ್ತಿವೇತನ, ಉಪದಾನ ಮತ್ತು ಭವಿಷ್ಯ ನಿಧಿಗೆ ಕೊಟ್ಟ ವಂತಿಗೆಗಳ ಮೇಲೆ ಬಡ್ಡಿ ಸಹಿತ ಅಥವಾ ಬಡ್ಡಿ ರಹಿತ ಅಥವಾ ಅದಕ್ಕೆ ಇತರ ಯಾವುದೇ ಸೇರ್ಪಡೆಯೊಂದಿಗೆ ವಾಪಸಾತಿಯ ರೂಪದಲ್ಲಿ ಸಂದಾಯ ಮಾಡಬೇಕಾದ ಯಾವುದೇ ಮೊತ್ತ ಅಥವಾ ಮೊತ್ತಗಳು ಒಳಗೊಳ್ಳುತ್ತವೆ;

(18)"ತುರ್ತುಪರಿಸ್ಥಿತಿಯ ಉದ್ಘೋಷಣೆ" ಎಂದರೆ 352ನೆಯ ಅನುಚ್ಛೇದದ (1)ನೆಯ ಖಂಡದ ಮೇರೆಗೆ ಹೊರಡಿಸಿದ ಉದ್ಘೋಷಣೆ;

(19)"ಸಾರ್ವಜನಿಕ ಅಧಿಸೂಚನೆ" ಎಂದರೆ ಭಾರತದ ರಾಜಪತ್ರದಲ್ಲಿ ಅಥವಾ ಸಂದರ್ಭಾನುಸಾರ ಒಂದು ರಾಜ್ಯದ ರಾಜಪತ್ರದಲ್ಲಿ ಹೊರಡಿಸಿದ ಅಧಿಸೂಚನೆ;

(20) "ರೈಲ್ವೆ" ಎಂಬುದರಲ್ಲಿ,-

(ಎ) ಪೂರ್ತಿಯಾಗಿ ಪೌರಸಭಾ ಕ್ಷೇತ್ರದೊಳಗೆ ಇರುವ ಟ್ರಾಮ್‌ವೇ, ಅಥವಾ

(ಬಿ) ಪೂರ್ತಿಯಾಗಿ ಒಂದು ರಾಜ್ಯದೊಳಗೆ ಇರುವ, ರೈಲ್ವೆ ಅಲ್ಲವೆಂದು ಸಂಸತ್ತು ಕಾನೂನಿನ ಮೂಲಕ ಘೋಷಿಸಿದ ಇತರ ಯಾವುದೇ ಸಂಚಾರ ಮಾರ್ಗವು

- ಒಳಗೊಳ್ಳುವುದಿಲ್ಲ;

[1] * * * * *

[2] [(22) "ರಾಜ" ಎಂದರೆ ಸಂವಿಧಾನ (ಇಪ್ಪತ್ತಾರನೆಯ ತಿದ್ದುಪಡಿ) ಅಧಿನಿಯಮ, 1971ರ ಪ್ರಾರಂಭಕ್ಕೆ ಮುಂಚೆ ಯಾವುದೇ ಕಾಲದಲ್ಲಿ ರಾಷ್ಟ್ರಪತಿಯಿಂದ ಒಂದು ಭಾರತೀಯ ಸಂಸ್ಥಾನದ ರಾಜನೆಂದು ಮನ್ನಣೆಪಡೆದ ರಾಜಕುಮಾರ, ಅಧಿಪತಿ ಅಥವಾ ಇತರ ವ್ಯಕ್ತಿ ಅಥವಾ ಅಂಥ ಪ್ರಾರಂಭಕ್ಕೆ ಮುಂಚೆ ರಾಷ್ಟ್ರಪತಿಯಿಂದ ಅಂಥ ರಾಜನ ಉತ್ತರಾಧಿಕಾರಿ ಎಂದು ಮನ್ನಣೆ ಪಡೆದ ಯಾರೇ ವ್ಯಕ್ತಿ;]

(23) "ಅನುಸೂಚಿ" ಎಂದರೆ ಈ ಸಂವಿಧಾನದ ಒಂದು ಅನುಸೂಚಿ;

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಮತ್ತು ಅನುಸೂಚಿಯ ಮೂಲಕ (21)ನೆಯ ಖಂಡವನ್ನು ಬಿಟ್ಟುಬಿಡಲಾಗಿದೆ.
2. 1971ನೆಯ ಇಸವಿಯ ಸಂವಿಧಾನ (ಇಪ್ಪತ್ತಾರನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ ಮೂಲ (22)ನೆಯ ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(24) "ಅನುಸೂಚಿತ ಜಾತಿಗಳು" ಎಂದರೆ 341ನೆಯ ಅನುಚ್ಛೇದದ ಮೇರೆಗೆ ಈ ಸಂವಿಧಾನದ ಉದ್ದೇಶಗಳಿಗಾಗಿ ಅನುಸೂಚಿತ ಜಾತಿಗಳೆಂದು ಭಾವಿಸಲಾಗಿರುವಂಥ ಜಾತಿಗಳು, ಮೂಲವಂಶಗಳು ಅಥವಾ ಬುಡಕಟ್ಟುಗಳು ಅಥವಾ ಅಂಥ ಜಾತಿ, ಮೂಲವಂಶ ಅಥವಾ ಬುಡಕಟ್ಟುಗಳಲ್ಲಿನ ಭಾಗಗಳು ಅಥವಾ ಗುಂಪುಗಳು;

(25) "ಅನುಸೂಚಿತ ಬುಡಕಟ್ಟುಗಳು" ಎಂದರೆ 342ನೆಯ ಅನುಚ್ಛೇದದ ಮೇರೆಗೆ ಈ ಸಂವಿಧಾನದ ಉದ್ದೇಶಗಳಿಗಾಗಿ ಅನುಸೂಚಿತ ಬುಡಕಟ್ಟುಗಳೆಂದು ಭಾವಿಸಲಾಗಿರುವಂಥ ಬುಡಕಟ್ಟುಗಳು ಅಥವಾ ಬುಡಕಟ್ಟು ಸಮುದಾಯಗಳು ಅಥವಾ ಅಂಥ ಬುಡಕಟ್ಟುಗಳ ಅಥವಾ ಅದರ ಸಮುದಾಯಗಳಲ್ಲಿನ ಭಾಗಗಳು ಅಥವಾ ಗುಂಪುಗಳು;

(26) "ಭದ್ರತೆಗಳು" ಎಂಬುದರಲ್ಲಿ ಸ್ಟಾಕ್ ಒಳಗೊಳ್ಳುತ್ತದೆ;

[1] * * * * *

(27) "ಉಪಖಂಡ" ಎಂದರೆ ಆ ಪದವು ಯಾವ ಖಂಡದಲ್ಲಿ ಬರುತ್ತದೆಯೋ ಆ ಖಂಡದ ಉಪಖಂಡ;

(28) "ತೆರಿಗೆ ವಿಧಿಸುವುದು" ಎಂಬುದರಲ್ಲಿ ಸಾಧಾರಣವೋ, ಸ್ಥಳೀಯವೋ, ವಿಶೇಷವೋ ಆದ ಯಾವುದೇ ತೆರಿಗೆ ಅಥವಾ ಸುಂಕ ವಿಧಿಸುವುದೂ ಒಳಗೊಳ್ಳುತ್ತದೆ ಮತ್ತು ತೆರಿಗೆಯನ್ನು ಅದಕ್ಕನುಸಾರವಾಗಿ ಅರ್ಥೈಸತಕ್ಕದ್ದು;

(29) "ವರಮಾನದ ಮೇಲಿನ ತೆರಿಗೆ" ಯಲ್ಲಿ ಅಧಿಕಲಾಭ ತೆರಿಗೆಯ ಸ್ವರೂಪದ ತೆರಿಗೆಯೂ ಒಳಗೊಳ್ಳುತ್ತದೆ;

[2][(29ಎ) "ಸರಕುಗಳ ಮಾರಾಟ ಅಥವಾ ಖರೀದಿ ಮೇಲಿನ ತೆರಿಗೆ" ಎಂಬುದರಲ್ಲಿ ಈ ಕೆಳಕಂಡ ತೆರಿಗೆಗಳು ಸೇರುತ್ತವೆ-

(ಎ) ನಗದು ಹಣಕ್ಕಾಗಿ, ಮುಂದೂಡಿದ ಸಂದಾಯಕ್ಕಾಗಿ ಅಥವಾ ಮೌಲ್ಯವುಳ್ಳ ಇತರ ಪ್ರತಿಫಲಕ್ಕಾಗಿ ಯಾವುವೇ ಸರಕುಗಳಲ್ಲಿನ ಸ್ವಾಮ್ಯದ ವರ್ಗಾವಣೆಯ ಮೇಲೆ ಕರಾರಿಗನುಸಾರವಾಗಿಯಲ್ಲದೆ ಅನ್ಯಥಾ ವಿಧಿಸಲಾಗುವ ತೆರಿಗೆ;

(ಬಿ) ಕಾಮಗಾರಿ ಕರಾರಿನ ನಿರ್ವಹಣೆಯ ಸಂಬಂಧದಲ್ಲಿ (ಸರಕುಗಳ ರೂಪದಲ್ಲಾಗಲಿ ಅಥವಾ ಇತರ ಯಾವುದೇ ರೂಪದಲ್ಲಾಗಲಿ) ಸರಕುಗಳಲ್ಲಿನ ಸ್ವಾಮ್ಯದ ವರ್ಗಾವಣೆಯ ಮೇಲೆ ವಿಧಿಸಲಾಗುವ ತೆರಿಗೆ;

(ಸಿ) ಕಂತು ಖರೀದಿಯ ಮೇಲೆ ಅಥವಾ ಕಂತುಗಳ ಸಂದಾಯದ ಇತರ ಯಾವುದೇ ಪದ್ಧತಿಯ ಮೇಲೆ ಮಾಡಲಾಗುವ ಸರಕುಗಳ ವಶಾವಣೆಯ ಮೇಲೆ ವಿಧಿಸಲಾಗುವ ತೆರಿಗೆ;

(ಡಿ) ಯಾವುದೇ ಉದ್ದೇಶಕ್ಕಾಗಿ ಯಾವುವೇ ಸರಕುಗಳ ಬಳಕೆಯ ಅಧಿಕಾರವನ್ನು (ಯಾವುದೇ ನಿರ್ದಿಷ್ಟ ಅವಧಿಗಾಗಿ ಇರಲಿ ಅಥವಾ ಇಲ್ಲದಿರಲಿ) ನಗದು ಹಣಕ್ಕಾಗಿ, ಮುಂದೂಡಿದ ಸಂದಾಯಕ್ಕಾಗಿ ಅಥವಾ ಮೌಲ್ಯವುಳ್ಳ ಇತರ ಪ್ರತಿಫಲಕ್ಕಾಗಿ ವರ್ಗಾವಣೆ ಮಾಡುವುದರ ಮೇಲೆ ವಿಧಿಸಲಾಗುವ ತೆರಿಗೆ;

(ಇ) ನಿಗಮಿತವಲ್ಲದ ಯಾವುದೇ ಸಂಸ್ಥೆಯು ಅಥವಾ ವ್ಯಕ್ತಿಗಳ ನಿಕಾಯವು ತನ್ನ ಯಾರೇ ಸದಸ್ಯನಿಗೆ ನಗದು ಹಣಕ್ಕಾಗಿ, ಮುಂದೂಡಿದ ಸಂದಾಯಕ್ಕಾಗಿ ಅಥವಾ ಮೌಲ್ಯವುಳ್ಳ ಇತರ ಪ್ರತಿಫಲಕ್ಕಾಗಿ ಮಾಡಿದ ಸರಕುಗಳ ಸರಬರಾಜಿನ ಮೇಲೆ ವಿಧಿಸಲಾಗುವ ತೆರಿಗೆ;

---

1. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 54ನೆಯ ಪ್ರಕರಣದ ಮೂಲಕ (1-2-1977ರಿಂದ ಜಾರಿಗೆ ಬರುವಂತೆ) (26ಎ) ಖಂಡವನ್ನು ಸೇರಿಸಲಾಗಿತ್ತು ಮತ್ತು ಅದನ್ನು 1977ನೆಯ ಇಸವಿಯ ಸಂವಿಧಾನ (ನಲವತ್ತೂರನೆಯ ತಿದ್ದುಪಡಿ) ಅಧಿನಿಯಮದ 11ನೆಯ ಪ್ರಕರಣದ ಮೂಲಕ (13-4-78ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.

2. 1982ನೆಯ ಇಸವಿಯ ಸಂವಿಧಾನ (ನಲವತ್ತಾರನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

(ಎಫ್) ಮಾನವನ ಆಹಾರವಾಗಿರುವ ಅಥವಾ ಅವನು ಬಳಸುವ ಯಾವುದೇ ವಸ್ತುವಾಗಿರುವ ಅಥವಾ (ಮತ್ತುಬರಿಸುವ ಅಥವಾ ಬರಿಸದಿರುವ) ಯಾವುದೇ ಪಾನೀಯವಾಗಿರುವ ಸರಕುಗಳನ್ನು ಯಾವುದೇ ಸೇವೆಯ ರೂಪದಲ್ಲಾಗಲಿ, ಸೇವೆಯ ಭಾಗವಾಗಿಯಾಗಲಿ ಅಥವಾ ಇನ್ನಾವುದೇ ಬಗೆಯಲ್ಲಾಗಲಿ ಸರಬರಾಜು ಮಾಡುವುದರ ಮೇಲೆ ವಿಧಿಸಲಾಗುವ ತೆರಿಗೆ; ಆದರೆ ಅಂಥ ಸರಬರಾಜು ಅಥವಾ ಸೇವೆಯು ನಗದು ಹಣಕ್ಕಾಗಿ, ಮುಂದೂಡಿದ ಸಂದಾಯಕ್ಕಾಗಿ ಅಥವಾ ಮೌಲ್ಯವುಳ್ಳ ಇತರ ಪ್ರತಿಫಲಕ್ಕಾಗಿ ಮಾಡಿದ ಸರಬರಾಜು ಅಥವಾ ಸೇವೆಯಾಗಿರಬೇಕು

– ಮತ್ತು ಯಾವುವೇ ಸರಕುಗಳ ಅಂಥ ವರ್ಗಾವಣೆ, ವಶಾವಣೆ ಅಥವಾ ಸರಬರಾಜನ್ನು ಆ ವರ್ಗಾವಣೆ, ವಶಾವಣೆ ಅಥವಾ ಸರಬರಾಜು ಮಾಡುವ ವ್ಯಕ್ತಿಯು ಆ ಸರಕುಗಳ ವರ್ಗಾವಣೆ, ವಶಾವಣೆ ಅಥವಾ ಸರಬರಾಜು ಪಡೆದಿರುವ ವ್ಯಕ್ತಿಗೆ ಮಾರಾಟ ಮಾಡಿರುವುದಾಗಿ ಭಾವಿಸತಕ್ಕದ್ದು;]

[1][(30) "ಒಕ್ಕೂಟ ರಾಜ್ಯಕ್ಷೇತ್ರ" ಎಂದರೆ ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಒಕ್ಕೂಟ ರಾಜ್ಯಕ್ಷೇತ್ರ ಮತ್ತು ಭಾರತದ ರಾಜ್ಯಕ್ಷೇತ್ರದಲ್ಲಿ ಒಳಗೊಂಡಿರುವ ಆದರೆ ಆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರದ ಇತರ ಯಾವುದೇ ರಾಜ್ಯಕ್ಷೇತ್ರವನ್ನು ಒಳಗೊಳ್ಳುತ್ತದೆ.]

**367. ಅರ್ಥವಿವರಣೆ:–** (1) ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಸಾಮಾನ್ಯ ಖಂಡಗಳ ಅಧಿನಿಯಮ, 1897, 372ನೆಯ ಅನುಚ್ಛೇದದ ಮೇರೆಗೆ ಅದರಲ್ಲಿ ಮಾಡಬಹುದಾದ ಯಾವುವೇ ಅಳವಡಿಕೆಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು ಡೊಮಿನಿಯನ್ ಆಫ್ ಇಂಡಿಯಾದ ವಿಧಾನಮಂಡಲದ ಒಂದು ಅಧಿನಿಯಮದ ಅರ್ಥವಿವರಣೆ ಮಾಡುವುದಕ್ಕೆ ಅದು ಹೇಗೆ ಅನ್ವಯವಾಗುತ್ತದೆಯೋ ಹಾಗೆಯೇ ಈ ಸಂವಿಧಾನದ ಅರ್ಥವಿವರಣೆಗೆ ಅನ್ವಯವಾಗತಕ್ಕದ್ದು.

(2) ಸಂಸತ್ತಿನ ಅಥವಾ ಅದು ರಚಿಸಿದ ಅಧಿನಿಯಮಗಳಿಗೆ ಅಥವಾ ಕಾನೂನುಗಳಿಗೆ ಅಥವಾ [2]*** ಒಂದು ರಾಜ್ಯದ ವಿಧಾನಮಂಡಲವು ಅಥವಾ ಅದು ರಚಿಸಿದ ಅಧಿನಿಯಮಗಳಿಗೆ ಅಥವಾ ಕಾನೂನುಗಳಿಗೆ ಈ ಸಂವಿಧಾನದಲ್ಲಿರುವ ಯಾವುದೇ ಉಲ್ಲೇಖವು ರಾಷ್ಟ್ರಪತಿಯು ಅಥವಾ ಸಂದರ್ಭಾನುಸಾರ ರಾಜ್ಯಪಾಲನು [3]* * * ಹೊರಡಿಸಿದ ಅಧ್ಯಾದೇಶದ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕದ್ದು.

(3) ಈ ಸಂವಿಧಾನದ ಉದ್ದೇಶಗಳಿಗಾಗಿ "ವಿದೇಶಿ ರಾಜ್ಯ" ಎಂದರೆ ಭಾರತವಲ್ಲದ ಇತರ ಯಾವುದೇ ರಾಜ್ಯ:

ಪರಂತು, ಸಂಸತ್ತು ರಚಿಸಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, ರಾಷ್ಟ್ರಪತಿಯು ಆದೇಶದ[4] ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಉದ್ದೇಶಗಳಿಗಾಗಿ ಯಾವುದೇ ರಾಜ್ಯವನ್ನು ವಿದೇಶಿ ರಾಜ್ಯವಲ್ಲವೆಂದು ಘೋಷಿಸಬಹುದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ ಮೂಲ (30)ನೆಯ ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

2. ಅದೇ ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಭಾಗ ಅಥವಾ (ಬಿ) ಭಾಗದಲ್ಲಿ ನಿರ್ದಿಷ್ಟಪಡಿಸಿರುವ" ಎಂಬ ಪದಗಳನ್ನು ಮತ್ತು ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.

3. ಅದೇ ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

4. ಸಂವಿಧಾನ (ವಿದೇಶೀ ರಾಜ್ಯಗಳಿಗೆ ಸಂಬಂಧಿಸಿದ ಘೋಷಣೆ) ಆದೇಶ, 1950 (ಸಿ.ಓ. 2)

# ಭಾಗ - XX

## ಸಂವಿಧಾನದ ತಿದ್ದುಪಡಿ

**368.** [1]**[ಸಂವಿಧಾನವನ್ನು ತಿದ್ದುಪಡಿ ಮಾಡಲು ಸಂಸತ್ತಿನ ಅಧಿಕಾರ ಮತ್ತು ಅದಕ್ಕಾಗಿ ಪ್ರಕ್ರಿಯೆ]:-** [2][(1) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ಸಂಸತ್ತು ತನ್ನ ಸಂವಿಧಾನಾಧಿಕಾರವನ್ನು ಚಲಾಯಿಸಿ, ಈ ಅನುಚ್ಛೇದದಲ್ಲಿ ವಿಧಿಸಿದ ಪ್ರಕ್ರಿಯೆಗನುಸಾರವಾಗಿ ಈ ಸಂವಿಧಾನದ ಯಾವುದೇ ಉಪಬಂಧವನ್ನು, ಅದಕ್ಕೆ ಇನ್ನಷ್ಟು ಸೇರಿಸುವ ಮೂಲಕ ಅಥವಾ ಅದನ್ನು ವ್ಯತ್ಯಸ್ತಗೊಳಿಸುವ ಮೂಲಕ ಅಥವಾ ನಿರಸನಗೊಳಿಸುವ ಮೂಲಕ ತಿದ್ದುಪಡಿ ಮಾಡಬಹುದು.]

[3][(2)] ಈ ಸಂವಿಧಾನದ ಒಂದು ತಿದ್ದುಪಡಿಯನ್ನು, ಆ ಉದ್ದೇಶಕ್ಕಾಗಿ ಒಂದು ವಿಧೇಯಕವನ್ನು ಸಂಸತ್ತಿನ ಯಾವುದಾದರೊಂದು ಸದನದಲ್ಲಿ ಮಂಡಿಸುವ ಮೂಲಕ ಮಾತ್ರ ಪ್ರಾರಂಭಿಸಬಹುದು ಮತ್ತು ಪ್ರತಿಯೊಂದು ಸದನದಲ್ಲಿ ಆ ಸದನದ ಒಟ್ಟು ಸದಸ್ಯರ ಬಹುಮತದಿಂದ ಮತ್ತು ಆ ಸದನದ ಸದಸ್ಯರ ಪೈಕಿ ಹಾಜರಿದ್ದು ಮತಕೊಡುವ ಸದಸ್ಯರಲ್ಲಿ ಮೂರನೆಯ ಎರಡು ಭಾಗಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರ ಬಹುಮತದಿಂದ ಆ ವಿಧೇಯಕವು ಅಂಗೀಕೃತವಾದ ಬಳಿಕ [4][ಅದನ್ನು ರಾಷ್ಟ್ರಪತಿಗೆ ಒಪ್ಪಿಸತಕ್ಕದ್ದು; ಅದಕ್ಕೆ ಅವನು ತನ್ನ ಅನುಮತಿಯನ್ನು ನೀಡತಕ್ಕದ್ದು ಮತ್ತು ಆ ತರುವಾಯ] ಸಂವಿಧಾನವು ಆ ವಿಧೇಯಕದ ನಿಬಂಧನೆಗಳಿಗನುಸಾರ ತಿದ್ದುಪಡಿಯಾಗಿದೆ ಎಂದು ಭಾವಿಸತಕ್ಕದ್ದು:

ಪರಂತು, ಅಂಥ ತಿದ್ದುಪಡಿಯು-

(ಎ) 54ನೆಯ ಅನುಚ್ಛೇದ, 55ನೆಯ ಅನುಚ್ಛೇದ, 73ನೆಯ ಅನುಚ್ಛೇದ, 162ನೆಯ ಅನುಚ್ಛೇದ ಅಥವಾ 241ನೆಯ ಅನುಚ್ಛೇದಗಳಲ್ಲಿ, ಅಥವಾ

(ಬಿ) Vನೆಯ ಭಾಗದ ನೆಯ ಅಧ್ಯಾಯ, IV ನೆಯ ಭಾಗದ Vನೆಯ ಅಧ್ಯಾಯ ಅಥವಾ XI ನೆಯ ಭಾಗದ I ನೆಯ ಅಧ್ಯಾಯಗಳಲ್ಲಿ, ಅಥವಾ

(ಸಿ) ಏಳನೆಯ ಅನುಸೂಚಿಯಲ್ಲಿನ ಪಟ್ಟಿಗಳ ಪೈಕಿ ಯಾವುದೇ ಒಂದು ಪಟ್ಟಿಯಲ್ಲಿ, ಅಥವಾ

(ಡಿ) ಸಂಸತ್ತಿನಲ್ಲಿ ರಾಜ್ಯಗಳಿಗಿರುವ ಪ್ರಾತಿನಿಧ್ಯದಲ್ಲಿ, ಅಥವಾ

(ಇ) ಈ ಅನುಚ್ಛೇದದ ಉಪಬಂಧಗಳಲ್ಲಿ

- ಯಾವುದೇ ಬದಲಾವಣೆ ಮಾಡಲು ಉದ್ದೇಶಿಸಿದರೆ, ಅಂಥ ತಿದ್ದುಪಡಿಯ ಉಪಬಂಧವನ್ನು ಒಳಗೊಂಡಿರುವ ವಿಧೇಯಕವನ್ನು ಅನುಮತಿಗಾಗಿ ರಾಷ್ಟ್ರಪತಿಗೆ ಒಪ್ಪಿಸುವುದಕ್ಕೆ ಮುಂಚೆ [5]*** ರಾಜ್ಯಗಳ ಪೈಕಿ ಅರ್ಧಕ್ಕೆ ಕಡಿಮೆಯಿಲ್ಲದಷ್ಟು ರಾಜ್ಯಗಳ ವಿಧಾನಮಂಡಲಗಳು ಆ ಬಗ್ಗೆ ಅವು ಅಂಗೀಕರಿಸಿದ ನಿರ್ಣಯಗಳ ಮೂಲಕ, ಆ ತಿದ್ದುಪಡಿಯನ್ನು ಅನುಸಮರ್ಥಿಸುವುದು ಅಗತ್ಯವಾಗಿರತಕ್ಕದ್ದು.

---

1. 1971ನೆಯ ಇಸವಿಯ ಸಂವಿಧಾನ (ಇಪ್ಪತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ ಮೂರನೆಯ ಪ್ರಕರಣದ ಮೂಲಕ "ಸಂವಿಧಾನದ ತಿದ್ದುಪಡಿಗಾಗಿ ಪ್ರಕ್ರಿಯೆ" ಎಂಬುದರ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. ಅದೇ ಅಧಿನಿಯಮದ 3ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
3. ಅದೇ ಅಧಿನಿಯಮದ 3ನೆಯ ಪ್ರಕರಣದ ಮೂಲಕ 368ನೆಯ ಅನುಚ್ಛೇದವನ್ನು ಅದರ (2)ನೆಯ ಖಂಡ ಎಂಬುದಾಗಿ ಪುನರ್‌ಸಂಖ್ಯೆ ನೀಡಲಾಗಿದೆ.
4. ಅದೇ ಅಧಿನಿಯಮದ 3ನೆಯ ಪ್ರಕರಣದ ಮೂಲಕ, "ಅದನ್ನು ರಾಷ್ಟ್ರಪತಿಗೆ ಅವನ ಅನುಮತಿಗಾಗಿ ಒಪ್ಪಿಸತಕ್ಕದ್ದು ಮತ್ತು ಅಂಥ ಅನುಮತಿಯನ್ನು ಆ ವಿಧೇಯಕಕ್ಕೆ ಕೊಟ್ಟ ಬಳಿಕ" ಎಂಬ ಪದಗಳಿಗೆ ಬದಲಾಗಿ ಈ ಪದಗಳನ್ನು ಪ್ರತ್ಯಾಯೋಜಿಸಲಾಗಿದೆ.
5. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಮತ್ತು (ಬಿ) ಭಾಗದಲ್ಲಿ ಉಲ್ಲೇಖಿತವಾಗಿರುವ" ಎಂಬ ಪದಗಳನ್ನು, ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.

[1][(3) 13ನೆಯ ಅನುಚ್ಛೇದದಲ್ಲಿ ಇರುವುದು ಯಾವುದೂ, ಈ ಅನುಚ್ಛೇದದ ಮೇರೆಗೆ ಮಾಡಿದ ಯಾವುದೇ ತಿದ್ದುಪಡಿಗೆ ಅನ್ವಯವಾಗತಕ್ಕದ್ದಲ್ಲ.]

[2][(4) [1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 55ನೆಯ ಪ್ರಕರಣದ ಪ್ರಾರಂಭಕ್ಕೆ ಮುಂಚೆಯಾಗಲಿ ಅಥವಾ ತರುವಾಯವಾಗಲಿ] ಈ ಅನುಚ್ಛೇದದ ಮೇರೆಗೆ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಈ ಸಂವಿಧಾನದ ಯಾವುದೇ ತಿದ್ದುಪಡಿಯನ್ನು (IIIನೆಯ ಭಾಗದ ಉಪಬಂಧಗಳೂ ಒಳಗೊಂಡಂತೆ) ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಕಾರಣದ ಮೇಲೆ ಪ್ರಶ್ನಿಸತಕ್ಕದ್ದಲ್ಲ.

(5) ಸಂದೇಹಗಳ ನಿವಾರಣೆಗಾಗಿ, ಈ ಅನುಚ್ಛೇದದ ಮೇರೆಗೆ, ಸೇರಿಸುವ, ವ್ಯತ್ಯಸ್ತಗೊಳಿಸುವ ಅಥವಾ ನಿರಸನಗೊಳಿಸುವ ಮೂಲಕ ಈ ಸಂವಿಧಾನದ ಉಪಬಂಧಗಳನ್ನು ತಿದ್ದುಪಡಿ ಮಾಡಲು ಸಂಸತ್ತಿಗೆ ಇರುವ ಸಂವಿಧಾನಾಧಿಕಾರವು ಯಾವುದೇ ಪರಿಮಿತಿಗೆ ಒಳಪಟ್ಟಿರತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.]

---

1. 1971ನೇ ಇಸವಿಯ ಸಂವಿಧಾನ (ಇಪ್ಪತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 55ನೆಯ ಪ್ರಕರಣದ ಮೂಲಕ (3.1.1977 ರಿಂದ ಜಾರಿಗೆ ಬರುವಂತೆ) 368ನೇ ಅನುಚ್ಛೇದದಲ್ಲಿ (4) ಮತ್ತು (5)ನೇ ಖಂಡಗಳನ್ನು ಸೇರಿಸಲಾಗಿತ್ತು. ಈ ಪ್ರಕರಣವನ್ನು ಅಸಿಂಧುವೆಂದು ಸರ್ವೋಚ್ಚ ನ್ಯಾಯಾಲಯವು ಮಿನರ್ವ ಮಿಲ್ಸ್ ಲಿ. ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು (1980) 2 ಎಸ್‌ಸಿಸಿ 591 ರಲ್ಲಿ ಘೋಷಿಸಿದೆ.

## ಭಾಗ - XXI

## [1][ತಾತ್ಕಾಲಿಕ, ಮಧ್ಯಕಾಲೀನ ಮತ್ತು ವಿಶೇಷ ಉಪಬಂಧಗಳು]

**9. ರಾಜ್ಯಪಟ್ಟಿಯಲ್ಲಿನ ಕೆಲವು ವಿಷಯಗಳ ಬಗ್ಗೆ, ಅವು ಸಮವರ್ತಿಪಟ್ಟಿಯಲ್ಲಿನ ವಿಷಯಗಳಾಗಿದ್ದರೆ ಹೇಗೋ ಹಾಗೆ ಳನ್ನು ರಚಿಸಲು ಸಂಸತ್ತಿಗೆ ತಾತ್ಕಾಲಿಕ ಅಧಿಕಾರ:-** ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ಈ ಸಂವಿಧಾನದ ಂದ ಐದು ವರ್ಷಗಳ ಅವಧಿಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ, ಅವು ಸಮವರ್ತಿ ಪಟ್ಟಿಯಲ್ಲಿ ಗಿದ್ದರೆ ಹೇಗೋ ಹಾಗೆ ಕಾನೂನುಗಳನ್ನು ರಚಿಸಲು ಸಂಸತ್ತಿಗೆ ಅಧಿಕಾರವಿರತಕ್ಕದ್ದು, ಎಂದರೆ:-

(ಎ) ಒಂದು ರಾಜ್ಯದೊಳಗೆ, ಹತ್ತಿಯ ಮತ್ತು ಉಣ್ಣೆಯ ಬಟ್ಟೆಗಳು, ಕಚ್ಚಾ ಹತ್ತಿ, (ಬೀಜ ತೆಗೆದ ಹತ್ತಿ ಮತ್ತು ಜ ತೆಗೆಯದಿರುವ ಹತ್ತಿ ಅಥವಾ ಕಪಾಸನ್ನು ಒಳಗೊಂಡು) ಹತ್ತಿಯ ಬೀಜ, ಕಾಗದ (ವೃತ್ತಪತ್ರಿಕೆಯ ಮುದ್ರಣ ದವನ್ನೂ ಒಳಗೊಂಡು), ಆಹಾರ ಪದಾರ್ಥಗಳು (ಖಾದ್ಯ ಎಣ್ಣೆ ಬೀಜಗಳನ್ನೂ ಮತ್ತು ಎಣ್ಣೆಯನ್ನೂ ಗೊಂಡು), ದನಗಳ ಮೇವು (ಎಣ್ಣೆಯ ಹಿಂಡಿಗಳು, ಇತರ ಸಾರೀಕೃತ ಪದಾರ್ಥಗಳನ್ನೂ ಒಳಗೊಂಡು), ದ್ದಲು (ಕೋಕ್ ಮತ್ತು ಕಲ್ಲಿದ್ದಲಿನ ಜನ್ಯ ಪದಾರ್ಥಗಳನ್ನು ಒಳಗೊಂಡು), ಕಬ್ಬಿಣ, ಉಕ್ಕು ಮತ್ತು ಅಭ್ರಕಗಳ ಪಾರ ಮತ್ತು ವಾಣಿಜ್ಯ, ಉತ್ಪಾದನೆ, ಸರಬರಾಜು ಮತ್ತು ವಿತರಣೆ;

(ಬಿ) (ಎ) ಖಂಡದಲ್ಲಿ ನಮೂದಿಸಿರುವ ವಿಷಯಗಳಲ್ಲಿ ಯಾವುದಕ್ಕಾದರೂ ಸಂಬಂಧಿಸಿದ ಕಾನೂನುಗಳಿಗೆ ದ್ಧವಾದ ಅಪರಾಧಗಳು, ಆ ವಿಷಯಗಳಲ್ಲಿ ಯಾವುದಕ್ಕಾದರೂ ಸಂಬಂಧಿಸಿದಂತೆ ಸರ್ವೋಚ್ಚ ಯಾಲಯದ ಹೊರತು ಎಲ್ಲಾ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ ಮತ್ತು ಅಧಿಕಾರಗಳು ಮತ್ತು ಆ ಯಗಳಲ್ಲಿ ಯಾವುದಕ್ಕಾದರೂ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಲ್ಲಿ ತೆಗೆದುಕೊಂಡ ಜುಗಳನ್ನು ಹೊರತುಪಡಿಸಿ ಇತರ ಫೀಜುಗಳು;

ಸಂಸತ್ತು ಯಾವ ಕಾನೂನನ್ನು ರಚಿಸಲು ಈ ಅನುಚ್ಛೇದದ ಉಪಬಂಧಗಳು ಇಲ್ಲದಿದ್ದಲ್ಲಿ ಪತ್ತಿರಲಿಲ್ಲವೋ ಆ ಕಾನೂನನ್ನು ಸಂಸತ್ತು ಮಾಡಿದ್ದರೆ, ಸದರಿ ಅವಧಿಯು ಮುಗಿದ ಬಳಿಕ, ಹಾಗೆ ವುದಕ್ಕೆ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟ ಕಾರ್ಯಗಳಿಗೆ ಸಂಬಂಧಿಸಿದಂತೆ ಹೊರತು ಹಾಗೆ ಲ್ಲದಿರುವಷ್ಟರ ಮಟ್ಟಿಗೆ,ಅದು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.

**70. ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಪಟ್ಟಂತೆ ತಾತ್ಕಾಲಿಕ ಉಪಬಂಧಗಳು:-** (1) ಈ ಸಂವಿಧಾನದಲ್ಲಿ ದ್ದಾಗ್ಯೂ,-

(ಎ) 238ನೆಯ ಅನುಚ್ಛೇದದ ಉಪಬಂಧಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸಂಬಂಧದಲ್ಲಿ ಯವಾಗತಕ್ಕದ್ದಲ್ಲ;

---

ಯ ಇಸವಿಯ ಸಂವಿಧಾನ (ಹದಿಮೂರನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ "ತಾತ್ಕಾಲಿಕ ಮತ್ತು ಲೀನ ಉಪಬಂಧಗಳು" ಎಂಬುದಕ್ಕೆ ಬದಲಾಗಿ (1-12-1963ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

0ನೇ ಅನುಚ್ಛೇದದ ಮೇರೆಗೆ ಕೊಡಲಾಗಿರುವ ಅಧಿಕಾರಗಳನ್ನು ಚಲಾಯಿಸಿ ರಾಷ್ಟ್ರಪತಿಯು ಜಮ್ಮು ಮತ್ತು ಕಾಶ್ಮೀರ ರಾಜ್ಯದ ಾನ ಸಭೆಯ ಶಿಫಾರಸ್ಸಿನ ಮೇರೆಗೆ ಈ ಅನುಚ್ಛೇದವು ಈ ಕೆಳಕಂಡ ಮಾರ್ಪಾಟಿನೊಂದಿಗೆ, ಎಂದರೆ ಅದರ (1) ನೆಯ ಖಂಡದಲ್ಲಿ ನ ವಿವರಣೆಗೆ ಬದಲಾಗಿ, ಈ ಕೆಳಕಂಡ ವಿವರಣೆಯ ಸಹಿತ 1952ನೆಯ ಇಸವಿಯ ನವೆಂಬರ್ ತಿಂಗಳ ಹದಿನೇಳನೆಯ ದಿಂದ ಜಾರಿಗೆ ಬರತಕ್ಕದ್ದೆಂದು ಘೋಷಿಸಿದ್ದಾನೆ:-

"**ವಿವರಣೆ:-** ಈ ಅನುಚ್ಛೇದದ ಉದ್ದೇಶಗಳಿಗಾಗಿ ಆ ರಾಜ್ಯದ ಸರ್ಕಾರವೆಂದರೆ, ಆ ರಾಜ್ಯದ ವಿಧಾನಸಭೆಯ ಶಿಫಾರಸ್ಸಿನ ೇರೆಗೆ ಜಮ್ಮು ಮತ್ತು ಕಾಶ್ಮೀರ ರಾಜ್ಯದ *ಸದರ್-ಏ-ರಿಯಾಸತ್ ಎಂದು ತತ್ಕಾಲದಲ್ಲಿ ರಾಷ್ಟ್ರಪತಿಯಿಂದ ಮನ್ನಣೆ ಪಡೆದು ತ್ಕಾಲದಲ್ಲಿ ಪದದಲ್ಲಿರುವ ರಾಜ್ಯದ ಮಂತ್ರಿಮಂಡಲದ ಸಲಹೆಯ ಮೇಲೆ ಕೆಲಸ ಮಾಡುತ್ತಿರುವ ವ್ಯಕ್ತಿ ಎಂದು ಅರ್ಥ".

ಾಧಿಮಂತ್ರಾಲಯ ಆದೇಶ ಸಂಖ್ಯೆ ಸಿ.ಓ.44 ದಿನಾಂಕ 15ನೇ ನವೆಂಬರ್ 1952).

ಈಗ "ರಾಜ್ಯಪಾಲ".

(ಬಿ) ಸದರಿ ರಾಜ್ಯಕ್ಕಾಗಿ ಕಾನೂನುಗಳನ್ನು ರಚಿಸಲು ಸಂಸತ್ತಿಗಿರುವ ಅಧಿಕಾರವು-

(i) ಒಕ್ಕೂಟ ಪಟ್ಟಿ ಮತ್ತು ಸಮವರ್ತಿ ಪಟ್ಟಿಗಳಲ್ಲಿನ ಯಾವ ವಿಷಯಗಳನ್ನು, ರಾಷ್ಟ್ರಪತಿಯು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಆ ರಾಜ್ಯಕ್ಕಾಗಿ ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಡೊಮಿನಿಯನ್ನಿನ ವಿಧಾನ ಮಂಡಲವು ಕಾನೂನುಗಳನ್ನು ರಚಿಸಬಹುದೋ ಆ ವಿಷಯಗಳು, ಡೊಮಿನಿಯನ್ ಆಫ್ ಇಂಡಿಯಾಕ್ಕೆ ಆ ರಾಜ್ಯವು ವಿಲೀನವಾಗುವುದಕ್ಕೆ ಸಂಬಂಧಪಡುವ ವಿಲೀನ ಲಿಖಿತದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಿಗೆ ಸಂವಾದಿಯಾಗಿರಬೇಕೆಂದು ಘೋಷಿಸುತ್ತಾರೋ, ಅಂಥ ವಿಷಯಗಳಿಗೆ ಸೀಮಿತವಾಗತಕ್ಕದ್ದು.

(ii) ಸದರಿ ಪಟ್ಟಿಗಳಲ್ಲಿನ ಇತರ ಯಾವ ವಿಷಯಗಳನ್ನು ಆ ರಾಜ್ಯ ಸರ್ಕಾರದ ಸಹಮತಿಯೊಡನೆ ರಾಷ್ಟ್ರಪತಿಯು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದೋ ಅಂಥ ವಿಷಯಗಳಿಗೆ ಸೀಮಿತವಾಗತಕ್ಕದ್ದು.

**ವಿವರಣೆ.-** ಈ ಅನುಚ್ಛೇದದ ಉದ್ದೇಶಗಳಿಗಾಗಿ, "ರಾಜ್ಯ ಸರ್ಕಾರ" ಎಂದರೆ 1948ನೆಯ ಇಸವಿ ಮಾರ್ಚ್ 5ನೆಯ ದಿನಾಂಕದಂದು ಜಮ್ಮು ಮತ್ತು ಕಾಶ್ಮೀರದ ಮಹಾರಾಜನು ಹೊರಡಿಸಿದ ಉದ್ಘೋಷಣೆಯ ಮೇರೆಗೆ ತತ್ಕಾಲದಲ್ಲಿ ಪದದಲ್ಲಿರುವ ಮಂತ್ರಿಮಂಡಲದ ಸಲಹೆಯ ಮೇಲೆ ಕಾರ್ಯನಿರ್ವಹಿಸುವ ಆ ರಾಜ್ಯದ ಮಹಾರಾಜನೆಂದು ರಾಷ್ಟ್ರಪತಿಯಿಂದ ತತ್ಕಾಲದಲ್ಲಿ ಮನ್ನಣೆ ಪಡೆದ ವ್ಯಕ್ತಿ;

(ಸಿ) 1ನೆಯ ಅನುಚ್ಛೇದದ ಮತ್ತು ಈ ಅನುಚ್ಛೇದದ ಉಪಬಂಧಗಳು ಆ ರಾಜ್ಯದ ಸಂಬಂಧದಲ್ಲಿ ಅನ್ವಯಿಸತಕ್ಕದ್ದು;

(ಡಿ) ರಾಷ್ಟ್ರಪತಿಯು ಆದೇಶದ[1] ಮೂಲಕ ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು, ಈ ಸಂವಿಧಾನದ ಅಂಥ ಇತರ ಉಪಬಂಧಗಳು ಆ ರಾಜ್ಯದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು:

ಪರಂತು, (ಬಿ) ಉಪಖಂಡದ (i)ನೆಯ ಪ್ಯಾರಾದಲ್ಲಿ ಉಲ್ಲೇಖಿಸಿರುವ ಆ ರಾಜ್ಯದ ವಿಲೀನ ಲಿಖಿತದಲ್ಲಿ ಯಾವ ವಿಷಯಗಳನ್ನು ನಿರ್ದಿಷ್ಟಪಡಿಸಲಾಗಿದೆಯೋ ಆ ವಿಷಯಗಳಿಗೆ ಸಂಬಂಧಪಟ್ಟಂಥ ಯಾವುದೇ ಆದೇಶವನ್ನೂ ಆ ಸರ್ಕಾರದೊಂದಿಗೆ ಸಮಾಲೋಚಿಸದ ಹೊರತು ಹೊರಡಿಸತಕ್ಕದ್ದಲ್ಲ:

ಮತ್ತೂ ಪರಂತು, ಈ ಮೇಲಿನ ಪರಂತುಕದಲ್ಲಿ ಉಲ್ಲೇಖಿಸಿರುವ ವಿಷಯಗಳಲ್ಲದ ಇತರ ವಿಷಯಗಳಿಗೆ ಸಂಬಂಧಪಟ್ಟಂಥ ಯಾವುದೇ ಆದೇಶಗಳನ್ನು ಆ ಸರ್ಕಾರದ ಸಹಮತಿಯಿಲ್ಲದೆ ಹೊರಡಿಸತಕ್ಕದ್ದಲ್ಲ.

(2) ಆ ರಾಜ್ಯದ ಸಂವಿಧಾನವನ್ನು ರಚಿಸುವ ಉದ್ದೇಶವುಳ್ಳ ಸಂವಿಧಾನ ಸಭೆಯನ್ನು ಕರೆಯುವ ಮುಂಚೆ (1)ನೆಯ ಖಂಡದ (ಬಿ) ಉಪಖಂಡದ (ii)ನೇ ಪ್ಯಾರಾದಲ್ಲಿ ಅಥವಾ ಆ ಖಂಡದ (ಡಿ) ಉಪಖಂಡದ ಎರಡನೆಯ ಪರಂತುಕದಲ್ಲಿ ಉಲ್ಲೇಖಿಸಿದ ಸಹಮತಿಯನ್ನು ರಾಜ್ಯ ಸರ್ಕಾರವು ಕೊಡುವುದಾದರೆ ಆ ಸಭೆಯು ಅದರ ಮೇಲೆ ಕೈಕೊಳ್ಳಬಹುದಾದಂಥ ತೀರ್ಮಾನಕ್ಕಾಗಿ ಅದನ್ನು ಆ ಸಭೆಯ ಮುಂದೆ ಇಡತಕ್ಕದ್ದು.

(3) ಈ ಅನುಚ್ಛೇದದಲ್ಲಿ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದಾಗ್ಯೂ, ರಾಷ್ಟ್ರಪತಿಯು ಸಾರ್ವಜನಿಕ ಅಧಿಸೂಚನೆಯ ಮೂಲಕ ತಾನು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಈ ಅನುಚ್ಛೇದವು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದೆಂದು ಅಥವಾ ತಾನು ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳು ಮತ್ತು ಮಾರ್ಪಾಟುಗಳೊಡನೆ ಮಾತ್ರವೇ ಜಾರಿಯಲ್ಲಿರತಕ್ಕದ್ದೆಂದು ಘೋಷಿಸಬಹುದು:

ಪರಂತು, ರಾಷ್ಟ್ರಪತಿಯು ಅಂಥ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ (2)ನೆಯ ಖಂಡದಲ್ಲಿ ಉಲ್ಲೇಖಿಸಲಾದ ಸಂವಿಧಾನ ಸಭೆಯ ಶಿಫಾರಸ್ಸು ಅವಶ್ಯವಾಗಿರತಕ್ಕದ್ದು.

---

1. ಕಾಲಕಾಲಕ್ಕೆ ತಿದ್ದುಪಡಿಯಾದ 1954ನೆಯ ಇಸವಿಯ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶ (ಸಿ.ಓ.48) ವನ್ನು ಅನುಬಂಧ (1)ರಲ್ಲಿ ನೋಡಿ.

[1][371. [2]*** ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಿಗೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ:- [3]****

(2) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ರಾಷ್ಟ್ರಪತಿಯು [4][ಮಹಾರಾಷ್ಟ್ರ ಅಥವಾ ಗುಜರಾತ್] ರಾಜ್ಯಕ್ಕೆ ಸಂಬಂಧಪಟ್ಟಂತೆ ಆದೇಶದ ಮೂಲಕ,-

(ಎ) ವಿದರ್ಭ, ಮರಾಠವಾಡ [5][ಮತ್ತು ಮಹಾರಾಷ್ಟ್ರದ ಉಳಿದ ಭಾಗ ಅಥವಾ ಸಂದರ್ಭಾನುಸಾರ] ಸೌರಾಷ್ಟ್ರ, ಕಚ್ ಮತ್ತು ಗುಜರಾತಿನ ಉಳಿದ ಭಾಗಗಳಿಗಾಗಿ ಪ್ರತ್ಯೇಕ ಅಭಿವೃದ್ಧಿ ಮಂಡಲಿಗಳನ್ನು ಸ್ಥಾಪಿಸುವುದಕ್ಕೆ ಮತ್ತು ಪ್ರತಿಯೊಂದು ಮಂಡಲಿಯ ಕಾರ್ಯನಿರ್ವಹಣೆಯ ಬಗ್ಗೆ ಒಂದು ವರದಿಯನ್ನು ಆ ರಾಜ್ಯದ ವಿಧಾನಸಭೆಯ ಮುಂದೆ ಪ್ರತಿ ವರ್ಷ ಇಡುವಂತೆ ಮಾಡುವುದಕ್ಕೆ;

(ಬಿ) ಇಡೀ ರಾಜ್ಯದ ಅವಶ್ಯಕತೆಗಳಿಗೊಳಪಟ್ಟು, ಸದರಿ ಪ್ರದೇಶಗಳ ಅಭಿವೃದ್ಧಿ ವೆಚ್ಚಕ್ಕಾಗಿ ನ್ಯಾಯ ಸಮ್ಮತವಾಗಿ ನಿಧಿಗಳನ್ನು ಹಂಚಿಕೆ ಮಾಡುವುದಕ್ಕೆ; ಮತ್ತು

(ಸಿ) ಇಡೀ ರಾಜ್ಯದ ಅವಶ್ಯಕತೆಗಳಿಗೊಳಪಟ್ಟು, ಸದರಿ ಎಲ್ಲ ಪ್ರದೇಶಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಶಿಕ್ಷಣ ಮತ್ತು ವೃತ್ತಿ ತರಬೇತಿಗಾಗಿ ಸಾಕಷ್ಟು ಸೌಲಭ್ಯಗಳನ್ನು ಮತ್ತು ರಾಜ್ಯ ಸರ್ಕಾರದ ಅಧೀನದಲ್ಲಿರುವ ಸೇವೆಗಳಲ್ಲಿ ಸಾಕಷ್ಟು ಉದ್ಯೋಗಾವಕಾಶವನ್ನೂ ಒದಗಿಸುವ ನ್ಯಾಯ ಸಮ್ಮತ ವ್ಯವಸ್ಥೆಯನ್ನು ಮಾಡುವುದಕ್ಕೆ

- ಸಂಬಂಧಿಸಿದಂತೆ ರಾಜ್ಯಪಾಲನ ಯಾವುದೇ ವಿಶೇಷ ಜವಾಬ್ದಾರಿಯ ಬಗ್ಗೆ ಉಪಬಂಧ ಕಲ್ಪಿಸಬಹುದು.]

[6][371ಎ. ನಾಗಾಲ್ಯಾಂಡ್ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ:- (1) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,-

(ಎ) ಸಂಸತ್ತಿನ ಯಾವುದೇ ಅಧಿನಿಯಮವು,-

(i) ನಾಗಾಜನರ ಧಾರ್ಮಿಕ ಅಥವಾ ಸಾಮಾಜಿಕ ಆಚರಣೆಗಳಿಗೆ,

(ii) ನಾಗಾಜನರ ರೂಢಿಜನ್ಯ ಕಾನೂನು ಮತ್ತು ಪ್ರಕ್ರಿಯೆಗೆ,

(iii) ನಾಗಾಜನರ ರೂಢಿಜನ್ಯ ಕಾನೂನಿಗೆ ಅನುಸಾರವಾಗಿ ತೀರ್ಮಾನಗಳನ್ನು ಮಾಡಬೇಕಾದ ಸಂದರ್ಭವನ್ನು ಒಳಗೊಂಡ ಸಿವಿಲ್ ಹಾಗೂ ಕ್ರಿಮಿನಲ್ ನ್ಯಾಯಾಡಳಿತಕ್ಕೆ,

(iv) ಭೂಮಿ ಮತ್ತು ಅದರ ಸಂಪನ್ಮೂಲಗಳ ಒಡೆತನ ಮತ್ತು ವರ್ಗಾವಣೆಗೆ

- ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದೆಂದು ನಾಗಾಲ್ಯಾಂಡ್ ರಾಜ್ಯದ ವಿಧಾನಸಭೆಯು ಒಂದು ನಿರ್ಣಯದ ಮೂಲಕ ತೀರ್ಮಾನಿಸಿದ ಹೊರತು ಆ ಅಧಿನಿಯಮವು, ನಾಗಾಲ್ಯಾಂಡ್ ರಾಜ್ಯಕ್ಕೆ ಅನ್ವಯವಾಗತಕ್ಕದ್ದಲ್ಲ;

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 22ನೆಯ ಪ್ರಕರಣದ ಮೂಲಕ, ಮೂಲ 371ನೆಯ ಅನುಚ್ಛೇದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1973ನೆಯ ಇಸವಿಯ ಸಂವಿಧಾನ (ಮೂವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ "ಆಂಧ್ರಪ್ರದೇಶ", ಎಂಬ ಪದವನ್ನು (1-7-1974ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
3. 1973ನೆಯ ಇಸವಿಯ ಸಂವಿಧಾನ (ಮೂವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (1)ನೆಯ ಖಂಡವನ್ನು (1-7-74ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
4. 1960ನೆಯ ಇಸವಿಯ ಮುಂಬಯಿ ಪುನರ್‌ರಚನೆ ಅಧಿನಿಯಮದ (1960ರ 11) 85ನೆಯ ಪ್ರಕರಣದ ಮೂಲಕ (1-5-1960ರಿಂದ ಜಾರಿಗೆ ಬರುವಂತೆ) "ಬಾಂಬೆ ರಾಜ್ಯ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. ಅದೇ ಅಧಿನಿಯಮದ 85ನೆಯ ಪ್ರಕರಣದ ಮೂಲಕ, "ಮಹಾರಾಷ್ಟ್ರದ ಉಳಿದ ಭಾಗ", ಎಂಬುದಕ್ಕೆ ಬದಲಾಗಿ (1-5-1960ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
6. 1962ನೆಯ ಇಸವಿಯ ಸಂವಿಧಾನ (ಹದಿಮೂರನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (1-12-1963ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(ಬಿ) ನಾಗಾಲ್ಯಾಂಡ್ ರಾಜ್ಯದ ರಚನೆಗೆ ನಿಕಟಪೂರ್ವದಲ್ಲಿ, ನಾಗಾಬೆಟ್ಟಗಳ ತ್ಯೂನ್‌ಸಾಂಗ್ ಪ್ರದೇಶದಲ್ಲಿ ನಡೆಯುತ್ತಿದ್ದ ಆಂತರಿಕ ಗಲಭೆಗಳು, ಆ ಪ್ರದೇಶದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಮುಂದುವರಿಯುತ್ತಿವೆಯೆಂದು ರಾಜ್ಯಪಾಲನು ಅಭಿಪ್ರಾಯಪಡುವಷ್ಟು ಕಾಲದವರೆಗೆ, ನಾಗಾಲ್ಯಾಂಡ್ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಆ ರಾಜ್ಯಪಾಲನಿಗೆ ವಿಶೇಷ ಜವಾಬ್ದಾರಿಯಿರತಕ್ಕದ್ದು ಮತ್ತು ರಾಜ್ಯಪಾಲನು ಅದಕ್ಕೆ ಸಂಬಂಧಪಟ್ಟಂತೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಮಂತ್ರಿಮಂಡಲದೊಡನೆ ಸಮಾಲೋಚನೆ ನಡೆಸಿದ ಬಳಿಕ ಆ ಬಗ್ಗೆ ತನ್ನ ವೈಯಕ್ತಿಕ ವಿವೇಚನೆಗನುಸಾರ ಕ್ರಮ ಕೈಗೊಳ್ಳತಕ್ಕದ್ದು:

ಪರಂತು, ಯಾವುದೇ ವಿಷಯವು ರಾಜ್ಯಪಾಲನು ಈ ಉಪಖಂಡದ ಮೇರೆಗೆ ಯಾವ ವಿಷಯದ ಬಗ್ಗೆ ತನ್ನ ವೈಯಕ್ತಿಕ ವಿವೇಚನಾನುಸಾರ ಕ್ರಮ ಕೈಗೊಳ್ಳಬೇಕಾಗಿದೆಯೋ ಅಂಥ ವಿಷಯವಾಗಿದೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆಯು ಉದ್ಭವಿಸಿದರೆ, ಅವನು ತನ್ನ ವಿವೇಚನೆಗನುಸಾರ ಕೈಗೊಂಡ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ರಾಜ್ಯಪಾಲನು ತನ್ನ ವೈಯಕ್ತಿಕ ವಿವೇಚನಾನುಸಾರ ಕಾರ್ಯನಿರ್ವಹಿಸಬೇಕಾಗಿತ್ತು ಅಥವಾ ನಿರ್ವಹಿಸಬೇಕಾಗಿರಲಿಲ್ಲ ಎಂಬ ಆಧಾರದ ಮೇಲೆ ಅವನು ಕೈಗೊಂಡ ಯಾವುದೇ ಕ್ರಮದ ಸಿಂಧುತ್ವವನ್ನು ಪ್ರಶ್ನಿಸತಕ್ಕದ್ದಲ್ಲ:

ಮತ್ತೂ ಪರಂತು, ನಾಗಾಲ್ಯಾಂಡ್ ರಾಜ್ಯದ ಕಾನೂನು ಹಾಗೂ ಸುವ್ಯವಸ್ಥೆಯ ಬಗ್ಗೆ ರಾಜ್ಯಪಾಲನಿಗೆ ಇನ್ನು ಮುಂದೆ ವಿಶೇಷ ಜವಾಬ್ದಾರಿ ಇರಬೇಕಾದ ಅವಶ್ಯಕತೆಯಿಲ್ಲವೆಂದು ರಾಜ್ಯಪಾಲನಿಂದ ವರದಿಯನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ ರಾಷ್ಟ್ರಪತಿಗೆ ಮನವರಿಕೆಯಾದರೆ, ಅವನು ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅಂಥ ಜವಾಬ್ದಾರಿಯನ್ನು ರಾಜ್ಯಪಾಲನು ಹೊಂದಿರುವುದು ನಿಂತುಹೋಗತಕ್ಕದ್ದು ಎಂದು ನಿರ್ದೇಶಿಸಬಹುದು;

(ಸಿ) ನಾಗಾಲ್ಯಾಂಡಿನ ರಾಜ್ಯಪಾಲನು ಯಾವುದೇ ಅನುದಾನದ ಬೇಡಿಕೆಯ ಬಗ್ಗೆ ಶಿಫಾರಸ್ಸನ್ನು ಮಾಡುವಲ್ಲಿ, ಭಾರತ ಸರ್ಕಾರವು ಯಾವುದೇ ನಿರ್ದಿಷ್ಟ ಸೇವೆಗಾಗಿ ಅಥವಾ ಉದ್ದೇಶಕ್ಕಾಗಿ, ಭಾರತದ ಸಂಚಿತ ನಿಧಿಯಿಂದ ಒದಗಿಸಿರುವ ಯಾವುದೇ ಹಣವು ಆ ನಿರ್ದಿಷ್ಟ ಸೇವೆಗೆ ಅಥವಾ ಉದ್ದೇಶಕ್ಕೆ ಸಂಬಂಧಪಟ್ಟ ಅನುದಾನದ ಬೇಡಿಕೆಯಲ್ಲಿ ಸೇರಿದೆ ಎಂಬುದನ್ನು ಮತ್ತು ಇತರ ಯಾವುದೇ ಬೇಡಿಕೆಯಲ್ಲಿ ಸೇರಿಲ್ಲ ಎಂಬುದನ್ನು ರಾಜ್ಯಪಾಲನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು;

(ಡಿ) ನಾಗಾಲ್ಯಾಂಡಿನ ರಾಜ್ಯಪಾಲನು ಸಾರ್ವಜನಿಕ ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದಂಥ ದಿನಾಂಕದಿಂದ, ತ್ಯೂನ್‌ಸಾಂಗ್ ಜಿಲ್ಲೆಗಾಗಿ ಮೂವತ್ತೈದು ಸದಸ್ಯರುಗಳನ್ನು ಒಳಗೊಂಡ ಒಂದು ಪ್ರಾದೇಶಿಕ ಪರಿಷತ್ತನ್ನು ಸ್ಥಾಪಿಸತಕ್ಕದ್ದು ಮತ್ತು ರಾಜ್ಯಪಾಲನು,-

(i) ಪ್ರಾದೇಶಿಕ ಪರಿಷತ್ತಿನ ಸಂರಚನೆ ಮತ್ತು ಆ ಪ್ರಾದೇಶಿಕ ಪರಿಷತ್ತಿನ ಸದಸ್ಯರುಗಳನ್ನು ಆಯ್ಕೆ ಮಾಡುವ ರೀತಿಯ:

ಪರಂತು, ತ್ಯೂನ್‌ಸಾಂಗ್ ಜಿಲ್ಲೆಯ ಡೆಪ್ಯುಟಿ ಕಮಿಷನರನು ಆ ಪ್ರಾದೇಶಿಕ ಪರಿಷತ್ತಿನ ಪದನಿಮಿತ್ತ ಸಭಾಪತಿಯಾಗಿರತಕ್ಕದ್ದು ಮತ್ತು ಪ್ರಾದೇಶಿಕ ಪರಿಷತ್ತಿನ ಉಪಸಭಾಪತಿಯು ಅದರ ಸದಸ್ಯರೊಳಗಿಂದ ಚುನಾಯಿತನಾಗತಕ್ಕದ್ದು;

(ii) ಪ್ರಾದೇಶಿಕ ಪರಿಷತ್ತಿನ ಸದಸ್ಯನಾಗಿ ಆಯ್ಕೆ ಆಗುವುದಕ್ಕೆ ಮತ್ತು ಅದರ ಸದಸ್ಯನಾಗಿರುವುದಕ್ಕೆ ಅರ್ಹತೆಗಳ;

(iii) ಪ್ರಾದೇಶಿಕ ಪರಿಷತ್ತಿನ ಸದಸ್ಯರ ಪದಾವಧಿ ಮತ್ತು ಅವರಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯಗಳೇನಾದರೂ ಇದ್ದರೆ, ಅಂಥ ವೇತನಗಳ ಮತ್ತು ಭತ್ಯಗಳ;

(iv) ಪ್ರಾದೇಶಿಕ ಪರಿಷತ್ತಿನ ಕಾರ್ಯವಿಧಾನ ಮತ್ತು ಅದರ ಕಾರ್ಯಕಲಾಪಗಳ ನಿರ್ವಹಣೆಯ;

(v) ಪ್ರಾದೇಶಿಕ ಪರಿಷತ್ತಿನ ಅಧಿಕಾರಿಗಳ ಮತ್ತು ಸಿಬ್ಬಂದಿಯ ನೇಮಕದ ಮತ್ತು ಅವರ ಸೇವಾ ಷರತ್ತುಗಳ; ಮತ್ತು

(vi) ಪ್ರಾದೇಶಿಕ ಪರಿಷತ್ತಿನ ಸಂರಚನೆ ಮತ್ತು ಅದರ ಸಮರ್ಪಕ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಯಾವ ವಿಷಯದ ಬಗ್ಗೆ ನಿಯಮಗಳನ್ನು ರಚಿಸುವುದು ಅವಶ್ಯಕವೋ ಅಂಥ ಯಾವುದೇ ಇತರ ವಿಷಯದ

– ಬಗ್ಗೆ ಉಪಬಂಧಿಸಲು ತನ್ನ ವಿವೇಚನಾನುಸಾರ ನಿಯಮಗಳನ್ನು ರಚಿಸತಕ್ಕದ್ದು.

(2) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ನಾಗಾಲ್ಯಾಂಡ್ ರಾಜ್ಯದ ರಚನೆಯ ದಿನಾಂಕದಿಂದ ಹತ್ತು ವರ್ಷಗಳ ಅವಧಿಯವರೆಗೆ, ಅಥವಾ ಪ್ರಾದೇಶಿಕ ಪರಿಷತ್ತಿನ ಶಿಫಾರಸ್ಸಿನ ಮೇರೆಗೆ ರಾಜ್ಯಪಾಲನು ಈ ಬಗ್ಗೆ ಸಾರ್ವಜನಿಕ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇನ್ನೂ ಹೆಚ್ಚಿನ ಅವಧಿಯವರೆಗೆ,–

(ಎ) ರಾಜ್ಯಪಾಲನು ತ್ಯೂನ್‌ಸಾಂಗ್ ಜಿಲ್ಲೆಯ ಆಡಳಿತವನ್ನು ನಿರ್ವಹಿಸತಕ್ಕದ್ದು;

(ಬಿ) ಇಡೀ ನಾಗಾಲ್ಯಾಂಡ್ ರಾಜ್ಯದ ಅಗತ್ಯತೆಗಳನ್ನು ಪೂರೈಸಲು ಭಾರತ ಸರ್ಕಾರವು ನಾಗಾಲ್ಯಾಂಡ್ ಸರ್ಕಾರಕ್ಕೆ ಯಾವುದೇ ಹಣವನ್ನು ಒದಗಿಸಿದ್ದಲ್ಲಿ, ರಾಜ್ಯಪಾಲನು ಆ ಹಣವನ್ನು ತ್ಯೂನ್‌ಸಾಂಗ್ ಜಿಲ್ಲೆಯ ಮತ್ತು ರಾಜ್ಯದ ಉಳಿದ ಭಾಗದ ನಡುವೆ ನ್ಯಾಯಸಮ್ಮತವಾಗಿ ಹಂಚಿಕೆಯಾಗುವಂತೆ ತನ್ನ ವಿವೇಚನಾನುಸಾರ ಏರ್ಪಾಡು ಮಾಡತಕ್ಕದ್ದು;

(ಸಿ) ರಾಜ್ಯಪಾಲನು ಪ್ರಾದೇಶಿಕ ಪರಿಷತ್ತಿನ ಶಿಫಾರಸ್ಸಿನ ಮೇರೆಗೆ ಸಾರ್ವಜನಿಕ ಅಧಿಸೂಚನೆಯ ಮೂಲಕ ನಾಗಾಲ್ಯಾಂಡ್ ವಿಧಾನ ಮಂಡಲದ ಯಾವುದೇ ಅಧಿನಿಯಮವು ತ್ಯೂನ್‌ಸಾಂಗ್ ಜಿಲ್ಲೆಗೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಿದ ಹೊರತು, ಆ ಅಧಿನಿಯಮವು ಆ ಜಿಲ್ಲೆಗೆ ಹಾಗೆ ಅನ್ವಯವಾಗತಕ್ಕದ್ದಲ್ಲ ಮತ್ತು ಅಂಥ ಯಾವುದೇ ಅಧಿನಿಯಮದ ಬಗ್ಗೆ ಅಂಥ ನಿರ್ದೇಶನವನ್ನು ಕೊಡುವಾಗ, ಆ ಅಧಿನಿಯಮವನ್ನು ತ್ಯೂನ್‌ಸಾಂಗ್ ಜಿಲ್ಲೆಗೆ ಅಥವಾ ಅದರ ಯಾವುದೇ ಭಾಗಕ್ಕೆ ಅನ್ವಯಿಸುವಲ್ಲಿ, ಪ್ರಾದೇಶಿಕ ಪರಿಷತ್ತಿನ ಶಿಫಾರಸ್ಸಿನ ಮೇರೆಗೆ ರಾಜ್ಯಪಾಲನು ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳಿಗೆ ಅಥವಾ ಮಾರ್ಪಾಟುಗಳಿಗೆ ಒಳಪಟ್ಟು, ಆ ಅಧಿನಿಯಮವು ಪರಿಣಾಮಕಾರಿಯಾಗಿರತಕ್ಕದ್ದೆಂದು ಅವನು ನಿರ್ದೇಶಿಸಬಹುದು:

ಪರಂತು, ಈ ಉಪಖಂಡದ ಮೇರೆಗೆ ಯಾವುದೇ ನಿರ್ದೇಶನವನ್ನು ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗಿರುವಂತೆ ಕೊಡಬಹುದು;

(ಡಿ) ರಾಜ್ಯಪಾಲನು ತ್ಯೂನ್‌ಸಾಂಗ್ ಜಿಲ್ಲೆಯ ಶಾಂತಿ, ಪ್ರಗತಿ ಮತ್ತು ಒಳ್ಳೆಯ ಆಡಳಿತಕ್ಕಾಗಿ ವಿನಿಯಮಗಳನ್ನು ರಚಿಸಬಹುದು ಮತ್ತು ಹಾಗೆ ರಚಿಸಿದ ಯಾವುವೇ ವಿನಿಯಮಗಳು ಸಂಸತ್ತಿನ ಯಾವುದೇ ಅಧಿನಿಯಮವನ್ನು ಅಥವಾ ತತ್ಕಾಲದಲ್ಲಿ ಆ ಜಿಲ್ಲೆಗೆ ಅನ್ವಯವಾಗಬಹುದಾದಂಥ ಇತರ ಯಾವುದೇ ಕಾನೂನನ್ನು ಅವಶ್ಯವೆನಿಸಿದರೆ, ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗಿರುವಂತೆ ನಿರಸನಗೊಳಿಸಬಹುದು ಅಥವಾ ತಿದ್ದುಪಡಿ ಮಾಡಬಹುದು;

(ಇ) (i) ನಾಗಾಲ್ಯಾಂಡ್ ವಿಧಾನಸಭೆಯಲ್ಲಿ ತ್ಯೂನ್‌ಸಾಂಗ್ ಜಿಲ್ಲೆಯನ್ನು ಪ್ರತಿನಿಧಿಸುತ್ತಿರುವ ಸದಸ್ಯರಲ್ಲಿ ಒಬ್ಬನನ್ನು ರಾಜ್ಯಪಾಲನು ಮುಖ್ಯಮಂತ್ರಿಯ ಸಲಹೆಯ ಮೇರೆಗೆ ತ್ಯೂನ್‌ಸಾಂಗ್‌ನ ವ್ಯವಹಾರಗಳ ಮಂತ್ರಿಯಾಗಿ ನೇಮಕ ಮಾಡತಕ್ಕದ್ದು ಮತ್ತು ಮುಖ್ಯಮಂತ್ರಿಯು ತನ್ನ ಸಲಹೆಯನ್ನು ನೀಡುವಲ್ಲಿ [1]ಮೇಲೆ ಹೇಳಿದ ಸದಸ್ಯರುಗಳಲ್ಲಿ ಬಹುಸಂಖ್ಯೆಯ ಸದಸ್ಯರ ಶಿಫಾರಸ್ಸಿನ ಮೇರೆಗೆ ಕಾರ್ಯನಿರ್ವಹಿಸತಕ್ಕದ್ದು;

---

1. ಈ ಕೆಳಗಿನ ಪರಂತುಕವನ್ನು 371ಎ ಅನುಚ್ಛೇದದ (2)ನೆಯ ಖಂಡದ (ಇ) ಉಪಖಂಡದ (i)ನೆಯ ಪ್ಯಾರಾಕ್ಕೆ ಸೇರಿಸಿದ್ದರೆ ಹೇಗೋ ಹಾಗೆ 371ಎ ಅನುಚ್ಛೇದವು (1-12-1963ರಿಂದ) ಪ್ರಭಾವವುಳ್ಳದ್ದಾಗಿರತಕ್ಕದ್ದು ಎಂದು ಸಂವಿಧಾನದ (ತೊಂದರೆಗಳನ್ನು ನಿವಾರಿಸುವ) X ನೆಯ ಆದೇಶದ 2ನೆಯ ಪ್ಯಾರಾದಲ್ಲಿ ಉಪಬಂಧವನ್ನು ಕಲ್ಪಿಸಲಾಗಿದೆ; ಎಂದರೆ:–

"ಪರಂತು, ನಾಗಾಲ್ಯಾಂಡ್ ರಾಜ್ಯದ ವಿಧಾನಸಭೆಯಲ್ಲಿ ತ್ಯೂನ್‌ಸಾಂಗ್ ಜಿಲ್ಲೆಗಾಗಿ ಹಂಚಿಕೆ ಮಾಡಿರುವ ಸ್ಥಾನಗಳನ್ನು ಭರ್ತಿಮಾಡಲು ಕಾನೂನಿಗನುಸಾರವಾಗಿ ವ್ಯಕ್ತಿಗಳನ್ನು ಆಯ್ಕೆ ಮಾಡುವ ಸಮಯದವರೆಗೆ ರಾಜ್ಯಪಾಲನು ಮುಖ್ಯಮಂತ್ರಿಯ ಸಲಹೆಯ ಮೇರೆಗೆ ಯಾರೇ ವ್ಯಕ್ತಿಯನ್ನು ತ್ಯೂನ್‌ಸಾಂಗ್ ವ್ಯವಹಾರಗಳ ಮಂತ್ರಿಯಾಗಿ ನೇಮಕ ಮಾಡಬಹುದು."

(ii) ತ್ಯೂನ್‌ಸಾಂಗ್ ವ್ಯವಹಾರಗಳ ಮಂತ್ರಿಯು ತ್ಯೂನ್‌ಸಾಂಗ್ ಜಿಲ್ಲೆಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ವ್ಯವಹರಿಸತಕ್ಕದ್ದು ಮತ್ತು ಈ ವಿಷಯಗಳಿಗೆ ಸಂಬಂಧಪಟ್ಟಂತೆ ಅವನು ರಾಜ್ಯಪಾಲನೊಡನೆ ನೇರ ಸಂಪರ್ಕ ಹೊಂದಿರತಕ್ಕದ್ದು; ಆದರೆ ಆ ಮಂತ್ರಿಯು ಮುಖ್ಯಮಂತ್ರಿಗೆ ಆ ಬಗ್ಗೆ ತಿಳಿಸತಕ್ಕದ್ದು;

(ಎಫ್) ಈ ಖಂಡದಲ್ಲಿ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಇದ್ದಾಗ್ಯೂ, ತ್ಯೂನ್‌ಸಾಂಗ್ ಜಿಲ್ಲೆಗೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲಿ ಅಂತಿಮ ತೀರ್ಮಾನವನ್ನು ರಾಜ್ಯಪಾಲನು ತನ್ನ ವಿವೇಚನಾನುಸಾರ ತೆಗೆದುಕೊಳ್ಳತಕ್ಕದ್ದು;

(ಜಿ) 54ನೆಯ ಮತ್ತು 55ನೆಯ ಅನುಚ್ಛೇದಗಳಲ್ಲಿ ಹಾಗೂ 80ನೆಯ ಅನುಚ್ಛೇದದ (4) ನೆಯ ಖಂಡದಲ್ಲಿ, ರಾಜ್ಯದ ವಿಧಾನಸಭೆಯ ಚುನಾಯಿತ ಸದಸ್ಯರ ಅಥವಾ ಅಂಥ ಪ್ರತಿ ಸದಸ್ಯರ ಬಗ್ಗೆ ಇರುವ ಉಲ್ಲೇಖಗಳು, ಈ ಅನುಚ್ಛೇದದ ಮೇರೆಗೆ ಸ್ಥಾಪಿತವಾದಂಥ ಪ್ರಾದೇಶಿಕ ಪರಿಷತ್ತಿನ ಮೂಲಕ ಚುನಾಯಿತರಾದ ನಾಗಾಲ್ಯಾಂಡ್ ವಿಧಾನಸಭಾ ಸದಸ್ಯರ ಅಥವಾ ಸದಸ್ಯನ ಬಗೆಗಿನ ಉಲ್ಲೇಖಗಳನ್ನು ಒಳಗೊಂಡಿರತಕ್ಕದ್ದು;

(ಎಚ್) 170ನೆಯ ಅನುಚ್ಛೇದದಲ್ಲಿ,-

(i) ನಾಗಾಲ್ಯಾಂಡ್ ವಿಧಾನಸಭೆಗೆ ಸಂಬಂಧಪಟ್ಟಂತೆ, (1)ನೇ ಖಂಡದಲ್ಲಿ ಇರುವ "ಅರವತ್ತು" ಎಂಬ ಪದಕ್ಕೆ ಬದಲಾಗಿ "ನಲ್ವತ್ತಾರಕ್ಕಿಂತ" ಎಂಬ ಪದವನ್ನು ಪ್ರತ್ಯಾಯೋಜಿಸಿದ್ದರೆ ಹೇಗೋ ಹಾಗೆ ಆ ಖಂಡವು ಪರಿಣಾಮವುಳ್ಳದ್ದಾಗಿರತಕ್ಕದ್ದು;

(ii) ಸದರಿ ಖಂಡದಲ್ಲಿ, ಆ ರಾಜ್ಯದಲ್ಲಿನ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಂದ ನೇರ ಚುನಾವಣೆಯ ಬಗ್ಗೆ ಇರುವ ಉಲ್ಲೇಖವು, ಈ ಅನುಚ್ಛೇದದ ಮೇರೆಗೆ ಸ್ಥಾಪಿತವಾದ ಪ್ರಾದೇಶಿಕ ಪರಿಷತ್ತಿನ ಸದಸ್ಯರ ಮೂಲಕ ನಡೆಯುವ ಚುನಾವಣೆಯನ್ನು ಒಳಗೊಳ್ಳತಕ್ಕದ್ದು;

(iii) (2)ನೆಯ ಮತ್ತು (3)ನೆಯ ಖಂಡಗಳಲ್ಲಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಗೆ ಮಾಡಿದ ಉಲ್ಲೇಖಗಳಿಗೆ ಕೊಹಿಮಾ ಮತ್ತು ಮೊಕೊಕ್‌ಚುಂಗ್ ಜಿಲ್ಲೆಗಳಲ್ಲಿರುವ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಗೆ ಮಾಡಿದ ಉಲ್ಲೇಖಗಳೆಂದು ಅರ್ಥ.

(3) ಈ ಅನುಚ್ಛೇದದ ಹಿಂದೆ ಹೇಳಿದ ಉಪಬಂಧಗಳಲ್ಲಿ ಯಾವುದೇ ಉಪಬಂಧವನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಷ್ಟ್ರಪತಿಯು ಆದೇಶದ ಮೂಲಕ (ಇತರ ಯಾವುದೇ ಅನುಚ್ಛೇದದ ಅಳವಡಿಕೆ ಅಥವಾ ಮಾರ್ಪಾಡೂ ಸೇರಿದಂತೆ) ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ತನಗೆ ಅವಶ್ಯವೆಂದು ತೋರುವಂಥ ಯಾವುದೇ ಕಾರ್ಯವನ್ನು ಮಾಡಬಹುದು:

ಪರಂತು, ನಾಗಾಲ್ಯಾಂಡ್ ರಾಜ್ಯದ ರಚನೆಯ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ಅನಂತರ ಅಂಥ ಯಾವುದೇ ಆದೇಶವನ್ನೂ ಮಾಡತಕ್ಕದ್ದಲ್ಲ.

**ವಿವರಣೆ.-** ಈ ಅನುಚ್ಛೇದದಲ್ಲಿ ಕೊಹಿಮಾ, ಮೊಕೊಕ್‌ಚುಂಗ್ ಮತ್ತು ತ್ಯೂನ್‌ಸಾಂಗ್ ಜಿಲ್ಲೆಗಳಿಗೆ, 1962ನೆಯ ಇಸವಿಯ ನಾಗಾಲ್ಯಾಂಡ್ ರಾಜ್ಯದ ಅಧಿನಿಯಮದಲ್ಲಿರತಕ್ಕಂಥ ಅರ್ಥಗಳೇ ಇರತಕ್ಕದ್ದು.]

[1][**371ಬಿ. ಅಸ್ಸಾಂ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ:-** ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ಅಸ್ಸಾಂ ರಾಜ್ಯಕ್ಕೆ ಸಂಬಂಧಪಟ್ಟಂತೆ, ಆರನೆಯ ಅನುಸೂಚಿಯ 20ನೆಯ ಪ್ಯಾರಾಗೆ ಅನುಬಂಧಿಸಿದ ಕೋಷ್ಟಕದ [2][I ನೆಯ ಭಾಗದಲ್ಲಿ] ನಿರ್ದಿಷ್ಟಪಡಿಸಿದ ಬುಡಕಟ್ಟು ಪ್ರದೇಶಗಳಿಂದ ಅಸ್ಸಾಂ ರಾಜ್ಯದ ವಿಧಾನಸಭೆಗೆ ಚುನಾಯಿತರಾದ ಸದಸ್ಯರನ್ನು ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟು ಸಂಖ್ಯೆಯ, ಆ ವಿಧಾನಸಭೆಯ ಇತರ ಸದಸ್ಯರನ್ನೊಳಗೊಂಡಿರುವ ಆ ಸಭೆಯ ಒಂದು ಸಮಿತಿಯನ್ನು ರಚಿಸುವ ಬಗ್ಗೆ ಮತ್ತು ಅದರ ಪ್ರಕಾರ್ಯಗಳ ಬಗ್ಗೆ ಮತ್ತು ಅಂಥ ಸಮಿತಿಯ ರಚನೆ ಹಾಗೂ ಅದರ ಸಮರ್ಪಕ ಕಾರ್ಯನಿರ್ವಹಣೆಗಾಗಿ ಆ ಸಭೆಯ ಪ್ರಕ್ರಿಯಾ ನಿಯಮಗಳಲ್ಲಿ ಮಾಡಬೇಕಾದ ಮಾರ್ಪಾಟುಗಳ ಬಗ್ಗೆ ರಾಷ್ಟ್ರಪತಿಯು ಆದೇಶದ ಮೂಲಕ ಉಪಬಂಧಿಸಬಹುದು.]

---

1. 1969ನೆಯ ಇಸವಿಯ ಸಂವಿಧಾನ (ಇಪ್ಪತ್ತೆರಡನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 1971ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್ರಚನೆಯ) ಅಧಿನಿಯಮದ (1971ರ 81) 71ನೆಯ ಪ್ರಕರಣದ ಮೂಲಕ (21-1-1972ರಿಂದ ಜಾರಿಗೆ ಬರುವಂತೆ) "ಎ ಭಾಗದಲ್ಲಿ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

[1] **[371ಸಿ. ಮಣಿಪುರ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ:-** (1) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ಮಣಿಪುರ ರಾಜ್ಯದ ಗುಡ್ಡಗಾಡು ಪ್ರದೇಶಗಳಿಂದ ಆ ರಾಜ್ಯದ ವಿಧಾನಸಭೆಗೆ ಚುನಾಯಿತರಾದ ಸದಸ್ಯರನ್ನು ಒಳಗೊಂಡ ಆ ರಾಜ್ಯ ವಿಧಾನಸಭೆಯ ಸಮಿತಿಯ ರಚನೆ ಮತ್ತು ಅದರ ಪ್ರಕಾರ್ಯಗಳ ಬಗ್ಗೆ ಮತ್ತು ಅಂಥ ಸಮಿತಿಯು ಸಮರ್ಪಕವಾಗಿ ಕಾರ್ಯ ನಿರ್ವಹಿಸುವುದನ್ನು ಸುನಿಶ್ಚಿತಗೊಳಿಸುವ ಸಲುವಾಗಿ ಮಣಿಪುರ ರಾಜ್ಯದ ಸರ್ಕಾರದ ಕಾರ್ಯಕಲಾಪ ನಿಯಮಗಳಲ್ಲಿ ಮತ್ತು ವಿಧಾನ ಸಭೆಯ ಪ್ರಕ್ರಿಯಾ ನಿಯಮಗಳಲ್ಲಿ ಮಾಡಬೇಕಾದ ಮಾರ್ಪಾಟುಗಳ ಬಗ್ಗೆ ಮತ್ತು ರಾಜ್ಯಪಾಲನ ಯಾವುದೇ ವಿಶೇಷ ಜವಾಬ್ದಾರಿಯ ಬಗ್ಗೆ ರಾಷ್ಟ್ರಪತಿಯು ಆದೇಶದ ಮೂಲಕ ಉಪಬಂಧಿಸಬಹುದು.

(2) ರಾಜ್ಯಪಾಲನು ಪ್ರತಿವರ್ಷವೂ ಅಥವಾ ರಾಷ್ಟ್ರಪತಿಯು ಅಗತ್ಯಪಡಿಸಿದಾಗಲೆಲ್ಲ, ಮಣಿಪುರ ರಾಜ್ಯದಲ್ಲಿನ ಗುಡ್ಡಗಾಡು ಪ್ರದೇಶಗಳ ಆಡಳಿತಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿಗೆ ವರದಿ ಮಾಡತಕ್ಕದ್ದು ಮತ್ತು ಒಕ್ಕೂಟದ ಕಾರ್ಯಾಂಗ ಅಧಿಕಾರವು ಸದರಿ ಪ್ರದೇಶಗಳ ಆಡಳಿತದ ಬಗ್ಗೆ ಆ ರಾಜ್ಯಕ್ಕೆ ನಿರ್ದೇಶನಗಳನ್ನು ಕೊಡುವುದಕ್ಕೆ ವ್ಯಾಪ್ತವಾಗತಕ್ಕದ್ದು.

**ವಿವರಣೆ.-** ಈ ಅನುಚ್ಛೇದದಲ್ಲಿ "ಗುಡ್ಡಗಾಡು ಪ್ರದೇಶಗಳು" ಎಂದರೆ, ರಾಷ್ಟ್ರಪತಿಯು ಆದೇಶದ ಮೂಲಕ ಗುಡ್ಡಗಾಡು ಪ್ರದೇಶಗಳು ಎಂದು ಘೋಷಿಸಬಹುದಾದಂಥ ಪ್ರದೇಶಗಳು.]

[2] **[371ಡಿ. ಆಂಧ್ರಪ್ರದೇಶ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧಗಳು:-** (1) ರಾಷ್ಟ್ರಪತಿಯು ಆಂಧ್ರಪ್ರದೇಶದ ರಾಜ್ಯಕ್ಕೆ ಸಂಬಂಧಪಟ್ಟಂತೆ, ಇಡೀ ರಾಜ್ಯದ ಅಗತ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಸರ್ಕಾರಿ ಉದ್ಯೋಗದ ವಿಷಯದಲ್ಲಿ ಮತ್ತು ಶಿಕ್ಷಣದ ವಿಷಯದಲ್ಲಿ ಆ ರಾಜ್ಯದ ಬೇರೆ ಬೇರೆ ಭಾಗಗಳಿಗೆ ಸೇರಿದ ಜನರಿಗೆ ನ್ಯಾಯಸಮ್ಮತವಾದ ಅವಕಾಶಗಳು ಹಾಗೂ ಸೌಲಭ್ಯಗಳು ದೊರೆಯುವಂತೆ ಆದೇಶದ ಮೂಲಕ ಉಪಬಂಧಿಸಬಹುದು ಮತ್ತು ಆ ರಾಜ್ಯದ ವಿವಿಧ ಭಾಗಗಳಿಗೆ ಬೇರೆಬೇರೆ ಭಿನ್ನ ಉಪಬಂಧಗಳನ್ನು ಮಾಡಬಹುದು.

(2) (1)ನೆಯ ಖಂಡದ ಮೇರೆಗೆ ಮಾಡಿದ ಆದೇಶವು, ವಿಶೇಷವಾಗಿ,-

(ಎ) ಆ ರಾಜ್ಯದ ಸಿವಿಲ್ ಸೇವೆಯಲ್ಲಿನ ಯಾವುದೇ ವರ್ಗದ ಅಥವಾ ವರ್ಗಗಳ ಹುದ್ದೆಗಳನ್ನು ಅಥವಾ ಆ ರಾಜ್ಯದ ಅಧೀನದಲ್ಲಿರುವ ಯಾವುದೇ ವರ್ಗದ ಅಥವಾ ವರ್ಗಗಳ ಸಿವಿಲ್ ಹುದ್ದೆಗಳನ್ನು ಆ ರಾಜ್ಯದ ಬೇರೆ ಬೇರೆ ಭಾಗಗಳಿಗೆ ಬೇರೆ ಬೇರೆ ಸ್ಥಳೀಯ ಕೇಡರ್‌ಗಳೆಂದು ವ್ಯವಸ್ಥೆಗೊಳಿಸಲು ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ತತ್ವಗಳಿಗೆ ಮತ್ತು ಕಾರ್ಯವಿಧಾನಕ್ಕೆ ಅನುಸಾರವಾಗಿ, ಅಂಥ ಹುದ್ದೆಗಳನ್ನು ಧಾರಣ ಮಾಡಿರುವ ವ್ಯಕ್ತಿಗಳನ್ನು, ಹಾಗೆ ವ್ಯವಸ್ಥೆಗೊಳಿಸಲಾದ ಸ್ಥಳೀಯ ಕೇಡರ್‌ಗಳಿಗೆ ಹಂಚಿಕೆ ಮಾಡುವಂತೆ ಆ ರಾಜ್ಯಸರ್ಕಾರವನ್ನು ಅಗತ್ಯಪಡಿಸಬಹುದು;

(ಬಿ) (i) ರಾಜ್ಯ ಸರ್ಕಾರದ ಅಧೀನದಲ್ಲಿರುವ (ಈ ಅನುಚ್ಛೇದದ ಮೇರೆಗೆ ಹೊರಡಿಸಿದ ಆದೇಶದ ಅನುಸಾರವಾಗಿ ವ್ಯವಸ್ಥೆಗೊಳಿಸಿದ ಅಥವಾ ಅನ್ಯಥಾ ರಚಿಸಿದ) ಯಾವುದೇ ಸ್ಥಳೀಯ ಕೇಡರ್‌ಗೆ ಸೇರಿದ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಲುವಾಗಿ;

(ii) ಆ ರಾಜ್ಯದೊಳಗಿನ ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನದಲ್ಲಿರುವ ಯಾವುದೇ ಕೇಡರ್‌ಗೆ ಸೇರಿದ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಸಲುವಾಗಿ; ಮತ್ತು

(iii) ಆ ರಾಜ್ಯದೊಳಗಿರುವ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಅಥವಾ ಆ ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟಿರುವ ಯಾವುದೇ ಇತರ ಶೈಕ್ಷಣಿಕ ಸಂಸ್ಥೆಯಲ್ಲಿ ಪ್ರವೇಶ ನೀಡುವ ಉದ್ದೇಶಗಳಿಗಾಗಿ

– ಆ ರಾಜ್ಯದ ಯಾವ ಭಾಗವನ್ನು ಅಥವಾ ಭಾಗಗಳನ್ನು ಸ್ಥಳೀಯ ಪ್ರದೇಶವೆಂದು ಪರಿಗಣಿಸತಕ್ಕದ್ದೋ ಆ ಭಾಗವನ್ನು ಅಥವಾ ಭಾಗಗಳನ್ನು ನಿರ್ದಿಷ್ಟಪಡಿಸಬಹುದು;

---

1. 1971ನೆಯ ಇಸವಿಯ ಸಂವಿಧಾನ (ಇಪ್ಪತ್ತೇಳನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ (15-2-1972ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1973ನೆಯ ಇಸವಿಯ ಸಂವಿಧಾನ (ಮೂವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (1-7-74ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(ಸಿ) (i) (ಬಿ)ಉಪಖಂಡದಲ್ಲಿ ಉಲ್ಲೇಖಿಸಿದಂಥ ಮತ್ತು ಆ ಬಗ್ಗೆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಕೇಡರಿನಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ವಿಚಾರದಲ್ಲಿ;

(ii) (ಬಿ)ಉಪಖಂಡದಲ್ಲಿ ಉಲ್ಲೇಖಿಸಿದ್ದು, ಆ ಬಗ್ಗೆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಅಥವಾ ಇತರ ಶೈಕ್ಷಣಿಕ ಸಂಸ್ಥೆಯಲ್ಲಿ ಪ್ರವೇಶಕೊಡುವ ವಿಚಾರದಲ್ಲಿ,

– ಎಷ್ಟರಮಟ್ಟಿಗೆ ಮತ್ತು ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೊಳಪಟ್ಟು, ಸಂದರ್ಭಾನುಸಾರ ಅಂಥ ಕೇಡರ್ ವಿಶ್ವವಿದ್ಯಾನಿಲಯ ಅಥವಾ ಇತರ ಶೈಕ್ಷಣಿಕ ಸಂಸ್ಥೆಗೆ ಸಂಬಂಧಿಸಿದಂತೆ ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅವಧಿಯವರೆಗೆ ಆ ಸ್ಥಳೀಯ ಪ್ರದೇಶದಲ್ಲಿ ವಾಸಮಾಡಿರುವ ಅಥವಾ ಅಧ್ಯಯನ ಮಾಡಿರುವ ಅಭ್ಯರ್ಥಿಗಳಿಗೆ ಅಥವಾ ಅವರ ಪರವಾಗಿ ಆದ್ಯತೆ ಕೊಡತಕ್ಕದ್ದು ಅಥವಾ ಮೀಸಲಾತಿ ಇರತಕ್ಕದ್ದು ಎಂಬುದನ್ನು ನಿರ್ದಿಷ್ಟಪಡಿಸಬಹುದು.

(3) ರಾಷ್ಟ್ರಪತಿಯು ಆದೇಶದ ಮೂಲಕ, 1973ನೆಯ ಇಸವಿಯ ಸಂವಿಧಾನ (ಮೂವತ್ತೆರಡನೆಯ ತಿದ್ದುಪಡಿ) ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ [(ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ) ಇತರ ಯಾವುದೇ ನ್ಯಾಯಾಲಯವು ಅಥವಾ ಯಾವುದೇ ನ್ಯಾಯಾಧಿಕರಣವು ಅಥವಾ ಇತರ ಪ್ರಾಧಿಕಾರವು ಚಲಾಯಿಸಬಹುದಾಗಿದ್ದಂಥ ಯಾವುದೇ ಅಧಿಕಾರ ವ್ಯಾಪ್ತಿ, ಅಧಿಕಾರ ಮತ್ತು ಪ್ರಾಧಿಕಾರವನ್ನು ಒಳಗೊಂಡು] ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಚಲಾಯಿಸುವುದಕ್ಕಾಗಿ ಆಂಧ್ರಪ್ರದೇಶ ರಾಜ್ಯಕ್ಕೆ ಒಂದು ಆಡಳಿತ ನ್ಯಾಯಾಧಿಕರಣವನ್ನು ರಚಿಸಲು ಉಪಬಂಧಿಸಬಹುದು, ಎಂದರೆ:–

(ಎ) ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಆ ರಾಜ್ಯದ ಸಿವಿಲ್ ಸೇವೆಯ ಯಾವುದೇ ವರ್ಗದ ಅಥವಾ ವರ್ಗಗಳ ಹುದ್ದೆಗಳಿಗೆ ಅಥವಾ ಆ ರಾಜ್ಯದ ಅಧೀನದಲ್ಲಿರುವ ಯಾವುದೇ ವರ್ಗದ ಅಥವಾ ವರ್ಗಗಳ ಸಿವಿಲ್ ಹುದ್ದೆಗಳಿಗೆ ಅಥವಾ ಆ ರಾಜ್ಯದೊಳಗಿನ ಯಾವುದೇ ಸ್ಥಳೀಯ ಪ್ರಾಧಿಕಾರದ ನಿಯಂತ್ರಣದಲ್ಲಿರುವ ಯಾವುದೇ ವರ್ಗದ ಅಥವಾ ವರ್ಗಗಳ ಹುದ್ದೆಗಳಿಗೆ ನೇಮಕ, ಹಂಚಿಕೆ ಅಥವಾ ಬಡ್ತಿ;

(ಬಿ) ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಆ ರಾಜ್ಯದ ಸಿವಿಲ್ ಸೇವೆಯ ಯಾವುದೇ ವರ್ಗದ ಅಥವಾ ವರ್ಗಗಳ ಹುದ್ದೆಗಳಿಗೆ ಅಥವಾ ಆ ರಾಜ್ಯದ ಅಧೀನದಲ್ಲಿರುವಂಥ ಯಾವುದೇ ವರ್ಗದ ಅಥವಾ ವರ್ಗಗಳ ಸಿವಿಲ್ ಹುದ್ದೆಗಳಿಗೆ ಅಥವಾ ಆ ರಾಜ್ಯದೊಳಗಿನ ಯಾವುದೇ ಸ್ಥಳೀಯ ಪ್ರಾಧಿಕಾರದ ನಿಯಂತ್ರಣದಲ್ಲಿರುವಂಥ ಯಾವುದೇ ವರ್ಗದ ಅಥವಾ ವರ್ಗಗಳ ಹುದ್ದೆಗಳಿಗೆ ನೇಮಕಗೊಂಡ, ಹಂಚಲಾದ ಅಥವಾ ಬಡ್ತಿ ಹೊಂದಿದ ವ್ಯಕ್ತಿಗಳ ಸೇವಾ ಜ್ಯೇಷ್ಠತೆ;

(ಸಿ) ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಆ ರಾಜ್ಯದ ಸಿವಿಲ್ ಸೇವೆಯ ಯಾವುದೇ ವರ್ಗದ ಅಥವಾ ವರ್ಗಗಳ ಹುದ್ದೆಗಳಿಗೆ ಅಥವಾ ಆ ರಾಜ್ಯದ ಅಧೀನದಲ್ಲಿರುವ ಯಾವುದೇ ವರ್ಗದ ಅಥವಾ ವರ್ಗಗಳ ಸಿವಿಲ್ ಹುದ್ದೆಗಳಿಗೆ ಅಥವಾ ಆ ರಾಜ್ಯದೊಳಗಿನ ಯಾವುವೇ ಸ್ಥಳೀಯ ಪ್ರಾಧಿಕಾರದ ನಿಯಂತ್ರಣದಲ್ಲಿರುವಂಥ ಯಾವುದೇ ವರ್ಗದ ಅಥವಾ ವರ್ಗಗಳ ಹುದ್ದೆಗಳಿಗೆ ನೇಮಕಗೊಂಡ, ಹಂಚಲಾದ ಅಥವಾ ಬಡ್ತಿ ಹೊಂದಿದ ವ್ಯಕ್ತಿಗಳ ಇತರ ಸೇವಾ ಷರತ್ತುಗಳು.

(4) (3)ನೆಯ ಖಂಡದ ಮೇರೆಗೆ ಮಾಡಿದ ಆದೇಶವು,–

(ಎ) ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಆಡಳಿತ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಕುಂದುಕೊರತೆಗಳ ನಿವಾರಣೆಗೆ ಸಂಬಂಧಿಸಿದ ಮನವಿಗಳನ್ನು ಸ್ವೀಕರಿಸಲು ಮತ್ತು ಅವುಗಳ ಮೇಲೆ ಆಡಳಿತ ನ್ಯಾಯಾಧಿಕರಣವು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಲು, ರಾಷ್ಟ್ರಪತಿಯು ಆ ನ್ಯಾಯಾಧಿಕರಣವನ್ನು ಅಧಿಕೃತಗೊಳಿಸಬಹುದು;

(ಬಿ) (ಆಡಳಿತ ನ್ಯಾಯಾಧಿಕರಣದ ನಿಂದನೆಗಾಗಿ ದಂಡಿಸುವ ಆ ನ್ಯಾಯಾಧಿಕರಣದ ಅಧಿಕಾರಗಳಿಗೆ ಸಂಬಂಧಿಸಿದ ಉಪಬಂಧಗಳನ್ನು ಒಳಗೊಂಡು) ಆಡಳಿತ ನ್ಯಾಯಾಧಿಕರಣದ ಅಧಿಕಾರಗಳಿಗೆ, ಪ್ರಾಧಿಕಾರಗಳಿಗೆ ಮತ್ತು ಪ್ರಕ್ರಿಯೆಗೆ ಸಂಬಂಧಿಸಿದಂತೆ, ರಾಷ್ಟ್ರಪತಿಯು ಅವಶ್ಯವೆಂದು ಭಾವಿಸಬಹುದಾದಂಥ ಉಪಬಂಧಗಳನ್ನೊಳಗೊಂಡಿರಬಹುದು;

(ಸಿ) ಆಡಳಿತ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯೊಳಗಿನ ವಿಷಯಗಳಿಗೆ ಸಂಬಂಧಪಟ್ಟಂತೆ ಮತ್ತು ಅಂಥ ಆದೇಶದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ (ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ) ಇತರ ಯಾವುದೇ ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಅಥವಾ ಇತರ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿರುವ ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವರ್ಗಗಳ ವ್ಯವಹರಣೆಗಳನ್ನು ಆಡಳಿತ ನ್ಯಾಯಾಧಿಕರಣಕ್ಕೆ ವರ್ಗಾಯಿಸುವ ಬಗ್ಗೆ ಉಪಬಂಧಿಸಬಹುದು;

(ಡಿ) (ಫೀಜುಗಳಿಗೆ ಮತ್ತು ಕಾಲ ಪರಿಮಿತಿಗೆ, ಸಾಕ್ಷ್ಯಕ್ಕೆ ಅಥವಾ ಯಾವುವೇ ವಿನಾಯಿತಿಗಳು ಅಥವಾ ಮಾರ್ಪಾಟುಗಳಿಗೆ ಒಳಪಟ್ಟು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅನ್ವಯಕ್ಕೆ ಸಂಬಂಧಿಸಿದ ಉಪಬಂಧಗಳನ್ನು ಒಳಗೊಂಡು) ರಾಷ್ಟ್ರಪತಿಯು ಅವಶ್ಯವೆಂದು ಭಾವಿಸಬಹುದಾದಂಥ ಪೂರಕ, ಪ್ರಾಸಂಗಿಕ ಮತ್ತು ಆನುಷಂಗಿಕ ಉಪಬಂಧಗಳನ್ನು ಒಳಗೊಂಡಿರಬಹುದು.

[1](5) ಯಾವುದೇ ಪ್ರಕರಣವನ್ನು ಅಂತಿಮವಾಗಿ ವಿಲೆ ಮಾಡುವ ಆಡಳಿತ ನ್ಯಾಯಾಧಿಕರಣದ ಆದೇಶವು ರಾಜ್ಯ ಸರ್ಕಾರವು ಅದನ್ನು ಸ್ಥಿರೀಕರಿಸಿದ ಮೇಲೆ ಅಥವಾ ಆ ಆದೇಶವನ್ನು ಮಾಡಿದ ದಿನಾಂಕದಿಂದ ಮೂರು ತಿಂಗಳು ಮುಕ್ತಾಯವಾದ ಮೇಲೆ–ಇವೆರಡರಲ್ಲಿ ಯಾವುದು ಮೊದಲೋ, ಆ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು:

ಪರಂತು, ನ್ಯಾಯಾಧಿಕರಣದ ಯಾವುದೇ ಆದೇಶವು ಪರಿಣಾಮಕಾರಿಯಾಗುವುದಕ್ಕೆ ಮುಂಚೆ, ರಾಜ್ಯಸರ್ಕಾರವು ವಿಶೇಷ ಲಿಖಿತ ಆದೇಶದ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ನಮೂದಿಸಿ ಅದನ್ನು ಮಾರ್ಪಡಿಸಬಹುದು ಅಥವಾ ರದ್ದುಗೊಳಿಸಬಹುದು ಮತ್ತು ಅಂಥ ಸಂದರ್ಭದಲ್ಲಿ ಆಡಳಿತ ನ್ಯಾಯಾಧಿಕರಣದ ಆ ಆದೇಶವು ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿ ಆಗಿರತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗಿರತಕ್ಕದ್ದಲ್ಲ.

(6) (5)ನೆಯ ಖಂಡದ ಪರಂತುಕದ ಮೇರೆಗೆ ರಾಜ್ಯಸರ್ಕಾರವು ಮಾಡಿದ ಪ್ರತಿಯೊಂದು ವಿಶೇಷ ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ, ವಿಧಾನಮಂಡಲದ ಉಭಯ ಸದನಗಳ ಮುಂದೆ ಇಡತಕ್ಕದ್ದು.

(7) ಆ ರಾಜ್ಯದ ಉಚ್ಚ ನ್ಯಾಯಾಲಯಕ್ಕೆ, ಆ ಆಡಳಿತ ನ್ಯಾಯಾಧಿಕರಣದ ಮೇಲೆ ಯಾವುವೇ ಅಧೀಕ್ಷಣಾಧಿಕಾರಗಳು ಇರತಕ್ಕದ್ದಲ್ಲ ಮತ್ತು (ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ) ಇತರ ಯಾವುದೇ ನ್ಯಾಯಾಲಯವು ಅಥವಾ ನ್ಯಾಯಾಧಿಕರಣವು, ಆಡಳಿತ ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಗೆ, ಅಧಿಕಾರಕ್ಕೆ ಅಥವಾ ಪ್ರಾಧಿಕಾರಕ್ಕೆ ಒಳಪಟ್ಟ ಅಥವಾ ಆ ನ್ಯಾಯಾಧಿಕರಣಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಯಾವುದೇ ಅಧಿಕಾರವ್ಯಾಪ್ತಿಯನ್ನು, ಅಧಿಕಾರವನ್ನು ಅಥವಾ ಪ್ರಾಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

(8) ಆಡಳಿತ ನ್ಯಾಯಾಧಿಕರಣದ ಅಸ್ತಿತ್ವವು ಮುಂದುವರಿಯುವುದು ಅವಶ್ಯವಿಲ್ಲವೆಂದು ರಾಷ್ಟ್ರಪತಿಗೆ ಮನವರಿಕೆಯಾದರೆ, ಅವನು ಆದೇಶದ ಮೂಲಕ ಆ ಆಡಳಿತ ನ್ಯಾಯಾಧಿಕರಣವನ್ನು ರದ್ದುಪಡಿಸಬಹುದು ಮತ್ತು ಹಾಗೆ ರದ್ದುಪಡಿಸುವುದಕ್ಕೆ ನಿಕಟಪೂರ್ವದಲ್ಲಿ ಆ ನ್ಯಾಯಾಧಿಕರಣದ ಮುಂದೆ ಇತ್ಯರ್ಥದಲ್ಲಿರುವ ಪ್ರಕರಣಗಳ ವರ್ಗಾವಣೆಯ ಮತ್ತು ವಿಲೇವಾರಿಯ ಬಗ್ಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಉಪಬಂಧಗಳನ್ನು ಆ ಆದೇಶದಲ್ಲಿ ಮಾಡಬಹುದು.

(9) ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶವು ಏನೇ ಇದ್ದಾಗ್ಯೂ,-

(ಎ) (i) 1956ನೆಯ ಇಸವಿಯ ನವೆಂಬರ್ ತಿಂಗಳ ಮೊದಲನೆಯ ದಿನಕ್ಕೆ ಮುಂಚೆ ಅಸ್ತಿತ್ವದಲ್ಲಿದ್ದ ಹೈದರಾಬಾದ್ ರಾಜ್ಯ ಸರ್ಕಾರದ ಅಥವಾ ಆ ರಾಜ್ಯದ ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನದಲ್ಲಿದ್ದ ಯಾವುದೇ ಹುದ್ದೆಗೆ ಆ ದಿನಕ್ಕೆ ಮುಂಚೆ ಮಾಡಿದ; ಅಥವಾ

(ii) 1973ನೆಯ ಇಸವಿಯ ಸಂವಿಧಾನ (ಮೂವತ್ತೆರಡನೆಯ ತಿದ್ದುಪಡಿ) ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಆಂಧ್ರಪ್ರದೇಶ ರಾಜ್ಯಸರ್ಕಾರದ ಅಥವಾ ಆ ರಾಜ್ಯದಲ್ಲಿನ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಧೀನದಲ್ಲಿದ್ದ ಯಾವುದೇ ಹುದ್ದೆಗೆ ಮಾಡಿದ

– ಯಾರೇ ವ್ಯಕ್ತಿಯ ನೇಮಕ, ಸ್ಥಳ ನಿಯುಕ್ತಿ, ಬಡ್ತಿ ಅಥವಾ ವರ್ಗಾವಣೆಯು; ಮತ್ತು

---

1. ಪಿ. ಸಾಂಬಾಮೂರ್ತಿ ಮತ್ತು ಇತರರು ವಿರುದ್ಧ ಆಂಧ್ರ ಪ್ರದೇಶ ರಾಜ್ಯ ಮತ್ತು ಇತರರು (1987) 1 ಎಸ್‌ಸಿಸಿ, ಪುಟ 362 ರಲ್ಲಿ ಸರ್ವೋಚ್ಚ ನ್ಯಾಯಾಲಯವು 371 ಡಿ ಅನುಚ್ಛೇದದ (5)ನೇ ಖಂಡವನ್ನು ಮತ್ತು ಅದರ ಪರಂತುಕವನ್ನು ಅಸಂವಿಧಾನಿಕ ಮತ್ತು ಶೂನ್ಯವೆಂದು ಘೋಷಿಸಿದೆ.

(ಬಿ) (ಎ)ಉಪಖಂಡದಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯು ಅಥವಾ ಅವನ ಮುಂದೆ ಕೈಗೊಳ್ಳಲಾದ ಯಾವುದೇ ಕ್ರಮವು ಅಥವಾ ಮಾಡಿದ ಯಾವುದೇ ಕಾರ್ಯವು

– ಅಂಥ ವ್ಯಕ್ತಿಯ ನೇಮಕ, ಸ್ಥಳ ನಿಯುಕ್ತಿ, ಬಡ್ತಿ ಅಥವಾ ವರ್ಗಾವಣೆಯನ್ನು, ಅಂಥ ನೇಮಕ, ಸ್ಥಳನಿಯುಕ್ತಿ, ಬಡ್ತಿ ಅಥವಾ ವರ್ಗಾವಣೆಗೆ ಸಂಬಂಧಿಸಿದಂತೆ ಹೈದರಾಬಾದ್ ರಾಜ್ಯದಲ್ಲಿ ಅಥವಾ ಸಂದರ್ಭಾನುಸಾರ ಆಂಧ್ರಪ್ರದೇಶ ರಾಜ್ಯದ ಯಾವುದೇ ಭಾಗದಲ್ಲಿ ವಾಸವಾಗಿರಬೇಕೆಂಬ ಬಗ್ಗೆ ಯಾವುದೇ ಅಗತ್ಯತೆಯನ್ನು ಉಪಬಂಧಿಸಿದ್ದ ಮತ್ತು ಆ ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿಗೆ ಅನುಸಾರವಾಗಿ ಮಾಡಿಲ್ಲವೆಂಬ ಕಾರಣಮಾತ್ರದಿಂದಲೇ ಅವು ಕಾನೂನು ವಿರುದ್ಧವಾಗಿವೆ ಅಥವಾ ಶೂನ್ಯವಾಗಿವೆ ಅಥವಾ ಯಾವಾಗಲಾದರೂ ಕಾನೂನುಬಾಹಿರವಾಗಿದ್ದವು ಅಥವಾ ಶೂನ್ಯವಾಗಿದ್ದವು ಎಂದು ಭಾವಿಸತಕ್ಕದ್ದಲ್ಲ.

(10) ಈ ಸಂವಿಧಾನದ ಇತರ ಯಾವುದೇ ಉಪಬಂಧದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದಾಗ್ಯೂ, ಈ ಅನುಚ್ಛೇದದ ಉಪಬಂಧಗಳು ಮತ್ತು ಅದರ ಮೇರೆಗೆ ರಾಷ್ಟ್ರಪತಿಯು ಮಾಡಿದ ಯಾವುದೇ ಇತರ ಆದೇಶವು ಪರಿಣಾಮಕಾರಿಯಾಗಿರತಕ್ಕದ್ದು.

**371ಇ. ಆಂಧ್ರಪ್ರದೇಶದಲ್ಲಿ ಕೇಂದ್ರ ವಿಶ್ವವಿದ್ಯಾನಿಲಯದ ಸ್ಥಾಪನೆ:–** ಸಂಸತ್ತು ಆಂಧ್ರಪ್ರದೇಶ ರಾಜ್ಯದಲ್ಲಿ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ಕಾನೂನಿನ ಮೂಲಕ ಉಪಬಂಧಿಸಬಹುದು.]

[1][**371ಎಫ್. ಸಿಕ್ಕಿಂ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧಗಳು:–** ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,–

(ಎ) ಸಿಕ್ಕಿಂ ರಾಜ್ಯದ ವಿಧಾನಸಭೆಯು ಮೂವತ್ತಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರನ್ನು ಒಳಗೊಂಡಿರತಕ್ಕದ್ದು;

(ಬಿ) 1975ನೆಯ ಇಸವಿಯ ಸಂವಿಧಾನ (ಮೂವತ್ತಾರನೆಯ ತಿದ್ದುಪಡಿ) ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ (ಈ ಅನುಚ್ಛೇದದಲ್ಲಿ ಇನ್ನು ಮುಂದೆ ಇದನ್ನು ಗೊತ್ತುಪಡಿಸಿದ ದಿನವೆಂದು ಉಲ್ಲೇಖಿಸಲಾಗಿದೆ)–

(i) ಸಿಕ್ಕಿಂನಲ್ಲಿ 1974ನೆಯ ಇಸವಿ ಏಪ್ರಿಲ್ ತಿಂಗಳಲ್ಲಿ ನಡೆದ ಚುನಾವಣೆಗಳ ಪರಿಣಾಮವಾಗಿ, ಸದರಿ ಚುನಾವಣೆಗಳಲ್ಲಿ ಚುನಾಯಿತರಾದ ಮೂವತ್ತೆರಡು ಸದಸ್ಯರಿಂದ (ಇನ್ನು ಮುಂದೆ ಇವರನ್ನು ಹಾಲಿ ಸದಸ್ಯರೆಂದು ಉಲ್ಲೇಖಿಸಲಾಗಿದೆ) ರಚಿತವಾದ ಸಿಕ್ಕಿಂ ಸಭೆಯನ್ನು ಈ ಸಂವಿಧಾನದ ಮೇರೆಗೆ ಕ್ರಮಬದ್ಧವಾಗಿ ರಚಿತವಾಗಿರುವ ಸಿಕ್ಕಿಂ ರಾಜ್ಯದ ವಿಧಾನಸಭೆ ಎಂದು ಭಾವಿಸತಕ್ಕದ್ದು;

(ii) ಹಾಲಿ ಸದಸ್ಯರನ್ನು ಈ ಸಂವಿಧಾನದ ಮೇರೆಗೆ ಕ್ರಮಬದ್ಧವಾಗಿ ಚುನಾಯಿತರಾದ ಸಿಕ್ಕಿಂ ರಾಜ್ಯದ ವಿಧಾನಸಭೆಯ ಸದಸ್ಯರೆಂದು ಭಾವಿಸತಕ್ಕದ್ದು; ಮತ್ತು

(iii) ಸಿಕ್ಕಿಂ ರಾಜ್ಯದ ಸದರಿ ವಿಧಾನಸಭೆಯು, ಈ ಸಂವಿಧಾನದ ಮೇರೆಗೆ ಒಂದು ರಾಜ್ಯದ ವಿಧಾನಸಭೆಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು;

(ಸಿ) (ಬಿ) ಖಂಡದ ಮೇರೆಗೆ ಸಿಕ್ಕಿಂ ರಾಜ್ಯದ ವಿಧಾನಸಭೆಯೆಂದು ಭಾವಿಸಲಾದ ವಿಧಾನಸಭೆಯ ಸಂದರ್ಭದಲ್ಲಿ, 172ನೆಯ ಅನುಚ್ಛೇದದ (1)ನೆಯ ಖಂಡದಲ್ಲಿರುವ [2][ಐದು ವರ್ಷಗಳ] ಅವಧಿಯ ಬಗ್ಗೆ ಮಾಡಿರುವ ಉಲ್ಲೇಖಗಳಿಗೆ [3][ನಾಲ್ಕು ವರ್ಷಗಳ] ಅವಧಿಯ ಬಗ್ಗೆ ಇರುವ ಉಲ್ಲೇಖಗಳು ಎಂಬುದಾಗಿ ಅರ್ಥೈಸತಕ್ಕದ್ದು ಮತ್ತು ಸದರಿ [3][ನಾಲ್ಕು ವರ್ಷಗಳ] ಅವಧಿಯು ಗೊತ್ತುಪಡಿಸಿದ ದಿನದಿಂದ ಪ್ರಾರಂಭವಾಗುವುದೆಂದು ಭಾವಿಸತಕ್ಕದ್ದು;

---

1. 1975ನೆಯ ಇಸವಿಯ ಸಂವಿಧಾನ (ಮೂವತ್ತಾರನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (26-4-1975ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1978ನೇ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 43ನೆಯ ಪ್ರಕರಣದ ಮೂಲಕ (6-9-1979ರಿಂದ ಜಾರಿಗೆ ಬರುವಂತೆ) "ಆರು ವರ್ಷಗಳು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 56ನೆಯ ಪ್ರಕರಣದ ಮೂಲಕ (3-1-1977 ರಿಂದ ಜಾರಿಗೆ ಬರುವಂತೆ) "ಐದು ವರ್ಷಗಳ" ಎಂಬ ಮೂಲಪದಗಳಿಗೆ ಬದಲಾಗಿ "ಆರು ವರ್ಷಗಳ" ಎಂಬ ಪದಗಳನ್ನು ಪ್ರತ್ಯಾಯೋಜಿಸಲಾಗಿತ್ತು.
3. 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 43ನೇ ಪ್ರಕರಣದ ಮೂಲಕ (6-9-1979ರಿಂದ ಜಾರಿಗೆ ಬರುವಂತೆ) "ಐದು ವರ್ಷಗಳ" ಎಂಬ ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ)ಅಧಿನಿಯಮದ 56ನೇ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) "ನಾಲ್ಕು ವರ್ಷಗಳ" ಎಂಬ ಮೂಲಪದಗಳಿಗೆ ಬದಲಾಗಿ "ಐದು ವರ್ಷಗಳ" ಎಂಬ ಪದಗಳನ್ನು ಪ್ರತ್ಯಾಯೋಜಿಸಲಾಗಿತ್ತು.

(ಡಿ) ಸಂಸತ್ತು ಕಾನೂನಿನ ಮೂಲಕ ಇತರ ಉಪಬಂಧಗಳನ್ನು ಮಾಡುವವರೆಗೆ, ಸಿಕ್ಕಿಂ ರಾಜ್ಯಕ್ಕೆ ಲೋಕಸಭೆಯಲ್ಲಿ ಒಂದು ಸ್ಥಾನವನ್ನು ಹಂಚತಕ್ಕದ್ದು ಮತ್ತು ಸಿಕ್ಕಿಂ ರಾಜ್ಯವು ಸಿಕ್ಕಿಂ ಸಂಸದೀಯ ಚುನಾವಣಾ ಕ್ಷೇತ್ರವೆಂದು ಕರೆಯಲಾಗುವ ಒಂದು ಸಂಸದೀಯ ಚುನಾವಣಾ ಕ್ಷೇತ್ರವಾಗಿರತಕ್ಕದ್ದು;

(ಇ) ಗೊತ್ತುಪಡಿಸಿದ ದಿನದಂದು ಅಸ್ತಿತ್ವದಲ್ಲಿರುವ ಲೋಕಸಭೆಯಲ್ಲಿ ಸಿಕ್ಕಿಂ ರಾಜ್ಯದ ಪ್ರತಿನಿಧಿಯನ್ನು ಸಿಕ್ಕಿಂ ರಾಜ್ಯದ ವಿಧಾನಸಭೆಯ ಸದಸ್ಯರು ಚುನಾಯಿಸತಕ್ಕದ್ದು;

(ಎಫ್) ಸಂಸತ್ತು ಸಿಕ್ಕಿಂ ಜನತೆಯ ನಾನಾ ಪಂಗಡಗಳ ಹಕ್ಕುಗಳನ್ನು ಮತ್ತು ಹಿತಾಸಕ್ತಿಗಳನ್ನು ಸಂರಕ್ಷಿಸುವ ಉದ್ದೇಶಕ್ಕಾಗಿ ಸಿಕ್ಕಿಂ ರಾಜ್ಯದ ವಿಧಾನಸಭೆಯಲ್ಲಿ ಅಂಥ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಂದ ತುಂಬಬಹುದಾದ ಸ್ಥಾನಗಳ ಸಂಖ್ಯೆಯ ಬಗ್ಗೆ ಮತ್ತು ಅಂಥ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳು ಮಾತ್ರವೇ ಸಿಕ್ಕಿಂ ರಾಜ್ಯದ ವಿಧಾನಸಭೆಗೆ ನಡೆಯುವ ಚುನಾವಣೆಗೆ ನಿಲ್ಲಬಹುದಾದಂಥ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯದ ಬಗ್ಗೆ ಉಪಬಂಧ ಕಲ್ಪಿಸಬಹುದು;

(ಜಿ) ಸಿಕ್ಕಿಂ ರಾಜ್ಯಪಾಲನು ಶಾಂತಿಪಾಲನೆಯ ಬಗ್ಗೆ ಮತ್ತು ಸಿಕ್ಕಿಂ ಜನತೆಯ ನಾನಾ ಪಂಗಡಗಳ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ಸುನಿಶ್ಚಿತಗೊಳಿಸುವ ಒಂದು ನ್ಯಾಯಸಮ್ಮತ ವ್ಯವಸ್ಥೆಯ ಬಗ್ಗೆ ವಿಶೇಷ ಜವಾಬ್ದಾರಿಯನ್ನು ಹೊಂದಿರತಕ್ಕದ್ದು ಮತ್ತು ಸಿಕ್ಕಿಂ ರಾಜ್ಯಪಾಲನು ಈ ಖಂಡದ ಮೇರೆಗಿನ ತನ್ನ ವಿಶೇಷ ಜವಾಬ್ದಾರಿಯನ್ನು ನಿರ್ವಹಿಸುವಾಗ ರಾಷ್ಟ್ರಪತಿಯು ಕಾಲಕಾಲಕ್ಕೆ ಸೂಕ್ತವೆಂದು ಭಾವಿಸಿ ಹೊರಡಿಸಬಹುದಾದಂಥ ನಿರ್ದೇಶನಗಳಿಗೊಳಪಟ್ಟು, ತನ್ನ ವಿವೇಚನೆಗನುಸಾರ ಕಾರ್ಯ ನಿರ್ವಹಿಸತಕ್ಕದ್ದು;

(ಹೆಚ್) ಗೊತ್ತುಪಡಿಸಿದ ದಿನಕ್ಕೆ ನಿಕಟಪೂರ್ವದಲ್ಲಿ ಸಿಕ್ಕಿಂ ಸರ್ಕಾರದಲ್ಲಿ ಅಥವಾ ಇತರ ಯಾವುದೇ ಪ್ರಾಧಿಕಾರದಲ್ಲಿ ಅಥವಾ ಸಿಕ್ಕಿಂ ಸರ್ಕಾರದ ಉದ್ದೇಶಗಳಿಗಾಗಿ ಯಾರೇ ವ್ಯಕ್ತಿಯಲ್ಲಿ ನಿಹಿತವಾಗಿದ್ದ (ಸಿಕ್ಕಿಂ ರಾಜ್ಯದ ರಾಜ್ಯಕ್ಷೇತ್ರಗಳ ಒಳಗೆ ಅಥವಾ ಹೊರಗೆ ಇರುವಂಥ) ಎಲ್ಲ ಸ್ವತ್ತು ಮತ್ತು ಆಸ್ತಿಗಳು, ಗೊತ್ತುಪಡಿಸಿದ ದಿನದಿಂದ ಸಿಕ್ಕಿಂ ರಾಜ್ಯದ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು;

(ಐ) ಗೊತ್ತುಪಡಿಸಿದ ದಿನಕ್ಕೆ ನಿಕಟಪೂರ್ವದಲ್ಲಿ ಸಿಕ್ಕಿಂ ರಾಜ್ಯದಲ್ಲಿ ಇರುವ ರಾಜ್ಯಕ್ಷೇತ್ರಗಳಲ್ಲಿ ಉಚ್ಚ ನ್ಯಾಯಾಲಯವಾಗಿ ಕಾರ್ಯನಿರ್ವಹಿಸುತ್ತಿದ್ದ ಉಚ್ಚ ನ್ಯಾಯಾಲಯವನ್ನು ಗೊತ್ತುಪಡಿಸಿದ ದಿನದಂದು ಮತ್ತು ಆ ದಿನದಿಂದ ಸಿಕ್ಕಿಂ ರಾಜ್ಯದ ಉಚ್ಚ ನ್ಯಾಯಾಲಯವೆಂದು ಭಾವಿಸತಕ್ಕದ್ದು;

(ಜೆ) ಸಿಕ್ಕಿಂ ರಾಜ್ಯದ ರಾಜ್ಯಕ್ಷೇತ್ರದಾದ್ಯಂತ ಇರುವ ಸಿವಿಲ್, ಕ್ರಿಮಿನಲ್ ಮತ್ತು ರಾಜಸ್ವ ಅಧಿಕಾರವ್ಯಾಪ್ತಿಯ ಎಲ್ಲಾ ನ್ಯಾಯಾಲಯಗಳು ಮತ್ತು ನ್ಯಾಯಾಂಗ, ಕಾರ್ಯಾಂಗ ಮತ್ತು ಲಿಪಿಕ ವರ್ಗದ ಎಲ್ಲ ಪ್ರಾಧಿಕಾರಿಗಳು ಮತ್ತು ಎಲ್ಲ ಅಧಿಕಾರಿಗಳು, ಗೊತ್ತುಪಡಿಸಿದ ದಿನದಂದು ಮತ್ತು ಆ ದಿನದಿಂದ ತಮ್ಮ ತಮ್ಮ ಪ್ರಕಾರ್ಯಗಳ ನಿರ್ವಹಣೆಯನ್ನು ಈ ಸಂವಿಧಾನದ ಉಪಬಂಧಗಳಿಗೊಳಪಟ್ಟು ಮುಂದುವರಿಸಿಕೊಂಡು ಹೋಗತಕ್ಕದ್ದು;

(ಕೆ) ಗೊತ್ತುಪಡಿಸಿದ ದಿನಕ್ಕೆ ನಿಕಟಪೂರ್ವದಲ್ಲಿ ಸಿಕ್ಕಿಂ ರಾಜ್ಯದಲ್ಲಿರುವ ರಾಜ್ಯಕ್ಷೇತ್ರಗಳಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಜಾರಿಯಲ್ಲಿದ್ದ ಎಲ್ಲ ಕಾನೂನುಗಳು ಸಕ್ಷಮ ವಿಧಾನ ಮಂಡಲದಿಂದ ಅಥವಾ ಇತರ ಸಕ್ಷಮ ಪ್ರಾಧಿಕಾರದಿಂದ ತಿದ್ದುಪಡಿಯಾಗುವವರೆಗೆ ಅಥವಾ ನಿರಸನಗೊಳ್ಳುವವರೆಗೆ ಆ ರಾಜ್ಯಕ್ಷೇತ್ರಗಳಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು;

(ಎಲ್) ಸಿಕ್ಕಿಂ ರಾಜ್ಯದ ಆಡಳಿತಕ್ಕೆ ಸಂಬಂಧಪಟ್ಟಂತೆ (ಕೆ) ಖಂಡದಲ್ಲಿ ಉಲ್ಲೇಖಿಸಿರುವಂಥ ಯಾವುದೇ ಕಾನೂನಿನ ಅನ್ವಯವನ್ನು ಸುಗಮಗೊಳಿಸುವ ಉದ್ದೇಶಕ್ಕಾಗಿ ಮತ್ತು ಅಂಥ ಕಾನೂನಿನ ಯಾವುದೇ ಉಪಬಂಧಗಳನ್ನು, ಈ ಸಂವಿಧಾನದ ಉಪಬಂಧಗಳಿಗೆ ಅನುಗುಣವಾಗಿರುವಂತೆ ಮಾಡುವ ಉದ್ದೇಶಕ್ಕಾಗಿ, ಗೊತ್ತುಪಡಿಸಿದ ದಿನದಿಂದ ಎರಡು ವರ್ಷಗಳೊಳಗೆ ರಾಷ್ಟ್ರಪತಿಯು ಆದೇಶದ ಮೂಲಕ ಆ ಕಾನೂನಿನಲ್ಲಿ ಅವಶ್ಯಕವಾಗಬಹುದಾದಂಥ ಅಥವಾ ವಿಹಿತವಾಗಬಹುದಾದಂಥ ಅಳವಡಿಕೆಗಳನ್ನು ಮತ್ತು ಮಾರ್ಪಾಟುಗಳನ್ನು ನಿರಸನ ಅಥವಾ ತಿದ್ದುಪಡಿಯ ರೂಪದಲ್ಲಿ ಮಾಡಬಹುದು ಮತ್ತು ಆ ತರುವಾಯ ಅಂಥ ಪ್ರತಿಯೊಂದು ಕಾನೂನು ಹಾಗೆ ಮಾಡಲಾದ ಅಳವಡಿಕೆಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು ಮತ್ತು ಯಾವುದೇ ಅಂಥ ಅಳವಡಿಕೆಯನ್ನು ಅಥವಾ ಮಾರ್ಪಾಟನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ;

(ಎಮ್) ಗೊತ್ತುಪಡಿಸಿದ ದಿನಕ್ಕೆ ಮುಂಚೆ ಸಿಕ್ಕಿಂಗೆ ಸಂಬಂಧಿಸಿದಂತೆ ಮಾಡಿಕೊಂಡ ಅಥವಾ ಬರೆದುಕೊಟ್ಟ ಮತ್ತು ಭಾರತ ಸರ್ಕಾರವು ಅಥವಾ ಅದರ ಯಾವುದೇ ಪೂರ್ವಾಧಿಕಾರಿ ಸರ್ಕಾರವು ಒಂದು ಪಕ್ಷವಾಗಿದ್ದ, ಯಾವುದೇ ಕೌಲು, ಒಪ್ಪಂದ, ವಚನಬಂಧ ಅಥವಾ ಅಂಥದೇ ಇತರ ಲಿಖಿತದಿಂದ ಉದ್ಭವಿಸುವ ಯಾವುದೇ ವಿವಾದದ ಅಥವಾ ವಿಷಯದ ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯವಾಗಲೀ ಅಥವಾ ಇತರ ಯಾವುದೇ ನ್ಯಾಯಾಲಯವಾಗಲೀ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ, ಆದರೆ ಈ ಖಂಡದಲ್ಲಿರುವುದು ಯಾವುದೂ 143ನೆಯ ಅನುಚ್ಛೇದದ ಉಪಬಂಧಗಳನ್ನು ಅಲ್ಪೀಕರಿಸುವುದೆಂದು ಅರ್ಥೈಸತಕ್ಕದ್ದಲ್ಲ;

(ಎನ್) ರಾಷ್ಟ್ರಪತಿಯು ಸಾರ್ವಜನಿಕ ಅಧಿಸೂಚನೆಯ ಮೂಲಕ ಭಾರತದ ಯಾವುದೇ ರಾಜ್ಯದಲ್ಲಿ ಆ ಅಧಿಸೂಚನೆಯ ದಿನಾಂಕದಂದು ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯನ್ನು, ತಾನು ಸೂಕ್ತವೆಂದು ಯೋಚಿಸುವಂಥ ನಿರ್ಬಂಧಗಳೊಂದಿಗೆ ಅಥವಾ ಮಾರ್ಪಾಟುಗಳೊಂದಿಗೆ ಸಿಕ್ಕಿಂ ರಾಜ್ಯಕ್ಕೆ ವ್ಯಾಪ್ತಗೊಳಿಸಬಹುದು;

(ಓ) ಈ ಅನುಚ್ಛೇದದ ಈ ಹಿಂದಿನ ಯಾವುದೇ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಷ್ಟ್ರಪತಿಯು, ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ, ತನಗೆ ಅವಶ್ಯಕವೆಂದು ತೋರುವಂಥ (ಯಾವುದೇ ಇತರ ಅನುಚ್ಛೇದದ ಅಳವಡಿಕೆ ಅಥವಾ ಮಾರ್ಪಾಟನ್ನು ಒಳಗೊಂಡು), [1]ಆದೇಶದ ಮೂಲಕ ಯಾವುದೇ ಕಾರ್ಯವನ್ನು ಮಾಡಬಹುದು:

ಪರಂತು, ಗೊತ್ತುಪಡಿಸಿದ ದಿನದಿಂದ ಎರಡು ವರ್ಷಗಳು ಮುಗಿದ ಮೇಲೆ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ;

(ಪಿ) ಗೊತ್ತುಪಡಿಸಿದ ದಿನದಿಂದ ಪ್ರಾರಂಭವಾಗುವ ಮತ್ತು 1975ನೇ ಇಸವಿಯ ಸಂವಿಧಾನ (ಮೂವತ್ತಾರನೇ ತಿದ್ದುಪಡಿ) ಅಧಿನಿಯಮಕ್ಕೆ ರಾಷ್ಟ್ರಪತಿಯ ಅನುಮತಿಯು ದೊರೆಯುವ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಕೊನೆಗೊಳ್ಳುವ ಅವಧಿಯಲ್ಲಿ ಸಿಕ್ಕಿಂ ರಾಜ್ಯಕ್ಕೆ ಅಥವಾ ಅದರಲ್ಲಿ ಒಳಗೊಂಡಿರುವ ರಾಜ್ಯಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಮಾಡಲಾದ ಎಲ್ಲ ಕಾರ್ಯಗಳನ್ನು ಮತ್ತು ಕೈಕೊಳ್ಳಲಾದ ಎಲ್ಲ ಕ್ರಮಗಳನ್ನು, ಅವು 1975ನೆಯ ಇಸವಿಯ ಸಂವಿಧಾನ (ಮೂವತ್ತಾರನೇ ತಿದ್ದುಪಡಿ) ಅಧಿನಿಯಮದ ಮೂಲಕ ತಿದ್ದುಪಡಿಯಾದ ಸಂವಿಧಾನದ ಉಪಬಂಧಗಳಿಗೆ ಅನುಗುಣವಾಗಿರುವಷ್ಟರಮಟ್ಟಿಗೆ, ಎಲ್ಲ ಉದ್ದೇಶಗಳಿಗಾಗಿ ಹಾಗೆ ತಿದ್ದುಪಡಿಯಾದ ಈ ಸಂವಿಧಾನದ ಮೇರೆಗೆ ಕಾನೂನು ಮಾನ್ಯವಾಗಿ ಮಾಡಲಾದ ಕಾರ್ಯಗಳು ಅಥವಾ ಕೈಗೊಳ್ಳಲಾದ ಕ್ರಮಗಳು ಎಂದು ಭಾವಿಸತಕ್ಕದ್ದು.]

[2][**371ಜಿ. ಮಿಜೋರಾಂ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ:-** ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,-

(ಎ) ಸಂಸತ್ತಿನ ಯಾವುದೇ ಅಧಿನಿಯಮವು-

(i) ಮಿಜೋ ಜನರ ಧಾರ್ಮಿಕ ಅಥವಾ ಸಾಮಾಜಿಕ ಆಚರಣೆಗಳಿಗೆ,

(ii) ಮಿಜೋ ರೂಢಿಜನ್ಯ ಕಾನೂನು ಮತ್ತು ಪ್ರಕ್ರಿಯೆಗೆ,

(iii) ಮಿಜೋ ರೂಢಿಜನ್ಯ ಕಾನೂನಿಗೆ ಅನುಸಾರವಾಗಿ ತೀರ್ಮಾನಗಳನ್ನು ಮಾಡುವ ಸಂದರ್ಭವನ್ನೊಳಗೊಂಡ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಡಳಿತಕ್ಕೆ,

(iv) ಭೂಮಿಯ ಒಡೆತನ ಮತ್ತು ವರ್ಗಾವಣೆಗೆ

- ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದೆಂದು, ಮಿಜೋರಾಂ ರಾಜ್ಯದ ವಿಧಾನಸಭೆಯು ಒಂದು ನಿರ್ಣಯದ ಮೂಲಕ ತೀರ್ಮಾನಿಸಿದ ಹೊರತು ಹಾಗೆ ಮಿಜೋರಾಂ ರಾಜ್ಯಕ್ಕೆ ಅದು ಅನ್ವಯವಾಗತಕ್ಕದ್ದಲ್ಲ:

---

1. ಸಂವಿಧಾನ (ತೊಂದರೆಗಳ ನಿವಾರಣೆ) ಆದೇಶ ಸಂಖ್ಯೆ XI (ಸಿ.ಓ.99) ನೋಡಿ.
2. 1986ನೇ ಇಸವಿಯ ಸಂವಿಧಾನ (ಐವತ್ತಮೂರನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (20.2.1987 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

ಪರಂತು, ಈ ಖಂಡದಲ್ಲಿರುವುದು ಯಾವುದೂ, 1986ನೇ ಇಸವಿಯ ಸಂವಿಧಾನ (ಐವತ್ತಮೂರನೇ ತಿದ್ದುಪಡಿ) ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಮಿಜೋರಾಂ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಜಾರಿಯಲ್ಲಿದ್ದ ಯಾವುದೇ ಕೇಂದ್ರ ಅಧಿನಿಯಮಕ್ಕೆ ಅನ್ವಯವಾಗತಕ್ಕದ್ದಲ್ಲ;

(ಬಿ) ಮಿಜೋರಾಂ ರಾಜ್ಯದ ವಿಧಾನಸಭೆಯು ನಲವತ್ತಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರನ್ನು ಒಳಗೊಂಡಿರತಕ್ಕದ್ದು.]

[1][**371ಎಚ್. ಅರುಣಾಚಲ ಪ್ರದೇಶ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ:–** ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,–

(ಎ) ಅರುಣಾಚಲ ಪ್ರದೇಶ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಅರುಣಾಚಲ ಪ್ರದೇಶದ ರಾಜ್ಯಪಾಲನಿಗೆ ವಿಶೇಷ ಜವಾಬ್ದಾರಿಯಿರತಕ್ಕದ್ದು ಮತ್ತು ರಾಜ್ಯಪಾಲನು ಅದಕ್ಕೆ ಸಂಬಂಧಪಟ್ಟಂತೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಮಂತ್ರಿ ಮಂಡಲದೊಡನೆ ಸಮಾಲೋಚಿಸಿದ ತರುವಾಯ, ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ತನ್ನ ವೈಯಕ್ತಿಕ ತೀರ್ಮಾನ ಕೈಗೊಳ್ಳತಕ್ಕದ್ದು:

ಪರಂತು, ಯಾವುದೇ ವಿಷಯವು ರಾಜ್ಯಪಾಲನು ಈ ಉಪಖಂಡದ ಮೇರೆಗೆ ಯಾವ ವಿಷಯದ ಬಗ್ಗೆ ತನ್ನ ವೈಯಕ್ತಿಕ ವಿವೇಚನಾನುಸಾರ ಕ್ರಮ ಕೈಗೊಳ್ಳಬೇಕಾಗಿದೆಯೋ ಅಂಥ ವಿಷಯವಾಗಿದೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆಯು ಉದ್ಭವಿಸಿದರೆ, ಅವನು ತನ್ನ ವಿವೇಚನಾನುಸಾರ ಕೈಗೊಂಡ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ರಾಜ್ಯಪಾಲನು ತನ್ನ ವೈಯಕ್ತಿಕ ವಿವೇಚನಾನುಸಾರ ಕಾರ್ಯ ನಿರ್ವಹಿಸಬೇಕಾಗಿತ್ತು ಅಥವಾ ನಿರ್ವಹಿಸಬೇಕಾಗಿರಲಿಲ್ಲ ಎಂಬ ಆಧಾರದ ಮೇಲೆ ಅವನು ಕೈಗೊಂಡ ಯಾವುದೇ ಕ್ರಮದ ಸಿಂಧುತ್ವವನ್ನು ಪ್ರಶ್ನಿಸತಕ್ಕದ್ದಲ್ಲ:

ಮತ್ತೂ ಪರಂತು, ಮಿಜೋರಾಂ ರಾಜ್ಯದ ಕಾನೂನು ಹಾಗೂ ಸುವ್ಯವಸ್ಥೆಯ ಬಗ್ಗೆ ರಾಜ್ಯಪಾಲನಿಗೆ ಇನ್ನು ಮುಂದೆ ವಿಶೇಷ ಜವಾಬ್ದಾರಿ ಇರಬೇಕಾದ ಅವಶ್ಯಕತೆ ಇಲ್ಲವೆಂದು ರಾಜ್ಯಪಾಲನಿಂದ ವರದಿಯನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ ರಾಷ್ಟ್ರಪತಿಗೆ ಮನವರಿಕೆಯಾದರೆ, ಅವನು, ಆದೇಶದ ಮೂಲಕ ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅಂಥ ಜವಾಬ್ದಾರಿಯನ್ನು ರಾಜ್ಯಪಾಲನು ಹೊಂದಿರುವುದು ನಿಂತುಹೋಗತಕ್ಕದ್ದೆಂದು ನಿರ್ದೇಶಿಸಬಹುದು;

(ಬಿ) ಅರುಣಾಚಲ ಪ್ರದೇಶ ರಾಜ್ಯದ ವಿಧಾನ ಸಭೆಯು ಮೂವತ್ತಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರನ್ನು ಒಳಗೊಂಡಿರತಕ್ಕದ್ದು.]

[2][**371ಐ. ಗೋವಾ ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಶೇಷ ಉಪಬಂಧ:–** ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ಗೋವಾ ರಾಜ್ಯದ ವಿಧಾನಸಭೆಯು ಮೂವತ್ತಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರನ್ನು ಒಳಗೊಂಡಿರತಕ್ಕದ್ದು.]

**372. ಅಸ್ತಿತ್ವದಲ್ಲಿರುವ ಕಾನೂನುಗಳ ಮುಂದುವರಿಕೆ ಮತ್ತು ಅವುಗಳ ಅಳವಡಿಕೆ:–** (1) 395ನೆಯ ಅನುಚ್ಛೇದದಲ್ಲಿ ಉಲ್ಲೇಖಿಸಿರುವ ಅಧಿನಿಯಮಿತಿಗಳು ಈ ಸಂವಿಧಾನದ ಮೂಲಕ ನಿರಸನಗೊಂಡಿದ್ದಾಗ್ಯೂ, ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಭಾರತದ ರಾಜ್ಯಕ್ಷೇತ್ರದಲ್ಲಿ ಜಾರಿಯಲ್ಲಿದ್ದ ಎಲ್ಲಾ ಕಾನೂನುಗಳು ಒಂದು ಸಕ್ಷಮ ವಿಧಾನಮಂಡಲದಿಂದ ಅಥವಾ ಇತರ ಸಕ್ಷಮ ಪ್ರಾಧಿಕಾರದಿಂದ ಬದಲಾವಣೆಯಾಗುವವರೆಗೆ ಅಥವಾ ನಿರಸನಗೊಳ್ಳುವವರೆಗೆ ಅಥವಾ ತಿದ್ದುಪಡಿಯಾಗುವವರೆಗೆ, ಈ ಸಂವಿಧಾನದ ಇತರ ಉಪಬಂಧಗಳಿಗೆ ಒಳಪಟ್ಟು, ಆ ರಾಜ್ಯಕ್ಷೇತ್ರದಲ್ಲಿ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

---

1. 1986ನೇ ಇಸವಿಯ ಸಂವಿಧಾನ (ಐವತ್ತೈದನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (20.2.1987 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

2. 1987ನೇ ಇಸವಿಯ ಸಂವಿಧಾನ (ಐವತ್ತಾರನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (30.5.1987 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(2) ಭಾರತದ ರಾಜ್ಯಕ್ಷೇತ್ರದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳನ್ನು ಈ ಸಂವಿಧಾನದ ಉಪಬಂಧಗಳಿಗೆ ಅನುಗುಣವಾಗಿರುವಂತೆ ಮಾಡುವ ಉದ್ದೇಶಕ್ಕಾಗಿ ರಾಷ್ಟ್ರಪತಿಯು [1] ಆದೇಶದ ಮೂಲಕ ಅಂಥ ಕಾನೂನಿನಲ್ಲಿ ಅವಶ್ಯವಾಗಬಹುದಾದಂಥ ಅಥವಾ ವಿಹಿತವಾಗಬಹುದಾದಂಥ ಅಳವಡಿಕೆಗಳನ್ನು ಮತ್ತು ಮಾರ್ಪಾಟುಗಳನ್ನು ನಿರಸನದ ಅಥವಾ ತಿದ್ದುಪಡಿಯ ರೂಪದಲ್ಲಿ ಮಾಡಬಹುದು ಮತ್ತು ಆ ಕಾನೂನು ಹಾಗೆ ಮಾಡಿದ ಅಳವಡಿಕೆಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದೆಂದು ಉಪಬಂಧಿಸಬಹುದು ಮತ್ತು ಅಂಥ ಯಾವುದೇ ಅಳವಡಿಕೆಯನ್ನು ಅಥವಾ ಮಾರ್ಪಾಟನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(3) (2)ನೆಯ ಖಂಡದಲ್ಲಿ ಇರುವುದು ಯಾವುದೂ-

(ಎ) ಈ ಸಂವಿಧಾನದ ಪ್ರಾರಂಭದಿಂದ [2][ಮೂರು ವರ್ಷಗಳ] ಅವಧಿಯು ಮುಕ್ತಾಯವಾದ ನಂತರ ಯಾವುದೇ ಕಾನೂನಿನಲ್ಲಿ ಯಾವುದೇ ಅಳವಡಿಕೆಯನ್ನು ಅಥವಾ ಮಾರ್ಪಾಟನ್ನು ಮಾಡಲು ರಾಷ್ಟ್ರಪತಿಗೆ ಅಧಿಕಾರ ನೀಡುತ್ತದೆಂದು; ಅಥವಾ

(ಬಿ) ಸದರಿ ಖಂಡದ ಮೇರೆಗೆ ರಾಷ್ಟ್ರಪತಿಯು ಅಳವಡಿಸಿದ ಅಥವಾ ಮಾರ್ಪಾಟು ಮಾಡಿದ ಯಾವುದೇ ಕಾನೂನನ್ನು ನಿರಸನಗೊಳಿಸಲು ಅಥವಾ ತಿದ್ದುಪಡಿ ಮಾಡಲು ಯಾವುದೇ ಸಕ್ಷಮ ವಿಧಾನಮಂಡಲವನ್ನು ಅಥವಾ ಪ್ರಾಧಿಕಾರವನ್ನು ಅಡ್ಡಿಪಡಿಸುವುದೆಂದು

– ಭಾವಿಸತಕ್ಕದ್ದಲ್ಲ.

**ವಿವರಣೆ I:–** ಈ ಅನುಚ್ಛೇದದಲ್ಲಿನ "ಜಾರಿಯಲ್ಲಿರುವ ಕಾನೂನು" ಎಂಬ ಪದಾವಳಿಯು, ಈ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಭಾರತದ ರಾಜ್ಯಕ್ಷೇತ್ರದಲ್ಲಿನ ಒಂದು ವಿಧಾನಮಂಡಲವು ಅಥವಾ ಇತರ ಸಕ್ಷಮ ಪ್ರಾಧಿಕಾರವು ಅಂಗೀಕರಿಸಿದ ಅಥವಾ ಮಾಡಿದ ಮತ್ತು ಈ ಹಿಂದೆಯೇ ನಿರಸನಗೊಂಡಿರದ ಕಾನೂನು ಅಥವಾ ಅದರ ಭಾಗಗಳು ಎಲ್ಲಿಯೇ ಆಗಲಿ ಅಥವಾ ನಿರ್ದಿಷ್ಟ ಪ್ರದೇಶಗಳಲ್ಲಾಗಲಿ ಆಗ ಜಾರಿಯಲ್ಲಿ ಇಲ್ಲದಿದ್ದಾಗ್ಯೂ, ಅಂಥ ಕಾನೂನನ್ನು ಒಳಗೊಳ್ಳತಕ್ಕದ್ದು.

**ವಿವರಣೆ II:–** ಭಾರತದ ರಾಜ್ಯಕ್ಷೇತ್ರದಲ್ಲಿನ ಒಂದು ವಿಧಾನಮಂಡಲವು ಅಥವಾ ಇತರ ಸಕ್ಷಮ ಪ್ರಾಧಿಕಾರವು ಅಂಗೀಕರಿಸಿದ ಅಥವಾ ಮಾಡಿದ ಮತ್ತು ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ರಾಜ್ಯಕ್ಷೇತ್ರಾತೀತವಾದ ಪರಿಣಾಮ ಹೊಂದಿದ್ದ ಹಾಗೂ ಭಾರತದ ರಾಜ್ಯಕ್ಷೇತ್ರದಲ್ಲಿ ಪರಿಣಾಮವನ್ನು ಹೊಂದಿದ್ದ ಯಾವುದೇ ಕಾನೂನು, ಹಿಂದೆ ಹೇಳಿದಂಥ ಯಾವುವೇ ಅಳವಡಿಕೆಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು, ಅಂಥ ರಾಜ್ಯಕ್ಷೇತ್ರಾತೀತವಾದ ಪರಿಣಾಮವನ್ನು ಹೊಂದಿರುವುದು ಮುಂದುವರಿಯತಕ್ಕದ್ದು.

---

1. ನೋಡಿ:–

ಭಾರತ ವಿಶೇಷ ರಾಜಪತ್ರದ IIನೆಯ ಭಾಗದ 3ನೆಯ ವಿಭಾಗದ 449ನೆಯ ಪುಟದಲ್ಲಿ ಪ್ರಕಟವಾದ 26ನೇ ಜನವರಿ 1950ರ ದಿನಾಂಕದ ಕಾನೂನುಗಳ ಅಳವಡಿಕೆಯ ಆದೇಶ; ಇದು ಈ ಕೆಳಗಿನ ಅಧಿಸೂಚನೆಗಳ ಮೇರೆಗೆ ತಿದ್ದುಪಡಿಯಾಗಿದೆ:–

ಭಾರತದ ವಿಶೇಷ ರಾಜಪತ್ರದ IIನೇ ಭಾಗದ 3ನೆಯ ವಿಭಾಗದ 51ನೆಯ ಪುಟದಲ್ಲಿ ಪ್ರಕಟವಾದ ಎಸ್‌ಆರ್‌ಓ 115ನೆಯ ಸಂಖ್ಯೆಯ ಹಾಗೂ 1950ನೆಯ ಇಸವಿಯ ಜೂನ್ ತಿಂಗಳ 5ನೇ ತಾರೀಖಿನ ಅಧಿಸೂಚನೆ ಮತ್ತು ಭಾರತದ ವಿಶೇಷ ರಾಜಪತ್ರದ IIನೇ ಭಾಗದ 3ನೆಯ ವಿಭಾಗದ 903ನೆಯ ಪುಟದಲ್ಲಿ ಪ್ರಕಟವಾದ ಎಸ್‌ಆರ್‌ಓ 870ನೆಯ ಸಂಖ್ಯೆ ಹಾಗೂ 1950ನೆಯ ಇಸವಿಯ ನವೆಂಬರ್ ತಿಂಗಳ 4ನೆಯ ತಾರೀಖಿನ ಅಧಿಸೂಚನೆ; ಭಾರತ ವಿಶೇಷ ರಾಜಪತ್ರದ IIನೆಯ ಭಾಗದ 3ನೆಯ ವಿಭಾಗದ 287ನೆಯ ಪುಟದಲ್ಲಿ ಪ್ರಕಟವಾಗಿರತಕ್ಕ ಎಸ್‌ಆರ್‌ಓ 508ನೆಯ ಸಂಖ್ಯೆಯ ಹಾಗೂ 1951ನೆಯ ಇಸವಿಯ ಏಪ್ರಿಲ್ ತಿಂಗಳ 4ನೆಯ ತಾರೀಖಿನ ಅಧಿಸೂಚನೆ ಮತ್ತು ಭಾರತದ ವಿಶೇಷ ರಾಜಪತ್ರದ IIನೆಯ ಭಾಗದ 3ನೆಯ ವಿಭಾಗದ 616/I ನೆಯ ಪುಟದಲ್ಲಿ ಪ್ರಕಟವಾಗಿರತಕ್ಕ ಎಸ್‌ಆರ್‌ಓ 1140–ಬಿ ಸಂಖ್ಯೆಯ ಹಾಗೂ 1952ನೆಯ ಇಸವಿಯ ಜುಲೈ ತಿಂಗಳ 2ನೆಯ ತಾರೀಖಿನ ಅಧಿಸೂಚನೆ ಮತ್ತು ಭಾರತ ವಿಶೇಷ ರಾಜಪತ್ರದ IIನೆಯ ಭಾಗದ 3ನೆಯ ವಿಭಾಗದ 923ನೆಯ ಪುಟದಲ್ಲಿ ಪ್ರಕಟವಾದ 1952ನೆಯ ಇಸವಿಯ ನವೆಂಬರ್ 20ನೆಯ ತಾರೀಖಿನ ಟ್ರಾವಂಕೂರು–ಕೊಚ್ಚಿನ್ ಭೂ ಆರ್ಜನೆ ಕಾನೂನುಗಳ ಅಳವಡಿಕೆ ಆದೇಶ, 1952.

2. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 12ನೆಯ ಪ್ರಕರಣದ ಮೂಲಕ "ಎರಡು ವರ್ಷಗಳ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

**ವಿವರಣೆ III:**– ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಜಾರಿಯಲ್ಲಿರುವ ಯಾವುದೇ ತಾತ್ಕಾಲಿಕ ಕಾನೂನು, ಅದರ ಮುಕ್ತಾಯಕ್ಕಾಗಿ ನಿಗದಿ ಮಾಡಿರುವ ದಿನಾಂಕವನ್ನು ಮೀರಿ ಅಥವಾ ಈ ಸಂವಿಧಾನವು ಜಾರಿಗೆ ಬಾರದೆ ಇದ್ದಿದ್ದರೆ ಅದು ಎಂದು ಮುಕ್ತಾಯಗೊಳ್ಳುತ್ತಿದ್ದಿತೋ ಆ ದಿನಾಂಕವನ್ನು ಮೀರಿ ಮುಂದುವರಿಯುವುದಾಗಿ ಅರ್ಥೈಸತಕ್ಕದ್ದಲ್ಲ.

**ವಿವರಣೆ IV:**– 1935ನೆಯ ಇಸವಿಯ ಭಾರತ ಸರ್ಕಾರ ಅಧಿನಿಯಮದ 88ನೆಯ ಪ್ರಕರಣದ ಮೇರೆಗೆ ಒಂದು ಪ್ರಾಂತ್ಯದ ರಾಜ್ಯಪಾಲನು ಹೊರಡಿಸಿದ ಮತ್ತು ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಅಧ್ಯಾದೇಶವನ್ನು ಆ ಪ್ರಾಂತ್ಯಕ್ಕೆ ಸಂವಾದಿಯಾದ ರಾಜ್ಯದ ರಾಜ್ಯಪಾಲನು ಈ ಮೊದಲೇ ಹಿಂತೆಗೆದುಕೊಂಡಿಲ್ಲದಿದ್ದರೆ, ಆ ಅಧ್ಯಾದೇಶವು ಅಂಥ ಪ್ರಾರಂಭದ ತರುವಾಯ, 382ನೆಯ ಅನುಚ್ಛೇದದ (1)ನೆಯ ಖಂಡದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಆ ರಾಜ್ಯದ ವಿಧಾನಸಭೆಯ ಅಂಥ ಪ್ರಾರಂಭದ ನಂತರ ಮೊದಲನೆಯ ಸಭೆಯ ದಿನಾಂಕದಿಂದ ಆರು ವಾರಗಳು ಮುಕ್ತಾಯವಾಗುತ್ತಲೇ ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು ಮತ್ತು ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಅಂಥ ಯಾವುದೇ ಅಧ್ಯಾದೇಶವನ್ನು ಆ ಅವಧಿಯನ್ನು ಮೀರಿ ಮುಂದುವರಿಸುವುದಾಗಿ ಅರ್ಥೈಸತಕ್ಕದ್ದಲ್ಲ.

[1][**372ಎ. ಕಾನೂನುಗಳನ್ನು ಅಳವಡಿಸಿಕೊಳ್ಳಲು ರಾಷ್ಟ್ರಪತಿಯ ಅಧಿಕಾರ:**– (1) 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಭಾರತದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಉಪಬಂಧಗಳನ್ನು, ಆ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಈ ಸಂವಿಧಾನದ ಉಪಬಂಧಗಳಿಗೆ ಅನುಗುಣವಾಗುವಂತೆ ಮಾಡುವ ಉದ್ದೇಶಗಳಿಗಾಗಿ ರಾಷ್ಟ್ರಪತಿಯು 1957ನೇ ಇಸವಿ ನವೆಂಬರ್ ಮೊದಲನೆಯ ದಿನಕ್ಕೆ ಮುಂಚೆ ಮಾಡಿದ [2]ಆದೇಶದ ಮೂಲಕ, ಆ ಕಾನೂನಿನಲ್ಲಿ ಅವಶ್ಯಕವಾಗ ಬಹುದಾದಂಥ ಅಥವಾ ವಿಹಿತವಾಗಬಹುದಾದಂಥ ಅಳವಡಿಕೆಗಳನ್ನು ಮತ್ತು ಮಾರ್ಪಾಡುಗಳನ್ನು ನಿರಸನದ ಅಥವಾ ತಿದ್ದುಪಡಿಯ ರೂಪದಲ್ಲಿ ಮಾಡಬಹುದು ಮತ್ತು ಆ ಕಾನೂನು ಹಾಗೆ ಮಾಡಲಾದ ಅಳವಡಿಕೆಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು ಎಂದು ಉಪಬಂಧಿಸಬಹುದು ಮತ್ತು ಅಂಥ ಯಾವುದೇ ಅಳವಡಿಕೆಯನ್ನು ಅಥವಾ ಮಾರ್ಪಾಟನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(2) (1)ನೆಯ ಖಂಡದಲ್ಲಿ ಇರುವುದು ಯಾವುದೂ, ಸದರಿ ಖಂಡದ ಮೇರೆಗೆ ರಾಷ್ಟ್ರಪತಿಯು ಅಳವಡಿಸಿದ ಅಥವಾ ಮಾರ್ಪಾಟು ಮಾಡಿದ ಯಾವುದೇ ಕಾನೂನನ್ನು ನಿರಸನಗೊಳಿಸಲು ಅಥವಾ ತಿದ್ದುಪಡಿಮಾಡಲು ಸಕ್ಷಮ ವಿಧಾನಮಂಡಲವನ್ನು ಅಥವಾ ಇತರ ಸಕ್ಷಮ ಪ್ರಾಧಿಕಾರವನ್ನು ಪ್ರತಿಬಂಧಿಸುವುದೆಂದು ಭಾವಿಸತಕ್ಕದ್ದಲ್ಲ.]

**373. ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿರುವ ವ್ಯಕ್ತಿಗಳ ಬಗ್ಗೆ ಕೆಲವು ಸಂದರ್ಭಗಳಲ್ಲಿ ಆದೇಶವನ್ನು ಮಾಡಲು ರಾಷ್ಟ್ರಪತಿಯ ಅಧಿಕಾರ:**– 22ನೆಯ ಅನುಚ್ಛೇದದ (7)ನೆಯ ಖಂಡದ ಮೇರೆಗೆ ಸಂಸತ್ತು ಉಪಬಂಧಿಸುವವರೆಗೆ ಅಥವಾ ಈ ಸಂವಿಧಾನದ ಪ್ರಾರಂಭದಿಂದ ಒಂದು ವರ್ಷವು ಮುಕ್ತಾಯವಾಗುವವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಆವರೆಗೆ, ಸದರಿ ಅನುಚ್ಛೇದವು, ಅದರ (4)ನೆಯ ಮತ್ತು (7)ನೆಯ ಖಂಡಗಳಲ್ಲಿ ಸಂಸತ್ತನ್ನು ಕುರಿತು ಮಾಡಿರುವ ಯಾವುದೇ ಉಲ್ಲೇಖಕ್ಕೆ, ರಾಷ್ಟ್ರಪತಿಯನ್ನು ಕುರಿತ ಉಲ್ಲೇಖವನ್ನು ಪ್ರತ್ಯಾಯೋಜಿಸಿದ್ದರೆ ಹೇಗೋ ಹಾಗೆ ಮತ್ತು ಆ ಖಂಡಗಳಲ್ಲಿ ಸಂಸತ್ತು ಮಾಡಿದ ಯಾವುದೇ ಕಾನೂನನ್ನು ಕುರಿತು ಮಾಡಿರುವ ಯಾವುದೇ ಉಲ್ಲೇಖಕ್ಕೆ ರಾಷ್ಟ್ರಪತಿಯು ಮಾಡಿದ ಆದೇಶವನ್ನು ಕುರಿತ ಉಲ್ಲೇಖವನ್ನು ಪ್ರತ್ಯಾಯೋಜಿಸಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

**374. ಫೆಡರಲ್ ನ್ಯಾಯಾಲಯದ ನ್ಯಾಯಾಧೀಶರ ಬಗ್ಗೆ ಮತ್ತು ಫೆಡರಲ್ ನ್ಯಾಯಾಲಯದಲ್ಲಿ ಅಥವಾ ಸಾಮ್ರಾಟನ ಪರಿಷತ್ತಿನ ಮುಂದೆ ಇತ್ಯರ್ಥದಲ್ಲಿರುವ ವ್ಯವಹರಣೆಗಳ ಬಗ್ಗೆ ಉಪಬಂಧಗಳು:**– (1) ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಪದಧಾರಣ ಮಾಡಿರುವ ಫೆಡರಲ್ ನ್ಯಾಯಾಲಯದ ನ್ಯಾಯಾಧೀಶರು ಅನ್ಯಥಾ ಇಷ್ಟಪಟ್ಟ ಹೊರತು, ಅಂಥ ಪ್ರಾರಂಭದಂದು ಅವರು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗತಕ್ಕದ್ದು ಮತ್ತು ಆ ತರುವಾಯ 125ನೆಯ ಅನುಚ್ಛೇದದ ಮೇರೆಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಬಗ್ಗೆ ಉಪಬಂಧಿಸಿರುವಂಥ ಸಂಬಳಗಳಿಗೆ ಮತ್ತು ಭತ್ಯಗಳಿಗೆ ಮತ್ತು ಗೈರುಹಾಜರಿ ರಜೆಗೆ ಮತ್ತು ನಿವೃತ್ತಿವೇತನಕ್ಕೆ ಸಂಬಂಧಿಸಿದಂಥ ಹಕ್ಕುಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 23ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 1956ನೆಯ ಮತ್ತು 1957ನೆಯ ಇಸವಿಯ ಕಾನೂನುಗಳ ಅಳವಡಿಕೆ ಆದೇಶಗಳನ್ನು ನೋಡಿ.

(2) ಈ ಸಂವಿಧಾನದ ಪ್ರಾರಂಭದಲ್ಲಿ ಫೆಡರಲ್ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ಸಿವಿಲ್ ಅಥವಾ ಕ್ರಿಮಿನಲ್ ಸ್ವರೂಪದ ಎಲ್ಲ ದಾವೆಗಳನ್ನು, ಅಪೀಲುಗಳನ್ನು ಮತ್ತು ವ್ಯವಹರಣೆಗಳನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ವಹಿಸಿಕೊಡತಕ್ಕದ್ದು ಮತ್ತು ಅವುಗಳನ್ನು ವಿಚಾರಣೆ ಮಾಡಲು ಮತ್ತು ನಿರ್ಧರಿಸಲು ಸರ್ವೋಚ್ಚ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು ಮತ್ತು ಈ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಫೆಡರಲ್ ನ್ಯಾಯಾಲಯವು ಕೊಟ್ಟ ತೀರ್ಪುಗಳು ಅಥವಾ ಮಾಡಿದ ಆದೇಶಗಳು, ಸರ್ವೋಚ್ಚ ನ್ಯಾಯಾಲಯವು ಕೊಟ್ಟ ತೀರ್ಪುಗಳಾಗಿದ್ದರೆ ಅಥವಾ ಮಾಡಿದ ಆದೇಶಗಳಾಗಿದ್ದರೆ ಹೇಗೋ ಹಾಗೆ ಬಲ ಮತ್ತು ಪರಿಣಾಮವುಳ್ಳವುಗಳಾಗಿರತಕ್ಕದ್ದು.

(3) ಈ ಸಂವಿಧಾನದಲ್ಲಿ ಇರುವುದು ಯಾವುದೂ, ಭಾರತ ರಾಜ್ಯಕ್ಷೇತ್ರದೊಳಗಿನ ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶಕ್ಕೆ ಸಂಬಂಧಿಸಿದಂತೆ ಅಥವಾ ಅವನ್ನು ಕುರಿತ ಅಪೀಲುಗಳನ್ನು ಮತ್ತು ಅರ್ಜಿಗಳನ್ನು ವಿಲೇ ಮಾಡಲು ಸಾಮ್ರಾಟನ ಪರಿಷತ್ತು ಹೊಂದಿರುವ ಅಧಿಕಾರ ವ್ಯಾಪ್ತಿಯ ಚಲಾವಣೆಯು ಕಾನೂನಿನಿಂದ ಅಧಿಕೃತವಾಗಿರುವಷ್ಟರ ಮಟ್ಟಿಗೆ ಅಂಥ ಅಧಿಕಾರ ವ್ಯಾಪ್ತಿಯ ಚಲಾವಣೆಯನ್ನು ಅಸಿಂಧುಗೊಳಿಸುವಂತೆ ಜಾರಿಯಾಗತಕ್ಕದ್ದಲ್ಲ ಮತ್ತು ಈ ಸಂವಿಧಾನವು ಪ್ರಾರಂಭವಾದ ತರುವಾಯ ಅಂಥ ಯಾವುದೇ ಅಪೀಲಿನ ಅಥವಾ ಅರ್ಜಿಯ ಮೇಲೆ ಸಾಮ್ರಾಟನ ಪರಿಷತ್ತು ಮಾಡಿದ ಯಾವುದೇ ಆದೇಶವು, ಈ ಸಂವಿಧಾನದ ಮೂಲಕ ಸರ್ವೋಚ್ಚ ನ್ಯಾಯಾಲಯಕ್ಕೆ ಪ್ರದತ್ತವಾದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಅಂಥ ನ್ಯಾಯಾಲಯವು ಮಾಡಿದ ಆದೇಶವಾಗಿದ್ದರೆ ಅಥವಾ ಡಿಕ್ರಿಯಾಗಿದ್ದರೆ ಹೇಗೋ ಹಾಗೆ ಎಲ್ಲ ಉದ್ದೇಶಗಳಿಗಾಗಿ ಪರಿಣಾಮಕಾರಿಯಾಗಿರತಕ್ಕದ್ದು.

(4) ಈ ಸಂವಿಧಾನದ ಪ್ರಾರಂಭದಂದು ಮತ್ತು ಅಂದಿನಿಂದ ಮೊದಲನೆಯ ಅನುಸೂಚಿಯ ಬಿ ಭಾಗದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯದಲ್ಲಿ, ಪ್ರಿವಿಕೌನ್ಸಿಲ್ ಆಗಿ ಕಾರ್ಯ ನಡೆಸುತ್ತಿರುವ ಪ್ರಾಧಿಕಾರವು, ಆ ರಾಜ್ಯದೊಳಗಿನ ಯಾವುದೇ ನ್ಯಾಯಾಲಯದ ತೀರ್ಪಿಗೆ, ಡಿಕ್ರಿಗೆ ಅಥವಾ ಆದೇಶಕ್ಕೆ ಸಂಬಂಧಿಸಿದಂತೆ ಅಥವಾ ಅದನ್ನು ಕುರಿತ ಅಪೀಲುಗಳನ್ನು ಮತ್ತು ಅರ್ಜಿಗಳನ್ನು ಸ್ವೀಕರಿಸುವುದಕ್ಕೆ ಮತ್ತು ವಿಲೆ ಮಾಡುವುದಕ್ಕೆ ಸಂಬಂಧಿಸಿದಂತೆ ಹೊಂದಿದ್ದ ಅಧಿಕಾರ ವ್ಯಾಪ್ತಿಯು ನಿಂತುಹೋಗತಕ್ಕದ್ದು; ಮತ್ತು ಅಂಥ ಪ್ರಾರಂಭದಲ್ಲಿ ಆ ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿದ್ದ ಎಲ್ಲ ಅಪೀಲುಗಳನ್ನು ಮತ್ತು ಇತರ ವ್ಯವಹರಣೆಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕದ್ದು ಮತ್ತು ಅದು ಅವುಗಳನ್ನು ವಿಲೆ ಮಾಡತಕ್ಕದ್ದು.

(5) ಈ ಅನುಚ್ಛೇದದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ಸಂಸತ್ತು ಕಾನೂನಿನ ಮೂಲಕ ಇನ್ನೂ ಹೆಚ್ಚಿನ ಉಪಬಂಧವನ್ನು ಮಾಡಬಹುದು.

**375. ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು ನ್ಯಾಯಾಲಯಗಳು, ಪ್ರಾಧಿಕಾರಗಳು ಮತ್ತು ಅಧಿಕಾರಿಗಳು ಕಾರ್ಯ ನಿರ್ವಹಿಸುವುದನ್ನು ಮುಂದುವರಿಸುವುದು:-** ಭಾರತದ ರಾಜ್ಯಕ್ಷೇತ್ರದಾದ್ಯಂತ ಸಿವಿಲ್, ಕ್ರಿಮಿನಲ್ ಮತ್ತು ರಾಜಸ್ವ ಅಧಿಕಾರ ವ್ಯಾಪ್ತಿಯ ಎಲ್ಲ ನ್ಯಾಯಾಲಯಗಳು ಮತ್ತು ನ್ಯಾಯಾಂಗ, ಕಾರ್ಯಾಂಗ ಮತ್ತು ಲಿಪಿಕ ವರ್ಗಕ್ಕೆ ಸೇರಿದ ಎಲ್ಲ ಪ್ರಾಧಿಕಾರಿಗಳು ಮತ್ತು ಎಲ್ಲ ಅಧಿಕಾರಿಗಳು ಈ ಸಂವಿಧಾನದ ಉಪಬಂಧಗಳಿಗೆ ಒಳಪಟ್ಟು ತಮ್ಮ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವುದು ಮುಂದುವರಿಯತಕ್ಕದ್ದು.

**376. ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಬಗ್ಗೆ ಉಪಬಂಧಗಳು:-** (1) 217ನೆಯ ಅನುಚ್ಛೇದದ (2)ನೆಯ ಖಂಡದಲ್ಲಿ ಏನೇ ಇದ್ದಾಗ್ಯೂ, ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಯಾವುದೇ ಪ್ರಾಂತದಲ್ಲಿ ಪದಧಾರಣ ಮಾಡಿರುವ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಅನ್ಯಥಾ ಇಷ್ಟಪಟ್ಟ ಹೊರತು, ಅವರು ಅಂಥ ಪ್ರಾರಂಭದಲ್ಲಿ ಆ ಪ್ರಾಂತಕ್ಕೆ ಸಂವಾದಿಯಾದ ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗತಕ್ಕದ್ದು ಮತ್ತು ಆ ತರುವಾಯ 221ನೆಯ ಅನುಚ್ಛೇದದ ಮೇರೆಗೆ ಅಂಥ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಸಂಬಂಧಿಸಿದಂತೆ ಉಪಬಂಧಿಸಲಾದಂಥ ಸಂಬಳಗಳಿಗೆ ಮತ್ತು ಭತ್ಯೆಗಳಿಗೆ ಮತ್ತು ಗೈರುಹಾಜರಿ ರಜೆಗೆ ಮತ್ತು ನಿವೃತ್ತಿವೇತನಕ್ಕೆ ಸಂಬಂಧಿಸಿದಂಥ ಹಕ್ಕುಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು. [1][ಅಂಥ ಯಾರೇ ನ್ಯಾಯಾಧೀಶನು, ಅವನು ಭಾರತದ ನಾಗರಿಕನಾಗಿಲ್ಲದಿದ್ದಾಗ್ಯೂ, ಅಂಥ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಅಥವಾ ಇತರ ಯಾವುದೇ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಅಥವಾ ಇತರ ನ್ಯಾಯಾಧೀಶನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು.]

---

1. 1951ನೆಯ ಇಸವಿಯ ಸಂವಿಧಾನ (ಮೊದಲನೆಯ ತಿದ್ದುಪಡಿ) ಅಧಿನಿಯಮದ 13ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

(2) ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಪದಧಾರಣ ಮಾಡಿರುವ, ಮೊದಲನೇ ಅನುಸೂಚಿಯ ಬಿ ಭಾಗದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ರಾಜ್ಯಕ್ಕೆ ಸಂವಾದಿಯಾದ ಯಾವುದೇ ಭಾರತೀಯ ಸಂಸ್ಥಾನದಲ್ಲಿನ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು, ಅನ್ಯಥಾ ಇಷ್ಟಪಟ್ಟ ಹೊರತು, ಅವರು ಅಂಥ ಪ್ರಾರಂಭದಂದು ಹಾಗೆ ನಿರ್ದಿಷ್ಟಪಡಿಸಿದ ರಾಜ್ಯದಲ್ಲಿನ ಉಚ್ಚನ್ಯಾಯಾಲಯದ ನ್ಯಾಯಾಧೀಶರಾಗಿರತಕ್ಕದ್ದು ಮತ್ತು 217ನೆಯ ಅನುಚ್ಛೇದದ (1) ಮತ್ತು (2)ನೆಯ ಖಂಡಗಳಲ್ಲಿ ಏನೇ ಇದ್ದಾಗ್ಯೂ, ಆದರೆ ಆ ಅನುಚ್ಛೇದದ (1)ನೆಯ ಖಂಡದ ಪರಂತುಕಕ್ಕೆ ಒಳಪಟ್ಟು, ರಾಷ್ಟ್ರಪತಿಯು ಆದೇಶದ ಮೂಲಕ ನಿರ್ಧರಿಸಬಹುದಾದಂಥ ಅವಧಿಯು ಮುಗಿಯುವವರೆಗೆ ಆ ಪದದಲ್ಲಿ ಮುಂದುವರಿಯತಕ್ಕದ್ದು.

(3) ಈ ಅನುಚ್ಛೇದದಲ್ಲಿ "ನ್ಯಾಯಾಧೀಶ" ಎಂಬ ಪದವು, ಕಾರ್ಯಾರ್ಥ ನ್ಯಾಯಾಧೀಶ ಅಥವಾ ಅಡಿಷನಲ್ ನ್ಯಾಯಾಧೀಶನನ್ನು ಒಳಗೊಳ್ಳುವುದಿಲ್ಲ.

**377. ಭಾರತದ ಲೆಕ್ಕನಿಯಂತ್ರಕ-ಹಾಗೂ-ಮಹಾಲೆಕ್ಕಪರಿಶೋಧಕನ ಬಗ್ಗೆ ಉಪಬಂಧಗಳು:-** ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಪದಧಾರಣ ಮಾಡಿದ್ದ ಭಾರತದ ಮಹಾಲೆಕ್ಕಪರಿಶೋಧಕನು, ಅನ್ಯಥಾ ಇಷ್ಟಪಟ್ಟ ಹೊರತು, ಅವನು ಅಂಥ ಪ್ರಾರಂಭದಲ್ಲಿ ಭಾರತದ ಲೆಕ್ಕ ನಿಯಂತ್ರಕ - ಹಾಗೂ - ಮಹಾ ಲೆಕ್ಕಪರಿಶೋಧಕನಾಗತಕ್ಕದ್ದು ಮತ್ತು ಆ ತರುವಾಯ 148ನೆಯ ಅನುಚ್ಛೇದದ (3)ನೆಯ ಖಂಡದ ಮೇರೆಗೆ ಭಾರತದ ಲೆಕ್ಕನಿಯಂತ್ರಕ -ಹಾಗೂ- ಮಹಾಲೆಕ್ಕಪರಿಶೋಧಕನಿಗೆ ಸಂಬಂಧಿಸಿದಂತೆ ಉಪಬಂಧಿಸಿರುವಂಥ ಸಂಬಳಗಳಿಗೆ ಮತ್ತು ಗೈರುಹಾಜರಿ ರಜೆಗೆ ಮತ್ತು ನಿವೃತ್ತಿವೇತನಕ್ಕೆ ಸಂಬಂಧಿಸಿದಂಥ ಹಕ್ಕುಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಅವನಿಗೆ ಅನ್ವಯಿಸುತ್ತಿದ್ದ ಉಪಬಂಧಗಳ ಮೇರೆಗೆ ನಿರ್ಧರಿಸಲಾಗಿದ್ದ ಅವನ ಪದಾವಧಿಯು ಮುಗಿಯುವವರೆಗೆ ಆ ಪದದಲ್ಲಿ ಮುಂದುವರಿಯಲು ಹಕ್ಕುಳ್ಳವನಾಗಿರತಕ್ಕದ್ದು.

**378. ಲೋಕಸೇವಾ ಆಯೋಗಗಳ ಬಗ್ಗೆ ಉಪಬಂಧಗಳು:-** (1) ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಪದಧಾರಣ ಮಾಡಿದ್ದ ಡೊಮಿನಿಯನ್ ಆಫ್ ಇಂಡಿಯಾದ ಲೋಕಸೇವಾ ಆಯೋಗದ ಸದಸ್ಯರು ಅನ್ಯಥಾ ಇಷ್ಟಪಟ್ಟ ಹೊರತು, ಅವರು ಅಂಥ ಪ್ರಾರಂಭದಂದು ಕೇಂದ್ರ ಲೋಕಸೇವಾ ಆಯೋಗದ ಸದಸ್ಯರಾಗತಕ್ಕದ್ದು ಮತ್ತು 316ನೆಯ ಅನುಚ್ಛೇದದ (1)ನೆಯ ಮತ್ತು (2)ನೆಯ ಖಂಡಗಳಲ್ಲಿ ಏನೇ ಇದ್ದಾಗ್ಯೂ, ಆದರೆ ಆ ಅನುಚ್ಛೇದದ (2)ನೆಯ ಖಂಡದ ಪರಂತುಕಕ್ಕೆ ಒಳಪಟ್ಟು, ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ, ಅಂಥ ಸದಸ್ಯರಿಗೆ ಅನ್ವಯಿಸುತ್ತಿದ್ದ ನಿಯಮಗಳ ಮೇರೆಗೆ ನಿರ್ಧರಿಸಲಾಗಿದ್ದ ಅವರ ಪದಾವಧಿಯು ಮುಗಿಯುವವರೆಗೆ ಆ ಪದದಲ್ಲಿ ಮುಂದುವರಿಯತಕ್ಕದ್ದು.

(2) ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಒಂದು ಪ್ರಾಂತದ ಲೋಕಸೇವಾ ಆಯೋಗದ ಅಥವಾ ಪ್ರಾಂತಗಳ ಒಂದು ಸಮೂಹದ ಅವಶ್ಯಕತೆಗಳನ್ನು ಪೂರೈಸುತ್ತಿದ್ದ ಲೋಕಸೇವಾ ಆಯೋಗದ ಸದಸ್ಯರಾಗಿ ಪದಧಾರಣ ಮಾಡಿರುವ ಸದಸ್ಯರು ಅನ್ಯಥಾ ಇಷ್ಟಪಟ್ಟ ಹೊರತು, ಅವರು ಅಂಥ ಪ್ರಾರಂಭದಂದು ಸಂದರ್ಭಾನುಸಾರ, ಆ ಪ್ರಾಂತಕ್ಕೆ ಸಂವಾದಿಯಾದ ರಾಜ್ಯದ ಲೋಕಸೇವಾ ಆಯೋಗದ ಅಥವಾ ಸಂವಾದಿಯಾದ ರಾಜ್ಯಗಳ ಅವಶ್ಯಕತೆಗಳನ್ನು ಪೂರೈಸುವ ಜಂಟಿ ರಾಜ್ಯ ಲೋಕಸೇವಾ ಆಯೋಗದ ಸದಸ್ಯರಾಗತಕ್ಕದ್ದು ಮತ್ತು 316ನೆಯ ಅನುಚ್ಛೇದದ (1) ಮತ್ತು (2)ನೆಯ ಖಂಡಗಳಲ್ಲಿ ಏನೇ ಇದ್ದಾಗ್ಯೂ, ಆದರೆ ಆ ಅನುಚ್ಛೇದದ (2)ನೇ ಖಂಡದ ಪರಂತುಕಕ್ಕೆ ಒಳಪಟ್ಟು, ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಅಂಥ ಸದಸ್ಯರಿಗೆ ಅನ್ವಯಿಸುತ್ತಿದ್ದ ನಿಯಮಗಳ ಮೇರೆಗೆ ನಿರ್ಧರಿಸಲಾಗಿದ್ದ ಅವರ ಪದಾವಧಿಯು ಮುಗಿಯುವವರೆಗೆ ಆ ಪದದಲ್ಲಿ ಮುಂದುವರಿಯತಕ್ಕದ್ದು.

[1][**378ಎ. ಆಂಧ್ರಪ್ರದೇಶದ ವಿಧಾನಸಭೆಯ ಅವಧಿಯ ಬಗ್ಗೆ ವಿಶೇಷ ಉಪಬಂಧ:-** 172ನೆಯ ಅನುಚ್ಛೇದದಲ್ಲಿ ಏನೇ ಒಳಗೊಂಡಿದ್ದಾಗ್ಯೂ, 1956ನೆಯ ಇಸವಿಯ ರಾಜ್ಯಗಳ ಪುನರ್ ವಿಂಗಡಣಾ ಅಧಿನಿಯಮದ 28ನೆಯ ಮತ್ತು 29ನೆಯ ಪ್ರಕರಣಗಳ ಉಪಬಂಧಗಳ ಮೇರೆಗೆ ರಚಿತವಾದ ಆಂಧ್ರಪ್ರದೇಶ ರಾಜ್ಯದ ವಿಧಾನಸಭೆಯು ಸದರಿ 29ನೆಯ ಪ್ರಕರಣದಲ್ಲಿ ಉಲ್ಲೇಖಿಸಿರುವ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಮೊದಲೇ ವಿಸರ್ಜನೆಯಾಗದಿದ್ದರೆ ಐದು ವರ್ಷಗಳ ಅವಧಿಯವರೆಗೆ ಮುಂದುವರಿಯತಕ್ಕದ್ದು, ಆದರೆ ಅದಕ್ಕಿಂತ ಹೆಚ್ಚು ಕಾಲ ಮುಂದುವರಿಯತಕ್ಕದ್ದಲ್ಲ ಮತ್ತು ಸದರಿ ಅವಧಿಯು ಮುಕ್ತಾಯವಾದೊಡನೆ ಆ ವಿಧಾನಸಭೆಯು ವಿಸರ್ಜನೆಯಾದಂತೆ ಪ್ರವರ್ತಿಸತಕ್ಕದ್ದು.]

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 24ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

**379-391.** *1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಮತ್ತು ಅನುಸೂಚಿಯ ಮೂಲಕ ನಿರಸಿತವಾಗಿವೆ.*

**392. ತೊಂದರೆಗಳನ್ನು ನಿವಾರಿಸಲು ರಾಷ್ಟ್ರಪತಿಯ ಅಧಿಕಾರ:-** (1) ರಾಷ್ಟ್ರಪತಿಯು ಆದೇಶ ಹೊರಡಿಸಿ, ಯಾವುದೇ ತೊಂದರೆಗಳನ್ನು, ವಿಶೇಷವಾಗಿ 1935ನೆಯ ಇಸವಿಯ ಭಾರತ ಸರ್ಕಾರದ ಅಧಿನಿಯಮದ ಉಪಬಂಧಗಳು ಈ ಸಂವಿಧಾನದ ಉಪಬಂಧಗಳಿಗೆ ಪರಿವರ್ತನೆ ಆಗುವುದಕ್ಕೆ ಸಂಬಂಧಪಟ್ಟಂಥ ತೊಂದರೆಗಳನ್ನು ನಿವಾರಿಸುವ ಉದ್ದೇಶಕ್ಕಾಗಿ ಮಾರ್ಪಾಟು, ಸೇರ್ಪಡೆ ಅಥವಾ ಬಿಟ್ಟುಬಿಡುವ ಮೂಲಕ, ತಾನು ಅವಶ್ಯಕ ಅಥವಾ ವಿಹಿತವೆಂದು ಭಾವಿಸಬಹುದಾದಂಥ ಅಳವಡಿಕೆಗಳಿಗೆ ಒಳಪಟ್ಟು, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯಲ್ಲಿ, ಈ ಸಂವಿಧಾನವು ಪರಿಣಾಮಕಾರಿಯಾಗಿರತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು, Vನೆಯ ಭಾಗದ IIನೆಯ ಅಧ್ಯಾಯದ ಮೇರೆಗೆ ಕ್ರಮಬದ್ಧವಾಗಿ ರಚಿತವಾದ ಸಂಸತ್ತಿನ ಮೊದಲನೆಯ ಸಭೆಯ ದಿನಾಂಕದ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) (1)ನೆಯ ಖಂಡದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು ಸಂಸತ್ತಿನ ಮುಂದೆ ಇಡತಕ್ಕದ್ದು.

(3) ಈ ಅನುಚ್ಛೇದ, 324ನೆಯ ಅನುಚ್ಛೇದ, 367ನೆಯ ಅನುಚ್ಛೇದದ (3)ನೆಯ ಖಂಡ ಮತ್ತು 391ನೆಯ ಅನುಚ್ಛೇದಗಳಿಂದ ರಾಷ್ಟ್ರಪತಿಗೆ ಪ್ರದತ್ತವಾದ ಅಧಿಕಾರಗಳು, ಈ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಡೊಮಿನಿಯನ್ ಆಫ್ ಇಂಡಿಯಾದ ಗವರ್ನರ್-ಜನರಲ್‌ನು ಚಲಾಯಿಸಬಹುದಾಗಿದ್ದಂಥ ಅಧಿಕಾರಗಳಾಗಿರತಕ್ಕದ್ದು.

# ಭಾಗ - XXII

## ಚಿಕ್ಕ ಹೆಸರು, ಪ್ರಾರಂಭ [1][,ಹಿಂದಿಯಲ್ಲಿ ಅಧಿಕೃತ ಪಾಠ] ಮತ್ತು ನಿರಸನಗಳು

**393. ಚಿಕ್ಕ ಹೆಸರು:-** ಈ ಸಂವಿಧಾನವನ್ನು ಭಾರತದ ಸಂವಿಧಾನವೆಂದು ಕರೆಯತಕ್ಕದ್ದು.

**394. ಪ್ರಾರಂಭ:-** ಈ ಅನುಚ್ಛೇದವು ಮತ್ತು 5, 6, 7, 8, 9, 60, 324, 366, 367, 379, 380, 388, 391, 392 ಮತ್ತು 393ನೆಯ ಅನುಚ್ಛೇದಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಈ ಸಂವಿಧಾನದ ಉಳಿದ ಉಪಬಂಧಗಳು ಈ ಸಂವಿಧಾನವು ಪ್ರಾರಂಭವಾಗತಕ್ಕ ದಿನವೆಂಬುದಾಗಿ ಈ ಸಂವಿಧಾನದಲ್ಲಿ ಉಲ್ಲೇಖಿಸಿರುವ 1950ನೆಯ ಇಸವಿ ಜನವರಿ ಇಪ್ಪತ್ತಾರನೆಯ ದಿನದಂದು ಜಾರಿಗೆ ಬರತಕ್ಕದ್ದು.

[2][**394ಎ. ಹಿಂದಿ ಭಾಷೆಯಲ್ಲಿ ಅಧಿಕೃತ ಪಾಠ:-** (1) ರಾಷ್ಟ್ರಪತಿಯು ತನ್ನ ಪ್ರಾಧಿಕಾರದ ಮೇರೆಗೆ,-

(ಎ) ಈ ಸಂವಿಧಾನದ ಯಾವ ಹಿಂದಿ ಭಾಷಾಂತರಕ್ಕೆ ಸಂವಿಧಾನ ಸಭೆಯ ಸದಸ್ಯರು ಸಹಿ ಮಾಡಿರುವರೋ ಆ ಭಾಷಾಂತರವನ್ನು ಕೇಂದ್ರ ಅಧಿನಿಯಮಗಳ ಅಧಿಕೃತ ಹಿಂದಿ ಪಾಠಗಳಲ್ಲಿ ಬಳಸಿರುವ ಭಾಷೆಗೆ, ಶೈಲಿಗೆ ಮತ್ತು ಪದಾವಳಿಗೆ ಅನುರೂಪವಾಗಿಸಲು ಅವಶ್ಯವಾಗಬಹುದಾದಂಥ ಮಾರ್ಪಾಟುಗಳೊಂದಿಗೆ ಮತ್ತು ಅಂಥ ಪ್ರಕಟಣೆಗೆ ಮುಂಚೆ ಮಾಡಲಾಗಿರುವ ಈ ಸಂವಿಧಾನದ ಎಲ್ಲಾ ತಿದ್ದುಪಡಿಗಳನ್ನು ಅದರಲ್ಲಿ ಅಳವಡಿಸಿಕೊಂಡು, ಆ ಹಿಂದಿ ಭಾಷಾಂತರವನ್ನು; ಮತ್ತು

(ಬಿ) ಇಂಗ್ಲೀಷ್ ಭಾಷೆಯಲ್ಲಿ ಸಂವಿಧಾನದಲ್ಲಿ ಮಾಡಲಾಗಿರುವ ಪ್ರತಿಯೊಂದು ತಿದ್ದುಪಡಿಯ ಹಿಂದಿ ಭಾಷಾಂತರವನ್ನು

- ಪ್ರಕಟಿಸುವಂತೆ ಮಾಡತಕ್ಕದ್ದು.

(2) (1) ನೆಯ ಖಂಡದ ಮೇರೆಗೆ ಪ್ರಕಟಿಸಿದ ಈ ಸಂವಿಧಾನದ ಮತ್ತು ಅದರ ಪ್ರತಿಯೊಂದು ತಿದ್ದುಪಡಿಯ ಭಾಷಾಂತರವು ಸಂವಿಧಾನದ ಮೂಲ ಪಾಠಕ್ಕಿರುವಂಥದೇ ಅರ್ಥವನ್ನು ಹೊಂದಿರುವುದಾಗಿ ಅರ್ಥೈಸತಕ್ಕದ್ದು ಮತ್ತು ಅಂಥ ಭಾಷಾಂತರದ ಯಾವುದೇ ಭಾಗವನ್ನು ಹಾಗೆ ಅರ್ಥೈಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಷ್ಟ್ರಪತಿಯು ಅದನ್ನು ಸೂಕ್ತವಾಗಿ ಪರಿಷ್ಕರಿಸುವಂತೆ ಮಾಡತಕ್ಕದ್ದು.

(3) ಈ ಅನುಚ್ಛೇದದ ಮೇರೆಗೆ ಪ್ರಕಟಿಸಿದ ಈ ಸಂವಿಧಾನದ ಮತ್ತು ಅದರ ಪ್ರತಿಯೊಂದು ತಿದ್ದುಪಡಿಯ ಭಾಷಾಂತರವನ್ನು ಎಲ್ಲಾ ಉದ್ದೇಶಗಳಿಗಾಗಿ ಹಿಂದಿ ಭಾಷೆಯಲ್ಲಿ ಅದರ ಅಧಿಕೃತ ಪಾಠವೆಂದು ಭಾವಿಸತಕ್ಕದ್ದು.]

**395. ನಿರಸನಗಳು:-** 1947ನೆಯ ಇಸವಿಯ ಭಾರತ ಸ್ವಾತಂತ್ರ್ಯ ಅಧಿನಿಯಮವನ್ನು ಮತ್ತು 1935ನೇ ಇಸವಿಯ ಭಾರತ ಸರ್ಕಾರದ ಅಧಿನಿಯಮವನ್ನು ತಿದ್ದುಪಡಿ ಮಾಡುವ ಅಥವಾ ಪೂರಕಗೊಳಿಸುವ ಎಲ್ಲಾ ಅಧಿನಿಯಮಿತಿಗಳೊಂದಿಗೆ, ಸದರಿ 1935ನೆಯ ಇಸವಿಯ ಭಾರತ ಸರ್ಕಾರದ ಅಧಿನಿಯಮವನ್ನು ನಿರಸನಗೊಳಿಸಲಾಗಿದೆ. ಆದರೆ ಇದು 1949ನೆಯ ಇಸವಿ ಪ್ರಿವಿಕೌನ್ಸಿಲ್ ಅಧಿಕಾರ ವ್ಯಾಪ್ತಿಯನ್ನು ರದ್ದುಗೊಳಿಸುವ ಅಧಿನಿಯಮವನ್ನು ಒಳಗೊಳ್ಳುವುದಿಲ್ಲ.

---

1. 1987ನೆಯ ಇಸವಿಯ ಸಂವಿಧಾನ (ಐವತ್ತೆಂಟನೇ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 1987ನೆಯ ಇಸವಿಯ ಸಂವಿಧಾನ (ಐವತ್ತೆಂಟನೇ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.

## [1][ಮೊದಲನೆಯ ಅನುಸೂಚಿ

[1ನೆಯ ಮತ್ತು 4ನೆಯ ಅನುಚ್ಛೇದಗಳು]

### I. ರಾಜ್ಯಗಳು

| ಹೆಸರು | ರಾಜ್ಯಕ್ಷೇತ್ರಗಳು |
|---|---|
| 1. ಆಂಧ್ರ ಪ್ರದೇಶ | [2][1959ನೆಯ ಇಸವಿಯ ಆಂಧ್ರಪ್ರದೇಶ ಮತ್ತು ಮದ್ರಾಸು (ಸರಹದ್ದುಗಳ ಬದಲಾವಣೆ) ಅಧಿನಿಯಮದ ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ, 1953ನೆಯ ಇಸವಿಯ ಆಂಧ್ರರಾಜ್ಯ ಅಧಿನಿಯಮದ 3ನೆಯ ಪ್ರಕರಣದ (1)ನೆಯ ಉಪ-ಪ್ರಕರಣದಲ್ಲಿ, 1956ನೆಯ ಇಸವಿಯ ರಾಜ್ಯಗಳ ಪುನರ್ ವಿಂಗಡಣೆ ಅಧಿನಿಯಮದ 3ನೆಯ ಪ್ರಕರಣದ (1)ನೆಯ ಉಪ-ಪ್ರಕರಣದಲ್ಲಿ, 1959ನೆಯ ಇಸವಿಯ ಆಂಧ್ರಪ್ರದೇಶದ ಮತ್ತು ಮದ್ರಾಸು (ಸರಹದ್ದುಗಳ ಬದಲಾವಣೆ) ಅಧಿನಿಯಮದ ಮೊದಲನೆಯ ಅನುಸೂಚಿಯಲ್ಲಿ ಮತ್ತು 1968ನೆಯ ಇಸವಿಯ ಆಂಧ್ರಪ್ರದೇಶ ಮತ್ತು ಮೈಸೂರು (ರಾಜ್ಯ ಕ್ಷೇತ್ರದ ವರ್ಗಾವಣೆ) ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.] |
| 2. ಅಸ್ಸಾಂ | 1951ನೆಯ ಇಸವಿಯ ಅಸ್ಸಾಂ (ಸರಹದ್ದುಗಳ ಬದಲಾವಣೆ) ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು [3][1962ನೆಯ ಇಸವಿಯ ನಾಗಾಲ್ಯಾಂಡ್ ರಾಜ್ಯದ ಅಧಿನಿಯಮದ 3ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು] [4][ಮತ್ತು 1971ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್ ವಿಂಗಡಣೆ) ಅಧಿನಿಯಮದ 5ನೆಯ, 6ನೆಯ ಮತ್ತು 7ನೆಯ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು] ಹೊರತುಪಡಿಸಿ, ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಅಸ್ಸಾಂ ಪ್ರಾಂತ್ಯದಲ್ಲಿ, ಖಾಸೀ ರಾಜ್ಯಗಳಲ್ಲಿ ಮತ್ತು ಅಸ್ಸಾಂ ಬುಡಕಟ್ಟು ಪ್ರದೇಶಗಳಲ್ಲಿ ಅಡಕವಾಗಿದ್ದ ರಾಜ್ಯಕ್ಷೇತ್ರಗಳು. |
| 3. ಬಿಹಾರ | [5][1956ನೆಯ ಇಸವಿಯ ಬಿಹಾರ ಮತ್ತು ಪಶ್ಚಿಮ ಬಂಗಾಳ (ರಾಜ್ಯಕ್ಷೇತ್ರಗಳ ವರ್ಗಾವಣೆ) ಅಧಿನಿಯಮದ 3ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು ಮತ್ತು 1968ನೆಯ ಇಸವಿಯ ಬಿಹಾರ ಮತ್ತು ಉತ್ತರ ಪ್ರದೇಶ (ಸರಹದ್ದುಗಳ ಬದಲಾವಣೆ) ಅಧಿನಿಯಮದ 3ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು [6][ಮತ್ತು 2000ದ ಇಸವಿಯ ಬಿಹಾರ ಪುನರ್ ವಿಂಗಡಣೆ ಅಧಿನಿಯಮದ 3ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು] ಹೊರತುಪಡಿಸಿ, ಈ |

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ ಮೊದಲನೇ ಅನುಸೂಚಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1968ನೆಯ ಇಸವಿಯ ಆಂಧ್ರಪ್ರದೇಶ ಮತ್ತು ಮೈಸೂರು (ರಾಜ್ಯಕ್ಷೇತ್ರದ ವರ್ಗಾವಣೆ) ಅಧಿನಿಯಮದ (1968ರ 36) 4ನೇ ಪ್ರಕರಣದ ಮೂಲಕ ಮೊದಲಿದ್ದ ನಮೂದನೆಗೆ ಬದಲಾಗಿ (1-10-1968ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. 1962ನೆಯ ಇಸವಿಯ ನಾಗಾಲ್ಯಾಂಡ್ ರಾಜ್ಯದ (1962ರ 27) ಅಧಿನಿಯಮದ 4ನೇ ಪ್ರಕರಣದ ಮೂಲಕ (1-12-1963 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
4. 1971ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್ ವಿಂಗಡಣೆ) ಅಧಿನಿಯಮದ (1971ರ 81) 9ನೇ ಪ್ರಕರಣದ ಮೂಲಕ (21-1-1972ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
5. 1968ನೆಯ ಇಸವಿಯ ಬಿಹಾರ್ ಮತ್ತು ಉತ್ತರಪ್ರದೇಶ (ಸರಹದ್ದುಗಳ ಬದಲಾವಣೆ) ಅಧಿನಿಯಮದ (1968ರ 24) 4ನೇ ಪ್ರಕರಣದ ಮೂಲಕ ಮೊದಲಿದ್ದ ನಮೂದಿಗೆ ಬದಲಾಗಿ (10-6-1970ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
6. 2000ದ ಇಸವಿಯ ಬಿಹಾರ ಪುನರ್ ವಿಂಗಡಣೆ ಅಧಿನಿಯಮದ (2000 ದ 30) 5ನೇ ಪ್ರಕರಣದ ಮೂಲಕ (15.11.2000 ದಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ, ಬಿಹಾರ ಪ್ರಾಂತದಲ್ಲಿ ಅಡಕವಾಗಿದ್ದ ಅಥವಾ ಆ ಪ್ರಾಂತದ ಭಾಗವಾಗಿದ್ದರೆ ಹೇಗೋ ಹಾಗೆ ಆಡಳಿತ ನಡೆಸಲಾಗುತ್ತಿದ್ದ ಪ್ರದೇಶಗಳನ್ನೊಳಗೊಂಡ ರಾಜ್ಯಕ್ಷೇತ್ರಗಳು ಮತ್ತು 1968ನೆಯ ಇಸವಿಯ ಬಿಹಾರ ಮತ್ತು ಉತ್ತರಪ್ರದೇಶದ (ಸರಹದ್ದುಗಳ ಬದಲಾವಣೆ) ಅಧಿನಿಯಮದ 3ನೆಯ ಪ್ರಕರಣದ (1)ನೆಯ ಉಪಪ್ರಕರಣದ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

[1][4. ಗುಜರಾತ್ 1960ನೆಯ ಇಸವಿಯ ಮುಂಬಯಿ ಪುನರ್ ವಿಂಗಡಣೆ ಅಧಿನಿಯಮದ 3ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ರಾಜ್ಯಕ್ಷೇತ್ರಗಳು.]

5. ಕೇರಳ 1956ನೆಯ ಇಸವಿಯ ರಾಜ್ಯಗಳ ಪುನರ್ ವಿಂಗಡಣೆ ಅಧಿನಿಯಮದ 5ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.

6. ಮಧ್ಯಪ್ರದೇಶ [2][2000ದ ಇಸವಿಯ ಮಧ್ಯಪ್ರದೇಶ ಪುನರ್‌ವಿಂಗಡಣೆ ಅಧಿನಿಯಮದ 3ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ] 1956ನೆಯ ಇಸವಿಯ ರಾಜ್ಯಗಳ ಪುನರ್ ವಿಂಗಡಣೆ ಅಧಿನಿಯಮದ 9ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ [3][ಮತ್ತು 1959ನೆಯ ಇಸವಿಯ ರಾಜಾಸ್ತಾನ ಮತ್ತು ಮಧ್ಯಪ್ರದೇಶ (ರಾಜ್ಯಕ್ಷೇತ್ರಗಳ ವರ್ಗಾವಣೆ) ಅಧಿನಿಯಮದ ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

[4][7. ತಮಿಳುನಾಡು] 1953ನೆಯ ಇಸವಿಯ ಆಂಧ್ರರಾಜ್ಯ ಅಧಿನಿಯಮದ 3ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ಮತ್ತು 4ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ಮತ್ತು [5][1956ನೆಯ ಇಸವಿಯ ರಾಜ್ಯಗಳ ಪುನರ್‌ವಿಂಗಡಣೆ ಅಧಿನಿಯಮದ 5ನೆಯ ಪ್ರಕರಣದ (1)ನೆಯ ಉಪಪ್ರಕರಣದ (ಬಿ) ಖಂಡದಲ್ಲಿ ಮತ್ತು ಇದೇ ಅಧಿನಿಯಮದ 6ನೆಯ ಪ್ರಕರಣದಲ್ಲಿ, 7ನೆಯ ಪ್ರಕರಣದ (1)ನೆಯ ಉಪಪ್ರಕರಣದ (ಡಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು ಹಾಗೂ 1959ನೆಯ ಇಸವಿಯ ಆಂಧ್ರಪ್ರದೇಶ ಮತ್ತು ಮದ್ರಾಸು (ಸರಹದ್ದುಗಳ ಬದಲಾವಣೆ) ಅಧಿನಿಯಮದ ಮೊದಲನೆಯ ಅನುಸೂಚಿಯಲ್ಲಿ,] ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ, ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಮದ್ರಾಸು ಪ್ರಾಂತದಲ್ಲಿ ಅಡಕವಾಗಿದ್ದ ಅಥವಾ ಆ ಪ್ರಾಂತದ ಭಾಗವಾಗಿದ್ದರೆ ಹೇಗೋ ಹಾಗೆ ಆಡಳಿತ ನಡೆಸಲಾಗುತ್ತಿದ್ದ ರಾಜ್ಯಕ್ಷೇತ್ರಗಳು ಮತ್ತು 1956ನೆಯ ಇಸವಿಯ ರಾಜ್ಯಗಳ ಪುನರ್ ವಿಂಗಡಣೆ ಅಧಿನಿಯಮದ 4ನೆಯ ಪ್ರಕರಣದಲ್ಲಿ ಮತ್ತು [6][1959ನೆಯ ಇಸವಿಯ ಆಂಧ್ರಪ್ರದೇಶ ಮತ್ತು ಮದ್ರಾಸು (ಸರಹದ್ದುಗಳ ಬದಲಾವಣೆ) ಅಧಿನಿಯಮದ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

---

1. 1960ನೇ ಇಸವಿಯ ಮುಂಬಯಿ ಪುನರ್ ವಿಂಗಡಣೆ ಅಧಿನಿಯಮದ (1960ರ 11) 4ನೇ ಪ್ರಕರಣದ ಮೂಲಕ, 4ನೇ ನಮೂದಿಗೆ ಬದಲಾಗಿ (1-5-1960ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 2000ದ ಇಸವಿಯ ಮಧ್ಯಪ್ರದೇಶ ಪುನರ್‌ವಿಂಗಡಣೆ ಅಧಿನಿಯಮದ (2000ದ 28) 5ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.
3. 1959ನೇ ಇಸವಿಯ ರಾಜಾಸ್ತಾನ ಮತ್ತು ಮಧ್ಯಪ್ರದೇಶ (ರಾಜ್ಯಕ್ಷೇತ್ರಗಳ ವರ್ಗಾವಣೆ) ಅಧಿನಿಯಮದ (1959ರ 47) 4ನೇ ಪ್ರಕರಣದ ಮೂಲಕ (1-10-1959ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
4. 1968ನೇ ಇಸವಿಯ ಮದ್ರಾಸು ರಾಜ್ಯದ (ಹೆಸರು ಬದಲಾವಣೆ) ಅಧಿನಿಯಮದ (1968ರ 53) 5ನೇ ಪ್ರಕರಣದ ಮೂಲಕ "7. ಮದ್ರಾಸು" ಎಂಬುದಕ್ಕೆ ಬದಲಾಗಿ (14-1-1969ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
5. 1959ನೇ ಇಸವಿಯ ಆಂಧ್ರಪ್ರದೇಶ ಮತ್ತು ಮದ್ರಾಸು (ಸರಹದ್ದುಗಳ ಬದಲಾವಣೆ) ಅಧಿನಿಯಮದ (1959ರ 56) 6ನೇ ಪ್ರಕರಣದ ಮೂಲಕ (1-4-1960ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
6. ಅದೇ 6ನೇ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ (1-4-1960ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

[1][8. ಮಹಾರಾಷ್ಟ್ರ — 1960ನೆಯ ಇಸವಿಯ ಮುಂಬಯಿ ಪುನರ್ ವಿಂಗಡಣೆ ಅಧಿನಿಯಮದ 3ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ, 1956ನೆಯ ಇಸವಿಯ ರಾಜ್ಯಗಳ ಪುನರ್ ವಿಂಗಡಣೆ ಅಧಿನಿಯಮದ 8ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

[2][3][ [9.] ಕರ್ನಾಟಕ] — [4][1968ನೆಯ ಇಸವಿಯ ಆಂಧ್ರಪ್ರದೇಶ ಮತ್ತು ಮೈಸೂರು (ರಾಜ್ಯಕ್ಷೇತ್ರದ ವರ್ಗಾವಣೆ) ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರವನ್ನು ಹೊರತುಪಡಿಸಿ] 1956ನೆಯ ಇಸವಿಯ ರಾಜ್ಯಗಳ ಪುನರ್‌ವಿಂಗಡಣೆ ಅಧಿನಿಯಮದ 7ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.

[3][10.] ಒರಿಸ್ಸಾ — ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಒರಿಸ್ಸಾ ಪ್ರಾಂತದಲ್ಲಿ ಅಡಕವಾಗಿದ್ದ ಅಥವಾ ಆ ಪ್ರಾಂತದ ಭಾಗವಾಗಿದ್ದರೆ ಹೇಗೋ ಹಾಗೆ ಆಡಳಿತ ನಡೆಸಲಾಗುತ್ತಿದ್ದ ರಾಜ್ಯಕ್ಷೇತ್ರಗಳು.

[3][11.] ಪಂಜಾಬ್ — [5][1960ನೆಯ ಇಸವಿಯ ಸಂವಿಧಾನ (ಒಂಬತ್ತನೆಯ ತಿದ್ದುಪಡಿಯ) ಅಧಿನಿಯಮದ ಮೊದಲನೆಯ ಅನುಸೂಚಿಯ IIನೆಯ ಭಾಗದಲ್ಲಿ ಉಲ್ಲೇಖಿಸಿದ ರಾಜ್ಯಕ್ಷೇತ್ರಗಳನ್ನು] [6][ಮತ್ತು 1966ನೆಯ ಇಸವಿಯ ಪಂಜಾಬ್ ಪುನರ್‌ವಿಂಗಡಣೆ ಅಧಿನಿಯಮದ 3ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ, 4ನೆಯ ಪ್ರಕರಣದಲ್ಲಿ ಮತ್ತು 5ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ] 1956ನೆಯ ಇಸವಿಯ ರಾಜ್ಯಗಳ ಪುನರ್ ವಿಂಗಡಣೆ ಅಧಿನಿಯಮದ 11ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ [7][ಮತ್ತು 1960ನೆಯ ಇಸವಿಯ ಆರ್ಜಿತ ರಾಜ್ಯಕ್ಷೇತ್ರಗಳ (ವಿಲೀನ) ಅಧಿನಿಯಮದ ಮೊದಲನೆಯ ಅನುಸೂಚಿಯ IIನೆಯ ಭಾಗದಲ್ಲಿ ಉಲ್ಲೇಖಿಸಲಾದ ರಾಜ್ಯಕ್ಷೇತ್ರಗಳು.]

[3][12.] ರಾಜಾಸ್ತಾನ — [8][1959ನೆಯ ಇಸವಿಯ ರಾಜಾಸ್ತಾನ ಮತ್ತು ಮಧ್ಯಪ್ರದೇಶ (ರಾಜ್ಯಕ್ಷೇತ್ರಗಳ ವರ್ಗಾವಣೆ) ಅಧಿನಿಯಮದ ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ,] 1956ನೆಯ ಇಸವಿಯ ರಾಜ್ಯಗಳ ಪುನರ್‌ವಿಂಗಡಣೆ ಅಧಿನಿಯಮದ 10ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.

---

1. 1960ನೆಯ ಇಸವಿಯ ಮುಂಬಯಿ ಪುನರ್ ವಿಂಗಡಣೆ ಅಧಿನಿಯಮದ (1960ರ 11) 4ನೇ ಪ್ರಕರಣದ ಮೂಲಕ (1-5-1960ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1973ನೇ ಇಸವಿಯ ಮೈಸೂರು ರಾಜ್ಯದ (ಹೆಸರು ಬದಲಾವಣೆ) ಅಧಿನಿಯಮದ (1973ರ 31) 5ನೇ ಪ್ರಕರಣದ ಮೂಲಕ "9. ಮೈಸೂರು" ಎಂಬುದಕ್ಕೆ ಬದಲಾಗಿ (1-11-1973ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. 1960ನೇ ಇಸವಿಯ ಮುಂಬಯಿ ಪುನರ್ ವಿಂಗಡಣೆ ಅಧಿನಿಯಮದ (1960ರ 11) 4ನೇ ಪ್ರಕರಣದ ಮೂಲಕ (1.5.1960 ರಿಂದ ಜಾರಿಗೆ ಬರುವಂತೆ) 8 ರಿಂದ 14ರವರೆಗಿನ ನಮೂದುಗಳಿಗೆ 9 ರಿಂದ 15ರವರೆಗಿನ ನಮೂದುಗಳೆಂದು ಪುನರ್ ಸಂಖ್ಯೆ ನೀಡಲಾಗಿದೆ.
4. 1968ನೇ ಇಸವಿಯ ಆಂಧ್ರಪ್ರದೇಶ ಮತ್ತು ಮೈಸೂರು (ರಾಜ್ಯಕ್ಷೇತ್ರದ ವರ್ಗಾವಣೆ) ಅಧಿನಿಯಮದ (1968ರ 36) 4ನೇ ಪ್ರಕರಣದ ಮೂಲಕ (1-10-1968ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
5. 1960ನೇ ಇಸವಿಯ ಸಂವಿಧಾನ (ಒಂಬತ್ತನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (17-1-1961ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
6. 1966ನೇ ಇಸವಿಯ ಪಂಜಾಬ್ ಪುನರ್‌ವಿಂಗಡಣೆ ಅಧಿನಿಯಮದ (1966ರ 31) 7ನೇ ಪ್ರಕರಣದ ಮೂಲಕ (1-11-1966ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
7. 1960ನೇ ಇಸವಿಯ ಆರ್ಜಿತ ರಾಜ್ಯಕ್ಷೇತ್ರಗಳ (ವಿಲೀನ) ಅಧಿನಿಯಮದ (1960ರ 64) 4ನೆಯ ಪ್ರಕರಣದ ಮೂಲಕ (17-1-1961ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
8. 1959ನೇ ಇಸವಿಯ ರಾಜಾಸ್ತಾನ ಮತ್ತು ಮಧ್ಯಪ್ರದೇಶ (ರಾಜ್ಯಕ್ಷೇತ್ರಗಳ ವರ್ಗಾವಣೆ) ಅಧಿನಿಯಮದ (1959ರ 47) 4ನೇ ಪ್ರಕರಣದ ಮೂಲಕ (1-10-1959ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

[1][13.] ಉತ್ತರ ಪ್ರದೇಶ [2][1968ನೆಯ ಇಸವಿಯ ಬಿಹಾರ ಮತ್ತು ಉತ್ತರ ಪ್ರದೇಶ (ಸರಹದ್ದುಗಳ ಬದಲಾವಣೆ) ಅಧಿನಿಯಮದ 3ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು ಮತ್ತು [3][2000ದ ಇಸವಿಯ ಉತ್ತರ ಪ್ರದೇಶ ಪುನರ್ ವಿಂಗಡಣಾ ಅಧಿನಿಯಮದ 3ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯ ಕ್ಷೇತ್ರಗಳನ್ನು ಮತ್ತು] 1979ನೆಯ ಇಸವಿಯ ಹರಿಯಾಣ ಮತ್ತು ಉತ್ತರಪ್ರದೇಶ (ಸರಹದ್ದುಗಳ ಬದಲಾವಣೆ) ಅಧಿನಿಯಮದ 4ನೆಯ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ, ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಸಂಯುಕ್ತ ಪ್ರಾಂತಗಳೆಂದು ಕರೆಯಲಾಗುತ್ತಿದ್ದ ಪ್ರಾಂತದಲ್ಲಿ ಒಳಗೊಂಡಿದ್ದ ಅಥವಾ ಆ ಪ್ರಾಂತದ ಭಾಗವಾಗಿದ್ದರೆ ಹೇಗೋ ಹಾಗೆ ಅದರ ಆಡಳಿತಕ್ಕೆ ಒಳಪಟ್ಟಿದ್ದ ರಾಜ್ಯಕ್ಷೇತ್ರಗಳು, 1968ನೆಯ ಇಸವಿಯ ಬಿಹಾರ್ ಮತ್ತು ಉತ್ತರ ಪ್ರದೇಶ (ಸರಹದ್ದುಗಳ ಬದಲಾವಣೆ) ಅಧಿನಿಯಮದ 3ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು ಮತ್ತು 1979ನೇ ಇಸವಿಯ ಹರಿಯಾಣ ಮತ್ತು ಉತ್ತರ ಪ್ರದೇಶ (ಸರಹದ್ದುಗಳ ಬದಲಾವಣೆ) ಅಧಿನಿಯಮದ 4ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಲಾದ ರಾಜ್ಯಕ್ಷೇತ್ರಗಳು.]

[1][14.] ಪಶ್ಚಿಮ ಬಂಗಾಳ ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಪಶ್ಚಿಮ ಬಂಗಾಳ ಪ್ರಾಂತದಲ್ಲಿ ಅಡಕವಾಗಿದ್ದ ಅಥವಾ ಆ ಪ್ರಾಂತದ ಭಾಗವಾಗಿದ್ದರೆ ಹೇಗೋ ಹಾಗೆ ಆಡಳಿತ ನಡೆಸಲಾಗುತ್ತಿದ್ದ ರಾಜ್ಯಕ್ಷೇತ್ರಗಳು ಮತ್ತು 1954ನೆಯ ಇಸವಿಯ ಚಂದ್ರನಾಗೂರ್ (ವಿಲೀನ) ಅಧಿನಿಯಮದ 2ನೆಯ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸಲಾದಂತೆ ಚಂದ್ರನಾಗೂರ್ ರಾಜ್ಯಕ್ಷೇತ್ರ ಹಾಗೂ 1956ನೆಯ ಇಸವಿಯ ಬಿಹಾರ ಮತ್ತು ಪಶ್ಚಿಮ ಬಂಗಾಳ (ರಾಜ್ಯಕ್ಷೇತ್ರಗಳ ವರ್ಗಾವಣೆ) ಅಧಿನಿಯಮದ 3ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯ ಕ್ಷೇತ್ರಗಳು.

[1][15.] ಜಮ್ಮು ಮತ್ತು ಕಾಶ್ಮೀರ ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಜಮ್ಮು ಮತ್ತು ಕಾಶ್ಮೀರ ಭಾರತೀಯ ಸಂಸ್ಥಾನದಲ್ಲಿ ಅಡಕವಾಗಿದ್ದ ರಾಜ್ಯಕ್ಷೇತ್ರ.

[4][16. ನಾಗಾಲ್ಯಾಂಡ್ 1962ನೆಯ ಇಸವಿಯ ನಾಗಾಲ್ಯಾಂಡ್ ರಾಜ್ಯದ ಅಧಿನಿಯಮದ 3ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

---

1. 1960ನೇ ಇಸವಿಯ ಮುಂಬಯಿ ಪುನರ್ ವಿಂಗಡಣೆ ಅಧಿನಿಯಮದ (1960ರ 11) 4ನೇ ಪ್ರಕರಣದ ಮೂಲಕ 8 ರಿಂದ 14ರವರೆಗಿನ ನಮೂದುಗಳಿಗೆ 9 ರಿಂದ 15 ಎಂದು (1-5-1960ರಿಂದ ಜಾರಿಗೆ ಬರುವಂತೆ) ಪುನರ್ ಸಂಖ್ಯೆ ನೀಡಲಾಗಿದೆ.

2. 1979ನೇ ಇಸವಿಯ ಹರಿಯಾಣ ಮತ್ತು ಉತ್ತರಪ್ರದೇಶ (ಸರಹದ್ದುಗಳ ಬದಲಾವಣೆ) ಅಧಿನಿಯಮದ (1979ರ 31) 5ನೇ ಪ್ರಕರಣದ ಮೂಲಕ (15-9-1983 ರಿಂದ ಜಾರಿಗೆ ಬರುವಂತೆ) "13. ಉತ್ತರಪ್ರದೇಶ" ಇದರ ಎದುರಿಗಿರುವ ನಮೂದಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

3. 2000ದ ಇಸವಿಯ ಉತ್ತರಪ್ರದೇಶ ಪುನರ್‌ವಿಂಗಡಣೆ ಅಧಿನಿಯಮದ (2000ದ 29) 5ನೇ ಪ್ರಕರಣದ ಮೂಲಕ (9.11.2000 ದಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

4. 1962ನೇ ಇಸವಿಯ ನಾಗಾಲ್ಯಾಂಡ್ ರಾಜ್ಯ ಅಧಿನಿಯಮದ (1962ರ 27) 4ನೇ ಪ್ರಕರಣದ ಮೂಲಕ (1-12-1963ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

[1][17. ಹರಿಯಾಣ — [2][1966ನೆಯ ಇಸವಿಯ ಪಂಜಾಬ್ ಪುನರ್ ವಿಂಗಡಣೆ ಅಧಿನಿಯಮದ ಮೂರನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ರಾಜ್ಯಕ್ಷೇತ್ರಗಳು ಮತ್ತು 1979ನೇ ಇಸವಿಯ ಹರಿಯಾಣ ಮತ್ತು ಉತ್ತರಪ್ರದೇಶ (ಸರಹದ್ದುಗಳ ಬದಲಾವಣೆ) ಅಧಿನಿಯಮದ 4ನೇ ಪ್ರಕರಣದ (1)ನೇ ಉಪಪ್ರಕರಣದ (v)ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ, ಆ ಅಧಿನಿಯಮದ 4ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಲಾದ ರಾಜ್ಯ ಕ್ಷೇತ್ರಗಳು.]]

[3][18. ಹಿಮಾಚಲ ಪ್ರದೇಶ — ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಹಿಮಾಚಲ ಪ್ರದೇಶ ಮತ್ತು ವಿಲಾಸಪುರ ಎಂಬ ಹೆಸರುಗಳಿಂದ ಚೀಫ್ ಕಮಿಷನರುಗಳ ಪ್ರಾಂತಗಳಾಗಿದ್ದರೆ ಹೇಗೋ ಹಾಗೆ ಆಡಳಿತ ನಡೆಸಲಾಗುತ್ತಿದ್ದ ರಾಜ್ಯಕ್ಷೇತ್ರಗಳು ಮತ್ತು 1966ನೆಯ ಇಸವಿಯ ಪಂಜಾಬ್ (ಪುನರ್‌ವಿಂಗಡಣೆ) ಅಧಿನಿಯಮದ 5ನೆಯ ಪ್ರಕರಣದ (1)ನೆಯ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

[4][19. ಮಣಿಪುರ — ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಮಣಿಪುರ ಎಂಬ ಹೆಸರಿನಿಂದ ಚೀಫ್ ಕಮಿಷನರನ ಪ್ರಾಂತವಾಗಿದ್ದರೆ ಹೇಗೋ ಹಾಗೆ ಆಡಳಿತ ನಡೆಸಲಾಗುತ್ತಿದ್ದ ರಾಜ್ಯಕ್ಷೇತ್ರ.

20. ತ್ರಿಪುರ — ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ತ್ರಿಪುರ ಎಂಬ ಹೆಸರಿನಿಂದ ಚೀಫ್ ಕಮಿಷನರನ ಪ್ರಾಂತವಾಗಿದ್ದರೆ ಹೇಗೋ ಹಾಗೆ ಆಡಳಿತ ನಡೆಸಲಾಗುತ್ತಿದ್ದ ರಾಜ್ಯಕ್ಷೇತ್ರ.

21. ಮೇಘಾಲಯ — 1971ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ 5ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

[5][22. ಸಿಕ್ಕಿಂ — 1975ನೆಯ ಇಸವಿಯ ಸಂವಿಧಾನ (ಮೂವತ್ತಾರನೆಯ ತಿದ್ದುಪಡಿ) ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಸಿಕ್ಕಿಂನಲ್ಲಿ ಅಡಕವಾಗಿದ್ದ ರಾಜ್ಯಕ್ಷೇತ್ರಗಳು.]

[6][23. ಮಿಜೋರಾಂ — 1971ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್ ವಿಂಗಡಣೆ) ಅಧಿನಿಯಮದ 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

---

1. 1966ನೇ ಇಸವಿಯ ಪಂಜಾಬ್ ಪುನರ್ ವಿಂಗಡಣೆ ಅಧಿನಿಯಮದ (1966ರ 31) 7ನೇ ಪ್ರಕರಣದ ಮೂಲಕ (1-11-1966ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1979ನೇ ಇಸವಿಯ ಹರಿಯಾಣ ಮತ್ತು ಉತ್ತರಪ್ರದೇಶ (ಸರಹದ್ದುಗಳ ಬದಲಾವಣೆ) ಅಧಿನಿಯಮದ (1979ರ 31) 5ನೇ ಪ್ರಕರಣದ ಮೂಲಕ "17. ಹರಿಯಾಣ" ಎಂಬುದರ ಎದುರಿಗಿರುವ ನಮೂದಿಗೆ ಬದಲಾಗಿ (15-9-1983 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. 1970ನೆಯ ಇಸವಿಯ ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮದ (1970ರ 53) 4ನೇ ಪ್ರಕರಣದ ಮೂಲಕ (25-1-1971ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
4. 1971ನೇ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್ ವಿಂಗಡಣೆ) ಅಧಿನಿಯಮದ (1971ರ 81) 9ನೇ ಪ್ರಕರಣದ ಮೂಲಕ (21-1-1972ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
5. 1975ನೇ ಇಸವಿಯ ಸಂವಿಧಾನ (ಮೂವತ್ತಾರನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (26-4-1975 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
6. 1986ನೇ ಇಸವಿಯ ಮಿಜೋರಾಂ ರಾಜ್ಯ ಅಧಿನಿಯಮದ (1986ರ 34) 4ನೇ ಪ್ರಕರಣದ ಮೂಲಕ (20.2.1987ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

[1][24. ಅರುಣಾಚಲ ಪ್ರದೇಶ — 1971ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್ ವಿಂಗಡಣೆ) ಅಧಿನಿಯಮದ 7ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

[2][25. ಗೋವಾ — 1987ನೆಯ ಇಸವಿಯ ಗೋವಾ, ದಾಮನ್ ಮತ್ತು ದೀವ್ ಪುನರ್ ವಿಂಗಡಣೆ ಅಧಿನಿಯಮದ 3ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

[3][26. ಛತ್ತೀಸ್‌ಗಢ — 2000ದ ಇಸವಿಯ ಮಧ್ಯಪ್ರದೇಶ ಪುನರ್‌ವಿಂಗಡಣೆ ಅಧಿನಿಯಮದ 3ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

[4][27. [5][ಉತ್ತರ್‌ಖಂಡ್] — 2000ದ ಇಸವಿಯ ಉತ್ತರಪ್ರದೇಶ ಪುನರ್‌ವಿಂಗಡಣೆ ಅಧಿನಿಯಮದ 3ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

[6][28. ಜಾರ್ಖಂಡ್ — 2000ದ ಇಸವಿಯ ಬಿಹಾರ್ ಪುನರ್‌ವಿಂಗಡಣೆ ಅಧಿನಿಯಮದ 3ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು.]

## II. ಒಕ್ಕೂಟ ರಾಜ್ಯಕ್ಷೇತ್ರಗಳು

| ಹೆಸರು | ವ್ಯಾಪ್ತಿ |
|---|---|
| 1. ದೆಹಲಿ | ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ದೆಹಲಿಯ ಚೀಫ್ ಕಮೀಷನರನ ಪ್ರಾಂತದಲ್ಲಿ ಅಡಕವಾಗಿದ್ದ ರಾಜ್ಯಕ್ಷೇತ್ರ. |
| [7] * * * * | * * * * |
| [8] * * * * | * * * * |

1. 1986ನೇ ಇಸವಿಯ ಅರುಣಾಚಲ ಪ್ರದೇಶ ಅಧಿನಿಯಮದ (1986ರ 69) 4ನೇ ಪ್ರಕರಣದ ಮೂಲಕ (20.2.1987ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1987ನೇ ಇಸವಿಯ ಗೋವಾ, ದಾಮನ್ ಮತ್ತು ದೀವ್ ಅಧಿನಿಯಮದ (1987ರ 18) 5ನೇ ಪ್ರಕರಣದ ಮೂಲಕ (30.5.1987ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 2000ದ ಇಸವಿಯ ಮಧ್ಯಪ್ರದೇಶ ಪುನರ್‌ವಿಂಗಡಣೆ ಅಧಿನಿಯಮದ (2000ದ 28) 5ನೇ ಪ್ರಕರಣದ ಮೂಲಕ (1.11.2000 ದಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
4. 2000ದ ಇಸವಿಯ ಉತ್ತರಪ್ರದೇಶ ಪುನರ್‌ವಿಂಗಡಣೆ ಅಧಿನಿಯಮದ (2000ದ 29) 5ನೇ ಪ್ರಕರಣದ ಮೂಲಕ (9.11.2000 ದಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
5. 2006ನೆಯ ಇಸವಿಯ ಉತ್ತರಾಂಚಲ (ಹೆಸರು ಬದಲಾವಣೆ) ಅಧಿನಿಯಮದ (2006ರ 52) 4ನೇ ಪ್ರಕರಣದ ಮೇರೆಗೆ "ಉತ್ತರಾಂಚಲ" ಎಂಬುದಕ್ಕೆ ಬದಲಾಗಿ (1.1.2007 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
6. 2000 ದ ಇಸವಿಯ ಬಿಹಾರ ಪುನರ್‌ವಿಂಗಡಣೆ ಅಧಿನಿಯಮದ (2000ದ 30) 5ನೇ ಪ್ರಕರಣದ ಮೂಲಕ (15.11.2000 ದಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
7. 1970ನೇ ಇಸವಿಯ ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮದ (1970ರ 53) 4ನೇ ಪ್ರಕರಣದ ಮೂಲಕ "ಹಿಮಾಚಲ ಪ್ರದೇಶ"ಕ್ಕೆ ಸಂಬಂಧಿಸಿದ 2ನೇ ನಮೂದನ್ನು (25-1-1971ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
8. 1971ನೇ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್ ವಿಂಗಡಣೆ) ಅಧಿನಿಯಮದ (1971ರ 81) 9ನೇ ಪ್ರಕರಣದ ಮೂಲಕ ಮಣಿಪುರ ಮತ್ತು ತ್ರಿಪುರಗಳಿಗೆ ಸಂಬಂಧಿಸಿದ ನಮೂದುಗಳನ್ನು (21-1-1972ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.

| | |
|---|---|
| [1][2.]ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು | ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಚೀಫ್ ಕಮೀಷನರನ ಪ್ರಾಂತದಲ್ಲಿ ಅಡಕವಾಗಿದ್ದ ರಾಜ್ಯಕ್ಷೇತ್ರ. |
| [1][3.] [2][ಲಕ್ಷದ್ವೀಪ] | 1956ನೆಯ ಇಸವಿಯ ರಾಜ್ಯಗಳ ಪುನರ್‌ವಿಂಗಡಣೆ ಅಧಿನಿಯಮದ 6ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರ. |
| [3 1][ [4.] ದಾದ್ರ ಮತ್ತು ನಗರ ಹವೇಲಿ | 1961ನೆಯ ಇಸವಿಯ ಆಗಸ್ಟ್ ಹನ್ನೊಂದನೆಯ ದಿನದ ನಿಕಟಪೂರ್ವದಲ್ಲಿ ಸ್ವತಂತ್ರ ದಾದ್ರ ಮತ್ತು ನಗರ ಹವೇಲಿಗಳಲ್ಲಿ ಅಡಕವಾಗಿದ್ದ ರಾಜ್ಯಕ್ಷೇತ್ರ.] |
| [4 1][ [5.] ದಮನ್ ಮತ್ತು ದೀವ್ | 1987ನೆಯ ಇಸವಿಯ ಗೋವಾ, ದಮನ್ ಮತ್ತು ದೀವ್ ಪುನರ್ ವಿಂಗಡಣೆ ಅಧಿನಿಯಮದ 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು]. |
| [5 1][ [6.] [6][ಪುದುಚೆರಿ] | 1962ನೆಯ ಇಸವಿಯ ಆಗಸ್ಟ್ ಹದಿನಾರನೆಯ ದಿನದ ನಿಕಟಪೂರ್ವದಲ್ಲಿ ಪಾಂಡಿಚೆರಿ, ಕಾರೈಕಲ್, ಮಾಹೆ ಮತ್ತು ಯಾನಾಮ್ ಎಂಬ ಹೆಸರಿನಿಂದ ಭಾರತದಲ್ಲಿದ್ದ ಫ್ರೆಂಚ್ ವಸಾಹತುಗಳು ಅಡಕವಾಗಿದ್ದ ರಾಜ್ಯ ಕ್ಷೇತ್ರಗಳು.] |
| [7 1][ [7.] ಚಂಡಿಗಢ | 1966ನೇ ಇಸವಿಯ ಪಂಜಾಬ್ ಪುನರ್‌ವಿಂಗಡಣೆ ಅಧಿನಿಯಮದ 4ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರಗಳು]. |
| [8]* * * * | * * * * |
| [9]* * * * | * * * * |

---

1. 1971ನೇ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್ ವಿಂಗಡಣೆ) ಅಧಿನಿಯಮದ (1971ರ 81) 9ನೇ ಪ್ರಕರಣದ ಮೂಲಕ 4 ರಿಂದ 9ರವರೆಗಿನ ನಮೂದುಗಳಿಗೆ 2 ರಿಂದ 7 ಎಂದು (21-1-1972ರಿಂದ ಜಾರಿಗೆ ಬರುವಂತೆ) ಪುನರ್ ಸಂಖ್ಯೆ ನೀಡಲಾಗಿದೆ.
2. 1973ನೇ ಇಸವಿಯ ಲಕ್‌ದೀವ್, ಮಿನಿಕಾಯ್ ಮತ್ತು ಅಮಿನ್ ದೀವಿ ದ್ವೀಪಗಳ (ಹೆಸರು ಬದಲಾವಣೆ) ಅಧಿನಿಯಮದ (1973ರ 34) 5ನೇ ಪ್ರಕರಣದ ಮೂಲಕ "ಲಕ್‌ದೀವ್, ಮಿನಿಕಾಯ್ ಮತ್ತು ಅಮೀನ್ ದೀವಿ ದ್ವೀಪಗಳು" ಎಂಬುದಕ್ಕೆ ಬದಲಾಗಿ (1-11-1973ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1961ನೇ ಇಸವಿಯ ಸಂವಿಧಾನ (ಹತ್ತನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.
4. 1987ನೇ ಇಸವಿಯ ಗೋವಾ, ದಮನ್ ಮತ್ತು ದೀವ್ ಪುನರ್ ವಿಂಗಡಣೆ ಅಧಿನಿಯಮದ (1987ರ 18) 5ನೇ ಪ್ರಕರಣದ ಮೂಲಕ (30.5.1987ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
5. 1962ನೇ ಇಸವಿಯ ಸಂವಿಧಾನ (ಹದಿನಾಲ್ಕನೇ ತಿದ್ದುಪಡಿ) ಅಧಿನಿಯಮದ 3 ಮತ್ತು 7ನೇ ಪ್ರಕರಣದ ಮೂಲಕ 16.8.1962ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
6. 2006ನೇ ಇಸವಿಯ ಪಾಂಡಿಚೇರಿ (ಹೆಸರು ಬದಲಾವಣೆ) ಅಧಿನಿಯಮದ (2006ರ 44) 5ನೇ ಪ್ರಕರಣದ ಮೂಲಕ "ಪಾಂಡಿಚೇರಿ" ಎಂಬ ಪದಕ್ಕೆ ಬದಲಾಗಿ (1.10.2006 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
7. 1966ನೇ ಇಸವಿಯ ಪಂಜಾಬ್ ಪುನರ್‌ವಿಂಗಡಣೆ ಅಧಿನಿಯಮದ (1966ರ 31) 7ನೇ ಪ್ರಕರಣದ ಮೂಲಕ (1-11-1966ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
8. 1986ನೇ ಇಸವಿಯ ಮಿಜೋರಾಂ ರಾಜ್ಯ ಅಧಿನಿಯಮದ (1986ರ 34) 4ನೇ ಪ್ರಕರಣದ ಮೂಲಕ ಮಿಜೋರಾಂಗೆ ಸಂಬಂಧಿಸಿದ 8ನೇ ನಮೂದನ್ನು ಬಿಟ್ಟುಬಿಡಲಾಗಿದೆ ಮತ್ತು ಅರುಣಾಚಲ ಪ್ರದೇಶಕ್ಕೆ ಸಂಬಂಧಿಸಿದ 9ನೇ ನಮೂದಿಗೆ 8ನೇ ನಮೂದೆಂದು (20.2.1987 ರಿಂದ ಜಾರಿಗೆ ಬರುವಂತೆ) ಪುನರ್ ಸಂಖ್ಯೆ ನೀಡಲಾಗಿದೆ.
9. 1986ನೇ ಇಸವಿಯ ಅರುಣಾಚಲ ಪ್ರದೇಶ ರಾಜ್ಯ ಅಧಿನಿಯಮದ (1986ರ 69) 4ನೇ ಪ್ರಕರಣದ ಮೂಲಕ ಅರುಣಾಚಲ ಪ್ರದೇಶಕ್ಕೆ ಸಂಬಂಧಿಸಿದ 8ನೇ ನಮೂದನ್ನು (20.2.1987 ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.

## ಎರಡನೆಯ ಅನುಸೂಚಿ

[59(3), 65(3), 75(6), 97, 125, 148(3), 158(3), 164(5), 186 ಮತ್ತು 221ನೆಯ ಅನುಚ್ಛೇದಗಳು]

### ಭಾಗ – ಎ

### ರಾಷ್ಟ್ರಪತಿಯ ಮತ್ತು [1] * * * ರಾಜ್ಯಗಳ ರಾಜ್ಯಪಾಲರ ಬಗ್ಗೆ ಉಪಬಂಧಗಳು

1. ರಾಷ್ಟ್ರಪತಿಗೆ ಮತ್ತು [1]*** ರಾಜ್ಯಗಳ ರಾಜ್ಯಪಾಲರಿಗೆ ಈ ಕೆಳಕಂಡ ಮಾಸಿಕ ಉಪಲಬ್ಧಿಗಳು ಸಂದಾಯವಾಗತಕ್ಕದ್ದು, ಎಂದರೆ:–

| | |
|---|---|
| ರಾಷ್ಟ್ರಪತಿ | 10,000 ರೂಪಾಯಿಗಳು* |
| ರಾಜ್ಯದ ರಾಜ್ಯಪಾಲ | 5,500 ರೂಪಾಯಿಗಳು** |

2. ರಾಷ್ಟ್ರಪತಿಗೆ ಮತ್ತು [2]*** ರಾಜ್ಯಗಳ ರಾಜ್ಯಪಾಲರಿಗೆ ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಡೊಮಿನಿಯನ್ ಆಫ್ ಇಂಡಿಯಾದ ಗವರ್ನರ್ ಜನರಲ್‌ಗೆ ಮತ್ತು ಸಂವಾದಿ ಪ್ರಾಂತಗಳ ರಾಜ್ಯಪಾಲರಿಗೆ ಅನುಕ್ರಮವಾಗಿ ಸಂದಾಯವಾಗುತ್ತಿದ್ದ ಭತ್ಯೆಗಳೂ ಸಂದಾಯವಾಗತಕ್ಕದ್ದು.

3. ರಾಷ್ಟ್ರಪತಿಯು ಮತ್ತು [3][ರಾಜ್ಯಗಳ] ರಾಜ್ಯಪಾಲರು ತಮ್ಮ ತಮ್ಮ ಪದಾವಧಿ ಪರ್ಯಂತ ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಗವರ್ನರ್ ಜನರಲ್ ಮತ್ತು ಸಂವಾದಿ ಪ್ರಾಂತಗಳ ರಾಜ್ಯಪಾಲರು ಅನುಕ್ರಮವಾಗಿ ಯಾವ ವಿಶೇಷಾಧಿಕಾರಗಳಿಗೆ ಹಕ್ಕುಳ್ಳವರಾಗಿದ್ದರೋ, ಅವೇ ವಿಶೇಷಾಧಿಕಾರಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

4. ಉಪ–ರಾಷ್ಟ್ರಪತಿಯು ಅಥವಾ ಇತರ ಯಾರೇ ವ್ಯಕ್ತಿಯು ರಾಷ್ಟ್ರಪತಿಯ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವಾಗ ಅಥವಾ ರಾಷ್ಟ್ರಪತಿಯಾಗಿ ಕಾರ್ಯ ನಿರ್ವಹಿಸುತ್ತಿರುವಾಗ ಅವನು ರಾಷ್ಟ್ರಪತಿಯ ಉಪಲಬ್ಧಿಗಳಿಗೆ, ಭತ್ಯೆಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು. ಯಾರೇ ವ್ಯಕ್ತಿಯು ರಾಜ್ಯಪಾಲನ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವಾಗ ಅವನು ರಾಜ್ಯಪಾಲನ ಉಪಲಬ್ಧಿಗಳಿಗೆ, ಭತ್ಯೆಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

[4]* * * * * * *

---

1. 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ (ಎ) ಭಾಗದಲ್ಲಿ ನಿರ್ದಿಷ್ಟಪಡಿಸಿದ" ಎಂಬ ಪದಗಳನ್ನು, ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.

* ಈಗ 1,50,000 ರೂಪಾಯಿಗಳು – 2008 ನೇ ಇಸವಿಯ ರಾಷ್ಟ್ರಪತಿಯ ಉಪಲಬ್ಧಿಗಳು ಮತ್ತು ನಿವೃತ್ತಿವೇತನ (ತಿದ್ದುಪಡಿ) ಅಧಿನಿಯಮದ (2008ರ 28) 2ನೇ ಪ್ರಕರಣವನ್ನು ನೋಡಿ. (1.1.2006 ರಿಂದ ಜಾರಿಗೆ ಬಂದಿದೆ)

** ಈಗ 1,10,000 ರೂಪಾಯಿಗಳು – 2008 ನೇ ಇಸವಿಯ ರಾಜ್ಯಪಾಲರ (ಉಪಲಬ್ಧಿಗಳ, ಭತ್ಯೆಗಳ ಮತ್ತು ವಿಶೇಷ ಹಕ್ಕುಗಳ) (ತಿದ್ದುಪಡಿ) ಅಧಿನಿಯಮದ (2009ರ 1) 3ನೇ ಪ್ರಕರಣವನ್ನು ನೋಡಿ. (1.1.2006 ರಿಂದ ಜಾರಿಗೆ ಬಂದಿದೆ)

2. 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ನಿರ್ದಿಷ್ಟವಾಗಿ ಸೂಚಿತವಾಗತಕ್ಕ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

3. ಅದೇ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಂತಹ ರಾಜ್ಯಗಳ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

4. 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ 'ಬಿ' ಭಾಗವನ್ನು ಬಿಟ್ಟುಬಿಡಲಾಗಿದೆ.

## ಭಾಗ–ಸಿ

### ಲೋಕಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ ರಾಜ್ಯಸಭೆಯ ಸಭಾಪತಿ ಮತ್ತು ಉಪಸಭಾಪತಿ ಮತ್ತು [1]*** ವಿಧಾನಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ [2][ಒಂದು ರಾಜ್ಯದ] ವಿಧಾನಪರಿಷತ್ತಿನ ಸಭಾಪತಿ ಮತ್ತು ಉಪಸಭಾಪತಿ ಇವರಿಗೆ ಸಂಬಂಧಿಸಿದ ಉಪಬಂಧಗಳು.

7. ಲೋಕಸಭೆಯ ಅಧ್ಯಕ್ಷನಿಗೆ ಮತ್ತು ರಾಜ್ಯಸಭೆಯ ಸಭಾಪತಿಗೆ ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಡೊಮಿನಿಯನ್ ಆಫ್ ಇಂಡಿಯಾದ ಸಂವಿಧಾನ ಸಭೆಯ ಅಧ್ಯಕ್ಷನಿಗೆ ಸಂದಾಯವಾಗುತ್ತಿದ್ದಂಥ ಸಂಬಳಗಳು ಮತ್ತು ಭತ್ಯೆಗಳು ಸಂದಾಯವಾಗತಕ್ಕದ್ದು ಮತ್ತು ಲೋಕಸಭೆಯ ಉಪಾಧ್ಯಕ್ಷನಿಗೆ ಮತ್ತು ರಾಜ್ಯಸಭೆಯ ಉಪಸಭಾಪತಿಗೆ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಡೊಮಿನಿಯನ್ ಆಫ್ ಇಂಡಿಯಾದ ಸಂವಿಧಾನ ಸಭೆಯ ಉಪಾಧ್ಯಕ್ಷನಿಗೆ ಸಂದಾಯವಾಗುತ್ತಿದ್ದಂಥ ಸಂಬಳಗಳು ಮತ್ತು ಭತ್ಯೆಗಳು ಸಂದಾಯವಾಗತಕ್ಕದ್ದು.

8. [3]* * * * ವಿಧಾನಸಭೆಯ ಅಧ್ಯಕ್ಷನಿಗೆ ಮತ್ತು ಉಪಾಧ್ಯಕ್ಷನಿಗೆ ಹಾಗೂ [4][ಒಂದು ರಾಜ್ಯದ] ವಿಧಾನಪರಿಷತ್ತಿನ ಸಭಾಪತಿಗೆ ಮತ್ತು ಉಪಸಭಾಪತಿಗೆ ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಅನುಕ್ರಮವಾಗಿ ಸಂವಾದಿ ಪ್ರಾಂತದ ವಿಧಾನಸಭೆಯ ಅಧ್ಯಕ್ಷನಿಗೆ ಮತ್ತು ಉಪಾಧ್ಯಕ್ಷನಿಗೆ ಹಾಗೂ ವಿಧಾನಪರಿಷತ್ತಿನ ಸಭಾಪತಿಗೆ ಮತ್ತು ಉಪಸಭಾಪತಿಗೆ ಸಂದಾಯವಾಗುತ್ತಿದ್ದ ಸಂಬಳಗಳು ಮತ್ತು ಭತ್ಯೆಗಳು ಸಂದಾಯವಾಗತಕ್ಕದ್ದು ಮತ್ತು ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಸಂವಾದಿ ಪ್ರಾಂತದಲ್ಲಿ ಯಾವುದೇ ವಿಧಾನಪರಿಷತ್ತು ಇಲ್ಲದೆ ಇದ್ದಲ್ಲಿ ರಾಜ್ಯದ ವಿಧಾನಪರಿಷತ್ತಿನ ಸಭಾಪತಿಗೆ ಮತ್ತು ಉಪಸಭಾಪತಿಗೆ ಆ ರಾಜ್ಯದ ರಾಜ್ಯಪಾಲನು ನಿರ್ಧರಿಸಬಹುದಾದಂಥ ಸಂಬಳಗಳು ಮತ್ತು ಭತ್ಯೆಗಳು ಸಂದಾಯವಾಗತಕ್ಕದ್ದು.

## ಭಾಗ – ಡಿ

### ಸರ್ವೋಚ್ಚ ನ್ಯಾಯಾಲಯ ಮತ್ತು [5]* * * ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರ ಬಗ್ಗೆ ಉಪಬಂಧಗಳು

9. (1) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ, ಅವರು ವಾಸ್ತವಿಕ ಸೇವೆಯಲ್ಲಿ ವಿನಿಯೋಗಿಸಿದ ಕಾಲಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ದರಗಳಲ್ಲಿ ಮಾಸಿಕ ಸಂಬಳವನ್ನು ಸಂದಾಯ ಮಾಡತಕ್ಕದ್ದು, ಎಂದರೆ:–

| | |
|---|---|
| ಮುಖ್ಯ ನ್ಯಾಯಮೂರ್ತಿ | [6][10,000 ರೂಪಾಯಿಗಳು]* |
| ಇತರ ಯಾರೇ ನ್ಯಾಯಾಧೀಶ | [7][9,000 ರೂಪಾಯಿಗಳು]:** |

---

1. 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ 'ಎ' ಭಾಗದಲ್ಲಿನ ರಾಜ್ಯದ" ಎಂಬ ಪದಗಳನ್ನು, ಅಕ್ಷರವನ್ನು ಬಿಟ್ಟುಬಿಡಲಾಗಿದೆ.
2. ಅದೇ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಯಾವುದೇ ಅಂಥ ರಾಜ್ಯ" ಎಂಬುದರ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. 1956ನೇ ಇಸವಿಯ ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೇ ಅನುಸೂಚಿಯ ಎ ಭಾಗದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯದ" ಎಂಬ ಪದಗಳನ್ನು ಮತ್ತು ಅಕ್ಷರವನ್ನು ಬಿಟ್ಟುಬಿಡಲಾಗಿದೆ.
4. ಅದೇ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಂಥ ರಾಜ್ಯದ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. ಅದೇ 25ನೇ ಪ್ರಕರಣದ ಮೂಲಕ "ಮೊದಲನೇ ಅನುಸೂಚಿಯ ಎ ಭಾಗದಲ್ಲಿನ ರಾಜ್ಯಗಳ" ಎಂಬ ಪದಗಳನ್ನು ಮತ್ತು ಅಕ್ಷರವನ್ನು ಬಿಟ್ಟುಬಿಡಲಾಗಿದೆ.
6. 1986ನೇ ಇಸವಿಯ ಸಂವಿಧಾನ (ಐವತ್ತನಾಲ್ಕನೇ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ "5000 ರೂಪಾಯಿಗಳಿಗೆ" ಬದಲಾಗಿ (1.4.1986ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
7. ಅದೇ 4ನೇ ಪ್ರಕರಣದ ಮೂಲಕ "4000 ರೂಪಾಯಿಗಳಿಗೆ" ಬದಲಾಗಿ (1.4.1986 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

* ಈಗ 1,00,000 ರೂಪಾಯಿಗಳು– ಅಧಿನಿಯಮ ಸಂಖ್ಯೆ 2009ರ 23ರ 8ನೇ ಪ್ರಕರಣ ನೋಡಿ. (1.1.2006 ರಿಂದ ಜಾರಿಗೆ ಬಂದಿದೆ)

** ಈಗ 90,000 ರೂಪಾಯಿಗಳು– ಅಧಿನಿಯಮ ಸಂಖ್ಯೆ 2009ರ 23ರ 8ನೇ ಪ್ರಕರಣ ನೋಡಿ. (1.1.2006 ರಿಂದ ಜಾರಿಗೆ ಬಂದಿದೆ)

ಪರಂತು, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನು ನೇಮಕಗೊಂಡ ಸಮಯದಲ್ಲಿ ಭಾರತ ಸರ್ಕಾರದ ಅಥವಾ ಅದರ ಯಾವುದೇ ಪೂರ್ವವರ್ತಿ ಸರ್ಕಾರಗಳ ಅಧೀನದಲ್ಲಿ ಅಥವಾ ಒಂದು ರಾಜ್ಯ ಸರ್ಕಾರದ ಅಥವಾ ಅದರ ಯಾವುದೇ ಪೂರ್ವವರ್ತಿ ಸರ್ಕಾರಗಳ ಅಧೀನದಲ್ಲಿ ಯಾವುದೇ ಹಿಂದಿನ ಸೇವೆಗೆ ಸಂಬಂಧಿಸಿದಂತೆ ನಿವೃತ್ತಿ ವೇತನವನ್ನು (ಅಸಮರ್ಥತೆ ಅಥವಾ ಗಾಯದ ನಿವೃತ್ತಿ ವೇತನವನ್ನು ಹೊರತುಪಡಿಸಿ) ಪಡೆಯುತ್ತಿದ್ದರೆ, ಸರ್ವೋಚ್ಚ ನ್ಯಾಯಾಲಯದಲ್ಲಿ ಅವನ ಸೇವೆಗೆ ಸಂಬಂಧಿಸಿದಂತೆ ಅವನ ಸಂಬಳದಲ್ಲಿ [1][ಈ ಕೆಳಕಂಡವುಗಳನ್ನು ಕಳೆಯತಕ್ಕದ್ದು, ಎಂದರೆ,-

(ಎ) ಆ ನಿವೃತ್ತಿವೇತನದ ಮೊಬಲಗು, ಮತ್ತು

(ಬಿ) ಅಂಥ ನೇಮಕಕ್ಕೆ ಮುಂಚೆ ಅವನು, ತನ್ನ ಹಿಂದಿನ ಸೇವೆಗೆ ಸಂಬಂಧಿಸಿದಂತೆ ಅವನಿಗೆ ಸಲ್ಲಬೇಕಾದ ನಿವೃತ್ತಿವೇತನದ ಒಂದು ಭಾಗದ ಬದಲಾಗಿ ಅದರ ಪರಿವರ್ತಿತ ಮೌಲ್ಯವನ್ನು ಪಡೆದಿದ್ದರೆ, ನಿವೃತ್ತಿವೇತನದ ಆ ಭಾಗದ ಮೊಬಲಗು, ಮತ್ತು

(ಸಿ) ಅಂಥ ನೇಮಕಕ್ಕೆ ಮುಂಚೆ ಅವನು, ತನ್ನ ಹಿಂದಿನ ಸೇವೆಗೆ ಸಂಬಂಧಿಸಿದಂತೆ ತನ್ನ ನಿವೃತ್ತಿ ಉಪದಾನವನ್ನು ಪಡೆದಿದ್ದರೆ, ಆ ಉಪದಾನಕ್ಕೆ ಸಮವಾದ ನಿವೃತ್ತಿವೇತನದ ಮೊಬಲಗು.]

(2) ಸರ್ವೋಚ್ಚ ನ್ಯಾಯಾಲಯದ ಪ್ರತಿಯೊಬ್ಬ ನ್ಯಾಯಾಧೀಶನು ಬಾಡಿಗೆಯನ್ನು ಸಂದಾಯಮಾಡದೆ ಅಧಿಕೃತ ನಿವಾಸವನ್ನು ಬಳಸಲು ಹಕ್ಕುಳ್ಳವನಾಗಿರತಕ್ಕದ್ದು.

(3) ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಯಾರೇ ನ್ಯಾಯಾಧೀಶನು,-

(ಎ) ಫೆಡರಲ್ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಪದಧಾರಣ ಮಾಡಿದ್ದು, ಸಂವಿಧಾನದ ಪ್ರಾರಂಭದಲ್ಲಿ 374ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಸರ್ವೋಚ್ಚ ನ್ಯಾಯಾಲಯದ ಮುಖ್ಯನ್ಯಾಯಮೂರ್ತಿಯಾಗಿದ್ದರೆ, ಅಥವಾ

(ಬಿ) ಫೆಡರಲ್ ನ್ಯಾಯಾಲಯದ ಯಾರೇ ಇತರ ನ್ಯಾಯಾಧೀಶನಾಗಿ ಪದಧಾರಣ ಮಾಡಿದ್ದು, ಸಂವಿಧಾನದ ಪ್ರಾರಂಭದಲ್ಲಿ ಸದರಿ ಖಂಡದ ಮೇರೆಗೆ ಸರ್ವೋಚ್ಚ ನ್ಯಾಯಾಲಯದ (ಮುಖ್ಯ ನ್ಯಾಯಮೂರ್ತಿಯನ್ನು ಹೊರತುಪಡಿಸಿ) ಒಬ್ಬ ನ್ಯಾಯಾಧೀಶನಾಗಿದ್ದರೆ

– ಅವನು ಅಂಥ ಮುಖ್ಯ ನ್ಯಾಯಮೂರ್ತಿಯಾಗಿ ಅಥವಾ ಇತರ ನ್ಯಾಯಾಧೀಶನಾಗಿ ಪದಧಾರಣ ಮಾಡಿರುವ ಅವಧಿಯಲ್ಲಿ ಅವನಿಗೆ ಈ ಪ್ಯಾರಾದ (2)ನೇ ಉಪ–ಪ್ಯಾರಾದಲ್ಲಿ ಇರುವುದು ಯಾವುದೂ ಅನ್ವಯಿಸತಕ್ಕದ್ದಲ್ಲ ಮತ್ತು ಹಾಗೆ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿರುವ ಅಥವಾ ಇತರ ನ್ಯಾಯಾಧೀಶನಾಗಿರುವ ಪ್ರತಿಯೊಬ್ಬ ನ್ಯಾಯಾಧೀಶನು ಅಂಥ ಮುಖ್ಯ ನ್ಯಾಯಮೂರ್ತಿಯಾಗಿ ಅಥವಾ ಸಂದರ್ಭಾನುಸಾರ ಇತರ ನ್ಯಾಯಾಧೀಶನಾಗಿ ವಾಸ್ತವಿಕ ಸೇವೆಯಲ್ಲಿ ವಿನಿಯೋಗಿಸಿದ ಕಾಲಕ್ಕೆ ಸಂಬಂಧಿಸಿದಂತೆ ಈ ಪ್ಯಾರಾದ (1) ನೆಯ ಉಪಪ್ಯಾರಾದಲ್ಲಿ ನಿರ್ದಿಷ್ಟಪಡಿಸಿದ ಸಂಬಳದ ಜೊತೆಗೆ, ಹಾಗೆ ನಿರ್ದಿಷ್ಟಪಡಿಸಿದ ಸಂಬಳ ಮತ್ತು ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಅವನು ಪಡೆಯುತ್ತಿದ್ದ ಸಂಬಳದ ನಡುವಣ ವ್ಯತ್ಯಾಸಕ್ಕೆ ಸಮನಾದ ಮೊಬಲಗನ್ನು ವಿಶೇಷ ವೇತನವಾಗಿ ಪಡೆಯಲು ಅವನು ಹಕ್ಕುಳ್ಳವನಾಗಿರತಕ್ಕದ್ದು.

(4) ಸರ್ವೋಚ್ಚ ನ್ಯಾಯಾಲಯದ ಪ್ರತಿಯೊಬ್ಬ ನ್ಯಾಯಾಧೀಶನು ಕರ್ತವ್ಯದ ನಿಮಿತ್ತ ಭಾರತದ ರಾಜ್ಯಕ್ಷೇತ್ರದಲ್ಲಿ ಪ್ರಯಾಣಿಸುವಾಗ ತಗಲುವ ವೆಚ್ಚವನ್ನು ತುಂಬಿಕೊಳ್ಳಲು ರಾಷ್ಟ್ರಪತಿಯು ಕಾಲಕಾಲಕ್ಕೆ ನಿಯಮಿಸಬಹುದಾದಂಥ ಯುಕ್ತ ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಅಂಥ ಪ್ರಯಾಣದ ಸಂಬಂಧದಲ್ಲಿ ನಿಯಮಿಸಬಹುದಾದಂಥ ಯುಕ್ತ ಸೌಲಭ್ಯಗಳನ್ನು ಅವನಿಗೆ ಒದಗಿಸತಕ್ಕದ್ದು.

(5) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಗೈರು ಹಾಜರಿ ರಜೆಗೆ (ರಜೆಯ ಭತ್ಯಗಳು ಸೇರಿ) ಮತ್ತು ನಿವೃತ್ತಿ ವೇತನಕ್ಕೆ ಸಂಬಂಧಪಟ್ಟಂತೆ ಅವರ ಹಕ್ಕುಗಳ ವಿಷಯದಲ್ಲಿ ಫೆಡರಲ್ ನ್ಯಾಯಾಲಯದ ನ್ಯಾಯಾಧೀಶರಿಗೆ ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಅನ್ವಯಿಸುತ್ತಿದ್ದಂಥ ಉಪಬಂಧಗಳೇ ಅನ್ವಯವಾಗತಕ್ಕದ್ದು.

1. 1956ನೇ ಇಸವಿಯ ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮದ 25ನೇ ಪ್ರಕರಣದ ಮೂಲಕ "ಆ ನಿವೃತ್ತಿ ವೇತನದ ಮೊಬಲಗನ್ನು ಕಳೆಯತಕ್ಕದ್ದು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

10. [1][(1) ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರಿಗೆ, ಅವರು ವಾಸ್ತವಿಕ ಸೇವೆಯಲ್ಲಿ ವಿನಿಯೋಗಿಸಿದ ಕಾಲಕ್ಕೆ ಸಂಬಂಧಿಸಿದಂತೆ, ಕೆಳಕಂಡ ದರಗಳಲ್ಲಿ ಮಾಸಿಕ ಸಂಬಳವನ್ನು ಸಂದಾಯ ಮಾಡತಕ್ಕದ್ದು, ಎಂದರೆ:–

ಮುಖ್ಯ ನ್ಯಾಯಮೂರ್ತಿ [2][9,000 ರೂಪಾಯಿಗಳು]*

ಇತರ ಯಾರೇ ನ್ಯಾಯಾಧೀಶ [3][8,000 ರೂಪಾಯಿಗಳು]:**

ಪರಂತು, ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಗೊಂಡ ಸಮಯದಲ್ಲಿ ಅವನಿಗೆ ಭಾರತ ಸರ್ಕಾರದ ಅಥವಾ ಅದರ ಯಾವುದೇ ಪೂರ್ವವರ್ತಿ ಸರ್ಕಾರಗಳ ಅಧೀನದಲ್ಲಿ ಅಥವಾ ಒಂದು ರಾಜ್ಯ ಸರ್ಕಾರದ ಅಥವಾ ಅದರ ಯಾವುದೇ ಪೂರ್ವವರ್ತಿ ಸರ್ಕಾರಗಳ ಅಧೀನದಲ್ಲಿ ಹಿಂದಿನ ಯಾವುದೇ ಸೇವೆಗೆ ಸಂಬಂಧಿಸಿದಂತೆ ನಿವೃತ್ತಿವೇತನವನ್ನು (ಅಸಮರ್ಥತೆಯ ಅಥವಾ ಗಾಯದ ನಿವೃತ್ತಿ ವೇತನವನ್ನು ಹೊರತುಪಡಿಸಿ) ಪಡೆಯುತ್ತಿದ್ದರೆ, ಉಚ್ಚ ನ್ಯಾಯಾಲಯದಲ್ಲಿನ ಸೇವೆಗೆ ಸಂಬಂಧಿಸಿದಂತೆ ಅವನ ಸಂಬಳದಲ್ಲಿ ಈ ಕೆಳಕಂಡವುಗಳನ್ನು ಕಳೆಯತಕ್ಕದ್ದು, ಎಂದರೆ:–

(ಎ) ಆ ನಿವೃತ್ತಿ ವೇತನದ ಮೊಬಲಗು, ಮತ್ತು

(ಬಿ) ಅಂಥ ನೇಮಕಕ್ಕೆ ಮುಂಚೆ ಅವನು, ತನ್ನ ಹಿಂದಿನ ಸೇವೆಗೆ ಸಂಬಂಧಿಸಿದಂತೆ ಅವನಿಗೆ ಸಲ್ಲಬೇಕಾದ ನಿವೃತ್ತಿವೇತನದ ಒಂದು ಭಾಗದ ಬದಲಾಗಿ ಅದರ ಪರಿವರ್ತಿತ ಮೌಲ್ಯವನ್ನು ಪಡೆದಿದ್ದರೆ, ನಿವೃತ್ತಿ ವೇತನದ ಆ ಭಾಗದ ಮೊಬಲಗು, ಮತ್ತು

(ಸಿ) ಅಂಥ ನೇಮಕಕ್ಕೆ ಮುಂಚೆ ಅವನು ತನ್ನ ಹಿಂದಿನ ಸೇವೆಗೆ ಸಂಬಂಧಿಸಿದಂತೆ ತನ್ನ ನಿವೃತ್ತಿ ಉಪದಾನವನ್ನು ಪಡೆದಿದ್ದರೆ, ಆ ಉಪದಾನಕ್ಕೆ ಸಮನಾದ ನಿವೃತ್ತಿ ವೇತನದ ಮೊಬಲಗು.]

(2) ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ,-

(ಎ) ಯಾವುದೇ ಪ್ರಾಂತದಲ್ಲಿನ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಪದಧಾರಣ ಮಾಡಿದ್ದು ಮತ್ತು ಸಂವಿಧಾನದ ಪ್ರಾರಂಭದಲ್ಲಿ 376ನೆಯ ಅನುಚ್ಛೇದದ (1) ನೆಯ ಖಂಡದ ಮೇರೆಗೆ ಸಂವಾದಿ ರಾಜ್ಯದಲ್ಲಿನ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ಅಥವಾ

(ಬಿ) ಯಾವುದೇ ಪ್ರಾಂತದಲ್ಲಿನ ಉಚ್ಚನ್ಯಾಯಾಲಯದ ಇತರ ಯಾರೇ ನ್ಯಾಯಾಧೀಶನಾಗಿ ಪದಧಾರಣ ಮಾಡಿದ್ದು, ಸಂವಿಧಾನದ ಪ್ರಾರಂಭದಲ್ಲಿ ಸದರಿ ಖಂಡದ ಮೇರೆಗೆ ಸಂವಾದಿ ರಾಜ್ಯದಲ್ಲಿನ ಉಚ್ಚನ್ಯಾಯಾಲಯದ (ಮುಖ್ಯ ನ್ಯಾಯಮೂರ್ತಿಯನ್ನು ಹೊರತುಪಡಿಸಿ) ನ್ಯಾಯಾಧೀಶನಾಗಿರುವ ಪ್ರತಿಯೊಬ್ಬ ವ್ಯಕ್ತಿಯು

– ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಈ ಪ್ಯಾರಾದ (1) ನೆಯ ಉಪಪ್ಯಾರಾದಲ್ಲಿ ನಿರ್ದಿಷ್ಟಪಡಿಸಿದ್ದಕ್ಕಿಂತ ಹೆಚ್ಚಿನ ದರದಲ್ಲಿ ಸಂಬಳವನ್ನು ಪಡೆಯುತ್ತಿದ್ದರೆ ಅಂಥ ಮುಖ್ಯ ನ್ಯಾಯಮೂರ್ತಿಯಾಗಿ ಅಥವಾ ಸಂದರ್ಭಾನುಸಾರ ಇತರ ನ್ಯಾಯಾಧೀಶನಾಗಿ ವಾಸ್ತವಿಕ ಸೇವೆಯಲ್ಲಿ ವಿನಿಯೋಗಿಸಿದ ಕಾಲಕ್ಕೆ ಸಂಬಂಧಿಸಿದಂತೆ ಸದರಿ ಉಪಪ್ಯಾರಾದಲ್ಲಿ ನಿರ್ದಿಷ್ಟಪಡಿಸಿರುವ ಸಂಬಳದ ಜೊತೆಗೆ, ಹಾಗೆ ನಿರ್ದಿಷ್ಟಪಡಿಸಿರುವ ಸಂಬಳ ಮತ್ತು ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಅವನು ಪಡೆಯುತ್ತಿದ್ದ ಸಂಬಳದ ನಡುವಣ ವ್ಯತ್ಯಾಸಕ್ಕೆ ಸಮನಾದ ಮೊಬಲಗನ್ನು ವಿಶೇಷ ವೇತನವಾಗಿ ಪಡೆಯಲು ಅವನು ಹಕ್ಕುಳ್ಳವನಾಗಿರತಕ್ಕದ್ದು.

[4][(3) 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ, ಯಾರೇ ವ್ಯಕ್ತಿಯು ಮೊದಲನೆಯ ಅನುಸೂಚಿಯ ಬಿ ಭಾಗದಲ್ಲಿ ನಿರ್ದಿಷ್ಟಪಡಿಸಿರುವ ಒಂದು ರಾಜ್ಯದ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಪದಧಾರಣ ಮಾಡಿದ್ದು, ಸಂವಿಧಾನದ ಪ್ರಾರಂಭದಲ್ಲಿ ಸದರಿ ಅಧಿನಿಯಮದಿಂದ ತಿದ್ದುಪಡಿಯಾದಂತೆ ಸದರಿ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ರಾಜ್ಯದ

---

1. 1956ನೇ ಇಸವಿಯ ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮದ 25ನೇ ಪ್ರಕರಣದ ಮೂಲಕ (1)ನೇ ಉಪಪ್ಯಾರಾಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1986ನೇ ಇಸವಿಯ ಸಂವಿಧಾನ (ಐವತ್ತನಾಲ್ಕನೇ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ "4000 ರೂಪಾಯಿಗಳಿಗೆ" ಬದಲಾಗಿ (1.4.1986 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. ಅದೇ 4ನೇ ಪ್ರಕರಣದ ಮೂಲಕ "3,500 ರೂಪಾಯಿಗಳಿಗೆ" ಬದಲಾಗಿ (1.4.1986 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

* ಈಗ "90,000 ರೂಪಾಯಿಗಳು", 2009ರ ಅಧಿನಿಯಮ ಸಂಖ್ಯೆ 23ರ 2ನೇ ಪ್ರಕರಣವನ್ನು ನೋಡಿ. (1.1.2006 ರಿಂದ ಜಾರಿಗೆ ಬಂದಿದೆ)

** ಈಗ "80,000 ರೂಪಾಯಿಗಳು", 2009ರ ಅಧಿನಿಯಮ ಸಂಖ್ಯೆ 23ರ 2ನೇ ಪ್ರಕರಣವನ್ನು ನೋಡಿ. (1.1.2006 ರಿಂದ ಜಾರಿಗೆ ಬಂದಿದೆ)

4. 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 25ನೆಯ ಪ್ರಕರಣದ ಮೂಲಕ (3)ನೆಯ ಮತ್ತು (4)ನೆಯ ಉಪಪ್ಯಾರಾಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿದ್ದು, ಅವನು ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ತನ್ನ ಸಂಬಳದ ಜೊತೆಗೆ ಭತ್ಯವಾಗಿ ಯಾವುದೇ ಮೊಬಲಗನ್ನು ಪಡೆಯುತ್ತಿದ್ದರೆ, ಹಾಗೆ ಮುಖ್ಯನ್ಯಾಯಮೂರ್ತಿಯಾಗಿ ವಾಸ್ತವಿಕ ಸೇವೆಯಲ್ಲಿ ವಿನಿಯೋಗಿಸಿದ ಕಾಲಕ್ಕೆ ಸಂಬಂಧಿಸಿದಂತೆ, ಈ ಪ್ಯಾರಾದ (1) ನೆಯ ಉಪಪ್ಯಾರಾದಲ್ಲಿ ನಿರ್ದಿಷ್ಟಪಡಿಸಿದ ಸಂಬಳದ ಜೊತೆಗೆ ಅಷ್ಟೇ ಮೊಬಲಗನ್ನು ಭತ್ಯವಾಗಿ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.]

11. ಈ ಭಾಗದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮುಖ್ಯನ್ಯಾಯಮೂರ್ತಿ" ಎಂಬ ಪದವು ಕಾರ್ಯಾರ್ಥ ಮುಖ್ಯನ್ಯಾಯಮೂರ್ತಿಯನ್ನು ಒಳಗೊಳ್ಳುತ್ತದೆ ಮತ್ತು "ನ್ಯಾಯಾಧೀಶ" ಎಂಬುದು ಅಡ್‌ಹಾಕ್ ನ್ಯಾಯಾಧೀಶನನ್ನು ಒಳಗೊಳ್ಳುತ್ತದೆ;

(ಬಿ) "ವಾಸ್ತವಿಕ ಸೇವೆ" ಎಂಬುದರಲ್ಲಿ,-

(i) ಒಬ್ಬ ನ್ಯಾಯಾಧೀಶನು ನ್ಯಾಯಾಧೀಶನಾಗಿ ಕರ್ತವ್ಯ ನಿರ್ವಹಿಸಲು ವಿನಿಯೋಗಿಸಿದ ಕಾಲ ಅಥವಾ ರಾಷ್ಟ್ರಪತಿಯ ಕೋರಿಕೆಯಂತೆ ಅವನು ಕೈಗೊಳ್ಳಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವಾಗ ವಿನಿಯೋಗಿಸಿದ ಕಾಲ;

(ii) ಆ ನ್ಯಾಯಾಧೀಶನು ಯಾವ ಕಾಲದಲ್ಲಿ ರಜೆಯ ಮೇಲೆ ಗೈರುಹಾಜರಾಗಿದ್ದನೋ ಆ ಯಾವುದೇ ಕಾಲವನ್ನು ಹೊರತುಪಡಿಸಿ, ಇತರ ದೀರ್ಘರಜೆ ಕಾಲಗಳು; ಮತ್ತು

(iii) ಒಂದು ಉಚ್ಚನ್ಯಾಯಾಲಯದಿಂದ ಸರ್ವೋಚ್ಚ ನ್ಯಾಯಾಲಯಕ್ಕೆ ಅಥವಾ ಒಂದು ಉಚ್ಚ ನ್ಯಾಯಾಲಯದಿಂದ ಮತ್ತೊಂದು ಉಚ್ಚ ನ್ಯಾಯಾಲಯಕ್ಕೆ ವರ್ಗವಾದಾಗ ಸೇರಲು ಬೇಕಾದ ಕಾಲ

- ಇವುಗಳು ಒಳಗೊಳ್ಳುತ್ತವೆ.

## ಭಾಗ - ಇ

### ಭಾರತದ ಲೆಕ್ಕನಿಯಂತ್ರಕ- ಹಾಗೂ- ಮಹಾಲೆಕ್ಕಪರಿಶೋಧಕನ ಬಗ್ಗೆ ಉಪಬಂಧಗಳು

12. (1) ಭಾರತದ ಲೆಕ್ಕ ನಿಯಂತ್ರಕ- ಹಾಗೂ- ಮಹಾ ಲೆಕ್ಕಪರಿಶೋಧಕನಿಗೆ ಮಾಸಿಕ *ನಾಲ್ಕು ಸಾವಿರ ರೂಪಾಯಿ ದರದಂತೆ ಸಂಬಳವನ್ನು ಸಂದಾಯಮಾಡತಕ್ಕದ್ದು.

(2) ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಭಾರತದ ಮಹಾ ಲೆಕ್ಕಪರಿಶೋಧಕನಾಗಿ ಪದಧಾರಣ ಮಾಡಿದ್ದು, ಸಂವಿಧಾನದ ಪ್ರಾರಂಭದಂದು 377ನೆಯ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕನಿಯಂತ್ರಕ- ಹಾಗೂ- ಮಹಾಲೆಕ್ಕಪರಿಶೋಧಕನಾಗಿರುವ ವ್ಯಕ್ತಿಯು ಈ ಪ್ಯಾರಾದ (1) ನೆಯ ಉಪಪ್ಯಾರಾದಲ್ಲಿ ನಿರ್ದಿಷ್ಟಪಡಿಸಿದ ಸಂಬಳದ ಜೊತೆಗೆ, ಹಾಗೆ ನಿರ್ದಿಷ್ಟಪಡಿಸಿದ ಸಂಬಳದ ಮತ್ತು ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಅವನು ಭಾರತದ ಮಹಾಲೆಕ್ಕಪರಿಶೋಧಕನಾಗಿ ಪಡೆಯುತ್ತಿದ್ದ ಸಂಬಳದ ನಡುವಣ ವ್ಯತ್ಯಾಸಕ್ಕೆ ಸಮನಾದ ಮೊಬಲಗನ್ನು ವಿಶೇಷ ವೇತನವಾಗಿ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(3) ಭಾರತದ ಲೆಕ್ಕನಿಯಂತ್ರಕ-ಹಾಗೂ-ಮಹಾಲೆಕ್ಕಪರಿಶೋಧಕನ ಗೈರುಹಾಜರಿ ರಜೆಗೆ ಮತ್ತು ನಿವೃತ್ತಿವೇತನ ಹಾಗೂ ಇತರ ಸೇವಾಷರತ್ತುಗಳಿಗೆ ಸಂಬಂಧಪಟ್ಟಂತೆ ಅವನ ಹಕ್ಕುಗಳ ವಿಷಯದಲ್ಲಿ, ಈ ಸಂವಿಧಾನದ ಪ್ರಾರಂಭದ ನಿಕಟಪೂರ್ವದಲ್ಲಿ ಭಾರತದ ಮಹಾಲೆಕ್ಕಪರಿಶೋಧಕನಿಗೆ ಅನ್ವಯಿಸುತ್ತಿದ್ದ ಉಪಬಂಧಗಳೇ ಅನ್ವಯಿಸತಕ್ಕದ್ದು ಅಥವಾ ಸಂದರ್ಭಾನುಸಾರ ಅನ್ವಯವಾಗುವುದು ಮುಂದುವರೆಯತಕ್ಕದ್ದು ಮತ್ತು ಆ ಉಪಬಂಧಗಳಲ್ಲಿ ಗವರ್ನರ್ ಜನರಲ್‌ಗೆ ಮಾಡಿರುವ ಎಲ್ಲ ಉಲ್ಲೇಖಗಳನ್ನು, ರಾಷ್ಟ್ರಪತಿಗೆ ಮಾಡಿರುವ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

---

* ಭಾರತದ ಲೆಕ್ಕನಿಯಂತ್ರಕ-ಹಾಗೂ-ಮಹಾಲೆಕ್ಕ ಪರಿಶೋಧಕನಿಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಧೀಶರ ಸಂಬಳಕ್ಕೆ ಸಮನಾದ ಸಂಬಳವನ್ನು ಸಂದಾಯ ಮಾಡತಕ್ಕದ್ದು. 1971 ನೇ ಇಸವಿಯ ಲೆಕ್ಕನಿಯಂತ್ರಕ- ಹಾಗೂ- ಮಹಾಲೆಕ್ಕ ಪರಿಶೋಧಕನ (ಕರ್ತವ್ಯಗಳ, ಅಧಿಕಾರಗಳ ಮತ್ತು ಸೇವಾ ಷರತ್ತುಗಳ) ಅಧಿನಿಯಮದ (1971ರ 56) 3ನೇ ಪ್ರಕರಣವನ್ನು ನೋಡಿ. 1998ನೇ ಇಸವಿಯ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ (ಸೇವಾ ಷರತ್ತುಗಳ) ಅಧಿನಿಯಮದ (1998ರ 18) 7ನೇ ಪ್ರಕರಣದ ಮೂಲಕ (1.1.1996 ರಿಂದ ಜಾರಿಗೆ ಬರುವಂತೆ) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಸಂಬಳವನ್ನು ತಿಂಗಳಿಗೆ 30,000 ರೂಪಾಯಿಗಳಿಗೆ ಹೆಚ್ಚಿಸಲಾಗಿತ್ತು. ಈಗ 90,000 ರೂಪಾಯಿ ಆಗಿದೆ. 2009ರ ಅಧಿನಿಯಮ ಸಂಖ್ಯೆ 23ರ 8ನೇ ಪ್ರಕರಣ ನೋಡಿ.

## ಮೂರನೆಯ ಅನುಸೂಚಿ

[75(4), 99, 124(6), 148(2), 164(3), 188 ಮತ್ತು 219ನೆಯ ಅನುಚ್ಛೇದಗಳು]*

### ಪ್ರಮಾಣವಚನಗಳ ಅಥವಾ ಪ್ರತಿಜ್ಞಾ ವಚನಗಳ ನಮೂನೆಗಳು

### I

**ಒಕ್ಕೂಟದ ಮಂತ್ರಿಯ ಪದದ ಪ್ರಮಾಣವಚನದ ನಮೂನೆ:-**

"———————— ಎಂಬ ಹೆಸರಿನ ನಾನು ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ, [1][ನಾನು ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿಹಿಡಿಯುತ್ತೇನೆಂದೂ,] ಒಕ್ಕೂಟದ ಮಂತ್ರಿಯಾಗಿ ನನ್ನ ಕರ್ತವ್ಯಗಳನ್ನು ಶ್ರದ್ಧಾಪೂರ್ವಕವಾಗಿ ಮತ್ತು ಅಂತಃಕರಣಪೂರ್ವಕವಾಗಿ ನಿರ್ವಹಿಸುತ್ತೇನೆಂದು ಮತ್ತು ಭಯ ಅಥವಾ ಪಕ್ಷಪಾತವಿಲ್ಲದೆ, ರಾಗದ್ವೇಷವಿಲ್ಲದೆ ಎಲ್ಲ ಬಗೆಯ ಜನರಿಗೆ, ಸಂವಿಧಾನಕ್ಕೆ ಮತ್ತು ಕಾನೂನಿಗೆ ಅನುಸಾರವಾಗಿ ನ್ಯಾಯವಾದುದನ್ನು ಮಾಡುತ್ತೇನೆಂದೂ, ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ / ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

### II

**ಒಕ್ಕೂಟ ಮಂತ್ರಿಯ ಗೋಪ್ಯತಾ ಪಾಲನಾ ಪ್ರಮಾಣವಚನದ ನಮೂನೆ:-**

"———————— ಎಂಬ ಹೆಸರಿನ ನಾನು ಒಕ್ಕೂಟ ಮಂತ್ರಿಯಾಗಿ ನನ್ನ ಪರ್ಯಾಲೋಚನೆಗೆ ತರಲಾಗುವ ಅಥವಾ ನನಗೆ ತಿಳಿದುಬರುವ ಯಾವುದೇ ವಿಷಯವನ್ನು, ಒಕ್ಕೂಟದ ಮಂತ್ರಿಯಾಗಿ ನನ್ನ ಕರ್ತವ್ಯಗಳ ಯುಕ್ತ ನಿರ್ವಹಣೆಗೆ ಅಗತ್ಯವಾಗಬಹುದಾದ ಸಂದರ್ಭದಲ್ಲಲ್ಲದೆ ಅನ್ಯಥಾ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಿಳಿಸುವುದಿಲ್ಲ ಅಥವಾ ಬಹಿರಂಗಪಡಿಸುವುದಿಲ್ಲ ಎಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ / ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

### [2][III

### ಎ

**ಸಂಸತ್ತಿನ ಚುನಾವಣೆಗೆ ನಿಲ್ಲುವ ಅಭ್ಯರ್ಥಿಯು ಮಾಡಬೇಕಾದ ಪ್ರಮಾಣ ವಚನದ ಅಥವಾ ಪ್ರತಿಜ್ಞಾ ವಚನದ ನಮೂನೆ:-**

"———————— ಎಂಬ ಹೆಸರಿನ ನಾನು, ರಾಜ್ಯಸಭೆಯಲ್ಲಿನ (ಅಥವಾ ಲೋಕಸಭೆಯಲ್ಲಿನ) ಒಂದು ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಒಬ್ಬ ಅಭ್ಯರ್ಥಿ ಎಂದು ನಾಮನಿರ್ದೇಶನ ಹೊಂದಿದವನಾಗಿ ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ, ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿಹಿಡಿಯುತ್ತೇನೆಂದೂ ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ / ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

---

* 84 (ಎ) ಮತ್ತು 173 (ಎ) ಅನುಚ್ಛೇದಗಳನ್ನು ಸಹ ನೋಡಿ.

1. 1963ನೇ ಇಸವಿಯ ಸಂವಿಧಾನ (ಹದಿನಾರನೆಯ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.

2. 1963ನೇ ಇಸವಿಯ ಸಂವಿಧಾನ (ಹದಿನಾರನೆಯ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ 3ನೇ ನಮೂನೆಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

## ಬಿ

**ಸಂಸತ್ತಿನ ಸದಸ್ಯನು ಮಾಡಬೇಕಾದ ಪ್ರಮಾಣವಚನದ ಅಥವಾ ಪ್ರತಿಜ್ಞಾ ವಚನದ ನಮೂನೆ:-**

"_________ ಎಂಬ ಹೆಸರಿನ ನಾನು, ರಾಜ್ಯಸಭೆಯ (ಅಥವಾ ಲೋಕಸಭೆಯ) ಸದಸ್ಯನಾಗಿ ಚುನಾಯಿತನಾದವನಾಗಿ (ಅಥವಾ ನಾಮ ನಿರ್ದೇಶನ ಹೊಂದಿದವನಾಗಿ) ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ, ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿಹಿಡಿಯುತ್ತೇನೆಂದೂ ಮತ್ತು ನಾನು ಈಗ ವಹಿಸಿಕೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ, ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ / ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".]

## IV

**ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನು ಮತ್ತು ಭಾರತದ ಲೆಕ್ಕನಿಯಂತ್ರಕ-ಹಾಗೂ-ಮಹಾಲೆಕ್ಕಪರಿಶೋಧಕನು ಮಾಡಬೇಕಾದ ಪ್ರಮಾಣವಚನದ ಅಥವಾ ಪ್ರತಿಜ್ಞಾ ವಚನದ ನಮೂನೆ:-**

"_________ ಎಂಬ ಹೆಸರಿನ ನಾನು, ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನಾಗಿ (ಅಥವಾ ನ್ಯಾಯಾಧೀಶನಾಗಿ) (ಅಥವಾ ಭಾರತದ ಲೆಕ್ಕನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕನಾಗಿ) ನೇಮಕಗೊಂಡವನಾಗಿ ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ, [1][ನಾನು ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುತ್ತೇನೆಂದೂ] ಯುಕ್ತವಾಗಿ ಮತ್ತು ಶ್ರದ್ಧಾಪೂರ್ವಕವಾಗಿ ಮತ್ತು ನನ್ನ ಸಾಮರ್ಥ್ಯ, ತಿಳುವಳಿಕೆ ಮತ್ತು ವಿವೇಚನೆ ಯಷ್ಟರಮಟ್ಟಿಗೆ ನನ್ನ ಪದದ ಕರ್ತವ್ಯಗಳನ್ನು ಭಯ ಅಥವಾ ಪಕ್ಷಪಾತವಿಲ್ಲದೆ, ರಾಗ ದ್ವೇಷವಿಲ್ಲದೆ ನೆರವೇರಿಸು ತ್ತೇನೆಂದೂ, ಸಂವಿಧಾನವನ್ನು ಮತ್ತು ಕಾನೂನುಗಳನ್ನು ಎತ್ತಿಹಿಡಿಯುತ್ತೇನೆಂದೂ, ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ / ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

## V

**ಒಂದು ರಾಜ್ಯದ ಮಂತ್ರಿಪದದ ಪ್ರಮಾಣವಚನದ ನಮೂನೆ:-**

"_____________ಎಂಬ ಹೆಸರಿನ ನಾನು, ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ, [1][ನಾನು ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿಹಿಡಿಯುತ್ತೇನೆಂದೂ] ಮತ್ತು .........ರಾಜ್ಯದ ಮಂತ್ರಿಯಾಗಿ ನನ್ನ ಕರ್ತವ್ಯಗಳನ್ನು ಶ್ರದ್ಧಾಪೂರ್ವಕವಾಗಿ ಮತ್ತು ಅಂತಃಕರಣಪೂರ್ವಕವಾಗಿ ನಿರ್ವಹಿಸುತ್ತೇನೆಂದೂ, ಭಯ ಅಥವಾ ಪಕ್ಷಪಾತವಿಲ್ಲದೆ, ರಾಗ ದ್ವೇಷವಿಲ್ಲದೆ ಎಲ್ಲ ಬಗೆಯ ಜನರಿಗೆ, ಸಂವಿಧಾನಕ್ಕೆ ಮತ್ತು ಕಾನೂನಿಗೆ ಅನುಸಾರವಾಗಿ ನ್ಯಾಯವಾದುದನ್ನೇ ಮಾಡುತ್ತೇನೆಂದೂ, ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ / ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

## VI

**ಒಂದು ರಾಜ್ಯದ ಮಂತ್ರಿಯ ಗೋಪ್ಯತಾ ಪಾಲನಾ ಪ್ರಮಾಣವಚನದ ನಮೂನೆ:-**

"..............................ಎಂಬ ಹೆಸರಿನ ನಾನು ..............................ರಾಜ್ಯದ ಮಂತ್ರಿಯಾಗಿ ನನ್ನ ಪರ್ಯಾಲೋಚನೆಗೆ ತರಲಾಗುವ ಅಥವಾ ನನಗೆ ತಿಳಿದು ಬರುವ ಯಾವುದೇ ವಿಷಯವನ್ನು, ರಾಜ್ಯದ ಮಂತ್ರಿಯಾಗಿ ನನ್ನ ಕರ್ತವ್ಯಗಳ ಯುಕ್ತ ನಿರ್ವಹಣೆಗೆ ಅಗತ್ಯವಾಗಬಹುದಾದ ಸಂದರ್ಭದಲ್ಲಲ್ಲದೆ ಅನ್ಯಥಾ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಿಳಿಸುವುದಿಲ್ಲ ಅಥವಾ ಬಹಿರಂಗಪಡಿಸುವುದಿಲ್ಲ ಎಂದು, ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ / ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

---

1. 1963ನೇ ಇಸವಿಯ ಸಂವಿಧಾನ (ಹದಿನಾರನೆಯ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.

## [1][VII

### ಎ

**ಒಂದು ರಾಜ್ಯದ ವಿಧಾನಮಂಡಲದ ಚುನಾವಣೆಗೆ ನಿಲ್ಲುವ ಅಭ್ಯರ್ಥಿಯು ಮಾಡಬೇಕಾದ ಪ್ರಮಾಣವಚನದ ಅಥವಾ ಪ್ರತಿಜ್ಞಾ ವಚನದ ನಮೂನೆ:-**

"..... ..........................ಎಂಬ ಹೆಸರಿನ ನಾನು ವಿಧಾನಸಭೆಯಲ್ಲಿನ (ಅಥವಾ ವಿಧಾನಪರಿಷತ್ತಿನಲ್ಲಿನ) ಒಂದು ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಒಬ್ಬ ಅಭ್ಯರ್ಥಿಯೆಂದು ನಾಮನಿರ್ದೇಶನ ಹೊಂದಿದವನಾಗಿ ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ, ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿಹಿಡಿಯುತ್ತೇನೆಂದೂ, <u>ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ</u>
ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

### ಬಿ

**ಒಂದು ರಾಜ್ಯದ ವಿಧಾನಮಂಡಲದ ಸದಸ್ಯನು ಮಾಡಬೇಕಾದ ಪ್ರಮಾಣವಚನದ ಅಥವಾ ಪ್ರತಿಜ್ಞಾ ವಚನದ ನಮೂನೆ:-**

"................................ಎಂಬ ಹೆಸರಿನ ನಾನು ವಿಧಾನಸಭೆಯ (ಅಥವಾ ವಿಧಾನಪರಿಷತ್ತಿನ) ಸದಸ್ಯನಾಗಿ ಚುನಾಯಿತನಾದವನಾಗಿ, (ಅಥವಾ ನಾಮನಿರ್ದೇಶನ ಹೊಂದಿದವನಾಗಿ), ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ, ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿಹಿಡಿಯುತ್ತೇನೆಂದೂ ಮತ್ತು ನಾನು ವಹಿಸಿಕೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ <u>ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ</u>
ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".]

## VIII

**ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಮಾಡಬೇಕಾದ ಪ್ರಮಾಣವಚನದ ಅಥವಾ ಪ್ರತಿಜ್ಞಾ ವಚನದ ನಮೂನೆ:-**

"—————— ಎಂಬ ಹೆಸರಿನ ನಾನು ——————ಲ್ಲಿ (ಅಥವಾ ———— ದ) ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯು (ಅಥವಾ ನ್ಯಾಯಾಧೀಶನಾಗಿ) ನೇಮಕಗೊಂಡವನಾಗಿ ಕಾನೂನಿನ ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ, [2][ಮತ್ತು ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿಹಿಡಿಯುತ್ತೇನೆಂದೂ,] ಯುಕ್ತವಾಗಿ ಮತ್ತು ಶ್ರದ್ಧಾಪೂರ್ವಕವಾಗಿ ಮತ್ತು ನನ್ನ ಸಾಮರ್ಥ್ಯ, ತಿಳುವಳಿಕೆ ಮತ್ತು ವಿವೇಚನೆಯಷ್ಟರ ಮಟ್ಟಿಗೆ ನನ್ನ ಪದದ ಕರ್ತವ್ಯಗಳನ್ನು ಭಯ ಅಥವಾ ಪಕ್ಷಪಾತವಿಲ್ಲದೆ, ರಾಗ ದ್ವೇಷವಿಲ್ಲದೆ ನೆರವೇರಿಸುತ್ತೇನೆಂದೂ, ಸಂವಿಧಾನವನ್ನು ಮತ್ತು ಕಾನೂನುಗಳನ್ನು ಎತ್ತಿ ಹಿಡಿಯುತ್ತೇನೆಂದೂ, <u>ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ</u>
ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ".

---

1. 1963ನೇ ಇಸವಿಯ ಸಂವಿಧಾನ (ಹದಿನಾರನೆಯ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ VIIನೇ ನಮೂನೆಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

2. 1963ನೇ ಇಸವಿಯ ಸಂವಿಧಾನ (ಹದಿನಾರನೆಯ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.

## [1][ನಾಲ್ಕನೆಯ ಅನುಸೂಚಿ

### [4(1) ಮತ್ತು 80 (2) ನೆಯ ಅನುಚ್ಛೇದಗಳು]

### ರಾಜ್ಯಸಭೆಯ ಸ್ಥಾನಗಳ ಹಂಚಿಕೆ

ಈ ಕೆಳಕಂಡ ಕೋಷ್ಟಕದ ಮೊದಲನೆಯ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಪ್ರತಿಯೊಂದು ರಾಜ್ಯಕ್ಕೆ ಅಥವಾ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಸದರಿ ಕೋಷ್ಟಕದ ಎರಡನೆಯ ಅಂಕಣದಲ್ಲಿ ಆ ರಾಜ್ಯಕ್ಕೆ ಅಥವಾ ಸಂದರ್ಭಾನುಸಾರ ಆ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಆ ರಾಜ್ಯದ ಅಥವಾ ಒಕ್ಕೂಟ ರಾಜ್ಯಕ್ಷೇತ್ರದ ಎದುರು ನಿರ್ದಿಷ್ಟಪಡಿಸಿರುವಷ್ಟು ಸಂಖ್ಯೆಯ ಸ್ಥಾನಗಳನ್ನು ಹಂಚಿಕೆ ಮಾಡತಕ್ಕದ್ದು:

**ಕೋಷ್ಟಕ**

| | | |
|---|---|---|
| 1. | ಆಂಧ್ರಪ್ರದೇಶ | 18 |
| 2. | ಅಸ್ಸಾಂ | 7 |
| 3. | ಬಿಹಾರ | [2][16] |
| [3][4. | ಝಾರ್ಖಂಡ | 6] |
| [4] [5] [ [5.] | ಗೋವಾ | 1] |
| [6] [5] [ [6.] | ಗುಜರಾತ್ | 11] |
| [7] [5] [ [7.] | ಹರಿಯಾಣ | 5] |
| [5] [8.] | ಕೇರಳ | 9 |
| [5] [9.] | ಮಧ್ಯಪ್ರದೇಶ | [8] [11] |
| [9] [5] [ [10.] | ಛತ್ತೀಸ್‌ಘಡ | 5] |
| [10] [5] [ [11.] | ತಮಿಳುನಾಡು] | [11] [18] |

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ ನಾಲ್ಕನೆಯ ಅನುಸೂಚಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. ಬಿಹಾರ ಪುನರ್ ವಿಂಗಡಣೆ ಅಧಿನಿಯಮ, 2000ದ (2000ದ 30) 7ನೇ ಪ್ರಕರಣದ ಮೂಲಕ ಪ್ರತ್ಯಾಯೋಜಿಸಲಾಗಿದೆ.
3. ಅದೇ ಅಧಿನಿಯಮದ 7ನೇ ಪ್ರಕರಣದ ಮೂಲಕ (15.11.2000 ದಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
4. 1987ನೇ ಇಸವಿಯ ಗೋವಾ, ದಾಮನ್ ಮತ್ತು ದೀವ್ ಪುನರ್‌ರಚನೆ ಅಧಿನಿಯಮದ (1987ರ 18)ರ 6ನೇ ಪ್ರಕರಣದ ಮೂಲಕ (30-5-1987ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
5. ಬಿಹಾರ ಪುನರ್‌ವಿಂಗಡಣೆ ಅಧಿನಿಯಮ, 2000ದ (2000ದ 30) 7ನೇ ಪ್ರಕರಣದ ಮೂಲಕ (15.11.2000 ದಿಂದ ಜಾರಿಗೆ ಬರುವಂತೆ) 4 ರಿಂದ 29ರ ವರೆಗಿನ ನಮೂದುಗಳಿಗೆ 5 ರಿಂದ 30ರ ವರೆಗಿನ ನಮೂದುಗಳೆಂದು ಪುನರ್‌ಸಂಖ್ಯೆ ನೀಡಲಾಗಿದೆ.
6. 1960ನೆಯ ಇಸವಿಯ ಮುಂಬಯಿ ಪುನರ್ ವಿಂಗಡಣೆ ಅಧಿನಿಯಮದ (1960ರ 11) 6ನೆಯ ಪ್ರಕರಣದ ಮೂಲಕ 4ನೆಯ ನಮೂದಿಗೆ ಬದಲಾಗಿ (1-5-1960 ರಿಂದ ಜಾರಿಗೆ ಬರುವಂತೆ) (6 ಎಂದು ಪುನರ್ ಸಂಖ್ಯೆ ನೀಡಿ) ಪ್ರತ್ಯಾಯೋಜಿಸಲಾಗಿದೆ.
7. 1966ನೆಯ ಇಸವಿಯ ಪಂಜಾಬ್ ಪುನರ್‌ವಿಂಗಡಣೆ ಅಧಿನಿಯಮದ (1966ರ 31) 9ನೆಯ ಪ್ರಕರಣದ ಮೂಲಕ (1-11-1966 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
8. ಮಧ್ಯಪ್ರದೇಶ ಪುನರ್‌ವಿಂಗಡಣೆ ಅಧಿನಿಯಮ, 2000ದ (2000ದ 28) 7ನೇ ಪ್ರಕರಣದ ಮೂಲಕ (1.11.2000ದಿಂದ ಜಾರಿಗೆ ಬರುವಂತೆ) "16" ಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
9. ಮಧ್ಯಪ್ರದೇಶ ಪುನರ್‌ವಿಂಗಡಣೆ ಅಧಿನಿಯಮ, 2000ದ (2000ದ 28) 7ನೇ ಪ್ರಕರಣದ ಮೂಲಕ (1.11.2000ದಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
10. 1968ನೆಯ ಇಸವಿಯ ಮದ್ರಾಸು ರಾಜ್ಯ (ಹೆಸರು ಬದಲಾವಣೆ) ಅಧಿನಿಯಮದ (1968ರ 53) 5ನೆಯ ಪ್ರಕರಣದ ಮೂಲಕ "*8. ಮದ್ರಾಸು" ಎಂಬುದಕ್ಕೆ ಬದಲಾಗಿ (14-1-1969ರಿಂದ ಜಾರಿಗೆ ಬರುವಂತೆ) "(*11" ಎಂದು ಪುನರ್ ಸಂಖ್ಯೆ ನೀಡಿ) ಪ್ರತ್ಯಾಯೋಜಿಸಲಾಗಿದೆ.
11. 1959ನೆಯ ಇಸವಿಯ ಆಂಧ್ರಪ್ರದೇಶ ಮತ್ತು ಮದ್ರಾಸು (ಸರಹದ್ದುಗಳ ಬದಲಾವಣೆ) ಅಧಿನಿಯಮದ (1959ರ 56) 8ನೆಯ ಪ್ರಕರಣದ ಮೂಲಕ "17" ಎಂಬುದಕ್ಕೆ ಬದಲಾಗಿ (1-4-1960ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

| | | |
|---|---|---|
| [1][ [2][12.] | ಮಹಾರಾಷ್ಟ್ರ.................................................................... | 19] |
| [3][ [2][13.] | ಕರ್ನಾಟಕ]................................................................... | 12 |
| [2][14.] | ಒರಿಸ್ಸಾ........................................................................ | 10 |
| [2][15.] | ಪಂಜಾಬ್..................................................................... | [4][7] |
| [2][16.] | ರಾಜಸ್ಥಾನ.................................................................... | 10 |
| [2][17.] | ಉತ್ತರ ಪ್ರದೇಶ............................................................. | [5][31] |
| [6][ [2][18.] | [7][ಉತ್ತರಖಂಡ]............................................................ | 3] |
| [2][19.] | ಪಶ್ಚಿಮ ಬಂಗಾಳ............................................................ | 16 |
| [2][20.] | ಜಮ್ಮು ಮತ್ತು ಕಾಶ್ಮೀರ....................................................... | 4 |
| [8][ [2][21.] | ನಾಗಾಲ್ಯಾಂಡ್.............................................................. | 1] |
| [9][ [2][22.] | ಹಿಮಾಚಲ ಪ್ರದೇಶ.......................................................... | 3] |
| [2][23.] | ಮಣಿಪುರ.................................................................... | 1 |
| [2][24.] | ತ್ರಿಪುರ...................................................................... | 1 |
| [2][25.] | ಮೇಘಾಲಯ................................................................... | 1 |
| [10][ [2][26.] | ಸಿಕ್ಕಿಂ........................................................................ | 1] |
| [11][ [2][27.] | ಮಿಜೋರಾಂ.................................................................. | 1] |
| [12][ [2][28.] | ಅರುಣಾಚಲ ಪ್ರದೇಶ........................................................ | 1] |
| [2][29.] | ದೆಹಲಿ....................................................................... | 3 |
| [2][30.] | [13][ಪುದುಚೇರಿ]............................................................ | 1 |
| | **ಒಟ್ಟು**.................................................................... | **[14][233]]** |

1. ಮುಂಬಯಿ ಪುನರ್‌ವಿಂಗಡಣೆ ಅಧಿನಿಯಮ, 1960ರ (1960ರ 11) 6 ನೆಯ ಪ್ರಕರಣದ ಮೂಲಕ (1-5-1960 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. ಬಿಹಾರ ಪುನರ್‌ವಿಂಗಡಣೆ ಅಧಿನಿಯಮ, 2000ದ (2000ದ 30) 7ನೇ ಪ್ರಕರಣದ ಮೂಲಕ (15.11.2000 ದಿಂದ ಜಾರಿಗೆ ಬರುವಂತೆ) 4 ರಿಂದ 29ರ ವರೆಗಿನ ನಮೂದುಗಳಿಗೆ 5 ರಿಂದ 30ರ ವರೆಗಿನ ನಮೂದುಗಳೆಂದು ಪುನರ್‌ಸಂಖ್ಯೆ ನೀಡಲಾಗಿದೆ.
3. 1973ರ ಮೈಸೂರು ರಾಜ್ಯ (ಹೆಸರು ಬದಲಾವಣೆ) ಅಧಿನಿಯಮದ (1973ರ 31) 5ನೇ ಪ್ರಕರಣದ ಮೂಲಕ (1.11.1973 ರಿಂದ ಜಾರಿಗೆ ಬರುವಂತೆ) "*10. ಮೈಸೂರು" ಎಂಬುದಕ್ಕೆ ಬದಲಾಗಿ (*13 ಎಂದು ಪುನರ್ ಸಂಖ್ಯೆ ನೀಡಿ) ಪ್ರತ್ಯಾಯೋಜಿಸಲಾಗಿದೆ.
4. 1966ನೇ ಇಸವಿಯ ಪಂಜಾಬ್ ಪುನರ್‌ವಿಂಗಡಣೆ ಅಧಿನಿಯಮದ (1966ರ 31) 9ನೇ ಪ್ರಕರಣದ ಮೂಲಕ (1.11.1966 ರಿಂದ ಜಾರಿಗೆ ಬರುವಂತೆ) "11"ಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. 2000 ದ ಇಸವಿಯ ಉತ್ತರ ಪ್ರದೇಶ ಪುನರ್‌ವಿಂಗಡಣೆ ಅಧಿನಿಯಮದ (2000 ದ 29) 7ನೇ ಪ್ರಕರಣದ ಮೂಲಕ (9.11.2000 ದಿಂದ ಜಾರಿಗೆ ಬರುವಂತೆ) "34"ಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
6. ಅದೇ ಅಧಿನಿಯಮದ 7ನೇ ಪ್ರಕರಣದ ಮೂಲಕ (9.11.2000 ದಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
7. 2006 ನೇ ಇಸವಿಯ ಉತ್ತರಾಂಚಲ (ಹೆಸರು ಬದಲಾವಣೆ) ಅಧಿನಿಯಮದ (2006ರ 52) 5ನೇ ಪ್ರಕರಣದ ಮೂಲಕ (1.1.2007 ರಿಂದ ಜಾರಿಗೆ ಬರುವಂತೆ) "ಉತ್ತರಾಂಚಲ" ಎಂಬ ಪದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
8. 1962 ನೇ ಇಸವಿಯ ನಾಗಾಲ್ಯಾಂಡ್ ರಾಜ್ಯ ಅಧಿನಿಯಮದ (1962ರ 27) 6ನೇ ಪ್ರಕರಣದ ಮೂಲಕ (1.12.1963 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
9. 1970 ನೇ ಇಸವಿಯ ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮದ (1970ರ 53) 5ನೇ ಪ್ರಕರಣದ ಮೂಲಕ (25.1.1971 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
10. 1975 ನೇ ಇಸವಿಯ ಸಂವಿಧಾನ (ಮೂವತ್ತಾರನೇ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ (26.4.1975 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
11. 1986 ನೇ ಇಸವಿಯ ಮಿಜೋರಾಂ ರಾಜ್ಯ ಅಧಿನಿಯಮದ (1986ರ 34) 5ನೇ ಪ್ರಕರಣದ ಮೂಲಕ (20.2.1987 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
12. 1986 ನೇ ಇಸವಿಯ ಅರುಣಾಚಲ ಪ್ರದೇಶ ರಾಜ್ಯ ಅಧಿನಿಯಮದ (1986ರ 69) 5ನೇ ಪ್ರಕರಣದ ಮೂಲಕ (20.2.1987 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
13. 2006ನೇ ಇಸವಿಯ ಪಾಂಡಿಚೆರಿ (ಹೆಸರು ಬದಲಾವಣೆ) ಅಧಿನಿಯಮದ (2006ರ 44) 6ನೇ ಪ್ರಕರಣದ ಮೂಲಕ (1.10.2006 ರಿಂದ ಜಾರಿಗೆ ಬರುವಂತೆ) "ಪಾಂಡಿಚೆರಿ" ಎಂಬ ಪದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
14. 1987ನೇ ಇಸವಿಯ ಗೋವಾ, ದಮನ್ ಮತ್ತು ದೀವ್ ಪುನರ್‌ವಿಂಗಡಣೆ ಅಧಿನಿಯಮದ (1987ರ 18) 6ನೇ ಪ್ರಕರಣದ ಮೂಲಕ (30.5.1987 ರಿಂದ ಜಾರಿಗೆ ಬರುವಂತೆ) "232" ಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

## ಐದನೆಯ ಅನುಸೂಚಿ

[244 (1) ನೆಯ ಅನುಚ್ಛೇದ]

## ಅನುಸೂಚಿತ ಪ್ರದೇಶಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಆಡಳಿತ ಮತ್ತು ನಿಯಂತ್ರಣದ ಬಗ್ಗೆ ಉಪಬಂಧಗಳು

### ಭಾಗ- ಎ

### ಸಾಮಾನ್ಯ

**1. ಅರ್ಥ ವಿವರಣೆ:–** ಈ ಅನುಸೂಚಿಯಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು "ರಾಜ್ಯ" [1]*** ಎಂಬ ಪದದಲ್ಲಿ [2][ಅಸ್ಸಾಂ, [3][, [4][ಮೇಘಾಲಯ, ತ್ರಿಪುರ ಮತ್ತು ಮಿಜೋರಾಂ ರಾಜ್ಯಗಳು]]] ಒಳಗೊಳ್ಳುವುದಿಲ್ಲ.

**2. ಅನುಸೂಚಿತ ಪ್ರದೇಶಗಳಲ್ಲಿ ರಾಜ್ಯದ ಕಾರ್ಯಾಂಗ ಅಧಿಕಾರ:–** ಈ ಅನುಸೂಚಿಯ ಉಪಬಂಧಗಳಿಗೆ ಒಳಪಟ್ಟು, ಒಂದು ರಾಜ್ಯದ ಕಾರ್ಯಾಂಗ ಅಧಿಕಾರವು ಆ ರಾಜ್ಯದೊಳಗಿನ ಅನುಸೂಚಿತ ಪ್ರದೇಶಗಳಿಗೆ ವ್ಯಾಪ್ತವಾಗುತ್ತದೆ.

**3. ಅನುಸೂಚಿತ ಪ್ರದೇಶಗಳ ಆಡಳಿತದ ಬಗ್ಗೆ ರಾಷ್ಟ್ರಪತಿಗೆ ರಾಜ್ಯಪಾಲನಿಂದ [5]* * * * ವರದಿ:–** ಅನುಸೂಚಿತ ಪ್ರದೇಶಗಳನ್ನು ಒಳಗೊಂಡಿರುವ ಪ್ರತಿಯೊಂದು ರಾಜ್ಯದ ರಾಜ್ಯಪಾಲನು [5]* * * * ಪ್ರತಿವರ್ಷವೂ ಅಥವಾ ರಾಷ್ಟ್ರಪತಿಯು ಅಗತ್ಯಪಡಿಸಿದಾಗಲೆಲ್ಲಾ, ಆ ರಾಜ್ಯದಲ್ಲಿನ ಅನುಸೂಚಿತ ಪ್ರದೇಶಗಳ ಆಡಳಿತದ ಬಗ್ಗೆ ರಾಷ್ಟ್ರಪತಿಗೆ ವರದಿ ಮಾಡತಕ್ಕದ್ದು ಮತ್ತು ಸದರಿ ಪ್ರದೇಶಗಳ ಆಡಳಿತದ ಬಗ್ಗೆ ಆ ರಾಜ್ಯಕ್ಕೆ ನಿರ್ದೇಶನಗಳನ್ನು ಕೊಡುವುದಕ್ಕೆ ಒಕ್ಕೂಟದ ಕಾರ್ಯಾಂಗ ಅಧಿಕಾರವು ವ್ಯಾಪ್ತವಾಗತಕ್ಕದ್ದು.

### ಭಾಗ – ಬಿ

### ಅನುಸೂಚಿತ ಪ್ರದೇಶಗಳ ಮತ್ತು ಅನುಸೂಚಿತ ಬುಡಕಟ್ಟುಗಳ ಆಡಳಿತ ಮತ್ತು ನಿಯಂತ್ರಣ

**4. ಬುಡಕಟ್ಟುಗಳ ಸಲಹಾ ಪರಿಷತ್ತು:–** (1) ಅನುಸೂಚಿತ ಪ್ರದೇಶಗಳನ್ನೊಳಗೊಂಡಿರುವ ಪ್ರತಿಯೊಂದು ರಾಜ್ಯದಲ್ಲಿ ಮತ್ತು ರಾಷ್ಟ್ರಪತಿಯು ನಿರ್ದೇಶಿಸಿದರೆ, ಅನುಸೂಚಿತ ಬುಡಕಟ್ಟುಗಳು ಇರುವ ಆದರೆ ಅನುಸೂಚಿತ ಪ್ರದೇಶಗಳು ಇಲ್ಲದಿರುವ ಯಾವುದೇ ರಾಜ್ಯದಲ್ಲಿಯೂ ಸಹ, ಇಪ್ಪತ್ತಕ್ಕೆ ಹೆಚ್ಚಿಲ್ಲದಷ್ಟು ಸದಸ್ಯರನ್ನು ಒಳಗೊಂಡ ಬುಡಕಟ್ಟುಗಳ ಸಲಹಾ ಪರಿಷತ್ತನ್ನು ಸ್ಥಾಪಿಸತಕ್ಕದ್ದು, ಅವರ ಪೈಕಿ ಸರಿಸುಮಾರು ಮುಕ್ಕಾಲು ಭಾಗದಷ್ಟು ಸದಸ್ಯರು ಆ ರಾಜ್ಯದ ವಿಧಾನಸಭೆಯಲ್ಲಿನ ಅನುಸೂಚಿತ ಬುಡಕಟ್ಟುಗಳ ಪ್ರತಿನಿಧಿಗಳಾಗಿರತಕ್ಕದ್ದು:

ಪರಂತು, ಆ ರಾಜ್ಯದ ವಿಧಾನಸಭೆಯಲ್ಲಿ ಅನುಸೂಚಿತ ಬುಡಕಟ್ಟುಗಳ ಪ್ರತಿನಿಧಿಗಳ ಸಂಖ್ಯೆಯು ಬುಡಕಟ್ಟುಗಳ ಸಲಹಾ ಪರಿಷತ್ತಿನಲ್ಲಿ ಅಂಥ ಪ್ರತಿನಿಧಿಗಳಿಂದ ಭರ್ತಿಯಾಗಬೇಕಾದ ಸ್ಥಾನಗಳ ಸಂಖ್ಯೆಗಿಂತ ಕಡಿಮೆ ಇದ್ದರೆ, ಉಳಿದ ಸ್ಥಾನಗಳನ್ನು ಆ ಬುಡಕಟ್ಟುಗಳ ಇತರ ಸದಸ್ಯರಿಂದ ಭರ್ತಿಮಾಡತಕ್ಕದ್ದು.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೇ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ ಎ ಭಾಗದಲ್ಲಿ ಅಥವಾ ಬಿ ಭಾಗದಲ್ಲಿ ನಿರ್ದಿಷ್ಟಪಡಿಸಿದ ಒಂದು ರಾಜ್ಯ ಎಂದು ಅರ್ಥ, ಆದರೆ ಅದರಲ್ಲಿ" ಎಂಬ ಪದಗಳನ್ನು ಮತ್ತು ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.
2. 1971 ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71ನೆಯ ಪ್ರಕರಣದ ಮೂಲಕ (21-1-1972 ರಿಂದ ಜಾರಿಗೆ ಬರುವಂತೆ) "ಅಸ್ಸಾಂ ರಾಜ್ಯ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. 1984ನೇ ಇಸವಿಯ ಸಂವಿಧಾನ (ನಲವತ್ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಮೂಲಕ (1.4.1985 ರಿಂದ ಜಾರಿಗೆ ಬರುವಂತೆ) "ಮತ್ತು ಮೇಘಾಲಯ" ಎಂಬ ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
4. 1986ನೇ ಇಸವಿಯ ಮಿಜೋರಾಂ ರಾಜ್ಯ ಅಧಿನಿಯಮದ (1986ರ 34) 39ನೇ ಪ್ರಕರಣದ ಮೂಲಕ (20.2.1987 ರಿಂದ ಜಾರಿಗೆ ಬರುವಂತೆ) "ಮೇಘಾಲಯ ಮತ್ತು ತ್ರಿಪುರ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. 1956ನೇ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

(2) ರಾಜ್ಯದಲ್ಲಿರುವ ಅನುಸೂಚಿತ ಬುಡಕಟ್ಟುಗಳ ಕಲ್ಯಾಣ ಮತ್ತು ಪುರೋಭಿವೃದ್ಧಿಗೆ ಸಂಬಂಧಿಸಿದಂಥ ಯಾವ ವಿಷಯಗಳನ್ನು ರಾಜ್ಯಪಾಲನು [1]*** ಬುಡಕಟ್ಟುಗಳ ಸಲಹಾ ಪರಿಷತ್ತಿಗೆ ಒಪ್ಪಿಸಬಹುದೋ ಅಂಥ ವಿಷಯಗಳ ಬಗ್ಗೆ ಸಲಹೆ ಕೊಡುವುದು ಆ ಪರಿಷತ್ತಿನ ಕರ್ತವ್ಯವಾಗಿರತಕ್ಕದ್ದು.

(3) ರಾಜ್ಯಪಾಲನು [2]***,-

(ಎ) ಪರಿಷತ್ತಿನ ಸದಸ್ಯರ ಸಂಖ್ಯೆ ಮತ್ತು ಅವರ ನೇಮಕದ ವಿಧಾನ ಹಾಗೂ ಪರಿಷತ್ತಿನ ಸಭಾಪತಿಯ ಮತ್ತು ಅದರ ಅಧಿಕಾರಿಗಳ ಮತ್ತು ನೌಕರರ ನೇಮಕದ ವಿಧಾನವನ್ನು;

(ಬಿ) ಅದರ ಸಭೆಗಳನ್ನು ನಡೆಸುವುದನ್ನು ಮತ್ತು ಅದರ ಸಾಮಾನ್ಯ ಕಾರ್ಯವಿಧಾನವನ್ನು; ಮತ್ತು

(ಸಿ) ಇತರ ಎಲ್ಲ ಆನುಷಂಗಿಕ ವಿಷಯಗಳನ್ನು

– ಸಂದರ್ಭಾನುಸಾರ ನಿಯಮಿಸುವ ಅಥವಾ ನಿಯಂತ್ರಿಸುವ ನಿಯಮಗಳನ್ನು ರಚಿಸಬಹುದು.

**5.ಅನುಸೂಚಿತ ಪ್ರದೇಶಗಳಿಗೆ ಅನ್ವಯವಾಗುವ ಕಾನೂನು:-** (1) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ರಾಜ್ಯಪಾಲನು [1]*** ಸಾರ್ವಜನಿಕ ಅಧಿಸೂಚನೆಯ ಮೂಲಕ ಸಂಸತ್ತಿನ ಅಥವಾ ಆ ರಾಜ್ಯದ ವಿಧಾನಮಂಡಲದ ಯಾವುದೇ ನಿರ್ದಿಷ್ಟ ಅಧಿನಿಯಮವು ರಾಜ್ಯದಲ್ಲಿನ ಅನುಸೂಚಿತ ಪ್ರದೇಶಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಅನ್ವಯವಾಗತಕ್ಕದ್ದಲ್ಲವೆಂದು ಅಥವಾ ಆ ರಾಜ್ಯದಲ್ಲಿನ ಒಂದು ಅನುಸೂಚಿತ ಪ್ರದೇಶಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಆ ಅಧಿಸೂಚನೆಯಲ್ಲಿ ಅವನು ನಿರ್ದಿಷ್ಟಪಡಿಸಬಹುದಾದಂಥ ವಿನಾಯತಿಗಳು ಮತ್ತು ಮಾರ್ಪಾಡುಗಳಿಗೆ ಒಳಪಟ್ಟು ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಈ ಉಪಪ್ಯಾರಾದ ಮೇರೆಗೆ ಕೊಡಲಾಗುವ ಅಂಥ ಯಾವುದೇ ನಿರ್ದೇಶನವನ್ನು ಪೂರ್ವಾನ್ವಯ ಪರಿಣಾಮಹೊಂದಿರುವಂತೆ ಕೊಡಬಹುದು.

(2) ರಾಜ್ಯಪಾಲನು [1]*** ಒಂದು ರಾಜ್ಯದಲ್ಲಿ ತತ್ಕಾಲದಲ್ಲಿ ಅನುಸೂಚಿತ ಪ್ರದೇಶವಾಗಿರುವ ಯಾವುದೇ ಪ್ರದೇಶದ ಶಾಂತಿ ಪಾಲನೆ ಮತ್ತು ಒಳ್ಳೆಯ ಆಡಳಿತಕ್ಕಾಗಿ ವಿನಿಯಮಗಳನ್ನು ರಚಿಸಬಹುದು.

ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮಗಳು–

(ಎ) ಅಂಥ ಪ್ರದೇಶದಲ್ಲಿನ ಅನುಸೂಚಿತ ಬುಡಕಟ್ಟುಗಳ ಜನರು ಮಾಡುವ ಅಥವಾ ಅವರೊಳಗೆ ಮಾಡಿಕೊಳ್ಳಲಾಗುವ ಭೂವರ್ಗಾವಣೆಯನ್ನು ನಿಷೇಧಿಸಬಹುದು ಅಥವಾ ನಿರ್ಬಂಧಿಸಬಹುದು;

(ಬಿ) ಅಂಥ ಪ್ರದೇಶದಲ್ಲಿನ ಅನುಸೂಚಿತ ಬುಡಕಟ್ಟುಗಳ ಜನರಿಗೆ ಮಾಡುವ ಭೂಮಿಯ ಹಂಚಿಕೆಯನ್ನು ನಿಯಂತ್ರಿಸಬಹುದು;

(ಸಿ) ಅಂಥ ಪ್ರದೇಶದಲ್ಲಿನ ಅನುಸೂಚಿತ ಬುಡಕಟ್ಟುಗಳ ಜನರಿಗೆ ಹಣವನ್ನು ಸಾಲಕೊಡುವ ವ್ಯಕ್ತಿಗಳು ಲೇವಾದೇವಿಗಾರರಾಗಿ ವ್ಯವಹಾರ ನಡೆಯಿಸುವುದನ್ನು ನಿಯಂತ್ರಿಸಬಹುದು.

(3) ಈ ಪ್ಯಾರಾದ (2)ನೆಯ ಉಪಪ್ಯಾರಾದಲ್ಲಿ ಉಲ್ಲೇಖಿಸಿರುವ ಯಾವುದೇ ವಿನಿಯಮವನ್ನು ರಚಿಸುವಾಗ, ರಾಜ್ಯಪಾಲನು [1]*** ಸಂಸತ್ತಿನ ಅಥವಾ ಆ ರಾಜ್ಯದ ವಿಧಾನಮಂಡಲದ ಯಾವುದೇ ಅಧಿನಿಯಮವನ್ನು ಅಥವಾ ಸಂಬಂಧಪಟ್ಟ ಪ್ರದೇಶದಲ್ಲಿ ತತ್ಕಾಲದಲ್ಲಿ ಅನ್ವಯವಾಗುತ್ತಿರುವ ಯಾವುದೇ ಅಸ್ತಿತ್ವದಲ್ಲಿರುವ ಕಾನೂನನ್ನು ನಿರಸನ ಅಥವಾ ತಿದ್ದುಪಡಿ ಮಾಡಬಹುದು.

(4) ಈ ಪ್ಯಾರಾದ ಮೇರೆಗೆ ರಚಿತವಾದ ಎಲ್ಲ ವಿನಿಯಮಗಳನ್ನು ತಕ್ಷಣವೇ ರಾಷ್ಟ್ರಪತಿಗೆ ಒಪ್ಪಿಸತಕ್ಕದ್ದು ಮತ್ತು ಅವನು ಅವುಗಳಿಗೆ ಅನುಮತಿ ಕೊಡುವವರೆಗೆ, ಅವು ಪರಿಣಾಮಕಾರಿಯಾಗತಕ್ಕದ್ದಲ್ಲ.

(5) ಆ ರಾಜ್ಯಕ್ಕಾಗಿ ಬುಡಕಟ್ಟುಗಳ ಸಲಹಾ ಪರಿಷತ್ತು ಇದ್ದರೆ, ವಿನಿಯಮವನ್ನು ರಚಿಸುವಲ್ಲಿ ರಾಜ್ಯಪಾಲನು [2]*** ಅಂಥ ಪರಿಷತ್ತಿನೊಡನೆ ಸಮಾಲೋಚಿಸಿದ ಹೊರತು, ಈ ಪ್ಯಾರಾದ ಮೇರೆಗೆ ಯಾವುದೇ ವಿನಿಯಮವನ್ನು ರಚಿಸತಕ್ಕದ್ದಲ್ಲ.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ಸಂದರ್ಭಾನುಸಾರ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
2. ಅದೇ ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಅಥವಾ ರಾಜಪ್ರಮುಖನು" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

## ಭಾಗ – ಸಿ
## ಅನುಸೂಚಿತ ಪ್ರದೇಶಗಳು

**6. ಅನುಸೂಚಿತ ಪ್ರದೇಶಗಳು:–** (1) ಈ ಸಂವಿಧಾನದಲ್ಲಿ "ಅನುಸೂಚಿತ ಪ್ರದೇಶಗಳು" ಎಂದರೆ ಅನುಸೂಚಿತ ಪ್ರದೇಶಗಳೆಂದು ರಾಷ್ಟ್ರಪತಿಯು [1]ಆದೇಶದ ಮೂಲಕ ಘೋಷಿಸಬಹುದಾದಂಥ ಪ್ರದೇಶಗಳು.

(2) ರಾಷ್ಟ್ರಪತಿಯು ಯಾವುದೇ ಕಾಲದಲ್ಲಿ [2]ಆದೇಶದ ಮೂಲಕ–

(ಎ) ಒಂದು ಅನುಸೂಚಿತ ಪ್ರದೇಶವು, ಪೂರ್ತಿಯಾಗಿ ಅಥವಾ ಅದರ ಯಾವುದೇ ನಿರ್ದಿಷ್ಟ ಭಾಗವು ಅನುಸೂಚಿತ ಪ್ರದೇಶವಾಗಿರುವುದು ಅಥವಾ ಅಂಥ ಪ್ರದೇಶದ ಒಂದು ಭಾಗವಾಗಿರುವುದು ನಿಂತುಹೋಗತಕ್ಕದ್ದೆಂದು ನಿರ್ದೇಶಿಸಬಹುದು;

[3][(ಎಎ) ಒಂದು ರಾಜ್ಯದಲ್ಲಿನ ಯಾವುದೇ ಅನುಸೂಚಿತ ಪ್ರದೇಶವನ್ನು ಆ ರಾಜ್ಯದ ರಾಜ್ಯಪಾಲನೊಡನೆ ಸಮಾಲೋಚಿಸಿದ ತರುವಾಯ ಹೆಚ್ಚಿಸಬಹುದು;]

(ಬಿ) ಸರಹದ್ದುಗಳನ್ನು ಸರಿಪಡಿಸುವ ಮೂಲಕ ಮಾತ್ರವೇ ಯಾವುದೇ ಅನುಸೂಚಿತ ಪ್ರದೇಶವನ್ನು ಬದಲಾಯಿಸಬಹುದು;

(ಸಿ) ಒಂದು ರಾಜ್ಯದ ಸರಹದ್ದುಗಳಲ್ಲಿ ಯಾವುದೇ ಬದಲಾವಣೆಯಾದಾಗ ಅಥವಾ ಒಕ್ಕೂಟಕ್ಕೆ ಒಂದು ಹೊಸ ರಾಜ್ಯವು ಸೇರ್ಪಡೆಯಾದಾಗ ಅಥವಾ ಒಂದು ಹೊಸ ರಾಜ್ಯವು ಸ್ಥಾಪಿತವಾದಾಗ ಯಾವುದೇ ರಾಜ್ಯದಲ್ಲಿ ಈ ಹಿಂದೆ ಸೇರಿರದಿದ್ದ ಯಾವುದೇ ರಾಜ್ಯಕ್ಷೇತ್ರವನ್ನು ಅನುಸೂಚಿತ ಪ್ರದೇಶವೆಂದು ಅಥವಾ ಅದರ ಒಂದು ಭಾಗವೆಂದು ಘೋಷಿಸಬಹುದು;

[3][(ಡಿ) ಈ ಪ್ಯಾರಾದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಅಥವಾ ಯಾವುವೇ ಆದೇಶಗಳನ್ನು ಯಾವುದೇ ರಾಜ್ಯದ ಅಥವಾ ಯಾವುವೇ ರಾಜ್ಯಗಳ ಸಂಬಂಧದಲ್ಲಿ ರದ್ದುಗೊಳಿಸಬಹುದು ಮತ್ತು ಸಂಬಂಧಪಟ್ಟ ರಾಜ್ಯದ ರಾಜ್ಯಪಾಲನೊಡನೆ ಸಮಾಲೋಚಿಸಿ ಅನುಸೂಚಿತ ಪ್ರದೇಶಗಳಾಗಬೇಕಾದ ಪ್ರದೇಶಗಳನ್ನು ಪುನಃ ನಿರ್ದಿಷ್ಟಪಡಿಸಿ ಹೊಸ ಆದೇಶಗಳನ್ನು ಮಾಡಬಹುದು;]

– ಮತ್ತು ಅಂಥ ಯಾವುದೇ ಆದೇಶವು ರಾಷ್ಟ್ರಪತಿಗೆ ಅವಶ್ಯವೆಂದು ಮತ್ತು ಉಚಿತವೆಂದು ಕಂಡುಬರುವಂಥ ಪ್ರಾಸಂಗಿಕ ಮತ್ತು ಆನುಷಂಗಿಕ ಉಪಬಂಧಗಳನ್ನು ಒಳಗೊಂಡಿರಬಹುದು. ಆದರೆ ಈ ಪ್ಯಾರಾದ (1) ನೆಯ ಉಪಪ್ಯಾರಾದ ಮೇರೆಗೆ ಮಾಡಲಾದ ಆದೇಶವನ್ನು ಹಿಂದೆ ಹೇಳಿದಂತಲ್ಲದೆ, ಆ ತರುವಾಯದ ಯಾವುದೇ ಆದೇಶದ ಮೂಲಕ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

## ಭಾಗ – ಡಿ
## ಅನುಸೂಚಿಯ ತಿದ್ದುಪಡಿ

**7. ಅನುಸೂಚಿಯ ತಿದ್ದುಪಡಿ:–** (1) ಸಂಸತ್ತು ಕಾಲಕಾಲಕ್ಕೆ ಕಾನೂನಿನ ಮೂಲಕ ಈ ಅನುಸೂಚಿಯ ಯಾವುವೇ ಉಪಬಂಧಗಳನ್ನು ಸೇರ್ಪಡೆಗೊಳಿಸುವ, ವ್ಯತ್ಯಸ್ತಗೊಳಿಸುವ ಅಥವಾ ನಿರಸನಗೊಳಿಸುವ ಮೂಲಕ ತಿದ್ದುಪಡಿ ಮಾಡಬಹುದು ಮತ್ತು ಈ ಅನುಸೂಚಿಯು ಹಾಗೆ ತಿದ್ದುಪಡಿಯಾದ ಮೇಲೆ ಈ ಸಂವಿಧಾನದಲ್ಲಿ ಈ ಅನುಸೂಚಿಯನ್ನು ಕುರಿತು ಮಾಡಿರುವ ಯಾವುದೇ ಉಲ್ಲೇಖವನ್ನು, ಹಾಗೆ ತಿದ್ದುಪಡಿಯಾದಂಥ ಅನುಸೂಚಿಯನ್ನು ಕುರಿತು ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

(2) ಈ ಪ್ಯಾರಾದ (1)ನೆಯ ಉಪಪ್ಯಾರಾದಲ್ಲಿ ನಮೂದಿಸಿರುವ ಯಾವುದೇ ಕಾನೂನನ್ನು 368ನೆಯ ಅನುಚ್ಛೇದದ ಉದ್ದೇಶಗಳಿಗಾಗಿ ಈ ಸಂವಿಧಾನದ ತಿದ್ದುಪಡಿಯೆಂದು ಭಾವಿಸತಕ್ಕದ್ದಲ್ಲ.

---

1. ಈ ಆದೇಶಗಳನ್ನು ನೋಡಿ : 1950ನೆಯ ಇಸವಿಯ ಅನುಸೂಚಿತ ಪ್ರದೇಶಗಳ (ಎ ಭಾಗದ ರಾಜ್ಯಗಳ) ಆದೇಶ (ಸಿ. ಓ. ಸಂಖ್ಯೆ 9), 1950ನೆಯ ಇಸವಿಯ ಅನುಸೂಚಿತ ಪ್ರದೇಶಗಳ (ಬಿ ಭಾಗದ ರಾಜ್ಯಗಳ) ಆದೇಶ (ಸಿ. ಓ. ಸಂಖ್ಯೆ 26), 1975ನೆಯ ಇಸವಿಯ ಅನುಸೂಚಿತ ಪ್ರದೇಶಗಳ (ಹಿಮಾಚಲ ಪ್ರದೇಶ) ಆದೇಶ (ಸಿ. ಓ. ಸಂಖ್ಯೆ 102), 1977ನೆಯ ಇಸವಿಯ ಅನುಸೂಚಿತ ಪ್ರದೇಶಗಳ (ಬಿಹಾರ, ಗುಜರಾತ್, ಮಧ್ಯಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳ) ಆದೇಶ (ಸಿ.ಓ. ಸಂಖ್ಯೆ 109).
2. 1950ನೇ ಇಸವಿಯ ಮದ್ರಾಸ್ ಅನುಸೂಚಿತ ಪ್ರದೇಶಗಳ (ಸಮಾಪ್ತಿ) ಆದೇಶ (ಸಿ.ಓ. ಸಂಖ್ಯೆ 30) ಮತ್ತು 1955ನೆಯ ಇಸವಿಯ ಆಂಧ್ರ ಅನುಸೂಚಿತ ಪ್ರದೇಶಗಳ (ಸಮಾಪ್ತಿ) ಆದೇಶ (ಸಿ.ಓ. ಸಂಖ್ಯೆ. 50) ನೋಡಿ.
3. 1976ನೇ ಇಸವಿಯ ಸಂವಿಧಾನ (1976ರ 101) (ತಿದ್ದುಪಡಿ) ಅಧಿನಿಯಮದ ಐದನೆಯ ಅನುಸೂಚಿಯ 2ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.

## ಆರನೆಯ ಅನುಸೂಚಿ

### [244(2) ಮತ್ತು 275(1)ನೆಯ ಅನುಚ್ಛೇದಗಳು]

### [1][ಅಸ್ಸಾಂ, ಮೇಘಾಲಯ, ತ್ರಿಪುರ ಮತ್ತು ಮಿಜೋರಾಂ ರಾಜ್ಯಗಳ] ಬುಡಕಟ್ಟು ಪ್ರದೇಶಗಳ ಆಡಳಿತದ ಬಗ್ಗೆ ಉಪಬಂಧಗಳು

[2]**1. ಸ್ವಾಯತ್ತ ಜಿಲ್ಲೆಗಳು ಮತ್ತು ಸ್ವಾಯತ್ತ ಕ್ಷೇತ್ರಗಳು:-** (1) ಈ ಪ್ಯಾರಾದ ಉಪಬಂಧಗಳಿಗೆ ಒಳಪಟ್ಟು, ಈ ಅನುಸೂಚಿಯ 20ನೆಯ ಪ್ಯಾರಾಕ್ಕೆ ಅನುಬಂಧವಾಗಿ ಕೊಟ್ಟಿರುವ ಕೋಷ್ಟಕದ [3][4][ಭಾಗ I, II ಮತ್ತು IIಎ] ಮತ್ತು ಭಾಗ III] ಪ್ರತಿಯೊಂದು ಬಾಬಿನಲ್ಲಿನ ಬುಡಕಟ್ಟು ಪ್ರದೇಶಗಳು ಒಂದು ಸ್ವಾಯತ್ತ ಜಿಲ್ಲೆಯಾಗಿರತಕ್ಕದ್ದು.

(2) ಒಂದು ಸ್ವಾಯತ್ತ ಜಿಲ್ಲೆಯಲ್ಲಿ ಬೇರೆ ಬೇರೆ ಅನುಸೂಚಿತ ಬುಡಕಟ್ಟುಗಳು ಇದ್ದರೆ, ಆ ಬುಡಕಟ್ಟುಗಳ ಜನರು ವಾಸಮಾಡುವ ಪ್ರದೇಶವನ್ನು ಅಥವಾ ಪ್ರದೇಶಗಳನ್ನು ರಾಜ್ಯಪಾಲನು ಸಾರ್ವಜನಿಕ ಅಧಿಸೂಚನೆಯ ಮೂಲಕ ಸ್ವಾಯತ್ತ ಕ್ಷೇತ್ರಗಳಾಗಿ ವಿಭಾಗಿಸಬಹುದು.

(3) ರಾಜ್ಯಪಾಲನು ಸಾರ್ವಜನಿಕ ಅಧಿಸೂಚನೆಯ ಮೂಲಕ,-

(ಎ) ಯಾವುದೇ ಪ್ರದೇಶವನ್ನು ಸದರಿ ಕೋಷ್ಟಕದ [3][ಯಾವುದೇ ಭಾಗ]ದಲ್ಲಿ ಸೇರಿಸಬಹುದು,

(ಬಿ) ಯಾವುದೇ ಪ್ರದೇಶವನ್ನು ಸದರಿ ಕೋಷ್ಟಕದ [3][ಯಾವುದೇ ಭಾಗ]ದಿಂದ ಹೊರತುಪಡಿಸಬಹುದು,

(ಸಿ) ಹೊಸ ಸ್ವಾಯತ್ತ ಜಿಲ್ಲೆಯನ್ನು ಸೃಜಿಸಬಹುದು,

(ಡಿ) ಯಾವುದೇ ಸ್ವಾಯತ್ತ ಜಿಲ್ಲೆಯ ಪ್ರದೇಶವನ್ನು ಹೆಚ್ಚಿಸಬಹುದು,

(ಇ) ಯಾವುದೇ ಸ್ವಾಯತ್ತ ಜಿಲ್ಲೆಯ ಪ್ರದೇಶವನ್ನು ಕಡಿಮೆ ಮಾಡಬಹುದು,

(ಎಫ್) ಎರಡು ಅಥವಾ ಹೆಚ್ಚು ಸ್ವಾಯತ್ತ ಜಿಲ್ಲೆಗಳನ್ನು ಅಥವಾ ಅವುಗಳ ಭಾಗಗಳನ್ನು ಒಂದೇ ಸ್ವಾಯತ್ತ ಜಿಲ್ಲೆಯಾಗುವಂತೆ ಒಟ್ಟುಗೂಡಿಸಬಹುದು,

[5][(ಎಫ್‌ಎಫ್) ಯಾವುದೇ ಸ್ವಾಯತ್ತ ಜಿಲ್ಲೆಯ ಹೆಸರನ್ನು ಬದಲಾಯಿಸಬಹುದು;]

(ಜಿ) ಯಾವುದೇ ಸ್ವಾಯತ್ತ ಜಿಲ್ಲೆಯ ಸರಹದ್ದುಗಳನ್ನು ನಿರ್ದಿಷ್ಟಪಡಿಸಬಹುದು :

ಪರಂತು, ಈ ಅನುಸೂಚಿಯ 14ನೆಯ ಪ್ಯಾರಾದ (1) ನೆಯ ಉಪಪ್ಯಾರಾದ ಮೇರೆಗೆ ನೇಮಕಗೊಂಡ ಆಯೋಗದ ವರದಿಯನ್ನು ಪರ್ಯಾಲೋಚನೆ ಮಾಡಿದ ತರುವಾಯವಲ್ಲದೆ ರಾಜ್ಯಪಾಲನು ಈ ಉಪಪ್ಯಾರಾದ (ಸಿ), (ಡಿ), (ಇ) ಮತ್ತು (ಎಫ್) ಖಂಡಗಳ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ:

---

1. 1986ನೇ ಇಸವಿಯ ಮಿಜೋರಾಂ ರಾಜ್ಯ ಅಧಿನಿಯಮದ (1986ರ 34) 39ನೆಯ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ (20-2-1987ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಅಸ್ಸಾಂ ರಾಜ್ಯಕ್ಕೆ ಅನ್ವಯವಾಗುವುದಕ್ಕಾಗಿ 1ನೇ ಪ್ಯಾರಾವನ್ನು 2003ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (2003ರ 44) 2ನೇ ಪ್ರಕರಣದ ಮೂಲಕ, 2ನೇ ಪ್ಯಾರಾದ ತರುವಾಯ ಕೆಳಕಂಡ ಪರಂತುಕವನ್ನು ಸೇರಿಸಲು ತಿದ್ದುಪಡಿ ಮಾಡಲಾಗಿದೆ, ಎಂದರೆ:-
   "ಪರಂತು ಈ ಉಪಪ್ಯಾರಾದಲ್ಲಿ ಇರುವುದು ಯಾವುದೂ ಬೋಡೊಲ್ಯಾಂಡ್ ರಾಜ್ಯಕ್ಷೇತ್ರೀಯ ಪ್ರದೇಶಗಳ ಜಿಲ್ಲೆಗೆ ಅನ್ವಯವಾಗತಕ್ಕದ್ದಲ್ಲ."
3. 1971ನೇ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971 ರ 81) 71(i)ನೆಯ ಪ್ರಕರಣದ ಮತ್ತು ಎಂಟನೆಯ ಅನುಸೂಚಿಯ ಮೇರೆಗೆ (21-1-1972 ರಿಂದ ಜಾರಿಗೆ ಬರುವಂತೆ) "ಭಾಗ ಎ" ಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
4. 1984ನೇ ಇಸವಿಯ ಸಂವಿಧಾನ (ನಲವತ್ತೊಂಬತನೆಯ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ (1-4-1985ರಿಂದ ಜಾರಿಗೆ ಬರುವಂತೆ) "ಭಾಗ I ಮತ್ತು II" ಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. 1969ನೇ ಇಸವಿಯ ಅಸ್ಸಾಂ ಪುನರ್‌ವಿಂಗಡಣೆ (ಮೇಘಾಲಯ) ಅಧಿನಿಯಮದ (1969ರ 55) 74ನೇ ಪ್ರಕರಣದ ಮತ್ತು ನಾಲ್ಕನೇ ಅನುಸೂಚಿಯ ಮೂಲಕ (2.4.1970 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

[1][ಮತ್ತೂ ಪರಂತು, ಈ ಉಪಪ್ಯಾರಾದ ಮೇರೆಗೆ ರಾಜ್ಯಪಾಲನು ಮಾಡಿದ ಯಾವುದೇ ಆದೇಶವನ್ನು (20ನೆಯ ಪ್ಯಾರಾದ ಮತ್ತು ಸದರಿ ಕೋಷ್ಟಕದ ಯಾವುದೇ ಭಾಗದ ಯಾವುದೇ ಬಾಬಿನ ತಿದ್ದುಪಡಿಯನ್ನು ಒಳಗೊಂಡು) ಕಾರ್ಯರೂಪಕ್ಕೆ ತರಲು ಅವಶ್ಯಕವೆಂದು ರಾಜ್ಯಪಾಲನಿಗೆ ಕಂಡುಬರಬಹುದಾದಂಥ ಪ್ರಾಸಂಗಿಕ ಮತ್ತು ಆನುಷಂಗಿಕ ಉಪಬಂಧಗಳನ್ನು ಆ ಆದೇಶವು ಒಳಗೊಂಡಿರಬಹುದು.]

[2]**2. ಜಿಲ್ಲಾ ಪರಿಷತ್ತುಗಳ ಮತ್ತು ಪ್ರಾದೇಶಿಕ ಪರಿಷತ್ತುಗಳ ರಚನೆ:–** [3][(1) ಪ್ರತಿಯೊಂದು ಸ್ವಾಯತ್ತ ಜಿಲ್ಲೆಯು ಮೂವತ್ತಕ್ಕೆ ಹೆಚ್ಚಿಲ್ಲದಷ್ಟು ಸದಸ್ಯರನ್ನು ಒಳಗೊಂಡಿರುವ ಒಂದು ಜಿಲ್ಲಾ ಪರಿಷತ್ತನ್ನು ಹೊಂದಿರತಕ್ಕದ್ದು; ಆ ಸದಸ್ಯರ ಪೈಕಿ ನಾಲ್ಕಕ್ಕೆ ಹೆಚ್ಚಲ್ಲದಷ್ಟು ವ್ಯಕ್ತಿಗಳನ್ನು ರಾಜ್ಯಪಾಲನು ನಾಮನಿರ್ದೇಶನ ಮಾಡತಕ್ಕದ್ದು ಮತ್ತು ಉಳಿದವರನ್ನು ವಯಸ್ಕ ಮತದಾನದ ಆಧಾರದ ಮೇಲೆ ಚುನಾಯಿಸತಕ್ಕದ್ದು.]

(2) ಈ ಅನುಸೂಚಿಯ 1ನೆಯ ಪ್ಯಾರಾದ (2) ನೆಯ ಉಪಪ್ಯಾರಾದ ಮೇರೆಗೆ ಸ್ವಾಯತ್ತ ಕ್ಷೇತ್ರವಾಗಿ ರಚಿತವಾದ ಪ್ರತಿಯೊಂದು ಪ್ರದೇಶಕ್ಕೆ ಒಂದು ಪ್ರತ್ಯೇಕವಾದ ಪ್ರಾದೇಶಿಕ ಪರಿಷತ್ತು ಇರತಕ್ಕದ್ದು.

(3) ಪ್ರತಿಯೊಂದು ಜಿಲ್ಲಾ ಪರಿಷತ್ತು ಮತ್ತು ಪ್ರತಿಯೊಂದು ಪ್ರಾದೇಶಿಕ ಪರಿಷತ್ತು ಅನುಕ್ರಮವಾಗಿ ............ (ಜಿಲ್ಲೆಯ ಹೆಸರು) ಜಿಲ್ಲಾ ಪರಿಷತ್ತು ಮತ್ತು .............. (ಕ್ಷೇತ್ರದ ಹೆಸರು) ಪ್ರಾದೇಶಿಕ ಪರಿಷತ್ತು ಎಂಬ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು, ಅದು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಆ ಹೆಸರಿನಿಂದ ದಾವೆಯನ್ನು ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು.

(4) ಈ ಅನುಸೂಚಿಯ ಉಪಬಂಧಗಳಿಗೆ ಒಳಪಟ್ಟು, ಒಂದು ಸ್ವಾಯತ್ತ ಜಿಲ್ಲೆಯ ಆಡಳಿತವು, ಈ ಅನುಸೂಚಿಯ ಮೇರೆಗೆ ಅದು ಅಂಥ ಜಿಲ್ಲೆಯೊಳಗಿನ ಯಾವುದೇ ಪ್ರಾದೇಶಿಕ ಪರಿಷತ್ತಿನಲ್ಲಿ ನಿಹಿತವಾಗಿಲ್ಲದಿರುವಷ್ಟರ ಮಟ್ಟಿಗೆ, ಅಂಥ ಜಿಲ್ಲೆಯ ಜಿಲ್ಲಾ ಪರಿಷತ್ತಿನಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಒಂದು ಸ್ವಾಯತ್ತ ಕ್ಷೇತ್ರದ ಆಡಳಿತವು ಅಂಥ ಪ್ರದೇಶದ ಪ್ರಾದೇಶಿಕ ಪರಿಷತ್ತಿನಲ್ಲಿ ನಿಹಿತವಾಗಿರತಕ್ಕದ್ದು.

(5) ಪ್ರಾದೇಶಿಕ ಪರಿಷತ್ತುಗಳನ್ನುಳ್ಳ ಒಂದು ಸ್ವಾಯತ್ತ ಜಿಲ್ಲೆಯ ಜಿಲ್ಲಾ ಪರಿಷತ್ತಿಗೆ, ಪ್ರಾದೇಶಿಕ ಪರಿಷತ್ತಿನ ಪ್ರಾಧಿಕಾರಕ್ಕೆ ಅಧೀನವಾಗಿರುವ ಪ್ರದೇಶಗಳ ವಿಷಯದಲ್ಲಿ ಈ ಅನುಸೂಚಿಯ ಮೂಲಕ ಯಾವ ಅಧಿಕಾರಗಳನ್ನು ಕೊಡಲಾಗಿದೆಯೋ ಆ ಅಧಿಕಾರಗಳ ಜೊತೆಗೆ ಆ ಪ್ರಾದೇಶಿಕ ಪರಿಷತ್ತು ಆ ಪ್ರದೇಶಗಳ ವಿಷಯದಲ್ಲಿ ಆ ಜಿಲ್ಲಾ ಪರಿಷತ್ತಿಗೆ ವಹಿಸಿಕೊಡಬಹುದಾದಂಥ ಇತರ ಅಧಿಕಾರಗಳನ್ನು ಮಾತ್ರವೇ ಅದು ಹೊಂದಿರತಕ್ಕದ್ದು.

---

1. 1971ನೇ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71(i)ನೆಯ ಪ್ರಕರಣದ ಹಾಗೂ ಎಂಟನೆಯ ಅನುಸೂಚಿಯ ಮೂಲಕ (21-1-1972 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. ಅಸ್ಸಾಂ ರಾಜ್ಯಕ್ಕೆ ಅನ್ವಯವಾಗುವುದಕ್ಕಾಗಿ 2ನೇ ಪ್ಯಾರಾವನ್ನು 2003ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (2003ರ 44) 2ನೇ ಪ್ರಕರಣದ ಮೂಲಕ (1)ನೇ ಉಪಪ್ಯಾರಾದ ತರುವಾಯ ಕೆಳಕಂಡ ಪರಂತುಕವನ್ನು ಸೇರಿಸಲು ತಿದ್ದುಪಡಿ ಮಾಡಲಾಗಿದೆ, ಎಂದರೆ:–

   "ಪರಂತು, ಬೋಡೋಲ್ಯಾಂಡ್ ಪ್ರಾದೇಶಿಕ ಪರಿಷತ್ತು, ನಲವತ್ತಾರು ಸದಸ್ಯರಿಗಿಂತ ಹೆಚ್ಚಿಲ್ಲದ ಸದಸ್ಯರನ್ನು ಒಳಗೊಂಡಿರತಕ್ಕದ್ದು. ಅದರಲ್ಲಿ ನಲವತ್ತು ಸದಸ್ಯರನ್ನು ವಯಸ್ಕ ಮತದಾನದ ಆಧಾರದ ಮೇಲೆ ಚುನಾಯಿಸತಕ್ಕದ್ದು. ಅದರಲ್ಲಿ ಮೂವತ್ತು ಸ್ಥಾನಗಳನ್ನು ಅನುಸೂಚಿತ ಬುಡಕಟ್ಟುಗಳಿಗೆ, ಐದನ್ನು ಬುಡಕಟ್ಟುಗಳಲ್ಲದ ಸಮುದಾಯಗಳಿಗೆ ಮೀಸಲಿಡತಕ್ಕದ್ದು, ಐದನ್ನು ಎಲ್ಲಾ ಸಮುದಾಯಗಳಿಗೆ ಮುಕ್ತವಾಗಿಡತಕ್ಕದ್ದು ಮತ್ತು ಉಳಿದ ಆರನ್ನು ರಾಜ್ಯಪಾಲರು ನಾಮನಿರ್ದೇಶನ ಮಾಡತಕ್ಕದ್ದು. ಅವರು ಮತದಾನದ ಹಕ್ಕುಗಳನ್ನು ಒಳಗೊಂಡಂತೆ ಇತರ ಸದಸ್ಯರು ಹೊಂದಿರುವಂಥವೇ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಹೊಂದಿರತಕ್ಕದ್ದು. ಬೋಡೋಲ್ಯಾಂಡ್ ಪ್ರಾದೇಶಿಕ ಪ್ರದೇಶಗಳ ಜಿಲ್ಲೆಯ ಪ್ರಾತಿನಿಧ್ಯರಹಿತ ಸಮುದಾಯಗಳಿಗೆ ಸೇರಿದ ಕೊನೇ ಪಕ್ಷ ಇಬ್ಬರು ಮಹಿಳೆಯರು ಇರತಕ್ಕದ್ದು."

   ಅಸ್ಸಾಂ ರಾಜ್ಯಕ್ಕೆ ಅನ್ವಯವಾಗುವುದಕ್ಕಾಗಿ 2ನೇ ಪ್ಯಾರಾವನ್ನು 1995ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (1995ರ 42) 2ನೇ ಪ್ರಕರಣದ ಮೂಲಕ (3)ನೇ ಉಪಪ್ಯಾರಾದ ತರುವಾಯ ಕೆಳಕಂಡ ಪರಂತುಕವನ್ನು ಸೇರಿಸಲು ತಿದ್ದುಪಡಿ ಮಾಡಲಾಗಿದೆ. ಎಂದರೆ:–

   "ಪರಂತು, ಉತ್ತರ ಕಚಾರ್ ಗುಡ್ಡಗಾಡು ಜಿಲ್ಲೆಗಾಗಿ ರಚಿತವಾಗಿದ್ದ ಜಿಲ್ಲಾ ಪರಿಷತ್‌ನ್ನು ಉತ್ತರ ಕಚಾರ್ ಗುಡ್ಡಗಾಡು ಸ್ವಾಯತ್ತ ಪರಿಷತ್ತು ಎಂದು ಮತ್ತು ಕರ್ಬಿ ಅಂಗ್ಲಾಂಗ್ ಜಿಲ್ಲೆಗಾಗಿ ರಚಿತವಾಗಿದ್ದ ಜಿಲ್ಲಾ ಪರಿಷತ್ತನ್ನು ಕರ್ಬಿ ಅಂಗ್ಲಾಂಗ್ ಸ್ವಾಯತ್ತ ಪರಿಷತ್ತು ಎಂದು ಕರೆಯತಕ್ಕದ್ದು."

   *ಅಸ್ಸಾಂ ರಾಜ್ಯಕ್ಕೆ ಅನ್ವಯವಾಗುವುದಕ್ಕಾಗಿ 2ನೇ ಪ್ಯಾರಾವನ್ನು 2003ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (2003ರ 44) 2ನೇ ಪ್ರಕರಣದ ಮೂಲಕ (3)ನೇ ಉಪಪ್ಯಾರಾದ ಪರಂತುಕದ ತರುವಾಯ ಕೆಳಕಂಡ ಪರಂತುಕವನ್ನು ಸೇರಿಸಲು ತಿದ್ದುಪಡಿ ಮಾಡಲಾಗಿದೆ, ಎಂದರೆ:–

   "ಮತ್ತು ಪರಂತು, ಬೋಡೋಲ್ಯಾಂಡ್ ಪ್ರಾದೇಶಿಕ ಪ್ರದೇಶದ ಜಿಲ್ಲೆಗಾಗಿ ರಚಿತವಾದ ಜಿಲ್ಲಾ ಪರಿಷತ್ತನ್ನು ಬೋಡೋಲ್ಯಾಂಡ್ ಪ್ರಾದೇಶಿಕ ಪರಿಷತ್ತು ಎಂದು ಕರೆಯತಕ್ಕದ್ದು."
3. 1969ನೇ ಇಸವಿಯ ಅಸ್ಸಾಂ ಪುನರ್‌ವಿಂಗಡಣೆ (ಮೇಘಾಲಯ) ಅಧಿನಿಯಮದ (1969ರ 55) 74ನೇ ಪ್ರಕರಣ ಮತ್ತು ನಾಲ್ಕನೇ ಅನುಸೂಚಿಯ ಮೂಲಕ (1)ನೇ ಉಪ ಪ್ಯಾರಾಗೆ ಬದಲಾಗಿ (2.4.1970 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

(6) ರಾಜ್ಯಪಾಲನು ಜಿಲ್ಲಾ ಪರಿಷತ್ತುಗಳನ್ನು ಮತ್ತು ಪ್ರಾದೇಶಿಕ ಪರಿಷತ್ತುಗಳನ್ನು ಮೊದಲಬಾರಿಗೆ ರಚಿಸುವುದಕ್ಕಾಗಿ ಸಂಬಂಧಪಟ್ಟ ಸ್ವಾಯತ್ತ ಜಿಲ್ಲೆಗಳಲ್ಲಿ ಅಥವಾ ಕ್ಷೇತ್ರಗಳಲ್ಲಿ ಅಸ್ತಿತ್ವದಲ್ಲಿರುವ ಬುಡಕಟ್ಟು ಪರಿಷತ್ತುಗಳ ಅಥವಾ ಇತರ ಪ್ರಾತಿನಿಧಿಕ ಬುಡಕಟ್ಟು ಸಂಸ್ಥೆಗಳ ಜೊತೆಗೆ ಸಮಾಲೋಚಿಸಿ, ನಿಯಮಗಳನ್ನು ರಚಿಸತಕ್ಕದ್ದು ಮತ್ತು ಅಂಥ ನಿಯಮಗಳು,–

(ಎ) ಜಿಲ್ಲಾಪರಿಷತ್ತುಗಳ ಮತ್ತು ಪ್ರಾದೇಶಿಕ ಪರಿಷತ್ತುಗಳ ರಚನೆ ಮತ್ತು ಅವುಗಳಲ್ಲಿನ ಸ್ಥಾನಗಳ ಹಂಚಿಕೆ;

(ಬಿ) ಆ ಪರಿಷತ್ತುಗಳಿಗೆ ಚುನಾವಣೆಗಳನ್ನು ನಡೆಸುವ ಉದ್ದೇಶಕ್ಕಾಗಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ;

(ಸಿ) ಅಂಥ ಚುನಾವಣೆಗಳಲ್ಲಿ ಮತದಾನ ಮಾಡಲು ಇರಬೇಕಾದ ಅರ್ಹತೆಗಳು ಮತ್ತು ಚುನಾವಣೆಗಳಿಗಾಗಿ ಮತದಾರರ ಪಟ್ಟಿಗಳ ತಯಾರಿಕೆ;

(ಡಿ) ಅಂಥ ಚುನಾವಣೆಗಳಲ್ಲಿ ಅಂಥ ಪರಿಷತ್ತುಗಳ ಸದಸ್ಯರಾಗಿ ಚುನಾಯಿತರಾಗಲು ಇರಬೇಕಾದ ಅರ್ಹತೆಗಳು;

(ಇ) [1][ಪ್ರಾದೇಶಿಕ ಪರಿಷತ್ತುಗಳ] ಸದಸ್ಯರ ಪದಾವಧಿ;

(ಎಫ್) ಅಂಥ ಪರಿಷತ್ತುಗಳಿಗೆ ನಡೆಯತಕ್ಕ ಚುನಾವಣೆಗಳಿಗೆ ಅಥವಾ ಮಾಡತಕ್ಕ ನಾಮನಿರ್ದೇಶನಗಳಿಗೆ ಅನ್ವಯಿಸುವ ಅಥವಾ ಅವುಗಳಿಗೆ ಸಂಬಂಧಪಟ್ಟ ಯಾವುದೇ ಇತರ ವಿಷಯ;

(ಜಿ) ಜಿಲ್ಲಾ ಮತ್ತು ಪ್ರಾದೇಶಿಕ ಪರಿಷತ್ತುಗಳಲ್ಲಿ [2][(ಯಾವುದೇ ಖಾಲಿಸ್ಥಾನವು ಇದ್ದಾಗ್ಯೂ ಅಲ್ಲಿ ಕಾರ್ಯನಡೆಸುವ ಅಧಿಕಾರವೂ ಸೇರಿ)] ಆ ಪರಿಷತ್ತುಗಳ ಕಾರ್ಯಕಲಾಪ ಪ್ರಕ್ರಿಯೆ ಮತ್ತು ನಿರ್ವಹಣೆ;

(ಎಚ್) ಜಿಲ್ಲಾ ಮತ್ತು ಪ್ರಾದೇಶಿಕ ಪರಿಷತ್ತುಗಳ ಅಧಿಕಾರಿಗಳ ಮತ್ತು ಸಿಬ್ಬಂದಿಯ ನೇಮಕ

– ಕುರಿತು ಉಪಬಂಧ ಕಲ್ಪಿಸತಕ್ಕದ್ದು.

[2][(6ಎ) ಜಿಲ್ಲಾ ಪರಿಷತ್ತಿನ ಚುನಾಯಿತ ಸದಸ್ಯರು, ಆ ಪರಿಷತ್ತಿನ ಸಾರ್ವತ್ರಿಕ ಚುನಾವಣೆಗಳು ನಡೆದ ತರುವಾಯ ಪರಿಷತ್ತಿನ ಮೊದಲನೆಯ ಸಭೆಗೆ ಗೊತ್ತುಪಡಿಸಿದ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಮುಂಚಿತವಾಗಿ 16ನೇ ಪ್ಯಾರಾದ ಮೇರೆಗೆ ಆ ಜಿಲ್ಲಾ ಪರಿಷತ್ತನ್ನು ವಿಸರ್ಜಿಸಿದ ಹೊರತು ಐದು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ನಾಮನಿರ್ದೇಶಿತ ಸದಸ್ಯನು ರಾಜ್ಯಪಾಲನ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು:

ಪರಂತು, ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಾಗ ಅಥವಾ ಚುನಾವಣೆಗಳನ್ನು ನಡೆಸುವುದು ಕಾರ್ಯಸಾಧ್ಯವಾಗದಂಥ ಸನ್ನಿವೇಶಗಳು ಇವೆ ಎಂದು ರಾಜ್ಯಪಾಲನು ಅಭಿಪ್ರಾಯಪಟ್ಟರೆ, ಅವನು ಸದರಿ ಐದು ವರ್ಷಗಳ ಅವಧಿಯನ್ನು ಒಂದು ಸಲಕ್ಕೆ ಒಂದು ವರ್ಷಕ್ಕೆ ಮೀರದಷ್ಟು ಅವಧಿಯವರೆಗೆ ವಿಸ್ತರಿಸಬಹುದು ಮತ್ತು ತುರ್ತುಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಂಥ ಯಾವುದೇ ಸಂದರ್ಭದಲ್ಲಿ ಆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋದ ತರುವಾಯ ಆರು ತಿಂಗಳುಗಳ ಅವಧಿಗೆ ಮೀರದಂತೆ ವಿಸ್ತರಿಸಬಹುದು:

ಮತ್ತು ಪರಂತು, ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡುವುದಕ್ಕಾಗಿ ಚುನಾಯಿತನಾದ ಸದಸ್ಯನು, ತಾನು ಯಾವ ಸದಸ್ಯನ ಸ್ಥಾನಕ್ಕೆ ಚುನಾಯಿತನಾಗಿ ಬಂದಿದ್ದಾನೋ ಆ ಸದಸ್ಯನ ಉಳಿದ ಪದಾವಧಿಯವರೆಗೆ ಮಾತ್ರವೇ ಪದದಲ್ಲಿರತಕ್ಕದ್ದು.]

(7) ಜಿಲ್ಲಾ ಅಥವಾ ಪ್ರಾದೇಶಿಕ ಪರಿಷತ್ತು ಮೊದಲನೆಯ ಸಲ ರಚಿತವಾದ ತರುವಾಯ ಅದು [2][ರಾಜ್ಯಪಾಲನ ಅನುಮೋದನೆಯನ್ನು ಪಡೆದು] ಈ ಪ್ಯಾರಾದ (6) ನೇಯ ಉಪಪ್ಯಾರಾದಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳನ್ನು ಕುರಿತು ನಿಯಮಗಳನ್ನು ರಚಿಸಬಹುದು, ಮತ್ತು [2][ಅಂಥ ಅನುಮೋದನೆಯನ್ನು ಪಡೆದು]–

---

1. 1969ನೇ ಇಸವಿಯ ಅಸ್ಸಾಂ ಪುನರ್‌ವಿಂಗಡಣೆ (ಮೇಘಾಲಯ) ಅಧಿನಿಯಮದ (1969ರ 55) 74ನೇ ಪ್ರಕರಣ ಮತ್ತು ನಾಲ್ಕನೇ ಅನುಸೂಚಿಯ ಮೂಲಕ "ಅಂಥ ಪರಿಷತ್ತುಗಳ" ಎಂಬುದಕ್ಕೆ ಬದಲಾಗಿ (2.4.1970 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಅದೇ ಅಧಿನಿಯಮದ 74ನೇ ಪ್ರಕರಣ ಮತ್ತು ನಾಲ್ಕನೇ ಅನುಸೂಚಿಯ ಮೂಲಕ (2.4.1970 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(ಎ) ಅಧೀನ ಸ್ಥಳೀಯ ಪರಿಷತ್ತುಗಳ ಅಥವಾ ಮಂಡಲಿಗಳ ರಚನೆ ಮತ್ತು ಅವುಗಳ ಕಾರ್ಯವಿಧಾನ ಮತ್ತು ಅವುಗಳ ಕಾರ್ಯಕಲಾಪ ನಿರ್ವಹಣೆಯನ್ನು; ಮತ್ತು

(ಬಿ) ಜಿಲ್ಲೆಯ ಅಥವಾ ಸಂದರ್ಭಾನುಸಾರ ಕ್ಷೇತ್ರದ ಆಡಳಿತಕ್ಕೆ ಸಂಬಂಧಿಸಿದ ವ್ಯವಹಾರ ನಿರ್ವಹಣೆಯ ಬಗೆಗಿನ ಸಾಮಾನ್ಯವಾಗಿ ಎಲ್ಲ ವಿಷಯಗಳನ್ನು

– ವಿನಿಯಮಿಸುವ ನಿಯಮಗಳನ್ನು ಕೂಡ ರಚಿಸಬಹುದು:

ಪರಂತು, ಈ ಉಪಪ್ಯಾರಾದ ಮೇರೆಗೆ ಜಿಲ್ಲಾ ಅಥವಾ ಪ್ರಾದೇಶಿಕ ಪರಿಷತ್ತು ನಿಯಮಗಳನ್ನು ರಚಿಸುವವರೆಗೆ, ಅಂಥ ಪ್ರತಿಯೊಂದು ಪರಿಷತ್ತಿನ ಚುನಾವಣೆಗಳು, ಪರಿಷತ್ತಿನ ಪದಾಧಿಕಾರಿಗಳು ಮತ್ತು ಸಿಬ್ಬಂದಿ ಮತ್ತು ಪರಿಷತ್ತಿನ ಕಾರ್ಯವಿಧಾನ ಮತ್ತು ಕಾರ್ಯಕಲಾಪ ನಿರ್ವಹಣೆಗೆ ಸಂಬಂಧಿಸಿದಂತೆ ರಾಜ್ಯಪಾಲನು ಈ ಪ್ಯಾರಾದ (6) ನೆಯ ಉಪಪ್ಯಾರಾದ ಮೇರೆಗೆ ರಚಿಸಿದ ನಿಯಮಗಳೇ ಪರಿಣಾಮಕಾರಿಯಾಗಿರತಕ್ಕದ್ದು.

[1]* * * * * *

[2]**3. ಕಾನೂನುಗಳನ್ನು ರಚಿಸಲು ಜಿಲ್ಲಾ ಪರಿಷತ್ತುಗಳ ಮತ್ತು ಪ್ರಾದೇಶಿಕ ಪರಿಷತ್ತುಗಳ ಅಧಿಕಾರಗಳು:–** (1) ಒಂದು ಸ್ವಾಯತ್ತ ಕ್ಷೇತ್ರದೊಳಗಿನ ಎಲ್ಲಾ ಪ್ರದೇಶಗಳಿಗೆ ಸಂಬಂಧಿಸಿದಂತೆ ಅಂಥ ಪ್ರಾದೇಶಿಕ ಪರಿಷತ್ತು ಮತ್ತು ಒಂದು ಸ್ವಾಯತ್ತ ಜಿಲ್ಲೆಯೊಳಗಿನ ಪ್ರಾದೇಶಿಕ ಪರಿಷತ್ತುಗಳ ಪ್ರಾಧಿಕಾರಕ್ಕೆ ಅಧೀನದಲ್ಲಿ ಯಾವುದಾದರೂ ಪ್ರದೇಶಗಳು ಇದ್ದರೆ ಅವುಗಳನ್ನು ಹೊರತುಪಡಿಸಿ ಆ ಜಿಲ್ಲೆಯೊಳಗಿನ ಎಲ್ಲ ಪ್ರದೇಶಗಳಿಗೆ ಸಂಬಂಧಿಸಿದಂತೆ ಆ ಜಿಲ್ಲೆಯ ಜಿಲ್ಲಾ ಪರಿಷತ್ತು,–

---

1. 1969ನೇ ಇಸವಿಯ ಅಸ್ಸಾಂ ಪುನರ್‌ವಿಂಗಡಣೆ (ಮೇಘಾಲಯ) ಅಧಿನಿಯಮ (1969ರ 55) ದ 74ನೇ ಪ್ರಕರಣದ ಮತ್ತು ನಾಲ್ಕನೇ ಅನುಸೂಚಿಯ ಮೂಲಕ (2.4.1970 ರಿಂದ ಜಾರಿಗೆ ಬರುವಂತೆ) ಎರಡನೇ ಪರಂತುಕವನ್ನು ಬಿಟ್ಟುಬಿಡಲಾಗಿದೆ.

2. ಅಸ್ಸಾಂ ರಾಜ್ಯಕ್ಕೆ ಅನ್ವಯವಾಗುವುದಕ್ಕಾಗಿ 3ನೇ ಪ್ಯಾರಾವನ್ನು 2003ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (2003ರ 44) 2ನೇ ಪ್ರಕರಣದ ಮೂಲಕ (3)ನೇ ಉಪ ಪ್ಯಾರಾವನ್ನು ಈ ಮುಂದಿನಂತೆ ಪ್ರತ್ಯಾಯೋಜಿಸುವುದಕ್ಕಾಗಿ ತಿದ್ದುಪಡಿ ಮಾಡಲಾಗಿದೆ, ಎಂದರೆ:–

"(3) 3ಎ ಪ್ಯಾರಾದ (2)ನೇ ಉಪ–ಪ್ಯಾರಾದಲ್ಲಿ ಅಥವಾ 3ಬಿ ಪ್ಯಾರಾದ (2)ನೇ ಉಪಪ್ಯಾರಾದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಪ್ಯಾರಾದ ಅಥವಾ 3ಎ ಪ್ಯಾರಾದ (1)ನೇ ಉಪ–ಪ್ಯಾರಾದ ಅಥವಾ 3ಬಿ ಪ್ಯಾರಾದ (1)ನೇ ಉಪ–ಪ್ಯಾರಾದ ಮೇರೆಗೆ ರಚಿಸಿದ ಎಲ್ಲಾ ಕಾನೂನುಗಳನ್ನು ಕೂಡಲೇ ರಾಜ್ಯಪಾಲರಿಗೆ ಸಲ್ಲಿಸತಕ್ಕದ್ದು ಮತ್ತು ಅವನ ಸಮ್ಮತಿ ಸಿಗುವವರೆಗೆ ಅವು ಪರಿಣಾಮಕಾರಿಯಾಗತಕ್ಕದ್ದಲ್ಲ."

ಅಸ್ಸಾಂ ರಾಜ್ಯಕ್ಕೆ ಅನ್ವಯವಾಗುವುದಕ್ಕಾಗಿ 1995ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (1995ರ 45) 2ನೇ ಪ್ರಕರಣದ ಮೂಲಕ 3ನೇ ಪ್ಯಾರಾದ ನಂತರ ಈ ಮುಂದಿನ ಪ್ಯಾರಾವನ್ನು ಸೇರಿಸಲಾಗಿದೆ, ಎಂದರೆ:–

"**3ಎ. ಕಾನೂನುಗಳನ್ನು ರಚಿಸಲು ಉತ್ತರ ಕಚಾರ್ ಗುಡ್ಡಗಾಡು ಸ್ವಾಯತ್ತ ಪರಿಷತ್ತಿಗೆ ಮತ್ತು ಕಾರ್ಬಿ ಆಂಗ್ಲಾಂಗ್ ಸ್ವಾಯತ್ತ ಪರಿಷತ್ತಿಗೆ ಇರುವ ಹೆಚ್ಚುವರಿ ಅಧಿಕಾರಗಳು:–** (1) 3ನೇ ಪ್ಯಾರಾದ ಉಪಬಂಧಗಳಿಗೆ ಬಾಧಕವಾಗದಂತೆ ಉತ್ತರ ಕಚಾರ್ ಗುಡ್ಡಗಾಡು ಸ್ವಾಯತ್ತ ಮತ್ತು ಕಾರ್ಬಿ ಆಂಗ್ಲಾಂಗ್ ಸ್ವಾಯತ್ತ ಪರಿಷತ್ತಿಗೆ ತಮ್ಮ ತಮ್ಮ ಜಿಲ್ಲೆಗಳಲ್ಲಿ,–

(ಎ) ಏಳನೆಯ ಅನುಸೂಚಿಯ Iನೇ ಪಟ್ಟಿಯ 7 ಮತ್ತು 52ನೇ ನಮೂದುಗಳ ಉಪಬಂಧಗಳಿಗೆ ಒಳಪಟ್ಟು, ಕೈಗಾರಿಕೆಗಳು;

(ಬಿ) ಸಂಪರ್ಕ ಸಾಧನಗಳು, ಎಂದರೆ ರಸ್ತೆಗಳು, ಸೇತುವೆಗಳು, ಹಾಯಿಗಡಗಳು ಮತ್ತು ಏಳನೆಯ ಅನುಸೂಚಿಯ Iನೇ ಪಟ್ಟಿಯಲ್ಲಿ ನಿರ್ದಿಷ್ಟಪಡಿಸದಿರುವಂತಹ ಇತರ ಸಂಪರ್ಕ ಸಾಧನಗಳು; ಮುನಿಸಿಪಲ್ ಟ್ರಾಂವೇಗಳು, ರೋಪ್‌ವೇಗಳು, ಒಳನಾಡು ಜಲಮಾರ್ಗಗಳು, ಅಂತಹ ಜಲಮಾರ್ಗಗಳಿಗೆ ಸಂಬಂಧಪಟ್ಟಂತೆ ಏಳನೆಯ ಅನುಸೂಚಿಯ I ಮತ್ತು IIIನೇ ಪಟ್ಟಿಯ ಉಪಬಂಧಗಳಿಗೆ ಒಳಪಟ್ಟು ಆ ಜಲಮಾರ್ಗಗಳ ಮೇಲಿನ ಸಂಚಾರ ವ್ಯವಸ್ಥೆ; ಯಂತ್ರಚಾಲಿತ ವಾಹನಗಳನ್ನು ಹೊರತುಪಡಿಸಿ ಇತರ ವಾಹನಗಳು;

(ಸಿ) ಜಾನುವಾರುಗಳ ಸಂರಕ್ಷಣೆ, ರಕ್ಷಣೆ ಹಾಗೂ ತಳಿ ಸುಧಾರಣೆ ಮತ್ತು ಪ್ರಾಣಿರೋಗಗಳ ನಿವಾರಣೆ, ಪಶುವೈದ್ಯಕೀಯ ತರಬೇತಿ ಮತ್ತು ವೃತ್ತಿ; ದನದ ದೊಡ್ಡಿಗಳು;

(ಡಿ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ;

(ಇ) ಕೃಷಿ ಶಿಕ್ಷಣ ಮತ್ತು ಸಂಶೋಧನೆಯೂ ಸೇರಿ ಕೃಷಿ, ಕೀಟಗಳಿಂದ ರಕ್ಷಣೆ ಮತ್ತು ಸಸ್ಯರೋಗಗಳ ನಿವಾರಣೆ;

(ಎಫ್) ಮೀನುಗಾರಿಕೆ;

(ಜಿ) ಏಳನೇ ಅನುಸೂಚಿಯ Iನೇ ಪಟ್ಟಿಯ 56ನೇ ನಮೂದಿನ ಉಪಬಂಧಗಳಿಗೆ ಒಳಪಟ್ಟು, ನೀರು ಎಂದರೆ ನೀರು ಪೂರೈಕೆ, ನೀರಾವರಿ ಮತ್ತು ನಾಲೆಗಳು, ಕಾಲುವೆಗಳು, ಮತ್ತು ಒಡ್ಡುಗಳು, ಜಲ ಸಂಗ್ರಹಾಗಾರ ಮತ್ತು ಜಲವಿದ್ಯುತ್ತು;

(ಹೆಚ್) ಸಾಮಾಜಿಕ ಭದ್ರತೆ ಮತ್ತು ಸಾಮಾಜಿಕ ವಿಮೆ; ಉದ್ಯೋಗ ಮತ್ತು ನಿರುದ್ಯೋಗ;

(ಐ) ಪ್ರವಾಹದಿಂದ ಗ್ರಾಮಗಳ, ಬತ್ತದ ಗದ್ದೆಗಳ, ಮಾರುಕಟ್ಟೆಗಳ, ಪಟ್ಟಣಗಳು ಇತ್ಯಾದಿಗಳ ರಕ್ಷಣೆಗಾಗಿ (ತಾಂತ್ರಿಕ ಸ್ವರೂಪವಲ್ಲದ) ಪ್ರವಾಹ ನಿಯಂತ್ರಣ ಪರಿಯೋಜನೆಗಳು;

(ಜೆ) ರಂಗಮಂದಿರ ಮತ್ತು ನಾಟಕ ಪ್ರದರ್ಶನ, ಏಳನೇ ಅನುಸೂಚಿಯ Iನೇ ಪಟ್ಟಿಯ 60ನೇ ನಮೂದಿನ ಉಪಬಂಧಗಳಿಗೆ ಒಳಪಟ್ಟು ಸಿನಿಮಾಗಳು, ಕ್ರೀಡೆಗಳು, ಮನರಂಜನೆಗಳು ಮತ್ತು ವಿನೋದಾವಳಿ;

(ಕೆ) ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ ವ್ಯವಸ್ಥೆ, ಆಸ್ಪತ್ರೆಗಳು ಮತ್ತು ಔಷಧಾಲಯಗಳು;

(ಎಲ್) ಸಣ್ಣ ನೀರಾವರಿ;

(ಎಂ) ಆಹಾರ ಸಾಮಗ್ರಿಗಳ, ಜಾನುವಾರುಗಳ ಮೇವಿನ, ಕಚ್ಚಾ ಹತ್ತಿ ಮತ್ತು ಕಚ್ಚಾ ಸೆಣಬಿನ ವ್ಯಾಪಾರ ಮತ್ತು ವಾಣಿಜ್ಯ ಮತ್ತು ಅವುಗಳ ಉತ್ಪಾದನೆ, ಸರಬರಾಜು ಮತ್ತು ವಿತರಣೆ;

(ಎನ್) ರಾಜ್ಯದ ನಿಯಂತ್ರಣಕ್ಕೊಳಪಟ್ಟ ಅಥವಾ ರಾಜ್ಯದಿಂದ ಆರ್ಥಿಕ ನೆರವು ಪಡೆಯುತ್ತಿರುವ ಗ್ರಂಥಾಲಯಗಳು, ವಸ್ತು ಸಂಗ್ರಹಾಲಯಗಳು ಮತ್ತು ಅಂಥವೇ ಇತರ ಸಂಸ್ಥೆಗಳು, ಸಂಸತ್ತು ಮಾಡಿದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ರಾಷ್ಟ್ರೀಯ ಮಹತ್ವದವುಗಳೆಂದು ಘೋಷಿಸಲಾಗಿರುವವುಗಳನ್ನು ಹೊರತುಪಡಿಸಿ ಇತರ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ದಾಖಲೆಗಳು; ಮತ್ತು

(ಓ) ಭೂಮಿಯ ಪರಭಾರೆ

– ಕುರಿತು ಕಾನೂನುಗಳನ್ನು ರಚಿಸಲು ಅಧಿಕಾರವಿರತಕ್ಕದ್ದು.

(2) 3ನೇ ಪ್ಯಾರಾದ ಮೇರೆಗೆ ಅಥವಾ ಈ ಪ್ಯಾರಾದ ಮೇರೆಗೆ ಉತ್ತರ ಕಚಾರ್ ಗುಡ್ಡಗಾಡು ಸ್ವಾಯತ್ತ ಪರಿಷತ್ತು ಮತ್ತು ಕಾರ್ಬಿ ಆಂಗ್ಲಾಂಗ್ ಸ್ವಾಯತ್ತ ಪರಿಷತ್ತು ರಚಿಸಿರುವ ಕಾನೂನುಗಳು ಏಳನೇ ಅನುಸೂಚಿಯ IIIನೇ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ಅವುಗಳನ್ನು ರಾಜ್ಯಪಾಲನಿಗೆ ತಕ್ಷಣವೇ ಒಪ್ಪಿಸತಕ್ಕದ್ದು. ರಾಜ್ಯಪಾಲನು ಅವುಗಳನ್ನು ರಾಷ್ಟ್ರಪತಿಯ ಪರ್ಯಾಲೋಚನೆಗೆ ಕಾಯ್ದಿರಿಸತಕ್ಕದ್ದು.

(3) ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಒಂದು ಕಾನೂನನ್ನು ಕಾಯ್ದಿರಿಸಿರುವಾಗ, ರಾಷ್ಟ್ರಪತಿಯು ತಾನು ಸದರಿ ಕಾನೂನಿಗೆ ಅನುಮತಿ ನೀಡಿರುವುದಾಗಿ ಅಥವಾ ಅನುಮತಿ ನೀಡಿಕೆಯನ್ನು ತಡೆಹಿಡಿದಿರುವುದಾಗಿ ಘೋಷಿಸತಕ್ಕದ್ದು:

ಪರಂತು, ರಾಷ್ಟ್ರಪತಿಯು ಆ ಕಾನೂನನ್ನು ಪುನರ್‌ಪರಿಶೀಲಿಸಬೇಕೆಂದು ಅಥವಾ ಆ ಕಾನೂನಿನ ನಿರ್ದಿಷ್ಟ ಉಪಬಂಧಗಳನ್ನು ಪುನರ್ ಪರಿಶೀಲಿಸಬೇಕೆಂದು ಕೋರುವ ಸಂದೇಶದೊಂದಿಗೆ, ವಿಶೇಷವಾಗಿ ಆ ಸಂದೇಶದಲ್ಲಿ ತಾನು ಶಿಫಾರಸ್ಸು ಮಾಡಬಹುದಾದಂಥ ಯಾವುದೇ ತಿದ್ದುಪಡಿಗಳನ್ನು ಮಂಡಿಸುವ ಅಪೇಕ್ಷೆಯನ್ನು ಪರಿಶೀಲಿಸಬೇಕೆಂಬ ಸಂದೇಶದೊಂದಿಗೆ ಆ ಕಾನೂನನ್ನು ಉತ್ತರ ಕಚಾರ್ ಗುಡ್ಡಗಾಡು ಸ್ವಾಯತ್ತ ಪರಿಷತ್ತಿಗೆ ಅಥವಾ ಸಂದರ್ಭಾನುಸಾರ ಕಾರ್ಬಿ ಆಂಗ್ಲಾಂಗ್ ಸ್ವಾಯತ್ತ ಪರಿಷತ್ತಿಗೆ ಹಿಂತಿರುಗಿಸಬೇಕೆಂದು ರಾಜ್ಯಪಾಲನಿಗೆ ನಿರ್ದೇಶಿಸಬಹುದು ಮತ್ತು ಆ ಕಾನೂನನ್ನು ಹಾಗೆ ಹಿಂತಿರುಗಿಸಿದಾಗ ಸದರಿ ಪರಿಷತ್ತು ಸಂದೇಶಕ್ಕನುಗುಣವಾಗಿ, ಅಂತಹ ಸಂದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳೊಳಗೆ ಆ ಕಾನೂನನ್ನು ಪರಿಶೀಲಿಸತಕ್ಕದ್ದು ಮತ್ತು ಆ ಕಾನೂನನ್ನು ಸದರಿ ಪರಿಷತ್ತು ತಿದ್ದುಪಡಿಗಳೊಂದಿಗೆ ಅಥವಾ ತಿದ್ದುಪಡಿ ಇಲ್ಲದೆ ಪುನಃ ಅಂಗೀಕರಿಸಿದರೆ ಆ ಕಾನೂನನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಪುನಃ ಒಪ್ಪಿಸತಕ್ಕದ್ದು.".

ಅಸ್ಸಾಂ ರಾಜ್ಯಕ್ಕೆ ಅನ್ವಯವಾಗುವುದಕ್ಕಾಗಿ 2003ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (2003ರ 44) 2ನೇ ಪ್ರಕರಣದ ಮೂಲಕ 3ಎ ಪ್ಯಾರಾದ ತರುವಾಯ ಈ ಮುಂದಿನ ಪ್ಯಾರಾವನ್ನು ಸೇರಿಸಲಾಗಿದೆ, ಎಂದರೆ:–

"**3ಬಿ. ಕಾನೂನುಗಳನ್ನು ರಚಿಸಲು ಬೋಡೋಲ್ಯಾಂಡ್ ಪ್ರಾದೇಶಿಕ ಪರಿಷತ್ತಿನ ಹೆಚ್ಚುವರಿ ಅಧಿಕಾರಗಳು.**– (1) 3ನೇ ಪ್ಯಾರಾದ ಉಪಬಂಧಗಳಿಗೆ ಬಾಧಕವಾಗದಂತೆ, ಬೋಡೋ ಲ್ಯಾಂಡ್ ಪ್ರಾದೇಶಿಕ ಪರಿಷತ್ತು ಅದರ ಪ್ರದೇಶಗಳೊಳಗೆ:– (i) ಕೃಷಿ ಶಿಕ್ಷಣ ಮತ್ತು ಸಂಶೋಧನೆಯೂ ಸೇರಿ ಕೃಷಿ, ಕೀಟಗಳಿಂದ ರಕ್ಷಣೆ ಮತ್ತು ಸಸ್ಯರೋಗಗಳ ನಿವಾರಣೆ; (ii) ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ, ಎಂದರೆ ಜಾನುವಾರುಗಳ ಸಂರಕ್ಷಣೆ ಮತ್ತು ತಳಿ ಸುಧಾರಣೆ ಹಾಗೂ ಪ್ರಾಣಿ ರೋಗಗಳ ನಿವಾರಣೆ, ಪಶು ವೈದ್ಯಕೀಯ ತರಬೇತಿ ಮತ್ತು ವೃತ್ತಿ, ದನದ ದೊಡ್ಡಿಗಳು; (iii) ಸಹಕಾರ; (iv) ಸಾಂಸ್ಕೃತಿಕ ವ್ಯವಹಾರಗಳು; (v) ಶಿಕ್ಷಣ, ಎಂದರೆ ಪ್ರಾಥಮಿಕ ಶಿಕ್ಷಣ, ವೃತ್ತಿ ಶಿಕ್ಷಣವೂ ಸೇರಿದಂತೆ ಪ್ರೌಢ ಶಿಕ್ಷಣ, ವಯಸ್ಕರ ಶಿಕ್ಷಣ, ಕಾಲೇಜು ಶಿಕ್ಷಣ (ಸಾಮಾನ್ಯ); (vi) ಮೀನುಗಾರಿಕೆ; (vii) ಪ್ರವಾಹದಿಂದ ಗ್ರಾಮಗಳ, ಬತ್ತದ ಗದ್ದೆಗಳ, ಮಾರುಕಟ್ಟೆಗಳ ಮತ್ತು ಪಟ್ಟಣಗಳ ರಕ್ಷಣೆಗಾಗಿ (ತಾಂತ್ರಿಕ ಸ್ವರೂಪದ್ದಲ್ಲದ) ಪ್ರವಾಹ ನಿಯಂತ್ರಣ; (viii) ಆಹಾರ ಮತ್ತು

ನಾಗರಿಕ ಸರಬರಾಜು; (ix) ಅರಣ್ಯಗಳು (ಮೀಸಲು ಅರಣ್ಯಗಳ ಹೊರತು); (x) ಕೈಮಗ್ಗ ಮತ್ತು ಜವಳಿ; (xi) ಆರೋಗ್ಯ ಮತ್ತು ಕುಟುಂಬ ಕಲ್ಯಾಣ; (xii) ಏಳನೇ ಅನುಸೂಚಿಯ Iನೇ ಪಟ್ಟಿಯ 84ನೇ ನಮೂದಿನ ಉಪಬಂಧಗಳಿಗೊಳಪಟ್ಟು ಮಾದಕ ಪಾನೀಯಗಳು, ಅಫೀಮು ಮತ್ತು ಅದರ ಉತ್ಪನ್ನಗಳು; (xiii) ನೀರಾವರಿ; (xiv) ಕಾರ್ಮಿಕ ಮತ್ತು ಉದ್ಯೋಗ; (xv) ಭೂಮಿ ಮತ್ತು ಕಂದಾಯ; (xvi) ಗ್ರಂಥಾಲಯ ಸೇವೆಗಳು (ರಾಜ್ಯ ಸರ್ಕಾರದಿಂದ ಆರ್ಥಿಕ ನೆರವು ಪಡೆಯುತ್ತಿರುವ ಮತ್ತು ಅದರ ನಿಯಂತ್ರಣಕ್ಕೊಳಪಟ್ಟಿರುವ); (xvii) ಲಾಟರಿಗಳು (ಏಳನೇ ಅನುಸೂಚಿಯ Iನೇ ಪಟ್ಟಿಯ 40ನೇ ನಮೂದಿನ ಉಪಬಂಧಗಳಿಗೊಳಪಟ್ಟು), ಥಿಯೇಟರುಗಳು, ನಾಟಕ ಪ್ರದರ್ಶನಗಳು ಮತ್ತು ಸಿನಿಮಾಗಳು (ಏಳನೇ ಅನುಸೂಚಿಯ Iನೇ ಪಟ್ಟಿಯ 60ನೇ ನಮೂದಿನ ಉಪಬಂಧಗಳಿಗೊಳಪಟ್ಟು); (xviii) ಮಾರುಕಟ್ಟೆಗಳು ಮತ್ತು ಸಂತೆಗಳು; (xix) ಮುನ್ಸಿಪಲ್ ಕಾರ್ಪೋರೇಷನ್, ಅಭಿವೃದ್ಧಿ ಮಂಡಲಿ, ಜಿಲ್ಲಾ ಮಂಡಲಿಗಳು ಮತ್ತು ಇತರ ಸ್ಥಳೀಯ ಪ್ರಾಧಿಕಾರಗಳು; (xx) ರಾಜ್ಯದ ನಿಯಂತ್ರಣಕ್ಕೊಳಪಟ್ಟಿರುವ ಅಥವಾ ರಾಜ್ಯದಿಂದ ಆರ್ಥಿಕ ನೆರವು ಪಡೆಯುತ್ತಿರುವ ವಸ್ತು ಸಂಗ್ರಹಾಲಯಗಳು ಮತ್ತು ಪುರಾತತ್ವ ಸಂಸ್ಥೆಗಳು. ಸಂಸತ್ತು ಮಾಡಿದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ರಾಷ್ಟ್ರೀಯ ಮಹತ್ವದವುಗಳೆಂದು ಘೋಷಿಸಲಾಗಿರುವವುಗಳನ್ನು ಹೊರತುಪಡಿಸಿ ಇತರ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ದಾಖಲೆಗಳು; (xxi) ಪಂಚಾಯತಿ ಮತ್ತು ಗ್ರಾಮೀಣ ಅಭಿವೃದ್ಧಿ; (xxii) ಯೋಜನೆ ಮತ್ತು ಅಭಿವೃದ್ಧಿ; (xxiii) ಮುದ್ರಣ ಮತ್ತು ಲೇಖನ ಸಾಮಗ್ರಿ; (xxiv) ಸಾರ್ವಜನಿಕ ಆರೋಗ್ಯ ನಿರ್ವಹಣೆ; (xxv) ಲೋಕೋಪಯೋಗಿ ಇಲಾಖೆ; (xxvi) ಪ್ರಚಾರ ಮತ್ತು ಸಾರ್ವಜನಿಕ ಸಂಪರ್ಕಗಳು; (xxvii) ಜನನ ಮತ್ತು ಮರಣಗಳ ನೋಂದಣಿ; (xxviii) ಪರಿಹಾರ ಮತ್ತು ಪುನರ್ವಸತಿ; (xxix) ರೇಷ್ಮೆ ಕೃಷಿ; (xxx) ಏಳನೇ ಅನುಸೂಚಿಯ Iನೇ ಪಟ್ಟಿಯ 7 ಮತ್ತು 52ನೇ ನಮೂದುಗಳ ಉಪಬಂಧಗಳಿಗೊಳಪಟ್ಟು ಸಣ್ಣ, ಗುಡಿ ಮತ್ತು ಗ್ರಾಮೀಣ ಕೈಗಾರಿಕೆ; (xxxi) ಸಮಾಜ ಕಲ್ಯಾಣ; (xxxii) ಭೂಸಾರ ಸಂರಕ್ಷಣೆ; (xxxiii) ಕ್ರೀಡೆಗಳು ಮತ್ತು ಯುವಜನ ಕಲ್ಯಾಣ; (xxxiv) ಅಂಕಿಅಂಶಗಳು; (xxxv) ಪ್ರವಾಸೋದ್ಯಮ; (xxxvi) ಸಾರಿಗೆ (ಏಳನೇ ಅನುಸೂಚಿಯ Iನೇ ಪಟ್ಟಿಯಲ್ಲಿ ನಿರ್ದಿಷ್ಟಪಡಿಸದಿರುವ ರಸ್ತೆಗಳು, ಸೇತುವೆಗಳು, ಹಾಯಿಗಡಗಳು ಮತ್ತು ಇತರ ಸಂಪರ್ಕ ಸಾಧನಗಳು). ಮುನ್ಸಿಪಲ್ ಟ್ರಾಂವೇಗಳು, ರೋಪ್‌ವೇಗಳು, ಒಳನಾಡು ಜಲಮಾರ್ಗಗಳು, ಅಂತಹ ಜಲಮಾರ್ಗಗಳಿಗೆ ಸಂಬಂಧಪಟ್ಟಂತೆ ಏಳನೇ ಅನುಸೂಚಿಯ I ಮತ್ತು IIIನೇ ಪಟ್ಟಿಯ ಉಪಬಂಧಗಳಿಗೆ ಒಳಪಟ್ಟು ಆ ಜಲಮಾರ್ಗಗಳ ಮೇಲಿನ ಸಂಚಾರ ವ್ಯವಸ್ಥೆ; ಯಂತ್ರಚಾಲಿತ ವಾಹನಗಳನ್ನು ಹೊರತುಪಡಿಸಿ ಇತರ ವಾಹನಗಳು); (xxxvii) ರಾಜ್ಯದ ನಿಯಂತ್ರಕ್ಕೊಳಪಟ್ಟು ಮತ್ತು ರಾಜ್ಯದಿಂದ ಆರ್ಥಿಕ ನೆರವು ಪಡೆಯುತ್ತಿರುವ ಬುಡಕಟ್ಟು ಸಂಶೋಧನಾ ಸಂಸ್ಥೆ; (xxxviii) ನಗರಾಭಿವೃದ್ಧಿ – ಪಟ್ಟಣ ಮತ್ತು ಗ್ರಾಮಾಂತರ ಯೋಜನೆ; (xxxix) ಏಳನೇ ಅನುಸೂಚಿಯ Iನೇ ಪಟ್ಟಿಯ 50ನೇ ನಮೂದಿನ ಉಪಬಂಧಗಳಿಗೊಳಪಟ್ಟು ತೂಕ ಮತ್ತು ಅಳತೆಗಳು; ಮತ್ತು (xL) ಸಾಮಾನ್ಯ ಬುಡಕಟ್ಟುಗಳ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ:

ಪರಂತು, ಅಂಥ ಕಾನೂನುಗಳಲ್ಲಿ ಇರುವುದು ಯಾವುದೂ,–

(ಎ) ಯಾರೇ ನಾಗರಿಕನು ಅವನ ಭೂಮಿಗೆ ಸಂಬಂಧಪಟ್ಟಂತೆ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಚಾಲ್ತಿಯಲ್ಲಿರುವ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಅಂತ್ಯಗೊಳಿಸತಕ್ಕದ್ದಲ್ಲ ಅಥವಾ ಮಾರ್ಪಾಟು ಮಾಡತಕ್ಕದ್ದಲ್ಲ; ಮತ್ತು

(ಬಿ) ಅಂಥ ನಾಗರಿಕನು ಬೋಡೋಲ್ಯಾಂಡ್ ಪ್ರಾದೇಶಿಕ ಕ್ಷೇತ್ರಗಳ ಜಿಲ್ಲೆಯೊಳಗಿನ ಭೂಮಿಯ ಅಂಥ ಆರ್ಜನೆಗಾಗಿ ಅನ್ಯಥಾ ಅರ್ಹನಾಗಿದ್ದರೆ, ಆ ಯಾರೇ ನಾಗರಿಕನು ಪಿತ್ರಾರ್ಜಿತ, ಹಂಚಿಕೆ, ಒಡಂಬಡಿಕೆ ಮೂಲಕ ಅಥವಾ ಯಾವುದೇ ಇತರ ವರ್ಗಾವಣೆಯ ಮೂಲಕ ಭೂಮಿಯನ್ನು ಅರ್ಜಿಸುವುದಕ್ಕೆ ಅನುಮತಿಸದಿರತಕ್ಕದ್ದಲ್ಲ.

(2) 3ನೇ ಪ್ಯಾರಾದ ಮೇರೆಗೆ ಅಥವಾ ಈ ಪ್ಯಾರಾದ ಮೇರೆಗೆ ರಚಿಸಿದ ಎಲ್ಲಾ ಕಾನೂನುಗಳು ಏಳನೇ ಅನುಸೂಚಿಯ IIIನೇ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಅವುಗಳನ್ನು ರಾಜ್ಯಪಾಲರಿಗೆ ತತ್‌ಕ್ಷಣ ಒಪ್ಪಿಸತಕ್ಕದ್ದು. ರಾಜ್ಯಪಾಲನು ಅವುಗಳನ್ನು ರಾಷ್ಟ್ರಪತಿಯ ಪರ್ಯಾಲೋಚನೆಗೆ ಕಾಯ್ದಿರಿಸತಕ್ಕದ್ದು.

(3) ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಒಂದು ಕಾನೂನನ್ನು ಕಾಯ್ದಿರಿಸಿರುವಾಗ, ರಾಷ್ಟ್ರಪತಿಯು, ತಾನು ಸದರಿ ಕಾನೂನಿಗೆ ಅನುಮತಿ ನೀಡಿರುವುದಾಗಿ ಅಥವಾ ಅನುಮತಿ ನೀಡಿಕೆಯನ್ನು ತಡೆಹಿಡಿದಿರುವುದಾಗಿ ಘೋಷಿಸತಕ್ಕದ್ದು:

ಪರಂತು, ರಾಷ್ಟ್ರಪತಿಯು ಆ ಕಾನೂನನ್ನು ಪುನರ್ ಪರಿಶೀಲಿಸಬೇಕೆಂದು ಅಥವಾ ಆ ಕಾನೂನಿನ ನಿರ್ದಿಷ್ಟ ಉಪಬಂಧಗಳನ್ನು ಪುನರ್ ಪರಿಶೀಲಿಸಬೇಕೆಂದು ಕೋರುವ ಸಂದೇಶದೊಂದಿಗೆ, ವಿಶೇಷವಾಗಿ ಆ ಸಂದೇಶದಲ್ಲಿ ತಾನು ಶಿಫಾರಸು ಮಾಡಬಹುದಾದಂಥ ಯಾವುವೇ ತಿದ್ದುಪಡಿಗಳನ್ನು ಮಂಡಿಸುವ ಅಪೇಕ್ಷೆಯನ್ನು ಪರಿಶೀಲಿಸಬೇಕೆಂಬ ಸಂದೇಶದೊಂದಿಗೆ ಆ ಕಾನೂನನ್ನು ಬೋಡೋಲ್ಯಾಂಡ್ ಪ್ರಾದೇಶಿಕ ಪರಿಷತ್ತಿಗೆ ಹಿಂದಿರುಗಿಸಬೇಕೆಂದು ರಾಜ್ಯಪಾಲನಿಗೆ ನಿರ್ದೇಶಿಸಬಹುದು ಮತ್ತು ಆ ಕಾನೂನನ್ನು ಹಾಗೆ ಹಿಂದಿರುಗಿಸಿದಾಗ ಸದರಿ ಪರಿಷತ್ತು ಸಂದೇಶಕ್ಕನುಗುಣವಾಗಿ, ಅಂಥ ಸಂದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳೊಳಗೆ ಆ ಕಾನೂನನ್ನು ಪರಿಶೀಲಿಸತಕ್ಕದ್ದು ಮತ್ತು ಆ ಕಾನೂನನ್ನು ಸದರಿ ಪರಿಷತ್ತು ತಿದ್ದುಪಡಿಗಳೊಂದಿಗೆ ಅಥವಾ ತಿದ್ದುಪಡಿ ಇಲ್ಲದೆ ಪುನಃ ಅಂಗೀಕರಿಸಿದರೆ, ಆ ಕಾನೂನನ್ನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಪುನಃ ಒಪ್ಪಿಸತಕ್ಕದ್ದು.".

(ಎ) ಮೀಸಲು ಅರಣ್ಯವಾಗಿರುವ ಯಾವುದೇ ಭೂಮಿಯನ್ನು ಹೊರತುಪಡಿಸಿ ಇತರ ಭೂಮಿಯನ್ನು ಕೃಷಿಯ ಅಥವಾ ಹುಲ್ಲುಗಾವಲಿನ ಉದ್ದೇಶಗಳಿಗಾಗಿ ಅಥವಾ ವಸತಿ ಅಥವಾ ಇತರ ಕೃಷಿಯೇತರ ಉದ್ದೇಶಗಳಿಗಾಗಿ ಅಥವಾ ಯಾವುದೇ ಗ್ರಾಮದ ಅಥವಾ ಪಟ್ಟಣ ನಿವಾಸಿಗಳ ಹಿತವನ್ನು ಸಾಧಿಸಬಹುದಾದ ಇತರ ಯಾವುದೇ ಉದ್ದೇಶಕ್ಕಾಗಿ ಹಂಚಿಕೆ ಮಾಡುವುದು, ಅಧಿಭೋಗಕ್ಕೆ ಕೊಡುವುದು ಅಥವಾ ಬಳಸುವುದು ಅಥವಾ ಆ ಭೂಮಿಯನ್ನು ಪ್ರತ್ಯೇಕವಾಗಿ ಇಡುವುದು:

ಪರಂತು, ಅಂಥ ಕಾನೂನುಗಳಲ್ಲಿ ಇರುವುದು ಯಾವುದೂ, ಯಾವುದೇ ಭೂಮಿಯನ್ನು, ಅದು ಅಧಿಭೋಗದಲ್ಲಿರಲಿ ಅಥವಾ ಇಲ್ಲದಿರಲಿ, ಸಾರ್ವಜನಿಕ ಉದ್ದೇಶಗಳಿಗಾಗಿ ಕಡ್ಡಾಯವಾಗಿ ಆರ್ಜನೆಮಾಡುವ ಬಗ್ಗೆ ಅಧಿಕೃತಗೊಳಿಸುವಂಥ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗನುಸಾರವಾಗಿ [1][ಸಂಬಂಧಪಟ್ಟ ರಾಜ್ಯ ಸರ್ಕಾರವು] ಆ ಭೂಮಿಯನ್ನು ಹಾಗೆ ಆರ್ಜನೆ ಮಾಡುವುದನ್ನು ಪ್ರತಿಬಂಧಿಸತಕ್ಕದ್ದಲ್ಲ;

(ಬಿ) ಮೀಸಲು ಅರಣ್ಯವಾಗಿರದ ಯಾವುದೇ ಅರಣ್ಯದ ನಿರ್ವಹಣೆ;

(ಸಿ) ಕೃಷಿ ಉದ್ದೇಶಕ್ಕಾಗಿ ಯಾವುದೇ ನಾಲೆಯ ಅಥವಾ ಜಲಮಾರ್ಗದ ಬಳಕೆ;

(ಡಿ) ಝೂಮ್ ಪದ್ಧತಿ ಅಥವಾ ಪರ್ಯಾಯ ಸಾಗುವಳಿಯ ಇತರ ಪ್ರಕಾರಗಳ ನಿಯಂತ್ರಣ;

(ಇ) ಗ್ರಾಮ ಅಥವಾ ಪಟ್ಟಣ ಸಮಿತಿಗಳ ಅಥವಾ ಪರಿಷತ್ತುಗಳ ಸ್ಥಾಪನೆ ಮತ್ತು ಅವುಗಳ ಅಧಿಕಾರಗಳು;

(ಎಫ್) ಗ್ರಾಮ ಅಥವಾ ಪಟ್ಟಣ ಪೊಲೀಸು, ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ ಒಳಗೊಂಡಂತೆ, ಗ್ರಾಮದ ಅಥವಾ ಪಟ್ಟಣದ ಆಡಳಿತಕ್ಕೆ ಸಂಬಂಧಪಟ್ಟ ಇತರ ಯಾವುದೇ ವಿಷಯ;

(ಜಿ) ಮುಖಂಡರ ಅಥವಾ ಮುಖ್ಯಸ್ಥರ ನೇಮಕ ಅಥವಾ ಉತ್ತರಾಧಿಕಾರ;

(ಎಚ್) ಸ್ವತ್ತಿನ ವಾರಸು;

[2][(ಐ) ವಿವಾಹ ಮತ್ತು ವಿವಾಹ ವಿಚ್ಛೇದನ ;]

(ಜೆ) ಸಾಮಾಜಿಕ ರೂಢಿಗಳು

– ಕುರಿತಂತೆ ಕಾನೂನುಗಳನ್ನು ರಚಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಈ ಪ್ಯಾರಾದಲ್ಲಿ "ಮೀಸಲು ಅರಣ್ಯ" ಎಂದರೆ 1891ನೆಯ ಇಸವಿಯ ಅಸ್ಸಾಂ ಅರಣ್ಯ ವಿನಿಯಮದ ಮೇರೆಗೆ ಅಥವಾ ಸಂಬಂಧಪಟ್ಟ ಪ್ರದೇಶದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಮೀಸಲು ಅರಣ್ಯವಾಗಿರುವ ಯಾವುದೇ ಪ್ರದೇಶ.

(3) ಈ ಪ್ಯಾರಾದ ಮೇರೆಗೆ ರಚಿಸಿರುವ ಎಲ್ಲಾ ಕಾನೂನುಗಳನ್ನು ಕೂಡಲೇ ರಾಜ್ಯಪಾಲನಿಗೆ ಒಪ್ಪಿಸತಕ್ಕದ್ದು ಮತ್ತು ಅವನು ಅವುಗಳಿಗೆ ಅನುಮತಿ ಕೊಡುವವರೆಗೆ ಆ ಕಾನೂನುಗಳು ಪರಿಣಾಮವುಳ್ಳವುಗಳಾಗಿರತಕ್ಕದ್ದಲ್ಲ.

[3]**4. ಸ್ವಾಯತ್ತ ಜಿಲ್ಲೆಗಳಲ್ಲಿ ಮತ್ತು ಸ್ವಾಯತ್ತ ಕ್ಷೇತ್ರಗಳಲ್ಲಿ ನ್ಯಾಯಾಡಳಿತ:–** (1) ಒಂದು ಸ್ವಾಯತ್ತ ಕ್ಷೇತ್ರದೊಳಗಿನ ಪ್ರದೇಶಗಳಿಗೆ ಸಂಬಂಧಿಸಿದಂತೆ ಅಂಥ ಕ್ಷೇತ್ರದ ಪ್ರಾದೇಶಿಕ ಪರಿಷತ್ತು ಮತ್ತು ಸ್ವಾಯತ್ತ ಜಿಲ್ಲೆಯೊಳಗೆ ಪ್ರಾದೇಶಿಕ ಪರಿಷತ್ತುಗಳು ಯಾವುವಾದರೂ ಇದ್ದರೆ ಅಂಥ ಪರಿಷತ್ತುಗಳ ಪ್ರಾಧಿಕಾರದೊಳಗೆ ಬರುವ ಪ್ರದೇಶಗಳನ್ನು ಹೊರತುಪಡಿಸಿ ಅಂಥ ಜಿಲ್ಲೆಯೊಳಗಿನ ಇತರ ಪ್ರದೇಶಗಳಿಗೆ ಸಂಬಂಧಿಸಿದಂತೆ ಆ ಜಿಲ್ಲೆಯ ಜಿಲ್ಲಾ ಪರಿಷತ್ತು ಅಂಥ ಪ್ರದೇಶಗಳಲ್ಲಿನ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಎಲ್ಲಾ ಪಕ್ಷಕಾರರ ನಡುವಣ ಯಾವ ದಾವೆಗಳಿಗೆ ಮತ್ತು ಪ್ರಕರಣಗಳಿಗೆ ಈ ಅನುಸೂಚಿಯ 5ನೆಯ ಪ್ಯಾರಾದ (1)ನೆಯ ಉಪಪ್ಯಾರಾದ ಉಪಬಂಧಗಳು ಅನ್ವಯಿಸುತ್ತವೆಯೋ ಆ ದಾವೆಗಳನ್ನು ಮತ್ತು ಪ್ರಕರಣಗಳನ್ನು ಹೊರತುಪಡಿಸಿ ಇತರ ದಾವೆಗಳನ್ನು ಮತ್ತು ಪ್ರಕರಣಗಳನ್ನು ಅಧಿವಿಚಾರಣೆ ಮಾಡಲು ಆ ರಾಜ್ಯದಲ್ಲಿನ ಯಾವುದೇ ನ್ಯಾಯಾಲಯವನ್ನು ಹೊರತುಪಡಿಸಿ, ಗ್ರಾಮ ಪರಿಷತ್ತುಗಳನ್ನು ಅಥವಾ ನ್ಯಾಯಾಲಯಗಳನ್ನು ಸ್ಥಾಪಿಸಬಹುದು ಮತ್ತು ಸೂಕ್ತ ವ್ಯಕ್ತಿಗಳನ್ನು ಅಂಥ ಗ್ರಾಮ ಪರಿಷತ್ತುಗಳ ಸದಸ್ಯರಾಗಿ ಅಥವಾ ಅಂಥ ನ್ಯಾಯಾಲಯಗಳ ಪೀಠಾಸೀನ ಅಧಿಕಾರಿಗಳಾಗಿ ನೇಮಕ ಮಾಡಬಹುದು ಮತ್ತು ಈ ಅನುಸೂಚಿಯ 3ನೆಯ ಪ್ಯಾರಾದ ಮೇರೆಗೆ ಮಾಡಿದ ಕಾನೂನುಗಳ ಜಾರಿಗಾಗಿ ಅವಶ್ಯಕವಾಗಬಹುದಾದಂಥ ಅಧಿಕಾರಿಗಳನ್ನು ಕೂಡ ನೇಮಕ ಮಾಡಬಹುದು.

---

1. 1971 ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71(i)ನೆಯ ಪ್ರಕರಣದ ಹಾಗೂ ಎಂಟನೆಯ ಅನುಸೂಚಿಯ ಮೇರೆಗೆ ಕೆಲವು ಪದಗಳಿಗೆ ಬದಲಾಗಿ (21-1-1972 ರಿಂದ ಜಾರಿಗೆ ಬರುವಂತೆ ) ಪ್ರತ್ಯಾಯೋಜಿಸಲಾಗಿದೆ.
2. 1969ನೇ ಇಸವಿಯ ಅಸ್ಸಾಂ ಪುನರ್‌ವಿಂಗಡಣೆ (ಮೇಘಾಲಯ) ಅಧಿನಿಯಮದ (1969ರ 55) 74ನೇ ಪ್ರಕರಣದ ಹಾಗೂ ನಾಲ್ಕನೆಯ ಅನುಸೂಚಿಯ ಮೇರೆಗೆ (2-4-1970 ರಿಂದ ಜಾರಿಗೆ ಬರುವಂತೆ) "ಐ" ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. ಅಸ್ಸಾಂ ರಾಜ್ಯಕ್ಕೆ ಅನ್ವಯವಾಗುವುದಕ್ಕಾಗಿ 4ನೇ ಪ್ಯಾರಾವನ್ನು 2003ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (2003ರ 44) 2ನೇ ಪ್ರಕರಣದ ಮೂಲಕ (5)ನೇ ಉಪಪ್ಯಾರಾದ ತರುವಾಯ ಈ ಮುಂದಿನ ಉಪಪ್ಯಾರಾವನ್ನು ಸೇರಿಸುವುದಕ್ಕಾಗಿ ತಿದ್ದುಪಡಿ ಮಾಡಲಾಗಿದೆ, ಎಂದರೆ:–

   "(6) ಈ ಪ್ಯಾರಾದಲ್ಲಿ ಇರುವುದು ಯಾವುದೂ, ಅನುಸೂಚಿಯ 2ನೇ ಪ್ಯಾರಾದ (3)ನೇ ಉಪ ಪ್ಯಾರಾದ ಪರಂತುಕದ ಮೇರೆಗೆ ರಚಿತವಾದ ಬೋಡೋಲ್ಯಾಂಡ್ ಪ್ರಾದೇಶಿಕ ಪರಿಷತ್ತಿಗೆ ಅನ್ವಯಿಸತಕ್ಕದ್ದಲ್ಲ."

(2) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ಒಂದು ಸ್ವಾಯತ್ತ ಕ್ಷೇತ್ರದ ಪ್ರಾದೇಶಿಕ ಪರಿಷತ್ತು ಅಥವಾ ಆ ಬಗ್ಗೆ ಪ್ರಾದೇಶಿಕ ಪರಿಷತ್ತು ರಚಿಸಿದ ಯಾವುದೇ ನ್ಯಾಯಾಲಯವು ಅಥವಾ ಒಂದು ಸ್ವಾಯತ್ತ ಜಿಲ್ಲೆಯೊಳಗಿನ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಪರಿಷತ್ತು ಇಲ್ಲದಿದ್ದರೆ ಅಂಥ ಜಿಲ್ಲೆಯ ಜಿಲ್ಲಾ ಪರಿಷತ್ತು ಅಥವಾ ಆ ಬಗ್ಗೆ ಜಿಲ್ಲಾ ಪರಿಷತ್ತು ರಚಿಸಿದ ಯಾವುದೇ ನ್ಯಾಯಾಲಯವು, ಈ ಅನುಸೂಚಿಯ 5ನೆಯ ಪ್ಯಾರಾದ (1)ನೆಯ ಉಪಪ್ಯಾರಾದ ಉಪಬಂಧಗಳು ಯಾವ ದಾವೆಗಳಿಗೆ ಮತ್ತು ಪ್ರಕರಣಗಳಿಗೆ ಅನ್ವಯಿಸುತ್ತವೆಯೋ ಆ ದಾವೆಗಳನ್ನು ಮತ್ತು ಪ್ರಕರಣಗಳನ್ನು ಹೊರತುಪಡಿಸಿ ಅಂಥ ಪ್ರದೇಶದಲ್ಲಿ ಅಥವಾ ಸಂದರ್ಭಾನುಸಾರ ಅಂಥ ಕ್ಷೇತ್ರದಲ್ಲಿ ಈ ಪ್ಯಾರಾದ (1)ನೆಯ ಉಪಪ್ಯಾರಾದ ಮೇರೆಗೆ ರಚಿತವಾದ ಗ್ರಾಮ ಪರಿಷತ್ತು ಅಥವಾ ನ್ಯಾಯಾಲಯವು ಅಧಿವಿಚಾರಣೆ ಮಾಡಬಹುದಾದಂಥ ಎಲ್ಲ ದಾವೆಗಳ ಮತ್ತು ಪ್ರಕರಣಗಳ ಬಗ್ಗೆ ಒಂದು ಅಪೀಲು ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಉಚ್ಚ ನ್ಯಾಯಾಲಯವನ್ನು ಹಾಗೂ ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ, ಇತರ ಯಾವುದೇ ನ್ಯಾಯಾಲಯಕ್ಕೆ ಅಂಥ ದಾವೆಗಳ ಅಥವಾ ಪ್ರಕರಣಗಳ ಸಂಬಂಧದಲ್ಲಿ ಅಧಿಕಾರವ್ಯಾಪ್ತಿಯು ಇರತಕ್ಕದ್ದಲ್ಲ.

(3) ಈ ಪ್ಯಾರಾದ (2)ನೆಯ ಉಪಪ್ಯಾರಾದ ಉಪಬಂಧಗಳು, ಯಾವ ದಾವೆಗಳಿಗೆ ಮತ್ತು ಪ್ರಕರಣಗಳಿಗೆ ಅನ್ವಯಿಸುತ್ತವೆಯೋ ಅವುಗಳ ಸಂಬಂಧದಲ್ಲಿ ರಾಜ್ಯಪಾಲನು ಕಾಲಕಾಲಕ್ಕೆ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರ ವ್ಯಾಪ್ತಿಯನ್ನು [1]* * * ಉಚ್ಚ ನ್ಯಾಯಾಲಯವು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

(4) ಪ್ರಾದೇಶಿಕ ಪರಿಷತ್ತು ಅಥವಾ ಸಂದರ್ಭಾನುಸಾರ ಜಿಲ್ಲಾ ಪರಿಷತ್ತು ರಾಜ್ಯಪಾಲನ ಪೂರ್ವಾನುಮೋದನೆ ಪಡೆದು,–

(ಎ) ಈ ಪ್ಯಾರಾದ ಮೇರೆಗೆ ಗ್ರಾಮ ಪರಿಷತ್ತುಗಳ ಮತ್ತು ನ್ಯಾಯಾಲಯಗಳ ಸ್ಥಾಪನೆಯನ್ನು ಮತ್ತು ಅವು ಚಲಾಯಿಸಬೇಕಾದ ಅಧಿಕಾರಗಳನ್ನು;

(ಬಿ) ಈ ಪ್ಯಾರಾದ (1)ನೆಯ ಉಪಪ್ಯಾರಾದ ಮೇರೆಗೆ ದಾವೆಗಳ ಮತ್ತು ಪ್ರಕರಣಗಳ ಅಧಿವಿಚಾರಣೆಯಲ್ಲಿ ಗ್ರಾಮ ಪರಿಷತ್ತುಗಳು ಅಥವಾ ನ್ಯಾಯಾಲಯಗಳು ಅನುಸರಿಸಬೇಕಾದ ಪ್ರಕ್ರಿಯೆಯನ್ನು;

(ಸಿ) ಪ್ರಾದೇಶಿಕ ಪರಿಷತ್ತು ಅಥವಾ ಜಿಲ್ಲಾ ಪರಿಷತ್ತು ಅಥವಾ ಅಂಥ ಪರಿಷತ್ತು ಸ್ಥಾಪಿಸಿದ ಯಾವುದೇ ನ್ಯಾಯಾಲಯವು ಈ ಪ್ಯಾರಾದ (2) ನೆಯ ಉಪಪ್ಯಾರಾದ ಮೇರೆಗೆ ಅಪೀಲುಗಳಲ್ಲಿ ಮತ್ತು ಇತರ ವ್ಯವಹರಣೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಯನ್ನು;

(ಡಿ) ಅಂಥ ಪರಿಷತ್ತುಗಳ ಮತ್ತು ನ್ಯಾಯಾಲಯಗಳ ತೀರ್ಮಾನಗಳ ಮತ್ತು ಆದೇಶಗಳ ಜಾರಿಯನ್ನು;

(ಇ) ಈ ಪ್ಯಾರಾದ (1)ನೆಯ ಮತ್ತು (2)ನೆಯ ಉಪಪ್ಯಾರಾಗಳ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಂಬಂಧಪಟ್ಟ ಇತರ ಎಲ್ಲ ಸಹಾಯಕ ವಿಷಯಗಳನ್ನು

– ವಿನಿಯಮಿಸುವ ನಿಯಮಗಳನ್ನು ರಚಿಸಬಹುದು.

[2][(5) ರಾಷ್ಟ್ರಪತಿಯು [3][ಸಂಬಂಧಪಟ್ಟ ರಾಜ್ಯ ಸರ್ಕಾರದೊಡನೆ ಸಮಾಲೋಚನೆ ನಡೆಸಿದ ತರುವಾಯ] ಅಧಿಸೂಚನೆಯ ಮೂಲಕ ಈ ಬಗ್ಗೆ ಗೊತ್ತುಪಡಿಸಬಹುದಾದ ದಿನಾಂಕದಂದು ಮತ್ತು ಆ ದಿನಾಂಕದಿಂದ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸ್ವಾಯತ್ತ ಜಿಲ್ಲೆ ಅಥವಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಈ ಪ್ಯಾರಾವು –

---

1. 1971 ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71(i)ನೆಯ ಪ್ರಕರಣದ ಹಾಗೂ ಎಂಟನೆಯ ಅನುಸೂಚಿಯ ಮೂಲಕ "ಅಸ್ಸಾಂನ" ಎಂಬ ಪದಗಳನ್ನು (21-1-1972 ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.

2. 1969ನೇ ಇಸವಿಯ ಅಸ್ಸಾಂ ಪುನರ್‌ವಿಂಗಡಣೆ (ಮೇಘಾಲಯ) ಅಧಿನಿಯಮದ (1969ರ 55) 74ನೇ ಪ್ರಕರಣದ ಹಾಗೂ ನಾಲ್ಕನೆಯ ಅನುಸೂಚಿಯ ಮೂಲಕ (2-4-1970 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

3. 1971 ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71(i)ನೇ ಪ್ರಕರಣದ ಹಾಗೂ ಎಂಟನೆಯ ಅನುಸೂಚಿಯ ಮೂಲಕ ಕೆಲವು ಪದಗಳಿಗೆ ಬದಲಾಗಿ (21-1-1972 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

(i) (1)ನೆಯ ಉಪಪ್ಯಾರಾದಲ್ಲಿ "ಅಂಥ ಪ್ರದೇಶಗಳೊಳಗಿನ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಎಲ್ಲ ಪಕ್ಷಕಾರರ ನಡುವಣ ಯಾವ ದಾವೆಗಳಿಗೆ ಮತ್ತು ಪ್ರಕರಣಗಳಿಗೆ ಈ ಅನುಸೂಚಿಯ 5ನೇ ಪ್ಯಾರಾದ (1)ನೇ ಉಪಪ್ಯಾರಾದ ಉಪಬಂಧಗಳು ಅನ್ವಯಿಸುತ್ತವೆಯೋ ಆ ದಾವೆಗಳನ್ನು ಮತ್ತು ಪ್ರಕರಣಗಳನ್ನು ಹೊರತುಪಡಿಸಿ" ಎಂಬ ಪದಗಳಗೆ ಬದಲಾಗಿ "ಈ ಅನುಸೂಚಿಯ 5ನೆಯ ಪ್ಯಾರಾದ (1)ನೆಯ ಉಪಪ್ಯಾರಾದಲ್ಲಿ ಉಲ್ಲೇಖಿಸಿದ ಸ್ವರೂಪದ ದಾವೆಗಳಲ್ಲದ ಮತ್ತು ಪ್ರಕರಣಗಳಲ್ಲದ, ಈ ಬಗ್ಗೆ ರಾಜ್ಯಪಾಲನು ನಿರ್ದಿಷ್ಟಪಡಿಸಬಹುದಾದಂಥ" ಎಂಬ ಪದಗಳನ್ನು ಪ್ರತ್ಯಾಯೋಜಿಸಿದ್ದಿದ್ದರೆ ಹೇಗೋ ಹಾಗೆ;

(ii) (2)ನೆಯ ಮತ್ತು (3)ನೆಯ ಉಪಪ್ಯಾರಾಗಳನ್ನು ಬಿಟ್ಟು ಬಿಟ್ಟಿದ್ದರೆ ಹೇಗೋ ಹಾಗೆ;

(iii) (4)ನೆಯ ಉಪಪ್ಯಾರಾದಲ್ಲಿ–

(ಎ) "ಪ್ರಾದೇಶಿಕ ಪರಿಷತ್ತು ಅಥವಾ ಸಂದರ್ಭಾನುಸಾರ ಜಿಲ್ಲಾ ಪರಿಷತ್ತು ರಾಜ್ಯಪಾಲನ ಪೂರ್ವಾನುಮೋದನೆ ಪಡೆದು" ಎಂಬ ಪದಗಳಿಗೆ ಬದಲಾಗಿ "ರಾಜ್ಯಪಾಲನು" ಎಂಬ ಪದಗಳನ್ನು ಪ್ರತ್ಯಾಯೋಜಿಸಲಾಗಿದ್ದಿದ್ದರೆ ಹೇಗೋ ಹಾಗೆ; ಮತ್ತು

(ಬಿ) (ಎ)ಖಂಡಕ್ಕೆ ಬದಲಾಗಿ, ಈ ಕೆಳಕಂಡ ಖಂಡವನ್ನು ಎಂದರೆ:–

"(ಎ) ಈ ಪ್ಯಾರಾದ ಮೇರೆಗೆ ಗ್ರಾಮ ಪರಿಷತ್ತುಗಳ ಮತ್ತು ನ್ಯಾಯಾಲಯಗಳ ಸ್ಥಾಪನೆಯನ್ನು, ಅವು ಚಲಾಯಿಸಬೇಕಾದ ಅಧಿಕಾರಗಳನ್ನು ಮತ್ತು ಗ್ರಾಮ ಪರಿಷತ್ತುಗಳ ಮತ್ತು ನ್ಯಾಯಾಲಯಗಳ ತೀರ್ಮಾನಗಳ ವಿರುದ್ಧ ಯಾವ ನ್ಯಾಯಾಲಯಗಳಿಗೆ ಅಪೀಲುಗಳನ್ನು ಸಲ್ಲಿಸತಕ್ಕದ್ದೆಂಬುದನ್ನು ಪ್ರತ್ಯಾಯೋಜಿಸಿದ್ದಿದ್ದರೆ ಹೇಗೋ ಹಾಗೆ;";

(ಸಿ) (ಸಿ)ಖಂಡಕ್ಕೆ ಬದಲಾಗಿ ಈ ಕೆಳಕಂಡ ಖಂಡವನ್ನು ಎಂದರೆ:–

"(ಸಿ) (5)ನೆಯ ಉಪಪ್ಯಾರಾದ ಮೇರೆಗೆ ರಾಷ್ಟ್ರಪತಿಯು ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪ್ರಾದೇಶಿಕ ಪರಿಷತ್ತಿನ ಅಥವಾ ಜಿಲ್ಲಾ ಪರಿಷತ್ತಿನ ಮುಂದೆ ಅಥವಾ ಅಂಥ ಪರಿಷತ್ತು ರಚಿಸಿದ ಯಾವುದೇ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಅಪೀಲುಗಳ ಮತ್ತು ಇತರ ವ್ಯವಹರಣೆಗಳ ವರ್ಗಾವಣೆಯನ್ನು ಎಂಬುದನ್ನು ಪ್ರತ್ಯಾಯೋಜಿಸಿದ್ದಿದ್ದರೆ ಹೇಗೋ ಹಾಗೆ;"; ಮತ್ತು

(ಡಿ) (ಇ) ಖಂಡದಲ್ಲಿ "(1)ನೆಯ ಮತ್ತು (2)ನೆಯ ಉಪಪ್ಯಾರಾಗಳ" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳಿಗೆ ಬದಲಾಗಿ "(1) ನೆಯ ಉಪಪ್ಯಾರಾದ" ಎಂಬ ಪದಗಳು, ಆವರಣಗಳು ಮತ್ತು ಅಂಕಿಯನ್ನು ಪ್ರತ್ಯಾಯೋಜಿಸಿದ್ದಿದ್ದರೆ ಹೇಗೋ ಹಾಗೆ

– ಪರಿಣಾಮಕಾರಿಯಾಗಿರತಕ್ಕದ್ದು.]

**5.ಕೆಲವು ದಾವೆಗಳ, ಪ್ರಕರಣಗಳ ಮತ್ತು ಅಪರಾಧಗಳ ಅಧಿವಿಚಾರಣೆಗಾಗಿ ಪ್ರಾದೇಶಿಕ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಮತ್ತು ಕೆಲವು ನ್ಯಾಯಾಲಯಗಳಿಗೆ ಹಾಗೂ ಅಧಿಕಾರಿಗಳಿಗೆ 1908ನೆಯ ಇಸವಿಯ ಸಿವಿಲ್ ಪ್ರಕ್ರಿಯಾ ಸಂಹಿತೆ ಮತ್ತು [1]1898ನೆಯ ಇಸವಿಯ ದಂಡ ಪ್ರಕ್ರಿಯಾ ಸಂಹಿತೆ ಅಧಿಕಾರಗಳ ಪ್ರದಾನ:–** (1) ಯಾವುದೇ ಸ್ವಾಯತ್ತ ಜಿಲ್ಲೆಯಲ್ಲಿ ಅಥವಾ ಕ್ಷೇತ್ರದಲ್ಲಿ ಜಾರಿಯಲ್ಲಿರುವ ಮತ್ತು ರಾಜ್ಯಪಾಲನು ಆ ಬಗ್ಗೆ ನಿರ್ದಿಷ್ಟಪಡಿಸಿದ ಕಾನೂನಾಗಿರುವಂಥ ಯಾವುದೇ ಕಾನೂನಿನಿಂದ ಉದ್ಭವಿಸುವ ದಾವೆಗಳ ಅಥವಾ ಪ್ರಕರಣಗಳ ಅಧಿವಿಚಾರಣೆಗಾಗಿ ಅಥವಾ ಭಾರತ ದಂಡ ಸಂಹಿತೆ ಮೇರೆಗೆ ಅಥವಾ ಜಿಲ್ಲೆಗೆ ಅಥವಾ ಕ್ಷೇತ್ರಕ್ಕೆ ತತ್ಕಾಲದಲ್ಲಿ ಅನ್ವಯವಾಗುವ ಇತರ ಯಾವುದೇ ಕಾನೂನಿನ ಮೇರೆಗೆ ಮರಣದಂಡನೆ, ಜೀವಾವಧಿ, ಗಡೀಪಾರು ಅಥವಾ ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧಗಳ ಅಧಿವಿಚಾರಣೆಗಾಗಿ, ಅಂಥ ಜಿಲ್ಲೆ ಅಥವಾ ಕ್ಷೇತ್ರದ ಮೇಲೆ ಪ್ರಾಧಿಕಾರವನ್ನು ಹೊಂದಿರುವ ಜಿಲ್ಲಾ ಪರಿಷತ್ತಿಗೆ ಅಥವಾ ಪ್ರಾದೇಶಿಕ ಪರಿಷತ್ತಿಗೆ ಅಥವಾ ಅಂಥ ಜಿಲ್ಲಾ ಪರಿಷತ್ತು ರಚಿಸಿದ ನ್ಯಾಯಾಲಯಗಳಿಗೆ ಅಥವಾ ರಾಜ್ಯಪಾಲನು ಆ ಬಗ್ಗೆ ನೇಮಕ ಮಾಡಿದ ಯಾರೇ ಅಧಿಕಾರಿಗೆ, 1908ನೆಯ ಇಸವಿಯ ಸಿವಿಲ್ ಪ್ರಕ್ರಿಯಾ ಸಂಹಿತೆಯ ಅಥವಾ ಸಂದರ್ಭಾನುಸಾರ [1]1898ನೆಯ ಇಸವಿಯ ದಂಡ ಪ್ರಕ್ರಿಯಾ ಸಂಹಿತೆಯ ಮೇರೆಗೆ ರಾಜ್ಯಪಾಲನು ಸಮುಚಿತವೆಂದು ಭಾವಿಸುವಂಥ ಅಧಿಕಾರಗಳನ್ನು ಪ್ರದಾನ ಮಾಡಬಹುದು ಮತ್ತು ಆ ತರುವಾಯ ಆ ಪರಿಷತ್ತು ಅಥವಾ ನ್ಯಾಯಾಲಯವು ಅಥವಾ ಅಧಿಕಾರಿಯು ಹಾಗೆ ಪ್ರದಾನ ಮಾಡಲಾದ ಅಧಿಕಾರಗಳನ್ನು ಚಲಾಯಿಸಿ ದಾವೆಗಳನ್ನು ಮತ್ತು ಪ್ರಕರಣಗಳನ್ನು ಅಥವಾ ಅಪರಾಧಗಳನ್ನು ಅಧಿವಿಚಾರಣೆ ಮಾಡತಕ್ಕದ್ದು.

---

1. 1973ನೆಯ ಇಸವಿಯ ದಂಡ ಪ್ರಕ್ರಿಯಾ ಸಂಹಿತೆ (1974ರ ಅಧಿನಿಯಮ 2) ನೋಡಿ.

(2) ಈ ಪ್ಯಾರಾದ (1)ನೆಯ ಉಪಪ್ಯಾರಾದ ಮೇರೆಗೆ ಜಿಲ್ಲಾ ಪರಿಷತ್ತು, ಪ್ರಾದೇಶಿಕ ಪರಿಷತ್ತು, ನ್ಯಾಯಾಲಯ ಅಥವಾ ಅಧಿಕಾರಿಗೆ ಪ್ರದಾನ ಮಾಡಲಾದ ಯಾವುವೇ ಅಧಿಕಾರಗಳನ್ನು ರಾಜ್ಯಪಾಲನು ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

(3) ಈ ಪ್ಯಾರಾದಲ್ಲಿ ಸ್ಪಷ್ಟವಾಗಿ ಉಪಬಂಧಿಸಿರುವುದನ್ನು ಉಳಿದು, ಒಂದು ಸ್ವಾಯತ್ತ ಜಿಲ್ಲೆಯಲ್ಲಿ ಅಥವಾ ಯಾವುದೇ ಸ್ವಾಯತ್ತ ಕ್ಷೇತ್ರದಲ್ಲಿ ಈ ಪ್ಯಾರಾದ ಉಪಬಂಧಗಳು ಅನ್ವಯಿಸುವಂಥ ಯಾವುವೇ ದಾವೆಗಳ, ಪ್ರಕರಣಗಳ ಅಥವಾ ಅಪರಾಧಗಳ ಅಧಿವಿಚಾರಣೆಗೆ 1908ನೆಯ ಇಸವಿಯ ಸಿವಿಲ್ ಪ್ರಕ್ರಿಯಾ ಸಂಹಿತೆಯು ಮತ್ತು [1]1898 ನೆಯ ಇಸವಿಯ ದಂಡ ಪ್ರಕ್ರಿಯಾ ಸಂಹಿತೆಯು ಅನ್ವಯಿಸತಕ್ಕದ್ದಲ್ಲ.

[2][(4) ಯಾವುದೇ ಸ್ವಾಯತ್ತ ಜಿಲ್ಲೆ ಅಥವಾ ಸ್ವಾಯತ್ತ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ 4ನೆಯ ಪ್ಯಾರಾದ (5)ನೇ ಉಪಪ್ಯಾರಾದ ಮೇರೆಗೆ ರಾಷ್ಟ್ರಪತಿಯು ಗೊತ್ತುಪಡಿಸಿದ ದಿನಾಂಕದಂದು ಮತ್ತು ಆ ದಿನಾಂಕದಿಂದ, ಈ ಪ್ಯಾರಾವನ್ನು ಆ ಜಿಲ್ಲೆ ಅಥವಾ ಪ್ರದೇಶಕ್ಕೆ ಅನ್ವಯಿಸುವಾಗ, ಈ ಪ್ಯಾರಾದಲ್ಲಿ ಅಡಕವಾಗಿರುವುದು ಯಾವುದೂ ಈ ಪ್ಯಾರಾದ (1) ನೆಯ ಉಪಪ್ಯಾರಾದಲ್ಲಿ ಉಲ್ಲೇಖಿಸಿರುವ ಅಧಿಕಾರಗಳಲ್ಲಿ ಯಾವುದನ್ನಾದರೂ ಆ ಜಿಲ್ಲಾ ಪರಿಷತ್ತಿಗೆ ಅಥವಾ ಪ್ರಾದೇಶಿಕ ಪರಿಷತ್ತಿಗೆ ಅಥವಾ ಅಂಥ ಜಿಲ್ಲಾ ಪರಿಷತ್ತು ರಚಿಸಿದ ನ್ಯಾಯಾಲಯಗಳಿಗೆ ಪ್ರದಾನ ಮಾಡಲು ರಾಜ್ಯಪಾಲನನ್ನು ಅಧಿಕೃತಗೊಳಿಸುತ್ತದೆ ಎಂದು ಭಾವಿಸತಕ್ಕದ್ದಲ್ಲ.]

[3]**[6. ಪ್ರಾಥಮಿಕ ಶಾಲೆ, ಇತ್ಯಾದಿಗಳನ್ನು ಸ್ಥಾಪಿಸಲು ಜಿಲ್ಲಾ ಪರಿಷತ್ತಿನ ಅಧಿಕಾರಗಳು:-** (1) ಸ್ವಾಯತ್ತ ಜಿಲ್ಲೆಯ ಜಿಲ್ಲಾ ಪರಿಷತ್ತು, ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳು, ಔಷಧಾಲಯಗಳು, ಮಾರುಕಟ್ಟೆಗಳು, [4][ದನದ ದೊಡ್ಡಿಗಳು], ಹಾಯ್ಗಡಗಳು, ಮೀನುಗಾರಿಕೆ, ರಸ್ತೆಗಳು, ರಸ್ತೆಸಾರಿಗೆ ಮತ್ತು ಜಲಮಾರ್ಗಗಳನ್ನು ಸ್ಥಾಪಿಸಬಹುದು, ನಿರ್ಮಿಸಬಹುದು ಅಥವಾ ನಿರ್ವಹಿಸಬಹುದು ಮತ್ತು ರಾಜ್ಯಪಾಲನ ಪೂರ್ವ ಅನುಮೋದನೆಯನ್ನು ಪಡೆದು ಅವುಗಳನ್ನು ವಿನಿಯಮಿಸಲು ಮತ್ತು ನಿಯಂತ್ರಿಸಲು ವಿನಿಯಮಗಳನ್ನು ರಚಿಸಬಹುದು ಮತ್ತು ವಿಶೇಷವಾಗಿ ಜಿಲ್ಲೆಯಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಯಾವ ಭಾಷೆಯಲ್ಲಿ ಮತ್ತು ಯಾವ ರೀತಿಯಲ್ಲಿ ಕೊಡಬೇಕೆಂಬುದನ್ನು ನಿಯಮಿಸಬಹುದು.

(2) ರಾಜ್ಯಪಾಲನು ಯಾವುದೇ ಜಿಲ್ಲಾ ಪರಿಷತ್ತಿನ ಸಮ್ಮತಿಯಿಂದ ಕೃಷಿ, ಪಶುಪಾಲನೆ, ಸಾಮುದಾಯಿಕ ಯೋಜನೆಗಳು, ಸಹಕಾರಿ ಸಂಘಗಳು, ಸಮಾಜಕಲ್ಯಾಣ, ಗ್ರಾಮ ಯೋಜನೆ ಅಥವಾ ರಾಜ್ಯದ ಕಾರ್ಯಾಂಗ ಅಧಿಕಾರವು [5]*** ವ್ಯಾಪ್ತವಾಗುವ ಇತರ ಯಾವುದೇ ವಿಷಯಕ್ಕೆ ಸಂಬಂಧಿಸಿದ ಪ್ರಕಾರ್ಯಗಳನ್ನು ಷರತ್ತು ಸಹಿತವಾಗಿ ಅಥವಾ ಷರತ್ತು ರಹಿತವಾಗಿ ಆ ಪರಿಷತ್ತಿಗೆ ಅಥವಾ ಅದರ ಅಧಿಕಾರಿಗಳಿಗೆ ವಹಿಸಿಕೊಡಬಹುದು.]

**7. ಜಿಲ್ಲಾ ಮತ್ತು ಪ್ರಾದೇಶಿಕ ನಿಧಿಗಳು:-** (1) ಪ್ರತಿಯೊಂದು ಸ್ವಾಯತ್ತ ಜಿಲ್ಲೆಗಾಗಿ ಒಂದು ಜಿಲ್ಲಾ ನಿಧಿಯನ್ನು ಮತ್ತು ಪ್ರತಿಯೊಂದು ಸ್ವಾಯತ್ತ ಕ್ಷೇತ್ರಕ್ಕಾಗಿ ಒಂದು ಪ್ರಾದೇಶಿಕ ನಿಧಿಯನ್ನು ರಚಿಸತಕ್ಕದ್ದು, ಅಂಥ ಜಿಲ್ಲೆಯ ಅಥವಾ ಸಂದರ್ಭಾನುಸಾರ ಕ್ಷೇತ್ರದ ಆಡಳಿತವನ್ನು ಈ ಸಂವಿಧಾನದ ಉಪಬಂಧಗಳಿಗೆ ಅನುಸಾರವಾಗಿ ನಡೆಸುವಾಗ ಆ ಜಿಲ್ಲೆಯ ಜಿಲ್ಲಾ ಪರಿಷತ್ತು ಸ್ವೀಕರಿಸಿದ ಎಲ್ಲ ಹಣವನ್ನು ಜಿಲ್ಲಾ ನಿಧಿಗೆ ಮತ್ತು ಆ ಕ್ಷೇತ್ರದ ಪ್ರಾದೇಶಿಕ ಪರಿಷತ್ತು ಸ್ವೀಕರಿಸಿದ ಎಲ್ಲಾ ಹಣವನ್ನು ಪ್ರಾದೇಶಿಕ ನಿಧಿಗೆ ಜಮೆ ಮಾಡತಕ್ಕದ್ದು.

---

1. 1973ನೆಯ ಇಸವಿಯ ದಂಡ ಪ್ರಕ್ರಿಯಾ ಸಂಹಿತೆ (1974ರ ಅಧಿನಿಯಮ 2) ನೋಡಿ.
2. 1969ನೇ ಇಸವಿಯ ಅಸ್ಸಾಮ್ ಪುನರ್‌ವಿಂಗಡಣೆ (ಮೇಘಾಲಯ) ಅಧಿನಿಯಮದ (1969ರ 55) 74ನೇ ಪ್ರಕರಣದ ಹಾಗೂ ನಾಲ್ಕನೆಯ ಅನುಸೂಚಿಯ ಮೂಲಕ (2-4-1970 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. ಅದೇ ಅಧಿನಿಯಮದ 74ನೆಯ ಪ್ರಕರಣದ ಹಾಗೂ ನಾಲ್ಕನೆಯ ಅನುಸೂಚಿಯ ಮೂಲಕ 6ನೆಯ ಪ್ಯಾರಾದ ಬದಲಾಗಿ (2.4.1970ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
4. 1974ನೆಯ ಇಸವಿಯ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮದ (1974 ರ 56) 4ನೇ ಪ್ರಕರಣದ ಮೂಲಕ "ದನದ ದೊಡ್ಡಿಗಳು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. 1971 ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71(i)ನೆಯ ಪ್ರಕರಣದ ಹಾಗೂ ಎಂಟನೆಯ ಅನುಸೂಚಿಯ ಮೂಲಕ, "ಸಂದರ್ಭಾನುಸಾರ, ಅಸ್ಸಾಂ ಅಥವಾ ಮೇಘಾಲಯದ" ಎಂಬ ಪದಗಳನ್ನು (21-1-1972 ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.

[1][(2) ರಾಜ್ಯಪಾಲನು ಜಿಲ್ಲಾ ನಿಧಿಯ ಅಥವಾ ಸಂದರ್ಭಾನುಸಾರ ಪ್ರಾದೇಶಿಕ ನಿಧಿಯ ನಿರ್ವಹಣೆಗಾಗಿ ಮತ್ತು ಸದರಿ ನಿಧಿಗೆ ಹಣವನ್ನು ಸಂದಾಯ ಮಾಡುವುದು, ಅದರಿಂದ ಹಣವನ್ನು ತೆಗೆದುಕೊಳ್ಳುವುದು, ಅದರಲ್ಲಿನ ಹಣದ ಅಭಿರಕ್ಷೆ ಮತ್ತು ಹಿಂದೆ ಹೇಳಿದ ವಿಷಯಗಳಿಗೆ ಸಂಬಂಧಿಸಿದ ಅಥವಾ ಸಹಾಯಕವಾದ ಇತರ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅನುಸರಿಸಬೇಕಾದ ಪ್ರಕ್ರಿಯೆಗಾಗಿ ನಿಯಮಗಳನ್ನು ರಚಿಸಬಹುದು.

(3) ಭಾರತದ ಲೆಕ್ಕ ನಿಯಂತ್ರಕ-ಹಾಗೂ-ಮಹಾ ಲೆಕ್ಕಪರಿಶೋಧಕನು ರಾಷ್ಟ್ರಪತಿಯ ಅನುಮೋದನೆ ಪಡೆದು ನಿಯಮಿಸಬಹುದಾದಂಥ ನಮೂನೆಯಲ್ಲಿ ಜಿಲ್ಲಾ ಪರಿಷತ್ತಿನ ಅಥವಾ ಸಂದರ್ಭಾನುಸಾರ ಪ್ರಾದೇಶಿಕ ಪರಿಷತ್ತಿನ ಲೆಕ್ಕಗಳನ್ನು ಇಡತಕ್ಕದ್ದು.

(4) ಲೆಕ್ಕನಿಯಂತ್ರಕ-ಹಾಗೂ-ಮಹಾಲೆಕ್ಕಪರಿಶೋಧಕನು ತಾನು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಜಿಲ್ಲಾ ಮತ್ತು ಪ್ರಾದೇಶಿಕ ಪರಿಷತ್ತುಗಳ ಲೆಕ್ಕಪತ್ರಗಳ ಪರಿಶೋಧನೆ ಮಾಡಿಸತಕ್ಕದ್ದು, ಮತ್ತು ಅಂಥ ಲೆಕ್ಕಗಳಿಗೆ ಸಂಬಂಧಪಟ್ಟ ಲೆಕ್ಕನಿಯಂತ್ರಕ ಹಾಗೂ ಮಹಾ ಲೆಕ್ಕಪರಿಶೋಧಕನ ವರದಿಗಳನ್ನು ರಾಜ್ಯಪಾಲನಿಗೆ ಒಪ್ಪಿಸತಕ್ಕದ್ದು, ಅವುಗಳನ್ನು ರಾಜ್ಯಪಾಲನು ಪರಿಷತ್ತಿನ ಮುಂದೆ ಇರಿಸುವಂತೆ ಮಾಡತಕ್ಕದ್ದು.]

**8. ಭೂ ಕಂದಾಯವನ್ನು ನಿರ್ಧರಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಮತ್ತು ತೆರಿಗೆಗಳನ್ನು ವಿಧಿಸುವುದಕ್ಕೆ ಅಧಿಕಾರಗಳು:-** (1) ಒಂದು ಸ್ವಾಯತ್ತ ಕ್ಷೇತ್ರದೊಳಗಿನ ಎಲ್ಲ ಭೂಮಿಗಳಿಗೆ ಸಂಬಂಧಿಸಿದಂತೆ ಆ ಕ್ಷೇತ್ರದ ಪ್ರಾದೇಶಿಕ ಪರಿಷತ್ತು ಮತ್ತು ಒಂದು ಸ್ವಾಯತ್ತ ಜಿಲ್ಲೆಯೊಳಗಿನ ಎಲ್ಲ ಭೂಮಿಗಳಿಗೆ ಸಂಬಂಧಿಸಿದಂತೆ ಆ ಜಿಲ್ಲೆಯ ಜಿಲ್ಲಾ ಪರಿಷತ್ತು, ಜಿಲ್ಲೆಯೊಳಗಿನ ಪ್ರಾದೇಶಿಕ ಪರಿಷತ್ತುಗಳ ಪ್ರಾಧಿಕಾರದ ಅಧೀನದಲ್ಲಿ ಬರುವಂಥ ಪ್ರದೇಶಗಳಲ್ಲಿನ ಭೂಮಿಗಳು ಯಾವುವಾದರೂ ಇದ್ದರೆ ಅವುಗಳನ್ನು ಹೊರತುಪಡಿಸಿ, [2][ಆ ರಾಜ್ಯದಲ್ಲಿ ಸಾಮಾನ್ಯವಾಗಿ ಭೂಕಂದಾಯದ ಉದ್ದೇಶಕ್ಕಾಗಿ ಭೂಮಿಗಳ ತೆರಿಗೆ ನಿರ್ಧರಣೆಯಲ್ಲಿ ಆ ರಾಜ್ಯದ ಸರ್ಕಾರವು] ತತ್ಕಾಲದಲ್ಲಿ ಅನುಸರಿಸುತ್ತಿರುವ ತತ್ವಗಳಿಗೆ ಅನುಸಾರವಾಗಿ ಅಂಥ ಭೂಮಿಗಳಿಗೆ ಸಂಬಂಧಿಸಿದಂತೆ ಕಂದಾಯವನ್ನು ನಿರ್ಧರಿಸಲು ಮತ್ತು ಸಂಗ್ರಹಿಸಲು ಅಧಿಕಾರ ಹೊಂದಿರತಕ್ಕದ್ದು.

(2) ಒಂದು ಸ್ವಾಯತ್ತ ಕ್ಷೇತ್ರದೊಳಗಿನ ಪ್ರದೇಶಗಳಿಗೆ ಸಂಬಂಧಿಸಿದಂತೆ ಆ ಕ್ಷೇತ್ರದ ಪ್ರಾದೇಶಿಕ ಪರಿಷತ್ತು ಮತ್ತು ಒಂದು ಸ್ವಾಯತ್ತ ಜಿಲ್ಲೆಯೊಳಗಿನ ಪ್ರದೇಶಗಳಿಗೆ ಸಂಬಂಧಿಸಿದಂತೆ ಆ ಜಿಲ್ಲೆಯ ಜಿಲ್ಲಾ ಪರಿಷತ್ತು, ಜಿಲ್ಲೆಯೊಳಗಿನ ಪ್ರಾದೇಶಿಕ ಪರಿಷತ್ತುಗಳ ಪ್ರಾಧಿಕಾರದ ಅಧೀನದಲ್ಲಿ ಬರುವ ಭೂಮಿಗಳು ಯಾವುವಾದರೂ ಇದ್ದರೆ ಅವುಗಳನ್ನು ಹೊರತುಪಡಿಸಿ, ಅಂಥ ಪ್ರದೇಶದಲ್ಲಿನ ಭೂಮಿಗಳ ಮತ್ತು ಕಟ್ಟಡಗಳ ಮೇಲೆ ತೆರಿಗೆಗಳನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಮತ್ತು ಅಂಥ ಪ್ರದೇಶಗಳಲ್ಲಿ ವಾಸಿಸುವ ವ್ಯಕ್ತಿಗಳ ಮೇಲೆ ಸುಂಕಗಳನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಅಧಿಕಾರವನ್ನು ಹೊಂದಿರತಕ್ಕದ್ದು.

(3) ಒಂದು ಸ್ವಾಯತ್ತ ಜಿಲ್ಲೆಯ ಜಿಲ್ಲಾ ಪರಿಷತ್ತು, ಅಂಥ ಜಿಲ್ಲೆಯೊಳಗೆ ಈ ಕೆಳಕಂಡ ಎಲ್ಲ ತೆರಿಗೆಗಳನ್ನು ಅಥವಾ ಆ ಪೈಕಿ ಯಾವುದೇ ತೆರಿಗೆಯನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಅಧಿಕಾರ ಹೊಂದಿರತಕ್ಕದ್ದು, ಎಂದರೆ :-

(ಎ) ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲೆ ತೆರಿಗೆಗಳು;

(ಬಿ) ಪ್ರಾಣಿಗಳ, ವಾಹನಗಳ ಮತ್ತು ದೋಣಿಗಳ ಮೇಲೆ ತೆರಿಗೆಗಳು;

(ಸಿ) ಮಾರಾಟಕ್ಕಾಗಿ ಮಾರುಕಟ್ಟೆಗೆ ಬರುವ ಸರಕುಗಳ ಮೇಲೆ ಪ್ರವೇಶ ತೆರಿಗೆಗಳು ಮತ್ತು ಹಾಯ್ಗಡಗಳಲ್ಲಿ ಸಾಗಿಸುವ ಪ್ರಯಾಣಿಕರ ಮತ್ತು ಸರಕುಗಳ ಮೇಲೆ ಸುಂಕಗಳು; ಮತ್ತು

(ಡಿ) ಪಾಠಶಾಲೆಗಳ, ಔಷಧಾಲಯಗಳ ಅಥವಾ ರಸ್ತೆಗಳ ನಿರ್ವಹಣೆಗಾಗಿ ತೆರಿಗೆಗಳು.

(4) ಈ ಪ್ಯಾರಾದ (2)ನೆಯ ಮತ್ತು (3)ನೆಯ ಉಪಪ್ಯಾರಾಗಳಲ್ಲಿ ನಿರ್ದಿಷ್ಟಪಡಿಸಿದ ತೆರಿಗೆಗಳಲ್ಲಿ ಯಾವುದೇ ತೆರಿಗೆಯನ್ನು ವಿಧಿಸುವುದಕ್ಕಾಗಿ ಮತ್ತು ಸಂಗ್ರಹಿಸುವುದಕ್ಕಾಗಿ ಉಪಬಂಧಿಸಲು ಪ್ರಾದೇಶಿಕ ಪರಿಷತ್ತು ಅಥವಾ ಸಂದರ್ಭಾನುಸಾರ ಜಿಲ್ಲಾ ಪರಿಷತ್ತು ವಿನಿಯಮಗಳನ್ನು ರಚಿಸಬಹುದು [3][ಮತ್ತು ಅಂಥ ಪ್ರತಿಯೊಂದು ವಿನಿಯಮವನ್ನು ಕೂಡಲೇ ರಾಜ್ಯಪಾಲನಿಗೆ ಒಪ್ಪಿಸತಕ್ಕದ್ದು ಮತ್ತು ಅವನು ಅದಕ್ಕೆ ಅನುಮತಿ ನೀಡುವವರೆಗೆ ಅದು ಪರಿಣಾಮಕಾರಿಯಾಗತಕ್ಕದ್ದಲ್ಲ.]

---

1. 1969ನೆಯ ಇಸವಿಯ ಅಸ್ಸಾಂ ಪುನರ್‌ವಿಂಗಡಣೆ (ಮೇಘಾಲಯ) ಅಧಿನಿಯಮದ (1969ರ 55) 74ನೇ ಪ್ರಕರಣದ ಹಾಗೂ ನಾಲ್ಕನೆಯ ಅನುಸೂಚಿಯ ಮೂಲಕ (2)ನೆಯ ಉಪಪ್ಯಾರಾದ ಬದಲಾಗಿ (2-4-1970 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1971 ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ ( 1971ರ 81) 71(i)ನೆಯ ಪ್ರಕರಣದ ಹಾಗೂ ಎಂಟನೆಯ ಅನುಸೂಚಿಯ ಮೂಲಕ ಕೆಲವು ಪದಗಳಿಗೆ ಬದಲಾಗಿ ( 21-1-1972 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. 1969ನೆಯ ಇಸವಿಯ ಅಸ್ಸಾಂ ಪುನರ್‌ವಿಂಗಡಣೆ (ಮೇಘಾಲಯ) ಅಧಿನಿಯಮದ (1969ರ 55) 74ನೇ ಪ್ರಕರಣದ ಹಾಗೂ ನಾಲ್ಕನೇ ಅನುಸೂಚಿಯ ಮೂಲಕ (2.4.1970 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

[1]**9. ಖನಿಜಗಳ ಶೋಧನೆಗಾಗಿ ಅಥವಾ ಅವುಗಳನ್ನು ಹೊರತೆಗೆಯುವುದಕ್ಕಾಗಿ ಲೈಸೆನ್ಸುಗಳು ಅಥವಾ ಗುತ್ತಿಗೆಗಳು:-** (1) ಒಂದು ಸ್ವಾಯತ್ತ ಜಿಲ್ಲೆಯೊಳಗಿನ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ [2][ರಾಜ್ಯ ಸರ್ಕಾರವು] ಖನಿಜಗಳ ಶೋಧನೆಗಾಗಿ ಅಥವಾ ಅವುಗಳನ್ನು ಹೊರ ತೆಗೆಯುವುದಕ್ಕಾಗಿ ಕೊಟ್ಟಿರುವ ಲೈಸೆನ್ಸುಗಳು ಅಥವಾ ಗುತ್ತಿಗೆಗಳಿಂದ ಪ್ರತಿವರ್ಷವೂ ಒದಗಿಬರುವ ಸ್ವಾಮ್ಯಶುಲ್ಕಗಳಲ್ಲಿ [2][ಆ ರಾಜ್ಯ ಸರ್ಕಾರದ] ಮತ್ತು ಜಿಲ್ಲಾ ಪರಿಷತ್ತಿನ ನಡುವೆ ಒಪ್ಪಿಗೆಯಾಗಬಹುದಾದಂಥ ಪಾಲನ್ನು ಆ ಜಿಲ್ಲಾ ಪರಿಷತ್ತಿಗೆ ವಹಿಸಿಕೊಡತಕ್ಕದ್ದು.

(2) ಜಿಲ್ಲಾ ಪರಿಷತ್ತಿಗೆ ವಹಿಸಿಕೊಡಬೇಕಾದಂಥ ಸ್ವಾಮ್ಯ ಶುಲ್ಕಗಳ ಪಾಲಿನ ಬಗ್ಗೆ ಯಾವುದೇ ವಿವಾದವು ಉದ್ಭವಿಸಿದರೆ, ಆ ವಿವಾದವನ್ನು ನಿರ್ಧಾರಕ್ಕಾಗಿ ರಾಜ್ಯಪಾಲನಿಗೆ ಒಪ್ಪಿಸತಕ್ಕದ್ದು ಮತ್ತು ರಾಜ್ಯಪಾಲನು ತನ್ನ ವಿವೇಚನಾನುಸಾರ ನಿರ್ಧರಿಸಿದ ಮೊಬಲಗನ್ನು ಈ ಪ್ಯಾರಾದ (1)ನೆಯ ಉಪಪ್ಯಾರಾದ ಮೇರೆಗೆ ಜಿಲ್ಲಾ ಪರಿಷತ್ತಿಗೆ ಸಂದಾಯವಾಗಬೇಕಾದ ಮೊಬಲಗೆಂದು ಭಾವಿಸತಕ್ಕದ್ದು ಮತ್ತು ಈ ವಿಚಾರದಲ್ಲಿ ರಾಜ್ಯಪಾಲನ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

[3]**10. ಬುಡಕಟ್ಟಿನವರಲ್ಲದವರು ಲೇವಾದೇವಿ ಮತ್ತು ವ್ಯಾಪಾರ ನಡೆಸುವುದನ್ನು ನಿಯಂತ್ರಿಸುವುದಕ್ಕಾಗಿ ವಿನಿಯಮಗಳನ್ನು ರಚಿಸಲು ಜಿಲ್ಲಾ ಪರಿಷತ್ತಿನ ಅಧಿಕಾರ:-** (1) ಒಂದು ಸ್ವಾಯತ್ತ ಜಿಲ್ಲೆಯ ಜಿಲ್ಲಾ ಪರಿಷತ್ತು, ಆ ಜಿಲ್ಲೆಯ ನಿವಾಸಿಗಳಾಗಿರುವ ಅನುಸೂಚಿತ ಬುಡಕಟ್ಟಿನವರಲ್ಲದವರು ಆ ಜಿಲ್ಲೆಯೊಳಗೆ ಲೇವಾದೇವಿ ಅಥವಾ ವ್ಯಾಪಾರ ನಡೆಸುವುದನ್ನು ವಿನಿಯಮಿಸಲು ಮತ್ತು ನಿಯಂತ್ರಿಸಲು ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮಗಳು-

(ಎ) ಆ ಬಗ್ಗೆ ನೀಡುವ ಲೈಸೆನ್ಸನ್ನು ಹೊಂದಿಲ್ಲದ ಯಾರೇ ವ್ಯಕ್ತಿಯು ಲೇವಾದೇವಿ ವ್ಯವಹಾರವನ್ನು ನಡೆಸತಕ್ಕದ್ದಲ್ಲವೆಂದು ನಿಯಮಿಸಬಹುದು;

(ಬಿ) ಲೇವಾದೇವಿದಾರರು ವಿಧಿಸಬಹುದಾದ ಅಥವಾ ವಸೂಲು ಮಾಡಬಹುದಾದ ಬಡ್ಡಿಯ ಗರಿಷ್ಠ ದರವನ್ನು ನಿಯಮಿಸಬಹುದು;

(ಸಿ) ಲೇವಾದೇವಿದಾರರು ಲೆಕ್ಕಪತ್ರಗಳನ್ನಿಡುವುದಕ್ಕಾಗಿ ಮತ್ತು ಜಿಲ್ಲಾ ಪರಿಷತ್ತು ಆ ಬಗ್ಗೆ ನೇಮಿಸುವಂಥ ಅಧಿಕಾರಿಗಳು ಅಂಥ ಲೆಕ್ಕಪತ್ರಗಳನ್ನು ಪರಿಶೀಲಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸಬಹುದು;

(ಡಿ) ಆ ಜಿಲ್ಲೆಯಲ್ಲಿ ವಾಸಿಸುವ ಅನುಸೂಚಿತ ಬುಡಕಟ್ಟಿಗೆ ಸೇರಿರದ ಯಾರೇ ವ್ಯಕ್ತಿಯು ಯಾವುದೇ ಸರಕಿನ ಸಗಟು ಅಥವಾ ಚಿಲ್ಲರೆ ವ್ಯಾಪಾರವನ್ನು ಜಿಲ್ಲಾ ಪರಿಷತ್ತು ಆ ಬಗ್ಗೆ ನೀಡುವ ಲೈಸೆನ್ಸಿನ ಮೇರೆಗಲ್ಲದೆ ನಡೆಸತಕ್ಕದ್ದಲ್ಲವೆಂದು ನಿಯಮಿಸಬಹುದು:

---

1. ತ್ರಿಪುರ ಮತ್ತು ಮಿಜೋರಾಂ ರಾಜ್ಯಗಳಿಗೆ ಅನ್ವಯವಾಗುವುದಕ್ಕಾಗಿ 9ನೇ ಪ್ಯಾರಾವನ್ನು 1988ನೇ ಇಸವಿಯ ಸಂವಿಧಾನದ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (1988ರ 67) 2ನೇ ಪ್ರಕರಣದ ಮೂಲಕ (2)ನೇ ಉಪಪ್ಯಾರಾದ ನಂತರ ಈ ಮುಂದಿನ ಉಪಪ್ಯಾರಾವನ್ನು ಸೇರಿಸಲು ತಿದ್ದುಪಡಿ ಮಾಡಲಾಗಿದೆ, ಎಂದರೆ:-

   "(3) ರಾಜ್ಯಪಾಲನು ಆದೇಶದ ಮೂಲಕ ಈ ಪ್ಯಾರಾದ ಮೇರೆಗೆ ಜಿಲ್ಲಾ ಪರಿಷತ್ತಿಗೆ ವಹಿಸಿಕೊಡಬಹುದಾದ ಸ್ವಾಮ್ಯ ಶುಲ್ಕಗಳ ಪಾಲನ್ನು, ಸಂದರ್ಭಾನುಸಾರ (1)ನೇ ಉಪ ಪ್ಯಾರಾದ ಅಥವಾ (2)ನೇ ಉಪಪ್ಯಾರಾದ ಮೇರೆಗಿನ ಯಾವುದೇ ನಿರ್ಧಾರಣೆಯ ಮೇರೆಗಿನ ಯಾವುದೇ ಒಪ್ಪಂದದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಆ ಪರಿಷತ್ತಿಗೆ ವಹಿಸಿಕೊಡತಕ್ಕದ್ದೆಂದು ನಿರ್ದೇಶಿಸಬಹುದು."

2. 1971ನೇ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71(i)ನೇ ಪ್ರಕರಣದ ಹಾಗೂ ಎಂಟನೇ ಅನುಸೂಚಿಯ ಮೂಲಕ "ಅಸ್ಸಾಂ ಸರ್ಕಾರದ" ಎಂಬುದಕ್ಕೆ ಬದಲಾಗಿ (21.1.1972 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

3. ತ್ರಿಪುರ ಮತ್ತು ಮಿಜೋರಾಂ ರಾಜ್ಯಗಳಿಗೆ ಅನ್ವಯವಾಗುವುದಕ್ಕಾಗಿ 10ನೇ ಪ್ಯಾರಾವನ್ನು 1988ನೇ ಇಸವಿಯ ಸಂವಿಧಾನದ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (1988ರ 67) 2ನೇ ಪ್ರಕರಣದ ಮೂಲಕ ಈ ಮುಂದಿನಂತೆ ತಿದ್ದುಪಡಿ ಮಾಡಲಾಗಿದೆ:-

   (ಎ) ಶೀರ್ಷಿಕೆಯಲ್ಲಿ "ಬುಡಕಟ್ಟಿನವರಲ್ಲದವರು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

   (ಬಿ) (1)ನೇ ಉಪ ಪ್ಯಾರಾದಲ್ಲಿ "ಅನುಸೂಚಿತ ಬುಡಕಟ್ಟುನವರಲ್ಲದವರು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

   (ಸಿ) (2)ನೇ ಉಪ ಪ್ಯಾರಾದಲ್ಲಿ, (ಡಿ) ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

   "(ಡಿ) ಆ ಜಿಲ್ಲೆಯಲ್ಲಿ ವಾಸಿಸುವ ಯಾರೇ ವ್ಯಕ್ತಿಯು ಯಾವುದೇ ವ್ಯಾಪಾರವನ್ನು, ಅದು ಸಗಟು ವ್ಯಾಪಾರವಾಗಿರಲಿ ಅಥವಾ ಚಿಲ್ಲರೆ ವ್ಯಾಪಾರವಾಗಿರಲಿ, ಜಿಲ್ಲಾ ಪರಿಷತ್ತು ನೀಡುವ ಲೈಸೆನ್ಸಿನ ಮೇರೆಗಲ್ಲದೆ ನಡೆಸತಕ್ಕದ್ದಲ್ಲವೆಂದು ನಿಯಮಿಸುವುದು:".

3. ಅಸ್ಸಾಂ ರಾಜ್ಯಕ್ಕೆ ಅನ್ವಯವಾಗುವುದಕ್ಕಾಗಿ 10ನೇ ಪ್ಯಾರಾವನ್ನು 2003ನೇ ಇಸವಿಯ ಸಂವಿಧಾನದ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (2003ರ 44) 2ನೇ ಪ್ರಕರಣದ ಮೂಲಕ (3)ನೇ ಉಪಪ್ಯಾರಾದ ತರುವಾಯ ಈ ಮುಂದಿನ ಉಪಪ್ಯಾರಾವನ್ನು ಸೇರಿಸಲು ತಿದ್ದುಪಡಿ ಮಾಡಲಾಗಿದೆ, ಎಂದರೆ:-

   "(4) ಈ ಪ್ಯಾರಾದಲ್ಲಿ ಇರುವುದಾವುದೂ, ಈ ಅನುಸೂಚಿಯ 2ನೇ ಪ್ಯಾರಾದ (3)ನೇ ಉಪ ಪ್ಯಾರಾದ ಪರಂತುಕದ ಮೇರೆಗೆ ರಚಿತವಾದ ಬೋಡೋಲ್ಯಾಂಡ್ ಪ್ರಾದೇಶಿಕ ಪರಿಷತ್ತಿಗೆ ಅನ್ವಯಿಸತಕ್ಕದ್ದಲ್ಲ".

ಪರಂತು, ಈ ಪ್ಯಾರಾದ ಮೇರೆಗೆ ಯಾವುವೇ ವಿನಿಯಮಗಳನ್ನು, ಆ ಜಿಲ್ಲಾ ಪರಿಷತ್ತಿನ ಒಟ್ಟು ಸದಸ್ಯರ ಮುಕ್ಕಾಲು ಭಾಗಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರ ಬಹುಮತದ ಮೂಲಕ ಅಂಗೀಕರಿಸಿದ್ದ ಹೊರತು ರಚಿಸುವಂತಿಲ್ಲ:

ಮತ್ತು ಪರಂತು, ಅಂಥ ವಿನಿಯಮಗಳನ್ನು ರಚಿಸುವುದಕ್ಕಿಂತ ಮುಂಚಿನಿಂದಲೂ ಜಿಲ್ಲೆಯೊಳಗೆ ವ್ಯವಹಾರ ನಡೆಸುತ್ತಿರುವ ಲೇವಾದೇವಿದಾರನಿಗೆ ಅಥವಾ ವ್ಯಾಪಾರಿಗೆ ಲೈಸೆನ್ಸು ನೀಡಿಕೆಯನ್ನು ನಿರಾಕರಿಸುವುದು ಅಂಥ ಯಾವುದೇ ವಿನಿಯಮಗಳ ಮೇರೆಗೆ ಸಕ್ಷಮವಾಗತಕ್ಕದ್ದಲ್ಲ.

(3) ಈ ಪ್ಯಾರಾದ ಮೇರೆಗೆ ರಚಿಸಿದ ಎಲ್ಲ ವಿನಿಯಮಗಳನ್ನು ಕೂಡಲೇ ರಾಜ್ಯಪಾಲನಿಗೆ ಒಪ್ಪಿಸತಕ್ಕದ್ದು ಮತ್ತು ಅವನು ಅವುಗಳಿಗೆ ಅನುಮತಿ ನೀಡುವವರೆಗೆ ಅವು ಪರಿಣಾಮಕಾರಿಯಾಗತಕ್ಕದ್ದಲ್ಲ.

**11. ಈ ಅನುಸೂಚಿಯ ಮೇರೆಗೆ ರಚಿಸಿದ ಕಾನೂನುಗಳ, ನಿಯಮಗಳ ಮತ್ತು ವಿನಿಯಮಗಳ ಪ್ರಕಟಣೆ:–** ಜಿಲ್ಲಾ ಪರಿಷತ್ತು ಅಥವಾ ಪ್ರಾದೇಶಿಕ ಪರಿಷತ್ತು ಈ ಅನುಸೂಚಿಯ ಮೇರೆಗೆ ರಚಿಸಿದ ಎಲ್ಲ ಕಾನೂನುಗಳು, ನಿಯಮಗಳು ಮತ್ತು ವಿನಿಯಮಗಳನ್ನು ರಾಜ್ಯದ ರಾಜಪತ್ರದಲ್ಲಿ ತಕ್ಷಣವೇ ಪ್ರಕಟಿಸತಕ್ಕದ್ದು ಮತ್ತು ಹಾಗೆ ಪ್ರಕಟವಾದಂದಿನಿಂದ ಅವು ಕಾನೂನಿನ ಬಲವನ್ನು ಹೊಂದಿರತಕ್ಕದ್ದು.

**[1]12. [2][ಅಸ್ಸಾಂ ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗಳಿಗೆ ಮತ್ತು ಸ್ವಾಯತ್ತ ಕ್ಷೇತ್ರಗಳಿಗೆ ಸಂಸತ್ತಿನ ಅಧಿನಿಯಮಗಳ ಮತ್ತು ಅಸ್ಸಾಂ ರಾಜ್ಯದ ವಿಧಾನಮಂಡಲದ ಅಧಿನಿಯಮಗಳ ಅನ್ವಯ]:–**

(1) ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,–

(ಎ) ಈ ಅನುಸೂಚಿಯ 3ನೆಯ ಪ್ಯಾರಾದಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳಲ್ಲಿ ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಜಿಲ್ಲಾ ಪರಿಷತ್ತಿನ ಅಥವಾ ಪ್ರಾದೇಶಿಕ ಪರಿಷತ್ತಿನ ವಿಷಯಗಳೆಂಬುದಾಗಿ ಕಾನೂನುಗಳನ್ನು ಅವು ರಚಿಸಬಹುದೋ ಆ ವಿಷಯಕ್ಕೆ ಸಂಬಂಧಪಟ್ಟಂತೆ [3][ಅಸ್ಸಾಂ ರಾಜ್ಯದ ವಿಧಾನಮಂಡಲದ] ಯಾವುದೇ ಅಧಿನಿಯಮವು, ಮತ್ತು ಭಟ್ಟಿ ಇಳಿಸದಿರುವ ಯಾವುದೇ ಮದ್ಯಸಾರಯುಕ್ತ ಪಾನೀಯದ ಸೇವನೆಯನ್ನು ನಿಷೇಧಿಸುವ ಅಥವಾ ನಿರ್ಬಂಧಿಸುವ [3][ಅಸ್ಸಾಂ ರಾಜ್ಯದ ವಿಧಾನಮಂಡಲದ] ಯಾವುದೇ ಅಧಿನಿಯಮವು, [4][ಆ ರಾಜ್ಯದಲ್ಲಿನ] ಯಾವುದೇ ಸ್ವಾಯತ್ತ ಜಿಲ್ಲೆಗೆ ಅಥವಾ ಸ್ವಾಯತ್ತ ಕ್ಷೇತ್ರಕ್ಕೆ, ಈ ಎರಡರಲ್ಲಿ ಯಾವುದಾದರೂ ಒಂದಕ್ಕೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದೆಂದು, ಅಂಥ ಜಿಲ್ಲೆಯ ಅಥವಾ ಅಂಥ ಕ್ಷೇತ್ರದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಪರಿಷತ್ತು ಸಾರ್ವಜನಿಕ ಅಧಿಸೂಚನೆಯ ಮೂಲಕ ನಿರ್ದೇಶಿಸಿದ ಹೊರತು ಅನ್ವಯವಾಗತಕ್ಕದ್ದಲ್ಲ ಮತ್ತು ಜಿಲ್ಲಾ ಪರಿಷತ್ತು ಯಾವುದೇ ಅಧಿನಿಯಮದ ಬಗ್ಗೆ ಅಂಥ ನಿರ್ದೇಶನ ನೀಡುವಾಗ ಅಂಥ ಜಿಲ್ಲೆಗೆ ಅಥವಾ ಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಆ ಅಧಿನಿಯಮವನ್ನು ಅನ್ವಯಿಸುವಲ್ಲಿ, ಜಿಲ್ಲಾ ಪರಿಷತ್ತು ಸೂಕ್ತವೆಂದು ಯೋಚಿಸುವ ವಿನಾಯಿತಿಗಳಿಗೆ ಅಥವಾ ಮಾರ್ಪಾಟುಗಳಿಗೆ ಒಳಪಟ್ಟು, ಈ ಅಧಿನಿಯಮವು ಪರಿಣಾಮಕಾರಿಯಾಗತಕ್ಕದ್ದೆಂದು ನಿರ್ದೇಶಿಸಬಹುದು;

(ಬಿ) ರಾಜ್ಯಪಾಲನು ಸಾರ್ವಜನಿಕ ಅಧಿಸೂಚನೆಯ ಮೂಲಕ ಸಂಸತ್ತಿನ ಅಥವಾ [3][ಅಸ್ಸಾಂ ರಾಜ್ಯದ ವಿಧಾನ ಮಂಡಲದ] ಯಾವ ಅಧಿನಿಯಮಕ್ಕೆ ಈ ಉಪಪ್ಯಾರಾದ ಉಪಬಂಧಗಳು ಅನ್ವಯವಾಗುವುದಿಲ್ಲವೋ ಅಂಥ ಯಾವುದೇ ಅಧಿನಿಯಮವು [4][ಆ ರಾಜ್ಯದಲ್ಲಿನ] ಒಂದು ಸ್ವಾಯತ್ತ ಜಿಲ್ಲೆಗೆ ಅಥವಾ ಒಂದು ಸ್ವಾಯತ್ತ ಕ್ಷೇತ್ರಕ್ಕೆ ಅನ್ವಯವಾಗತಕ್ಕದ್ದಲ್ಲವೆಂದು, ಅಥವಾ ಅಂಥ ಜಿಲ್ಲೆಗೆ ಅಥವಾ ಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ತಾನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳು ಅಥವಾ ಮಾರ್ಪಾಟುಗಳಿಗೆ ಒಳಪಟ್ಟು ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು.

---

1. ಅಸ್ಸಾಂ ರಾಜ್ಯಕ್ಕೆ ಅನ್ವಯಿಸುವುದಕ್ಕಾಗಿ 12ನೇ ಪ್ಯಾರಾವನ್ನು 2003ನೇ ಇಸವಿಯ ಸಂವಿಧಾನದ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (2003ರ 44) 2ನೇ ಪ್ರಕರಣದ ಮೂಲಕ ಈ ಮುಂದಿನಂತೆ ತಿದ್ದುಪಡಿ ಮಾಡಲಾಗಿದೆ,–

   12ನೇ ಪ್ಯಾರಾದಲ್ಲಿ (1)ನೇ ಉಪ ಪ್ಯಾರಾದಲ್ಲಿ (ಎ) ಖಂಡದಲ್ಲಿ, ಇರುವ "ಈ ಅನುಸೂಚಿಯ 3ನೇ ಪ್ಯಾರಾದಲ್ಲಿ ಅಥವಾ 3ಎ ಪ್ಯಾರಾದಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳಲ್ಲಿ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳಿಗೆ ಬದಲಾಗಿ, "3ನೇ ಪ್ಯಾರಾದಲ್ಲಿ ಅಥವಾ 3ಎ ಪ್ಯಾರಾದಲ್ಲಿ ಅಥವಾ 3ಬಿ ಪ್ಯಾರಾದಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳಲ್ಲಿ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಪ್ರತ್ಯಾಯೋಜಿಸತಕ್ಕದ್ದು.

2. 1971ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71(i)ನೆಯ ಪ್ರಕರಣದ ಹಾಗೂ ಎಂಟನೆಯ ಅನುಸೂಚಿಯ ಮೂಲಕ ಶೀರ್ಷಿಕೆಗೆ ಬದಲಾಗಿ (21.1.1972ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

3. ಅದೇ ಅಧಿನಿಯಮದ 71 (i)ನೆಯ ಪ್ರಕರಣದ ಹಾಗೂ ಎಂಟನೆಯ ಅನುಸೂಚಿಯ ಮೂಲಕ "ರಾಜ್ಯ ವಿಧಾನಮಂಡಲದ" ಎಂಬ ಪದಗಳಿಗೆ ಬದಲಾಗಿ (21.1.1972 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

4. ಅದೇ ಅಧಿನಿಯಮದ 71 (i)ನೆಯ ಪ್ರಕರಣದ ಹಾಗೂ ಎಂಟನೆಯ ಅನುಸೂಚಿಯ ಮೂಲಕ (21-1-1972ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(2) ಈ ಪ್ಯಾರಾದ (1)ನೆಯ ಉಪಪ್ಯಾರಾದ ಮೇರೆಗೆ ನೀಡಿದ ಯಾವುದೇ ನಿರ್ದೇಶನವನ್ನು ಪೂರ್ವಾನ್ವಯವಾಗಿ ಪರಿಣಾಮಕ್ಕೆ ಬರುವಂತೆ ನೀಡಬಹುದು.

[1][**12ಎ. ಮೇಘಾಲಯ ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗಳಿಗೆ ಮತ್ತು ಸ್ವಾಯತ್ತ ಕ್ಷೇತ್ರಗಳಿಗೆ ಸಂಸತ್ತಿನ ಅಧಿನಿಯಮಗಳ ಮತ್ತು ಮೇಘಾಲಯ ರಾಜ್ಯ ವಿಧಾನಮಂಡಲದ ಅಧಿನಿಯಮಗಳ ಅನ್ವಯ:-** ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ,-

(ಎ) ಈ ಅನುಸೂಚಿಯ 3ನೆಯ ಪ್ಯಾರಾದ (1)ನೆಯ ಉಪಪ್ಯಾರಾದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಿಷಯದ ಬಗ್ಗೆ ಮೇಘಾಲಯ ರಾಜ್ಯದ ಒಂದು ಜಿಲ್ಲಾ ಅಥವಾ ಪ್ರಾದೇಶಿಕ ಪರಿಷತ್ತು ರಚಿಸಿದ ಕಾನೂನಿನ ಯಾವುದೇ ಉಪಬಂಧವು ಅಥವಾ ಆ ರಾಜ್ಯದ ಜಿಲ್ಲಾ ಪರಿಷತ್ತು ಅಥವಾ ಪ್ರಾದೇಶಿಕ ಪರಿಷತ್ತು ಈ ಅನುಸೂಚಿಯ 8ನೆಯ ಪ್ಯಾರಾದ ಅಥವಾ 10ನೆಯ ಪ್ಯಾರಾದ ಅಡಿಯಲ್ಲಿ ರಚಿಸಿದ ಯಾವುದೇ ವಿನಿಯಮವು ಮೇಘಾಲಯ ರಾಜ್ಯದ ವಿಧಾನಮಂಡಲವು ಆ ವಿಷಯದ ಬಗ್ಗೆ ರಚಿಸಿದ ಕಾನೂನಿನ ಯಾವುದೇ ಉಪಬಂಧಕ್ಕೆ ವಿರುದ್ಧವಾಗಿದ್ದರೆ, ಆಗ ಮೇಘಾಲಯ ರಾಜ್ಯದ ವಿಧಾನಮಂಡಲವು ಆ ಕಾನೂನನ್ನು ರಚಿಸುವುದಕ್ಕೆ ಮುಂಚೆಯೇ ಆಗಲಿ ಅಥವಾ ತರುವಾಯವೇ ಆಗಲಿ ಆ ಜಿಲ್ಲಾ ಪರಿಷತ್ತು ಅಥವಾ ಸಂದರ್ಭಾನುಸಾರ ಪ್ರಾದೇಶಿಕ ಪರಿಷತ್ತು ರಚಿಸಿದ ವಿನಿಯಮವು ಹಾಗೆ ವಿರುದ್ಧವಾಗಿರುವ ಮಟ್ಟಿಗೆ ಶೂನ್ಯವಾಗತಕ್ಕದ್ದು ಮತ್ತು ಮೇಘಾಲಯ ರಾಜ್ಯದ ವಿಧಾನ ಮಂಡಲವು ರಚಿಸಿದ ಕಾನೂನು ಪ್ರಭಾವವುಳ್ಳದ್ದಾಗಿರತಕ್ಕದ್ದು;

(ಬಿ) ರಾಷ್ಟ್ರಪತಿಯು ಸಂಸತ್ತಿನ ಯಾವುದೇ ಅಧಿನಿಯಮದ ಬಗ್ಗೆ ಅಧಿಸೂಚನೆಯ ಮೂಲಕ ಆ ಅಧಿನಿಯಮವು ಮೇಘಾಲಯ ರಾಜ್ಯದಲ್ಲಿನ ಒಂದು ಸ್ವಾಯತ್ತ ಜಿಲ್ಲೆಗೆ ಅಥವಾ ಆ ಅಧಿಸೂಚನೆಯಲ್ಲಿ ತಾನು ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳು ಅಥವಾ ಮಾರ್ಪಾಟುಗಳಿಗೆ ಒಳಪಟ್ಟು ಅದು ಅಂಥ ಜಿಲ್ಲೆಗೆ ಅಥವಾ ಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು, ಮತ್ತು ಪೂರ್ವಾನ್ವಯವಾಗಿ ಪರಿಣಾಮಕ್ಕೆ ಬರುವಂತೆ ಅಂಥ ನಿರ್ದೇಶನವನ್ನು ನೀಡಬಹುದು.]

[2][**12ಎಎ. ತ್ರಿಪುರ ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗಳಿಗೆ ಮತ್ತು ಸ್ವಾಯತ್ತ ಕ್ಷೇತ್ರಗಳಿಗೆ ಸಂಸತ್ತಿನ ಅಧಿನಿಯಮಗಳ ಮತ್ತು ತ್ರಿಪುರ ರಾಜ್ಯ ವಿಧಾನ ಮಂಡಲದ ಅಧಿನಿಯಮಗಳ ಅನ್ವಯ:-** ಈ ಸಂವಿಧಾನದಲ್ಲಿ ಏನೇ ಇದ್ದರೂ,-

(ಎ) ಈ ಅನುಸೂಚಿಯ 3ನೇ ಪ್ಯಾರಾದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳ ಪೈಕಿ ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಜಿಲ್ಲಾ ಪರಿಷತ್ತಿನ ಅಥವಾ ಪ್ರಾದೇಶಿಕ ಪರಿಷತ್ತಿನ ವಿಷಯಗಳೆಂಬುದಾಗಿ ಕಾನೂನುಗಳನ್ನು ಅವು ರಚಿಸಬಹುದೋ ಆ ವಿಷಯಕ್ಕೆ ಸಂಬಂಧಪಟ್ಟಂತೆ ತ್ರಿಪುರ ರಾಜ್ಯ ವಿಧಾನ ಮಂಡಲದ ಯಾವುದೇ ಅಧಿನಿಯಮವು, ಮತ್ತು ಭಟ್ಟಿ ಇಳಿಸದಿರುವ ಯಾವುದೇ ಮದ್ಯಸಾರಯುಕ್ತ ಪಾನೀಯದ ಸೇವನೆಯನ್ನು ನಿಷೇಧಿಸುವ ಅಥವಾ ನಿರ್ಬಂಧಿಸುವ ತ್ರಿಪುರ ರಾಜ್ಯ ವಿಧಾನಮಂಡಲದ ಯಾವುದೇ ಅಧಿನಿಯಮವು ಯಾವುದೇ ಸ್ವಾಯತ್ತ ಜಿಲ್ಲೆಗೆ ಅಥವಾ ಸ್ವಾಯತ್ತ ಕ್ಷೇತ್ರಕ್ಕೆ ಈ ಎರಡರಲ್ಲಿ ಯಾವುದಾದರೂ ಒಂದಕ್ಕೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದೆಂದು ಅಂಥ ಜಿಲ್ಲೆಯ ಅಥವಾ ಅಂಥ ಕ್ಷೇತ್ರದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಪರಿಷತ್ತು ಸಾರ್ವಜನಿಕ ಅಧಿಸೂಚನೆಯ ಮೂಲಕ ನಿರ್ದೇಶಿಸಿದ ಹೊರತು ಅನ್ವಯವಾಗತಕ್ಕದ್ದಲ್ಲ ಮತ್ತು ಜಿಲ್ಲಾ ಪರಿಷತ್ತು ಯಾವುದೇ ಅಧಿನಿಯಮದ ಬಗ್ಗೆ ಅಂಥ ನಿರ್ದೇಶನ ನೀಡುವಾಗ, ಅಂಥ ಜಿಲ್ಲೆಗೆ ಅಥವಾ ಅಂಥ ಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಆ ಅಧಿನಿಯಮವನ್ನು ಅನ್ವಯಿಸುವಲ್ಲಿ, ಜಿಲ್ಲಾ ಪರಿಷತ್ತು ಸೂಕ್ತವೆಂದು ಯೋಚಿಸುವ ವಿನಾಯಿತಿಗಳಿಗೆ ಅಥವಾ ಮಾರ್ಪಾಡುಗಳಿಗೆ ಒಳಪಟ್ಟು, ಈ ಅಧಿನಿಯಮವು ಪರಿಣಾಮಕ್ಕೆ ಬರತಕ್ಕದ್ದೆಂದು ನಿರ್ದೇಶಿಸಬಹುದು;

(ಬಿ) ರಾಜ್ಯಪಾಲನು, ಸಾರ್ವಜನಿಕ ಅಧಿಸೂಚನೆಯ ಮೂಲಕ ಈ ಉಪಪ್ಯಾರಾದ (ಎ) ಖಂಡದ ಉಪಬಂಧಗಳು ಅನ್ವಯಿಸದಿರುವಂಥ ತ್ರಿಪುರ ರಾಜ್ಯ ವಿಧಾನ ಮಂಡಲದ ಯಾವುದೇ ಅಧಿನಿಯಮವು, ಆ ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗೆ ಅಥವಾ ಸ್ವಾಯತ್ತ ಕ್ಷೇತ್ರಕ್ಕೆ ಅನ್ವಯವಾಗುವುದಿಲ್ಲವೆಂದು, ಅಥವಾ ಆ ಅಧಿಸೂಚನೆಯಲ್ಲಿ ತಾನು ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳು ಅಥವಾ ಮಾರ್ಪಾಡುಗಳಿಗೆ ಒಳಪಟ್ಟು, ಆ ಜಿಲ್ಲೆಗೆ ಅಥವಾ ಅಂಥ ಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು;

---

1. 1971 ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71(i)ನೆಯ ಪ್ರಕರಣದ ಹಾಗೂ ಎಂಟನೆಯ ಅನುಸೂಚಿಯ ಮೂಲಕ 12ಎ ಪ್ಯಾರಾಗೆ ಬದಲಾಗಿ (21-1-1972 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1984ನೆಯ ಇಸವಿಯ ಸಂವಿಧಾನ (ನಲವತ್ತೊಂಬತ್ತನೇ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ (1.4.1985 ರಿಂದ ಜಾರಿಗೆ ಬರುವಂತೆಗೆ) 12ಎಎ ಪ್ಯಾರಾವನ್ನು ಸೇರಿಸಲಾಗಿತ್ತು. 1988ನೆಯ ಇಸವಿಯ ಸಂವಿಧಾನ ಆರನೆಯ ಅನುಸೂಚಿ (ತಿದ್ದುಪಡಿ) ಅಧಿನಿಯಮದ (1988ರ 67) 2ನೇ ಪ್ರಕರಣದ ಮೂಲಕ 12ಎಎ ಮತ್ತು 12ಬಿ ಪ್ಯಾರಾಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(ಸಿ) ರಾಷ್ಟ್ರಪತಿಯು ಸಂಸತ್ತಿನ ಯಾವುದೇ ಅಧಿನಿಯಮಕ್ಕೆ ಸಂಬಂಧಿಸಿದಂತೆ, ಅಧಿಸೂಚನೆಯ ಮೂಲಕ ಆ ಅಧಿನಿಯಮವು ತ್ರಿಪುರ ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗೆ ಅಥವಾ ಸ್ವಾಯತ್ತ ಕ್ಷೇತ್ರಕ್ಕೆ ಅನ್ವಯವಾಗತಕ್ಕದ್ದಲ್ಲವೆಂದು, ಅಥವಾ ತಾನು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳು ಅಥವಾ ಮಾರ್ಪಾಡುಗಳಿಗೆ ಒಳಪಟ್ಟು, ಅಂಥ ಜಿಲ್ಲೆಗೆ ಅಥವಾ ಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅಂಥ ಯಾವುದೇ ನಿರ್ದೇಶನವನ್ನು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ನೀಡಬಹುದು.

**12ಬಿ. ಮಿಜೋರಾಂ ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗಳಿಗೆ ಮತ್ತು ಸ್ವಾಯತ್ತ ಕ್ಷೇತ್ರಗಳಿಗೆ ಸಂಸತ್ತಿನ ಅಧಿನಿಯಮಗಳ ಮತ್ತು ಮಿಜೋರಾಂ ರಾಜ್ಯ ವಿಧಾನ ಮಂಡಲದ ಅಧಿನಿಯಮಗಳ ಅನ್ವಯ:–** ಈ ಸಂವಿಧಾನದಲ್ಲಿ ಏನೇ ಇದ್ದರೂ,–

(ಎ) ಈ ಅನುಸೂಚಿಯ 3ನೇ ಪ್ಯಾರಾದಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳ ಪೈಕಿ ಯಾವ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಜಿಲ್ಲಾ ಪರಿಷತ್ತಿನ ಅಥವಾ ಪ್ರಾದೇಶಿಕ ಪರಿಷತ್ತಿನ ವಿಷಯಗಳೆಂಬುದಾಗಿ ಕಾನೂನುಗಳನ್ನು ಅವು ರಚಿಸಬಹುದೋ ಆ ವಿಷಯಕ್ಕೆ ಸಂಬಂಧಪಟ್ಟಂತೆ ಮಿಜೋರಾಂ ರಾಜ್ಯ ವಿಧಾನ ಮಂಡಲದ ಯಾವುದೇ ಅಧಿನಿಯಮವು ಮತ್ತು ಭಟ್ಟಿ ಇಳಿಸದಿರುವ ಯಾವುದೇ ಮದ್ಯಸಾರಯುಕ್ತ ಪಾನೀಯದ ಸೇವನೆಯನ್ನು ನಿಷೇಧಿಸುವ ಅಥವಾ ನಿರ್ಬಂಧಿಸುವ ಮಿಜೋರಾಂ ರಾಜ್ಯ ವಿಧಾನ ಮಂಡಲದ ಯಾವುದೇ ಅಧಿನಿಯಮವು, ಆ ರಾಜ್ಯದಲ್ಲಿನ ಯಾವುದೇ ಸ್ವಾಯತ್ತ ಜಿಲ್ಲೆಗೆ ಅಥವಾ ಸ್ವಾಯತ್ತ ಕ್ಷೇತ್ರಕ್ಕೆ– ಈ ಎರಡರಲ್ಲಿ ಯಾವುದಾದರೂ ಒಂದಕ್ಕೆ ಸಂಬಂಧಪಟ್ಟಂತ ಅನ್ವಯವಾಗತಕ್ಕದ್ದೆಂದು, ಅಂಥ ಜಿಲ್ಲೆಯ ಅಥವಾ ಅಂಥ ಕ್ಷೇತ್ರದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಪರಿಷತ್ತು ಸಾರ್ವಜನಿಕ ಅಧಿಸೂಚನೆಯ ಮೂಲಕ, ನಿರ್ದೇಶಿಸಿದ ಹೊರತು ಅನ್ವಯವಾಗತಕ್ಕದ್ದಲ್ಲ ಮತ್ತು ಜಿಲ್ಲಾ ಪರಿಷತ್ತು ಯಾವುದೇ ಅಧಿನಿಯಮದ ಬಗ್ಗೆ ಅಂಥ ನಿರ್ದೇಶನವನ್ನು ನೀಡುವಾಗ, ಅಂಥ ಜಿಲ್ಲೆಗೆ ಅಥವಾ ಅಂಥ ಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಆ ಅಧಿನಿಯಮವನ್ನು ಅನ್ವಯಿಸುವಲ್ಲಿ, ಜಿಲ್ಲಾ ಪರಿಷತ್ತು ಸೂಕ್ತವೆಂದು ಯೋಚಿಸುವಂಥ ವಿನಾಯಿತಿಗಳಿಗೆ ಅಥವಾ ಮಾರ್ಪಾಡುಗಳಿಗೆ ಒಳಪಟ್ಟು ಆ ಅಧಿನಿಯಮವು ಪರಿಣಾಮಕಾರಿಯಾಗತಕ್ಕದ್ದೆಂದು ನಿರ್ದೇಶಿಸಬಹುದು;

(ಬಿ) ರಾಜ್ಯಪಾಲನು, ಸಾರ್ವಜನಿಕ ಅಧಿಸೂಚನೆಯ ಮೂಲಕ ಸಂಸತ್ತಿನ ಅಥವಾ ಮಿಜೋರಾಂ ರಾಜ್ಯ ವಿಧಾನ ಮಂಡಲದ ಯಾವ ಅಧಿನಿಯಮಕ್ಕೆ, ಈ ಉಪಪ್ಯಾರಾದ ಉಪಬಂಧಗಳು ಅನ್ವಯವಾಗುವುದಿಲ್ಲವೋ ಅಂಥ ಯಾವುದೇ ಅಧಿನಿಯಮವು ಆ ರಾಜ್ಯದಲ್ಲಿನ ಒಂದು ಸ್ವಾಯತ್ತ ಜಿಲ್ಲೆಗೆ ಅಥವಾ ಒಂದು ಸ್ವಾಯತ್ತ ಕ್ಷೇತ್ರಕ್ಕೆ ಅನ್ವಯವಾಗತಕ್ಕದ್ದಲ್ಲವೆಂದು, ಅಥವಾ ಅಂಥ ಜಿಲ್ಲೆಗೆ ಅಥವಾ ಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ತಾನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳು ಅಥವಾ ಮಾರ್ಪಾಟುಗಳಿಗೆ ಒಳಪಟ್ಟು ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು;

(ಸಿ) ರಾಷ್ಟ್ರಪತಿಯು, ಸಂಸತ್ತಿನ ಯಾವುದೇ ಅಧಿನಿಯಮಕ್ಕೆ ಸಂಬಂಧಿಸಿದಂತೆ, ಅಧಿಸೂಚನೆಯ ಮೂಲಕ ಆ ಅಧಿನಿಯಮವು ಮಿಜೋರಾಂ ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗೆ ಅಥವಾ ಸ್ವಾಯತ್ತ ಕ್ಷೇತ್ರಕ್ಕೆ ಅನ್ವಯವಾಗತಕ್ಕದ್ದಲ್ಲವೆಂದು, ಅಥವಾ ತಾನು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿನಾಯಿತಿಗಳು ಅಥವಾ ಮಾರ್ಪಾಟುಗಳಿಗೆ ಒಳಪಟ್ಟು, ಅಂಥ ಜಿಲ್ಲೆಗೆ ಅಥವಾ ಕ್ಷೇತ್ರಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅಂಥ ಯಾವುದೇ ನಿರ್ದೇಶನವನ್ನು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ನೀಡಬಹುದು.]

**13. ಸ್ವಾಯತ್ತ ಜಿಲ್ಲೆಗಳಿಗೆ ಸಂಬಂಧಿಸಿದ ಅಂದಾಜು ಜಮೆಗಳನ್ನು ಮತ್ತು ವೆಚ್ಚಗಳನ್ನು ವಾರ್ಷಿಕ ಹಣಕಾಸು ವಿವರ ಪತ್ರದಲ್ಲಿ ಪ್ರತ್ಯೇಕವಾಗಿ ತೋರಿಸುವುದು:–** ಒಂದು ಸ್ವಾಯತ್ತ ಜಿಲ್ಲೆಗೆ ಸಂಬಂಧಿಸಿದ ಯಾವ ಅಂದಾಜು ಜಮೆಗಳನ್ನು [1]***ರಾಜ್ಯದ ಸಂಚಿತ ನಿಧಿಗೆ ಜಮೆ ಮಾಡಬೇಕಾಗಿದೆಯೋ ಆ ಜಮೆಗಳನ್ನು ಅಥವಾ ಯಾವ ವೆಚ್ಚಗಳನ್ನು ಆ ನಿಧಿಯಿಂದ ಭರಿಸಬೇಕಾಗಿದೆಯೋ ಆ ವೆಚ್ಚಗಳನ್ನು ಚರ್ಚೆಗಾಗಿ ಮೊದಲು ಜಿಲ್ಲಾ ಪರಿಷತ್ತಿನ ಮುಂದೆ ಇಡತಕ್ಕದ್ದು ಮತ್ತು ಆ ಚರ್ಚೆಯ ಅನಂತರ 202ನೆಯ ಅನುಚ್ಛೇದದ ಮೇರೆಗೆ ರಾಜ್ಯದ ವಿಧಾನಮಂಡಲದ ಮುಂದೆ ಇಡಬೇಕಾದ ರಾಜ್ಯದ ವಾರ್ಷಿಕ ಹಣಕಾಸು ವಿವರ ಪತ್ರದಲ್ಲಿ ಅವುಗಳನ್ನು ಪ್ರತ್ಯೇಕವಾಗಿ ತೋರಿಸತಕ್ಕದ್ದು.

---

1. 1971ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71(i)ನೇ ಪ್ರಕರಣದ ಮತ್ತು ಎಂಟನೇ ಅನುಸೂಚಿಯ ಮೂಲಕ (21.1.1972 ರಿಂದ ಜಾರಿಗೆ ಬರುವಂತೆ) "ಅಸ್ಸಾಂ" ಎಂಬ ಪದವನ್ನು ಬಿಟ್ಟುಬಿಡಲಾಗಿದೆ.

[1]14. ಸ್ವಾಯತ್ತ ಜಿಲ್ಲೆಗಳ ಮತ್ತು ಸ್ವಾಯತ್ತ ಕ್ಷೇತ್ರಗಳ ಆಡಳಿತದ ಬಗ್ಗೆ ವಿಚಾರಣೆ ಮಾಡಲು ಮತ್ತು ವರದಿ ಮಾಡಲು ಆಯೋಗದ ನೇಮಕ:- (1) ರಾಜ್ಯಪಾಲನು, ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗಳ ಮತ್ತು ಸ್ವಾಯತ್ತ ಕ್ಷೇತ್ರಗಳ ಆಡಳಿತಕ್ಕೆ ಸಂಬಂಧಪಟ್ಟಂತೆ ಈ ಅನುಸೂಚಿಯ 1ನೆಯ ಪ್ಯಾರಾದ (3) ನೆಯ ಉಪಪ್ಯಾರಾದ (ಸಿ), (ಡಿ), (ಇ) ಮತ್ತು (ಎಫ್) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳನ್ನೊಳಗೊಂಡು ತಾನು ನಿರ್ದಿಷ್ಟಪಡಿಸುವಂಥ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸಿ ವರದಿ ಮಾಡಲು ಯಾವುದೇ ಕಾಲದಲ್ಲಿ ಒಂದು ಆಯೋಗವನ್ನು ನೇಮಕ ಮಾಡಬಹುದು ಅಥವಾ ಸಾಮಾನ್ಯವಾಗಿ ರಾಜ್ಯದಲ್ಲಿನ ಸ್ವಾಯತ್ತ ಜಿಲ್ಲೆಗಳ ಮತ್ತು ಸ್ವಾಯತ್ತ ಕ್ಷೇತ್ರಗಳ ಆಡಳಿತದ ವಿಷಯದ ಬಗ್ಗೆ ಮತ್ತು ವಿಶೇಷವಾಗಿ-

(ಎ) ಅಂಥ ಜಿಲ್ಲೆಗಳಲ್ಲಿ ಮತ್ತು ಕ್ಷೇತ್ರಗಳಲ್ಲಿ ಶೈಕ್ಷಣಿಕ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಮತ್ತು ಸಂಪರ್ಕಗಳನ್ನು ಒದಗಿಸುವ ಬಗ್ಗೆ;

(ಬಿ) ಅಂಥ ಜಿಲ್ಲೆಗಳ ಮತ್ತು ಕ್ಷೇತ್ರಗಳ ಬಗ್ಗೆ ಯಾವುದೇ ಹೊಸ ಶಾಸನದ ಅಥವಾ ವಿಶೇಷ ಶಾಸನದ ರಚನೆಯ ಅವಶ್ಯಕತೆಯ ಬಗ್ಗೆ; ಮತ್ತು

(ಸಿ) ಜಿಲ್ಲಾ ಮತ್ತು ಪ್ರಾದೇಶಿಕ ಪರಿಷತ್ತುಗಳು ರಚಿಸಿದ ಕಾನೂನುಗಳ, ನಿಯಮಗಳ ಮತ್ತು ವಿನಿಯಮಗಳ ಜಾರಿಯ ಬಗ್ಗೆ

- ಕಾಲಕಾಲಕ್ಕೆ ವಿಚಾರಣೆ ನಡೆಸಿ ವರದಿಮಾಡಲು ಒಂದು ಆಯೋಗವನ್ನು ನೇಮಕ ಮಾಡಬಹುದು ಮತ್ತು ಅಂಥ ಆಯೋಗವು ಅನುಸರಿಸಬೇಕಾದ ಪ್ರಕ್ರಿಯೆಯನ್ನು ನಿರ್ಧರಿಸಬಹುದು.

(2) ಸಂಬಂಧಪಟ್ಟ ಮಂತ್ರಿಯು ಅಂಥ ಪ್ರತಿಯೊಂದು ಆಯೋಗದ ವರದಿಯನ್ನು, ಆ ಬಗ್ಗೆ ರಾಜ್ಯಪಾಲನು ಮಾಡುವ ಶಿಫಾರಸ್ಸುಗಳೊಡನೆ ಮತ್ತು ಅದರ ಮೇಲೆ [2][ಆ ರಾಜ್ಯಸರ್ಕಾರವು] ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ವಿವರಣಾತ್ಮಕ ಜ್ಞಾಪನ ಪತ್ರದೊಡನೆ ರಾಜ್ಯದ ವಿಧಾನಮಂಡಲದ ಮುಂದೆ ಇಡತಕ್ಕದ್ದು.

(3) ರಾಜ್ಯ ಸರ್ಕಾರದ ಆಡಳಿತ ವ್ಯವಹಾರವನ್ನು ತನ್ನ ಮಂತ್ರಿಗಳಿಗೆ ಹಂಚಿಕೊಡುವಾಗ ರಾಜ್ಯಪಾಲನು ತನ್ನ ಮಂತ್ರಿಗಳಲ್ಲಿ ಒಬ್ಬನನ್ನು ವಿಶೇಷವಾಗಿ ರಾಜ್ಯದ ಸ್ವಾಯತ್ತ ಜಿಲ್ಲೆಗಳ ಮತ್ತು ಸ್ವಾಯತ್ತ ಕ್ಷೇತ್ರಗಳ ಕಲ್ಯಾಣವನ್ನು ನೋಡಿಕೊಳ್ಳಲು ಗೊತ್ತುಮಾಡಬಹುದು.

[3]15. ಜಿಲ್ಲಾ ಮತ್ತು ಪ್ರಾದೇಶಿಕ ಪರಿಷತ್ತುಗಳ ಕಾರ್ಯಗಳ ಮತ್ತು ನಿರ್ಣಯಗಳ ರದ್ದಿಯಾತಿ ಅಥವಾ ಅಮಾನತು:- (1) ಒಂದು ಜಿಲ್ಲೆ ಅಥವಾ ಪ್ರಾದೇಶಿಕ ಪರಿಷತ್ತು ಕೈಗೊಂಡ ಕಾರ್ಯದಿಂದ ಅಥವಾ ನಿರ್ಣಯದಿಂದ ಭಾರತದ ಸುರಕ್ಷತೆಗೆ ಅಪಾಯ ಉಂಟಾಗುವ ಸಂಭವವಿದೆಯೆಂದು [4][ಅಥವಾ ಸಾರ್ವಜನಿಕ ಸುವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಸಂಭವವಿದೆಯೆಂದು] ಯಾವುದೇ ಕಾಲದಲ್ಲಿ ರಾಜ್ಯಪಾಲನಿಗೆ ಮನದಟ್ಟಾದರೆ, ಅಂಥ ಕಾರ್ಯವನ್ನು ಅಥವಾ ನಿರ್ಣಯವನ್ನು ರದ್ದುಗೊಳಿಸಬಹುದು ಅಥವಾ ಅಮಾನತುಗೊಳಿಸಬಹುದು ಮತ್ತು ಅಂಥ ಕಾರ್ಯ ಅಥವಾ ಅದರ ಮುಂದುವರಿಕೆಯನ್ನು ಅಥವಾ ಅಂಥ ನಿರ್ಣಯದ ಜಾರಿಯನ್ನು ತಡೆಗಟ್ಟುವುದಕ್ಕಾಗಿ ಅವಶ್ಯವೆಂದು ತಾನು ಪರಿಗಣಿಸಬಹುದಾದಂಥ ಕ್ರಮಗಳನ್ನು (ಆ ಪರಿಷತ್ತಿನ ಅಮಾನತ್ತನ್ನು ಮತ್ತು ಆ ಪರಿಷತ್ತಿನಲ್ಲಿ ನಿಹಿತವಾಗಿರುವ ಅಥವಾ ಅದು ಚಲಾಯಿಸಬಹುದಾದ ಎಲ್ಲ ಅಧಿಕಾರಗಳನ್ನು ಅಥವಾ ಯಾವುದೇ ಅಧಿಕಾರವನ್ನು ತಾನೇ ವಹಿಸಿಕೊಳ್ಳುವುದನ್ನೊಳಗೊಂಡು) ಕೈಗೊಳ್ಳಬಹುದು.

---

1. ಅಸ್ಸಾಂ ರಾಜ್ಯಕ್ಕೆ ಅನ್ವಯಿಸುವುದಕ್ಕಾಗಿ 14ನೇ ಪ್ಯಾರಾವನ್ನು 1995ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (1995ರ 42) 2ನೇ ಪ್ರಕರಣದ ಮೂಲಕ ಈ ಮುಂದಿನಂತೆ ತಿದ್ದುಪಡಿ ಮಾಡಲಾಗಿದೆ:-

   '14ನೇ ಪ್ಯಾರಾದಲ್ಲಿ (2)ನೇ ಉಪ ಪ್ಯಾರಾದಲ್ಲಿ "ಆ ಬಗ್ಗೆ ರಾಜ್ಯಪಾಲನು ಮಾಡುವ ಶಿಫಾರಸ್ಸುಗಳೊಡನೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.'.

2. 1971ನೇ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71(i)ನೇ ಪ್ರಕರಣದ ಮತ್ತು ಎಂಟನೇ ಅನುಸೂಚಿಯ ಮೂಲಕ "ಅಸ್ಸಾಂ ಸರ್ಕಾರವು" ಎಂಬುದಕ್ಕೆ ಬದಲಾಗಿ (21.1.1972 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

3. ತ್ರಿಪುರ ಮತ್ತು ಮಿಜೋರಾಂ ರಾಜ್ಯಗಳಿಗೆ ಅನ್ವಯಿಸುವುದಕ್ಕಾಗಿ 15ನೇ ಪ್ಯಾರಾವನ್ನು 1988ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (1988ರ 67) 2ನೇ ಪ್ರಕರಣದ ಮೂಲಕ ಈ ಮುಂದಿನಂತೆ ತಿದ್ದುಪಡಿ ಮಾಡಲಾಗಿದೆ:-

   (ಎ) ಪ್ರಾರಂಭದ ಪ್ಯಾರಾದಲ್ಲಿ "ರಾಜ್ಯ ವಿಧಾನ ಮಂಡಲವು" ಎಂಬ ಪದಗಳಿಗೆ ಬದಲಾಗಿ "ಅವನು" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು;

   (ಬಿ) ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

4. 1969ನೇ ಇಸವಿಯ ಅಸ್ಸಾಂ ಪುನರ್‌ವಿಂಗಡಣೆ (ಮೇಘಾಲಯ) ಅಧಿನಿಯಮದ (1969ರ 55) 74ನೇ ಪ್ರಕರಣದ ಮತ್ತು ನಾಲ್ಕನೇ ಅನುಸೂಚಿಯ ಮೂಲಕ (2-4-1970 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

(2) ಈ ಪ್ಯಾರಾದ (1)ನೆಯ ಉಪಪ್ಯಾರಾದ ಮೇರೆಗೆ ರಾಜ್ಯಪಾಲನು ಮಾಡಿದ ಯಾವುದೇ ಆದೇಶವನ್ನು, ಅದರ ಕಾರಣಗಳೊಂದಿಗೆ ರಾಜ್ಯದ ವಿಧಾನಮಂಡಲದ ಮುಂದೆ ಸಾಧ್ಯವಾದಷ್ಟು ಬೇಗನೆ ಇಡತಕ್ಕದ್ದು ಮತ್ತು ರಾಜ್ಯದ ವಿಧಾನಮಂಡಲವು ಆ ಆದೇಶವನ್ನು ರದ್ದುಗೊಳಿಸಿದ ಹೊರತು ಅದನ್ನು ಹಾಗೆ ಮಾಡಿದ ದಿನಾಂಕದಿಂದ ಹನ್ನೆರಡು ತಿಂಗಳುಗಳ ಅವಧಿಯವರೆಗೆ ಅದು ಜಾರಿಯಲ್ಲಿರತಕ್ಕದ್ದು:

ಪರಂತು, ಅಂಥ ಆದೇಶದ ಜಾರಿಯ ಮುಂದುವರಿಕೆಯನ್ನು ಅನುಮೋದಿಸುವ ನಿರ್ಣಯವನ್ನು ಆ ರಾಜ್ಯದ ವಿಧಾನಮಂಡಲವು ಅಂಗೀಕರಿಸಿದರೆ ಮತ್ತು ಹಾಗೆ ಅಂಗೀಕರಿಸಿದಾಗಲೆಲ್ಲ ಆ ಆದೇಶವನ್ನು ರಾಜ್ಯಪಾಲನು ರದ್ದುಪಡಿಸಿದ ಹೊರತು, ಅದು ಈ ಪ್ಯಾರಾದ ಮೇರೆಗೆ ಯಾವ ದಿನಾಂಕದಿಂದ ಜಾರಿಯಲ್ಲಿರುವುದು ಅನ್ಯಥಾ ನಿಂತುಹೋಗಬಹುದಾಗಿತ್ತೋ ಆ ದಿನಾಂಕದಿಂದ ಮತ್ತೆ ಹನ್ನೆರಡು ತಿಂಗಳುಗಳ ಅವಧಿಯವರೆಗೆ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

[1]**16. ಜಿಲ್ಲಾ ಅಥವಾ ಪ್ರಾದೇಶಿಕ ಪರಿಷತ್ತಿನ ವಿಸರ್ಜನೆ:-** [2][(1)] ಈ ಅನುಸೂಚಿಯ 14ನೆಯ ಪ್ಯಾರಾದ ಮೇರೆಗೆ ನೇಮಿಸಲಾದ ಆಯೋಗದ ಶಿಫಾರಸಿನ ಮೇಲೆ ರಾಜ್ಯಪಾಲನು ಸಾರ್ವಜನಿಕ ಅಧಿಸೂಚನೆಯ ಮೂಲಕ ಒಂದು ಜಿಲ್ಲಾ ಅಥವಾ ಪ್ರಾದೇಶಿಕ ಪರಿಷತ್ತನ್ನು ವಿಸರ್ಜಿಸುವ ಆದೇಶವನ್ನು ಮಾಡಬಹುದು, ಮತ್ತು ಅವನು-

(ಎ) ಆ ಪರಿಷತ್ತಿನ ಪುನರ್ ರಚನೆಗಾಗಿ ಕೂಡಲೇ ಹೊಸದಾಗಿ ಸಾರ್ವತ್ರಿಕ ಚುನಾವಣೆ ನಡೆಯತಕ್ಕದ್ದೆಂದು ನಿರ್ದೇಶಿಸಬಹುದು, ಅಥವಾ

(ಬಿ) ರಾಜ್ಯದ ವಿಧಾನಮಂಡಲದ ಪೂರ್ವ ಅನುಮೋದನೆಗೆ ಒಳಪಟ್ಟು, ಅಂಥ ಪರಿಷತ್ತಿನ ಪ್ರಾಧಿಕಾರಕ್ಕೆ ಅಧೀನದಲ್ಲಿರುವ ಪ್ರದೇಶದ ಆಡಳಿತವನ್ನು ತಾನೇ ವಹಿಸಿಕೊಳ್ಳಬಹುದು ಅಥವಾ ಅಂತಹ ಪ್ರದೇಶದ ಆಡಳಿತವನ್ನು ಸದರಿ ಪ್ಯಾರಾದ ಮೇರೆಗೆ ನೇಮಿಸಲಾದ ಆಯೋಗಕ್ಕೆ ಅಥವಾ ತಾನು ಸೂಕ್ತವೆಂದು ಪರಿಗಣಿಸುವ ಇತರ ಯಾವುದೇ ನಿಕಾಯಕ್ಕೆ ಹನ್ನೆರಡು ತಿಂಗಳಿಗೆ ಮೀರದ ಅವಧಿಯವರೆಗೆ ವಹಿಸಿಕೊಡಬಹುದು:

ಪರಂತು, ಈ ಪ್ಯಾರಾದ (ಎ) ಖಂಡದ ಮೇರೆಗೆ ಒಂದು ಆದೇಶವನ್ನು ಮಾಡಿರುವಾಗ, ಹೊಸದಾಗಿ ಸಾರ್ವತ್ರಿಕ ಚುನಾವಣೆ ನಡೆದು ಪರಿಷತ್ತಿನ ಪುನರ್ ರಚನೆಯಾಗುವವರೆಗೆ ರಾಜ್ಯಪಾಲನು ಸಂಬಂಧಪಟ್ಟ ಪ್ರದೇಶದ ಆಡಳಿತಕ್ಕೆ ಸಂಬಂಧಿಸಿದಂತೆ ಈ ಪ್ಯಾರಾದ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ಕ್ರಮವನ್ನು ಕೈಗೊಳ್ಳಬಹುದು:

ಮತ್ತೂ ಪರಂತು, ಜಿಲ್ಲಾ ಅಥವಾ ಸಂದರ್ಭಾನುಸಾರ ಪ್ರಾದೇಶಿಕ ಪರಿಷತ್ತಿನ ಅಭಿಪ್ರಾಯಗಳನ್ನು ರಾಜ್ಯವಿಧಾನ ಮಂಡಲದ ಮುಂದೆ ಇಡಲು ಅದಕ್ಕೆ ಅವಕಾಶ ಕೊಟ್ಟ ಹೊರತು, ಈ ಪ್ಯಾರಾದ (ಬಿ) ಖಂಡದ ಮೇರೆಗೆ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

[3][(2) ಒಂದು ಸ್ವಾಯತ್ತ ಜಿಲ್ಲೆಯ ಅಥವಾ ಕ್ಷೇತ್ರದ ಆಡಳಿತವನ್ನು ಈ ಅನುಸೂಚಿಯ ಉಪಬಂಧಗಳಿಗೆ ಅನುಸಾರವಾಗಿ ನಡೆಸಲು ಸಾಧ್ಯವಿಲ್ಲದಂಥ ಸನ್ನಿವೇಶವು ಉದ್ಭವಿಸಿದೆ ಎಂದು ರಾಜ್ಯಪಾಲನಿಗೆ ಯಾವುದೇ ಕಾಲದಲ್ಲಿ ಮನದಟ್ಟಾದರೆ, ಅವನು ಸಾರ್ವಜನಿಕ ಅಧಿಸೂಚನೆಯ ಮೂಲಕ, ಜಿಲ್ಲಾ ಪರಿಷತ್ತಿನಲ್ಲಿ ಅಥವಾ ಸಂದರ್ಭಾನುಸಾರ ಪ್ರಾದೇಶಿಕ ಪರಿಷತ್ತಿನಲ್ಲಿ ನಿಹಿತವಾಗಿರುವ ಅಥವಾ ಅದು ಚಲಾಯಿಸಬಹುದಾದ ಎಲ್ಲ ಪ್ರಕಾರ್ಯಗಳನ್ನು ಅಥವಾ ಯಾವುವೇ ಪ್ರಕಾರ್ಯವನ್ನು, ಅಥವಾ ಅಧಿಕಾರಗಳನ್ನು ತಾನೇ ವಹಿಸಿಕೊಳ್ಳಬಹುದು ಮತ್ತು ಅವನು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿಯು ಅಥವಾ ಪ್ರಾಧಿಕಾರವು ಅಂಥ ಪ್ರಕಾರ್ಯಗಳನ್ನು ಅಥವಾ ಅಧಿಕಾರಗಳನ್ನು ಆರು ತಿಂಗಳುಗಳಿಗೆ ಮೀರದ ಅವಧಿಯವರೆಗೆ ಚಲಾಯಿಸತಕ್ಕದ್ದೆಂದು ಘೋಷಿಸಬಹುದು:

---

1. ತ್ರಿಪುರ ಮತ್ತು ಮಿಜೋರಾಂ ರಾಜ್ಯಗಳಿಗೆ ಅನ್ವಯಿಸುವುದಕ್ಕಾಗಿ 16ನೇ ಪ್ಯಾರಾವನ್ನು 1988ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (1988ರ 67)2ನೇ ಪ್ರಕರಣದ ಮೂಲಕ ಈ ಮುಂದಿನಂತೆ ತಿದ್ದುಪಡಿ ಮಾಡಲಾಗಿದೆ,-

   '(ಎ) (1)ನೇ ಉಪ ಪ್ಯಾರಾದಲ್ಲಿ (ಬಿ) ಖಂಡದಲ್ಲಿ ಇರುವ "ರಾಜ್ಯದ ವಿಧಾನಮಂಡಲದ ಪೂರ್ವ ಅನುಮೋದನೆಗೆ ಒಳಪಟ್ಟು" ಎಂಬ ಪದಗಳನ್ನು ಮತ್ತು ಎರಡನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು;

   (ಬಿ) (3)ನೇ ಉಪ ಪ್ಯಾರಾದ ಬದಲಾಗಿ ಈ ಮುಂದಿನ ಉಪ ಪ್ಯಾರಾವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

   "(3) ಈ ಪ್ಯಾರಾದ (1)ನೇ ಉಪ ಪ್ಯಾರಾದ ಮೇರೆಗೆ ಅಥವಾ (2)ನೇ ಉಪ ಪ್ಯಾರಾದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದರ ಕಾರಣಗಳೊಂದಿಗೆ ರಾಜ್ಯದ ವಿಧಾನ ಮಂಡಲದ ಮುಂದೆ ಇಡತಕ್ಕದ್ದು".'.

2. 1969ನೇ ಇಸವಿಯ ಅಸ್ಸಾಂ ಪುನರ್‌ವಿಂಗಡಣೆ (ಮೇಘಾಲಯ) ಅಧಿನಿಯಮದ (1969ರ 55) 74ನೇ ಪ್ರಕರಣದ ಮತ್ತು ನಾಲ್ಕನೇ ಅನುಸೂಚಿಯ ಮೂಲಕ (2-4-1970 ರಿಂದ ಜಾರಿಗೆ ಬರುವಂತೆ) 16ನೇ ಪ್ಯಾರಾ ಅದರ (1)ನೇ ಉಪ ಪ್ಯಾರಾವೆಂದು ಪುನರ್ ಸಂಖ್ಯೆ ನೀಡಲಾಗಿದೆ.

3. 1969ನೇ ಇಸವಿಯ ಅಸ್ಸಾಂ ಪುನರ್‌ವಿಂಗಡಣೆ (ಮೇಘಾಲಯ) ಅಧಿನಿಯಮದ (1969ರ 55) 74ನೇ ಪ್ರಕರಣದ ಮತ್ತು ನಾಲ್ಕನೇ ಅನುಸೂಚಿಯ ಮೂಲಕ (2-4-1970 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

ಪರಂತು, ಈ ಮೊದಲಿನ ಆದೇಶವು ಜಾರಿಯಲ್ಲಿರುವುದನ್ನು ರಾಜ್ಯಪಾಲನು ಮತ್ತೊಂದು ಆದೇಶದ ಅಥವಾ ಆದೇಶಗಳ ಮೂಲಕ ಪ್ರತಿಸಲ ಆರು ತಿಂಗಳಿಗೆ ಮೀರದ ಅವಧಿಯವರೆಗೆ ವಿಸ್ತರಿಸಬಹುದು.

(3) ಈ ಪ್ಯಾರಾದ (2) ನೇಯ ಉಪಪ್ಯಾರಾದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು ಅದರ ಕಾರಣಗಳೊಂದಿಗೆ ರಾಜ್ಯದ ವಿಧಾನಮಂಡಲದ ಮುಂದೆ ಇಡತಕ್ಕದ್ದು ಮತ್ತು ಆ ಆದೇಶವನ್ನು ಹೊರಡಿಸಿದ ಬಳಿಕ ರಾಜ್ಯದ ವಿಧಾನಮಂಡಲವು ಮೊದಲು ಸಭೆ ಸೇರಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿ ಮುಗಿಯುವುದಕ್ಕೆ ಮುಂಚೆ ಆ ರಾಜ್ಯ ವಿಧಾನಮಂಡಲವು ಆ ಆದೇಶವನ್ನು ಅನುಮೋದಿಸಿದ ಹೊರತು, ಸದರಿ ಮೂವತ್ತು ದಿನಗಳ ಅವಧಿ ಮುಗಿಯುತ್ತಲೇ ಅದು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು.]

[1]**17. ಸ್ವಾಯತ್ತ ಜಿಲ್ಲೆಗಳಲ್ಲಿ ಚುನಾವಣಾ ಕ್ಷೇತ್ರಗಳನ್ನು ರಚಿಸುವಾಗ ಅಂಥ ಜಿಲ್ಲೆಗಳಿಂದ ಪ್ರದೇಶಗಳನ್ನು ಹೊರತುಪಡಿಸುವುದು:–** [2][ಅಸ್ಸಾಂ ಅಥವಾ ಮೇಘಾಲಯ [3][ಅಥವಾ ತ್ರಿಪುರ] [4][ಅಥವಾ ಮಿಜೋರಾಂ] ವಿಧಾನಸಭೆಗೆ] ಚುನಾವಣೆಗಳನ್ನು ನಡೆಸುವ ಉದ್ದೇಶಗಳಿಗಾಗಿ ರಾಜ್ಯಪಾಲನು ಆದೇಶದ ಮೂಲಕ [5][ಸಂದರ್ಭಾನುಸಾರ ಅಸ್ಸಾಂ ಅಥವಾ ಮೇಘಾಲಯ [3][ಅಥವಾ ತ್ರಿಪುರ] [4][ಅಥವಾ ಮಿಜೋರಾಂ] ರಾಜ್ಯದ] ಒಂದು ಸ್ವಾಯತ್ತ ಜಿಲ್ಲೆಯೊಳಗಿನ ಯಾವುದೇ ಪ್ರದೇಶವು ಅಂಥ ಯಾವುದೇ ಜಿಲ್ಲೆಗಾಗಿ ಮೀಸಲಿರಿಸಿದ ಆ ಸಭೆಯಲ್ಲಿನ ಸ್ಥಾನವನ್ನು ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ ಯಾವುದೇ ಚುನಾವಣಾ ಕ್ಷೇತ್ರದ ಭಾಗವಾಗಿರತಕ್ಕದ್ದಲ್ಲವೆಂದು, ಆದರೆ ಹಾಗೆ ಮೀಸಲಿರಿಸಿದ ಆ ಸಭೆಯಲ್ಲಿನ ಸ್ಥಾನವನ್ನು ಅಥವಾ ಸ್ಥಾನಗಳನ್ನು ಭರ್ತಿ ಮಾಡಲು ಆ ಆದೇಶದಲ್ಲಿ ನಿರ್ದಿಷ್ಟಪಡಿಸುವಂಥ ಚುನಾವಣಾ ಕ್ಷೇತ್ರದ ಭಾಗವಾಗಿರತಕ್ಕದ್ದೆಂದು ಘೋಷಿಸಬಹುದು.

[6]* * * * *

[7]**19. ಮಧ್ಯಕಾಲೀನ ಉಪಬಂಧಗಳು:–** (1) ಈ ಸಂವಿಧಾನದ ಪ್ರಾರಂಭದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯಪಾಲನು ಈ ಅನುಸೂಚಿಯ ಮೇರೆಗೆ ರಾಜ್ಯದಲ್ಲಿನ ಪ್ರತಿಯೊಂದು ಸ್ವಾಯತ್ತ ಜಿಲ್ಲೆಗಾಗಿ ಒಂದು ಜಿಲ್ಲಾ ಪರಿಷತ್ತನ್ನು ರಚಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಒಂದು ಸ್ವಾಯತ್ತ ಜಿಲ್ಲೆಗಾಗಿ ಜಿಲ್ಲಾ ಪರಿಷತ್ತನ್ನು ಹಾಗೆ ರಚಿಸುವವರೆಗೆ ಅಂಥ ಜಿಲ್ಲೆಯ ಆಡಳಿತವು ರಾಜ್ಯಪಾಲನಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಅಂಥ ಜಿಲ್ಲೆಯೊಳಗಿನ ಕ್ಷೇತ್ರಗಳ ಆಡಳಿತಕ್ಕೆ ಈ ಅನುಸೂಚಿಯ ಹಿಂದೆ ಹೇಳಿದ ಉಪಬಂಧಗಳಿಗೆ ಬದಲಾಗಿ ಈ ಕೆಳಗಿನ ಉಪಬಂಧಗಳು ಅನ್ವಯವಾಗತಕ್ಕದ್ದು, ಎಂದರೆ:–

---

1. ಅಸ್ಸಾಂ ರಾಜ್ಯಕ್ಕೆ ಅನ್ವಯವಾಗುವುದಕ್ಕಾಗಿ 17ನೇ ಪ್ಯಾರಾವನ್ನು 2003ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (2003ರ 44) 2ನೇ ಪ್ರಕರಣದ ಮೂಲಕ ಈ ಮುಂದಿನ ಪರಂತುಕವನ್ನು ಸೇರಿಸಲು ತಿದ್ದುಪಡಿ ಮಾಡಲಾಗಿದೆ, ಎಂದರೆ:–
   "ಪರಂತು, ಈ ಪ್ಯಾರಾದಲ್ಲಿ ಇರುವುದು ಯಾವುದೂ, ಬೋಡೊಲ್ಯಾಂಡ್ ಪ್ರಾದೇಶಿಕ ಕ್ಷೇತ್ರಗಳ ಜಿಲ್ಲೆಗೆ ಅನ್ವಯವಾಗತಕ್ಕದ್ದಲ್ಲ.".
2. 1971ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971 ರ 81) 71(i)ನೇ ಪ್ರಕರಣದ ಹಾಗೂ ಎಂಟನೇ ಅನುಸೂಚಿಯ ಮೂಲಕ "ಅಸ್ಸಾಂ ವಿಧಾನಸಭೆ" ಎಂಬುದಕ್ಕೆ ಬದಲಾಗಿ (21-1-1972ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. 1984ನೇ ಇಸವಿಯ ಸಂವಿಧಾನ (ನಲವತ್ತೊಂಬತ್ತನೇ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ (1.4.1985 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
4. 1986ನೇ ಇಸವಿಯ ಮಿಜೋರಾಂ ರಾಜ್ಯ ಅಧಿನಿಯಮದ (1986ರ 34) 39ನೇ ಪ್ರಕರಣದ ಮೂಲಕ (20.2.1987 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
5. 1971ನೇ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71(i)ನೇ ಪ್ರಕರಣದ ಹಾಗೂ ಎಂಟನೇ ಅನುಸೂಚಿಯ ಮೂಲಕ (21-1-1972 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
6. ಅದೇ ಅಧಿನಿಯಮದ 71 (i)ನೇ ಪ್ರಕರಣದ ಹಾಗೂ ಎಂಟನೇ ಅನುಸೂಚಿಯ ಮೂಲಕ (21.1.1972 ರಿಂದ ಜಾರಿಗೆ ಬರುವಂತೆ) 18ನೇ ಪ್ಯಾರಾವನ್ನು ಬಿಟ್ಟುಬಿಡಲಾಗಿದೆ.
7. ಅಸ್ಸಾಂ ರಾಜ್ಯಕ್ಕೆ ಅನ್ವಯವಾಗುವುದಕ್ಕಾಗಿ 19ನೇ ಪ್ಯಾರಾವನ್ನು 2003ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (2003ರ 44) 2ನೇ ಪ್ರಕರಣದ ಮೂಲಕ (3)ನೇ ಉಪ ಪ್ಯಾರಾದ ತರುವಾಯ ಈ ಮುಂದಿನ ಉಪ ಪ್ಯಾರಾವನ್ನು ಸೇರಿಸಲು ತಿದ್ದುಪಡಿ ಮಾಡಲಾಗಿದೆ, ಎಂದರೆ:–
   "(4) ಈ ಅಧಿನಿಯಮದ ಪ್ರಾರಂಭದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯಪಾಲನು, ಅಸ್ಸಾಂನಲ್ಲಿರುವ ಬೋಡೊಲ್ಯಾಂಡ್ ಪ್ರಾದೇಶಿಕ ಕ್ಷೇತ್ರಗಳ ಜಿಲ್ಲೆಗಾಗಿ ಮಧ್ಯಕಾಲೀನ ಕಾರ್ಯನಿರ್ವಾಹಕ ಪರಿಷತ್ತನ್ನು ಒಡಂಬಡಿಕೆ ಪತ್ರಕ್ಕೆ ಸಹಿ ಮಾಡಿದವರೂ ಸೇರಿದಂತೆ, ಬೋಡೊ ಚಳುವಳಿಯ ನಾಯಕರ ಪೈಕಿಯಿಂದ ರಚಿಸತಕ್ಕದ್ದು ಮತ್ತು ಆ ಪ್ರದೇಶದ ಬುಡಕಟ್ಟೇತರ ಸಮುದಾಯಗಳಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಕಲ್ಪಿಸತಕ್ಕದ್ದು:
   ಪರಂತು, ಮಧ್ಯಕಾಲೀನ ಪರಿಷತ್ತು ಆರು ತಿಂಗಳ ಅವಧಿಗಾಗಿ ಇರತಕ್ಕದ್ದು. ಆ ಅವಧಿಯಲ್ಲಿ ಪರಿಷತ್ತಿಗೆ ಚುನಾವಣೆ ನಡೆಸಲು ಪ್ರಯತ್ನಿಸತಕ್ಕದ್ದು.
   ವಿವರಣೆ:– ಈ ಉಪ ಪ್ಯಾರಾದ ಉದ್ದೇಶಗಳಿಗಾಗಿ "ಒಡಂಬಡಿಕೆ ಪತ್ರ" ಎಂದರೆ 2003ರ ಫೆಬ್ರವರಿ 10ರಂದು ಭಾರತ ಸರ್ಕಾರ, ಅಸ್ಸಾಂ ಸರ್ಕಾರ ಮತ್ತು ಬೋಡೊ ಲಿಬರೇಷನ್ ಟೈಗರ್ಸ್ ನಡುವೆ ಸಹಿಯಾದ ಒಡಂಬಡಿಕೆ ಪತ್ರ.".

(ಎ) ಸಂಸತ್ತಿನ ಅಥವಾ ರಾಜ್ಯದ ವಿಧಾನಮಂಡಲದ ಯಾವುದೇ ಅಧಿನಿಯಮವು ಯಾವುದೇ ಅಂಥ ಪ್ರದೇಶಕ್ಕೆ ಅನ್ವಯವಾಗತಕ್ಕದ್ದೆಂದು ರಾಜ್ಯಪಾಲನು ಸಾರ್ವಜನಿಕ ಅಧಿಸೂಚನೆಯ ಮೂಲಕ ನಿರ್ದೇಶಿಸಿದ ಹೊರತು ಅದು ಹಾಗೆ ಅನ್ವಯವಾಗತಕ್ಕದ್ದಲ್ಲ ಮತ್ತು ರಾಜ್ಯಪಾಲನು ಯಾವುದೇ ಅಧಿನಿಯಮದ ಬಗ್ಗೆ ಅಂಥ ನಿರ್ದೇಶನವನ್ನು ನೀಡುವಾಗ, ಆ ಅಧಿನಿಯಮವು ಆ ಪ್ರದೇಶಕ್ಕೆ ಅಥವಾ ಅದರ ಯಾವುದೇ ನಿರ್ದಿಷ್ಟ ಭಾಗಕ್ಕೆ ಅನ್ವಯವಾಗುವಲ್ಲಿ ತಾನು ಸೂಕ್ತವೆಂದು ಯೋಚಿಸುವಂಥ ವಿನಾಯಿತಿಗಳಿಗೆ ಅಥವಾ ಮಾರ್ಪಾಟುಗಳಿಗೆ ಒಳಪಟ್ಟು ಪರಿಣಾಮವುಳ್ಳದ್ದಾಗಿರತಕ್ಕದ್ದೆಂದು ನಿರ್ದೇಶಿಸಬಹುದು;

(ಬಿ) ರಾಜ್ಯಪಾಲನು ಅಂಥ ಯಾವುದೇ ಪ್ರದೇಶದ ಶಾಂತಿಯುತ ಮತ್ತು ಸುವ್ಯವಸ್ಥಿತ ಆಡಳಿತಕ್ಕಾಗಿ ವಿನಿಯಮಗಳನ್ನು ರಚಿಸಬಹುದು ಮತ್ತು ಹಾಗೆ ರಚಿಸಿದ ಯಾವುವೇ ವಿನಿಯಮಗಳು ಅಂಥ ಕ್ಷೇತ್ರಕ್ಕೆ ತತ್ಕಾಲದಲ್ಲಿ ಅನ್ವಯವಾಗುವ ಸಂಸತ್ತಿನ ಅಥವಾ ರಾಜ್ಯ ವಿಧಾನಮಂಡಲದ ಕಾನೂನನ್ನು ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಾನೂನನ್ನು ನಿರಸನಗೊಳಿಸಬಹುದು ಅಥವಾ ತಿದ್ದುಪಡಿ ಮಾಡಬಹುದು.

(2) ಈ ಪ್ಯಾರಾದ (1)ನೆಯ ಉಪಪ್ಯಾರಾದ (ಎ) ಖಂಡದ ಮೇರೆಗೆ ರಾಜ್ಯಪಾಲನು ನೀಡುವ ಯಾವುದೇ ನಿರ್ದೇಶನವನ್ನು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ನೀಡಬಹುದು.

(3) ಈ ಪ್ಯಾರಾದ (1)ನೆಯ ಉಪಪ್ಯಾರಾದ (ಬಿ) ಖಂಡದ ಮೇರೆಗೆ ರಚಿಸಲಾಗುವ ಎಲ್ಲ ವಿನಿಯಮಗಳನ್ನು ಕೂಡಲೇ ರಾಷ್ಟ್ರಪತಿಗೆ ಒಪ್ಪಿಸತಕ್ಕದ್ದು ಮತ್ತು ಅವನು ಅವುಗಳಿಗೆ ಅನುಮತಿ ನೀಡುವವರೆಗೆ ಅವು ಪರಿಣಾಮವುಳ್ಳವಾಗಿರತಕ್ಕದ್ದಲ್ಲ.

[1][**20. ಬುಡಕಟ್ಟು ಪ್ರದೇಶಗಳು:**– (1) ಕೆಳಗಿನ ಕೋಷ್ಟಕದ I, II [2][,IIಎ] ಮತ್ತು IIIನೆಯ ಭಾಗಗಳಲ್ಲಿ ನಿರ್ದಿಷ್ಟಪಡಿಸಿರುವ ಪ್ರದೇಶಗಳು ಅನುಕ್ರಮವಾಗಿ ಅಸ್ಸಾಂ ರಾಜ್ಯದೊಳಗಿನ, ಮೇಘಾಲಯ ರಾಜ್ಯದೊಳಗಿನ [2][,ತ್ರಿಪುರ ರಾಜ್ಯದೊಳಗಿನ] ಮತ್ತು ಮಿಜೋರಾಂ [3][ರಾಜ್ಯ]ದೊಳಗಿನ ಬುಡಕಟ್ಟು ಪ್ರದೇಶಗಳಾಗಿರತಕ್ಕದ್ದು.

(2) [4][ಕೆಳಗಿನ ಕೋಷ್ಟಕದ I, II ಅಥವಾ IIIನೇ ಭಾಗಗಳಲ್ಲಿನ ಯಾವುದೇ ಜಿಲ್ಲೆಗೆ ಮಾಡಿದ ಯಾವುದೇ ಉಲ್ಲೇಖವು] 1971ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ 2ನೆಯ ಪ್ರಕರಣದ (ಬಿ) ಖಂಡದ ಮೇರೆಗೆ ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿದ್ದ ಅದೇ ಹೆಸರಿನ ಸ್ವಾಯತ್ತ ಜಿಲ್ಲೆಯೊಳಗೆ ಸೇರಿರುವ ಕ್ಷೇತ್ರಗಳಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು:

ಪರಂತು, ಈ ಅನುಸೂಚಿಯ 3ನೆಯ ಪ್ಯಾರಾದ (1)ನೆಯ ಉಪ-ಪ್ಯಾರಾದ (ಇ) ಮತ್ತು (ಎಫ್) ಖಂಡಗಳ, 4ನೆಯ ಪ್ಯಾರಾದ, 5ನೆಯ ಪ್ಯಾರಾದ, 6ನೆಯ ಪ್ಯಾರಾದ, 8ನೆಯ ಪ್ಯಾರಾದ (2)ನೆಯ ಉಪ-ಪ್ಯಾರಾದ, (3)ನೆಯ ಉಪ-ಪ್ಯಾರಾದ (ಎ), (ಬಿ) ಮತ್ತು (ಡಿ) ಖಂಡಗಳ ಮತ್ತು (4)ನೆಯ ಉಪ-ಪ್ಯಾರಾದ ಹಾಗೂ 10ನೆಯ ಪ್ಯಾರಾದ (2)ನೆಯ ಉಪ-ಪ್ಯಾರಾದ (ಡಿ) ಖಂಡದ ಉದ್ದೇಶಗಳಿಗಾಗಿ ಷಿಲಾಂಗಿನ ಮುನಿಸಿಪಾಲಿಟಿಯಲ್ಲಿ ಸೇರಿರುವ ಪ್ರದೇಶದ ಯಾವುದೇ ಭಾಗವು [5][ಖಾಸೀ ಗುಡ್ಡಗಾಡು ಜಿಲ್ಲೆ]ಯ ಒಳಗಿರುವುದಾಗಿ ಭಾವಿಸತಕ್ಕದ್ದಲ್ಲ.

[2][(3) ಈ ಕೆಳಗಿನ ಕೋಷ್ಟಕದಲ್ಲಿನ IIಎ ಭಾಗದಲ್ಲಿ "ತ್ರಿಪುರ ಬುಡಕಟ್ಟು ಪ್ರದೇಶಗಳ ಜಿಲ್ಲೆ"ಗೆ ಮಾಡಿದ ಉಲ್ಲೇಖವನ್ನು, ತ್ರಿಪುರ ಬುಡಕಟ್ಟು ಪ್ರದೇಶಗಳ ಸ್ವಾಯತ್ತ ಜಿಲ್ಲಾ ಪರಿಷತ್ತು ಅಧಿನಿಯಮ, 1979ರ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಬುಡಕಟ್ಟು ಪ್ರದೇಶಗಳನ್ನು ಒಳಗೊಂಡ ಕ್ಷೇತ್ರಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.]

---

1. 1971ನೆಯ ಇಸವಿಯ ಈಶಾನ್ಯ ಪ್ರದೇಶಗಳ (ಪುನರ್‌ವಿಂಗಡಣೆ) ಅಧಿನಿಯಮದ (1971ರ 81) 71(i) ನೆಯ ಪ್ರಕರಣದ ಹಾಗೂ ಎಂಟನೆಯ ಅನುಸೂಚಿಯ ಮೂಲಕ (21-1-1972ರಿಂದ ಜಾರಿಗೆ ಬರುವಂತೆ) 20ನೆಯ ಮತ್ತು 20ಎ ಪ್ಯಾರಾಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1984ನೆಯ ಇಸವಿಯ ಸಂವಿಧಾನ (ನಲವತ್ತೊಂಬತ್ತನೇ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ (1.4.1985 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1986ರ ಮಿಜೋರಾಂ ರಾಜ್ಯ ಅಧಿನಿಯಮದ (1986ರ 34) 39ನೇ ಪ್ರಕರಣದ ಮೂಲಕ "ಒಕ್ಕೂಟರಾಜ್ಯ ಕ್ಷೇತ್ರ" ಎಂಬುದಕ್ಕೆ ಬದಲಾಗಿ (20.2.1987 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
4. 1984ನೇ ಇಸವಿಯ ಸಂವಿಧಾನ (ನಲವತ್ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ "ಕೆಳಗಿನ ಕೋಷ್ಟಕದಲ್ಲಿನ ಯಾವುದೇ ಉಲ್ಲೇಖ" ಎಂಬುದಕ್ಕೆ ಬದಲಾಗಿ (1.4.1985 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
5. ಮೇಘಾಲಯ ಸರ್ಕಾರದ ಅಧಿಸೂಚನೆ ಸಂಖ್ಯೆ. ಡಿ.ಸಿ.ಎ. 31/72/11 ದಿನಾಂಕ 14ನೇ ಜೂನ್ 1973ರ ಮೂಲಕ ಪ್ರತ್ಯಾಯೋಜಿಸಲಾಗಿದೆ. ಮೇಘಾಲಯ ರಾಜಪತ್ರ ಭಾಗ Vಎ ದಿನಾಂಕ: 23-6-1973, ಪುಟ 200.

**ಕೋಷ್ಟಕ**

**ಭಾಗ I**

1. ಉತ್ತರ ಕಚಾರ್ ಗುಡ್ಡಗಾಡು ಜಿಲ್ಲೆ.

2. [1][ಕಾರ್ಬಿ ಆಂಗ್ಲಾಂಗ್ ಜಿಲ್ಲೆ.]

[2][3. ಬೋಡೋಲ್ಯಾಂಡ್ ಪ್ರಾದೇಶಿಕ ಕ್ಷೇತ್ರಗಳ ಜಿಲ್ಲೆ]

**ಭಾಗ II**

[3][1. ಖಾಸೀ ಗುಡ್ಡಗಾಡು ಜಿಲ್ಲೆ.

2. ಜಯಂತಿಯಾ ಗುಡ್ಡಗಾಡು ಜಿಲ್ಲೆ.]

3. ಗಾರೋ ಗುಡ್ಡಗಾಡು ಜಿಲ್ಲೆ.

**[4][ಭಾಗ IIಎ**

ತ್ರಿಪುರ ಬುಡಕಟ್ಟು ಪ್ರದೇಶಗಳ ಜಿಲ್ಲೆ.]

**ಭಾಗ III**

[5] * * * *

[6][1. ಚಕ್ಮ ಜಿಲ್ಲೆ

[7][2. ಮಾರಾ ಜಿಲ್ಲೆ

3. ಲಯೀ ಜಿಲ್ಲೆ.]]

[8]**[20ಎ. ಮಿಜೋ ಜಿಲ್ಲಾ ಪರಿಷತ್ತಿನ ವಿಸರ್ಜನೆ:-** (1) ಈ ಅನುಸೂಚಿಯಲ್ಲಿ ಏನೇ ಇದ್ದಾಗ್ಯೂ, ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಮಿಜೋ ಜಿಲ್ಲೆಯ ಜಿಲ್ಲಾ ಪರಿಷತ್ತು (ಇಲ್ಲಿ ಇನ್ನು ಮುಂದೆ ಇದನ್ನು ಮಿಜೋ ಜಿಲ್ಲಾ ಪರಿಷತ್ತು ಎಂದು ಉಲ್ಲೇಖಿಸಲಾಗಿದೆ) ವಿಸರ್ಜನೆಯಾಗತಕ್ಕದ್ದು ಮತ್ತು ಅದು ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು.

---

1. ಅಸ್ಸಾಂ ಸರ್ಕಾರದ ಅಧಿಸೂಚನೆ ಸಂಖ್ಯೆ ಟಿಎಡಿ/ಆರ್/115/74/47, ದಿನಾಂಕ 14-10-76ರ ಮೂಲಕ "ಮಿಕೀರ್ ಗುಡ್ಡಗಾಡು ಜಿಲ್ಲೆ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 2003ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (2003ರ 44) 2ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.
3. ಮೇಘಾಲಯ ಸರ್ಕಾರದ ಅಧಿಸೂಚನೆ ಸಂಖ್ಯೆ ಡಿ.ಸಿ.ಎ. 31/72/11 ದಿನಾಂಕ 14ನೇ ಜೂನ್ 1973ರ ಮೂಲಕ ಪ್ರತ್ಯಾಯೋಜಿಸಲಾಗಿದೆ. (ಮೇಘಾಲಯ ರಾಜಪತ್ರ ಭಾಗ Vಎ, ದಿನಾಂಕ 23-6-1973 ಪುಟ 200.
4. 1984ನೇ ಇಸವಿಯ ಸಂವಿಧಾನ (ನಲವತ್ತೊಂಬತ್ತನೇ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ (1.4.1985 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
5. 1971ನೆಯ ಇಸವಿಯ ಒಕ್ಕೂಟ ರಾಜ್ಯಕ್ಷೇತ್ರಗಳ ಸರ್ಕಾರ (ತಿದ್ದುಪಡಿ) ಅಧಿನಿಯಮದ (1971ರ 83) 13ನೆಯ ಪ್ರಕರಣದ ಮೂಲಕ (29-4-1972ರಿಂದ ಜಾರಿಗೆ ಬರುವಂತೆ) "ಮಿಜೋ ಜಿಲ್ಲೆ" ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.
6. 1972ನೇ ಇಸವಿಯ ಮೇ ತಿಂಗಳ 5ನೇ ದಿನಾಂಕದ ಮಿಜೋರಾಂ ರಾಜಪತ್ರದಲ್ಲಿ ಸಂಪುಟ I, ಭಾಗ II, ಪುಟ 17ರಲ್ಲಿ ಪ್ರಕಟಿಸಿದ ಮಿಜೋರಾಂ ಜಿಲ್ಲಾ ಪರಿಷತ್ತುಗಳು (ಸಂಕೀರ್ಣ ಉಪಬಂಧಗಳು) ಆದೇಶ 1972ರ ಮೂಲಕ (29-4-1972ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
7. 1988ನೇ ಇಸವಿಯ ಸಂವಿಧಾನ (ತಿದ್ದುಪಡಿ) ಅಧಿನಿಯಮದ (1988ರ 67) 2ನೇ ಪ್ರಕರಣದ ಮೂಲಕ ಕ್ರಮಸಂಖ್ಯೆ 2 ಮತ್ತು 3 ಹಾಗೂ ಅವುಗಳಿಗೆ ಸಂಬಂಧಿಸಿದ ನಮೂದುಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
8. 1971ನೆಯ ಇಸವಿಯ ಒಕ್ಕೂಟ ರಾಜ್ಯಕ್ಷೇತ್ರಗಳ ಸರ್ಕಾರ (ತಿದ್ದುಪಡಿ) ಅಧಿನಿಯಮದ (1971ರ 83) 13ನೆಯ ಪ್ರಕರಣದ ಮೂಲಕ 20ಎ ಪ್ಯಾರಾಗೆ ಬದಲಾಗಿ (29-4-1972ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

(2) ಮಿಜೋರಾಂ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರನು ಈ ಕೆಳಕಂಡ ಎಲ್ಲ ವಿಷಯಗಳ ಅಥವಾ ಯಾವುದೇ ವಿಷಯದ ಬಗ್ಗೆ ಒಂದು ಆದೇಶದ ಮೂಲಕ ಅಥವಾ ಹೆಚ್ಚು ಆದೇಶಗಳ ಮೂಲಕ ಉಪಬಂಧಿಸಬಹುದು, ಎಂದರೆ:-

(ಎ) ಮಿಜೋ ಜಿಲ್ಲಾ ಪರಿಷತ್ತಿನ (ಅದು ಮಾಡಿಕೊಂಡ ಯಾವುದೇ ಕರಾರಿನ ಮೇರೆಗಿನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಸೇರಿದಂತೆ) ಆಸ್ತಿಗಳು, ಹಕ್ಕುಗಳು ಮತ್ತು ಹೊಣೆಗಾರಿಕೆಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಒಕ್ಕೂಟಕ್ಕೆ ಅಥವಾ ಯಾವುದೇ ಇತರ ಪ್ರಾಧಿಕಾರಕ್ಕೆ ವರ್ಗಾಯಿಸುವುದು;

(ಬಿ) ಮಿಜೋ ಜಿಲ್ಲಾ ಪರಿಷತ್ತು ಒಂದು ಪಕ್ಷವಾಗಿರುವ ಯಾವುದೇ ಕಾನೂನು ವ್ಯವಹರಣೆಗಳಲ್ಲಿ ಮಿಜೋ ಜಿಲ್ಲಾ ಪರಿಷತ್ತಿಗೆ ಬದಲಾಗಿ ಒಂದು ಪಕ್ಷವಾಗಿ ಒಕ್ಕೂಟವನ್ನು ಅಥವಾ ಇತರ ಯಾವುದೇ ಪ್ರಾಧಿಕಾರವನ್ನು ಸೇರಿಸುವುದು ಅಥವಾ ಒಕ್ಕೂಟವನ್ನು ಅಥವಾ ಇತರ ಯಾವುದೇ ಪ್ರಾಧಿಕಾರವನ್ನು ಅದಕ್ಕೆ ಸೇರಿಸುವುದು;

(ಸಿ) ಮಿಜೋ ಜಿಲ್ಲಾ ಪರಿಷತ್ತಿನ ಯಾರೇ ನೌಕರರನ್ನು ಒಕ್ಕೂಟಕ್ಕೆ ಅಥವಾ ಇತರ ಯಾವುದೇ ಪ್ರಾಧಿಕಾರಕ್ಕೆ ವರ್ಗಾಯಿಸುವುದು ಅಥವಾ ಒಕ್ಕೂಟವು ಅಥವಾ ಇತರ ಯಾವುದೇ ಪ್ರಾಧಿಕಾರವು ಅವರನ್ನು ಪುನರ್ ನೇಮಕ ಮಾಡುವುದು ಮತ್ತು ಅಂಥ ವರ್ಗಾವಣೆಯ ಅಥವಾ ಪುನರ್ ನೇಮಕದ ತರುವಾಯ ಅಂಥ ನೌಕರರಿಗೆ ಅನ್ವಯವಾಗತಕ್ಕ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಡಿ) ಮಿಜೋ ಜಿಲ್ಲಾ ಪರಿಷತ್ತು ರಚಿಸಿದ ಮತ್ತು ಅದರ ವಿಸರ್ಜನೆಗೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನುಗಳನ್ನು ಆಡಳಿತಗಾರನು ಈ ಬಗ್ಗೆ ನಿರಸನದ ರೂಪದಲ್ಲಾಗಲಿ ಅಥವಾ ತಿದ್ದುಪಡಿಯ ರೂಪದಲ್ಲಾಗಲಿ ಮಾಡಬಹುದಾದಂಥ ಅಳವಡಿಕೆಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು, ಸಕ್ಷಮ ವಿಧಾನಮಂಡಲವು ಅಥವಾ ಇತರ ಸಕ್ಷಮ ಪ್ರಾಧಿಕಾರವು ಬದಲಾಯಿಸುವವರೆಗೆ, ನಿರಸನಗೊಳಿಸುವವರೆಗೆ ಅಥವಾ ತಿದ್ದುಪಡಿಮಾಡುವವರೆಗೆ ಅಂಥ ಕಾನೂನುಗಳನ್ನು ಮುಂದುವರೆಸುವುದು;

(ಇ) ಆಡಳಿತಗಾರನು ಅವಶ್ಯವೆಂದು ಪರಿಗಣಿಸುವಂಥ ಪ್ರಾಸಂಗಿಕ, ಆನುಷಂಗಿಕ ಮತ್ತು ಪೂರಕ ವಿಷಯಗಳು.

**ವಿವರಣೆ:**- ಈ ಪ್ಯಾರಾದಲ್ಲಿ ಮತ್ತು ಈ ಅನುಸೂಚಿಯ 20ಬಿ ಪ್ಯಾರಾದಲ್ಲಿ "ಗೊತ್ತುಪಡಿಸಿದ ದಿನಾಂಕ" ಎಂದರೆ, 1963ನೆಯ ಇಸವಿಯ ಒಕ್ಕೂಟ ರಾಜ್ಯಕ್ಷೇತ್ರಗಳ ಸರ್ಕಾರದ ಅಧಿನಿಯಮದ ಉಪಬಂಧಗಳ ಮೇರೆಗೆ ಮತ್ತು ಅವುಗಳಿಗನುಸಾರವಾಗಿ ಮಿಜೋರಾಂ ಒಕ್ಕೂಟ ರಾಜ್ಯಕ್ಷೇತ್ರದ ವಿಧಾನಸಭೆಯು ಯಾವ ದಿನಾಂಕದಂದು ಕ್ರಮಬದ್ಧವಾಗಿ ರಚಿತವಾಯಿತೋ ಆ ದಿನಾಂಕ.

[1] **20ಬಿ. ಮಿಜೋರಾಂ ಒಕ್ಕೂಟ ರಾಜ್ಯಕ್ಷೇತ್ರದಲ್ಲಿನ ಸ್ವಾಯತ್ತ ಕ್ಷೇತ್ರಗಳು ಸ್ವಾಯತ್ತ ಜಿಲ್ಲೆಗಳಾಗಿರುವುದು ಮತ್ತು ತತ್ಪರಿಣಾಮವಾದ ಮಧ್ಯಕಾಲೀನ ಉಪಬಂಧಗಳು:**- (1) ಈ ಅನುಸೂಚಿಯಲ್ಲಿ ಏನೇ ಇದ್ದಾಗ್ಯೂ,-

---

1. ಅಸ್ಸಾಂ ರಾಜ್ಯಕ್ಕೆ ಅನ್ವಯವಾಗುವುದಕ್ಕಾಗಿ 1995ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (1995ರ 42) 2ನೇ ಪ್ರಕರಣದ ಮೂಲಕ 20ಬಿ ಪ್ಯಾರಾದ ತರುವಾಯ ಈ ಮುಂದಿನ ಪ್ಯಾರಾವನ್ನು ಸೇರಿಸಲಾಗಿದೆ, ಎಂದರೆ:-

"**20ಬಿಎ. ರಾಜ್ಯಪಾಲನು ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ವಿವೇಚನಾಧಿಕಾರಗಳನ್ನು ಚಲಾಯಿಸುವುದು:**- ರಾಜ್ಯಪಾಲನು ಈ ಅನುಸೂಚಿಯ 1ನೇ ಪ್ಯಾರಾದ (2) ನೇ ಉಪ-ಪ್ಯಾರಾ ಮತ್ತು (3)ನೇ ಉಪ ಪ್ಯಾರಾ, 2ನೇ ಪ್ಯಾರಾದ (1), (6) ನೇ ಉಪ ಪ್ಯಾರಾ, 1ನೇ ಪರಂತುಕವನ್ನು ಬಿಟ್ಟು (6ಎ) ಉಪಪ್ಯಾರಾ ಮತ್ತು (7)ನೇ ಉಪಪ್ಯಾರಾ, 3ನೇ ಪ್ಯಾರಾದ (3)ನೇ ಉಪ ಪ್ಯಾರಾ, 4ನೇ ಪ್ಯಾರಾದ (4) ನೇ ಉಪ ಪ್ಯಾರಾ, 5ನೇ ಪ್ಯಾರಾದ (1) ನೇ ಉಪ ಪ್ಯಾರಾ, 6ನೇ ಪ್ಯಾರಾ, 7ನೇ ಪ್ಯಾರಾದ (2)ನೇ ಉಪ ಪ್ಯಾರಾ, 8ನೇ ಪ್ಯಾರಾದ (4) ನೇ ಉಪ ಪ್ಯಾರಾ, 9ನೇ ಪ್ಯಾರಾದ (3)ನೇ ಉಪ ಪ್ಯಾರಾ, 10ನೇ ಪ್ಯಾರಾದ (3) ನೇ ಉಪ ಪ್ಯಾರಾ, 14ನೇ ಪ್ಯಾರಾದ (1) ನೇ ಉಪ ಪ್ಯಾರಾ, 15ನೇ ಪ್ಯಾರಾದ (1) ನೇ ಉಪ ಪ್ಯಾರಾ ಮತ್ತು 16ನೇ ಪ್ಯಾರಾದ (1)ನೇ ಮತ್ತು (2) ನೇ ಉಪ ಪ್ಯಾರಾದ ಮೇರೆಗೆ ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಮಂತ್ರಿಮಂಡಲದೊಂದಿಗೆ ಹಾಗೂ ಉತ್ತರ ಕಚಾರ್ ಗುಡ್ಡಗಾಡು ಸ್ವಾಯತ್ತ ಪರಿಷತ್ತಿನೊಂದಿಗೆ ಅಥವಾ ಸಂದರ್ಭಾನುಸಾರ ಕಾರ್ಬಿ ಆಂಗ್ಲಾಂಗ್ ಸ್ವಾಯತ್ತ ಪರಿಷತ್ತಿನೊಂದಿಗೆ ಸಮಾಲೋಚಿಸಿದ ತರುವಾಯ ಅವನು ತನ್ನ ವಿವೇಚನಾನುಸಾರ ಅವಶ್ಯವೆಂದು ಪರಿಗಣಿಸುವಂತಹ ಕ್ರಮವನ್ನು ಕೈಗೊಳ್ಳತಕ್ಕದ್ದು.".

ತ್ರಿಪುರ ಮತ್ತು ಮಿಜೋರಾಂ ರಾಜ್ಯಗಳಿಗೆ ಅನ್ವಯವಾಗುವುದಕ್ಕಾಗಿ 1988ನೇ ಇಸವಿಯ ಸಂವಿಧಾನ ಆರನೇ ಅನುಸೂಚಿ (ತಿದ್ದುಪಡಿ) ಅಧಿನಿಯಮದ (1988ರ 67) 2ನೇ ಪ್ರಕರಣದ ಮೂಲಕ 20ಬಿ ಪ್ಯಾರಾದ ತರುವಾಯ ಈ ಮುಂದಿನ ಪ್ಯಾರಾವನ್ನು ಸೇರಿಸಲಾಗಿದೆ, ಎಂದರೆ:-

"**20ಬಿಬಿ. ರಾಜ್ಯಪಾಲನು ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ವಿವೇಚನಾಧಿಕಾರಗಳನ್ನು ಚಲಾಯಿಸುವುದು:**- ರಾಜ್ಯಪಾಲನು, ಈ ಅನುಸೂಚಿಯ 1ನೇ ಪ್ಯಾರಾದ (2) ಮತ್ತು (3)ನೇ ಉಪ ಪ್ಯಾರಾಗಳ ಮೇರೆಗೆ, 2ನೇ ಪ್ಯಾರಾದ (1) ಮತ್ತು (7)ನೇ ಉಪ ಪ್ಯಾರಾಗಳ ಮೇರೆಗೆ, 3ನೇ ಪ್ಯಾರಾದ (3)ನೇ ಉಪ ಪ್ಯಾರಾ ಮೇರೆಗೆ, 4ನೇ ಪ್ಯಾರಾದ (4)ನೇ ಉಪ ಪ್ಯಾರಾದ ಮೇರೆಗೆ, 5ನೇ ಪ್ಯಾರಾದ ಮೇರೆಗೆ, 6ನೇ ಪ್ಯಾರಾದ (1)ನೇ ಉಪ ಪ್ಯಾರಾದ ಮೇರೆಗೆ, 7ನೇ ಪ್ಯಾರಾದ (2)ನೇ ಉಪ ಪ್ಯಾರಾದ ಮೇರೆಗೆ, 9ನೇ ಪ್ಯಾರಾದ (3)ನೇ ಉಪ ಪ್ಯಾರಾದ ಮೇರೆಗೆ, 14ನೇ ಪ್ಯಾರಾದ (1)ನೇ ಉಪ ಪ್ಯಾರಾದ ಮೇರೆಗೆ, 15ನೇ ಪ್ಯಾರಾದ (1)ನೇ ಉಪ-ಪ್ಯಾರಾದ ಮೇರೆಗೆ ಮತ್ತು 16ನೇ ಪ್ಯಾರಾದ (1) ಮತ್ತು (2)ನೇ ಉಪ ಪ್ಯಾರಾಗಳ ಮೇರೆಗೆ ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ, ಮಂತ್ರಿಮಂಡಲದೊಂದಿಗೆ ಹಾಗೂ ಅವನು ಅಗತ್ಯವೆಂದು ಪರಿಗಣಿಸಿದರೆ, ಸಂಬಂಧಪಟ್ಟ ಜಿಲ್ಲಾ ಪರಿಷತ್ತಿನೊಂದಿಗೆ ಅಥವಾ ಪ್ರಾದೇಶಿಕ ಪರಿಷತ್ತಿನೊಂದಿಗೆ ಸಮಾಲೋಚಿಸಿದ ತರುವಾಯ, ಅವನು ತನ್ನ ವಿವೇಚನಾನುಸಾರ ಅವಶ್ಯವೆಂದು ಪರಿಗಣಿಸುವಂತಹ ಕ್ರಮವನ್ನು ಕೈಗೊಳ್ಳತಕ್ಕದ್ದು.".

(ಎ) ನಿಯಮಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಮಿಜೋರಾಂ ಒಕ್ಕೂಟರಾಜ್ಯಕ್ಷೇತ್ರದಲ್ಲಿ ಅಸ್ತಿತ್ವದಲ್ಲಿದ್ದ ಪ್ರತಿಯೊಂದು ಸ್ವಾಯತ್ತ ಕ್ಷೇತ್ರವೂ ಆ ದಿನಾಂಕದಂದು ಮತ್ತು ಆ ದಿನಾಂಕದಿಂದ ಆ ಒಕ್ಕೂಟ ರಾಜ್ಯಕ್ಷೇತ್ರದಲ್ಲಿ ಒಂದು ಸ್ವಾಯತ್ತ ಜಿಲ್ಲೆಯಾಗಿರತಕ್ಕದ್ದು (ಇಲ್ಲಿ ಇನ್ನು ಮುಂದೆ ಇದನ್ನು ಸಂವಾದಿ ಹೊಸ ಜಿಲ್ಲೆಯೆಂದು ಉಲ್ಲೇಖಿಸಲಾಗಿದೆ) ಮತ್ತು ಅದರ ಆಡಳಿತಗಾರನು ಒಂದು ಆದೇಶದ ಮೂಲಕ ಅಥವಾ ಹೆಚ್ಚು ಆದೇಶಗಳ ಮೂಲಕ, ಈ ಖಂಡದ ಉಪಬಂಧಗಳನ್ನು ಜಾರಿಗೊಳಿಸಲು ಅವಶ್ಯವಾಗಿರುವಂಥ ಆನುಷಂಗಿಕ ತಿದ್ದುಪಡಿಗಳನ್ನು ಈ ಅನುಸೂಚಿಯ 20ನೇ ಪ್ಯಾರಾದಲ್ಲಿ (ಸದರಿ ಪ್ಯಾರಾಗೆ ಅನುಬಂಧಿಸಿರುವ ಕೋಷ್ಟಕದ III ನೆಯ ಭಾಗವೂ ಸೇರಿದಂತೆ) ಮಾಡತಕ್ಕದ್ದು ಎಂದು ನಿರ್ದೇಶಿಸಬಹುದು ಮತ್ತು ಆ ತರುವಾಯ ಸದರಿ ಪ್ಯಾರಾವನ್ನು ಮತ್ತು ಸದರಿ IIIನೇ ಭಾಗವನ್ನು ತದನುಸಾರವಾಗಿ ತಿದ್ದುಪಡಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು;

(ಬಿ) ನಿಯಮಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಮಿಜೋರಾಂ ಒಕ್ಕೂಟ ರಾಜ್ಯಕ್ಷೇತ್ರದಲ್ಲಿನ ಒಂದು ಸ್ವಾಯತ್ತ ಕ್ಷೇತ್ರದ ಪ್ರತಿಯೊಂದು ಪ್ರಾದೇಶಿಕ ಪರಿಷತ್ತನ್ನು (ಇಲ್ಲಿ ಇನ್ನು ಮುಂದೆ ಇದನ್ನು ಅಸ್ತಿತ್ವದಲ್ಲಿರುವ ಪ್ರಾದೇಶಿಕ ಪರಿಷತ್ತು ಎಂದು ಉಲ್ಲೇಖಿಸಲಾಗಿದೆ) ಆ ದಿನಾಂಕದಂದು ಮತ್ತು ಆ ದಿನಾಂಕದಿಂದ ಮತ್ತು ಸಂವಾದಿ ಹೊಸ ಜಿಲ್ಲೆಗಾಗಿ ಒಂದು ಜಿಲ್ಲಾ ಪರಿಷತ್ತು ಕ್ರಮಬದ್ಧವಾಗಿ ರಚಿತವಾಗುವವರೆಗೆ, ಆ ಜಿಲ್ಲೆಯ ಜಿಲ್ಲಾ ಪರಿಷತ್ತೆಂಬುದಾಗಿ (ಇನ್ನು ಮುಂದೆ ಇದನ್ನು ಸಂವಾದಿ ಹೊಸ ಜಿಲ್ಲಾ ಪರಿಷತ್ತು ಎಂದು ಉಲ್ಲೇಖಿಸಲಾಗಿದೆ) ಭಾವಿಸತಕ್ಕದ್ದು.

(2) ಅಸ್ತಿತ್ವದಲ್ಲಿರುವ ಒಂದು ಪ್ರಾದೇಶಿಕ ಪರಿಷತ್ತಿನ ಪ್ರತಿಯೊಬ್ಬ ಸದಸ್ಯನು ಸಂದರ್ಭಾನುಸಾರ ಚುನಾಯಿತನಾದವನಾಗಿರಲಿ ಅಥವಾ ನಾಮನಿರ್ದೇಶನಗೊಂಡವನಾಗಿರಲಿ ಅವನನ್ನು ಸಂವಾದಿ ಹೊಸ ಜಿಲ್ಲಾ ಪರಿಷತ್ತಿಗೆ ಚುನಾಯಿತನಾದವನೆಂದು ಅಥವಾ ಸಂದರ್ಭಾನುಸಾರ ನಾಮನಿರ್ದೇಶನಗೊಂಡವನೆಂದು ಭಾವಿಸತಕ್ಕದ್ದು ಮತ್ತು ಈ ಅನುಸೂಚಿಯ ಮೇರೆಗೆ ಸಂವಾದಿ ಹೊಸ ಜಿಲ್ಲೆಗೆ ಕ್ರಮಬದ್ಧವಾಗಿ ಒಂದು ಜಿಲ್ಲಾ ಪರಿಷತ್ತು ರಚಿತವಾಗುವವರೆಗೆ, ಅವನು ಪದಧಾರಣ ಮಾಡತಕ್ಕದ್ದು.

(3) ಈ ಅನುಸೂಚಿಯ 2ನೆಯ ಪ್ಯಾರಾದ (7)ನೇ ಉಪ-ಪ್ಯಾರಾದ ಮತ್ತು 4ನೇ ಪ್ಯಾರಾದ (4)ನೆಯ ಉಪ-ಪ್ಯಾರಾದ ಮೇರೆಗೆ ಸಂವಾದಿ ಹೊಸ ಜಿಲ್ಲಾ ಪರಿಷತ್ತು ನಿಯಮಗಳನ್ನು ರಚಿಸುವವರೆಗೆ, ಅಸ್ತಿತ್ವದಲ್ಲಿರುವ ಪ್ರಾದೇಶಿಕ ಪರಿಷತ್ತು ಸದರಿ ಉಪಬಂಧಗಳ ಮೇರೆಗೆ ರಚಿಸಿದ ಮತ್ತು ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ನಿಯಮಗಳು, ಸಂವಾದಿ ಹೊಸ ಜಿಲ್ಲಾ ಪರಿಷತ್ತಿಗೆ ಸಂಬಂಧಿಸಿದಂತೆ ಮಿಜೋರಾಂ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರನು ಅವುಗಳಲ್ಲಿ ಮಾಡಬಹುದಾದ ಅಳವಡಿಕೆಗಳು ಮತ್ತು ಮಾರ್ಪಾಟುಗಳಿಗೆ ಒಳಪಟ್ಟು ಪರಿಣಾಮಕಾರಿಯಾಗತಕ್ಕದ್ದು.

(4) ಮಿಜೋರಾಂ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರನು, ಒಂದು ಆದೇಶದ ಮೂಲಕ ಅಥವಾ ಹೆಚ್ಚು ಆದೇಶಗಳ ಮೂಲಕ, ಈ ಕೆಳಕಂಡ ಎಲ್ಲ ವಿಷಯಗಳ ಬಗ್ಗೆ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ಅಸ್ತಿತ್ವದಲ್ಲಿರುವ ಪ್ರಾದೇಶಿಕ ಪರಿಷತ್ತಿನ (ಅದು ಮಾಡಿಕೊಂಡ ಯಾವುದೇ ಕರಾರಿನ ಮೇರೆಗಿನ ಹಕ್ಕುಗಳು ಮತ್ತು ಹೊಣೆಗಾರಿಕೆಗಳೂ ಸೇರಿದಂತೆ) ಆಸ್ತಿಗಳನ್ನು, ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಸಂವಾದಿ ಹೊಸ ಜಿಲ್ಲಾ ಪರಿಷತ್ತಿಗೆ ವರ್ಗಾಯಿಸುವುದು;

(ಬಿ) ಅಸ್ತಿತ್ವದಲ್ಲಿರುವ ಪ್ರಾದೇಶಿಕ ಪರಿಷತ್ತು ಒಂದು ಪಕ್ಷವಾಗಿರುವ ಯಾವುದೇ ಕಾನೂನು ವ್ಯವಹರಣೆಗಳಲ್ಲಿ ಅಂಥ ಪರಿಷತ್ತಿಗೆ ಬದಲಾಗಿ ಸಂವಾದಿ ಹೊಸ ಜಿಲ್ಲಾ ಪರಿಷತ್ತನ್ನು ಒಂದು ಪಕ್ಷವಾಗಿ ಸೇರಿಸುವುದು;

(ಸಿ) ಅಸ್ತಿತ್ವದಲ್ಲಿರುವ ಪ್ರಾದೇಶಿಕ ಪರಿಷತ್ತಿನ ಯಾರೇ ನೌಕರರನ್ನು ಸಂವಾದಿ ಹೊಸ ಜಿಲ್ಲಾ ಪರಿಷತ್ತಿಗೆ ವರ್ಗಾಯಿಸುವುದು ಅಥವಾ ಆ ಸಂವಾದಿ ಹೊಸ ಜಿಲ್ಲಾ ಪರಿಷತ್ತು ಅವರನ್ನು ಪುನರ್ ನೇಮಕ ಮಾಡುವುದು ಮತ್ತು ಅಂಥ ವರ್ಗಾವಣೆ ಅಥವಾ ಪುನರ್ ನೇಮಕದ ತರುವಾಯ, ಅಂಥ ನೌಕರರಿಗೆ ಅನ್ವಯವಾಗುವ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಡಿ) ಅಸ್ತಿತ್ವದಲ್ಲಿರುವ ಪ್ರಾದೇಶಿಕ ಪರಿಷತ್ತು ರಚಿಸಿದ ಮತ್ತು ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನುಗಳನ್ನು ಆಡಳಿತಗಾರನು ಈ ಬಗ್ಗೆ ನಿರಸನ ರೂಪದಲ್ಲಾಗಲಿ ಅಥವಾ ತಿದ್ದುಪಡಿಯ ರೂಪದಲ್ಲಾಗಲಿ ಮಾಡಬಹುದಾದಂಥ ಅಳವಡಿಕೆಗಳು ಮತ್ತು ಮಾರ್ಪಾಟುಗಳಿಗೆ ಒಳಪಟ್ಟು, ಸಕ್ಷಮ ವಿಧಾನಮಂಡಲವು ಅಥವಾ ಇತರ ಸಕ್ಷಮ ಪ್ರಾಧಿಕಾರವು ಬದಲಾಯಿಸುವವರೆಗೆ, ನಿರಸನಗೊಳಿಸುವವರೆಗೆ ಅಥವಾ ತಿದ್ದುಪಡಿಮಾಡುವವರೆಗೆ ಅಂಥ ಕಾನೂನುಗಳನ್ನು ಮುಂದುವರಿಸುವುದು;

(ಇ) ಆಡಳಿತಗಾರನು ಅವಶ್ಯವೆಂದು ಪರಿಗಣಿಸುವಂಥ ಪ್ರಾಸಂಗಿಕ, ಆನುಷಂಗಿಕ ಮತ್ತು ಪೂರಕ ವಿಷಯಗಳು.

**20ಸಿ. ಅರ್ಥ ವಿವರಣೆ:–** ಈ ಬಗ್ಗೆ ಮಾಡಿದ ಯಾವುದೇ ಉಪಬಂಧಕ್ಕೊಳಪಟ್ಟು, ಈ ಅನುಸೂಚಿಯ ಉಪಬಂಧಗಳನ್ನು ಮಿಜೋರಾಂ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಅನ್ವಯಿಸುವಾಗ, ಆ ಉಪಬಂಧಗಳು–

(1) ರಾಜ್ಯಪಾಲನಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಮಾಡಿದ ಉಲ್ಲೇಖಗಳು 239ನೆಯ ಅನುಚ್ಛೇದದ ಮೇರೆಗೆ ನೇಮಕಗೊಂಡ ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಗಾರನಿಗೆ ಮಾಡಿದ ಉಲ್ಲೇಖಗಳಾಗಿದ್ದರೆ, ("ರಾಜ್ಯ ಸರ್ಕಾರ" ಎಂಬ ಪದಗಳನ್ನು ಹೊರತುಪಡಿಸಿ) ರಾಜ್ಯಕ್ಕೆ ಮಾಡಿದ ಉಲ್ಲೇಖಗಳು ಮಿಜೋರಾಂ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಮಾಡಿದ ಉಲ್ಲೇಖಗಳಾಗಿದ್ದರೆ, ಮತ್ತು ರಾಜ್ಯ ವಿಧಾನಮಂಡಲಕ್ಕೆ ಮಾಡಿದ ಉಲ್ಲೇಖಗಳು ಮಿಜೋರಾಂ ಒಕ್ಕೂಟ ರಾಜ್ಯಕ್ಷೇತ್ರದ ವಿಧಾನಸಭೆಗೆ ಮಾಡಿದ ಉಲ್ಲೇಖಗಳಾಗಿದ್ದರೆ ಹೇಗೋ ಹಾಗೆ;

(2) (ಎ) 4ನೆಯ ಪ್ಯಾರಾದ (5) ನೆಯ ಉಪ-ಪ್ಯಾರಾದಲ್ಲಿ ಸಂಬಂಧಪಟ್ಟ ರಾಜ್ಯ ಸರ್ಕಾರದೊಡನೆ ಸಮಾಲೋಚನೆಗಾಗಿ ಇರುವ ಉಪಬಂಧವನ್ನು ಬಿಟ್ಟುಬಿಟ್ಟಿದ್ದರೆ ಹೇಗೋ ಹಾಗೆ;

(ಬಿ) 6ನೆಯ ಪ್ಯಾರಾದ (2)ನೆಯ ಉಪಪ್ಯಾರಾದಲ್ಲಿ "ರಾಜ್ಯದ ಕಾರ್ಯಾಂಗ ಅಧಿಕಾರವು ವ್ಯಾಪ್ತವಾಗುವ" ಎಂಬ ಪದಗಳಿಗೆ ಬದಲಾಗಿ ಮಿಜೋರಾಂ ಒಕ್ಕೂಟ ರಾಜ್ಯಕ್ಷೇತ್ರದ ವಿಧಾನಸಭೆಯು ಇತರ ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸಲು ಅಧಿಕಾರ ಹೊಂದಿದೆಯೋ" ಎಂಬ ಪದಗಳನ್ನು ಪ್ರತ್ಯಾಯೋಜಿಸಿದ್ದರೆ ಹೇಗೋ ಹಾಗೆ;

(ಸಿ) 13ನೆಯ ಪ್ಯಾರಾದಲ್ಲಿ "202ನೆಯ ಅನುಚ್ಛೇದದ ಮೇರೆಗೆ" ಎಂಬ ಪದಗಳನ್ನು ಬಿಟ್ಟುಬಿಟ್ಟಿದ್ದರೆ ಹೇಗೋ ಹಾಗೆ

– ಪರಿಣಾಮವುಳ್ಳದ್ದಾಗಿರತಕ್ಕದ್ದು.]]

**21. ಅನುಸೂಚಿಯ ತಿದ್ದುಪಡಿ:–** (1) ಸಂಸತ್ತು ಕಾಲಕಾಲಕ್ಕೆ ಕಾನೂನಿನ ಮೂಲಕ ಸೇರ್ಪಡೆಯ, ವ್ಯತ್ಯಾಸದ ಅಥವಾ ನಿರಸನದ ರೂಪದಲ್ಲಿ ಈ ಅನುಸೂಚಿಯ ಯಾವುದೇ ಉಪಬಂಧಗಳನ್ನು ತಿದ್ದುಪಡಿ ಮಾಡಬಹುದು ಮತ್ತು ಈ ಅನುಸೂಚಿಯು ಹಾಗೆ ತಿದ್ದುಪಡಿಯಾದಾಗ ಸಂವಿಧಾನದಲ್ಲಿ ಈ ಅನುಸೂಚಿಗೆ ಮಾಡಿದ ಯಾವುದೇ ಉಲ್ಲೇಖವನ್ನು, ಹಾಗೆ ತಿದ್ದುಪಡಿಯಾದಂಥ ಅನುಸೂಚಿಗೆ ಮಾಡಿದ ಉಲ್ಲೇಖ ಎಂದು ಅರ್ಥೈಸತಕ್ಕದ್ದು.

(2) ಈ ಪ್ಯಾರಾದ (1) ನೆಯ ಉಪ-ಪ್ಯಾರಾದಲ್ಲಿ ನಮೂದಿಸಿರುವಂಥ ಯಾವುದೇ ಕಾನೂನನ್ನು 368ನೆಯ ಅನುಚ್ಛೇದದ ಉದ್ದೇಶಗಳಿಗಾಗಿ ಈ ಸಂವಿಧಾನದ ತಿದ್ದುಪಡಿ ಎಂಬುದಾಗಿ ಭಾವಿಸತಕ್ಕದ್ದಲ್ಲ.

## ಏಳನೆಯ ಅನುಸೂಚಿ

(246ನೆಯ ಅನುಚ್ಛೇದ)

### ಪಟ್ಟಿ I – ಒಕ್ಕೂಟ ಪಟ್ಟಿ

1. ರಕ್ಷಣೆಗಾಗಿ ಸಿದ್ಧತೆ ಮತ್ತು ಯುದ್ಧಕಾಲದಲ್ಲಿ ಯುದ್ಧ ನಡೆಸುವುದಕ್ಕಾಗಿ ಮತ್ತು ಯುದ್ಧವು ಕೊನೆಗೊಂಡ ನಂತರ ಪರಿಣಾಮಕಾರಿಯಾಗಿ ಸೈನ್ಯವನ್ನು ವಿಸರ್ಜನೆ ಮಾಡುವುದಕ್ಕಾಗಿ ಸಹಾಯಕವಾಗಬಹುದಾದ ಎಲ್ಲಾ ಕಾರ್ಯಗಳೂ ಸೇರಿದಂತೆ ಭಾರತದ ಮತ್ತು ಅದರ ಪ್ರತಿಯೊಂದು ಭಾಗದ ರಕ್ಷಣೆ.

2. ನೌಕಾ, ಭೂ ಮತ್ತು ವಾಯು ದಳಗಳು; ಒಕ್ಕೂಟದ ಇತರ ಯಾವುವೇ ಸಶಸ್ತ್ರ ದಳಗಳು.

[1][2ಎ. ಯಾವುದೇ ರಾಜ್ಯದಲ್ಲಿ ಸಿವಿಲ್ ಅಧಿಕಾರ ವರ್ಗದ ಸಹಾಯಕ್ಕಾಗಿ ಒಕ್ಕೂಟದ ಯಾವುದೇ ಸಶಸ್ತ್ರ ದಳದ ಅಥವಾ ಒಕ್ಕೂಟದ ನಿಯಂತ್ರಣಕ್ಕೆ ಒಳಪಟ್ಟ ಇತರ ಯಾವುದೇ ದಳದ ಅಥವಾ ಅದರ ಯಾವುದೇ ತುಕಡಿಯ ಅಥವಾ ಘಟಕದ ನಿಯೋಜನೆ, ಅಂಥ ದಳಗಳಿಗೆ ಸೇರಿದವರು ಹಾಗೆ ನಿಯೋಜನೆಯಲ್ಲಿರುವಾಗ ಅವರ ಅಧಿಕಾರಗಳು, ಅಧಿಕಾರವ್ಯಾಪ್ತಿ, ವಿಶೇಷಾಧಿಕಾರಗಳು ಮತ್ತು ಹೊಣೆಗಾರಿಕೆಗಳು.]

3. ದಂಡು ಪ್ರದೇಶಗಳ ಸೀಮಾ ನಿರ್ಣಯ, ಅಂಥ ಪ್ರದೇಶಗಳಲ್ಲಿ ಸ್ಥಳೀಯ ಸ್ವಯಂ ಆಡಳಿತ, ಅಂಥ ಪ್ರದೇಶಗಳೊಳಗೆ ದಂಡು ಪ್ರಾಧಿಕಾರಗಳ ರಚನೆ ಮತ್ತು ಅವುಗಳ ಅಧಿಕಾರಗಳು ಮತ್ತು ಅಂಥ ಪ್ರದೇಶಗಳಲ್ಲಿ (ಬಾಡಿಗೆ ನಿಯಂತ್ರಣವೂ ಸೇರಿ) ವಸತಿ ಸೌಕರ್ಯದ ವಿನಿಯಮನ.

4. ನೌಕಾ, ಭೂ ಮತ್ತು ವಾಯುದಳಗಳ ಕಾಮಗಾರಿಗಳು.

5. ಶಸ್ತ್ರಗಳು, ಅಗ್ನ್ಯಸ್ತ್ರಗಳು, ಮದ್ದು ಗುಂಡುಗಳು ಮತ್ತು ಸ್ಫೋಟಕಗಳು.

6. ಅಣುಶಕ್ತಿ ಮತ್ತು ಅದರ ಉತ್ಪಾದನೆಗೆ ಅವಶ್ಯವಾದ ಖನಿಜ ಸಂಪತ್ತು.

7. ರಕ್ಷಣಾ ಉದ್ದೇಶಕ್ಕೆ ಅಥವಾ ಯುದ್ಧ ನಡೆಸುವುದಕ್ಕೆ ಅವಶ್ಯವೆಂದು ಸಂಸತ್ತು ಕಾನೂನಿನ ಮೂಲಕ ಘೋಷಿಸಿದ ಕೈಗಾರಿಕೆಗಳು.

8. ಕೇಂದ್ರ ಗುಪ್ತ ವಾರ್ತಾ ಮತ್ತು ತನಿಖಾ ವಿಭಾಗ.

9. ಭಾರತದ ರಕ್ಷಣೆಗೆ, ವಿದೇಶಿ ವ್ಯವಹಾರಗಳಿಗೆ ಅಥವಾ ಭದ್ರತೆಗೆ ಸಂಬಂಧಿಸಿದ ಕಾರಣಗಳಿಗಾಗಿ ಪ್ರತಿಬಂಧಕ ಸ್ಥಾನಬದ್ಧತೆ; ಅಂಥ ಸ್ಥಾನಬದ್ಧತೆಗೆ ಒಳಗಾದ ವ್ಯಕ್ತಿಗಳು.

10. ವಿದೇಶ ವ್ಯವಹಾರಗಳು; ಒಕ್ಕೂಟ ಮತ್ತು ಯಾವುದೇ ವಿದೇಶದ ನಡುವೆ ಸಂಬಂಧವನ್ನುಂಟುಮಾಡುವ ಎಲ್ಲ ವಿಷಯಗಳು.

11. ರಾಜತಾಂತ್ರಿಕ, ಕಾನ್ಸುಲರ್ ಮತ್ತು ವ್ಯಾಪಾರ ಪ್ರಾತಿನಿಧ್ಯ.

12. ವಿಶ್ವಸಂಸ್ಥೆ.

13. ಅಂತರರಾಷ್ಟ್ರೀಯ ಸಮ್ಮೇಳನಗಳು, ಸಂಘಗಳು ಮತ್ತು ಇತರ ನಿಕಾಯಗಳಲ್ಲಿ ಭಾಗವಹಿಸುವುದು ಮತ್ತು ಅವುಗಳಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಕಾರ್ಯಗತಗೊಳಿಸುವುದು.

14. ವಿದೇಶಗಳೊಡನೆ ಕೌಲುಗಳನ್ನು ಮತ್ತು ಒಪ್ಪಂದಗಳನ್ನು ಮಾಡಿಕೊಳ್ಳುವುದು ಮತ್ತು ವಿದೇಶಗಳೊಂದಿಗೆ ಮಾಡಿಕೊಂಡ ಕೌಲುಗಳನ್ನು, ಒಪ್ಪಂದಗಳನ್ನು ಹಾಗೂ ಒಡಂಬಡಿಕೆಗಳನ್ನು ಕಾರ್ಯಗತಗೊಳಿಸುವುದು.

15. ಯುದ್ಧ ಮತ್ತು ಶಾಂತಿ.

---

1. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 57ನೆಯ ಪ್ರಕರಣದ ಮೂಲಕ (3.1.1977 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ

16. ವಿದೇಶೀಯ ಅಧಿಕಾರ ವ್ಯಾಪ್ತಿ.

17. ನಾಗರಿಕತ್ವ, ದೇಶೀಕರಣ ಮತ್ತು ಅನ್ಯದೇಶೀಯರು.

18. ಪ್ರತ್ಯರ್ಪಣ.

19. ಭಾರತದೊಳಗೆ ಪ್ರವೇಶ ನೀಡುವುದು ಮತ್ತು ಭಾರತದಿಂದ ವಲಸೆ ಹೋಗುವುದು ಮತ್ತು ಹೊರಹಾಕುವುದು, ಪಾಸ್‌ಪೋರ್ಟ್‌ಗಳು ಮತ್ತು ವೀಸಾಗಳು.

20. ಭಾರತದ ಹೊರಗಿನ ಸ್ಥಳಗಳಿಗೆ ತೀರ್ಥಯಾತ್ರೆಗಳು.

21. ಸಮುದ್ರ ಮಧ್ಯದಲ್ಲಿ ಮಾಡಿದ ಕಡಲುಗಳ್ಳತನ ಅಥವಾ ವಾಯುಮಾರ್ಗದಲ್ಲಿ ಎಸಗಿದ ಅಪರಾಧಗಳು; ಭೂಮಿಯ ಮೇಲೆ ಅಥವಾ ಸಮುದ್ರದ ಮಧ್ಯದಲ್ಲಿ ಅಥವಾ ವಾಯು ಮಾರ್ಗದಲ್ಲಿ ರಾಷ್ಟ್ರಗಳ ಕಾನೂನಿಗೆ ವಿರುದ್ಧವಾಗಿ ಎಸಗಿದ ಅಪರಾಧಗಳು.

22. ರೈಲ್ವೆಗಳು.

23. ಸಂಸತ್ತು ರಚಿಸಿದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ರಾಷ್ಟ್ರೀಯ ಹೆದ್ದಾರಿಗಳೆಂದು ಘೋಷಿಸಿದ ಹೆದ್ದಾರಿಗಳು.

24. ಯಂತ್ರಚಾಲಿತ ನೌಕೆಗಳ ಸಂಬಂಧದಲ್ಲಿ ಸಂಸತ್ತು ಕಾನೂನಿನ ಮೂಲಕ ರಾಷ್ಟ್ರೀಯ ಜಲಮಾರ್ಗಗಳೆಂದು ಘೋಷಿಸಿದ ಒಳನಾಡು ಜಲಮಾರ್ಗಗಳ ಮೇಲೆ ಹಡಗುಯಾನ ಮತ್ತು ನೌಕಾಸಂಚಾರ; ಅಂಥ ಜಲಮಾರ್ಗಗಳ ಮೇಲಿನ ಮಾರ್ಗನಿಯಮ.

25. ಉಬ್ಬರವಿಳಿತ ಜಲದ ಮೇಲಿನ ಹಡಗುಯಾನ ಮತ್ತು ನೌಕಾ ಸಂಚಾರವೂ ಸೇರಿದಂತೆ, ಸಮುದ್ರದ ಮೇಲಿನ ಹಡಗುಯಾನ ಮತ್ತು ನೌಕಾಸಂಚಾರ; ವಾಣಿಜ್ಯ ನೌಕಾಶಿಕ್ಷಣ ಮತ್ತು ತರಬೇತಿಯ ವ್ಯವಸ್ಥೆ ಮತ್ತು ರಾಜ್ಯಗಳು ಮತ್ತು ಇತರ ಏಜೆನ್ಸಿಗಳು ನೀಡುವ ಅಂಥ ಶಿಕ್ಷಣದ ಮತ್ತು ತರಬೇತಿಯ ವಿನಿಯಮನ.

26. ಹಡಗು ಸಂಚಾರ ಮತ್ತು ವಿಮಾನದ ಸುರಕ್ಷತೆಗಾಗಿ ದೀಪದ ಹಡಗುಗಳು, ಗುರುತುದೀಪಗಳು ಮತ್ತು ಇತರ ವ್ಯವಸ್ಥೆಯೂ ಸೇರಿದಂತೆ ದೀಪಗೃಹಗಳು.

27. ಬಂದರುಗಳ ಸೀಮಾ ನಿರ್ಣಯ ಸೇರಿದಂತೆ ಸಂಸತ್ತು ರಚಿಸಿದ ಕಾನೂನಿನ ಅಥವಾ ಅಸ್ತಿತ್ವದಲ್ಲಿರುವ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಪ್ರಮುಖ ಬಂದರುಗಳೆಂದು ಘೋಷಿಸಲಾದ ಬಂದರುಗಳು ಮತ್ತು ಆ ಬಂದರುಗಳಲ್ಲಿ ಬಂದರು ಪ್ರಾಧಿಕಾರ ರಚನೆ ಮತ್ತು ಅವುಗಳ ಅಧಿಕಾರ.

28. ಬಂದರಿನಲ್ಲಿ ರೋಗಿ ಸಂಸರ್ಗ ನಿಷೇಧ ಸ್ಥಳಗಳು ಮತ್ತು ತತ್ಸಂಬಂಧಿ ಆಸ್ಪತ್ರೆಗಳು; ನಾವಿಕರ ಮತ್ತು ಸಮುದ್ರದ ಬಳಿ ಇರುವ ಆಸ್ಪತ್ರೆಗಳು.

29. ವಾಯುಮಾರ್ಗಗಳು; ವಿಮಾನ ಮತ್ತು ವಿಮಾನಯಾನ; ವಿಮಾನ ನಿಲ್ದಾಣಗಳ ಏರ್ಪಾಡು; ವಿಮಾನ ಸಂಚಾರ ಮತ್ತು ವಿಮಾನ ನಿಲ್ದಾಣಗಳ ನಿಯಂತ್ರಣ ಮತ್ತು ಸಂಘಟನೆ; ವೈಮಾನಿಕ ಶಿಕ್ಷಣ ಮತ್ತು ತರಬೇತಿಗಾಗಿ ವ್ಯವಸ್ಥೆ ಮತ್ತು ರಾಜ್ಯಗಳು ಹಾಗೂ ಇತರ ಏಜೆನ್ಸಿಗಳು ನೀಡುವ ಅಂಥ ಶಿಕ್ಷಣದ ಮತ್ತು ತರಬೇತಿಯ ವಿನಿಯಮನ.

30. ರೈಲು, ಸಮುದ್ರ ಅಥವಾ ವಾಯುಮಾರ್ಗದ ಮೂಲಕ ಅಥವಾ ಯಂತ್ರಚಾಲಿತ ನೌಕೆಗಳಲ್ಲಿ ರಾಷ್ಟ್ರೀಯ ಜಲಮಾರ್ಗಗಳ ಮೂಲಕ ಪ್ರಯಾಣಿಕರ ಮತ್ತು ಸರಕುಗಳ ಸಾಗಣೆ.

31. ಅಂಚೆ ಮತ್ತು ತಂತಿ; ದೂರವಾಣಿ, ವೈರ್‌ಲೆಸ್, ಪ್ರಸಾರ ಮತ್ತು ಅದೇ ಬಗೆಯ ಇತರ ಸಂಪರ್ಕಸಾಧನಗಳು.

32. ಒಕ್ಕೂಟದ ಸ್ವತ್ತು ಮತ್ತು ಅದರಿಂದ ಬರುವ ರಾಜಸ್ವ, ಆದರೆ [1]*** ಒಂದು ರಾಜ್ಯದಲ್ಲಿ ಇರುವ ಒಕ್ಕೂಟದ ಸ್ವತ್ತಿನ ಬಗ್ಗೆ, ಸಂಸತ್ತು ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸಿರುವಷ್ಟರ ಮಟ್ಟಿಗೆ ಹೊರತು ಅದು, ಆ ರಾಜ್ಯದ ಕಾನೂನಿಗೆ ಒಳಪಡುವುದು.

[2] * * * * *

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ "ಮೊದಲನೆಯ ಅನುಸೂಚಿಯ ಭಾಗ ಎ ಯಲ್ಲಿ ಅಥವಾ ಭಾಗ ಬಿ ಯಲ್ಲಿ ನಿರ್ದಿಷ್ಟಪಡಿಸಿರುವ ಆದರೆ" ಎಂಬ ಪದಗಳನ್ನು ಮತ್ತು ಅಕ್ಷರಗಳನ್ನು ಬಿಟ್ಟುಬಿಡಲಾಗಿದೆ.
2. ಅದೇ ಅಧಿನಿಯಮದ 26ನೇ ಪ್ರಕರಣದ ಮೂಲಕ 33ನೆಯ ನಮೂದನ್ನು ಬಿಟ್ಟುಬಿಡಲಾಗಿದೆ.

34. ಭಾರತೀಯ ಸಂಸ್ಥಾನಗಳ ರಾಜರ ಎಸ್ಟೇಟುಗಳಿಗಾಗಿ ಪ್ರತಿಪಾಲಿತರ ನ್ಯಾಯಾಲಯಗಳು.

35. ಒಕ್ಕೂಟದ ಸಾರ್ವಜನಿಕ ಋಣ.

36. ಕರೆನ್ಸಿ, ನಾಣ್ಯ ತಯಾರಿಕೆ ಮತ್ತು ಕಾನೂನು ಮಾನ್ಯ ಚಲಾವಣೆ ಹಣ, ವಿದೇಶಿ ವಿನಿಮಯ.

37. ವಿದೇಶಿ ಸಾಲಗಳು.

38. ಭಾರತದ ರಿಸರ್ವ್ ಬ್ಯಾಂಕ್

39. ಅಂಚೆ ಕಚೇರಿ ಉಳಿತಾಯ ಬ್ಯಾಂಕ್

40. ಭಾರತ ಸರ್ಕಾರವು ಅಥವಾ ಒಂದು ರಾಜ್ಯದ ಸರ್ಕಾರ ವ್ಯವಸ್ಥೆ ಮಾಡಿದ ಲಾಟರಿಗಳು.

41. ವಿದೇಶಗಳೊಡನೆ ವ್ಯಾಪಾರ ಮತ್ತು ವಾಣಿಜ್ಯ, ಸೀಮಾ ಸುಂಕದ ಸರಹದ್ದಿನ ಆಚೆ ಈಚೆ ನಡೆಯುವ ಆಮದು ಮತ್ತು ರಫ್ತು; ಸೀಮಾ ಸುಂಕಗಳ ಸರಹದ್ದುಗಳನ್ನು ಗೊತ್ತುಮಾಡುವುದು.

42. ಅಂತರರಾಜ್ಯ ವ್ಯಾಪಾರ ಮತ್ತು ವಾಣಿಜ್ಯ.

43. ಬ್ಯಾಂಕಿಂಗ್, ವಿಮೆ ಮತ್ತು ಹಣಕಾಸು ನಿಗಮಗಳೂ ಸೇರಿದಂತೆ, ಆದರೆ ಸಹಕಾರ ಸಂಘಗಳನ್ನು ಹೊರತುಪಡಿಸಿ ವ್ಯಾಪಾರೀ ನಿಗಮಗಳ ನಿಗಮನ, ವಿನಿಯಮನ ಮತ್ತು ಪರಿಸಮಾಪನ.

44. ವ್ಯಾಪಾರ ನಿಗಮಗಳಾಗಿರಲಿ ಅಥವಾ ಇಲ್ಲದಿರಲಿ ಒಂದೇ ರಾಜ್ಯಕ್ಕೆ ಸೀಮಿತವಾಗಿರದ ಉದ್ದೇಶಗಳನ್ನುಳ್ಳ ನಿಗಮಗಳ ನಿಗಮನ, ವಿನಿಯಮನ ಮತ್ತು ಪರಿಸಮಾಪನ, ಆದರೆ ವಿಶ್ವವಿದ್ಯಾನಿಲಯಗಳು ಇದರಲ್ಲಿ ಸೇರುವುದಿಲ್ಲ.

45. ಬ್ಯಾಂಕು ವ್ಯವಹಾರ.

46. ವಿನಿಮಯ ಪತ್ರಗಳು, ಚೆಕ್ಕುಗಳು, ಪ್ರಾಮಿಸರಿ ನೋಟುಗಳು ಮತ್ತು ಇದೇ ಬಗೆಯ ಇತರ ಲಿಖಿತಗಳು.

47. ವಿಮೆ.

48. ಸ್ಟಾಕ್ ಎಕ್ಸ್‌ಚೇಂಜ್‌ಗಳು ಮತ್ತು ವಾಯಿದೆ ಪೇಟೆಗಳು.

49. ಪೇಟೆಂಟ್‌ಗಳು, ಆವಿಷ್ಕಾರಗಳು ಮತ್ತು ನಕ್ಷೆಗಳು, ಕೃತಿಸ್ವಾಮ್ಯ, ವ್ಯಾಪಾರ ಚಿಹ್ನೆಗಳು ಮತ್ತು ವ್ಯಾಪಾರಿ ಸರಕು ಚಿಹ್ನೆಗಳು.

50. ತೂಕ ಮತ್ತು ಅಳತೆ ಮಾನಕಗಳ ನಿಗದಿ.

51. ಭಾರತದಿಂದ ಹೊರಗಡೆ ರಫ್ತಾಗುವ ಅಥವಾ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸಾಗಣೆಯಾಗುವ ಸರಕುಗಳ ಗುಣಮಟ್ಟದ ನಿಗದಿ.

52. ಒಕ್ಕೂಟವು ಯಾವ ಕೈಗಾರಿಕೆಗಳನ್ನು ನಿಯಂತ್ರಿಸುವುದು, ಸಾರ್ವಜನಿಕ ಹಿತದೃಷ್ಟಿಯಿಂದ ವಿಹಿತವೆಂದು ಸಂಸತ್ತು ಕಾನೂನಿನ ಮೂಲಕ ಘೋಷಿಸುವುದೋ ಆ ಕೈಗಾರಿಕೆಗಳು.

53. ತೈಲಕ್ಷೇತ್ರಗಳ ಮತ್ತು ಖನಿಜ ತೈಲ ಸಂಪತ್ತಿನ ವಿನಿಯಮನ ಮತ್ತು ಅಭಿವೃದ್ಧಿ, ಪೆಟ್ರೋಲ್ ಮತ್ತು ಪೆಟ್ರೋಲ್ ಉತ್ಪನ್ನಗಳು; ಅಪಾಯಕರ ಸುಲಭದಾಹ್ಯವಾದವುಗಳೆಂದು ಸಂಸತ್ತು ಕಾನೂನಿನ ಮೂಲಕ ಘೋಷಿಸಿದ ಇತರ ದ್ರವಗಳು ಮತ್ತು ವಸ್ತುಗಳು.

54. ಗಣಿಗಳ ವಿನಿಯಮನವು ಮತ್ತು ಖನಿಜಗಳ ಅಭಿವೃದ್ಧಿಯು ಎಷ್ಟರಮಟ್ಟಿಗೆ ಒಕ್ಕೂಟದ ನಿಯಂತ್ರಣದಲ್ಲಿರುವುದು ಸಾರ್ವಜನಿಕ ಹಿತದೃಷ್ಟಿಯಿಂದ ವಿಹಿತವೆಂದು ಸಂಸತ್ತು ಕಾನೂನು ಮೂಲಕ ಘೋಷಿಸುವುದೋ, ಅಷ್ಟರಮಟ್ಟಿಗೆ ಗಣಿಗಳ ವಿನಿಯಮನ ಮತ್ತು ಖನಿಜಗಳ ಅಭಿವೃದ್ಧಿ.

55. ಗಣಿಗಳಲ್ಲಿ ಮತ್ತು ತೈಲಕ್ಷೇತ್ರಗಳಲ್ಲಿನ ದುಡಿಮೆ ಮತ್ತು ಸುರಕ್ಷೆಯ ವಿನಿಯಮನ.

56. ಅಂತರ ರಾಜ್ಯ ನದಿಗಳ ಮತ್ತು ನದಿ ಕಣಿವೆಗಳ ವಿನಿಯಮನ ಮತ್ತು ಅಭಿವೃದ್ಧಿಯು ಎಷ್ಟರಮಟ್ಟಿಗೆ ಒಕ್ಕೂಟದ ನಿಯಂತ್ರಣದಲ್ಲಿರುವುದು ಸಾರ್ವಜನಿಕ ಹಿತದೃಷ್ಟಿಯಿಂದ ವಿಹಿತವೆಂದು ಸಂಸತ್ತು ಕಾನೂನಿನ ಮೂಲಕ ಘೋಷಿಸುವುದೋ ಅಷ್ಟರಮಟ್ಟಿಗೆ ಅಂತರರಾಜ್ಯ ನದಿಗಳ ಮತ್ತು ನದಿಕಣಿವೆಗಳ ವಿನಿಯಮನ ಮತ್ತು ಅಭಿವೃದ್ಧಿ.

57. ರಾಜ್ಯಕ್ಷೇತ್ರೀಯ ಸಮುದ್ರದ ಆಚೆ ಮೀನು ಹಿಡಿಯುವುದು ಮತ್ತು ಮೀನುಗಾರಿಕೆ.

58. ಒಕ್ಕೂಟದ ಏಜೆನ್ಸಿಗಳಿಂದ ಉಪ್ಪು ತಯಾರಿಕೆ, ಸರಬರಾಜು ಮತ್ತು ಹಂಚಿಕೆ; ಇತರ ಏಜೆನ್ಸಿಗಳಿಂದ ಉಪ್ಪು ತಯಾರಿಕೆ, ಸರಬರಾಜು ಮತ್ತು ಹಂಚಿಕೆಯ ವಿನಿಯಮನ ಮತ್ತು ನಿಯಂತ್ರಣ.

59. ರಫ್ತಿಗಾಗಿ ಅಫೀಮಿನ ಸಾಗುವಳಿ, ತಯಾರಿಕೆ ಮತ್ತು ಮಾರಾಟ.

60. ಪ್ರದರ್ಶನಕ್ಕಾಗಿ ಚಲನಚಿತ್ರಗಳ ಮಂಜೂರಾತಿ.

61. ಒಕ್ಕೂಟದ ನೌಕರರಿಗೆ ಸಂಬಂಧಪಡುವ ಕೈಗಾರಿಕಾ ವಿವಾದಗಳು.

62. ಈ ಸಂವಿಧಾನದ ಪ್ರಾರಂಭದಲ್ಲಿ ರಾಷ್ಟ್ರೀಯ ಗ್ರಂಥಾಲಯ, ಭಾರತೀಯ ವಸ್ತು ಸಂಗ್ರಹಾಲಯ, ಇಂಪೀರಿಯಲ್ ಯುದ್ಧವಸ್ತು ಸಂಗ್ರಹಾಲಯ, ವಿಕ್ಟೋರಿಯಾ ಸ್ಮಾರಕ ಮತ್ತು ಭಾರತೀಯ ಯುದ್ಧಸ್ಮಾರಕ ಎಂಬ ಹೆಸರುಗಳಿಂದ ಕರೆಯಲಾಗುತ್ತಿದ್ದ ಸಂಸ್ಥೆಗಳು ಮತ್ತು ಭಾರತ ಸರ್ಕಾರವು ಪೂರ್ಣವಾಗಿ ಅಥವಾ ಭಾಗಶಃ ಹಣಕಾಸು ಒದಗಿಸುವ ಮತ್ತು ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆಯೆಂದು ಸಂಸತ್ತು ಕಾನೂನಿನ ಮೂಲಕ ಘೋಷಿಸಿದ ಅಂತಹುದೇ ಇತರ ಯಾವುದೇ ಸಂಸ್ಥೆ.

63. ಈ ಸಂವಿಧಾನದ ಪ್ರಾರಂಭದಲ್ಲಿದ್ದ ಕಾಶೀ ಹಿಂದೂ ವಿಶ್ವವಿದ್ಯಾನಿಲಯ, ಅಲೀಘಡ್ ಮುಸ್ಲಿಂ ವಿಶ್ವವಿದ್ಯಾನಿಲಯ ಮತ್ತು [1][ದೆಹಲಿ ವಿಶ್ವವಿದ್ಯಾನಿಲಯ ಎಂಬ ಹೆಸರುಗಳಿಂದ ಕರೆಯಲಾಗುತ್ತಿದ್ದ ಸಂಸ್ಥೆಗಳು; 371ಇ ಅನುಚ್ಛೇದಕ್ಕನುಸಾರವಾಗಿ ಸ್ಥಾಪಿತವಾದ ವಿಶ್ವವಿದ್ಯಾನಿಲಯ;] ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆಗಳೆಂದು ಸಂಸತ್ತು ಕಾನೂನಿನ ಮೂಲಕ ಘೋಷಿಸಿದ ಇತರ ಯಾವುದೇ ಸಂಸ್ಥೆ.

64. ಭಾರತ ಸರ್ಕಾರವು ಪೂರ್ಣವಾಗಿ ಅಥವಾ ಭಾಗಶಃ ಹಣಕಾಸು ಒದಗಿಸಿದ ಮತ್ತು ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆಯೆಂದು ಸಂಸತ್ತು ಕಾನೂನಿನ ಮೂಲಕ ಘೋಷಿಸಿದ ವೈಜ್ಞಾನಿಕ ಅಥವಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳು.

65. (ಎ) ಪೊಲೀಸ್ ಅಧಿಕಾರಿಗಳ ತರಬೇತಿಯನ್ನೊಳಗೊಂಡು ವೃತ್ತಿ, ಕಸುಬು ಅಥವಾ ತಾಂತ್ರಿಕ ತರಬೇತಿಗೆ; ಅಥವಾ

(ಬಿ) ವಿಶೇಷ ಅಧ್ಯಯನ ಅಥವಾ ಸಂಶೋಧನೆಯ ಉನ್ನತಿಗೆ; ಅಥವಾ

(ಸಿ) ಅಪರಾಧದ ತನಿಖೆಗೆ ಅಥವಾ ಪತ್ತೆಗೆ ವೈಜ್ಞಾನಿಕ ಅಥವಾ ತಾಂತ್ರಿಕ ಸಹಾಯಕ್ಕೆ

– ಸಂಬಂಧಿಸಿದ ಒಕ್ಕೂಟ ಏಜೆನ್ಸಿಗಳು ಮತ್ತು ಸಂಸ್ಥೆಗಳು.

66. ಉಚ್ಚ ಶಿಕ್ಷಣ ಅಥವಾ ಸಂಶೋಧನಾ ಸಂಸ್ಥೆಗಳಲ್ಲಿ ಮತ್ತು ವೈಜ್ಞಾನಿಕ ಹಾಗೂ ತಾಂತ್ರಿಕ ಸಂಸ್ಥೆಗಳಲ್ಲಿ ಸಮನ್ವಯ ಮತ್ತು ಗುಣಮಟ್ಟಗಳ ನಿರ್ಧರಣೆ.

67. ರಾಷ್ಟ್ರೀಯ ಮಹತ್ವದವುಗಳೆಂದು, [2][ಸಂಸತ್ತು ರಚಿಸಿದ ಕಾನೂನಿನ ಮೂಲಕ ಅಥವಾ ಮೇರೆಗೆ ಘೋಷಿಸಿದ] ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ದಾಖಲೆಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು.

68. ಭಾರತದ ಭೂಮಾಪನ, ಭಾರತದ ಭೂಗರ್ಭ ವಿಜ್ಞಾನ, ಸಸ್ಯವಿಜ್ಞಾನ, ಪ್ರಾಣಿ ವಿಜ್ಞಾನ ಮತ್ತು ಮಾನವಶಾಸ್ತ್ರೀಯ ಸಮೀಕ್ಷೆಗಳು; ಹವಾಮಾನ ಸಂಸ್ಥೆಗಳು.

69. ಜನಗಣತಿ.

70. ಕೇಂದ್ರದ ಲೋಕಸೇವೆಗಳು; ಅಖಿಲ ಭಾರತ ಸೇವೆಗಳು; ಕೇಂದ್ರ ಲೋಕಸೇವಾ ಆಯೋಗ.

---

1. 1973ನೆಯ ಇಸವಿಯ ಸಂವಿಧಾನ (ಮೂವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 4ನೆಯ ಪ್ರಕರಣದ ಮೂಲಕ "ದೆಹಲಿಯ ವಿಶ್ವವಿದ್ಯಾನಿಲಯ ಮತ್ತು" ಎಂಬುದಕ್ಕೆ ಬದಲಾಗಿ (1.7.1974 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 27ನೆಯ ಪ್ರಕರಣದ ಮೂಲಕ "ಸಂಸತ್ತಿನಿಂದ ಕಾನೂನು ಮೂಲಕ ಘೋಷಿಸಿದ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

71. ಕೇಂದ್ರದ ನಿವೃತ್ತಿ ವೇತನಗಳು ಎಂದರೆ ಭಾರತ ಸರ್ಕಾರದಿಂದ ಅಥವಾ ಭಾರತದ ಸಂಚಿತ ನಿಧಿಯಿಂದ ಸಂದಾಯವಾಗಬೇಕಾದ ನಿವೃತ್ತಿವೇತನಗಳು.

72. ಸಂಸತ್ತಿಗೆ, ರಾಜ್ಯಗಳ ವಿಧಾನಮಂಡಲಗಳಿಗೆ ಮತ್ತು ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ ಪದಗಳಿಗೆ ಚುನಾವಣೆಗಳು; ಚುನಾವಣಾ ಆಯೋಗ.

73. ಸಂಸತ್ತಿನ ಸದಸ್ಯರ, ರಾಜ್ಯಸಭೆಯ ಸಭಾಪತಿಯ ಮತ್ತು ಉಪಸಭಾಪತಿಯ ಹಾಗೂ ಲೋಕಸಭೆಯ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಸಂಬಳಗಳು ಮತ್ತು ಭತ್ಯೆಗಳು.

74. ಸಂಸತ್ತಿನ ಪ್ರತಿಯೊಂದು ಸದನದ ಮತ್ತು ಪ್ರತಿಯೊಂದು ಸದನದ ಸದಸ್ಯರ ಮತ್ತು ಸಮಿತಿಗಳ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳು; ಸಂಸತ್ತಿನ ಸಮಿತಿಗಳ ಮುಂದೆ ಅಥವಾ ಸಂಸತ್ತು ನೇಮಿಸಿದ ಆಯೋಗಗಳ ಮುಂದೆ ಸಾಕ್ಷ್ಯವನ್ನು ಕೊಡಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ವ್ಯಕ್ತಿಗಳು ಹಾಜರಾಗುವಂತೆ ಅವರನ್ನು ಒತ್ತಾಯಿಸುವುದು.

75. ರಾಷ್ಟ್ರಪತಿಯ ಮತ್ತು ರಾಜ್ಯಪಾಲನ ಉಪಲಬ್ಧಿಗಳು, ಭತ್ಯಗಳು, ವಿಶೇಷಾಧಿಕಾರಗಳು ಮತ್ತು ಗೈರುಹಾಜರಿ ರಜೆಗೆ ಸಂಬಂಧಿಸಿದ ಹಕ್ಕುಗಳು; ಒಕ್ಕೂಟದ ಮಂತ್ರಿಗಳ ಸಂಬಳಗಳು ಮತ್ತು ಭತ್ಯಗಳು; ಲೆಕ್ಕನಿಯಂತ್ರಕ–ಹಾಗೂ–ಮಹಾಲೆಕ್ಕಪರಿಶೋಧಕನ ಸಂಬಳಗಳು, ಭತ್ಯಗಳು ಮತ್ತು ಗೈರುಹಾಜರಿ ರಜೆಗೆ ಸಂಬಂಧಿಸಿದ ಹಕ್ಕುಗಳು ಮತ್ತು ಇತರ ಸೇವಾ ಷರತ್ತುಗಳು.

76. ಒಕ್ಕೂಟದ ಮತ್ತು ರಾಜ್ಯಗಳ ಲೆಕ್ಕಪತ್ರಗಳ ಪರಿಶೋಧನೆ.

77. ಸರ್ವೋಚ್ಚ ನ್ಯಾಯಾಲಯದ ರಚನೆ, ವ್ಯವಸ್ಥೆ, ಅಧಿಕಾರ ವ್ಯಾಪ್ತಿ ಮತ್ತು ಅಧಿಕಾರಗಳು (ಅಂಥ ನ್ಯಾಯಾಲಯದ ನಿಂದನೆಯನ್ನೊಳಗೊಂಡು) ಮತ್ತು ಆ ನ್ಯಾಯಾಲಯದಲ್ಲಿ ತೆಗೆದುಕೊಳ್ಳುವ ಫೀಜುಗಳು, ಸರ್ವೋಚ್ಚನ್ಯಾಯಾಲಯದಲ್ಲಿ ವಕೀಲಿವೃತ್ತಿಯನ್ನು ನಡೆಯಿಸಲು ಹಕ್ಕುಳ್ಳ ವ್ಯಕ್ತಿಗಳು.

78. ಉಚ್ಚ ನ್ಯಾಯಾಲಯಗಳ ಅಧಿಕಾರಿಗಳು ಮತ್ತು ನೌಕರರಿಗೆ ಸಂಬಂಧಿಸಿದ ಉಪಬಂಧಗಳನ್ನು ಹೊರತುಪಡಿಸಿ ಉಚ್ಚ ನ್ಯಾಯಾಲಯಗಳ ರಚನೆ ಮತ್ತು ವ್ಯವಸ್ಥೆ [1][(ದೀರ್ಘರಜೆಯನ್ನೊಳಗೊಂಡು)]; ಉಚ್ಛ ನ್ಯಾಯಾಲಯಗಳಲ್ಲಿ ವಕೀಲಿವೃತ್ತಿಯನ್ನು ನಡೆಸಲು ಹಕ್ಕುಳ್ಳ ವ್ಯಕ್ತಿಗಳು.

[2][79. ಯಾವುದೇ ಒಕ್ಕೂಟ ರಾಜ್ಯಕ್ಷೇತ್ರಕ್ಕೆ ಒಂದು ಉಚ್ಛ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸುವುದು ಮತ್ತು ಒಂದು ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಒಕ್ಕೂಟ ರಾಜ್ಯಕ್ಷೇತ್ರದಿಂದ ಹೊರತುಪಡಿಸುವುದು.]

80. ಯಾವುದೇ ರಾಜ್ಯಕ್ಕೆ ಸೇರಿದ ಪೊಲೀಸ್ ದಳದ ಸದಸ್ಯರ ಅಧಿಕಾರಗಳನ್ನು ಮತ್ತು ಅಧಿಕಾರ ವ್ಯಾಪ್ತಿಯನ್ನು ಆ ರಾಜ್ಯದ ಹೊರಗಿನ ಯಾವುದೇ ಪ್ರದೇಶಕ್ಕೆ ವಿಸ್ತರಿಸುವುದು. ಆದರೆ ಅಂಥ ಅಧಿಕಾರಗಳನ್ನು ಮತ್ತು ಅಧಿಕಾರವ್ಯಾಪ್ತಿಯನ್ನು ಆ ರಾಜ್ಯದ ಹೊರಗಿನ ಯಾವುದೇ ಪ್ರದೇಶವು ಯಾವ ರಾಜ್ಯದಲ್ಲಿರುವುದೋ ಆ ರಾಜ್ಯ ಸರ್ಕಾರದ ಸಮ್ಮತಿಯಿಲ್ಲದೆ ಅಂಥ ಪ್ರದೇಶದಲ್ಲಿ ಒಂದು ರಾಜ್ಯದ ಪೊಲೀಸರು ಚಲಾಯಿಸುವುದಕ್ಕೆ ಅವಕಾಶವಿರುವಂತೆ ವಿಸ್ತರಿಸತಕ್ಕದ್ದಲ್ಲ. ಯಾವುದೇ ರಾಜ್ಯಕ್ಕೆ ಸೇರಿದ ಪೊಲೀಸ್ ದಳದ ಸದಸ್ಯರ ಅಧಿಕಾರಗಳನ್ನು ಮತ್ತು ಅಧಿಕಾರ ವ್ಯಾಪ್ತಿಯನ್ನು ಆ ರಾಜ್ಯದ ಹೊರಗಿನ ರೈಲ್ವೆ ಪ್ರದೇಶಗಳಿಗೆ ವಿಸ್ತರಿಸುವುದು.

81. ಅಂತರ ರಾಜ್ಯ ವಲಸೆ; ಅಂತರ ರಾಜ್ಯಗಳಲ್ಲಿ ರೋಗಿ ಸಂಸರ್ಗ ನಿಷೇಧ ಸ್ಥಳಗಳು.

82. ಕೃಷಿ ವರಮಾನವನ್ನು ಹೊರತುಪಡಿಸಿ ಇತರ ವರಮಾನದ ಮೇಲಿನ ತೆರಿಗೆಗಳು.

83. ರಫ್ತು ಸುಂಕಗಳು ಸೇರಿದಂತೆ ಸೀಮಾ ಸುಂಕಗಳು.

84. (ಎ) ಮನುಷ್ಯರ ಸೇವನೆಗಾಗಿ ಮದ್ಯಸಾರಯುಕ್ತ ಮದ್ಯಗಳನ್ನು;

(ಬಿ) ಅಫೀಮು, ಭಾರತೀಯ ಗಾಂಜಾ ಮತ್ತು ಇತರ ನಿದ್ರಾಜನಕ ಔಷಧಿಗಳು ಮತ್ತು ನಿದ್ರಾಜನಕಗಳನ್ನು

– ಹೊರತುಪಡಿಸಿ, ಈ ನಮೂದಿನ (ಬಿ) ಉಪ-ಪ್ಯಾರಾದಲ್ಲಿ ನಮೂದಿಸಿದ ಮದ್ಯಸಾರ ಅಥವಾ ಯಾವುದೇ ದ್ರವ್ಯವನ್ನು ಒಳಗೊಂಡಿರುವ ಮತ್ತು ಔಷಧೀಯ ಅಥವಾ ಪ್ರಸಾಧನ ಸಾಮಗ್ರಿಗಳನ್ನು ಒಳಗೊಂಡಂತೆ ಹಾಗೂ ಭಾರತದಲ್ಲಿ ತಯಾರಾದ ಅಥವಾ ಉತ್ಪಾದಿಸಲಾದ ಹೊಗೆಸೊಪ್ಪು ಮತ್ತು ಇತರ ಸರಕುಗಳ ಮೇಲಿನ ಉತ್ಪಾದನಾ ಸುಂಕಗಳು.

---

1. 1963ನೆಯ ಇಸವಿಯ ಸಂವಿಧಾನ (ಹದಿನೈದನೆಯ ತಿದ್ದುಪಡಿ) ಅಧಿನಿಯಮದ 12ನೆಯ ಪ್ರಕರಣದ ಮೂಲಕ (ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 29ನೆಯ ಪ್ರಕರಣದ ಹಾಗೂ ಅನುಸೂಚಿಯ ಮೂಲಕ 79ನೇ ನಮೂದಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

85. ನಿಗಮ ತೆರಿಗೆ.

86. ವ್ಯಕ್ತಿಗಳ ಮತ್ತು ಕಂಪನಿಗಳ ಆಸ್ತಿಗಳ, ಕೃಷಿಭೂಮಿಯನ್ನು ಹೊರತುಪಡಿಸಿ ಬಂಡವಾಳ ಮೌಲ್ಯದ ಮೇಲಿನ ತೆರಿಗೆಗಳು; ಕಂಪನಿಗಳ ಬಂಡವಾಳದ ಮೇಲಿನ ತೆರಿಗೆಗಳು.

87. ಕೃಷಿಭೂಮಿಯನ್ನು ಹೊರತುಪಡಿಸಿ, ಇತರ ಸ್ವತ್ತಿಗೆ ಸಂಬಂಧಿಸಿದಂತೆ ಎಸ್ಟೇಟ್ ಸುಂಕ.

88. ಕೃಷಿಭೂಮಿಯನ್ನು ಹೊರತುಪಡಿಸಿ, ಇತರ ಸ್ವತ್ತಿನ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಸುಂಕಗಳು.

89. ರೈಲು, ಸಮುದ್ರ ಅಥವಾ ವಾಯು ಮಾರ್ಗವಾಗಿ ಸಾಗಣೆಯಾಗುವ ಸರಕುಗಳ ಅಥವಾ ವ್ಯಕ್ತಿಗಳ ಮೇಲಿನ ಸೀಮಾ ತೆರಿಗೆಗಳು; ರೈಲ್ವೆ ಪ್ರಯಾಣ ದರಗಳು ಮತ್ತು ಸಾಗಣೆ ದರಗಳ ಮೇಲಿನ ತೆರಿಗೆಗಳು.

90. ಸ್ಟಾಂಪು ಸುಂಕಗಳನ್ನು ಹೊರತುಪಡಿಸಿ, ಸ್ಟಾಕ್‌ಎಕ್ಸ್‌ಚೇಂಜುಗಳ ಮತ್ತು ವಾಯಿದೆ ಪೇಟೆಗಳ ವ್ಯವಹಾರಗಳ ಮೇಲಿನ ತೆರಿಗೆಗಳು.

91. ವಿನಿಮಯ ಪತ್ರಗಳು, ಚೆಕ್ಕುಗಳು, ಪ್ರಾಮಿಸರಿನೋಟುಗಳು, ವಹನ ಪತ್ರಗಳು, ನಂಬಿಕೆ ಪತ್ರಗಳು, ವಿಮೆ ಪಾಲಿಸಿಗಳು, ಷೇರುಗಳ ವರ್ಗಾವಣೆ, ಡಿಬೆಂಚರುಗಳು, ಪ್ರಾಕ್ಸಿಗಳು ಮತ್ತು ಜಮೆಗಳಿಗೆ ಸಂಬಂಧಿಸಿದಂತೆ ಸ್ಟಾಂಪು ಸುಂಕದ ದರಗಳು.

92. ವೃತ್ತಪತ್ರಿಕೆಗಳ ಮಾರಾಟ ಅಥವಾ ಖರೀದಿಯ ಮೇಲಿನ ಮತ್ತು ಅವುಗಳಲ್ಲಿ ಪ್ರಕಟವಾಗುವ ಜಾಹೀರಾತುಗಳ ಮೇಲಿನ ತೆರಿಗೆಗಳು.

[1][92ಎ. ವೃತ್ತಪತ್ರಿಕೆಗಳನ್ನು ಹೊರತುಪಡಿಸಿ ಇತರ ಸರಕುಗಳ ಮಾರಾಟ ಅಥವಾ ಖರೀದಿಯು ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಕ್ರಮದಲ್ಲಿ ನಡೆಯುವಾಗ, ಅಂಥ ಮಾರಾಟದ ಅಥವಾ ಖರೀದಿಯ ಮೇಲಿನ ತೆರಿಗೆಗಳು.]

[2][92ಬಿ. ಸರಕುಗಳ ರವಾನೆಯು (ಅಂಥ ರವಾನೆಯು ಅದನ್ನು ಮಾಡುವವನಿಗಾಗಿರಲಿ ಅಥವಾ ಇತರ ಯಾರೇ ವ್ಯಕ್ತಿಗಾಗಿರಲಿ), ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಕ್ರಮದಲ್ಲಿ ನಡೆಯುವಾಗ, ಅಂಥ ರವಾನೆಯ ಮೇಲಿನ ತೆರಿಗೆಗಳು.]

[*][92ಸಿ. ಸೇವೆಗಳ ಮೇಲಿನ ತೆರಿಗೆಗಳು]

93. ಈ ಪಟ್ಟಿಯಲ್ಲಿನ ಯಾವುದೇ ವಿಷಯಕ್ಕೆ ಸಂಬಂಧಿಸಿದ ಕಾನೂನುಗಳಿಗೆ ವಿರುದ್ಧವಾದ ಅಪರಾಧಗಳು.

94. ಈ ಪಟ್ಟಿಯಲ್ಲಿನ ಯಾವುದೇ ವಿಷಯದ ಉದ್ದೇಶಕ್ಕಾಗಿ ವಿಚಾರಣೆಗಳು, ಸಮೀಕ್ಷೆಗಳು ಮತ್ತು ಅಂಕಿ-ಅಂಶಗಳು.

95. ಈ ಪಟ್ಟಿಯಲ್ಲಿನ ಯಾವುದೇ ವಿಷಯದ ಬಗ್ಗೆ ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ಉಳಿದ ಎಲ್ಲ ನ್ಯಾಯಾಲಯಗಳ ಅಧಿಕಾರವ್ಯಾಪ್ತಿ ಮತ್ತು ಅಧಿಕಾರಗಳು; ನೌಕಾದಳದ ಅಧಿಕಾರವ್ಯಾಪ್ತಿ.

96. ಈ ಪಟ್ಟಿಯಲ್ಲಿನ ಯಾವುದೇ ವಿಷಯಕ್ಕೆ ಸಂಬಂಧಿಸಿದ ಫೀಜುಗಳು ಆದರೆ ಯಾವುದೇ ನ್ಯಾಯಾಲಯದಲ್ಲಿ ತೆಗೆದುಕೊಳ್ಳುವ ಫೀಜುಗಳು ಸೇರುವುದಿಲ್ಲ.

97. ಪಟ್ಟಿ II ರಲ್ಲಿ ಅಥವಾ ಪಟ್ಟಿ III ರಲ್ಲಿ ನಮೂದಿಸಿಲ್ಲದ ಯಾವುದೇ ತೆರಿಗೆಯನ್ನೊಳಗೊಂಡು, ಆ ಪಟ್ಟಿಗಳಲ್ಲಿ ನಮೂದಿಸಿರದ ಯಾವುದೇ ಇತರ ವಿಷಯ.

---

1. 1956ನೇ ಇಸವಿಯ ಸಂವಿಧಾನ (ಆರನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 1982ನೇ ಇಸವಿಯ ಸಂವಿಧಾನ (ನಲವತ್ತಾರನೆಯ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ (2.2.1983 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

* 2003 ನೆಯ ಇಸವಿಯ ಸಂವಿಧಾನ (ಎಂಬತ್ತೆಂಟನೆಯ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ ಸೇರಿಸಲಾಗಿದೆ (ಇದು ಇನ್ನೂ ಜಾರಿಗೆ ಬಂದಿರುವುದಿಲ್ಲ, ದಿನಾಂಕವನ್ನು ನಂತರ ಅಧಿಸೂಚಿಸಲಾಗುವುದು).

## ಪಟ್ಟಿ II – ರಾಜ್ಯಪಟ್ಟಿ

1. ಸಾರ್ವಜನಿಕ ಸುವ್ಯವಸ್ಥೆ (ಆದರೆ ಸಿವಿಲ್ ಅಧಿಕಾರ ವರ್ಗದ ಸಹಾಯಕ್ಕಾಗಿ [1][ಒಕ್ಕೂಟದ ನೌಕಾ, ಭೂ ಅಥವಾ ವಾಯುದಳವನ್ನು ಅಥವಾ ಇತರ ಯಾವುದೇ ಸಶಸ್ತ್ರದಳವನ್ನು ಅಥವಾ ಒಕ್ಕೂಟದ ನಿಯಂತ್ರಣಕ್ಕೊಳಪಟ್ಟಿರುವ ಇತರ ಯಾವುದೇ ದಳವನ್ನು ಅಥವಾ ಅದರ ಯಾವುದೇ ತುಕಡಿ ಅಥವಾ ಘಟಕದ ಬಳಕೆಯನ್ನು] ಹೊರತುಪಡಿಸಿ.)

[2][2. ಪಟ್ಟಿ I ರ 2ಎ ನಮೂದಿನ ಉಪಬಂಧಗಳಿಗೆ ಒಳಪಟ್ಟು (ರೈಲ್ವೆ ಮತ್ತು ಗ್ರಾಮ ಪೊಲೀಸ್ ಒಳಗೊಂಡು) ಪೊಲೀಸು.]

3. ಉಚ್ಚ ನ್ಯಾಯಾಲಯದ [3] * * * ಅಧಿಕಾರಿಗಳು ಮತ್ತು ನೌಕರರು; ಬಾಡಿಗೆ ಮತ್ತು ರಾಜಸ್ವ ನ್ಯಾಯಾಲಯಗಳಲ್ಲಿನ ಪ್ರಕ್ರಿಯೆ; ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ಇತರ ಎಲ್ಲ ನ್ಯಾಯಾಲಯಗಳಲ್ಲಿ ತೆಗೆದುಕೊಳ್ಳುವ ಫೀಜುಗಳು.

4. ಕಾರಾಗೃಹಗಳು, ಸುಧಾರಣಾಲಯಗಳು, ಬೋರ್ಸ್ಟಲ್ ಸಂಸ್ಥೆಗಳು ಮತ್ತು ಅದೇ ಬಗೆಯ ಇತರ ಸಂಸ್ಥೆಗಳು ಮತ್ತು ಅವುಗಳಲ್ಲಿ ತಡೆಹಿಡಿದಿರಿಸಿರುವ ವ್ಯಕ್ತಿಗಳು, ಕಾರಾಗೃಹಗಳ ಮತ್ತು ಇತರ ಸಂಸ್ಥೆಗಳ ಬಳಕೆಗಾಗಿ ಇತರ ರಾಜ್ಯಗಳೊಡನೆ ಏರ್ಪಡಿಸಿಕೊಳ್ಳುವ ವ್ಯವಸ್ಥೆಗಳು.

5. ಸ್ಥಳೀಯ ಸರ್ಕಾರ ಎಂದರೆ, ಪೌರ ನಿಗಮಗಳ, ಅಭಿವೃದ್ಧಿ ವಿಶ್ವಸ್ಥ ಮಂಡಲಿಗಳ, ಜಿಲ್ಲಾ ಮಂಡಲಿಗಳ, ಗಣಿ ವಸತಿ ಪ್ರಾಧಿಕಾರಗಳ ಮತ್ತು ಸ್ಥಳೀಯ ಸ್ವಯಂ ಆಡಳಿತದ ಅಥವಾ ಗ್ರಾಮ ಆಡಳಿತದ ಉದ್ದೇಶಕ್ಕಾಗಿ ಇತರ ಸ್ಥಳೀಯ ಪ್ರಾಧಿಕಾರಗಳ ರಚನೆ ಮತ್ತು ಅವುಗಳ ಅಧಿಕಾರ.

6. ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ; ಆಸ್ಪತ್ರೆಗಳು ಮತ್ತು ಔಷಧಾಲಯಗಳು.

7. ತೀರ್ಥಯಾತ್ರೆಗಳು, ಭಾರತದ ಹೊರಗಿನ ಸ್ಥಳಗಳಿಗೆ ಕೈಗೊಳ್ಳಲಾಗುವ ತೀರ್ಥಯಾತ್ರೆಗಳನ್ನು ಹೊರತುಪಡಿಸಿ.

8. ಮಾದಕ ಮದ್ಯಗಳು, ಎಂದರೆ ಮಾದಕ ಮದ್ಯಗಳ ಉತ್ಪಾದನೆ, ತಯಾರಿಕೆ, ಸ್ವಾಧೀನ, ಸಾಗಣೆ, ಖರೀದಿ ಮತ್ತು ಮಾರಾಟ.

9. ಅಸಮರ್ಥರಿಗೆ ಮತ್ತು ನಿಯೋಜನೆಗೆ ಅನರ್ಹರಾದವರಿಗೆ ಪರಿಹಾರ.

10. ದಫನ್ ಮತ್ತು ಸ್ಮಶಾನಗಳು; ಶವದಹನ ಮತ್ತು ಸುಡುಗಾಡುಗಳು.

[4]* * * * *

12. ರಾಜ್ಯವು ನಿಯಂತ್ರಿಸುವ ಅಥವಾ ಹಣಕಾಸು ಒದಗಿಸುವ ಗ್ರಂಥಾಲಯಗಳು, ವಸ್ತುಸಂಗ್ರಹಾಲಯಗಳು ಅಥವಾ ಅದೇ ಬಗೆಯ ಇತರ ಸಂಸ್ಥೆಗಳು; ರಾಷ್ಟ್ರೀಯ ಮಹತ್ವವುಳ್ಳವೆಂದು [5][ಸಂಸತ್ತು ಮಾಡಿದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಘೋಷಿಸಲಾದವುಗಳನ್ನು] ಹೊರತುಪಡಿಸಿ, ಇತರ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ದಾಖಲೆಗಳು.

13. ಸಂಪರ್ಕಸಾಧನಗಳು, ಎಂದರೆ ರಸ್ತೆಗಳು, ಸೇತುವೆಗಳು, ಹಾಯ್ಗಡಗಳು ಮತ್ತು ಪಟ್ಟಿ I ರಲ್ಲಿ ನಿರ್ದಿಷ್ಟಪಡಿಸಿರದ ಇತರ ಸಂಪರ್ಕಸಾಧನಗಳು; ಮುನಿಸಿಪಲ್ ಟ್ರಾಮ್‌ವೇಗಳು, ರೋಪ್‌ವೇಗಳು; ಜಲಮಾರ್ಗಗಳಿಗೆ ಸಂಬಂಧಿಸಿದಂತೆ ಪಟ್ಟಿ Iರ ಮತ್ತು ಪಟ್ಟಿ IIIರ ಉಪಬಂಧಗಳಿಗೆ ಒಳಪಟ್ಟು ಒಳನಾಡಿನ ಜಲಮಾರ್ಗಗಳು ಮತ್ತು ಅವುಗಳ ಮೇಲಿನ ಸಂಚಾರ; ಯಂತ್ರಚಾಲಿತ ವಾಹನಗಳನ್ನು ಹೊರತುಪಡಿಸಿ ಇತರ ವಾಹನಗಳು.

---

1. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 57ನೇ ಪ್ರಕರಣದ ಮೂಲಕ ಕೆಲವು ಪದಗಳಿಗೆ ಬದಲಾಗಿ (3-1-1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಅದೇ ಅಧಿನಿಯಮದ 57ನೇ ಪ್ರಕರಣದ ಮೂಲಕ 2ನೇ ನಮೂದಿಗೆ ಬದಲಾಗಿ (3-1-1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
3. ಅದೇ ಅಧಿನಿಯಮದ 57ನೇ ಪ್ರಕರಣದ ಮೂಲಕ ಕೆಲವು ಪದಗಳನ್ನು (3-1-1977ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
4. ಅದೇ ಅಧಿನಿಯಮದ 57ನೇ ಪ್ರಕರಣದ ಮೂಲಕ 11ನೆಯ ನಮೂದನ್ನು (3-1-1977ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
5. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 27ನೆಯ ಪ್ರಕರಣದ ಮೂಲಕ "ಸಂಸತ್ತಿನಿಂದ ಕಾನೂನಿನ ಮೂಲಕ ಘೋಷಿತವಾಗಿರತಕ್ಕವನ್ನು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

14. ಕೃಷಿ ಶಿಕ್ಷಣ ಮತ್ತು ಸಂಶೋಧನೆ, ಕೀಟಗಳಿಂದ ರಕ್ಷಣೆ ಮತ್ತು ಸಸ್ಯ ರೋಗಗಳ ನಿವಾರಣೆ ಸೇರಿದಂತೆ ಕೃಷಿ.

15. ಪಶುಸಂಪತ್ತಿನ ಪರಿರಕ್ಷಣೆ, ಸಂರಕ್ಷಣೆ ಮತ್ತು ಸುಧಾರಣೆ ಮತ್ತು ಪಶುರೋಗಗಳ ನಿವಾರಣೆ; ಪಶುವೈದ್ಯಕೀಯ ತರಬೇತಿ ಮತ್ತು ವೃತ್ತಿ.

16. ದನದ ದೊಡ್ಡಿಗಳು ಮತ್ತು ಪಶುಗಳ ಅತಿಕ್ರಮ ಪ್ರವೇಶ ತಡೆಗಟ್ಟುವುದು.

17. ಪಟ್ಟಿ Iರ 56ನೆಯ ನಮೂದನೆಯ ಉಪಬಂಧಗಳಿಗೆ ಒಳಪಟ್ಟು ನೀರು, ಎಂದರೆ ನೀರು ಪೂರೈಕೆ, ನೀರಾವರಿ ಮತ್ತು ನಾಲೆಗಳು, ಕಾಲುವೆ ಮತ್ತು ಒಡ್ಡುಗಳು, ಜಲಸಂಗ್ರಹಣಾಗಾರ ಮತ್ತು ಜಲವಿದ್ಯುತ್.

18. ಭೂಮಿ ಎಂದರೆ, ಭೂಮಿಯಲ್ಲಿನ ಅಥವಾ ಅದರ ಮೇಲಿನ ಹಕ್ಕುಗಳು, ಭೂ ಒಡೆಯನ ಮತ್ತು ಗೇಣಿದಾರನ ಸಂಬಂಧವನ್ನೊಳಗೊಂಡು ಭೂ ಹಿಡುವಳಿಗಳು ಮತ್ತು ಗೇಣಿವಸೂಲಿ; ಕೃಷಿ ಭೂಮಿಯ ವರ್ಗಾವಣೆ ಮತ್ತು ಪರಭಾರೆ; ಭೂ ಮೇಲ್ಪಾಟು; ಮತ್ತು ಕೃಷಿ ಸಾಲಗಳು, ಕಾಲೊನಿ ಸ್ಥಾಪನೆ.

[1]* * * * * *

21. ಮೀನುಗಾರಿಕೆ.

22. ಪಟ್ಟಿ Iರ 34ನೆಯ ನಮೂದಿನ ಉಪಬಂಧಗಳಿಗೆ ಒಳಪಟ್ಟು ಪ್ರತಿಪಾಲಿತರ ನ್ಯಾಯಾಲಯಗಳು; ಪೂರ್ವಾಧಿಯುಳ್ಳ ಮತ್ತು ಜಪ್ತಿಯಾದ ಎಸ್ಟೇಟುಗಳು.

23. ಒಕ್ಕೂಟ ನಿಯಂತ್ರಣದಲ್ಲಿ ಗಣಿಗಳ ವಿನಿಯಮ ಮತ್ತು ಖನಿಜಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಪಟ್ಟಿ Iರ ಉಪಬಂಧಗಳಿಗೆ ಒಳಪಟ್ಟು, ಗಣಿಗಳ ನಿಯಂತ್ರಣ ಮತ್ತು ಖನಿಜಗಳ ಅಭಿವೃದ್ಧಿ.

24. ಪಟ್ಟಿ Iರ [2][7ನೆಯ ಮತ್ತು 52ನೆಯ ನಮೂದುಗಳ] ಉಪಬಂಧಗಳಿಗೆ ಒಳಪಟ್ಟು ಕೈಗಾರಿಕೆಗಳು.

25. ಅನಿಲ ಮತ್ತು ಅನಿಲ ಕಾರ್ಖಾನೆಗಳು.

26. ಪಟ್ಟಿ IIIರ 33ನೆಯ ನಮೂದಿನ ಉಪಬಂಧಗಳಿಗೆ ಒಳಪಟ್ಟು ರಾಜ್ಯದೊಳಗಿನ ವ್ಯಾಪಾರ ಮತ್ತು ವಾಣಿಜ್ಯ.

27. ಪಟ್ಟಿ IIIರ 33ನೆಯ ನಮೂದಿನ ಉಪಬಂಧಗಳಿಗೆ ಒಳಪಟ್ಟು ಸರಕುಗಳ ಉತ್ಪಾದನೆ, ಸರಬರಾಜು ಮತ್ತು ವಿತರಣೆ.

28. ಮಾರುಕಟ್ಟೆಗಳು ಮತ್ತು ಸಂತೆಗಳು.

[1]* * * * * * *

30. ಲೇವಾದೇವಿ ಮತ್ತು ಲೇವಾದೇವಿಗಾರರು; ಕೃಷಿ ಋಣ ಪರಿಹಾರ.

31. ತಂಗುದಾಣಗಳು ಮತ್ತು ತಂಗುದಾಣ ಪಾಲಕರು.

32. ಪಟ್ಟಿ Iರಲ್ಲಿ ನಿರ್ದಿಷ್ಟಪಡಿಸಿರುವ ನಿಗಮಗಳನ್ನು ಹೊರತುಪಡಿಸಿ ಇತರ ನಿಗಮಗಳ ಮತ್ತು ವಿಶ್ವವಿದ್ಯಾನಿಲಯಗಳ ನಿಗಮನ, ನಿಯಂತ್ರಣ ಮತ್ತು ಸಮಾಪನ; ಅನಿಗಮಿತ ವ್ಯಾಪಾರ, ಸಾಹಿತ್ಯಕ, ವೈಜ್ಞಾನಿಕ, ಧಾರ್ಮಿಕ ಸಂಸ್ಥೆಗಳು ಮತ್ತು ಇತರ ಸಂಘ ಸಂಸ್ಥೆಗಳು ಹಾಗೂ ಸಹಕಾರ ಸಂಘಗಳು.

---

1. 1976ನೆಯ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 57ನೇ ಪ್ರಕರಣದ ಮೂಲಕ 19, 20 ಮತ್ತು 29ನೇ ನಮೂದುಗಳನ್ನು (3-1-1977ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.
2. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 28ನೆಯ ಪ್ರಕರಣದ ಮೂಲಕ "52ನೆಯ ನಮೂದಿನ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

33. ರಂಗಮಂದಿರಗಳು ಮತ್ತು ನಾಟಕ ಪ್ರದರ್ಶನಗಳು; ಪಟ್ಟಿ Iರ 60ನೆಯ ನಮೂದಿನ ಉಪಬಂಧಗಳಿಗೊಳಪಟ್ಟು ಸಿನಿಮಾಗಳು, ಕ್ರೀಡೆಗಳು, ಮನೋರಂಜನೆಗಳು ಮತ್ತು ವಿನೋದಗಳು.

34. ಬಾಜಿ ಕಟ್ಟುವುದು ಮತ್ತು ಜೂಜು.

35. ರಾಜ್ಯದಲ್ಲಿ ನಿಹಿತವಾಗಿರುವ ಅಥವಾ ಅದರ ಸ್ವಾಧೀನದಲ್ಲಿರುವ ಕಾಮಗಾರಿಗಳು, ಭೂಮಿಗಳು ಮತ್ತು ಕಟ್ಟಡಗಳು.

[1] * * * *

37. ಸಂಸತ್ತು ಮಾಡಿದ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು ರಾಜ್ಯದ ವಿಧಾನಮಂಡಲಕ್ಕೆ ನಡೆಸುವ ಚುನಾವಣೆಗಳು.

38. ರಾಜ್ಯದ ವಿಧಾನಮಂಡಲದ ಸದಸ್ಯರ ಮತ್ತು ವಿಧಾನಸಭೆಯ ಅಧ್ಯಕ್ಷರ ಮತ್ತು ವಿಧಾನಪರಿಷತ್ತು ಇರುವಲ್ಲಿ ಅದರ ಸಭಾಪತಿಯ ಮತ್ತು ಉಪಸಭಾಪತಿಯ ಸಂಬಳಗಳು ಮತ್ತು ಭತ್ಯಗಳು.

39. ವಿಧಾನಸಭೆಯ ಮತ್ತು ಅದರ ಸದಸ್ಯರ ಹಾಗೂ ಸಮಿತಿಗಳ ಮತ್ತು ವಿಧಾನಪರಿಷತ್ತು ಇದ್ದಲ್ಲಿ, ಆ ಪರಿಷತ್ತಿನ ಮತ್ತು ಅದರ ಸದಸ್ಯರ ಹಾಗೂ ಸಮಿತಿಗಳ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳು; ರಾಜ್ಯದ ವಿಧಾನ ಮಂಡಲದ ಸಮಿತಿಗಳ ಮುಂದೆ ಸಾಕ್ಷ್ಯ ಕೊಡಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ವ್ಯಕ್ತಿಗಳು ಹಾಜರಾಗುವಂತೆ ಅವರನ್ನು ಒತ್ತಾಯಿಸುವುದು.

40. ರಾಜ್ಯದ ಮಂತ್ರಿಗಳ ಸಂಬಳಗಳು ಮತ್ತು ಭತ್ಯಗಳು.

41. ರಾಜ್ಯ ಲೋಕಸೇವೆಗಳು; ರಾಜ್ಯ ಲೋಕಸೇವಾ ಆಯೋಗ.

42. ರಾಜ್ಯ ನಿವೃತ್ತಿ ವೇತನಗಳು ಎಂದರೆ ರಾಜ್ಯದಿಂದ ಅಥವಾ ಅದರ ಸಂಚಿತ ನಿಧಿಯಿಂದ ಸಂದಾಯವಾಗಬೇಕಾದ ನಿವೃತ್ತಿ ವೇತನಗಳು.

43. ರಾಜ್ಯದ ಸಾರ್ವಜನಿಕ ಋಣ.

44. ನಿಕ್ಷೇಪ ನಿಧಿ.

45. ಕಂದಾಯದ ನಿರ್ಧರಣೆ ಮತ್ತು ವಸೂಲಿ, ಭೂ ದಾಖಲೆಗಳ ನಿರ್ವಹಣೆ, ಕಂದಾಯದ ಉದ್ದೇಶಗಳಿಗಾಗಿ ಭೂ ಮಾಪನ ಮತ್ತು ಹಕ್ಕು ದಾಖಲೆಗಳನ್ನೊಳಗೊಂಡು ಭೂಕಂದಾಯ ಮತ್ತು ಭೂ ಕಂದಾಯದ ಪರಭಾರೆ.

46. ಕೃಷಿ ಆದಾಯದ ಮೇಲಿನ ತೆರಿಗೆಗಳು.

47. ಕೃಷಿ ಭೂಮಿಯ ಉತ್ತರಾಧಿಕಾರದ ಸಂಬಂಧದಲ್ಲಿ ಸುಂಕಗಳು.

48. ಕೃಷಿ ಭೂಮಿಯ ಸಂಬಂಧದಲ್ಲಿ ಎಸ್ಟೇಟ್ ಸುಂಕ.

49. ಭೂಮಿಗಳ ಮತ್ತು ಕಟ್ಟಡಗಳ ಮೇಲಿನ ತೆರಿಗೆಗಳು.

50. ಖನಿಜ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಂಸತ್ತು ಕಾನೂನಿನ ಮೂಲಕ ವಿಧಿಸಿದ ಯಾವುದೇ ಪರಿಮಿತಿಗಳಿಗೆ ಒಳಪಟ್ಟು ಖನಿಜ ಹಕ್ಕುಗಳ ಮೇಲಿನ ತೆರಿಗೆಗಳು.

51. ರಾಜ್ಯದಲ್ಲಿ ತಯಾರಾದ ಅಥವಾ ಉತ್ಪಾದಿತವಾದ ಕೆಳಕಂಡ ಸರಕುಗಳ ಮೇಲಿನ ಉತ್ಪಾದನಾ ಸುಂಕಗಳು ಮತ್ತು ಭಾರತದ ಬೇರೆ ಕಡೆಗಳಲ್ಲಿ ತಯಾರಾದ ಅಥವಾ ಉತ್ಪಾದಿತವಾದ ಅದೇ ಬಗೆಯ ಸರಕುಗಳ ಮೇಲೆ, ಅದೇ ದರದಲ್ಲಿ ಅಥವಾ ಇನ್ನೂ ಕಡಿಮೆಯ ದರದಲ್ಲಿ ಪ್ರತಿ-ಸುಂಕಗಳು:-

(ಎ) ಮನುಷ್ಯರ ಸೇವನೆಗಾಗಿ ಮದ್ಯಸಾರಯುಕ್ತ ಮದ್ಯಗಳು;

(ಬಿ) ಅಫೀಮು, ಭಾರತೀಯ ಗಾಂಜಾ ಮತ್ತು ಇತರ ನಿದ್ರಾಜನಕ ಔಷಧಿಗಳು ಹಾಗೂ ನಿದ್ರಾಜನಕಗಳು,

– ಆದರೆ ಈ ನಮೂದಿನ (ಬಿ) ಉಪ-ಪ್ಯಾರಾದಲ್ಲಿ ನಮೂದಿಸಿದ ಮದ್ಯಸಾರ ಅಥವಾ ಇತರ ಯಾವುದೇ ದ್ರವ್ಯವನ್ನು ಒಳಗೊಂಡಿರುವ ಔಷಧೀಯ ಅಥವಾ ಪ್ರಸಾಧನ ಸಾಮಗ್ರಿಗಳನ್ನು ಹೊರತುಪಡಿಸಿ.

---

1. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 26ನೇ ಪ್ರಕರಣದ ಮೂಲಕ 36ನೆಯ ನಮೂದನ್ನು ಬಿಟ್ಟುಬಿಡಲಾಗಿದೆ.

52. ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಯಾವುದೇ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲಿನ ತೆರಿಗೆಗಳು.

53. ವಿದ್ಯುಚ್ಛಕ್ತಿ ಬಳಕೆ ಅಥವಾ ಮಾರಾಟದ ಮೇಲಿನ ತೆರಿಗೆಗಳು.

[1][54. ಪಟ್ಟಿ I ರ 92ಎ ನಮೂದಿನ ಉಪಬಂಧಗಳಿಗೆ ಒಳಪಟ್ಟು ವೃತ್ತಪತ್ರಿಕೆಯನ್ನು ಹೊರತುಪಡಿಸಿ, ಇತರ ಸರಕುಗಳ ಮಾರಾಟ ಅಥವಾ ಖರೀದಿಯ ಮೇಲಿನ ತೆರಿಗೆಗಳು.]

55. ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ ಜಾಹೀರಾತುಗಳನ್ನು [2][ಮತ್ತು ಆಕಾಶವಾಣಿ ಅಥವಾ ದೂರದರ್ಶನದ ಮೂಲಕ ಪ್ರಸಾರವಾದ ಜಾಹೀರಾತುಗಳನ್ನು] ಹೊರತುಪಡಿಸಿ ಇತರ ಜಾಹೀರಾತುಗಳ ಮೇಲಿನ ತೆರಿಗೆಗಳು.

56. ರಸ್ತೆಯ ಅಥವಾ ಒಳನಾಡು ಜಲಮಾರ್ಗಗಳ ಮೂಲಕ ಸಾಗಿಸುವ ಸರಕುಗಳ ಅಥವಾ ಪ್ರಯಾಣಿಕರ ಮೇಲಿನ ತೆರಿಗೆಗಳು.

57. ಪಟ್ಟಿ IIIರ 35ನೆಯ ನಮೂದಿನ ಉಪಬಂಧಗಳಿಗೆ ಒಳಪಟ್ಟು ರಸ್ತೆಗಳಲ್ಲಿ ಬಳಸಲು ಯೋಗ್ಯವಾಗಿರುವ ವಾಹನಗಳು ಯಂತ್ರ ಚಾಲಿತವಾಗಿರಲಿ ಅಥವಾ ಇಲ್ಲದಿರಲಿ ಅವುಗಳನ್ನು ಮತ್ತು ಟ್ರಾಮ್ ಕಾರುಗಳನ್ನು ಒಳಗೊಂಡು, ವಾಹನಗಳ ಮೇಲಿನ ತೆರಿಗೆಗಳು.

58. ಪ್ರಾಣಿಗಳ ಮತ್ತು ದೋಣಿಗಳ ಮೇಲಿನ ತೆರಿಗೆಗಳು.

59. ದಾರಿ ಸುಂಕಗಳು.

60. ವೃತ್ತಿಗಳ, ವ್ಯಾಪಾರಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆಗಳು.

61. ತಲೆಗಂದಾಯಗಳು.

62. ಮನರಂಜನೆಗಳು, ವಿನೋದಗಳು, ಬಾಜಿ ಕಟ್ಟುವುದು ಮತ್ತು ಜೂಜಿನ ಮೇಲಿನ ತೆರಿಗೆಗಳನ್ನು ಒಳಗೊಂಡು ವಿಲಾಸಿ ತೆರಿಗೆಗಳು.

63. ಪಟ್ಟಿ Iರ ಉಪಬಂಧಗಳಲ್ಲಿ ನಿರ್ದಿಷ್ಟಪಡಿಸಿರುವ ದಸ್ತಾವೇಜುಗಳ ಸಂಬಂಧದಲ್ಲಿ ವಿಧಿಸತಕ್ಕ ಸ್ಟಾಂಪ್ ಸುಂಕದ ದರಗಳು.

64. ಈ ಪಟ್ಟಿಯಲ್ಲಿನ ಯಾವುದೇ ವಿಷಯಗಳಿಗೆ ಸಂಬಂಧಪಟ್ಟ ಕಾನೂನುಗಳ ವಿರುದ್ಧದ ಅಪರಾಧಗಳು.

65. ಈ ಪಟ್ಟಿಯಲ್ಲಿನ ಯಾವುವೇ ವಿಷಯಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ, ಇತರ ಎಲ್ಲ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ ಮತ್ತು ಅಧಿಕಾರಗಳು.

66. ಯಾವುದೇ ನ್ಯಾಯಾಲಯದಲ್ಲಿ ತೆಗೆದುಕೊಳ್ಳುವ ಫೀಜುಗಳನ್ನು ಹೊರತುಪಡಿಸಿ ಈ ಪಟ್ಟಿಯಲ್ಲಿನ ಯಾವುವೇ ಇತರ ವಿಷಯಗಳಿಗೆ ಸಂಬಂಧಿಸಿದ ಫೀಜುಗಳು.

---

1. 1956ನೆಯ ಇಸವಿಯ ಸಂವಿಧಾನ (ಆರನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ 54ನೆಯ ನಮೂದಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 57ನೇ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

## ಪಟ್ಟಿ III – ಸಮವರ್ತಿಪಟ್ಟಿ

1. ಈ ಸಂವಿಧಾನದ ಪ್ರಾರಂಭದಲ್ಲಿ ಭಾರತ ದಂಡ ಸಂಹಿತೆಯಲ್ಲಿ ಸೇರಿರುವ ಎಲ್ಲ ವಿಷಯಗಳನ್ನೂ ಒಳಗೊಂಡು, ಆದರೆ ಪಟ್ಟಿ I ರಲ್ಲಿ ಅಥವಾ ಪಟ್ಟಿ II ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯದ ಬಗೆಗಿನ ಕಾನೂನುಗಳಿಗೆ ವಿರುದ್ಧವಾದ ಅಪರಾಧಗಳನ್ನು ಹೊರತುಪಡಿಸಿ ಮತ್ತು ಸಿವಿಲ್ ಅಧಿಕಾರ ವರ್ಗದ ಸಹಾಯಕ್ಕಾಗಿ ಒಕ್ಕೂಟದ ನೌಕಾ, ಭೂ ಮತ್ತು ವಾಯುದಳಗಳ ಅಥವಾ ಇತರ ಯಾವುದೇ ಸಶಸ್ತ್ರ ದಳಗಳ ಬಳಕೆಯನ್ನು ಹೊರತುಪಡಿಸಿ, ಕ್ರಿಮಿನಲ್ ಕಾನೂನು.

2. ಈ ಸಂವಿಧಾನದ ಪ್ರಾರಂಭದಲ್ಲಿ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಸೇರಿರುವ ಎಲ್ಲ ವಿಷಯಗಳನ್ನು ಒಳಗೊಂಡು ದಂಡ ಪ್ರಕ್ರಿಯೆ.

3. ಒಂದು ರಾಜ್ಯದ ಭದ್ರತೆಗೆ, ಸಾರ್ವಜನಿಕ ಸುವ್ಯವಸ್ಥೆಯ ಪಾಲನೆಗೆ ಅಥವಾ ಜನಸಮುದಾಯಕ್ಕೆ ಅವಶ್ಯವಾದ ಸರಬರಾಜುಗಳನ್ನು ಮತ್ತು ಸೇವೆಗಳನ್ನು ನಿರ್ವಹಿಸುವುದಕ್ಕೆ ಸಂಬಂಧಪಟ್ಟ ಕಾರಣಗಳಿಗಾಗಿ ಪ್ರತಿಬಂಧಕ ಸ್ಥಾನಬದ್ಧತೆ, ಅಂಥ ಸ್ಥಾನಬದ್ಧತೆಗೆ ಒಳಪಡುವ ವ್ಯಕ್ತಿಗಳು.

4. ಬಂದಿಗಳನ್ನು, ಆಪಾದಿತ ವ್ಯಕ್ತಿಗಳನ್ನು ಮತ್ತು ಈ ಪಟ್ಟಿಯ 3ನೆಯ ನಮೂದಿನಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳಿಗಾಗಿ ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟಿರುವ ವ್ಯಕ್ತಿಗಳನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾಗಿಸುವುದು.

5. ವಿವಾಹ ಮತ್ತು ವಿವಾಹ ವಿಚ್ಛೇದನ; ಶಿಶುಗಳು ಮತ್ತು ಅಪ್ರಾಪ್ತವಯಸ್ಕರು; ದತ್ತು ಸ್ವೀಕಾರ; ಉಯಿಲುಗಳು, ಮರಣಶಾಸನ ಇಲ್ಲದಿರುವುದು ಮತ್ತು ಉತ್ತರಾಧಿಕಾರ; ಅವಿಭಕ್ತ ಕುಟುಂಬ ಮತ್ತು ವಿಭಜನೆ; ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಪಕ್ಷಕಾರರು ನ್ಯಾಯಿಕ ವ್ಯವಹರಣೆಯಲ್ಲಿ ಈ ಸಂವಿಧಾನದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ತಮ್ಮ ಮತಸಂಬಂಧವಾದ ಕಾನೂನಿಗೆ ಒಳಪಟ್ಟಿದ್ದರೋ ಅಂಥ ಎಲ್ಲ ವಿಷಯಗಳು.

6. ಕೃಷಿ ಭೂಮಿಯನ್ನು ಹೊರತುಪಡಿಸಿ ಇತರ ಸ್ವತ್ತಿನ ವರ್ಗಾವಣೆ; ಪತ್ರಗಳ ಮತ್ತು ದಸ್ತಾವೇಜುಗಳ ನೋಂದಣಿ.

7. ಪಾಲುಗಾರಿಕೆ, ಏಜೆನ್ಸಿ, ಸಾಗಣೆ ಕರಾರುಗಳು ಮತ್ತು ಇತರ ವಿಶೇಷ ರೀತಿಯ ಕರಾರುಗಳನ್ನೊಳಗೊಂಡು, ಆದರೆ ಕೃಷಿ ಭೂಮಿಗೆ ಸಂಬಂಧಿಸಿದ ಕರಾರುಗಳನ್ನು ಹೊರತುಪಡಿಸಿ, ಕರಾರುಗಳು.

8. ಕ್ರಮಾರ್ಹ ದೋಷಗಳು.

9. ದಿವಾಳಿತನ ಮತ್ತು ದಿವಾಳಿ.

10. ನ್ಯಾಸ ಮತ್ತು ನ್ಯಾಸಧಾರಿಗಳು.

11. ಅಡ್‌ಮಿನಿಸ್ಟ್ರೇಟರ್ಸ್– ಜನರಲ್ ಮತ್ತು ಅಫಿಷಿಯಲ್ ಟ್ರಸ್ಟಿಗಳು.

[1] [11ಎ. ನ್ಯಾಯಾಡಳಿತ, ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳನ್ನು ಹೊರತುಪಡಿಸಿ, ಉಳಿದ ಎಲ್ಲ ನ್ಯಾಯಾಲಯಗಳ ರಚನೆ ಮತ್ತು ವ್ಯವಸ್ಥೆ.]

12. ಸಾಕ್ಷ್ಯ ಮತ್ತು ಪ್ರಮಾಣ ವಚನಗಳು; ಕಾನೂನುಗಳಿಗೆ, ಸಾರ್ವಜನಿಕ ಕಾರ್ಯಗಳಿಗೆ ಮತ್ತು ದಾಖಲೆಗಳಿಗೆ ಮತ್ತು ನ್ಯಾಯಿಕ ವ್ಯವಹರಣೆಗಳಿಗೆ ಮಾನ್ಯತೆ.

13. ಈ ಸಂವಿಧಾನದ ಪ್ರಾರಂಭದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಸೇರಿರುವ ಎಲ್ಲ ವಿಷಯಗಳನ್ನು ಒಳಗೊಂಡು ಸಿವಿಲ್ ಪ್ರಕ್ರಿಯೆ, ಕಾಲಪರಿಮಿತಿ ಮತ್ತು ಮಧ್ಯಸ್ಥಿಕೆ.

14. ನ್ಯಾಯಾಲಯ ನಿಂದನೆ ಆದರೆ ಸರ್ವೋಚ್ಚ ನ್ಯಾಯಾಲಯದ ನಿಂದನೆ ಸೇರುವುದಿಲ್ಲ.

15. ಅಲೆಮಾರಿತನ; ಅಲೆಮಾರಿ ಮತ್ತು ವಲಸೆಹೋಗುವ ಬುಡಕಟ್ಟುಗಳು.

16. ಹುಚ್ಚು ಮತ್ತು ಮನೋವೈಕಲ್ಯ, ಹುಚ್ಚರನ್ನು ಮತ್ತು ಮನೋವಿಕಲರನ್ನು ಸೇರಿಸಿಕೊಳ್ಳುವ ಅಥವಾ ಅವರಿಗೆ ಚಿಕಿತ್ಸೆ ಕೊಡುವ ಸ್ಥಳಗಳು ಒಳಗೊಂಡಂತೆ.

---

1. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 57ನೇ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

17. ಪ್ರಾಣಿಹಿಂಸೆ ಪ್ರತಿಬಂಧ.

[1][17ಎ. ಅರಣ್ಯಗಳು.

17ಬಿ. ವನ್ಯಪ್ರಾಣಿಗಳ ಮತ್ತು ಪಕ್ಷಿಗಳ ಸಂರಕ್ಷಣೆ.]

18. ಆಹಾರ ಪದಾರ್ಥಗಳ ಮತ್ತು ಇತರ ಸರಕುಗಳ ಕಲಬೆರಕೆ.

19. ಅಫೀಮಿನ ಸಂಬಂಧದಲ್ಲಿ ಪಟ್ಟಿ Iರ 59ನೆಯ ನಮೂದಿನ ಉಪಬಂಧಗಳಿಗೆ ಒಳಪಟ್ಟು, ಮಾದಕವಸ್ತು ಮತ್ತು ವಿಷಗಳು.

20. ಆರ್ಥಿಕ ಮತ್ತು ಸಾಮಾಜಿಕ ಯೋಜನೆ.

[1][20ಎ. ಜನಸಂಖ್ಯಾ ನಿಯಂತ್ರಣ ಮತ್ತು ಕುಟುಂಬ ಯೋಜನೆ.]

21. ವಾಣಿಜ್ಯ ಮತ್ತು ಕೈಗಾರಿಕಾ ಏಕಸ್ವಾಮ್ಯಗಳು, ಸಂಯೋಜನೆಗಳು ಮತ್ತು ನ್ಯಾಸಗಳು.

22. ಕಾರ್ಮಿಕ ಸಂಘಗಳು; ಕೈಗಾರಿಕಾ ಮತ್ತು ಕಾರ್ಮಿಕ ವಿವಾದಗಳು.

23. ಸಾಮಾಜಿಕ ಭದ್ರತೆ ಮತ್ತು ಸಾಮಾಜಿಕ ವಿಮೆ; ಉದ್ಯೋಗ ಮತ್ತು ನಿರುದ್ಯೋಗ.

24. ಕೆಲಸಕ್ಕೆ ಪೂರಕವಾದ ಪರಿಸ್ಥಿತಿಗಳು, ಭವಿಷ್ಯ ನಿಧಿಗಳು, ನಿಯೋಜಕರ ಹೊಣೆಗಾರಿಕೆ, ಕೆಲಸಗಾರರ ನಷ್ಟಪರಿಹಾರ, ಅಶಕ್ತತೆ ಮತ್ತು ವೃದ್ಧಾಪ್ಯ ವೇತನಗಳು ಮತ್ತು ಪ್ರಸೂತಿ ಸೌಕರ್ಯಗಳು ಒಳಗೊಂಡಂತೆ ಕಾರ್ಮಿಕರ ಕಲ್ಯಾಣ.

[2][25. ಪಟ್ಟಿ Iರ 63, 64, 65 ಮತ್ತು 66ನೆಯ ನಮೂದುಗಳ ಉಪಬಂಧಗಳಿಗೊಳಪಟ್ಟು, ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ ಮತ್ತು ವಿಶ್ವವಿದ್ಯಾನಿಲಯಗಳೂ ಸೇರಿದಂತೆ ಶಿಕ್ಷಣ; ಕಾರ್ಮಿಕರ ವೃತ್ತಿ ಮತ್ತು ತಾಂತ್ರಿಕ ತರಬೇತಿ.]

26. ಕಾನೂನು, ವೈದ್ಯಕೀಯ ಮತ್ತು ಇತರ ವೃತ್ತಿಗಳು.

27. ಡೊಮಿನಿಯನ್ ಆಫ್ ಇಂಡಿಯಾ ಮತ್ತು ಡೊಮಿನಿಯನ್ ಆಫ್ ಪಾಕಿಸ್ತಾನದ ಸ್ಥಾಪನೆಯ ಕಾರಣದಿಂದಾಗಿ ತಮ್ಮ ಮೂಲ ನಿವಾಸ ಸ್ಥಾನದಿಂದ ಸ್ಥಳಾಂತರ ಹೊಂದಿದ ವ್ಯಕ್ತಿಗಳಿಗೆ ಪರಿಹಾರ ಮತ್ತು ಪುನರ್ವಸತಿ.

28. ಧರ್ಮಾರ್ಥ ಕಾರ್ಯಗಳು ಮತ್ತು ಧರ್ಮಾರ್ಥ ಸಂಸ್ಥೆಗಳು, ಧರ್ಮಾರ್ಥ ಮತ್ತು ಧಾರ್ಮಿಕ ದತ್ತಿಗಳು ಮತ್ತು ಧಾರ್ಮಿಕ ಸಂಸ್ಥೆಗಳು.

29. ಮನುಷ್ಯರನ್ನು, ಪ್ರಾಣಿಗಳನ್ನು ಅಥವಾ ಸಸ್ಯಗಳನ್ನು ಬಾಧಿಸುವ ಸೋಂಕು ಅಥವಾ ಅಂಟುರೋಗಗಳು ಅಥವಾ ಕೀಟಗಳು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹರಡದಂತೆ ಪ್ರತಿಬಂಧಿಸುವುದು.

30. ಜನನ ಮರಣಗಳ ನೋಂದಣಿಯನ್ನೊಳಗೊಂಡಂತೆ ಜನನ ಮರಣಗಳ ಅಂಕಿ-ಅಂಶಗಳು.

31. ಸಂಸತ್ತು ರಚಿಸಿದ ಅಥವಾ ಅಸ್ತಿತ್ವದಲ್ಲಿರುವ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ದೊಡ್ಡ ಬಂದರುಗಳು ಎಂದು ಘೋಷಿಸಲಾಗಿರುವವುಗಳನ್ನು ಹೊರತುಪಡಿಸಿ ಇತರ ಬಂದರುಗಳು.

32. ರಾಷ್ಟ್ರೀಯ ಜಲಮಾರ್ಗಗಳಿಗೆ ಸಂಬಂಧಿಸಿದಂತೆ ಪಟ್ಟಿ Iರ ಉಪಬಂಧಗಳಿಗೆ ಒಳಪಟ್ಟು ಯಂತ್ರಚಾಲಿತ ನೌಕೆಗಳಿಗೆ ಸಂಬಂಧಿಸಿದಂತೆ ಒಳನಾಡು ಜಲಮಾರ್ಗಗಳ ಮೇಲೆ ಹಡಗು ಸಾಗಣೆ ಮತ್ತು ನೌಕಾ ಸಂಚಾರ ಮತ್ತು ಅಂಥ ಜಲಮಾರ್ಗಗಳ ಮೇಲಿನ ಮಾರ್ಗನಿಯಮ ಮತ್ತು ಒಳನಾಡು ಜಲಮಾರ್ಗಗಳ ಮೇಲೆ ಪ್ರಯಾಣಿಕರ ಮತ್ತು ಸರಕುಗಳ ಸಾಗಣೆ.

---

1. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 57ನೇ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. ಅದೇ ಅಧಿನಿಯಮದ 57ನೇ ಪ್ರಕರಣದ ಮೂಲಕ 25ನೇ ನಮೂದಿಗೆ ಬದಲಾಗಿ (3-1-1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

[1][33. ಈ ಕೆಳಕಂಡ ವಸ್ತುಗಳ ವ್ಯಾಪಾರ ಮತ್ತು ವಾಣಿಜ್ಯ ಹಾಗೂ ಇವುಗಳ ಉತ್ಪಾದನೆ, ಸರಬರಾಜು ಮತ್ತು ವಿತರಣೆ:-

(ಎ) ಯಾವ ಉದ್ಯಮವನ್ನು ಒಕ್ಕೂಟವು ನಿಯಂತ್ರಿಸುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ವಿಹಿತವೆಂದು ಸಂಸತ್ತು ಕಾನೂನಿನ ಮೂಲಕ ಘೋಷಿಸಿದೆಯೋ ಆ ಯಾವುದೇ ಉದ್ಯಮದ ಉತ್ಪನ್ನಗಳು ಮತ್ತು ಅಂಥ ಉತ್ಪನ್ನಗಳಿಗಾಗಿ ಆಮದು ಮಾಡಿಕೊಂಡಿರುವ ಅದೇ ಬಗೆಯ ಸರಕುಗಳು;

(ಬಿ) ಖಾದ್ಯ ಎಣ್ಣೆಬೀಜಗಳು ಮತ್ತು ಖಾದ್ಯ ತೈಲಗಳು ಒಳಗೊಂಡಂತೆ ಆಹಾರ ಪದಾರ್ಥಗಳು;

(ಸಿ) ಹಿಂಡಿಗಳು ಮತ್ತು ಸಾರೀಕೃತ ಆಹಾರ ಪದಾರ್ಥಗಳೂ ಒಳಗೊಂಡಂತೆ ದನಗಳ ಮೇವು;

(ಡಿ) ಕಚ್ಚಾಹತ್ತಿ, ಬೀಜ ತೆಗೆದಿದ್ದಾಗಿರಲಿ ಅಥವಾ ತೆಗೆಯದ್ದಾಗಿರಲಿ ಮತ್ತು ಹತ್ತಿಬೀಜ; ಮತ್ತು

(ಇ) ಕಚ್ಚಾ ಸೆಣಬು.]

[2][33ಎ. ಮಾನಕಗಳನ್ನು ನಿಗದಿಪಡಿಸುವುದನ್ನು ಹೊರತುಪಡಿಸಿ ತೂಕಗಳು ಮತ್ತು ಅಳತೆಗಳು.]

34. ಬೆಲೆ ನಿಯಂತ್ರಣ.

35. ಯಂತ್ರಚಾಲಿತ ವಾಹನಗಳು, ಅಂಥ ವಾಹನಗಳ ಮೇಲೆ ಯಾವ ತತ್ವಗಳನ್ನಾಧರಿಸಿ ತೆರಿಗೆಗಳನ್ನು ವಿಧಿಸಲಾಗುವುದೋ ಆ ತತ್ವಗಳೂ ಒಳಗೊಂಡಂತೆ.

36. ಕಾರ್ಖಾನೆಗಳು.

37. ಬಾಯ್ಲರುಗಳು.

38. ವಿದ್ಯುಚ್ಛಕ್ತಿ.

39. ವೃತ್ತಪತ್ರಿಕೆಗಳು, ಪುಸ್ತಕಗಳು ಮತ್ತು ಮುದ್ರಣಾಲಯಗಳು.

40. ರಾಷ್ಟ್ರೀಯ ಮಹತ್ವವುಳ್ಳವೆಂದು [3][ಸಂಸತ್ತು ರಚಿಸಿದ ಕಾನೂನು ಮೂಲಕ ಅಥವಾ ಮೇರೆಗೆ ಘೋಷಿಸಿದವುಗಳನ್ನು] ಹೊರತುಪಡಿಸಿ ಇತರ ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು.

41. ನಿರ್ವಾಸಿತನ ಸ್ವತ್ತೆಂದು ಕಾನೂನಿನ ಮೂಲಕ ಘೋಷಿಸಲಾಗಿರುವ ಸ್ವತ್ತಿನ (ಕೃಷಿಭೂಮಿಯನ್ನು ಒಳಗೊಂಡು) ಅಭಿರಕ್ಷೆ, ವ್ಯವಸ್ಥೆ ಮತ್ತು ವಿಲೆ.

[4][42. ಸ್ವತ್ತಿನ ಆರ್ಜನೆ ಮತ್ತು ಕಡ್ಡಾಯ ಕೋರಿಕೆ.]

43. ಭೂಕಂದಾಯದ ಬಾಕಿಗಳು ಮತ್ತು ಅಂಥ ಬಾಕಿಗಳಂತೆ ವಸೂಲಾಗಬೇಕಾದ ಮೊತ್ತಗಳೂ ಒಳಗೊಂಡಂತೆ ತೆರಿಗೆಗಳು ಮತ್ತು ಇತರ ಸಾರ್ವಜನಿಕ ತಗಾದೆಗಳಿಗೆ ಸಂಬಂಧಿಸಿದಂತೆ ಒಂದು ರಾಜ್ಯದ ಹೊರಗಡೆ ಉದ್ಭವಿಸುವ ಕ್ಲೇಮುಗಳನ್ನು ಆ ರಾಜ್ಯದಲ್ಲಿ ವಸೂಲಿ ಮಾಡುವುದು.

44. ನ್ಯಾಯಿಕ ಸ್ಟಾಂಪುಗಳ ಮೂಲಕ ಸಂಗ್ರಹಿಸಿದ ಸುಂಕಗಳನ್ನು ಅಥವಾ ಫೀಜುಗಳನ್ನು ಹೊರತುಪಡಿಸಿ ಸ್ಟಾಂಪು ಸುಂಕಗಳು, ಆದರೆ ಸ್ಟಾಂಪು ಸುಂಕದ ದರಗಳನ್ನು ಒಳಗೊಳ್ಳುವುದಿಲ್ಲ.

45. ಪಟ್ಟಿ IIರಲ್ಲಿ ಅಥವಾ ಪಟ್ಟಿ III ರಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಲ್ಲಿ ಯಾವುದೇ ಒಂದರ ಉದ್ದೇಶಗಳಿಗಾಗಿ ವಿಚಾರಣೆಗಳು ಮತ್ತು ಅಂಕಿ-ಅಂಶಗಳು.

46. ಈ ಪಟ್ಟಿಯಲ್ಲಿನ ವಿಷಯಗಳಲ್ಲಿ ಯಾವುದೇ ಒಂದಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ಎಲ್ಲ ನ್ಯಾಯಾಲಯಗಳ ಅಧಿಕಾರವ್ಯಾಪ್ತಿ ಮತ್ತು ಅಧಿಕಾರಗಳು.

47. ಈ ಪಟ್ಟಿಯಲ್ಲಿನ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಫೀಜುಗಳು, ಆದರೆ ಯಾವುದೇ ನ್ಯಾಯಾಲಯದಲ್ಲಿ ತೆಗೆದುಕೊಳ್ಳುವ ಫೀಜುಗಳು ಒಳಗೊಳ್ಳುವುದಿಲ್ಲ.

---

1. 1954ನೆಯ ಇಸವಿಯ ಸಂವಿಧಾನ (ಮೂರನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ 33ನೇ ನಮೂದಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. 1976ನೇ ಇಸವಿಯ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 57ನೇ ಪ್ರಕರಣದ ಮೂಲಕ (3-1-1977ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. 1956ನೆಯ ಇಸವಿಯ ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮದ 27ನೆಯ ಪ್ರಕರಣದ ಮೂಲಕ "ಸಂಸತ್ತಿನಿಂದ ಕಾನೂನಿನ ಮೂಲಕ ಘೋಷಿತವಾಗತಕ್ಕದ್ದನ್ನು" ಎಂಬ ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
4. ಅದೇ ಅಧಿನಿಯಮದ 26ನೆಯ ಪ್ರಕರಣದ ಮೂಲಕ 42ನೆಯ ನಮೂದಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

# ಎಂಟನೆಯ ಅನುಸೂಚಿ

[344 (1) ಮತ್ತು 351ನೆಯ ಅನುಚ್ಛೇದಗಳು]

## ಭಾಷೆಗಳು

1. ಅಸ್ಸಾಮೀಸ್.
2. ಬಂಗಾಳಿ.
[1][3. ಬೋಡೊ.
4. ಡೋಗ್ರಿ.]
[2][5.] ಗುಜರಾತಿ.
[3][6.] ಹಿಂದಿ.
[3][7.] ಕನ್ನಡ.
[3][8.] ಕಾಶ್ಮೀರಿ.
[4][ [3][9.] ಕೊಂಕಣಿ.]
[1][10. ಮೈಥಿಲಿ.]
[5][11.] ಮಲಯಾಳಂ.
[4][ [6][12.] ಮಣಿಪುರಿ.]
[6][13.] ಮರಾಠಿ.
[4][ [6][14.] ನೇಪಾಳಿ.]
[6][15.] ಒರಿಯಾ.
[6][16.] ಪಂಜಾಬಿ.
[6][17.] ಸಂಸ್ಕೃತ.
[1][18. ಸಂಥಾಲಿ.]
[7][ [8][19.] ಸಿಂಧಿ.]
[9][20.] ತಮಿಳು.
[9][21.] ತೆಲುಗು.
[9][22.] ಉರ್ದು.

---

1. 2003 ನೆಯ ಇಸವಿಯ ಸಂವಿಧಾನ (ತೊಂಬತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ ಸೇರಿಸಲಾಗಿದೆ.
2. ಅದೇ ಅಧಿನಿಯಮದ 2ನೆಯ ಪ್ರಕರಣದ ಮೂಲಕ 3ನೇ ನಮೂದಿಗೆ 5ನೇ ನಮೂದು ಎಂದು ಪುನರ್ ಸಂಖ್ಯೆ ನೀಡಲಾಗಿದೆ.
3. ಅದೇ ಅಧಿನಿಯಮದ 2 ನೆಯ ಪ್ರಕರಣದ ಮೂಲಕ 4 ರಿಂದ 7ರ ವರೆಗಿನ ನಮೂದುಗಳಿಗೆ 6 ರಿಂದ 9 ರ ವರೆಗಿನ ನಮೂದುಗಳೆಂದು ಪುನರ್ ಸಂಖ್ಯೆ ನೀಡಲಾಗಿದೆ.
4. 1992 ನೇ ಇಸವಿಯ ಸಂವಿಧಾನ (ಎಪ್ಪತ್ತೊಂದನೆಯ ತಿದ್ದುಪಡಿ) ಅಧಿನಿಯಮದ 2 ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
5. 2003 ನೇ ಇಸವಿಯ ಸಂವಿಧಾನ (ತೊಂಬತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2 ನೆಯ ಪ್ರಕರಣದ ಮೂಲಕ 8ನೇ ನಮೂದಿಗೆ 11ನೇ ನಮೂದು ಎಂದು ಪುನರ್ ಸಂಖ್ಯೆ ನೀಡಲಾಗಿದೆ.
6. ಅದೇ ಅಧಿನಿಯಮದ 2 ನೆಯ ಪ್ರಕರಣದ ಮೂಲಕ 9 ರಿಂದ 14 ರವರೆಗಿನ ನಮೂದುಗಳಿಗೆ 12 ರಿಂದ 17 ರ ವರೆಗಿನ ನಮೂದುಗಳೆಂದು ಪುನರ್ ಸಂಖ್ಯೆ ನೀಡಲಾಗಿದೆ.
7. 1967ನೇ ಇಸವಿಯ ಸಂವಿಧಾನ (ಇಪ್ಪತ್ತೊಂದನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
8. 2003ನೇ ಇಸವಿಯ ಸಂವಿಧಾನ (ತೊಂಬತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2 ನೆಯ ಪ್ರಕರಣದ ಮೂಲಕ 15 ನೇ ನಮೂದಿಗೆ 19ನೇ ನಮೂದು ಎಂದು ಪುನರ್ ಸಂಖ್ಯೆ ನೀಡಲಾಗಿದೆ.
9. ಅದೇ ಅಧಿನಿಯಮದ 2 ನೆಯ ಪ್ರಕರಣದ ಮೂಲಕ 16 ರಿಂದ 18 ರವರೆಗಿನ ನಮೂದುಗಳಿಗೆ 20 ರಿಂದ 22 ರ ವರೆಗಿನ ನಮೂದುಗಳೆಂದು ಪುನರ್ ಸಂಖ್ಯೆ ನೀಡಲಾಗಿದೆ.

## [1][ಒಂಬತ್ತನೆಯ ಅನುಸೂಚಿ

[31ಬಿ ಅನುಚ್ಛೇದ]

1. ಬಿಹಾರ ಭೂ ಸುಧಾರಣಾ ಅಧಿನಿಯಮ, 1950 (ಬಿಹಾರ ಅಧಿನಿಯಮ 1950ರ XXX)

2. ಮುಂಬಯಿ ಗೇಣಿದಾರಿಕೆ ಮತ್ತು ಕೃಷಿ ಭೂಮಿಗಳ ಅಧಿನಿಯಮ, 1948 (ಮುಂಬಯಿ ಅಧಿನಿಯಮ 1948ರ LXVII)..

3. ಮುಂಬಯಿ ಮಾಲಿಕಿ ಹಿಡುವಳಿ ರದ್ದಿಯಾತಿ ಅಧಿನಿಯಮ, 1949 (ಮುಂಬಯಿ ಅಧಿನಿಯಮ 1949ರ LXI).

4. ಮುಂಬಯಿ ತಾಲೂಕದಾರಿ ಹಿಡುವಳಿ ರದ್ದಿಯಾತಿ ಅಧಿನಿಯಮ, 1949, (ಮುಂಬಯಿ ಅಧಿನಿಯಮ 1949ರ LXII).

5. ಪಂಚ ಮಹಲುಗಳ ಮೆಹವಾಸ್ಸಿ ಹಿಡುವಳಿ ರದ್ದಿಯಾತಿ ಅಧಿನಿಯಮ, 1949 (ಮುಂಬಯಿ ಅಧಿನಿಯಮ 1949ರ LXIII)

6. ಮುಂಬಯಿ ಖೋತಿ ರದ್ದಿಯಾತಿ ಅಧಿನಿಯಮ, 1950 (ಮುಂಬಯಿ ಅಧಿನಿಯಮ 1950ರ VI).

7. ಮುಂಬಯಿ ಪರಗಣ ಮತ್ತು ಕುಲಕರ್ಣಿ ವತನ ರದ್ದಿಯಾತಿ ಅಧಿನಿಯಮ, 1950 (ಮುಂಬಯಿ ಅಧಿನಿಯಮ 1950ರ LX).

8. ಮಧ್ಯಪ್ರದೇಶ (ಎಸ್ಟೇಟುಗಳ, ಮಹಲುಗಳ, ಪರಭಾರೆ ಮಾಡಿದ ಭೂಮಿಗಳ) ಒಡೆತನದ ಹಕ್ಕುಗಳ ರದ್ದಿಯಾತಿ ಅಧಿನಿಯಮ, 1950 (ಮಧ್ಯಪ್ರದೇಶ ಅಧಿನಿಯಮ 1951ರ 1).

9. ಮದ್ರಾಸು ಎಸ್ಟೇಟುಗಳ (ರದ್ದಿಯಾತಿ ಮತ್ತು ರೈತವಾರಿಗೆ ಪರಿವರ್ತನೆ) ಅಧಿನಿಯಮ, 1948 (ಮದ್ರಾಸು ಅಧಿನಿಯಮ 1948ರ XXVI).

10. ಮದ್ರಾಸು ಎಸ್ಟೇಟುಗಳ (ರದ್ದಿಯಾತಿ ಮತ್ತು ರೈತವಾರಿಗೆ ಪರಿವರ್ತನೆ) ತಿದ್ದುಪಡಿ ಅಧಿನಿಯಮ, 1950 (ಮದ್ರಾಸು ಅಧಿನಿಯಮ 1950ರ 1).

11. ಉತ್ತರ ಪ್ರದೇಶ ಜಮೀನ್ದಾರಿ ರದ್ದಿಯಾತಿ ಮತ್ತು ಭೂ ಸುಧಾರಣೆಗಳ ಅಧಿನಿಯಮ, 1950 (ಉತ್ತರ ಪ್ರದೇಶ ಅಧಿನಿಯಮ 1951ರ 1).

12. ಹೈದರಾಬಾದು (ಜಹಗೀರುಗಳ ರದ್ದಿಯಾತಿ) ರೆಗ್ಯುಲೇಷನ್, 1358 ಫಸಲಿ (1358ನೆಯ ಫಸಲಿಯ ಸಂಖ್ಯೆ LXIX).

13. ಹೈದರಾಬಾದು ಜಹಗೀರುಗಳ (ಪರಿವರ್ತನೆ) ರೆಗ್ಯುಲೇಷನ್, 1359 ಫಸಲಿ (1359ನೆಯ ಫಸಲಿಯ ಸಂಖ್ಯೆ XXV).]

[2][14. ಬಿಹಾರ ಸ್ಥಳಾಂತರಿತ ವ್ಯಕ್ತಿಗಳ ಪುನರ್ವಸತಿ (ಭೂ ಆರ್ಜನೆ) ಅಧಿನಿಯಮ, 1950 (ಬಿಹಾರ ಅಧಿನಿಯಮ 1950ರ XXXVIII).

15. ಸಂಯುಕ್ತ ಪ್ರಾಂತಗಳ ಭೂ ಆರ್ಜನೆ (ನಿರಾಶ್ರಿತರ ಪುನರ್ವಸತಿ) ಅಧಿನಿಯಮ, 1948 (ಸಂಯುಕ್ತ ಪ್ರಾಂತಗಳ ಅಧಿನಿಯಮ 1948ರ XXVI).

16. ಸ್ಥಳಾಂತರಿತ ವ್ಯಕ್ತಿಗಳ ಪುನರ್ವಸತಿ (ಭೂ ಆರ್ಜನೆ) ಅಧಿನಿಯಮ, 1948 (ಅಧಿನಿಯಮ 1948ರ LX).

---

1. 1951ನೆಯ ಇಸವಿಯ ಸಂವಿಧಾನ(ಒಂದನೆಯ ತಿದ್ದುಪಡಿ) ಅಧಿನಿಯಮದ 14ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.
2. 1955ನೆಯ ಇಸವಿಯ ಸಂವಿಧಾನ (ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ ಸೇರಿಸಲಾಗಿದೆ.

17. ವಿಮಾ (ತಿದ್ದುಪಡಿ) ಅಧಿನಿಯಮ, 1950ರ (ಅಧಿನಿಯಮ 1950ರ XLVII ) 42ನೆಯ ಪ್ರಕರಣದ ಮೂಲಕ ಸೇರಿಸಲಾದಂತೆ ವಿಮಾ ಅಧಿನಿಯಮ, 1938ರ (ಅಧಿನಿಯಮ 1938ರ IV) 52ಎ ಯಿಂದ 52ಜಿ ವರೆಗಿನ ಪ್ರಕರಣಗಳು.

18. ರೈಲ್ವೆ ಕಂಪನಿಗಳ (ತುರ್ತು ಉಪಬಂಧಗಳ) ಅಧಿನಿಯಮ, 1951 (ಅಧಿನಿಯಮ 1951ರ LI).

19. ಉದ್ಯಮಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಅಧಿನಿಯಮ, 1953 (ಅಧಿನಿಯಮ 1953ರ XXVI)ರ 13ನೆಯ ಪ್ರಕರಣದ ಮೂಲಕ ಸೇರಿಸಲಾದಂತೆ ಉದ್ಯಮಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1951 (ಅಧಿನಿಯಮ 1951ರ LXV)ರ IIIಎ ಅಧ್ಯಾಯ.

20. ಪಶ್ಚಿಮ ಬಂಗಾಳ ಅಧಿನಿಯಮದ 1951ರ XXIX ರ ಮೂಲಕ ತಿದ್ದುಪಡಿಯಾದಂತೆ, ಪಶ್ಚಿಮ ಬಂಗಾಳ ಭೂ ಅಭಿವೃದ್ಧಿ ಮತ್ತು ಯೋಜನೆ ಅಧಿನಿಯಮ, 1948 (ಪಶ್ಚಿಮ ಬಂಗಾಳ ಅಧಿನಿಯಮ 1948ರ XXI).]

[1][21. ಆಂಧ್ರಪ್ರದೇಶ ಕೃಷಿ ಹಿಡುವಳಿಗಳ ಮೇಲೆ ಪರಮಾವಧಿ ಮಿತಿ ಅಧಿನಿಯಮ, 1961 (ಆಂಧ್ರಪ್ರದೇಶ ಅಧಿನಿಯಮ 1961ರ X).

22. ಆಂಧ್ರಪ್ರದೇಶ (ತೆಲಂಗಾಣ ಪ್ರದೇಶ) ಗೇಣಿದಾರಿಕೆ ಮತ್ತು ಕೃಷಿ ಭೂಮಿಗಳ (ಮಾನ್ಯತೆ) ಅಧಿನಿಯಮ, 1961 (ಆಂಧ್ರಪ್ರದೇಶ ಅಧಿನಿಯಮ 1961ರ XXI).

23. ಆಂಧ್ರಪ್ರದೇಶ (ತೆಲಂಗಾಣ ಪ್ರದೇಶ) ಇಜಾರಾ ಮತ್ತು ಕೌಲಿ ಭೂಮಿಗಳ ಅಕ್ರಮ ಪಟ್ಟಾಗಳ ರದ್ದಿಯಾತಿ ಮತ್ತು ರಿಯಾಯಿತಿ ಕರನಿರ್ಧರಣೆ ರದ್ದಿಯಾತಿ ಅಧಿನಿಯಮ, 1961 (ಆಂಧ್ರಪ್ರದೇಶ ಅಧಿನಿಯಮ 1961ರ XXXVI).

24. ಅಸ್ಸಾಂ ರಾಜ್ಯ ಸಾರ್ವಜನಿಕ ಸ್ವರೂಪದ ಧಾರ್ಮಿಕ ಅಥವಾ ಧರ್ಮಾರ್ಥ ಸಂಸ್ಥೆಗಳಿಗೆ ಸೇರಿದ ಭೂ ಆರ್ಜನಾ ಅಧಿನಿಯಮ, 1959 (ಅಸ್ಸಾಂ ಅಧಿನಿಯಮ 1961ರ IX).

25. ಬಿಹಾರ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 1953 (ಬಿಹಾರ ಅಧಿನಿಯಮ 1954ರ XX).

26. ಬಿಹಾರ ಭೂ ಸುಧಾರಣೆಗಳ (ಪರಮಾವಧಿ ವಿಸ್ತೀರ್ಣ ನಿಗದಿ ಮತ್ತು ಹೆಚ್ಚುವರಿ ಭೂಮಿಯ ಆರ್ಜನೆ) ಅಧಿನಿಯಮ, 1961 (ಬಿಹಾರ ಅಧಿನಿಯಮ 1962ರ XII) (ಈ ಅಧಿನಿಯಮದ 28ನೇ ಪ್ರಕರಣವನ್ನು ಹೊರತುಪಡಿಸಿ).

27. ಮುಂಬಯಿ ತಾಲೂಕುದಾರಿ ಹಿಡುವಳಿ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 1954 (ಮುಂಬಯಿ ಅಧಿನಿಯಮ 1955ರ I).

28. ಮುಂಬಯಿ ತಾಲೂಕುದಾರಿ ಹಿಡುವಳಿ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 1957 (ಮುಂಬಯಿ ಅಧಿನಿಯಮ 1958ರ XVIII).

29. ಮುಂಬಯಿ ಇನಾಮುಗಳ (ಕಚ್ ಪ್ರದೇಶ) ರದ್ದಿಯಾತಿ ಅಧಿನಿಯಮ, 1958 (ಮುಂಬಯಿ ಅಧಿನಿಯಮ 1958ರ XCVIII).

30. ಮುಂಬಯಿ ಗೇಣಿದಾರಿಕೆ ಮತ್ತು ಕೃಷಿ ಭೂಮಿಗಳ (ಗುಜರಾತ್ ತಿದ್ದುಪಡಿ) ಅಧಿನಿಯಮ, 1960 (ಗುಜರಾತ್ ಅಧಿನಿಯಮ 1960ರ XVI).

31. ಗುಜರಾತ್ ಕೃಷಿ ಭೂಮಿಗಳ ಪರಮಾವಧಿ ಮಿತಿ ಅಧಿನಿಯಮ, 1960 (ಗುಜರಾತ್ ಅಧಿನಿಯಮ 1961ರ XXVI).

32. ಸಾಗ್‌ಬಾರಾ ಮತ್ತು ಮೆಹವಾಸಿ ಎಸ್ಟೇಟುಗಳ (ಒಡೆತನದ ಹಕ್ಕುಗಳ ರದ್ದಿಯಾತಿ, ಇತ್ಯಾದಿ) ರೆಗ್ಯುಲೇಷನ್, 1962 (ಗುಜರಾತ್ ರೆಗ್ಯುಲೇಷನ್ 1962ರ I).

---

1. 1964ನೆಯ ಇಸವಿಯ ಸಂವಿಧಾನ (ಹದಿನೇಳನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ (20.6.1964 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

33. ಗುಜರಾತ್ ಉಳಿದಿರುವ ಪರಬಾರೆಗಳ ರದ್ದಿಯಾತಿ ಅಧಿನಿಯಮ, 1963 (ಗುಜರಾತ್ ಅಧಿನಿಯಮ 1963 ರ XXXIII) ಅದರ 2ನೆಯ ಪ್ರಕರಣದ (3)ನೆಯ ಖಂಡದ (ಡಿ) ಉಪಖಂಡದಲ್ಲಿ ಉಲ್ಲೇಖಿಸಿದ ಪರಭಾರೆಗೆ ಈ ಅಧಿನಿಯಮವು ಸಂಬಂಧಪಡುವಷ್ಟರ ಮಟ್ಟಿಗೆ ಹೊರತುಪಡಿಸಿ).

34. ಮಹಾರಾಷ್ಟ್ರ ಕೃಷಿಭೂಮಿಗಳ (ಹಿಡುವಳಿಗಳ ಪರಮಾವಧಿ ಮಿತಿ) ಅಧಿನಿಯಮ, 1961 (ಮಹಾರಾಷ್ಟ್ರ ಅಧಿನಿಯಮ 1961ರ XXVII).

35. ಹೈದರಾಬಾದ್ ಗೇಣಿದಾರಿ ಮತ್ತು ಕೃಷಿಭೂಮಿಗಳ (ಪುನರಧಿನಿಯಮಿತಿ, ಸಿಂಧುತ್ವ ಮತ್ತು ಹೆಚ್ಚಿನ ತಿದ್ದುಪಡಿ) ಅಧಿನಿಯಮ, 1961 (ಮಹಾರಾಷ್ಟ್ರ ಅಧಿನಿಯಮ 1961ರ XLV).

36. ಹೈದರಾಬಾದ್ ಗೇಣಿದಾರಿಕೆ ಮತ್ತು ಕೃಷಿಭೂಮಿಗಳ ಅಧಿನಿಯಮ, 1950 (ಹೈದರಾಬಾದ್ ಅಧಿನಿಯಮ 1950ರ XXI).

37. ಜನ್ಮಿಕಾರಮ್ ಸಂದಾಯ (ರದ್ದಿಯಾತಿ) ಅಧಿನಿಯಮ, 1960 (ಕೇರಳ ಅಧಿನಿಯಮ 1961ರ III).

38. ಕೇರಳ ಭೂ ತೆರಿಗೆ ಅಧಿನಿಯಮ, 1961 (ಕೇರಳ ಅಧಿನಿಯಮ 1961ರ XIII).

39. ಕೇರಳ ಭೂ ಸುಧಾರಣಾ ಅಧಿನಿಯಮ, 1963 (ಕೇರಳ ಅಧಿನಿಯಮ 1964ರ I).

40. ಮಧ್ಯಪ್ರದೇಶ ಭೂ ಕಂದಾಯ ಸಂಹಿತೆ, 1959 (ಮಧ್ಯಪ್ರದೇಶ ಅಧಿನಿಯಮ 1959ರ XX).

41. ಮಧ್ಯಪ್ರದೇಶ ಕೃಷಿ ಹಿಡುವಳಿಗಳ ಪರಮಾವಧಿ ಮಿತಿ ಅಧಿನಿಯಮ, 1960 (ಮಧ್ಯಪ್ರದೇಶ ಅಧಿನಿಯಮ 1960ರ XX).

42. ಮದ್ರಾಸು ಸಾಗುವಳಿ ಮಾಡುವ ಗೇಣಿದಾರರ ಸಂರಕ್ಷಣೆ ಅಧಿನಿಯಮ, 1955 (ಮದ್ರಾಸು ಅಧಿನಿಯಮ 1955ರ XXV).

43. ಮದ್ರಾಸು ಸಾಗುವಳಿ ಮಾಡುವ ಗೇಣಿದಾರ (ಯೋಗ್ಯ ಗೇಣಿ ಸಂದಾಯ) ಅಧಿನಿಯಮ, 1956 (ಮದ್ರಾಸು ಅಧಿನಿಯಮ 1956ರ XXIV)

44. ಮದ್ರಾಸು ಕುಡಿಇರುಪ್ಪು ಅನುಭೋಗದಾರರ (ಒಕ್ಕಲೆಬ್ಬಿಸುವುದರಿಂದ ಸಂರಕ್ಷಣೆ) ಅಧಿನಿಯಮ, 1961 (ಮದ್ರಾಸು ಅಧಿನಿಯಮ 1961ರ XXXVIII).

45. ಮದ್ರಾಸು ಸಾರ್ವಜನಿಕ ನ್ಯಾಸಗಳ (ಕೃಷಿ ಭೂಮಿಗಳ ಆಡಳಿತ ನಿಯಂತ್ರಣ) ಅಧಿನಿಯಮ, 1961 (ಮದ್ರಾಸು ಅಧಿನಿಯಮ 1961ರ LVII).

46. ಮದ್ರಾಸು ಭೂ ಸುಧಾರಣೆಗಳ (ಭೂಮಿಗಳ ಮೇಲೆ ಪರಮಾವಧಿ ಮಿತಿ ನಿಗದಿ) ಅಧಿನಿಯಮ, 1961 (ಮದ್ರಾಸು ಅಧಿನಿಯಮ 1961ರ LVIII).

47. ಮೈಸೂರು ಗೇಣಿದಾರಿಕೆ ಅಧಿನಿಯಮ, 1952 (ಮೈಸೂರು ಅಧಿನಿಯಮ 1952ರ XIII).

48. ಕೊಡಗು ಗೇಣಿದಾರರ ಅಧಿನಿಯಮ, 1957 (ಮೈಸೂರು ಅಧಿನಿಯಮ 1957ರ XIV).

49. ಮೈಸೂರು ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 (ಮೈಸೂರು ಅಧಿನಿಯಮ 1961ರ XIV).

50. ಹೈದರಾಬಾದ್ ಗೇಣಿದಾರಿಕೆ ಮತ್ತು ಕೃಷಿ ಭೂಮಿಗಳ (ಸಿಂಧುತ್ವ) ಅಧಿನಿಯಮ, 1961 (ಮೈಸೂರು ಅಧಿನಿಯಮ 1961ರ XXXVI).

51. ಮೈಸೂರು ಭೂ ಸುಧಾರಣೆಗಳ ಅಧಿನಿಯಮ, 1961 (ಮೈಸೂರು ಅಧಿನಿಯಮ 1962ರ X).

52. ಒರಿಸ್ಸಾ ಭೂ ಸುಧಾರಣೆಗಳ ಅಧಿನಿಯಮ, 1960 (ಒರಿಸ್ಸಾ ಅಧಿನಿಯಮ 1960ರ XVI).

53. ಒರಿಸ್ಸಾ ವಿಲೀನ ಹೊಂದಿದ ಪ್ರದೇಶಗಳ (ಗ್ರಾಮ ಹುದ್ದೆಗಳ ರದ್ದಿಯಾತಿ) ಅಧಿನಿಯಮ, 1963 (ಒರಿಸ್ಸಾ ಅಧಿನಿಯಮ 1963ರ X).

54. ಪಂಜಾಬ್ ಭೂ ಹಿಡುವಳಿಗಳ ಭದ್ರತೆ ಅಧಿನಿಯಮ, 1953 (ಪಂಜಾಬ್ ಅಧಿನಿಯಮ 1953ರ X).

55. ರಾಜಸ್ಥಾನ ಗೇಣಿದಾರಿಕೆ ಅಧಿನಿಯಮ, 1955 (ರಾಜಸ್ಥಾನ ಅಧಿನಿಯಮ 1955ರ III).

56. ರಾಜಸ್ಥಾನ ಜಮೀನ್ದಾರಿ ಮತ್ತು ಬಿಸ್ವೇದಾರಿ ರದ್ದಿಯಾತಿ ಅಧಿನಿಯಮ, 1959 (ರಾಜಸ್ಥಾನ ಅಧಿನಿಯಮ 1959ರ VIII).

57. ಕುಮಾಂನ್ ಮತ್ತು ಉತ್ತರಖಂಡ ಜಮೀನ್ದಾರಿ ರದ್ದಿಯಾತಿ ಮತ್ತು ಭೂ ಸುದಾರಣಾ ಅಧಿನಿಯಮ, 1960 (ಉತ್ತರಪ್ರದೇಶ ಅಧಿನಿಯಮ 1960ರ XVII).

58. ಉತ್ತರ ಪ್ರದೇಶ ಭೂ ಹಿಡುವಳಿಗಳ ಮೇಲೆ ಪರಮಾವಧಿ ಮಿತಿಯನ್ನು ವಿಧಿಸುವ ಅಧಿನಿಯಮ, 1960 (ಉತ್ತರಪದೇಶ ಅಧಿನಿಯಮ 1961ರ I).

59. ಪಶ್ಚಿಮ ಬಂಗಾಳ ಎಸ್ಟೇಟುಗಳ ಆರ್ಜನೆ ಅಧಿನಿಯಮ, 1953 (ಪಶ್ಚಿಮ ಬಂಗಾಳ ಅಧಿನಿಯಮ 1954ರ I).

60. ಪಶ್ಚಿಮ ಬಂಗಾಳ ಭೂ ಸುಧಾರಣಾ ಅಧಿನಿಯಮ, 1955 (ಪಶ್ಚಿಮ ಬಂಗಾಳ ಅಧಿನಿಯಮ 1956ರ X).

61. ದೆಹಲಿ ಭೂ ಸುಧಾರಣಾ ಅಧಿನಿಯಮ, 1954 (ದೆಹಲಿ ಅಧಿನಿಯಮ 1954ರ VIII).

62. ದೆಹಲಿ ಭೂ ಹಿಡುವಳಿಗಳ (ಪರಮಾವಧಿ ಮಿತಿ) ಅಧಿನಿಯಮ, 1960 (ಕೇಂದ್ರ ಅಧಿನಿಯಮ 1960ರ 24).

63. ಮಣಿಪುರ ಭೂ ಕಂದಾಯ ಮತ್ತು ಭೂಸುಧಾರಣಾ ಅಧಿನಿಯಮ, 1960 (ಕೇಂದ್ರ ಅಧಿನಿಯಮ 1960ರ 33).

64. ತ್ರಿಪುರಾ ಭೂ ಕಂದಾಯ ಮತ್ತು ಭೂ ಸುಧಾರಣಾ ಅಧಿನಿಯಮ, 1960 (ಕೇಂದ್ರ ಅಧಿನಿಯಮ 1960ರ 43).

[1][65. ಕೇರಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1969 (ಕೇರಳ ಅಧಿನಿಯಮ 1969ರ 35).

66. ಕೇರಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1971 (ಕೇರಳ ಅಧಿನಿಯಮ 1971ರ 25).]

[2][67. ಆಂಧ್ರಪ್ರದೇಶ ಭೂ ಸುಧಾರಣಾ (ಕೃಷಿ ಹಿಡುವಳಿಗಳ ಪರಮಾವಧಿ ಮಿತಿ) ಅಧಿನಿಯಮ, 1973 (ಆಂಧ್ರಪ್ರದೇಶ ಅಧಿನಿಯಮ 1973ರ 1).

68. ಬಿಹಾರ ಭೂ ಸುಧಾರಣಾ (ಪರಮಾವಧಿ ಮಿತಿ ವಿಸ್ತೀರ್ಣ ನಿಗದಿಗೊಳಿಸುವಿಕೆ ಮತ್ತು ಹೆಚ್ಚುವರಿ ಭೂಮಿಯ ಆರ್ಜನೆ) (ತಿದ್ದುಪಡಿ) ಅಧಿನಿಯಮ, 1972 (ಬಿಹಾರ ಅಧಿನಿಯಮ 1973ರ 1).

69. ಬಿಹಾರ ಭೂ ಸುಧಾರಣಾ (ಪರಮಾವಧಿ ಮಿತಿ ವಿಸ್ತೀರ್ಣ ನಿಗದಿಗೊಳಿಸುವಿಕೆ ಮತ್ತು ಹೆಚ್ಚುವರಿ ಭೂಮಿಯ ಆರ್ಜನೆ) (ತಿದ್ದುಪಡಿ) ಅಧಿನಿಯಮ, 1973 (ಬಿಹಾರ ಅಧಿನಿಯಮ 1973ರ IX).

70. ಬಿಹಾರ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 1972 (ಬಿಹಾರ ಅಧಿನಿಯಮ 1972ರ V).

71. ಗುಜರಾತ್ ಕೃಷಿ ಭೂಮಿಗಳ ಪರಮಾವಧಿ ಮಿತಿ (ತಿದ್ದುಪಡಿ) ಅಧಿನಿಯಮ, 1972 (ಗುಜರಾತ್ ಅಧಿನಿಯಮ 1974ರ 2).

---

1. 1972ನೇ ಇಸವಿಯ ಸಂವಿಧಾನ (ಇಪ್ಪತ್ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (9.6.1972 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1974ನೆಯ ಇಸವಿಯ ಸಂವಿಧಾನ (ಮೂವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (7.9.1974 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

72. ಹರಿಯಾಣ ಭೂ ಹಿಡುವಳಿಗಳ ಪರಮಾವಧಿ ಮಿತಿ ಅಧಿನಿಯಮ, 1972 (ಹರಿಯಾಣ ಅಧಿನಿಯಮ 1972ರ 26).

73. ಹಿಮಾಚಲ ಪ್ರದೇಶ ಭೂ ಹಿಡುವಳಿಗಳ ಪರಮಾವಧಿ ಮಿತಿ ಅಧಿನಿಯಮ, 1972 (ಹಿಮಾಚಲ ಪ್ರದೇಶ ಅಧಿನಿಯಮ 1973ರ 19).

74. ಕೇರಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1972 (ಕೇರಳ ಅಧಿನಿಯಮ 1972ರ 17).

75. ಮಧ್ಯಪ್ರದೇಶ ಕೃಷಿ ಹಿಡುವಳಿಗಳ ಪರಮಾವಧಿ ಮಿತಿ (ತಿದ್ದುಪಡಿ) ಅಧಿನಿಯಮ, 1972 (ಮಧ್ಯಪ್ರದೇಶ ಅಧಿನಿಯಮ 1974ರ 12).

76. ಮಧ್ಯಪ್ರದೇಶ ಕೃಷಿ ಹಿಡುವಳಿಗಳ ಪರಮಾವಧಿ ಮಿತಿ (ಎರಡನೆಯ ತಿದ್ದುಪಡಿ) ಅಧಿನಿಯಮ, 1972 (ಮಧ್ಯಪ್ರದೇಶ ಅಧಿನಿಯಮ 1974ರ 13).

77. ಮೈಸೂರು ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1973 (ಕರ್ನಾಟಕ ಅಧಿನಿಯಮ 1974ರ 1).

78. ಪಂಜಾಬ್ ಭೂ ಸುಧಾರಣಾ ಅಧಿನಿಯಮ, 1972 (ಪಂಜಾಬ್ ಅಧಿನಿಯಮ 1973ರ 10).

79. ರಾಜಸ್ಥಾನ ಕೃಷಿ ಹಿಡುವಳಿಗಳ ಮೇಲೆ ಪರಮಾವಧಿ ಮಿತಿ ವಿಧಿಸುವ ಅಧಿನಿಯಮ, 1973 (ರಾಜಸ್ಥಾನ ಅಧಿನಿಯಮ 1973ರ 11).

80. ಗೂಡಲೂರು ಜನ್ಮಮ್ ಎಸ್ಟೇಟುಗಳ (ರದ್ದಿಯಾತಿ ಮತ್ತು ರೈತವಾರಿ ಪರಿವರ್ತನೆ) ಅಧಿನಿಯಮ, 1969 (ತಮಿಳುನಾಡು ಅಧಿನಿಯಮ 1969ರ 24)

81. ಪಶ್ಚಿಮ ಬಂಗಾಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1972 (ಪಶ್ಚಿಮ ಬಂಗಾಳ ಅಧಿನಿಯಮ 1972ರ XII).

82. ಪಶ್ಚಿಮ ಬಂಗಾಳ ಎಸ್ಟೇಟುಗಳ ಆರ್ಜನೆ (ತಿದ್ದುಪಡಿ) ಅಧಿನಿಯಮ, 1964 (ಪಶ್ಚಿಮ ಬಂಗಾಳ ಅಧಿನಿಯಮ 1964ರ XXII).

83. ಪಶ್ಚಿಮ ಬಂಗಾಳ ಎಸ್ಟೇಟುಗಳ ಆರ್ಜನೆ (ಎರಡನೆಯ ತಿದ್ದುಪಡಿ) ಅಧಿನಿಯಮ, 1973 (ಪಶ್ಚಿಮ ಬಂಗಾಳ ಅಧಿನಿಯಮ 1973ರ XXXIII).

84. ಮುಂಬಯಿ ಗೇಣಿದಾರಿಕೆ ಮತ್ತು ಕೃಷಿ ಭೂಮಿಗಳ (ಗುಜರಾತ್ ತಿದ್ದುಪಡಿ) ಅಧಿನಿಯಮ, 1972 (ಗುಜರಾತ್ ಅಧಿನಿಯಮ 1973ರ 5).

85. ಒರಿಸ್ಸಾ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 1974 (ಒರಿಸ್ಸಾ ಅಧಿನಿಯಮ 1974ರ 9).

86. ತ್ರಿಪುರ ಭೂ ಕಂದಾಯ ಮತ್ತು ಭೂ ಸುಧಾರಣಾ (ಎರಡನೆಯ ತಿದ್ದುಪಡಿ) ಅಧಿನಿಯಮ, 1974 (ತ್ರಿಪುರ ಅಧಿನಿಯಮ 1974ರ 7).]

[1][2][* * * * * *]

88. ಉದ್ದಿಮೆಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1951 (ಕೇಂದ್ರ ಅಧಿನಿಯಮ 1951ರ 65)

89. ಸ್ಥಿರ ಸ್ವತ್ತಿನ ಕಡ್ಡಾಯ ಕೋರಿಕೆ ಮತ್ತು ಆರ್ಜನೆ ಅಧಿನಿಯಮ, 1952 (ಕೇಂದ್ರ ಅಧಿನಿಯಮ 1952ರ 30).

90. ಗಣಿ ಮತ್ತು ಖನಿಜ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1957 (ಕೇಂದ್ರ ಅಧಿನಿಯಮ 1957ರ 67).

91. ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರೀ ಪದ್ಧತಿ ಅಧಿನಿಯಮ, 1969 (ಕೇಂದ್ರ ಅಧಿನಿಯಮ 1969ರ 54).

[2]* * * * *

1. 1975ನೆಯ ಇಸವಿಯ ಸಂವಿಧಾನ (ಮೂವತ್ತೊಂಬತ್ತನೆಯ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ ಮೂಲಕ (10.8.1975 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1978ನೆಯ ಇಸವಿಯ ಸಂವಿಧಾನ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 44ನೇ ಪ್ರಕರಣದ ಮೂಲಕ (20-6-1979ರಿಂದ ಜಾರಿಗೆ ಬರುವಂತೆ) 87ನೇ ಮತ್ತು 92ನೇ ನಮೂದುಗಳನ್ನು ಬಿಟ್ಟುಬಿಡಲಾಗಿದೆ.

93. ಕೋಕ್ ತಯಾರಿಕೆ ಕಲ್ಲಿದ್ದಲು ಗಣಿಗಳ (ತುರ್ತು ಉಪಬಂಧಗಳ) ಅಧಿನಿಯಮ, 1971 (ಕೇಂದ್ರ ಅಧಿನಿಯಮ 1971ರ 64).

94. ಕೋಕ್ ತಯಾರಿಕೆ ಕಲ್ಲಿದ್ದಲು ಗಣಿಗಳ (ರಾಷ್ಟ್ರೀಕರಣ) ಅಧಿನಿಯಮ, 1972 (ಕೇಂದ್ರ ಅಧಿನಿಯಮ 1972ರ 36).

95. ಸಾಮಾನ್ಯ ವಿಮಾ ವ್ಯವಹಾರ (ರಾಷ್ಟ್ರೀಕರಣ) ಅಧಿನಿಯಮ, 1972 (ಕೇಂದ್ರ ಅಧಿನಿಯಮ 1972ರ 57).

96. ಭಾರತ ತಾಮ್ರ ನಿಗಮ (ಉದ್ಯಮದ ಆರ್ಜನೆ) ಅಧಿನಿಯಮ, 1972 (ಕೇಂದ್ರ ಅಧಿನಿಯಮ 1972ರ 58).

97. ರೋಗಗ್ರಸ್ಥ ಜವಳಿ ಉದ್ಯಮಗಳ (ಆಡಳಿತ ವಹಿಸಿಕೊಳ್ಳುವ) ಅಧಿನಿಯಮ, 1972 (ಕೇಂದ್ರ ಅಧಿನಿಯಮ 1972ರ 72).

98. ಕಲ್ಲಿದ್ದಲು ಗಣಿಗಳ (ಆಡಳಿತ ವಹಿಸಿಕೊಳ್ಳುವ) ಅಧಿನಿಯಮ, 1973 (ಕೇಂದ್ರ ಅಧಿನಿಯಮ 1973ರ 15).

99. ಕಲ್ಲಿದ್ದಲು ಗಣಿಗಳ (ರಾಷ್ಟ್ರೀಕರಣ) ಅಧಿನಿಯಮ, 1973 (ಕೇಂದ್ರ ಅಧಿನಿಯಮ 1973ರ 26).

100. ವಿದೇಶಿ ವಿನಿಮಯ ರೆಗ್ಯುಲೇಷನ್ ಅಧಿನಿಯಮ, 1973 (ಕೇಂದ್ರ ಅಧಿನಿಯಮ 1973ರ 46).

101. ಆಲ್‌ಕಾಕ್ ಆಶ್‌ಡೌನ್ ಕಂಪನಿ ಲಿಮಿಟೆಡ್ (ಉದ್ಯಮಗಳ ಆರ್ಜನೆ) ಅಧಿನಿಯಮ, 1973 (ಕೇಂದ್ರ ಅಧಿನಿಯಮ 1973ರ 56).

102. ಕಲ್ಲಿದ್ದಲು ಗಣಿಗಳ (ಸಂರಕ್ಷಣೆ ಮತ್ತು ಅಭಿವೃದ್ಧಿ ) ಅಧಿನಿಯಮ, 1974 (ಕೇಂದ್ರ ಅಧಿನಿಯಮ 1974ರ 28).

103. ಹೆಚ್ಚುವರಿ ಉಪಲಬ್ಧಿಗಳ (ಕಡ್ಡಾಯ ಠೇವಣಿ) ಅಧಿನಿಯಮ, 1974 (ಕೇಂದ್ರ ಅಧಿನಿಯಮ 1974ರ 37).

104. ವಿದೇಶಿ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಾಣಿಕೆ ಚಟುವಟಿಕೆಗಳ ಪ್ರತಿಬಂಧ ಅಧಿನಿಯಮ, 1974 (ಕೇಂದ್ರ ಅಧಿನಿಯಮ 1974ರ 52).

105. ರೋಗಗ್ರಸ್ಥ ಜವಳಿ ಉದ್ಯಮಗಳ (ರಾಷ್ಟ್ರೀಕರಣ) ಅಧಿನಿಯಮ, 1974 (ಕೇಂದ್ರ ಅಧಿನಿಯಮ 1974ರ 57).

106. ಮಹಾರಾಷ್ಟ್ರ ಕೃಷಿ ಭೂಮಿಗಳ (ಹಿಡುವಳಿಗಳ ಪರಮಾವಧಿ ಮಿತಿ) (ತಿದ್ದುಪಡಿ) ಅಧಿನಿಯಮ, 1964 (ಮಹಾರಾಷ್ಟ್ರ ಅಧಿನಿಯಮ 1965ರ XVI).

107. ಮಹಾರಾಷ್ಟ್ರ ಕೃಷಿ ಭೂಮಿಗಳ (ಹಿಡುವಳಿಗಳ ಪರಮಾವಧಿ ಮಿತಿ) (ತಿದ್ದುಪಡಿ) ಅಧಿನಿಯಮ, 1965 (ಮಹಾರಾಷ್ಟ್ರ ಅಧಿನಿಯಮ 1965ರ XXXII).

108. ಮಹಾರಾಷ್ಟ್ರ ಕೃಷಿಭೂಮಿಗಳ (ಹಿಡುವಳಿ ಪರಮಾವಧಿ ಮಿತಿ) (ತಿದ್ದುಪಡಿ) ಅಧಿನಿಯಮ, 1968 (ಮಹಾರಾಷ್ಟ್ರ ಅಧಿನಿಯಮ 1968ರ XVI)

109. ಮಹಾರಾಷ್ಟ್ರ ಕೃಷಿಭೂಮಿಗಳ (ಹಿಡುವಳಿಗಳ ಪರಮಾವಧಿ ಮಿತಿ) (ಎರಡನೆಯ ತಿದ್ದುಪಡಿ) ಅಧಿನಿಯಮ, 1968 (ಮಹಾರಾಷ್ಟ್ರ ಅಧಿನಿಯಮ 1968ರ XXXIII).

110. ಮಹಾರಾಷ್ಟ್ರ ಕೃಷಿ ಭೂಮಿಗಳ (ಹಿಡುವಳಿಗಳ ಪರಮಾವಧಿ ಮಿತಿ) (ತಿದ್ದುಪಡಿ) ಅಧಿನಿಯಮ, 1969 (ಮಹಾರಾಷ್ಟ್ರ ಅಧಿನಿಯಮ 1969ರ XXXVII).

111. ಮಹಾರಾಷ್ಟ್ರ ಕೃಷಿ ಭೂಮಿಗಳ (ಹಿಡುವಳಿಗಳ ಪರಮಾವಧಿ ಮಿತಿ) (ಎರಡನೆಯ ತಿದ್ದುಪಡಿ) ಅಧಿನಿಯಮ, 1969 (ಮಹಾರಾಷ್ಟ್ರ ಅಧಿನಿಯಮ 1969ರ XXXVIII).

112. ಮಹಾರಾಷ್ಟ್ರ ಕೃಷಿ ಭೂಮಿಗಳ (ಹಿಡುವಳಿಗಳ ಪರಮಾವಧಿ ಮಿತಿ) (ತಿದ್ದುಪಡಿ) ಅಧಿನಿಯಮ, 1970 (ಮಹಾರಾಷ್ಟ್ರ ಅಧಿನಿಯಮ 1970ರ XXVII).

113. ಮಹಾರಾಷ್ಟ್ರ ಕೃಷಿ ಭೂಮಿಗಳ (ಹಿಡುವಳಿಗಳ ಪರಮಾವಧಿ ಮಿತಿ) (ತಿದ್ದುಪಡಿ) ಅಧಿನಿಯಮ, 1972 (ಮಹಾರಾಷ್ಟ್ರ ಅಧಿನಿಯಮ 1972ರ XIII)

114. ಮಹಾರಾಷ್ಟ್ರ ಕೃಷಿ ಭೂಮಿಗಳ (ಹಿಡುವಳಿಗಳ ಪರಮಾವಧಿ ಮಿತಿ) (ತಿದ್ದುಪಡಿ) ಅಧಿನಿಯಮ, 1973 (ಮಹಾರಾಷ್ಟ್ರ ಅಧಿನಿಯಮ 1973ರ L).

115. ಒರಿಸ್ಸಾ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1965 (ಒರಿಸ್ಸಾ ಅಧಿನಿಯಮ 1965ರ 13).

116. ಒರಿಸ್ಸಾ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1966 (ಒರಿಸ್ಸಾ ಅಧಿನಿಯಮ 1967ರ 8).

117. ಒರಿಸ್ಸಾ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1967 (ಒರಿಸ್ಸಾ ಅಧಿನಿಯಮ 1967ರ 13).

118. ಒರಿಸ್ಸಾ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1969 (ಒರಿಸ್ಸಾ ಅಧಿನಿಯಮ 1969ರ 13).

119. ಒರಿಸ್ಸಾ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1970 (ಒರಿಸ್ಸಾ ಅಧಿನಿಯಮ 1970ರ 18).

120. ಉತ್ತರ ಪ್ರದೇಶ ಭೂ ಹಿಡುವಳಿಗಳ ಮೇಲೆ ಪರಮಾವಧಿ ಮಿತಿ ವಿಧಿಸುವ (ತಿದ್ದುಪಡಿ) ಅಧಿನಿಯಮ, 1972 (ಉತ್ತರಪ್ರದೇಶ ಅಧಿನಿಯಮ 1973ರ 18).

121. ಉತ್ತರ ಪ್ರದೇಶ ಭೂ ಹಿಡುವಳಿಗಳ ಮೇಲೆ ಪರಮಾವಧಿ ಮಿತಿ ವಿಧಿಸುವ (ತಿದ್ದುಪಡಿ) ಅಧಿನಿಯಮ, 1974 (ಉತ್ತರಪ್ರದೇಶ ಅಧಿನಿಯಮ 1975ರ 2).

122. ತ್ರಿಪುರ ಭೂಕಂದಾಯ ಮತ್ತು ಭೂ ಸುಧಾರಣಾ (ಮೂರನೆಯ ತಿದ್ದುಪಡಿ) ಅಧಿನಿಯಮ, 1975 (ತ್ರಿಪುರ ಅಧಿನಿಯಮ 1975ರ 3).

123. ದಾದ್ರಾ ಮತ್ತು ನಗರ ಹವೇಲಿ ಭೂ ಸುಧಾರಣಾ ರೆಗ್ಯುಲೇಷನ್, 1971 (1971ರ 3).

124. ದಾದ್ರಾ ಮತ್ತು ನಗರ ಹವೇಲಿ ಭೂ ಸುಧಾರಣಾ (ತಿದ್ದುಪಡಿ) ರೆಗ್ಯುಲೇಷನ್, 1973 (1973ರ 5).]

[1][125. ಮೋಟಾರು ವಾಹನಗಳ ಅಧಿನಿಯಮ, 1939[2]ರ (ಕೇಂದ್ರ ಅಧಿನಿಯಮ 1939ರ 4) ಪ್ರಕರಣ 66ಎ ಮತ್ತು ಅಧ್ಯಾಯ IVಎ.

126. ಅವಶ್ಯಕ ಸರಕುಗಳ ಅಧಿನಿಯಮ, 1955 (ಕೇಂದ್ರ ಅಧಿನಿಯಮ 1955ರ 10).

127. ಕಳ್ಳ ಸಾಗಾಣಿಕೆದಾರರ ಮತ್ತು ವಿದೇಶಿ ವಿನಿಮಯ ವಂಚಕರ (ಸ್ವತ್ತಿನ ಮುಟ್ಟುಗೋಲು) ಅಧಿನಿಯಮ, 1976 (ಕೇಂದ್ರ ಅಧಿನಿಯಮ 1976ರ 13).

128. ಜೀತಪದ್ಧತಿ (ನಿರ್ಮೂಲನ) ಅಧಿನಿಯಮ, 1976 (ಕೇಂದ್ರ ಅಧಿನಿಯಮ 1976ರ 19).

129. ವಿದೇಶೀ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಾಣಿಕೆ ಚಟುವಟಿಕೆಗಳ ಪ್ರತಿಬಂಧ (ತಿದ್ದುಪಡಿ) ಅಧಿನಿಯಮ, 1976 (ಕೇಂದ್ರ ಅಧಿನಿಯಮ 1976ರ 20).

[3] * * * * *

131. ಲೆವಿ ಸಕ್ಕರೆ ಬೆಲೆ ಸಮೀಕರಣ ನಿಧಿ ಅಧಿನಿಯಮ, 1976 (ಕೇಂದ್ರ ಅಧಿನಿಯಮ 1976ರ 31).

132. ನಗರ ಭೂಮಿ (ಪರಮಾವಧಿ ಮಿತಿ ಮತ್ತು ನಿಯಂತ್ರಣ) ಅಧಿನಿಯಮ, 1976 (ಕೇಂದ್ರ ಅಧಿನಿಯಮ 1976ರ 33).

---

1. 1976ನೆಯ ಇಸವಿಯ ಸಂವಿಧಾನ (ನಲವತ್ತನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಮೂಲಕ (27.5.1976 ರಿಂದ ಜಾರಿಗೆ ಬರುವಂತೆ) 125 ರಿಂದ 188ರ ವರೆಗಿನ ನಮೂದುಗಳನ್ನು ಸೇರಿಸಲಾಗಿದೆ.
2. ಈಗ 1988ನೇ ಇಸವಿಯ ಮೋಟಾರು ವಾಹನಗಳ ಅಧಿನಿಯಮದ (1988ರ 59) ಸುಸಂಗತ ಉಪಬಂಧಗಳನ್ನು ನೋಡಿ.
3. 1978ನೆಯ ಇಸವಿಯ ಸಂವಿಧಾನ (ನಲವತ್ನಾಲ್ಕನೆಯ ತಿದ್ದುಪಡಿ) ಅಧಿನಿಯಮದ 44ನೇ ಪ್ರಕರಣದ ಮೂಲಕ 130ನೇ ನಮೂದನ್ನು (20-6-1979ರಿಂದ ಜಾರಿಗೆ ಬರುವಂತೆ) ಬಿಟ್ಟುಬಿಡಲಾಗಿದೆ.

133. ಒಕ್ಕೂಟದ ಲೆಕ್ಕಪತ್ರಗಳ ವಿಭಾಗೀಕರಣ (ಸಿಬ್ಬಂದಿ ವರ್ಗದ ವರ್ಗಾವಣೆ) ಅಧಿನಿಯಮ, 1976 (ಕೇಂದ್ರ ಅಧಿನಿಯಮ 1976ರ 59).

134. ಅಸ್ಸಾಂ ಭೂ ಹಿಡುವಳಿಗಳ ಪರಮಾವಧಿ ಮಿತಿ ನಿಗದಿಗೊಳಿಸುವ ಅಧಿನಿಯಮ, 1956 (ಅಸ್ಸಾಂ ಅಧಿನಿಯಮ 1957ರ 1).

135. ಮುಂಬಯಿ ಗೇಣಿದಾರಿಕೆ ಮತ್ತು ಕೃಷಿ ಭೂಮಿಗಳ (ವಿದರ್ಭ ಪ್ರದೇಶ) ಅಧಿನಿಯಮ, 1958 (ಮುಂಬಯಿ ಅಧಿನಿಯಮ 1958ರ XCIX).

136. ಗುಜರಾತ್ ಖಾಸಗೀ ಅರಣ್ಯಗಳ (ಆರ್ಜನೆ) ಅಧಿನಿಯಮ, 1972 (ಗುಜರಾತ್ ಅಧಿನಿಯಮ 1973ರ 14).

137. ಹರಿಯಾಣ ಭೂ ಹಿಡುವಳಿಗಳ ಪರಮಾವಧಿ ಮಿತಿ (ತಿದ್ದುಪಡಿ) ಅಧಿನಿಯಮ, 1976 (ಹರಿಯಾಣ ಅಧಿನಿಯಮ 1976ರ 17).

138. ಹಿಮಾಚಲ ಪ್ರದೇಶ ಗೇಣೀದಾರಿಕೆ ಮತ್ತು ಭೂ ಸುಧಾರಣಾ ಅಧಿನಿಯಮ, 1972 (ಹಿಮಾಚಲ ಪ್ರದೇಶ ಅಧಿನಿಯಮ 1974ರ 8).

139. ಹಿಮಾಚಲ ಪ್ರದೇಶ ಗ್ರಾಮಗಳ ಸಾರ್ವಜನಿಕ ಭೂಮಿಗಳ ನಿಹಿತತೆ ಮತ್ತು ಬಳಕೆ ಅಧಿನಿಯಮ, 1974 (ಹಿಮಾಚಲ ಪ್ರದೇಶ ಅಧಿನಿಯಮ 1974ರ 18).

140. ಕರ್ನಾಟಕ ಭೂ ಸುಧಾರಣಾ (ಎರಡನೆಯ ತಿದ್ದುಪಡಿ ಮತ್ತು ಸಂಕೀರ್ಣ ಉಪಬಂಧಗಳು) ಅಧಿನಿಯಮ, 1974 (ಕರ್ನಾಟಕ ಅಧಿನಿಯಮ 1974ರ 31).

141. ಕರ್ನಾಟಕ ಭೂ ಸುಧಾರಣಾ (ಎರಡನೆಯ ತಿದ್ದುಪಡಿ) ಅಧಿನಿಯಮ, 1976 (ಕರ್ನಾಟಕ ಅಧಿನಿಯಮ 1976ರ 27).

142. ಕೇರಳ ಒಕ್ಕಲೆಬ್ಬಿಸುವುದನ್ನು ಪ್ರತಿಬಂಧಿಸುವ ಅಧಿನಿಯಮ, 1966 (ಕೇರಳ ಅಧಿನಿಯಮ 1966ರ 12).

143. ತಿರುಪ್ಪುವರಂ ಸಂದಾಯ (ರದ್ದಿಯಾತಿ) ಅಧಿನಿಯಮ, 1969 (ಕೇರಳ ಅಧಿನಿಯಮ 1969ರ 19).

144. ಶ್ರೀಪಾದಂ ಭೂಮಿಗಳ ವಿಮುಕ್ತಿ ಅಧಿನಿಯಮ, 1969 (ಕೇರಳ ಅಧಿನಿಯಮ 1969ರ 20).

145. ಶ್ರೀ ಪಂಢರವಕಾ ಭೂಮಿಗಳ (ನಿಹಿತತೆ ಮತ್ತು ವಿಮುಕ್ತಿ) ಅಧಿನಿಯಮ, 1971 (ಕೇರಳ ಅಧಿನಿಯಮ 1971ರ 20).

146. ಕೇರಳ ಖಾಸಗಿ ಅರಣ್ಯಗಳ (ನಿಹಿತತೆ ಮತ್ತು ಹಸ್ತಾಂತರಣ) ಅಧಿನಿಯಮ, 1971 (ಕೇರಳ ಅಧಿನಿಯಮ 1971ರ 26).

147. ಕೇರಳ ಕೃಷಿ ಕೆಲಸಗಾರರ ಅಧಿನಿಯಮ, 1974 (ಕೇರಳ ಅಧಿನಿಯಮ 1974ರ 18).

148. ಕೇರಳ ಗೇರುಬೀಜ ಕಾರ್ಖಾನೆಗಳ (ಆರ್ಜನೆ) ಅಧಿನಿಯಮ, 1974 (ಕೇರಳ ಅಧಿನಿಯಮ 1974ರ 29).

149. ಕೇರಳ ಚೀಟಿಗಳ ಅಧಿನಿಯಮ. 1975 (ಕೇರಳ ಅಧಿನಿಯಮ 1975ರ 23).

150. ಕೇರಳ ಅನುಸೂಚಿತ ಬುಡಕಟ್ಟುಗಳ (ಭೂ ವರ್ಗಾವಣೆ ಮೇಲೆ ನಿರ್ಬಂಧ ಮತ್ತು ಪರಭಾರೆಯಾದ ಭೂಮಿಗಳನ್ನು ವಾಪಸ್ಸು ಕೊಡುವ) ಅಧಿನಿಯಮ, 1975 (ಕೇರಳ ಅಧಿನಿಯಮ 1975ರ 31).

151. ಕೇರಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1976 (ಕೇರಳ ಅಧಿನಿಯಮ 1976ರ 15).

152. ಕಾನಂ ಗೇಣಿದಾರಿ ರದ್ದಿಯಾತಿ ಅಧಿನಿಯಮ, 1976 (ಕೇರಳ ಅಧಿನಿಯಮ 1976ರ 16).

153. ಮಧ್ಯಪ್ರದೇಶ ಕೃಷಿ ಹಿಡುವಳಿಗಳ ಪರಮಾವಧಿ ಮಿತಿ (ತಿದ್ದುಪಡಿ) ಅಧಿನಿಯಮ, 1974 (ಮಧ್ಯಪ್ರದೇಶ ಅಧಿನಿಯಮ 1974ರ 20).

154. ಮಧ್ಯಪ್ರದೇಶ ಕೃಷಿ ಹಿಡುವಳಿಗಳ ಪರಮಾವಧಿ ಮಿತಿ (ತಿದ್ದುಪಡಿ) ಅಧಿನಿಯಮ, 1975 (ಮಧ್ಯಪ್ರದೇಶ ಅಧಿನಿಯಮ 1976ರ 2).

155. ಪಶ್ಚಿಮ ಖಾನದೇಶ ಮೆಹವಾಸಿ ಎಸ್ಟೇಟುಗಳ (ಒಡೆತನದ ಹಕ್ಕುಗಳ ರದ್ದಿಯಾತಿ, ಇತ್ಯಾದಿ) ರೆಗ್ಯುಲೇಷನ್, 1961 (ಮಹಾರಾಷ್ಟ್ರ ರೆಗ್ಯುಲೇಷನ್ 1962ರ I).

156. ಮಹಾರಾಷ್ಟ್ರ ಅನುಸೂಚಿತ ಬುಡಕಟ್ಟುಗಳಿಗೆ ಭೂಮಿಗಳನ್ನು ವಾಪಸ್ಸು ಕೊಡುವ ಅಧಿನಿಯಮ, 1974 (ಮಹಾರಾಷ್ಟ್ರ ಅಧಿನಿಯಮ 1975ರ XIV).

157. ಮಹಾರಾಷ್ಟ್ರ ಕೃಷಿ ಭೂಮಿಗಳ (ಹಿಡುವಳಿಗಳ ಪರಮಾವಧಿ ಮಿತಿಯನ್ನು ಕಡಿಮೆ ಮಾಡುವ) ಮತ್ತು (ತಿದ್ದುಪಡಿ) ಅಧಿನಿಯಮ, 1972 (ಮಹಾರಾಷ್ಟ್ರ ಅಧಿನಿಯಮ 1975ರ XXI).

158. ಮಹಾರಾಷ್ಟ್ರ ಖಾಸಗಿ ಅರಣ್ಯಗಳ (ಆರ್ಜನೆ) ಅಧಿನಿಯಮ, 1975 (ಮಹಾರಾಷ್ಟ್ರ ಅಧಿನಿಯಮ 1975ರ XXIX).

159. ಮಹಾರಾಷ್ಟ್ರ ಕೃಷಿ ಭೂಮಿಗಳ (ಹಿಡುವಳಿಗಳ ಪರಮಾವಧಿ ಮಿತಿಯನ್ನು ಕಡಿಮೆ ಮಾಡುವ) (ತಿದ್ದುಪಡಿ) ಅಧಿನಿಯಮ, 1975 (ಮಹಾರಾಷ್ಟ್ರ ಅಧಿನಿಯಮ 1975ರ XLVII).

160. ಮಹಾರಾಷ್ಟ್ರ ಕೃಷಿ ಭೂಮಿಗಳ (ಹಿಡುವಳಿಗಳ ಪರಮಾವಧಿ ಮಿತಿ) (ತಿದ್ದುಪಡಿ) ಅಧಿನಿಯಮ, 1975 (ಮಹಾರಾಷ್ಟ್ರ ಅಧಿನಿಯಮ 1975ರ II).

161. ಒರಿಸ್ಸಾ ಎಸ್ಟೇಟುಗಳ ರದ್ದಿಯಾತಿ ಅಧಿನಿಯಮ, 1951 (ಒರಿಸ್ಸಾ ಅಧಿನಿಯಮ 1952ರ 1).

162. ರಾಜಸ್ಥಾನ ಕಾಲೋನಿ ಸ್ಥಾಪನೆ ಅಧಿನಿಯಮ, 1954 (ರಾಜಸ್ಥಾನ ಅಧಿನಿಯಮ 1954ರ XXVII).

163. ರಾಜಸ್ಥಾನ ಭೂ ಸುಧಾರಣಾ ಮತ್ತು ಭೂ ಒಡೆಯರ ಎಸ್ಟೇಟುಗಳ ಆರ್ಜನೆ ಅಧಿನಿಯಮ, 1963 (ರಾಜಸ್ಥಾನ ಅಧಿನಿಯಮ 1964ರ 11).

164. ರಾಜಸ್ಥಾನ ಕೃಷಿ ಹಿಡುವಳಿಗಳ ಮೇಲೆ ಪರಮಾವಧಿ ಮಿತಿಯನ್ನು ವಿಧಿಸುವ (ತಿದ್ದುಪಡಿ) ಅಧಿನಿಯಮ, 1976 (ರಾಜಸ್ಥಾನ ಅಧಿನಿಯಮ 1976ರ 8).

165. ರಾಜಸ್ಥಾನ ಗೇಣೀದಾರಿ (ತಿದ್ದುಪಡಿ) ಅಧಿನಿಯಮ, 1976 (ರಾಜಸ್ಥಾನ ಅಧಿನಿಯಮ 1976ರ 12).

166. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿಯನ್ನು ಕಡಿಮೆ ಮಾಡುವ) ಅಧಿನಿಯಮ, 1970 (ತಮಿಳುನಾಡು ಅಧಿನಿಯಮ 1970ರ 17).

167. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ತಿದ್ದುಪಡಿ ಅಧಿನಿಯಮ, 1971 (ತಮಿಳುನಾಡು ಅಧಿನಿಯಮ 1971ರ 41).

168. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ತಿದ್ದುಪಡಿ ಅಧಿನಿಯಮ, 1972 (ತಮಿಳುನಾಡು ಅಧಿನಿಯಮ 1972ರ 10).

169. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ಎರಡನೆಯ ತಿದ್ದುಪಡಿ ಅಧಿನಿಯಮ, 1972 (ತಮಿಳುನಾಡು ಅಧಿನಿಯಮ 1972ರ 20).

170. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ಮೂರನೆಯ ತಿದ್ದುಪಡಿ ಅಧಿನಿಯಮ, 1972 (ತಮಿಳುನಾಡು ಅಧಿನಿಯಮ 1972ರ 37).

171. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ನಾಲ್ಕನೆಯ ತಿದ್ದುಪಡಿ ಅಧಿನಿಯಮ, 1972 (ತಮಿಳುನಾಡು ಅಧಿನಿಯಮ 1972ರ 39).

172. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ಆರನೆಯ ತಿದ್ದುಪಡಿ ಅಧಿನಿಯಮ, 1972 (ತಮಿಳುನಾಡು ಅಧಿನಿಯಮ 1974ರ 7).

173. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ಐದನೆಯ ತಿದ್ದುಪಡಿ ಅಧಿನಿಯಮ, 1972 (ತಮಿಳುನಾಡು ಅಧಿನಿಯಮ 1974ರ 10).

174. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ತಿದ್ದುಪಡಿ ಅಧಿನಿಯಮ, 1974 (ತಮಿಳುನಾಡು ಅಧಿನಿಯಮ 1974ರ 15).

175. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ಮೂರನೆಯ ತಿದ್ದುಪಡಿ ಅಧಿನಿಯಮ, 1974 (ತಮಿಳುನಾಡು ಅಧಿನಿಯಮ 1974ರ 30).

176. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ಎರಡನೆಯ ತಿದ್ದುಪಡಿ ಅಧಿನಿಯಮ, 1974 (ತಮಿಳುನಾಡು ಅಧಿನಿಯಮ 1974ರ 32).

177. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ತಿದ್ದುಪಡಿ ಅಧಿನಿಯಮ, 1975 (ತಮಿಳುನಾಡು ಅಧಿನಿಯಮ 1975ರ 11).

178. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ಎರಡನೆಯ ತಿದ್ದುಪಡಿ ಅಧಿನಿಯಮ, 1975 (ತಮಿಳುನಾಡು ಅಧಿನಿಯಮ 1975ರ 21).

179. ಉತ್ತರ ಪ್ರದೇಶ ಭೂ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1971 (ಉತ್ತರ ಪ್ರದೇಶ ಅಧಿನಿಯಮ 1971ರ 21) ಮತ್ತು ಉತ್ತರ ಪ್ರದೇಶ ಭೂ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1974, (ಉತ್ತರ ಪ್ರದೇಶ ಅಧಿನಿಯಮ 1974ರ 34) ಇವುಗಳ ಮೂಲಕ ಉತ್ತರ ಪ್ರದೇಶ ಜಮೀನ್ದಾರಿ ರದ್ದಿಯಾತಿ ಮತ್ತು ಭೂ ಸುಧಾರಣಾ ಅಧಿನಿಯಮ, 1950 (ಉತ್ತರ ಪ್ರದೇಶ ಅಧಿನಿಯಮ 1951ರ I) ಕ್ಕೆ ಮಾಡಿದ ತಿದ್ದುಪಡಿಗಳು.

180. ಉತ್ತರ ಪ್ರದೇಶ ಭೂ ಹಿಡುವಳಿಗಳ ಮೇಲೆ ಪರಮಾವಧಿ ಮಿತಿ ವಿಧಿಸುವ (ತಿದ್ದುಪಡಿ) ಅಧಿನಿಯಮ, 1976 (ಉತ್ತರ ಪ್ರದೇಶ ಅಧಿನಿಯಮ 1976ರ 20).

181. ಪಶ್ಚಿಮ ಬಂಗಾಳ ಭೂ ಸುಧಾರಣಾ (ಎರಡನೆಯ ತಿದ್ದುಪಡಿ) ಅಧಿನಿಯಮ, 1972 (ಪಶ್ಚಿಮ ಬಂಗಾಳ ಅಧಿನಿಯಮ 1972ರ XXVIII).

182. ಪಶ್ಚಿಮ ಬಂಗಾಳ ಪರಭಾರೆಯಾದ ಭೂಮಿಯನ್ನು ವಾಪಸ್ಸು ಕೊಡುವ ಅಧಿನಿಯಮ, 1973 (ಪಶ್ಚಿಮ ಬಂಗಾಳ ಅಧಿನಿಯಮ 1973ರ XXIII).

183. ಪಶ್ಚಿಮ ಬಂಗಾಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1974 (ಪಶ್ಚಿಮ ಬಂಗಾಳ ಅಧಿನಿಯಮ 1974ರ XXXIII).

184. ಪಶ್ಚಿಮ ಬಂಗಾಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1975 (ಪಶ್ಚಿಮ ಬಂಗಾಳ ಅಧಿನಿಯಮ 1975ರ XXIII).

185. ಪಶ್ಚಿಮ ಬಂಗಾಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1976 (ಪಶ್ಚಿಮ ಬಂಗಾಳ ಅಧಿನಿಯಮ 1976ರ XII).

186. ದೆಹಲಿ ಭೂ ಹಿಡುವಳಿಗಳ (ಪರಮಾವಧಿ ಮಿತಿ) ತಿದ್ದುಪಡಿ ಅಧಿನಿಯಮ, 1976 (ಕೇಂದ್ರ ಅಧಿನಿಯಮ 1976ರ 15).

187. ಗೋವಾ, ದಮನ್ ಮತ್ತು ದೀವ್ ಮುಂಡಕಾರ್ಸ್ (ಒಕ್ಕಲೆಬ್ಬಿಸುವುದರಿಂದ ಸಂರಕ್ಷಣೆ) ಅಧಿನಿಯಮ, 1975 (ಗೋವಾ, ದಮನ್ ಮತ್ತು ದೀವ್ ಅಧಿನಿಯಮ 1976ರ 1).

188. ಪಾಂಡಿಚೆರಿ ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ಅಧಿನಿಯಮ, 1973 (ಪಾಂಡಿಚೆರಿ ಅಧಿನಿಯಮ 1974ರ 9).]

[1][189. ಅಸ್ಸಾಂ (ತಾತ್ಕಾಲಿಕವಾಗಿ ನೆಲೆಗೊಳಿಸಲಾದ ಪ್ರದೇಶಗಳ) ಗೇಣಿದಾರಿಕೆ ಅಧಿನಿಯಮ, 1971 (ಅಸ್ಸಾಂ ಅಧಿನಿಯಮ 1971ರ XXIII).

190. ಅಸ್ಸಾಂ (ತಾತ್ಕಾಲಿಕವಾಗಿ ನೆಲೆಗೊಳಿಸಲಾದ ಪ್ರದೇಶಗಳ) ತಿದ್ದುಪಡಿ ಅಧಿನಿಯಮ, 1974 (ಅಸ್ಸಾಂ ಅಧಿನಿಯಮ 1974ರ XXVIII).

191. ಬಿಹಾರ ಭೂ ಸುಧಾರಣಾ (ಪರಮಾವಧಿ ವಿಸ್ತೀರ್ಣ ನಿಗದಿಗೊಳಿಸುವಿಕೆ ಮತ್ತು ಹೆಚ್ಚುವರಿ ಭೂಮಿಯ ಆರ್ಜನೆ) (ತಿದ್ದುಪಡಿ) ತಿದ್ದುಪಡಿ ಮಾಡುವ ಅಧಿನಿಯಮ, 1974 (ಬಿಹಾರ ಅಧಿನಿಯಮ 1975ರ 13).

192. ಬಿಹಾರ ಭೂ ಸುಧಾರಣಾ (ಪರಮಾವಧಿ ವಿಸ್ತೀರ್ಣ ನಿಗದಿಗೊಳಿಸುವಿಕೆ ಮತ್ತು ಹೆಚ್ಚುವರಿ ಭೂಮಿಯ ಆರ್ಜನೆ) (ತಿದ್ದುಪಡಿ) ಅಧಿನಿಯಮ, 1976 (ಬಿಹಾರ ಅಧಿನಿಯಮ 1976ರ 22).

193. ಬಿಹಾರ ಭೂ ಸುಧಾರಣಾ (ಪರಮಾವಧಿ ಮಿತಿ ವಿಸ್ತೀರ್ಣ ನಿಗದಿಗೊಳಿಸುವಿಕೆ ಮತ್ತು ಹೆಚ್ಚುವರಿ ಭೂಮಿಯ ಆರ್ಜನೆ) (ತಿದ್ದುಪಡಿ) ಅಧಿನಿಯಮ, 1978. (ಬಿಹಾರ ಅಧಿನಿಯಮ 1978ರ VII).

194. ಭೂ ಆರ್ಜನೆ (ಬಿಹಾರ ತಿದ್ದುಪಡಿ) ಅಧಿನಿಯಮ, 1979 (ಬಿಹಾರ ಅಧಿನಿಯಮ 1980ರ 2).

195. ಹರಿಯಾಣ ಭೂ ಹಿಡುವಳಿಗಳ ಪರಮಾವಧಿ ಮಿತಿ (ತಿದ್ದುಪಡಿ) ಅಧಿನಿಯಮ, 1977 (ಹರಿಯಾಣ ಅಧಿನಿಯಮ 1977ರ 14).

196. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) (ತಿದ್ದುಪಡಿ) ಅಧಿನಿಯಮ, 1978 (ತಮಿಳುನಾಡು ಅಧಿನಿಯಮ 1978ರ 25).

197. ತಮಿಳುನಾಡು ಭೂ ಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) (ತಿದ್ದುಪಡಿ) ಅಧಿನಿಯಮ, 1979 (ತಮಿಳುನಾಡು ಅಧಿನಿಯಮ 1979ರ 11).

198. ಉತ್ತರ ಪ್ರದೇಶ ಜಮೀನ್ದಾರಿ ರದ್ದತಿ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1978 (ಉತ್ತರ ಪ್ರದೇಶ ಅಧಿನಿಯಮ 1978ರ 15).

199. ಪಶ್ಚಿಮ ಬಂಗಾಳ ಪರಭಾರೆ ಮಾಡಿದ ಭೂಮಿಯನ್ನು ವಾಪಸು ಕೊಡುವ (ತಿದ್ದುಪಡಿ) ಅಧಿನಿಯಮ, 1978 (ಪಶ್ಚಿಮ ಬಂಗಾಳ ಅಧಿನಿಯಮ 1978ರ XXIV).

200. ಪಶ್ಚಿಮ ಬಂಗಾಳ ಪರಭಾರೆ ಮಾಡಿದ ಭೂಮಿಯನ್ನು ವಾಪಸು ಕೊಡುವ (ತಿದ್ದುಪಡಿ) ಅಧಿನಿಯಮ, 1980 (ಪಶ್ಚಿಮ ಬಂಗಾಳ ಅಧಿನಿಯಮ 1980ರ LVI).

201. ಗೋವಾ, ದಮನ್ ಮತ್ತು ದೀವ್ ಕೃಷಿ ಗೇಣಿದಾರಿಕೆ ಅಧಿನಿಯಮ, 1964 (ಗೋವಾ, ದಮನ್ ಮತ್ತು ದೀವ್ ಅಧಿನಿಯಮ 1964ರ 7).

202. ಗೋವಾ, ದಮನ್ ಮತ್ತು ದೀವ್ ಕೃಷಿ ಗೇಣಿದಾರಿಕೆ (ಐದನೆಯ ತಿದ್ದುಪಡಿ) ಅಧಿನಿಯಮ, 1976 (ಗೋವಾ, ದಮನ್ ಮತ್ತು ದೀವ್ ಅಧಿನಿಯಮ 1976ರ 17).]

---

1. 1984ನೇ ಇಸವಿಯ ಸಂವಿಧಾನ (ನಲವತ್ತೇಳನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ 189 ರಿಂದ 202ರವರೆಗಿನ ನಮೂದುಗಳನ್ನು (26-8-1984ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

[1][203. ಆಂಧ್ರಪ್ರದೇಶ ಅನುಸೂಚಿತ ಪ್ರದೇಶಗಳ ಭೂ ವರ್ಗಾವಣೆ ರೆಗ್ಯುಲೇಷನ್, 1959 (ಆಂಧ್ರಪ್ರದೇಶ ರೆಗ್ಯುಲೇಷನ್ 1959ರ 1).

204. ಆಂಧ್ರಪ್ರದೇಶ ಅನುಸೂಚಿತ ಪ್ರದೇಶಗಳ ಕಾನೂನುಗಳ (ವಿಸ್ತರಣೆ ಮತ್ತು ತಿದ್ದುಪಡಿ) ರೆಗ್ಯುಲೇಷನ್, 1963 (ಆಂಧ್ರಪ್ರದೇಶ ರೆಗ್ಯುಲೇಷನ್ 1963ರ 2).

205. ಆಂಧ್ರಪ್ರದೇಶ ಅನುಸೂಚಿತ ಪ್ರದೇಶಗಳ ಭೂ ವರ್ಗಾವಣೆ (ತಿದ್ದುಪಡಿ) ರೆಗ್ಯುಲೇಷನ್, 1970 (ಆಂಧ್ರಪ್ರದೇಶ ರೆಗ್ಯುಲೇಷನ್ 1970ರ 1).

206. ಆಂಧ್ರಪ್ರದೇಶ ಅನುಸೂಚಿತ ಪ್ರದೇಶಗಳ ಭೂ ವರ್ಗಾವಣೆ (ತಿದ್ದುಪಡಿ) ರೆಗ್ಯುಲೇಷನ್, 1971 (ಆಂಧ್ರಪ್ರದೇಶ ರೆಗ್ಯುಲೇಷನ್ 1971ರ 1).

207. ಆಂಧ್ರಪ್ರದೇಶ ಅನುಸೂಚಿತ ಪ್ರದೇಶಗಳ ಭೂ ವರ್ಗಾವಣೆ (ತಿದ್ದುಪಡಿ) ರೆಗ್ಯುಲೇಷನ್, 1978 (ಆಂಧ್ರಪ್ರದೇಶ ರೆಗ್ಯುಲೇಷನ್ 1978ರ 1).

208. ಬಿಹಾರ ಗೇಣಿದಾರಿಕೆ ಅಧಿನಿಯಮ, 1885 (ಬಿಹಾರ ಅಧಿನಿಯಮ 1885ರ 8).

209. ಛೋಟಾ ನಾಗಪುರ ಗೇಣಿದಾರಿಕೆ ಅಧಿನಿಯಮ, 1908 (ಬಂಗಾಳ ಅಧಿನಿಯಮ 1908ರ 6) – ಅಧ್ಯಾಯ VIII – 46, 47, 48, 48ಎ ಮತ್ತು 49ನೇ ಪ್ರಕರಣಗಳು; ಅಧ್ಯಾಯ-X- 71, 71ಎ ಮತ್ತು 71ಬಿ ಪ್ರಕರಣಗಳು ಮತ್ತು ಅಧ್ಯಾಯ XVIII – 240, 241 ಮತ್ತು 242ನೇ ಪ್ರಕರಣಗಳು).

210. ಸಂತಾಲ್ ಪರಗಣಗಳ ಗೇಣಿದಾರಿಕೆ (ಪೂರಕ ಉಪಬಂಧಗಳು) ಅಧಿನಿಯಮ, 1949 (ಬಿಹಾರ ಅಧಿನಿಯಮ 1949ರ 14) 53ನೇ ಪ್ರಕರಣವನ್ನು ಹೊರತುಪಡಿಸಿ.

211. ಬಿಹಾರ ಅನುಸೂಚಿತ ಪ್ರದೇಶಗಳ ರೆಗ್ಯುಲೇಷನ್, 1969 (ಬಿಹಾರ ರೆಗ್ಯುಲೇಷನ್ 1969ರ 1).

212. ಬಿಹಾರ ಭೂ ಸುಧಾರಣೆಗಳ (ಪರಮಾವಧಿ ಮಿತಿ ವಿಸ್ತೀರ್ಣ ನಿಗದಿಗೊಳಿಸುವಿಕೆ ಮತ್ತು ಹೆಚ್ಚುವರಿ ಭೂಮಿಯ ಆರ್ಜನೆ) (ತಿದ್ದುಪಡಿ) ಅಧಿನಿಯಮ, 1982 (ಬಿಹಾರ ಅಧಿನಿಯಮ 1982ರ 55).

213. ಗುಜರಾತ್ ದೇವಸ್ಥಾನ ಇನಾಮುಗಳ ರದ್ದಿಯಾತಿ ಅಧಿನಿಯಮ, 1969 (ಗುಜರಾತ್ ಅಧಿನಿಯಮ 1969ರ 16).

214. ಗುಜರಾತ್ ಗೇಣಿದಾರಿಕೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1976 (ಗುಜರಾತ್ ಅಧಿನಿಯಮ 1976ರ 37).

215. ಗುಜರಾತ್ ಕೃಷಿ ಭೂಮಿಗಳ ಪರಮಾವಧಿ ಮಿತಿ (ತಿದ್ದುಪಡಿ) ಅಧಿನಿಯಮ, 1976 (ರಾಷ್ಟ್ರಪತಿಯ ಅಧಿನಿಯಮ 1976ರ 43).

216. ಗುಜರಾತ್ ದೇವಸ್ಥಾನ ಇನಾಮುಗಳ ರದ್ದಿಯಾತಿ (ತಿದ್ದುಪಡಿ) ಅಧಿನಿಯಮ, 1977 (ಗುಜರಾತ್ ಅಧಿನಿಯಮ 1977ರ 27).

217. ಗುಜರಾತ್ ಗೇಣಿದಾರಿಕೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1977 (ಗುಜರಾತ್ ಅಧಿನಿಯಮ 1977ರ 30).

218. ಮುಂಬಯಿ ಭೂ ಕಂದಾಯ (ಗುಜರಾತ್ ಎರಡನೇ ತಿದ್ದುಪಡಿ) ಅಧಿನಿಯಮ, 1980 (ಗುಜರಾತ್ ಅಧಿನಿಯಮ 1980ರ 37).

219. ಮುಂಬಯಿ ಭೂ ಕಂದಾಯ ಸಂಹಿತೆ ಮತ್ತು ಭೂ ಹಿಡುವಳಿ ರದ್ದಿಯಾತಿ ಕಾನೂನುಗಳ (ಗುಜರಾತ್ ತಿದ್ದುಪಡಿ) ಅಧಿನಿಯಮ, 1982 (ಗುಜರಾತ್ ಅಧಿನಿಯಮ 1982ರ 8).

---

1. 1990ನೇ ಇಸವಿಯ ಸಂವಿಧಾನ (ಅರವತ್ತಾರನೆಯ ತಿದ್ದುಪಡಿ) ಅಧಿನಿಯಮದ 2ನೆಯ ಪ್ರಕರಣದ ಮೂಲಕ (7.6.1990 ರಿಂದ ಜಾರಿಗೆ ಬರುವಂತೆ) 203 ರಿಂದ 257ರ ವರೆಗಿನ ನಮೂದುಗಳನ್ನು ಸೇರಿಸಲಾಗಿದೆ.

220. ಹಿಮಾಚಲ ಪ್ರದೇಶ ಭೂ ವರ್ಗಾವಣೆ (ರೆಗ್ಯುಲೇಷನ್) ಅಧಿನಿಯಮ, 1968 (ಹಿಮಾಚಲ ಪ್ರದೇಶ ಅಧಿನಿಯಮ 1969ರ 15).

221. ಹಿಮಾಚಲ ಪ್ರದೇಶ ಭೂ ವರ್ಗಾವಣೆ (ರೆಗ್ಯುಲೇಷನ್) (ತಿದ್ದುಪಡಿ) ಅಧಿನಿಯಮ, 1986 (ಹಿಮಾಚಲ ಪ್ರದೇಶ ಅಧಿನಿಯಮ 1986ರ 16).

222. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) ಅಧಿನಿಯಮ, 1978 (ಕರ್ನಾಟಕ ಅಧಿನಿಯಮ 1979ರ 2).

223. ಕೇರಳ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 1978 (ಕೇರಳ ಅಧಿನಿಯಮ 1978ರ 13).

224. ಕೇರಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1981 (ಕೇರಳ ಅಧಿನಿಯಮ 1981ರ 19).

225. ಮಧ್ಯಪ್ರದೇಶ ಭೂ ಕಂದಾಯ ಸಂಹಿತೆ (ಮೂರನೇ ತಿದ್ದುಪಡಿ) ಅಧಿನಿಯಮ, 1976 (ಮಧ್ಯಪ್ರದೇಶ ಅಧಿನಿಯಮ 1976ರ 61).

226. ಮಧ್ಯಪ್ರದೇಶ ಭೂ ಕಂದಾಯ ಸಂಹಿತೆ (ತಿದ್ದುಪಡಿ) ಅಧಿನಿಯಮ, 1980 (ಮಧ್ಯಪ್ರದೇಶ ಅಧಿನಿಯಮ 1980ರ 15).

227. ಮಧ್ಯಪ್ರದೇಶ ಅಕೃಷಿಕ ಜೋತ್ ಉಚ್ಚತಮ ಸೀಮಾ ಅಧಿನಿಯಮ, 1981 (ಮಧ್ಯಪ್ರದೇಶ ಅಧಿನಿಯಮ 1981ರ 11).

228. ಮಧ್ಯಪ್ರದೇಶ ಕೃಷಿ ಹಿಡುವಳಿಗಳ ಮೇಲೆ ಪರಮಾವಧಿ ಮಿತಿ (ಎರಡನೇ ತಿದ್ದುಪಡಿ) ಅಧಿನಿಯಮ, 1976 (ಮಧ್ಯಪ್ರದೇಶ ಅಧಿನಿಯಮ 1984ರ 1).

229. ಮಧ್ಯಪ್ರದೇಶ ಕೃಷಿ ಹಿಡುವಳಿಗಳ ಮೇಲೆ ಪರಮಾವಧಿ ಮಿತಿ (ತಿದ್ದುಪಡಿ) ಅಧಿನಿಯಮ, 1984 (ಮಧ್ಯಪ್ರದೇಶ ಅಧಿನಿಯಮ 1984ರ 14).

230. ಮಧ್ಯಪ್ರದೇಶ ಕೃಷಿ ಹಿಡುವಳಿಗಳ ಮೇಲೆ ಪರಮಾವಧಿ ಮಿತಿ (ತಿದ್ದುಪಡಿ) ಅಧಿನಿಯಮ, 1989 (ಮಧ್ಯಪ್ರದೇಶ ಅಧಿನಿಯಮ 1989ರ 8).

231. ಮಹಾರಾಷ್ಟ್ರ ಭೂ ಕಂದಾಯ ಸಂಹಿತೆ, 1966 (ಮಹಾರಾಷ್ಟ್ರ ಅಧಿನಿಯಮ 1966ರ 41) 36, 36ಎ ಮತ್ತು 36ಬಿ ಪ್ರಕರಣಗಳು.

232. ಮಹಾರಾಷ್ಟ್ರ ಭೂ ಕಂದಾಯ ಸಂಹಿತೆ ಮತ್ತು ಮಹಾರಾಷ್ಟ್ರ ಅನುಸೂಚಿತ ಬುಡಕಟ್ಟುಗಳಿಗೆ ಭೂಮಿಗಳನ್ನು ವಾಪಸು ಕೊಡುವ (ಎರಡನೇ ತಿದ್ದುಪಡಿ) ಅಧಿನಿಯಮ, 1976 (ಮಹಾರಾಷ್ಟ್ರ ಅಧಿನಿಯಮ 1977ರ 30).

233. ಕೆಲವು ಭೂಮಿಗಳಲ್ಲಿ ಗಣಿಗಳ ಮತ್ತು ಖನಿಜಗಳ ಬಗ್ಗೆ ಅಸ್ತಿತ್ವದಲ್ಲಿರುವ ಮಾಲೀಕತ್ವದ ಹಕ್ಕುಗಳನ್ನು ರದ್ದುಗೊಳಿಸುವ ಮಹಾರಾಷ್ಟ್ರ ಅಧಿನಿಯಮ, 1985 (ಮಹಾರಾಷ್ಟ್ರ ಅಧಿನಿಯಮ 1985ರ 16).

234. ಒರಿಸ್ಸಾ ಅನುಸೂಚಿತ ಪ್ರದೇಶಗಳ ಸ್ಥಿರಸ್ವತ್ತಿನ ವರ್ಗಾವಣೆ (ಅನುಸೂಚಿತ ಬುಡಕಟ್ಟುಗಳಿಂದ) ರೆಗ್ಯುಲೇಷನ್, 1956 (ಒರಿಸ್ಸಾ ರೆಗ್ಯುಲೇಷನ್ 1956ರ 2).

235. ಒರಿಸ್ಸಾ ಭೂ ಸುಧಾರಣಾ (ಎರಡನೇ ತಿದ್ದುಪಡಿ) ಅಧಿನಿಯಮ, 1975 (ಒರಿಸ್ಸಾ ಅಧಿನಿಯಮ 1976ರ 29).

236. ಒರಿಸ್ಸಾ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1976 (ಒರಿಸ್ಸಾ ಅಧಿನಿಯಮ 1976ರ 30).

237. ಒರಿಸ್ಸಾ ಭೂ ಸುಧಾರಣಾ (ಎರಡನೇ ತಿದ್ದುಪಡಿ) ಅಧಿನಿಯಮ, 1976 (ಒರಿಸ್ಸಾ ಅಧಿನಿಯಮ 1976ರ 44).

238. ರಾಜಸ್ಥಾನ ಕಾಲೋನಿ ಸ್ಥಾಪನೆ (ತಿದ್ದುಪಡಿ) ಅಧಿನಿಯಮ, 1984 (ರಾಜಸ್ಥಾನ ಅಧಿನಿಯಮ 1984ರ 12).

239. ರಾಜಸ್ಥಾನ ಗೇಣಿದಾರಿಕೆ (ತಿದ್ದುಪಡಿ) ಅಧಿನಿಯಮ, 1984 (ರಾಜಸ್ಥಾನ ಅಧಿನಿಯಮ 1984ರ 13).

240. ರಾಜಸ್ಥಾನ ಗೇಣಿದಾರಿಕೆ (ತಿದ್ದುಪಡಿ) ಅಧಿನಿಯಮ, 1987 (ರಾಜಸ್ಥಾನ ಅಧಿನಿಯಮ 1987ರ 21).

241. ತಮಿಳುನಾಡು ಭೂಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ಎರಡನೇ ತಿದ್ದುಪಡಿ ಅಧಿನಿಯಮ, 1979 (ತಮಿಳುನಾಡು ಅಧಿನಿಯಮ 1980ರ 8).

242. ತಮಿಳುನಾಡು ಭೂಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ತಿದ್ದುಪಡಿ ಅಧಿನಿಯಮ, 1980 (ತಮಿಳುನಾಡು ಅಧಿನಿಯಮ 1980ರ 21).

243. ತಮಿಳುನಾಡು ಭೂಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ತಿದ್ದುಪಡಿ ಅಧಿನಿಯಮ, 1981 (ತಮಿಳುನಾಡು ಅಧಿನಿಯಮ 1981ರ 59).

244. ತಮಿಳುನಾಡು ಭೂಸುಧಾರಣಾ (ಭೂ ಪರಮಾವಧಿ ಮಿತಿ ನಿಗದಿ) ಎರಡನೇ ತಿದ್ದುಪಡಿ ಅಧಿನಿಯಮ, 1983 (ತಮಿಳುನಾಡು ಅಧಿನಿಯಮ 1984ರ 2).

245. ಉತ್ತರ ಪ್ರದೇಶ ಭೂ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1982 (ಉತ್ತರ ಪ್ರದೇಶ ಅಧಿನಿಯಮ 1982ರ 20).

246. ಪಶ್ಚಿಮ ಬಂಗಾಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1965 (ಪಶ್ಚಿಮ ಬಂಗಾಳ ಅಧಿನಿಯಮ 1965ರ 18).

247. ಪಶ್ಚಿಮ ಬಂಗಾಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1966 (ಪಶ್ಚಿಮ ಬಂಗಾಳ ಅಧಿನಿಯಮ 1966ರ 11).

248. ಪಶ್ಚಿಮ ಬಂಗಾಳ ಭೂ ಸುಧಾರಣಾ (ಎರಡನೇ ತಿದ್ದುಪಡಿ) ಅಧಿನಿಯಮ, 1969 (ಪಶ್ಚಿಮ ಬಂಗಾಳ ಅಧಿನಿಯಮ 1969ರ 23).

249. ಪಶ್ಚಿಮ ಬಂಗಾಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1977 (ಪಶ್ಚಿಮ ಬಂಗಾಳ ಅಧಿನಿಯಮ 1977ರ 36).

250. ಪಶ್ಚಿಮ ಬಂಗಾಳ ಭೂ ಹಿಡುವಳಿ ಕಂದಾಯ ಅಧಿನಿಯಮ, 1979 (ಪಶ್ಚಿಮ ಬಂಗಾಳ ಅಧಿನಿಯಮ 1979ರ 44).

251. ಪಶ್ಚಿಮ ಬಂಗಾಳ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1980 (ಪಶ್ಚಿಮ ಬಂಗಾಳ ಅಧಿನಿಯಮ 1980ರ 41).

252. ಪಶ್ಚಿಮ ಬಂಗಾಳ ಭೂ ಹಿಡುವಳಿ ಕಂದಾಯ (ತಿದ್ದುಪಡಿ) ಅಧಿನಿಯಮ, 1981 (ಪಶ್ಚಿಮ ಬಂಗಾಳ ಅಧಿನಿಯಮ 1981ರ 33).

253. ಕಲ್ಕತ್ತಾ ಠಿಕ್ಕಾ ಗೇಣಿದಾರಿಕೆ (ಆರ್ಜನೆ ಮತ್ತು ರೆಗ್ಯುಲೇಷನ್) ಅಧಿನಿಯಮ, 1981 (ಪಶ್ಚಿಮ ಬಂಗಾಳ ಅಧಿನಿಯಮ 1981ರ 37).

254. ಪಶ್ಚಿಮ ಬಂಗಾಳ ಭೂ ಹಿಡುವಳಿ ಕಂದಾಯ (ತಿದ್ದುಪಡಿ) ಅಧಿನಿಯಮ, 1982 (ಪಶ್ಚಿಮ ಬಂಗಾಳ ಅಧಿನಿಯಮ 1982ರ 23).

255. ಕಲ್ಕತ್ತಾ ಠಿಕ್ಕಾ ಗೇಣಿದಾರಿಕೆ (ಆರ್ಜನೆ ಮತ್ತು ರೆಗ್ಯುಲೇಷನ್) (ತಿದ್ದುಪಡಿ) ಅಧಿನಿಯಮ, 1984 (ಪಶ್ಚಿಮ ಬಂಗಾಳ ಅಧಿನಿಯಮ 1984ರ 41).

256. ಮಾಹೆ ಭೂ ಸುಧಾರಣಾ ಅಧಿನಿಯಮ, 1968 (ಪಾಂಡಿಚೆರಿ ಅಧಿನಿಯಮ 1968ರ 1).

257. ಮಾಹೆ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1980 (ಪಾಂಡಿಚೆರಿ ಅಧಿನಿಯಮ 1981ರ 1).]

[1][257ಎ. ತಮಿಳುನಾಡು ಹಿಂದುಳಿದ ವರ್ಗಗಳ, ಅನುಸೂಚಿತ ಜಾತಿಗಳ, ಅನುಸೂಚಿತ ಬುಡಕಟ್ಟುಗಳ (ರಾಜ್ಯಾಧೀನ ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಾನಗಳ ಮತ್ತು ಸೇವೆಗಳಲ್ಲಿ ನೇಮಕಗಳ ಅಥವಾ ಹುದ್ದೆಗಳ ಮೀಸಲಾತಿ) ಅಧಿನಿಯಮ, 1993 (ತಮಿಳುನಾಡು ಅಧಿನಿಯಮ 1994ರ 45).]

[2][258. ಬಿಹಾರ ಪ್ರತಿಷ್ಠಿತ ವ್ಯಕ್ತಿಗಳ ಹೊಲಮನೆ ಗೇಣಿದಾರಿಕೆ ಅಧಿನಿಯಮ, 1947 (ಬಿಹಾರ ಅಧಿನಿಯಮ 1948ರ 4).

259. ಬಿಹಾರ ಹಿಡುವಳಿಗಳ ಕ್ರೋಡೀಕರಣ ಮತ್ತು ತುಂಡೀಕರಣ ಪ್ರತಿಬಂಧ ಅಧಿನಿಯಮ, 1956 (ಬಿಹಾರ ಅಧಿನಿಯಮ 1956ರ 22).

260. ಬಿಹಾರ ಹಿಡುವಳಿಗಳ ಕ್ರೋಡೀಕರಣ ಮತ್ತು ತುಂಡೀಕರಣ ಪ್ರತಿಬಂಧ (ತಿದ್ದುಪಡಿ) ಅಧಿನಿಯಮ, 1970 (ಬಿಹಾರ ಅಧಿನಿಯಮ 1970ರ 7).

261. ಬಿಹಾರ ಪ್ರತಿಷ್ಠಿತ ವ್ಯಕ್ತಿಗಳ ಹೊಲಮನೆ ಗೇಣಿದಾರಿಕೆ (ತಿದ್ದುಪಡಿ) ಅಧಿನಿಯಮ, 1970 (ಬಿಹಾರ ಅಧಿನಿಯಮ 1970ರ 9).

262. ಬಿಹಾರ ಹಿಡುವಳಿಗಳ ಕ್ರೋಡೀಕರಣ ಮತ್ತು ತುಂಡೀಕರಣ ಪ್ರತಿಬಂಧ (ತಿದ್ದುಪಡಿ) ಅಧಿನಿಯಮ, 1973 (ಬಿಹಾರ ಅಧಿನಿಯಮ 1975ರ 27).

263. ಬಿಹಾರ ಹಿಡುವಳಿಗಳ ಕ್ರೋಡೀಕರಣ ಮತ್ತು ತುಂಡೀಕರಣ ಪ್ರತಿಬಂಧ (ತಿದ್ದುಪಡಿ) ಅಧಿನಿಯಮ, 1981 (ಬಿಹಾರ ಅಧಿನಿಯಮ 1982ರ 35).

264. ಬಿಹಾರ ಭೂ ಸುಧಾರಣಾ (ಪರಮಾವಧಿ ಮಿತಿ ವಿಸ್ತೀರ್ಣ ನಿಗದಿಪಡಿಸುವಿಕೆ ಮತ್ತು ಹೆಚ್ಚುವರಿ ಭೂಮಿಯ ಆರ್ಜನೆ) (ತಿದ್ದುಪಡಿ) ಅಧಿನಿಯಮ, 1987 (ಬಿಹಾರ ಅಧಿನಿಯಮ ಸಂಖ್ಯೆ 1987ರ 21).

265. ಬಿಹಾರ ಪ್ರತಿಷ್ಠಿತ ವ್ಯಕ್ತಿಗಳ ಹೊಲಮನೆ ಗೇಣಿದಾರಿಕೆ (ತಿದ್ದುಪಡಿ) ಅಧಿನಿಯಮ, 1989 (ಬಿಹಾರ ಅಧಿನಿಯಮ 1989ರ 11).

266. ಬಿಹಾರ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ, 1989 (ಬಿಹಾರ ಅಧಿನಿಯಮ 1990ರ 11).

267. ಕರ್ನಾಟಕ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆಯ ನಿಷೇಧ) (ತಿದ್ದುಪಡಿ) ಅಧಿನಿಯಮ, 1984 (ಕರ್ನಾಟಕ ಅಧಿನಿಯಮ, 1984ರ 3).

268. ಕೇರಳ ಭೂಸುಧಾರಣಾ (ತಿದ್ದುಪಡಿ) ಅಧಿನಿಯಮ, 1989 (ಕೇರಳ ಅಧಿನಿಯಮ 1989ರ 16).

269. ಕೇರಳ ಭೂಸುಧಾರಣಾ (ಎರಡನೇ ತಿದ್ದುಪಡಿ) ಅಧಿನಿಯಮ, 1989 (ಕೇರಳ ಅಧಿನಿಯಮ 1990ರ 2).

270. ಒರಿಸ್ಸಾ ಭೂಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 1989 (ಒರಿಸ್ಸಾ ಅಧಿನಿಯಮ 1990ರ 9).

271. ರಾಜಸ್ಥಾನ ಗೇಣಿದಾರಿಕೆ (ತಿದ್ದುಪಡಿ) ಅಧಿನಿಯಮ, 1979 (ರಾಜಸ್ಥಾನ ಅಧಿನಿಯಮ 1979ರ 16).

272. ರಾಜಸ್ಥಾನ ಕಾಲೋನಿ ಸ್ಥಾಪನೆ (ತಿದ್ದುಪಡಿ) ಅಧಿನಿಯಮ, 1987 (ರಾಜಸ್ಥಾನ ಅಧಿನಿಯಮ 1987ರ 2).

273. ರಾಜಸ್ಥಾನ ಕಾಲೋನಿ ಸ್ಥಾಪನೆ (ತಿದ್ದುಪಡಿ) ಅಧಿನಿಯಮ, 1989 (ರಾಜಸ್ಥಾನ ಅಧಿನಿಯಮ 1989ರ 12).

---

1. 1994ನೇ ಇಸವಿಯ ಸಂವಿಧಾನ (ಎಪ್ಪತ್ತಾರನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (31.8.1994 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 1995ನೇ ಇಸವಿಯ ಸಂವಿಧಾನ (ಎಪ್ಪತ್ತೆಂಟನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೂಲಕ (30.8.1995 ರಿಂದ ಜಾರಿಗೆ ಬರುವಂತೆ) 258 ರಿಂದ 284 ರವರೆಗಿನ ನಮೂದುಗಳನ್ನು ಸೇರಿಸಲಾಗಿದೆ.

274. ತಮಿಳುನಾಡು ಭೂಸುಧಾರಣಾ (ಭೂಪರಮಾವಧಿ ಮಿತಿ ನಿಗದಿಪಡಿಸುವಿಕೆ) ತಿದ್ದುಪಡಿ ಅಧಿನಿಯಮ, 1983 (ತಮಿಳುನಾಡು ಅಧಿನಿಯಮ 1984ರ 3).

275. ತಮಿಳುನಾಡು ಭೂಸುಧಾರಣಾ (ಭೂಪರಮಾವಧಿ ಮಿತಿ ನಿಗದಿಪಡಿಸುವಿಕೆ) ತಿದ್ದುಪಡಿ ಅಧಿನಿಯಮ, 1986 (ತಮಿಳುನಾಡು ಅಧಿನಿಯಮ 1986ರ 57).

276. ತಮಿಳುನಾಡು ಭೂಸುಧಾರಣಾ (ಭೂಪರಮಾವಧಿ ಮಿತಿ ನಿಗದಿಪಡಿಸುವಿಕೆ) ತಿದ್ದುಪಡಿ ಅಧಿನಿಯಮ, 1987 (ತಮಿಳುನಾಡು ಅಧಿನಿಯಮ 1988ರ 4).

277. ತಮಿಳುನಾಡು ಭೂಸುಧಾರಣಾ (ಭೂಪರಮಾವಧಿ ಮಿತಿ ನಿಗದಿಪಡಿಸುವಿಕೆ) ತಿದ್ದುಪಡಿ ಅಧಿನಿಯಮ, 1989 (ತಮಿಳುನಾಡು ಅಧಿನಿಯಮ 1989ರ 30).

278. ಪಶ್ಚಿಮ ಬಂಗಾಳ ಭೂಸುಧಾರಣಾ (ತಿದ್ದುಪಡಿ) ಅಧಿನಿಯಮ, 1981 (ಪಶ್ಚಿಮ ಬಂಗಾಳ ಅಧಿನಿಯಮ 1981ರ 50).

279. ಪಶ್ಚಿಮ ಬಂಗಾಳ ಭೂಸುಧಾರಣಾ (ತಿದ್ದುಪಡಿ) ಅಧಿನಿಯಮ, 1986 (ಪಶ್ಚಿಮ ಬಂಗಾಳ ಅಧಿನಿಯಮ 1986ರ 5).

280. ಪಶ್ಚಿಮ ಬಂಗಾಳ ಭೂಸುಧಾರಣಾ (ಎರಡನೇ ತಿದ್ದುಪಡಿ) ಅಧಿನಿಯಮ, 1986 (ಪಶ್ಚಿಮ ಬಂಗಾಳ ಅಧಿನಿಯಮ 1986ರ 19).

281. ಪಶ್ಚಿಮ ಬಂಗಾಳ ಭೂಸುಧಾರಣೆಗಳ (ಮೂರನೇ ತಿದ್ದುಪಡಿ) ಅಧಿನಿಯಮ, 1986 (ಪಶ್ಚಿಮ ಬಂಗಾಳ ಅಧಿನಿಯಮ 1986ರ 35).

282. ಪಶ್ಚಿಮ ಬಂಗಾಳ ಭೂಸುಧಾರಣಾ (ತಿದ್ದುಪಡಿ) ಅಧಿನಿಯಮ, 1989 (ಪಶ್ಚಿಮ ಬಂಗಾಳ ಅಧಿನಿಯಮ 1989ರ 23).

283. ಪಶ್ಚಿಮ ಬಂಗಾಳ ಭೂಸುಧಾರಣಾ (ತಿದ್ದುಪಡಿ) ಅಧಿನಿಯಮ, 1990 (ಪಶ್ಚಿಮ ಬಂಗಾಳ ಅಧಿನಿಯಮ 1990ರ 24).

284. ಪಶ್ಚಿಮ ಬಂಗಾಳ ಭೂಸುಧಾರಣಾ ನ್ಯಾಯಾಧಿಕರಣ ಅಧಿನಿಯಮ, 1991 (ಪಶ್ಚಿಮ ಬಂಗಾಳ ಅಧಿನಿಯಮ 1991ರ 12).]

**ವಿವರಣೆ:**– 31ಎ ಅನುಚ್ಛೇದದ (1)ನೆಯ ಖಂಡದ ಎರಡನೆಯ ಪರಂತುಕವನ್ನು ಉಲ್ಲಂಘಿಸಿ, ರಾಜಸ್ಥಾನ ಗೇಣಿದಾರಿಕೆ ಅಧಿನಿಯಮ, 1955ರ (ರಾಜಸ್ಥಾನ ಅಧಿನಿಯಮ 1995ರ III) ಮೇರೆಗೆ ಮಾಡಲಾದ ಯಾವುದೇ ಆರ್ಜನೆಯು, ಉಲ್ಲಂಘನೆಯಷ್ಟರ ಮಟ್ಟಿಗೆ, ಶೂನ್ಯವಾಗತಕ್ಕದ್ದು.]

## [1][ಹತ್ತನೆಯ ಅನುಸೂಚಿ

[102 (2) ಮತ್ತು 191 (2)ನೇ ಅನುಚ್ಛೇದಗಳು]

### ಪಕ್ಷಾಂತರದ ಕಾರಣದಿಂದ ಉಂಟಾಗುವ ಅನರ್ಹತೆಗೆ ಸಂಬಂಧಿಸಿದ ಉಪಬಂಧಗಳು

**1. ಅರ್ಥವಿವರಣೆ:-** ಈ ಅನುಸೂಚಿಯಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸದನ" ಎಂದರೆ ಸಂಸತ್ತಿನ ಎರಡೂ ಸದನಗಳು ಅಥವಾ ಒಂದು ರಾಜ್ಯದ ವಿಧಾನಸಭೆ ಅಥವಾ ಸಂದರ್ಭಾನುಸಾರ ಆ ರಾಜ್ಯದ ವಿಧಾನಮಂಡಲದ ಎರಡೂ ಸದನಗಳು;

(ಬಿ) 2ನೆಯ ಪ್ಯಾರಾದ ಅಥವಾ [2]* * * 4ನೆಯ ಪ್ಯಾರಾದ ಉಪಬಂಧಗಳಿಗನುಸಾರವಾಗಿ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದ ಸದನದ ಸದಸ್ಯರಿಗೆ ಸಂಬಂಧಿಸಿದಂತೆ "ಶಾಸಕಾಂಗ ಪಕ್ಷ" ಎಂದರೆ ಸದರಿ ಉಪಬಂಧಗಳಿಗನುಸಾರವಾಗಿ ತತ್ಕಾಲದಲ್ಲಿ ಆ ರಾಜಕೀಯ ಪಕ್ಷಕ್ಕೆ ಸೇರಿದ ಆ ಸದನದ ಎಲ್ಲ ಸದಸ್ಯರನ್ನೊಳಗೊಂಡ ಸಮೂಹ;

(ಸಿ) ಸದನದ ಸದಸ್ಯನಿಗೆ ಸಂಬಂಧಿಸಿದಂತೆ "ಮೂಲ ರಾಜಕೀಯ ಪಕ್ಷ" ಎಂದರೆ 2ನೆಯ ಪ್ಯಾರಾದ (1)ನೆಯ ಉಪ-ಪ್ಯಾರಾದ ಉದ್ದೇಶಗಳಿಗಾಗಿ ಯಾವ ರಾಜಕೀಯ ಪಕ್ಷಕ್ಕೆ ಅವನು ಸೇರಿರುವನೋ ಆ ರಾಜಕೀಯ ಪಕ್ಷ;

(ಡಿ) "ಪ್ಯಾರಾ" ಎಂದರೆ ಈ ಅನುಸೂಚಿಯ ಪ್ಯಾರಾ.

**2. ಪಕ್ಷಾಂತರದ ಕಾರಣದ ಮೇಲೆ ಅನರ್ಹತೆ:-** (1) [3][4 ಮತ್ತು 5ನೆಯ ಪ್ಯಾರಾಗಳ] ಉಪಬಂಧಗಳಿಗೊಳಪಟ್ಟು, ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದ ಸದನದ ಸದಸ್ಯನು,-

(ಎ) ಅಂಥ ರಾಜಕೀಯ ಪಕ್ಷದ ತನ್ನ ಸದಸ್ಯತ್ವವನ್ನು ಸ್ವಇಚ್ಛೆಯಿಂದ ತ್ಯಜಿಸಿದ್ದರೆ; ಅಥವಾ

(ಬಿ) ಯಾವ ರಾಜಕೀಯ ಪಕ್ಷಕ್ಕೆ ಸೇರಿರುವನೋ ಆ ರಾಜಕೀಯ ಪಕ್ಷವು ಅಥವಾ ಈ ಬಗ್ಗೆ ಯಾರೇ ವ್ಯಕ್ತಿಯು ಅಥವಾ ಪ್ರಾಧಿಕಾರಿಯು ನೀಡಿದ ಯಾವುದೇ ನಿರ್ದೇಶನಕ್ಕೆ ವಿರುದ್ಧವಾಗಿ, ಅಂಥ ರಾಜಕೀಯ ಪಕ್ಷದ, ವ್ಯಕ್ತಿಯ ಅಥವಾ ಪ್ರಾಧಿಕಾರಿಯ ಪೂರ್ವಾನುಮತಿ ಪಡೆಯದೆಯೇ ಅಂಥ ಸದನದಲ್ಲಿ ಅವನು ಮತ ನೀಡಿದ ಅಥವಾ ಮತ ನೀಡುವುದರಿಂದ ವಿಮುಖನಾದ ಎರಡೂ ಸಂದರ್ಭಗಳಲ್ಲಿ ಮತ್ತು ಹಾಗೆ ಮತ ನೀಡಿರುವುದನ್ನು ಅಥವಾ ವಿಮುಖನಾಗಿರುವುದನ್ನು ಅಂಥ ರಾಜಕೀಯ ಪಕ್ಷ, ವ್ಯಕ್ತಿ ಅಥವಾ ಪ್ರಾಧಿಕಾರಿಯು ಹಾಗೆ ಮತ ನೀಡಿರುವ ಅಥವಾ ವಿಮುಖನಾದ ದಿನಾಂಕದಿಂದ ಹದಿನೈದು ದಿವಸಗಳೊಳಗಾಗಿ ಮನ್ನಾ ಮಾಡದಿದ್ದರೆ

- ಸದಸ್ಯನಾಗಿರಲು ಅನರ್ಹನಾಗತಕ್ಕದ್ದು.

**ವಿವರಣೆ:-** ಈ ಉಪ-ಪ್ಯಾರಾದ ಉದ್ದೇಶಗಳಿಗಾಗಿ,-

(ಎ) ಸದನದ ಚುನಾಯಿತ ಸದಸ್ಯನನ್ನು ಯಾವುದಾದರೂ ರಾಜಕೀಯ ಪಕ್ಷವು ಚುನಾವಣೆಗೆ ಅಭ್ಯರ್ಥಿಯನ್ನಾಗಿ ನಿಲ್ಲಿಸಿದ್ದರೆ ಅಂಥ ಸದಸ್ಯನು ಆ ರಾಜಕೀಯ ಪಕ್ಷಕ್ಕೆ ಸೇರಿರುವನೆಂದು ಭಾವಿಸತಕ್ಕದ್ದು;

(ಬಿ) ಸದನದ ನಾಮ ನಿರ್ದೇಶಿತ ಸದಸ್ಯನು -

(i) ಸದಸ್ಯನಾಗಿ ನಾಮನಿರ್ದೇಶಿತನಾದ ದಿನಾಂಕದಂದು, ಯಾವುದೇ ರಾಜಕೀಯ ಪಕ್ಷದ ಸದಸ್ಯನಾಗಿರುವಲ್ಲಿ ಅವನು ಅಂಥ ರಾಜಕೀಯ ಪಕ್ಷಕ್ಕೆ ಸೇರಿದವನೆಂದು ಭಾವಿಸತಕ್ಕದ್ದು;

(ii) ಇತರ ಯಾವುದೇ ಸಂದರ್ಭದಲ್ಲಿ, 99ನೆಯ ಅನುಚ್ಛೇದದ ಅಥವಾ ಸಂದರ್ಭಾನುಸಾರ 188ನೆಯ ಅನುಚ್ಛೇದದ ಅಗತ್ಯತೆಗಳನ್ನು ಪಾಲಿಸಿದ ತರುವಾಯ, ಯಾವ ದಿನಾಂಕದಿಂದ ಅವನು ತನ್ನ ಸ್ಥಾನವನ್ನು ವಹಿಸಿಕೊಳ್ಳುವನೋ ಆ ದಿನಾಂಕದಿಂದ ಆರು ತಿಂಗಳುಗಳು ಮುಕ್ತಾಯವಾಗುವ ಮುಂಚೆ, ಯಾವ ರಾಜಕೀಯ ಪಕ್ಷಕ್ಕೆ ಅವನು ಸೇರುವನೋ ಅಥವಾ ಸಂದರ್ಭಾನುಸಾರ ಮೊದಲು ಸದಸ್ಯನಾಗುವನೋ ಆ ರಾಜಕೀಯ ಪಕ್ಷಕ್ಕೆ ಅವನು ಸೇರಿದವನೆಂದು ಭಾವಿಸತಕ್ಕದ್ದು.

---

1. 1985ನೇ ಇಸವಿಯ ಸಂವಿಧಾನ (ಐವತ್ತೆರಡನೇ ತಿದ್ದುಪಡಿ) ಅಧಿನಿಯಮದ 6ನೇ ಪ್ರಕರಣದ ಮೂಲಕ (1-3-85ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. 2003 ನೆಯ ಇಸವಿಯ ಸಂವಿಧಾನ (ತೊಂಬತ್ತೊಂದನೆಯ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ ಕೆಲವು ಪದಗಳನ್ನು ಮತ್ತು ಅಂಕಿಯನ್ನು ಬಿಟ್ಟುಬಿಡಲಾಗಿದೆ.
3. ಅದೇ ಅಧಿನಿಯಮದ 5ನೇ ಪ್ರಕರಣದ ಮೂಲಕ "3, 4 ಮತ್ತು 5ನೇ ಪ್ಯಾರಾಗಳ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(2) ಯಾವುದೇ ರಾಜಕೀಯ ಪಕ್ಷದ ಅಭ್ಯರ್ಥಿಯಾಗಲ್ಲದೆ ಅನ್ಯಥಾ ಸದನದ ಸದಸ್ಯನಾಗಿ ಚುನಾಯಿತನಾಗಿರುವ ಸದಸ್ಯನು, ಅಂಥ ಚುನಾವಣೆಯ ನಂತರ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿಕೊಂಡರೆ, ಅವನು ಸದನದ ಸದಸ್ಯನಾಗಿರಲು ಅನರ್ಹನಾಗತಕ್ಕದ್ದು.

(3) ಸದನದ ನಾಮನಿರ್ದೇಶಿತ ಸದಸ್ಯನು, 99ನೆಯ ಅನುಚ್ಛೇದದ ಅಥವಾ ಸಂದರ್ಭಾನುಸಾರ 188ನೆಯ ಅನುಚ್ಛೇದದ ಅಗತ್ಯತೆಗಳನ್ನು ಪಾಲಿಸಿದ ತರುವಾಯ, ಯಾವ ದಿನಾಂಕದಿಂದ ಅವನು ತನ್ನ ಸ್ಥಾನವನ್ನು ವಹಿಸಿಕೊಳ್ಳುವನೋ ಆ ದಿನಾಂಕದಿಂದ ಆರು ತಿಂಗಳುಗಳು ಮುಕ್ತಾಯವಾದ ತರುವಾಯ ಯಾವುದೇ ರಾಜಕೀಯ ಪಕ್ಷವನ್ನು ಸೇರಿದರೆ ಅವನು ಸದನದ ಸದಸ್ಯನಾಗಿರಲು ಅನರ್ಹನಾಗತಕ್ಕದ್ದು.

(4) ಈ ಪ್ಯಾರಾದ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, 1985ರ ಸಂವಿಧಾನ (ಐವತ್ತೆರಡನೆಯ ತಿದ್ದುಪಡಿ) ಅಧಿನಿಯಮದ ಪ್ರಾರಂಭದಂದು ಸದನದ ಸದಸ್ಯನಾಗಿರುವ ವ್ಯಕ್ತಿಯು (ಚುನಾಯಿತನಾಗಿರಲಿ ಅಥವಾ ನಾಮನಿರ್ದೇಶಿತನಾಗಿರಲಿ),-

(i) ಅಂಥ ಪ್ರಾರಂಭದ ನಿಕಟಪೂರ್ವದಲ್ಲಿ, ಅವನು ಒಂದು ರಾಜಕೀಯ ಪಕ್ಷದ ಸದಸ್ಯನಾಗಿದ್ದಲ್ಲಿ ಈ ಪ್ಯಾರಾದ (1)ನೆಯ ಉಪ-ಪ್ಯಾರಾದ ಉದ್ದೇಶಗಳಿಗಾಗಿ ಅಂಥ ರಾಜಕೀಯ ಪಕ್ಷವು ನಿಲ್ಲಿಸಿದ ಅಭ್ಯರ್ಥಿಯಾಗಿ ಅಂಥ ಸದನದ ಸದಸ್ಯನಾಗಿ ಚುನಾಯಿತನಾಗಿರುವುದಾಗಿ ಭಾವಿಸತಕ್ಕದ್ದು;

(ii) ಇತರ ಯಾವುದೇ ಸಂದರ್ಭದಲ್ಲಿ, ಈ ಪ್ಯಾರಾದ (2)ನೆಯ ಉಪಪ್ಯಾರಾದ ಉದ್ದೇಶಗಳಿಗಾಗಿ, ಯಾವುದೇ ರಾಜಕೀಯ ಪಕ್ಷವು ನಿಲ್ಲಿಸಿದ ಅಭ್ಯರ್ಥಿಯಂತಲ್ಲದೆ ಅನ್ಯಥಾ ಸದನದ ಸದಸ್ಯನಾಗಿ ಚುನಾಯಿತವಾಗಿರುವ ಸದಸ್ಯನೆಂದು ಭಾವಿಸತಕ್ಕದ್ದು ಅಥವಾ ಸಂದರ್ಭಾನುಸಾರ, ಈ ಪ್ಯಾರಾದ (3)ನೇ ಉಪ-ಪ್ಯಾರಾದ ಉದ್ದೇಶಗಳಿಗಾಗಿ ಸದನದ ನಾಮನಿರ್ದೇಶಿತ ಸದಸ್ಯನೆಂದು ಭಾವಿಸತಕ್ಕದ್ದು.

[1] * * * * *

**4. ಪಕ್ಷಾಂತರದ ಕಾರಣದಿಂದ ಉಂಟಾಗುವ ಅನರ್ಹತೆಯು ವಿಲೀನದ ಸಂದರ್ಭದಲ್ಲಿ ಅನ್ವಯಿಸತಕ್ಕದ್ದಲ್ಲ:-** (1) ಸದನದ ಸದಸ್ಯನ ಮೂಲ ರಾಜಕೀಯ ಪಕ್ಷವು ಬೇರೊಂದು ರಾಜಕೀಯ ಪಕ್ಷದೊಡನೆ ವಿಲೀನವಾದರೆ ಮತ್ತು ಅವನು ಹಾಗೂ ಅವನ ಮೂಲ ರಾಜಕೀಯ ಪಕ್ಷದ ಯಾರೇ ಇತರ ಸದಸ್ಯರು,-

(ಎ) ಅಂಥ ಇತರ ರಾಜಕೀಯ ಪಕ್ಷದ ಅಥವಾ ಸಂದರ್ಭಾನುಸಾರ ಅಂಥ ವಿಲೀನದಿಂದ ರಚಿತವಾದ ಹೊಸ ರಾಜಕೀಯ ಪಕ್ಷದ ಸದಸ್ಯರಾಗಿರುವುದಾಗಿ; ಅಥವಾ

(ಬಿ) ವಿಲೀನವನ್ನು ಅಂಗೀಕರಿಸದೆ ಪ್ರತ್ಯೇಕ ಸಮೂಹವಾಗಿ ಕಾರ್ಯ ನಿರ್ವಹಿಸಲು ಆಯ್ಕೆ ಮಾಡಿಕೊಂಡಿರುವುದಾಗಿ

– ಅಂಥ ಸದಸ್ಯನು ಕ್ಲೇಮು ಮಾಡುವಲ್ಲಿ, 2ನೆಯ ಪ್ಯಾರಾದ (1)ನೆಯ ಉಪ-ಪ್ಯಾರಾದ ಮೇರೆಗೆ ಅವನು ಅನರ್ಹನಾಗತಕ್ಕದ್ದಲ್ಲ ಮತ್ತು ಅಂಥ ವಿಲೀನದ ಕಾಲದಿಂದ, ಸಂದರ್ಭಾನುಸಾರ ಅಂಥ ರಾಜಕೀಯ ಪಕ್ಷವನ್ನು ಅಥವಾ ಹೊಸ ರಾಜಕೀಯ ಪಕ್ಷವನ್ನು ಅಥವಾ ಸಮೂಹವನ್ನು, 2ನೆಯ ಪ್ಯಾರಾದ (1)ನೆಯ ಉಪ-ಪ್ಯಾರಾದ ಉದ್ದೇಶಗಳಿಗಾಗಿ ಅವನು ಸೇರಿರುವ ರಾಜಕೀಯ ಪಕ್ಷವೆಂದು ಮತ್ತು ಈ ಉಪ-ಪ್ಯಾರಾದ ಉದ್ದೇಶಗಳಿಗಾಗಿ ಆ ಪಕ್ಷವನ್ನು ಅವನ ಮೂಲ ರಾಜಕೀಯ ಪಕ್ಷವೆಂದು ಭಾವಿಸತಕ್ಕದ್ದು.

(2) ಈ ಪ್ಯಾರಾದ (1)ನೆಯ ಉಪ-ಪ್ಯಾರಾದ ಉದ್ದೇಶಗಳಿಗಾಗಿ ಸಂಬಂಧಪಟ್ಟ ಶಾಸಕಾಂಗ ಪಕ್ಷದ ಸದಸ್ಯರ ಪೈಕಿ ಮೂರನೇ ಎರಡು ಭಾಗಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ಸದನದ ಸದಸ್ಯನ ಮೂಲ ರಾಜಕೀಯ ಪಕ್ಷದ ವಿಲೀನಕ್ಕೆ ಒಪ್ಪಿಕೊಂಡಿದ್ದರೆ ಮತ್ತು ಒಪ್ಪಿಕೊಂಡಿದ್ದರೆ ಮಾತ್ರ, ಅಂಥ ವಿಲೀನವು ಆಗಿರುವುದಾಗಿ ಭಾವಿಸತಕ್ಕದ್ದು.

---

1. 2003 ನೇಯ ಇಸವಿಯ ಸಂವಿಧಾನ (ತೊಂಬತ್ತೊಂದನೆಯ ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣದ ಮೂಲಕ 3ನೇ ಪ್ಯಾರಾವನ್ನು ಬಿಟ್ಟುಬಿಡಲಾಗಿದೆ.

**5. ವಿನಾಯಿತಿ:-** ಈ ಅನುಸೂಚಿಯಲ್ಲಿ ಏನೇ ಅಡಕವಾಗಿದ್ದಾಗ್ಯೂ, ಲೋಕಸಭೆಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಅಥವಾ ರಾಜ್ಯ ಸಭೆಯ ಉಪಸಭಾಪತಿಯ ಅಥವಾ ರಾಜ್ಯದ ವಿಧಾನಪರಿಷತ್ತಿನ ಸಭಾಪತಿಯ ಅಥವಾ ಉಪಸಭಾಪತಿಯ ಅಥವಾ ರಾಜ್ಯದ ವಿಧಾನಸಭೆಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಪದಕ್ಕೆ ಆಯ್ಕೆಯಾಗಿರುವ ವ್ಯಕ್ತಿಯು,-

(ಎ) ಅಂಥ ಪದಕ್ಕೆ ಅವನು ಆಯ್ಕೆಯಾಗಿರುವ ಕಾರಣದಿಂದ, ಅಂಥ ಆಯ್ಕೆಯ ನಿಕಟಪೂರ್ವದಲ್ಲಿ ಅವನು ಯಾವ ರಾಜಕೀಯ ಪಕ್ಷಕ್ಕೆ ಸೇರಿದ್ದನೋ ಆ ರಾಜಕೀಯ ಪಕ್ಷದ ಸದಸ್ಯತ್ವವನ್ನು ಸ್ವಯಿಚ್ಛೆಯಿಂದ ತ್ಯಜಿಸಿದ್ದರೆ ಮತ್ತು ಆ ತರುವಾಯ ಅಂಥ ಪದವನ್ನು ಧಾರಣ ಮಾಡಿರುವವರೆಗೆ ಆ ರಾಜಕೀಯ ಪಕ್ಷಕ್ಕೆ ಪುನಃ ಸೇರದಿದ್ದರೆ ಅಥವಾ ಬೇರೊಂದು ರಾಜಕೀಯ ಪಕ್ಷದ ಸದಸ್ಯನಾಗದಿದ್ದರೆ; ಅಥವಾ

(ಬಿ) ಅಂಥ ಪದಕ್ಕೆ ಅವನು ಆಯ್ಕೆಯಾಗಿರುವ ಕಾರಣದಿಂದ ಅಂಥ ಆಯ್ಕೆಯ ನಿಕಟಪೂರ್ವದಲ್ಲಿ ಯಾವ ರಾಜಕೀಯ ಪಕ್ಷಕ್ಕೆ ಅವನು ಸೇರಿದ್ದನೋ ಆ ರಾಜಕೀಯ ಪಕ್ಷದ ತನ್ನ ಸದಸ್ಯತ್ವವನ್ನು ತ್ಯಜಿಸಿದ್ದು ಅಂಥ ಪದವನ್ನು ಧಾರಣ ಮಾಡುವುದು ನಿಂತುಹೋದ ನಂತರ ಅಂಥ ರಾಜಕೀಯ ಪಕ್ಷಕ್ಕೆ ಅವನು ಪುನಃ ಸೇರಿದರೆ

- ಅವನು ಈ ಅನುಸೂಚಿಯ ಮೇರೆಗೆ ಅನರ್ಹನಾಗತಕ್ಕದ್ದಲ್ಲ.

**6. ಪಕ್ಷಾಂತರದ ಕಾರಣದ ಮೇಲೆ ಅನರ್ಹತೆಗೆ ಸಂಬಂಧಿಸಿದ ಪ್ರಶ್ನೆಗಳ ಬಗ್ಗೆ ತೀರ್ಮಾನ:-** (1) ಈ ಅನುಸೂಚಿಯ ಮೇರೆಗೆ ಸದನದ ಸದಸ್ಯನು ಅನರ್ಹತೆಗೆ ಒಳಪಟ್ಟಿರುವನೇ ಹೇಗೆ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ ಆ ಪ್ರಶ್ನೆಯನ್ನು, ಅಂಥ ಸದನದ ಸಭಾಪತಿಯ ಅಥವಾ ಸಂದರ್ಭಾನುಸಾರ ಅಧ್ಯಕ್ಷನ ತೀರ್ಮಾನಕ್ಕಾಗಿ ಒಪ್ಪಿಸತಕ್ಕದ್ದು ಮತ್ತು ಈ ಬಗ್ಗೆ ಅವನ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು:

ಪರಂತು, ಉದ್ಭವಿಸಿರುವ ಪ್ರಶ್ನೆಯು ಸದನದ ಸಭಾಪತಿಯು ಅಥವಾ ಅಧ್ಯಕ್ಷನು ಅಂಥ ಅನರ್ಹತೆಗೆ ಒಳಪಟ್ಟಿರುವನೇ ಎಂಬುದಾಗಿರುವಲ್ಲಿ, ಆ ಪ್ರಶ್ನೆಯನ್ನು ಈ ಬಗ್ಗೆ ಸದನವು ಆಯ್ಕೆ ಮಾಡಬಹುದಾದಂಥ ಸದನದ ಅಂಥ ಸದಸ್ಯನ ತೀರ್ಮಾನಕ್ಕಾಗಿ ಒಪ್ಪಿಸತಕ್ಕದ್ದು ಮತ್ತು ಅವನ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

(2) ಈ ಅನುಸೂಚಿಯ ಮೇರೆಗೆ ಸದನದ ಸದಸ್ಯನ ಅನರ್ಹತೆಯ ಯಾವುದೇ ಪ್ರಶ್ನೆಗೆ ಸಂಬಂಧಪಟ್ಟಂತೆ ಈ ಪ್ಯಾರಾದ (1)ನೆಯ ಉಪ-ಪ್ಯಾರಾದ ಮೇರೆಗಿನ ಎಲ್ಲ ವ್ಯವಹರಣೆಗಳನ್ನು, 122ನೆಯ ಅನುಚ್ಛೇದದ ಅರ್ಥವ್ಯಾಪ್ತಿಯೊಳಗೆ ಸಂಸತ್ತಿನ ವ್ಯವಹರಣೆಗಳೆಂದು ಅಥವಾ ಸಂದರ್ಭಾನುಸಾರ 212ನೆಯ ಅನುಚ್ಛೇದದ ಅರ್ಥವ್ಯಾಪ್ತಿಯೊಳಗೆ ಒಂದು ರಾಜ್ಯದ ವಿಧಾನಮಂಡಲದ ವ್ಯವಹರಣೆಗಳೆಂದು ಭಾವಿಸತಕ್ಕದ್ದು.

*7. **ನ್ಯಾಯಾಲಯಗಳ ಅಧಿಕಾರವ್ಯಾಪ್ತಿಯ ಪ್ರತಿಷೇಧ:-** ಈ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ, ಈ ಅನುಸೂಚಿಯ ಮೇರೆಗೆ ಸದನದ ಸದಸ್ಯನ ಅನರ್ಹತೆಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಸಂಬಂಧಿಸಿ ಯಾವುದೇ ನ್ಯಾಯಾಲಯವು ಯಾವುದೇ ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

**8. ನಿಯಮಗಳು:-** (1) ಈ ಪ್ಯಾರಾದ (2)ನೆಯ ಉಪಪ್ಯಾರಾದ ಉಪಬಂಧಗಳಿಗೆ ಒಳಪಟ್ಟು, ಸದನದ ಸಭಾಪತಿಯು ಅಥವಾ ಅಧ್ಯಕ್ಷನು ಈ ಅನುಸೂಚಿಯ ಉಪಬಂಧಗಳನ್ನು ಜಾರಿಗೆ ತರುವುದಕ್ಕಾಗಿ ನಿಯಮಗಳನ್ನು ರಚಿಸಬಹುದು ಮತ್ತು ವಿಶೇಷವಾಗಿ ಮತ್ತು ಹಿಂದೆ ಹೇಳಿದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,-

(ಎ) ಸದನದ ಬೇರೆಬೇರೆ ಸದಸ್ಯರು ಬೇರೆಬೇರೆ ರಾಜಕೀಯ ಪಕ್ಷಗಳಿಗೆ ಸೇರಿದ್ದರೆ ಅಂಥ ರಾಜಕೀಯ ಪಕ್ಷಗಳಿಗೆ ಸಂಬಂಧಿಸಿದ ರಿಜಿಸ್ಟರುಗಳನ್ನು ಅಥವಾ ಇತರ ದಾಖಲೆಗಳನ್ನು ನಿರ್ವಹಿಸುವುದಕ್ಕೆ;

(ಬಿ) ಸದನದ ಸದಸ್ಯನಿಗೆ ಸಂಬಂಧಪಟ್ಟಂತೆ ಶಾಸಕಾಂಗ ಪಕ್ಷದ ನಾಯಕನು 2ನೆಯ ಪ್ಯಾರಾದ (1)ನೆಯ ಉಪ-ಪ್ಯಾರಾದ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ಸ್ವರೂಪದ ಯಾವುದೇ ಮನ್ನಾ ಬಗ್ಗೆ ವರದಿಯನ್ನು ಒದಗಿಸುವುದಕ್ಕೆ ಮತ್ತು ಯಾವ ಕಾಲದೊಳಗೆ ಮತ್ತು ಯಾವ ಪ್ರಾಧಿಕಾರಿಗೆ ಅಂಥ ವರದಿಯನ್ನು ಒದಗಿಸಬೇಕೋ ಅಂಥ ಕಾಲ ಮತ್ತು ಪ್ರಾಧಿಕಾರದ ಬಗ್ಗೆ;

---

* ಕಿಹೊತೋ ಹಾಲನ್ - ವಿರುದ್ಧ- ಝಾಕಿಲ್ಲು ಮತ್ತು ಇತರರು (1992) 1 ಎಸ್.ಸಿ.ಸಿ. 309 ರಲ್ಲಿನ ಬಹುಮತದ ಅಭಿಪ್ರಾಯದ ಪ್ರಕಾರ 368ನೇ ಅನುಚ್ಛೇದದ (2)ನೇ ಖಂಡದ ಪರಂತುಕಕ್ಕೆ ಅನುಸಾರವಾಗಿ ಅನುಸಮರ್ಥನೆ ಇಲ್ಲದಕ್ಕಾಗಿ 7ನೇ ಪ್ಯಾರಾವನ್ನು ಅಸಿಂಧುವೆಂದು ಘೋಷಿಸಲಾಗಿದೆ.

(ಸಿ) ಸದನದ ಯಾರೇ ಸದಸ್ಯರನ್ನು ಅಂಥ ರಾಜಕೀಯ ಪಕ್ಷಕ್ಕೆ ಸೇರಿಸಿಕೊಳ್ಳುವ ಬಗ್ಗೆ ರಾಜಕೀಯ ಪಕ್ಷವು ವರದಿಗಳನ್ನು ಒದಗಿಸುವುದಕ್ಕೆ ಮತ್ತು ಅಂಥ ವರದಿಗಳನ್ನು ಸದನದ ಯಾವ ಅಧಿಕಾರಿಗೆ ಒದಗಿಸಬೇಕೋ ಆ ಅಧಿಕಾರಿ ಬಗ್ಗೆ; ಮತ್ತು

(ಡಿ) 6ನೆಯ ಪ್ಯಾರಾದ (1)ನೆಯ ಉಪ-ಪ್ಯಾರಾದಲ್ಲಿ ಉಲ್ಲೇಖಿಸಲಾದ ಯಾವುದೇ ಪ್ರಶ್ನೆಯನ್ನು ತೀರ್ಮಾನಿಸುವ ಉದ್ದೇಶಕ್ಕಾಗಿ ನಡೆಸಬಹುದಾದ ಯಾವುದೇ ವಿಚಾರಣೆಯ ಬಗೆಗಿನ ಪ್ರಕ್ರಿಯೆಯೂ ಸೇರಿದಂತೆ ಅಂಥ ಪ್ರಶ್ನೆಯನ್ನು ಕುರಿತು ತೀರ್ಮಾನಿಸುವ ಪ್ರಕ್ರಿಯೆಯ ಬಗ್ಗೆ

– ಉಪಬಂಧ ಕಲ್ಪಿಸಬಹುದು.

(2) ಈ ಪ್ಯಾರಾದ (1)ನೆಯ ಉಪಪ್ಯಾರಾದ ಮೇರೆಗೆ, ಸದನದ ಸಭಾಪತಿಯು ಅಥವಾ ಅಧ್ಯಕ್ಷನು ರಚಿಸಿದ ನಿಯಮಗಳನ್ನು, ಅವುಗಳನ್ನು ರಚಿಸಿದ ಕೂಡಲೇ ಆದಷ್ಟು ಬೇಗನೆ ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅವುಗಳನ್ನು ಆ ಸದನವು ಮಾರ್ಪಾಟು ಸಹಿತ ಅಥವಾ ಮಾರ್ಪಾಟು ಇಲ್ಲದೆ ಸದರಿ ಅವಧಿಗೆ ಮುಂಚಿತವಾಗಿ ಅನುಮೋದಿಸಿದ ಅಥವಾ ಅನುಮೋದಿಸದಿದ್ದ ಹೊರತು ಸದರಿ ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ಅನಂತರ ಜಾರಿಗೆ ಬರತಕ್ಕದ್ದು ಮತ್ತು ಅವುಗಳನ್ನು ಹಾಗೆ ಅನುಮೋದಿಸಿರುವಲ್ಲಿ ಅಂಥ ಅನುಮೋದನೆಯಾದ ಮೇಲೆ, ಅವುಗಳನ್ನು ಯಾವ ರೂಪದಲ್ಲಿ ಇಡಲಾಗಿತ್ತೋ ಆ ರೂಪದಲ್ಲಿ ಅಥವಾ ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಅವು ಜಾರಿಗೆ ಬರತಕ್ಕದ್ದು ಮತ್ತು ಅವುಗಳನ್ನು ಹಾಗೆ ಅನುಮೋದಿಸದಿರುವಲ್ಲಿ ಅವು ಪರಿಣಾಮವುಳ್ಳವುಗಳಾಗಿರತಕ್ಕದ್ದಲ್ಲ.

(3) ಸದನದ ಅಧ್ಯಕ್ಷನು ಅಥವಾ ಸಭಾಪತಿಯು, 105ನೆಯ ಅನುಚ್ಛೇದದ ಅಥವಾ ಸಂದರ್ಭಾನುಸಾರ 194ನೆಯ ಅನುಚ್ಛೇದದ ಉಪಬಂಧಗಳಿಗೆ ಮತ್ತು ಈ ಸಂವಿಧಾನದ ಮೇರೆಗೆ ಅವನು ಹೊಂದಿರಬಹುದಾದ ಇತರ ಯಾವುದೇ ಅಧಿಕಾರಕ್ಕೆ ಬಾಧಕವಾಗದಂತೆ ಈ ಪ್ಯಾರಾದ ಮೇರೆಗೆ ರಚಿಸಿದ ನಿಯಮಗಳನ್ನು ಯಾರೇ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿದರೆ, ಅಂಥ ಉದ್ದೇಶಪೂರ್ವಕ ಉಲ್ಲಂಘನೆ ಬಗ್ಗೆ, ಸದನದ ವಿಶೇಷಾಧಿಕಾರದ ಉಲ್ಲಂಘನೆಯ ಸಂದರ್ಭದಲ್ಲಿ ಯಾವ ರೀತಿ ವ್ಯವಹರಿಸಲಾಗುವುದೋ ಅದೇ ರೀತಿಯಲ್ಲಿ ವ್ಯವಹರಿಸಬಹುದೆಂದು ನಿರ್ದೇಶಿಸಬಹುದು.]

## [1][ಹನ್ನೊಂದನೇ ಅನುಸೂಚಿ

(ಅನುಚ್ಛೇದ 243ಜಿ)

1. ಕೃಷಿ ವಿಸ್ತರಣೆಯೂ ಸೇರಿದಂತೆ ಕೃಷಿ
2. ಭೂ ಅಭಿವೃದ್ಧಿ, ಭೂ ಸುಧಾರಣೆಗಳ ಅನುಷ್ಠಾನ, ಭೂ ಕ್ರೋಡೀಕರಣ ಮತ್ತು ಭೂಸಾರ ಸಂರಕ್ಷಣೆ
3. ಸಣ್ಣ ನೀರಾವರಿ, ಜಲ ನಿರ್ವಹಣೆ ಮತ್ತು ಜಲಾನಯನ ಪ್ರದೇಶ ಅಭಿವೃದ್ಧಿ
4. ಪಶುಸಂಗೋಪನೆ, ಹೈನುಗಾರಿಕೆ ಮತ್ತು ಕೋಳಿ ಸಾಕಣೆ
5. ಮೀನುಗಾರಿಕೆ
6. ಸಾಮಾಜಿಕ ಅರಣ್ಯ ನಿರ್ಮಾಣ ಮತ್ತು ಕೃಷಿಕ್ಷೇತ್ರ ಅರಣ್ಯ ನಿರ್ಮಾಣ
7. ಕಿರು ಅರಣ್ಯ ಉತ್ಪನ್ನ
8. ಆಹಾರ ಸಂಸ್ಕರಣಾ ಕೈಗಾರಿಕೆಗಳೂ ಸೇರಿದಂತೆ, ಸಣ್ಣ ಪ್ರಮಾಣದ ಕೈಗಾರಿಕೆಗಳು
9. ಖಾದಿ, ಗ್ರಾಮ ಮತ್ತು ಗುಡಿ ಕೈಗಾರಿಕೆಗಳು
10. ಗ್ರಾಮೀಣ ವಸತಿ
11. ಕುಡಿಯುವ ನೀರು
12. ಇಂಧನ ಮತ್ತು ಮೇವು
13. ರಸ್ತೆಗಳು, ಅಡಿಗಾಲುವೆಗಳು, ಸೇತುವೆಗಳು, ಹಾಯ್ಗಡಗಳು, ಜಲಮಾರ್ಗಗಳು ಮತ್ತು ಇತರ ಸಂಪರ್ಕ ಸಾಧನಗಳು
14. ವಿದ್ಯುಚ್ಛಕ್ತಿಯ ವಿತರಣೆಯೂ ಸೇರಿದಂತೆ ಗ್ರಾಮೀಣ ವಿದ್ಯುದೀಕರಣ
15. ಸಾಂಪ್ರದಾಯಕವಲ್ಲದ ಶಕ್ತಿಮೂಲಗಳು
16. ಬಡತನ ನಿರ್ಮೂಲನಾ ಕಾರ್ಯಕ್ರಮ
17. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣವು ಸೇರಿದಂತೆ ಶಿಕ್ಷಣ
18. ತಾಂತ್ರಿಕ ತರಬೇತಿ ಮತ್ತು ವೃತ್ತಿಶಿಕ್ಷಣ
19. ವಯಸ್ಕ ಮತ್ತು ಅನೌಪಚಾರಿಕ ಶಿಕ್ಷಣ
20. ಗ್ರಂಥಾಲಯಗಳು
21. ಸಾಂಸ್ಕೃತಿಕ ಚಟುವಟಿಕೆಗಳು
22. ಮಾರುಕಟ್ಟೆಗಳು ಮತ್ತು ಸಂತೆಗಳು
23. ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಔಷಧಾಲಯಗಳೂ ಸೇರಿದಂತೆ, ಆರೋಗ್ಯ ಮತ್ತು ನೈರ್ಮಲ್ಯ
24. ಕುಟುಂಬ ಕಲ್ಯಾಣ
25. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
26. ಅಂಗವಿಕಲರ ಮತ್ತು ಮನೋವಿಕಲರ ಕಲ್ಯಾಣವೂ ಸೇರಿದಂತೆ ಸಮಾಜ ಕಲ್ಯಾಣ
27. ದುರ್ಬಲ ವರ್ಗಗಳ, ವಿಶೇಷವಾಗಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳವರ ಕಲ್ಯಾಣ
28. ಸಾರ್ವಜನಿಕ ವಿತರಣಾ ವ್ಯವಸ್ಥೆ
29. ಸಮುದಾಯ ಆಸ್ತಿಗಳ ನಿರ್ವಹಣೆ]

---

1. 1992ನೇ ಇಸವಿಯ ಸಂವಿಧಾನ (ಎಪ್ಪತ್ತಮೂರನೆಯ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ (24.4.1993 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.

## [1][ಹನ್ನೆರಡನೇ ಅನುಸೂಚಿ

(ಅನುಚ್ಛೇದ 243 ಡಬ್ಲ್ಯೂ)

1. ಪಟ್ಟಣ ಯೋಜನೆಯೂ ಸೇರಿದಂತೆ ನಗರ ಯೋಜನೆ
2. ಭೂ ಬಳಕೆಯ ನಿಯಂತ್ರಣ ಮತ್ತು ಕಟ್ಟಡಗಳ ನಿರ್ಮಾಣ
3. ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಯೋಜನೆ
4. ರಸ್ತೆಗಳು ಮತ್ತು ಸೇತುವೆಗಳು
5. ಗೃಹ, ಕೈಗಾರಿಕೆ ಮತ್ತು ವಾಣಿಜ್ಯ ಉದ್ದೇಶಗಳಿಗೆ ನೀರು ಸರಬರಾಜು
6. ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಸಂರಕ್ಷಣೆ ಮತ್ತು ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ
7. ಅಗ್ನಿಶಾಮಕ ಸೇವೆಗಳು
8. ನಗರ ವನನಿರ್ಮಾಣ, ಪರಿಸರ ಸಂರಕ್ಷಣೆ ಮತ್ತು ಜೀವಿ ಪರಿಸರ ಅಂಶಗಳ ಸಂವರ್ಧನೆ
9. ಅಂಗವಿಕಲರು ಮತ್ತು ಮನೋವಿಕಲರೂ ಸೇರಿದಂತೆ ಸಮಾಜದ ದುರ್ಬಲ ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡುವುದು
10. ಕೊಳಚೆ ಪ್ರದೇಶ ಅಭಿವೃದ್ಧಿ ಮತ್ತು ಅವುಗಳ ಸುಧಾರಣೆ
11. ನಗರ ಬಡತನ ನಿರ್ಮೂಲನ
12. ಉದ್ಯಾನವನಗಳು, ತೋಟಗಳು, ಆಟದ ಮೈದಾನಗಳಂಥ ನಗರ ಸೌಕರ್ಯಗಳು ಮತ್ತು ಸೌಲಭ್ಯಗಳನ್ನು ಒದಗಿಸುವುದು
13. ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸೌಂದರ್ಯ ವಿಷಯಗಳ ಸಂವರ್ಧನೆ
14. ಹೆಣ ಹೂಳುವುದು ಮತ್ತು ಸ್ಮಶಾನಗಳು; ಶವದಹನ, ಸುಡುಗಾಡು ಮತ್ತು ವಿದ್ಯುತ್ ಚಿತಾಗಾರಗಳು
15. ದನದ ದೊಡ್ಡಿಗಳು; ಪ್ರಾಣಿಹಿಂಸಾ ಪ್ರತಿಬಂಧ
16. ಜನನ ಮತ್ತು ಮರಣಗಳ ನೋಂದಣಿಯೂ ಸೇರಿದಂತೆ ಜನನ ಮರಣ ಅಂಕಿಅಂಶಗಳು
17. ಬೀದಿ ದೀಪಗಳು, ವಾಹನ ನಿಲುಗಡೆ ಸ್ಥಳಗಳು, ಬಸ್ ನಿಲ್ದಾಣಗಳು ಮತ್ತು ಸಾರ್ವಜನಿಕ ಸೌಕರ್ಯಗಳೂ ಸೇರಿದಂತೆ, ಸಾರ್ವಜನಿಕ ಸೌಲಭ್ಯಗಳು
18. ಕಸಾಯಿಖಾನೆಗಳ ಮತ್ತು ಚರ್ಮ ಹದ ಮಾಡುವ ಕಾರ್ಖಾನೆಗಳ ವಿನಿಯಮನ]

---

1. 1992ನೇ ಇಸವಿಯ ಸಂವಿಧಾನ (ಎಪ್ಪತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ 4ನೇ ಪ್ರಕರಣದ ಮೂಲಕ (1.6.1993 ರಿಂದ. ಜಾರಿಗೆ ಬರುವಂತೆ) ಸೇರಿಸಲಾಗಿದೆ.

## ಪರಿಶಿಷ್ಟ – I

### [1] ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶ, 1954

### ಸಿ.ಓ. 48

ಸಂವಿಧಾನದ 370ನೆಯ ಅನುಚ್ಛೇದದ (1)ನೆಯ ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ರಾಷ್ಟ್ರಪತಿಯು ಜಮ್ಮು ಮತ್ತು ಕಾಶ್ಮೀರ ರಾಜ್ಯ ಸರ್ಕಾರದ ಸಹಮತಿಯೊಡನೆ ಕೆಳಕಂಡ ಆದೇಶವನ್ನು ಮಾಡಿದ್ದಾರೆ:-

1. (1) ಈ ಆದೇಶವನ್ನು ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶ, 1954 ಎಂದು ಕರೆಯತಕ್ಕದ್ದು.

(2) ಇದು 1954ರ ಮೇ 14 ರಂದು ಜಾರಿಗೆ ಬರತಕ್ಕದ್ದು, ಮತ್ತು ಆ ತರುವಾಯ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯಿಸುವ) ಆದೇಶ, 1950 ರದ್ದಾಗತಕ್ಕದ್ದು.

2. [2][1964ರ ಜೂನ್ 20ನೇ ದಿನದಂದು ಜಾರಿಯಲ್ಲಿದ್ದ ಮತ್ತು 1966ರ ಸಂವಿಧಾನ (ಹತ್ತೊಂಬತ್ತನೇ ತಿದ್ದುಪಡಿ) ಅಧಿನಿಯಮದ, 1967ರ ಸಂವಿಧಾನ (ಇಪ್ಪತ್ತೊಂದನೇ ತಿದ್ದುಪಡಿ) ಅಧಿನಿಯಮದ, 1967ರ ಸಂವಿಧಾನ (ಇಪ್ಪತ್ತಮೂರನೇ ತಿದ್ದುಪಡಿ) ಅಧಿನಿಯಮದ 5ನೆಯ ಪ್ರಕರಣದ, 1971ರ ಸಂವಿಧಾನ (ಇಪ್ಪತ್ತನಾಲ್ಕನೇ ತಿದ್ದುಪಡಿ) ಅಧಿನಿಯಮದ, 1971ರ ಸಂವಿಧಾನ (ಇಪ್ಪತ್ತೈದನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ, 1971ರ ಸಂವಿಧಾನ (ಇಪ್ಪತ್ತಾರನೇ ತಿದ್ದುಪಡಿ) ಅಧಿನಿಯಮದ, 1972ರ ಸಂವಿಧಾನದ (ಮೂವತ್ತನೇ ತಿದ್ದುಪಡಿ) ಅಧಿನಿಯಮದ, 1973ರ ಸಂವಿಧಾನ (ಮೂವತ್ತೊಂದನೇ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ, 1974ರ ಸಂವಿಧಾನ (ಮೂವತ್ಮೂರನೇ ತಿದ್ದುಪಡಿ) ಅಧಿನಿಯಮದ, 2ನೇ ಪ್ರಕರಣದ, 1975ರ ಸಂವಿಧಾನ (ಮೂವತ್ತೆಂಟನೇ ತಿದ್ದುಪಡಿ) ಅಧಿನಿಯಮದ 2, 5, 6 ಮತ್ತು 7ನೇ ಪ್ರಕರಣಗಳ, 1975ರ ಸಂವಿಧಾನ (ಮೂವತ್ತೊಂಬತ್ತನೇ ತಿದ್ದುಪಡಿ) ಅಧಿನಿಯಮದ 1976ರ ಸಂವಿಧಾನ (ನಲವತ್ತನೇ ತಿದ್ದುಪಡಿ) ಅಧಿನಿಯಮದ, 1985ರ ಸಂವಿಧಾನ (ಐವತ್ತೆರಡನೇ ತಿದ್ದುಪಡಿ ಅಧಿನಿಯಮದ 2, 3 ಮತ್ತು 6ನೇ ಪ್ರಕರಣಗಳ ಮತ್ತು 1988ರ ಸಂವಿಧಾನ (ಅರವತ್ತೊಂದನೇ ತಿದ್ದುಪಡಿ) ಅಧಿನಿಯಮದ ಮೂಲಕ ತಿದ್ದುಪಡಿಯಾದ ಸಂವಿಧಾನದ ಉಪಬಂಧಗಳು, 1ನೇ ಮತ್ತು 370ನೇ ಅನುಚ್ಛೇದಗಳ ಜೊತೆಗೆ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು ಮತ್ತು ಯಾವ ವಿನಾಯಿತಿಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು ಅವು ಹಾಗೆ ಅನ್ವಯವಾಗುತ್ತವೋ ಅವು ಈ ಕೆಳಕಂಡಂತಿರತಕ್ಕದ್ದು:-]

**(1) ಪ್ರಸ್ತಾವನೆ.**

**(2) ಭಾಗ I.**

3ನೇ ಅನುಚ್ಛೇದಕ್ಕೆ ಕೆಳಕಂಡ ಇನ್ನೊಂದು ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತೂ ಪರಂತು, ಜಮ್ಮು ಮತ್ತು ಕಾಶ್ಮೀರ ರಾಜ್ಯದ ಪ್ರದೇಶವನ್ನು ಹೆಚ್ಚಿಸುವುದಕ್ಕೆ ಅಥವಾ ಕಡಿಮೆ ಮಾಡುವುದಕ್ಕೆ ಅಥವಾ ಆ ರಾಜ್ಯದ ಹೆಸರನ್ನು ಅಥವಾ ಸರಹದ್ದನ್ನು ಬದಲಾಯಿಸುವುದಕ್ಕೆ ಉಪಬಂಧಿಸುವ ಯಾವುದೇ ವಿಧೇಯಕವನ್ನು ಆ ರಾಜ್ಯದ ವಿಧಾನ ಮಂಡಲದ ಸಮ್ಮತಿಯಿಲ್ಲದೆ ಸಂಸತ್ತಿನಲ್ಲಿ ಮಂಡಿಸತಕ್ಕದ್ದಲ್ಲ.".

**(3) ಭಾಗ II.**

(ಎ) ಈ ಭಾಗವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಿಸಿದಂತೆ 1950ರ ಜನವರಿ 26ನೇ ದಿನದಿಂದ ಅನ್ವಯವಾಗಿರುವುದಾಗಿ ಭಾವಿಸತಕ್ಕದ್ದು.

(ಬಿ) 7ನೇ ಅನುಚ್ಛೇದಕ್ಕೆ ಈ ಕೆಳಕಂಡ ಇನ್ನೊಂದು ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

---

1. ಕಾನೂನು ಮಂತ್ರಾಲಯದ ಅಧಿಸೂಚನೆ ಸಂಖ್ಯೆ: ಎಸ್.ಆರ್.ಓ. 1610 ದಿನಾಂಕ: 14.5.1954, ಭಾರತ ರಾಜಪತ್ರ ವಿಶೇಷ ಸಂಚಿಕೆ, ಭಾಗ–II , ಪ್ರಕರಣ 3, ಪುಟ 821ರಲ್ಲಿ ಪ್ರಕಟಿಸಲಾಗಿದೆ.
2. ಪ್ರಾರಂಭದ ಪದಗಳನ್ನು ಸಿ.ಓ. 56, ಸಿ.ಓ. 74, ಸಿ.ಓ. 76, ಸಿ.ಓ. 79, ಸಿ.ಓ. 89, ಸಿ.ಓ. 91, ಸಿ.ಓ. 94, ಸಿ.ಓ. 98, ಸಿ.ಓ. 103, ಸಿ.ಓ. 104, ಸಿ.ಓ. 105, ಸಿ.ಓ. 108, ಸಿ.ಓ. 136 ಮತ್ತು ಸಿ.ಓ. 141 ರ ಮೂಲಕ ಅನುಕ್ರಮವಾಗಿ ತಿದ್ದುಪಡಿ ಮಾಡಲಾಗಿದ್ದು, ಮೇಲಿನಂತೆ ಓದಿಕೊಳ್ಳುವುದು.

"ಮತ್ತೂ ಪರಂತು, ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಜಮ್ಮು ಮತ್ತು ಕಾಶ್ಮೀರ ರಾಜ್ಯದ ಖಾಯಂ ನಿವಾಸಿಯಾಗಿದ್ದು, ಈಗ ಪಾಕಿಸ್ತಾನದಲ್ಲಿ ಒಳಗೊಂಡಿರುವ ರಾಜ್ಯಕ್ಷೇತ್ರಕ್ಕೆ ಹಾಗೆ ವಲಸೆ ಹೋದ ಬಳಿಕ, ಆ ರಾಜ್ಯದಲ್ಲಿ ಮತ್ತೆ ನೆಲಸುವುದಕ್ಕಾಗಿ ಅಥವಾ ಖಾಯಂ ಆಗಿ ಹಿಂತಿರುಗುವುದಕ್ಕಾಗಿ, ಆ ರಾಜ್ಯದ ವಿಧಾನ ಮಂಡಲವು ರಚಿಸಿದ ಯಾವುದೇ ಕಾನೂನಿನ ಅಧಿಕಾರದ ಮೂಲಕ ಅಥವಾ ಮೇರೆಗೆ ಕೊಟ್ಟ ಪರ್ಮಿಟ್ಟಿನ ಮೇರೆಗೆ ಆ ರಾಜ್ಯದ ರಾಜ್ಯಕ್ಷೇತ್ರಕ್ಕೆ ವಾಪಸ್ಸು ಬರುವವನಿಗೆ ಅನ್ವಯವಾಗತಕ್ಕದ್ದಲ್ಲ ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯನ್ನು ಭಾರತದ ನಾಗರಿಕನೆಂದು ಭಾವಿಸತಕ್ಕದ್ದು.".

**(4) ಭಾಗ III.**

(ಎ) 13ನೇ ಅನುಚ್ಛೇದದಲ್ಲಿ, ಸಂವಿಧಾನದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳನ್ನು ಈ ಆದೇಶದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

[1] * * * * *

(ಸಿ) 16ನೇ ಅನುಚ್ಛೇದದ (3)ನೇ ಖಂಡದಲ್ಲಿ, ರಾಜ್ಯಕ್ಕೆ ಮಾಡಿದ ಉಲ್ಲೇಖವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾಡಿದ ಉಲ್ಲೇಖವನ್ನು ಒಳಗೊಳ್ಳುವುದಿಲ್ಲವೆಂದು ಅರ್ಥೈಸತಕ್ಕದ್ದು.

(ಡಿ) 19ನೇ ಅನುಚ್ಛೇದದಲ್ಲಿ, ಈ ಆದೇಶವು ಪ್ರಾರಂಭವಾದಾಗಿನಿಂದ [2][3][ಇಪ್ಪತ್ತೈದು] ವರ್ಷಗಳ] ಅವಧಿಗಾಗಿ:-

(i) (3)ನೇ ಮತ್ತು (4)ನೇ ಖಂಡದಲ್ಲಿ "ಹಿತದೃಷ್ಟಿಯಿಂದ" ಎಂಬ ಪದಗಳ ನಂತರ "ರಾಜ್ಯದ ಭದ್ರತೆ ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (5)ನೇ ಖಂಡದಲ್ಲಿ "ಅಥವಾ ಯಾವುದೇ ಅನುಸೂಚಿತ ಬುಡಕಟ್ಟಿನ ಹಿತಾಸಕ್ತಿಯನ್ನು ಸಂರಕ್ಷಿಸುವುದಕ್ಕಾಗಿ" ಎಂಬ ಪದಗಳಿಗೆ ಬದಲಾಗಿ "ಅಥವಾ ರಾಜ್ಯದ ಭದ್ರತೆಯ ಹಿತದೃಷ್ಟಿಯಿಂದ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು; ಮತ್ತು

(iii) ಕೆಳಕಂಡ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

'(7). (2)ನೇ, (3)ನೇ, (4)ನೇ ಮತ್ತು (5)ನೇ ಖಂಡಗಳಲ್ಲಿ ಬರುವ "ಯುಕ್ತ ನಿರ್ಬಂಧಗಳು" ಎಂಬ ಪದಗಳನ್ನು ಸಮುಚಿತ ವಿಧಾನ ಮಂಡಲವು ಯುಕ್ತವಾದುದೆಂದು ಭಾವಿಸಬಹುದಾದಂಥ ನಿರ್ಬಂಧಗಳೆಂಬಂತೆ ಅರ್ಥೈಸತಕ್ಕದ್ದು.'

(ಇ) 22ನೇ ಅನುಚ್ಛೇದದ (4)ನೇ ಮತ್ತು (7)ನೇ ಖಂಡಗಳಲ್ಲಿ "ಸಂಸತ್ತು" ಎಂಬ ಪದಕ್ಕೆ ಬದಲಾಗಿ "ರಾಜ್ಯದ ವಿಧಾನ ಮಂಡಲವು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಎಫ್) 31ನೇ ಅನುಚ್ಛೇದದಲ್ಲಿ (3)ನೇ, (4)ನೇ ಮತ್ತು (6)ನೇ ಖಂಡಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು (5)ನೇ ಖಂಡಕ್ಕೆ ಬದಲಾಗಿ, ಕೆಳಕಂಡ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"(5) (2)ನೆಯ ಖಂಡದಲ್ಲಿರುವುದು ಯಾವುದೂ,-

(ಎ) ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ; ಅಥವಾ

(ಬಿ) ಇನ್ನು ಮುಂದೆ ರಾಜ್ಯವು,-

(i) ಯಾವುದೇ ತೆರಿಗೆಯನ್ನು ಅಥವಾ ದಂಡವನ್ನು ವಿಧಿಸುವ ಅಥವಾ ಹಾಕುವ ಉದ್ದೇಶಕ್ಕಾಗಿ; ಅಥವಾ

(ii) ಸಾರ್ವಜನಿಕ ಆರೋಗ್ಯವನ್ನು ಸಂವರ್ಧಿಸುವುದಕ್ಕಾಗಿ ಅಥವಾ ಪ್ರಾಣಕ್ಕೆ ಅಥವಾ ಸ್ವತ್ತಿಗೆ ಉಂಟಾಗುವ ಅಪಾಯವನ್ನು ನಿವಾರಿಸುವುದಕ್ಕಾಗಿ; ಅಥವಾ

(iii) ನಿರ್ವಾಸಿತರ ಸ್ವತ್ತಾಗಬೇಕೆಂದು ಕಾನೂನಿನ ಮೂಲಕ ಘೋಷಿಸಿದ ಸ್ವತ್ತಿಗೆ ಸಂಬಂಧಿಸಿದಂತೆ

– ಮಾಡುವ ಯಾವುದೇ ಕಾನೂನಿನ ಉಪಬಂಧಗಳಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.".

---

1. ಸಿ.ಓ. 124 ರ ಮೂಲಕ (4.12.1985 ರಿಂದ ಜಾರಿಗೆ ಬರುವಂತೆ) (ಬಿ) ಖಂಡವನ್ನು ಬಿಟ್ಟುಬಿಡಲಾಗಿದೆ.
2. ಸಿ.ಓ. 69 ರ ಮೂಲಕ "ಹತ್ತು ವರ್ಷಗಳು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. ಸಿ.ಓ. 97 ರ ಮೂಲಕ "ಇಪ್ಪತ್ತು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(ಜಿ) 31ಎ ಅನುಚ್ಛೇದದಲ್ಲಿ (1)ನೇ ಖಂಡದ ಪರಂತುಕವನ್ನು ಬಿಟ್ಟುಬಿಡತಕ್ಕದ್ದು ಮತ್ತು (2)ನೇ ಖಂಡದ (ಎ) ಉಪಖಂಡಕ್ಕೆ ಬದಲಾಗಿ, ಈ ಕೆಳಕಂಡ ಉಪಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

'(ಎ) "ಎಸ್ಟೇಟು" ಎಂದರೆ, ಕೃಷಿ ಉದ್ದೇಶಗಳಿಗಾಗಿ ಅಥವಾ ಕೃಷಿಗೆ ಸಾಧಕವಾದ ಉದ್ದೇಶಗಳಿಗಾಗಿ ಅಥವಾ ಹುಲ್ಲುಗಾವಲಿಗಾಗಿ ಅಧಿಭೋಗದಲ್ಲಿರುವ ಅಥವಾ ಗುತ್ತಿಗೆಗೆ ಕೊಟ್ಟಿರುವ ಭೂಮಿ; ಮತ್ತು-

(i) ಅಂಥ ಭೂಮಿಯ ಮೇಲಿನ ಕಟ್ಟಡಗಳ ನಿವೇಶನಗಳನ್ನು ಮತ್ತು ಇತರ ಕಟ್ಟಡಗಳನ್ನು;

(ii) ಅಂಥ ಭೂಮಿಯ ಮೇಲೆ ನಿಂತಿರುವ ಮರಗಳನ್ನು;

(iii) ಅರಣ್ಯ ಭೂಮಿಯನ್ನು ಮತ್ತು ಅರಣ್ಯ ಬಂಜರು ಭೂಮಿಯನ್ನು;

(iv) ಜಲಾವೃತ ಪ್ರದೇಶ ಅಥವಾ ನೀರಿನಲ್ಲಿ ತೇಲುವ ಹೊಲಗದ್ದೆಗಳನ್ನು;

(v) ಜಂದಾರ್ ಮತ್ತು ಘರಾಟ್ ನಿವೇಶನಗಳನ್ನು;

(vi) ಯಾವುದೇ ಜಾಗೀರು, ಇನಾಂ, ಮುವಾಫಿ ಅಥವಾ ಮಕರರಿ ಅಥವಾ ಅಂಥದೇ ಇತರ ಮಂಜೂರಾತಿಯನ್ನು

- ಒಳಗೊಳ್ಳುತ್ತದೆ, ಆದರೆ-

(i) ಯಾವುದೇ ಪಟ್ಟಣದಲ್ಲಿರುವ ಅಥವಾ ಪಟ್ಟಣ ಪ್ರದೇಶದಲ್ಲಿರುವ ಅಥವಾ ಗ್ರಾಮ ಅಬಾದಿಯಲ್ಲಿರುವ ಯಾವುದೇ ಕಟ್ಟಡದ ನಿವೇಶನವು ಅಥವಾ ಅಂಥ ಯಾವುದೇ ಕಟ್ಟಡಕ್ಕೆ ಅಥವಾ ನಿವೇಶನಕ್ಕೆ ಲಗತ್ತಾದ ಯಾವುದೇ ಭೂಮಿಯು;

(ii) ಪಟ್ಟಣದ ಅಥವಾ ಗ್ರಾಮದ ನಿವೇಶನವಾಗಿ ಅಧಿಭೋಗದಲ್ಲಿರುವ ಯಾವುದೇ ಭೂಮಿಯು; ಅಥವಾ

(iii) ಪುರಸಭೆಯ ಅಥವಾ ಅಧಿಸೂಚಿತ ಪ್ರದೇಶದಲ್ಲಿ ಅಥವಾ ದಂಡು ಪ್ರದೇಶದಲ್ಲಿ ಅಥವಾ ಪಟ್ಟಣ ಪ್ರದೇಶದಲ್ಲಿ ಅಥವಾ ಪಟ್ಟಣ ಯೋಜನೆಯ ಪರಿಯೋಜನೆಯು ಮಂಜೂರಾದ ಯಾವುದೇ ಪ್ರದೇಶದಲ್ಲಿ ಕಟ್ಟಡದ ಉದ್ದೇಶಗಳಿಗಾಗಿ ಕಾಯ್ದಿರಿಸಿದ ಯಾವುದೇ ಭೂಮಿಯು

- ಒಳಗೊಳ್ಳುವುದಿಲ್ಲ.'.

[1][(ಹೆಚ್) 32ನೇ ಅನುಚ್ಛೇದದಲ್ಲಿ (3)ನೇ ಖಂಡವನ್ನು ಬಿಟ್ಟುಬಿಡತಕ್ಕದ್ದು.]

(ಐ) 35ನೇ ಅನುಚ್ಛೇದದಲ್ಲಿ,-

(i) ಸಂವಿಧಾನದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳನ್ನು ಈ ಆದೇಶದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ii) (ಎ)(i)ನೇ ಖಂಡದಲ್ಲಿ "16ನೇ ಅನುಚ್ಛೇದದ (3)ನೇ ಖಂಡದ ಮೇರೆಗೆ, 32ನೇ ಅನುಚ್ಛೇದದ (3)ನೇ ಖಂಡದ ಮೇರೆಗೆ" ಎಂಬ ಪದಗಳನ್ನು, ಆವರಣಗಳನ್ನು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು

(iii) (ಬಿ) ಖಂಡದ ತರುವಾಯ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಸಿ) 1954ರ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶದ ಪ್ರಾರಂಭಕ್ಕೆ ಮುಂಚಿತವಾಗಿಯಾಗಲೀ ಅಥವಾ ಅನಂತರವಾಗಲೀ ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನ ಮಂಡಲವು ಮಾಡಿದ ಪ್ರತಿಬಂಧಕ ಸ್ಥಾನಬದ್ಧತೆಗೆ ಸಂಬಂಧಿಸಿದ ಯಾವುದೇ ಕಾನೂನು, ಈ ಭಾಗದ ಉಪಬಂಧಗಳಿಗೆ ಅಸಂಗತವಾಗಿದೆ ಎಂಬ ಕಾರಣದ ಮೇಲೆ ಅನೂರ್ಜಿತವಾಗತಕ್ಕದ್ದಲ್ಲ, ಆದರೆ, ಅಂಥ ಯಾವುದೇ ಕಾನೂನು, ಹಾಗೆ ಅಸಂಗತವಾಗಿರುವಷ್ಟರ ಮಟ್ಟಿಗೆ, ಅಂಥ ಆದೇಶದ ಪ್ರಾರಂಭದಿಂದ [2][[3][ಇಪ್ಪತ್ತೈದು] ವರ್ಷಗಳು] ಮುಕ್ತಾಯವಾದ ಮೇಲೆ, ಅದರ ಮುಕ್ತಾಯಕ್ಕೆ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟ ಕಾರ್ಯಗಳಿಗೆ ಸಂಬಂಧಿಸಿದಂತೆ ಹೊರತು ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.".

---

1. ಸಿ.ಓ. 89ರ ಮೂಲಕ (ಹೆಚ್) ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. ಸಿ.ಓ. 69ರ ಮೂಲಕ "ಹತ್ತು ವರ್ಷಗಳು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. ಸಿ.ಓ. 97ರ ಮೂಲಕ "ಇಪ್ಪತ್ತು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(ಜೆ) 35ನೇ ಅನುಚ್ಛೇದದ ತರುವಾಯ ಈ ಕೆಳಕಂಡ ಹೊಸ ಅನುಚ್ಛೇದವನ್ನು ಸೇರಿಸತಕ್ಕದ್ದು, ಎಂದರೆ:-

**"35ಎ. ಖಾಯಂ ನಿವಾಸಿಗಳ ಮತ್ತು ಅವರ ಹಕ್ಕುಗಳ ಬಗ್ಗೆ ಕಾನೂನುಗಳ ಉಳಿಸುವಿಕೆ.-** ಈ ಸಂವಿಧಾನದಲ್ಲಿ ಏನೇ ಒಳಗೊಂಡಿದ್ದರೂ, ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿರುವಂಥ ಅಸ್ತಿತ್ವದಲ್ಲಿರುವ ಯಾವುದೇ ಕಾನೂನು ಮತ್ತು ಇನ್ನು ಮುಂದೆ ರಾಜ್ಯ ವಿಧಾನ ಮಂಡಲವು ಅಧಿನಿಯಮಿಸುವ,-

(ಎ) ಜಮ್ಮು ಮತ್ತು ಕಾಶ್ಮೀರ ರಾಜ್ಯದ ಖಾಯಂ ನಿವಾಸಿಗಳಾಗಿರುವ ಅಥವಾ ನಿವಾಸಿಗಳಾಗಿರತಕ್ಕ ವ್ಯಕ್ತಿಗಳ ವರ್ಗಗಳನ್ನು ಪರಿಭಾಷಿಸುವ; ಅಥವಾ

(ಬಿ) ಅಂಥ ಖಾಯಂ ನಿವಾಸಿಗಳಿಗೆ, ಯಾವುವೇ ವಿಶೇಷ ಹಕ್ಕುಗಳನ್ನು ಮತ್ತು ವಿಶೇಷ ಅಧಿಕಾರಗಳನ್ನು ಪ್ರದಾನ ಮಾಡುವ; ಅಥವಾ

(i) ರಾಜ್ಯ ಸರ್ಕಾರದ ಅಧೀನದಲ್ಲಿಯ ಉದ್ಯೋಗಕ್ಕೆ;

(ii) ರಾಜ್ಯದಲ್ಲಿ ಸ್ಥಿರ ಸ್ವತ್ತನ್ನು ಆರ್ಜನೆ ಮಾಡುವುದಕ್ಕೆ;

(iii) ರಾಜ್ಯದಲ್ಲಿ ನೆಲೆಸುವುದಕ್ಕೆ; ಅಥವಾ

(iv) ವಿದ್ಯಾರ್ಥಿ ವೇತನ ಮತ್ತು ರಾಜ್ಯ ಸರ್ಕಾರವು ಒದಗಿಸಬಹುದಾದ ಅಂಥ ಇತರ ರೀತಿಯ ನೆರವಿನ ಹಕ್ಕಿಗೆ

- ಸಂಬಂಧಿಸಿದಂತೆ ಇತರ ವ್ಯಕ್ತಿಗಳ ಮೇಲೆ ಯಾವುದೇ ನಿರ್ಬಂಧಗಳನ್ನು ವಿಧಿಸುವ ಯಾವುದೇ ಕಾನೂನು, ಈ ಭಾಗದ ಯಾವುದೇ ಉಪಬಂಧದ ಮೂಲಕ ಭಾರತದ ಇತರ ನಾಗರಿಕರಿಗೆ ಪ್ರದತ್ತವಾದ ಯಾವುವೇ ಹಕ್ಕುಗಳಿಗೆ ಅದು ಅಸಂಗತವಾಗಿದೆ ಎಂಬ, ಅಥವಾ ಯಾವುವೇ ಹಕ್ಕುಗಳನ್ನು ಕಿತ್ತುಕೊಳ್ಳುತ್ತದೆ ಎಂಬ, ಅಥವಾ ಮೊಟಕುಗೊಳಿಸುತ್ತದೆ ಎಂಬ ಕಾರಣದ ಮೇಲೆ ಶೂನ್ಯವಾಗತಕ್ಕದ್ದಲ್ಲ.".

**(5) ಭಾಗ V.**

[1][(ಎ) 55ನೇ ಅನುಚ್ಛೇದದ ಉದ್ದೇಶಗಳಿಗಾಗಿ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಜನಸಂಖ್ಯೆಯನ್ನು ಅರವತ್ಮೂರು ಲಕ್ಷ ಎಂದು ಭಾವಿಸತಕ್ಕದ್ದು.

(ಬಿ) 81ನೇ ಅನುಚ್ಛೇದದಲ್ಲಿ, (2) ಮತ್ತು (3)ನೇ ಖಂಡಗಳಿಗೆ ಬದಲಾಗಿ ಕೆಳಕಂಡ ಖಂಡಗಳನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"(2) (1)ನೇ ಖಂಡದ (ಎ) ಉಪಖಂಡದ ಉದ್ದೇಶಗಳಿಗಾಗಿ,-

(ಎ) ಲೋಕಸಭೆಯಲ್ಲಿ ಆ ರಾಜ್ಯಕ್ಕೆ ಆರು ಸ್ಥಾನಗಳನ್ನು ಹಂಚಿಕೆ ಮಾಡತಕ್ಕದ್ದು;

(ಬಿ) 1972ನೇ ಇಸವಿಯ ಸೀಮಾ ನಿರ್ಣಯ ಅಧಿನಿಯಮದ ಮೇರೆಗೆ ರಚಿತವಾದ ಸೀಮಾ ನಿರ್ಣಯ ಆಯೋಗವು, ಅದು ತಾನು ಸೂಕ್ತವೆಂದು ಭಾವಿಸಬಹುದಾದಂಥ ಪ್ರಕ್ರಿಯೆಗೆ ಅನುಸಾರವಾಗಿ, ರಾಜ್ಯವನ್ನು ಏಕ ಸದಸ್ಯ ಚುನಾವಣಾ ಕ್ಷೇತ್ರಗಳಾಗಿ ವಿಭಾಗಿಸತಕ್ಕದ್ದು;

(ಸಿ) ಚುನಾವಣಾ ಕ್ಷೇತ್ರಗಳು ಕಾರ್ಯತಃ ಸಾಧ್ಯವಾಗುವಷ್ಟರ ಮಟ್ಟಿಗೆ ಭೌಗೋಳಿಕವಾಗಿ ಹೊಂದಿಕೊಂಡಿರುವ ಪ್ರದೇಶಗಳಾಗಿರತಕ್ಕದ್ದು ಮತ್ತು ಅವುಗಳ ಸೀಮಾನಿರ್ಣಯ ಮಾಡುವಲ್ಲಿ ಭೌತಿಕ ಲಕ್ಷಣಗಳನ್ನು, ಅಸ್ತಿತ್ವದಲ್ಲಿರುವ ಆಡಳಿತ ಘಟಕಗಳ ಸರಹದ್ದುಗಳನ್ನು, ಸಂಪರ್ಕ ಸೌಲಭ್ಯಗಳನ್ನು, ಮತ್ತು ಸಾರ್ವಜನಿಕ ಅನುಕೂಲತೆಯನ್ನು ಗಮನದಲ್ಲಿಡತಕ್ಕದ್ದು; ಮತ್ತು

(ಡಿ) ರಾಜ್ಯವನ್ನು ಯಾವ ಚುನಾವಣಾ ಕ್ಷೇತ್ರಗಳಾಗಿ ಭಾಗಿಸಲಾಗುತ್ತದೆಯೋ, ಆ ಚುನಾವಣಾ ಕ್ಷೇತ್ರಗಳು ಪಾಕಿಸ್ತಾನದ ಸ್ವಾಧೀನದಲ್ಲಿರುವ ಪ್ರದೇಶವನ್ನು ಒಳಗೊಳ್ಳತಕ್ಕದ್ದಲ್ಲ.

1. ಸಿ.ಓ. 98ರ ಮೂಲಕ (ಎ) ಮತ್ತು (ಬಿ) ಖಂಡಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

(3) (2)ನೇ ಖಂಡದಲ್ಲಿ ಇರುವುದು ಯಾವುದೂ, 1972ನೇ ಇಸವಿಯ ಸೀಮಾ ನಿರ್ಣಯ ಅಧಿನಿಯಮದ ಮೇರೆಗೆ ಸಂಸತ್ ಚುನಾವಣಾ ಕ್ಷೇತ್ರಗಳ ಸೀಮಾನಿರ್ಣಯಕ್ಕೆ ಸಂಬಂಧಿಸಿದಂತೆ ಸೀಮಾ ನಿರ್ಣಯ ಆಯೋಗದ ಅಂತಿಮ ಆದೇಶವನ್ನು ಅಥವಾ ಆದೇಶಗಳನ್ನು, ಭಾರತ ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಂದು ಅಸ್ತಿತ್ವದಲ್ಲಿರುವ ಸದನವು ವಿಸರ್ಜನೆಯಾಗುವವರೆಗೆ ಲೋಕಸಭೆಯಲ್ಲಿ ರಾಜ್ಯದ ಪ್ರಾತಿನಿಧ್ಯಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

(4) (ಎ) ರಾಜ್ಯವನ್ನು ಪ್ರತಿನಿಧಿಸುವ ಲೋಕಸಭೆಯ ಸದಸ್ಯರಾಗಿರತಕ್ಕ ಐವರು ವ್ಯಕ್ತಿಗಳನ್ನು ಸೀಮಾನಿರ್ಣಯ ಆಯೋಗವು ರಾಜ್ಯಕ್ಕೆ ಸಂಬಂಧಿಸಿದಂತೆ ತನ್ನ ಕರ್ತವ್ಯಗಳಿಗೆ ನೆರವಾಗುವ ಉದ್ದೇಶಕ್ಕಾಗಿ ತನ್ನ ಜೊತೆಗೆ ಸೇರಿಸಿಕೊಳ್ಳತಕ್ಕದ್ದು.

(ಬಿ) ರಾಜ್ಯದಿಂದ ಹಾಗೆ ಸೇರಿಸಿಕೊಳ್ಳಬೇಕಾದ ವ್ಯಕ್ತಿಗಳನ್ನು ಸದನದ ರಚನೆಗೆ ಯುಕ್ತ ಗಮನ ನೀಡಿ ಲೋಕಸಭೆಯ ಅಧ್ಯಕ್ಷನು ನಾಮನಿರ್ದೇಶನ ಮಾಡತಕ್ಕದ್ದು.

(ಸಿ) ಲೋಕಸಭೆಯ ಅಧ್ಯಕ್ಷನು (ಬಿ) ಉಪಖಂಡದ ಮೇರೆಗೆ ಮಾಡಬೇಕಾದ ಮೊದಲನೆಯ ನಾಮನಿರ್ದೇಶನಗಳನ್ನು 1974ನೇ ಇಸವಿಯ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಎರಡನೇ ತಿದ್ದುಪಡಿ ಆದೇಶದ ಪ್ರಾರಂಭದಿಂದ ಎರಡು ತಿಂಗಳೊಳಗಾಗಿ ಮಾಡತಕ್ಕದ್ದು.

(ಡಿ) ಯಾವ ಸಹವರ್ತಿ ಸದಸ್ಯರಿಗೂ ಮತನೀಡುವ ಅಥವಾ ಸೀಮಾನಿರ್ಣಯ ಆಯೋಗದ ಯಾವುದೇ ತೀರ್ಮಾನಕ್ಕೆ ಸಹಿಹಾಕುವ ಹಕ್ಕು ಇರತಕ್ಕದ್ದಲ್ಲ.

(ಇ) ಸಹವರ್ತಿ ಸದಸ್ಯನ ಪದವು ಮರಣದ ಅಥವಾ ರಾಜೀನಾಮೆಯ ಕಾರಣದಿಂದಾಗಿ ಖಾಲಿಯಾದರೆ, ಕಾರ್ಯ ಸಾಧ್ಯವಾದಷ್ಟು ಬೇಗನೆ ಲೋಕಸಭಾಧ್ಯಕ್ಷನು (ಎ) ಮತ್ತು (ಬಿ) ಉಪಖಂಡಗಳ ಉಪಬಂಧಗಳಿಗೆ ಅನುಸಾರವಾಗಿ ಅದನ್ನು ತುಂಬತಕ್ಕದ್ದು."].

[1][(ಸಿ) 133ನೇ ಅನುಚ್ಛೇದದಲ್ಲಿ, (1)ನೇ ಖಂಡದ ತರುವಾಯ, ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

'(1ಎ) 1972ನೇ ಇಸವಿಯ ಸಂವಿಧಾನ (ಮೂವತ್ತನೆಯ ತಿದ್ದುಪಡಿ) ಅಧಿನಿಯಮದ 3ನೇ ಪ್ರಕರಣದ ಉಪಬಂಧಗಳು, ಅದರಲ್ಲಿ "ಈ ಅಧಿನಿಯಮ", "ಈ ಅಧಿನಿಯಮದ ಪ್ರಾರಂಭ", "ಈ ಅಧಿನಿಯಮವು ಅಂಗೀಕೃತವಾಗಿರದಿದ್ದರೆ" ಮತ್ತು "ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ" ಎಂಬ ಪದಾವಳಿಗಳಿಗೆ ಮಾಡಿದ ಉಲ್ಲೇಖಗಳನ್ನು ಅನುಕ್ರಮವಾಗಿ "1974ನೇ ಇಸವಿಯ ಸಂವಿಧಾನ (ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯ) ಎರಡನೇ ತಿದ್ದುಪಡಿ ಆದೇಶ", "ಸದರಿ ಆದೇಶದ ಪ್ರಾರಂಭ", "ಸದರಿ ಆದೇಶವನ್ನು ಮಾಡಿರದಿದ್ದರೆ" ಮತ್ತು "ಸದರಿ ಆದೇಶದ ಪ್ರಾರಂಭದ ತರುವಾಯ ಇದ್ದಂತೆ" ಎಂಬ ಪದಾವಳಿಗಳಿಗೆ ಮಾಡಿದ ಉಲ್ಲೇಖಗಳಾಗಿ ಅರ್ಥೈಸತಕ್ಕದ್ದು ಎಂಬ ಮಾರ್ಪಾಟುಗಳಿಗೆ ಒಳಪಟ್ಟು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು.'].

[2][(ಡಿ)] 134ನೇ ಅನುಚ್ಛೇದದ (2)ನೇ ಖಂಡದಲ್ಲಿ "ಸಂಸತ್ತು" ಎಂಬ ಪದದ ತರುವಾಯ "ರಾಜ್ಯ ವಿಧಾನ ಮಂಡಲದ ಕೋರಿಕೆಯ ಮೇರೆಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

[2][(ಇ)] 135ನೇ [3]* * *ಅನುಚ್ಛೇದವನ್ನು ಮತ್ತು 139ನೇ ಅನುಚ್ಛೇದವನ್ನು ಬಿಟ್ಟುಬಿಡತಕ್ಕದ್ದು.

[4]* * * * *

1. ಸಿ.ಓ. 98ರ ಮೂಲಕ ಸೇರಿಸಲಾಗಿದೆ.
2. ಸಿ.ಓ. 98ರ ಮೂಲಕ (ಸಿ) ಮತ್ತು (ಡಿ) ಖಂಡಗಳಿಗೆ (ಡಿ) ಮತ್ತು (ಇ) ಖಂಡಗಳೆಂದು ಪುನರ್ ಅಕ್ಷರ ನೀಡಲಾಗಿದೆ.
3. ಸಿ.ಓ. 60ರ ಮೂಲಕ "136" ಎಂಬ ಅಂಕಿಗಳನ್ನು ಬಿಟ್ಟುಬಿಡಲಾಗಿದೆ.
4. ಸಿ.ಓ. 56ರ ಮೂಲಕ (ಎಫ್) ಮತ್ತು (ಜಿ) ಖಂಡಗಳನ್ನು ಬಿಟ್ಟುಬಿಡಲಾಗಿದೆ.

[1][(5ಎ) ಭಾಗ VI.

[2][(ಎ) 153 ರಿಂದ 217ರ ವರೆಗಿನ ಅನುಚ್ಛೇದಗಳನ್ನು, 219ನೇ ಅನುಚ್ಛೇದವನ್ನು, 221ನೇ ಅನುಚ್ಛೇದವನ್ನು, 223, 224, 224ಎ ಮತ್ತು 225ನೇ ಅನುಚ್ಛೇದಗಳನ್ನು ಮತ್ತು 227 ರಿಂದ 237ರ ವರೆಗಿನ ಅನುಚ್ಛೇದಗಳನ್ನು ಬಿಟ್ಟುಬಿಡತಕ್ಕದ್ದು.]

(ಬಿ) 220ನೇ ಅನುಚ್ಛೇದದಲ್ಲಿ, ಸಂವಿಧಾನದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳನ್ನು 1960ರ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ತಿದ್ದುಪಡಿ ಆದೇಶಕ್ಕೆ ಮಾಡಿದ ಉಲ್ಲೇಖಗಳೆಂಬಂತೆ ಅರ್ಥೈಸತಕ್ಕದ್ದು.

[3][(ಸಿ) 222ನೇ ಅನುಚ್ಛೇದದಲ್ಲಿ (1)ನೇ ಖಂಡದ ತರುವಾಯ, ಈ ಕೆಳಕಂಡ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) ಜಮ್ಮು ಮತ್ತು ಕಾಶ್ಮೀರದ ಉಚ್ಚನ್ಯಾಯಾಲಯದಿಂದ ಅಥವಾ ಆ ಉಚ್ಚನ್ಯಾಯಾಲಯಕ್ಕೆ ಮಾಡುವ ಅಂಥ ಪ್ರತಿಯೊಂದು ವರ್ಗಾವಣೆಯನ್ನು ರಾಜ್ಯಪಾಲನೊಡನೆ ಸಮಾಲೋಚನೆ ಮಾಡಿದ ತರುವಾಯ ಮಾಡತಕ್ಕದ್ದು.".]]

**(6) ಭಾಗ XI.**

[4][(ಎ) 246ನೇ ಅನುಚ್ಛೇದದಲ್ಲಿ (1)ನೇ ಖಂಡದಲ್ಲಿ ಬರುವ "(2) ಮತ್ತು (3)ನೇ ಖಂಡಗಳಲ್ಲಿ" ಎಂಬ ಪದಗಳು, ಆವರಣಗಳು, ಮತ್ತು ಅಂಕಿಗಳಿಗೆ ಬದಲಾಗಿ "(2)ನೇ ಖಂಡದಲ್ಲಿ" ಎಂಬ ಪದಗಳನ್ನು, ಆವರಣಗಳನ್ನು ಮತ್ತು ಅಂಕಿಯನ್ನು ಪ್ರತ್ಯಾಯೋಜಿಸತಕ್ಕದ್ದು ಮತ್ತು (2)ನೇ ಖಂಡದಲ್ಲಿ ಬರುವ "(3)ನೇ ಖಂಡದಲ್ಲಿ ಏನೇ ಇದ್ದರೂ" ಎಂಬ ಪದಗಳನ್ನು, ಆವರಣಗಳನ್ನು ಮತ್ತು ಅಂಕಿಯನ್ನು ಹಾಗೂ (3) ಮತ್ತು (4)ನೇ ಖಂಡಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡತಕ್ಕದ್ದು.]

[5][6][(ಬಿ) 248ನೇ ಅನುಚ್ಛೇದಕ್ಕೆ ಬದಲಾಗಿ ಕೆಳಕಂಡ ಅನುಚ್ಛೇದವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

**"248. ಶಾಸನ ರಚನೆಯ ಉಳಿಕೆ ಅಧಿಕಾರಗಳು.**- ಸಂಸತ್ತು-

[7][(ಎ) ಕಾನೂನಿನ ಮೂಲಕ ಸ್ಥಾಪಿತವಾದ ಸರ್ಕಾರಕ್ಕೆ ಭಯಹುಟ್ಟಿಸುವ ಉದ್ದೇಶವುಳ್ಳ ಭಯೋತ್ಪಾದಕ ಕೃತ್ಯಗಳನ್ನು ಒಳಗೊಂಡ ಅಥವಾ ಜನರಲ್ಲಿ ಅಥವಾ ಜನರ ಯಾವುದೇ ವರ್ಗದಲ್ಲಿ ಭಯವನ್ನು ಉಂಟುಮಾಡುವ ಅಥವಾ ಜನರ ಯಾವುದೇ ವರ್ಗವನ್ನು ದೂರ ಮಾಡುವ ಅಥವಾ ಜನರ ವಿವಿಧ ವರ್ಗಗಳ ನಡುವೆ ಇರುವ ಸಾಮರಸ್ಯಕ್ಕೆ ಪ್ರತಿಕೂಲ ಪರಿಣಾಮ ಉಂಟುಮಾಡುವ ಚಟುವಟಿಕೆಗಳನ್ನು ಪ್ರತಿಬಂಧಿಸುವುದಕ್ಕೆ;]

[8][(ಎಎ)] ಭಾರತದ ಸಾರ್ವಭೌಮತ್ವವನ್ನು ಮತ್ತು ಅದರ ರಾಜ್ಯಕ್ಷೇತ್ರೀಯ ಅಖಂಡತೆಯನ್ನು ನಿರಾಕರಿಸುವ, ಪ್ರಶ್ನಿಸುವ, ಅಥವಾ ವಿಚ್ಛಿನ್ನಗೊಳಿಸುವ ಉದ್ದೇಶದ ಅಥವಾ ಭಾರತದ ರಾಜ್ಯಕ್ಷೇತ್ರದ ಒಂದು ಭಾಗವನ್ನು ಬಿಟ್ಟುಕೊಡುವ ಅಥವಾ ಒಕ್ಕೂಟದಿಂದ ಭಾರತದ ರಾಜ್ಯಕ್ಷೇತ್ರದ ಒಂದು ಭಾಗವು ಬೇರೆಯಾಗುವಂತೆ ಮಾಡುವ ಅಥವಾ ಭಾರತದ ರಾಷ್ಟ್ರಧ್ವಜಕ್ಕೆ, ಭಾರತದ ರಾಷ್ಟ್ರಗೀತೆಗೆ ಮತ್ತು ಈ ಸಂವಿಧಾನಕ್ಕೆ ಅಪಮಾನವುಂಟು ಮಾಡುವ ಉದ್ದೇಶದ [ಇತರ ಚಟುವಟಿಕೆಗಳನ್ನು ಪ್ರತಿಬಂಧಿಸುವುದಕ್ಕೆ;] ಮತ್ತು

(ಬಿ) (i) ಸಮುದ್ರ ಅಥವಾ ವಿಮಾನದ ಮೂಲಕ ವಿದೇಶಿ ಪ್ರಯಾಣದ;

(ii) ಅಂತರ್ದೇಶೀಯ ವಿಮಾನ ಪ್ರಯಾಣದ;

(iii) ಮನಿಯಾರ್ಡರುಗಳು, ಫೋನೋಗ್ರಾಮುಗಳು ಮತ್ತು ಟೆಲಿಗ್ರಾಮುಗಳನ್ನು ಒಳಗೊಂಡು ಅಂಚೆ ವಸ್ತುಗಳ ಮೇಲಿನ ತೆರಿಗೆಗಳಿಗೆ

- ಸಂಬಂಧಪಟ್ಟಂತೆ ಯಾವುದೇ ಕಾನೂನನ್ನು ರಚಿಸಲು ಅನನ್ಯ ಅಧಿಕಾರವನ್ನು ಹೊಂದಿರುತ್ತದೆ."

1. ಸಿ.ಓ. 60ರ ಮೂಲಕ (26.1.1960 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
2. ಸಿ.ಓ. 89ರ ಮೂಲಕ (ಎ) ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. ಸಿ.ಓ. 74ರ ಮೂಲಕ (ಸಿ) ಖಂಡಕ್ಕೆ ಬದಲಾಗಿ (24.11.1965 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಲಾಗಿದೆ.
4. ಸಿ.ಓ. 66ರ ಮೂಲಕ (ಎ) ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. ಸಿ.ಓ. 85ರ ಮೂಲಕ ಮೂಲ (ಬಿ) ಖಂಡಕ್ಕೆ ಬದಲಾಗಿ (ಬಿ) ಮತ್ತು (ಬಿಬಿ) ಖಂಡಗಳನ್ನು ಪ್ರತ್ಯಾಯೋಜಿಸಲಾಗಿದೆ.
6. ಸಿ.ಓ. 93ರ ಮೂಲಕ (ಬಿ) ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
7. ಸಿ.ಓ. 122ರ ಮೂಲಕ ಸೇರಿಸಲಾಗಿದೆ.
8. ಸಿ.ಓ. 122ರ ಮೂಲಕ (ಎ) ಖಂಡಕ್ಕೆ (ಎಎ) ಖಂಡವೆಂದು ಪುನರ್ ಅಕ್ಷರ ನೀಡಲಾಗಿದೆ.
9. ಸಿ.ಓ. 122ರ ಮೂಲಕ "ಚಟುವಟಿಕೆಗಳನ್ನು ಪ್ರತಿಬಂಧಿಸುವುದಕ್ಕೆ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

[1][ವಿವರಣೆ.- ಈ ಅನುಚ್ಛೇದದಲ್ಲಿ, "ಭಯೋತ್ಪಾದಕ ಕೃತ್ಯ" ಎಂದರೆ ಬಾಂಬುಗಳನ್ನು, ಸಿಡಿಮದ್ದುಗಳನ್ನು ಅಥವಾ ಇತರ ಸ್ಫೋಟಕ ವಸ್ತುಗಳನ್ನು ಅಥವಾ ಸುಲಭವಾಗಿ ಬೆಂಕಿ ಹತ್ತಿಕೊಳ್ಳುವ ವಸ್ತುಗಳನ್ನು ಅಥವಾ ಬಂದೂಕುಗಳನ್ನು ಅಥವಾ ಇತರ ಮಾರಕ ಅಸ್ತ್ರಗಳನ್ನು ಅಥವಾ ವಿಷಕಾರಿ ಅಥವಾ ಹಾನಿಕಾರಕ ಅನಿಲಗಳನ್ನು ಅಥವಾ ಅಪಾಯವನ್ನುಂಟುಮಾಡುವ ಸ್ವರೂಪದ ಇತರ ರಾಸಾಯನಿಕಗಳನ್ನು ಅಥವಾ ಯಾವುವೇ ಇತರ ವಸ್ತುಗಳನ್ನು (ಅದು ಜೈವಿಕದ್ದಾಗಿರಲಿ ಅಥವಾ ಇತರೆ ರೀತಿಯದ್ದಾಗಿರಲಿ) ಬಳಸುವ ಮೂಲಕ ಮಾಡಿದ ಕೃತ್ಯ ಅಥವಾ ಕಾರ್ಯ.]

[2][(ಬಿಬಿ) 249ನೇ ಅನುಚ್ಛೇದದಲ್ಲಿ, (1)ನೇ ಖಂಡದಲ್ಲಿ "ನಿರ್ಣಯದಲ್ಲಿ ನಿರ್ದಿಷ್ಟಪಡಿಸಿರುವ ರಾಜ್ಯ ಪಟ್ಟಿಯಲ್ಲಿ ನಮೂದಿಸಿರುವ ಯಾವುದೇ ವಿಷಯಕ್ಕೆ" ಎಂಬ ಪದಗಳಿಗೆ ಬದಲಾಗಿ, "ಒಕ್ಕೂಟ ಪಟ್ಟಿಯಲ್ಲಿ ಅಥವಾ ಸಮವರ್ತಿ ಪಟ್ಟಿಯಲ್ಲಿ ನಮೂದಿಸಿರದ ವಿಷಯವಾಗಿದ್ದು, ನಿರ್ಣಯದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಿಷಯಕ್ಕೆ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.]]

(ಸಿ) 250ನೇ ಅನುಚ್ಛೇದದಲ್ಲಿ, "ರಾಜ್ಯಪಟ್ಟಿಯಲ್ಲಿ ನಮೂದಿಸಿದ ವಿಷಯಗಳ ಪೈಕಿ ಯಾವುದೇ ವಿಷಯದ ಬಗ್ಗೆ" ಎಂಬ ಪದಗಳಿಗೆ ಬದಲಾಗಿ "ಒಕ್ಕೂಟ ಪಟ್ಟಿಯಲ್ಲಿ ನಮೂದಿಸಿರದ ವಿಷಯಗಳ ಬಗ್ಗೆ ಸಹ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

[3] * * * * * *

(ಇ) 253ನೇ ಅನುಚ್ಛೇದಕ್ಕೆ, ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, 1954ರ ಸಂವಿಧಾನ (ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯ) ಆದೇಶವು ಪ್ರಾರಂಭವಾದ ನಂತರ ಜಮ್ಮು ಮತ್ತು ಕಾಶ್ಮೀರ ರಾಜ್ಯದ ವ್ಯವಸ್ಥೆಗೆ ಬಾಧಕವನ್ನುಂಟು ಮಾಡುವ ಯಾವುದೇ ತೀರ್ಮಾನವನ್ನು ಭಾರತ ಸರ್ಕಾರವು ಆ ರಾಜ್ಯ ಸರ್ಕಾರದ ಸಮ್ಮತಿಯಿಲ್ಲದೆ ಕೈಗೊಳ್ಳತಕ್ಕದ್ದಲ್ಲ."

[4] * * * * * *

[5][(ಎಫ್)] 255ನೇ ಅನುಚ್ಛೇದವನ್ನು ಬಿಟ್ಟುಬಿಡತಕ್ಕದ್ದು.

[5][(ಜಿ)] 256ನೇ ಅನುಚ್ಛೇದಕ್ಕೆ ಆ ಅನುಚ್ಛೇದದ (1)ನೇ ಖಂಡವೆಂದು ಪುನರ್ ಸಂಖ್ಯೆ ನೀಡತಕ್ಕದ್ದು, ಮತ್ತು ಈ ಕೆಳಕಂಡ ಹೊಸ ಖಂಡವನ್ನು ಅದಕ್ಕೆ ಸೇರಿಸತಕ್ಕದ್ದು, ಎಂದರೆ:-

"(2) ಜಮ್ಮು ಮತ್ತು ಕಾಶ್ಮೀರ ರಾಜ್ಯವು ತನ್ನ ಕಾರ್ಯಾಂಗ ಅಧಿಕಾರವನ್ನು ಒಕ್ಕೂಟವು ಆ ರಾಜ್ಯಕ್ಕೆ ಸಂಬಂಧಪಟ್ಟಂತೆ ಸಂವಿಧಾನದ ಮೇರೆಗಿನ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು ಅನುಕೂಲವಾಗುವ ಹಾಗೆ ಚಲಾಯಿಸತಕ್ಕದ್ದು, ಮತ್ತು ವಿಶೇಷವಾಗಿ ಆ ರಾಜ್ಯವು, ಒಕ್ಕೂಟದ ಪರವಾಗಿ ಮತ್ತು ಅದರ ವೆಚ್ಚದಲ್ಲಿ ಸ್ವತ್ತನ್ನು ಆರ್ಜಿಸತಕ್ಕದ್ದು ಅಥವಾ ಕಡ್ಡಾಯವಾಗಿ ಕೋರತಕ್ಕದ್ದು ಅಥವಾ ಆ ಸ್ವತ್ತು ರಾಜ್ಯಕ್ಕೆ ಸೇರಿದ್ದಾಗಿದ್ದರೆ ಅದನ್ನು ಒಪ್ಪಿಗೆಯಾಗಬಹುದಾದಂಥ ನಿಬಂಧನೆಗಳ ಮೇಲೆ, ಅಥವಾ ಹಾಗೆ ಒಪ್ಪಿಗೆಯಾಗದಿದ್ದಲ್ಲಿ, ಭಾರತದ ಮುಖ್ಯ ನ್ಯಾಯಮೂರ್ತಿಯು ನೇಮಿಸಿದ ಮಧ್ಯಸ್ಥಗಾರನು ನಿರ್ಧರಿಸಬಹುದಾದಂತೆ ಒಕ್ಕೂಟಕ್ಕೆ ವರ್ಗಾಯಿಸತಕ್ಕದ್ದು ಎಂದು ಒಕ್ಕೂಟವು ಅಗತ್ಯಪಡಿಸಿದರೆ ಹಾಗೆ ಮಾಡತಕ್ಕದ್ದು.".

[6] * * * * * *

[7][(ಹೆಚ್)] 261ನೇ ಅನುಚ್ಛೇದದ (2)ನೇ ಖಂಡದಲ್ಲಿ "ಸಂಸತ್ತು ರಚಿಸಿದ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

---

1. ಸಿ.ಓ. 122ರ ಮೂಲಕ ಸೇರಿಸಲಾಗಿದೆ.
2. ಸಿ.ಓ. 129ರ ಮೂಲಕ (ಬಿಬಿ) ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. ಸಿ.ಓ. 129ರ ಮೂಲಕ (ಡಿ) ಖಂಡವನ್ನು ಬಿಟ್ಟುಬಿಡಲಾಗಿದೆ.
4. ಸಿ.ಓ. 66ರ ಮೂಲಕ (ಎಫ್) ಖಂಡವನ್ನು ಬಿಟ್ಟುಬಿಡಲಾಗಿದೆ.
5. ಸಿ.ಓ. 66ರ ಮೂಲಕ (ಜಿ) ಮತ್ತು (ಹೆಚ್) ಖಂಡಗಳಿಗೆ (ಎಫ್) ಮತ್ತು (ಜಿ) ಖಂಡಗಳೆಂದು ಪುನರ್ ಅಕ್ಷರ ನೀಡಲಾಗಿದೆ.
6. ಸಿ.ಓ. 56ರ ಮೂಲಕ (ಐ) ಖಂಡವನ್ನು ಬಿಟ್ಟುಬಿಡಲಾಗಿದೆ.
7. ಸಿ.ಓ. 56ರ ಮೂಲಕ (ಜೆ) ಖಂಡಕ್ಕೆ (ಐ) ಖಂಡವೆಂದು ಪುನರ್ ಅಕ್ಷರ ನೀಡಲಾಗಿದೆ ಮತ್ತು ಸಿ.ಓ. 66ರ ಮೂಲಕ (ಹೆಚ್) ಖಂಡವೆಂದು ಪುನಃ ಪುನರ್ ಅಕ್ಷರ ನೀಡಲಾಗಿದೆ.

(7) ಭಾಗ **XII.**

[1]* * * * * * *

[2][(ಎ)] 267ನೇ ಅನುಚ್ಛೇದದ (2)ನೇ ಖಂಡವನ್ನು, 273ನೇ ಅನುಚ್ಛೇದವನ್ನು, 283ನೇ ಅನುಚ್ಛೇದದ (2)ನೇ ಖಂಡವನ್ನು [3][ಮತ್ತು 290ನೇ ಅನುಚ್ಛೇದವನ್ನು] ಬಿಟ್ಟುಬಿಡತಕ್ಕದ್ದು.

[2][(ಬಿ)] 266ನೇ, 282ನೇ, 284ನೇ, 298ನೇ, 299ನೇ ಮತ್ತು 300ನೇ ಅನುಚ್ಛೇದಗಳಲ್ಲಿ ರಾಜ್ಯಕ್ಕೆ ಅಥವಾ ರಾಜ್ಯಗಳಿಗೆ ಮಾಡಿದ ಉಲ್ಲೇಖಗಳು, ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾಡಿದ ಉಲ್ಲೇಖಗಳನ್ನು ಒಳಗೊಳ್ಳುವುದಿಲ್ಲವೆಂದು ಅರ್ಥೈಸತಕ್ಕದ್ದು.

[2][(ಸಿ)] 277ನೇ ಮತ್ತು 295ನೇ ಅನುಚ್ಛೇದಗಳಲ್ಲಿ ಸಂವಿಧಾನದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳನ್ನು ಈ ಆದೇಶದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

**(8) ಭಾಗ XIII.**

303ನೇ ಅನುಚ್ಛೇದದ (1)ನೇ ಖಂಡದಲ್ಲಿ [4]*** "ಏಳನೇ ಅನುಸೂಚಿಯ ಯಾವುದೇ ಪಟ್ಟಿಯಲ್ಲಿ ವ್ಯಾಪಾರಕ್ಕೆ ಅಥವಾ ವಾಣಿಜ್ಯಕ್ಕೆ ಸಂಬಂಧಿಸಿದಂತೆ ಇರುವ ಯಾವುದೇ ನಮೂದಿನ ಕಾರಣದಿಂದ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

[4]* * * * * *

**(9) ಭಾಗ XIV.**

[5][312ನೇ ಅನುಚ್ಛೇದದಲ್ಲಿ "ರಾಜ್ಯಗಳಿಗೆ" ಎಂಬ ಪದದ ತರುವಾಯ, "(ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಒಳಗೊಂಡು)" ಎಂಬ ಆವರಣಗಳನ್ನು ಮತ್ತು ಪದಗಳನ್ನು ಸೇರಿಸತಕ್ಕದ್ದು.]

[6]**[(10) ಭಾಗ XV.**

(ಎ) 324ನೇ ಅನುಚ್ಛೇದದ (1)ನೇ ಖಂಡದಲ್ಲಿ ಸಂವಿಧಾನಕ್ಕೆ ಮಾಡಿದ ಉಲ್ಲೇಖವನ್ನು ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನ ಮಂಡಲದ ಎರಡೂ ಸದನಗಳಿಗೆ ನಡೆಸಲಾಗುವ ಚುನಾವಣೆಗಳಿಗೆ ಸಂಬಂಧಪಟ್ಟಂತೆ, ಜಮ್ಮು ಮತ್ತು ಕಾಶ್ಮೀರದ ಸಂವಿಧಾನಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

[7][(ಬಿ) 325ನೇ, 326ನೇ, 327ನೇ ಮತ್ತು 329ನೇ ಅನುಚ್ಛೇದಗಳಲ್ಲಿ ಒಂದು ರಾಜ್ಯಕ್ಕೆ ಮಾಡಿದ ಉಲ್ಲೇಖವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾಡಿದ ಉಲ್ಲೇಖವನ್ನು ಒಳಗೊಳ್ಳುವುದಿಲ್ಲವೆಂದು ಅರ್ಥೈಸತಕ್ಕದ್ದು.

(ಸಿ) 328ನೇ ಅನುಚ್ಛೇದವನ್ನು ಬಿಟ್ಟುಬಿಡತಕ್ಕದ್ದು.

(ಡಿ) 329ನೇ ಅನುಚ್ಛೇದದಲ್ಲಿ "ಅಥವಾ 328ನೇ ಅನುಚ್ಛೇದದ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು.]]

[8][(ಇ) 329ಎ ಅನುಚ್ಛೇದದಲ್ಲಿ, (4)ನೇ ಮತ್ತು (5)ನೇ ಖಂಡಗಳನ್ನು ಬಿಟ್ಟುಬಿಡತಕ್ಕದ್ದು.]

---

1. ಸಿ.ಓ. 55ರ ಮೂಲಕ (ಎ) ಮತ್ತು (ಬಿ) ಖಂಡಗಳಿಗೆ ಸೇರಿಸಲಾಗಿದ್ದು, ಸಿ.ಓ. 56ರ ಮೂಲಕ ಬಿಟ್ಟುಬಿಡಲಾಗಿದೆ.
2. ಸಿ.ಓ. 55ರ ಮೂಲಕ (ಎ), (ಬಿ) ಮತ್ತು (ಸಿ) ಖಂಡಗಳಿಗೆ ಅನುಕ್ರಮವಾಗಿ (ಸಿ), (ಡಿ) ಮತ್ತು (ಇ) ಖಂಡಗಳೆಂದು ಪುನರ್ ಅಕ್ಷರ ನೀಡಲಾಗಿದ್ದು, ಸಿ.ಓ.56ರ ಮೂಲಕ ಅನುಕ್ರಮವಾಗಿ (ಎ), (ಬಿ) ಮತ್ತು (ಸಿ) ಖಂಡಗಳಿಗೆ ಪುನರ್ ಅಕ್ಷರ ನೀಡಲಾಗಿದೆ.
3. ಸಿ.ಓ. 94ರ ಮೂಲಕ "290 ಮತ್ತು 291ನೇ ಅನುಚ್ಛೇದಗಳ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
4. ಸಿ.ಓ. 56ರ ಮೂಲಕ "(ಎ)" ಆವರಣಗಳನ್ನು ಮತ್ತು ಅಕ್ಷರವನ್ನು ಮತ್ತು (ಬಿ) ಖಂಡವನ್ನು ಬಿಟ್ಟುಬಿಡಲಾಗಿದೆ.
5. ಸಿ.ಓ. 56ರ ಮೂಲಕ ಹಿಂದಿನ ಮಾರ್ಪಾಡಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
6. ಸಿ.ಓ. 60ರ ಮೂಲಕ (10)ನೇ ಉಪ ಪ್ಯಾರಾಗೆ ಬದಲಾಗಿ (26.1.1960 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
7. ಸಿ.ಓ. 75ರ ಮೂಲಕ (ಬಿ) ಮತ್ತು (ಸಿ) ಖಂಡಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
8. ಸಿ.ಓ. 105ರ ಮೂಲಕ ಸೇರಿಸಲಾಗಿದೆ.

(11) ಭಾಗ XVI.

[1]* * * * * * *

[2][(ಎ)] 331ನೇ, 332ನೇ, 333ನೇ, [3][336ನೇ ಮತ್ತು 337ನೇ] ಅನುಚ್ಛೇದಗಳನ್ನು ಬಿಟ್ಟುಬಿಡತಕ್ಕದ್ದು.

[2][(ಬಿ)] 334ನೇ ಮತ್ತು 335ನೇ ಅನುಚ್ಛೇದಗಳಲ್ಲಿ ರಾಜ್ಯಕ್ಕೆ ಅಥವಾ ರಾಜ್ಯಗಳಿಗೆ ಮಾಡಿದ ಉಲ್ಲೇಖಗಳು, ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾಡಿದ ಉಲ್ಲೇಖಗಳನ್ನು ಒಳಗೊಳ್ಳುವುದಿಲ್ಲವೆಂದು ಅರ್ಥೈಸತಕ್ಕದ್ದು.

[4][(ಸಿ) 339ನೇ ಅನುಚ್ಛೇದದ (1)ನೇ ಖಂಡದಲ್ಲಿ "ಅನುಸೂಚಿತ ಪ್ರದೇಶಗಳ ಆಡಳಿತ ಮತ್ತು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.]

(12) ಭಾಗ XVII.

ಈ ಭಾಗದ ಉಪಬಂಧಗಳು, ಅವು,-

(i) ಒಕ್ಕೂಟದ ರಾಜಭಾಷೆಗೆ;

(ii) ಒಂದು ರಾಜ್ಯದ ಮತ್ತು ಇನ್ನೊಂದು ರಾಜ್ಯದ ನಡುವೆ ಮತ್ತು ಒಂದು ರಾಜ್ಯದ ಮತ್ತು ಒಕ್ಕೂಟದ ನಡುವೆ ಸಂಪರ್ಕಕ್ಕಾಗಿನ ರಾಜಭಾಷೆಗೆ; ಮತ್ತು

(iii) ಸರ್ವೋಚ್ಛ ನ್ಯಾಯಾಲಯದಲ್ಲಿನ ವ್ಯವಹರಣೆಗಳ ಭಾಷೆಗೆ;

- ಸಂಬಂಧಪಡುವಷ್ಟರ ಮಟ್ಟಿಗೆ ಮಾತ್ರ ಅನ್ವಯಿಸತಕ್ಕದ್ದು.

(13) ಭಾಗ XVIII.

(ಎ) 352ನೇ ಅನುಚ್ಛೇದಕ್ಕೆ ಬದಲಾಗಿ, ಈ ಕೆಳಕಂಡ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"[5][(6)] ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಿಸಿದಂತೆ, (354ನೇ ಅನುಚ್ಛೇದಕ್ಕೆ ಸಂಬಂಧಿಸಿದುದನ್ನು ಹೊರತುಪಡಿಸಿ) ಆಂತರಿಕ ಗಲಭೆಯ ಅಥವಾ ಅದರ ಸನ್ನಿಹಿತ ಅಪಾಯದ ಕಾರಣಗಳ ಮೇಲೆ ಮಾತ್ರವೇ ಮಾಡಿದ ತುರ್ತು ಪರಿಸ್ಥಿತಿಯ [6][ಯಾವುದೇ ಉದ್ಘೋಷಣೆಯು,-

(ಎ) ಅದನ್ನು ಆ ರಾಜ್ಯ ಸರ್ಕಾರದ ಕೋರಿಕೆ ಮೇರೆಗೆ ಅಥವಾ ಸಹಮತಿಯೊಡನೆ ಮಾಡಿದ ಹೊರತು; ಅಥವಾ

(ಬಿ) ಅದನ್ನು ಹಾಗೆ ಮಾಡಿರದಿರುವಲ್ಲಿ, ಆ ರಾಜ್ಯ ಸರ್ಕಾರದ ಕೋರಿಕೆ ಮೇರೆಗೆ ಅಥವಾ ಸಹಮತಿಯೊಡನೆ ತದನಂತರ ಅದನ್ನು ರಾಷ್ಟ್ರಪತಿಯು ಆ ರಾಜ್ಯಕ್ಕೆ ಅನ್ವಯಿಸಿದ ಹೊರತು

- ಪರಿಣಾಮವುಳ್ಳದ್ದಾಗಿರತಕ್ಕದ್ದಲ್ಲ.]".

[7][(ಬಿ) 356ನೇ ಅನುಚ್ಛೇದದ (1)ನೇ ಖಂಡದಲ್ಲಿ ಈ ಸಂವಿಧಾನದ ಉಪಬಂಧಗಳಿಗೆ ಅಥವಾ ಉಪಬಂಧಕ್ಕೆ ಮಾಡಿದ ಉಲ್ಲೇಖಗಳು, ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಿಸಿದಂತೆ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸಂವಿಧಾನದ ಉಪಬಂಧಗಳಿಗೆ ಅಥವಾ ಉಪಬಂಧಕ್ಕೆ ಮಾಡಿದ ಉಲ್ಲೇಖಗಳನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕದ್ದು.

[8][(ಬಿಬಿ) 356ನೇ ಅನುಚ್ಛೇದದ (4)ನೇ ಖಂಡದಲ್ಲಿ, ಎರಡನೇ ಪರಂತುಕದ ತರುವಾಯ ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

---

1. ಸಿ.ಓ. 124ರ ಮೂಲಕ (ಎ) ಖಂಡವನ್ನು ಬಿಟ್ಟುಬಿಡಲಾಗಿದೆ.
2. ಸಿ.ಓ. 124ರ ಮೂಲಕ (ಬಿ) ಮತ್ತು (ಸಿ) ಖಂಡಗಳಿಗೆ (ಎ) ಮತ್ತು (ಬಿ) ಖಂಡಗಳೆಂದು ಪುನರ್ ಅಕ್ಷರ ನೀಡಲಾಗಿದೆ.
3. ಸಿ.ಓ. 124ರ ಮೂಲಕ "336, 337, 339 ಮತ್ತು 342" ಅನುಚ್ಛೇದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
4. ಸಿ.ಓ. 124ರ ಮೂಲಕ ಸೇರಿಸಲಾಗಿದೆ.
5. ಸಿ.ಓ. 104ರ ಮೂಲಕ "(4)"ಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
6. ಸಿ.ಓ. 100ರ ಮೂಲಕ ಕೆಲವು ಪದಗಳಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
7. ಸಿ.ಓ. 71ರ ಮೂಲಕ (ಬಿ) ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
8. ಸಿ.ಓ. 151ರ ಮೂಲಕ ಸೇರಿಸಲಾಗಿದೆ.

'ಮತ್ತೂ ಪರಂತು, (1)ನೇ ಖಂಡದ ಮೇರೆಗೆ, ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಪಟ್ಟಂತೆ 1990ರ ಜುಲೈ 18ನೇ ದಿನದಂದು ಹೊರಡಿಸಿದ ಉದ್ಘೋಷಣೆಯ ಸಂದರ್ಭದಲ್ಲಿ ಈ ಖಂಡದ ಮೊದಲನೆಯ ಪರಂತುಕದಲ್ಲಿ "ಮೂರು ವರ್ಷಗಳಿಗಿಂತ" ಎಂಬುದಕ್ಕೆ ಮಾಡಿದ ಉಲ್ಲೇಖವನ್ನು [1]["ಏಳು ವರ್ಷಗಳಿಗಿಂತ"] ಎಂಬುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು'.]

(ಸಿ) 360ನೇ ಅನುಚ್ಛೇದವನ್ನು ಬಿಟ್ಟುಬಿಡತಕ್ಕದ್ದು.]

**(14) ಭಾಗ XIX.**

[2] * * * * * *

[3][(ಎ)] [4][365ನೇ ಅನುಚ್ಛೇದವನ್ನು] ಬಿಟ್ಟುಬಿಡತಕ್ಕದ್ದು.

[5] * * * * * *

[6][(ಬಿ)] 367ನೇ ಅನುಚ್ಛೇದಕ್ಕೆ, ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(4) ಈ ಸಂವಿಧಾನದ ಉದ್ದೇಶಗಳಿಗಾಗಿ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಪಟ್ಟಂತೆ ಅದು ಅನ್ವಯವಾಗುವ ಹಾಗೆ,-

(ಎ) ಈ ಸಂವಿಧಾನಕ್ಕೆ ಅಥವಾ ಅದರ ಉಪಬಂಧಗಳಿಗೆ ಮಾಡಿದ ಉಲ್ಲೇಖಗಳನ್ನು ಈ ಸಂವಿಧಾನವು ಅಥವಾ ಅದರ ಉಪಬಂಧಗಳು ಸದರಿ ರಾಜ್ಯಕ್ಕೆ ಸಂಬಂಧಪಟ್ಟಂತೆ ಅನ್ವಯವಾಗುವ ಹಾಗೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

[7][(ಎಎ) ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನಸಭೆಯ ಶಿಫಾರಸ್ಸಿನ ಮೇಲೆ, ಆ ರಾಜ್ಯದ ಸದರ್-ಎ-ರಿಯಾಸತ್ ಎಂದು ರಾಷ್ಟ್ರಪತಿಯು ತತ್ಕಾಲದಲ್ಲಿ ಮಾನ್ಯತೆ ನೀಡಿದ್ದು, ತತ್ಕಾಲದಲ್ಲಿ ಅಧಿಕಾರದಲ್ಲಿರುವ ಆ ರಾಜ್ಯದ ಮಂತ್ರಿಮಂಡಲದ ಸಲಹೆ ಮೇಲೆ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗೆ ಮಾಡಿದ ಉಲ್ಲೇಖಗಳನ್ನು ಜಮ್ಮು ಮತ್ತು ಕಾಶ್ಮೀರ ರಾಜ್ಯದ ರಾಜ್ಯಪಾಲನಿಗೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ಬಿ) ಆ ರಾಜ್ಯ ಸರ್ಕಾರಕ್ಕೆ ಮಾಡಿದ ಉಲ್ಲೇಖಗಳನ್ನು, ಅವು ತನ್ನ ಮಂತ್ರಿಮಂಡಲದ ಸಲಹೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಜಮ್ಮು ಮತ್ತು ಕಾಶ್ಮೀರ ರಾಜ್ಯದ ರಾಜ್ಯಪಾಲನಿಗೆ ಮಾಡಿದ ಉಲ್ಲೇಖಗಳನ್ನು ಒಳಗೊಂಡಿರುವ ಹಾಗೆ ಅರ್ಥೈಸತಕ್ಕದ್ದು:

ಪರಂತು, 1965ನೆಯ ಇಸವಿಯ ಏಪ್ರಿಲ್ ತಿಂಗಳ 10ನೆಯ ದಿನಕ್ಕೆ ಮುಂಚಿನ ಯಾವುದೇ ಅವಧಿಗೆ ಸಂಬಂಧಿಸಿದಂತೆ ಅಂಥ ಉಲ್ಲೇಖಗಳು ತನ್ನ ಮಂತ್ರಿಮಂಡಲದ ಸಲಹೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸದರ್-ಎ-ರಿಯಾಸತ್‌ಗೆ ಮಾಡಿದ ಉಲ್ಲೇಖಗಳನ್ನೊಳಗೊಂಡಿರುವ ಹಾಗೆ ಅರ್ಥೈಸತಕ್ಕದ್ದು;]

(ಸಿ) ಒಂದು ಉಚ್ಚ ನ್ಯಾಯಾಲಯಕ್ಕೆ ಮಾಡಿದ ಉಲ್ಲೇಖಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ಮಾಡಿದ ಉಲ್ಲೇಖಗಳನ್ನೊಳಗೊಂಡಿರತಕ್ಕದ್ದು;

[8] * * * * *

---

1. ಸಿ.ಓ. 162ರ ಮೂಲಕ "ಆರು ವರ್ಷಗಳಿಗಿಂತ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. ಸಿ.ಓ. 74ರ ಮೂಲಕ (ಎ) ಖಂಡವನ್ನು ಬಿಟ್ಟುಬಿಡಲಾಗಿದೆ.
3. ಸಿ.ಓ. 74ರ ಮೂಲಕ (ಬಿ) ಮತ್ತು (ಸಿ) ಖಂಡಗಳಿಗೆ (ಎ) ಮತ್ತು (ಬಿ) ಖಂಡಗಳೆಂದು ಮನರ್ ಅಕ್ಷರ ನೀಡಲಾಗಿದೆ.
4. ಸಿ.ಓ. 94ರ ಮೂಲಕ "362 ಮತ್ತು 365ನೇ ಅನುಚ್ಛೇದಗಳು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. ಸಿ.ಓ. 56ರ ಮೂಲಕ ಮೂಲ (ಸಿ) ಖಂಡವನ್ನು ಬಿಟ್ಟುಬಿಡಲಾಗಿದೆ.
6. ಸಿ.ಓ. 74ರ ಮೂಲಕ (ಬಿ) ಮತ್ತು (ಸಿ) ಖಂಡಗಳಿಗೆ (ಎ) ಮತ್ತು (ಬಿ) ಖಂಡಗಳೆಂದು ಮನರ್‌ಅಕ್ಷರ ನೀಡಲಾಗಿದೆ.
7. ಸಿ.ಓ. 74ರ ಮೂಲಕ (ಬಿ) ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
8. ಸಿ.ಓ. 56ರ ಮೂಲಕ (ಡಿ) ಖಂಡವನ್ನು ಬಿಟ್ಟುಬಿಡಲಾಗಿದೆ.

[1][(ಡಿ)] ಆ ರಾಜ್ಯದ ಖಾಯಂ ನಿವಾಸಿಗಳಿಗೆ ಮಾಡಿದ ಉಲ್ಲೇಖಗಳನ್ನು 1954ನೇಯ ಇಸವಿಯ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶವು ಪ್ರಾರಂಭವಾಗುವುದಕ್ಕೆ ಮುಂಚೆ, ಆ ರಾಜ್ಯದಲ್ಲಿ ಜಾರಿಯಲ್ಲಿದ್ದ ಕಾನೂನುಗಳ ಮೇರೆಗೆ ಆ ರಾಜ್ಯದ ಪ್ರಜೆಗಳೆಂದು ಮನ್ನಣೆ ಪಡೆದಿದ್ದ ಅಥವಾ ಆ ರಾಜ್ಯ ವಿಧಾನ ಮಂಡಲವು ರಚಿಸಿದ ಯಾವುದೇ ಕಾನೂನಿನ ಮೂಲಕ ಆ ರಾಜ್ಯದ ಖಾಯಂ ನಿವಾಸಿಗಳೆಂದು ಮನ್ನಣೆ ಪಡೆದಿರುವ ವ್ಯಕ್ತಿಗಳೆಂಬುದಾಗಿ ಅರ್ಥವಿರುವಂತೆ ಅರ್ಥೈಸತಕ್ಕದ್ದು; ಮತ್ತು

[2][(ಇ) ರಾಜ್ಯಪಾಲನಿಗೆ ಮಾಡಿದ ಉಲ್ಲೇಖಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯದ ರಾಜ್ಯಪಾಲನಿಗೆ ಮಾಡಿದ ಉಲ್ಲೇಖಗಳನ್ನು ಒಳಗೊಂಡಿರತಕ್ಕದ್ದು:

ಪರಂತು, 1965ನೇ ಇಸವಿಯ ಏಪ್ರಿಲ್ ತಿಂಗಳ 10ನೇ ದಿನಕ್ಕೆ ಮುಂಚಿನ ಯಾವುದೇ ಅವಧಿಗೆ ಸಂಬಂಧಿಸಿದಂತೆ ಅಂಥ ಉಲ್ಲೇಖಗಳ ಜಮ್ಮು ಮತ್ತು ಕಾಶ್ಮೀರ ರಾಜ್ಯದ 'ಸದರ್-ಏ-ರಿಯಾಸತ್' ಎಂದು ರಾಷ್ಟ್ರಪತಿಯಿಂದ ಮನ್ನಣೆ ಪಡೆದಿರುವ ವ್ಯಕ್ತಿಗೆ ಮಾಡಿದ ಉಲ್ಲೇಖಗಳೆಂಬಂತೆ ಮತ್ತು ಅವು ಸದರ್-ಏ-ರಿಯಾಸತ್‌ನ ಅಧಿಕಾರಗಳನ್ನು ಚಲಾಯಿಸಲು ಸಕ್ಷಮನಾಗಿರುವವನು ಎಂಬುದಾಗಿ ರಾಷ್ಟ್ರಪತಿಯಿಂದ ಮನ್ನಣೆ ಪಡೆದ ಯಾರೇ ವ್ಯಕ್ತಿಗೆ ಮಾಡಿದ ಉಲ್ಲೇಖಗಳನ್ನೊಳಗೊಂಡಿರುವುದಾಗಿ ಅರ್ಥೈಸತಕ್ಕದ್ದು.]".

**(15) ಭಾಗ XX.**

[3][(ಎ)] [4][368ನೇ ಅನುಚ್ಛೇದದ (2)ನೇ ಖಂಡಕ್ಕೆ] ಈ ಕೆಳಕಂಡ ಇನ್ನೊಂದು ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತೂ ಪರಂತು, ಅಂಥ ಯಾವುದೇ ತಿದ್ದುಪಡಿಯು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಪಟ್ಟಂತೆ 370ನೇ ಅನುಚ್ಛೇದದ (1)ನೇ ಖಂಡದ ಮೇರೆಗಿನ ರಾಷ್ಟ್ರಪತಿಯ ಆದೇಶದ ಮೂಲಕ ಅದನ್ನು ಅನ್ವಯಿಸಿದ ಹೊರತು, ಪರಿಣಾಮವುಳ್ಳದ್ದಾಗಿರತಕ್ಕದ್ದಲ್ಲ.".

[5][(ಬಿ) 368ನೇ ಅನುಚ್ಛೇದದ (3)ನೇ ಖಂಡದ ತರುವಾಯ, ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(4) ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸಂವಿಧಾನದ ಯಾವುದೇ ಉಪಬಂಧದಲ್ಲಿ ಅಥವಾ ಅದರ ಪರಿಣಾಮದಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಉದ್ದೇಶಿಸಿ ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನ ಮಂಡಲವು,-

(ಎ) ರಾಜ್ಯಪಾಲನ ನೇಮಕಕ್ಕೆ, ಅಧಿಕಾರಗಳಿಗೆ, ಪ್ರಕಾರ್ಯಗಳಿಗೆ, ಕರ್ತವ್ಯಗಳಿಗೆ, ಉಪಲಬ್ಧಿಗಳಿಗೆ, ಭತ್ಯೆಗಳಿಗೆ, ವಿಶೇಷಾಧಿಕಾರಗಳಿಗೆ ಅಥವಾ ಉನ್ಮುಕ್ತಿಗಳಿಗೆ; ಅಥವಾ

(ಬಿ) ಜಮ್ಮು ಮತ್ತು ಕಾಶ್ಮೀರ ರಾಜ್ಯ ಸಂವಿಧಾನದ 138ನೇ, 139ನೇ 140ನೇ ಮತ್ತು 150ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಾದ ಭಾರತದ ಚುನಾವಣಾ ಆಯೋಗದಿಂದ ಚುನಾವಣೆಗಳ ಅಧೀಕ್ಷಣೆಗೆ, ನಿರ್ದೇಶನಕ್ಕೆ ಮತ್ತು ನಿಯಂತ್ರಣಕ್ಕೆ, ತಾರತಮ್ಯ ಮಾಡದೆ ಮತದಾರರ ಪಟ್ಟಿಯಲ್ಲಿ ಸೇರಿಸುವ ಸಲುವಾಗಿ ಅರ್ಹತೆಗೆ, ವಯಸ್ಕ ಮತದಾನಕ್ಕೆ ಮತ್ತು ವಿಧಾನ ಪರಿಷತ್ತಿನ ರಚನೆಗೆ

- ಸಂಬಂಧಿಸಿದಂತೆ ರಚಿಸಿದ ಯಾವುದೇ ಕಾನೂನು ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾಯ್ದಿರಿಸಿದ್ದು ಅವನ ಸಮ್ಮತಿಯನ್ನು ಪಡೆದ ಹೊರತು ಯಾವುದೇ ಪರಿಣಾಮವನ್ನು ಉಳ್ಳದ್ದಾಗಿರತಕ್ಕದ್ದಲ್ಲ."].

---

1. ಸಿ.ಓ. 56ರ ಮೂಲಕ (ಇ) ಖಂಡಕ್ಕೆ (ಡಿ) ಖಂಡವೆಂದು ಪುನರ್ ಅಕ್ಷರ ನೀಡಲಾಗಿದೆ.
2. ಸಿ.ಓ. 74ರ ಮೂಲಕ (ಇ) ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. ಸಿ.ಓ. 101ರ ಮೂಲಕ (ಎ) ಖಂಡವೆಂದು ಸಂಖ್ಯೆ ನೀಡಲಾಗಿದೆ.
4. ಸಿ.ಓ. 91ರ ಮೂಲಕ "368ನೇ ಅನುಚ್ಛೇದಕ್ಕೆ" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. ಸಿ.ಓ. 101ರ ಮೂಲಕ ಸೇರಿಸಲಾಗಿದೆ.

**(16) ಭಾಗ XXI.**

(ಎ) 369ನೇ, 371ನೇ, [1][371ಎ], [2][372ಎ], 373ನೇ ಅನುಚ್ಛೇದಗಳನ್ನು, 374ನೇ ಅನುಚ್ಛೇದದ (1)ನೇ, (2)ನೇ, (3)ನೇ ಮತ್ತು (5)ನೇ ಖಂಡಗಳನ್ನು ಮತ್ತು [3][376 ರಿಂದ 378ಎ ಮತ್ತು 392ನೇ ಅನುಚ್ಛೇದಗಳನ್ನು] ಬಿಟ್ಟುಬಿಡತಕ್ಕದ್ದು.

(ಬಿ) 372ನೇ ಅನುಚ್ಛೇದದಲ್ಲಿ,-

(i) (2) ಮತ್ತು (3)ನೇ ಖಂಡಗಳನ್ನು ಬಿಟ್ಟುಬಿಡತಕ್ಕದ್ದು;

(ii) ಭಾರತದ ರಾಜ್ಯಕ್ಷೇತ್ರದಲ್ಲಿ ಜಾರಿಯಲ್ಲಿದ್ದ ಕಾನೂನುಗಳಿಗೆ ಮಾಡಿದ ಉಲ್ಲೇಖಗಳು, ಹಿದಾಯತುಗಳಿಗೆ, ಐಲಾನುಗಳಿಗೆ, ಇಸ್ತಿಹಾರುಗಳಿಗೆ, ಸುತ್ತೋಲೆಗಳಿಗೆ, ರೂಬ್‌ಕಾರ್‌ಗಳಿಗೆ, ಇರ್‌ಷಾದುಗಳಿಗೆ, ಯಾದಾಸ್ತುಗಳಿಗೆ, ರಾಜ್ಯ ಪರಿಷತ್ತಿನ ನಿರ್ಣಯಗಳಿಗೆ, ಸಂವಿಧಾನ ಸಭೆಯ ನಿರ್ಣಯಗಳಿಗೆ ಹಾಗೂ ಜಮ್ಮು ಮತ್ತು ಕಾಶ್ಮೀರ ರಾಜ್ಯದ ರಾಜ್ಯಕ್ಷೇತ್ರದಲ್ಲಿ ಕಾನೂನಿನ ಬಲವುಳ್ಳ ಇತರ ಲಿಖಿತಗಳಿಗೆ ಮಾಡಿದ ಉಲ್ಲೇಖಗಳನ್ನು ಒಳಗೊಳ್ಳತಕ್ಕದ್ದು; ಮತ್ತು

(iii) ಸಂವಿಧಾನದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳನ್ನು ಈ ಆದೇಶದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

(ಸಿ) 374ನೇ ಅನುಚ್ಛೇದದ (4)ನೇ ಖಂಡದಲ್ಲಿ, ರಾಜ್ಯದ ಪ್ರೀವಿಕೌನ್ಸಿಲ್ ಆಗಿ ಕಾರ್ಯನಿರ್ವಹಿಸುತ್ತಿರುವ ಪ್ರಾಧಿಕಾರಕ್ಕೆ ಮಾಡಿದ ಉಲ್ಲೇಖವನ್ನು, ಜಮ್ಮು ಮತ್ತು ಕಾಶ್ಮೀರ ಸಂವಿಧಾನ ಅಧಿನಿಯಮ 1996ರ ಮೇರೆಗೆ ರಚಿತವಾದ ಸಲಹಾ ಮಂಡಲಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು, ಮತ್ತು ಸಂವಿಧಾನದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳನ್ನು, ಈ ಆದೇಶದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

**(17) ಭಾಗ XXII.**

394ನೇ ಮತ್ತು 395ನೇ ಅನುಚ್ಛೇದಗಳನ್ನು ಬಿಟ್ಟುಬಿಡತಕ್ಕದ್ದು.

**(18) ಮೊದಲನೆಯ ಅನುಸೂಚಿ.**

**(19) ಎರಡನೆಯ ಅನುಸೂಚಿ.**

[4]* * * * * *

**(20) ಮೂರನೆಯ ಅನುಸೂಚಿ.**

Vನೇ, VIನೇ, VIIನೇ ಮತ್ತು VIIIನೇ ನಮೂನೆಗಳನ್ನು ಬಿಟ್ಟುಬಿಡತಕ್ಕದ್ದು.

**(21) ನಾಲ್ಕನೆಯ ಅನುಸೂಚಿ.**

[5]**[(22) ಏಳನೆಯ ಅನುಸೂಚಿ.**

(ಎ) ಒಕ್ಕೂಟ ಪಟ್ಟಿಯಲ್ಲಿ,-

(i) 3ನೇ ನಮೂದಿಗೆ ಬದಲಾಗಿ "3. ದಂಡು ಪ್ರದೇಶಗಳ ಆಡಳಿತ" ಎಂಬ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು;

---

1. ಸಿ.ಓ. 74ರ ಮೂಲಕ ಸೇರಿಸಲಾಗಿದೆ.
2. ಸಿ.ಓ. 56ರ ಮೂಲಕ ಸೇರಿಸಲಾಗಿದೆ.
3. ಸಿ.ಓ. 56ರ ಮೂಲಕ "376 ರಿಂದ 392ರ ವರೆಗಿನ ಅನುಚ್ಛೇದಗಳನ್ನು" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
4. ಸಿ.ಓ. 56ರ ಮೂಲಕ 6ನೇ ಪ್ಯಾರಾಗೆ ಸಂಬಂಧಿಸಿದ ಮಾರ್ಪಾಡನ್ನು ಬಿಟ್ಟುಬಿಡಲಾಗಿದೆ.
5. ಸಿ.ಓ. 66ರ ಮೂಲಕ (22)ನೇ ಉಪ ಪ್ಯಾರಾಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.

[1][(ii) 8ನೇ, 9ನೇ [2][ಮತ್ತು 34ನೇ] ನಮೂದುಗಳು [3]* * * 79ನೇ ನಮೂದು, ಮತ್ತು 81ನೇ ನಮೂದಿನಲ್ಲಿನ "ಅಂತರ ರಾಜ್ಯ ವಲಸೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;]

[4]* * * * *

[5][(iii) 72ನೇ ನಮೂದಿನಲ್ಲಿ ರಾಜ್ಯಗಳಿಗೆ ಮಾಡಿದ ಉಲ್ಲೇಖವನ್ನು,-

(ಎ) ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನ ಮಂಡಲದ ಯಾವುದೇ ಸದನಕ್ಕೆ ನಡೆದ ಚುನಾವಣೆಯನ್ನು ಪ್ರಶ್ನಿಸಿದ್ದ ಚುನಾವಣಾ ತಕರಾರು ಅರ್ಜಿಯ ಮೇಲೆ ಆ ರಾಜ್ಯದ ಉಚ್ಚ ನ್ಯಾಯಾಲಯವು ನೀಡಿದ ಯಾವುದೇ ತೀರ್ಮಾನದ ಅಥವಾ ಆದೇಶದ ಬಗ್ಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಅಪೀಲುಗಳಿಗೆ ಸಂಬಂಧಪಟ್ಟಂತೆ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾಡಿದ ಉಲ್ಲೇಖವನ್ನು ಒಳಗೊಂಡಿರುವುದಾಗಿ;

(ಬಿ) ಇತರ ವಿಷಯಗಳಿಗೆ ಸಂಬಂಧಪಟ್ಟಂತೆ, ಆ ರಾಜ್ಯಕ್ಕೆ ಮಾಡಿದ ಉಲ್ಲೇಖಗಳನ್ನು ಒಳಗೊಂಡಿಲ್ಲವೆಂದು

– ಅರ್ಥೈಸತಕ್ಕದ್ದು;] [6][ಮತ್ತು]

[7][(iv) 97ನೇ ನಮೂದಿಗೆ ಬದಲಾಗಿ ಈ ಕೆಳಕಂಡ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"[8][97. (ಎ) ಕಾನೂನಿನ ಮೂಲಕ ಸ್ಥಾಪಿತವಾದ ಸರ್ಕಾರಕ್ಕೆ ಭಯಹುಟ್ಟಿಸುವ ಉದ್ದೇಶವುಳ್ಳ ಭಯೋತ್ಪಾದಕ ಕೃತ್ಯಗಳನ್ನೊಳಗೊಂಡ ಅಥವಾ ಜನರಲ್ಲಿ ಅಥವಾ ಜನರ ಯಾವುದೇ ವರ್ಗದಲ್ಲಿ ಭಯವನ್ನು ಉಂಟು ಮಾಡುವ ಅಥವಾ ಜನರ ಯಾವುದೇ ವರ್ಗವನ್ನು ದೂರಮಾಡುವ ಅಥವಾ ಜನರ ವಿವಿಧ ವರ್ಗಗಳ ನಡುವೆ ಇರುವ ಸಾಮರಸ್ಯಕ್ಕೆ ಪ್ರತಿಕೂಲ ಪರಿಣಾಮ ಉಂಟುಮಾಡುವ ಚಟುವಟಿಕೆಗಳನ್ನು ಪ್ರತಿಬಂಧಿಸುವುದು;

(ಬಿ) ಭಾರತದ ಸಾರ್ವಭೌಮತ್ವವನ್ನು ಮತ್ತು ಅದರ ರಾಜ್ಯ ಕ್ಷೇತ್ರೀಯ ಅಖಂಡತೆಯನ್ನು. ನಿರಾಕರಿಸುವ, ಪ್ರಶ್ನಿಸುವ, ಅಥವಾ ವಿಚ್ಛಿನ್ನಗೊಳಿಸುವ ಉದ್ದೇಶದ ಅಥವಾ ಭಾರತದ ರಾಜ್ಯಕ್ಷೇತ್ರದ ಒಂದು ಭಾಗವನ್ನು ಬಿಟ್ಟುಕೊಡುವ ಅಥವಾ ಒಕ್ಕೂಟದಿಂದ ಭಾರತದ ರಾಜ್ಯಕ್ಷೇತ್ರದ ಒಂದು ಭಾಗವು ಬೇರೆಯಾಗುವಂತೆ ಮಾಡುವ ಅಥವಾ ಭಾರತದ ರಾಷ್ಟ್ರಧ್ವಜಕ್ಕೆ, ಭಾರತದ ರಾಷ್ಟ್ರಗೀತೆಗೆ ಮತ್ತು ಈ ಸಂವಿಧಾನಕ್ಕೆ ಅಪಮಾನ ಉಂಟುಮಾಡುವ ಉದ್ದೇಶದ ಚಟುವಟಿಕೆಗಳನ್ನು ಪ್ರತಿಬಂಧಿಸುವುದು

– ಸಮುದ್ರ ಅಥವಾ ವಿಮಾನದ ಮೂಲಕ ವಿದೇಶ ಪ್ರಯಾಣ, ಮತ್ತು ಅಂತರ್ದೇಶೀಯ ವಿಮಾನ ಪ್ರಯಾಣ ಮತ್ತು ಮನಿಯಾರ್ಡರುಗಳನ್ನೊಳಗೊಂಡು ಅಂಚೆ ವಸ್ತುಗಳ, ಫೋನೋಗ್ರಾಂಗಳ ಮತ್ತು ಟೆಲಿಗ್ರಾಂಗಳ ಮೇಲಿನ ತೆರಿಗೆಗಳು.

**ವಿವರಣೆ.**- ಈ ನಮೂದಿನಲ್ಲಿ, "ಭಯೋತ್ಪಾದಕ ಕೃತ್ಯ" ಎಂಬುದು 248ನೇ ಅನುಚ್ಛೇದದ ವಿವರಣೆಗೆ ಇರುವಂತಹ ಅರ್ಥವನ್ನೇ ಹೊಂದಿರುತ್ತದೆ.]".]

(ಬಿ) ರಾಜ್ಯಪಟ್ಟಿಯನ್ನು ಬಿಟ್ಟುಬಿಡತಕ್ಕದ್ದು.]

---

1. ಸಿ.ಓ. 85ರ ಮೂಲಕ (ii)ನೇ ಬಾಬಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. ಸಿ.ಓ. 92ರ ಮೂಲಕ "34 ಮತ್ತು 60" ಎಂಬುದಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. ಸಿ.ಓ. 95ರ ಮೂಲಕ '67ನೇ ನಮೂದಿನಲ್ಲಿನ "ಮತ್ತು ದಾಖಲೆಗಳು" ಎಂಬ ಪದಗಳು' ಎಂಬ ಪದಗಳು ಮತ್ತು ಅಂಕಿಗಳನ್ನು ಬಿಟ್ಟುಬಿಡಲಾಗಿದೆ.
4. ಸಿ.ಓ. 74ರ ಮೂಲಕ ಮೂಲ (iii)ನೇ ಬಾಬನ್ನು ಬಿಟ್ಟುಬಿಡಲಾಗಿದೆ.
5. ಸಿ.ಓ. 83ರ ಮೂಲಕ (iii)ನೇ ಬಾಬಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
6. ಸಿ.ಓ. 85ರ ಮೂಲಕ ಸೇರಿಸಲಾಗಿದೆ.
7. ಸಿ.ಓ. 93ರ ಮೂಲಕ (iv)ನೇ ಬಾಬಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
8. ಸಿ.ಓ. 122ರ ಮೂಲಕ 97ನೇ ನಮೂದಿಗೆ ಬದಲಾಗಿ (4.6.1985 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

[1][(ಸಿ) ಸಮವರ್ತಿ ಪಟ್ಟಿಯಲ್ಲಿ–

[2][(i)1ನೇ ನಮೂದಿಗೆ ಬದಲಾಗಿ, ಈ ಕೆಳಕಂಡ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"1. ಕ್ರಿಮಿನಲ್ ಕಾನೂನು (ಪಟ್ಟಿ I ರಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದ ಕಾನೂನುಗಳಿಗೆ ವಿರುದ್ಧವಾದ ಅಪರಾಧಗಳನ್ನು ಹೊರತುಪಡಿಸಿ ಮತ್ತು ಸಿವಿಲ್ ಅಧಿಕಾರಕ್ಕೆ ನೆರವಾಗುವ ಒಕ್ಕೂಟದ ನೌಕಾ, ಭೂ ಮತ್ತು ವಾಯುಬಲಗಳ ಅಥವಾ ಇತರ ಯಾವುದೇ ಸಶಸ್ತ್ರ ಬಲಗಳ ಬಳಕೆಯನ್ನು ಹೊರತುಪಡಿಸಿ) ಅಂಥ ಕ್ರಿಮಿನಲ್ ಕಾನೂನು ಈ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದ ಕಾನೂನುಗಳಿಗೆ ವಿರುದ್ಧವಾದ ಅಪರಾಧಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ."];

[3][ [4][(iಎ) 2ನೇ ನಮೂದಿಗೆ ಬದಲಾಗಿ ಈ ಕೆಳಕಂಡ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"2. ದಂಡಪ್ರಕ್ರಿಯೆಯು (ಅಪರಾಧಗಳನ್ನು ತಡೆಗಟ್ಟುವುದು ಮತ್ತು ಸರ್ವೋಚ್ಛ ನ್ಯಾಯಾಲಯವನ್ನು ಮತ್ತು ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ಕ್ರಿಮಿನಲ್ ನ್ಯಾಯಾಲಯಗಳ ರಚನೆ ಮತ್ತು ಸಂಘಟನೆಯೂ ಸೇರಿದಂತೆ) ಅದು,–

(i) ಕಾನೂನುಗಳನ್ನು ರಚಿಸುವುದಕ್ಕೆ ಸಂಸತ್ತಿಗೆ ಅಧಿಕಾರ ಇರುವಂತಹ ವಿಷಯಗಳಾಗಿರುವ ಯಾವುದೇ ವಿಷಯಗಳಿಗೆ ಸಂಬಂಧಪಟ್ಟ ಕಾನೂನುಗಳಿಗೆ ವಿರುದ್ಧದ ಅಪರಾಧಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ; ಮತ್ತು

(ii) ಪ್ರಮಾಣ ವಚನಗಳ ಬೋಧನೆಗೆ ಮತ್ತು ಯಾವುದೇ ವಿದೇಶಿ ರಾಷ್ಟ್ರದಲ್ಲಿರುವ ರಾಜತಾಂತ್ರಿಕ ಮತ್ತು ಕಾನ್ಸುಲರ್ ಅಧಿಕಾರಿಗಳು ಶಪಥ ಪತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ;

(iಬಿ)12ನೇ ನಮೂದಿಗೆ ಬದಲಾಗಿ ಈ ಕೆಳಕಂಡ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"12. ಸಾಕ್ಷ್ಯ ಮತ್ತು ಪ್ರಮಾಣ ವಚನಗಳು, ಅವು,–

(i) ಪ್ರಮಾಣ ವಚನಗಳ ಬೋಧನೆಗೆ ಮತ್ತು ಯಾವುದೇ ವಿದೇಶಿ ರಾಷ್ಟ್ರದಲ್ಲಿರುವ ರಾಜತಾಂತ್ರಿಕ ಮತ್ತು ಕಾನ್ಸುಲರ್ ಅಧಿಕಾರಿಗಳು ಶಪಥ ಪತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ; ಮತ್ತು

(ii) ಕಾನೂನುಗಳನ್ನು ರಚಿಸುವುದಕ್ಕೆ ಸಂಸತ್ತಿಗೆ ಅಧಿಕಾರ ಇರುವಂತಹ ವಿಷಯಗಳಾಗಿರುವ ಯಾವುದೇ ಇತರ ವಿಷಯಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ.";

(iಸಿ) 13ನೇ ನಮೂದಿಗೆ ಬದಲಾಗಿ "13. ಸಿವಿಲ್ ಪ್ರಕ್ರಿಯೆಯು, ಅದು, ಪ್ರಮಾಣ ವಚನಗಳ ಬೋಧನೆಗೆ ಮತ್ತು ಯಾವುದೇ ವಿದೇಶದಲ್ಲಿರುವ ರಾಜತಾಂತ್ರಿಕ ಮತ್ತು ಕಾನ್ಸುಲರ್ ಅಧಿಕಾರಿಗಳು ಶಪಥಪತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ" ಎಂಬ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು;

[5]* * * * * *

---

1. ಸಿ.ಓ. 69ರ ಮೂಲಕ (ಸಿ) ಖಂಡಕ್ಕೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
2. ಸಿ.ಓ. 70ರ ಮೂಲಕ (i)ನೇ ಬಾಬಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
3. ಸಿ.ಓ. 94ರ ಮೂಲಕ ಸೇರಿಸಲಾಗಿದೆ.
4. ಸಿ.ಓ. 122ರ ಮೂಲಕ (iಎ) ಮತ್ತು (iಬಿ) ಉಪಖಂಡಗಳಿಗೆ ಬದಲಾಗಿ (4.6.85 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
5. ಸಿ.ಓ. 74ರ ಮೂಲಕ (ii) ಮತ್ತು (iii)ನೇ ಬಾಬುಗಳನ್ನು ಬಿಟ್ಟುಬಿಡಲಾಗಿದೆ.

[1][2][[(ii)] 30ನೇ ನಮೂದಿಗೆ ಬದಲಾಗಿ "30. ಜನನ ಮರಣಗಳ ಅಂಕಿಅಂಶಗಳು, ಜನನ ಮರಣಗಳ ನೋಂದಣಿಯನ್ನು ಒಳಗೊಂಡು ಅವು ಜನನ ಮರಣಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ" ಎಂಬ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು;]

[3]* * * * * *

[4][(iii)3ನೇ ನಮೂದನ್ನು, 5 ರಿಂದ 10ನೇ ನಮೂದುಗಳನ್ನು (ಎರಡನ್ನೂ ಒಳಗೊಂಡು) 14, 15, 17, 20, 21, 27, 28, 29, 31, 32, 37, 38, 41 ಮತ್ತು 44ನೇ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು;

(iiiಎ)42ನೇ ನಮೂದಿಗೆ ಬದಲಾಗಿ "42. ಸ್ವತ್ತಿನ ಆರ್ಜನೆ ಮತ್ತು ಕಡ್ಡಾಯ ಕೋರಿಕೆ, ಪಟ್ಟಿ I ರ 67ನೇ ನಮೂದಿನಲ್ಲಿ ಅಥವಾ ಪಟ್ಟಿ IIIರ 40ನೇ ನಮೂದಿನಲ್ಲಿ ಒಳಗೊಂಡಿರುವ ಯಾವುದೇ ಸ್ವತ್ತಿನ ಅಥವಾ ಕಲಾತ್ಮಕ ಅಥವಾ ಸೌಂದರ್ಯಾತ್ಮಕ ಮಹತ್ವವುಳ್ಳ ಯಾವುದೇ ಮಾನವ ನಿರ್ಮಿತ ಕಲಾಕೃತಿಯ ಆರ್ಜನೆಗೆ ಸಂಬಂಧಪಡುವಷ್ಟರ ಮಟ್ಟಿಗೆ." ಎಂಬ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು; ಮತ್ತು]

[5][(iv)]45ನೇ ನಮೂದಿನಲ್ಲಿ "ಪಟ್ಟಿ II ಅಥವಾ ಪಟ್ಟಿ III ರಲ್ಲಿ" ಎಂಬ ಪದಗಳಿಗೆ ಮತ್ತು ಅಂಕಿಗಳಿಗೆ ಬದಲಾಗಿ, "ಈ ಪಟ್ಟಿಯಲ್ಲಿ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.]]

**(23) ಎಂಟನೆಯ ಅನುಸೂಚಿ.**

[6][**(24) ಒಂಬತ್ತನೆಯ ಅನುಸೂಚಿ.**

[7][(ಎ)] 64ನೇ ನಮೂದಿನ ತರುವಾಯ, ಈ ಕೆಳಕಂಡ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ:-

[8][64ಎ.] ಜಮ್ಮು ಮತ್ತು ಕಾಶ್ಮೀರ ರಾಜ್ಯ ಕುಥ್ ಅಧಿನಿಯಮ, (ಸಂವತ್ 1978ರ ಸಂಖ್ಯೆ I).

[8][64ಬಿ.] ಜಮ್ಮು ಮತ್ತು ಕಾಶ್ಮೀರ ಗೇಣಿದಾರಿಕೆ ಅಧಿನಿಯಮ (ಸಂವತ್ 1980ರ ಸಂಖ್ಯೆ II).

[8][64ಸಿ.] ಜಮ್ಮು ಮತ್ತು ಕಾಶ್ಮೀರ ಭೂ ಪರಭಾರೆ ಅಧಿನಿಯಮ (ಸಂವತ್ 1995ರ ಸಂಖ್ಯೆ V).

[9]* * * * *

[10][64ಡಿ.] ಜಮ್ಮು ಮತ್ತು ಕಾಶ್ಮೀರ ದೊಡ್ಡ ಭೂ ಎಸ್ಟೇಟುಗಳ ರದ್ದಿಯಾತಿ ಅಧಿನಿಯಮ (ಸಂವತ್ 2007ರ ಸಂಖ್ಯೆ XVII).

[10][64ಇ.] ಜಹಗೀರುಗಳ ಮತ್ತು ಭೂಕಂದಾಯ, ಇತ್ಯಾದಿಗಳ ಹಸ್ತಾಂತರಣದ ಪುನರ್ವಶ ಬಗೆಗಿನ 1951ರ ಆದೇಶ ಸಂಖ್ಯೆ 6-ಹೆಚ್ ದಿನಾಂಕ 10ನೇ ಮಾರ್ಚ್ 1951.

[11][64ಎಫ್. ಜಮ್ಮು ಮತ್ತು ಕಾಶ್ಮೀರ ಅಡಮಾನ ಸ್ವತ್ತುಗಳ ಪೂರ್ವಸ್ಥಿತಿ ಪ್ರಾಪ್ತಿ ಅಧಿನಿಯಮ, 1976 (1976ರ ಅಧಿನಿಯಮ XIV).

64ಜಿ. ಜಮ್ಮು ಮತ್ತು ಕಾಶ್ಮೀರ ಸಾಲಗಾರರ ಪರಿಹಾರ ಅಧಿನಿಯಮ, 1976 (1976ರ XV).]

---

1. ಸಿ.ಓ. 70ರ ಮೂಲಕ ಸೇರಿಸಲಾಗಿದೆ.
2. ಸಿ.ಓ. 74ರ ಮೂಲಕ (iv) ನೇ ಬಾಬಿಗೆ (ii)ನೇ ಬಾಬು ಎಂದು ಪುನರ್ ಸಂಖ್ಯೆ ನೀಡಲಾಗಿದೆ.
3. ಸಿ.ಓ. 72ರ ಮೂಲಕ (v)ನೇ ಮತ್ತು (vi)ನೇ ಬಾಬುಗಳನ್ನು ಬಿಟ್ಟುಬಿಡಲಾಗಿದೆ.
4. ಸಿ.ಓ. 95ರ ಮೂಲಕ (iii)ನೇ ಬಾಬಿಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
5. ಸಿ.ಓ. 74ರ ಮೂಲಕ (vii) ನೇ ಬಾಬಿಗೆ (iv)ನೇ ಬಾಬು ಎಂದು ಪುನರ್ ಸಂಖ್ಯೆ ನೀಡಲಾಗಿದೆ.
6. ಸಿ.ಓ. 74ರ ಮೂಲಕ (24)ನೇ ಉಪಪ್ಯಾರಾಗೆ ಬದಲಾಗಿ ಪ್ರತ್ಯಾಯೋಜಿಸಲಾಗಿದೆ.
7. ಸಿ.ಓ. 105ರ ಮೂಲಕ ಸಂಖ್ಯೆ ನೀಡಲಾಗಿದೆ.
8. ಸಿ.ಓ. 98ರ ಮೂಲಕ ಪುನರ್ ಸಂಖ್ಯೆ ನೀಡಲಾಗಿದೆ.
9. ಸಿ.ಓ. 106ರ ಮೂಲಕ ಬಿಟ್ಟುಬಿಡಲಾಗಿದೆ.
10. ಸಿ.ಓ. 106ರ ಮೂಲಕ ಪುನರ್ ಸಂಖ್ಯೆ ನೀಡಲಾಗಿದೆ.
11. ಸಿ.ಓ. 106ರ ಮೂಲಕ ಸೇರಿಸಲಾಗಿದೆ.

[1][(ಬಿ) 1975ನೇ ಇಸವಿಯ ಸಂವಿಧಾನ (ಮೂವತ್ತೊಂಬತ್ತನೇ ತಿದ್ದುಪಡಿ) ಅಧಿನಿಯಮದ ಮೂಲಕ ಸೇರಿಸಿದ 87 ರಿಂದ 124ರ ವರೆಗಿನ ನಮೂದುಗಳಿಗೆ ಅನುಕ್ರಮವಾಗಿ 65ರಿಂದ 102ರ ವರೆಗಿನ ನಮೂದುಗಳೆಂದು ಪುನರ್‌ಸಂಖ್ಯೆ ನೀಡತಕ್ಕದ್ದು.]]"

[2][(ಸಿ) 125 ರಿಂದ 188ರ ವರೆಗಿನ ನಮೂದುಗಳಿಗೆ ಅನುಕ್ರಮವಾಗಿ 103 ರಿಂದ 166ರ ವರೆಗಿನ ನಮೂದುಗಳೆಂದು ಪುನರ್ ಸಂಖ್ಯೆ ನೀಡತಕ್ಕದ್ದು.]

[3][(25) **ಹತ್ತನೆಯ ಅನುಸೂಚಿ.**

(ಎ) "ಅನುಚ್ಛೇದಗಳು 102(2) ಮತ್ತು 191(2)" ಎಂಬ ಆವರಣಗಳಿಗೆ, ಪದಗಳಿಗೆ ಮತ್ತು ಅಂಕಿಗಳಿಗೆ ಬದಲಾಗಿ, "[ಅನುಚ್ಛೇದ 102(2)]" ಎಂಬ ಆವರಣಗಳನ್ನು, ಪದಗಳನ್ನು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ)1ನೇ ಪ್ಯಾರಾದ (ಎ) ಖಂಡದಲ್ಲಿ "ಅಥವಾ ಒಂದು ರಾಜ್ಯದ ವಿಧಾನಸಭೆ ಅಥವಾ ಸಂದರ್ಭಾನುಸಾರ ಆ ರಾಜ್ಯದ ವಿಧಾನ ಮಂಡಲದ ಎರಡೂ ಸದನಗಳು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) 2ನೇ ಪ್ಯಾರಾದಲ್ಲಿ,-

(i) (1)ನೇ ಉಪ-ಪ್ಯಾರಾದಲ್ಲಿ ವಿವರಣೆಯ (ಬಿ) ಖಂಡದ (ii)ನೇ ಉಪಖಂಡದಲ್ಲಿ, "ಅಥವಾ, ಸಂದರ್ಭಾನುಸಾರ 188ನೆಯ ಅನುಚ್ಛೇದದ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು;

(ii) (3)ನೇ ಉಪ-ಪ್ಯಾರಾದಲ್ಲಿ, "ಅಥವಾ, ಸಂದರ್ಭಾನುಸಾರ 188ನೆಯ ಅನುಚ್ಛೇದದ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು;

(iii) (4)ನೇ ಉಪ-ಪ್ಯಾರಾದಲ್ಲಿ, ಸಂವಿಧಾನ (ಐವತ್ತೆರಡನೇ ತಿದ್ದುಪಡಿ) ಅಧಿನಿಯಮ, 1985ರ ಪ್ರಾರಂಭಕ್ಕೆ ಮಾಡಿದ ಉಲ್ಲೇಖವನ್ನು, ಸಂವಿಧಾನ (ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯ) ತಿದ್ದುಪಡಿ ಆದೇಶ, 1989ರ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ಡಿ) 5ನೇ ಪ್ಯಾರಾದಲ್ಲಿ, "ಅಥವಾ ಒಂದು ರಾಜ್ಯದ ವಿಧಾನ ಪರಿಷತ್ತಿನ ಸಭಾಪತಿಯ ಅಥವಾ ಉಪ-ಸಭಾಪತಿಯ ಅಥವಾ ಒಂದು ರಾಜ್ಯದ ವಿಧಾನಸಭೆಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಇ) 6ನೇ ಪ್ಯಾರಾದ (2)ನೇ ಉಪ-ಪ್ಯಾರಾದಲ್ಲಿ "ಅಥವಾ, ಸಂದರ್ಭಾನುಸಾರ, 212ನೇ ಅನುಚ್ಛೇದದ ಅರ್ಥವ್ಯಾಪ್ತಿಯೊಳಗೆ ಒಂದು ರಾಜ್ಯದ ವಿಧಾನ ಮಂಡಲದ ವ್ಯವಹರಣೆಗಳೆಂದು" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು;

(ಎಫ್) 8ನೇ ಪ್ಯಾರಾದ (3)ನೇ ಉಪ-ಪ್ಯಾರಾದಲ್ಲಿ "ಅಥವಾ, ಸಂದರ್ಭಾನುಸಾರ, 194ನೇ ಅನುಚ್ಛೇದದ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು.]

1. ಸಿ.ಓ. 105ರ ಮೂಲಕ ಸೇರಿಸಲಾಗಿದೆ.
2. ಸಿ.ಓ. 108ರ ಮೂಲಕ (31.12.1977 ರಿಂದ ಜಾರಿಗೆ ಬರುವಂತೆ) ಸೇರಿಸಲಾಗಿದೆ.
3. ಸಿ.ಓ. 136ರ ಮೂಲಕ ಸೇರಿಸಲಾಗಿದೆ.

## ಪರಿಶಿಷ್ಟ – II

## ಯಾವ ವಿನಾಯಿತಿಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು ಸಂವಿಧಾನವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗುವುದೋ ಆ ವಿನಾಯಿತಿಗಳ ಮತ್ತು ಆ ಮಾರ್ಪಾಟುಗಳ ಮರು ವಿವರಣೆ, ಸಂವಿಧಾನದ ಈಗಿನ ಪಾಠಕ್ಕೆ ಉಲ್ಲೇಖದ ಸಹಿತ

[**ಟಿಪ್ಪಣಿ:**– ಯಾವ ವಿನಾಯಿತಿಗಳಿಗೆ ಮತ್ತು ಮಾರ್ಪಾಟುಗಳಿಗೆ ಒಳಪಟ್ಟು ಸಂವಿಧಾನವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗುವುದೋ ಆ ವಿನಾಯಿತಿಗಳು ಮತ್ತು ಮಾರ್ಪಾಟುಗಳು, 1954ನೇ ಇಸವಿಯ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶದಲ್ಲಿ ಉಪಬಂಧಿಸಿದವುಗಳಾಗಿವೆ ಅಥವಾ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂವಿಧಾನದ ಕೆಲವು ತಿದ್ದುಪಡಿಗಳು ಅನ್ವಯವಾಗದಿರುವ ಪರಿಣಾಮವಾಗಿ ಕಲ್ಪಿಸಿದ ಉಪಬಂಧಗಳಾಗಿವೆ. ವ್ಯಾವಹಾರಿಕ ಮಹತ್ವ ಇರುವಂಥ ಎಲ್ಲ ವಿನಾಯತಿಗಳನ್ನು ಮತ್ತು ಮಾರ್ಪಾಟುಗಳನ್ನು ಮರು ವಿವರಣೆಯಲ್ಲಿ ಸೇರ್ಪಡೆ ಮಾಡಲಾಗಿದೆ. ಶೀಘ್ರ ಪರಾಮರ್ಶೆಗಾಗಿ ಮಾತ್ರ ಈ ಅನುಕೂಲ ಕಲ್ಪಿಸಲಾಗಿದೆ. ಸರಿಯಾದ ಸ್ಥಿತಿಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ 1954ನೇ ಇಸವಿಯ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶಕ್ಕೆ ಮತ್ತು ಸದರಿ ಆದೇಶದ 2ನೇ ಖಂಡದಲ್ಲಿ ಹೇಳಿದ ಸಂವಿಧಾನದ ಅನಂತರದ ತಿದ್ದುಪಡಿಗಳ ಮೂಲಕ ತಿದ್ದುಪಡಿ ಆದಂತೆ 1964ರ ಜೂನ್ 20 ರಂದು ಇದ್ದ ಸಂವಿಧಾನದ ಪಾಠಕ್ಕೆ ಉಲ್ಲೇಖಗಳನ್ನು ಮಾಡಬೇಕಾಗುತ್ತದೆ.]

**(1) ಪ್ರಸ್ತಾವನೆ.–**

(ಎ) ಮೊದಲನೇ ಪ್ಯಾರಾದಲ್ಲಿ "ಸಮಾಜವಾದಿ ಸರ್ವಧರ್ಮ ಸಮಭಾವದ" ಎಂಬುದನ್ನು ಬಿಟ್ಟುಬಿಡತಕ್ಕದ್ದು.

(ಬಿ) ಉಪಾಂತ್ಯ ಪ್ಯಾರಾದಲ್ಲಿ "ಹಾಗೂ ಅಖಂಡತೆಯನ್ನು" ಎಂಬುದನ್ನು ಬಿಟ್ಟುಬಿಡತಕ್ಕದ್ದು.

**(2) ಭಾಗ – I.-**

ಅನುಚ್ಛೇದ 3 ರಲ್ಲಿ.–

(ಎ) ಈ ಮುಂದಿನ ಇನ್ನೊಂದು ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತೂ ಪರಂತು, ಜಮ್ಮು ಮತ್ತು ಕಾಶ್ಮೀರ ರಾಜ್ಯದ ಪ್ರದೇಶವನ್ನು ಹೆಚ್ಚಿಸುವುದಕ್ಕೆ ಅಥವಾ ಕಡಿಮೆ ಮಾಡುವುದಕ್ಕೆ ಅಥವಾ ಆ ರಾಜ್ಯದ ಹೆಸರನ್ನು ಅಥವಾ ಸರಹದ್ದನ್ನು ಬದಲಾಯಿಸುವುದಕ್ಕೆ ಉಪಬಂಧಿಸುವ ಯಾವುದೇ ವಿಧೇಯಕವನ್ನು ಆ ರಾಜ್ಯದ ವಿಧಾನಮಂಡಲದ ಸಮ್ಮತಿಯಿಲ್ಲದೆಯೇ ಸಂಸತ್ತಿನಲ್ಲಿ ಮಂಡಿಸತಕ್ಕದ್ದಲ್ಲ.";

(ಬಿ) ವಿವರಣೆ I ಮತ್ತು ವಿವರಣೆ II ನ್ನು ಬಿಟ್ಟುಬಿಡತಕ್ಕದ್ದು.

**(3) ಭಾಗ – II.-**

(ಎ) ಈ ಭಾಗವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಿಸಿದಂತೆ 1950ರ ಜನವರಿ 26ನೇ ದಿನದಿಂದ ಅನ್ವಯವಾಗಿರುವುದಾಗಿ ಭಾವಿಸತಕ್ಕದ್ದು.

(ಬಿ) ಅನುಚ್ಛೇದ 7.– ಈ ಮುಂದಿನ ಇನ್ನೊಂದು ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತೂ ಪರಂತು, ಈ ಅನುಚ್ಛೇದದಲ್ಲಿ ಇರುವುದು ಯಾವುದೂ, ಜಮ್ಮು ಮತ್ತು ಕಾಶ್ಮೀರ ರಾಜ್ಯದ ಖಾಯಂ ನಿವಾಸಿಯಾಗಿದ್ದು, ಈಗ ಪಾಕಿಸ್ತಾನದಲ್ಲಿ ಒಳಗೊಂಡಿರುವ ರಾಜ್ಯ ಕ್ಷೇತ್ರಕ್ಕೆ ಹಾಗೆ ವಲಸೆ ಹೋದ ಬಳಿಕ, ಆ ರಾಜ್ಯದಲ್ಲಿ ಮತ್ತೆ ನೆಲೆಸುವುದಕ್ಕಾಗಿ ಅಥವಾ ಖಾಯಂ ಆಗಿ ಹಿಂತಿರುಗುವುದಕ್ಕಾಗಿ, ಆ ರಾಜ್ಯದ ವಿಧಾನಮಂಡಲವು ರಚಿಸಿದ ಯಾವುದೇ ಕಾನೂನಿನ ಅಧಿಕಾರದ ಮೂಲಕ ಅಥವಾ ಮೇರೆಗೆ ಕೊಟ್ಟ ಪರ್ಮಿಟ್ಟಿನ ಮೇರೆಗೆ ಆ ರಾಜ್ಯದ ರಾಜ್ಯ ಕ್ಷೇತ್ರಕ್ಕೆ ವಾಪಸು ಬರುವವನಿಗೆ ಅನ್ವಯವಾಗತಕ್ಕದ್ದಲ್ಲ ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯನ್ನು ಭಾರತದ ನಾಗರಿಕನೆಂದು ಭಾವಿಸತಕ್ಕದ್ದು.".

(4) ಭಾಗ – **III.**-

(ಎ) ಅನುಚ್ಛೇದ 13.- ಸಂವಿಧಾನದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳನ್ನು ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶ, 1954ರ (ಸಿ.ಓ. 48ರ) ಪ್ರಾರಂಭಕ್ಕೆ ಎಂದರೆ, 1954ರ ಮೇ ತಿಂಗಳ 14ನೆಯ ದಿನಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

* * * * *

(ಸಿ) ಅನುಚ್ಛೇದ 16.- (3)ನೇ ಖಂಡದಲ್ಲಿ ರಾಜ್ಯಕ್ಕೆ ಮಾಡಿದ ಉಲ್ಲೇಖವು ಜಮ್ಮು ಮತ್ತು ಕಾಶ್ಮೀರ ರಾಜ್ಯದ ಉಲ್ಲೇಖವನ್ನು ಒಳಗೊಳ್ಳುವುದಿಲ್ಲವೆಂದು ಅರ್ಥೈಸತಕ್ಕದ್ದು.

(ಡಿ) ಅನುಚ್ಛೇದ 19.-

(ಎ) (1)ನೇ ಖಂಡದಲ್ಲಿ,-

(i) (ಇ) ಉಪಖಂಡದಲ್ಲಿ, ಕೊನೆಯಲ್ಲಿರುವ "ಮತ್ತು" ಎಂಬುದನ್ನು ಬಿಟ್ಟುಬಿಡತಕ್ಕದ್ದು;

(ii) (ಇ) ಉಪಖಂಡದ ನಂತರ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಎಫ್) ಸ್ವತ್ತನ್ನು ಆರ್ಜಿಸುವುದಕ್ಕೆ, ಧಾರಣ ಮಾಡುವುದಕ್ಕೆ ಮತ್ತು ವಿಲೆ ಮಾಡುವುದಕ್ಕೆ; ಮತ್ತು";

(ಬಿ) (5)ನೇ ಖಂಡದಲ್ಲಿ "(ಡಿ) ಮತ್ತು (ಇ) ಉಪಖಂಡಗಳಿಂದ" ಎಂಬ ಪದಗಳ ಬದಲಾಗಿ "(ಡಿ), (ಇ) ಮತ್ತು (ಎಫ್) ಉಪಖಂಡಗಳಿಂದ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಇ) ಅನುಚ್ಛೇದ 22.- (4)ನೇ ಮತ್ತು (7)ನೇ ಖಂಡಗಳಲ್ಲಿ "ಸಂಸತ್ತು" ಎಂಬ ಪದಕ್ಕೆ ಬದಲಾಗಿ "ರಾಜ್ಯ ವಿಧಾನಮಂಡಲವು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಎಫ್) ಅನುಚ್ಛೇದ 30.- (1ಎ) ಖಂಡವನ್ನು ಬಿಟ್ಟುಬಿಡತಕ್ಕದ್ದು.

(ಜಿ) 30ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"ಸ್ವತ್ತಿನ ಹಕ್ಕು**

**31. ಸ್ವತ್ತಿನ ಕಡ್ಡಾಯ ಆರ್ಜನೆ.**- (1) ಯಾರೇ ವ್ಯಕ್ತಿಯನ್ನು, ಕಾನೂನಿನ ಅಧಿಕಾರದ ಹೊರತು ಅವನ ಸ್ವತ್ತಿನಿಂದ ವಂಚಿಸತಕ್ಕದ್ದಲ್ಲ.

(2) ಯಾವುದೇ ಸ್ವತ್ತನ್ನು ಒಂದು ಸಾರ್ವಜನಿಕ ಉದ್ದೇಶಕ್ಕೋಸ್ಕರವಲ್ಲದೆ ಮತ್ತು ಕಾನೂನಿನ ಅಧಿಕಾರದ, ಎಂದರೆ ಅಂಥ ಕಾನೂನು ನಿಗದಿ ಮಾಡಬಹುದಾದ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಬಹುದಾದ ತತ್ವಗಳಿಗನುಸಾರವಾಗಿ ನಿರ್ಧರಿಸಬಹುದಾದ ಮತ್ತು ಅಂತಹ ರೀತಿಯಲ್ಲಿ ಕೊಡಬಹುದಾದ ಹಣಕ್ಕಾಗಲಿ ಸ್ವತ್ತನ್ನು ಆರ್ಜನೆ ಮಾಡಲು ಅಥವಾ ಕಡ್ಡಾಯ ಆರ್ಜನೆ ಮಾಡಲು ಉಪಬಂಧ ಕಲ್ಪಿಸುವಂತಹ ಒಂದು ಕಾನೂನಿನ ಅಧಿಕಾರದ ಮೇರೆಗಲ್ಲದೆ ಆರ್ಜನೆ ಅಥವಾ ಕಡ್ಡಾಯ ಆರ್ಜನೆ ಮಾಡತಕ್ಕದ್ದಲ್ಲ ಮತ್ತು ಹಾಗೆ ನಿಗದಿಮಾಡಿದ ಅಥವಾ ನಿರ್ಧರಿಸಿದ ಹಣವು ಸಾಕಷ್ಟಿಲ್ಲವೆಂಬ ಕಾರಣದ ಮೇಲೆ ಅಥವಾ ಆ ಹಣವನ್ನು ಪೂರ್ತಿಯಾಗಿ ಇಲ್ಲವೆ ಅದರ ಯಾವುದೇ ಭಾಗವನ್ನು ನಗದು ರೂಪದಲ್ಲಲ್ಲದೆ ಬೇರೆ ರೀತಿಯಲ್ಲಿ ಕೊಡಬೇಕಾಗುತ್ತದೆ ಎಂಬ ಕಾರಣದ ಮೇಲೆ ಅಂತಹ ಯಾವುದೇ ಕಾನೂನನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ:

ಪರಂತು, 30ನೇ ಅನುಚ್ಛೇದದ (1)ನೇ ಖಂಡದಲ್ಲಿ ಉಲ್ಲೇಖಿಸಿದ ಅಲ್ಪಸಂಖ್ಯಾತ ವರ್ಗದಿಂದ ಸ್ಥಾಪಿತವಾದ ಮತ್ತು ಅದು ಆಡಳಿತ ನಡೆಸುತ್ತಿರುವ ಯಾವುದೇ ಒಂದು ಶೈಕ್ಷಣಿಕ ಸಂಸ್ಥೆಯ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಆರ್ಜನೆ ಮಾಡುವುದಕ್ಕಾಗಿ ಉಪಬಂಧಿಸುವ ಯಾವುದೇ ಕಾನೂನನ್ನು ಮಾಡುವಾಗ ರಾಜ್ಯವು ಅಂತಹ ಸ್ವತ್ತಿನ ಆರ್ಜನೆಗಾಗಿ ಅಂಥ ಕಾನೂನಿನ ಮೂಲಕ ನಿಗದಿಪಡಿಸಿರುವ ಅಥವಾ ಅದರ ಮೇರೆಗೆ ನಿರ್ಧರಿಸಿದ ಹಣವು ಆ ಖಂಡದ ಮೇರೆಗೆ ಖಾತ್ರಿ ಕೊಡಲಾದ ಹಕ್ಕಿಗೆ ನಿರ್ಬಂಧವನ್ನು ಉಂಟುಮಾಡುವುದಿಲ್ಲ ಅಥವಾ ಅಂತಹ ಹಕ್ಕನ್ನು ರದ್ದುಪಡಿಸುವುದಿಲ್ಲ ಎಂಬುದನ್ನು ರಾಜ್ಯವು ಖಚಿತಪಡಿಸಿಕೊಳ್ಳತಕ್ಕದ್ದು.

(2ಎ) ರಾಜ್ಯಕ್ಕೆ ಅಥವಾ ರಾಜ್ಯದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಒಂದು ನಿಗಮಕ್ಕೆ ಯಾವುದೇ ಸ್ವತ್ತಿನ ಒಡೆತನವನ್ನು ಅಥವಾ ಅದರ ಸ್ವಾಧೀನತೆಯ ಅಧಿಕಾರವನ್ನು ವರ್ಗಾಯಿಸಲು ಯಾವುದೇ ಕಾನೂನು ಉಪಬಂಧ ಕಲ್ಪಿಸದಿರದಿರುವಲ್ಲಿ, ಅದು ಯಾರೇ ವ್ಯಕ್ತಿಯನ್ನು ಅವನ ಸ್ವತ್ತಿನಿಂದ ವಂಚಿಸಿದ್ದಾಗ್ಯೂ ಆ ಕಾನೂನು, ಸ್ವತ್ತನ್ನು ಕಡ್ಡಾಯವಾಗಿ ಆರ್ಜನೆ ಮಾಡಲು ಅಥವಾ ಕಡ್ಡಾಯವಾಗಿ ಕೋರಲು ಉಪಬಂಧ ಕಲ್ಪಿಸುವುದೆಂದು ಭಾವಿಸತಕ್ಕದ್ದಲ್ಲ.

(2ಬಿ) 19ನೇ ಅನುಚ್ಛೇದದ (1)ನೇ ಖಂಡದ (ಎಫ್) ಉಪಖಂಡದಲ್ಲಿ ಇರುವುದು ಯಾವುದೂ, (2)ನೇ ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ಅಂಥ ಕಾನೂನನ್ನು ಬಾಧಿಸತಕ್ಕದ್ದಲ್ಲ.

* * * * *

(5) (2)ನೇ ಖಂಡದಲ್ಲಿ ಇರುವುದು ಯಾವುದೂ-

(ಎ) ಅಸ್ತಿತ್ವದಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ; ಅಥವಾ

(ಬಿ) ಇನ್ನು ಮುಂದೆ ರಾಜ್ಯವು-

(i) ಯಾವುದೇ ತೆರಿಗೆಯನ್ನು ಅಥವಾ ದಂಡವನ್ನು ವಿಧಿಸುವ ಅಥವಾ ಹಾಕುವ ಉದ್ದೇಶಕ್ಕಾಗಿ; ಅಥವಾ

(ii) ಸಾರ್ವಜನಿಕ ಆರೋಗ್ಯವನ್ನು ಸಂವರ್ಧಿಸುವುದಕ್ಕಾಗಿ ಅಥವಾ ಪ್ರಾಣಕ್ಕೆ ಅಥವಾ ಸ್ವತ್ತಿಗೆ ಉಂಟಾಗುವ ಅಪಾಯವನ್ನು ತಡೆಗಟ್ಟುವುದಕ್ಕಾಗಿ; ಅಥವಾ

(iii) ನಿರ್ವಾಸಿತರ ಸ್ವತ್ತಾಗಬೇಕೆಂದು ಕಾನೂನಿನ ಮೂಲಕ ಘೋಷಿಸಿದ ಸ್ವತ್ತಿಗೆ ಸಂಬಂಧಿಸಿದಂತೆ

– ಮಾಡುವ ಯಾವುದೇ ಕಾನೂನಿನ ಉಪಬಂಧಗಳಿಗೆ ಬಾಧಕ ಉಂಟುಮಾಡತಕ್ಕದ್ದಲ್ಲ.".

* * * * *

(ಹೆಚ್) 31ನೇ ಅನುಚ್ಛೇದದ ತರುವಾಯ ಈ ಮುಂದಿನ ಉಪಶೀರ್ಷಿಕೆಯನ್ನು ಬಿಟ್ಟುಬಿಡತಕ್ಕದ್ದು, ಎಂದರೆ:-

**"ಕೆಲವು ಕಾನೂನುಗಳನ್ನು ಉಳಿಸುವುದು"**

(ಐ) ಅನುಚ್ಛೇದ 31ಎ.-

(ಎ) (1)ನೇ ಖಂಡದಲ್ಲಿ,-

(i) "14ನೆಯ ಅನುಚ್ಛೇದದಿಂದ ಅಥವಾ 19ನೆಯ ಅನುಚ್ಛೇದದಿಂದ" ಎಂಬ ಪದಗಳ ಬದಲಾಗಿ "14ನೆಯ ಅನುಚ್ಛೇದದಿಂದ, 19ನೆಯ ಅನುಚ್ಛೇದದಿಂದ ಅಥವಾ 31ನೆಯ ಅನುಚ್ಛೇದದಿಂದ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ii) (1)ನೇ ಖಂಡದ ಮೊದಲನೇ ಪರಂತುಕವನ್ನು ಬಿಟ್ಟುಬಿಡತಕ್ಕದ್ದು;

(iii) ಎರಡನೇ ಪರಂತುಕದಲ್ಲಿ "ಮತ್ತೂ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(ಬಿ) (2)ನೇ ಖಂಡದಲ್ಲಿ '(ಎ) ಉಪಖಂಡದ ಬದಲಾಗಿ ಈ ಮುಂದಿನ ಉಪಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

'(ಎ) "ಎಸ್ಟೇಟು" ಎಂದರೆ ಕೃಷಿ ಉದ್ದೇಶಗಳಿಗಾಗಿ ಅಥವಾ ಕೃಷಿಗೆ ಸಾಧಕವಾದ ಉದ್ದೇಶಗಳಿಗಾಗಿ ಅಥವಾ ಹುಲ್ಲುಗಾವಲಿಗಾಗಿ ಅಧಿಭೋಗದಲ್ಲಿರುವ ಅಥವಾ ಗುತ್ತಿಗೆಗೆ ಕೊಟ್ಟಿರುವ ಭೂಮಿ, ಮತ್ತು,-

(i) ಅಂತಹ ಭೂಮಿಯ ಮೇಲಿರುವ ಕಟ್ಟಡಗಳ ನಿವೇಶನಗಳನ್ನು ಮತ್ತು ಇತರ ಕಟ್ಟಡಗಳನ್ನು;

(ii) ಅಂತಹ ಭೂಮಿಯ ಮೇಲೆ ನಿಂತಿರುವ ಮರಗಳನ್ನು;

(iii) ಅರಣ್ಯ ಭೂಮಿಯನ್ನು ಮತ್ತು ಅರಣ್ಯ ಬಂಜರು ಭೂಮಿಯನ್ನು;

(iv) ಜಲಾವೃತ ಪ್ರದೇಶ ಅಥವಾ ನೀರಿನಲ್ಲಿ ತೇಲುವ ಹೊಲಗದ್ದೆಗಳನ್ನು;

(v) ಜಂದಾರ್ ಮತ್ತು ಘರಾಟ್‌ಗಳ ನಿವೇಶನಗಳನ್ನು;

(vi) ಯಾವುದೇ ಜಾಗೀರು, ಇನಾಮು, ಮುವಾಫಿ ಅಥವಾ ಮುಕರರಿ ಅಥವಾ ಅಂಥದೇ ಇತರ ಮಂಜೂರಾತಿಯನ್ನು

– ಒಳಗೊಳ್ಳುತ್ತದೆ, ಆದರೆ,–

(i) ಯಾವುದೇ ಪಟ್ಟಣದಲ್ಲಿರುವ ಅಥವಾ ಪಟ್ಟಣ ಪ್ರದೇಶದಲ್ಲಿರುವ ಅಥವಾ ಗ್ರಾಮ ಅಬಾಧಿಯಲ್ಲಿರುವ ಯಾವುದೇ ಕಟ್ಟಡದ ನಿವೇಶನವು ಅಥವಾ ಅಂತಹ ಕಟ್ಟಡಕ್ಕೆ ಅಥವಾ ನಿವೇಶನಕ್ಕೆ ಲಗತ್ತಾದ ಯಾವುದೇ ಭೂಮಿಯು;

(ii) ಪಟ್ಟಣದ ಅಥವಾ ಗ್ರಾಮದ ನಿವೇಶನವಾಗಿ ಅಧಿಭೋಗದಲ್ಲಿರುವ ಯಾವುದೇ ಭೂಮಿಯು; ಅಥವಾ

(iii) ಪುರಸಭೆಯ ಅಥವಾ ಅಧಿಸೂಚಿತ ಪ್ರದೇಶದಲ್ಲಿ ಅಥವಾ ದಂಡು ಪ್ರದೇಶದಲ್ಲಿ ಅಥವಾ ಪಟ್ಟಣ ಪ್ರದೇಶದಲ್ಲಿ ಅಥವಾ ಪಟ್ಟಣ ಯೋಜನೆಯ ಪರಿಯೋಜನೆಯು ಮಂಜೂರಾದ ಯಾವುದೇ ಪ್ರದೇಶದಲ್ಲಿ ಕಟ್ಟಡದ ಉದ್ದೇಶಗಳಿಗಾಗಿ ಕಾಯ್ದಿರಿಸಿದ ಯಾವುದೇ ಭೂಮಿಯು,

– ಒಳಗೊಳ್ಳುವುದಿಲ್ಲ;'.

(ಜೆ) ಅನುಚ್ಛೇದ 31ಸಿ.– ಈ ಅನುಚ್ಛೇದವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗುವುದಿಲ್ಲ.

(ಕೆ) ಅನುಚ್ಛೇದ 32.– (3)ನೇ ಖಂಡವನ್ನು ಬಿಟ್ಟುಬಿಡತಕ್ಕದ್ದು.

(ಎಲ್) ಅನುಚ್ಛೇದ 35.–

(ಎ) ಸಂವಿಧಾನದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳನ್ನು ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶ, 1954ರ (ಸಿ.ಒ. 48ರ) ಪ್ರಾರಂಭಕ್ಕೆ ಎಂದರೆ, 1954ರ ಮೇ ತಿಂಗಳ 14ನೆಯ ದಿನಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ಬಿ) ಖಂಡ (ಎ) (i) ರಲ್ಲಿ "16ನೆಯ ಅನುಚ್ಛೇದದ (3)ನೆಯ ಖಂಡವನ್ನು, 32ನೆಯ ಅನುಚ್ಛೇದದ (3)ನೆಯ ಖಂಡವನ್ನು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) (ಬಿ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಸಿ) ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶ, 1954ರ ಪ್ರಾರಂಭಕ್ಕೆ ಮುಂಚಿತವಾಗಿಯಾಗಲಿ ಅಥವಾ ಆನಂತರವಾಗಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನಮಂಡಲವು ಮಾಡಿದ ಪ್ರತಿಬಂಧಕ ಸ್ಥಾನಬದ್ಧತೆಗೆ ಸಂಬಂಧಿಸಿದ ಯಾವುದೇ ಕಾನೂನು, ಈ ಭಾಗದ ಉಪಬಂಧಗಳಿಗೆ ಅಸಂಗತವಾಗಿದೆಯೆಂಬ ಕಾರಣದ ಮೇಲೆ ಅನೂರ್ಜಿತವಾಗತಕ್ಕದ್ದಲ್ಲ, ಆದರೆ, ಯಾವುದೇ ಅಂಥ ಕಾನೂನು, ಹಾಗೆ ಅಸಂಗತವಾಗಿರುವಷ್ಟರ ಮಟ್ಟಿಗೆ, ಅಂಥ ಆದೇಶದ ಪ್ರಾರಂಭದಿಂದ ಇಪ್ಪತ್ತೈದು ವರ್ಷಗಳು ಮುಕ್ತಾಯವಾದ ಮೇಲೆ, ಅದರ ಮುಕ್ತಾಯಕ್ಕೆ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟ ಕಾರ್ಯಗಳಿಗೆ ಸಂಬಂಧಿಸಿದಂತೆ ಹೊರತು, ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.".

(ಎಂ) 35ನೇ ಅನುಚ್ಛೇದದ ತರುವಾಯ ಈ ಮುಂದಿನ ಅನುಚ್ಛೇದವನ್ನು ಸೇರಿಸತಕ್ಕದ್ದು, ಎಂದರೆ:–

**"35ಎ. ಖಾಯಂ ನಿವಾಸಿಗಳ ಮತ್ತು ಅವರ ಹಕ್ಕುಗಳ ಬಗ್ಗೆ ಕಾನೂನುಗಳ ಉಳಿಕೆ.**– ಈ ಸಂವಿಧಾನದಲ್ಲಿ ಏನೇ ಒಳಗೊಂಡಿದ್ದರೂ, ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿರುವಂಥ ಅಸ್ತಿತ್ವದಲ್ಲಿರುವ ಯಾವುದೇ ಕಾನೂನು ಮತ್ತು ಇನ್ನು ಮುಂದೆ ರಾಜ್ಯ ವಿಧಾನಮಂಡಲವು ಅಧಿನಿಯಮಿಸುವ, ಎಂದರೆ:–

(ಎ) ಜಮ್ಮು ಮತ್ತು ಕಾಶ್ಮೀರ ರಾಜ್ಯದ ಖಾಯಂ ನಿವಾಸಿಗಳಾಗಿರುವ ಅಥವಾ ನಿವಾಸಿಗಳಾಗಿರತಕ್ಕ ವ್ಯಕ್ತಿಗಳ ವರ್ಗಗಳನ್ನು ಪರಿಭಾಷಿಸುವ; ಅಥವಾ

(ಬಿ) ಅಂಥ ಖಾಯಂ ನಿವಾಸಿಗಳಿಗೆ ಯಾವುವೇ ವಿಶೇಷ ಹಕ್ಕುಗಳನ್ನು ಮತ್ತು ವಿಶೇಷ ಅಧಿಕಾರಗಳನ್ನು ಪ್ರದಾನ ಮಾಡುವ; ಅಥವಾ,–

(i) ರಾಜ್ಯ ಸರ್ಕಾರದ ಅಧೀನದಲ್ಲಿಯ ಉದ್ಯೋಗಕ್ಕೆ;

(ii) ರಾಜ್ಯದಲ್ಲಿ ಸ್ಥಿರ ಸ್ವತ್ತಿನ ಆರ್ಜನೆ ಮಾಡುವುದಕ್ಕೆ;

(iii) ರಾಜ್ಯದಲ್ಲಿ ನೆಲೆಸುವುದಕ್ಕೆ; ಅಥವಾ

(iv) ರಾಜ್ಯ ಸರ್ಕಾರವು ಒದಗಿಸಬಹುದಾದ ವಿದ್ಯಾರ್ಥಿ ವೇತನಕ್ಕೆ ಮತ್ತು ಅಂತಹ ಇತರ ರೀತಿಯ ನೆರವಿನ ಹಕ್ಕಿಗೆ

– ಸಂಬಂಧಪಟ್ಟಂತೆ ಇತರ ವ್ಯಕ್ತಿಗಳ ಮೇಲೆ ಯಾವುವೇ ನಿರ್ಬಂಧಗಳನ್ನು ವಿಧಿಸುವ ಯಾವುದೇ ಕಾನೂನು, ಈ ಭಾಗದ ಯಾವುದೇ ಉಪಬಂಧದ ಮೂಲಕ ಭಾರತದ ಇತರ ನಾಗರಿಕರಿಗೆ ಪ್ರದತ್ತವಾದ ಯಾವುವೇ ಹಕ್ಕುಗಳಿಗೆ ಅದು ಅಸಂಗತವಾಗಿದೆಯೆಂಬ ಅಥವಾ ಅದು ಯಾವುವೇ ಹಕ್ಕುಗಳನ್ನು ಕಿತ್ತುಕೊಂಡಿದೆಯೆಂಬ ಅಥವಾ ಮೊಟಕುಗೊಳಿಸುತ್ತದೆಯೆಂಬ ಕಾರಣದ ಮೇಲೆ ಶೂನ್ಯವಾಗತಕ್ಕದ್ದಲ್ಲ.

**(5) ಭಾಗ – IV.**– ಈ ಭಾಗವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗುವುದಿಲ್ಲ.

**(6) ಭಾಗ – IVಎ.**– ಈ ಭಾಗವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗುವುದಿಲ್ಲ.

**(7) ಭಾಗ – V.**–

(ಎ) ಅನುಚ್ಛೇದ 55.–

(ಎ) ಈ ಅನುಚ್ಛೇದದ ಉದ್ದೇಶಗಳಿಗಾಗಿ, ಜಮ್ಮು ಮತ್ತು ಕಾಶ್ಮೀರ ರಾಜ್ಯದ ಜನಸಂಖ್ಯೆಯನ್ನು ಅರವತ್ತು ಮೂರು ಲಕ್ಷ ಎಂದು ಭಾವಿಸತಕ್ಕದ್ದು.

(ಬಿ) ವಿವರಣೆಯ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(ಬಿ) ಅನುಚ್ಛೇದ 81.– (2)ನೆಯ ಮತ್ತು (3)ನೆಯ ಖಂಡಗಳ ಬದಲಾಗಿ, ಈ ಮುಂದಿನ ಖಂಡಗಳನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(2) (1)ನೆಯ ಖಂಡದ (ಎ) ಉಪಖಂಡದ ಉದ್ದೇಶಗಳಿಗಾಗಿ,–

(ಎ) ಲೋಕಸಭೆಯಲ್ಲಿ ಆ ರಾಜ್ಯಕ್ಕೆ ಆರು ಸ್ಥಾನಗಳನ್ನು ಹಂಚಿಕೆ ಮಾಡತಕ್ಕದ್ದು;

(ಬಿ) 1972ನೆಯ ಇಸವಿಯ ಸೀಮಾ ನಿರ್ಣಯ ಅಧಿನಿಯಮದ ಮೇರೆಗೆ ರಚಿತವಾದ ಸೀಮಾ ನಿರ್ಣಯ ಆಯೋಗವು, ಅದು ತಾನು ಸೂಕ್ತವೆಂದು ಭಾವಿಸಬಹುದಾದಂಥ ಪ್ರಕ್ರಿಯೆಗೆ ಅನುಸಾರವಾಗಿ, ರಾಜ್ಯವನ್ನು ಏಕಸದಸ್ಯ ಚುನಾವಣಾ ಕ್ಷೇತ್ರಗಳಾಗಿ ವಿಭಾಗಿಸತಕ್ಕದ್ದು;

(ಸಿ) ಚುನಾವಣಾ ಕ್ಷೇತ್ರಗಳು ಕಾರ್ಯತಃ ಸಾಧ್ಯವಾಗುವಷ್ಟರ ಮಟ್ಟಿಗೆ ಭೌಗೋಳಿಕವಾಗಿ ಹೊಂದಿಕೊಂಡಿರುವ ಪ್ರದೇಶಗಳಾಗಿರತಕ್ಕದ್ದು ಮತ್ತು ಅವುಗಳ ಸೀಮಾ ನಿರ್ಣಯ ಮಾಡುವಲ್ಲಿ ಭೌತಿಕ ಲಕ್ಷಣಗಳನ್ನು, ಅಸ್ತಿತ್ವದಲ್ಲಿರುವ ಆಡಳಿತ ಘಟಕಗಳ ಸರಹದ್ದುಗಳನ್ನು, ಸಂಪರ್ಕ ಸೌಲಭ್ಯಗಳನ್ನು ಮತ್ತು ಸಾರ್ವಜನಿಕ ಅನುಕೂಲತೆಯನ್ನು ಗಮನದಲ್ಲಿಡತಕ್ಕದ್ದು; ಮತ್ತು

(ಡಿ) ರಾಜ್ಯವನ್ನು ಯಾವ ಚುನಾವಣಾ ಕ್ಷೇತ್ರಗಳಾಗಿ ವಿಭಾಗಿಸಲಾಗುತ್ತದೆಯೋ ಆ ಚುನಾವಣಾ ಕ್ಷೇತ್ರಗಳು ಪಾಕಿಸ್ತಾನದ ಸ್ವಾಧೀನದಲ್ಲಿರುವ ಪ್ರದೇಶವನ್ನು ಒಳಗೊಳ್ಳತಕ್ಕದ್ದಲ್ಲ.

(3) (2)ನೇ ಖಂಡದಲ್ಲಿರುವುದಾವುದೂ, 1972ರ ಸೀಮಾ ನಿರ್ಣಯ ಅಧಿನಿಯಮದ ಮೇರೆಗೆ ಸಂಸತ್ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯಕ್ಕೆ ಸಂಬಂಧಪಟ್ಟಂತೆ ಸೀಮಾ ನಿರ್ಣಯ ಆಯೋಗದ ಅಂತಿಮ ಆದೇಶವನ್ನು ಅಥವಾ ಆದೇಶಗಳನ್ನು, ಭಾರತ ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಂದು ಅಸ್ತಿತ್ವದಲ್ಲಿರುವ ಸದನವು ವಿಸರ್ಜನೆಯಾಗುವವರೆಗೆ ಲೋಕಸಭೆಯಲ್ಲಿ ರಾಜ್ಯದ ಪ್ರಾತಿನಿಧ್ಯಕ್ಕೆ ಬಾಧಕ ಉಂಟುಮಾಡತಕ್ಕದ್ದಲ್ಲ.

(4)(ಎ) ರಾಜ್ಯವನ್ನು ಪ್ರತಿನಿಧಿಸುವ ಲೋಕಸಭೆಯ ಸದಸ್ಯರಾಗಿರತಕ್ಕ ಐವರು ವ್ಯಕ್ತಿಗಳನ್ನು ಸೀಮಾ ನಿರ್ಣಯ ಆಯೋಗವು ರಾಜ್ಯಕ್ಕೆ ಸಂಬಂಧಿಸಿದಂತೆ ತನ್ನ ಕರ್ತವ್ಯಗಳಿಗೆ ನೆರವಾಗುವ ಉದ್ದೇಶಕ್ಕಾಗಿ, ತನ್ನ ಜೊತೆಗೆ ಸೇರಿಸಿಕೊಳ್ಳತಕ್ಕದ್ದು.

(ಬಿ) ರಾಜ್ಯದಿಂದ ಹಾಗೆ ಸೇರಿಸಿಕೊಳ್ಳಬೇಕಾದ ವ್ಯಕ್ತಿಗಳನ್ನು ಸದನದ ರಚನೆಗೆ ಯುಕ್ತ ಗಮನ ನೀಡಿ ಲೋಕಸಭೆಯ ಅಧ್ಯಕ್ಷನು ನಾಮನಿರ್ದೇಶನ ಮಾಡತಕ್ಕದ್ದು.

(ಸಿ) ಲೋಕಸಭೆಯ ಅಧ್ಯಕ್ಷನು (ಬಿ) ಉಪಖಂಡದ ಮೇರೆಗೆ ಮಾಡಬೇಕಾದ ಮೊದಲನೆಯ ನಾಮನಿರ್ದೇಶನಗಳನ್ನು, 1974ರ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಎರಡನೆಯ ತಿದ್ದುಪಡಿ ಆದೇಶದ ಪ್ರಾರಂಭದಿಂದ ಎರಡು ತಿಂಗಳ ಒಳಗಾಗಿ ಮಾಡತಕ್ಕದ್ದು.

(ಡಿ) ಯಾವ ಸಹವರ್ತಿ ಸದಸ್ಯರಿಗೂ ಮತ ನೀಡುವ ಅಥವಾ ಸೀಮಾ ನಿರ್ಣಯ ಆಯೋಗದ ಯಾವುದೇ ತೀರ್ಮಾನಕ್ಕೆ ಸಹಿ ಹಾಕುವ ಹಕ್ಕು ಇರತಕ್ಕದ್ದಲ್ಲ.

(ಇ) ಸಹವರ್ತಿ ಸದಸ್ಯನ ಪದವು, ಮರಣದ ಅಥವಾ ರಾಜೀನಾಮೆಯ ಕಾರಣದಿಂದಾಗಿ ಖಾಲಿಯಾದರೆ, ಕಾರ್ಯಸಾಧ್ಯವಾಗಬಹುದಾದಷ್ಟು ಬೇಗನೆ, ಲೋಕಸಭೆಯ ಅಧ್ಯಕ್ಷನು, (ಎ) ಮತ್ತು (ಬಿ) ಉಪಖಂಡಗಳ ಉಪಬಂಧಗಳಿಗೆ ಅನುಸಾರವಾಗಿ ಅದನ್ನು ತುಂಬತಕ್ಕದ್ದು".

(ಸಿ) ಅನುಚ್ಛೇದ 82.– ಎರಡನೆಯ ಮತ್ತು ಮೂರನೆಯ ಪರಂತುಕಗಳನ್ನು ಬಿಟ್ಟುಬಿಡತಕ್ಕದ್ದು.

(ಡಿ) ಅನುಚ್ಛೇದ 105.– (3)ನೆಯ ಖಂಡದಲ್ಲಿ "ಸಂವಿಧಾನ (ನಲವತ್ತ ನಾಲ್ಕನೆಯ ತಿದ್ದುಪಡಿ) ಅಧಿನಿಯಮ, 1978ರ 15ನೆಯ ಪ್ರಕರಣವು ಜಾರಿಗೆ ಬರುವುದಕ್ಕೆ ನಿಕಟ ಪೂರ್ವದಲ್ಲಿ ಆ ಸದನಕ್ಕೆ, ಅದರ ಸದಸ್ಯರಿಗೆ ಮತ್ತು ಸಮಿತಿಗಳಿಗೆ ಇದ್ದಂತಹ ಅವೇ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳು ಇರತಕ್ಕದ್ದು" ಎಂಬ ಪದಗಳ ಬದಲಾಗಿ "ಈ ಸಂವಿಧಾನದ ಪ್ರಾರಂಭದಲ್ಲಿ ಯುನೈಟೆಡ್ ಕಿಂಗ್‌ಡಮ್‌ನ ಪಾರ್ಲಿಮೆಂಟಿನ ಹೌಸ್ ಆಫ್ ಕಾಮನ್ಸ್‌ಗೆ ಮತ್ತು ಅದರ ಸದಸ್ಯರಿಗೆ ಮತ್ತು ಸಮಿತಿಗಳಿಗೆ ಇದ್ದಂತಹ ಅವೇ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ಉನ್ಮುಕ್ತಿಗಳು ಇರತಕ್ಕದ್ದು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಇ) 132ನೆಯ ಅನುಚ್ಛೇದದ ಬದಲಾಗಿ, ಈ ಮುಂದಿನ ಅನುಚ್ಛೇದವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

**'132. ಕೆಲವು ಮೊಕದ್ದಮೆಗಳಲ್ಲಿ ಉಚ್ಚ ನ್ಯಾಯಾಲಯಗಳಿಂದ ಬರುವ ಅಪೀಲುಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಅಪೀಲು ಅಧಿಕಾರ ವ್ಯಾಪ್ತಿ.**– (1) ಭಾರತದ ರಾಜ್ಯ ಕ್ಷೇತ್ರದಲ್ಲಿರುವ ಒಂದು ಉಚ್ಚ ನ್ಯಾಯಾಲಯವು ಸಿವಿಲ್, ಕ್ರಿಮಿನಲ್ ಅಥವಾ ಇತರ ವ್ಯವಹರಣೆಯಲ್ಲಿ ನೀಡಿದ ಯಾವುದೇ ತೀರ್ಪಿನ, ಡಿಕ್ರಿಯ ಅಥವಾ ಅಂತಿಮ ಆದೇಶಕ್ಕೆ ಸಂಬಂಧಪಟ್ಟ ಆ ಮೊಕದ್ದಮೆಯಲ್ಲಿ ಈ ಸಂವಿಧಾನದ ಅರ್ಥ ವಿವರಣೆಗೆ ಸಂಬಂಧಿಸಿದ ಗಣನೀಯವಾದ ಕಾನೂನಿನ ಪ್ರಶ್ನೆಯು ಒಳಗೊಂಡಿದೆಯೆಂದು ಆ ಉಚ್ಚ ನ್ಯಾಯಾಲಯವು ಪ್ರಮಾಣೀಕರಿಸಿದರೆ, ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದು.

(2) ಉಚ್ಚ ನ್ಯಾಯಾಲಯವು ಅಂಥ ಪ್ರಮಾಣಪತ್ರವನ್ನು ಕೊಡಲು ನಿರಾಕರಿಸಿದಲ್ಲಿ, ಸರ್ವೋಚ್ಚ ನ್ಯಾಯಾಲಯವು ಆ ಮೊಕದ್ದಮೆಯಲ್ಲಿ ಈ ಸಂವಿಧಾನದ ಅರ್ಥ ವಿವರಣೆಗೆ ಸಂಬಂಧಿಸಿದ ಗಣನೀಯವಾದ ಕಾನೂನಿನ ಪ್ರಶ್ನೆಯು ಒಳಗೊಂಡಿದೆಯೆಂದು ಮನಗಂಡರೆ, ಅಂಥ ತೀರ್ಪಿನ, ಡಿಕ್ರಿಯ ಅಥವಾ ಅಂತಿಮ ಆದೇಶದ ಮೇಲೆ ಅಪೀಲನ್ನು ಸಲ್ಲಿಸಲು ವಿಶೇಷ ಅನುಮತಿ ನೀಡಬಹುದು.

(3) ಅಂಥ ಪ್ರಮಾಣಪತ್ರವನ್ನು ಕೊಟ್ಟಿರುವಲ್ಲಿ ಅಥವಾ ಅಂಥ ಅನುಮತಿಯನ್ನು ನೀಡಿರುವಲ್ಲಿ, ಆ ಮೊಕದ್ದಮೆಯ ಯಾರೇ ಪಕ್ಷಕಾರನು, ಹಿಂದೆ ಹೇಳಿರುವಂಥ ಯಾವುದೇ ಪ್ರಶ್ನೆಯನ್ನು ತಪ್ಪಾಗಿ ತೀರ್ಮಾನಿಸಲಾಗಿದೆಯೆಂಬ ಕಾರಣದ ಮೇಲೆ ಮತ್ತು ಯಾವುದೇ ಇತರೆ ಕಾರಣದ ಮೇಲೆ ಸರ್ವೋಚ್ಚ ನ್ಯಾಯಾಲಯದ ಅನುಮತಿ ಪಡೆದು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

**ವಿವರಣೆ.**- ಈ ಅನುಚ್ಛೇದದ ಉದ್ದೇಶಗಳಿಗಾಗಿ "ಅಂತಿಮ ಆದೇಶ" ಎಂಬ ಪದಾವಳಿಯು ಯಾವ ವಿವಾದಾಂಶವನ್ನು ಅಪೀಲುದಾರನ ಪರವಾಗಿ ತೀರ್ಮಾನಿಸಿದರೆ ಆ ಮೊಕದ್ದಮೆಯ ಅಂತಿಮ ವಿಲೆಗೆ ಸಾಕಾಗಬಹುದೋ ಆ ವಿವಾದಾಂಶವನ್ನು ತೀರ್ಮಾನಿಸುವ ಆದೇಶವನ್ನು ಒಳಗೊಳ್ಳುತ್ತದೆ.'.

(ಎಫ್) ಅನುಚ್ಛೇದ 133.-

(ಎ) (1)ನೆಯ ಖಂಡದಲ್ಲಿ, "134ಎ ಅನುಚ್ಛೇದದ ಮೇರೆಗೆ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(ಬಿ) (1)ನೆಯ ಖಂಡದ ನಂತರ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

'(1ಎ) 1972ನೆಯ ಇಸವಿಯ ಸಂವಿಧಾನ (ಮೂವತ್ತನೆಯ ತಿದ್ದುಪಡಿ) ಅಧಿನಿಯಮದ 3ನೆಯ ಪ್ರಕರಣದ ಉಪಬಂಧಗಳು, ಅದರಲ್ಲಿನ "ಈ ಅಧಿನಿಯಮ", "ಈ ಅಧಿನಿಯಮದ ಪ್ರಾರಂಭ", "ಈ ಅಧಿನಿಯಮವು ಅಂಗೀಕೃತವಾಗಿರದಿದ್ದರೆ" ಮತ್ತು "ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ" ಎಂಬ ಪದಗಳಿಗೆ ಮಾಡಿದ ಉಲ್ಲೇಖಗಳನ್ನು ಅನುಕ್ರಮವಾಗಿ "1974ನೆಯ ಇಸವಿಯ ಸಂವಿಧಾನ (ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯ) ಎರಡನೆಯ ತಿದ್ದುಪಡಿ ಆದೇಶ", "ಸದರಿ ಆದೇಶದ ಪ್ರಾರಂಭ", "ಸದರಿ ಆದೇಶವನ್ನು ಮಾಡಿರದಿದ್ದರೆ" ಮತ್ತು "ಸದರಿ ಆದೇಶದ ಪ್ರಾರಂಭದ ತರುವಾಯ ಇದ್ದಂತೆ" ಎಂಬ ಪದಾವಳಿಗಳಿಗೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು ಎಂಬ ಮಾರ್ಪಾಟುಗಳಿಗೆ ಒಳಪಟ್ಟು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗತಕ್ಕದ್ದು".'.

(ಜಿ) ಅನುಚ್ಛೇದ 134,-

(ಎ) (1)ನೆಯ ಖಂಡದ (ಸಿ) ಉಪಖಂಡದಲ್ಲಿರುವ "134ಎ ಅನುಚ್ಛೇದದ ಮೇರೆಗೆ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.

(ಬಿ) (2)ನೆಯ ಖಂಡದಲ್ಲಿರುವ "ಸಂಸತ್ತು" ಎಂಬ ಪದದ ತರುವಾಯ "ರಾಜ್ಯದ ವಿಧಾನಮಂಡಲದ ಕೋರಿಕೆಯ ಮೇರೆಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಹೆಚ್) 134ಎ, 135, 139 ಮತ್ತು 139ಎ ಅನುಚ್ಛೇದಗಳು- ಈ ಅನುಚ್ಛೇದಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗುವುದಿಲ್ಲ.

(ಐ) 145ನೆಯ ಅನುಚ್ಛೇದ- (1)ನೆಯ ಖಂಡದಲ್ಲಿ (ಸಿಸಿ) ಉಪಖಂಡವನ್ನು ಬಿಟ್ಟುಬಿಡತಕ್ಕದ್ದು.

(ಜೆ) 150ನೆಯ ಅನುಚ್ಛೇದ- "ಭಾರತ ಲೆಕ್ಕ ನಿಯಂತ್ರಕ-ಹಾಗೂ-ಮಹಾಲೆಕ್ಕಪರಿಶೋಧಕನ ಸಲಹೆಯ ಮೇರೆಗೆ ರಾಷ್ಟ್ರಪತಿಯು ನಿಯಮಿಸಬಹುದಾದಂಥ" ಎಂಬ ಪದಗಳ ಬದಲಾಗಿ "ಭಾರತದ ಲೆಕ್ಕ ನಿಯಂತ್ರಕ-ಹಾಗೂ-ಮಹಾಲೆಕ್ಕ ಪರಿಶೋಧಕನು, ರಾಷ್ಟ್ರಪತಿಯವರ ಅನುಮೋದನೆ ಪಡೆದು ನಿಯಮಿಸಬಹುದಾದಂಥ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**(8) ಭಾಗ - VI.-**

(ಎ) 153 ರಿಂದ 217ನೆಯ ಅನುಚ್ಛೇದಗಳನ್ನು, 219ನೆಯ ಅನುಚ್ಛೇದವನ್ನು, 221ನೇ ಅನುಚ್ಛೇದವನ್ನು, 223, 224, 224ಎ ಮತ್ತು 225ನೆಯ ಅನುಚ್ಛೇದಗಳನ್ನು, 227 ರಿಂದ 233ರ ವರೆಗಿನ ಅನುಚ್ಛೇದಗಳನ್ನು, 233ಎ ಅನುಚ್ಛೇದವನ್ನು ಮತ್ತು 234 ರಿಂದ 237ರ ವರೆಗಿನ ಅನುಚ್ಛೇದಗಳನ್ನು ಬಿಟ್ಟುಬಿಡತಕ್ಕದ್ದು.

(ಬಿ) ಅನುಚ್ಛೇದ 220.- ಸಂವಿಧಾನದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳನ್ನು ಸಂವಿಧಾನದ ಪ್ರಾರಂಭದ (ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯ) ತಿದ್ದುಪಡಿ ಆದೇಶ, 1960ರ ಪ್ರಾರಂಭಕ್ಕೆ ಎಂದರೆ, 1960ರ ಜನವರಿ 26ನೇ ದಿನಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

(ಸಿ) ಅನುಚ್ಛೇದ 222.- (1)ನೆಯ ಖಂಡದ ನಂತರ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು; ಎಂದರೆ:-

"(1ಎ) ಜಮ್ಮು ಮತ್ತು ಕಾಶ್ಮೀರದ ಉಚ್ಚ ನ್ಯಾಯಾಲಯದಿಂದ ಮಾಡಲಾಗುವ ಅಥವಾ ಆ ಉಚ್ಚ ನ್ಯಾಯಾಲಯಕ್ಕೆ ಮಾಡಲಾಗುವ ಅಂಥ ಪ್ರತಿಯೊಂದು ವರ್ಗಾವಣೆಯನ್ನು ರಾಜ್ಯಪಾಲನೊಡನೆ ಸಮಾಲೋಚನೆ ಮಾಡಿದ ತರುವಾಯ ಮಾಡತಕ್ಕದ್ದು.".

(ಡಿ) 226ನೆಯ ಅನುಚ್ಛೇದ.-

(ಎ) (2)ನೇ ಖಂಡಕ್ಕೆ (1ಎ) ಖಂಡವೆಂದು ಪುನರ್ ಸಂಖ್ಯೆ ನೀಡತಕ್ಕದ್ದು;

(ಬಿ) (3)ನೇ ಖಂಡವನ್ನು ಬಿಟ್ಟುಬಿಡತಕ್ಕದ್ದು;

(ಸಿ) (4)ನೇ ಖಂಡಕ್ಕೆ (2)ನೇ ಖಂಡವೆಂದು ಪುನರ್ ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ ಪುನರ್ ಸಂಖ್ಯೆ ನೀಡಿದ (2)ನೇ ಖಂಡದಲ್ಲಿ "ಈ ಅನುಚ್ಛೇದದ" ಎಂಬ ಪದಗಳ ಬದಲಾಗಿ "ಖಂಡ (1) ಅಥವಾ ಖಂಡ (1ಎ)" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**(9) ಭಾಗ VIII.**- ಈ ಭಾಗವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗುವುದಿಲ್ಲ.

**(10) ಭಾಗ X.**- ಈ ಭಾಗವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗುವುದಿಲ್ಲ.

**(11) ಭಾಗ XI.**-

(ಎ) ಅನುಚ್ಛೇದ 246.-

(ಎ) (1)ನೇ ಖಂಡದಲ್ಲಿ, "(2)ನೇ ಮತ್ತು (3)ನೇ ಖಂಡಗಳಲ್ಲಿ" ಎಂಬ ಪದಗಳ ಬದಲಾಗಿ, "(2)ನೇ ಖಂಡದಲ್ಲಿ" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು.

(ಬಿ) (2)ನೇ ಖಂಡದಲ್ಲಿ, "(3)ನೇ ಖಂಡದಲ್ಲಿ ಏನೇ ಇದ್ದಾಗ್ಯೂ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) (3)ನೇ ಮತ್ತು (4)ನೇ ಖಂಡಗಳನ್ನು ಬಿಟ್ಟುಬಿಡತಕ್ಕದ್ದು.

(ಬಿ) 248ನೇ ಅನುಚ್ಛೇದದ ಬದಲಾಗಿ, ಈ ಮುಂದಿನ ಅನುಚ್ಛೇದವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

**"248. ಶಾಸನ ರಚನೆಯ ಉಳಿಕೆ ಅಧಿಕಾರಗಳು.**- ಸಂಸತ್ತು,-

(ಎ) ಕಾನೂನಿನ ಮೂಲಕ ಸ್ಥಾಪಿತವಾದ ಸರ್ಕಾರಕ್ಕೆ ಭಯ ಹುಟ್ಟಿಸುವ ಉದ್ದೇಶವುಳ್ಳ ಭಯೋತ್ಪಾದಕ ಕೃತ್ಯಗಳನ್ನು ಒಳಗೊಂಡ ಅಥವಾ ಜನರಲ್ಲಿ ಅಥವಾ ಜನರ ಯಾವುದೇ ವರ್ಗದಲ್ಲಿ ಭಯವನ್ನುಂಟುಮಾಡುವ ಅಥವಾ ಜನರ ಯಾವುದೇ ವರ್ಗವನ್ನು ದೂರ ಮಾಡುವ ಅಥವಾ ಜನರ ವಿವಿಧ ವರ್ಗಗಳ ನಡುವಿನ ಸಾಮರಸ್ಯಕ್ಕೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಚಟುವಟಿಕೆಗಳನ್ನು ಪ್ರತಿಬಂಧಿಸುವುದಕ್ಕೆ;

(ಎಎ) ಭಾರತದ ಸಾರ್ವಭೌಮತ್ವವನ್ನು ಮತ್ತು ಅದರ ರಾಜ್ಯಕ್ಷೇತ್ರೀಯ ಅಖಂಡತೆಯನ್ನು ನಿರಾಕರಿಸುವ, ಪ್ರಶ್ನಿಸುವ ಅಥವಾ ವಿಚ್ಛಿನ್ನಗೊಳಿಸುವ ಉದ್ದೇಶದ ಅಥವಾ ಭಾರತದ ರಾಜ್ಯಕ್ಷೇತ್ರದ ಒಂದು ಭಾಗವನ್ನು ಬಿಟ್ಟುಕೊಡುವ ಅಥವಾ ಒಕ್ಕೂಟದಿಂದ ಭಾರತದ ರಾಜ್ಯಕ್ಷೇತ್ರದ ಒಂದು ಭಾಗವನ್ನು ಬೇರ್ಪಡಿಸುವ ಅಥವಾ ಭಾರತದ ರಾಷ್ಟ್ರಧ್ವಜಕ್ಕೆ, ಭಾರತದ ರಾಷ್ಟ್ರಗೀತೆಗೆ ಮತ್ತು ಈ ಸಂವಿಧಾನಕ್ಕೆ ಅಪಮಾನ ಉಂಟು ಮಾಡುವ ಉದ್ದೇಶದ ಇತರ ಚಟುವಟಿಕೆಗಳನ್ನು ಪ್ರತಿಬಂಧಿಸುವುದಕ್ಕೆ; ಮತ್ತು

(ಬಿ) ತೆರಿಗೆಗಳಿಗೆ ಸಂಬಂಧಪಟ್ಟಂತೆ ಎಂದರೆ,-

(i) ಸಮುದ್ರ ಅಥವಾ ವಿಮಾನದ ಮೂಲಕ ವಿದೇಶ ಪ್ರಯಾಣದ;

(ii) ಅಂತರ್ದೇಶೀಯ ವಿಮಾನ ಪ್ರಯಾಣದ;

(iii) ಮನಿಯಾರ್ಡರುಗಳನ್ನೊಳಗೊಂಡು ಅಂಚೆ ವಸ್ತುಗಳ, ಫೋನೋಗ್ರಾಂಗಳ ಮತ್ತು ಟೆಲಿಗ್ರಾಂಗಳ

– ಮೇಲಿನ ತೆರಿಗೆಗಳಿಗೆ ಸಂಬಂಧಪಟ್ಟಂತೆ ಯಾವುದೇ ಕಾನೂನನ್ನು ರಚಿಸಲು ಅನನ್ಯ ಅಧಿಕಾರವನ್ನು ಹೊಂದಿರುತ್ತದೆ.

**ವಿವರಣೆ:**– ಈ ಅನುಚ್ಛೇದದಲ್ಲಿ, "ಭಯೋತ್ಪಾದಕ ಕೃತ್ಯ" ಎಂದರೆ ಬಾಂಬುಗಳನ್ನು, ಸಿಡಿಮದ್ದುಗಳನ್ನು ಅಥವಾ ಇತರೆ ಸ್ಫೋಟಕ ವಸ್ತುಗಳನ್ನು ಅಥವಾ ಸುಲಭವಾಗಿ ಬೆಂಕಿ ಹೊತ್ತಿಕೊಳ್ಳುವ ವಸ್ತುಗಳನ್ನು ಅಥವಾ ಬಂದೂಕುಗಳನ್ನು ಅಥವಾ ಇತರೆ ಮಾರಕಾಸ್ತ್ರಗಳನ್ನು ಅಥವಾ ವಿಷಕಾರಿ ಅಥವಾ ಹಾನಿಕಾರಕ ಅನಿಲಗಳನ್ನು ಅಥವಾ ಅಪಾಯವನ್ನುಂಟುಮಾಡುವ ಸ್ವರೂಪದ ಇತರೆ ರಾಸಾಯನಿಕಗಳನ್ನು ಅಥವಾ ಯಾವುದೇ ಇತರೆ ವಸ್ತುವನ್ನು (ಅದು ಜೈವಿಕದ್ದಾಗಿರಲಿ ಅಥವಾ ಇತರೆ ರೀತಿಯದ್ದಾಗಿರಲಿ) ಬಳಸುವ ಮೂಲಕ ಮಾಡಿದ ಯಾವುದೇ ಕೃತ್ಯ ಅಥವಾ ಕಾರ್ಯ.

(ಬಿಬಿ) 249ನೇ ಅನುಚ್ಛೇದದಲ್ಲಿ, (1)ನೇ ಖಂಡದಲ್ಲಿ, "ನಿರ್ಣಯದಲ್ಲಿ ನಿರ್ದಿಷ್ಟಪಡಿಸಿರುವ ರಾಜ್ಯ ಪಟ್ಟಿಯಲ್ಲಿ ನಮೂದಿಸಿರುವ ಯಾವುದೇ ವಿಷಯಕ್ಕೆ" ಎಂಬ ಪದಗಳಿಗೆ ಬದಲಾಗಿ "ಒಕ್ಕೂಟ ಪಟ್ಟಿಯಲ್ಲಿ ಅಥವಾ ಸಮವರ್ತಿ ಪಟ್ಟಿಯಲ್ಲಿ ನಮೂದಿಸಿರದ ವಿಷಯವಾಗಿದ್ದು, ನಿರ್ಣಯದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಿಷಯಕ್ಕೆ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಸಿ) 250ನೇ ಅನುಚ್ಛೇದ.- "ರಾಜ್ಯಪಟ್ಟಿಯಲ್ಲಿ ನಮೂದಿಸಿದ ವಿಷಯಗಳ ಪೈಕಿ ಯಾವುದೇ ವಿಷಯದ ಬಗ್ಗೆ" ಎಂಬ ಪದಗಳ ಬದಲಾಗಿ "ಒಕ್ಕೂಟ ಪಟ್ಟಿಯಲ್ಲಿ ನಮೂದಿಸಿರದ ವಿಷಯಗಳ ಬಗ್ಗೆ ಸಹ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಡಿ) (ಡಿ)ಖಂಡವನ್ನು ಬಿಟ್ಟುಬಿಡತಕ್ಕದ್ದು.

(ಇ) 253ನೇ ಅನುಚ್ಛೇದ– ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, 1954ರ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶವು ಪ್ರಾರಂಭವಾದ ನಂತರ ಜಮ್ಮು ಮತ್ತು ಕಾಶ್ಮೀರ ರಾಜ್ಯದ ವ್ಯವಸ್ಥೆಗೆ ಬಾಧಕವನ್ನುಂಟುಮಾಡುವ ಯಾವ ತೀರ್ಮಾನವನ್ನು ಭಾರತ ಸರ್ಕಾರವು ಆ ರಾಜ್ಯದ ಸರ್ಕಾರ ಸಮ್ಮತಿ ಇಲ್ಲದೆ ಕೈಗೊಳ್ಳತಕ್ಕದ್ದಲ್ಲ.

(ಎಫ್) 225ನೇ ಅನುಚ್ಛೇದವನ್ನು ಬಿಟ್ಟುಬಿಡತಕ್ಕದ್ದು.

(ಜಿ) ಅನುಚ್ಛೇದ 256.- ಈ ಅನುಚ್ಛೇದಕ್ಕೆ ಖಂಡ (1) ಎಂದು ಪುನರ್ ಸಂಖ್ಯೆ ನೀಡತಕ್ಕದ್ದು ಮತ್ತು ಅದಕ್ಕೆ ಈ ಮುಂದಿನ ಹೊಸ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(2) ಜಮ್ಮು ಮತ್ತು ಕಾಶ್ಮೀರ ರಾಜ್ಯವು ತನ್ನ ಕಾರ್ಯಾಂಗ ಅಧಿಕಾರವನ್ನು, ಒಕ್ಕೂಟವು ಆ ರಾಜ್ಯಕ್ಕೆ ಸಂಬಂಧಪಟ್ಟಂತೆ ಸಂವಿಧಾನದ ಮೇರೆಗಿನ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು ಅನುಕೂಲವಾಗುವ ಹಾಗೆ ಚಲಾಯಿಸತಕ್ಕದ್ದು ಮತ್ತು ವಿಶೇಷವಾಗಿ ಆ ರಾಜ್ಯವು, ಒಕ್ಕೂಟದ ಪರವಾಗಿ ಮತ್ತು ಅದರ ವೆಚ್ಚದಲ್ಲಿ ಸ್ವತ್ತನ್ನು ಆರ್ಜಿಸತಕ್ಕದ್ದು ಅಥವಾ ಕಡ್ಡಾಯವಾಗಿ ಕೋರತಕ್ಕದ್ದು ಅಥವಾ ಆ ಸ್ವತ್ತು ರಾಜ್ಯಕ್ಕೆ ಸೇರಿದ್ದಾಗಿದ್ದರೆ, ಅದನ್ನು ಒಪ್ಪಿಗೆಯಾಗಬಹುದಾದಂಥ ನಿಬಂಧನೆಗಳ ಮೇಲೆ ಅಥವಾ ಹಾಗೆ ಒಪ್ಪಿಗೆಯಾಗದಿದ್ದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿಯು ನೇಮಿಸಿದ ಮಧ್ಯಸ್ಥಗಾರನು ನಿರ್ಧರಿಸಬಹುದಾದಂತೆ ಒಕ್ಕೂಟಕ್ಕೆ ವರ್ಗಾಯಿಸತಕ್ಕದ್ದು ಎಂದು ಒಕ್ಕೂಟವು ಅಗತ್ಯಪಡಿಸಿದರೆ ಹಾಗೆ ಮಾಡತಕ್ಕದ್ದು.

(ಹೆಚ್) ಅನುಚ್ಛೇದ 261.- (2)ನೇ ಖಂಡದಲ್ಲಿ "ಸಂಸತ್ತು ರಚಿಸಿದ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**(12) ಭಾಗ XII.-**

(ಎ) 266ನೇ, 282ನೇ, 284ನೇ, 298ನೇ, 299ನೇ ಮತ್ತು 300ನೇ ಅನುಚ್ಛೇದಗಳು:- ಈ ಅನುಚ್ಛೇದಗಳಲ್ಲಿ ರಾಜ್ಯ ಅಥವಾ ರಾಜ್ಯಗಳಿಗೆ ಮಾಡಿದ ಉಲ್ಲೇಖಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾಡಿದ ಉಲ್ಲೇಖಗಳನ್ನು ಒಳಗೊಳ್ಳುವುದಿಲ್ಲವೆಂದು ಅರ್ಥೈಸತಕ್ಕದ್ದು;

(ಬಿ) 267ನೇ ಅನುಚ್ಛೇದದ (2)ನೇ ಖಂಡವನ್ನು, 273ನೇ ಅನುಚ್ಛೇದವನ್ನು, 283ನೇ ಅನುಚ್ಛೇದದ (2)ನೇ ಖಂಡವನ್ನು ಮತ್ತು 290ನೇ ಅನುಚ್ಛೇದವನ್ನು ಬಿಟ್ಟುಬಿಡತಕ್ಕದ್ದು;

(ಸಿ) ಅನುಚ್ಛೇದ 277 ಮತ್ತು 295.- ಈ ಅನುಚ್ಛೇದಗಳಲ್ಲಿ ಸಂವಿಧಾನದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳನ್ನು, ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ), 1954ರ ಆದೇಶದ ಪ್ರಾರಂಭಕ್ಕೆ ಎಂದರೆ 1954ರ ಮೇ ತಿಂಗಳ 14ನೇ ದಿನಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

(ಡಿ) "ಅಧ್ಯಾಯ IV - ಸ್ವತ್ತಿನ ಹಕ್ಕು" ಎಂಬ ಉಪಶೀರ್ಷಿಕೆಯನ್ನು ಮತ್ತು 300ಎ ಅನುಚ್ಛೇದವನ್ನು ಬಿಟ್ಟುಬಿಡತಕ್ಕದ್ದು.

**(13) ಭಾಗ XIII.-**

303ನೇ ಅನುಚ್ಛೇದದಲ್ಲಿ (1)ನೇ ಖಂಡದಲ್ಲಿ "ಏಳನೇ ಅನುಸೂಚಿಯ ಯಾವುದೇ ಪಟ್ಟಿಯಲ್ಲಿ ವ್ಯಾಪಾರಕ್ಕೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ ಇರುವ ಯಾವುದೇ ನಮೂದಿನ ಕಾರಣದಿಂದ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**(14) ಭಾಗ XIV.-**

312ನೇ ಅನುಚ್ಛೇದದಲ್ಲಿ ಹೊರತು, ಈ ಭಾಗದಲ್ಲಿ "ರಾಜ್ಯ"ಕ್ಕೆ ಮಾಡಿದ ಉಲ್ಲೇಖವು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಒಳಗೊಳ್ಳುವುದಿಲ್ಲ.

**(15) ಭಾಗ XIVಎ.-**

ಈ ಭಾಗವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯಿಸುವುದಿಲ್ಲ.

**(16) ಭಾಗ XV.-**

(ಎ) ಅನುಚ್ಛೇದ 324.- (1)ನೇ ಖಂಡದಲ್ಲಿ ಸಂವಿಧಾನಕ್ಕೆ ಮಾಡಿದ ಉಲ್ಲೇಖವನ್ನು ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನಮಂಡಲದ ಎರಡೂ ಸದನಗಳಿಗೆ ನಡೆಸಲಾಗುವ ಚುನಾವಣೆಗಳಿಗೆ ಸಂಬಂಧಪಟ್ಟಂತೆ ಜಮ್ಮು ಮತ್ತು ಕಾಶ್ಮೀರದ ಸಂವಿಧಾನಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

(ಬಿ) ಅನುಚ್ಛೇದ 325, 326 ಮತ್ತು 327.- ಈ ಅನುಚ್ಛೇದಗಳಲ್ಲಿ ಒಂದು ರಾಜ್ಯಕ್ಕೆ ಮಾಡಿದ ಉಲ್ಲೇಖಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾಡಿದ ಉಲ್ಲೇಖವನ್ನು ಒಳಗೊಳ್ಳುವುದಿಲ್ಲವೆಂದು ಅರ್ಥೈಸತಕ್ಕದ್ದು.

(ಸಿ) 328ನೇ ಅನುಚ್ಛೇದವನ್ನು ಬಿಟ್ಟುಬಿಡತಕ್ಕದ್ದು.

(ಡಿ) ಅನುಚ್ಛೇದ 329.-

(ಎ) ಒಂದು ರಾಜ್ಯಕ್ಕೆ ಮಾಡಿದ ಉಲ್ಲೇಖವು, ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾಡಿದ ಉಲ್ಲೇಖವನ್ನು ಒಳಗೊಳ್ಳುವುದಿಲ್ಲವೆಂದು ಅರ್ಥೈಸತಕ್ಕದ್ದು;

(ಬಿ) "ಅಥವಾ 328ನೇ ಅನುಚ್ಛೇದ" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.

**(17) ಭಾಗ XVI.**– ಮೂಲ (ಎ) ಖಂಡವನ್ನು ಬಿಟ್ಟುಬಿಡತಕ್ಕದ್ದು ಮತ್ತು (ಬಿ) ಮತ್ತು (ಸಿ) ಖಂಡಗಳಿಗೆ, (ಎ) ಮತ್ತು (ಬಿ) ಖಂಡಗಳೆಂದು ಪುನರ್ ಅಕ್ಷರ ನೀಡತಕ್ಕದ್ದು.

(ಎ) 331ನೇ, 332ನೇ, 333ನೇ, 336ನೇ ಮತ್ತು 337ನೇ ಅನುಚ್ಛೇದಗಳನ್ನು ಬಿಟ್ಟುಬಿಡತಕ್ಕದ್ದು.

(ಬಿ) ಅನುಚ್ಛೇದ 334 ಮತ್ತು 335.– ಈ ಅನುಚ್ಛೇದಗಳಲ್ಲಿ ರಾಜ್ಯಕ್ಕೆ ಅಥವಾ ರಾಜ್ಯಗಳಿಗೆ ಮಾಡಿದ ಉಲ್ಲೇಖಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾಡಿದ ಉಲ್ಲೇಖಗಳನ್ನು ಒಳಗೊಳ್ಳುವುದಿಲ್ಲವೆಂದು ಅರ್ಥೈಸತಕ್ಕದ್ದು.

(ಸಿ) 339ನೇ ಅನುಚ್ಛೇದದ, (1)ನೇ ಖಂಡದಲ್ಲಿ "ಅನುಸೂಚಿತ ಪ್ರದೇಶಗಳ ಆಡಳಿತ ಮತ್ತು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**(18) ಭಾಗ XVII.**– ಈ ಭಾಗದ ಉಪಬಂಧಗಳು – ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅವು–

(i) ಒಕ್ಕೂಟದ ರಾಜಭಾಷೆಗೆ;

(ii) ಒಂದು ರಾಜ್ಯದ ಮತ್ತು ಇನ್ನೊಂದು ರಾಜ್ಯದ ನಡುವೆ ಅಥವಾ ಒಂದು ರಾಜ್ಯದ ಮತ್ತು ಒಕ್ಕೂಟದ ನಡುವೆ ಸಂಪರ್ಕಕ್ಕಾಗಿನ ರಾಜಭಾಷೆಗೆ; ಮತ್ತು

(iii) ಸರ್ವೋಚ್ಚ ನ್ಯಾಯಾಲಯದಲ್ಲಿನ ವ್ಯವಹರಣೆಗಳ ಭಾಷೆಗೆ

– ಸಂಬಂಧಪಡುವಷ್ಟರಮಟ್ಟಿಗೆ ಮಾತ್ರ ಅನ್ವಯವಾಗತಕ್ಕದ್ದು.

**(19) ಭಾಗ XVIII.**-

(ಎ) 352ನೇ ಅನುಚ್ಛೇದಕ್ಕೆ ಬದಲಾಗಿ, ಈ ಕೆಳಕಂಡ ಅನುಚ್ಛೇದವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

**"352. ತುರ್ತು ಪರಿಸ್ಥಿತಿಯ ಉದ್ಘೋಷಣೆ.**– (1) ಭಾರತದ ಅಥವಾ ಅದರ ರಾಜ್ಯ ಕ್ಷೇತ್ರದ ಯಾವುದೇ ಭಾಗದ ಭದ್ರತೆಗೆ ಯುದ್ಧದಿಂದಾಗಲಿ ಅಥವಾ ಬಾಹ್ಯ ಆಕ್ರಮಣದಿಂದಾಗಲಿ ಅಥವಾ ಆಂತರಿಕ ಗಲಭೆಗಳಿಂದಾಗಲಿ ಬೆದರಿಕೆಯ ಗಂಭೀರ ತುರ್ತು ಪರಿಸ್ಥಿತಿ ಉಂಟಾಗಿದೆ ಎಂದು ರಾಷ್ಟ್ರಪತಿಗೆ ಮನದಟ್ಟಾದರೆ, ಅವನು ಉದ್ಘೋಷಣೆಯ ಮೂಲಕ ಆ ಬಗ್ಗೆ ಘೋಷಣೆಯನ್ನು ಮಾಡಬಹುದು.

(2) (1)ನೇ ಖಂಡದ ಮೇರೆಗೆ ಹೊರಡಿಸಿದ ಉದ್ಘೋಷಣೆಯನ್ನು,–

(ಎ) ತದನಂತರದ ಉದ್ಘೋಷಣೆಯ ಮೂಲಕ ರದ್ದುಪಡಿಸಬಹುದು;

(ಬಿ) ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು;

(ಸಿ) ಎರಡು ತಿಂಗಳುಗಳ ಅವಧಿಯು ಮುಗಿಯುವುದಕ್ಕೆ ಮುಂಚೆ ಸಂಸತ್ತಿನ ಉಭಯ ಸದನಗಳ ನಿರ್ಣಯಗಳ ಮೂಲಕ ಅನುಮೋದಿತವಾಗಿದ್ದ ಹೊರತು ಆ ಅವಧಿಯು ಮುಕ್ತಾಯವಾದ ಮೇಲೆ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು:

ಪರಂತು, ಅಂಥ ಯಾವುದೇ ಉದ್ಘೋಷಣೆಯನ್ನು ಲೋಕಸಭೆಯು ವಿಸರ್ಜನೆಯಾಗಿರುವ ಕಾಲದಲ್ಲಿ ಅಥವಾ (ಸಿ) ಉಪಖಂಡದಲ್ಲಿ ಉಲ್ಲೇಖಿಸಿದ ಎರಡು ತಿಂಗಳ ಅವಧಿಯಲ್ಲಿ ಲೋಕಸಭೆಯು ವಿಸರ್ಜನೆಯಾಗಿರುವ ಕಾಲದಲ್ಲಿ ಹೊರಡಿಸಿದ್ದರೆ ಮತ್ತು ಆ ಉದ್ಘೋಷಣೆಯನ್ನು ಅನುಮೋದಿಸುವ ನಿರ್ಣಯವು ರಾಜ್ಯಸಭೆಯಿಂದ ಅಂಗೀಕೃತವಾಗಿದ್ದು, ಆದರೆ ಅಂಥ ಉದ್ಘೋಷಣೆಯ ಬಗೆಗಿನ ಯಾವುದೇ ನಿರ್ಣಯವು ಆ ಅವಧಿಯು ಮುಕ್ತಾಯವಾಗುವುದರೊಳಗೆ ಲೋಕಸಭೆಯಿಂದ ಅಂಗೀಕೃತವಾಗಿರದಿದ್ದರೆ, ಲೋಕಸಭೆಯು ಪುನರ್ ರಚಿತವಾದ ಬಳಿಕ ಅದು ಮೊದಲನೆಯ ಸಲ ಸಭೆ ಸೇರಿದ ದಿನಾಂಕದಿಂದ ಮೂವತ್ತು ದಿನಗಳು ಮುಗಿಯುತ್ತಲೇ, ಮೂವತ್ತು ದಿನಗಳ ಸದರಿ ಅವಧಿಯು ಮುಗಿಯುವುದಕ್ಕೆ ಮುಂಚೆ ಲೋಕಸಭೆಯಿಂದ ಸಹ ಆ ಉದ್ಘೋಷಣೆಯನ್ನು ಅನುಮೋದಿಸುವ ನಿರ್ಣಯವು ಅಂಗೀಕೃತವಾಗಿದ್ದ ಹೊರತು, ಆ ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು.

(3) ಭಾರತದ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗದ ಭದ್ರತೆಗೆ ಯುದ್ಧದಿಂದ ಅಥವಾ ಬಾಹ್ಯ ಆಕ್ರಮಣದಿಂದ ಅಥವಾ ಆಂತರಿಕ ಗಲಭೆಯಿಂದ ಅಪಾಯವು ಸನ್ನಿಹಿತವಾಗಿದೆಯೆಂದು ರಾಷ್ಟ್ರಪತಿಗೆ ಮನದಟ್ಟಾದರೆ, ಅಂಥ ಯುದ್ಧವು ಅಥವಾ ಅಂಥ ಆಕ್ರಮಣವು ಅಥವಾ ಗಲಭೆಯು ವಾಸ್ತವಿಕವಾಗಿ ಘಟಿಸುವುದಕ್ಕೆ ಮೊದಲೇ, ಅಂಥ ಬೆದರಿಕೆಯು ಒದಗಿದೆಯೆಂದು ತುರ್ತು ಪರಿಸ್ಥಿತಿಯ ಉದ್ಘೋಷಣೆಯನ್ನು ಹೊರಡಿಸಬಹುದು.

(4) ಈ ಅನುಚ್ಛೇದದ ಮೂಲಕ ರಾಷ್ಟ್ರಪತಿಗೆ ಪ್ರದತ್ತವಾದ ಅಧಿಕಾರವು, (1)ನೇ ಖಂಡದ ಮೇರೆಗೆ ರಾಷ್ಟ್ರಪತಿಯು ಈಗಾಗಲೇ ಉದ್ಘೋಷಣೆಯನ್ನು ಹೊರಡಿಸಿರಲಿ ಅಥವಾ ಇಲ್ಲದಿರಲಿ ಮತ್ತು ಅಂಥ ಉದ್ಘೋಷಣೆಯು ಜಾರಿಯಲ್ಲಿರಲಿ ಅಥವಾ ಇಲ್ಲದಿರಲಿ, ಬೇರೆ ಬೇರೆ ಆಧಾರಗಳ ಮೇಲೆ ಎಂದರೆ, ಯುದ್ಧದ ಅಥವಾ ಬಾಹ್ಯ ಆಕ್ರಮಣದ ಅಥವಾ ಆಂತರಿಕ ಗಲಭೆಯ ಅಥವಾ ಯುದ್ಧದ ಅಥವಾ ಬಾಹ್ಯ ಆಕ್ರಮಣದ ಅಥವಾ ಆಂತರಿಕ ಗಲಭೆಯ ಅಪಾಯವು ಸನ್ನಿಹಿತವಾಗಿದೆ ಎಂಬ ಆಧಾರದ ಮೇಲೆ, ಬೇರೆ ಬೇರೆ ಉದ್ಘೋಷಣೆಗಳನ್ನು ಹೊರಡಿಸುವ ಅಧಿಕಾರವನ್ನು ಒಳಗೊಂಡಿರತಕ್ಕದ್ದು.

(5) ಈ ಸಂವಿಧಾನದಲ್ಲಿ ಏನೇ ಇದ್ದರೂ,-

(ಎ) (1)ನೇ ಖಂಡದಲ್ಲಿ ಮತ್ತು (3)ನೇ ಖಂಡದಲ್ಲಿ ಹೇಳಿರುವಂತೆ ರಾಷ್ಟ್ರಪತಿಗೆ ಮನವರಿಕೆಯಾಗಿರುವುದು ಅಂತಿಮವಾದುದು ಮತ್ತು ನಿರ್ಣಾಯಕವಾದುದು ಆಗಿರತಕ್ಕದ್ದು ಮತ್ತು ಅದನ್ನು ಯಾವುದೇ ಆಧಾರದ ಮೇಲೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(ಬಿ) (2)ನೇ ಖಂಡದ ಉಪಬಂಧಗಳಿಗೆ ಒಳಪಟ್ಟು, ಸರ್ವೋಚ್ಚ ನ್ಯಾಯಾಲಯಕ್ಕಾಗಲಿ ಅಥವಾ ಇತರ ಯಾವುದೇ ನ್ಯಾಯಾಲಯಕ್ಕಾಗಲಿ,-

(i) (1)ನೇ ಖಂಡದಲ್ಲಿ ಹೇಳಿರುವಂತೆ ರಾಷ್ಟ್ರಪತಿಯು ಉದ್ಘೋಷಣೆಯ ಮೂಲಕ ಮಾಡಿದ ಘೋಷಣೆಯ; ಅಥವಾ

(ii) ಅಂಥ ಉದ್ಘೋಷಣೆಯ ಜಾರಿಯ ಮುಂದುವರಿಕೆಯ

– ಸಿಂಧುತ್ವದ ಬಗೆಗಿನ ಯಾವುದೇ ಪ್ರಶ್ನೆಯನ್ನು ಯಾವುದೇ ಆಧಾರದ ಮೇಲೆ ಪುರಸ್ಕರಿಸಲು ಅಧಿಕಾರ ವ್ಯಾಪ್ತಿ ಇರತಕ್ಕದ್ದಲ್ಲ.

(6) ಆಂತರಿಕ ಗಲಭೆಗಳ ಅಥವಾ ಆ ಅಪಾಯವು ಸನ್ನಿಹಿತವಾಗಿದೆಯೆಂಬ ಕಾರಣಗಳ ಮೇಲೆ ಮಾತ್ರ ಹೊರಡಿಸಿದ, ತುರ್ತುಪರಿಸ್ಥಿತಿಯ ಯಾವುದೇ ಉದ್ಘೋಷಣೆಯು,-

(ಎ) ಅದನ್ನು ಆ ರಾಜ್ಯ ಸರ್ಕಾರದ ಕೋರಿಕೆ ಮೇರೆಗೆ ಅಥವಾ ಸಹಮತಿಯೊಂದಿಗೆ ಮಾಡಿದ್ದ ಹೊರತು; ಅಥವಾ

(ಬಿ) ಅದನ್ನು ಹಾಗೆ ಮಾಡಿರದಿದ್ದರೆ, ಆ ರಾಜ್ಯ ಸರ್ಕಾರದ ಕೋರಿಕೆ ಮೇರೆಗೆ ಅಥವಾ ಸಹಮತಿಯೊಂದಿಗೆ ಆ ರಾಜ್ಯಕ್ಕೆ ರಾಷ್ಟ್ರಪತಿಯು ಅದನ್ನು ತದನಂತರ ಅನ್ವಯಿಸಿದ ಹೊರತು

– ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಪಟ್ಟಂತೆ (354ನೇ ಅನುಚ್ಛೇದಕ್ಕೆ ಸಂಬಂಧಿಸಿದಂತೆ ಹೊರತು) ಪರಿಣಾಮಕಾರಿಯಾಗಿರತಕ್ಕದ್ದಲ್ಲ.

(ಬಿ) ಅನುಚ್ಛೇದ 353.- ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(ಸಿ) ಅನುಚ್ಛೇದ 356.-

(ಎ) (1)ನೇ ಖಂಡದಲ್ಲಿ ಈ ಸಂವಿಧಾನದ ಉಪಬಂಧಗಳಿಗೆ ಅಥವಾ ಉಪಬಂಧಕ್ಕೆ ಮಾಡಿದ ಉಲ್ಲೇಖವು, ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಿಸಿದಂತೆ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸಂವಿಧಾನದ ಉಪಬಂಧಗಳಿಗೆ ಅಥವಾ ಉಪಬಂಧಕ್ಕೆ ಮಾಡಿದ ಉಲ್ಲೇಖಗಳನ್ನು ಒಳಗೊಂಡಿರುವಂತೆ ಅರ್ಥೈಸತಕ್ಕದ್ದು;

(ಬಿ) (4)ನೇ ಖಂಡದಲ್ಲಿ,-

(i) ಪ್ರಾರಂಭದ ಭಾಗಕ್ಕೆ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"ಹಾಗೆ ಅನುಮೋದಿತವಾದ ಉದ್ಘೋಷಣೆಯನ್ನು ರದ್ದುಗೊಳಿಸದಿದ್ದರೆ, (3)ನೇ ಖಂಡದ ಮೇರೆಗೆ ಆ ಉದ್ಘೋಷಣೆಯನ್ನು ಅನುಮೋದಿಸುವ ನಿರ್ಣಯಗಳಲ್ಲಿ ಎರಡನೆಯದನ್ನು ಅಂಗೀಕರಿಸಿದ ದಿನಾಂಕದಿಂದ ಆರು ತಿಂಗಳುಗಳ ಅವಧಿಯು ಮುಕ್ತಾಯವಾದ ಮೇಲೆ ಅದು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು";

(ii) ಎರಡನೆಯ ಪರಂತುಕದ ನಂತರ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

'ಮತ್ತೂ ಪರಂತು, ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಪಟ್ಟಂತೆ 1990ರ ಜುಲೈ 18ನೇ ದಿನದಂದು (1)ನೇ ಖಂಡದ ಮೇರೆಗೆ ಉದ್ಘೋಷಣೆಯನ್ನು ಹೊರಡಿಸಿದ್ದರೆ, ಈ ಖಂಡದ ಮೊದಲನೆಯ ಪರಂತುಕದಲ್ಲಿ "ಮೂರು ವರ್ಷಗಳಿಗಿಂತ" ಎಂಬುದಕ್ಕೆ ಮಾಡಿದ ಉಲ್ಲೇಖವನ್ನು "ಏಳು ವರ್ಷಗಳಿಗಿಂತ" ಎಂಬುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.'.

(ಸಿ) (5)ನೇ ಖಂಡದ ಬದಲಾಗಿ, ಈ ಮುಂದಿನ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"(5) ಈ ಸಂವಿಧಾನದಲ್ಲಿ ಏನೇ ಇದ್ದರೂ, (1)ನೇ ಖಂಡದಲ್ಲಿ ಹೇಳಿರುವಂತೆ ರಾಷ್ಟ್ರಪತಿಗೆ ಮನವರಿಕೆಯಾಗಿರುವುದು ಅಂತಿಮವಾದುದು ಮತ್ತು ನಿರ್ಣಾಯಕವಾದುದು ಆಗಿರತಕ್ಕದ್ದು ಮತ್ತು ಅದನ್ನು ಯಾವುದೇ ಆಧಾರದ ಮೇಲೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.".

(ಡಿ) 357ನೇ ಅನುಚ್ಛೇದ.- (2)ನೇ ಖಂಡದ ಬದಲಾಗಿ ಈ ಮುಂದಿನ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"(2) 356ನೇ ಅನುಚ್ಛೇದದ ಮೇರೆಗೆ ಒಂದು ಉದ್ಘೋಷಣೆಯನ್ನು ಹೊರಡಿಸದೇ ಇದ್ದರೆ ರಾಜ್ಯದ ವಿಧಾನಮಂಡಲದ ಅಧಿಕಾರವನ್ನು ಚಲಾಯಿಸಿ, ಸಂಸತ್ತು ಅಥವಾ ರಾಷ್ಟ್ರಪತಿಯು ಅಥವಾ (1)ನೇ ಖಂಡದ (ಎ) ಉಪಖಂಡದಲ್ಲಿ ಉಲ್ಲೇಖಿಸಿದ ಇತರ ಪ್ರಾಧಿಕಾರಿಯು ಮಾಡಿದ ಯಾವ ಕಾನೂನನ್ನು, ಸಂಸತ್ತು ಅಥವಾ ರಾಷ್ಟ್ರಪತಿಯು ಅಥವಾ ಅಂಥ ಇತರ ಪ್ರಾಧಿಕಾರವು ರಚಿಸಲು ಸಕ್ಷಮವಾಗುತ್ತಿರಲಿಲ್ಲವೋ, ಅಂಥ ಯಾವುದೇ ಕಾನೂನು, ಹಾಗೆ ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕ ಉಪಬಂಧಗಳನ್ನು ಸಕ್ಷಮ ವಿಧಾನಮಂಡಲದ ಅಧಿನಿಯಮದ ಮೂಲಕ ಮೊದಲೇ ನಿರಸನಗೊಳಿಸಿದ್ದ ಹೊರತು ಅಥವಾ ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆಯೇ ಪುನಃ ಅಧಿನಿಯಮಿತಿಗೊಳಿಸಿದ್ದ ಹೊರತು, ಆ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟ ಕಾರ್ಯಗಳಿಗೆ ಸಂಬಂಧಿಸಿದಂತೆ ಹೊರತು ಆ ಉದ್ಘೋಷಣೆಯು ಪ್ರವರ್ತನೆಯಲ್ಲಿರುವುದು ನಿಂತುಹೋದ ನಂತರ ಒಂದು ವರ್ಷದ ಅವಧಿಯು ಮುಕ್ತಾಯವಾದ ಮೇಲೆ, ಆ ಅಸಮರ್ಥತೆಯ ಮಟ್ಟಿಗೆ ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.".

(ಇ) 358ನೇ ಅನುಚ್ಛೇದಕ್ಕೆ ಬದಲಾಗಿ, ಈ ಮುಂದಿನ ಅನುಚ್ಛೇದವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"**358. ತುರ್ತು ಪರಿಸ್ಥಿತಿಗಳಲ್ಲಿ 19ನೇ ಅನುಚ್ಛೇದದ ಉಪಬಂಧಗಳ ಅಮಾನತು:-** 19ನೇ ಅನುಚ್ಛೇದದಲ್ಲಿ ಇರುವುದು ಯಾವುದೂ, ತುರ್ತು ಪರಿಸ್ಥಿತಿಯ ಉದ್ಘೋಷಣೆಯು ಜಾರಿಯಲ್ಲಿರುವಾಗ, ಯಾವ ಕಾನೂನನ್ನು ರಚಿಸಲು ಅಥವಾ ಯಾವ ಕಾರ್ಯಾಂಗ ಕ್ರಮವನ್ನು ಕೈಗೊಳ್ಳಲು ರಾಜ್ಯವು IIIನೇ ಭಾಗದಲ್ಲಿ ಪರಿಭಾಷಿಸಿದ ಉಪಬಂಧಗಳಿಲ್ಲದಿದ್ದರೆ ಸಕ್ಷಮವಾಗುತ್ತಿತ್ತೋ ಅಂಥ ಕಾನೂನನ್ನು ರಚಿಸಲು ಅಥವಾ ಅಂಥ ಕಾರ್ಯಾಂಗ ಕ್ರಮವನ್ನು ಕೈಗೊಳ್ಳಲು ಆ ಭಾಗದಲ್ಲಿ ಒಳಗೊಂಡಿರುವ ಆ ರಾಜ್ಯದ ಅಧಿಕಾರವನ್ನು ನಿರ್ಬಂಧಿಸತಕ್ಕದ್ದಲ್ಲ; ಆದರೆ ಹಾಗೆ ರಚಿಸಿದ ಯಾವುದೇ ಕಾನೂನು, ಉದ್ಘೋಷಣೆಯು ಜಾರಿಯಲ್ಲಿರುವುದು ನಿಂತುಹೋದ ಕೂಡಲೇ, ಆ ಕಾನೂನು ಪರಿಣಾಮಕಾರಿಯಾಗಿರುವುದು ನಿಂತುಹೋಗುವುದಕ್ಕೆ ಮುಂಚೆ ಮಾಡಿದ ಅಥವಾ ಮಾಡದೆ ಬಿಟ್ಟ ಕಾರ್ಯವನ್ನು ಹೊರತುಪಡಿಸಿ ಆ ಸಕ್ಷಮತೆಯ ಮಟ್ಟಿಗೆ ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು.".

(ಎಫ್) ಅನುಚ್ಛೇದ 359.–

(ಎ) (1)ನೇ ಖಂಡದಲ್ಲಿ "(20ನೇ ಮತ್ತು 21ನೇ ಅನುಚ್ಛೇದಗಳನ್ನು ಹೊರತುಪಡಿಸಿ)" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) (1ಎ) ಖಂಡದಲ್ಲಿ,–

(i) "(20ನೇ ಮತ್ತು 21ನೇ ಅನುಚ್ಛೇದಗಳನ್ನು ಹೊರತುಪಡಿಸಿ)" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ii) ಪರಂತುಕವನ್ನು ಬಿಟ್ಟುಬಿಡತಕ್ಕದ್ದು;

(ಸಿ) (1ಬಿ) ಖಂಡವನ್ನು ಬಿಟ್ಟುಬಿಡತಕ್ಕದ್ದು;

(ಡಿ) (2)ನೇ ಖಂಡದಲ್ಲಿ, ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(ಜಿ) 360ನೇ ಅನುಚ್ಛೇದವನ್ನು ಬಿಟ್ಟುಬಿಡತಕ್ಕದ್ದು.

**(20) ಭಾಗ XIX.–**

(ಎ) 361ಎ ಅನುಚ್ಛೇದ.– ಈ ಅನುಚ್ಛೇದವು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗುವುದಿಲ್ಲ.

(ಬಿ) 365ನೇ ಅನುಚ್ಛೇದವನ್ನು ಬಿಟ್ಟುಬಿಡತಕ್ಕದ್ದು.

(ಸಿ) 367ನೇ ಅನುಚ್ಛೇದ.– (3)ನೇ ಖಂಡದ ನಂತರ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(4) ಈ ಸಂವಿಧಾನದ ಉದ್ದೇಶಗಳಿಗಾಗಿ, ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಪಟ್ಟಂತೆ ಅದು ಅನ್ವಯವಾಗುವ ಹಾಗೆ,–

(ಎ) ಈ ಸಂವಿಧಾನಕ್ಕೆ ಅಥವಾ ಅದರ ಉಪಬಂಧಗಳಿಗೆ ಮಾಡಿದ ಉಲ್ಲೇಖಗಳನ್ನು ಈ ಸಂವಿಧಾನವು ಅಥವಾ ಅದರ ಉಪಬಂಧಗಳು ಸದರಿ ರಾಜ್ಯಕ್ಕೆ ಸಂಬಂಧಪಟ್ಟಂತೆ ಅನ್ವಯವಾಗುವ ಹಾಗೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ಎಎ) ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನಸಭೆಯ ಶಿಫಾರಸ್ಸಿನ ಮೇಲೆ, ಆ ರಾಜ್ಯದ ಸದರ್–ಈ–ರಿಯಾಸತ್ ಎಂದು ರಾಷ್ಟ್ರಪತಿಯು ತತ್ಕಾಲದಲ್ಲಿ ಮಾನ್ಯತೆ ನೀಡಿದ್ದ, ತತ್ಕಾಲದಲ್ಲಿ ಅಧಿಕಾರದಲ್ಲಿರುವ ರಾಜ್ಯ ಮಂತ್ರಿಮಂಡಲದ ಸಲಹೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗೆ ಮಾಡಿದ ಉಲ್ಲೇಖಗಳನ್ನು ಜಮ್ಮು ಮತ್ತು ಕಾಶ್ಮೀರ ರಾಜ್ಯದ ರಾಜ್ಯಪಾಲನಿಗೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ಬಿ) ಆ ರಾಜ್ಯ ಸರ್ಕಾರಕ್ಕೆ ಮಾಡಿದ ಉಲ್ಲೇಖಗಳನ್ನು, ಅವು ತನ್ನ ಮಂತ್ರಿಮಂಡಲದ ಸಲಹೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಜಮ್ಮು ಮತ್ತು ಕಾಶ್ಮೀರ ರಾಜ್ಯದ ರಾಜ್ಯಪಾಲನಿಗೆ ಮಾಡಿದ ಉಲ್ಲೇಖಗಳನ್ನು ಒಳಗೊಂಡಿರುವ ಹಾಗೆ ಅರ್ಥೈಸತಕ್ಕದ್ದು:

ಪರಂತು, 1965ನೇ ಇಸವಿಯ ಏಪ್ರಿಲ್ ತಿಂಗಳ 10ನೇ ದಿನಕ್ಕೆ ಮುಂಚಿನ ಯಾವುದೇ ಅವಧಿಗೆ ಸಂಬಂಧಿಸಿದಂತೆ ಅಂಥ ಉಲ್ಲೇಖಗಳು ತನ್ನ ಮಂತ್ರಿಮಂಡಲದ ಸಲಹೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸದರ್–ಈ–ರಿಯಾಸತ್‌ಗೆ ಮಾಡಿದ ಉಲ್ಲೇಖಗಳನ್ನು ಒಳಗೊಂಡಿರುವ ಹಾಗೆ ಅರ್ಥೈಸತಕ್ಕದ್ದು;

(ಸಿ) ಒಂದು ಉಚ್ಚ ನ್ಯಾಯಾಲಯಕ್ಕೆ ಮಾಡಿದ ಉಲ್ಲೇಖಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ಮಾಡಿದ ಉಲ್ಲೇಖಗಳನ್ನೊಳಗೊಂಡಿರತಕ್ಕದ್ದು;

(ಡಿ) ಆ ರಾಜ್ಯದ ಖಾಯಂ ನಿವಾಸಿಗಳಿಗೆ ಮಾಡಿದ ಉಲ್ಲೇಖಗಳನ್ನು, ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶ, 1954 ಪ್ರಾರಂಭವಾಗುವುದಕ್ಕೆ ಮುಂಚೆ, ಆ ರಾಜ್ಯದಲ್ಲಿ ಜಾರಿಯಲ್ಲಿದ್ದ ಕಾನೂನುಗಳ ಮೇರೆಗೆ ಆ ರಾಜ್ಯದ ಪ್ರಜೆಗಳೆಂದು ಮಾನ್ಯತೆ ಪಡೆದಿದ್ದ ಅಥವಾ ಆ ರಾಜ್ಯ ವಿಧಾನಮಂಡಲವು ರಚಿಸಿದ ಯಾವುದೇ ಕಾನೂನಿನ ಮೂಲಕ ಆ ರಾಜ್ಯದ ಖಾಯಂ ನಿವಾಸಿಗಳೆಂದು ಮಾನ್ಯತೆ ಪಡೆದಿರುವ ವ್ಯಕ್ತಿಗಳೆಂಬುದಾಗಿ ಅರ್ಥವಿರುವಂತೆ ಅರ್ಥೈಸತಕ್ಕದ್ದು; ಮತ್ತು

(ಇ) ರಾಜ್ಯಪಾಲನಿಗೆ ಮಾಡಿದ ಉಲ್ಲೇಖಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯದ ರಾಜ್ಯಪಾಲನಿಗೆ ಮಾಡಿದ ಉಲ್ಲೇಖಗಳನ್ನೊಳಗೊಂಡಿರತಕ್ಕದ್ದು:

ಪರಂತು, 1965ನೇ ಇಸವಿಯ ಏಪ್ರಿಲ್ ತಿಂಗಳ 10ನೇ ದಿನಕ್ಕೆ ಮುಂಚಿನ ಯಾವುದೇ ಅವಧಿಗೆ ಸಂಬಂಧಿಸಿದಂತೆ, ಅಂಥ ಉಲ್ಲೇಖಗಳನ್ನು ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸದರ್-ಈ-ರಿಯಾಸತ್ ಎಂದು ರಾಷ್ಟ್ರಪತಿಯಿಂದ ಮನ್ನಣೆ ಪಡೆದಿರುವ ವ್ಯಕ್ತಿಗೆ ಮಾಡಿದ ಉಲ್ಲೇಖಗಳೆಂಬಂತೆ ಮತ್ತು ಅವು ಸದರ್-ಈ-ರಿಯಾಸತ್‌ನ ಅಧಿಕಾರಗಳನ್ನು ಚಲಾಯಿಸಲು ಸಕ್ಷಮನಾಗಿರುವವನು ಎಂಬುದಾಗಿ ರಾಷ್ಟ್ರಪತಿಯಿಂದ ಮನ್ನಣೆ ಪಡೆದ ಯಾರೇ ವ್ಯಕ್ತಿಗೆ ಮಾಡಿದ ಉಲ್ಲೇಖಗಳನ್ನೊಳಗೊಂಡಿರುವುದಾಗಿ ಅರ್ಥೈಸತಕ್ಕದ್ದು".

**(21) ಭಾಗ XX.-**

ಅನುಚ್ಛೇದ 368ರಲ್ಲಿ,-

(ಎ) (2)ನೇ ಖಂಡದಲ್ಲಿ ಈ ಮುಂದಿನ ಇನ್ನೊಂದು ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತೂ ಪರಂತು, ಅಂಥ ಯಾವುದೇ ತಿದ್ದುಪಡಿಯು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಪಟ್ಟಂತೆ 370ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ರಾಷ್ಟ್ರಪತಿಯ ಆದೇಶದ ಮೂಲಕ ಅದನ್ನು ಅನ್ವಯಿಸಿದ ಹೊರತು ಪರಿಣಾಮವುಳ್ಳದ್ದಾಗಿರತಕ್ಕದ್ದಲ್ಲ.";

(ಬಿ) (4)ನೇ ಮತ್ತು (5)ನೇ ಖಂಡಗಳನ್ನು ಬಿಟ್ಟುಬಿಡತಕ್ಕದ್ದು ಮತ್ತು (3)ನೇ ಖಂಡದ ನಂತರ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(4) ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸಂವಿಧಾನದ ಯಾವುದೇ ಉಪಬಂಧದಲ್ಲಿ ಅಥವಾ ಅದರ ಪರಿಣಾಮದಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಉದ್ದೇಶಿಸಿ ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನಮಂಡಲವು,-

(ಎ) ರಾಜ್ಯಪಾಲನ ನೇಮಕಕ್ಕೆ, ಅಧಿಕಾರಗಳಿಗೆ, ಪ್ರಕಾರ್ಯಗಳಿಗೆ, ಕರ್ತವ್ಯಗಳಿಗೆ, ಉಪಲಬ್ಧಿಗಳಿಗೆ, ಭತ್ಯೆಗಳಿಗೆ, ವಿಶೇಷಾಧಿಕಾರಗಳಿಗೆ ಅಥವಾ ಉನ್ಮುಕ್ತಿಗಳಿಗೆ; ಅಥವಾ

(ಬಿ) ಜಮ್ಮು ಮತ್ತು ಕಾಶ್ಮೀರ ರಾಜ್ಯ ಸಂವಿಧಾನದ 138ನೆಯ, 139ನೆಯ, 140ನೆಯ ಮತ್ತು 150ನೆಯ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳಾದ, ಭಾರತದ ಚುನಾವಣಾ ಆಯೋಗದಿಂದ ಚುನಾವಣೆಗಳ ಅಧೀಕ್ಷಣೆಗೆ, ನಿರ್ದೇಶನಕ್ಕೆ ಮತ್ತು ನಿಯಂತ್ರಣಕ್ಕೆ ತಾರತಮ್ಯ ಮಾಡದೆ ಮತದಾರರ ಪಟ್ಟಿಯಲ್ಲಿ ಸೇರಿಸುವ ಸಲುವಾಗಿ ಅರ್ಹತೆಗೆ ಮತ್ತು ವಯಸ್ಕ ಮತದಾನಕ್ಕೆ ಮತ್ತು ವಿಧಾನ ಪರಿಷತ್ತಿನ ರಚನೆಗೆ

- ಸಂಬಂಧಿಸಿದಂತೆ ರಚಿಸಿದ ಯಾವುದೇ ಕಾನೂನು, ರಾಷ್ಟ್ರಪತಿಯ ಪರ್ಯಾಲೋಚನೆಗಾಗಿ ಕಾಯ್ದಿರಿಸಿದ್ದು, ನಂತರ ಅಂಥ ಕಾನೂನು ಅವನ ಸಮ್ಮತಿ ಪಡೆದ ಹೊರತು ಯಾವುದೇ ಪರಿಣಾಮವನ್ನು ಉಳ್ಳದ್ದಾಗಿರತಕ್ಕದ್ದಲ್ಲ.".

**(22) ಭಾಗ XXI.-**

(ಎ) 369, 371, 371ಎ, 372ಎ, 373 ಮತ್ತು 376 ರಿಂದ 378ಎ ಮತ್ತು 392ನೆಯ ಅನುಚ್ಛೇದಗಳನ್ನು ಬಿಟ್ಟುಬಿಡತಕ್ಕದ್ದು.

(ಬಿ) 372ನೆಯ ಅನುಚ್ಛೇದದಲ್ಲಿ.-

(ಎ) (2) ಮತ್ತು (3)ನೆಯ ಖಂಡಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) ಭಾರತದ ರಾಜ್ಯ ಕ್ಷೇತ್ರದಲ್ಲಿ ಜಾರಿಯಲ್ಲಿರುವ ಕಾನೂನುಗಳಿಗೆ ಮಾಡಿದ ಉಲ್ಲೇಖಗಳು, ಹಿದಾಯತುಗಳಿಗೆ, ಐಲಾನುಗಳಿಗೆ, ಇಶ್ತಿಹಾರುಗಳಿಗೆ, ಸುತ್ತೋಲೆಗಳಿಗೆ, ರೂಬ್‌ಕಾರ್‌ಗಳಿಗೆ, ಇರ್‌ಷಾದ್‌ಗಳಿಗೆ, ಯಾದಾಸ್ತುಗಳಿಗೆ, ರಾಜ್ಯ ಪರಿಷತ್ತಿನ ನಿರ್ಣಯಗಳಿಗೆ, ಸಂವಿಧಾನ ಸಭೆಯ ನಿರ್ಣಯಗಳಿಗೆ ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯದ ರಾಜ್ಯಕ್ಷೇತ್ರದಲ್ಲಿ ಕಾನೂನಿನ ಬಲವುಳ್ಳ ಇತರೆ ಲಿಖಿತಗಳಿಗೆ ಮಾಡಿದ ಉಲ್ಲೇಖಗಳನ್ನು ಒಳಗೊಳ್ಳತಕ್ಕದ್ದು.

(ಸಿ) ಸಂವಿಧಾನದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳನ್ನು, 1954ನೇ ಇಸವಿಯ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶದ (ಸಿ.ಓ. 48) ಪ್ರಾರಂಭಕ್ಕೆ ಎಂದರೆ, 1954ನೇ ಇಸವಿ ಮೇ ತಿಂಗಳ 14ನೇ ದಿನಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

(ಸಿ) 374ನೇ ಅನುಚ್ಛೇದದಲ್ಲಿ.-

(ಎ) (1)ನೇ, (2)ನೇ, (3)ನೇ ಮತ್ತು (5)ನೇ ಖಂಡಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) (4)ನೇ ಖಂಡದಲ್ಲಿ, ರಾಜ್ಯದ ಪ್ರಿವಿಕೌನ್ಸಿಲ್ ಆಗಿ ಕಾರ್ಯನಿರ್ವಹಿಸುತ್ತಿರುವ ಪ್ರಾಧಿಕಾರಕ್ಕೆ ಮಾಡಿದ ಉಲ್ಲೇಖವನ್ನು ಜಮ್ಮು ಮತ್ತು ಕಾಶ್ಮೀರ ಸಂವಿಧಾನ ಅಧಿನಿಯಮ ಸಂವತ್ 1996ರ ಮೇರೆಗೆ ರಚಿತವಾದ ಸಲಹಾ ಮಂಡಲಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು ಮತ್ತು ಸಂವಿಧಾನದ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳನ್ನು, 1954ನೇ ಇಸವಿಯ ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶದ ಪ್ರಾರಂಭಕ್ಕೆ ಎಂದರೆ, 1954ನೇ ಇಸವಿ ಮೇ 14ನೇ ದಿನಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

**(23) ಭಾಗ XXII.-** 394ನೇ ಮತ್ತು 395ನೇ ಅನುಚ್ಛೇದಗಳನ್ನು ಬಿಟ್ಟುಬಿಡತಕ್ಕದ್ದು.

**(24) ಮೂರನೆಯ ಅನುಸೂಚಿ.-** V, VI, VII ಮತ್ತು VIII ನೇ ನಮೂನೆಗಳನ್ನು ಬಿಟ್ಟುಬಿಡತಕ್ಕದ್ದು.

**(25) ಐದನೆಯ ಅನುಸೂಚಿ.-** ಈ ಅನುಸೂಚಿಯು ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯವಾಗುವುದಿಲ್ಲ.

**(26) ಆರನೆಯ ಅನುಸೂಚಿ. -** ಈ ಅನುಸೂಚಿಯು ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯವಾಗುವುದಿಲ್ಲ.

**(27) ಏಳನೆಯ ಅನುಸೂಚಿ.-**

(ಎ) ಪಟ್ಟಿ I - ಒಕ್ಕೂಟ ಪಟ್ಟಿಯಲ್ಲಿ,-

(ಎ) 2ಎ ನಮೂದನ್ನು ಬಿಟ್ಟುಬಿಡತಕ್ಕದ್ದು;

(ಬಿ) 3ನೇ ನಮೂದಿನ ಬದಲಾಗಿ, ಈ ಮುಂದಿನ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"3. ದಂಡು ಪ್ರದೇಶಗಳ ಆಡಳಿತ.";

(ಸಿ) 8, 9, 34 ಮತ್ತು 79ನೇ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು;

(ಡಿ) 72ನೇ ನಮೂದಿನಲ್ಲಿ, ರಾಜ್ಯಗಳಿಗೆ ಮಾಡಿದ ಉಲ್ಲೇಖಗಳನ್ನು,-

(i) ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಧಾನ ಮಂಡಲದ ಯಾವುದೇ ಸದನಕ್ಕೆ ನಡೆದ ಚುನಾವಣೆಯನ್ನು ವಿಚಾರಣೆಗೆ ಗುರಿ ಮಾಡಿದ್ದ ಚುನಾವಣಾ ತಕರಾರು ಅರ್ಜಿಯ ಮೇಲೆ ಆ ರಾಜ್ಯದ ಉಚ್ಚ ನ್ಯಾಯಾಲಯವು ನೀಡಿರುವ ಯಾವುದೇ ತೀರ್ಮಾನದ ಅಥವಾ ಆದೇಶದ ಬಗ್ಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಅಪೀಲುಗಳಿಗೆ ಸಂಬಂಧಪಟ್ಟಂತೆ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾಡಿದ ಉಲ್ಲೇಖವನ್ನು ಒಳಗೊಂಡಿರುವುದಾಗಿ;

(ii) ಇತರ ವಿಷಯಗಳಿಗೆ ಸಂಬಂಧಪಟ್ಟಂತೆ ಆ ರಾಜ್ಯಕ್ಕೆ ಮಾಡಿದ ಉಲ್ಲೇಖವನ್ನು ಒಳಗೊಂಡಿಲ್ಲವೆಂದು

– ಅರ್ಥೈಸತಕ್ಕದ್ದು;

(ಇ) 81ನೇ ನಮೂದಿನಲ್ಲಿ "ಅಂತರ ರಾಜ್ಯ ವಲಸೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಎಫ್) 97ನೇ ನಮೂದಿಗೆ ಬದಲಾಗಿ ಈ ಮುಂದಿನ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

'97. ಚಟುವಟಿಕೆಗಳಿಗೆ ಪ್ರತಿಬಂಧ–

(ಎ) ಕಾನೂನಿನ ಮೂಲಕ ಸ್ಥಾಪಿತವಾದ ಸರ್ಕಾರಕ್ಕೆ ಭಯ ಹುಟ್ಟಿಸುವ ಉದ್ದೇಶವುಳ್ಳ ಭಯೋತ್ಪಾದಕ ಕೃತ್ಯಗಳನ್ನು ಒಳಗೊಂಡ ಅಥವಾ ಜನರಲ್ಲಿ ಅಥವಾ ಜನರ ಯಾವುದೇ ವರ್ಗದಲ್ಲಿ ಭಯವನ್ನುಂಟುಮಾಡುವ ಅಥವಾ ಜನರ ಯಾವುದೇ ವರ್ಗವನ್ನು ದೂರ ಮಾಡುವ ಅಥವಾ ಜನರ ವಿವಿಧ ವರ್ಗಗಳ ನಡುವಿನ ಸಾಮರಸ್ಯಕ್ಕೆ ಪ್ರತಿಕೂಲ ಪರಿಣಾಮವನ್ನುಂಟುಮಾಡುವ ಚಟುವಟಿಕೆಗಳನ್ನು ಪ್ರತಿಬಂಧಿಸುವುದು;

(ಬಿ) ಭಾರತದ ಸಾರ್ವಭೌಮತ್ವವನ್ನು ಮತ್ತು ಅದರ ರಾಜ್ಯಕ್ಷೇತ್ರೀಯ ಅಖಂಡತೆಯನ್ನು ನಿರಾಕರಿಸುವ ಅಥವಾ ಪ್ರಶ್ನಿಸುವ ಅಥವಾ ವಿಚ್ಛಿನ್ನಗೊಳಿಸುವ ಉದ್ದೇಶದ ಅಥವಾ ಭಾರತದ ರಾಜ್ಯಕ್ಷೇತ್ರದ ಒಂದು ಭಾಗವನ್ನು ಬಿಟ್ಟುಕೊಡುವ ಅಥವಾ ಒಕ್ಕೂಟದಿಂದ ಭಾರತದ ರಾಜ್ಯಕ್ಷೇತ್ರದ ಒಂದು ಭಾಗವನ್ನು ಬೇರ್ಪಡಿಸುವ ಅಥವಾ ಭಾರತದ ರಾಷ್ಟ್ರಧ್ವಜಕ್ಕೆ ಮತ್ತು ಭಾರತದ ರಾಷ್ಟ್ರಗೀತೆಗೆ ಮತ್ತು ಈ ಸಂವಿಧಾನಕ್ಕೆ ಅಪಮಾನ ಮಾಡುವ ಉದ್ದೇಶದ ಇತರ ಚಟುವಟಿಕೆಗಳನ್ನು ಪ್ರತಿಬಂಧಿಸುವುದು;

– ಸಮುದ್ರ ಅಥವಾ ವಿಮಾನದ ಮೂಲಕ ವಿದೇಶ ಪ್ರಯಾಣದ, ಅಂತರ ದೇಶೀಯ ವಿಮಾನ ಪ್ರಯಾಣದ ಮತ್ತು ಮನಿಯಾರ್ಡರುಗಳನ್ನು ಒಳಗೊಂಡು ಅಂಚೆ ವಸ್ತುಗಳ, ಫೋನೋಗ್ರಾಂಗಳ ಮತ್ತು ಟೆಲಿಗ್ರಾಂಗಳ ಮೇಲಿನ ತೆರಿಗೆಗಳು.

**ವಿವರಣೆ.**– ಈ ನಮೂದಿನಲ್ಲಿ, "ಭಯೋತ್ಪಾದಕ ಕೃತ್ಯ" ಎಂಬ ಪದವು 248ನೇ ಅನುಚ್ಛೇದದ ವಿವರಣೆಯಲ್ಲಿರುವ ಅದೇ ಅರ್ಥವನ್ನು ಹೊಂದಿದೆ.'.

(ಬಿ) ಪಟ್ಟಿ II – ರಾಜ್ಯಪಟ್ಟಿಯನ್ನು ಬಿಟ್ಟುಬಿಡತಕ್ಕದ್ದು.

(ಸಿ) ಪಟ್ಟಿ III – ಸಮವರ್ತಿ ಪಟ್ಟಿ,–

(ಎ) 1ನೇ ನಮೂದಿನ ಬದಲಾಗಿ, ಈ ಮುಂದಿನ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"1. ಕ್ರಿಮಿನಲ್ ಕಾನೂನು (ಪಟ್ಟಿ Iರಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದ ಕಾನೂನುಗಳಿಗೆ ವಿರುದ್ಧವಾದ ಅಪರಾಧಗಳನ್ನು ಹೊರತುಪಡಿಸಿ ಮತ್ತು ಸಿವಿಲ್ ಅಧಿಕಾರಕ್ಕೆ ನೆರವಾಗುವ ಒಕ್ಕೂಟದ ನೌಕಾ, ಭೂ ಮತ್ತು ವಾಯುಬಲಗಳ ಅಥವಾ ಇತರ ಯಾವುದೇ ಸಶಸ್ತ್ರ ಬಲಗಳ ಬಳಕೆಯನ್ನು ಹೊರತುಪಡಿಸಿ) ಅಂಥ ಕ್ರಿಮಿನಲ್ ಕಾನೂನು, ಈ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳಲ್ಲಿ ಯಾವುದೇ ವಿಷಯಕ್ಕೆ ಸಂಬಂಧಿಸಿದ ಕಾನೂನುಗಳಿಗೆ ವಿರುದ್ಧವಾದ ಅಪರಾಧಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ.";

(ಬಿ) 2ನೇ ನಮೂದಿಗೆ ಬದಲಾಗಿ, ಈ ಮುಂದಿನ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"2. ದಂಡ ಪ್ರಕ್ರಿಯೆ (ಅಪರಾಧಗಳನ್ನು ತಡೆಗಟ್ಟುವುದು ಮತ್ತು ಸರ್ವೋಚ್ಚ ನ್ಯಾಯಾಲಯವನ್ನು ಮತ್ತು ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ, ಕ್ರಿಮಿನಲ್ ನ್ಯಾಯಾಲಯಗಳ ರಚನೆ ಮತ್ತು ಸಂಘಟನೆಯೂ ಸೇರಿದಂತೆ) ಅದು,-

(i) ಕಾನೂನುಗಳನ್ನು ರಚಿಸುವುದಕ್ಕೆ ಸಂಸತ್ತಿಗೆ ಅಧಿಕಾರ ಇರುವಂತಹ ವಿಷಯಗಳಾಗಿರುವ ಯಾವುವೇ ವಿಷಯಗಳಿಗೆ ಸಂಬಂಧಪಟ್ಟ ಕಾನೂನುಗಳಿಗೆ ವಿರುದ್ಧವಾದ ಅಪರಾಧಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ; ಮತ್ತು

(ii) ಯಾವುದೇ ವಿದೇಶಿ ರಾಷ್ಟ್ರದಲ್ಲಿರುವ ರಾಜತಾಂತ್ರಿಕ ಮತ್ತು ಕಾನ್ಸುಲರ್ ಅಧಿಕಾರಿಗಳು ಪ್ರಮಾಣವಚನಗಳನ್ನು ಬೋಧಿಸುವುದಕ್ಕೆ ಮತ್ತು ಅವರು ಶಪಥ ಪತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ.";

(ಸಿ) 3ನೇ ನಮೂದನ್ನು, 5 ರಿಂದ 10ರ (ಎರಡೂ ಸೇರಿ) ವರೆಗಿನ ನಮೂದುಗಳನ್ನು, 14, 15, 17, 20, 21, 27, 28, 29, 31, 32, 37, 38, 41 ಮತ್ತು 44ನೇ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು;

(ಡಿ) 11ಎ, 17ಎ, 17ಬಿ, 20ಎ ಮತ್ತು 33ಎ ನಮೂದುಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗುವುದಿಲ್ಲ;

(ಇ) 12ನೇ ನಮೂದಿಗೆ ಬದಲಾಗಿ, ಈ ಮುಂದಿನ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"12. ಸಾಕ್ಷ್ಯ ಮತ್ತು ಪ್ರಮಾಣವಚನಗಳು, ಅವು,-

(i) ಯಾವುದೇ ವಿದೇಶಿ ರಾಷ್ಟ್ರದಲ್ಲಿರುವ ರಾಜತಾಂತ್ರಿಕ ಮತ್ತು ಕಾನ್ಸುಲರ್ ಅಧಿಕಾರಿಗಳು ಪ್ರಮಾಣವಚನಗಳನ್ನು ಬೋಧಿಸುವುದಕ್ಕೆ ಮತ್ತು ಅವರು ಶಪಥ ಪತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ; ಮತ್ತು

(ii) ಕಾನೂನುಗಳನ್ನು ರಚಿಸುವುದಕ್ಕೆ ಸಂಸತ್ತಿಗೆ ಅಧಿಕಾರ ಇರುವಂತಹ ವಿಷಯಗಳಾಗಿರುವ ಯಾವುದೇ ಇತರೆ ವಿಷಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ.";

(ಎಫ್) 13ನೇ ನಮೂದಿಗೆ ಬದಲಾಗಿ ಈ ಮುಂದಿನ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"13. ಸಿವಿಲ್ ಪ್ರಕ್ರಿಯೆ ಅದು, ಯಾವುದೇ ವಿದೇಶಿ ರಾಷ್ಟ್ರದಲ್ಲಿರುವ ರಾಜತಾಂತ್ರಿಕ ಮತ್ತು ಕಾನ್ಸುಲರ್ ಅಧಿಕಾರಿಗಳು ಪ್ರಮಾಣ ವಚನವನ್ನು ಬೋಧಿಸುವುದಕ್ಕೆ ಮತ್ತು ಅವರು ಶಪಥ ಪತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಪಡುವಷ್ಟರಮಟ್ಟಿಗೆ.";

(ಜಿ) 25ನೇ ನಮೂದಿನ ಬದಲಾಗಿ, ಈ ಮುಂದಿನ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"25. ಕಾರ್ಮಿಕರಿಗೆ ವೃತ್ತಿ ಮತ್ತು ತಾಂತ್ರಿಕ ತರಬೇತಿ.";

(ಹೆಚ್) 30ನೇ ನಮೂದಿಗೆ ಬದಲಾಗಿ, ಈ ಮುಂದಿನ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"30. ಜನನ-ಮರಣ ಅಂಕಿಅಂಶಗಳು, ಅವು ಜನನ ಮತ್ತು ಮರಣಗಳ ನೋಂದಣಿಯೂ ಸೇರಿದಂತೆ, ಜನನ ಮತ್ತು ಮರಣಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ.";

(ಐ) 42ನೇ ನಮೂದಿಗೆ ಬದಲಾಗಿ ಈ ಮುಂದಿನ ನಮೂದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"42. ಸ್ವತ್ತಿನ ಆರ್ಜನೆ ಮತ್ತು ಕಡ್ಡಾಯ ಕೋರಿಕೆ, ಪಟ್ಟಿ Iರ 67ನೇ ನಮೂದಿನಲ್ಲಿ ಅಥವಾ ಪಟ್ಟಿ IIIರ 40ನೇ ನಮೂದಿನಲ್ಲಿ ಒಳಗೊಂಡಿರುವ ಯಾವುದೇ ಸ್ವತ್ತಿನ ಅಥವಾ ಕಲಾತ್ಮಕ ಅಥವಾ ಸೌಂದರ್ಯಾತ್ಮಕ ಮಹತ್ವವುಳ್ಳ ಯಾವುದೇ ಮಾನವನಿರ್ಮಿತ ಕಲಾಕೃತಿಯ ಆರ್ಜನೆಗೆ ಸಂಬಂಧಪಡುವಷ್ಟರ ಮಟ್ಟಿಗೆ.";

(ಜೆ) 45ನೇ ನಮೂದಿನಲ್ಲಿ " ಪಟ್ಟಿ II ಅಥವಾ ಪಟ್ಟಿ III ರಲ್ಲಿ" ಎಂಬುದಕ್ಕೆ ಬದಲಾಗಿ "ಈ ಪಟ್ಟಿಯಲ್ಲಿ" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು.

**(28) ಒಂಬತ್ತನೇ ಅನುಸೂಚಿ.-**

(ಎ) 64ನೇ ನಮೂದಿನ ತರುವಾಯ ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ:-

"64ಎ. ಜಮ್ಮು ಮತ್ತು ಕಾಶ್ಮೀರ ರಾಜ್ಯ ಕುಥ್ ಅಧಿನಿಯಮ (ಸಂವತ್ 1978ರ ಸಂಖ್ಯೆ 1).

64ಬಿ. ಜಮ್ಮು ಮತ್ತು ಕಾಶ್ಮೀರ ಗೇಣಿದಾರಿಕೆ ಅಧಿನಿಯಮ (ಸಂವತ್ 1980ರ ಸಂಖ್ಯೆ 11).

64ಸಿ. ಜಮ್ಮು ಮತ್ತು ಕಾಶ್ಮೀರ ಭೂ ಪರಭಾರೆ ಅಧಿನಿಯಮ (ಸಂವತ್ 1995ರ ಸಂಖ್ಯೆ V).

64ಡಿ. ಜಮ್ಮು ಮತ್ತು ಕಾಶ್ಮೀರ ದೊಡ್ಡ ಭೂ ಎಸ್ಟೇಟುಗಳ ರದ್ದಿಯಾತಿ ಅಧಿನಿಯಮ (ಸಂವತ್ 2007ರ ಸಂಖ್ಯೆ XVII).

64ಇ. ಜಹಗೀರುಗಳ ಮತ್ತು ಭೂಕಂದಾಯ, ಇತ್ಯಾದಿಗಳ ಹಸ್ತಾಂತರಣದ ಪುನರ್ವಶ ಬಗೆಗಿನ ಆದೇಶ ಸಂಖ್ಯೆ 6-ಹೆಚ್‌ರ 1951, ದಿನಾಂಕ 10ನೇ ಮಾರ್ಚ್ 1951.

64ಎಫ್. ಜಮ್ಮು ಮತ್ತು ಕಾಶ್ಮೀರ ಅಡಮಾನ ಸ್ವತ್ತುಗಳ ಪೂರ್ವಸ್ಥಿತಿ ಪ್ರಾಪ್ತಿ ಅಧಿನಿಯಮ, 1976 (1976ರ ಅಧಿನಿಯಮ XIV).

64ಜಿ. ಜಮ್ಮು ಮತ್ತು ಕಾಶ್ಮೀರ ಋಣ ಪರಿಹಾರ ಅಧಿನಿಯಮ, 1976 (1976ರ ಅಧಿನಿಯಮ ಸಂಖ್ಯೆ XV).".

(ಬಿ) 65 ರಿಂದ 86ರ ವರೆಗಿನ ನಮೂದುಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗುವುದಿಲ್ಲ;

(ಸಿ) 86ನೇ ನಮೂದಿನ ನಂತರ, ಈ ಮುಂದಿನ ನಮೂದನ್ನು ಸೇರಿಸತಕ್ಕದ್ದು, ಎಂದರೆ:-

"87. ಜನತಾ ಪ್ರಾತಿನಿಧ್ಯ ಅಧಿನಿಯಮ, 1951 (1951ರ ಕೇಂದ್ರ ಅಧಿನಿಯಮ 43), ಜನತಾ ಪ್ರಾತಿನಿಧ್ಯ (ತಿದ್ದುಪಡಿ) ಅಧಿನಿಯಮ, 1974 (1974ರ ಕೇಂದ್ರ ಅಧಿನಿಯಮ 58) ಮತ್ತು ಚುನಾವಣಾ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1975 (1975ರ ಕೇಂದ್ರ ಅಧಿನಿಯಮ 40).";

(ಡಿ) 91ನೇ ನಮೂದಿನ ನಂತರ, ಈ ಮುಂದಿನ ನಮೂದನ್ನು ಸೇರಿಸತಕ್ಕದ್ದು, ಎಂದರೆ:-

"92. ಆಂತರಿಕ ಭದ್ರತೆ ನಿರ್ವಹಣೆ ಅಧಿನಿಯಮ, 1971 (1971ರ ಕೇಂದ್ರ ಅಧಿನಿಯಮ 26).";

(ಇ) 129ನೇ ನಮೂದಿನ ನಂತರ, ಈ ಮುಂದಿನ ನಮೂದನ್ನು ಸೇರಿಸತಕ್ಕದ್ದು, ಎಂದರೆ:-

"130. ಆಕ್ಷೇಪಾರ್ಹ ವಿಷಯಗಳ ಪ್ರಕಟಣಾ ಪ್ರತಿಬಂಧಕ ಅಧಿನಿಯಮ, 1976 (1976ರ ಕೇಂದ್ರ ಅಧಿನಿಯಮ 27).";

(ಎಫ್) ಮೇಲೆ ಸೂಚಿಸಿದಂತೆ 87, 92 ಮತ್ತು 130ನೇ ನಮೂದುಗಳನ್ನು ಸೇರಿಸಿದ ನಂತರ, 87 ರಿಂದ 188ರ ವರೆಗಿನ ನಮೂದುಗಳಿಗೆ ಅನುಕ್ರಮವಾಗಿ 65 ರಿಂದ 166 ನಮೂದುಗಳೆಂದು ಪುನರ್‌ಸಂಖ್ಯೆ ನೀಡತಕ್ಕದ್ದು.

**(29) ಹತ್ತನೆಯ ಅನುಸೂಚಿ.-**

(ಎ) "[ಅನುಚ್ಛೇದಗಳು 102(2) ಮತ್ತು 191(2)]" ಎಂಬ ಆವರಣಗಳಿಗೆ, ಪದಗಳಿಗೆ ಮತ್ತು ಅಂಕಿಗಳಿಗೆ ಬದಲಾಗಿ, "[ಅನುಚ್ಛೇದ 102 (2)]" ಎಂಬ ಆವರಣಗಳನ್ನು, ಪದವನ್ನು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) 1ನೇ ಪ್ಯಾರಾದ (ಎ) ಖಂಡದಲ್ಲಿ "ಅಥವಾ ಒಂದು ರಾಜ್ಯದ ವಿಧಾನಸಭೆ ಅಥವಾ, ಸಂದರ್ಭಾನುಸಾರ ಆ ರಾಜ್ಯದ ವಿಧಾನ ಮಂಡಲದ ಎರಡೂ ಸದನಗಳು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಸಿ) 2ನೇ ಪ್ಯಾರಾದಲ್ಲಿ,-

(i) (1)ನೇ ಉಪ-ಪ್ಯಾರಾದಲ್ಲಿ, ವಿವರಣೆಯ (ಬಿ) ಖಂಡದ (ii)ನೇ ಉಪಖಂಡದಲ್ಲಿ, "ಅಥವಾ, ಸಂದರ್ಭಾನುಸಾರ 188ನೆಯ ಅನುಚ್ಛೇದದ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು;

(ii) (3)ನೇ ಉಪ-ಪ್ಯಾರಾದಲ್ಲಿ, "ಅಥವಾ, ಸಂದರ್ಭಾನುಸಾರ 188ನೆಯ ಅನುಚ್ಛೇದದ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು;

(iii) (4)ನೇ ಉಪ-ಪ್ಯಾರಾದಲ್ಲಿ, ಸಂವಿಧಾನ (ಐವತ್ತೆರಡನೇ ತಿದ್ದುಪಡಿ) ಅಧಿನಿಯಮ, 1985ರ ಪ್ರಾರಂಭಕ್ಕೆ ಮಾಡಿದ ಉಲ್ಲೇಖವನ್ನು, ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ತಿದ್ದುಪಡಿ ಆದೇಶ, 1989ರ ಪ್ರಾರಂಭಕ್ಕೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು;

(ಡಿ) 5ನೇ ಪ್ಯಾರಾದಲ್ಲಿ "ಅಥವಾ ಒಂದು ರಾಜ್ಯದ ವಿಧಾನ ಪರಿಷತ್ತಿನ ಸಭಾಪತಿಯ ಅಥವಾ ಉಪ-ಸಭಾಪತಿಯ ಅಥವಾ ಒಂದು ರಾಜ್ಯದ ವಿಧಾನಸಭೆಯ ಅಧ್ಯಕ್ಷನ ಅಥವಾ ಉಪಾಧ್ಯಕ್ಷನ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಇ) 6ನೇ ಪ್ಯಾರಾದ (2)ನೇ ಉಪ-ಪ್ಯಾರಾದಲ್ಲಿ "ಅಥವಾ, ಸಂದರ್ಭಾನುಸಾರ, 212ನೇ ಅನುಚ್ಛೇದದ ಅರ್ಥ ವ್ಯಾಪ್ತಿಯೊಳಗೆ ಒಂದು ರಾಜ್ಯದ ವಿಧಾನಮಂಡಲದ ವ್ಯವಹರಣೆಗಳೆಂದು" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು;

(ಎಫ್) 8ನೇ ಪ್ಯಾರಾದ (3)ನೇ ಉಪ-ಪ್ಯಾರಾದಲ್ಲಿ "ಅಥವಾ, ಸಂದರ್ಭಾನುಸಾರ, 194ನೇ ಅನುಚ್ಛೇದದ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು.

* * * * *